ಪಲ್ ಟೆಸ್ಟ್ ಪರೀಕ್ಷೆಯ ಕ್ರಿಮಿನಲ್ ಮೇಲು ದರ್ಜೆಯಲ್ಲಿ ತೇರಿದ ಮನುಷ್ಯರು ಈ ನಿಬಂಧನೆಗಳಿಂದ ವಿಧಿಸಲ್ಪಟ್ಟ ಕ್ರಿಮಿನಲ್ ಪರೀಕ್ಷೆಯಲ್ಲಿ ತೇರುವುದರಿಂದಲೂ ವಿನಾಯಿಸಲ್ಪಡುವರು.

(j) ಗ್ರಾಜ್ಯುಯೇಟುಗಳು ಮತ್ತು ಇನ್ನಲ್ಲಿಯಾದರೂ ಅವರು ಕೊಟ್ಟಿರುವ ಪರೀಕ್ಷೆಗೆ ಸದೃಶವಾಗಿ ಅಂಗೀಕೃತವಾದ ಪರೀಕ್ಷೆಯನ್ನು ಕೊಟ್ಟಿರುವವರೂ ಕೂಡಾ ಕೈಬರಹದ ಮತ್ತು ಉಕ್ತಲೇಖನದ ಪರೀಕ್ಷೆಯಲ್ಲಿ ತೇರುವುದರಿಂದ ವಿನಾಯಿಸಲ್ಪಟ್ಟಿರುತ್ತಾರೆ.

8. 6ನೆ ನಿಬಂಧನೆಯಲ್ಲಿ ಏನಿದ್ದಾಗ್ಯೂ ಸರಿಯೇ, ಒಬ್ಬ ಮನುಷ್ಯನು ಅಮಲ್ದಾರಿ ಕೆಲಸವನ್ನು 10 ವರ್ಷಗಳಿಗೆ ಕಡಮೆ ಇಲ್ಲದ ತೃಪ್ತಿಕರವಾಗಿ ಮಾಡಿದ್ದು ಅನಂತರ ಅಸಿಸ್ಟೆಂಟ್ ಕಮಿಷನರ ದರ್ಜೆಗೆ ಬಡತಿ ಮಾಡಲ್ಪಟ್ಟಾಗ ಶಿವಿಲ್ ಪರೀಕ್ಷೆಯಲ್ಲಿ ತೇರುವುದರಿಂದ ಆ ಅಧಿಕಾರಿಯನ್ನು ವಿನಾಯಿಸುವ ಅಧಿಕಾರವನ್ನೂ, ಪೋಲೀಸ್, ರವಿನ್ಯೂ ಅಥವಾ ಸರಕಾರದ ಇತರ ಎಕ್ಸಿಕ್ಯೂಟಿವ್ ಇಲಾಖೆಯಲ್ಲಿ ಕೆಲಸ ನೋಡುತ್ತಿರುವ ಯಾವನಾದರೂ ಅಸಿಸ್ಟೆಂಟ್ ಕಮಿಷನರನ್ನು ಸಿವಿಲ್ ಪರೀಕ್ಷೆಯ 2ನೆ ಭಾಗದಲ್ಲಿ ತೇರುವುದರಿಂದ ವಿನಾಯಿಸುವ ಅಧಿಕಾರವನ್ನೂ ಸರ್ಕಾರದವರು ತಮಗೇ ಉಳಿಸಿಕೊಂಡಿರುತ್ತಾರೆ.

9. ಮೇಲೆ ವಿವರಿಸಿದ ಪರೀಕ್ಷೆಗಳ ಪೈಕಿ ಯಾವುದಕ್ಕಾದರೂ ಹೋಗುವುದಕ್ಕೆ ಇದರಡಿ ಕಂಡ ಮನುಷ್ಯರು ಹಕ್ಕುಳ್ಳವರಾಗಿರತಕ್ಕದ್ದು :—

(a) ಪರೀಕ್ಷೆಗೆ ಹೋಗಬೇಕೆಂದು ಅರ್ಜಿ ಮಾಡಿಕೊಳ್ಳುವ ಕಾಲದಲ್ಲಿ ಮೈಸೂರು ಸರ್ಕಾರದಲ್ಲಿ ಅಥವಾ ಮೈಸೂರು ಮ್ಯುನಿಸಿಪಾಲಿಟಿಗಳಲ್ಲಿ ಅಥವಾ ಮೈಸೂರು ಸೇವೆಯ ಆದಾಯಗಳಿಂದ, ಲೋಕಲ್ ಫಂಡುಗಳಿಂದ ಅಥವಾ ಅರಮನೆಯ ವಾರ್ಷಿಕ ಖರ್ಚಿನಿಂದ ನಡೆಸಲ್ಪಡುವ ಆಲಯಗಳಲ್ಲಿ ಅಥವಾ ಮೈಸೂರು ಬ್ರಿಟಿಷ್ ರೆಸಿಡೆಂಟಿನ ಕೆಳಗಿರುವ ನಾನಾ ಇಲಾಖೆಗಳಲ್ಲಿ ಐದು ವರ್ಷಗಳಿಗೆ ಕಡಮೆ ಇಲ್ಲದಂತೆ ಕೆಲಸ ಮಾಡಿರುವ ಮನುಷ್ಯರು.

(b) (a) ಕಲಮಿನಲ್ಲಿ ಹೇಳಿರುವ ಇಲಾಖೆಗಳ ಪೈಕಿ ಯಾವುದರಲ್ಲಾದರೂ ತಿಂಗಳಿಗೆ 25 ರೂಪಾಯಿಗಳಿಗೆ ಕಡಮೆ ಇಲ್ಲದಂತೆ ಸಂಬಂಧ ಸಂಬಳದ ಖಾಯಂ ಕೆಲಸವುಳ್ಳ ಮನುಷ್ಯರೂ; ಒಟ್ಟಿನಲ್ಲಿ ಅವರು ಕೆಲಸ ಮಾಡಿದ ಕಾಲವು 5 ವರ್ಷಗಳಿಗಿಂತ ಕಡಮೆಯಾಗಿರಬಹುದಾದರೂ, ಸರಿಯೆ.

ಷರಾ.—(1) ಖಾಯಂ ಅಲ್ಲದ ಕೆಲಸಗಳಲ್ಲಿರುವವರೂ, ಮತ್ತು ಹಂಗಾಮಿಯಾದ ಕೆಲಸಗಳಲ್ಲಿರುವವರೂ (a) ಕಲಮಿನ ಅರ್ಥದಲ್ಲಿ ಸೇರಿಲ್ಲ.

ಷರಾ.—(2) ಶಾನುಭೋಗರೂ ಗ್ರಾಮ ಸಂಬಂಧ ಅಧಿಕಾರಿಗಳೂ ಪ್ರತ್ಯೇಕವಾದ ಏರ್ಪಾಡಿಗನುಸಾರವಾಗಿ ವೇತನವನ್ನು ಪಡೆಯುವವರಾದುದರಿಂದ (a) ಅಥವಾ (b) ಕಲಮಿನ ಅರ್ಥದಲ್ಲಿ ಸಂಬಳ ಹೊಂದುವ ಅಧಿಕಾರಿಗಳಲ್ಲ.

(c) ಇಂಡಿಯಾದೇಶ ಯಾವುದಾದರೂ ಯೂನಿವರ್ಸಿಟಿಯ ಕಲಾ ಪರೀಕ್ಷೆಗಳ ಪೈಕಿ ಮೊದಲನೆಯ (ಎಫ್. ಎ.) ಪರೀಕ್ಷೆಯಲ್ಲಿ ಅಥವಾ ಮೇಲ್ಪಟ್ಟ ಇತರ ಪರೀಕ್ಷೆಗಳಲ್ಲಿ ತೇರಿರುವ ಮನುಷ್ಯರು.

(d) ಕೈಬರಹದ ಮತ್ತು ಉಕ್ತಲೇಖನದ ಪರೀಕ್ಷೆಯ ವಿಷಯದಲ್ಲಿ — ಇಂಡಿಯಾ ದೇಶದ ಯಾವುದಾದರೂ ಯೂನಿವರ್ಸಿಟಿಯ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಅಥವಾ ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರಿದ ಮನುಷ್ಯರು ಅಥವಾ ಸಂಸ್ಥಾನದ ಯಾವುದಾದರೂ ಇಲಾಖೆಯಲ್ಲಿ ಖಾಯಂ ಉದ್ಯೋಗವುಳ್ಳವರು.

(a) ಮತ್ತು (b) ಕಲಮುಗಳಿಗನುಸಾರವಾಗಿ ಪರೀಕ್ಷೆಗೆ ಸೇರಿಸಲ್ಪಡಲು ಹಕ್ಕುಳ್ಳವನೆಂದು ಹೇಳುವ ಪ್ರತಿ ಅರ್ಜಿದಾರನೂ ಅವನಿಗೆ ಮೇಲ್ಪಟ್ಟ ಅಧಿಕಾರಿಯಿಂದ ಅವನ ಕೆಲಸದ ಸರಿಯಾದ ಸಂಬಳದ ವಿಷಯದಲ್ಲಿಯೂ ಅವನು ಕೆಲಸ ಮಾಡಿರುವ ರೀತಿಯ ವಿಷಯದಲ್ಲಿಯೂ ಮತ್ತು ಅವನ ಗುಣದ ಮತ್ತು ನಡತೆಯ ವಿಷಯದಲ್ಲಿಯೂ ಸರ್ಟಿಫಿಕೇಟನ್ನು ಹಾಜರ್ಮಾಡತಕ್ಕದ್ದು.

(a) ಕಲಮಿಗನುಸಾರವಾಗಿ ಪರೀಕ್ಷೆಗೆ ಹೋಗುವ ಪ್ರತಿ ಅರ್ಜಿದಾರನೂ ಅವನು ಕೆಲಸ ಮಾಡಿದ ಒಟ್ಟು ಕಾಲದ ವಿಚಾರವಾಗಿಯೂ ಸಹ ಸರ್ಟಿಫಿಕೇಟನ್ನು ಹಾಜರ್ಮಾಡತಕ್ಕದ್ದು.

(c) ಅಥವಾ (d) ಕಲಮಿಗನುಸಾರವಾಗಿ ಪರೀಕ್ಷೆಗೆ ಸೇರಿಸಲ್ಪಡಲು ಹಕ್ಕುಳ್ಳವನೆಂದು ಕೇಳುವ ಪ್ರತಿ ಅರ್ಜಿದಾರನೂ ಸಂದರ್ಭಾನುಸಾರವಾಗಿ ಯೂನಿವರ್ಸಿಟಿಯಿಂದ ತನಗೆ ಬಂದ ಸರ್ಟಿಫಿಕೇಟನ್ನು ಅಥವಾ ಡಿಪ್ಲೊಮಾವನ್ನು ಅಥವಾ ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರಿದುದಕ್ಕೆ ಸರ್ಟಿಫಿಕೇಟನ್ನು ಮತ್ತು ಅವನು ಕಡೇಸಾರಿ ಓದಿದ ಕಾಲೇಜಿನ ಪ್ರಿನ್ಸಿಪಾಲರಿಂದಾಗಲಿ ಅಥವಾ ಸ್ಕೂಲಿನ ಹೆಡ್ಮಾಸ್ಟರಿನಿಂದಾಗಲಿ ಅಥವಾ ಅಸಿಸ್ಟೆಂಟ್ ಕಮಿಷನರ ಅಥವಾ ಮೇಲ್ಪಟ್ಟ ದರ್ಜೆಯಲ್ಲಿರುವ ಮೈಸೂರು ಅಧಿಕಾ[ರಿ]ಯಿಂದಾಗಲಿ, ಅವನು ಗುಣದಲ್ಲಿಯೂ ನಡತೆಯಲ್ಲಿಯೂ, ಮೈಸೂರು ಸರ್ಕಾರದ ಉದ್ಯೋಗಕ್ಕೆ ಸೇರಿಸಿಕೊಳ್ಳಲ್ಪಡಲು ತಕ್ಕ[ವನೆಂ]ದು ಒಂದು ಸರ್ಟಿಫಿಕೇಟನ್ನು ಹಾಜರ್ಮಾಡತಕ್ಕದ್ದು.

ವಿನಾಯಿತಿಗಳು :—

(1) ಸಂಸ್ಥಾನದ ಖಜಾನೆಯಲ್ಲಿಯೂ ಅಕೌಂಟ್ಸ್ ಇಲಾಖೆಗಳಲ್ಲಿಯೂ ಮತ್ತು ಎಕ್ಸೈಸ್ ಕಮಿಷನರ ಆಫೀ[ಸಿನಲ್ಲಿಯೂ] ಕೆಲಸವಿದ್ದು ತಿಂಗಳಿಗೆ 15 ರೂಪಾಯಿಗಳಿಗೆ ಕಡಮೆ ಇಲ್ಲದ ಸಂಬಳವುಳ್ಳ ನೌಕರರು ಅಕೌಂಟ್ಸ್ ಪರೀ[ಕ್ಷೆಗೆ ಸೇರಿಸಿ]ಕೊಳ್ಳಲ್ಪಡುವರು.

(2) ಎಕ್ಸೈಸ್ ಇಲಾಖೆಯಲ್ಲಿ ತಿಂಗಳಿಗೆ 10 ರೂಪಾಯಿಗಳಿಗೆ ಕಡಮೆ ಇಲ್ಲದ ಸಂಬಳವುಳ್ಳ ಕಾರ್ಕು[ನರು] ... ಟುಗಳು, ಮತ್ತು ಎಕ್ಸಿಕ್ಯೂಟಿವ್ ಸಿಬ್ಬಂದಿಗೆ ಸೇರಿದವರು, ಇವರೆಲ್ಲರೂ ಎಕ್ಸೈಸ್ ಪರೀ[ಕ್ಷೆಗೆ ಸೇರಿಸಲ್ಪ]ಡುವರು.

(3) ಫಾರೆಸ್ಟ್ ಯಾ ಜಂಗಲಿ ಇಲಾಖೆಯಲ್ಲಿ ತಿಂಗಳಿಗೆ 15 ರೂಪಾಯಿಗಳಿಗೆ ಕಡಮೆ ಇಲ್ಲದ ಸಂಬಳ ವುಳ್ಳ ನೌಕರರು ಫಾರೆಸ್ಟ್ ಯಾ ಜಂಗಲಿ ಪರೀಕ್ಷೆಗೆ ಸೇರಿಸಿಕೊಳ್ಳಲ್ಪಡುವರು.

(4) ರಿಜಿಸ್ಟ್ರೇಷನ್ ಇಲಾಖೆಯಲ್ಲಿ ತಿಂಗಳಿಗೆ 10 ರೂಪಾಯಿಗೆ ಕಡಮೆ ಇಲ್ಲದ ಸಂಬಳವುಳ್ಳ ನೌಕರರು ರಿಜಿಸ್ಟ್ರೇಷನ್ ಪರೀಕ್ಷೆಗೆ ಸೇರಿಸಿಕೊಳ್ಳಲ್ಪಡುವರು.

(5) ಸರ್ಕಾರಿ ನೌಕರಿಯಲ್ಲಿ ಇಲ್ಲದೆ, ಇಂಗ್ಲಿಷ್ ಅಥವಾ ಕನ್ನಡದ ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ತೇರಿರುವ ಅಥವಾ ಕನ್ನಡವನ್ನು ಐಚ್ಛಿಕ ಭಾಷೆಯನ್ನಾಗಿ ತೆಗೆದುಕೊಂಡು ಇಂಡಿಯಾ ದೇಶದ ಯೂನಿವರ್ಸಿಟಿಗಳ ಪೈಕಿ ಯಾವುದಾದರೊಂದರ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರಿರುವ ಮನುಷ್ಯರು ಕನ್ನಡದ ರಿಜಿಸ್ಟ್ರೇಷನ್ ಪರೀಕ್ಷೆಗೆ ಸೇರಿಸಿಕೊಳ್ಳಲ್ಪಡುವರು.

(6) ಅಡ್ವೋಕೇಟುಗಳಾಗಿ ಸೇರಿಸಿಕೊಳ್ಳಲ್ಪಡುವುದಕ್ಕೆ ಸಂಬಂಧಪಡುವ ನಿಬಂಧನೆಗಳನ್ನನುಸರಿಸಿ ಲಾ ಆಫ್ ಪ್ರಾಕ್ಟಿಸ್ ಮತ್ತು ಪ್ರೊಸೀಜರ್ ಪರೀಕ್ಷೆಯಲ್ಲಿ ತೇರಬೇಕೆಂದು ಕೇಳಲ್ಪಡುವ ಮನುಷ್ಯರು ಸಿವಿಲ್ ಪರೀಕ್ಷೆಯ 2ನೆ ಭಾಗಕ್ಕೆ ವಿಧಿಸಲ್ಪಟ್ಟಿರುವ ಸಿವಿಲ್ ಪ್ರೊಸೀಜರ್ ಕೋಡಿನ ಮತ್ತು ಇಂಡಿಯನ್ ಲಿಮಿಟೇಷನ್ ಆಕ್ಟಿನ ಮೇಲೆ ಬರುವ ಪ್ರಶ್ನ ಪತ್ರಿಕೆಗೂ (ಮೇಲಿನ ದರ್ಜೆಯ) ಕ್ರಿಮಿನಲ್ ಪರೀಕ್ಷೆಗೆ ವಿಧಿಸಲ್ಪಟ್ಟಿರುವ ಕ್ರಿಮಿನಲ್ ಪ್ರೊಸೀಜರ್ ಮತ್ತು ಪೊಲೀಸ್ ನಿಬಂಧನೆಗಳ ಮೇಲೆ ಬರುವ ಪ್ರಶ್ನ ಪತ್ರಿಕೆಗೂ ಉತ್ತರ ಬರೆಯಲು ಸೇರಿಸಿಕೊಳ್ಳಲ್ಪಡುವರು.

(7) ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರಿದ್ದು ಅಡ್ವೋಕೇಟುಗಳಾಗಿ ಮತ್ತು ಪ್ಲೀಡರುಗಳಾಗಿ ಸೇರಿಸಿಕೊಳ್ಳಲ್ಪಡುವುದಕ್ಕೆ ಸಂಬಂಧಪಡುವ ನಿಬಂಧನೆಗಳನ್ನನುಸರಿಸಿ 2ನೆ ದರ್ಜೆಯ ಪ್ಲೀಡರು ಪರೀಕ್ಷೆಗೆ ಸೇರಿಸಿಕೊಳ್ಳಲ್ಪಡುವವರು ಮೇಲಿನ ದರ್ಜೆಯ ರೆವಿನ್ಯೂ, ಸಿವಿಲ್ 1ನೆ ಮತ್ತು 2ನೆ ಭಾಗಗಳು ಮತ್ತು ಮೇಲಿನ ದರ್ಜೆಯ ಕ್ರಿಮಿನಲ್ ಪರೀಕ್ಷೆಗಳಿಗೆ ಒಟ್ಟಾಗಿ ಅಥವಾ ಒಂದೊಂದು ಭಾಗವಾಗಿ ಅವರವರು ಹೋಗುವ ಭಾಗಗಳಿಗೆ ಫೀಜು ಪಾವತಿ ಮಾಡಿ ಹೋಗಬಹುದು.

(8) ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರಿದ್ದು ಶೇಕದಾರಿಗೆ ಅರ್ಹರಾಗಬೇಕೆಂದು ಅಪೇಕ್ಷಿಸುವವರು ಕೆಳಗಿನ ದರ್ಜೆಯ ರೆವಿನ್ಯೂ ಪರೀಕ್ಷೆಗೆ ಸೇರಿಸಿಕೊಳ್ಳಲ್ಪಡುವರು.

(9) 1906ನೆ ಇಸವಿಯ ಫೆಬ್ರವರಿ 14ರಲ್ಲಿಯೇ ಎಕ್ಸೈಸ್ ಯಾ ಅಬ್ಕಾರಿ ಇಲಾಖೆಯಲ್ಲಿ ಕೆಲಸವಿರುವ ನೌಕರರು ಕನ್ನಡದ ಎಕ್ಸೈಸ್ ಯಾ ಅಬ್ಕಾರಿ ಪರೀಕ್ಷೆಗೆ ಸೇರಿಸಿಕೊಳ್ಳಲ್ಪಡುವರು.

1ನೆ, 2ನೆ, 3ನೆ, 4ನೆ ಮತ್ತು 9ನೆ ವಿನಾಯಿತಿಗಳಿಗನುಸಾರವಾಗಿ ಸೇರಿಸಿಕೊಳ್ಳಲ್ಪಡಲು ಹಕ್ಕುಂಟೆಂದು ಕೇಳುವ ಪ್ರತಿ ಅರ್ಜಿದಾರನೂ ತನಗೆ ಮೇಲ್ಪಟ್ಟ ಅಧಿಕಾರಿಯಿಂದ ಅವನ ಕೆಲಸದ ಸರಿಯಾದ ಸಂಬಳದ, ಅವನು ಅವನ ಕೆಲಸಗಳನ್ನು ಚೆನ್ನಾಗಿ ಮಾಡಿರುವ, ಅವನ ಗುಣದ ಮತ್ತು ನಡತೆಯ, ವಿಷಯಗಳಲ್ಲಿ ಸರ್ಟಿಫಿಕೇಟನ್ನು ಹಾಜರ್ಮಾಡತಕ್ಕದ್ದು.

5ನೆ, 6ನೆ, 7ನೆ ಮತ್ತು 8ನೆ ವಿನಾಯಿತಿಗಳಿಗನುಸಾರವಾಗಿ ಸೇರಿಸಿಕೊಳ್ಳಲ್ಪಡಬೇಕೆಂದು ಕೇಳುವ ಪ್ರತಿ ಅರ್ಜಿದಾರನೂ ಅವನು ಕಡೇಸಾರಿ ಓದಿದ್ದ ಕಾಲೇಜಿನ ಪ್ರಿನ್ಸಿಪಾಲರಿಂದಾಗಲಿ ಅಥವಾ ಸ್ಕೂಲಿನ ಹೆಡ್ಮಾಸ್ಟರಿಂದಾಗಲಿ ಅಥವಾ ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರಿಂದಾಗಲಿ ಅಸಿಸ್ಟೆಂಟ್ ಕಮಿಷನರ ಅಥವಾ ಮೇಲ್ಪಟ್ಟ ದರ್ಜೆಯ ಮೈಸೂರು ಅಧಿಕಾರಿಯಿಂದಾಗಲಿ, ಸೇರಿಸಿಕೊಳ್ಳಲ್ಪಡುವುದಕ್ಕೆ ಗುಣದಲ್ಲಿಯೂ ನಡತೆಯಲ್ಲಿಯೂ ಅರ್ಹನೆಂದು ಸರ್ಟಿಫಿಕೇಟನ್ನು ಹಾಜರ್ಮಾಡತಕ್ಕದ್ದು.

10. ಮೈಸೂರು ಚೀಫ್ ಕೋರ್ಟಿನ ಯಾವನಾದರೂ ಅಡ್ವೋಕೇಟು, ಅವನು ಹಾಗೆ ಅಡ್ವೋಕೇಟಾಗಿ ದಾಖಲ್ಮಾಡಲ್ಪಟ್ಟದಕ್ಕೆ ಸರ್ಟಿಫಿಕೇಟನ್ನಾಗಲೀ ಇತರ ರುಜುವಾತನ್ನಾಗಲಿ ಹಾಜರ್ಮಾಡಿದಾಗ ರೆವಿನ್ಯೂ, ಎಕ್ಸೈಜ್ ಯಾ ಅಬ್ಕಾರಿ, ಫಾರೆಸ್ಟ್ ಯಾ ಜಂಗಲಿ, ರಿಜಿಸ್ಟ್ರೇಷನ್, ಅಕೌಂಟ್ಸ್ ಯಾ ಲೆಕ್ಕ, ಮತ್ತು ಪ್ರಿಜನ್ಸ್ ಯಾ ಬಂದೀಖಾನೆ, ಈ ಪರೀಕ್ಷೆಗಳಿಗೆ ಸೇರಿಸಿಕೊಳ್ಳಲ್ಪಡಲು ಹಕ್ಕುಳ್ಳವನಾಗಿರುವನು.

11. ಪ್ರತಿ ಪರೀಕ್ಷ್ಯನೂ ಸಿವಿಲ್ ಸರ್ಜನಿನ ಅಥವಾ ಮೇಲ್ಪಟ್ಟ ದರ್ಜೆಯ ವೈದ್ಯಾಧಿಕಾರಿಯಿಂದ ತಾನು 20 ವರ್ಷ ವಯಸ್ಸಿಗೆ ಮೇಲ್ಪಟ್ಟಿರುವ ಮತ್ತು ಸರ್ಕಾರಿ ಉದ್ಯೋಗಕ್ಕೆ ದೇಹದಾರ್ಢ್ಯವುಳ್ಳವನಾಗಿರುವ ವಿಷಯದಲ್ಲಿ ಒಂದು ಸರ್ಟಿಫಿಕೇಟನ್ನು ಹಾಜರ್ಮಾಡತಕ್ಕದ್ದು; ತತ್ಪೂರ್ವದಲ್ಲಿಯೇ ಅಂಥಾ ಸರ್ಟಿಫಿಕೇಟನ್ನು ಹಾಜರ್ಮಾಡಿರುವ ನೌಕರರ ವಿಷಯದಲ್ಲಿ ಅದು ಅವಶ್ಯವಾಗಿರುವುದಿಲ್ಲ. ಪ್ಲೀಡರ್ ಪರೀಕ್ಷೆಗೆ ಮಾತ್ರ ಹೋಗುವ ಪರೀಕ್ಷ್ಯನು ಅವರು 20 ವರ್ಷಗಳಿಗೆ ಮೇಲ್ಪಟ್ಟ ವಯಸ್ಸಿನವರೆಂದು ಒಂದು ಸರ್ಟಿಫಿಕೇಟು ಮಾತ್ರ ಹಾಜರ್ಮಾಡಬೇಕು; ದೇಹದಾರ್ಢ್ಯ ವಿಷಯದಲ್ಲಿ ಯಾವ ಸರ್ಟಿಫಿಕೇಟೂ ಅವಶ್ಯವಿಲ್ಲ.

12. ಪ್ರತಿ ಪರೀಕ್ಷ್ಯನೂ ತನ್ನ ಅರ್ಜಿಯನ್ನು ಪರೀಕ್ಷಕರ ಸಭೆಯ (ಬೋರ್ಡ್) ಸಕ್ರಿಟರಿಗೆ ಪ್ರತಿ ವರ್ಷವೂ ಆಗಸ್ಟು ... ಅಥವಾ ಅದಕ್ಕೆ ಮುಂಚಿತವಾಗಿ ಅವನಿಗೆ ತಲುಪುವಂತೆ ಕಳುಹಿಸತಕ್ಕದ್ದು.

13. ಪ್ರತಿ ಪರೀಕ್ಷ್ಯನೂ ತಾನು ಹೋಗಬೇಕೆಂದಿರುವ ಪ್ರತಿ ಪರೀಕ್ಷೆಗೂ ಸೇರಿಸಿಕೊಳ್ಳಲ್ಪಡುವುದಕ್ಕೋಸ್ಕರ ಫೀಜನ್ನು ಈ ರೀತಿಯಲ್ಲಿ ಲೆಕ್ಕ ಮಾಡಿ ಮೈಸೂರು ಸಂಸ್ಥಾನದಲ್ಲಿರುವ ಡಿಸ್ಟ್ರಿಕ್ಟು ಅಥವಾ ತಾಲ್ಲೂಕು ಖಜಾನೆಗೆ ಪಾವತಿ ... :—

				ರೂಪಾಯಿಗಳು.
ರೆವಿನ್ಯೂ (ಮೇಲಿನ ದರ್ಜೆ)	...	...	...	7.
ರೆವಿನ್ಯೂ (ಕೆಳಗಿನ ದರ್ಜೆ)	...	..	...	5.

		ರೂಪಾಯಿಗಳು.
II.	ಸಿವಿಲ್ ಪರೀಕ್ಷೆ 1ನೆ ಭಾಗ	7.
	ಸಿವಿಲ್ ಪರೀಕ್ಷೆ 2ನೆ ಭಾಗ	5.
III.	ಕ್ರಿಮಿನಲ್ ಪರೀಕ್ಷೆ (ಮೇಲಿನ ದರ್ಜೆ)	7.
	ಕ್ರಿಮಿನಲ್ ಪರೀಕ್ಷೆ (ಕೆಳಗಿನ ದರ್ಜೆ)	5.
IV.	ಎಕ್ಸೈಸ್ ಪರೀಕ್ಷೆ ...	5.
V.	ಅಕೌಂಟ್ಸ್ ಪರೀಕ್ಷೆ	5.
VI.	ರಿಜಿಸ್ಟ್ರೇಷನ್ ಪರೀಕ್ಷೆ	5.
VII.	ಫಾರೆಸ್ಟ್ ಪರೀಕ್ಷೆ	5.
VIII.	ಲಾ ಆಫ್ ಪ್ರಾಕ್ಟಿಸ್ ಮತ್ತು ಪ್ರೊಸೀಜರ್ ಪರೀಕ್ಷೆ	7.
IX.	ಪ್ರಿಜನ್ಸ್ ಪರೀಕ್ಷೆ	5.
X.	ಕೈ ಬರಹ ಮತ್ತು ಉಕ್ತಲೇಖನದ ಪರೀಕ್ಷೆ	3.

ಪರೀಕ್ಷ್ಯನ ಸರ್ಟಿಫಿಕೇಟುಗಳು ತೃಪ್ತಿಕರವಾಗಿಲ್ಲವೆಂದು ಎಣಿಸಲ್ಪಡುವಲ್ಲಿ ಫೀಜು ವಾಪಸು ಕೊಡಲ್ಪಡುವುದು. ಇತರ ಇನ್ಯಾವ ಸಂದರ್ಭದಲ್ಲಿಯೂ ಹಣವನ್ನು ವಾಪಸು ಕೊಡುವುದಕ್ಕೂ ಅಥವಾ ಉಳಿಸಿಕೊಳ್ಳುವುದಕ್ಕೂ ಸಮ್ಮತಿಸಲಾಗುವುದಿಲ್ಲ.

14. ಪ್ರತಿ ಅರ್ಜಿಯೂ ಇದರಡಿ ಸೇರಿಸಿರುವ ನಮೂನೆಯಲ್ಲಿರತಕ್ಕದ್ದು ಮತ್ತು ಅದರೊಡನೆ—

(1) 9ನೆ, 10ನೆ ಮತ್ತು 11ನೆ ನಿಬಂಧನೆಗಳಲ್ಲಿ ವಿಧಿಸಲ್ಪಟ್ಟ ಸರ್ಟಿಫಿಕೇಟುಗಳೂ

(2) 13ನೆ ನಿಬಂಧನೆಯಲ್ಲಿ ವಿಧಿಸಲ್ಪಟ್ಟ ಫೀಜು ಪಾವತಿಯಾದುದಕ್ಕಾಗಿ ಖಜಾನೆಯ ಆಫೀಸರ ರಶೀತಿಯೂ ಕಳುಹಿಸಲ್ಪಡತಕ್ಕದ್ದು.

ಮೈಸೂರು ಲೋಕಲ್ ಸರ್ವಿಸ್ ಯಾ ಸ್ಥಳೀಯ ನೌಕರಿ ಮತ್ತು ಪ್ಲೀಡರ್ ಪರೀಕ್ಷೆಗಳಿಗೆ ಸೇರಿಸಿಕೊಳ್ಳಲ್ಪಡುವುದಕ್ಕೋಸ್ಕರ ಬರೆದುಕೊಳ್ಳುವ ಅರ್ಜಿಯ ನಮೂನೆ.

ಹೆಸರು ಸಂಪೂರ್ಣವಾಗಿ.	ತಂದೆಯ ಹೆಸರು.	ವಾಸಸ್ಥಳ ಮತ್ತು ಸಂಪೂರ್ಣವಾದ ವಿಳಾಸ	ವಯಸ್ಸು.	ಅರ್ಜಿದಾರನು 9ನೆ ನಿಬಂಧನೆಯ (a), (b), (c), (d) ಕಲಮಿಗೆ ಮತ್ತು ಅದಕ್ಕೆ ಅನುಗುಣವಾದ ವಿನಾಯಿತಿಗಳಿಗನುಸಾರವಾಗಿ ಅಥವಾ 10ನೆ ನಿಬಂಧನೆಗನುಸಾರವಾಗಿ ಸೇರಿಸಿಕೊಳ್ಳಲ್ಪಡಲು ಹಕ್ಕುಳ್ಳವನೆಂದು ಕೇಳುತ್ತಾನೆಯೊ ಎಂಬುವುದು.	ಅರ್ಜಿದಾರನು ಸರ್ಕಾರಿ ಉದ್ಯೋಗದಲ್ಲಿದ್ದರೆ.						ಇದಕ್ಕೆ ಮೊದಲೇ ಪರೀಕ್ಷ್ಯನು ತೇರ್ಗಡೆಯಾಗಿರುವ ಪರೀಕ್ಷೆಯು ಯಾವುದಾದರೂ ಇದ್ದರೆ ಅದು.	9 ಮತ್ತು 10ನೆ ನಿಬಂಧನೆಗಳಿಗನುಸಾರವಾಗಿ ಯೋಗ್ಯತೆಗಳ ಸರ್ಟಿಫಿಕೇಟು.	11ನೆ ನಿಬಂಧನೆಗನುಸಾರವಾಗಿ ವಯಸ್ಸಿನ ದೇಹದಾರ್ಢ್ಯದ ಸರ್ಟಿಫಿಕೇಟು.	ನಿಬಂಧನೆಗಳಿಗನುಸಾರವಾಗಿ ಫೀಜು ಪಾವತಿ ಮಾಡಿದ ರಸೀತಿ.	ಷರಾ.
					ಉದ್ಯೋಗವು ಆರಂಭವಾದ ತಾರೀಖು.	ಈಗಿನ ಉದ್ಯೋಗದ ಹೆಸರು.	ಈಗಿನ ಸರಿಯಾದ ತಲಬು.	a. ಪರೀಕ್ಷ್ಯನು ಹೋಗಬೇಕೆಂದಿರುವ ಪರೀಕ್ಷೆ.	b. ಭಾಷೆ.	c. ಪರೀಕ್ಷಾ ಸ್ಥಳ.					
1	2	3	4	5	6	7	8	9			10	11	12	13	14

ತಾರೀಖು 18ನೆ ಡಿಸೆಂಬರ್ 1906.

ನಂ. 5261 ಮೆಡಿ. 4—06—15, ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಸಬ್ ಅಸಿಸ್ಟೆಂಟ್ ಸರ್ಜನ್ ಮಿ॥ ಎಫ್. ಸರೋನಾ ಯವರನ್ನು, ಶಿವನಸಮುದ್ರಕ್ಕೆ ವರ್ಗಾಯಿಸಲ್ಪಟ್ಟಿರುವ ಸಬ್ ಅಸಿಸ್ಟೆಂಟ್ ಸರ್ಜನ್, ಮೆ॥ ಟಿ. ಎಸ್. ಶಿದ್ದಪ್ಪನವರಿಗೆ ಬದಲಾಗಿ, ಮೂಡಗೆರೆಯಲ್ಲಿರುವ ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿಗೆ ವರ್ಗಾಯಿಸಿ ಇದೆ.

ತಾರೀಖು 19ನೆ ಡಿಸೆಂಬರು 1906.

ನಂ. 5281 ಮೆಡಿಕಲ್. 198—06—1, ಮೇಜರ್ ಎಚ್. ಇ. ಡ್ರೇಕ್ ಬ್ರಾಕ್ಮನ್, ಐ. ಎಂ. ಎಸ್. ರವರು ಶ್ರೀಮನ್ಮಹಾರಾಜರವರ ಜತೆಯಲ್ಲಿ ಕೆಲಸದಮೇಲೆ ಹೋಗಿರುವ ಕಾಲದಲ್ಲಿ ಸೆಂಟ್ರೆಲ್ ಜೈಲಿನ ಅಫಿಷಿಯೇಟಿಂಗ್ ಸೂಪರಿಂಟೆಂಡೆಂಟರಾದ ಮಿ॥ ಪಿ. ಎಸ್. ಅಚ್ಯುತರಾಯರವರು ಮೈಸೂರು ಸರ್ಕಾರದ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟೆರಿ ಕಮಿಷನರಾಗಿಯೂ ಮೈಸೂರು ಸೀಮೆಯ ಬಂದೀಖಾನೆಗಳ ಇನ್ಸ್ಪೆಕ್ಟರ್ ಜನರಲಾಗಿಯೂ ಕೆಲಸ ನೋಡುವರು.

2. ಸರ್ಕಾರಿ ನೇತ್ರವೈದ್ಯರಾದ ಡಾಕ್ಟರ್ ಎಸ್. ವಿ. ರಾಮಸ್ವಾಮೈಯ್ಯಂಗಾರ್ರವರು, ಮಿ॥ ಪಿ. ಎಸ್. ಅಚ್ಯುತರಾಯರವರು ಬೇರೆ ಕೆಲಸದಮೇಲೆ ಇರುವ ವರೆಗೆ ಅಥವಾ ಇನ್ನೊಂದು ಹುಕುಮು ಕೊಡುವವರೆಗೆ, ತಮ್ಮ ಕೆಲಸದ ಜತೆಗೆ ಬೆಂಗಳೂರು ಸೆಂಟ್ರೆಲ್ ಜೈಲಿನ ಚಾರ್ಜಿನಲ್ಲಿರುವರು.

ತಾರೀಖು 20ನೆ ಡಿಸೆಂಬರ್ 1906.

ನಂ. ಜೆ. 1707—ರಿಜಿಸ್ 11—06—5, ಹರಿಹರದಲ್ಲಿ ಮತ್ತು ಆಲೂರಿನಲ್ಲಿ ಇರುವ ಸಬ್ ರಿಜಿಸ್ಟ್ರಿ ಕಚೇರಿಗಳು, 1907ನೆ ಇಸವಿಯ ಜನವರಿ 1ನೆ ತಾರೀಖಿನಿಂದ, ಪ್ರತ್ಯೇಕ ಸಬ್ ರಿಜಿಸ್ಟ್ರಾರ್ರುಗಳ ಚಾರ್ಜಿನಲ್ಲಿ ಇರುವುದಕ್ಕೆ ಬದಲಾಗಿ ಆಯಾ ಸಬ್ ತಾಲ್ಲೂಕುಗಳ ಡೆಪ್ಯುಟಿ ಅಮಲ್ದಾರರ ಚಾರ್ಜಿನಲ್ಲಿ ಇಡಲ್ಪಡುವುವು.

2. ಅದೇ ಮೇರೆ, ಈ ಕೆಳಗೆ ಕಂಡ ಸ್ಥಳಗಳಲ್ಲಿರುವ ಸಬ್ ರಿಜಿಸ್ಟ್ರೀ ಕಚೇರಿಗಳು, ಅದೇ ತಾರೀಖು ಮೊದಲ್ಗೊಂಡು, ಪ್ರತ್ಯೇಕ ಸಬ್ ರಿಜಿಸ್ಟ್ರಾರ್ರುಗಳ ಚಾರ್ಜಿನಲ್ಲಿ ಇರುವುದಕ್ಕೆ ಬದಲಾಗಿ ಆಯಾ ತಾಲ್ಲೂಕು ಶಿರಸ್ತೆದಾರರ ಚಾರ್ಜಿನಲ್ಲಿ ಇಡಲ್ಪಡುವುವು :—

1. ಸಾಗರ.
2. ಸೊರಬ.
3. ಶಿಕಾರಿಪುರ.
4. ಹೊನ್ನಾಳಿ.
5. ನಗರ.
6. ಕೊಪ್ಪ.
7. ಮೂಡಿಗೆರೆ.

3. ಮೇಲೆ ಹೇಳಿರುವ ಡೆಪ್ಯುಟಿ ಅಮಲ್ದಾರರೂ ತಾಲ್ಲೂಕು ಶಿರಸ್ತೆದಾರರೂ ತಮ್ಮ ತಮ್ಮ ಕಚೇರಿಗಳಿಗೆ ಉದ್ಯೋಗಪ್ರಯುಕ್ತವಾದ ಸಬ್ ರಿಜಿಸ್ಟ್ರಾರುಗಳಾಗಿ ಇದರಿಂದ ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 29ನೆ ಡಿಸೆಂಬರ್ 1906.

ನಂ. ಜೆ. 1828—ಪೊಲೀಸು 69-06—6, ಶಿವಮೊಗ್ಗಾ ಡಿಸ್ಟ್ರಿಕ್ಟಿನ ಪೊಲೀಸು ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮಿ॥ ಬಿ. ಎಸ್. ರಾಜೋಜಿರಾವ್, ಬಿ. ಎ., ಯವರು, 1906ನೆ ಇಸವಿಯ ಅಕ್ಟೋಬರ್ 30ನೆ ತಾರೀಖಿನ ಜೆ. 1077 ಪೊ. 69-06-4ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ತಮಗೆ ಕೊಡಲ್ಪಟ್ಟ 15 ದಿನಗಳ ಪ್ರಿವಿಲೀಜು ರಜಾವನ್ನು ಉಪಯೋಗಿಸಿಕೊಳ್ಳದೆ ಇರುವುದರಿಂದ ಸದರಿ ರಜಾವನ್ನು ಇದರಿಂದ ವಜಾ ಮಾಡಿದೆ.

ತಾರೀಖು 29ನೆ ನವಂಬರ್ 1906.

ನಂ. ಆರ್. 5556—ಎಲ್. ಆರ್. 252-06—4, ಅಸಿಸ್ಟೆಂಟ್ ಕಮಿಷನರುಗಳ ಚಾರ್ಜಿನಲ್ಲಿರುವ ಸಬ್ ಡಿವಿಜನ್‌ಗಳಾಗಿ ತಾಲ್ಲೂಕುಗಳನ್ನು ಈ ಕೆಳಗೆ ತೋರಿಸುವಂತೆ ತಿದ್ದುಪಾಟು ಮಾಡಿ ಗುಂಪುಕೂಡಿಸಿರುವುದನ್ನು ಸಮಸ್ತ ಜನಗಳ ತಿಳುವಳಿಕೆಯ [illegible]ಗ್ಗೆ ಪ್ರಕಟಿಸಿ ಇರುತ್ತದೆ :—

ಇದು 1907ನೆ ಇಸವಿಯ ಜುಲೈ ಗುರ್ರೆ ಲಾಗಾಯಿತು ಜಾರಿಯಲ್ಲಿ ಬರತಕ್ಕದ್ದು.

ಬೆಂಗಳೂರು ಡಿಸ್ಟ್ರಿಕ್ಟು.

ದೊಡ್ಡಬಳ್ಳಾಪುರ ... ... ದೇವನಹಳ್ಳಿ ... ... ನೆಲಮಂಗಲ	ದೊಡ್ಡಬಳ್ಳಾಪುರದಲ್ಲಿರುವ ಅಸಿಸ್ಟೆಂಟ್ ಕಮಿಷನರು.
ಬೆಂಗಳೂರು ... ... [illegible]ೂಸಕೋಟೆ ... ... [illegible]ಕಲ್ಲು	ಬೆಂಗಳೂರಲ್ಲಿರುವ ಅಸಿಸ್ಟೆಂಟ್ ಕಮಿಷನರು.
[illegible]ಕಾನಹಳ್ಳಿ ... ... [illegible]ರಟ್ಣ ... ... [illegible]ಪೇಟೆ ಸಬ್ ತಾಲ್ಲೂಕು ... [illegible]	ಕ್ಲೋಸ್‌ಪೇಟೆಯಲ್ಲಿರುವ ಅಸಿಸ್ಟೆಂಟ್ ಕಮಿಷನರು.

ಕೋಲಾರ ಡಿಸ್ಟ್ರಿಕ್ಟು.

I	ಬಾರಿಂಗ್‌ಪೇಟೆ	ಡೆಪ್ಯುಟಿ ಕಮಿಷನರು.
II	ಕೋಲಾರ	ಖಜಾನೆ ಅಸಿಸ್ಟೆಂಟ್ ಕಮಿಷನರು.
	ಚಿಕ್ಕಬಳ್ಳಾಪುರ	
	ಗೌರಿಬಿದನೂರು	
III	ಬಾಗೇಪಲ್ಲಿ	ಚಿಕ್ಕಬಳ್ಳಾಪುರದಲ್ಲಿರುವ ಅಸಿಸ್ಟೆಂಟ್ ಕಮಿಷನರು.
	ಗುಡಿಬಂಡೆ ಸಬ್ ತಾಲ್ಲೂಕು	
	ಶಿಡ್ಲಘಟ್ಟ	
	ಮಾಲೂರು	
	ಮುಳಬಾಗಲು	ಕೋಲಾರದಲ್ಲಿರುವ ಅಸಿಸ್ಟೆಂಟ್ ಕಮಿಷನರು.
IV	ಚಿಂತಾಮಣಿ	
	ಶ್ರೀನಿವಾಸಪುರ	

ತುಮಕೂರು ಡಿಸ್ಟ್ರಿಕ್ಟು.

I	ಕುಣಿಗಲ್	ಡೆಪ್ಯುಟಿ ಕಮಿಷನರು.
II	ತುಮಕೂರು	ಖಜಾನೆ ಅಸಿಸ್ಟೆಂಟ್ ಕಮಿಷನರು.
	ಮದ್ದಗಿರಿ	
	ಪಾವಗಡ	ಮದ್ದಗಿರಿಯಲ್ಲಿರುವ ಅಸಿಸ್ಟೆಂಟ್ ಕಮಿಷನರು.
III	ಕೊರಟಗೆರೆ ಸಬ್ ತಾಲ್ಲೂಕು	
	ಸೀರ್‍ಯ	
	ಗುಬ್ಬಿ	
	ತಿಪಟೂರು	ತುಮಕೂರಲ್ಲಿರುವ ಅಸಿಸ್ಟೆಂಟ್ ಕಮಿಷನರು.
IV	ತುರುವೆಕೆರೆ ಸಬ್ ತಾಲ್ಲೂಕು	
	ಚಿಕ್ಕನಾಯಕನಹಳ್ಳಿ	

ಮೈಸೂರು ಡಿಸ್ಟ್ರಿಕ್ಟು.

I	ಮಳವಳ್ಳಿ	ಡೆಪ್ಯುಟಿ ಕಮಿಷನರು.
	ಶ್ರೀರಂಗಪಟ್ಟಣ	
	ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು	
	ಮಂಡ್ಯ	ಫ್ರೆಂಚ್‌ರಾಕ್ಸಿನಲ್ಲಿರುವ ಅಸಿಸ್ಟೆಂಟ್ ಕಮಿಷನರು.
II	ನಾಗಮಂಗಲ	
	ಕೃಷ್ಣರಾಜಪೇಟೆ	
	ಚಾಮರಾಜನಗರ	
	ನಂಜನಗೂಡು	ನಂಜನಗೂಡಿನಲ್ಲಿರುವ ಅಸಿಸ್ಟೆಂಟ್ ಕಮಿಷನರು.
III	ಗುಂಡ್ಲುಪೇಟೆ	
	ತಿರಮಕೂಡ್ಲು ನರಸೀಪುರ	
	ಮೈಸೂರು	
	ಹುಣಸೂರು	ಮೈಸೂರಿನಲ್ಲಿರುವ ಅಸಿಸ್ಟೆಂಟ್ ಕಮಿಷನರು.
IV	ಯಡತೊರೆ	
	ಹೆಗ್ಗಡದೇವನಕೋಟೆ	

ಹಾಸನ ಡಿಸ್ಟ್ರಿಕ್ಟು.

	ಹಾಸನ	
I	ಆಲೂರು ಸಬ್ ತಾಲ್ಲೂಕು	ಡೆಪ್ಯುಟಿ ಕಮಿಷನರು.
	ಅರಕಲಗೂಡು	
	ಮಂಜರಾಬಾದು	ಸಕಲೇಶಪುರದಲ್ಲಿರುವ ಅಸಿಸ್ಟೆಂಟ್ ಕಮಿಷನರು.
II	ಬೇಲೂರು	
	ಚನ್ನರಾಯಪಟ್ಟಣ	
III	ಅರಸೀಕೆರೆ	ಹಾಸನದಲ್ಲಿರುವ ಅಸಿಸ್ಟೆಂಟ್ ಕಮಿಷನರು.
	ಹೊಳೆನರಸೀಪುರ	

ಶಿವಮೊಗ್ಗ ಡಿಸ್ಟ್ರಿಕ್ಟು.

I	ತೀರ್ಥಹಳ್ಳಿ	ಡೆಪ್ಯುಟಿ ಕಮಿಷನರು.
II	ಶಿವಮೊಗ್ಗ	
	ಕುಂಸಿ ಸಬ್ ತಾಲ್ಲೂಕು	
	ಹೊನ್ನಾಳಿ	ಶಿವಮೊಗ್ಗದಲ್ಲಿರುವ ಅಸಿಸ್ಟೆಂಟ್ ಕಮಿಷನರು.
	ಶಿಕಾರಿಪುರ	
	ಚನ್ನಗಿರಿ	

III	ಸಾಗರ ಸೊರಬ ನಗರ	ಸಾಗರದಲ್ಲಿರುವ ಅಸಿಸ್ಟೆಂಟ ಕಮಿಷನರು.

ಕಡೂರು ಡಿಸ್ಟ್ರಿಕ್ಟು.

I	ಚಿಕ್ಕಮಗಳೂರು ಮೂಡಗೆರೆ	ಡೆಪ್ಯುಟಿ ಕಮಿಷನರು.
II	ಕಡೂರು ತರಿಕೆರೆ ಕೊಪ್ಪ ಯಡೆಹಳ್ಳಿ ಸಬ್ ತಾಲ್ಲೂಕು	ಚಿಕ್ಕಮಗಳೂರಲ್ಲಿರುವ ಅಸಿಸ್ಟೆಂಟ್ ಕಮಿಷನರು.

ಚಿತ್ರದುರ್ಗ ಡಿಸ್ಟ್ರಿಕ್ಟು.

I	ಹಿರಿಯೂರು	ಡೆಪ್ಯುಟಿ ಕಮಿಷನರು.
II	ದಾವಣಗೆರೆ ಹರಿಹರ ಸಬ್ ತಾಲ್ಲೂಕು ಹೊಳಲ್ಕೆರೆ ಹೊಸದುರ್ಗ ಜಗಲೂರು	ದಾವಣಗೆರೆಯಲ್ಲಿರುವ ಅಸಿಸ್ಟೆಂಟ್ ಕಮಿಷನರು.
III	ಚಳ್ಳಕೆರೆ ಮೊಳಕಾಲ್ಮುರು ಚಿತ್ರದುರ್ಗ	ಚಿತ್ರದುರ್ಗದಲ್ಲಿರುವ ಅಸಿಸ್ಟೆಂಟ್ ಕಮಿಷನರು.

ತಾರೀಖು 10ನೆ ಡಿಸೆಂಬರ 1906.

ನಂ. ಆರ್. 5854—ಎಲ್. ಆರ್. 173-06—2, ಸ್ತ್ರ 1888ನೆ ಇಸವಿಯ ಲ್ಯಾಂಡ್ ರವಿನ್ಯೂ ಕೋಡಿನಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ, ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು, 1901ನೆ ಇಸವಿ ಜುಲೈ 10ನೆ ತಾರೀಖಿನ 264—ಆರ್. 122ನೆ ನಂಬರಿನ ಇಸ್ತಿಹಾರ್ನಾಮೆಯೊಡನೆ ಪ್ರಕಟಸಲ್ಪಟ್ಟ ಸದರಿ ಕೋಡಿನ ನಿಬಂಧನೆಗಳಲ್ಲಿ ಈ ಕೆಳಗೆ ನಮೂದಾಗುವ ತಿದ್ದುಪಾಟುಗಳನ್ನು ಮಾಡಲು ಹುಕುಂ ದಯಪಾಲಿಸಿರುತ್ತಾರೆ:—

1. 47ನೆ ನಿಬಂಧನೆಯ (ಬಿ) ಕಲಮನ್ನು ಬಿಟ್ಟು (ಸಿ) ಕಲಮನ್ನು (ಬಿ) ಕಲಮನ್ನಾಗಿ ಬದಲಾಯಿಸಬೇಕು; ಮತ್ತು ಈ ಕಡೆಯಲ್ಲಿ ಹೇಳಲ್ಪಟ್ಟ ಕಲಮಿನಲ್ಲಿ "ಹಿಂದಿನ ಕಲಂನಲ್ಲಿ ವಿವರಿಸಿರುವ ಸ್ವಭಾವದ ಜಮೀನಿನ ಅಥವಾ" ಎಂಬ ಮಾತುಗಳನ್ನು ಬಿಟ್ಟುಬಿಡಬೇಕು.

2. 48ನೆ ನಿಬಂಧನೆಯಲ್ಲಿ "(ಬಿ) ಮತ್ತು (ಸಿ) ಕಲಂಗಳಲ್ಲಿ" ಎಂಬ ಮಾತುಗಳಿಗೂ ಅಕ್ಷರಗಳಿಗೂ ಬದಲಾಗಿ "(ಬಿ) ಕಲಂನಲ್ಲಿ" ಎಂಬ ಮಾತನ್ನೂ ಅಕ್ಷರವನ್ನೂ ಸೇರಿಸಬೇಕು.

3. 49 ಮತ್ತು 50ನೆ ನಿಬಂಧನೆಗಳ ಮಧ್ಯದಲ್ಲಿ ಈ ಕೆಳಗಿನ ನಿಬಂಧನೆಯನ್ನು ಸೇರಿಸಬೇಕು:—

"49 ಎ. ಒಂದು ರೈಲ್ವೆ ಸ್ಟೇಷನಿನ ಹತ್ತಿರ ಮತ್ತು ಅದರಿಂದ ಅರ್ಧಮೈಲಿಯೊಳಗೆ ಅಥವಾ ಸರ್ಕಾರದವರು ಆಗಿಂದಾಗ್ಗೆ ಗೊತ್ತು ಮಾಡುವಂಥಾ ಫಾಸಲೆಯೊಳಗೆ ಇರುವ ಜಮೀನಿನ ಹಿಡುವಳಿಯನ್ನು, ಸರ್ಕಾರಿ ಕೆಲಸಕ್ಕೆ ಬೇಕಾದಾಗ ಯಾವ ಪ್ರತಿಫಲವನ್ನೂ ಕೊಡದೆ ಸದರಿ ಜಮೀನು ವಾಪಸು ತೆಗೆದುಕೊಳ್ಳಲ್ಪಡಲು ಗುರಿಯಾಗಿರತಕ್ಕದ್ದೆಂಬ ಷರತ್ತಿಗೆ ಒಳಪಟ್ಟು, ಡೆಪ್ಯುಟಿ ಕಮಿಷನರಿಗೆ ಯುಕ್ತತೋರುವಂತೆ, ವ್ಯವಸಾಯದ ಕೆಲಸಗಳಿಗೆ ಕೊಡಬಹುದು; ಆದರೆ ಕಟ್ಟಡ ಕಟ್ಟುವ ಬಗ್ಗೆ ಮಾತ್ರ ಸರ್ಕಾರದವರ ಮಂಜೂರಾತಿಯನ್ನು ಮೊದಲಾಗಿ ಪಡೆದು ಮತ್ತು ಪ್ರತಿ ಸಂದರ್ಭದಲ್ಲಿಯೂ ಅವರ ಹುಕುಂಗಳಿಗೆ ಒಳಪಟ್ಟು ಅಂಥಾ ಜಮೀನು ಕೊಡಲ್ಪಡತಕ್ಕದ್ದು.

ತಾರೀಖು 12ನೆ ಡಿಸೆಂಬರ 1906.

ನಂ. ಆರ್. 5627—ಫಾ. 125-05—5, (1900ನೆ ಇಸವಿಯ 11ನೆ) ಮೈಸೂರು ಫಾರೆಸ್ಟ್ ರೆಗ್ಯುಲೇಷನಿನ 17ನೆ ಪ್ರಕರಣದ ನಿರೂಪಗಳನ್ನನುಸರಿಸಿ, ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು, 1907ನೆ ಇಸವಿಯ ಜನವರಿ ಗುರ್ರೆ ತಾರೀಖಿನ ಲಾಗಾಯಿತು, ಈ ಇಸ್ತಿಹಾರ್ನಾಮೆಗೆ ಲಗತ್ತಿರುವ ಷೆಡ್ಯೂಲಿನಲ್ಲಿ ಕಂಡ ಚತುರ್ಗಡಿಯೊಳಗಣ ವಿಸ್ತೀರ್ಣವು,

ಸದರಿ ಇಸ್ತಿಹಾರ್ನಾಮೆಯ ಕೆಳಭಾಗದಲ್ಲಿ ವಿವರಿಸಿರುವ ಹಕ್ಕುಗಳ ಚಲಾವಣೆಗೆ ಬಳಪಟ್ಟು, "ಸಂಸ್ಥಾನದ (ಸ್ಟೇಟ್) ಜಂಗಲು" ಎಂದು ಭಾವಿಸಲ್ಪಡತಕ್ಕದ್ದೆಂದು ಪ್ರಕಟಿಸಲು ಹುಕುಂ ದಯಪಾಲಿಸಿರುತ್ತಾರೆ :—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ತಾಕಿನ ಹೆಸರು.	ಚತುರ್ಗಡಿ.
ಮೈಸೂರು.	ಶ್ರೀರಂಗಪಟ್ಟಣ.	403 ಎಕರೆಗಳು, 9 ಗುಂಟೆ.	ಕರಿಘಟ್ಟದ ಸಂದಲ್ ಪ್ಲಾಂಟೇಷನ್.	ಉತ್ತರಕ್ಕೆ.—ಕುರುಬರಶೆಟ್ಟಿಹಳ್ಳಿ ಗ್ರಾಮದ ಸರ್ವೆ 135ನೆ ನಂಬರಿನ ಅತ್ಯಂತ ದಕ್ಷಿಣ ಮೂಲೆಯಿಂದ ಹೊರಟು (ಕಳ್ಳಿಕೊಪ್ಪಲು ಗ್ರಾಮದ ಸರ್ವೆ 134ನೆ ನಂಬರು ಮತ್ತು ಕುರುಬರಶೆಟ್ಟಿಹಳ್ಳಿಗ್ರಾಮದ ಸರ್ವೆ 134 ಮತ್ತು 135ನೆ ನಂಬರುಗಳ ಮುಕ್ಕುಪ್ಪೆ ಬಾಂದುಗಳು) ಎಲೆ ಯ ರೇಖೆಯು ಸರ್ವೆ 134ನೆ ನಂಬರಿಗೆ ಅಡ್ಡಲಾಗಿ ಆಗ್ನೇಯದಿಕ್ಕಿಗೆ ಸುಮಾರು 46 ಸರಪಣಿಗಳ ದೂರ, (ಕುರುಬರಶೆಟ್ಟಿಹಳ್ಳಿ, ಅಲ್ಲಾಪಟ್ಟಣ ಮತ್ತು ಚಿನ್ನಾಯಕನಹಳ್ಳಿ ಗ್ರಾಮಗಳ ಮುಕುಪ್ಪೆಬಾಂದುಗಳಿಗೆ ಹೋಗುತ್ತದೆ. ಪೂರ್ವಕ್ಕೆ.—ಅಲ್ಲಿಂದ ಅಲ್ಲಾಪಟ್ಟಣಗ್ರಾಮದ ಪಶ್ಚಿಮ ಮೇರೆಯಲ್ಲಿ ಸುಮಾರು 42 ಸರಪಣಿಗಳದೂರ ಹೋಗಿ ಅಲ್ಲಿ ಚಿಕ್ಕದೇವರಾಯಸಾಗರ ನಾಲೆಯನ್ನು ಸೇರುತ್ತದೆ.

ದಕ್ಷಿಣಕ್ಕೆ.—ಅಲ್ಲಿಂದ ಸದರಿ ನಾಲೆಯ ಎಡಪಾರ್ಶ್ವದಲ್ಲಿ, ಚಿನ್ನಾಯಕನಹಳ್ಳಿ ಗ್ರಾಮದ ಸರ್ವೆ 147ನೆ ನಂಬರಿನ ವಾಯವ್ಯ ಮೂಲೆಯಿಂದ ಪೂರ್ವಕ್ಕೆ ಸುಮಾರು 20 ಸರಪಣಿಗಳ ದೂರದಲ್ಲಿರುವ ಒಂದು ಸ್ಥಳಕ್ಕೆ ಹೋಗುತ್ತದೆ.

ಪಶ್ಚಿಮಕ್ಕೆ.—ಅಲ್ಲಿಂದ ಚಿನ್ನಾಯಕನಹಳ್ಳಿ ಗ್ರಾಮದ 147ನೆ ಸರ್ವೆ ನಂಬರಿಗೆ ಅಡ್ಡಲಾಗಿ ಈಶಾನ್ಯದಿಕ್ಕಿಗೆ ಸುಮಾರು 10 ಸರಪಣಿಗಳ ದೂರವೂ, ಕಳ್ಳಿಕೊಪ್ಪಲು ಗ್ರಾಮದ ಸರ್ವೆ 134ನೆ ನಂಬರಿಗೆ ಅಡ್ಡಲಾಗಿ ಸುಮಾರು 10 ಸರಪಣಿಗಳದೂರವೂ ಹೋಗಿ ಅಲ್ಲಿ ಕುರುಬರಶೆಟ್ಟಿಹಳ್ಳಿಯಿಂದ ಕರಿಘಟ್ಟದ ದೇವಸ್ಥಾನಕ್ಕೆ ಹೋಗುವ ಕಾಲುದಾರಿಯನ್ನು ಸೇರಿ, ಅಲ್ಲಿಂದ 134ನೆ ಸರ್ವೆ ನಂಬರಿಗೆ ಅಡ್ಡಲಾಗಿ ಈಶಾನ್ಯದಿಕ್ಕಿಗೆ ಸುಮಾರು 55 ಸರಪಣಿಗಳ ದೂರ ಹೋಗಿ ಹೊರಟ ಸ್ಥಳವನ್ನು ಕೂಡುತ್ತದೆ.

ಹುಕುಂ ಬಮೋಜಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಪ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಛಾಪಿಸಿದ್ದು [ನಂ. 2.

ಬೆಂಗಳೂರು, ಗುರುವಾರ, ಜನವರಿ ತಾ॥ 10, ಸನ್ 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟಸಂಖೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮಿಷನರವರು, ಕಂಟ್ರೋಲರವರು, ಪಬ್ಲಿಕವರಕ್ಸ ಆಫಿಸರ‍ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟ ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

Iನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 18ನೆ ಡಿಸೆಂಬರ 1906.

ನಂ: 5265—ಸ್ಯಾನಿಟರಿ 66—06—20, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿ ಪಡಿಸುವುದೇನಂದರೆ:—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು
ಬೆನ್ನೂರು	ಬೇಲೂರು.
ಹೊಸಕೊಪ್ಪಲು	ಹಾಸನ.
ಉನ್ನೂರು	ಡಿಟೋ.

ತಾರೀಖು 18ನೆ ಡಿಸೆಂಬರ 1906.

ನಂ. 5270—ಸ್ಯಾನಿಟೆರಿ 139-06—5, ಸಮಸ್ತ ಜನರ ತಿಳಿವಳಿಕೆಯು ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ ಡಿಸೀಸೆಸ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ ಫೈಲ್ 21—96 ಮತ್ತು ನಂಬರ 9384—ಮಿಸಲೇನಿಯಸ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗುತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಎಲಹಂಕ	ಬೆಂಗಳೂರು.
ಆನೇಕಲ್ಲು ಷಹರು	ಆನೇಕಲ್ಲು.
ಕುಕ್ಕನಹಳ್ಳಿ	ನೆಲಮಂಗಲ.

ತಾರೀಖು 18ನೆ ಡಿಸೆಂಬರ 1906.

ನಂ. 5272—ಸ್ಯಾನಿಟೆರಿ 15-06—1, ಸಮಸ್ತ ಜನರ ತಿಳುವಳಿಕೆಯು ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ:—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ ಡಿಸೀಸೆಸ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ ಫೈಲ್ 21—96 ಮತ್ತು ನಂಬರ 9384—ಮಿಸಲೇನಿಯಸ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವದು.

ಸ್ಥಳ.	ತಾಲ್ಲೂಕು.
ಚಿಕ್ಕಕೆರೆಯೂರು	ಶ್ರೀರಂಗಪಟ್ಣ.

ತಾರೀಖು 21ನೆ ಡಿಸೆಂಬರ 1906.

ನಂ. 5406—ಸ್ಯಾನಿಟೆರಿ (139-06)-6, ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ್ಗೆ ಪ್ರಕಟಿಸಲ್ಪಟ್ಟ ಬೆಂಗಳೂರು ಡಿಸ್ಟ್ರಿಕ್ಟಿನ ಇದರಡಿ ಕಂಡ ಸ್ಥಳಗಳಲ್ಲಿ ಮೂರು ತಿಂಗಳಿಗಿಂತ ಹೆಚ್ಚಾದ ಕಾಲದಿಂದ ಪ್ಲೇಗು ಇಲ್ಲದೇಯಿರುವ ನಿಮಿತ್ತ ಆ ಸ್ಥಳಗಳನ್ನು ಅಂಥಾ ಪ್ರದೇಶಗಳ ಪಟ್ಟಿಯಿಂದ ತೆಗೆದುಹಾಕಿ ಇದೆ, ಎಂದು ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸಿ ಇದೆ:—

	ತಾಲ್ಲೂಕು.	ಗ್ರಾಮಗಳು.
1.	ಬೆಂಗಳೂರು	ಸುಂಕದಕಟ್ಟೆ.
2.	,,	ವೈಟ್‌ಫೀಲ್ಡ್.
3.	,,	ಕೊತ್ತನೂರು.
4.	,,	ಸೋಂಕ್ಕೆ
5.	,,	ಸೀನಗರ
6.	,,	ದಾಸರಹಳ್ಳಿ.
7.	,,	ಇತ್ಸಂದ್ರ.
7 a.	,,	ಕಸವನಹಳ್ಳಿ.
8.	,,	ಅರಳೀಕುಂಟೆ.
9.	,,	ಕೊಡತಿ.
10.	,,	ಗಂಗಮ್ಮನಪಾಳ್ಯ.
11.	ದೊಡ್ಡಬಳ್ಳಾಪುರ	ಮಾರಸಂದ್ರ.
12.	,,	ಬಂಡಿ ನಪಾಳ್ಯ.
13.	,,	ಕೋಡಿಹಳ್ಳಿ.
14.	ನೆಲಮಂಗಲ	ದೊಡ್ಡಬೆಲೆ
15.	,,	ಹನುಮಂತಯ್ಯನಪಾಳ್ಯ.
16.	,,	ತಾವರಕೆರೆ.
17.	,,	[illegible]
18.	,,	[illegible]
19.	,,	ಗುಂಡೇನಹಳ್ಳಿ.
20.	,,	ಕೆಂಪಹಳ್ಳಿ.
21.	,,	ನರಸಾಪುರ.
22.	,,	ಲಕ್ಕೂರು.
23.	,,	ವದ್ದರಹಳ್ಳಿ.
24.	,,	ಸೊಣ್ಣಪ್ಪನಪಾಳ್ಯ.
25.	ದೇವನಹಳ್ಳಿ	ದೇವನಹಳ್ಳಿ.
26.	,,	ಬಾಗಲೂರು.

ತಾರೀಖು 3ನೆ ಜನವರಿ 1907.

ನಂ. 5968—ಸ್ಯಾನಿಟರಿ 141—06—4, ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯುವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು.	
			ಇಂದ.	ಗೆ.
1. ಶ್ರೀಗುರು ಗುಂಡಬ್ರಹ್ಮೇಶ್ವರ ಜಾತ್ರೆ.	ಪಾಟನಾಯಕನಹಳ್ಳಿ ...	ಸೀರ್ಯ ...	18—1—07	23—1—07
2. ಶ್ರೀ ನರಸಿಹ್ಮಸ್ವಾಮಿ ರಥೋತ್ಸವ ಮತ್ತು ಜಾತ್ರೆ.	ಸೀಬಿ ...	ಡಿಟೋ ...	1—2—07	25—2—07

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 3ನೆ ಜನವರಿ 1907.

ನಂ. 6010—ಸ್ಯಾನಿಟರಿ 134—06—6, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :— ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವುದು.

ಸ್ಥಳ.	ತಾಲ್ಲೂಕು.
ಅಣದಕಟ್ಟೆ	ಚಿಕ್ಕನಾಯಕನಹಳ್ಳಿ.

ತಾರೀಖು 3ನೆ ಜನವರಿ 1907.

ನಂ. 6012—ಸ್ಯಾನಿಟರಿ 21—06—58, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :— ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಕ್ಕೆ ಯಾತ್ರೆ ಹೋಗುವದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು	ಸ್ಥಳ	ತಾಲ್ಲೂಕು	ಡಿಸ್ಟ್ರಿಕ್ಟು	ತಾರೀಖು		ಅಧಿಕಾರ
				ಇಂದ	ಗೆ	
ಮೈಲಾರಲಿಂಗಪ್ಪನ ಜಾತ್ರೆ ಅಥವಾ ಕಾರಣೀಕೋತ್ಸವ.	ಮೈಲಾರ	ಹಡಗಲ್ಲಿ	ಬಳ್ಳಾರಿ.	15–1–07	10–2–07	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1906ನೆ ಇಸವಿ ಡಿಸೆಂಬರು 24ನೆ ಮರ್ಕುಂ 1360ನೆ ಮೆಮೊ ಪ್ರಕಾರ.

ತಾರೀಖು 4ನೆ ಜನವರಿ 1907.

ನಂ. 6056—ಸ್ಯಾನಿಟರಿ 66—06—22, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :— ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವುದು.

ಸ್ಥಳ.	ತಾಲ್ಲೂಕು.
ಚನ್ನಾಪುರ	ಬೇಲೂರು.
ಮಡಬಕೊಪ್ಪಲು	ಚನ್ನರಾಯಪಟ್ಣ.
ಗ್ರಾಮ	ಹಾಸನ.
ದೊಡ್ಡಬಸವನಹಳ್ಳಿ ...	ಡಿಟೋ.
ಹೊಳೆನರಸಿಪುರ ಟವರ್ ...	ಹೊಳೆನರಸೀಪುರ.

ತಾರೀಖು 3ನೆ ಜನವರಿ 1907.

ನಂ. 6013—ಸ್ಯಾನಿಟರಿ 21-06—59, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿ ಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಕ್ಕೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಧಿಕಾರ.
				ಇಂದ.	ಗೆ.	
ತೈಪೂಸಂ ಉತ್ಸವ ಮತ್ತು ದಿನಗಳ ಸಂತೆ.	ಕರುಗುಮಲೈ.	ಒಟ್ಟಪಿದರಂ	ತಿನ್ನವೆಲ್ಲಿ.	19—1—07	9—2—07	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1906ನೆ ಇಸವಿ ಡಿಸೆಂಬರ 21ನೆ ಮರ್ಸ್ತುಂ 1343ನೆ ನಂಬರ ಮೆಮೊ ಪ್ರಕಾರ.
ಪಟ್ಟಾಭಿರಾಮಸ್ವಾಮಿ ರಥೋತ್ಸವ.	ಕಲ್ಯಾಣ ದುರ್ಗ.	ಕಲ್ಯಾಣ ದುರ್ಗ.	ಅನಂತಪುರ.	24—1—07	31—1—07	ಡಿಟೋ ಡಿಸೆಂಬರ 24ನೆ ಮರ್ಸ್ತುಂ 1356ನೆ ನಂಬರು ಮೆಮೊ ಪ್ರಕಾರ.
ಹಂಜರೇಶ್ವರಸ್ವಾಮಿ ರಥೋತ್ಸವ	ಹೇಮಾವತಿ.	ಮಡಕಶಿರ.	ಡಿಟೋ	5—2—07	15—2—07	ಡಿಟೋ
ನರಸಿಂಹಸ್ವಾಮಿ ರಥೋತ್ಸವ.	ರೊಳ್ಳ.	ಡಿಟೋ	ಡಿಟೋ	22—2—07	3—3—07	ಡಿಟೋ

ತಾರೀಖು 9ನೆ ಜನವರಿ 1907.

ನಂ. 6172—ಸ್ಯಾನಿಟರಿ 141-06—6, ತುಮಕೂರು ಡಿಸ್ಟ್ರಿಕ್ಟು ಕೊರಟಗೆರೆ ಸಬ್ ತಾಲ್ಲೂಕಿನ ಕ್ಯಾಮೇನಹಳ್ಳಿಗೆ ಶ್ರೀ ಆಂಜನೇಯಸ್ವಾಮಿಯವರ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಜನವರಿ 20ನೆ ತಾರೀಖಿನಿಂದ 1907ನೆ ಜನವರಿ 28ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 9ನೆ ಜನವರಿ 1907.

ನಂ. 6174—ಸ್ಯಾನಿಟರಿ (21-06)-66, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿ ಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಕ್ಕೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಧಿಕಾರ.
				ಇಂದ.	ಗೆ.	
ಮಹಾ ಶಿವರಾತ್ರಿ ಉತ್ಸವ.	ಮಹಾ ನಂದಿ	ನಂದ್ಯಾಲ	ಕರ್ನೂಲು	6—2—07	14—2—07	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1907ನೆ ಇಸವಿ ಜನವರಿ 4ನೆ ಮರ್ಸ್ತುಂ 22ನೆ ನಂಬರ ಮೆಮೋ ಪ್ರಕಾರ.
				(ಉಭಯ ದಿನಗಳೂ ಸೇರಿ)		
ಡಿಟೋ	ಓಂಕಾರಂ	ಡಿಟೋ	ಡಿಟೋ	ಡಿಟೋ		ಡಿಟೋ ನಂ. 19ರ ಪ್ರಕಾರ.

ತಾರೀಖು 18ನೆ ಡಿಸೆಂಬರ 1906.

ನಂ. 5274—ಮೆಡಿಕಲ್ 154-06—2, ಅಸಿಸ್ಟೆಂಟ್ ಸರ್ಜನ್ ಮಿ॥ ಅಬ್ಬಾಯಿನಾಯುಡು ಯವರಿಗೆ ಅಸಿಸ್ಟೆಂಟ್ ಸರ್ಜನ್‌ಗಳ ಎರಡನೆ ತರಗತಿಯಿಂದ ಮೊದಲನೆ ತರಗತಿಗೆ 1906ನೆ ಇಸವಿಯ ಅಕ್ಟೋಬರ ಗುರ್ರಾ ತಾರೀಖಿನಿಂದ ಬಡತಿ ಮಾಡಿದೆ.

ತಾರೀಖು 21ನೆ ಡಿಸೆಂಬರ 1906.

ನಂ. 5402—ಮೆಡಿಕಲ್. 138-06—2, 1906ನೆ ಇಸವಿಯ ಅಕ್ಟೋಬರ 10ನೆ ತಾರೀಖಿನ 2825—ಮೆಡಿಕಲ್. 12-06—3ನೆ ನಂಬರ ಇಸ್ತಿಹಾರ್ನಾಮೆಯಿಂದ ಸಿವಿಲ್ ಸರ್ಜನ್‌ಗಳ 2ನೆ ತರಗತಿಗೆ ಬಡತಿ ಮಾಡಲ್ಪಟ್ಟ ಮಿಸ್॥ ಆರ್. ಗೋವಿಂದ ರಾಜಲು, ಎಂ. ಡಿ. ಯವರಿಗೆ ಬದಲಾಗಿ ಮೊದಲನೆ ತರಗತಿಯ ಅಸಿಸ್ಟೆಂಟ್ ಸರ್ಜನ್ ಮಿ॥ ಡಬ್ಲ್ಯೂ. ಶ್ರೀನಿವಾಸೈಯ್ಯಂಗಾರ್ರವರನ್ನು ಮೂರನೆ ತರಗತಿಯ ಸಿವಿಲ್ ಸರ್ಜನಾಗಿ ಬದಲಿ ನೋಡುವಂತೆ ಸರ್ಕಾರಮಾಡಿ ಇದೆ.

ತಾರೀಖು 28ನೆ ಡಿಸೆಂಬರ 1906.

ನಂ. 5604—ಮೆಡಿಕಲ್. 195-06—2, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣಕ್ಕನುಗುಣವಾಗಿ ಬೆಂಗಳೂರು ಮೆಟರ್ನಿಟಿ ಆಸ್ಪತ್ರೆಯ ಚಾರ್ಜಿನಲ್ಲಿರುವ ಮಿಸ್॥ ಆರ್. ಗೋವಿಂದರಾಜಲು, ಎಂ. ಡಿ. ಯವರಿಗೆ 1907ನೆ ಇಸವಿಯ ಜನವರಿ 3ನೆ ತಾರೀಖಿನಿಂದ 7 ದಿನವಸಗಳ ಪ್ರಿವಿಲೇಜ್ ರಜಾವನ್ನು ಕೊಟ್ಟಿರುತ್ತದೆ.

ತಾರೀಖು 31ನೆ ಡಿಸೆಂಬರ 1906.

ನಂ. ಜೆ. 1832—ಕೊರ್ಟ್ಸ್. 167-06—1, ಬೆಂಗಳೂರು ಸಿಟಿ ಅಸಿಸ್ಟೆಂಟ್ ಕಮಿಷನರ ಮತ್ತು ಮೊದಲನೆ ತರಗತಿಯ ಮಾಜಿಸ್ಟ್ರೇಟರಾದ ಮಿ॥ ಸಿ. ರಾಮರಾಯರು ಬೆಂಗಳೂರು ಡಿಸ್ಟ್ರಿಕ್ಟ್ ಜನರಲ್ ಡ್ಯೂಟಿ ಯಾ ಸಾಮಾನ್ಯ ಕೆಲಸಕ್ಕೆ ಹಾಕಲ್ಪಟ್ಟು, ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ಹಂಗಾಮಿಯಾಗಿ ವರ್ಗಾಯಿಸಲ್ಪಟ್ಟಿರುವ ಮಿ॥ ಪಿ. ಶ್ರೀನಿವಾಸರಾಯರಿಗೆಬದಲಾಗಿ ಬೆಂಗಳೂರು ಸಬ್ ಡಿವಿಜನ್ ಚಾರ್ಜಿನಲ್ಲಿರುವರು.

ಬೆಂಗಳೂರು ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರಾದ ಮಿ॥ ಜಿ. ಹ್ಯಾಮ್ ರೈಟರವರು, ರಜಾದಿಂದ ವಾಪಸು ಬಂದ ತರುವಾಯ, "ಬೆಂಗಳೂರು ಸಿಟಿ ಮಾಜಿಸ್ಟ್ರೇಟ್" ಎಂಬ ಹೆಸರಿನಿಂದ, ಬೆಂಗಳೂರು ಸಿಟಿಯ ಅಸಿಸ್ಟೆಂಟ್ ಕಮಿಷನರ್ ಮತ್ತು ಮೊದಲನೆ ತರಗತಿಯ ಮಾಜಿಸ್ಟ್ರೇಟರ ಕಚೇರಿಯ ಚಾರ್ಜಿನಲ್ಲಿ ಇಡಲ್ಪಡುವರು. ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೆ ಪ್ರಕರಣದ ಮೇರೆಗೆ ಇವರಿಗೆ ಮೊದಲನೆ ತರಗತಿಯ ಮಾಜಿಸ್ಟ್ರೇಟಿನ ಅಧಿಕಾರಗಳನ್ನು ಕೊಟ್ಟಿರುತ್ತದೆ.

ತಾರೀಖು 3ನೆ ಜನವರಿ 1907.

ನಂ. 5996—ಮೆಡಿ. 198-06—3, ಸ್ 1906ನೆ ಇಸವಿಯ ಡಿಸೆಂಬರು 20ನೆ ತಾರೀಖಿನ ಪೂರ್ವಾಹ್ನದಲ್ಲಿ ಮೈಸೂರು ಸರ್ಕಾರದ ಆಫೀಷಿಯೇಟಿಂಗ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ ಕೆಲಸಗಳ ಛಾರ್ಜನ್ನು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರ ಕೆಲಸ ನೋಡುತ್ತಿರುವ ಮಿ॥ ಪಿ. ಎಸ್. ಅಚ್ಯುತರಾಯರು ವಹಿಸಿದರು.

ತಾರೀಖು 3ನೆ ಜನವರಿ 1907.

ನಂ. 6000—ಮೆಡಿ. 201-06—2, ಬೆಂಗಳೂರು ಇಂಪೀರಿಯಲ್ ಸರ್ವಿಸ್ ರೆಜಿಮೆಂಟಲ್ ಆಸ್ಪತ್ರೆಯ ಛಾರ್ಜಿನಲ್ಲಿರುವ ಸಬ್ ಅಸಿಸ್ಟೆಂಟ್ ಸರ್ಜನ್ ಮೆ॥ ಜೆ. ವಿ. ಮಾಸ್ಕರೆಹಾಸ್ ರವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 177ನೆ ನಿಬಂಧನೆಯಮೇರೆ 1906ನೆ ಇಸವಿಯ ಅಕ್ಟೋಬರ್ 18ನೆ ತಾರೀಖಿನಿಂದ 8 ದಿನಗಳ ವರೆಗೆ ಪ್ರಿವಿಲೇಜ್ ರಜಾ ಕೊಟ್ಟಿತು.

ತಾರೀಖು 5ನೆ ಜನವರಿ 1907.

ನಂ. ಜೆ. 1888—ಕೋ. 167-06—3, ಸ್ 1904ನೆ ಇಸವಿಯ 2ನೆ ನಂಬರ ರೆಗ್ಯುಲೇಷನ್ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 37ನೆ ಪ್ರಕರಣಾನುಸಾರವಾಗಿ, ಬೆಂಗಳೂರು ಸಿಟಿ ಮಾಜಿಸ್ಟ್ರೇಟ್ ಮಿ॥ ಜಿ. ಹ್ಯಾಂ ರೈಟ್ ಯವರಿಗೆ, ಮೊದಲನೆ ತರಗತಿಯ ಮಾಜಿಸ್ಟ್ರೇಟಿಗೆ ಸರ್ಕಾರದವರು ಕೊಡಬಹುದಾದ ಹೆಚ್ಚಿಗೆ ಅಧಿಕಾರಗಳೆಂದು 4ನೆ ಷೆಡ್ಯೂಲಿನಲ್ಲಿ ವಿವರಿಸಿರುವ ಈ ಕೆಳಗಿನ ಅಧಿಕಾರಗಳನ್ನು ಕೊಟ್ಟಿದೆ.

(1) ಒಳ್ಳೆಯ ನಡತೆಯ ಬಗ್ಗೆ ಜಾಮೀನ್ ಕೊಡಬೇಕೆಂದು ಕೇಳುವ ಅಧಿಕಾರ, ಪ್ರ. 110.
(2) ಸ್ಥಳೀಯ ಹೇಸಿಗೆಗಳನ್ನು ಕುರಿತು ಹುಕುಂ ಮಾಡುವ ಅಧಿಕಾರ, ಪ್ರ. 133.
(3) ಹೇಸಿಗೆಗಳನ್ನು ಪುನಃ ಮಾಡದಂತೆ ನಿಷೇಧಿಸಿ ಹುಕುಂ ಮಾಡುವ ಅಧಿಕಾರ, ಪ್ರ. 143.
(4) 144ನೆ ಪ್ರಕರಣದಮೇರೆ ಹುಕುಂ ಮಾಡುವ ಅಧಿಕಾರ.
(5) ಆಕಸ್ಮಿಕ ಮರಣಗಳನ್ನು ಕುರಿತು ತನಿಖೆ ಮಾಡುವ ಅಧಿಕಾರ, ಪ್ರ. 174.
(6) ಮಾಜಿಸ್ಟ್ರೇಟಿನ ಸ್ಥಳೀಯ ಅಧಿಕಾರ ಸರಹದ್ದಿನ ಹೊರಗೆ ತಪ್ಪಿತ ನಡಸಿದವನು ಸ್ಥಳೀಯ ಅಧಿಕಾರ ಸರಹದ್ದಿನೊಳಗೆ ಇದ್ದರೆ ಅವನಿಗೆ ಪ್ರೋಸೆಸ್ ಕೊಡುವ ಅಧಿಕಾರ, ಪ್ರ. 186.
(7) ಫಿರ್ಯಾದುಗಳ ಮೇಲೆ ತಪ್ಪಿತಗಳನ್ನು ತನಿಖೆ ಮಾಡುವ ಅಧಿಕಾರ, ಪ್ರ. 190.
(8) ಪೊಲೀಸಿನವರ ರಿಪೋರ್ಟುಗಳ ಮೇಲೆ ತಪ್ಪಿತಗಳನ್ನು ತನಿಖೆಮಾಡುವ ಅಧಿಕಾರ, ಪ್ರ. 190.
(9) ವರ್ತಮಾನದಮೇಲೆ ತಪ್ಪಿತಗಳನ್ನು ತನಿಖೆಮಾಡುವ ಅಧಿಕಾರ, ಪ್ರ. 190.
(10) ಪೂರ್ತಿಯಾಗಿ ದರ್ಯಾಫ್ತು ಮಾಡುವ ಅಧಿಕಾರ, ಪ್ರ. 260.
(11) ಚೋರಿಮಾಲೆಂದು ವಗೈರೆ ಹೇಳಲ್ಪಟ್ಟ ಅಥವಾ ಗುಮಾನಿರುವ ಸ್ವತ್ತನ್ನು ವಿಕ್ರಯಿಸುವ ಅಧಿಕಾರ, ಪ್ರ. 524.
(12) ಪ್ರಥಮ ತಪ್ಪಿತಸ್ಥರ ವಿಷಯದಲ್ಲಿ ಹುಕುಂಮಾಡುವ ಅಧಿಕಾರ, ಪ್ರ. 562.
(13) ಬಿಡುಗಡೆಮಾಡಲ್ಪಟ್ಟ ಕೈದಿಗಳ ವಾಸಸ್ಥಾನವನ್ನು ಪ್ರಕಟಿಸುವ ಬಗ್ಗೆ ಹುಕುಂ ಕೊಡುವ ಅಧಿಕಾರ, ಪ್ರ. 565.

ತಾರೀಖು 9ನೆ ಜನವರಿ 1907.

ನಂ. ಜೆ. 1918—ಪ್ರಿಜನ್ಸ್ 11-06—10, ಮಿ॥ ಪಿ. ಎಸ್. ಅಚ್ಯುತರಾಯರವರು ಮೈಸೂರು ಸೀಮೆಯ ಬಂದಿಖಾನೆಗಳ ಇನ್ಸ್‌ಪೆಕ್ಟರ್ ಜನರಲರ ಆಫೀಸಿನ ಚಾರ್ಜನ್ನು 1906ನೆಯ ಇಸವಿ ಡಿಸೆಂಬರ 20ನೆ ತಾರೀಖಿನ ಪೂರ್ವಾಹ್ನದಲ್ಲಿ ತೆಗೆದುಕೊಂಡರು.

ನಂ. 5022—Exam. ತಾರೀಖು 12ನೆ ಡಿಸೆಂಬರ 1906.

ತಿದ್ದುಪಾಟಾದ ನಿಬಂಧನೆಗಳು.

ಮೈಸೂರು ಲೋಕಲ್ ಸರ್ವಿಸ್ (ಸ್ಥಳೀಯ ನೌಕರಿ) ಮತ್ತು ಪ್ಲೀಡರ ಪರೀಕ್ಷೆಗಳ ನಿಬಂಧನೆಗಳು.

ಇಸ್ತಿಹಾರ್ನಾಮೆ.

ಹಿಂದಿನ ಎಲ್ಲಾ ನಿಬಂಧನೆಗಳಿಗೆ ಬದಲಾಗಿ ಸರ್ಕಾರದವರಿಂದ ನಿರ್ಧರಿಸಲ್ಪಟ್ಟ ಮೈಸೂರು ಲೋಕಲ್ ಸರ್ವಿಸ್ ಮತ್ತು ಪ್ಲೀಡರ ಪರೀಕ್ಷೆಗಳಿಗೆ ಸಂಬಂಧಪಟ್ಟ ಏಕೀಕರಿಸಿದ ಈ ಕೆಳಗಿನ ನಿಬಂಧನೆಗಳನ್ನು ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಕಟಿಸಿ ಇದೆ:—

1. ಪ್ರತಿ ವರ್ಷವೂ ಇದರಡಿ ಕಂಡ ಪರೀಕ್ಷೆಗಳು ನಡೆಸಲ್ಪಡುವುವು; ಅವು ಯಾವುವೆಂದರೆ:—

I. ರೆವಿನ್ಯೂ ಪರೀಕ್ಷೆ (ಮೇಲಿನ ಮತ್ತು ಕೆಳಗಿನ ದರ್ಜೆಗಳು).

II. ಸಿವಿಲ್ ಪರೀಕ್ಷೆ.

III. ಕ್ರಿಮಿನಲ್ ಪರೀಕ್ಷೆ (ಮೇಲಿನ ಮತ್ತು ಕೆಳಗಿನ ದರ್ಜೆಗಳು).

IV. ಎಕ್ಸೈಜು ಪರೀಕ್ಷೆ (ಅಬ್ಕಾರಿ).

V. ಅಕೌಂಟ್ಸ್ ಯಾ ಲೆಖ್ಖಗಳ ಪರೀಕ್ಷೆ.

VI. ರಜಿಸ್ಟ್ರೇಷನ್ ಪರೀಕ್ಷೆ.

VII. ಫಾರೆಸ್ಟ್ ಯಾ ಜಂಗಲ ಪರೀಕ್ಷೆ.

VIII. ಲಾ ಆಫ್ ಪ್ರಾಕ್ಟೀಸ್ ಮತ್ತು ಪ್ರೊಸೀಜರ ಪರೀಕ್ಷೆ.

IX. ಪ್ರಿಜನ್ಸ್ ಯಾ ಬಂದೀಖಾನೆಗಳಿಗೆ ಸಂಬಂಧಪಟ್ಟ ಪರೀಕ್ಷೆ.

X. ಕೈಬರಹದ ಮತ್ತು ಉಕ್ತಲೇಖನದ ಪರೀಕ್ಷೆ.

2. ಈ ಪರೀಕ್ಷೆಗಳಿಗಾಗಿ ವಿಧಿಸಿರುವ ಪರೀಕ್ಷಾ ವಿಷಯಗಳನ್ನೂ ಮತ್ತು ಪ್ರತಿ ವಿಷಯಕ್ಕೂ ನಿಯಮಿತವಾದ ಅಂಕಗಳ ಪರಮ ಸಂಖ್ಯೆಯನ್ನೂ ಇದರಡಿ ಕಾಣಿಸಿ ಇದೆ:—

I. ರೆವಿನ್ಯೂ ಪರೀಕ್ಷೆ (ಮೇಲಿನ ಮತ್ತು ಕೆಳಗಿನ ದರ್ಜೆಗಳು).

ಪರೀಕ್ಷಾ ವಿಷಯ.	ಪ್ರತಿ ಪರೀಕ್ಷಾ ವಿಷಯಕ್ಕೂ ವಿಧಿಸಿರುವ ಗ್ರಂಥ.	ಪ್ರತಿ ಪರೀಕ್ಷಾ ವಿಷಯಕ್ಕೂ ನಿಯಮಿತವಾದ ಅಂಕಗಳ ಪರಮ ಸಂಖ್ಯೆ.
(a) ಮೈಸೂರು ಲ್ಯಾಂಡ ರೆವಿನ್ಯೂ ಕಾನೂನು.	1891ನೆ ಇಸವಿಯ 1ನೆ ನಂಬರು, 1892ನೆ ಇಸವಿಯ 3ನೆ ನಂಬರು, 1905ನೆ ಇಸವಿಯ 6ನೆ ನಂಬರ ಮತ್ತು 1906ನೆ ಇಸವಿಯ 6ನೆ ನಂಬರ ರೆಗ್ಯುಲೇಷನುಗಳಿಂದ ತಿದ್ದುಪಾಟು ಮಾಡಲ್ಪಟ್ಟಿರುವ ಮೈಸೂರು ಲ್ಯಾಂಡ ರೆವಿನ್ಯೂ ಕೋಡು (1888ನೆ ಇಸವಿ 4ನೆ ನಂಬರ ರೆಗ್ಯುಲೇಷನ್).	150
(b) ಮೈಸೂರು ರೆವಿನ್ಯೂ ನಿಬಂಧನೆಗಳು.	(1) ಜಾರಿಯಲ್ಲಿರುವ ಮೈಸೂರು ಲ್ಯಾಂಡ ರೆವಿನ್ಯೂ ನಿಬಂಧನೆಗಳು. (2) ಮೈಸೂರು ರೆವಿನ್ಯೂ ಮ್ಯಾನುಯಲಿನ 1ನೆ ಭಾಗದಲ್ಲಿ 5ರಿಂದ 9ರ ವರೆಗಿನ ಅಧ್ಯಾಯಗಳು (1901ನೆ ಇಸವಿಯ ಮುದ್ರಣ), 6ನೆ ಅಧ್ಯಾಯದ 2ರಿಂದ 5ರ ವರೆಗಿನ ಪರಿಶಿಷ್ಟಗಳನ್ನು ಬಿಟ್ಟು ಬಿಟ್ಟು.	100
	ಒಟ್ಟು	250

ಷರಾ.—ಮೇಲಿನ ದರ್ಜೆಯ ಪರೀಕ್ಷೆಗೆ ಇರುವ ಪರೀಕ್ಷಾ ವಿಷಯಗಳೇ ಕೆಳಗಿನ ದರ್ಜೆಗೂ ಇರತಕ್ಕದ್ದು. ಆದರೆ ಅದಕ್ಕೆ ಕೊಡುವ ಪ್ರಶ್ನ ಪತ್ರಿಕೆಗಳು ಮೇಲಿನ ದರ್ಜೆಯ ಪರೀಕ್ಷೆಯ ಪ್ರಶ್ನ ಪತ್ರಿಕೆಗಳಿಗಿಂತ ಸುಲಭವಾಗಿರುವುವು.

II. ಸಿವಿಲ್ ಪರೀಕ್ಷೆ.

ಪರೀಕ್ಷಾ ವಿಷಯುಗಳು.	ಪ್ರತಿ ಪರೀಕ್ಷಾ ವಿಷಯುಕ್ಕೂ ವಿಧಿಸಿರುವ ಗ್ರಂಥ.	ಪ್ರತಿ ಪರೀಕ್ಷಾ ವಿಷಯುಕ್ಕೂ ನಿಯುಮಿಸಲ್ಪಟ್ಟಿರುವ ಅಂಕಗಳ ಪರಮಸಂಖ್ಯೆ.
1ನೆ ಭಾಗ.		
(a) ಎವಿಡೆನ್ಸ್ (ಸಾಕ್ಷ್ಯ) ...	(1872ನೆ ಇಸವಿಯು 18ನೆ ನಂಬರ್ ಆಕ್ಟ್ಟು 1899ನೆ ಇಸವಿಯು 3ನೆ ನಂಬರಿ ರೆಗ್ಯುಲೇಷರ್ 1900ನೆ ಇಸವಿಯು 10ನೆ ನಂಬರ ರೆಗ್ಯುಲೇಷರ್ ಮತ್ತು 1901ನೆ ಇಸವಿಯು 8ನೆ ನಂಬರ್ ರೆಗ್ಯುಲೇಷರ್ ಇವುಗಳಿಂದ ತಿದ್ದುಪಾಟು ಮಾಡಲ್ಪಟ್ಟಿರುವ) 1872ನೆ ಇಸವಿಯು 1ನೆ ನಂಬರ್ ಇಂಡಿಯರ್ ಎವಿಡೆನ್ಸ್ ಆಕ್ಟು.	80
(b) ಕಾಂಟ್ರಾಕ್ಟ್ಸ್ (ಕರಾರು) ..	1872ನೆ ಇಸವಿಯು 9ನೆ ನಂಬರ್ ಇಂಡಿಯರ್ ಕಾಂಟ್ರಾಕ್ಟ್ ಆಕ್ಟು.	100
(c) ಹಿಂದೂ ಮತ್ತು ಮುಹಮ್ಮದೀಯು ಕಾನೂನು.	(1) ಮೆಯಿರ್ ಎಂಬುವರು ಬರೆದ ಹಿಂದೂ ಲಾ ಮತ್ತು ಯೂಸೇಜ್ ಎಂಬ ಪುಸ್ತಕ. (2) ಟಗೋರ್ ಲೆಕ್ಚರ್ಸ್ ಯುವರು ಬರೆದ ಮುಹಮ್ಮದೀಯು ಲಾ ಪುಸ್ತಕ.	150
(d) ಟಾರ್ಟ್ಸ್ ಮತ್ತು ಈಜ್‌ಮೆಂಟ್ಸ್.	(1) ಕಾಲಟ ಎಂಬುವರು ಬರೆದ ಲಾ ಆಫ್ ಟಾರ್ಟ್ಸ್ ಮತ್ತು ಮೆಷರ ಆಫ್ ಡಾಮೇಜಸ್. (2) 1882ನೆ ಇಸವಿಯು 5ನೆ ನಂಬರ್ ಈಜ್‌ಮೆಂಟ್ಸ್ ಆಕ್ಟು.	100
	1ನೆ ಭಾಗಕ್ಕೆ ಒಟ್ಟು ...	430
2ನೆ ಭಾಗ.		
(a) ಮಾರ್ಗೇಜಸ್ ಮತ್ತು ಸ್ಪೆಸಿಫಿಕ್ ರಿಲೀಫ್.	(1) ಘೋಸ್ ಎಂಬುವರು ಬರೆದ ಲಾ ಆಫ್ ಮಾರ್ಗೇಜಸ್. (2) 1877ನೆ ಇಸವಿಯು 1ನೆ ನಂಬರ್ ಸ್ಪೆಸಿಫಿಕ್ ರಿಲೀಫ್ ಆಕ್ಟು.	100
(b) ಪ್ರೊಸೀಜರ ..	(1) 1887ನೆ ಇಸವಿಯು 2ನೆ ನಂಬರ ರೆಗ್ಯುಲೇಷರ್ 1892ನೆ ಇಸವಿಯು 7ನೆ ನಂಬರ್ ರೆಗ್ಯುಲೇಷರ್ ಮತ್ತು 1901ನೆ ಇಸವಿಯು 6ನೆ ನಂಬರ ರೆಗ್ಯುಲೇಷರ್ 1906ನೆ ಇಸವಿಯು 3ನೆ ನಂಬರ್ ರೆಗ್ಯುಲೇಷರ್ ಇವುಗಳಿಂದ ತಿದ್ದುಪಾಟಾದ 1884ನೆ ಇಸವಿಯು 2ನೆ ನಂಬರ ರೆಗ್ಯುಲೇಷರ್) ಸಿವಿಲ್ ಪ್ರೊಸೀಜರ ಕೋಡು. (2) 1896ನೆ ಇಸವಿಯು 3ನೆ ನಂಬರ ರೆಗ್ಯುಲೇಷನಿನಿಂದ ತಿದ್ದುಪಾಟಾದ ಲಿಮಿಟೇಷರ್ ಆಕ್ಟು.	150
	2ನೆ ಭಾಗಕ್ಕೆ ಒಟ್ಟು ...	250

ಷರಾ 1.—ಹಿಂದೂಲಾ ಯು ಕಾನೂನಿನ ಮೇಲಿನ ಪ್ರಶ್ನೆಗಳನ್ನು ಸಾಧಾರಣ ವಿಧಿಗಳಿಗೂ ದಕ್ಷಿಣ ಇಂಡಿಯಾದಿನಲ್ಲಿ ಆಚರಣೆಯಲ್ಲಿರುವ ಸಿದ್ಧಾಂತಗಳಿಗೂ ಮಾತ್ರ ಸಂಬಂಧಿಸಲಾಗುತ್ತದೆ.

ಷರಾ 2.—ಸಿವಿಲ್ ಪರೀಕ್ಷೆಯ 1ನೆ ಮತ್ತು 2ನೆ ಭಾಗಗಳಲ್ಲಿ ವಿದ್ಯಾರ್ಥಿಗಳು ಬೇರೆಬೇರೆ ವರ್ಷಗಳಲ್ಲಿ ತೇರುವುದಕ್ಕೆ ಅನುಮತಿ ಕೊಡಲ್ಪಡುವುದು. ಮತ್ತು 5ನೆ ಮತ್ತು 9ನೆ ನಿಬಂಧನೆಗಳ ಉದ್ದೇಶಗಳಿಗಾಗಿ ಪ್ರತಿ ಭಾಗವೂ ಪ್ರತ್ಯೇಕವಾದ ಪರೀಕ್ಷೆ ಯೆಂದು ಭಾವಿಸಲ್ಪಡುವುದು.

III. ಕ್ರಿಮಿನಲ್ ಪರೀಕ್ಷೆ. (ಮೇಲಿನ ಮತ್ತು ಕೆಳಗಿನ ದರ್ಜೆಗಳು.

ಪರೀಕ್ಷಾ ವಿಷಯ.	ಪ್ರತಿ ಪರೀಕ್ಷಾ ವಿಷಯಕ್ಕೂ ವಿಧಿಸಿರುವ ಗ್ರಂಥ.	ಪ್ರತಿ ಪರೀಕ್ಷಾ ವಿಷಯಕ್ಕೂ ನಿಯಮಿತವಾದ ಅಂಕಗಳ ಪರಮ ಸಂಖ್ಯೆ.
(a) ಎವಿಡೆನ್ಸ್	(1872ನೆ ಇಸವಿಯ 18ನೆ ನಂಬರ್ ಆಕ್ಟು 1899ನೆ ಇಸವಿಯ 3ನೆ ನಂಬರ್ ರೆಗ್ಯುಲೇಷನ್ 1900ನೆ ಇಸವಿಯ 10ನೆ ನಂಬರ್ ರೆಗ್ಯುಲೇಷನ್ ಮತ್ತು 1901ನೆ ಇಸವಿಯ 8ನೆ ನಂಬರ್ ರೆಗ್ಯುಲೇಷನ್ ಇವುಗಳಿಂದ ತಿದ್ದುಪಾಟಾದ) 1872ನೆ ಇಸವಿಯ 1ನೆ ನಂಬರ್ ಇಂಡಿಯನ್ ಎವಿಡೆನ್ಸ್ ಆಕ್ಟು.	80
(b) ಪೀನಲ್ ಕೋಡು	1870ನೆ ಇಸವಿಯ 27ನೆ ನಂಬರ್ 1872ನೆ ಇಸವಿಯ 19ನೆ ನಂಬರ್ 1873ನೆ ಇಸವಿಯ 10ನೆ ನಂಬರ್, ಈ ಆಕ್ಟುಗಳಿಂದಲೂ, 1886ನೆ ಇಸವಿಯ 1ನೆ ನಂಬರ್ ರೆಗ್ಯುಲೇಷನ್ 1892ನೆ ಇಸವಿಯ 1ನೆ ನಂಬರ್ ರೆಗ್ಯುಲೇಷನ್, 1894ನೆ ಇಸವಿಯ 2ನೆ ನಂಬರ್ ಮತ್ತು 4ನೆ ನಂಬರ್ ರೆಗ್ಯುಲೇಷನ್‌ಗಳು, 1904ನೆ ಇಸವಿಯ 1ನೆ ನಂಬರ್ ರೆಗ್ಯುಲೇಷನ್, ಇವುಗಳಿಂದಲೂ ತಿದ್ದುಪಾಟು ಮಾಡಲ್ಪಟ್ಟಿರುವ 1860ನೆ ಇಸವಿಯ 45ನೆ ನಂಬರ್ ಆಕ್ಟಾದ ಇಂಡಿಯನ್ ಪೀನಲ್ ಕೋಡು.	100
(c) ಕ್ರಿಮಿನಲ್ ಪ್ರೊಸೀಜರ್	(1) 1904ನೆ ಇಸವಿಯ 2ನೆ ನಂಬರ್ ರೆಗ್ಯುಲೇಷನ್. (2) ತತ್ಕಾಲದಲ್ಲಿ ಮೈಸೂರು ಸೀಮೆಯಲ್ಲಿ ಜಾರಿಯಲ್ಲಿರುವ ಗ್ರಾಮ ಪೋಲೀಸು ಮತ್ತು (ರೆಗ್ಯುಲರ್) ಕ್ರಮವಾದ ಪೋಲೀಸು ನಿಬಂಧನೆಗಳು ಅಥವಾ ಪೋಲೀಸಿಗೆ ಸಂಬಂಧಪಟ್ಟ ಇತರ ಲಾ ಯಾ ಕಾನೂನು.	100
	ಒಟ್ಟು ...	280

ಷರಾ.—ಮೇಲಿನ ದರ್ಜೆಯ ಪರೀಕ್ಷೆಗೆ ಇರುವ ಪರೀಕ್ಷಾ ವಿಷಯಗಳೇ ಕೆಳಗಿನ ದರ್ಜೆಗೂ ಇರತಕ್ಕದ್ದು; ಆದರೆ ವಿಧಿಸಲ್ಪಟ್ಟಿರುವ ಆಕ್ಟುಗಳ ಮತ್ತು ರೆಗ್ಯುಲೇಷನ್‌ಗಳ ಯಾವ ಕಾಮೆಂಟರಿ ಅಥವಾ ವ್ಯಾಖ್ಯಾನಗಳನ್ನೂ ಪರೀಕ್ಷ್ಯರು ಓದಿರುವುದಾಗಿ ನಿರೀಕ್ಷಿಸಲ್ಪಡತಕ್ಕದ್ದಲ್ಲ; ಮತ್ತು ಕೆಳಗಿನ ದರ್ಜೆಗೆ ಕೊಡುವ ಪ್ರಶ್ನಪತ್ರಿಕೆಗಳು ಮೇಲಿನ ದರ್ಜೆಯ ಪ್ರಶ್ನಪತ್ರಿಕೆಗಳಿಗಿಂತ ಸುಲಭವಾಗಿರತಕ್ಕದ್ದು.

IV. ಎಕ್ಸೈಜ್ ಯಾ ಆಬ್ಕಾರಿ.

ಪರೀಕ್ಷಾ ವಿಷಯ.	ಪ್ರತಿ ಪರೀಕ್ಷಾ ವಿಷಯಕ್ಕೂ ವಿಧಿಸಿರುವ ಗ್ರಂಥ.	ಪ್ರತಿ ಪರೀಕ್ಷಾ ವಿಷಯಕ್ಕೂ ನಿಯಮಿತವಾದ ಅಂಕಗಳ ಪರಮ ಸಂಖ್ಯೆ.
ಎಕ್ಸೈಜ್	(1) 1902ನೆ ಇಸವಿಯ 4ನೆ ನಂಬರ್ ರೆಗ್ಯುಲೇಷನ್ 1904ನೆ ಇಸವಿಯ 5ನೆ ನಂಬರ್ ರೆಗ್ಯುಲೇಷನ್ 1906ನೆ ಇಸವಿಯ 5ನೆ ನಂಬರ್ ರೆಗ್ಯುಲೇಷನ್ ಇವುಗಳಿಂದ ತಿದ್ದುಪಾಟಾದ 1901ನೆ ಇಸವಿಯ 5ನೆ ನಂಬರ್ ಎಕ್ಸೈಜ್ ರೆಗ್ಯುಲೇಷನ್ ಮತ್ತು ಜಾರಿಯಲ್ಲಿರುವ ನಿಬಂಧನೆಗಳು. (2) 1878ನೆ ಇಸವಿಯ 1ನೆ ನಂಬರ್ ಅಫೀಮಿನ ಆಕ್ಟು ಮತ್ತು ಅದನ್ನನುಸರಿಸಿ ಏರ್ಪಡಿಸಲ್ಪಟ್ಟ ನಿಬಂಧನೆಗಳು. (3) 1885ನೆ ಇಸವಿಯ 2ನೆ ನಂಬರ್ ರೆಗ್ಯುಲೇಷನಿಂದ ಮೈಸೂರು ಸಂಸ್ಥಾನದಲ್ಲಿ ಜಾರಿಗೆ ತರಲ್ಪಟ್ಟ 1863ನೆ ಇಸವಿಯ 16ನೆ ನಂಬರ್ ಮಿಥಿಲೇಟೆಡ್ ಸ್ಪಿರಿಟ್ಸ್ ಆಕ್ಟು ಮತ್ತು ಅದನ್ನನುಸರಿಸಿ ಏರ್ಪಡಿಸಲ್ಪಟ್ಟ ನಿಬಂಧನೆಗಳು.	100
	ಒಟ್ಟು ...	100

V. ಅಕೌಂಟ್ಸ್ ಯಾ ಲೆಕ್ಕಗಳ ಪರೀಕ್ಷೆ.

ಪರೀಕ್ಷಾ ವಿಷಯ.	ಪ್ರತಿ ಪರೀಕ್ಷಾ ವಿಷಯಕ್ಕೂ ವಿಧಿಸಿರುವ ಗ್ರಂಥ.	ಪ್ರತಿ ಪರೀಕ್ಷಾ ವಿಷಯಕ್ಕೂ ನಿಯಮಿತವಾದ ಅಂಕಗಳ ಪರಮ ಸಂಖ್ಯೆ.
ಅಕೌಂಟ್ಸ್ ..	(1) 6ನೆ ಮುದ್ರಣದ 1ನೆ ಸಂಪುಟದ ಸಿವಿಲ್ ಅಕೌಂಟ್ ಕೋಡು; 1ರಿಂದ 10ರ ವರೆಗಿನ, 13ನೆ, 15ನೆ, 16ನೆ, 18ರಿಂದ 21ರ ವರೆಗಿನ, 23ನೆ, 24ನೆ, 26ನೆ, 29ರಿಂದ 31ರ ವರೆಗಿನ ಅಧ್ಯಾಯಗಳು; ಅವುಗಳಲ್ಲಿ ಸೂಚಿಸಿರುವ ನಮೂನೆಗಳೊಡನೆ. (2) ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳು.	100
	ಒಟ್ಟು ...	100

IV. ರಿಜಿಸ್ಟ್ರೇಷನ್ ಪರೀಕ್ಷೆ.

ಪರೀಕ್ಷಾ ವಿಷಯ.	ಪ್ರತಿ ಪರೀಕ್ಷಾ ವಿಷಯಕ್ಕೂ ವಿಧಿಸಿರುವ ಗ್ರಂಥ.	ಪ್ರತಿ ಪರೀಕ್ಷಾ ವಿಷಯಕ್ಕೂ ನಿಯಮಿತವಾದ ಅಂಕಗಳ ಪರಮ ಸಂಖ್ಯೆ.
ಸ್ಟಾಂಪು ಕಾನೂನು ಮತ್ತು ರಿಜಿಸ್ಟ್ರೇಷನ್.	(1) 1900ನೆ ಇಸವಿಯ 2ನೆ ನಂಬರ್ ಮೈಸೂರು ಸ್ಟಾಂಪು ರೆಗ್ಯುಲೇಷನ್ ಮತ್ತು ಅದನ್ನನುಸರಿಸಿ ಏರ್ಪಡಿಸಲ್ಪಟ್ಟ ನಿಬಂಧನೆಗಳು. (2) 1900ನೆ ಇಸವಿಯ 3ನೆ ನಂಬರ್ ಮೈಸೂರು ಕೋರ್ಟ್ ಫೀಜು ರೆಗ್ಯುಲೇಷನ್ ಮತ್ತು ಅದನ್ನನುಸರಿಸಿ ಏರ್ಪಡಿಸಲ್ಪಟ್ಟ ನಿಬಂಧನೆಗಳು. (3) 1903ನೆ ಇಸವಿಯ ಮೈಸೂರು ರಿಜಿಸ್ಟ್ರೇಷನ್ ರೆಗ್ಯುಲೇಷನ್ ಮತ್ತು ಅದನ್ನನುಸರಿಸಿ ಏರ್ಪಡಿಸಲ್ಪಟ್ಟ ನಿಬಂಧನೆಗಳು.	100
	ಒಟ್ಟು ...	100

VII. ಫಾರೆಸ್ಟ್ ಯಾ ಜಂಗಲಿ ಪರೀಕ್ಷೆ.

ಪರೀಕ್ಷಾ ವಿಷಯ.	ಪ್ರತಿ ಪರೀಕ್ಷಾ ವಿಷಯಕ್ಕೂ ವಿಧಿಸಿರುವ ಗ್ರಂಥ.	ಪ್ರತಿ ಪರೀಕ್ಷಾ ವಿಷಯಕ್ಕೂ ನಿಯಮಿತವಾದ ಅಂಕಗಳ ಪರಮ ಸಂಖ್ಯೆ.
ಫಾರೆಸ್ಟ್ ..	(1901ನೆ ಇಸವಿಯ 9ನೆ ನಂಬರ್ ರೆಗ್ಯುಲೇಷನಿಂದ ತಿದ್ದುಪಾಟು ಮಾಡಲ್ಪಟ್ಟಿರುವ) 1900ನೆ ಇಸವಿಯ 11ನೆ ನಂಬರ್ ಮೈಸೂರು ಫಾರೆಸ್ಟ್ ಯಾ ಜಂಗಲಿ ರೆಗ್ಯುಲೇಷನ್ ಮತ್ತು ಅದನ್ನನುಸರಿಸಿ ಏರ್ಪಡಿಸಲ್ಪಟ್ಟ ನಿಬಂಧನೆಗಳು.	100
	ಒಟ್ಟು ...	100

VIII. ಲಾ ಆಫ್ ಪ್ರಾಕ್ಟಿಸ್ ಮತ್ತು ಪ್ರೊಸೀಜರ್ ಪರೀಕ್ಷೆ.

9ನೆ ನಿಬಂಧನೆಯ (6)ನೆ ವಿನಾಯಿತಿಯನ್ನು ನೋಡತಕ್ಕದ್ದು.

IX. ಪ್ರಿಜನ್ಸ್ ಯಾ ಬಂದೀಖಾನೆಗಳನ್ನು ಕುರಿತ ಪರೀಕ್ಷೆ.

ಪರೀಕ್ಷಾ ವಿಷಯ.	ಪ್ರತಿ ಪರೀಕ್ಷಾ ವಿಷಯಕ್ಕೂ ವಿಧಿಸಿರುವ ಗ್ರಂಥ.	ಪ್ರತಿ ಪರೀಕ್ಷಾ ವಿಷಯಕ್ಕೂ ನಿಯಮಿತವಾದ ಅಂಕಗಳ ಪರಮ ಸಂಖ್ಯೆ.
ಬಂದೀಖಾನೆಗಳು ...	1ನೆ ಭಾಗ. ಇಂಡಿಯನ್ ಪೀನಲ್ ಕೋಡಿನ ಅಧ್ಯಾಯಗಳು 2, 3, 4, 9 ಮತ್ತು 10 ಮತ್ತು ಪ್ರಕರಣಗಳು 128—130 ಮತ್ತು 217—225 B. ಕ್ರಿಮಿನಲ್ ಪ್ರೊಸೀಜರ್ ಕೋಡಿನ ಭಾಗಗಳು 1, 2 ಮತ್ತು 4, ಮತ್ತು ಅಧ್ಯಾಯಗಳು 28, 29, 31, 34 ಮತ್ತು 39.	50
	2ನೆ ಭಾಗ. ಮೈಸೂರು ಜೈಲ್ ಮ್ಯಾನ್ಯುಯಲ್, ಲಾಕಪ್ಪುಗಳ ಸಂಬಂಧವಾದ ನಿಬಂಧನೆಗಳ್ಳು, ಅಂಕಗಳ (ಮಾರ್ಕ್ಸ್) ನಿಬಂಧನೆಗಳೂ ಸಹ ಸೇರಿ. 1870ನೆ ಇಸವಿಯ 26ನೆ ನಂಬರ ಪ್ರಿಜನ್ಸ್ ಆಕ್ಟ್ ಬಂದೀಖಾನೆಗಳ ಸಂಬಂಧವಾದ ಆಕ್ಟು. 1894ನೆ ಇಸವಿಯ 5ನೆ ನಂಬರ ಪ್ರಿಜನರ್ಸ್ ಟೆಸ್ಟಿಮೊನಿ (ಖೈದಿಗಳ ಸಾಕ್ಷ್ಯವನ್ನು ಕುರಿತ) ರೆಗ್ಯುಲೇಷನ್.	50
	ಒಟ್ಟು ..	100

ಷರಾ.—ತತ್ಪೂರ್ವದಲ್ಲಿ ಕ್ರಿಮಿನಲ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದು ಬಂದೀಖಾನೆಗಳ ಸಂಬಂಧವಾದ ಪರೀಕ್ಷೆಗೆ ಬರುವ ಪರೀಕ್ಷ್ಯರು ಪ್ರಶ್ನಪತ್ರಿಕೆಯ 1ನೆ ಭಾಗಕ್ಕೆ ಉತ್ತರ ಬರೆಯುವುದರಿಂದ ವಿನಾಯಿಸಲ್ಪಟ್ಟಿರುತ್ತಾರೆ.

X. ಕೈಬರಹ ಮತ್ತು ಉಕ್ತಲೇಖನದ ಪರೀಕ್ಷೆ.

ಪರೀಕ್ಷಾ ವಿಷಯ.			ಅಂಕಗಳು.
ಕೈಬರಹ (ಇಂಗ್ಲಿಷ್ ಅಥವಾ ಕನ್ನಡದಲ್ಲಿ)	...	...	50
(ಉಕ್ತಲೇಖನ)	..	...	50
	ಒಟ್ಟು	...	100

ಷರಾ (1)—ಒಂದೇ ವರ್ಷದಲ್ಲಿ ಸಿವಿಲ್ ಒಂದನೇ ಭಾಗದ ಪರೀಕ್ಷೆ ಮತ್ತು (ಮೇಲಿನ ದರ್ಜೆಯ) ಕ್ರಿಮಿನಲ್ ಪರೀಕ್ಷೆ ಇವುಗಳಿಗೆ ಹೋಗುವ ಪರೀಕ್ಷ್ಯರು ಲಾ ಆಫ್ ಎವಿಡೆನ್ಸ್ (ಸಾಕ್ಷ್ಯದ ಕಾನೂನು) ವಿಷಯದಲ್ಲಿ ಒಂದು ಪ್ರಶ್ನಪತ್ರಿಕೆಗೆ ಮಾತ್ರ ಉತ್ತರ ಬರಯಬೇಕೆಂದು ಕೇಳಲ್ಪಡುವರು.

ಷರಾ (2)—ಯಾವುದಾದರೂ ಪರೀಕ್ಷೆಗೆ ವಿಧಿಸಲ್ಪಟ್ಟಿರುವ ರೆಗ್ಯುಲೇಷನ್‌ಗಳೂ, ಆಕ್ಟುಗಳೂ, ನಿಬಂಧನೆಗಳೂ, ಕಾನೂನು ಬದಲಾಯಿಸಲ್ಪಡಬಹುದಾದ ಮೇರೆಗೆ ಅಥವಾ ಸರ್ಕಾರದವರು ವಿಧಿಸಬಹುದಾದ ಮೇರೆಗೆ ಆಗಿಂದಾಗ ಮಾಡಲ್ಪಡಬಹುದಾದ ರೂಪಭೇದಗಳಿಗೂ, ತಿದ್ದುಪಾಟುಗಳಿಗೂ, ಬದಲಾವಣೆಗಳಿಗೂ, ಒಳಪಟ್ಟಿರತಕ್ಕದ್ದು; ಮತ್ತು ಪರೀಕ್ಷ್ಯರು ಅಂಥಾ ಎಲ್ಲಾ ಬದಲಾವಣೆಗಳನ್ನೂ ತಿಳಿದಿರುವರೆಂದು ನಿರೀಕ್ಷಿಸಲ್ಪಡತಕ್ಕದ್ದು. ಆದರೆ ಆ ಬದಲಾವಣೆಗಳು ಪರೀಕ್ಷೆಯಾಗುವ ತಾರೀಖಿಗಿಂತ ಆರು ತಿಂಗಳಿಗೆ ಕಡಮೆ ಇಲ್ಲದಷ್ಟುಕಾಲ ಮುಂಚಿತವಾಗಿ ಪ್ರಕಟಿಸಲ್ಪಡತಕ್ಕದ್ದು, ಅಥವಾ ಇಸ್ತಿಹಾರ್ನಾಮೆಯ ಮೂಲಕ ಪ್ರಸಿದ್ಧಪಡಿಸಲ್ಪಟ್ಟಿರತಕ್ಕದ್ದು.

3. ಇದರ ಪಾರ್ಶ್ವದಲ್ಲಿ ನಮೂದಿಸಲ್ಪಟ್ಟಿರುವ ಸ್ಥಳಗಳ ಪೈಕಿ ಪರೀಕ್ಷಕರ ಸಭೆಯ (ಬೋರ್ಡ್) ಸೆಕ್ರಿಟರಿಯಿಂದ ಇಸ್ತಿಹಾರ್ನಾಮೆಯ ಮೂಲಕ ಪ್ರಸಿದ್ಧಪಡಿಸಲ್ಪಡಬಹುದಾದ ಸ್ಥಳಗಳಲ್ಲಿ ಪ್ರತಿ ವರ್ಷದ ನವಂಬರು ತಿಂಗಳಲ್ಲಿಯೂ ಇಸ್ತಿಹಾರ್ನಾಮೆಯಲ್ಲಿ ಪ್ರಸಿದ್ಧಪಡಿಸಲ್ಪಡಬಹುದಾದ ತಾರೀಖುಗಳಲ್ಲಿಯೂ ಘಂಟೆಗಳಲ್ಲಿಯೂ ಪರೀಕ್ಷೆಯು ನಡೆಸಲ್ಪಡತಕ್ಕದ್ದು.

1. ಬೆಂಗಳೂರು.	5. ಕೋಲಾರ.
2. ಚಿಕ್ಕಮಗಳೂರು.	6. ಮೈಸೂರು.
3. ಚಿತ್ರದುರ್ಗ.	7. ಶಿವಮೊಗ್ಗ.
4. ಹಾಸನ.	8. ತುಮಕೂರು.

4. ಕೈಬರಹ ಮತ್ತು ಉಕ್ತಲೇಖನದ ಪರೀಕ್ಷೆಯು ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ನಡೆಸಲ್ಪಡತಕ್ಕದ್ದು. ಇತರ ಪರೀಕ್ಷೆಗಳು ಸಾಧಾರಣವಾಗಿ ಇಂಗ್ಲಿಷಿನಲ್ಲಿ ನಡೆಸಲ್ಪಡತಕ್ಕದ್ದು. ಆದರೆ (1) ಹತ್ತು ವರ್ಷಗಳಿಗೆ ಕಡಮೆ ಇಲ್ಲದಂತೆ ಮೈಸೂರು ನೌಕರಿಯಲ್ಲಿದ್ದು ಇಂಗ್ಲಿಷ್ ಭಾಷೆಯನ್ನರಿಯದಿರುವ ಆಫೀಸರುಗಳ, (2) ಸರ್ಕಾರಿ ನೌಕರಿಯಲ್ಲಿ ಇಲ್ಲದೆ ಈ ನಿಬಂಧನೆಗಳ ಪೈಕಿ 9ನೆ ನಿಬಂಧನೆಯ (5) ನೆ ವಿನಾಯಿತಿಯನ್ನು ಅನುಸರಿಸಿ ರಿಜಿಸ್ಟ್ರೇಷನ್ ಪರೀಕ್ಷೆಗೆ ಮಾತ್ರ ಕನ್ನಡದಲ್ಲಿ ಹೋಗುವುದಕ್ಕೆ ಅನುಮತಿ ಕೊಡಲ್ಪಟ್ಟಿರುವ ಮನುಷ್ಯರ, ಮತ್ತು, (3) 1906ನೆ ಇಸವಿಯ ಫೆಬ್ರುವರಿ 14ರಲ್ಲಿಯೇ ಅಬ್ಕಾರಿ (ಎಕ್ಸೈಸ್) ಇಲಾಖೆಯ ನೌಕರಿಯಲ್ಲಿದ್ದು 9ನೆ ನಿಬಂಧನೆಯ (9) ನೆ ವಿನಾಯಿತಿಯನ್ನನುಸರಿಸಿ ಕನ್ನಡದಲ್ಲಿ ಎಕ್ಸೈಸ್ ಯಾ ಅಬ್ಕಾರಿ ಪರೀಕ್ಷೆಗೆ ಹೋಗುವುದಕ್ಕೆ ಅನುಮತಿ ಕೊಡಲ್ಪಟ್ಟಿರುವ ಆಫೀಸರುಗಳ ವಿಷಯದಲ್ಲಿ ಪರೀಕ್ಷೆಯು ಕನ್ನಡದಲ್ಲಿ ನಡೆಸಲ್ಪಡತಕ್ಕದ್ದು.

ಷರಾ.—ಆಫೀಸರುಗಳು ಎಂಬ ಮಾತಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 274 ಮತ್ತು 275ನೆ ನಿಬಂಧನೆಗಳಲ್ಲಿ ಅರ್ಥ ವಿವರಿಸಿರುವ ರೀತಿಯಲ್ಲಿ "ಮೇಲ್ಪಟ್ಟ ಆಫೀಸರುಗಳು" ಎಂದು ಅರ್ಥವಾಗತಕ್ಕದ್ದು.

5. ಪರೀಕ್ಷೆಯಲ್ಲಿ ಪ್ರತಿ ಪರೀಕ್ಷಾ ವಿಷಯಕ್ಕೂ ವಿಧಿಸಲ್ಪಟ್ಟಿರುವ ಅಂಕೆ (ಮಾರ್ಕ್ಸ್) ಗಳ ಪರಮಸಂಖ್ಯೆಯ ಪೈಕಿ ಮೂರರಲ್ಲಿ ಒಂದು ಭಾಗಕ್ಕೆ ಕಡಮೆ ಇಲ್ಲದಂತೆಯೂ, ಮತ್ತು ಎಲ್ಲಾ ಪರೀಕ್ಷಾ ವಿಷಯಗಳ ಅಂಕಗಳ ಒಟ್ಟು ಸಂಖ್ಯೆಯ ಪೈಕಿ ಐದರಲ್ಲಿ ಎರಡು ಭಾಗಕ್ಕಿಂತ ಕಡಮೆ ಇಲ್ಲದಂತೆಯೂ ಪಡೆದಿರಬಹುದಾದ ಪರೀಕ್ಷ್ಯರು ಆ ಪರೀಕ್ಷೆಯಲ್ಲಿ ತೇರಿದರೆಂದು ಪ್ರಸಿದ್ಧಪಡಿಸಲ್ಪಡತಕ್ಕದ್ದು. ಮೇಲಿನ ದರ್ಜೆಯ ರೆವಿನ್ಯೂ, ಸಿವಿಲ್, ಮತ್ತು ಮೇಲಿನ ದರ್ಜೆಯ ಕ್ರಿಮಿನಲ್ ಪರೀಕ್ಷೆಗಳಲ್ಲಿ ತೇರಿದ ಪರೀಕ್ಷ್ಯರು ಎಲ್ಲಾ ಪರೀಕ್ಷಾ ವಿಷಯಗಳಿಗಿರುವ ಅಂಕಗಳ ಒಟ್ಟು ಸಂಖ್ಯೆಯ ಪೈಕಿ ಐದರಲ್ಲಿ ಮೂರು ಭಾಗಕ್ಕೆ ಅಥವಾ ಐದರಲ್ಲಿ ಎರಡು ಭಾಗಕ್ಕೆ ಕಡಮೆ ಇಲ್ಲದಂತೆ ಪಡೆದರೆ 1ನೆ ಅಥವಾ 2ನೆ ತರಗತಿಗೆ ಹಾಕಲ್ಪಡುವರು. 1ನೆ ತರಗತಿಯಲ್ಲಿ ತೇರಿದವರ ಹೆಸರುಗಳು ಯೋಗ್ಯತಾನುಸಾರವಾದ ಕ್ರಮದಲ್ಲಿ ಇರತಕ್ಕದ್ದು. 9ನೆ ನಿಬಂಧನೆಯ (6) ನೆ ವಿನಾಯಿತಿಯಲ್ಲಿ ಏರ್ಪಡಿಸಲ್ಪಟ್ಟಿರುವ ಲಾ ಆಫ್ ಪ್ರಾಕ್ಟಿಸ್ ಮತ್ತು ಪ್ರೊಸೀಜರ್ ಎಂಬ ಪರೀಕ್ಷೆಗೆ ಹೋಗುವ ಪರೀಕ್ಷ್ಯರು ಆ ಪರೀಕ್ಷೆಯ ಎರಡು ಪ್ರಶ್ನ ಪತ್ರಗಳಿಗೆ ಗೊತ್ತುಮಾಡಲ್ಪಟ್ಟಿರುವ ಅಂಕಗಳ ಒಟ್ಟು ಸಂಖ್ಯೆಯ ಪೈಕಿ ಶೇಕಡಾ 35 ರಂತೆ ಅಂಕಗಳನ್ನು ಪಡೆಯಬೇಕು.

6. ಇದರಡಿ ವಿವರಿಸಿರುವ ಪರೀಕ್ಷೆಗಳಲ್ಲಿ ತೇರದೇ ಇರುವ ಯಾವ ಮನುಷ್ಯನೂ ಅವುಗಳ ಎದುರಿಗೆ ಬರೆದಿರುವ ಕೆಲಸಗಳಿಗೆ ಅರ್ಹನಾಗುವುದಿಲ್ಲ :—

ಪರೀಕ್ಷೆಗಳು.	ಕೆಲಸಗಳು.
(ಮೇಲಿನ ದರ್ಜೆಯ) ರೆವಿನ್ಯೂ ಸಿವಿಲ್ 1ನೆ ಮತ್ತು 2ನೆ ಭಾಗಗಳು (ಮೇಲಿನ ದರ್ಜೆಯ) ಕ್ರಿಮಿನಲ್ ಮತ್ತು ರಿಜಿಸ್ಟ್ರೇಷನ್.	ಅಸಿಸ್ಟೆಂಟ್ ಕಮಿಷನರುಗಳು (ಯಾವುದಾದರೂ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಆ ದರ್ಜೆಯ ಆಫೀಸರುಗಳೂ ಸೇರಿ) ಮತ್ತು ಮುನ್ಸಿಫ್‌ಗಳು.
(ಮೇಲಿನ ದರ್ಜೆಯ) ರೆವಿನ್ಯೂ ಮತ್ತು (ಮೇಲಿನ ದರ್ಜೆಯ) ಕ್ರಿಮಿನಲ್ ಮತ್ತು ಅಕೌಂಟ್ಸ್ ಯಾ ಲೆಕ್ಕಗಳು.	ಅಮಲ್ದಾರ್ ಅಥವಾ ಡೆಪ್ಯುಟಿ ಅಮಲ್ದಾರ
(ಮೇಲಿನ ದರ್ಜೆಯ) ರೆವಿನ್ಯೂ ಮತ್ತು (ಮೇಲಿನ ದರ್ಜೆಯ) ಕ್ರಿಮಿನಲ್ ಮತ್ತು ಅಕೌಂಟ್ಸ್ ಯಾ ಲೆಕ್ಕಗಳು.	ಡಿಸ್ಟ್ರಿಕ್ಟ್ ಶಿರಸ್ತೇದಾರರು ಜಂಗಲಿ ಇಲಾಖೆಯ ಮೇಲ್ವಿಚಾರಣೆ ಶಿಬ್ಬಂದಿಯ ಆಫೀಸರುಗಳು.
(ಮೇಲಿನ ದರ್ಜೆಯ) ರೆವಿನ್ಯೂ.	ರೆವಿನ್ಯೂ ಕಮಿಷನರ ಮತ್ತು ಸರ್ವೆ ಮತ್ತು ಸೆಟ್ಲ್‌ಮೆಂಟ್ ಕಮಿಷನರ ಕಚೇರಿಗಳ ಹೆಡ್ ಕ್ಲಾರ್ಕುಗಳು.
(ಕೆಳಗಿನ ದರ್ಜೆಯ) ರೆವಿನ್ಯೂ (ಕೆಳಗಿನ ದರ್ಜೆಯ) ಕ್ರಿಮಿನಲ್ ಮತ್ತು ಅಕೌಂಟ್ಸ್ ಯಾ ಲೆಕ್ಕಗಳು.	ತಾಲ್ಲೂಕು ಶಿರಸ್ತೇದಾರರು.
(ಕೆಳಗಿನ ದರ್ಜೆಯ) ರೆವಿನ್ಯೂ ಮತ್ತು (ಕೆಳಗಿನ ದರ್ಜೆಯ) ಕ್ರಿಮಿನಲ್.	ಡೆಪ್ಯುಟಿ ಕಮಿಷನರ ಕಚೇರಿಯ ಹೆಡ್ ಕ್ಲಾರ್ಕ್ ರೆವಿನ್ಯೂ ಹೆಡ್ಮುನ್ಷಿ, ಜುಡಿಷಲ್ ಹೆಡ್ಮುನ್ಷಿ, ಮತ್ತು ಅಸಿಸ್ಟೆಂಟ್ ಕಮಿಷನರ ಕಚೇರಿಯ ಹೆಡ್ ಕ್ಲಾರ್ಕ್.
(ಕೆಳಗಿನ ದರ್ಜೆಯ) ರೆವಿನ್ಯೂ.	ಶೇಕದಾರರು.
ಎಕ್ಸೈಸ್ ಯಾ ಅಬ್ಕಾರಿ ಮತ್ತು ಕೆಳಗಿನ ದರ್ಜೆಯ ಕ್ರಿಮಿನಲ್.	ಅಬ್ಕಾರಿ ಇನ್ಸ್‌ಪೆಕ್ಟರುಗಳು.
ಎಕ್ಸೈಸ್ ಯಾ ಅಬ್ಕಾರಿ (ಕೆಳಗಿನ ದರ್ಜೆಯ) ಕ್ರಿಮಿನಲ್ ಮತ್ತು ಅಕೌಂಟ್ಸ್ ಯಾ ಲೆಕ್ಕಗಳು.	ಎಕ್ಸೈಸ್ ಕಮಿಷನರ ಕಚೇರಿಯಲ್ಲಿ 50 ರೂಪಾಯಿಗೆ ಮೇಲ್ಪಟ್ಟು ಸಂಬಳ ತೆಗೆಯುವ ಎಲ್ಲಾ ಕ್ಲಾರ್ಕುಗಳೂ ಮತ್ತು ಅಕೌಂಟೆಂಟುಗಳು.
ಅಕೌಂಟ್ಸ್ ಯಾ ಲೆಕ್ಕಗಳು.	ಡೆಪ್ಯುಟಿ ಕಮಿಷನರ ಕಚೇರಿಯಲ್ಲಿ ಅಕೌಂಟ್ ಬ್ರಾಂಚಿನಲ್ಲಿ ಎಲ್ಲಾ ಉದ್ಯೋಗಗಳು ; ಎಲ್ಲಾ ಟ್ರೆಜರಿ ಯಾ ಖಜಾನೆಯ ಹೆಡ್ ಅಕೌಂಟೆಂಟುಗಳು ಕಂಟ್ರೋಲರ ಆಫೀಸಿನ ಮತ್ತು ಹುಜೂರು ಖಜಾನೆಯ ಇನ್ನು ಮೇಲೆ ಪ್ರಕಟಿಸಬಹುದಾದ ಕೆಲವು ದರ್ಜೆಗಳ ಕೆಳಗಿನ ನೌಕರರೂ ಕೂಡ.
ರಿಜಿಸ್ಟ್ರೇಷನ್.	ಸಬ್ ರಿಜಿಸ್ಟ್ರಾರುಗಳು ಮತ್ತು ಉದ್ಯೋಗಪ್ರಯುಕ್ತವಾದ ಸಬ್ ರಿಜಿಸ್ಟ್ರಾರುಗಳು ಹೆಡ್ ಕ್ವಾರ್ಟರಿ ಆಫೀಸಿಗೆ ಸೇರಿದ ಮ್ಯಾನೇಜರ್ ಮತ್ತು ಕ್ಲಾರ್ಕುಗಳು ; ಡಿಸ್ಟ್ರಿಕ್ಟ್ ರಿಜಿಸ್ಟ್ರಿ ಆಫೀಸುಗಳ ಹೆಡ್ ಕ್ಲಾರ್ಕ್.
	ಡೆಪ್ಯುಟಿ ಕ್ಲಾರ್ಕ್, ಮತ್ತು ಮೂರನೆ ಕ್ಲಾರ್ಕ್ ಮತ್ತು ರಿಜಿಸ್ಟ್ರೇಷನ್ ಇಲಾಖೆಯ 15 ರೂಪಾಯಿನ ಅಥವಾ ಅದಕ್ಕೆ ಮೇಲ್ಪಟ್ಟ ಸಂಬಳವುಳ್ಳ ಎಲ್ಲಾ ಕ್ಲಾರ್ಕುಗಳು.

ಪರೀಕ್ಷೆಗಳು.	ಕೆಲಸಗಳು.
ಫಾರೆಸ್ಟ್ ಯಾ ಜಂಗಲಿ.	ರೇಂಜರುಗಳು ಮತ್ತು ಫಾರೆಸ್ಟರುಗಳು ಮತ್ತು 20 ರೂಪಾಯಿನ ಮತ್ತು ಅದಕ್ಕೆ ಮೇಲಿನ ಸಂಬಳವುಳ್ಳ ಉದ್ಯೋಗದಲ್ಲಿರುವ ಜಂಗಲಿ ಇಲಾಖೆಯ ಕಚೇರಿಯ ಸಿಬ್ಬಂದಿಗೆ ಸೇರಿದ ಎಲ್ಲಾ ಜನಗಳೂ.
ಪ್ರಿಜನ್ಸ್ ಯಾ ಬಂದೀಖಾನೆಗಳು.	ಲಾಕಪ್‌ಗಳ ಚಾರ್ಜಿನಲ್ಲಿರುವ ಆಫೀಸರು, ಬಂದೀಖಾನೆಗಳ ಮೆಡಿಕಲ್ ಚಾರ್ಜಿನಲ್ಲಿ ಮಾತ್ರ ಇರುವ ಮೆಡಿಕಲ್ ಆಫೀಸರು ವಿನಾ ಚೀಫ್ ಜೈಲರ ಮತ್ತು ಮೇಲ್ಪಟ್ಟ ದರ್ಜೆಯ ಬಂದೀಖಾನೆಯ ಎಲ್ಲಾ ಆಫೀಸರುಗಳು, ಮತ್ತು ಸಬಾರ್ಡಿನೇಟ್ ಆಫೀಸರುಗಳು, ಬಂದೀಖಾನೆಯ ಯಾವ ಸಬಾರ್ಡಿನೇಟ್ ಆಫೀಸರೂ ಪ್ರಿಜನ್ಸ್ ಯಾ ಬಂದೀಖಾನೆಗೆ ಸಂಬಂಧಪಟ್ಟ ಪರೀಕ್ಷೆಯಲ್ಲಿ ತೇರುವುದರ ಮೂಲಕ ಯೋಗ್ಯತೆಯನ್ನು ಸಂಪಾದಿಸಿದ ಹೊರತು ಜೈಲರ ಡೆಪ್ಯುಟಿ ಜೈಲರ ಅಥವಾ ಅಸಿಸ್ಟೆಂಟ್ ಜೈಲರ ದರ್ಜೆಗೆ ಬಡತಿಯಾಗುವುದಕ್ಕೆ ಅರ್ಹನಾಗಿರತಕ್ಕದ್ದಲ್ಲ.
(ಇಂಗ್ಲಿಷ್ ಭಾಷೆಯಲ್ಲಿ) ಕೈಬರಹದ ಮತ್ತು ಉಕ್ತಲೇಖನದ ಪರೀಕ್ಷೆ.	ಮೈಸೂರು ಸಂಸ್ಥಾನದಲ್ಲಿ ಯಾವುದಾದರೂ ಸರ್ಕಾರಿ ಕಚೇರಿಯಲ್ಲಿ 25 ರೂಪಾಯಿನ ಅಥವಾ ಅದಕ್ಕೆ ಮೇಲ್ಪಟ್ಟ ಸಂಬಳವುಳ್ಳ ಎಲ್ಲಾ ಕೆಳಗಿನ ಉದ್ಯೋಗಗಳು.
(ಕನ್ನಡದಲ್ಲಿ) ಕೈಬರಹದ ಮತ್ತು ಉಕ್ತಲೇಖನದ ಪರೀಕ್ಷೆ.	15 ರೂಪಾಯಿ ಅಥವಾ ಅದಕ್ಕೆ ಮೇಲ್ಪಟ್ಟು 25 ರೂಪಾಯಿಗೆ ಕಡಮೆಯಾಗಿರುವ ಸಂಬಳವುಳ್ಳ ಮೈಸೂರು ಸಂಸ್ಥಾನದ ಯಾವುದಾದರೂ ಸರ್ಕಾರಿ ಕಚೇರಿಯಲ್ಲಿ ಎಲ್ಲಾ ಕೆಳಗಿನ ಉದ್ಯೋಗಗಳು.

7. (a) ಇಂಡಿಯಾ ದೇಶದ ಯಾವುದಾದರೂ ಯೂನಿವರ್ಸಿಟಿಯಲ್ಲಿ ಬಿ. ಎಲ್. ಅಥವಾ ಎಂ. ಎಲ್. ಡಿಗ್ರಿಗಳಿಗೆ ವಿಧಿಸಲ್ಪಟ್ಟಿರುವ ಪರೀಕ್ಷೆಯಲ್ಲಿ ತೇರಿರುವ ಮನುಷ್ಯರು ಈ ನಿಬಂಧನೆಗಳ ಮೇರೆ ಸಿವಿಲ್ ಮತ್ತು ಕ್ರಿಮಿನಲ್ ಪರೀಕ್ಷೆಗಳಲ್ಲಿ ತೇರುವುದರಿಂದ ವಿನಾಯಿಸಲ್ಪಡುವರು.

(b) 1884ನೆ ಇಸವಿಯ ಡಿಸೆಂಬರ 12ನೆ ತಾರೀಖಿನ 187ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಗನುಸಾರವಾಗಿ ಚೀಫ್ ಕೋರ್ಟಿನವರಿಂದ ನಡೆಸಲ್ಪಡುವ 1ನೆ ದರ್ಜೆಯ ಪ್ಲೀಡರುಗಳಿಗೆ ವಿಧಿಸಲ್ಪಟ್ಟಿರುವ ಪರೀಕ್ಷೆಯಲ್ಲಿ ತೇರಿರುವ ಅಥವಾ ಮೈಸೂರು ಸಂಸ್ಥಾನದಲ್ಲಿ 1ನೆ ದರ್ಜೆಯ ಪ್ಲೀಡರಗಳೆಂದು ದಾಖಲ್ಮಾಡುವದಕ್ಕೆ ಅನ್ಯಥಾ ಯೋಗ್ಯತೆಯನ್ನು ಸಂಪಾದಿಸಿರುವ ಅಥವಾ 1885ನೆ ಇಸವಿಯ ಜನವರಿ 29ನೆ ತಾರೀಖಿನ 215ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಗನುಸಾರವಾಗಿ ನಡೆಸಲ್ಪಟ್ಟ ಸಿವಿಲ್ ಮತ್ತು ಕ್ರಿಮಿನಲ್ ಪರೀಕ್ಷೆಗಳಲ್ಲಿ ತೇರಿದ ಮನುಷ್ಯರು ಈ ನಿಬಂಧನೆಗಳಿಗನುಸಾರವಾಗಿ ಏರ್ಪಡಿಸಲ್ಪಟ್ಟಿರುವ ಸಿವಿಲ್ ಮತ್ತು ಕ್ರಿಮಿನಲ್ ಪರೀಕ್ಷೆಗಳಲ್ಲಿ ತೇರುವುದರಿಂದ ವಿನಾಯಿಸಲ್ಪಡುವರು.

(c) 1885ನೆ ಇಸವಿಯ ಜನವರಿ 29ನೆ ತಾರೀಖಿನ 215ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಗನುಸಾರವಾಗಿ ನಡೆಸಲ್ಪಟ್ಟ ರವಿನ್ಯೂ ಪರೀಕ್ಷೆಯಲ್ಲಿ ತೇರಿದ ಮನುಷ್ಯರು ಈ ನಿಬಂಧನೆಗಳ ಮೇರೆ ರವಿನ್ಯೂ, ಎಕ್ಸೈಸ್, ಅಬ್ಕಾರಿ, ಫಾರೆಸ್ಟ್ ಯಾ ಜಂಗಲಿ, ರಿಜಿಸ್ಟ್ರೇಷನ್ ಮತ್ತು ಅಕೌಂಟ್ಸ್ ಯಾ ಲೆಕ್ಕಗಳ ಪರೀಕ್ಷೆಗಳಲ್ಲಿ ತೇರುವುದರಿಂದ ವಿನಾಯಿಸಲ್ಪಡುವರು.

(d) 1871ನೆ ಇಸವಿಯ ಜೂನ್ 21ನೆ ತಾರೀಖಿನ 121ನೆ ನಂಬರಿನ ಚೀಫ್ ಕಮಿಷನರ ಇಸ್ತಿಹಾರ್ನಾಮೆಯಿಂದ ಅಮಲ್ದಾರರಿಗೋಸ್ಕರ ವಿಧಿಸಲ್ಪಟ್ಟಿರುವ ಜುಡಿಷಲ್ ಮತ್ತು ರವಿನ್ಯೂ ಪರೀಕ್ಷೆಗಳಲ್ಲಿ ತೇರಿದ ಮನುಷ್ಯರು ಈ ನಿಬಂಧನೆಗಳ ಮೇರೆ ರವಿನ್ಯೂ, ಕ್ರಿಮಿನಲ್, ಎಕ್ಸೈಸ್ ಫಾರೆಸ್ಟ್, ರಿಜಿಸ್ಟ್ರೇಷನ್, ಮತ್ತು ಅಕೌಂಟ್ಸ್ ಪರೀಕ್ಷೆಗಳಲ್ಲಿ ತೇರುವುದರಿಂದ ವಿನಾಯಿಸಲ್ಪಡುವರು.

(e) 1869ನೆ ಇಸವಿಯ ಜುಲೈ 5ನೆ ತಾರೀಖಿನ 63ನೆ ನಂಬರ ಅಥವಾ 1873ನೆ ಇಸವಿಯ ಡಿಸೆಂಬರು 15ನೆ ತಾರೀಖಿನ 249ನೆ ನಂಬರ ಅಥವಾ 1878ನೆ ಇಸವಿಯ ಅಕ್ಟೋಬರ 23ನೆ ತಾರೀಖಿನ 175ನೆ ನಂಬರ—ಈ ನಂಬರುಗಳುಳ್ಳ ಚೀಫ್ ಕಮಿಷನರ ಇಸ್ತಿಹಾರ್ನಾಮೆಗಳ ಮೇರೆ ಕೆಳ ದರ್ಜೆಯ ಜುಡಿಷಲ್ ಮತ್ತು ರವಿನ್ಯೂ ಪರೀಕ್ಷೆಗಳಲ್ಲಿ ತೇರಿದ ಮನುಷ್ಯರು ಈ ನಿಬಂಧನೆಗಳ ಮೇರೆ ರವಿನ್ಯೂ, ಕ್ರಿಮಿನಲ್, ಎಕ್ಸೈಸ್, ಫಾರೆಸ್ಟ್, ರಿಜಿಸ್ಟ್ರೇಷನ್ ಮತ್ತು ಅಕೌಂಟ್ಸ್ ಪರೀಕ್ಷೆಗಳಲ್ಲಿ ತೇರುವುದರಿಂದ ವಿನಾಯಿಸಲ್ಪಡುವರು:

(f) ಹಿಂದಿನ ಕಡೇ ಕಲಮಿನಲ್ಲಿ ಉದಹರಿಸಲ್ಪಟ್ಟಿರುವ ಇಸ್ತಿಹಾರ್ ನಾಮೆಗಳ ಮೇರೆ ಮೇಲು ದರ್ಜೆಯ ಪರೀಕ್ಷೆಯಲ್ಲಿ ತೇರಿರುವ ಮನುಷ್ಯರು ಈ ನಿಬಂಧನೆಗಳ ಮೇರೆ ಸಿವಿಲ್ ಪರೀಕ್ಷೆಯಲ್ಲಿ ತೇರುವುದರಿಂದ ವಿನಾಯಿಸಲ್ಪಡುವರು.

(g) 1880ನೆ ಇಸವಿಯ ಏಪ್ರಿಲ್ 7ನೆ ತಾರೀಖಿನ ಚೀಫ್ ಕಮಿಷನರ ಇಸ್ತಿಹಾರ್ನಾಮೆಯ ಮೇರೆ ಜುಡಿಷಲ್, ರವಿನ್ಯೂ ಮತ್ತು ಫೈನಾನ್ಸ್ ಪರೀಕ್ಷೆಗಳಲ್ಲಿ ತೇರಿದ ಮನುಷ್ಯರು ಈ ನಿಬಂಧನೆಗಳ ಮೇರೆ ಸಿವಿಲ್ ಮತ್ತು ಕ್ರಿಮಿನಲ್ ಪರೀಕ್ಷೆಗಳಲ್ಲಿಯೂ ರವಿನ್ಯೂ, ಎಕ್ಸೈಸ್, ಫಾರೆಸ್ಟ್, ರಿಜಿಸ್ಟ್ರೇಷನ್ ಮತ್ತು ಅಕೌಂಟ್ಸ್ ಪರೀಕ್ಷೆಗಳಲ್ಲಿಯೂ ತೇರುವುದರಿಂದ ವಿನಾಯಿಸಲ್ಪಡುವರು.

(h) 1874ನೆ ಇಸವಿಯ ಮಾರ್ಚಿ 14ನೆ ತಾರೀಖಿನ 6767–160ನೆ ನಂಬರಿನ ಚೀಫ್ ಕಮಿಷನರು ಜುಡಿಷಲ್ ಕಮಿಷನರಿಗೆ ಬರೆದ ಕಾಗದದಲ್ಲಿ ವಿಧಿಸಲ್ಪಟ್ಟ ಲೋಕಲ್ (ಸ್ಥಳೀಯ) ಮುನ್ಸಿಫ್ ಪರೀಕ್ಷೆಯಲ್ಲಿ ತೇರಿದ ಮನುಷ್ಯರು ಈ ನಿಬಂಧನೆಗಳ ಮೇರೆ ಸಿವಿಲ್ ಮತ್ತು ಕ್ರಿಮಿನಲ್ ಪರೀಕ್ಷೆಗಳಲ್ಲಿ ತೇರುವುದರಿಂದ ವಿನಾಯಿಸಲ್ಪಡುವರು.

(i) 1886ನೆ ಇಸವಿಯ ಡಿಸೆಂಬರು 31ಕ್ಕೆ ಮೊದಲು ನಡೆಸಲ್ಪಟ್ಟ ಮದ್ರಾಸು ಸ್ಪೆಷಲ್ ಟೆಸ್ಟ್ ಪರೀಕ್ಷೆಯ ಸಿವಿಲ್ ಮೇಲಿನ ದರ್ಜೆಯಲ್ಲಿ ತೇರಿದ ಮನುಷ್ಯರು ಈ ನಿಬಂಧನೆಗಳಿಂದ ವಿಧಿಸಲ್ಪಟ್ಟಿರುವ ಸಿವಿಲ್ ಪರೀಕ್ಷೆಯಲ್ಲಿ ತೇರುವುದರಿಂದಲೂ ಸದರಿ ಸ್ಪೆ

ಷಲ್ ಟೆಸ್ಟ್ ಪರೀಕ್ಷೆಯ ಕ್ರಿಮಿನಲ್ ಮೇಲು ದರ್ಜೆಯಲ್ಲಿ ತೇರಿದ ಮನುಷ್ಯರು ಈ ನಿಬಂಧನೆಗಳಿಂದ ವಿಧಿಸಲ್ಪಟ್ಟ ಕ್ರಿಮಿನಲ್ ಪರೀಕ್ಷೆಯಲ್ಲಿ ತೇರುವುದರಿಂದಲೂ ವಿನಾಯಿಸಲ್ಪಡುವರು.

(j) ಗ್ರಾಜ್ಯುಯೇಟುಗಳು ಮತ್ತು ಇನ್ನೆಲ್ಲಿಯಾದರೂ ಅವರು ಕೊಟ್ಟಿರುವ ಪರೀಕ್ಷೆಗೆ ಸದೃಶವಾಗಿ ಅಂಗೀಕೃತವಾದ ಪರೀಕ್ಷೆಯನ್ನು ಕೊಟ್ಟಿರುವವರೂ ಕೂಡಾ ಕೈಬರಹದ ಮತ್ತು ಉಕ್ತಲೇಖನದ ಪರೀಕ್ಷೆಯಲ್ಲಿ ತೇರುವುದರಿಂದ ವಿನಾಯಿಸಲ್ಪಟ್ಟಿರುತ್ತಾರೆ.

8. 6ನೆ ನಿಬಂಧನೆಯಲ್ಲಿ ಏನಿದ್ದಾಗ್ಯೂ ಸರಿಯೇ, ಒಬ್ಬ ಮನುಷ್ಯನು ಅಮಲ್ದಾರಿ ಕೆಲಸವನ್ನು 10 ವರ್ಷಗಳಿಗೆ ಕಡಮೆ ಇಲ್ಲದೆ ತೃಪ್ತಿಕರವಾಗಿ ಮಾಡಿದ್ದ ಅನಂತರ ಅಸಿಸ್ಟೆಂಟ್ ಕಮಿಷನರ ದರ್ಜೆಗೆ ಬಡತಿ ಮಾಡಲ್ಪಟ್ಟಾಗ ಶಿವಿಲ್ ಪರೀಕ್ಷೆಯಲ್ಲಿ ತೇರುವುದರಿಂದ ಆ ಅಧಿಕಾರಿಯನ್ನು ವಿನಾಯಿಸುವ ಅಧಿಕಾರವನ್ನೂ, ಪೊಲೀಸ್, ರವಿನ್ಯೂ ಅಥವಾ ಸರಕಾರದ ಇತರ ಎಕ್ಸಿಕ್ಯೂಟಿವ್ ಇಲಾಖೆಯಲ್ಲಿ ಕೆಲಸ ನೋಡುತ್ತಿರುವ ಯಾವನಾದರೂ ಅಸಿಸ್ಟೆಂಟ್ ಕಮಿಷನರನ್ನು ಸಿವಿಲ್ ಪರೀಕ್ಷೆಯ 2ನೆ ಭಾಗದಲ್ಲಿ ತೇರುವುದರಿಂದ ವಿನಾಯಿಸುವ ಅಧಿಕಾರವನ್ನೂ, ಸರ್ಕಾರದವರು ತಮಗೇ ಉಳಿಸಿಕೊಂಡಿರುತ್ತಾರೆ.

9. ಮೇಲೆ ವಿವರಿಸಿದ ಪರೀಕ್ಷೆಗಳ ಪೈಕಿ ಯಾವದಕ್ಕಾದರೂ ಹೋಗುವುದಕ್ಕೆ ಇದರಡಿ ಕಂಡ ಮನುಷ್ಯರು ಹಕ್ಕುಳ್ಳವರಾಗಿರತಕ್ಕದ್ದು :—

(a) ಪರೀಕ್ಷೆಗೆ ಹೋಗಬೇಕೆಂದು ಅರ್ಜಿ ಮಾಡಿಕೊಳ್ಳುವ ಕಾಲದಲ್ಲಿ ಮೈಸೂರು ಸರ್ಕಾರದಲ್ಲಿ ಅಥವಾ ಮೈಸೂರು ಮ್ಯೂನಿಸಿಪಾಲಿಟಿಗಳಲ್ಲಿ ಅಥವಾ ಮೈಸೂರು ಸೀಮೆಯ ಆದಾಯಗಳಿಂದ, ಲೋಕಲ್ ಫಂಡುಗಳಿಂದ, ಅಥವಾ ಅರಮನೆಯ ವಾರ್ಷಿಕ ಖರ್ಚಿನಿಂದ ನಡೆಸಲ್ಪಡುವ ಆಲಯಗಳಲ್ಲಿ ಅಥವಾ ಮೈಸೂರು ಬ್ರಿಟಿಷ್ ರೆಸಿಡೆಂಟಿನ ಕೆಳಗಿರುವ ನಾನಾ ಇಲಾಖೆಗಳಲ್ಲಿ ಐದು ವರ್ಷಗಳಿಗೆ ಕಡಮೆ ಇಲ್ಲದಂತೆ ಕೆಲಸ ಮಾಡಿರುವ ಮನುಷ್ಯರು.

(b) (a) ಕಲಮಿನಲ್ಲಿ ಹೇಳಿರುವ ಇಲಾಖೆಗಳ ಪೈಕಿ ಯಾವುದರಲ್ಲಾದರೂ ತಿಂಗಳಿಗೆ 25 ರೂಪಾಯಿಗಳಿಗೆ ಕಡಮೆ ಇಲ್ಲದಂತೆ ಸರಿಯಾದ ಸಂಬಳದ ಖಾಯಂ ಕೆಲಸವುಳ್ಳ ಮನುಷ್ಯರೂ; ಒಟ್ಟಿನಲ್ಲಿ ಅವರು ಕೆಲಸ ಮಾಡಿದ ಕಾಲವು 5 ವರ್ಷಗಳಿಗಿಂತ ಕಡಮೆಯಾಗಿರಬಹುದಾದರೂ ಸರಿಯೆ.

ಷರಾ.—(1) ಖಾಯಂ ಅಲ್ಲದ ಕೆಲಸಗಳಲ್ಲಿರುವವರೂ, ಮತ್ತು ಹಂಗಾಮಿಯಾದ ಕೆಲಸಗಳಲ್ಲಿರುವವರೂ (a) ಕಲಮಿನ ಅರ್ಥದಲ್ಲಿ ಸೇರಿಲ್ಲ.

ಷರಾ.—(2) ಶಾನುಭೋಗರೂ ಗ್ರಾಮದ ಇತರ ಅಧಿಕಾರಿಗಳೂ ಪ್ರತ್ಯೇಕವಾದ ಏರ್ಪಾಡಿಗನುಸಾರವಾಗಿ ವೇತನವನ್ನು ಪಡೆಯುವವರಾದುದರಿಂದ (a) ಅಥವಾ (b) ಕಲಮಿನ ಅರ್ಥದಲ್ಲಿ ಸಂಬಳ ಹೊಂದುವ ಅಧಿಕಾರಿಗಳಲ್ಲ.

(c) ಇಂಡಿಯಾದೇಶ ಯಾವುದಾದರೂ ಯೂನಿವರ್ಸಿಟಿಯ ಕಲಾ ಪರೀಕ್ಷೆಗಳ ಪೈಕಿ ಮೊದಲನೆಯ (ಎಫ್. ಎ.) ಪರೀಕ್ಷೆಯಲ್ಲಿ ಅಥವಾ ಮೇಲ್ಪಟ್ಟ ಇತರ ಪರೀಕ್ಷೆಗಳಲ್ಲಿ ತೇರಿರುವ ಮನುಷ್ಯರು.

(d) ಕೈಬರಹದ ಮತ್ತು ಉಕ್ತಲೇಖನದ ಪರೀಕ್ಷೆಯ ವಿಷಯದಲ್ಲಿ—ಇಂಡಿಯಾ ದೇಶದ ಯಾವುದಾದರೂ ಯೂನಿವರ್ಸಿಟಿಯ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಅಥವಾ ಮೈಸೂರು ಲೋವರ ಸೆಕೆಂಡರಿ ಪರೀಕ್ಷೆಯಲ್ಲಿ ತೇರಿದ ಮನುಷ್ಯರು ಅಥವಾ ಸಂಸ್ಥಾನದ ಯಾವುದಾದರೂ ಇಲಾಖೆಯಲ್ಲಿ ಖಾಯಂ ಉದ್ಯೋಗವುಳ್ಳವರು.

(a) ಮತ್ತು (b) ಕಲಮುಗಳಿಗನುಸಾರವಾಗಿ ಪರೀಕ್ಷೆಗೆ ಸೇರಿಸಲ್ಪಡಲು ಹಕ್ಕುಳ್ಳವನೆಂದು ಹೇಳುವ ಪ್ರತಿ ಅರ್ಜಿದಾರನೂ ಅವನಿಗೆ ಮೇಲ್ಪಟ್ಟ ಅಧಿಕಾರಿಯಿಂದ ಅವನ ಕೆಲಸದ ಸರಿಯಾದ ಸಂಬಳದ ವಿಷಯದಲ್ಲಿಯೂ, ಅವನು ಕೆಲಸ ಮಾಡಿರುವ ರೀತಿಯ ವಿಷಯದಲ್ಲಿಯೂ ಮತ್ತು ಅವನ ಗುಣದ ಮತ್ತು ನಡತೆಯ ವಿಷಯದಲ್ಲಿಯೂ ಸರ್ಟಿಫಿಕೇಟನ್ನು ಹಾಜರ್ಮಾಡತಕ್ಕದ್ದು.

(a) ಕಲಮಿಗನುಸಾರವಾಗಿ ಪರೀಕ್ಷೆಗೆ ಹೋಗುವ ಪ್ರತಿ ಅರ್ಜಿದಾರನೂ ಅವನು ಕೆಲಸ ಮಾಡಿದ ಒಟ್ಟು ಕಾಲದ ವಿಚಾರವಾಗಿಯೂ ಸಹ ಸರ್ಟಿಫಿಕೇಟನ್ನು ಹಾಜರುಪಡಿಸತಕ್ಕದ್ದು.

(c) ಅಥವಾ (d) ಕಲಮಿಗನುಸಾರವಾಗಿ ಪರೀಕ್ಷೆಗೆ ಸೇರಿಸಲ್ಪಡಲು ಹಕ್ಕುಳ್ಳವನೆಂದು ಕೇಳುವ ಪ್ರತಿ ಅರ್ಜಿದಾರನೂ ಸಂದರ್ಭಾನುಸಾರವಾಗಿ ಯೂನಿವರ್ಸಿಟಿಯಿಂದ ತನಗೆ ಬಂದ ಸರ್ಟಿಫಿಕೇಟನ್ನು ಅಥವಾ ಡಿಪ್ಲೊಮಾವನ್ನು ಅಥವಾ ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರಿದುದಕ್ಕೆ ಸರ್ಟಿಫಿಕೇಟನ್ನು ಮತ್ತು ಅವನು ಕಡೇಸಾರಿ ಓದಿದ ಕಾಲೇಜಿನ ಪ್ರಿನ್ಸಿಪಾಲರಿಂದಾಗಲಿ ಅಥವಾ ಸ್ಕೂಲಿನ ಹೆಡ್ಮಾಸ್ಟರಿಂದಾಗಲಿ ಅಥವಾ ಅಸಿಸ್ಟೆಂಟ ಕಮಿಷನರ ಅಥವಾ ಮೇಲ್ಪಟ್ಟ ದರ್ಜೆಯಲ್ಲಿರುವ ಮೈಸೂರು ಅಧಿಕಾರಿಯಿಂದಾಗಲಿ, ಅವನು ಗುಣದಲ್ಲಿಯೂ ನಡತೆಯಲ್ಲಿಯೂ, ಮೈಸೂರು ಸರ್ಕಾರದ ಉದ್ಯೋಗಕ್ಕೆ ಸೇರಿಸಿಕೊಳ್ಳಲ್ಪಡಲು ತಕ್ಕವನೆಂದು ಒಂದು ಸರ್ಟಿಫಿಕೇಟನ್ನು ಹಾಜರ್ಮಾಡತಕ್ಕದ್ದು.

ವಿನಾಯಿತಿಗಳು :—

(1) ಸಂಸ್ಥಾನದ ಖಜಾನೆಯಲ್ಲಿಯೂ ಅಕೌಂಟ್ಸ್ ಇಲಾಖೆಗಳಲ್ಲಿಯೂ ಮತ್ತು ಎಕ್ಸೈಸ್ ಕಮಿಷನರ ಆಫೀಸಿನಲ್ಲಿಯೂ ಕೆಲಸವಿದ್ದು ತಿಂಗಳಿಗೆ 15 ರೂಪಾಯಿಗಳಿಗೆ ಕಡಮೆ ಇಲ್ಲದ ಸಂಬಳವುಳ್ಳ ನೌಕರರು ಅಕೌಂಟ್ಸ್ ಪರೀಕ್ಷೆಗೆ ಸೇರಿಸಿಕೊಳ್ಳಲ್ಪಡುವರು.

(2) ಎಕ್ಸೈಸ್ ಇಲಾಖೆಯಲ್ಲಿ ತಿಂಗಳಿಗೆ 10 ರೂಪಾಯಿಗಳಿಗೆ ಕಡಮೆ ಇಲ್ಲದ ಸಂಬಳವುಳ್ಳ ಕ್ಲಾರ್ಕುಗಳು, ಅಕೌಂಟೆಂಟುಗಳು, ಮತ್ತು ಎಕ್ಸಿಕ್ಯೂಟಿವ್ ಸಿಬ್ಬಂದಿಗೆ ಸೇರಿದವರು, ಇವರೆಲ್ಲರೂ ಎಕ್ಸೈಸ್ ಪರೀಕ್ಷೆಗೆ ಸೇರಿಸಿಕೊಳ್ಳಲ್ಪಡುವರು.

(3) ಫಾರೆಸ್ಟ್ ಯಾ ಜಂಗಲಿ ಇಲಾಖೆಯಲ್ಲಿ ತಿಂಗಳಿಗೆ 15 ರೂಪಾಯಿಗಳಿಗೆ ಕಡಮೆ ಇಲ್ಲದ ಸಂಬಳವುಳ್ಳ ನೌಕರರು ಫಾರೆಸ್ಟ್ ಯಾ ಜಂಗಲಿ ಪರೀಕ್ಷೆಗೆ ಸೇರಿಸಿಕೊಳ್ಳಲ್ಪಡುವರು.

(4) ರಿಜಿಸ್ಟ್ರೇಷನ್ ಇಲಾಖೆಯಲ್ಲಿ ತಿಂಗಳಿಗೆ 10 ರೂಪಾಯಿಗೆ ಕಡಮೆ ಇಲ್ಲದ ಸಂಬಳವುಳ್ಳ ನೌಕರರು ರಿಜಿಸ್ಟ್ರೇಷನ್ ಪರೀಕ್ಷೆಗೆ ಸೇರಿಸಿಕೊಳ್ಳಲ್ಪಡುವರು.

(5) ಸರ್ಕಾರಿ ನೌಕರಿಯಲ್ಲಿ ಇಲ್ಲದೆ, ಇಂಗ್ಲಿಷ್ ಅಥವಾ ಕನ್ನಡದ ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ತೇರಿರುವ ಅಥವಾ ಕನ್ನಡವನ್ನು ಐಚ್ಛಿಕ ಭಾಷೆಯನ್ನಾಗಿ ತೆಗೆದುಕೊಂಡು ಇಂಡಿಯಾ ದೇಶದ ಯೂನಿವರ್ಸಿಟಿಗಳ ಪೈಕಿ ಯಾವುದಾದರೊಂದರ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರಿರುವ ಮನುಷ್ಯರು ಕನ್ನಡದ ರಿಜಿಸ್ಟ್ರೇಷನ್ ಪರೀಕ್ಷೆಗೆ ಸೇರಿಸಿಕೊಳ್ಳಲ್ಪಡುವರು.

(6) ಅಡ್ವೊಕೇಟುಗಳಾಗಿ ಸೇರಿಸಿಕೊಳ್ಳಲ್ಪಡುವುದಕ್ಕೆ ಸಂಬಂಧಪಡುವ ನಿಬಂಧನೆಗಳನ್ನನುಸರಿಸಿ ಲಾ ಆಫ್ ಪ್ರಾಕ್ಟಿಸ ಮತ್ತು ಪ್ರೊಸೀಜರ್ ಪರೀಕ್ಷೆಯಲ್ಲಿ ತೇರಬೇಕೆಂದು ಕೇಳಲ್ಪಡುವ ಮನುಷ್ಯರು ಸಿವಿಲ್ ಪರೀಕ್ಷೆಯ 2ನೆ ಭಾಗಕ್ಕೆ ವಿಧಿಸಲ್ಪಟ್ಟಿರುವ ಸಿವಿಲ್ ಪ್ರೊಸೀಜರ್ ಕೋಡಿನ ಮತ್ತು ಇಂಡಿಯನ್ ಲಿಮಿಟೇಷನ್ ಆಕ್ಟಿನ ಮೇಲೆ ಬರುವ ಪ್ರಶ್ನಪತ್ರಿಕೆಗೂ (ಮೇಲಿನ ದರ್ಜೆಯ) ಕ್ರಿಮಿನಲ್ ಪರೀಕ್ಷೆಗೆ ವಿಧಿಸಲ್ಪಟ್ಟಿರುವ ಕ್ರಿಮಿನಲ್ ಪ್ರೊಸೀಜರ್ ಮತ್ತು ಪೊಲೀಸ್ ನಿಬಂಧನೆಗಳ ಮೇಲೆ ಬರುವ ಪ್ರಶ್ನಪತ್ರಿಕೆಗೂ ಉತ್ತರ ಬರೆಯಲು ಸೇರಿಸಿಕೊಳ್ಳಲ್ಪಡುವರು.

(7) ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರಿದ್ದು ಅಡ್ವೊಕೇಟುಗಳಾಗಿ ಮತ್ತು ಪ್ಲೀಡರುಗಳಾಗಿ ಸೇರಿಸಿಕೊಳ್ಳಲ್ಪಡುವುದಕ್ಕೆ ಸಂಬಂಧಪಡುವ ನಿಬಂಧನೆಗಳನ್ನನುಸರಿಸಿ 2ನೆ ದರ್ಜೆಯ ಪ್ಲೀಡರು ಪರೀಕ್ಷೆಗೆ ಸೇರಿಸಿಕೊಳ್ಳಲ್ಪಡುವವರು ಮೇಲಿನ ದರ್ಜೆಯ ರೆವಿನ್ಯೂ, ಸಿವಿಲ್ 1ನೆ ಮತ್ತು 2ನೆ ಭಾಗಗಳು ಮತ್ತು ಮೇಲಿನ ದರ್ಜೆಯ ಕ್ರಿಮಿನಲ್ ಪರೀಕ್ಷೆಗಳಿಗೆ ಒಟ್ಟಾಗಿ ಅಥವಾ ಒಂದೊಂದು ಭಾಗವಾಗಿ ಅವರವರು ಹೋಗುವ ಭಾಗಗಳಿಗೆ ಫೀಜು ಪಾವತಿ ಮಾಡಿ ಹೋಗಬಹುದು.

(8) ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರಿದ್ದು ಶೇಕದಾರಿಗೆ ಅರ್ಹರಾಗಬೇಕೆಂದು ಅಪೇಕ್ಷಿಸುವವರು ಕೆಳಗಿನ ದರ್ಜೆಯ ರೆವಿನ್ಯೂ ಪರೀಕ್ಷೆಗೆ ಸೇರಿಸಿಕೊಳ್ಳಲ್ಪಡುವರು.

(9) 1906ನೆ ಇಸವಿಯ ಫೆಬ್ರುವರಿ 14ರಲ್ಲಿಯೇ ಎಕ್ಸೈಜ್ ಯಾ ಅಬ್ಕಾರಿ ಇಲಾಖೆಯಲ್ಲಿ ಕೆಲಸವಿರುವ ನೌಕರರು ಕನ್ನಡದ ಎಕ್ಸೈಜ್ ಯಾ ಅಬ್ಕಾರಿ ಪರೀಕ್ಷೆಗೆ ಸೇರಿಸಿಕೊಳ್ಳಲ್ಪಡುವರು.

1ನೆ, 2ನೆ, 3ನೆ, 4ನೆ ಮತ್ತು 9ನೆ ವಿನಾಯಿತಿಗಳಿಗನುಸಾರವಾಗಿ ಸೇರಿಸಿಕೊಳ್ಳಲ್ಪಡಲು ಹಕ್ಕುಂಟೆಂದು ಕೇಳುವ ಪ್ರತಿ ಅರ್ಜಿದಾರನೂ ತನಗೆ ಮೇಲ್ಪಟ್ಟ ಅಧಿಕಾರಿಯಿಂದ ಅವನ ಕೆಲಸದ ಸರಿಯಾದ ಸಂಬಳದ, ಅವನು ಅವನ ಕೆಲಸಗಳನ್ನು ಚೆನ್ನಾಗಿ ಮಾಡಿರುವ, ಅವನ ಗುಣದ ಮತ್ತು ನಡತೆಯ ವಿಷಯಗಳಲ್ಲಿ ಸರ್ಟಫಿಕೇಟನ್ನು ಹಾಜರ್ಮಾಡತಕ್ಕದ್ದು.

5ನೆ, 6ನೆ, 7ನೆ ಮತ್ತು 8ನೆ ವಿನಾಯಿತಿಗಳಿಗನುಸಾರವಾಗಿ ಸೇರಿಸಿಕೊಳ್ಳಲ್ಪಡಬೇಕೆಂದು ಕೇಳುವ ಪ್ರತಿ ಅರ್ಜಿದಾರನೂ ಅವನು ಕಡೇಸಾರಿ ಓದಿದ ಕಾಲೇಜಿನ ಪ್ರಿನ್ಸಿಪಾಲಿನಿಂದಾಗಲಿ ಅಥವಾ ಸ್ಕೂಲಿನ ಹೆಡ್ಮಾಸ್ಟರಿಂದಾಗಲಿ ಅಥವಾ ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರಿಂದಾಗಲಿ ಅಸಿಸ್ಟೆಂಟ್ ಕಮಿಷನರ ಅಥವಾ ಮೇಲ್ಪಟ್ಟ ದರ್ಜೆಯ ಮೈಸೂರು ಅಧಿಕಾರಿಯಿಂದಾಗಲಿ, ಸೇರಿಸಿಕೊಳ್ಳಲ್ಪಡುವುದಕ್ಕೆ ಗುಣದಲ್ಲಿಯೂ ನಡತೆಯಲ್ಲಿಯೂ ಅರ್ಹನೆಂದು ಸರ್ಟಫಿಕೇಟನ್ನು ಹಾಜರ್ಮಾಡತಕ್ಕದ್ದು.

10. ಮೈಸೂರು ಚೀಫ್ ಕೋರ್ಟಿನ ಯಾವನೇದರೂ ಅಡ್ವೊಕೇಟು, ಅವನು ಹಾಗೆ ಅಡ್ವೊಕೇಟಾಗಿ ದಾಖಲ್ಮಾಡಲ್ಪಟ್ಟದಕ್ಕೆ ಸರ್ಟಫಿಕೇಟನ್ನಾಗಲೀ ಇತರ ರುಜುವಾತನ್ನಾಗಲಿ ಹಾಜರ್ಮಾಡಿದಾಗ ರೆವಿನ್ಯೂ, ಎಕ್ಸೈಜ್ ಯಾ ಅಬ್ಕಾರಿ, ಫಾರೆಸ್ಟ್ ಯಾ ಜಂಗಲಿ, ರಿಜಿಸ್ಟ್ರೇಷನ್, ಅಕೌಂಟ್ಸ್ ಯಾ ಲೆಕ್ಕ, ಮತ್ತು ಪ್ರಿಜನ್ಸ್ ಯಾ ಬಂದೀಖಾನೆ, ಈ ಪರೀಕ್ಷೆಗಳಿಗೆ ಸೇರಿಸಿಕೊಳ್ಳಲ್ಪಡಲು ಹಕ್ಕುಳ್ಳವನಾಗಿರುವನು.

11. ಪ್ರತಿ ಪರೀಕ್ಷ್ಯನೂ ಸಿವಿಲ್ ಸರ್ಜನಿನ ಅಥವಾ ಮೇಲ್ಪಟ್ಟ ದರ್ಜೆಯ ವೈದ್ಯಾಧಿಕಾರಿಯಿಂದ ತಾನು 20 ವರ್ಷ ವಯಸ್ಸಿಗೆ ಮೇಲ್ಪಟ್ಟಿರುವ ಮತ್ತು ಸರ್ಕಾರಿ ಉದ್ಯೋಗಕ್ಕೆ ದೇಹದಾರ್ಢ್ಯವುಳ್ಳವನಾಗಿರುವ ವಿಷಯದಲ್ಲಿ ಒಂದು ಸರ್ಟಫಿಕೇಟನ್ನು ಹಾಜರ್ಮಾಡತಕ್ಕದ್ದು; ತತ್ಪೂರ್ವದಲ್ಲಿಯೇ ಅಂಥಾ ಸರ್ಟಫಿಕೇಟನ್ನು ಹಾಜರ್ಮಾಡಿರುವ ನೌಕರರ ವಿಷಯದಲ್ಲಿ ಅದು ಅವಶ್ಯವಾಗಿರುವುದಿಲ್ಲ. ಪ್ಲೀಡರ್ ಪರೀಕ್ಷೆಗೆ ಮಾತ್ರ ಹೋಗುವ ಪರೀಕ್ಷ್ಯನು ಅವರು 20 ವರ್ಷಗಳಿಗೆ ಮೇಲ್ಪಟ್ಟ ವಯಸ್ಸಿನವರೆಂದು ಒಂದು ಸರ್ಟಫಿಕೇಟನ್ನು ಮಾತ್ರ ಹಾಜರ್ಮಾಡಬೇಕು; ದೇಹದಾರ್ಢ್ಯ ವಿಷಯದಲ್ಲಿ ಯಾವ ಸರ್ಟಫಿಕೇಟೂ ಅವಶ್ಯವಿಲ್ಲ.

12. ಪ್ರತಿ ಪರೀಕ್ಷ್ಯನೂ ತನ್ನ ಅರ್ಜಿಯನ್ನು ಪರೀಕ್ಷಕರ ಸಭೆಯ (ಬೋರ್ಡ್) ಸೆಕ್ರೆಟರಿಗೆ ಪ್ರತಿ ವರ್ಷವೂ ಆಗಸ್ಟು 31ರಲ್ಲಿ ಅಥವಾ ಅದಕ್ಕೆ ಮುಂಚಿತವಾಗಿ ಅವರಿಗೆ ತಲುಪುವಂತೆ ಕಳುಹಿಸತಕ್ಕದ್ದು.

13. ಪ್ರತಿ ಪರೀಕ್ಷ್ಯನೂ ತಾನು ಹೋಗಬೇಕೆಂದಿರುವ ಪ್ರತಿ ಪರೀಕ್ಷೆಗೂ ಸೇರಿಸಿಕೊಳ್ಳಲ್ಪಡುವುದಕ್ಕೋಸ್ಕರ ಫೀಜನ್ನು ಇದರಡಿ ಕಂಡ ರೀತಿಯಲ್ಲಿ ಲೆಕ್ಕ ಮಾಡಿ ಮೈಸೂರು ಸಂಸ್ಥಾನದಲ್ಲಿರುವ ಡಿಸ್ಟ್ರಿಕ್ಟು ಅಥವಾ ತಾಲ್ಲೂಕು ಖಜಾನೆಗೆ ಪಾವತಿ ಮಾಡತಕ್ಕದ್ದು:—

		ರೂಪಾಯಿಗಳು
I.	ರೆವಿನ್ಯೂ (ಮೇಲಿನ ದರ್ಜೆ)	7
	ರೆವಿನ್ಯೂ (ಕೆಳಗಿನ ದರ್ಜೆ)	5

		ರೂಪಾಯಿಗಳು.
II.	ಸಿವಿಲ್ ಪರೀಕ್ಷೆ 1ನೆ ಭಾಗ	7.
	ಸಿವಿಲ್ ಪರೀಕ್ಷೆ 2ನೆ ಭಾಗ	5.
III.	ಕ್ರಿಮಿನಲ್ ಪರೀಕ್ಷೆ (ಮೇಲಿನ ದರ್ಜೆ)	7.
	ಕ್ರಿಮಿನಲ್ ಪರೀಕ್ಷೆ (ಕೆಳಗಿನ ದರ್ಜೆ)	5.
IV.	ಎಕ್ಸೈಸ್ ಪರೀಕ್ಷೆ	5.
V.	ಅಕೌಂಟ್ಸ್ ಪರೀಕ್ಷೆ	5.
VI.	ರಿಜಿಸ್ಟ್ರೇಷನ್ ಪರೀಕ್ಷೆ	5.
VII.	ಫಾರೆಸ್ಟ್ ಪರೀಕ್ಷೆ	5.
VIII.	ಲಾ ಆಫ್ ಪ್ರಾಕ್ಟಿಸ್ ಮತ್ತು ಪ್ರೊಸೀಜರ್ ಪರೀಕ್ಷೆ	7.
IX.	ಫ್ರೀರ್ಜನ್ ಪರೀಕ್ಷೆ	5.
X.	ಕೈ ಬರಹ ಮತ್ತು ಉಕ್ತಲೇಖನದ ಪರೀಕ್ಷೆ	3.

ಪರೀಕ್ಷ್ಯನ ಸರ್ಟಿಫಿಕೇಟುಗಳು ತೃಪ್ತಿಕರವಾಗಿಲ್ಲವೆಂದು ಎಣಿಸಲ್ಪಡುವಲ್ಲಿ ಫೀಜು ವಾಪಸು ಕೊಡಲ್ಪಡುವುದು. ಇತರ ಇನ್ಯಾವ ಸಂದರ್ಭದಲ್ಲಿಯೂ ಹಣವನ್ನು ವಾಪಸು ಕೊಡುವುದಕ್ಕೂ ಅಥವಾ ಉಳಿಸಿಕೊಳ್ಳುವುದಕ್ಕೂ ಸಮ್ಮತಿಸಲಾಗುವುದಿಲ್ಲ.

14. ಪ್ರತಿ ಅರ್ಜಿಯೂ ಇದರಡಿ ಸೇರಿಸಿರುವ ನಮೂನೆಯಲ್ಲಿರತಕ್ಕದ್ದು; ಮತ್ತು ಅದರೊಡನೆ—

(1) 9ನೆ, 10ನೆ ಮತ್ತು 11ನ ನಿಬಂಧನೆಗಳಲ್ಲಿ ವಿಧಿಸಲ್ಪಟ್ಟ ಸರ್ಟಿಫಿಕೇಟುಗಳೂ,

(2) 13ನೆ ನಿಬಂಧನೆಯಲ್ಲಿ ವಿಧಿಸಲ್ಪಟ್ಟ ಫೀಜು ಪಾವತಿಮಾಡುದಕ್ಕಾಗಿ ಖಜಾನೆಯ ಆಫೀಸರ ರಶೀತಿಯೂ, ಕಳುಹಿಸಲ್ಪಡತಕ್ಕದ್ದು.

ಮೈಸೂರು ಲೋಕಲ್ ಸರ್ವಿಸ್ ಯಾ ಸ್ಥಳೀಯ ನೌಕರಿ ಮತ್ತು ಪ್ಲೀಡರ್ ಪರೀಕ್ಷೆಗಳಿಗೆ ಸೇರಿಸಿಕೊಳ್ಳಲ್ಪಡುವುದಕ್ಕೋಸ್ಕರ ಬರೆದುಕೊಳ್ಳುವ ಅರ್ಜಿಯ ನಮೂನೆ.

ಹೆಸರು ಸಂಪೂರ್ಣವಾಗಿ.	ತಂದೆಯ ಹೆಸರು.	ವಾಸಸ್ಥಳ ಮತ್ತು ಸಂಪೂರ್ಣವಾದ ವಿಳಾಸ	ವಯಸ್ಸು.	ಅರ್ಜೀದಾರನು 9ನೆ ನಿಬಂಧನೆಯ (a), (b), (c), (d) ಕಲಮಿಂಗೆ ಮತ್ತು ಅದಕ್ಕೆ ಅನುಗುಣವಾದ ವಿನಾಯಿತಿಗಳಿಗನುಸಾರವಾಗಿ ಅಥವಾ 10ನೆ ನಿಬಂಧನೆಗನುಸಾರವಾಗಿ ಸೇರಿಸಿಕೊಳ್ಳಲ್ಪಡಲು ಹಕ್ಕುಳ್ಳವನೆಂದು ಕೇಳುತ್ತಾನೆಯೋ ಎಂಬುವುದು.	ಅರ್ಜೀದಾರನು ಸರ್ಕಾರಿ ಉದ್ಯೋಗದಲ್ಲಿದ್ದರೆ.										
					ಉದ್ಯೋಗವು ಆರಂಭವಾದ ತಾರೀಖು.	ಈಗಿನ ಉದ್ಯೋಗದ ಹೆಸರು.	ಈಗಿನ ಸರಿಯಾದ ತಿಂಗಳ ಸಂಬಳ.	a. ಪರೀಕ್ಷ್ಯನು ಹೋಗಬೇಕೆಂದಿರುವ ಪರೀಕ್ಷೆ.	b. ಭಾಷೆ.	c. ಪರೀಕ್ಷಾ ಸ್ಥಳ.	ಇದಕ್ಕೆ ಮೊದಲೇ ಪರೀಕ್ಷ್ಯನು ತೇರ್ಗಡೆಯಾಗಿರುವ ಪರೀಕ್ಷೆಯೂ ಯಾವುದಾದರೂ ಇದ್ದರೆ ಅದು.	9 ಮತ್ತು 10ನೆ ನಿಬಂಧನೆಗಳಿಗನುಸಾರವಾಗಿ ಯೋಗ್ಯತೆಗಳ ಸರ್ಟಿಫಿಕೇಟು.	11ನ ನಿಬಂಧನೆಗನುಸಾರವಾಗಿ ವಯಸ್ಸಿನ ದೇಹದಾರ್ಢ್ಯದ ಸರ್ಟಿಫಿಕೇಟು.	ನಿಬಂಧನೆಗಳಿಗನುಸಾರವಾಗಿ ಫೀಜು ಪಾವತಿ ಮಾಡಿದ ರಶೀತಿ.	ಷರಾ.
1	2	3	4	5	6	7	8	9			10	11	12	13	14

ತಾರೀಖು 18ನೆ ಡಿಸೆಂಬರ್ 1906.

ನಂ: ಆರ್. 6108 — ಫಾ. 44-06—4, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ ಮೈಸೂರು ಡಿಸ್ಟ್ರಿಕ್ಟಿನ ಜಂಗಲಿ ಸಬ್ ಅಸಿಸ್ಟೆಂಟ್ ಕನ್ಸರ್ವೇಟರಾದ ಮಿ|| ಜಿ. ಕೃಷ್ಣಮೂರ್ತಿ ನಾಯಡು ಯವರಿಗೆ 1906ನೆ ಇಸವಿಯ ಡಿಸೆಂಬರ್ 8ನೆ ತಾರೀಖಿನಿಂದ 8 ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ತಾರೀಖು 19ನೆ ಡಿಸೆಂಬರ್ 1906.

ನಂ. ರೆ. 6145 ಫಾ. 7-05-9, 1900ನೆ ಇಸವಿಯ 11ನೆ ನಂಬರ್ ಮೈಸೂರು ಜಂಗಲಿ ರೆಗ್ಯುಲೇಷನಿನ 17ನೆ ಪ್ರಕರಣದ ನಿಯಮಗಳನ್ನನುಸರಿಸಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು, ಈ ಇಸ್ತಿಹಾರ್ನಾಮೆಗೆ ಲಗತ್ತಿರುವ ಷೆಡ್ಯೂಲಿನಲ್ಲಿ ತೋರಿಸಿದ ಮೇರೆಗಳುಳ್ಳ ಪ್ರದೇಶವು, ಸದರಿ ಇಸ್ತಿಹಾರ್ನಾಮೆಯ ಕೆಳಗೆ ವಿವರಿಸಿರುವ ಹಕ್ಕುಗಳ ಚಲಾವಣೆಗೆ ಒಳಪಟ್ಟು, 1907ನೆ ಇಸವಿಯ ಜನವರಿ ಗುರ್ರೇ ಲಾಗಾಯಿತು "ಸಂಸ್ಥಾನ ಜಂಗಲಿ" ಎಂದು ಎಣಿಸಲ್ಪಡುವುದೆಂತ ಪ್ರಕಟಿಸಲು ಹುಕುಂ ದಯಪಾಲಿಸಿರುತ್ತಾರೆ:—

ಷೆಡ್ಯೂಲ್.

ಡಿಸ್ಟ್ರಿಕ್ಟ್	ತಾಲ್ಲೂಕು, ಹೋಬಳಿ ಗ್ರಾಮ	ಸುಮಾರು ವಿಸ್ತೀರ್ಣ	ಕಾಡಿನ ಹೆಸರು	ಚತುರ್ಸೀಮೆ.
ಬೆಂಗಳೂರು.	ಹೊಸಕೋಟೆ	0.93 ಚದರ ಮೈಲು	ಕುರಣಗೆರೆ.	ಉತ್ತರಕ್ಕೆ:—ಮರ್ಚನಹಳ್ಳಿ ಗ್ರಾಮದ ಸರ್ವೆ 85ನೆ ನಂಬರಿನ ಪೂರ್ವ ಮೇರೆಯಲ್ಲಿ ಅದರ ಈಶಾನ್ಯ ಮೂಲೆಯಿಂದ ಪಶ್ಚಿಮಕ್ಕೆ ಸುಮಾರು 8 ಸರಪಣಿಗಳ ದೂರದಲ್ಲಿ ಒಂದು ಸ್ಥಳದಿಂದ ಎಲ್ಲೆಯು ರೇಖೆಯು ಹೊರಟು ಈಶಾನ್ಯಕ್ಕೆ ಆ ಸರ್ವೆ ನಂಬರಿನ ಉತ್ತರ ಮೇರೆಯಲ್ಲಿ ಅದರ ಈಶಾನ್ಯ ಮೂಲೆಗೂ, ಅಲ್ಲಿಂದ ಬಿಲಕೆರೆ ಗ್ರಾಮದ ಸರ್ವೆ 44ನೆ ನಂಬರಿನ ದಕ್ಷಿಣ ಭಾಗದಲ್ಲಿ ಅದರ ಆಗ್ನೇಯ ಮೂಲೆಗೂ ಹೋಗುತ್ತದೆ. ಪೂರ್ವಕ್ಕೆ:—ಅಲ್ಲಿಂದ ಆಗ್ನೇಯಕ್ಕೆ ಗೋವಿಂದನಹಳ್ಳಿ ಸರ್ವೆ 71ನೆ ನಂಬರಿನ ಪಶ್ಚಿಮ ಭಾಗದಲ್ಲಿ ಕುರಣಗೆರೆ ಗ್ರಾಮದ ಸರ್ವೆ 148ನೆ ನಂಬರಿನ ವಾಯವ್ಯ

ವ್ಯ ಮೂಲೆಗೆ ಹೋಗಿ, ಅಲ್ಲಿಂದ ದಕ್ಷಿಣಕ್ಕೆ ಅದೆ ಸರ್ವೆ ನಂಬರಿನ ಪಶ್ಚಿಮ ಮೇರೆಯಲ್ಲಿ ಕುರಣಗೆರೆ, ಚಕ್ಲೂರು, ಮತ್ತು ಕುಕ್ಕೂರು ಗ್ರಾಮಗಳ ಮುಕ್ಕಪ್ಪೆ ಬಾಂದುಗಳಿಗೆ ಹೋಗುತ್ತದೆ.

ದಕ್ಷಿಣಕ್ಕೆ:—ಅಲ್ಲಿಂದ ನೈರುತ್ಯಕ್ಕೂ, ಪಶ್ಚಿಮಕ್ಕೂ ಕುಕ್ಕೂರು ಗ್ರಾಮದ ಸರ್ವೆ 15ನೆ ನಂಬರಿನ ಉತ್ತರ ಮೇರೆಯಲ್ಲಿ ಅದರ ವಾಯುವ್ಯ ಮೂಲೆಗೆ ಹೋಗಿ, ಅಲ್ಲಿಂದ ವಾಯುವ್ಯಕ್ಕೆ ಸರ್ವೆ 11ನೆ ನಂಬರಿನ ಪೂರ್ವಮೇರೆಯಲ್ಲಿ ಅದರ ಈಶಾನ್ಯ ಮೂಲೆಗೆ ಹೋಗಿ, ಅಲ್ಲಿಂದ ಸರ್ವೆ 101ನೆ ನಂಬರಿನ ಪೂರ್ವಮೇರೆಯಲ್ಲಿ ಸುಮಾರು 3 ಸರಪಣಿಗಳ ದೂರ ಹೋಗಿ ಅಲ್ಲಿಂದ ಪಶ್ಚಿಮಕ್ಕೆ ಅದೇ ಮೇರೆಯಲ್ಲಿ ಸುಮಾರು 10 ಸರಪಣಿಗಳ ದೂರ ಹೋಗಿ, ಅಲ್ಲಿಂದ ನೈರುತ್ಯಕ್ಕೆ ಅದೇ ಮೇರೆಯಲ್ಲಿ ಸುಮಾರು 10 ಸರಪಣಿಗಳ ದೂರ ಹೋಗಿ, ಅಲ್ಲಿಂದ ವಾಯುವ್ಯಕ್ಕೆ ಅದೇ ಮೇರೆಯಲ್ಲಿ ಸುಮಾರು 20 ಸರಪಣಿಗಳ ದೂರ ಹೋಗುತ್ತದೆ.

ಪಶ್ಚಿಮಕ್ಕೆ:—ಅಲ್ಲಿಂದ ಕುಕ್ಕೂರು ಗ್ರಾಮದ ಸರ್ವೆ 101ನೆ ನಂಬರಿನ ಪೂರ್ವ ಭಾಗದಲ್ಲಿ ಅದರ ಈಶಾನ್ಯ ಮೂಲೆಗೆ ಹೋಗಿ, ಅಲ್ಲಿಂದ ಮರ್ಚನಹಳ್ಳಿ ಗ್ರಾಮದ ಸರ್ವೆ 85ನೆ ನಂಬರಿನ ಪೂರ್ವ ಮೇರೆಯಲ್ಲಿ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

A. ಷರಾಗಳು—

ಈ ಕೆಳಗೆ ನಮೂದಿಸುವ ಸಾರ್ವಜನಿಕವಾದ ಹಕ್ಕುಗಳನ್ನು ಜನಗಳೂ ಮತ್ತು ದನಗಳೂ ವರ್ಷವೆಲ್ಲಾ ಉಪಯೋಗಿಸಿಕೊಳ್ಳಬಹುದೆಂದು ಒಪ್ಪಿಕೊಂಡಿದೆ:—

1. (i) ಕುರಣಗೆರೆಯಿಂದ ಮರ್ಚನಹಳ್ಳಿಗೆ ಹೋಗುವ ದನಗಳ ದಾರಿ, 12 ಅಡಿಗಳ ಅಗಲ; ಇದು ಕುರಣಗೆರೆ ಗ್ರಾಮದ ಸರ್ವೆ 148ನೆ ನಂಬರಿನ ಪಶ್ಚಿಮ ಪಾರ್ಶ್ವದ ಸುಮಾರು ಮಧ್ಯಭಾಗದಲ್ಲಿ ರಿಸರ್ವ್ ಜಂಗಲಿಯನ್ನು ಪ್ರವೇಶಿಸಿ, ಪಶ್ಚಿಮಕ್ಕೆ ಸುಮಾರು 50 ಸರಪಣಿಗಳ ದೂರ ಹೋಗಿ, ಮರ್ಚನಹಳ್ಳಿ ಗ್ರಾಮದ ಸರ್ವೆ 85ನೆ ನಂಬರಿನ ಪೂರ್ವಭಾಗದಲ್ಲಿ ಅದರ ಆಗ್ನೇಯ ಮೂಲೆಯಿಂದ ಉತ್ತರಕ್ಕೆ ಸುಮಾರು 30 ಸರಪಣಿಗಳ ದೂರದಲ್ಲಿ ಜಂಗಲಿಯನ್ನು ಬಿಡುತ್ತದೆ.

(ii) ಕುರಣಗೆರೆಯಿಂದ ಕುಕ್ಕೂರಿಗೆ ಹೋಗುವ ಕಾಲುದಾರಿ, 4 ಅಡಿಗಳ ಅಗಲ. ಇದು (i)ನೆ ದಾರಿಯು ಜಂಗಲಿಯನ್ನು ಪ್ರವೇಶಿಸುವ ಸ್ಥಳದಿಂದ 2 ಸರಪಣಿಗಳ ದೂರದಲ್ಲಿ ರಿಸರ್ವ್ ಜಂಗಲಿಯನ್ನು ಪ್ರವೇಶಿಸಿ ಸುಮಾರು 47 ಸರಪಣಿಗಳ ದೂರ ದಕ್ಷಿಣಕ್ಕೆ ಹೋಗಿ, ಕುಕ್ಕೂರು ಗ್ರಾಮದ ಸರ್ವೆ 101ನೆ ನಂಬರಿನ ಪೂರ್ವ ಮೇರೆಯಲ್ಲಿ (ಸರ್ವೆ 11ನೆ ನಂಬರಿನ ಈಶಾನ್ಯ ಮೂಲೆಗೆ ಸರಿಯಾದ) ಆ ನಂಬರಿನ ಈಶಾನ್ಯ ಮೂಲೆಯಿಂದ ಪಶ್ಚಿಮಕ್ಕೆ ಸುಮಾರು 8 ಸರಪಣಿಗಳ ದೂರದಲ್ಲಿ ಜಂಗಲಿಯನ್ನು ಬಿಡುತ್ತದೆ.

B. ಈ ತಾಕಿನಲ್ಲಿ ಈ ಕೆಳಗೆ ನಮೂದಿಸುವ ಹಕ್ಕುಗಳನ್ನು ಅಂಗೀಕರಿಸಿ ಇದೆ :—

ಹೆಸರು.	ಸ್ಥಳ.	ಪ್ರವೇಶ.
ನರಸಿಂಹಸ್ವಾಮಿಯ ದೇವಸ್ಥಾನ.	ಗುಡ್ಡದಮೇಲಿನ ಸರ್ವೆ 1ನೆ ನಂಬರಿನಲ್ಲಿ.	(iii) ವರ್ಷವೆಲ್ಲಾ ಜನಗಳ ಮತ್ತು ದನಗಳ ಸಂಚಾರಕ್ಕೆ ಬಿಡಲ್ಪಟ್ಟ ನಾಲ್ಕು ಅಡಿಗಳ ಅಗಲವಿರುವ ಒಂದು ಕಾಲು ದಾರಿಯಿಂದ ಈ ದಾರಿಯು ಬಿಲಕೆರೆ ಗ್ರಾಮದ ಸರ್ವೆ 44ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ಜಂಗಲಿಯನ್ನು ಪ್ರವೇಶಿಸಿ ಸುಮಾರು 25 ಸರಪಣಿಗಳ ದೂರ ದಕ್ಷಿಣಕ್ಕೆ ಹೋಗಿ ದೇವಸ್ಥಾನಕ್ಕೆ ಸೇರುತ್ತದೆ.

II. ಈ ಕೆಳಗೆ ನಮೂದಿಸಲ್ಪಟ್ಟವುಗಳು ಆವರಣಗಳು ಎಂದು ಭಾವಿಸಲ್ಪಟ್ಟವೆ :—

(i) ನರಸಿಂಹಸ್ವಾಮಿಯ ದೇವಸ್ಥಾನ ಮತ್ತು ಅದರ ಮಂಟಪ, ಮತ್ತು ಅದರ ಸುತ್ತಲೂ ಅರ್ಧ ಎಕರೆ ವಿಸ್ತೀರ್ಣವುಳ್ಳ ಇಳಿದುಕೊಳ್ಳುವ ಸ್ಥಳವೂ ಸೇರಿ.

(ii) ಹನುಮಂತರಾಯನ ದೇವಸ್ಥಾನ, ಮತ್ತು ಅದರ ಸುತ್ತಲೂ ಅರ್ಧ ಎಕರೆ ವಿಸ್ತೀರ್ಣದ ಇಳಿದುಕೊಳ್ಳುವ ಸ್ಥಳವೂ ಸೇರಿ.

(iii) ಮರ್ಚನಹಳ್ಳಿ ಗ್ರಾಮದ ಸರ್ವೆ 83 ಮತ್ತು 84ನೆ ನಂಬರು ಜಮೀನುಗಳು. ಇವುಗಳಿಗೆ ಪ್ರವೇಶವು I (i)ನೆ ನಂಬರಿನ ದಾರಿ ಗುರ್ತಿನಲ್ಲಿ ತೋರಿಸಿ ಇದೆ.

III. ಈ ಕೆಳಗೆ ನಮೂದಿಸುವ ರಿಯಾಯತಿಗಳು ಅಂಗೀಕರಿಸಲ್ಪಟ್ಟವೆ :—

(i) ತರನತಿ ವಿಂಗಡಿಸದ ಮತ್ತು ಸರ್ಕಾರಕ್ಕೆ ಉಳಿಸಿಕೊಳ್ಳದೆ ಇರುವ ಜಾತಿಯ ಒಣಗಿ ಬಿದ್ದುಹೋಗಿ ಉಪಯೋಗಕ್ಕೆ ಬಾರದೆ ಇರುವ ಮರಗಳನ್ನು ಕಟ್ಟಿಗೆಗೋಸ್ಕರ ತಿಂಗಳು ಒಂದಕ್ಕೆ ಒಂದು ಕುಟುಂಬಕ್ಕೆ 5 ತಲೆಹೊರೆಯಂತೆ ಜೂನ್ ತಿಂಗಳಿಂದ ಸೆಪ್ಟಂಬರ್ ತಿಂಗಳು ವರಗೆ ಸಂಸ್ಥಾನ ಜಂಗಲಿಯಲ್ಲಿ ಜಂಗಲಿ ಅಧಿಕಾರಿಗಳು ತೋರಿಸುವ ಪ್ರದೇಶಗಳಿಂದ ಮುಫತ್ತಾಗಿ ತೆಗೆದುಕೊಂಡು ಹೋಗುವುದು.

(ii) ಶೇಕದಾರನಿಂದ ಸರ್ಟಿಫೈ ಮಾಡಲ್ಪಟ್ಟ ಮೇರೆಗೆ ಪ್ರತಿ ವರ್ಷವೂ ಮುಫತ್ತಾಗಿ ಮನೆಯ ಅಂಕಣ ಒಂದಕ್ಕೆ 5 ತಲೆಹೊರೆಯ ಮೇರೆಗೆ ಮನೆ ಹೊದಿಸುವ ಹುಲ್ಲು.

(iii) ದೇವಸ್ಥಾನದಲ್ಲಿ ಅಡಿಗೆ ಮಾಡುವುದಕ್ಕೋಸ್ಕರ, ತಾಲ್ಲೂಕು ಅಮಲ್ದಾರರು ಸರ್ಟಿಫೈ ಮಾಡುವಷ್ಟು (1ನೆ ನಂಬರ್ ರಿಯಾಯತಿಯಲ್ಲಿ ತೋರಿಸಿದ ಜಾತಿಯ ಮರದ) ಸೌದೆಯನ್ನು ಶ್ರಾವಣ ಮಾಸದಲ್ಲಿ ಭಕ್ತಾದಿಗಳಿಗೆ ಮುಫತ್ತಾಗಿ ಕೊಡಬೇಕು.

(iv) ಕುರಿ ಮತ್ತು ಮೇಕೆಗಳು ಹೊರತು ಬಾಕಿ ದನಗಳನ್ನು ಮಾಮೂಲು ದರದಲ್ಲಿ ಅರ್ಧ ಚಾರ್ಜು ಕೊಟ್ಟು ಮೇಯಿಸುವುದು. ಇದು ಈ ಕೆಳಗೆ ಹೇಳುವ ಗ್ರಾಮಗಳ ದನಗಳಿಗೆ ವರ್ಷವೆಲ್ಲಾ ಲಗಾವಾಗುತ್ತದೆ :—

		ಕುರಿ ಮೇಕೆ ವಿನಾ ಬಾಕಿ ದನಗಳು.
1.	ಬಿಲಕೆರೆ	229
2.	ಗೋವಿಂದಹಳ್ಳಿ	64
3.	ಕುರಣಗೆರೆ	220
4.	ಕುಕ್ಕೂರು	173

(i) ಮತ್ತು (ii)ನೆ ರಿಯಾಯಿತಿಗಳು ಬಿಲಕೆರೆ, ಗೋವಿಂದಹಳ್ಳಿ, ಕುರಣಗೆರೆ, ಕುಕ್ಕೂರು ಮತ್ತು ಮರ್ಚನಹಳ್ಳಿ ಗ್ರಾಮಗಳ ರೈತರಿಗೆ ಲಗಾವಾಗುತ್ತವೆ.

ತಾರೀಖು 19ನೆ ಡಿಸೆಂಬರ 1906.

ನಂ. 6156 ಫಾ. 116--06—3, 1900ನೆಯ ಇಸವಿಯ 11ನೆ ನಂಬರ್ ಮೈಸೂರು ಫಾರೆಸ್ಟ್ ರೆಗ್ಯುಲೇಷನಿನ 17ನೆ ಪ್ರಕರಣದ ವಿಧಿಗಳನ್ನು ಅನುಸರಿಸಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು, ಈ ಇಸ್ತಿಹಾರನಾಮೆಗೆ ಲಗತ್ತಾಗಿರುವ ಷಡ್ಯೂಲಿನಲ್ಲಿ ನಮೂದಿರುವ ಚಕ್ಕುಬಂದಿಯುಳ್ಳ ವಿಸ್ತೀರ್ಣವು 1907ನೆಯ ಇಸವಿಯ ಜನವರಿ ಗುರ್ರೆ ಲಾಗಾಯಿತು ಸ್ಟೇಟ್ ಫಾರೆಸ್ಟ್ ಯಾ ಸಂಸ್ಥಾನ ಜಂಗಲಿಯಾಗಿ ಏರ್ಪಡಿಸಲ್ಪಡುವುದೆಂದು ಪ್ರಕಟಿಸಲು ಹುಕುಂ ದಯಪಾಲಿಸಿರುತ್ತಾರೆ :—

ಡಿಸ್ಟ್ರಿಕ್ಟು	ತಾಲ್ಲೂಕು	ಜಂಗಲಿನ ಹೆಸರು	ವಿಸ್ತೀರ್ಣ ಎ॥	ಚಕ್ಕುಬಂದಿ
ತುಮಕೂರು	ಚಿಕ್ಕನಾಯಕನಹಳ್ಳಿ	ತಿರುಮಲಾಪುರ ಜಂಗಲಿನ ಎಕ್ಸ್ಟೆನ್ಷನ್	ಎಕರೆ 1389, ಗುಂಟೆ 9	ಉತ್ತರಕ್ಕೆ:—ಚಿತ್ರದುರ್ಗ ಡಿಸ್ಟ್ರಿಕ್ಟಿನ ತಿರುಮನಾಲ್ ಮತ್ತು ತುಮಕೂರು ಡಿಸ್ಟ್ರಿಕ್ಟಿನ ಮೇಲನಹಳ್ಳಿ ಮತ್ತು ಕೆಂಕೆರೆ ಗ್ರಾಮಗಳ ಮುಕ್ಕಪ್ಪೆ ಎಲ್ಲೆಯ ಬಾಂದುಗಳಿಂದ ಹೊರಟು, ಎಲ್ಲೆಯ ರೇಖೆಯು ಪೂರ್ವಕ್ಕೆ ಸದರಿ ತಿರುಮನಾಲ್ ಗ್ರಾಮದ ಎಲ್ಲೆಯಲ್ಲಿ ಮೇಲನಹಳ್ಳಿ ಗ್ರಾಮದ ಸರ್ವೆ 22ನೆ ನಂಬರಿನ ವಾಯುವ್ಯ ಮೂಲೆಯವರೆಗೆ ಹೋಗುತ್ತದೆ. ಪೂರ್ವಕ್ಕೆ:—ಅಲ್ಲಿಂದ ಮೇಲನಹಳ್ಳಿ ಗ್ರಾಮದ ಸರ್ವೆ 22 ಮತ್ತು 21ನೆ ನಂಬರುಗಳ ಮತ್ತು ಗುರುವಾಪುರದ ಗ್ರಾಮದ ಸರ್ವೆ 14, 15, 16, 10, 11, 12ನೆ ನಂಬರುಗಳ ಪಶ್ಚಿಮ ಎಲ್ಲೆಯನ್ನು ಅನುಸರಿಸಿ ಸೊಟ್ಟುಸೊಟ್ಟಾಗಿ ದಕ್ಷಿಣ, ಆಗ್ನೇಯ ಮತ್ತು ನೈಋತ್ಯ ದಿಕ್ಕುಗಳಿಗೆ ಕೊನೆಯಲ್ಲಿ ಹೇಳಿದ ಸರ್ವೆ ನಂಬರಿನ ವಾಯುವ್ಯಮೂಲೆಯ ವರೆಗೂ ಹೋಗುತ್ತದೆ.

ದಕ್ಷಿಣಕ್ಕೆ:—ಅಲ್ಲಿಂದ ಎಲ್ಲೆಯ ರೇಖೆ, ವಾಯುವ್ಯಕ್ಕಾಗಿ ಸೋಮನಹಳ್ಳಿ ಗ್ರಾಮದ ಸರ್ವೆ 43ನೆ ನಂಬರಿನ ಉತ್ತರ ಎಲ್ಲೆಯನ್ನು ಅನುಸರಿಸಿ ಸದರಿ ನಂಬರಿನ ವಾಯುವ್ಯ ಮೂಲೆಯವರೆಗೂ ಹೋಗುತ್ತದೆ. ಅಲ್ಲಿಂದ ದಕ್ಷಿಣಕ್ಕೆ ಸದರಿ ಸರ್ವೆ ನಂಬರಿನ ಪಶ್ಚಿಮದ ಎಲ್ಲೆಯನ್ನು ಅನುಸರಿಸಿ ಅದೇ ನಂಬರಿನ ನೈರುತ್ಯ ಮೂಲೆಯವರೆಗೂ ಹೋಗಿ, ಅಲ್ಲಿಂದ ವಾಯುವ್ಯಕ್ಕಾಗಿ ಕಂಪನಹಳ್ಳಿ ಗ್ರಾಮದ ಸರ್ವೆ 10ನೆ ನಂಬರಿನಲ್ಲಿ ನುಗ್ಗಿ ಸದರಿ ಕಂಪನಹಳ್ಳಿ ಮತ್ತು ಕುರಿಹಟ್ಟಿ ಗ್ರಾಮಗಳ ಎಲ್ಲೆಯಲ್ಲಿ ಒಂದು ಸ್ಥಳಕ್ಕೆ ಅಂದರೆ ಸದರಿ ಕಂಪನಹಳ್ಳಿ ಗ್ರಾಮದ ಸರ್ವೆ 10ನೆ ನಂಬರಿನ ವಾಯುವ್ಯ ಮೂಲೆಗೆ ಪೂರ್ವಕ್ಕೆ ಸುಮಾರು 5 ಫರ್ಲಾಂಗುಗಳ ದೂರದಲ್ಲಿ ಸೇರುತ್ತದೆ.

ಪಶ್ಚಿಮಕ್ಕೆ:—ಆ ಸ್ಥಳದಿಂದ ವಾಯುವ್ಯಕ್ಕೆ ಕುರಿಹಟ್ಟಿ ಗ್ರಾಮದ ಸರ್ವೆ 43ನೆ ನಂಬರಿನಲ್ಲಿ ನುಗ್ಗಿ ಸದರಿ ಗ್ರಾಮದ ಸರ್ವೆ 42ನೆ ನಂಬರಿನ ಈಶಾನ್ಯ ಮೂಲೆಯವರೆಗೂ ಹೋಗುತ್ತದೆ. ಅಲ್ಲಿಂದ ಈಶಾನ್ಯಕ್ಕೆ ಕೆಂಕೆರೆ ಗ್ರಾಮದ ಸರ್ವೆ 238ನೆ ನಂಬರಿನ ದಕ್ಷಿಣ ಎಲ್ಲೆಯನ್ನು ಅನುಸರಿಸಿ ಕೊನೆಯಲ್ಲಿ ಹೇಳಿದ ಸ್ಥಳದಿಂದ ಸುಮಾರು 2 ಫರ್ಲಾಂಗುಗಳ ದೂರ ಹೋಗುತ್ತದೆ. ಅಲ್ಲಿಂದ ಉತ್ತರಕ್ಕೂ ವಾಯುವ್ಯಕ್ಕೂ ಸದರಿ ಕೆಂಕೆರೆ ಗ್ರಾಮದ ಸರ್ವೆ 238 ಮತ್ತು 237ನೆ ನಂಬರುಗಳಲ್ಲಿ ನುಗ್ಗಿ ಅದೇ ಗ್ರಾಮದ ಸರ್ವೆ 236ನೆ ನಂಬರಿನ ದಕ್ಷಿಣ ಎಲ್ಲೆಯ ಮಧ್ಯಕ್ಕೆ ಹೋಗಿ, ಅಲ್ಲಿಂದ ಈಶಾನ್ಯಕ್ಕೆ ಸದರಿ 236ನೆ ಸರ್ವೆ ನಂಬರಿನ ದಕ್ಷಿಣ ಎಲ್ಲೆಯನ್ನು ಅನುಸರಿಸಿ ಹೊರಟ ಸ್ಥಳವನ್ನು ಸೇರುತ್ತದೆ.

ಷರಾಗಳು:—

ಈ ಕೆಳಗೆ ನಮೂದು ಇರುವ ದಾರಿಯ ಹಕ್ಕುಗಳು ಅಂಗೀಕರಿಸಲ್ಪಟ್ಟಿವೆ:—

(1) ಮೇಲನಹಳ್ಳಿಯಿಂದ ಹುಳಿಯಾರಕ್ಕೆ ಹೋಗುವ ಕಾಲುದಾರಿ, 6 ಅಡಿಗಳ ಅಗಲ, ಜನಗಳ ಸಂಚಾರಕ್ಕೆ ಮಾತ್ರ. ಇದು ಗುರುವಾಪುರ ಗ್ರಾಮದ ಸರ್ವೆ 13ನೆ ನಂಬರಿನಲ್ಲಿ ಜಂಗಲನ್ನು ಪ್ರವೇಶಿಸಿ ನೈರುತ್ಯದಿಕ್ಕಿಗೆ ಹೋಗಿ ಕುರಿಹಟ್ಟಿ ಗ್ರಾಮದ ಸರ್ವೆ 43ನೆ ನಂಬರಿನಲ್ಲಿ ಜಂಗಲನ್ನು ಬಿಡುತ್ತದೆ.

(2) ಕೆಂಕೆರೆಯಿಂದ ಸರ್ವೆ 238ನೆ ನಂಬರಿನಲ್ಲಿರುವ ಕಲ್ಲೂರಪ್ಪನಗುಡಿಗೆ ಹೋಗುವ ಕಾಲುದಾರಿ, 6 ಅಡಿ ಅಗಲ, ಜನಗಳ ಸಂಚಾರಕ್ಕೆ ಮಾತ್ರ. ಇದು ಸದರಿ ಸರ್ವೆ ನಂಬರಿನಲ್ಲಿ ಜಂಗಲನ್ನು ಪ್ರವೇಶಿಸಿ ಪೂರ್ವಕ್ಕೆ ಸದರಿ ದೇವಸ್ಥಾನಕ್ಕೆ ಹೋಗುತ್ತದೆ.

(3) ಕೆಂಕೆರೆಯಿಂದ ಚನ್ನಬಸವೇಶ್ವರ ಗವಿಗೆ ಸರ್ವೆ 237ನೆ ನಂಬರಿನಲ್ಲಿ ಹೋಗುವ ಕಾಲುದಾರಿ, 6 ಅಡಿಗಳ ಅಗಲ, ಜನಗಳ ಸಂಚಾರಕ್ಕೆ ಮಾತ್ರ. ಇದು ಸರ್ವೆ 237ನೆ ನಂಬರಿನಲ್ಲಿ ಜಂಗಲನ್ನು ಪ್ರವೇಶಿಸಿ ಪೂರ್ವಕ್ಕೆ ದೇವಸ್ಥಾನಕ್ಕೆ ಹೋಗುತ್ತದೆ.

(4) ಮೇಲನಹಳ್ಳಿಯಿಂದ ಚನ್ನಬಸವೇಶ್ವರನ ಗವಿಗೆ ಹೋಗುವ ಕಾಲುದಾರಿ, 9 ಅಡಿಗಳ ಅಗಲ, ಜನರ ಸಂಚಾರಕ್ಕೆ ಮಾತ್ರ. ಇದು ಮೇಲನಹಳ್ಳಿ ಗ್ರಾಮದ ಸರ್ವೆ 20ನೆ ನಂಬರಿನಲ್ಲಿ ಜಂಗಲನ್ನು ಪ್ರವೇಶಿಸಿ ವಾಯುವ್ಯದಿಕ್ಕಿಗೆ ಸದರಿ ಗುಡಿಗೆ ಹೋಗುತ್ತದೆ.

ತಾರೀಖು 20ನೆ ಡಿಸೆಂಬರ್ 1906.

ನಂ. ಆರ್. 6180—ಫಾ. 15-06—9, ಸನ್ 1900ನೆ ವರ್ಷದ 11ನೆ ನಂಬರಿನ ಮೈಸೂರು ಜಂಗಲಿ ರೆಗ್ಯುಲೇಷನಿನ 17ನೆ ಪ್ರಕರಣದ ನಿಯಮಗಳ ಮೇರೆಗೆ, ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು, ಈ ಇಸ್ತಿಹಾರ್ನಾಮೆಗೆ ಲಗತ್ತಿರುವ ಷೆಡ್ಯೂಲಿನಲ್ಲಿ ತೋರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು, ಸದರಿ ಇಸ್ತಿಹಾರ್ನಾಮೆಯ ಕೆಳಗೆ ವಿವರಿಸಿರುವ ಹಕ್ಕುಗಳ ಚಲಾವಣೆಗೆ ಒಳಪಟ್ಟು, 1907ನೆ ಇಸವಿಯ ಜನವರಿ ಗುರ್ರೆ ಲಾಗಾಯಿತು, "ಸಂಸ್ಥಾನದ ಜಂಗಲಿ" ಎಂದು ಎಣಿಸಲ್ಪಡುವುದೆಂದು ಪ್ರಕಟಿಸಲು ಹುಕ್ಕುಂ ದಯಪಾಲಿಸಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕುಗಳು.	ಸುಮಾರು ವಿಸ್ತೀರ್ಣ.	ಶಾಖೆ ಹೆಸರು.	ಚತುರ್ಸೀಮೆಗಳು.
[illegible]	ನಂಜನಗೂಡು ಮತ್ತು ಹೆಗ್ಗಡದೇವನಕೋಟೆ.	14.27 ಚದರ ಮೈಲಿಗಳು.	ನಾಗಣಾಪುರ ಶಾಖೆ II.	ಉತ್ತರಕ್ಕೆ:—ಮೇರೆಯ ರೇಖೆಯು ಹೆಡಿಯಾಲ ಗ್ರಾಮದ ಸರ್ವೆ 35, 36 ಮತ್ತು 125ನೆ ನಂಬರುಗಳ ಮುಕ್ಕಪ್ಪೆ ಬಾಂದುಗಳಿಂದ ಹೊರಟು ಮಾಧವನಹಳ್ಳಿಗೂ ಮತ್ತು ಹೆಡಿಯಾಲ ಗ್ರಾಮಕ್ಕೂ ನಡುವೆ ಇರುವ ಮೇರೆಯ ರೇಖೆಯು ಕೂಡ ಆಗ್ನೇಯಕ್ಕೆ ಹೆಡಿಯಾಲ, ಮಾಧವನಹಳ್ಳಿ ಮತ್ತು ಅಮಕಹಳ್ಳಿ ಗ್ರಾಮಗಳ ಮುಕ್ಕಪ್ಪೆ ಬಾಂದುಗಳಿಗೆ ಹೋಗುತ್ತದೆ; ಅಲ್ಲಿಂದ ದಕ್ಷಿಣಕ್ಕೆ ಹೊರಟು ನಾಗಣಾಪುರದ ಸರ್ವೆ 52 ಮತ್ತು 123ನೆ ನಂಬರುಗಳಲ್ಲಿ ನುಗ್ಗಿ ಸುಮಾರು 68 ಸರಪಣಿಗಳ ದೂರ ಹೋಗಿ ಅಲ್ಲಿ ಹಾದನೂರು-ಮಲ್ಲೇಶಪುರದ ಗಾಡಿ ದಾರಿಯನ್ನು ದಾಟಿ ಆಗ್ನೇಯಕ್ಕೆ ನಾಗಣಾಪುರದ ಸರ್ವೆ 123 ಮತ್ತು 129ನೆ ನಂಬರುಗಳಲ್ಲಿ ನುಗ್ಗಿ ಸುಮಾರು 108 ಸರಪಣಿಗಳ ದೂರ ಹೋಗಿ ಸರ್ವೆ 91ನೆ ನಂಬರಿನ ನೈರುತ್ಯ ಮೂಲೆಗೆ ಸೇರುತ್ತದೆ; ಅಲ್ಲಿಂದ ಸರ್ವೆ 89ನೆ ನಂಬರಿನ ಮುಖಾಂತರ ಸುಮಾರು 25 ಸರಪಣಿಗಳ ದೂರ ಹೋಗಿ ಅಲ್ಲಿಂದ ಪೂರ್ವಕ್ಕೆ ಅದೇ ಸರ್ವೆ ನಂಬರಿನಲ್ಲಿ ಸು

ಮಾರು 20 ಸರಪಣಿಗಳ ದೂರವೂ ಆಗ್ನೇಯಕ್ಕೆ ಅದೇ ಸರ್ವೆ ನಂಬರಿನಲ್ಲಿ ಸುಮಾರು 25 ಸರಪಣಿಗಳ ದೂರವೂ ಹೋಗಿ, ಅಲ್ಲಿಂದ ಉತ್ತರಕ್ಕೆ ಆ ಸರ್ವೆ ನಂಬರಿನ ಪೂರ್ವಮೇರೆಯಲ್ಲಿ ಸುಮಾರು 17 ಸರಪಣಿಗಳ ದೂರದಲ್ಲಿ ಅದರ ಈಶಾನ್ಯಮೂಲೆಯಿಂದ ದಕ್ಷಿಣಕ್ಕೆ ಸುಮಾರು 50 ಸರಪಣಿ ದೂರದಲ್ಲಿರುವ ಒಂದು ಸ್ಥಳಕ್ಕೆ ಹೋಗುತ್ತದೆ; ಅಲ್ಲಿಂದ ಈಶಾನ್ಯಕ್ಕಾಗಿ ಸರ್ವೆ 24 ಮತ್ತು 21ನೆ ನಂಬರುಗಳ ಮುಖಾಂತರ ಸುಮಾರು 81 ಸರಪಣಿಗಳ ದೂರ ಹೋಗಿ, ಸರ್ವೆ 19ನೆ ನಂಬರಿನ ಆಗ್ನೇಯ ಮೂಲೆಯಿಂದ ಪೂರ್ವಕ್ಕೆ ಸುಮಾರು 37 ಸರಪಣಿಗಳ ದೂರದಲ್ಲಿರುವ ಒಂದು ಸ್ಥಳಕ್ಕೆ ಸೇರುತ್ತದೆ; ಅಲ್ಲಿಂದ ವಾಯುವ್ಯಕ್ಕಾಗಿ ಸರ್ವೆ 20ನೆ ನಂಬರಿನಲ್ಲಿ ನುಗ್ಗಿ ಸುಮಾರು 62 ಸರಪಣಿಗಳ ದೂರದಲ್ಲಿ, ಹೊಸವೀಡು, ನಾಗಣಾಪುರ ಮತ್ತು ದೇವರಾಯಶೆಟ್ಟಿಪುರಗ್ರಾಮಗಳ ಮುಕ್ಕೂಪ್ಪೆ ಬಾಂದುಗಳಿಂದ ಆಗ್ನೇಯಕ್ಕೆ ಸುಮಾರು 30 ಸರಪಣಿಗಳ ದೂರದಲ್ಲಿರುವ, ದೇವರಾಯಶೆಟ್ಟಿಪುರದ ಸರ್ವೆ 117ನೆ ನಂಬರಿನ ದಕ್ಷಿಣಮೇರೆಯಲ್ಲಿ ಒಂದು ಸ್ಥಳಕ್ಕೆ ಹೋಗುತ್ತದೆ; ಅಲ್ಲಿಂದ ಉತ್ತರಕ್ಕೆ ಸದರಿ 116ನೆ ನಂಬರಿನಲ್ಲಿ ನುಗ್ಗಿ ಸುಮಾರು 42 ಸರಪಣಿಗಳ ದೂರದಲ್ಲಿರುವ ಜಂಗಲಿ ಮೇರೆಯ ಗುರ್ತಿಗೆ ಸೇರುತ್ತದೆ; ಅಲ್ಲಿಂದ ಪೂರ್ವಕ್ಕೆ ತಿರುಗಿ ಸರ್ವೆ 116 ಮತ್ತು 115ನೆ ನಂಬರುಗಳಲ್ಲಿ ನುಗ್ಗಿ ಸುಮಾರು 96 ಸರಪಣಿಗಳ ದೂರ ಹೋಗಿ ಕೊತ್ತನಹಳ್ಳಿ ಗ್ರಾಮದ ಪಶ್ಚಿಮ ಮೇರೆಯಲ್ಲಿರುವ ಒಂದು ಸ್ಥಳವನ್ನು ಸರ್ವೆ 9ನೆ ನಂಬರಿನ ವಾಯುವ್ಯ ಮೂಲೆಯಿಂದ ಸುಮಾರು 30 ಸರಪಣಿಗಳ ದೂರದಲ್ಲಿ ಸೇರುತ್ತದೆ; ಅಲ್ಲಿಂದ ಈಶಾನ್ಯಕ್ಕೆ ಸರ್ವೆ 9ನೆ ನಂಬರಿನ ಮುಖಾಂತರ ಸುಮಾರು 87 ಸರಪಣಿಗಳ ದೂರದಲ್ಲಿ ಸದರಿ ಸರ್ವೆ ನಂಬರಿನ ಪೂರ್ವಮೇರೆಯಲ್ಲಿ ಒಂದು ಸ್ಥಳವನ್ನು ಆ ಸರ್ವೆ ನಂಬರಿನ ಈಶಾನ್ಯ ಮೂಲೆಯಿಂದ ಆಗ್ನೇಯಕ್ಕೆ ಸುಮಾರು 40 ಸರಪಣಿಗಳ ದೂರದಲ್ಲಿ ಸೇರುತ್ತದೆ.

ಪೂರ್ವಕ್ಕೆ:—ಅಲ್ಲಿಂದ ನೈರುತ್ಯಕ್ಕೆ ಕೊತ್ತನಹಳ್ಳಿ ಮತ್ತು ಕೋಟಿಕೆರೆ ಗ್ರಾಮಗಳಿಗೆ ನಡುವೆ ಇರುವ ಸರಹದ್ದಿನಲ್ಲಿ ಕೋಟಿಕೆರೆ, ಕೊತ್ತನಹಳ್ಳಿ ಮತ್ತು ಮಂಚಹಳ್ಳಿ, ಗ್ರಾಮಗಳ ಮುಕ್ಕೂಪ್ಪೆಗೆ ಹೋಗುತ್ತದೆ; ಅಲ್ಲಿಂದ ಮಂಚಹಳ್ಳಿ, ಕೊತ್ತನಹಳ್ಳಿ ಮತ್ತು ನಾಗಣಾಪುರಗ್ರಾಮಗಳ ಸರಹದ್ದಿನಲ್ಲಿ ನಾಗಣಾಪುರ, ಮಂಚಹಳ್ಳಿ ಮತ್ತು ಆಲತ್ತೂರು ಗ್ರಾಮಗಳ ಮುಕ್ಕೂಪ್ಪೆಗೆ ಹೋಗಿ, ಅಲ್ಲಿಂದ ದಕ್ಷಿಣಕ್ಕೆ ಆಲತ್ತೂರು ಮತ್ತು ನಾಗಣಾಪುರಗ್ರಾಮಗಳ ಎಲ್ಲೆಯೊಂದಿಗೆ ಆಲತ್ತೂರು ಮತ್ತು ನಾಗಣಾಪುರ ಗ್ರಾಮಗಳ ಮತ್ತು ಬೇರಂಬಾಡಿ ಡಿಸ್ಟ್ರಿಕ್ಟ್ ಜಂಗಲಿಯ ಮುಕ್ಕೂಪ್ಪೆಗೆ ಹೋಗುತ್ತದೆ.

ದಕ್ಷಿಣಕ್ಕೆ:—ಅಲ್ಲಿಂದ ವಾಯುವ್ಯಕ್ಕೆ ನಾಗಣಾಪುರಕ್ಕೂ ಮತ್ತು ಬೇರಂಬಾಡಿ ಡಿಸ್ಟ್ರಿಕ್ಟ್ ಜಂಗಲಿಗೂ ಮಧ್ಯೆ ಇರುವ ಎಲ್ಲೆಯೊಂದಿಗೆ ಬೇರಂಬಾಡಿ ಡಿಸ್ಟ್ರಿಕ್ಟ್ ಜಂಗಲಿ, ನಾಗಣಾಪುರ ಮತ್ತು ಬೇರಂಬಾಡಿ ಸ್ಟೇಟ್ ಫಾರೆಸ್ಟ್ ಯಾ ಸಂಸ್ಥಾನ ಜಂಗಲಿಯ ಮುಕ್ಕೂಪ್ಪೆಗೆ ಹೋಗಿ; ಅಲ್ಲಿಂದ ನೈರುತ್ಯ, ಪಶ್ಚಿಮ ಮತ್ತು ನೈರುತ್ಯಕ್ಕೆ ನಾಗಣಾಪುರಕ್ಕೂ ಮತ್ತು ಬೇರಂಬಾಡಿ ಸಂಸ್ಥಾನ ಜಂಗಲಿಗೂ ಮಧ್ಯೆ ಇರುವ ಎಲ್ಲೆಯೊಂದಿಗೆ, ಬೇರಂಬಾಡಿ ಸಂಸ್ಥಾನ ಜಂಗಲಿ, ಮಾರಭುಕ್ತನಪುರ, ಇವುಗಳ ಮುಕ್ಕೂಪ್ಪೆಗೆ ಸೇರುತ್ತದೆ.

ಪಶ್ಚಿಮಕ್ಕೆ:—ಅಲ್ಲಿಂದ ಉತ್ತರಕ್ಕೆ ನಾಗಣಾಪುರಕ್ಕೂ ಮತ್ತು ಮಾರಭುಕ್ತನಪುರಕ್ಕೂ ನಡುವೆ ಇರುವ ಸರಹದ್ದಿನೊಂದಿಗೆ, ಮಾರಭುಕ್ತನಪುರ, ನಾಗಣಾಪುರ ಮತ್ತು ಬಂಕಹಳ್ಳಿಗಳ ಮುಕ್ಕೂಪ್ಪೆಗೆ ಸೇರಿ; ಅಲ್ಲಿಂದ ಪಶ್ಚಿಮಕ್ಕೆ ಬಂಕಹಳ್ಳಿಗೂ ಮಾರಭುಕ್ತನಪುರಕ್ಕೂ ನಡುವೆ ಇರುವ ಎಲ್ಲೆಯೊಂದಿಗೆ ಬಂಕಹಳ್ಳಿ ಗ್ರಾಮದ ಸರ್ವೆ 51ನೆ ನಂಬರಿನ ಆಗ್ನೇಯಮೂಲೆಗೆ ಹೋಗಿ; ಅಲ್ಲಿಂದ ಈಶಾನ್ಯಕ್ಕೆ ಸರ್ವೆ 51ನೆ ನಂಬರಿನ ಪೂರ್ವ ಮೇರೆಯೊಂದಿಗೆ ಅದರ ಈಶಾನ್ಯ ಮೂಲೆಗೆ ಹೋಗಿ; ಅಲ್ಲಿಂದ ನಾಗಣಾಪುರಕ್ಕೂ ಹಾದನೂರು ಗ್ರಾಮಕ್ಕೂ ಮಧ್ಯೆ ಇರುವ ಸರಹದ್ದಿನೊಂದಿಗೆ ಸದರಿ ಗ್ರಾಮಗಳ ಮತ್ತು ಹದನೂರು ವಡೇರಪುರದ ಮುಕ್ಕೂಪ್ಪೆಗೆ (ನಾಗಣಾಪುರ ಗ್ರಾಮದ ಸರ್ವೆ 133 ನಂಬರಿನ ನೈರುತ್ಯ ಮೂಲೆಗೆ) ಹೋಗಿ; ಅಲ್ಲಿಂದ ಉತ್ತರಕೆ ನಾಗಣಾಪುರ ಗ್ರಾಮದ ಸರ್ವೆ 133, 137 ಮತ್ತು 132ನೆ ನಂಬರುಗಳ ಮುಖಾಂತರ ಸುಮಾರು 100 ಸರಪಣಿಗಳ ದೂರದಲ್ಲಿ ಹೆಡಿಯಾಲ ಗ್ರಾಮದ ಸರ್ವೆ 37ನೆ ನಂಬರಿನ ಆಗ್ನೇಯಮೂಲೆಗೆ ಹೋಗಿ; ಅಲ್ಲಿಂದ ಉತ್ತರಕ್ಕೆ ಅದರ ಪೂರ್ವ ಮೇರೆಯೊಂದಿಗೆ ಸರ್ವೆ 36ನೆ ನಂಬರಿನ ನೈರುತ್ಯ ಮೂಲೆಗೆ ಹೋಗಿ; ಅಲ್ಲಿಂದ ಈಶಾನ್ಯಕ್ಕೆ ಆ ಸರ್ವೆ ನಂಬರಿನ ದಕ್ಷಿಣಭಾಗದೊಂದಿಗೆ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

A. ಷರಾಗಳು—

ಈ ತಾಕಿನೊಳಗೆ ಈ ಕೆಳಗೆ ನಮೂದಿಸುವ ದಾರಿ ಮತ್ತು ನೀರಿಗೆ ಇರುವ ಹಕ್ಕುಗಳನ್ನು ಮಂಜೂರ್ಮಾಡಿರುತ್ತದೆ:—

(i) ಕೊತ್ತನಹಳ್ಳಿಯಿಂದ ಬೇರಂಬಾಡಿ ಸಂಸ್ಥಾನ ಜಂಗಲಿಯಲ್ಲಿರುವ ಕಸ್ತಲಮಾರಿ ಗುಡಿಗೆ ಹೋಗುವ ಕಾಲುದಾರಿಯು ಈ ಕೆಳಗೆ ನಮೂದಿಸುವ (ii) ನೆ ಕಾಲುದಾರಿಯಿಂದ ಅಂಗೀಕರಿಸಲ್ಪಟ್ಟಿದೆ.

(ii) ದೇವರಾಯಶೆಟ್ಟಿಪುರದಿಂದ ಬೇರಂಬಾಡಿ ಸಂಸ್ಥಾನ ಜಂಗಲಿಯಲ್ಲಿರುವ ಕಸ್ತಲಮಾರಿ ಗುಡಿಗೆ ಹೋಗುವ ಕಾಲುದಾರಿ, 8 ಅಡಿಗಳ ಅಗಲ, ಪ್ರತಿ ವರ್ಷದ ಜೇಷ್ಠ ಶುದ್ಧದಲ್ಲಿ ಜನಗಳ ಮತ್ತು ದನಗಳ ಸಂಚಾರಕ್ಕೆ ಮಾತ್ರ ಬಿಟ್ಟಿದೆ. ಇದು ದೇವರಾಯಶೆಟ್ಟಿಪುರ ಗ್ರಾಮದ ಸರ್ವೆ 115ನೆ ನಂಬರಿನ ಪಶ್ಚಿಮ ಸರಹದ್ದಿನಲ್ಲಿ ಒಂದು ಸ್ಥಳದಲ್ಲಿ, ಅದರ ವಾಯುವ್ಯ ಮೂಲೆಯಿಂದ ದಕ್ಷಿಣಕ್ಕೆ ಸುಮಾರು 40 ಸರಪಣಿಗಳ ದೂರದಲ್ಲಿ, ಸಂಸ್ಥಾನ ಜಂಗಲಿಯನ್ನು ಪ್ರವೇಶಿಸುತ್ತದೆ, ಮತ್ತು ದಕ್ಷಿಣಕ್ಕೆ ದೇವರಾಯಶೆಟ್ಟಿಪುರದ ಸರ್ವೆ 115 ಮತ್ತು 116ನೆ ನಂಬರುಗಳ ಮತ್ತು ನಾಗಣಾಪುರದ ಸರ್ವೆ 20, 21 ಮತ್ತು 23ನೆ ನಂಬರುಗಳ ಮುಖಾಂತರ ಸುಮಾರು 270 ಸರಪಣಿಗಳ ದೂರ ಹೋಗಿ, ಬೇರಂಬಾಡಿ ಸಂಸ್ಥಾನ ಮತ್ತು ಡಿಸ್ಟ್ರಿಕ್ಟ್ ಜಂಗಲಿಗಳ ಮತ್ತು ನಾಗಣಾಪುರಗ್ರಾಮದ ಮುಕ್ಕೂಪ್ಪೆಯಿಂದ ಆಗ್ನೇಯಕ್ಕೆ ಸುಮಾರು 20 ಸರಪಣಿಗಳ ದೂರದಲ್ಲಿ, ಜಂಗಲಿಯ ದಕ್ಷಿಣಮೇರೆಯ ಒಂದು ಸ್ಥಳದಲ್ಲಿ ಜಂಗಲಿಯನ್ನು ಬಿಡುತ್ತದೆ.

(iii) ನಾಗಣಾಪುರದಿಂದ ಸರ್ವೆ 134ನೆ ನಂಬರಿನಲ್ಲಿ ನಂಜೆದೇವರ ಗವಿಗೆ ಹೋಗುವ ಕಾಲುದಾರಿ, 8 ಅಡಿ ಅಗಲ, ವರ್ಷವೆಲ್ಲಾ ದನಗಳಿಗೂ ಜನಗಳಿಗೂ ಸಂಚಾರಕ್ಕಾಗಿ ಬಿಟ್ಟದೆ. ಇದು ನಾಗಣಾಪುರದ ಸರ್ವೆ 123ನೆ ನಂಬರಿನಲ್ಲಿ ಜಂಗಲಿಮೇರೆಯ 4ನೆ ನಂಬರು ಗುರುತಿನಿಂದ ಸುಮಾರು 35 ಸರಪಣಿಗಳ ದೂರದಲ್ಲಿ ಒಂದು ಸ್ಥಳದಲ್ಲಿ ಜಂಗಲಿಯ ಪಶ್ಚಿಮ ಮೇರೆಯಲ್ಲಿ ಜಂಗಲಿಯನ್ನು ಪ್ರವೇಶಿಸಿ, ಸುಮಾರು 140 ಸರಪಣಿಗಳ ದೂರ ಸರ್ವೆ 123, 129 ಮತ್ತು 134ನೆ ನಂಬರುಗಳ ಮುಖಾಂತರ ಆಗ್ನೇಯಕ್ಕೆ ಹೋಗುತ್ತದೆ.

(iv) ನಾಗಣಾಪುರದಿಂದ ಮಳ್ಳೂರು ಸಂತೆಗೆ ಹೋಗುವ ಸಂತೆಯ ದಾರಿ, 15 ಅಡಿಗಳ ಅಗಲ, ವಾರದ ಪ್ರತಿ ಗುರುವಾರ ಶುಕ್ರವಾರಗಳಲ್ಲಿ ಜನಗಳ, ದನಗಳ ಮತ್ತು ಗಾಡಿಗಳ ಸಂಚಾರಕ್ಕಾಗಿ ಬಿಟ್ಟಿರತಕ್ಕದ್ದು. ಇದು ಜಂಗಲಿಯ ಉತ್ತರ ಮೇರೆಯಲ್ಲಿ ನಾಗಣಾಪುರದ ಸರ್ವೆ 52ನೆ ನಂಬರಿನಲ್ಲಿ ಜಂಗಲಿಯ 4ನೆ ಗುರುತಿನಿಂದ ಉತ್ತರಕ್ಕೆ ಸುಮಾರು 22 ಸರಪಣಿಗಳ ದೂರದಲ್ಲಿನ ಒಂದು ಸ್ಥಳದಲ್ಲಿ ಜಂಗಲಿಯನ್ನು ಪ್ರವೇಶಿಸಿ, ನಾಗಣಾಪುರಗ್ರಾಮದ ಸರ್ವೆ 52ನೆ ಮತ್ತು ಹೆಡಿಯಾಲಗ್ರಾಮದ ಸರ್ವೆ 125ನೆ ನಂಬರುಗಳಲ್ಲಿ ನುಗ್ಗಿ ವಾಯವ್ಯಕ್ಕೆ ಸುಮಾರು 120 ಸರಪಣಿಗಳ ದೂರ ಹೋಗಿ ಹೆಡಿಯಾಲ ಗ್ರಾಮದ ಸರ್ವೆ 36ನೆ ನಂಬರಿನ ದಕ್ಷಿಣ ಮೇರೆಯಲ್ಲಿ ಅದರ ನೈರುತ್ಯ ಮೂಲೆಯಿಂದ ಈಶಾನ್ಯಕ್ಕೆ ಸುಮಾರು 10 ಸರಪಣಿಗಳ, ದೂರದಲ್ಲಿ ಜಂಗಲಿಯನ್ನು ಬಿಡುತ್ತದೆ.

(v) ನಾಗಣಾಪುರದಿಂದ ಬೆಳದಕುಪ್ಪೆ ಮಹದೇಶ್ವರ ದೇವಸ್ಥಾನಕ್ಕೆ ಹೋಗುವ ಬಂಡಿಯ ದಾರಿ, 15 ಅಡಿಗಳ ಅಗಲ, ದನಗಳ, ಜನಗಳ ಮತ್ತು ಬಂಡಿಗಳ ಸಂಚಾರಕ್ಕಾಗಿ ವರ್ಷವೆಲ್ಲಾ ಬಿಟ್ಟಿರತಕ್ಕದ್ದು. ಇದು ಜಂಗಲಿಯ ಉತ್ತರ ಮೇರೆಯಲ್ಲಿ ನಾಗಣಾಪುರಗ್ರಾಮದ ಸರ್ವೆ 129ನೆ ನಂಬರಿನಲ್ಲಿ 4ನೆ ಸ್ಟೇಷನಿನಿಂದ ದಕ್ಷಿಣಕ್ಕೆ ಸುಮಾರು 66 ಸರಪಣಿಗಳ ದೂರದಲ್ಲಿರುವ ಒಂದು ಸ್ಥಳದಲ್ಲಿ ಜಂಗಲಿಯನ್ನು ಪ್ರವೇಶಿಸಿ, ನೈರುತ್ಯಕ್ಕೆ ಸರ್ವೆ 129, 131, 130, 135 ಮತ್ತು 136ನೆ ನಂಬರುಗಳಲ್ಲಿ ನುಗ್ಗಿ ಸುಮಾರು 290 ಸರಪಣಿಗಳ ದೂರ ಹೋಗಿ, ಬೇರಂಬಾಡಿ ಸಂಸ್ಥಾನ ಜಂಗಲಿ, ಮಾರಭುಕ್ತನಪುರ ಮತ್ತು ನಾಗಣಾಪುರ ಗ್ರಾಮಗಳ ಮುಕ್ಕಪ್ಪೆಯಲ್ಲಿ ಜಂಗಲಿಯನ್ನು ಬಿಡುತ್ತದೆ.

(vi) ನಾಗಣಾಪುರದಿಂದ ಕಸ್ತಲ್ಲವಾರಿ ಗುಡಿಗೆ ಹೋಗುವ ಗಾಡಿಯ ದಾರಿ, 15 ಅಡಿಗಳ ಅಗಲ, ವರ್ಷವೆಲ್ಲಾ ಜನಗಳ, ದನಗಳ ಮತ್ತು ಗಾಡಿಗಳ ಸಂಚಾರಕ್ಕಾಗಿ ಬಿಟ್ಟಿರತಕ್ಕದ್ದು. ಜಂಗಲಿಯ ಉತ್ತರ ಮೇರೆಯಲ್ಲಿ ನಾಗಣಾಪುರ ಗ್ರಾಮದ ಸರ್ವೆ 89ನೆ ನಂಬರಿನಲ್ಲಿ 3ನೆ ನಂಬರ್ ಸ್ಟೇಷನಿನಿಂದ ಪೂರ್ವಕ್ಕೆ ಸುಮಾರು 8 ಸರಪಣಿಗಳ ದೂರದಲ್ಲಿರುವ ಒಂದು ಸ್ಥಳದಲ್ಲಿ ಈ ದಾರಿಯು ಜಂಗಲಿಯನ್ನು ಪ್ರವೇಶಿಸಿ, ಸರ್ವೆ 89 ಮತ್ತು 90ನೆ ನಂಬರುಗಳಲ್ಲಿ ನುಗ್ಗಿ ಸುಮಾರು 95 ಸರಪಣಿಗಳದೂರ ದಕ್ಷಿಣಕ್ಕೆ ಹೋಗಿ, ಜಂಗಲಿಯ ದಕ್ಷಿಣಮೇರೆಯಲ್ಲಿ ಒಂದು ಸ್ಥಳದಲ್ಲಿ, ಬೇರಂಬಾಡಿ ಡಿಸ್ಟ್ರಿಕ್ಟ್ ಮತ್ತು ಸಂಸ್ಥಾನ ಜಂಗಲಿಗಳ ಮತ್ತು ನಾಗಣಾಪುರ ಗ್ರಾಮದ ಮುಕ್ಕಪ್ಪೆಯಿಂದ ನೈರುತ್ಯ ಸುಮಾರು 25 ಸರಪಣಿಗಳ ದೂರದಲ್ಲಿ ಜಂಗಲಿಯನ್ನು ಬಿಡುತ್ತದೆ.

(vii) ನಾಗಣಾಪುರದಿಂದ ನಾಗಣಾಪುರಗ್ರಾಮದ ಸರ್ವೆ 89ನೆ ನಂಬರಿನಲ್ಲಿ ಚುಜ್ಜಿಲೀಪುರಕಟ್ಟೆಗೆ ಹೋಗುವ ಗಾಡಿಯದಾರಿ, 5 ಅಡಿಗಳ ಅಗಲ, ವರ್ಷವೆಲ್ಲಾ ಜನಗಳ ಮತ್ತು ದನಗಳ ಸಂಚಾರಕ್ಕಾಗಿ ಬಿಟ್ಟಿರತಕ್ಕದ್ದು ಇದು ಜಂಗಲಿಯ ಉತ್ತರ ಮೇರೆಯಲ್ಲಿ ಸರ್ವೆ 89ನೆ ನಂಬರಿನಲ್ಲಿ 2ನೆ ಸ್ಟೇಷನಿನಿಂದ ಪಶ್ಚಿಮಕ್ಕೆ 10 ಸರಪಣಿಗಳ ದೂರದಲ್ಲಿರುವ ಒಂದು ಸ್ಥಳದಲ್ಲಿ ಜಂಗಲಿಯನ್ನು ಪ್ರವೇಶಿಸಿ ದಕ್ಷಿಣಕ್ಕೆ 35 ಸರಪಣಿಗಳ ದೂರ ಕಟ್ಟೆಗೆ ಹೋಗುತ್ತದೆ.

ಬಮೋಜಿಬ್ ಹುಕುಂ,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ವ ರವಿನ್ಯೂ ಇಲಾಖೆಗಳ ಗವರ್ನ್ಮೆಂಟ್ ಸೆಕ್ರೆಟರಿ.

ರೈಲ್ವೆ ಇಲಾಖೆ.

ನಂ. 302, ತಾರೀಖು 13ನೆ ಡಿಸೆಂಬರ್ 1906.

ಮೈಸೂರು ಶ್ರೀಮನ್ಮಹಾರಾಜ ಸರಕಾರದವರು ಮತ್ತು ಶಿವಮೊಗ್ಗಾ ಮುನಿಸಿಪಲ್ ಬೋರ್ಡಿನವರ ಇರಾದೆಯನ್ನು ಪಡರು 1906ನೆ ಇಸವಿ IIನೆ ಮೈಸೂರು ಟ್ರಾಂವೆಗಳ ರೆಗ್ಯುಲೇಷನ್ 4ನೆ ಪ್ರಕರಣವನ್ನನುಸರಿಸಿ ಕುಂಸಿಯಿಂದ ಶಿವಮೊಗ್ಗಾ ರೈಲ್ವೆ ಸ್ಟೇಷನ್ ವರಿಗೆ ಬಾಟಾಮಾರ್ಗದ ಪಕ್ಕದಲ್ಲಿ ಉದ್ದಕ್ಕು ಎತ್ತುಗಳು ಅಥವಾ ಕುದುರೆಗಳಿರದ ಯಳೆಯಲ್ಪಡುವ ಮಾನೋರೇಲ್ ಟ್ರಾಮುಲೈನನ್ನ ಹಂಗಾಮಿಯಾಗಿ ಹಾಕಿಕೊಳ್ಳಲು ಮಂಜೂರಿ ಹುಕ್ಕುಂ ಬಗ್ಯೆ ಬೆಂಗಳೂರು ಇಂಗ್ಲೀಷು ವೇರಹೌಸ್ ಜನರಲ್ ಮರಚೆಂಟು ಮತ್ತು ಬ್ಯಾಂಕರ್ ಮಿಸ್ಟರ್ ಹಾಜಿ ಇಸ್ಮಾಯಿಲ್ ಸೇಟರವರು ಅರ್ಜಿ ಕೊಟ್ಟಿರುವದ್ದರಿಂದ ಮೈಸೂರು ಶ್ರೀಮನ್ಮಹಾರಾಜ ಸರಕಾರದವರು 1906ನೆ ಇಸವಿ IIನೆ ಮೈಸೂರು ಟ್ರಾಂವೆಗಳ ರೆಗ್ಯುಲೇಷನ್ 6ನೆ ಪ್ರಕರಣದ 3 – 4ನೆ ಕಲಂಗಳನ್ನನುಸರಿಸಿ ಈ ಕೆಳಗೆ ನಮೂದಾಗುವ ಹುಕುಂ ಮಾಡಿರುವದು ಈ ಮೂಲಕ ಪ್ರಸಿದ್ಧಪಡಿಸಲ್ಪಟ್ಟು ಇರುತ್ತೆ.

ಅವತರಣಿಕೆ.

ಚಿಕ್ಕ ಹೆಸರು. 1. ಈ ಹುಕುಂ ಮಿ|| ಹಾಜಿ ಇಸ್ಮಾಯಿಲ್ ಸೇಟರ ಮಾನೋರೇಲ್ ಹುಕುಂ ಯೆಂದು ಕರಿಯಲ್ಪಡತಕ್ಕದ್ದು.

ಅರ್ಥವಿವರಣೆ ಕಲಂ. 2. ಮೈಸೂರು ಟ್ರಾಂವೆ ರೆಗ್ಯುಲೇಷನ್ನಲ್ಲಿ ವಿವರಿಸಲ್ಪಟ್ಟಿರುವ ಅರ್ಥಗಳೇ ಈ ಹುಕುಂನಲ್ಲಿ ಉದಹರಿಸಲ್ಪಟ್ಟಿರುವ ಶಬ್ದಗಳಿಗು ಮತ್ತು ಉಚ್ಚಾರಣೆಗಳಿಗು ಅನ್ವಯವಾಗತಕ್ಕದ್ದು. ಆದರೆ ಈ ಹುಕುಂನಲ್ಲಿ "ಮಾನೋರೇಲ್ ಟ್ರಾಂ ಲೈನ್" ಅಥವಾ "ಈ ಕೆಲಸ," ಎಂಬ ಉಚ್ಚಾರಣೆಗಳು ಈ ಹುಕುಂನಿಂದ ಮಂಜೂರಾಗಿರುವ ಮಾನೋರೇಲ್ ಟ್ರಾಂ ಲೈನ್ ಮತ್ತು ಕೆಲಸಗಳು ಮತ್ತು ಕಾರ್ಯಗಳೆಂದು ಅರ್ಥವಾಗತಕ್ಕದ್ದು.

ಅನ್ವಯವಾಗುವ ಷರತ್ತುಗಳು.

3. ಈ ಹುಕುಂನಿಂದ ಮಂಜೂರಾಗಿರುವ ಮಾನೋರೇಲ್ ಟ್ರಾಂ ಲೈನ್ ಎಂಬುವದು 1906ನೆ ಇಸವಿ IIನೆ ಮೈಸೂರು ಟ್ರಾಂವೆಗಳ ರೆಗ್ಯುಲೇಷನ್ ಅನುಸರಿಸಿ ಮತ್ತು ಈ ಹುಕುಂನ ನಿಬಂಧನೆಗಳಿಗೆ ಒಳಪಟ್ಟು ಹಾಕಲ್ಪಡತಕ್ಕದ್ದು, ಕಾಪಾಡಲ್ಪಡತಕ್ಕದ್ದು ಮತ್ತು ಕೆಲಸ ನಡೆಸಲ್ಪಡತಕ್ಕದ್ದು.

ಪ್ರಮೋಟರ್ ಯಾ ಪ್ರವರ್ತಕ.

4. ಬೆಂಗಳೂರು ಇಂಗ್ಲೀಷ್ ವೇರಹೌಸ್ ಜನರಲ್ ಮರಚೆಂಟ್ ಮತ್ತು ಬ್ಯಾಂಕರ್ ಮಿ|| ಹಾಜಿ ಇಸ್ಮಾಯಿಲ್ ಸೇಟರವರು ಈ ಹುಕುಮಿನ ಉದ್ದೇಶಕ್ಕಾಗಿ ಪ್ರಮೋಟರ್ ಯಾ ಪ್ರವರ್ತಕರಾಗಿಯು ಮತ್ತು ಈ ಹುಕುಂನಲ್ಲಿ ಪ್ರಮೋಟರ್ ಯಾ ಪ್ರವರ್ತಕನೆಂದು ಉದಹರಿಸಲ್ಪಟ್ಟಿರುವದಾಗಿಯು ಇರತಕ್ಕದ್ದು.

ಕೆಲಸ ಪ್ರಾರಂಭ.

5. ಟ್ರಾಂ ಲೈನ್ ಕೆಲಸವು ತಕ್ಷಣ ಪ್ರಾರಂಭಿಸಲ್ಪಡಬಹುದು.

ಟ್ರಾಂ ಲೈನ್ ಕೆಲಸವು ಉಪಕ್ರಮಿಸಲ್ಪಡುವುದಕ್ಕೆ ಮುಂಚೆಯು ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳಲ್ಲಿಯು ವೆಸ್ಟರ್ನ ಸರಕಲ್ ಸೂಪರಿಂಟೆಂಡಿಂಗ್ ಇಂಜನಿಯರವರ ಹುಕುಂ ಪಡಿಯಬೇಕೆಂದ್ದು.

6. ಪ್ರಮೋಟರ್ ಯಾ ಪ್ರವರ್ತಕನು ರಸ್ತೆ ಮೇಲಭಾಗವನ್ನ ಅಗಿಯುವದಕ್ಕೆ ಮುಂಚೆ ಛಾಟೂ ರಸ್ತೆ ಮೇಲೆ ಹಾಕಬೇಕಾದ ಮಾರ್ಗ ಮತ್ತು ಸ್ಥಳದ ವಿಷಯದಲ್ಲಿ ವೆಸ್ಟರ್ನ ಸರಕಲ್ ಸೂಪರಿಂಟೆಂಡಿಂಗ್ ಇಂಜನಿಯರವರ ಮಂಜೂರಿಯನ್ನ ಪಡಿಯತಕ್ಕದ್ದು; ಮತ್ತು ಟ್ರಾಂ ಲೈನ್‌ನಲ್ಲಿ ಉಪಯೋಗಿಸಬೇಕಾದ ಸಾಮಾನುಗಳ ವಿಷಯದಲ್ಲಿಯು ಲೈನನ್ನ ಕಟ್ಟತಕ್ಕ ವಿಧಾನದ ವಿಷಯದಲ್ಲೂ ಮತ್ತು ಅಗದ. ರಸ್ತೆ ಮೇಲಭಾಗವನ್ನ ಪುನಃ ಸರಿಪಡಿಸುವ ವಿಷಯದಲ್ಲು ಸದರಿ ಸೂಪರಿಂಟೆಂಡಿಂಗ್ ಇಂಜನಿಯರವರು ನೇಮಿಸುವ ಷರತ್ತುಗಳಿಗೆ ಬದ್ಧನಾಗಿರತಕ್ಕದ್ದು.

ಟ್ರಾಂ ಲೈನನ್ನ ಕಾಪಾಡೋಣ ಮತ್ತು ರಿಪೇರಿ ಮಾಡ್ಡೋಣ ಪ್ರಮೋಟರ್ರ ಯಾ ಪ್ರವರ್ತಕನ ಕರ್ತವ್ಯವಾಗಿರತಕ್ಕದ್ದು.

7. ಟ್ರಾಂಲೈನಿಗಾಗಿ ಉಪಯೋಗಿಸಲ್ಪಟ್ಟ ರಸ್ತೆ ಭಾಗವನ್ನ ಪ್ರಮೋಟರ್ ಯಾ ಪ್ರವರ್ತಕನು ಸರಕಾರದವರಿಗೆ ಅಥವಾ ಅವರ ಕಡೆ ಅಧಿಕಾರ ಹೊಂದಿದ ಪ್ರತಿನಿಧಿಗೆ ಸಮರ್ಪಕವಾಗಿರುವಂತೆ ರಿಪೇರಿಯಲ್ಲಿಡತಕ್ಕದ್ದು; ಮತ್ತು ಈ ಹುಕುಮಿನ ಉದ್ದೇಶಕ್ಕಾಗಿ ಪ್ರಮೋಟರ್ ಯಾ ಪ್ರವರ್ತಕನು ಆ ರೀತಿ ರಿಪೇರಿ ಮಾಡಬೇಕಾದ ಮತ್ತು ಕಾಪಾಡಬೇಕಾದ ಛಾಟೂ ಮಾರ್ಗದ ಭಾಗವು ಅದರ ಹೊರ ಅಂಚಿನಿಂದ ಸದರಿ ಲೈನ್ ಮೇಲೆ ಟ್ರಕ್ಕ ಯಾನೆ ಚಿಕ್ಕ ಚಕ್ರದ ಭಂಡಿಗಳಲ್ಲಿ ವಿಸ್ತಾರವಾದದ್ದು ಅಥವಾ ವ್ಯಾಗನ್ ಯಾನೆ ಚಕ್ರದ ಭಂಡಿಯೂ ಅಥವಾ ಉರುಳುವ ಸರಕು ಧಾರಾಳವಾಗಿ ಹೋಗುವದಕ್ಕೆ ಬೇಕಾದಷ್ಟು ಜಾಗದ ಹೊರಗೆ ಬಂದು ಅಡಿ ವಿಸ್ತೀರ್ಣದ ವರಿವಿಗಿನ ರಸ್ತೆಯನ್ನ ಅಡಗಿ ಇರತಕ್ಕದ್ದು.

ಟ್ರಾಂ ಲೈನ್ ಅಭಿವೃದ್ಧಿ ವಿಷಯದಲ್ಲಿ ಹುಕುಂ ಮಾಡುವದಕ್ಕೆ ಸರಕಾರದವರ ಅಧಿಕಾರ.

8. ಪ್ರಮೋಟರ್ ಯಾ ಪ್ರವರ್ತಕನು ಸರಕಾರದವರು ಅಥವಾ ಅವರಕಡೆ ಅಧಿಕಾರ ಹೊಂದಿದ ಪ್ರತಿನಿಧಿಯು ಆಯಾಯ ಕಾಲದಲ್ಲಿ ಕೋರುವ ಪ್ರಕಾರ ಬಹಿರಂಗವಾದ ಜನರ ವಸತಿ ಅಥವಾ ಅನುಕೂಲಕ್ಕಾಗಿ ಅವಶ್ಯಕವಿರುವ ಮಟ್ಟಿಗೆ ಅಥವಾ ಸರಕಾರದವರು ಅವಶ್ಯಕವೆಂದು ಆಲೋಚಿಸುವ ಅಭಿವೃದ್ಧಿಗಳನ್ನು ಸದರಿ ಟ್ರಾಂ ಲೈನ್‌ಗೆ ಕಲ್ಪಿಸತಕ್ಕದ್ದು ಮತ್ತು ಸದರಿ ರಸ್ತೆಯ ಮುಂದಣ ಬದಲಾವಣೆಗಳಿಗೆ ಅನುಕೂಲಿಸುವಂತೆ ಟ್ರಾಂ ಲೈನಿನ ಸ್ಥಳವನ್ನು ಮತ್ತು ಮಟ್ಟವನ್ನು ಬದಲಾಯಿಸತಕ್ಕದ್ದು.

ಸರಕಾರದವರ ಹುಕುಂ ಪ್ರಕಾರ ಪ್ರಮೋಟರ್ ಯಾ ಪ್ರವರ್ತಕನು ಕ್ರಾಸಿಂಗ್ಸ್ ಗಳೆಂಬ ದಾಟುವಿಕೆಗಳು ಮೊದಲಾದ್ದನ್ನ ಒದಗಿಸೋಣ.

9. ಸರಕಾರದವರಿಂದ ಅಥವಾ ಅವರಕಡೆ ಅಧಿಕಾರ ಹೊಂದಿದ ಪ್ರತಿನಿಧಿಯಿಂದ ಗೊತ್ತುಮಾಡಲ್ಪಡಬಹುದಾದ ಕ್ರಾಸಿಂಗ್ಸ್ ಗಳೆಂಬ ದಾಟುವಿಕೆಗಳನ್ನು, ಹಾದು ಹೋಗುವ ಸ್ಥಳಗಳನ್ನು, ಸೈಡಿಂಗ್ ಯಾನೆ ಪಕ್ಕದ ಲೈನ್‌ಗಳನ್ನು ಸಂಧಿ ಸ್ಥಳಗಳನ್ನು ಮತ್ತು ಇತರ ಕೆಲಸಗಳನ್ನು ಪ್ರಮೋಟರ್ ಯಾ ಪ್ರವರ್ತಕನು ಒದಗಿಸತಕ್ಕದ್ದು; ಮತ್ತು ಸರಕಾರದವರಿಗೆ ಯುಕ್ತವೆಂದು ಆಯಾಯ ಕಾಲದಲ್ಲಿ ತೋರುವ ಅಥವಾ ಟ್ರಾಂ ಲೈನನ್ನ ಒಳ್ಳೇ ಸ್ಥಿತಿಯಲ್ಲಿ ಇಡುವದಕ್ಕೆ ಅನುಕೂಲ ಅಥವಾ ಅವಶ್ಯಕವೆಂದು ಕಂಡುಬರುವ ಹೆಚ್ಚು ಕೆಲಸಗಳನ್ನು ಸಹಾ ಒದಗಿಸತಕ್ಕದ್ದು.

ಅವಶ್ಯಕವಾದ ಕೆಲಸಗಳನ್ನ ಮಾಡುವುದಕ್ಕಾಗಿ ಟ್ರಾಂ ಲೈನ್ ವಿಷಯದಲ್ಲಿ ಪ್ರವೇಶಿಸಲು ಅಧಿಕಾರ ಕೊಡುವದಕ್ಕೆ ಸರಕಾರದವರ ಅಧಿಕಾರಗಳು.

10. ಟ್ರಾಂ ಲೈನ್ ಪಳಿತವಾಗಿರುವ ಭೂಮಿಯಲ್ಲಿ ಅಥವಾ ಮೇಲೆ ಪ್ರವೇಶಮಾಡಿ ತೋಡುಗಳು, ಜಲದಾರಿಗಳು, ನೀರಿನ ಕೊಳಾಯಿಗಳು ಟೆಲಿಗ್ರಾಫ್ ಲೈನ್ ಯಾ ತಂತಿ ಸಾಲುಗಳು ಮೊದಲಾದವುಗಳ ವಿಷಯವಾಗಿ ಅವಶ್ಯಕವಾದ ಕೆಲಸಗಳನ್ನ ಮಾಡಲೂ ಸ್ಥಳೀಯ ಅಧಿಕಾರಿಗು, ರಸ್ತೆಯ ಅಧಿಕಾರಿಗೂ ಅಥವಾ ಯಾವನಾದರೊಬ್ಬ ಮನುಷ್ಯನಿಗೂ ಸ್ವಾತಂತ್ರ ಕೊಡುವ ಅಧಿಕಾರವನ್ನ ಸರಕಾರದವರು ವುಳಿಸಿಕೊಂಡು ಇರುತ್ತಾರೆ.

ರಸ್ತೆಯ ಒಳಗೆ ಅಥವಾ ಮೇಲೆ ಇರುವ ಕಟ್ಟಡಗಳ ವಿಷಯದಲ್ಲಿ ಪ್ರವೇಶಿಸಲು ಪ್ರಮೋಟರ್ ಯಾ ಪ್ರವರ್ತಕನಿಗೆ ಅವಕಾಶ ಕೊಟ್ಟಿರುವದರ ಷರತ್ತುಗಳು.

11. ಪ್ರಮೋಟರ್ ಯಾ ಪ್ರವರ್ತಕನು ಸರಕಾರದವರ ಅಥವಾ ಅವರ ಕಡೆ ಅಧಿಕಾರ ಹೊಂದಿದ ಪ್ರತಿನಿಧಿಯಿಂದ ಮೊದಲಾಗಿ ಅಪ್ಪಣೆ ಪಡಿಯದೆ ಹಾಲಿ ಇರುವ ಜಲದಾರಿ ಅಥವಾ ತೋಡು, ಟೆಲಿಗ್ರಾಫ್ ಲೈನ್ ಯಾ ತಂತಿಸಾಲು, ನೀರಿನ ಕೊಳಾಯಿ ಅಥವಾ ಯಾವುದಾದರೂ ಸೇತುವೆ ಅಥವಾ ಮೊಹರಿ ಇವುಗಳ ವಿಷಯವಾಗಿ ಕೈ ಹಚ್ಚಕೂಡದು ಅಥವಾ ಅವುಗಳ ಸ್ಥಳವನ್ನಾಗಲಿ ಅಥವಾ ಮಟ್ಟವನ್ನಾಗಲಿ ಬದಲಾಯಿಸಕೂಡದು.

ಉಪಯೋಗಿಸಲ್ಪಡತಕ್ಕ ಚಲನಾಶಕ್ತಿ.

12. ಈ ಟ್ರಾಂ ಲೈನಿನಮೇಲೆ ಉಪಯೋಗಿಸಲ್ಪಡತಕ್ಕ ಚಲನಾಶಕ್ತಿಯು ಕೂಲಿಗಳು, ಎತ್ತುಗಳು, ಅಥವಾ ಕುದುರೆಗಳಾಗಿರತಕ್ಕದ್ದು; ಮತ್ತು ಹವೆ ಅಥವಾ ಇತರ ಯಾವದಾದರು ಮೆಕ್ಯಾನಿಕಲ್ ಯಾ ಯಂತ್ರಿಕ ಬಲವು ಉಪಯೋಗಿಸಲ್ಪಡತಕ್ಕದ್ದಲ್ಲ.

ಟ್ರಾಂ ಲೈನ್ ಯಾವ ಉದ್ದೇಶಕ್ಕೆ ಉಪಯೋಗಿಸಲ್ಪಡತಕ್ಕದ್ದು.

13. ಈ ಟ್ರಾಂ ಲೈನ್ ಸರಕುಗಳು, ಮ್ಯಾಂಗನೀಸ್ ಎಂಬ ಲೋಹ ಮತ್ತು ಇತರ ಪದಾರ್ಥಗಳನ್ನು ಸಾಗಿಸುವದಕ್ಕೆ ಮಾತ್ರವೆ ಉಪಯೋಗಿಸಲ್ಪಡತಕ್ಕದ್ದು ಮತ್ತು ಪ್ರಯಾಣೀಕರನ್ನ ಸಾಗಿಸೋಣವು ಖಂಡಿತವಾಗಿ ನಿರೋಧಿಸಲ್ಪಟ್ಟು ಇರುತ್ತೆ.

ರಸ್ತೆಯನ್ನ ಉಪಯೋಗಿಸುವದಕ್ಕಾಗಿ ಸರಕಾರದವರಿಗೆ ಕೊಡಬೇಕಾದ ತೆರಿಗೆ.

14. ಪ್ರಮೋಟರ್ ಯಾ ಪ್ರವರ್ತಕನು ರಸ್ತೆಯನ್ನು ಉಪಯೋಗಿಸುವದಕ್ಕಾಗಿ ಈ ಮಾನೋರೇಲ್ ಮೇಲೆ ಸಾಗಿಸುವ ಮ್ಯಾಂಗನೀಸ್ ಎಂಬ ಲೋಹದ ಅದರು ಟ್ರಕ್ಕ ಯಾನೆ ಚಿಕ್ಕ ಚಕ್ರಗಳ ಭಂಡಿ ಭರ್ತಿ, ಒಂದಕ್ಕೆ ಅರು ಆಣೆಗಳಂತೆ ತೆರಿಗೆಯನ್ನ ಸರಕಾರಕ್ಕೆ ಕೊಡತಕ್ಕದ್ದು; ಮತ್ತು ಇತರ ವಿಧವಾದ ಪ್ರಯಾಣಕ್ಕೆ ಅನಾನುಕೂಲವಿಲ್ಲದ ಹಾಗೆ ಈ ರೈಲ್ ಸ್ಥಾಪಿಸಲ್ಪಡತಕ್ಕದ್ದಕ್ಕು ಮತ್ತು ಅದರ ವಾಯಿದೆ ವಿಷಯದಲ್ಲಿಯು ಮೈಸೂರು ಸಂಸ್ಥಾನದ ಶ್ರೀಮನ್ ಮಹಾರಾಜಾ ಸರಕಾರದವರು ನೇಮಿಸಲ್ಪಡಬಹುದಾದ ಷರತ್ತುಗಳಿಗೆ ಬದ್ಧನಾಗಿರತಕ್ಕದ್ದು.

ಶಿವಮೊಗ್ಗಾ ಮುನಶಿಪಾಲಿಟಿಗೆ ಕೊಡಬೇಕಾದ ತೆರಿಗೆ.

15. ಈ ಉದ್ದೇಶಿಸಲ್ಪಟ್ಟು ಇರುವ ಲೈನ್ ಮೇಲೆ ಸಾಗಿಸಲ್ಪಡುವ ಎಲ್ಲಾ ಅದರಿನ ಮೇಲೂ ಟನ್ ಒಂದಕ್ಕೆ ಒಂದಾಣೆಯಂತೆ ಸುಂಕವನ್ನು ಪ್ರಮೋಟರ ಯಾ ಪ್ರವರ್ತಕನು ಶಿವಮೊಗ್ಗಾ ಮುನಿಶಿಪಾಲಿಟಿಗೆ ಕೊಡತಕ್ಕದ್ದು.

ಕೆಲಸವನ್ನ ಪರಾಧೀನ ಮಾಡುಪಿಕೆ.

16. ಈ ಕೆಲಸವನ್ನಾಗಲಿ ಅಥವಾ ಅದರ ಯಾವ ಭಾಗವನ್ನಾಗಲಿ ಕ್ರಯ, ಅಡವು, ಗುತ್ತಿಗೆ, ಅದಲುಬದಲು ಅಥವಾ ಇತರ ವಿಧವಾಗಿಯೇ ಆಗಲಿ ಪರಾಧೀನಮಾಡಲು ಪ್ರಮೋಟರ್ ಯಾ ಪ್ರವರ್ತಕನಿಗೆ ಅಧಿಕಾರ ಕೊಡಲ್ಪಟ್ಟು ಇರುವದಿಲ್ಲ.

ಹುಕುಂ ಬಮೋಜೀಬ್,

ಡಬ್ಲ್ಯು. ಮುಕಹರ್ಜೀ,

ಪಬ್ಲಿಕ್ ವರ್ಕ್ಸ್ ಅಲಾಖಾ ಮೈಸೂರು ಗವರ್ನಮೆಂಟ್ ಸೆಕ್ರಿಟರಿ.

16

ಮೈಸೂರ ಗೆಜೆಟ್.

ಸಂ. 42.] ಸರಕಾರದಿಂದ ಛಾಯಿಷ್ ಆದ್ದು. [ನಂ. 3.

ಬೆಂಗಳೂರು, ಗುರುವಾರ, ಜನವರಿ ತಾ|| 17, ಸನ 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟಸಂಖೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರಕ್ಕಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು; ಸಬಾರ್ಡಿನೇಟ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಪಪೀಸ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 3ನೆ ಜನವರಿ 1907.

ನಂ. 5968—ಸ್ಯಾನಿಟರಿ 141-06—4, ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

	ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು.	
				ಇಂದ.	ಗೆ.
1.	ಶ್ರೀಗುರು ಗುಂಡಬ್ರಹ್ಮೇಶ್ವರ ಜಾತ್ರೆ.	ಪಾಟನಾಯಕನಹಳ್ಳಿ ...	ಸೀರ್ಯ ...	18—1—07	28—1—07
2.	ಶ್ರೀ ನರಸಿಹ್ಮಸ್ವಾಮಿ ರಥೋತ್ಸವ ಮತ್ತು ಜಾತ್ರೆ.	ಸೀಬಿ ...	ಡಿಟೋ ...	1—2—07	25—2—07

1897ನೆಯ ವರ್ಷದ 2ನೆಯ ನಂಬರ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 3ನೆ ಜನವರಿ 1907.

ನಂ. 6010—ಸ್ಯಾನಿಟರಿ 134-06—6, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿ ಪಡಿಸುವುದೇನಂದರೆ :— ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383— ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21-96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗ್ಗುಲಿದ ಪ್ರದೇಶವೆಂದು ಎಣಿಸಲ್ಪಡುವುದು.

ಸ್ಥಳ.	ತಾಲ್ಲೂಕು.
ಆಲದಕಟ್ಟೆ.	ಚಿಕ್ಕನಾಯಕನಹಳ್ಳಿ.

ತಾರೀಖು 4ನೆ ಜನವರಿ 1907.

ನಂ. 6056—ಸ್ಯಾನಿಟರಿ 66-06-22, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿ ಪಡಿಸುವುದೇನಂದರೆ :— ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವುದು.

ಸ್ಥಳ.	ತಾಲ್ಲೂಕು.
ಜನ್ನಾಪುರ	ಬೇಲೂರು.
ಮಡಬಕೊಪ್ಪಲು	ಚನ್ನರಾಯಪಟ್ಣ.
ಗ್ರಾಮ	ಹಾಸನ.
ದೊಡ್ಡಬಸವನಹಳ್ಳಿ ...	ಡಿಟೋ
ಹೊಳೆನರಸಿಪುರ ಟವ್ನ್ ...	ಹೊಳೆನರಸೀಪುರ.

ತಾರೀಖು 9ನೆ ಜನವರಿ 1907.

ನಂ. 6172—ಸ್ಯಾನಿಟರಿ 141-06—6, ತುಮಕೂರು ಡಿಸ್ಟ್ರಿಕ್ಟ್ ಕೊರಟಗೆರೆ ಸಬ್ ತಾಲ್ಲೂಕಿನ ಕ್ಯಾಮೇನಹಳ್ಳಿಗೆ ಶ್ರೀ ಅಂಜನೇಯಸ್ವಾಮಿಯವರ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು, 1907ನೆಯ ವರ್ಷದ ಜನವರಿ 20ನೆ ತಾರೀಖಿನಿಂದ 1907ನೆ ಜನವರಿ 28ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದ್ದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 10ನೆ ಜನವರಿ 1907.

ನಂ. 6185—ಸ್ಯಾನಿಟರಿ 66-06-24, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿ ಪಡಿಸುವದೇನಂದರೆ :— ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಜೋಡಿ ಕೆಪ್ಪಗೆರೆ	ಬೇಲೂರು
ಬಾಣಾವಾರ	ಅರಸಿಕರೆ

ತಾರೀಖು 11ನೆ ಜನವರಿ 1907.

ನಂ. 6213—ಸ್ಯಾನಿಟರಿ 156—06—2, ಕೋಲಾರ ಡಿಸ್ಟ್ರಿಕ್ಟ್ ಮುಳಬಾಗಲು ತಾಲ್ಲೂಕಿನ ಆವನಿ ಶ್ರೀರಾಮಲಿಂಗೇಶ್ವರ ಸ್ವಾಮಿಯವರ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಫೆಬ್ರವರಿ 11ನೆ ತಾರೀಖಿನಿಂದ 1907ನೆ ಇಸವಿ ಫೆಬ್ರವರಿ 21ನೆ ತಾರೀಖಿನವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 11ನೆ ಜನವರಿ 1907.

ನಂ. 6215—ಸ್ಯಾನಿಟರಿ 139-06—8, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿ ಪಡಿಸುವುದೇನಂದರೆ :—ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಎಡಿಯೂರು	ಬೆಂಗಳೂರು
ಜಕ್ಕೂರು	ಡಿಟೋ
ಕಾನಕಾನಹಳ್ಳಿ	ಕಾನಕಾನಹಳ್ಳಿ
ಕೃಷ್ಣಸಾಗರ	ಆನೆಕಲ್ಲು
ಬಳಗೆರೆ ಕಲ್ಲಹಳ್ಳಿ	ಡಿಟೋ
ಚೆನ್ನಗಂಗಪ್ಪನ ಪಾಳ್ಯ	ನೆಲಮಂಗಲ
ದೊಡ್ಡ ಚನ್ನೆಹಳ್ಳಿ	ಡಿಟೋ
ಬಿನ್ನಮಂಗಲ	ಡಿಟೋ
ಜಕ್ಕಸಂದ್ರ	ಡಿಟೋ
ತಾವರೆಕೆರೆ	ಮಾಗಡಿ
ಸೂಳೆವರ	ಡಿಟೋ

ತಾರೀಖು 7ನೆ ಜನವರಿ 1907.

ನಂ. 5177—G. F. 124—06, ಮೈಸೂರು ಸರ್ಕಾರದ ಅಸಿಸ್ಟೆಂಟ್ ಸೆಕ್ರೆಟರಿಯವರಾದ ಮಿ|| ಎಂ. ಎನ್. ಕೃಷ್ಣರಾಯರವರು ಕಂಟ್ರೋಲರವರ ಆಫೀಸಿನ ಚಾರ್ಜನ್ನು ಅಸಿಸ್ಟೆಂಟ್ ಕಂಟ್ರೋಲರ್ ಮಿ|| ಟಿ. ಸತ್ಯರಾಜಶೆಟ್ಟಿಯವರಿಂದ 1907ನೆಯ ಇಸವಿ ಜನವರಿ 3ನೆ ತಾರೀಖಿನ ಅಪರಾಹ್ನದಲ್ಲಿ ತೆಗೆದುಕೊಂಡರು.

ತಾರೀಖು 9ನೆ ಜನವರಿ 1907.

ನಂ. 6171—ಎಡ್ಯುಕೇಷನ್ 175—06—4, ಮೈಸೂರು ಸರ್ವಿಸ್ ರೆಗ್ಯುಲೇಷನಿನ 190 (b) ಪ್ರಕರಣಾನುಸಾರವಾಗಿ, ಮೈಸೂರು ಮಹಾರಾಜರ ಕಾಲೇಜಿನಲ್ಲಿ ಮ್ಯಾಥೆಮ್ಯಾಟಿಕ್ಸ್ ಲೆಕ್ಚರರ್ ಯಾ ಗಣಿತ ಶಾಸ್ತ್ರೋಪನ್ಯಾಸಕರಾಗಿರುವ ಮೆ|| ಜಿ. ಕಸ್ತೂರಿ ರಂಗೈಯ್ಯಂಗಾರ್ರವರಿಗೆ 1906ನೆ ಇಸವಿಯ ಜೂನ್ 7ನೆ ತಾರೀಖಿನಿಂದ 17ನೆ ತಾರೀಖಿನ ವರೆಗೆ ಉಭಯ ದಿನಗಳೂ ಸೇರಿ ಅರ್ಧ ತಲಬಿನಮೇಲೆ 11 ದಿವಸಗಳ ಪ್ರಿವಿಲೀಜು ರಜಾ ಕೊಡಲ್ಪಟ್ಟಿತು.

ತಾರೀಖು 10ನೆ ಜನವರಿ 1907.

ನಂ. 6179—ಲೊ. ಬೊ. 296—06—2, ಲೋಕಲ್ ಬೋರ್ಡ್ ರೆಗ್ಯುಲೇಷನಿನ ಮೇರೆಗೆ ಮಾಡಿದ ನಿಬಂಧನೆಗಳಲ್ಲಿ 20ನೆ ನಿಬಂಧನೆಯ ಮೇರೆಗೆ ಮಿ|| ಮಂಚೆ ಪಟೇಲ್ ಬೇಲೂರು ನಂಜೇಗೌಡ ಉರಫ್ ಪುಟ್ಟೇಗೌಡರು ಫವತಿಯಾದ ಮಿ|| ಸುಂಡೆಕೆರೆ ಶ್ರೀಕಂಠಯ್ಯನವರ ಸ್ಥಾನದಲ್ಲಿ ಹಾಸನದ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾಗಿ ಮೊಕರರ್ರು ಮಾಡಲ್ಪಟ್ಟಿರುತ್ತಾರೆ.

ತಾರೀಖು 11ನೆ ಜನವರಿ 1907.

ನಂ. 6200—L. F. 147-06-4, ಕಡಬದ ಪಟೇಲ್ ಮಿ|| ಹುಚ್ಚವೀರೇಗೌಡನನ್ನು ಫವತಿಯಾದ ಮಿ|| ಅನಂತ ರಾಮಯ್ಯಂಗಾರ್ರಿಗೆ ಬದಲಾಗಿ ಕಡಬದ ಯೂನಿಯನ್‌ಗೆ ಮೆಂಬರಾಗಿ ಮೊಕರರ್ರು ಮಾಡಿ ಇರುತ್ತದೆ.

ತಾರೀಖು 12ನೆ ಜನವರಿ 1907.

ನಂ. ಜೆ. 2018—ಕೋರ್ಟ್ಸ್ 56-06-2, 1904ನೆ ಇಸವಿಯ ಮೇ 10ನೆ ತಾರೀಖಿನ 2379—ಜೆ. ಎಫ್. 14-03-04ನೆ ನಂಬರಿನ ಇಸ್ತಿಹಾರ್‌ನಾಮೆಯಲ್ಲಿ ಅಡಗಿರುವ ಅಪ್ಪಣೆಯನ್ನು ಬದಲಾಯಿಸಿ, ಕೋಲಾರದ ಮುನ್ಸಿಫ್ ಮಾಜಿಸ್ಟ್ರೇಟು ಕ್ರಿಮಿನಲ್ ಅಧಿಕಾರವನ್ನು ನಡೆಸುವ ಸ್ಥಳೀಯ ಸರಹದ್ದುಗಳಲ್ಲಿ ಬ್ಯಾರಿಂಗ್‌ಪೇಟೆ ತಾಲ್ಲೂಕೆಲ್ಲಾ ಸಂಪೂರ್ಣವಾಗಿ ಸೇರಿರತಕ್ಕದ್ದೆಂದು ವಿಧಿಸಲು ಶ್ರೀಮನ್ ಮಹಾರಾಜರವರ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 16ನೆ ಜನವರಿ 1907.

ನಂ. 6418—L. F. 294-06-2, ವೃದ್ಧಾಪ್ಯದ ದೆಸೆಯಿಂದ ಬೋರ್ಡು ಮೀಟಿಂಗ್‌ಗಳಿಗೆ ಬರಲು ಅಶಕ್ತರಾಗಿದಾರೆಂದು ರಿಪೋರ್ಟಾಗಿರುವ ಮಿ|| ಶಾಮೈಯ್ಯಂಗಾರ್ರು ಸ್ಥಾನದಲ್ಲಿ ಮಿ|| ಅಮೃತೂರಿನ ಎ. ಎಸ್. ರಾಮಾನುಜೈಯ್ಯಂಗಾರ್ರು, 1902ನೆ ಇಸವಿಯ 2ನೆ ನಂಬರ್ ಲೋಕಲ್ ಬೋರ್ಡ್ಸ್ ರೆಗ್ಯುಲೇಷನಿನ ಮೇರೆಗೆ ಮಾಡಲ್ಪಟ್ಟ ನಿಬಂಧನೆಗಳ 20ನೆ ಪ್ಯಾರಾವಿಗೆ ಅನುಸಾರವಾಗಿ ಕುಣಿಗಲ್ ತಾಲ್ಲೂಕು ಬೋರ್ಡ್ ಮೆಂಬರಾಗಿ ಚುನಾಯಿಸಲ್ಪಟ್ಟಿರುತ್ತಾರೆ.

ತಾರೀಖು 16ನೆ ಜನವರಿ 1907.

ನಂ: 5425—ಮೆಡಿಕಲ್ 151-06, ಮಿ॥ ಪಿ. ಚಂಗಲ್ರಾಯ ಮೊದಲಿಯಾರ್ರವರು ಆನರರಿ ಅಸಿಸ್ಟೆಂಟ್ ಸರ್ಜನುಗಳ 4ನೆ ತರಗತಿಯಿಂದ 3ನೆ ತರಗತಿಗೆ ಬಡತಿ ಮಾಡಲ್ಪಟ್ಟಿರುತ್ತಾರೆ.

ತಾರೀಖು 16ನೆ ಜನವರಿ 1907.

ನಂ. 6433—Edn. 198-06-3, ಮೈಸೂರು ಸೀಮೆಯ ವಿದ್ಯಾಭ್ಯಾಸದ ಇಲಾಖೆಯ ಇನ್ಸ್ಪೆಕ್ಟರ್ ಜನರಲ್ ಮಿ॥ ಎಚ್. ಜೆ. ಭಾಭಾ ಯವರಿಗೆ, 1906ನೆ ಇಸವಿ ಜೂನ್ 12ನೆ ತಾರೀಖಿನ 12736—ಎಜ್ಯು. 350-05-3ನೆ ನಂಬರಿನ ಸರ್ಕಾರಿ ಇಸ್ತಿಹಾರ್‌ನಾಮೆಯಲ್ಲಿ, ಮೂರು ತಿಂಗಳು ಪ್ರಿವಿಲೇಜು ರಜಾವಿನ ಜತೆಗೆ ಕೊಡಲ್ಪಟ್ಟ ನಾಲ್ಕು ತಿಂಗಳು ಫರ್ಲೋ ರಜಾವನ್ನು 1907ನೆ ಇಸವಿಯ ಫೆಬ್ರವರಿ ಆಖೈರುವರೆಗೆ ಇದರಿಂದ ಹೆಚ್ಚಿಸಿ ಇದೆ; ಸದರಿ ಕಾಲದಲ್ಲಿ ಅಥವಾ ಬೇರೆ ಹುಕುಂ ಕೊಡುವ ವರೆಗೆ, ಆಗಲೇ ಹುಕುಂ ಮಾಡಲ್ಪಟ್ಟಂತೆ ಬದಲಿ ಏರ್ಪಾಡುಗಳು ನಡೆದುಕೊಂಡು ಬರತಕ್ಕದ್ದು.

ತಾರೀಖು 18ನೆ ಡಿಸೆಂಬರ 1906.

ನಂ. 5247—ಮ್ಯು. 163-06-4, ಸ್ಟ 1894ನೆಯ ವರ್ಷದ 7ನೆಯ ನಂಬರ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ, ಎಂದರೆ, ಬೆಂಗಳೂರು ಸಿಟಿ ಬಸವನಗುಡಿಯ ಬಡಾವಣೆಗಾಗಿ ಅವಶ್ಯಕವಾಗಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರು.	ಜಮೀನಿನ ತರಹ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಕಂದಾಯ.	ಚತುರ್ಸೀಮೆ.			
									ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.	ರೂ. ಆ.				
ಬೆಂಗಳೂರು	ಬೆಂಗಳೂರು	[illegible]	[illegible]	ಶಾನುಭೋಗ ರಾಮಯ್ಯ	1	ಜಿರಾಯ್ತು	3 20	5 10	ಈ ಸರ್ವೆ ನಂಬರಿನ ಉಳಿದ ಭಾಗ	[illegible]	[illegible]	ಸರ್ವೆ 2ನೆ ನಂಬರು

ತಾರೀಖು 22ನೆ ಡಿಸೆಂಬರು 1906.

ನಂ. ರೆ. 6232—ಲ್ಯಾ. ರೆ. 345—06—2, ಹಾಸನ ಡಿಸ್ಟ್ರಿಕ್ಟಿನ ಹೋಬಳಿಗಳ ಹೊಸ ಏರ್ಪಾಡಿನಲ್ಲಿ ಕೆಲವು ಬದಲಾವಣೆಗಳನ್ನು ಮಾಡುವ 1906ನೆ ಇಸವಿಯ ಜನವರಿ 25ನೆ ತಾರೀಖಿನ ರೆ. 10120—ಲ್ಯಾ. ರೆ. 380—05—4 ನಂಬರಿನ ಪ್ರಕಟನೆಯಲ್ಲಿ ಅರಸೀಕೆರೆ ತಾಲ್ಲೂಕಿನ ಅರಸೀಕೆರೆ ಹೋಬಳಿಗೆ ರಂಗಪುರವೆಂಬ ಹೆಸರಿನ ಮತ್ತೊಂದು ಕಾವಲನ್ನು ಸೇರಿಸಬೇಕೆಂದು ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 7ನೆ ಜನವರಿ 1907.

ನಂ. ಆರ್. 6568—ಎಲ್. ಆರ್. 252—06—6, 1906ನೆಯ ಇಸವಿಯ ನವಂಬರ್ 29ನೆ ತಾರೀಖಿನ ಆರ್. 5556—ಎಲ್. ಆರ್. 252—06—4ನೆ ನಂಬರಿನ ಸರ್ಕಾರಿ ಇಸ್ತಿಹಾರ್‌ನಾಮೆಯಲ್ಲಿ ಹುಕುಂ ಮಾಡಿದಂತೆ ತಾಲ್ಲೂಕುಗಳನ್ನು ಸಬ್ ಡಿವಿಜನ್‌ಗಳಾಗಿ ಪುನರ್ವಿಮರ್ಶೆಯಿಂದ ಗುಂಪುಕೂಡಿಸುವುದು, ಚಿತ್ರದುರ್ಗ ಡಿಸ್ಟ್ರಿಕ್ಟಿನ ವಿಷಯದಲ್ಲಿ, ಸದರಿ ಇಸ್ತಿಹಾರ್‌ನಾಮೆಯಲ್ಲಿ ಹುಕುಂ ಮಾಡಿದಂತೆ 1907ನೆ ಇಸವಿಯ ಜುಲೈ ಮೊದಲನೆ ತಾರೀಖಿಗೆ ಬದಲಾಗಿ ಈ ಕೂಡಲೆ ಜಾರಿಗೆ ತರಲ್ಪಡತಕ್ಕದ್ದು.

ತಾರೀಖು 5ನೆ ಜನವರಿ 1907.

ನಂ. ಆರ್. 6519—ಎಲ್. ಎಸ್. 12-06-3, 1888ನೆ ಇಸವಿಯ 4ನೆ ನಂಬರ್ ರೆಗ್ಯುಲೇಷನ್ ಲ್ಯಾಂಡ್ ರೆವಿನ್ಯೂ ಕೋಡಿನ ನಿಯಮಗಳ ಮೇರೆಗೆ ಚಿತ್ರದುರ್ಗದ ಡಿಸ್ಟ್ರಿಕ್ಟ್ ಮೊಳಕಾಲ್ಮೂರು ತಾಲ್ಲೂಕಿನ ಈ ಕೆಳಗೆ ನಮೂದಿಸುವ ಗ್ರಾಮಗಳಿಗೆ ರಿವಿಜನ್ ಸರ್ವೆ ಸೆಟ್ಲ್‌ಮೆಂಟ್ ಆಗಬೇಕೆಂದು ಹುಕುಂ ಆದ ಪ್ರಯುಕ್ತ, ಸದರಿ ಕೋಡಿನ 112ನೆ ಪ್ರಕರಣದಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ, ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಸದರಿ ಸೆಟ್ಲ್‌ಮೆಂಟಿಗೆ ಅನುಗುಣವಾಗಿ ವಿಧಿಸಿದ ಕಂದಾಯವು 1907—1908ನೆ ರೆವಿನ್ಯೂ ಸಾಲಿನಿಂದ ಮೊದಲುಗೊಂಡು 1936—1937ನೆ ರೆವಿನ್ಯೂ ಸಾಲಿನ ಆಖೈ

ರುವರೆಗೆ ಆಗುವ 30 ವರ್ಷಗಳ ಕಾಲದವರೆಗೆ ನಿಶ್ಚಿತವಾಗಿರತಕ್ಕದ್ದೆಂದು ಪ್ರಸಿದ್ಧ ಪಡಿಸಲು ಹುಕುಂ ಪಯಪಾಲಿಸಿರುತ್ತಾರೆಂದು ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಕಟಿಸಲ್ಪಟ್ಟಿರುತ್ತದೆ.—

ಜಿಲ್ಲೆಯ ಹೆಸರು	ತಾಲ್ಲೂಕಿನ ಹೆಸರು	ನಂಬರು	ಗ್ರಾಮಗಳ ಹೆಸರು	ಜಿಲ್ಲೆಯ ಹೆಸರು	ತಾಲ್ಲೂಕಿನ ಹೆಸರು	ನಂಬರು	ಗ್ರಾಮಗಳ ಹೆಸರು
1	2	3	4	1	2	3	4
ಚಿತ್ರದುರ್ಗ	ಚಿತ್ರದುರ್ಗ	1	ನಾಗಸಂದ್ರ	ಚಿತ್ರದುರ್ಗ	ಚಿತ್ರದುರ್ಗ	47	ಮುತ್ತಿಗಾರಹಳ್ಳಿ
		2	ಸಿದ್ದಾಪುರ			48	ಮಾರಮ್ಮನಹಳ್ಳಿ
		3	ದೇವಸಮುದ್ರ			49	ದುಪ್ಪಿ
		4	ರಾಂಪುರ			50	ಮಾಚೇನಹಳ್ಳಿ
		5	ಕೆರೆಕೊಂಡಾಪುರ			51	ವೀರಾಪುರ
		6	ಬೊಮ್ಮಗಟ್ಟ			52	ಗೌರಸಮುದ್ರ
		7	ಗವರಿಪುರ			53	ಹೆರೂರು
		8	ಜಂಬಲಮಕ್ಕಿ			54	ಬೈರಾಪುರ
		9	ಪಕುರ್ತಿ			55	ಕಾಟನಾಯಕನಹಳ್ಳಿ
		10	ನಲಾ ರಣ್ಣಿ ಕೊಂಡಾಪುರ			56	ಪೋಛಲಾಪುರ
		11	ಶೀರೆಕೊಳ			57	ಬಸಾಪುರ
		12	ಬೊಮ್ಮದೇವರಹಳ್ಳಿ			58	ತಿಮ್ಮಲಾಪುರ
		13	ಸಂತೆಗುಡ್ಡ			59	ದೇಡಗೂರು
		14	ಬಾಂಡ್ರಾವಿ			60	ಉರತಲು
		15	ಕೃಷ್ಣರಾಜಪುರ			61	ಪೆನ್ನಮ್ಮರಹಳ್ಳಿ
		16	ಕೆಳಗಿನಕಣಿವೆ			62	ವಿಟಲಾಪುರ
		17	ಮೇಲಿನಕಣಿವೆ			63	ಕರಡಿಹಳ್ಳಿ
		18	ಮೊಳಕಾಲ್ಮುರ್ರು			64	ಕಣ್ಣಕುಪ್ಪೆ
		19	ಹಾಸಗಲ್ಲು			65	ಹೊಸನಾಗಲಾಪುರ
		20	ಗುಂಡಲೂರು			66	ಎರ್ರೇನಹಳ್ಳಿ
		21	ಬೊಮ್ಮಗೊಂಡನಕೆರೆ			67	ಜಾಲಿಪೇಟೆ
		22	ನೇರಲಹಳ್ಳಿ			68	ಚಿಲ್ಲದಗೊಂಡಿ
		23	ರಾಮಸಾಗರ			69	ಯರ್ರೇನಹಳ್ಳಿ
		24	ಚಿಕ್ಕನಹಳ್ಳಿ			70	ಟುಮಟುಮುಕನಹಳ್ಳಿ
		25	ಗುಡ್ಡದಹಳ್ಳಿ			71	ಮಠದಜೋಗಿಹಳ್ಳಿ
		26	ವೆಂಕಟಾಪುರ			72	ಅಯ್ಯನಹಳ್ಳಿ
		27	ಪೋಬ್ಬಾಪುರ			73	ಯರಪೋತಜೋಗಿಹಳ್ಳಿ
		28	ಮುರಡಿ			74	ಚಿಕ್ಕಮತಿ
		29	ಸಾವಿಕೆರೆ			75	ತುಪ್ಪದಕ್ಕನಹಳ್ಳಿ
		30	ತಿಮ್ಮನಹಳ್ಳಿ			76	ದೊಣೆತಮ್ಮನಹಳ್ಳಿ
		31	ರಾಜಾಪುರ			77	ಸೂರಮ್ಮನಹಳ್ಳಿ
		32	ಕೋನಾಪುರ			78	ಅಡವಿಮಲ್ಲಾಪುರ
		33	ಬೊಮ್ಮಕ್ಕನಹಳ್ಳಿ			79	ಹರವಿನದಿಡ್ಡಿ
		34	ಬುಡ್ಡೇನಹಳ್ಳಿ			80	ಪುರಬೋರನಹಳ್ಳಿ
		35	ಅಮಕುಂದಿ			81	ರಂಗಯ್ಯನದುರ್ಗ
		36	ಭಟ್ಟರಹಳ್ಳಿ			82	ಯರಜಿನ್ನೇನಹಳ್ಳಿ
		37	ಹಿರೆಕೆರೆಹಳ್ಳಿ			83	ಮಹಿಮನಹಟ್ಟಿ
		38	ಸಿದ್ದಯ್ಯನಕೋಟೆ			84	ಬೊಮ್ಮಲಿಂಗನಹಳ್ಳಿ
		39	ಚಿಕ್ಕವೋಬಣ್ಣನಹಳ್ಳಿ			85	ತಳವಾರಹಳ್ಳಿ
		40	ಸೂಳೇನಹಳ್ಳಿ			86	ವಡೇರಹಳ್ಳಿ
		41	ರಾಯಾಪುರ			87	ಹೊಸಹಳ್ಳಿ
		42	ಸೋಮೇನಹಳ್ಳಿ			88	ಮಲ್ಲಿಹರವು
		43	ಕೋನಸಾಗರ			89	ಸಂಜೀವರಾಯನಕೋಟೆ
		44	ನೇತ್ರನಹಳ್ಳಿ			90	ಚಿನವಾಲದಗುಡ್ಡ
		45	ಕೊಂಡಲಹಳ್ಳಿ			91	ಕಮರದಕಾವಲು
		46	ಮೊಗಲಹಳ್ಳಿ				

ಬಪೋಜೀಬ್ ಹುಕುಂ,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರೆಟರಿ.

B

ರೈಲ್ವೇ ಇಲಾಖೆ.

ನಂ. 308, ತಾರೀಖು 13ನೆ ಡಿಸೆಂಬರ್ 1906.

ಮೈಸೂರು ಶ್ರೀಮನ್ ಮಹಾರಾಜ ಸರಕಾರದವರು ಮತ್ತು ಶಿವಮೊಗ್ಗಾ ಮುನಿಸಿಪಲ್ ಬೋರ್ಡಿನವರ ಇರಾದೆಯನ್ನು ಪಡದು 1906ನೆ ಇಸವಿ IIನೆ ಮೈಸೂರು ಟ್ರಾಂವೆಗಳ ರೆಗ್ಯುಲೇಷನ್ 4ನೆ ಪ್ರಕರಣವನ್ನನುಸರಿಸಿ ಕುಂಸಿಯಿಂದ ಶಿವಮೊಗ್ಗಾ ರೈಲ್ವೇ ಸ್ಟೇಷನ್ ವರಿಗೆ ಬಾಟಾಮಾರ್ಗದ ಪಕ್ಕದಲ್ಲಿ ಉದ್ದಕ್ಕು ಎತ್ತುಗಳು ಅಥವಾ ಕುದುರೆಗಳಿಂದ ಯಳೆಯಲ್ಪಡುವ ಮಾನೋರೇಲ್ ಟ್ರಾಮ್ವೆಲೈನನ್ನ ಹಂಗಾಮಿಯಾಗಿ ಹಾಕಿಕೊಳ್ಳಲು ಮಂಜೂರಿ ಹುಕ್ಕುಂ ಬಗ್ಯೆ ಬೆಂಗಳೂರು ಇಂಗ್ಲೀಷು ವೇರ್‌ಹೌಸ್ ಜನರಲ್ ಮರಚೆಂಟು ಮತ್ತು ಬ್ಯಾಂಕರ್ ಮಿಸ್ಟರ್ ಹಾಜಿ ಇಸ್ಮಾಯಿಲ್ ಸೇಟರವರು ಅರ್ಜಿ ಕೊಟ್ಟಿರುವದ್ದರಿಂದ ಮೈಸೂರು ಶ್ರೀಮನ್ ಮಹಾರಾಜ ಸರಕಾರದವರು 1906ನೆ ಇಸವಿ IIನೆ ಮೈಸೂರು ಟ್ರಾಂವೆಗಳ ರೆಗ್ಯುಲೇಷನ್ 6ನೆ ಪ್ರಕರಣದ 3—4ನೆ ಕಲಂಗಳನ್ನನುಸರಿಸಿ ಈ ಕೆಳಗೆ ನಮೂದಾಗುವ ಹುಕುಂ ಮಾಡಿರುವದು ಈ ಮೂಲಕ ಪ್ರಸಿದ್ಧಪಡಿಸಲ್ಪಟ್ಟು ಇರುತ್ತೆ.

ಅವತರಣಿಕೆ.

ಚಿಕ್ಕ ಹೆಸರು.

1. ಈ ಹುಕುಂ ಮಿ॥ ಹಾಜಿ ಇಸ್ಮಾಯಿಲ್ ಸೇಟರ ಮಾನೋರೇಲ್ ಹುಕುಂ ಯೆಂದು ಕರಿಯಲ್ಪಡತಕ್ಕದ್ದು.

ಅರ್ಥವಿವರಣೆ ಕಲಂ.

2. ಮೈಸೂರು ಟ್ರಾಂವೆ ರೆಗ್ಯುಲೇಷನ್‌ನಲ್ಲಿ ವಿವರಿಸಲ್ಪಟ್ಟಿರುವ ಅರ್ಥಗಳೇ ಈ ಹುಕುಂನಲ್ಲಿ ಉದಹರಿಸಲ್ಪಟ್ಟಿರುವ ಶಬ್ದಗಳಿಗು ಮತ್ತು ಉಚ್ಚಾರಣೆಗಳಿಗು ಅನ್ವಯವಾಗತಕ್ಕದ್ದು. ಆದರೆ ಈ ಹುಕುಂನಲ್ಲಿ "ಮಾನೋರೇಲ್ ಟ್ರಾಂ ಲೈನ್" ಅಥವಾ "ಈ ಕೆಲಸ" ಎಂಬ ಉಚ್ಚಾರಣೆಗಳು ಈ ಹುಕುಂನಿಂದ ಮಂಜೂರಾಗಿರುವ ಮಾನೋರೇಲ್ ಟ್ರಾಂ ಲೈನ್ ಮತ್ತು ಕೆಲಸಗಳು ಮತ್ತು ಕಾರ್ಯಗಳೆಂದು ಅರ್ಥವಾಗತಕ್ಕದ್ದು.

ಅನ್ವಯವಾಗುವ ಷರತ್ತುಗಳು.

3. ಈ ಹುಕುಂನಿಂದ ಮಂಜೂರಾಗಿರುವ ಮಾನೋರೇಲ್ ಟ್ರಾಂ ಲೈನ್ ಎಂಬುವದು 1906ನೆ ಇಸವಿ IIನೆ ಮೈಸೂರು ಟ್ರಾಂವೆಗಳ ರೆಗ್ಯುಲೇಷನ್ ಅನುಸರಿಸಿ ಮತ್ತು ಈ ಹುಕುಂನ ನಿಬಂಧನೆಗಳಿಗೆ ಒಳಪಟ್ಟು ಹಾಕಲ್ಪಡತಕ್ಕದ್ದು, ಕಾಪಾಡಲ್ಪಡತಕ್ಕದ್ದು ಮತ್ತು ಕೆಲಸ ನಡಸಲ್ಪಡತಕ್ಕದ್ದು.

ಪ್ರಮೋಟರ್ ಯಾ ಪ್ರವರ್ತಕ.

4. ಬೆಂಗಳೂರು ಇಂಗ್ಲೀಷ್ ವೇರಹೌಸ್ ಜನರಲ್ ಮರಚೆಂಟ್ ಮತ್ತು ಬ್ಯಾಂಕರ್ ಮಿ॥ ಹಾಜಿ ಇಸ್ಮಾಯಿಲ್ ಸೇಟರವರು ಈ ಹುಕುಮಿನ ಉದ್ದೇಶಕ್ಕಾಗಿ ಪ್ರಮೋಟರ್ ಯಾ ಪ್ರವರ್ತಕರಾಗಿಯು ಮತ್ತು ಈ ಹುಕುಂನಲ್ಲಿ ಪ್ರಮೋಟರ್ ಯಾ ಪ್ರವರ್ತಕನೆಂದು ಉದಹರಿಸಲ್ಪಟ್ಟಿರುವದಾಗಿಯು ಇರತಕ್ಕದ್ದು.

ಕೆಲಸ ಪ್ರಾರಂಭ.

5. ಟ್ರಾಂ ಲೈನ್ ಕೆಲಸವು ತಕ್ಷಣ ಪ್ರಾರಂಭಿಸಲ್ಪಡಬಹುದು.

ಟ್ರಾಂ ಲೈನ್ ಕೆಲಸವು ಉಪಕ್ರಮಿಸಲ್ಪಡುವುದಕ್ಕೆ ಮುಂಚೆಯು ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳಲ್ಲಿಯು ವೆಸ್ಟರ್ನ ಸರಕಲ್ ಸೂಪರಿಂಟೆಂಡಿಂಗ್ ಇಂಜನಿಯರವರ ಹುಕುಂ ಪಡಿಯಬೇಕಾದ್ದು.

6. ಪ್ರಮೋಟರ್ ಯಾ ಪ್ರವರ್ತಕನು ರಸ್ತೆ ಮೇಲ್‌ಭಾಗವನ್ನ ಅಗಿಯುವದಕ್ಕೆ ಮುಂಚೆ ಭಾಟಾ ರಸ್ತೆ ಮೇಲೆ ಹಾಕಬೇಕಾದ ಮಾರ್ಗ ಮತ್ತು ಸ್ಥಳದ ವಿಷಯದಲ್ಲಿ ವೆಸ್ಟರ್ನ ಸರಕಲ್ ಸೂಪರಿಂಟೆಂಡಿಂಗ್ ಇಂಜನಿಯರವರ ಮಂಜೂರಿಯನ್ನ ಪಡಿಯತಕ್ಕದ್ದು; ಮತ್ತು ಟ್ರಾಂ ಲೈನ್‌ನಲ್ಲಿ ಉಪಯೋಗಿಸಬೇಕಾದ ಸಾಮಾನುಗಳ ವಿಷಯದಲ್ಲಿಯು ಲೈನನ್ನ ಕಟ್ಟತಕ್ಕ ವಿಧಾನದ ವಿಷಯದಲ್ಲೂ ಮತ್ತು ಅಗದ ರಸ್ತೆ ಮೇಲ್‌ಭಾಗವನ್ನ ಪುನಃ ಸರಿಪಡಿಸುವ ವಿಷಯದಲ್ಲು ಸದರಿ ಸೂಪರಿಂಟೆಂಡಿಂಗ್ ಇಂಜನಿಯರವರು ನೇಮಿಸುವ ಷರತ್ತುಗಳಿಗೆ ಬದ್ಧನಾಗಿರತಕ್ಕದ್ದು.

ಟ್ರಾಂ ಲೈನನ್ನ ಕಾಪಾಡೋಣ ಮತ್ತು ರಿಪೇರಿ ಮಾಡೋಣ, ಪ್ರಮೋಟರ್ ಯಾ ಪ್ರವರ್ತಕನ ಕರ್ತವ್ಯವಾಗಿರತಕ್ಕದ್ದು.

7. ಟ್ರಾಂಲೈನಿಗಾಗಿ ಉಪಯೋಗಿಸಲ್ಪಟ್ಟ ರಸ್ತೆ ಭಾಗವನ್ನ ಪ್ರಮೋಟರ್ ಯಾ ಪ್ರವರ್ತಕನು ಸರಕಾರದವರಿಗೆ ಅಥವಾ ಅವರ ಕಡೆ ಅಧಿಕಾರ ಹೊಂದಿದ ಪ್ರತಿನಿಧಿಗೆ ಸಮರ್ಪಕವಾಗಿರುವಂತೆ ರಿಪೇರಿಯಲ್ಲಿಡತಕ್ಕದ್ದು; ಮತ್ತು ಈ ಹುಕುಮಿನ ಉದ್ದೇಶಕ್ಕಾಗಿ ಪ್ರಮೋಟರ್ ಯಾ ಪ್ರವರ್ತಕನು ಆ ರೀತಿ ರಿಪೇರಿ ಮಾಡಬೇಕಾದ ಮತ್ತು ಕಾಪಾಡಬೇಕಾದ ಭಾಟಾ ಮಾರ್ಗದ ಭಾಗವು ಅದರ ಹೊರ ಅಂಚಿನಿಂದ ಸದರಿ ಲೈನ್ ಮೇಲೆ ಟ್ರಕ್ಕು ಯಾನೆ ಚಿಕ್ಕ ಚಕ್ರದ ಭಂಡಿಗಳಲ್ಲಿ ವಿಸ್ತಾರವಾದದ್ದು ಅಥವಾ ವ್ಯಾಗನ್ ಯಾನೆ 4 ಚಕ್ರದ ಭಂಡಿಯೂ ಅಥವಾ ಉರುಳುವ ಸರಕು ಧಾರಾಳವಾಗಿ ಹೋಗ್ಗುವದಕ್ಕೆ ಬೇಕಾದಷ್ಟು ಜಾಗದ ಹೊರಗೆ ಒಂದು ಅಡಿ ವಿಸ್ತೀರ್ಣದ ವರಿವಿಗಿನ ರಸ್ತೆಯನ್ನ ಅಷ್ಟಗಿ ಇರತಕ್ಕದ್ದು.

ಟ್ರಾಂ ಲೈನ್ ಅಭಿವೃದ್ಧಿ ವಿಷಯದಲ್ಲಿ ಹುಕುಂ ಮಾಡುವದಕ್ಕೆ ಸರಕಾರದವರ ಅಧಿಕಾರ.

8. ಪ್ರಮೋಟರ್ ಯಾ ಪ್ರವರ್ತಕನು ಸರಕಾರದವರು ಅಥವಾ ಅವರಕಡೆ ಅಧಿಕಾರ ಹೊಂದಿದ ಪ್ರತಿನಿಧಿಯು ಆಯಾಯ ಕಾಲದಲ್ಲಿ ಕೋರುವ ಪ್ರಕಾರ ಬಹಿರಂಗವಾದ ಜನರ ವಸತಿ ಅಥವಾ ಅನುಕೂಲಕ್ಕಾಗಿ ಅವಶ್ಯಕವಿರುವ ಮಟ್ಟಿಗೆ ಅಥವಾ ಸರಕಾರದವರು ಅವಶ್ಯಕವೆಂದು ಆಲೋಚಿಸುವ ಅಭಿವೃದ್ಧಿಗಳನ್ನು ಸದರಿ ಟ್ರಾಂ ಲೈನ್‌ಗೆ ಕಲ್ಪಿಸತಕ್ಕದ್ದು ಮತ್ತು ಸದರಿ ರಸ್ತೆಯ ಮುಂದಣ ಬದಲಾವಣೆಗಳಿಗೆ ಅನುಕೂಲಿಸುವಂತೆ ಟ್ರಾಂ ಲೈನಿನ ಸ್ಥಳವನ್ನು ಮತ್ತು ಮಟ್ಟವನ್ನು ಬದಲಾಯಿಸತಕ್ಕದ್ದು.

ಸರಕಾರದವರ ಹುಕುಂ ಪ್ರಕಾರ ಪ್ರಮೋಟರ್ ಯಾ ಪ್ರವರ್ತಕನು ಕ್ರಾಸಿಂಗ್ಸ ಗಳೆಂಬ ದಾಟುವಿಕೆಗಳು ಮೊದಲಾದ್ದನ್ನ ಮದಗಿಸೋಣ.

9. ಸರಕಾರದವರಿಂದ ಅಥವಾ ಅವರಕಡೆ ಅಧಿಕಾರ ಹೊಂದಿದ ಪ್ರತಿನಿಧಿಯಿಂದ ಗೊತ್ತುಮಾಡಲ್ಪಡಬಹುದಾದ ಕ್ರಾಸಿಂಗ್ಸ ಗಳೆಂಬ ದಾಟುವಿಕೆಗಳನ್ನು, ಹಾದು ಹೋಗುವ ಸ್ಥಳಗಳನ್ನು, ಸೈಡಿಂಗ್ ಯಾನೆ ಪಕ್ಕದ ಲೈನ್‍ಗಳನ್ನು ಸಂಧಿ ಸ್ಥಳಗಳನ್ನು ಮತ್ತು ಇತರ ಕೆಲಸಗಳನ್ನು ಪ್ರಮೋಟರ್ ಯಾ ಪ್ರವರ್ತಕನು ಮದಗಿಸತಕ್ಕದ್ದು; ಮತ್ತು ಸರಕಾರದವರಿಗೆ ಯುಕ್ತವೆಂದು ಆಯಾಯ ಕಾಲದಲ್ಲಿ ತೋರುವ ಅಥವಾ ಟ್ರಾಂ ಲೈನನ್ನು ಒಳ್ಳೇ ಸ್ಥಿತಿಯಲ್ಲಿ ಇಡುವದಕ್ಕೆ ಅನುಕೂಲ ಅಥವಾ ಅವಶ್ಯಕವೆಂದು ಕಂಡುಬರುವ ಹೆಚ್ಚು ಕೆಲಸಗಳನ್ನು ಸಹಾ ಮದಗಿಸತಕ್ಕದ್ದು.

ಅವಶ್ಯಕವಾದ ಕೆಲಸಗಳನ್ನ ಮಾಡುವುದಕ್ಕಾಗಿ ಟ್ರಾಂ ಲೈನ್ ವಿಷಯದಲ್ಲಿ ಪ್ರವೇಶಿಸಲು ಅಧಿಕಾರ ಕೊಡುವದಕ್ಕೆ ಸರಕಾರದವರ ಅಧಿಕಾರಗಳು.

10. ಟ್ರಾಂ ಲೈನ್ ವಳಿತವಾಗಿರುವ ಭೂಮಿಯಲ್ಲಿ ಅಥವಾ ಮೇಲೆ ಪ್ರವೇಶಮಾಡಿ ತೋಡುಗಳು, ಜಲದಾರಿಗಳು, ನೀರಿನ ಕೊಳಾಯಿಗಳು ಟೆಲಿಗ್ರಾಫ್ ಲೈನ್ ಯಾ ತಂತಿ ಸಾಲುಗಳು ಮೊದಲಾದವುಗಳ ವಿಷಯವಾಗಿ ಅವಶ್ಯಕವಾದ ಕೆಲಸಗಳನ್ನ ಮಾಡಲೂ ಸ್ಥಳೀಯ ಅಧಿಕಾರಿಗು, ರಸ್ತೆಯ ಅಧಿಕಾರಿಗೂ ಅಥವಾ ಯಾವನಾದರೊಬ್ಬ ಮನುಷ್ಯನಿಗೂ ಸ್ವಾತಂತ್ರ ಕೊಡುವ ಅಧಿಕಾರವನ್ನ ಸರಕಾರದವರು ವುಳಿಸಿಕೊಂಡು ಇರುತ್ತಾರೆ.

ರಸ್ತೆಯ ವಳಗೆ ಅಥವಾ ಮೇಲೆ ಇರುವ ಕಟ್ಟಡಗಳ ವಿಷಯದಲ್ಲಿ ಪ್ರವೇಶಿಸಲು ಪ್ರಮೋಟರ್ ಯಾ ಪ್ರವರ್ತಕನಿಗೆ ಅವಕಾಶ ಕೊಟ್ಟಿರುವದರ ಷರತ್ತುಗಳು.

11. ಪ್ರಮೋಟರ್ ಯಾ ಪ್ರವರ್ತಕನು ಸರಕಾರದವರ ಅಥವಾ ಅವರ ಕಡೆ ಅಧಿಕಾರ ಹೊಂದಿದ ಪ್ರತಿನಿಧಿಯಿಂದ ಮೊದಲಾಗಿ ಅಪ್ಪಣೆ ಪಡೆಯದೆ ಹಾಲಿ ಇರುವ ಜಲದಾರಿ ಅಥವಾ ತೋಡು, ಟೆಲಿಗ್ರಾಫ್ ಲೈನ್ ಯಾ ತಂತಿಸಾಲು, ನೀರಿನ ಕೊಳಾಯಿ ಅಥವಾ ಯಾವುದಾದರೂ ನೇತುವೆ ಅಥವಾ ಮೋಹರಿ ಇವುಗಳ ವಿಷಯವಾಗಿ ಕೈಹಚ್ಚಕೂಡದು ಅಥವಾ ಅವುಗಳ ಸ್ಥಳವನ್ನಾಗಲಿ ಅಥವಾ ಮಟ್ಟವನ್ನಾಗಲಿ ಬದಲಾಯಿಸಕೂಡದು.

ಉಪಯೋಗಿಸಲ್ಪಡತಕ್ಕ ಚಲನಾಶಕ್ತಿ.

12. ಈ ಟ್ರಾಂ ಲೈನಿನಮೇಲೆ ಉಪಯೋಗಿಸಲ್ಪಡತಕ್ಕ ಚಲನಾಶಕ್ತಿಯು ಕೂಲಿಗಳು, ಎತ್ತುಗಳು, ಅಥವಾ ಕುದುರೆಗಳಾಗಿರತಕ್ಕದ್ದು; ಮತ್ತು ಹವೆ ಅಥವಾ ಇತರ ಯಾವದಾದರು ಮೆಕ್ಯಾನಿಕಲ್ ಯಾ ಯಂತ್ರಿಕ ಬಲವು ಉಪಯೋಗಿಸಲ್ಪಡತಕ್ಕದ್ದಲ್ಲ.

ಟ್ರಾಂ ಲೈನ್ ಯಾವ ಉದ್ದೇಶಕ್ಕೆ ಉಪಯೋಗಿಸಲ್ಪಡತಕ್ಕದ್ದು.

13. ಈ ಟ್ರಾಂ ಲೈನ್ ಸರಕುಗಳು, ಮ್ಯಾಂಗನೀಸ್ ಎಂಬ ಲೋಹ ಮತ್ತು ಇತರ ಪದಾರ್ಥಗಳನ್ನ ಸಾಗಿಸುವದಕ್ಕೆ ಮಾತ್ರವೆ ಉಪಯೋಗಿಸಲ್ಪಡತಕ್ಕದ್ದು ಮತ್ತು ಪ್ರಯಾಣೀಕರನ್ನ ಸಾಗಿಸೋಣವು ಖಂಡಿತವಾಗಿ ನಿರೋಧಿಸಲ್ಪಟ್ಟು ಇರುತ್ತೆ.

ರಸ್ತೆಯನ್ನ ಉಪಯೋಗಿಸುವದಕ್ಕಾಗಿ ಸರಕಾರದವರಿಗೆ ಕೊಡಬೇಕಾದ ತೆರಿಗೆ.

14. ಪ್ರಮೋಟರ್ ಯಾ ಪ್ರವರ್ತಕನು ರಸ್ತೆಯನ್ನ ಉಪಯೋಗಿಸುವದಕ್ಕಾಗಿ ಈ ಮಾನೋರೇಲ್ ಮೇಲೆ ಸಾಗಿಸುವ ಮ್ಯಾಂಗನೀಸ್ ಎಂಬ ಲೋಹದ ಅದರು ಟ್ರಕ್ಕ ಯಾನೆ ಚಿಕ್ಕ ಚಕ್ರಗಳ ಭಂಡಿ ಭರ್ತಿ ಒಂದಕ್ಕೆ ಆರು ಆಣೆಗಳಂತೆ ತೆರಿಗೆಯನ್ನ ಸರಕಾರಕ್ಕೆ ಕೊಡತಕ್ಕದ್ದು; ಮತ್ತು ಇತರ ವಿಧವಾದ ಪ್ರಯಾಣಕ್ಕೆ ಅನಾನುಕೂಲವಿಲ್ಲದ ಹಾಗೆ ಈ ರೈಲ್ ಸ್ಥಾಪಿಸಲ್ಪಡತಕ್ಕದ್ದಕ್ಕು ಮತ್ತು ಅದರ ವಾಯಿದೆ ವಿಷಯದಲ್ಲಿಯು ಮೈಸೂರು ಸಂಸ್ಥಾನದ ಶ್ರೀಮನ್ ಮಹಾರಾಜಾ ಸರಕಾರದವರು ನೇಮಿಸಲ್ಪಡಬಹುದಾದ ಷರತ್ತುಗಳಿಗೆ ಬದ್ಧನಾಗಿರತಕ್ಕದ್ದು.

ಶಿವಮೊಗ್ಗಾ ಮುನಿಸಿಪಾಲಿಟಿಗೆ ಕೊಡಬೇಕಾದ ತೆರಿಗೆ.

15. ಈ ಉದ್ದೇಶಿಸಲ್ಪಟ್ಟು ಇರುವ ಲೈನ್ ಮೇಲೆ ಸಾಗಿಸಲ್ಪಡುವ ಎಲ್ಲಾ ಅದರಿನ ಮೇಲೂ ಟನ್ ಒಂದಕ್ಕೆ ಒಂದಾಣೆಯಂತೆ ಸುಂಕವನ್ನು ಪ್ರಮೋಟರ್ ಯಾ ಪ್ರವರ್ತಕನು ಶಿವಮೊಗ್ಗಾ ಮುನಿಸಿಪಾಲಿಟಿಗೆ ಕೊಡತಕ್ಕದ್ದು.

ಕೆಲಸವನ್ನ ಪರಾಧೀನ ಮಾಡುವಿಕೆ.

16. ಈ ಕೆಲಸವನ್ನಾಗಲಿ ಅಥವಾ ಅದರ ಯಾವ ಭಾಗವನ್ನಾಗಲಿ ಕ್ರಯ, ಅಡವು, ಗುತ್ತಿಗೆ, ಅದಲುಬದಲು ಅಥವಾ ಇತರ ವಿಧವಾಗಿಯೇ ಆಗಲಿ ಪರಾಧೀನಮಾಡಲು ಪ್ರಮೋಟರ್ ಯಾ ಪ್ರವರ್ತಕನಿಗೆ ಅಧಿಕಾರ ಕೊಡಲ್ಪಟ್ಟು ಇರುವದಿಲ್ಲ.

ಹುಕುಂ ಬಮೋಜಿಬ್,

ಡಬ್ಲ್ಯೂ. ಮೆಕ್‌ಹಚ್ಚೀ,

ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನ್ಮೆಂಟ್ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಛಾಪಿಸಿ ಆದ್ದು. [ನಂ. 5.

ಬೆಂಗಳೂರು, ಗುರುವಾರ, ಜನವರಿ ತಾ|| 31, ಸ್ 1907.

ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮಿಷನರವರು, ಕಂಟ್ರೋಲರವರು, ಪಬ್ಲಿಕ್‌ವರ್ಕ್ಸ ಆಫೀಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಜ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡ್ ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟು ಫೀಸ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 10ನೆ ಜನವರಿ 1907.

ನಂ. 6185—ಸ್ಯಾನಿಟರಿ 66-06-24, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿ ಪಡಿಸುವದೇನಂದರೆ:— ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21-96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21 96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಜೋಡಿ ಕಟ್ಟೆಗೆರೆ	ಬೇಲೂರು
ಬಾಣಾವಾರ	ಅರಸೀಕೆರೆ

ತಾರೀಖು 11ನೆ ಜನವರಿ 1907.

ನಂ. 6213—ಸ್ಯಾನಿಟರಿ 156-06-2, ಕೋಲಾರ ಡಿಸ್ಟ್ರಿಕ್ಟು ಮುಳಬಾಗಲು ತಾಲ್ಲೂಕಿನ ಆವನಿ ಶ್ರೀರಾಮಲಿಂಗೇಶ್ವರ ಸ್ವಾಮಿಯವರ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದರಿಂದ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡಿಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಫೆಬ್ರವರಿ 11ನೆ ತಾರೀಖಿನಿಂದ 1907ನೆ ಇಸವಿ ಫೆಬ್ರವರಿ 21ನೆ ತಾರೀಖಿನವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 11ನೆ ಜನವರಿ 1907.

ನಂ. 6215—ಸ್ಯಾನಿಟರಿ 139-06—8, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿ ಪಡಿಸುವುದೇನಂದರೆ :—ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಎಡಿಯೂರು	ಬೆಂಗಳೂರು
ಜಕ್ಕೂರು	ಡಿಟೋ
ಕರ್ಲಕಾನಹಳ್ಳಿ ...	ಕರ್ಲಕಾನಹಳ್ಳಿ
ಕೃಷ್ಣಸಾಗರ ...	ಆನೆಕಲ್ಲು
ಬಳಗೆರೆ ಕಲ್ಲಹಳ್ಳಿ	ಡಿಟೋ
ಹೊನ್ನಗಂಗಪ್ಪನ ಪಾಳ್ಯ	ನೆಲಮಂಗಲ
ದೊಡ್ಡಚನ್ನೆಹಳ್ಳಿ	ಡಿಟೋ
ಬಿನ್ನಮಂಗಲ ...	ಡಿಟೋ
ಜಕ್ಕಸಂದ್ರ	ಡಿಟೋ
ತಾವರೆಕೆರೆ	ಮಾಗಡಿ
ಸೂಳೆವರ	ಡಿಟೋ

ತಾರೀಖು 22ನೆ ಜನವರಿ 1907.

ನಂ. 6522—ಸ್ಯಾನಿಟರಿ 134-06-8, ಸಮಸ್ತ ಜನರ ತಿಳುವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವದು.

ಸ್ಥಳ.	ತಾಲ್ಲೂಕು.
ವ್ಯಾಲನಹಳ್ಳಿ	ಚಿಕ್ಕನಾಯಕನಹಳ್ಳಿ.

ತಾರೀಖು 22ನೆ ಜನವರಿ 1907.

ನಂ. 6524—ಸ್ಯಾ. 57-06-4, ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಒಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡು ಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು	
			ಇಂದ	ಗೆ
1. ವೀರಭದ್ರದೇವರ ಜಾತ್ರೆ	ಕೋಟೆಗುಡ್ಡ	ಜಗಲೂರು ...	28—2—07	2—3—07
2. ಚೌಡಮ್ಮನ ಜಾತ್ರೆ ...	ಗುರುಸಿದ್ದಾಪುರ ...	ಡಿಟೋ ...	27—2—07	2—3—07
3. ರಂಗನಾಥ ದೇವರ ಜಾತ್ರೆ	ತಾರೆಹಳ್ಳಿ ...	ಡಿಟೋ ...	25—2—07	28—2—07

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

21

ತಾರೀಖು 23ನೆ ಜನವರಿ 1907.

ನಂ. 6550—ಸ್ಯಾನಿಟರಿ 66-06—25, ಸಮಸ್ತ ಜನರ ತಿಳಿವಳಿಕೆಯು ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು. ಎಪಿಡಿಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯು ವರ್ಷದ ಫೆಬ್ರವರಿ 10ನೆಯು ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384 ಮಿಸಲೇನಿಯಸ್ ಫೈಲ್ 21—96. ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗುತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು
1. ಕೋಡಿಗೆರಹಳ್ಳಿ	ಆಲೂರು ಸಬ್ ತಾಲ್ಲೂಕು.
2. ಪಾಳ್ಯಪಟ್ಟ	ಡಿಟೋ

ತಾರೀಖು 23ನೆ ಜನವರಿ 1907.

ನಂ. 6558-ಸ್ಯಾ. 156-06-5, ಕೋಲಾರ್ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ:—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು ಇಂದ	ತಾರೀಖು ಗೆ
1. ದನಗಳ ಜಾತ್ರೆ ...	ವೊಕ್ಕಲೇರಿ ...	ಕೋಲಾರ	25—1—07	6—2—07
			ಯೆರಡು ದಿವಸಗಳೂ ಸಹ	
2. ಶ್ರೀ ಭೋಗೆ ನಂದೀಶ್ವರ ಸ್ವಾಮಿ ರಥೋತ್ಸವ.	ನಂದಿ.	ಚಿಕ್ಕಬಳ್ಳಾಪುರ ...	11—2—07	22—2—07
			ಯೆರಡು ದಿವಸಗಳೂ ಸಹ	
3. ಶ್ರೀ ವೆಂಕಟರಮಣಾ ಸ್ವಾಮಿ ರಥೋತ್ಸವ.	ಗುಟ್ಟಹಳ್ಳಿ ...	ಬವರಿಂಗಪೇಟೆ ...	27—1—07	1—2—07
			ಯೆರಡು ದಿವಸಗಳೂ ಸಹ	

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಪ್ರತಿ ಬಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 24ನೆ ಜನವರಿ 1907.

ನಂ. 6589—ಸ್ಯಾನಿಟರಿ 57-06—6, ಚಿತ್ರದುರ್ಗ ಡಿಸ್ಟ್ರಿಕ್ಟು ಹಿರಿಯೂರು ತಾಲ್ಲೂಕಿನ ಹಿರಿಯೂರಿಗೆ ತೇರುಮಲ್ಲೇಶ್ವರಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜ ರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು, 1907ನೆಯು ವರ್ಷದ ಫೆಬ್ರವರಿ 1ನೆ ತಾರೀಖಿನಿಂದ ಫೆಬ್ರವರಿ 15ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 28ನೆ ಜನವರಿ 1907.

ನಂ. 6699—ಸ್ಯಾನಿಟರಿ 66-06—28, ಸಮಸ್ತ ಜನರ ತಿಳಿವಳಿಕೆಯು ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶ ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯು ವರ್ಷದ ಫೆಬ್ರವರಿ 10ನೆಯು ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವುದು.

ಸ್ಥಳ.	ತಾಲ್ಲೂಕು.
ಯಲ್ಲೆಸಪುರ	ಹೊಳೆನರಸೀಪುರ.

ತಾರೀಖು 30ನೆ ಜನವರಿ 1907.

ನಂ. 6758—ಸ್ಯಾನಿಟರಿ 156-06-7, ಕೋಲಾರ ಡಿಸ್ಟ್ರಿಕ್ಟು ಬೌರಿಂಗಪೇಟೆ ತಾಲ್ಲೂಕಿನ ಕೋಲಾರ ಗೋಲ್ಡ್ ಫೀಲ್ಡ್ಸಿಗೆ ಸೇರಿದ ಪೆದ್ದಪಲ್ಲಿ ಗ್ರಾಮಕ್ಕೆ ಗಂಗಮ್ಮನ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ —

1897ನೆಯ ವರ್ಷದ 2ನೆಯ ನಂಬರ ಎಪಿಡೆಮಿಕ್ ಡಿಸೀಸೆಸ ರೆಗ್ಯುಲೇಷನ್ಸ್ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಫೆಬ್ರುವರಿ 4ನೆ ತಾರೀಖಿನಿಂದ 1907ನೆ ಫೆಬ್ರುವರಿ 8ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸಿ ಹಾರನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 19ನೆ ಜನವರಿ 1907.

ನಂ. ಜಿ. 4405—ಜಿ. ಎಂ. 182-06-6, ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಯ ಅಂಡರ್ ಸೆಕ್ರೆಟೆರಿಯವರಾದ ಮಿ॥ ಕೆ. ಮಾರ್ಟರವರಿಗೆ 1907ನೆ ಇಸವಿಯ ಜನವರಿ 17ನೆ ತಾರೀಖಿನಿಂದ ಎರಡು ತಿಂಗಳ ವರೆಗೆ ಪ್ರಿವಿಲೇಜ್ ರಜಾ ಕೊಟ್ಟಿದೆ.

2. 1906ನೆ ಇಸವಿಯ ನವೆಂಬರು 26ನೆ ತಾರೀಖಿನ ಫೈನಾನ್ಷಲ್ 3850-2—ಜಿ. ಎಫ್. 161-06—7ನೆ ನಂಬರಿನ ಸರ್ಕಾರಿ ಹುಕುಮಿನಲ್ಲಿ ಮಂಜೂರು ಮಾಡಲ್ಪಟ್ಟ ಹಂಗಾಮಿ ಏರ್ಪಾಡುಗಳು—ಎಂದರೆ, ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯವರ ಕಚೇರಿಯಲ್ಲಿ ಮಿ॥ ಟಿ. ತಿಂಮಶೆಟ್ಟರು ಕೆಲಸ ಮಾಡೋಣವೂ, ಮಿ॥ ಎ. ಕೃಷ್ಣಸ್ವಾಮಿ ಅಯ್ಯಂಗಾರ್ರನ್ನು ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರಾಗಿ ಬದಲಿ ಕೆಲಸ ನೋಡಲು ನೇಮಕ ಮಾಡಿರೋಣವೂ, ಮಿ॥ ಮಾರ್ಟರವರು ರಜಾ ಮೇಲೆ ಇರುವ ವರೆಗೆ ನಡೆಯುತ್ತಿರತಕ್ಕದ್ದು.

ತಾರೀಖು 23ನೆ ಜನವರಿ 1907.

ನಂ. ಜಿ. 2151—ಲೆಜಿಸ್. 27-06-2, 1906ನೆಯ ಇಸವಿಯ 2ನೆ ನಂಬರ್ ಮೈಸೂರು ಟ್ರಾಂವೆಗಳ ರೆಗ್ಯುಲೇಷನಿನ 12ನೆ ಪ್ರಕರಣವನ್ನು ಕುರಿತು, ಮೈಸೂರು ಸಂಸ್ಥಾನದ ಚೀಫ್ ಇಂಜನಿಯರೂ, ಮತ್ತು ಪೂರ್ವ ಮತ್ತು ಪಶ್ಚಿಮ ಸರ್ಕಲುಗಳ ಸೂಪರಿಂಟೆಂಡಿಂಗ ಇಂಜನಿಯರುಗಳೂ ತಮ್ಮ ತಮ್ಮ ಅಧಿಕಾರ ಸರಹದ್ದುಗಳೊಳಗೆ ಟ್ರಾಂವೆಗಳನ್ನು ಪರೀಕ್ಷೆ ಮಾಡುವುದಕ್ಕೋಸ್ಕರ ಇಂಜನಿಯರುಗಳಾಗಿ ಇದರಿಂದ ನೇಮಕ ಮಾಡಲ್ಪಟ್ಟಿರುತ್ತಾರೆ.

ತಾರೀಖು 23ನೆ ಜನವರಿ 1907.

ನಂ. ಜಿ. 2153—ಪೊ. 47-06-6, ಮೈಸೂರು ಸರ್ವಿಸ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ ಪ್ರೊಬೇಷನರ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿ॥ ಟಿಪ್ಪು ಸುಲ್ತಾನ್ ಅಲಿಖಾನರವರಿಗೆ 1906ನೆ ಇಸವಿ ಡಿಸೆಂಬರ 10ನೆ ತಾರೀಖಿನ ಲಾಗಾಯತು ಒಂದು ತಿಂಗಳೂ 15 ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿರುತ್ತದೆ.

ತಾರೀಖು 23ನೆ ಜನವರಿ 1907.

ಪೇಟೆಂಟ ಎಂದರೆ ವಿಶೇಷಾಧಿಕಾರ ಪತ್ರಿಕೆ.

ನಂ. ಜಿ. 4594—ಜಿ. ಎಂ. 154-06-10, ಸನ್ 1894ನೆ ಇಸವಿಯ 11ನೆ ನಂಬರ (ನವೀನ ಕಲ್ಪನೆಗಳು ಮತ್ತು ನಕ್ಷೆಗಳ) ರೆಗ್ಯುಲೇಷನಿನ 8, 9, 10 ಮತ್ತು 11ನೆ ಪ್ರಕರಣಗಳನ್ನನುಸರಿಸಿ ಒಂದು ನವೀನ ಕಲ್ಪನೆಯ ಇದರಡಿ ಕಂಡ ವಿವರಣೆಯು ತಿಳಿಪಿರುತ್ತದೆ. ಮತ್ತು ಇಷ್ಟವಿರುವವರು ಮೈಸೂರು ಸರ್ಕಾರದ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರಿಗೆ ಬರದುಕೊಂಡು ಒಂದು ರೂಪಾಯಿ ರುಸುಂ ಕೊಟ್ಟು ಅವರ ಕಚೇರಿಯಲ್ಲಿ ಆ ವಿವರಣೆಯನ್ನು ಪರೀಕ್ಷಿಸಿ ನೋಡಲು ಅಡ್ಡಿ ಇರುವುದಿಲ್ಲ.

ಇಂಗ್ಲೆಂಡಿನಲ್ಲಿ ಲಂಡನ್ ಪಟ್ಟಣದ ಬಿಷಪ್ಸ್ ಗೇಟ್ ಬೀದಿಯ 2ನೆ ನಂಬರ ಮನೆಯಲ್ಲಿರುವ ಧಾತುಶೋಧಕ ಮಿ॥ ಚಾರ್ಲ್ಸ್ ಬಟರ್ಸ್ ಯವರಿಂದ ಮಾಡಲ್ಪಟ್ಟದು.

"ಚಿನ್ನದ ಅದುರನ್ನು ಶೋಧಿಸುವ ವಿಧಾನ ಮತ್ತು ಅದಕ್ಕೆ ಉಪಕರಣಗಳು."

ತಾರೀಖು 24ನೆ ಜನವರಿ 1907.

ನಂ. ಫೈ 5661 — ಜಿ. ಎಫ್. 100-06, ಸಂಸ್ಥಾನದ ಹುಜೂರು ಖಜಾನೆಯ ಚಾರ್ಜಿನಲ್ಲಿರುವ ಅಧಿಕಾರಿಗಳಾದ ಮಿ॥ ಕೆ. ಕೃಷ್ಣಯ್ಯರಿಗೆ, ಮೈಸೂರು ಸರ್ವಿಸ ರೆಗ್ಯುಲೇಷನುಗಳ 241ನೆ ಪ್ರಕರಣದ ಮೇರೆ 1907ನೆ ಇಸವಿಯ ಜನವರಿ 16ನೆ ತಾರೀಖಿನ ಅಪರಾಹ್ನ ದಿಂದ ಒಂದು ತಿಂಗಳವರೆಗೆ ಸಂಬಳವಿಲ್ಲದ ಅಸಾಧಾರಣ ರಜಾ ಕೊಟ್ಟಿದೆ.

2. ಮಿ॥ ಕೃಷ್ಣಯ್ಯರವರು ರಜಾ ಮೇಲೆ ಇರುವ ವರೆಗೆ ಅಥವಾ ಅನ್ಯೋಂದು ಹುಕುಂ ಕೊಡುವ ವರೆಗೆ, ಅಸಿಸ್ಟೆಂಟ್ ಕಂಟ್ರೋಲರ ಮಿ॥ ಜಸ್ವಂತರಾವ್ ಬಾಡಾಮಿಯವರು ಸಂಸ್ಥಾನದ ಹುಜೂರು ಖಜಾನೆಯ ಚಾರ್ಜಿನಲ್ಲಿ ಇಡಲ್ಪಟ್ಟಿರುವರು.

ತಾರೀಖು 30ನೆ ಜನವರಿ 1907.

ನಂ. ಜಿ. 2273—ಪ್ರಿವಿಜನ್ 66-06—3, ಸನ್ 1907ನೆ ಇಸವಿಯ ಜನವರಿ 25ನೆ ತಾರೀಖಿನ ಪೂರ್ವಾಹ್ನ ಮೈಸೂರು ಸಂಸ್ಥಾನದ ಬಂದೀಖಾನೆಗಳ ಇನ್ಸ್ಪೆಕ್ಟರ್ ಜನರಲ್ ರವರ ಉದ್ಯೋಗದ ಚಾರ್ಜನ್ನು ಮಿ॥ ಪಿ. ಎಸ್. ಅಚ್ಯುತರಾಯರವರು ಒಪ್ಪಿಸಿದರು ಮತ್ತು ಮೇಜರ್ ಎಚ್. ಇ. ಡ್ರೇಕ್‌ಬ್ರಾಕ್‌ಮನ್, ಐ. ಎಂ. ಎಸ್. ರವರು ವಹಿಸಿದರು.

ತಾರೀಖು 9ನೆ ಜನವರಿ 1907.

ನಂ. ಫೈ. 5268—ಜಿ. ಎಫ್. 208-06-2, ಸಿವಿಲ್ ಅಕೌಂಟ್ ಕೋಡಿನ 1ನೆ ಪುಸ್ತಕದ 171ನೆ ಪ್ರಕರಣದ ಮೇರೆಗೆ, 1906ನೆ ಇಸವಿಯ ಡಿಸೆಂಬರು 31ನೆ ತಾರೀಖಿನ ದಿವಸ ಮೈಸೂರು ಸಂಸ್ಥಾನದ ದಿವಾನ್ ಸಾಹೇಬರವರ ಹೆಸರಿನಲ್ಲಿ ಮದ್ರಾಸು ಬ್ಯಾಂಕಿನಲ್ಲಿ ನಿಕ್ಷೇಪವಾಗಿ ಇಟ್ಟಿರುವ ಇಂಡಿಯಾ ಸರ್ಕಾರದ ಪ್ರಾಮಿಸರಿ ನೋಟುಗಳ ಇದರಡಿ ಕಂಡ ಪಟ್ಟಿಯನ್ನು; ಅಧಿಕಾರ ಪ್ರಯುಕ್ತ ಅವುಗಳನ್ನು ಹಿಡಿದುಕೊಂಡಿರುವವರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿ ಇದೆ :—

ಜಂಬರ್ ನಂಬರ್.	ಯಾವ ಮನುಷ್ಯನ ಅಥವಾ ಯಾವ ಫಂಡಿನ ಪರವಾಗಿ ಹಿಡಿಯಲ್ಪಟ್ಟಿದೆಯೋ ಅವನ ಅಥವಾ ಅದರ ಹೆಸರು.	ಬಡ್ಡಿಗೆ ಹಾಕಿದ ಮೊಬಲಗು.							ಯಾವ ಆಫೀಸರಿಗೆ ಬಡ್ಡಿಯು ಕಳುಹಿಸಲ್ಪಟ್ಟಿತೋ ಆ ಆಫೀಸರ ಹೆಸರು.
		1842-43ನೆ ಇಸವಿಯ ಶೇಕಡಾ 3½ ರೂಪಾಯಿನ ಬಡ್ಡಿಯ ಸಾಲ.	1854-55ನೆ ಇಸವಿಯ ಶೇಕಡಾ 3½ ರೂಪಾಯಿನ ಬಡ್ಡಿಯ ಸಾಲ.	1865ನೆ ಇಸವಿಯ ಶೇಕಡಾ 3½ ರೂಪಾಯಿನ ಬಡ್ಡಿಯ ಸಾಲ.	1879ನೆ ಇಸವಿಯ ಶೇಕಡಾ 3½ ರೂಪಾಯಿನ ಬಡ್ಡಿಯ ಸಾಲ.	1900-01ನೆ ಇಸವಿಯ ಶೇಕಡಾ 3½ ರೂಪಾಯಿನ ಬಡ್ಡಿಯ ಸಾಲ.	1896-97ನೆ ಇಸವಿಯ ಶೇಕಡಾ 3 ರೂಪಾಯಿನ ಬಡ್ಡಿಯ ಸಾಲ.	ಜುಮ್ಲಾ.	
	ವಿದ್ಯಾಭ್ಯಾಸಕ್ಕಾಗಿ ಧರ್ಮಾರ್ಥವಾಗಿ ಕೊಟ್ಟದ್ದು.	ರೂ.	ರೂ.	ರೂ.	ರೂ.	ರೂ.	ರೂ.	ರೂ.	
1	ಚಕ್ರವರ್ತಿನಿಯವರ ಬಾಲಿಕಾ ಪಾಠಶಾಲಾ (ಎಂಪ್ರೆಸ್ ಗರ್ಲ್ ಸ್ಕೂಲ್) ತುಮಕೂರು.	..	3,300	..	..	...	..	3,300	
2	ಶ್ರೀಮನ್ಮಹಾರಾಜರವರ ವಿದ್ಯಾರ್ಥಿ ವೇತನಗಳ ಫಂಡು.	..	..	...	5,100	...	..	5,100	
3	ಗ್ರಾಮ ಪಾಠಶಾಲೆಗಳ ಫಂಡು ...	1,50,000	..	...	...	...	..	1,50,000	
4	ತೀರ್ಥಹಳ್ಳಿ ಜೂಬಿಲಿ ಫಂಡು ...	300	100	2,000.	1,100	...	...	3,500	
5	ದಾಮೋದರದಾಸರ ಧರ್ಮ ಫಂಡು ..	39,600	5,82,400	80,300	24,400	800	...	7,27,500.	
6	ಶ್ರವಣಬೆಳಗೊಳದ ಬಡ ವಿದ್ಯಾರ್ಥಿ ವೇತನದ ಫಂಡು.	3,000	...	..	..	....	...	3,000	
7	ದಾವೂದ್‌ಖಾನರ ಇನಾಮು ಫಂಡು ...	..	500	..	..	..	..	500	
8	ಆಂಗ್ಲೋ ವರ್ನಾಕ್ಯುಲರ್ ಧರ್ಮ ಪಾಠಶಾಲೆಗೋಸ್ಕರ ವಿ|| ದೊಡ್ಡಣ್ಣಶೆಟ್ಟಿ ಕೊಟ್ಟದ್ದು.	..	29,500	...	...	..	...	29,500	
9	ಖಾನ್ ಬಹದ್ದೂರ್ ಮಹಮ್ಮದ್ ಬದ್ರುದೀನ್ ಸಾಹೇಬರ ವಿದ್ಯಾರ್ಥಿ ವೇತನ ಫಂಡು.	..	500	500	..	..	...	1,000	
10	ಕೆ. ಎ. ದೇವಯ್ಯನ ಚಿನ್ನದ ಬಿರುದಿನ ಬಿಲ್ಲೆಯ ಮೆಡಲನ್ನು ಸ್ಥಾಪಿಸುವುದಕ್ಕಾಗಿ ಕೊಟ್ಟ ಹಣ.	1,000	...	...	...	..	...	1,000	
11	ಶ್ರೀ ಕೃಷ್ಣರಾಜ ಒಡೆಯರ ವಿದ್ಯಾಭ್ಯಾಸ ಸಂಬಂಧದ ಇನಾಮುಗಳ ಫಂಡು, ತುಮಕೂರು.	500	...	...	..	...		500	
	ಜುಮ್ಲಾ ..	1,94,400	6,16,300	82,800	30,600	800	...	9,24,900	

ಕ್ರಮ ಸಂಖ್ಯೆ	ಯಾವ ಮನುಷ್ಯನ ಅಥವಾ ಯಾವ ಫಂಡಿನ ಪರವಾಗಿ ಹಿಡಿಯಲ್ಪಟ್ಟಿದೆಯೊ ಅವನ ಅಥವಾ ಅದರ ಹೆಸರು.	ಬಡ್ಡಿಗೆ ಹಾಕಿದ ಮೊಬಲಗು.							ಯಾವ ಅಸಾಮಿಗೆ ಬಡ್ಡಿಯು ಕೊಡಲ್ಪಡುತ್ತದೆಯೋ ಅವರು.
		1842–43ನೆ ಇಸವಿಯ ಶೇಕಡಾ 3½ ರೂಪಾಯಿನ ಬಡ್ಡಿಯ ಸಾಲ.	1851–55ನೆ ಇಸವಿಯ ಶೇಕಡಾ 3½ ರೂಪಾಯಿನ ಬಡ್ಡಿಯ ಸಾಲ.	1865ನೆ ಇಸವಿಯ ಶೇಕಡಾ 3½ ರೂಪಾಯಿನ ಬಡ್ಡಿಯ ಸಾಲ.	18[illegible]ನೆ ಇಸವಿಯ ಶೇಕಡಾ 3½ ರೂಪಾಯಿನ ಬಡ್ಡಿಯ ಸಾಲ.	1900–01ನೆ ಇಸವಿಯ ಶೇಕಡಾ 3½ ರೂಪಾಯಿನ ಬಡ್ಡಿಯ ಸಾಲ.	1896–97ನೆ ಇಸವಿಯ ಶೇಕಡಾ 3 ರೂಪಾಯಿನ ಬಡ್ಡಿಯ ಸಾಲ.	ಜುಮ್ಲಾ.	
	ಮುಜರಾಯಿ ಸತ್ರ ದೇವಾಲಯ ವಗೈರೆಗಳು.	ರೂ.	ರೂ.	ರೂ.	ರೂ.	ರೂ.	ರೂ.	ರೂ.	
12	ಕೆ. ಆರ್. ಪೇಟೆ ತಾಲ್ಲೂಕಿನ ರಾಮದೇವರ ದೇವಸ್ಥಾನ.	...	...	1,000	900	...	...	1,900	
13	ದೊಡ್ಡಬಳ್ಳಾಪುರ ತಾಲ್ಲೂಕಿನ ಘಾಟಿ ಸುಬ್ರಹ್ಮಣ್ಯಸ್ವಾಮಿಯ ದೇವಸ್ಥಾನ.	7,000	...	8,200	...	...	...	15,200	
14	ನೆಲಮಂಗಲ ತಾಲ್ಲೂಕಿನ ಶ್ರೀ ಶಿವಗಂಗೆ ಮಠ.	5,000	...	10,000	...	...	...	15,000	
15	ಕೋಲಾರ ಡಿಸ್ಟ್ರಿಕ್ಟಿನ ಮುಜರಾಯಿ ಸತ್ರ ದೇವಸ್ಥಾನ ವಗೈರೆ.	...	...	300	...	...	...	300	
16	ಕೋಲಾರ ಡಿಸ್ಟ್ರಿಕ್ಟು, ಮಾಲೂರು ತಾಲ್ಲೂಕಿನ ಚಿಕ್ಕ ತಿರುಪತಿ ಶ್ರೀ ವೆಂಕಟರಮಣಸ್ವಾಮಿಯ ದೇವಸ್ಥಾನ.	...	6,500	...	...	...	...	6,500	
17	ತುಮಕೂರು ಡಿಸ್ಟ್ರಿಕ್ಟಿನ ಮುಜರಾಯಿ ಸತ್ರ ದೇವಸ್ಥಾನ ವಗೈರೆ.	...	...	1,200	4,000	...	...	5,200	
18	ಶಿವಮೊಗ್ಗ ಡಿಸ್ಟ್ರಿಕ್ಟಿನ ಮುಜರಾಯಿ ಸತ್ರ ದೇವಸ್ಥಾನ ವಗೈರೆ.	1,500	1,500	13,100	5,700	...	...	21,800	
19	ಶಿವಮೊಗ್ಗ ರೈಲ್ವೆ ಸ್ಟೇಷನಿನ ಹತ್ತಿರ ಇರುವ ಶ್ರೀ ಅರ್ಕೇಶ್ವರಸ್ವಾಮಿ ದೇವಸ್ಥಾನ.	...	...	...	...	...	2,000	2,000	
20	ಕಡೂರು ಡಿಸ್ಟ್ರಿಕ್ಟಿನ ಮುಜರಾಯಿ ಸತ್ರ ದೇವಾಲಯ ವಗೈರೆ.	...	...	24,200	12,000	...	...	36,200	
21	ಕಡೂರು ಡಿಸ್ಟ್ರಿಕ್ಟಿನ ಕಳಸದಲ್ಲಿರುವ ಕಳಸೇಶ್ವರಸ್ವಾಮಿ ದೇವಸ್ಥಾನ.	300	10,000	59,700	5,500	...	...	75,500	
22	ಚಿತ್ರದುರ್ಗ ಡಿಸ್ಟ್ರಿಕ್ಟಿನ ಮುಜರಾಯಿ ಸತ್ರ ದೇವಾಲಯ ವಗೈರೆ.	...	...	...	4,000	...	...	4,000	
23	ಚಿತ್ರದುರ್ಗ ಡಿಸ್ಟ್ರಿಕ್ಟಿನ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಬೊಮ್ಮಗೊಂಡನಕೆರೆ ಶ್ರೀ ಪ್ರಾಣದೇವರ ದೇವಸ್ಥಾನ.	...	...	...	...	...	2,000	2,000	

24	ಹೊಳಲ್ಕೆರೆ ತಾಲ್ಲೂಕಿನಲ್ಲಿ ಹೊರತೂರು ಬೇವರಪುರದಲ್ಲಿ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ.	..	...	..	...	2,200	...	2,200
25	ಮೈಸೂರು ಡಿಸ್ಟ್ರಿಕ್ಟಿನ ಮುಜರಾಯಿ ಸತ್ರ ದೇವಾಲಯಗಳು.	...	55,000	37,500	6,300	...	..	98,800
26	ಮೈಸೂರು ಡಿಸ್ಟ್ರಿಕ್ಟ್ ಮೇಲುಕೋಟೆಯಲ್ಲಿರುವ ಶ್ರೀ ತಿರುನಾರಾಯಣ ಸ್ವಾಮಿಯ ದೇವಸ್ಥಾನ.	2,200	...	..	...	...	..	2,200
27	ಹಾಸನ ಡಿಸ್ಟ್ರಿಕ್ಟಿನ ಮುಜರಾಯಿ ಸತ್ರ ದೇವಾಲಯಗಳು.	500	6,000	6,000	20,200	..	...	32,700
28	ಹಾಸನ ಡಿಸ್ಟ್ರಿಕ್ಟಿನ ಬೇಲೂರು ತಾಲ್ಲೂಕಿನ ಶ್ರೀ ಚನ್ನಕೇಶವ ಸ್ವಾಮಿ ದೇವಸ್ಥಾನ.	..	500	...	..	...	...	500
29	ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿಯ ದೇವಸ್ಥಾನದಲ್ಲಿ ಒಂದು ಗೊತ್ತಾದ ಪೂಜೆಯನ್ನು ನಡೆಸುವುದಕ್ಕಾಗಿ ರ್ಟರ್ಡ್ ಡೆಪ್ಯುಟಿ ಕಮಿಷನರು ಮಿ॥ ಎಂ. ಎಸ್. ನಾರಾಯಣರಾಯರು ಕೊಟ್ಟ ಧರ್ಮ.	..	...	...	..	...	500	500
	ಜುಮ್ಲಾ ..	16,500	79,500	1,61,200	58,600	2,200	4,500	3,22,500
	ಧರ್ಮಾರ್ಥವಾಗಿ ಕೊಟ್ಟದ್ದು.							
30	ಪ್ರಿನ್ಸ್ ಗುಲಾಂ ಮುಹಮ್ಮದರ ಧರ್ಮ ಫಂಡು.	40,500	1,26,000	..	..	..	.	1,66,500
31	ಮೈಸೂರು ಗುಂಬಜ್ ಯಾ ಮಸೀತಿಯ ಫಂಡು.	...	20,000	..	...	...	...	20,000
	ಜುಮ್ಲಾ ..	40,500	1,46,000	...	...	..	.	1,86,500
	ಸರ್ಕಾರಕ್ಕೆ ಆಧಾರವಾಗಿ ಕೊಟ್ಟಿರುವಪತ್ರಗಳು.							
32	ಸ್ಟಾಂಪು ಇಲಾಖೆಯ ಶಿರಸ್ತೆದಾರ್ ಎ. ವಿ. ಗೋವಿಂದರಾಜು ಮೊದಲಿಯಾರ್ ಮಾಡಿದ ಆಧಾರ.	..	..	2,000	..	...	..	2,000
33	ಕೋಲಾರ ಡಿಸ್ಟ್ರಿಕ್ಟ್ ಖಜಾನೆಯ ಟ್ರೆಜರರ್ ಡಬ್ಲಿಯೂ. ಶಾಮರಾಯರುಮಾಡಿದ ಆಧಾರ	500	...	..	...	..	..	500
34	ಮಿ॥ ಬಜ್ಜಣ್ಣ ಮತ್ತು ಮಿ॥ ಮಾಯಗೊಂಡದೇವ ಮೊದಲಿಯಾರ್ ಸಾರಾಯಿ ಮತ್ತು ಗಾಂಜಾಗಳ 5 ವರ್ಷಗಳ ವರೆಗೆ ಕಂಟ್ರಾಕ್ಟಿಗೋಸ್ಕರ ಮಾಡಿದ ಠೇವಣಿಯ ಆಧಾರ.	..	3,000	1,000	..	...	,0 0	7,000

ಅಂಕಿತ ನಂಬರ್	ಯಾವ ಮನುಷ್ಯನ ಅಥವಾ ಯಾವ ಫಂಡಿನ ಪರವಾಗಿ ಹಿಡಿಯಲ್ಪಟ್ಟಿದೆಯೊ ಅವನ ಅಥವಾ ಅದರ ಹೆಸರು.	ಬಡ್ಡಿಗೆ ಹಾಕಿದ ಮೊಬಲಗು. 1842-43ನೆ ಇಸವಿಯ ಶೇಕಡಾ 3¼ ರೂಪಾಯಿನ ಬಡ್ಡಿಯ ಸಾಲ.	1854-55ನೆ ಇಸವಿಯ ಶೇಕಡಾ 3½ ರೂಪಾಯಿನ ಬಡ್ಡಿಯ ಸಾಲ.	1865ನೆ ಇಸವಿಯ ಶೇಕಡಾ 3½ ರೂಪಾಯಿನ ಬಡ್ಡಿಯ ಸಾಲ.	1879ನೆ ಇಸವಿಯ ಶೇಕಡಾ 3½ ರೂಪಾಯಿನ ಬಡ್ಡಿಯ ಸಾಲ.	1900-01ನೆ ಇಸವಿಯ ಶೇಕಡಾ 3½ ರೂಪಾಯಿನ ಬಡ್ಡಿಯ ಸಾಲ.	1896-97ನೆ ಇಸವಿಯ ಶೇಕಡಾ 3 ರೂಪಾಯಿನ ಬಡ್ಡಿಯ ಸಾಲ.	ಜುಮ್ಲಾ.	[illegible]
		ರೂ.	ರೂ.	ರೂ.	ರೂ.	ರೂ.	ರೂ.	ರೂ.	
35	ಸಾಮಾನು ತಯಾರ್ ಮಾಡುವ ಕಂಟ್ರಾಕ್ಟನ್ನು ೫೦ ವರ್ಷಗಳ ವರೆಗೆ ತಗೆದುಕೊಂಡದ್ದಕ್ಕಾಗಿ ಮೆ|| ಅರಬತ್‌ನಾಟ್ ಮತ್ತು ಕಂಪನಿಯವರು ಮಾಡಿದ ಠೇವಣಿಯು ಆಧಾರ.		25,000			...	...	25,000	
36	ಸ್ಟಾಂಪು ತಯಾರಿ ಆಫೀಸಿನ ಸೂಪರ್ಇಂಟೆಂಡೆಂಟ್ ಎ. ಶ್ರೀನಿವಾಸಯ್ಯಂಗಾರ್ ಮಾಡಿದ ಠೇವಣಿಯ ಆಧಾರ.		2,500		...	...	...	2,500	
37	ಮೈಸೂರು ಸಂಸ್ಥಾನದ ಜಂಗಲಿಯಿಂದ ನಾಟಾವನ್ನು ಕ್ರಯಕ್ಕೆ ತೆಗೆದುಕೊಂಡದ್ದಕ್ಕೆ ಮಿ|| ಹಾಜಿ ಇಸ್ಮಾಲ್ ಸೇಟ್ ಮಾಡಿದ ಠೇವಣಿ ಆಧಾರ.	1,100		3,700	200	...	...	5,000	
38	ಮೈಸೂರು ಡಿಸ್ಟ್ರಿಕ್ಟ್ ಖಜಾನೆಯ ಟ್ರೆಜರರ್ ಬಿ. ವಿ. ಕೃಷ್ಣಯ್ಯಂಗಾರ್ ಮಾಡಿದ ಠೇವಣಿ ಆಧಾರ.	7,000	...	...	...	...	...	7,000	
39	ಚನ್ನಪಟ್ಟಣ ತಾಲ್ಲೂಕಿನ ಶಿರಸ್ತೆದಾರ್ ಸಿ. ಕಾಶಿನಾಥ ರಾಯರು ಮಾಡಿದ ಠೇವಣಿ ಆಧಾರ.	...	...		500	...	...	500	
40	ಸಂಸ್ಥಾನದ ಹುಜೂರ್ ಖಜಾನೆಯ ಟ್ರೆಜರರ್ ಡಬ್ಲ್ಯು. ಕೃಷ್ಣಯ್ಯಂಗಾರ್ ಮಾಡಿದ ಠೇವಣಿ ಆಧಾರ.		...	7,000	...	...	...	7,000	
41	ತುಮಕೂರು ಡಿಸ್ಟ್ರಿಕ್ಟ್ ಖಜಾನೆಯ ಟ್ರೆಜರರ್ ಎ. ಅರುಣಾಚಲಂ ಮೊದಲಿಯಾರ್ ಮಾಡಿದ ಠೇವಣಿ ಆಧಾರ.	...	...	5,000	...	...	...	5,000	
	ಜುಮ್ಲಾ	8,600	5,500	18,700	700	...	28,000	61,500	
	ಜುಮ್ಲಾ	2,60,000	7,01,000	4,08,700	89,900	3,000	32,500	14,95,400	

ತಾರೀಖು 18ನೆ ಜನವರಿ 1907.

ನಂ. ಆರ್. 6943—ಎಲ್. ಆರ್. 415-06—3, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ: ಇದರಡಿ ವಿವರಿಸುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ತರೀಕೆರೆ ತಾಲ್ಲೂಕಿನ ಶಿವನೆ-ಬುಕ್ಕಾಂಬುದಿ ಡಿಸ್ಟ್ರಿಕ್ಟ್ ಫಂಡು ರಸ್ತೆಯ ಉಪಯೋಗಕ್ಕೆ ಗ್ರಾವಲ್ ಅಗೆಯುವುದಕ್ಕೋಸ್ಕರ ಅವಶ್ಯಕವಾಗಿವೆ; ಮತ್ತು ಮೇಲ್ಕಂಡ ರೆಗ್ಯುಲೇಷನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಚಿಕ್ಕಮಗಳೂರು ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರೀ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟದೆ

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ ಯಾ ಬಾಗಾಯತು.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ.			
								ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.				
ಕಡೂರು.	ತರೀಕೆರೆ.	[illegible]	ವೀರಾಪುರ	ದೊಡ್ಡದೇವರಪ್ಪ ಬಿನ್ ಕೃಷ್ಣಪ್ಪ	1	ಖುಷ್ಕಿ ...	1 0	ಸರ್ವೆ 5ನೆ ನಂಬರು	ಸರ್ವೆ 11ನೆ ನಂಬರ್	ಸರ್ವೆ 2ನೆ ನಂಬರ್	ಸರ್ವೆ 13ನೆ ನಂಬರ್
			ಡಿಟೋ .	ಡಿಟೋ ...	5	ಡಿಟೋ ...	0 20	ಬನೂರು ಎಲ್ಲೆ	ಸರ್ವೆ 1, 2, 3 ಮತ್ತು 4ನೆ ನಂಬರುಗಳು	ಸರ್ವೆ 6ನೆ ನಂಬರು	ಬನೂರು ಎಲ್ಲೆ
			ಡಿಟೋ ..	ಡಿಟೋ	11	ಡಿಟೋ ...	0 20	ಸರ್ವೆ 2, 3, 4 ಮತ್ತು 1ನೆ ನಂಬರುಗಳು ಗ್ರಾಮ ನಿವೇಶನ	ಸರ್ವೆ 10ನೆ ನಂಬರು ಮತ್ತು ಶಿವನೆ ಕೆರೆಯ ಕೋಡಿಹಳ್ಳ	ಸರ್ವೆ 7 ಮತ್ತು 8ನೆ ನಂಬರುಗಳು	ಸರ್ವೆ 13ನೆ ನಂಬರ್
			ಬುಕ್ಕಾಂಬುದಿ.	ಹಾಲಮ್ಮ ಕೋಂ ಶಿದ್ದಬಸವಯ್ಯ ...	59	ತರಿ ..	0 20	ಸರ್ವೆ 63, 64 ಮತ್ತು 65ನೆ ನಂಬರುಗಳು	ಸರ್ವೆ 58ನೆ ನಂಬರು	ರಸ್ತೆ	ಸರ್ವೆ 60ನೆ ನಂಬರ್
			ಶಿವನೆ ..	ನರಸಮ್ಮ ಕೋಂ ಕೃಷ್ಣಪ್ಪ ...	144	ಖುಷ್ಕಿ ..	0 20	ಸರ್ವೆ 143 ಮತ್ತು 146ನೆ ನಂಬರುಗಳು	ಸರ್ವೆ 145ನೆ ನಂಬರು	ಸರ್ವೆ 145ನೆ ನಂಬರು ಮತ್ತು ರಸ್ತೆ	ಸರ್ವೆ 135ನೆ ನಂಬರು
			ಡಿಟೋ ...	ತಿಮ್ಮ ಬಿನ್ ಹನುಮ ಪೂಜಾರಿ ..	147	ಡಿಟೋ	0 20	ಗ್ರಾಮ ನಿವೇಶನ	ಸರ್ವೆ 146ನೆ ನಂಬರು	ಸರ್ವೆ 148ನೆ ನಂಬರು ಮತ್ತು ರಸ್ತೆ	ಸರ್ವೆ 1[illegible]ನೆ ನಂಬರು

ತಾರೀಖು 21ನೆ ಜನವರಿ 1907.

ನಂ. ಆರ್. 977—ಎಲ್. ಆರ್. 422-06-3, 1894ನೆ ವರ್ಷದ 7ನೆಯ ನಂಬರ್ ಲ್ಯಾಂಡ್ ಆಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ನಂಜನಗೂಡು—ಹುರಾ ರಸ್ತೆಯ ಉಪಯೋಗಕ್ಕಾಗಿ ಗ್ರಾವಲ್ ಅಗೆಯುವದಕ್ಕೋಸ್ಕರ ಅವಶ್ಯಕವಾಗಿವೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ನಂಜನಗೂಡು ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು.	ಸರ್ವೆ ನಂ.	ಖುಷ್ಕಿ, ತರಿ ಯಾ ಬಾಗಾಯತು.	ಪೂರ್ತಾ ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ. ವಿಸ್ತೀರ್ಣ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ. ಕಂದಾಯ.	ಚತುರ್ಗಡಿ. ಪೂರ್ವ.	ಚತುರ್ಗಡಿ. ಪಶ್ಚಿಮ.	ಚತುರ್ಗಡಿ. ಉತ್ತರ.	ಚತುರ್ಗಡಿ. ದಕ್ಷಿಣ.
								ರೂ. ಆ.	ಎ. ಗು. ಚ.ಗ.	ಆಣೆ.				
ಮೈಸೂರು.	ನಂಜನಗೂಡು.	ಕಸಬಾ.	ಚಾಮಲಾಪುರ.	ಲಿಂಗನ ಹೆಂಡತಿ ನೀಲಮ್ಮ ಹಾಲಿ ಹಿಡುವಳಿದಾರ ಮಾದಯ್ಯ ...	322/1	ಖುಷ್ಕಿ	3 7	3 4	0 20 0	8	323ನೆ ಸರ್ವೆ ನಂ ಮತ್ತು ನೀಲಗಿರಿ ರಸ್ತೆ.	ಕೆಂಪಣ್ಣ ಮತ್ತು ಕೆಂಪನ 318ನೆ ಸರ್ವೆ ನಂಬರು.	80 ಮತ್ತು 83ನೆ ಸರ್ವೆ ನಂಬರುಗಳು ಮತ್ತು ಹೈರೋಡ್	317ನೆ ಸರ್ವೆ ನಂಬರು.
				ವಡೇರ ಮಾದಪ್ಪ ...	277	ಡಿಟೋ	6 17	5 0	0 8 59	4	ವೆಂಕಟಾದ್ರಿ ಶೆಟ್ಟಿಯ ಸರ್ವೆ 275ನೆ ನಂಬರು.	ಚೋಳನ ಸರ್ವೆ 272ನೆ ನಂಬರು.	ನಂಜುಂಡಗೌಡನ ಸರ್ವೆ 274ನೆ ನಂಬರು.	ಹುರಾ ರಸ್ತೆ ಮತ್ತು ಮಾಯಿಗೆ ಗೌಡನ ಸರ್ವೆ 301ನೆ ನಂಬರು.
				ವೆಂಕಟರಮಣ ಉಪಾಧ್ಯನ ಹೆಂಡತಿ ಸುಬ್ಬಮ್ಮ.	278	ಡಿಟೋ	4 12	3 8	0 20 0	8	ಮಾಯಿಗೆ ಗೌಡನ 301ನೆ ಸರ್ವೆ ನಂಬರು.	ಸುಬ್ಬಮ್ಮನ 279ನೆ ಸರ್ವೆ ನಂಬರು.	ಹುರಾ ರಸ್ತೆ ಮತ್ತು 272ನೆ ಸರ್ವೆ ನಂಬರು.	ಸರ್ವೆ 287ನೆ ನಂಬರು, ಕೆಂಪಣ್ಣ.
				ನಂಜುಂಡೇಶ್ವರಸ್ವಾಮಿಯ ದೇವಸ್ಥಾನದ ಇನಾಮು ಜಮೀನು. ಹಾಲಿ ಇಡುವಳಿದಾರ ಗಣಪತಿ ಶಾಸ್ತ್ರಿ.	226	ಡಿಟೋ	4 31	3 0	0 35 33	12	ಚಾಮಲಾಪುರದ ಎಲ್ಲೆ.	ಕೆಂಚೇಗೌಡನ ಸರ್ವೆ 230ನೆ ನಂಬರು	ಹುಲ್ಲಹಳ್ಳಿ ಹೈರೋಡು.	ಗಣಪತಿ ಶಾಸ್ತ್ರಿಗಳ 227ನೆ ಸರ್ವೆ ನಂಬರು.
			ಹರದನಹಳ್ಳಿ ದೇವೂರು.	ಲಕ್ಷ್ಮವಳ್ಳಿ ರಾಮರಾವ್ (ಫವತಿ) ಮಗ ಸುಬ್ಬರಾವ್.	218	ಡಿಟೋ	3 0	2 4	1 4 9	12	ಕುನ್ನನ 22ನೆ ಸರ್ವೆ ನಂಬರು.	ದ್ಯಾವೆಗೌಡನ 217ನೆ ಸರ್ವೆ ನಂಬರು.	ಲಕ್ಷ್ಮವಳ್ಳಿ ರಾಮರಾಯರ 219ನೆ ಸರ್ವೆ ನಂಬರು.	ಹುಲ್ಲಹಳ್ಳಿ ರಸ್ತೆ.
				ಜಹಗೀರ್ದಾರ್ ಭೀಮರಾವ್ ..	245	ಡಿಟೋ	5 25	3 8	0 0 34	8	ಮಾರಿ ಚಿಕ್ಕನ ಸರ್ವೆ 242ನೆ ನಂಬರು	ಪೋಜಿ ರಾಮಯ್ಯನ 246ನೆ ಸರ್ವೆ ನಂಬರ್.	ಹುಲ್ಲಹಳ್ಳಿ ರಸ್ತೆ.	ಜಹಗೀರ್ದಾರ್ ಭೀಮರಾಯರ 244ನೆ ಸರ್ವೆ ನಂಬರ್.
				ಚಿಕ್ಕಜಾಬ್ಲ	270	ಡಿಟೋ	3 16	3 0	0 16 7	6	ಕೆರೆಯ ಅಂಗಳ.	ಗ್ರಾಮ ನಿವೇಶನ.	ಸರ್ವೆ 269ನೆ ನಂಬರು ಗೊಬ್ಬರ ಗುಂಡಿ.	ಸರ್ವೆ 275ನೆ ನಂಬರ್ ನಂಜುಂಡಯ್ಯ.
									4 18 7					

ತಾರೀಖು 23ನೆ ಜನವರಿ 1907.

ನಂ. 6555—Ml. 89-06-21, ಸ. 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಆಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಸ್ವತ್ತುಗಳು ಸರ್ಕಾರಿ ಕೆಲಸಕ್ಕೆ, ಎಂದರೆ ನಂಜನಗೂಡು ಮ್ಯುನಿಸಿಪಾಲಿಟಿಯಲ್ಲಿ ಕಚರಾ ಗಾಡಿಗಳು ತಿರುಗುವ ಓಣಿಯನ್ನು ವಿಸ್ತರಿಸುವುದಕ್ಕೆ ಅವಶ್ಯಕವಾಗಿವೆ :—

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬಳಿ	ಗ್ರಾಮ	ಖಾತೆದಾರನ ಹೆಸರು	ಖಾತೆ ನಂಬರು	ಈಗ ಸರ್ಕಾರಕ್ಕೆ ಬೇಕಾಗಿರುವ ಸ್ವತ್ತುಗಳ ವಿಸ್ತೀರ್ಣ. ವಿವರ.	ಉದ್ದ	ಅಗಲ	ಚದರಗಜ	ಚತುರ್ಗಡಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ನಂಜನಗೂಡು	ನಂಜನಗೂಡು	ನಂಜನಗೂಡು ಟೌನ್	1. ಉಗ್ರಾಣದ ಶಿದ್ದಲಿಂಗಣ್ಣ. ನಂಜೆ ಅನುಭವದಾರ ಜವಾನ ನಂಜುಂಡ.	688, 817	ಖಾಲಿ ನಿವೇಶನ	24	13	34⅔	ದಾರಿ	ನಂಜನ ಈರನ ಮನೆ	ಓಣಿ	ಉಗ್ರಾಣದ ಚಂದ್ರಪ್ಪನ ಮನೆ
				3. ದ್ಯಾವಣ್ಣ [illegible] ಅನ ಈರ	1017, 816	ಡಿಟೋ ...	13	14½	21	ಉಗ್ರಾಣದ ಶಿದ್ದಲಿಂಗನ ನಂಜನ ಮನೆ	ಶ್ರೀಕಂಠಯ್ಯನ ಮನೆಯ ಹಿತ್ತಲು	ಡಿಟೋ.	ಡಿಟೋ
				4. ಶ್ರೀ-ಈಶ್ವರಯ್ಯ. ಯಲ್ಲಿ ಚಿಕ್ಕನಜ ಸ್ಥಾನಿಕ ಅನುಭವದಾರ,	494, 595	ಡಿಟೋ ...	29½	15	49	ದಾರಿ	ಸುಬ್ಬಯ್ಯನ ಮನೆ	ದಾರಿ	ರಸ್ತೆ
				5. ವಾಬಾಸ್ ಸಾಹಿಬ	673, 823	ಡಿಟೋ ...	38	15	63⅓	ಪಾರಿಸುಬ್ಬನಮಾದನ ಮನೆ	ವಲಗುಡಿ ಚಿಕ್ಕನ ಮನೆ	ಡಿಟೋ	ಕಾಳನಾಗಪ್ಪನ ಮನೆಯ ಹಿತ್ತಲು
				6. ಹಜಾಮರ ರಾಚ	550, 836	ಹೆಂಚಿನಮನೆ 3 ಅಂಕಣ ..	30	3	10	ಚತ್ರದ ನಂಜನ ರಾಮನ ಮನೆ	ತಾಳದ ವೆಂಕಟಲಕ್ಷ್ಮಿ ಮನೆ	ಕೃಷ್ಣಭಟ್ಟ ಮತ್ತು ಶೀನಭಟ್ಟನತೋಟ	ದಾರಿ
				7. ಗುರವಭಟ್ಟ ಸುಬ್ಬಾಭಟ್ಟ [illegible]	622, 840	ಡಿಟೋ ...	21	8	7	ತಾಳದ ವೆಂಕಟಲಕ್ಷ್ಮಿ ಮನೆ	ಸದಿಗೆ ಹೋಗುವ ದಾರಿ	ರಂಗನ ಮನೆ	ಡಿಟೋ
				8. ರಂಗಾರಿ ಮಾಂಡಜಿ	4[illegible]8, 580	ಖಾಲಿ ನಿವೇಶನ	39	(5+4)/2	19½	ಚನ್ನರಾಯನ ಮನೆ	ಡಿಟೋ	ದಾರಿ	ರಸ್ತೆ
				9. ರಂಗಾರಿ ರಾ[illegible]ತ್ತು ಸಂತ	686, 839	ಮನೆ 2 ಅಂಕಣ .... ಖಾಲಿ ನಿವೇಶನ ... ಮನೆ ಅಂಕಣ ..	16 10 6	5 5 5	9 5½ 3⅓	ಸಂತೂ ರಾಮನ ಮನೆ	ಗುರುವಾ ಭಟ್ಟರ ಸುಬ್ಬಾ ಭಟ್ಟರ ಹಿತ್ತಲು	ಡಿಟೋ	ಗುರುವಾಭಟ್ಟ ಸುಬ್ಬಾ ಭಟ್ಟರ ಹಿತ್ತಲು
				10. ರಂಗಣ್ಣ ...ಜಿ ಮ	685, 838	ಹೆಂಚಿನ ಮನೆ 3 ಅಂಕಣ. ಖಾಲಿ ನಿವೇಶನ ..	26 14	15 5	14⅓ 7¾	ರಂಗಣ್ಣನ ಮನೆಯ ಹಿತ್ತಲು ಗೋಡೆ	ರಂಗಾರೆ ಮಾಂಡಜಿಯ ಮನೆ	ಡಿಟೋ	ಡಿಟೋ
				...ಡರು	446, 583	ಡಿಟೋ	32	(5+4)/2	16	ಹಡಿ ಮುನಷಿ ರಾಮರಾಯರಮನೆ	ಗುರುವಭಟ್ಟರ ಸುಬ್ಬಾಭಟ್ಟರ ಮನೆ	ಡಿಟೋ	ರಸ್ತೆ

ತಾರೀಖು 18ನೆ ಡಿಸೆಂಬರ 1906.

ನಂ. 5247—ಪ್ಲ್ಯ: 163-06-4, ಸ 1894ನೆಯ ವರ್ಷದ 7ನೆಯ ನಂಬರ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನೆಂದರೆ:—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ, ಎಂದರೆ, ಬೆಂಗಳೂರು ಸಿಟಿ ಬಸವನಗುಡಿಯ ಬಡಾವಣೆಗಾಗಿ ಅವಶ್ಯಕವಾಗಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರ.	ಇನಾಮು ಅಥವಾ ಸರ್ಕಾರಿ.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಕಂದಾಯ.		ಚತುರ್ಗಡಿ.			
							ಎ.	ಗು.	ರೂ.	ಆ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಬೆಂಗಳೂರು	ಬೆಂಗಳೂರು	ಅಗರ	ಉಪ್ಪಾರಹಳ್ಳಿ	ಶಾನುಭೋಗ ರಾಮಯ್ಯ.	1	ಇನಾಮು	3	20	5	10	ಈ ಸರ್ವೆ ನಂಬರಿನ ಉಳಿದ ಭಾಗ.	ರಸ್ತೆ	ಉಪ್ಪಾರಹಳ್ಳಿ ಗ್ರಾಮ	ಸರ್ವೆ 2ನೆ ನಂಬರು.

ತಾರೀಖು 28ನೆ ಜನವರಿ 1907.

ನಂ. 6694—ಮ್ಯುನಿಸಿಪಲ್. 368-06-4, ಸ 1894ನೆಯ ವರ್ಷದ 7ನೆಯ ನಂಬರ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ:—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಸಕಲೇಶಪುರ ಮ್ಯುನಿಸಿಪಾಲಿಟಿಯಲ್ಲಿ ಕಚರಾ ಬಂಡಿಗಳು ತಿರುಗಾಡುವುದಕ್ಕೆ ಒಂದು ಟಿಣಿ ಮಾಡುವದಕ್ಕೋಸ್ಕರ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಸಕಲೇಶಪುರ ಸಬ್ ಡಿವಿಜನ್ನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರೀ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು.	ಸರ್ವೆ ನಂಬರು.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಹಾಸನ.	[illegible]ಜರಾಬಾದು.	ಸಕಲೇಶಪುರ.	ಕಸಬ ಮ್ಯುನಿಸಿಪಾಲಿಟಿ.	ಸಕಲೇಶಪು[illegible]ದ ಹಸನಿನ ಮಗ [illegible]ಜ್. ಸಕಲೇಶಪುರದ ಮಹ[illegible]	ಅಬ್ದುಲ್ ಅಜೀ[illegible]ಗಿಸುತ್ತಿರುವ ಸಂತೆ ಮಾಳವಾಗಿ ಉಪಯೋ[illegible] ಖಾಲಿ ನಿವೇಶನ	=60 ಚದರ; ಎ. ಮೂಡಲ ಭಾಗ 10 ಗಜಗಳು = 30 ಚದರ; ಬಿ. ಪಡುವಲ ಭಾಗ ಗಜಗಳು; 90	ಎ. [illegible]ಜನ ಮನೆ. ಬಿ. [illegible]	ಎ. ಅಬ್ದುಲ್ ಅಜೀಜನ ಮನೆ. ಬಿ. ಹುಸೇನಿ ಪಾಟಾಸಾಬಿಯ ಮನೆ ನಿವೇಶನ.	ಎ. ಖಾಲಿ ಮನೆ ನಿವೇಶನ. ಬಿ. ಡಿಟೋ	ಎ. ಬೇಲೂರು ಮಂಜರಾಬಾದು ರಸ್ತೆ ಮ. ಅಂಚಿನಲ್ಲಿ ಸರ್ಕಾರಕ್ಕೆ ಉಳಿಸಿ ಕೊಂಡಿರುವ ಜಮೀನು. ಬಿ. ಡಿಟೋ

ತಾರೀಖು 25ನೆ ಜನವರಿ 1907.

ನಂ. ಎಫ್. ಎಲ್. 5655—ಎಸ್. ಆರ್. 85-06-2, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ ತುಮಕೂರು ಡಿಸ್ಟ್ರಿಕ್ಟಿನ ಎಕ್ಸೈಜ್ ಅಸಿಸ್ಟೆಂಟ್ ಕಮಿಷನರಾದ ಮಿ॥ ಎಚ್. ರಾಮಯ್ಯನವರಿಗೆ 1907ನೆ ಇಸವಿಯ ಜನವರಿ 3ನೆ ತಾರೀಖಿನಿಂದ 10 ದಿವಸಗಳ ಪ್ರಿವಿಲೇಜು ರಜಾ ಕೊಟ್ಟಿರುತ್ತದೆ.

ಬಮೋಜಿಬ್ ಹುಕುಂ,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ವ ರೆವಿನ್ಯೂಖಾತೆಗಳ ಗವರ್ನ್ಮೆಂಟ್ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪ್ರಾಯಿಷ್ ಆದ್ದು [ನಂ. 6.

ಬೆಂಗಳೂರು, ಗುರುವಾರ, ಫೆಬ್ರವರಿ ತಾ|| 7, ಸನ 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖೆ ಕೊಡಲ್ಪಡುತ್ತೆ.

ವಿ ಷ ಯ ಸೂ ಚಿ ಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ಮಹಾರಾಜಾ ಸರ್ಕಾರದಿಂದ ಕೊಡಲ್ಪಟ್ಟಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮಿಷನರವರು, ಕಂಟ್ರೋಲರವರು, ಪಬ್ಲಿಕವರ್ಕ್ಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ ವ ಎಡ್ಯುಕೇಷನ ಇನ್ಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟ ವ ಸೆಷನ ಜಡ್ಜೀರು, ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೊಲೀಸ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡಲ್ಪಟ್ಟಾದ ಇಸ್ತಿಹಾರ್ಗಳು, ವಗೈರೆ ಹಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲಾ.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ಮಹಾರಾಜಾ ಸರ್ಕಾರದಿಂದ ಕೊಡಲ್ಪಟ್ಟಾದ ಇಸ್ತಿಹಾರ್ನಾಮೆಗಳು.

ಜ ನ ರ ಲ್ ಮ ತ್ತು ರೆ ವಿ ನ್ಯೂ.

ತಾರೀಖು 22ನೆ ಜನವರಿ 1907.

ನಂ. 6522—ಸ್ಯಾನಿಟರಿ 134-06-8, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವದು.

ಸ್ಥಳ.		ತಾಲ್ಲೂಕು.
ಮ್ಯಾಲನಹಳ್ಳಿ	... ...	ಚಿಕ್ಕನಾಯಕನಹಳ್ಳಿ.

ತಾರೀಖು 22ನೆ ಜನವರಿ 1907.

ನಂ. 6524—ಸ್ಯಾ. 57-06-4, ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು

ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡು ಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು	
			ಇಂದ	ಗೆ
1. ವೀರಭದ್ರದೇವರ ಜಾತ್ರೆ	ಕೋಟೆಗುಡ್ಡ ...	ಜಗಲೂರು ...	28—2—07	2—3—07
2. ಚೌಡಮ್ಮನ ಜಾತ್ರೆ	ಗುರುಸಿದ್ಧಾಪುರ ...	ಡಿಟೋ ...	27—2—07	2—3—07
3. ರಂಗನಾಥ ದೇವರ ಜಾತ್ರೆ.	ತಾರೆಹಳ್ಳಿ ...	ಡಿಟೋ ...	25—2—07	28—2—07

1897ನೆಯ ವರ್ಷದ 2ನೆಯ ನಂಬರ ಎಪಿಡೆಮಿಕ ಡಿಸೀಸೆಸ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 23ನೆ ಜನವರಿ 1907.

ನಂ. 6550—ಸ್ಯಾನಿಟರಿ 66-06—25, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ ಡಿಸೀಸೆಸ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ ಫೈಲ 21—96 ಮತ್ತು ನಂಬರ 9384—ಮಿಸಲೇನಿಯಸ ಫೈಲ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗುತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
1. ಕೋಡಿಗರಹಳ್ಳಿ	ಆಲೂರು ಸಬ ತಾಲ್ಲೂಕು.
2. ಪಾಳ್ಯಪಟ್ಟ	ಡಿಟೋ

ತಾರೀಖು 23ನೆ ಜನವರಿ 1907.

ನಂ. 6558—ಸ್ಯಾ. 156-06—5, ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು	
			ಇಂದ	ಗೆ
1. ದನಗಳ ಜಾತ್ರೆ ...	ವೊಕ್ಕಲೇರಿ ...	ಕೋಲಾರ ...	25—1—07	6—2—07 ಯರಡು ದಿವಸಗಳೂ ಸಹ
2. ಶ್ರೀ ಭೋಗ ನಂದೀಶ್ವರ ಸ್ವಾಮಿ ರಥೋತ್ಸವ.	ನಂದಿ	ಚಿಕ್ಕಬಳ್ಳಾಪುರ ...	11—2—07	22—2—07 ಯರಡು ದಿವಸಗಳೂ ಸಹ
3. ಶ್ರೀ ವೆಂಕಟರಮಣ ಸ್ವಾಮಿ ರಥೋತ್ಸವ.	ಗುಟ್ಟಹಳ್ಳಿ ...	ಬವರಿಂಗಪೇಟೆ	27—1—07	1—2—07 ಯರಡು ದಿವಸಗಳೂ ಸಹ

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮತ್ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 24ನೆ ಜನವರಿ 1907.

ನಂ. 6589—ಸ್ಯಾನಿಟರಿ 57–06—6, ಚಿತ್ರದುರ್ಗ ಡಿಸ್ಟ್ರಿಕ್ಟು ಹಿರಿಯೂರು ತಾಲ್ಲೂಕಿನ ಹಿರಿಯೂರಿಗೆ ತೇರುಮಲ್ಲೇಶ್ವರಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮತ್ ಮಹಾರಾಜ ರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮತ್ ಮಹಾರಾಜರವರ ಸರ್ಕಾರದವರು, 1907ನೆಯ ವರ್ಷದ ಫೆಬ್ರವರಿ 1ನೆ ತಾರೀಖಿನಿಂದ ಫೆಬ್ರವರಿ 15ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 30ನೆ ಜನವರಿ 1907.

ನಂ. 6758—ಸ್ಯಾನಿಟರಿ 156–06–7, ಕೋಲಾರ ಡಿಸ್ಟ್ರಿಕ್ಟು ಬೌರಿಂಗ್‌ಪೇಟೆ ತಾಲ್ಲೂಕಿನ ಕೋಲಾರ ಗೋಲ್ಡ್ ಫೀಲ್ಡ್‌ಗೆ ಸೇರಿದ ಪೆದ್ದಪಲ್ಲಿ ಗ್ರಾಮಕ್ಕೆ ಗಂಗಮ್ಮನ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮತ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮತ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಫೆಬ್ರವರಿ 4ನೆ ತಾರೀಖಿನಿಂದ 1907ನೆ ಫೆಬ್ರವರಿ 8ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 30ನೆ ಜನವರಿ 1907.

ನಂ. 6762—ಸ್ಯಾನಿಟರಿ 57–06—8, ಚಿತ್ರದುರ್ಗ ಡಿಸ್ಟ್ರಿಕ್ಟು ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿ ಗ್ರಾಮಕ್ಕೆ ತಿಪ್ಪೇರುದ್ರನ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮತ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮತ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮಾರ್ಚಿ 1ನೆ ತಾರೀಖಿನಿಂದ 1907ನೆ ಇಸವಿ ಮಾರ್ಚಿ 13ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 1ನೆ ಫೆಬ್ರವರಿ 1907.

ನಂ. 6797—ಸ್ಯಾನಿಟರಿ 15–06—6, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿ ಪಡಿಸುವುದೇನಂದರೆ:—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವುದು.

ಸ್ಥಳ.	ತಾಲ್ಲೂಕು.
ಮೆಣಸಿಬೋರನ ಕೊಪ್ಪಲು	ಶ್ರೀರಂಗಪಟ್ಟಣ

ತಾರೀಖು 1ನೆ ಫೆಬ್ರವರಿ 1907.

ನಂ. 6799—ಸ್ಯಾನಿಟರಿ 166–06—2, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವದೇನಂದರೆ:—ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾ

ರೋಗಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಮಲ್ಲೇನಹಳ್ಳಿ ...	ಶಿವಮೊಗ್ಗ.
ಎಡೇಹಳ್ಳಿ	ಡಿಟೋ
ಕುಂಸಿ ಟರ್ವ	ಕುಂಸಿ ಸಬ್ ತಾಲ್ಲೂಕು.

ತಾರೀಖು 1ನೆ ಫೆಬ್ರವರಿ 1907.

ನಂ. 6795—ಸ್ಯಾನಿಟರಿ 66—06—29, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:— ಹಾಸನ ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಿಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರೆಗೆ ಜಾಡ್ಯರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.	ತಾಲ್ಲೂಕು.
ಮಗ್ಗೆ ಕೊಪ್ಪಲು	ಮಂಜರಾಬಾದ್.
ಕಂಬುಗನಹಳ್ಳಿ	ಬೇಲೂರು.
ಹುಣಸಿನಕೆರೆ	ಡಿಟೋ
ಪಂಡಿತನಹಳ್ಳಿ ...	ಡಿಟೋ
ಜೋಡಿ ಗೋವನಹಳ್ಳಿ	ಡಿಟೋ
ದನಾಯಕನಹಳ್ಳಿ	ಡಿಟೋ
ಸುರಪುರ	ಡಿಟೋ
ಹಾಸನಕೆರೆ	ಡಿಟೋ
ಎಕ್ಕ ಶೆಟ್ಟಿಹಳ್ಳಿ	ಡಿಟೋ
ಬಲ್ಲೂರು ...	ಡಿಟೋ
ದೊಡ್ಡಿಹಳ್ಳಿ	ಡಿಟೋ
ಚಿಕ್ಕ ಮಾತಿಘಟ್ಟ	ಚನ್ನರಾಯಪಟ್ಟಣ.
ಮೊರಸುಕೊಪ್ಪಲು	ಆಲೂರು ಸಬ್ ತಾಲ್ಲೂಕು.
ಬಾಳೆಗನಹಳ್ಳಿ	ಡಿಟೋ
ಚಿಕ್ಕ ನಾಗಳು ...	ಡಿಟೋ
ಜನ್ನಾಪುರ	ಡಿಟೋ
ತಿಮ್ಮನಹಳ್ಳಿ	ಡಿಟೋ
ಹೊಸಹಳ್ಳಿ	ಡಿಟೋ
ಭಾವಿಕೊಪ್ಪಲು	ಡಿಟೋ

ಹುಕುಂ ಬಮೋಜಿಬ್,

ಕೆ. ಎಸ್. ಚಂದ್ರಶೇಖರ ಅಯ್ಯರ್,

ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಕೊಡಗು ದೇಶದ ಹಜರತ್ ಚೀಫ್ ಕಮಿಷನರ್ ಸಾಹೇಬರವರು.

ಇಸ್ತಿಹಾರನಾಮೆ.

ತಾರೀಖು 23ನೆ ಜನವರಿ ಸನ್ 1907ನೆ ಇಸವಿ.

ನಂ. 10, ಕೊಡಗು ದೇಶದ ಕಿಗ್ಗಟ್ಟುನಾಡು ತಾಲ್ಲೂಕ್ ತಾವಲಗೆರಿ ಮೂರ್ನಾಡು ಕುರ್ಚಿ ಗ್ರಾಮದಲ್ಲಿ ಬರುವ ಮಹಾ ಶಿವರಾತ್ರಿ ಸಮಯದಲ್ಲಿ ನಡೆಯುವ ಇರುಪು ಜಾತ್ರೆಗೆ ಮೈಸೂರು ಮತ್ತು ಪ್ಲೇಗ್ ರೋಗ ತಗಲಿದ ಇತರ ಪ್ರದೇಶಗಳಿಂದಲೂ ಬರುವ ಜನರನ್ನು ಸದರೀ ಸ್ಥಳದಲ್ಲಿ ಸೇರಲು ಬಿಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಹಜರತ್ ಚೀಫ್ ಕಮಿಷನರ್ ಸಾಹೇಬರವರು ತಿಳಿಯುವದ್ದರಿಂದ, ಸನ್ 1897ನೆ ಇಸವಿ ಸಾಂಕ್ರಾಮಿಕ ರೋಗಗಳ ಆಕ್ಟ್ ಅನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ, ಸನ್ 1907ನೆ ಇಸವಿ ಫೆಬ್ರವರಿ 11 ಮತ್ತು 12ನೆ ತಾರೀಖುಗಳಲ್ಲಿ ಸದರೀ ಜಾತ್ರೆಗೆ ಮೈಸೂರು ಮತ್ತು ಪ್ಲೇಗ್ ತಗಲಿದ ಇತರ ಪ್ರದೇಶಗಳಿಂದಲೂ ಜನರು ಬರುವದನ್ನು ಈ ಮೂಲಕ ನಿರೋಧಪಡಿಸಿ ಇದೆ.

ಈ ಇಸ್ತಿಹಾರಿನಾಮೆಗೆ ವಿರೋಧವಾಗಿ ಸದರೀ ಜಾತ್ರೆಗೆ ಮೇಲೆ ನಮೂದಿಸಿದ ಪ್ರದೇಶಗಳಿಂದ ಜನರು ಬಂದಲ್ಲಿ ಅಂಥಾವರೆಲ್ಲರನ್ನು ಹಿಂದಕ್ಕೆ ಕಳುಹಿಸಲಾದೀತು.

ಎಫ್. ಪಿ. ರೆನ್ನಿ,

ಚೀಫ್ ಕಮಿಷನರವರ ಸೆಕ್ರೆಟೆರಿಯವರು.

ಮೈಸೂರು ಗವರ್ನಮೆಂಟಿನ ಸೇವಿಂಗ್ಸು ಬ್ಯಾಂಕು ನಿಬಂಧನೆಗಳು.

ಕೆಲವು ಉಪಭಾಗಗಳೊಡನೆ.

ತಾರೀಖು 23ನೆ ನವಂಬರ 1906.

ನಂಬರು ಫೈನಾನ್ಷಲ್ 3763—ಜನರಲ್ ಫೈನಾನ್ಸ್ 280-04-49.

ಇಸ್ತಿಹಾರ್ನಾಮೆ.

ಈ ವರೆಗೆ ಮಂಜೂರಾದ ಎಲ್ಲಾ ತಿದ್ದುಪಾಟುಗಳನ್ನೂ ಸೇರಿಸಿ ಮೈಸೂರ ಗವರ್ನ್ಮೆಂಟ್ ಸೇವಿಂಗ್ಸ್ ಬ್ಯಾಂಕು ನಿಬಂಧನೆಗಳನ್ನು ಸಮಸ್ತ ಜನರ ತಿಳುವಳಿಕೆ ಬಗ್ಗೆ ಈ ಮೂಲಕ ಪ್ರಕಟಿಸಿದೆ :—

ಅನುಕ್ರಮಣಿಕೆ.

	ಪ್ಯಾರಾಗಳು.		ಪ್ಯಾರಾಗಳು.
ನಿಯಮಗಳು ...	1	ಬಡ್ಡಿಯನ್ನು ಕೊಡಿಸುವಿಕೆ ...	28
ಆಡಳಿತ ...	2	ವರ್ಗ ಲೆಕ್ಕವನ್ನು ಬೈದ್ಮಾಡೋಣ ..	30
ಕೆಲಸದ ಏರ್ಪಾಡುಗಳು ...	3	ಲೆಕ್ಕಗಳನ್ನು ಬೈದುಮಾಡೋಣ ...	31
ಲೆಕ್ಕಗಳ ರೀತಿ ...	4	ಹೆಡ್ಡಾಫೀಸಿಗೆ ಹೋಗಬೇಕಾದ ಲೆಕ್ಕಗಳು ...	32
ಸಂಘಗಳು ...	6	ಡೆಡಿಯಾನೆ ನಿಂತುಹೋದ ಲೆಕ್ಕಗಳು ..	33
ಒಂದು ಇಸಮಿನ ಹೆಸರಿನಲ್ಲಿ ಅನೇಕ ಲೆಕ್ಕಗಳು ಕೂಡದು	8	ಡೆಡ ಅಥವಾ ನಿಂತುಹೋದ ಲೆಕ್ಕವನ್ನು ಪುನಃ ಆರಂಭಿಸೋಣ.	36
ಜಾಮೀನೀ ಡಿಪಾಜಿಟ್ಟುಗಳು ...	9	ಸಾಲ್ದುಮಾಡೆ ಲೆಕ್ಕ ...	38
ಡಿಪಾಜಿಟ್ಟು ಹಣದ ಕ್ಲುಪ್ತ ...	10	ಲೆಕ್ಕಗಳ ವರ್ಗಾವರ್ಗಿಗಳು ...	40
ಲೆಕ್ಕವನ್ನಿಡೋಣ ...	11	ಡಿಪಾಜಿಟರುಗಳ ಮರಣ, ಮದುವೆ ವಗೈರೆ ...	41
ಹೆಸರುಗಳನ್ನು ದಾಖಲ್ಮಾಡುವ ಬಗ್ಗೆ ನಿಬಂಧನೆಗಳು.	12	ವಿವಿಧ ವಿಷಯ ..	44
ಇರ್ಷಿಕ್ಸ್ ಚೀಟಿಗಳು ...	14		
ಮೈನರಗಳ ಲೆಕ್ಕಗಳು ವಗೈರೆ ...	15		
ಡಿಪಾಜಿಟ್ಟುಗಳನ್ನು ಜಮಾ ಹಿಡಿಯೋಣ ..	20		
ಡಿಪಾಜಿಟ್ಟುಗಳ ವಾಪಸು ಪಾವತಿ ..	22		
ಲೆಕ್ಕಗಳು ...	24	ಡಿಪಾಜಿಟರುಗಳ ತರಗತಿ ವಿಂಗಡ ..	ಉಪಭಾಗ A
ಡಿಪಾಜಿಟ್ಟುಗಳ ಜರ್ನಲ್ ಎಂದರೆ ರೋಜು ಲೆಕ್ಕ ..	25	ಆಫೀಸಿನವರು ನಡೆಸಬೇಕಾದ ಕ್ರಮಗಳು .	ಉಪಭಾಗ B
ಡಿಪಾಜಿಟ್ಟುಗಳ ವಾಪಸು ಪಾವತಿಗಳ ಜರ್ನಲ್ ಎಂದರೆ ರೋಜು ಲೆಕ್ಕ.	26	ಬಡ್ಡಿಯ ತಖ್ತೆ ..	ಉಪಭಾಗ C
ಲೆಡ್ಜರಗಳು ಎಂದರೆ ವರ್ಗ ಲೆಕ್ಕಗಳು ...	27	ಸೇವಿಂಗ್ಸು ಬ್ಯಾಂಕು ಆಕ್ಟು ...	ಉಪಭಾಗ D
		ನಮೂನೆಗಳು ..	ಉಪಭಾಗ E

ಮೈಸೂರ ಗವರ್ನಮೆಂಟ ಸೇವಿಂಗ್ಸ್ ಬ್ಯಾಂಕುಗಳು.

ನಿಯಮಗಳು.

1. ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕುಗಳ ವಿಚಾರದಲ್ಲಿ ಈಗ ಜಾರಿಯಲ್ಲಿರುವ ಎಲ್ಲಾ ನಿಬಂಧನೆಗಳನ್ನೂ ರದ್ದುಪಡಿಸಿ ಅವುಗಳಿಗೆ ಬದಲಾಗಿ ಇದರಡಿ ಕಂಡ ನಿಬಂಧನೆಗಳು (1906ನೆ ಇಸವಿ ಆಗಸ್ಟು 15ನೆ ತಾರೀಖು ಫೈನಾನ್ಷಲ್ 1510-ಜನರಲ್ ಫೈನಾನ್ಸ 280-04-38ನೆ ನಂಬರ್ ಇಸ್ತಿಹಾರ್ನಾಮೆಯನ್ನು ನೋಡತಕ್ಕದ್ದು.) ಜಾರಿಯಲ್ಲಿ ಬರೋಣವನ್ನು ಮೈಸೂರ ಸರ್ಕಾರದವರು ಮಂಜೂರ್ಮಾಡಿರುತ್ತಾರೆ—

I. ಈ ನಿಬಂಧನೆಗಳಲ್ಲಿ—

"ಡಿಪಾಜಿಟರ್" ಮತ್ತು "ಡಿಪಾಜಿಟ್" ಎಂಬ ಶಬ್ದಗಳಿಗೆ 1873ನೆ ಇಸವಿಯ ಗವರ್ನ್ಮೆಂಟ ಸೇವಿಂಗ್ಸ ಬ್ಯಾಂಕ್ಸ್ ಆಕ್ಟು ಪ್ರಕಾರ ಏನು ಅರ್ಥವೋ ಅದೇ ಅರ್ಥವಾಗತಕ್ಕದ್ದು.

"ಲೆಕ್ಕ" ಎಂದರೆ ಒಂದು ಗವರ್ನ್ಮೆಂಟ ಸೇವಿಂಗ್ಸ ಬ್ಯಾಂಕಿನಲ್ಲಿ ಒಬ್ಬ ಡಿಪಾಜಿಟರನ ಲೆಕ್ಕವೆಂದು ಅರ್ಥವು.

"ಬಾಕಿ" ಎಂದರೆ ಒಂದು ಲೆಕ್ಕಕ್ಕೆ ಸಲ್ಲಬೇಕಾದ ಬಾಕಿ ಎಂದರ್ಥವು.

II. ಯಾವ ಮನುಷ್ಯನಾಗಲಿ ತನ್ನ ಸ್ವಂತಪರವಾಗಿಯಾದರೂ ಅಥವಾ ಹೆಸರು ನಮೂದಾದ ತನ್ನನ್ನು ಆಶ್ರಯಿಸಿಕೊಂಡಿರುವ ಮತ್ಯಾವ ಮನುಷ್ಯನ ಪರವಾಗಿಯಾದರೂ ಒಬ್ಬ ಡಿಪಾಜಿಟರ್ ಆಗಬಹುದು. ಯಾವುದಾದರೂ ಸಾರ್ವಜನಿಕವಾದ ಕೆಲಸ ನಡೆಸುವ ಬಗ್ಗಾಗಲಿ ಅಥವಾ ಯಾವ ಸರ್ಕಾರ ನೌಕರನ ನಂಬಿಕೆಗೋಸ್ಕರವಾಗಿ ಆಗಲಿ ಅಥವಾ ಯಾವುದಾದರೂ ಸಾರ್ವಜನಿಕೋದ್ದೇಶ ನೆರವೇರುವ ಬಗ್ಗಾಗಲಿ ಖಾತರಿಗೋಸ್ಕರ ಉದ್ಯೋಗ ಧರ್ಮವನ್ನನುಸರಿಸಿ ತಮ್ಮ ಬಳಿ ಇಡಲ್ಪಡುವ ಹಣವನ್ನು ಧರ್ಮೋದ್ದೇಶದ ಅಥವಾ ಇತರ ಸಾರ್ವಜನಿಕ ಸಂಘಗಳ ಮಾನೇಜರುಗಳೂ ಅಥವಾ ಸರ್ಕಾರದ ಉದ್ಯೋಗಸ್ಥರೂ ಕೂಡ ಡಿಪಾಜಿಟ್ಮಾಡಬಹುದು.

III. ಈ ನಿಬಂಧನೆಗಳ ನಿಯಮಗಳಿಗೊಳಪಟ್ಟು, ಮೈಸೂರ್ ಗವರ್ನ್ಮೆಂಟಿನವರು ಪ್ರತಿ ಡಿಪಾಜಿಟ್ಟನ್ನೂ ಬಡ್ಡಿ ಸಮೇತ ವಾಪಸು ಸಂದಾಯ ಮಾಡುವುದಾಗಿ ಭರವಸೆ ಕೊಡುತ್ತಾರೆ.

IV. ಕಂಟ್ರೋಲರ ಮಂಜೂರಾತಿ ಇಲ್ಲದೆ ಒಂದು ರೂಪಾಯಿಗೆ ಕಡಮೆಯಾದ ಮೊಬಲಗಿಗೆ ಯಾವ ಲೆಕ್ಕವೂ ಪ್ರಾರಂಭಿಸಲ್ಪಡುವುದಿಲ್ಲ ಮತ್ತು ಯಾವುದಾದರೂ ಜುಲೈ 1ನೆ ತಾರೀಖಿಗೂ ಮುಂದೆ ಬರುವ ಜೂನ್ 30ನೆ ತಾರೀಖಿಗೂ ಮಧ್ಯೆ ಬಟ್ಟು 2,000 ರೂಪಾಯಿಗಳಿಗಿಂತ ಹೆಚ್ಚಾಗಿ ಯಾವ ಮನುಷ್ಯನೂ ಡಿಪಾಜಿಟ್ಟಡಕೂಡದು. ಚಾಲ್ತಿ ವರ್ಷದ ಬಡ್ಡಿ ಯಲ್ಲದೆ ಯಾವ ಕಾಲದಲ್ಲಿಯೂ ಒಬ್ಬ ಡಿಪಾಜಿಟರ ಜಮೆ ಬಾಬಿನಲ್ಲಿ ಬಟ್ಟು ಮೊಬಲಗು 5,000 ರೂಪಾಯಿಗಳಿಗೂ ಮೀರಕೂಡದು.

V. ಎರಡು ರೂಪಾಯಿ (2) ಗಿಂತ ಕಡಮೆಯಾದ ಬಾಕಿಯ ಮೇಲಾಗಲಿ ಅಥವಾ ಯಾವ ಬಾಕಿಯನ್ನಾದರೂ 2 ರೂಪಾಯಿನಿಂದ ಭಾಗಿಸಿದ ನಂತರ ಉಳಿಯುವ ಶೇಷದ ಮೇಲಾಗಲಿ ಬಡ್ಡಿಯು ಸಲ್ಲುವುದಿಲ್ಲ.

VI. ತಿಂಗಳಿನ ನಾಲ್ಕನೇ ದಿನದ ಆಖೈರಿಗೂ ಮತ್ತು ತಿಂಗಳಾಖೈರಿಗೂ ಮಧ್ಯಕಾಲದ ಲೆಕ್ಕದ ಕನಿಷ್ಠ ಬಾಕಿಯಮೇಲೆ ಪ್ರತಿ ಕ್ಯಾಲಂಡರ್ ತಿಂಗಳಿಗೂ ಬಡ್ಡಿಯು ಕಟ್ಟಲ್ಪಡುತ್ತದೆ.

VII. 1906ನೆಯ ಅಕ್ಟೋಬರ್ 1ನೆ ತಾರೀಖಿನಿಂದ ಮತ್ತೊಂದು ನೋಟಿಸ್ ಕೊಡುವ ವರೆಗೂ ಪ್ರತಿ 2 ರೂಪಾಯಿಗಳಿಗೂ ತಿಂಗಳು ಒಂದಕ್ಕೆ 1 ಪೈ ಮೇರೆ ಡಿಪಾಜಿಟ್ಟಿನ ಮೇಲೆ ಬಡ್ಡಿಯು ಕೊಡಲ್ಪಡುವುದು. ಇದು ವರ್ಷ 1ಕ್ಕೆ ಶೇಕಡಾ $3\frac{1}{8}$ ಮೇರೆ ಪ್ರತಿ 24 ರೂಪಾಯಿಗಳಿಗೂ 1 ಆಣೆಯಂತೆ ಆಗುವುದು. ಕಂಟ್ರೋಲರ ಮಂಜೂರಾತಿ ಇಲ್ಲದೆ ಯಾವ ಶಿಲ್ಕಿನ ಮೇಲೂ 5,000 ರೂಪಾಯಿಗಳ ಮೇಲಿನ ಬಡ್ಡಿಯಾದ 13—0—4 ರೂಪಾಯಿಗಿಂತ ಹೆಚ್ಚಾದ ಮಾಹೆಯಾನಾ ಬಡ್ಡಿಯು ಕೊಡಲ್ಪಡುವುದಿಲ್ಲ.

(1) ಬಡ್ಡಿ ಗಣನೆ ಮಾಡುವುದರಲ್ಲಿ, ಬಡ್ಡಿ ಕಟ್ಟಲ್ಪಡಲು ಲಾಯಖಾದ ಮೊಬಲಗು ಪೈಕಿ ಪ್ರತಿ ಇಪ್ಪತ್ತುನಾಲ್ಕು ರೂಪಾಯಿಗಳ ಮೇಲೆ ಮಾಹೆ ಒಂದಕ್ಕೆ ಒಂದು ಆಣೆ ಬಡ್ಡಿ ಎಂದು ನಿಶ್ಚಯಿಸಲ್ಪಡುತ್ತದೆ, ಮತ್ತು ಇಪ್ಪತ್ತುನಾಲ್ಕು ರೂಪಾಯಿಗಳಿಗೆ ಕಡಮೆಯಾದ ಚಿಲ್ಲರೆ ಮೊತ್ತಗಳಿಗೆ ಇದರಡಿ ಬರುವ ತಖ್ತೆಯಂತೆ ಬಡ್ಡಿ ಎಣಿಕೆಯಾಗುವದು :—

ಅಸಲು.			ಬಡ್ಡಿ.		ಅಸಲು.			ಬಡ್ಡಿ.	
ರೂ.	ಆ.	ಪೈ.	ಆ.	ಪೈ.	ರೂ.	ಆ.	ಪೈ.	ಆ.	ಪೈ.
2	0	0	0	1	14	0	0	0	7
4	0	0	0	2	16	0	0	0	8
6	0	0	0	3	18	0	0	0	9
8	0	0	0	4	20	0	0	0	10
10	0	0	0	5	22	0	0	0	11
12	0	0	0	6	24	0	0	1	0

ರೂ. ಆ.
ಉದಾಹರಣೆ.—134—6—10 ಪೈನ ಮೇಲೆ ಒಂದು ತಿಂಗಳಿಗೆ ಬಡ್ಡಿ ತಿಳಿಯಬೇಕು.

ರೂ.	ಆ.	ಪೈ.		ಆ.	ಪೈ.
120	0	0	ರೂಪಾಯಿನ ಮೇಲೆ ಬಡ್ಡಿ ...	5	0 ಆಗುತ್ತದೆ.
14	6	10	ಪೈನ ಮೇಲೆ ಬಡ್ಡಿ ...	0—	7 ,,
ಜುಮ್ಲಾ 134	6	10		5—	7

(2) 1906ನೆ ಅಕ್ಟೋಬರು 1ನೆ ತಾರೀಖಿನೊಳಗೆ 5,000 ರೂಪಾಯಿಗೆ ಮೇಲಿನ ಹೆಚ್ಚಿಗೆ ಮೊಬಲಗನ್ನು ವಾಪಸು ತೆಗೆದುಕೊಳ್ಳದೆ ಹೋದುದರಿಂದ ಒಂದು ಲೆಕ್ಕದ ಜಮೆಯಲ್ಲಿ 5,000 ರೂಪಾಯಿಗೆ ಮೀರಿದ ಡಿಪಾಜಿಟ್ಟುಗಳ ವಿಷಯದಲ್ಲಿ ವಿಧಿಸಲ್ಪಟ್ಟ ಪರಮಾವಧಿಯಾದ 5,000 ರೂಪಾಯಿನಮೇಲೆ ಮಾತ್ರವೇ ಸಾಲಿಯಾನಾ ವಾಡಿಕೆಯ ದರವಾದ ಶೇಕಡಾ $3\frac{1}{8}$ರ ಮೇರೆಯೂ ಅದಕ್ಕೆ ಮೇಲಿನ ಹೆಚ್ಚಿಗೆ ಮೊಬಲಗಿಗೆ ಸಾಲೀಯಾನಾ ಶೇಕಡಾ 2 ರಂತೆಯೂ ಬಡ್ಡಿ ಕೊಡಲ್ಪಡುವುದು.

ಅಂಥಾ ಹೆಚ್ಚಿಗೆ ಮೊಬಲಗಿನ ಮೇಲೆ ಬಡ್ಡಿ ಗಣನೆ ಮಾಡುವುದರಲ್ಲಿ ಆ ಮೊಬಲ್ಗು ಪೈಕಿ ಪ್ರತಿ ಇಪ್ಪತ್ತೈದು ರೂಪಾಯಿಗಳ ಮೇಲೆ ಮಾಹೆ ಒಂದಕ್ಕೆ ಎಂಟು ಪೈ ಬಡ್ಡಿ ಎಂದು ನಿಶ್ಚಯಿಸಲ್ಪಡುತ್ತದೆ, ಮತ್ತು ಇಪ್ಪತ್ತೈದು ರೂಪಾಯಿಗಳಿಗೆ ಕಡಮೆಯಾದ ಚಿಲ್ಲರೆ ಮೊಬಲಗುಗಳಿಗೆ ಇದರಡಿ ಬರುವ ತಖ್ತೆಯಂತೆ ಬಡ್ಡಿ ಎಣಿಕೆಯಾಗುವುದು :—

ಅಸಲು.			ಬಡ್ಡಿ.			ಅಸಲು.			ಬಡ್ಡಿ.		
ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.
3	2	0	0	0	1	15	10	0	0	0	5
6	4	0	0	0	2	18	12	0	0	0	6
9	6	0	0	0	3	21	14	0	0	0	7
12	8	0	0	0	4	25	0	0	0	0	8

	ರೂ.	ಆ.	ಪೈ.				
ಉದಾಹರಣೆ.—	134	6	10	ಮೇಲೆ ಒಂದು ತಿಂಗಳಿಗೆ ಬಡ್ಡಿ ತಿಳಿಯಬೇಕು ;—			
	ರೂ.	ಆ.	ಪೈ.		ಆ.	ಪೈ.	
	125	0	0	ಮೇಲೆ ಬಡ್ಡಿ ...	3	4	ಆಗುತ್ತದೆ.
	9	6	10	ಡಿಟೋ ...	0	3	,,
ಜುಮ್ಲಾ ...	134	6	10		3	7	

VIII. ಪ್ರತಿ ಲೆಕ್ಕವೂ ಜೂನ್ 30ನೆ ತಾರೀಖಿನ ದಿನ ಖೈದ್ಮಾಡಲ್ಪಟ್ಟು ಈ ನಿಬಂಧನೆಗಳಂತೆ ಲೆಕ್ಕಾಚಾರದ ಮೇರೆ ಆ ತಾರೀಖಿನಲ್ಲಿ ಸಲ್ಲಬೇಕಾಗುವ ಬಡ್ಡಿಯು ಲೆಕ್ಕದ ಬಾಕಿ ಮೊಬಲಗಿಗೆ ಸೇರಿಸಲ್ಪಡುತ್ತದೆ, ಈ ಒಟ್ಟು ಮೊಬಲಗಿನ ಮೇಲೆ ಮುಂದಿನ ಬಡ್ಡಿ ಗಣಿಸಲ್ಪಡುವುದು. ಒಂದು ಲೆಕ್ಕವು ಮತ್ಯಾವ ತಾರೀಖಿನಲ್ಲಾದರೂ ಖೈದ್ಮಾಡಲ್ಪಟ್ಟರೆ, ಅದರ ಹಿಂದಿನ ಇಂಗ್ಲಿಷ್ ತಿಂಗಳಾಖೈರುವರೆಗೆ ಆಗುವ ಬಡ್ಡಿಯು ಡಿಪಾಜಿಟರಿಗೆ ಕೊಡಲ್ಪಡುವುದು; ಆದರೆ ತನ್ನ ಲೆಕ್ಕವನ್ನು ಖೈದ್ಮಾಡಿಕೊಳ್ಳುವ ಡಿಪಾಜಿಟರಿಗೆ ಕೂಡಲೆ ಅಂಥಾ ಲೆಕ್ಕವನ್ನು ಪುನಃ ಆರಂಭಿಸಲು ಟ್ರೆಜರಿ ಆಫಿಸರ ಮುನಾಸಬಿನಂತೆ ಒಂದು ರೂಪಾಯಿ ಲಾಗಾಯಿತು ಹತ್ತು ರೂಪಾಯಿ ವರೆಗಿನ ಒಂದು ಜುರ್ಮಾನೆಯನ್ನು ಅವನು ಕೊಟ್ಟ ಹೊರ್ತು ಸಾಧಾರಣವಾಗಿ ಅಪ್ಪಣೆಯನ್ನು ಕೊಡಕೂಡದು.

IX. ಒಬ್ಬ ಡಿಪಾಜಿಟರು ತನ್ನ ವಾಸಸ್ಥಾನವನ್ನು ಬದಲಾಯಿಸಿದಾಗೆಲ್ಲಾ, ಅವನು ಯಾವ ಡಿಸ್ಟ್ರಿಕ್ಟಿಗೆ ಹೋಗುತ್ತಾನೆಯೊ ಆ ಡಿಸ್ಟ್ರಿಕ್ಟಿನಲ್ಲಿರುವ ಗವರ್ನ್ಮೆಂಟ್ ಸೇವಿಂಗ್ಸ್ ಬ್ಯಾಂಕಿಗೆ ಅವನ ಲೆಕ್ಕವನ್ನು ಬಗರ್ ಲಾಗವಡಿನಿಂದ ವರ್ಗಮಾಡಬಹುದು. ಕಂಟ್ರೋಲರವರ ವಿಶೇಷ ಹುಕುಂ ಇಲ್ಲದೆ, ಬೇರೆ ಬಗೆಯಾಗಿ ಒಂದು ಲೆಕ್ಕವು ಒಂದು ಬ್ಯಾಂಕಿನಿಂದ ಮತ್ತೊಂದು ಬ್ಯಾಕಿಂಗೆ ವರ್ಗ ಮಾಡಲ್ಪಡಕೂಡದು.

X. ಪ್ರತಿ ಡಿಪಾಜಿಟರಿಗೂ ಒಂದು ಡಿಪಾಜಿಟ್ ಬುಕ್ಕು ಕೊಡಲ್ಪಡುವುದು. ಅದರಲ್ಲಿ ಟ್ರೆಜರಿ ಆಫಿಸರು ಪ್ರತಿ ಡಿಪಾಜಿಟ್ಟು ದಾಖಲಾದ ಬಗ್ಯೆ ರುಜು ಮಾಡುವರು. ಡಿಪಾಜಿಟರು ಖುದ್ದು ಹಾಜರಾಗಬೇಕೆಂಬ ಜರೂರಿಲ್ಲ; ಆದರೆ ಡಿಪಾಜಿಟರ ಡಿಪಾಜಿಟ್ ಬುಕ್ಕು ಇದ್ದ ಹೊರ್ತು ಯಾವ ಡಿಪಾಜಿಟ್ಟೂ ದಾಖಲ್ಮಾಡಿಕೊಳ್ಳಲ್ಪಡುವುದಿಲ್ಲ ಅಥವಾ ಹಣದ ಪಾವತಿಯೂ ಮಾಡಲ್ಪಡುವುದಿಲ್ಲಾ, ಮತ್ತು ಒಂದು ಡಿಪಾಜಿಟ್ಟು ಬುಕ್ಕಿನಲ್ಲಿ ಯಾವ ಡಿಪಾಜಿಟ್ಟಿನ ಜಮೆ ಬಗ್ಯೆ ಒಪ್ಪಿತ ಹಾಕಲ್ಪಟ್ಟಿಲ್ಲವೋ ಅಂಥಾ ಯಾವ ಡಿಪಾಜಿಟ್ಟಿನ ಬಗ್ಯೂ ಗವರ್ನ್ಮೆಂಟಿನವರು ಜವಾಬ್ದಾರರಾಗಲಾರರು. ಜೂನ್ 30ನೆ ತಾರೀಖಿನ ಅನಂತರ ಮೊದಲಾವರ್ತಿ ಹಾಜರ್ಮಾಡಲ್ಪಟ್ಟಾಗ ಪ್ರತಿ ಡಿಪಾಜಿಟ್ಟು ಬುಕ್ಕಿನಲ್ಲಿ ಸದರಿ ಹಾಜರಾತಿ ತಾರೀಖುವರೆಗೆ ಆಗುವ ಬಡ್ಡಿಯನ್ನು ದಾಖಲ್ಮಾಡಬೇಕು. ಮೊದಲಾವರ್ತಿ ಕೊಡಲ್ಪಡುವ ಡಿಪಾಜಿಟ್ಟು ಬುಕ್ಕು ಬಗರ್ ಖಿಮ್ಮತ್ತಿನಿಂದ ಕೊಡಲ್ಪಡುವುದು; ಆದರೆ ಒಂದು ಡಿಪಾಜಿಟ್ಟು ಬುಕ್ಕು ಹೋಗಲಾಡಿಸಿಕೊಳ್ಳಲ್ಪಟ್ಟರೆ ಅಥವಾ ಜಾಯಾವಾದರೆ, ಅಥವಾ ಒಂದು ಖೈದಾದ ಲೆಕ್ಕ ಪುನಃ ಆರಂಭಿಸಲ್ಪಡಬೇಕಾದರೆ, ಒಂದು ಹೊಸ ಬುಕ್ಕಿಗೆ ಒಂದು ರೂಪಾಯಿ ಛಾರ್ಜ್ ಮಾಡಲ್ಪಡುವುದು.

XI. ವಿಶೇಷ ಅಪ್ಪಣೆಯಿಲ್ಲದೆ ಒಬ್ಬ ಡಿಪಾಜಿಟರು ತನ್ನ ಲೆಕ್ಕದಿಂದ ಮೂವತ್ತು ದಿನಗಳಿಗೆ ಒಂದಾವರ್ತಿಗಿಂತ ಹೆಚ್ಚಾಗಿ ಹಣ ಪಡೆಯಲಾಗದು ಅಥವಾ ತನ್ನ ಸ್ವಂತ ಹೆಸರಿನಲ್ಲಾಗಲಿ ಅಥವಾ ತನ್ನ ಕುಟುಂಬದ ಪೈಕಿ ಯಾರ ಹೆಸರಿನಲ್ಲಾಗಲಿ ಅಥವಾ ತನ್ನ ಸ್ವಂತ ಆದಾಯಕ್ಕೋಸ್ಕರವಾಗಲಿ ಅಥವಾ ತನ್ನ ಕುಟುಂಬದ ಪೈಕಿ ಯಾರ ಆದಾಯಕ್ಕೋಸ್ಕರವಾಗಲಿ ಒಂದು ಲೆಕ್ಕಕ್ಕಿಂತ ಹೆಚ್ಚು ಲೆಕ್ಕಗಳನ್ನು ಇರಿಸಲಾಗದು. ಈ ನಿಬಂಧನೆಯ ಯಾವ ಉಲ್ಲಂಘನೆಗೂ ಆಸ್ಪದವಾಗದಂತೆ, ತತ್ರಾಪಿ ಒಂದು ಲೆಕ್ಕವನ್ನು ಪ್ರಕೃತಬಿದ್ದಾಗೆಲ್ಲಾ ಸಾಧಾರಣವಾಗಿ ಹಣವಾಪಸು ಪಡೆಯುವ ಲೆಕ್ಕವನ್ನಾಗಿ ಉಪಯೋಗಿಸದಂತೆಯೂ ಕಂಟ್ರೋಲರವರು ಮುಂಜಾಗ್ರತೆಯನ್ನು ವಹಿಸಬೇಕು. ಉದ್ಯೋಗ ಪ್ರಯುಕ್ತವಾದ ಅಥವಾ ಸಾರ್ವಜನಿಕವಾದ ಲೆಕ್ಕವನ್ನು ಒಂದಕ್ಕಿಂತ ಹೆಚ್ಚಾಗಿ ಯಾರೂ ಇರಿಸಕೂಡದೆಂದು ಈ ನಿಬಂಧನೆಯ ಅರ್ಥವಲ್ಲವು.

XI. A.—ಯಾವ ಸಂದರ್ಭದಲ್ಲಾದರೂ ಒಬ್ಬ ಡಿಪಾಜಿಟದಾರನಿಗೆ ಸಲ್ಲುವ ಹಣಕ್ಕಿಂತ ಹೆಚ್ಚು ಹಣವು ಖಜಾನೆಯಿಂದ ತಪ್ಪಾಗಿ ಪಾವತಿಯಾದರೆ, ಯಾರ ಲೆಕ್ಕದಲ್ಲಿ ಹೆಚ್ಚು ಪಾವತಿಯಾಯಿತೊ ಆ ಡಿಪಾಜಿಟದಾರನಿಂದ ಆ ಹೆಚ್ಚು ಪಾವತಿಯಾದ ಹಣದ ಮೇಲೆ ಪಾವತಿಯಾದ ತಾರೀಖಿನಿಂದ ಅದು ವಸೂಲಾಗುವ ತಾರೀಖಿನ ವರೆಗೆ ಬಡ್ಡಿ ವಸೂಲ್ಮಾಡಲ್ಪಡತಕ್ಕದ್ದು.

XII. ಟ್ರೆಜರಿ ಆಫಿಸರು ಯಾವುದಾದರೂ ಸಾಕಾದ ಕಾರಣದಿಂದ ಯಾವ ಲೆಕ್ಕವನ್ನಾಗಲಿ ಇಡುವುದಿಲ್ಲವೆಂದು ನಿರಾಕರಿಸಬಹುದು. ಅಥವಾ ಯಾವ ಲೆಕ್ಕವನ್ನಾದರೂ ಖೈದು ಮಾಡಿಸಬಹುದು; ಹೇಗೆಂದರೆ, ಗವರ್ನ್ಮೆಂಟು ಸೇವಿಂಗ್ಸ್ ಬ್ಯಾಂಕುಗಳು ಏರ್ಪಟ್ಟಿರುವ ಉದ್ದೇಶವೆಂದರೆ, ಹಣವನ್ನು ಕೂಡಿಸಿಡುವುದನ್ನು ಪ್ರೋತ್ಸಾಹಪಡಿಸಬೇಕೆಂಬ ಉದ್ದೇಶಕ್ಕೆ ವಿರೋಧವಾಗಿ ಅಂಥಾ ಲೆಕ್ಕವು ಬಹುಶಃ ಉಪಯೋಗಿಸಲ್ಪಡುವುದಾಗಿರುತ್ತದೆ ಅಥವಾ ಉಪಯೋಗಿಸಲ್ಪಡುತ್ತಲಿದೆ ಎಂದು ಟ್ರೆಜರಿ ಆಫಿಸರು ಭಾವಿಸಿದರೆ ಸದರಿ ಮೇರೆ ಹುಕುಂ ಮಾಡಬಹುದು. ಆದರೆ ಹಾಗೆ ನಿರಾಕರಣೆ ಮಾಡಿದ ಅಥವಾ ಲೆಕ್ಕವನ್ನು ಖೈದು ಮಾಡಿದ ಪ್ರತಿ ಸಂದರ್ಭವನ್ನೂ ಆ ಬಗ್ಯೆ ಉಂಟಾದ ಕಾರಣಗಳನ್ನೂ ಕಂಟ್ರೋಲರವರಿಗೆ ರಿಪೋರ್ಟು ಮಾಡತಕ್ಕದ್ದು.

XIII. ಯಾವ ಲೆಕ್ಕವನ್ನಾದರೂ ಖೈದು ಮಾಡೋಣ ಯುಕ್ತವೆಂದು ಟ್ರೆಜರಿ ಆಫಿಸರು ಭಾವಿಸಿದಾಗ, ಹಾಗೆ ಲೆಕ್ಕ ಖೈದಾದುದನ್ನು ಕುರಿತು ಬರಹ ಮೂಲಕವಾಗಿ ಡಿಪಾಜಿಟರಿಗೆ ಅವರು ನೋಟಿಸ್ ಕೊಡತಕ್ಕದ್ದು. ಅಂಥಾ ನೋಟಿಸಿನ ತಾರೀಖಿನ ತರುವಾಯು, ಹಾಗೆ ಖೈದ್ಮಾಡಲ್ಪಟ್ಟ ಲೆಕ್ಕಕ್ಕಾಗಿ ಯಾವ ಡಿಪಾಜಿಟ್ಟೂ ಅಂಗೀಕರಿಸಲ್ಪಡಕೂಡದು, ಮತ್ತು ಸದರಿ ಖೈದಾದ ಲೆಕ್ಕದ ಬಾಕಿಯ ಮೇಲೆ ಆಗ್ಯೆ ಚಾಲ್ತಿಯಲ್ಲಿರುವ ಇಂಗ್ಲಿಷ್ ತಿಂಗಳು ಆಖೈರಾದ ತರುವಾಯ ಬಡ್ಡಿ ಕಟ್ಟಲ್ಪಡಕೂಡದು.

XIV. ಈ ನಿಬಂಧನೆಗಳನ್ನು ಯಾವ ಕಾಲದಲ್ಲಾಗಲಿ ಬದಲಾಯಿಸುವ ಅಥವಾ ಹೆಚ್ಚಿಸುವ ಹಕ್ಕನ್ನು ಮೈಸೂರ್ ಗವರ್ನ್ಮೆಂಟಿನವರು ಉಳಿಸಿಕೊಂಡಿರುತ್ತಾರೆ.

XV. ಈ ತಾರೀಖಿನ ತರುವಾಯ ಕೊಡಲ್ಪಡುವ ಪ್ರತಿ ಡಿಪಾಜಿಟ್ಟು ಬುಕ್ಕಿನಲ್ಲಿಯೂ, 1873ನೆ ಇಸವಿಯ ಗವರ್ನಮೆಂಟ ಸೇವಿಂಗ್ಸು ಬ್ಯಾಂಕುಗಳ ಆಕ್ಟಿನ ಮತ್ತು ಈ ನಿಬಂಧನೆಗಳ ನಕಲೊಂದು ಅಚ್ಚು ಹಾಕಲ್ಪಡತಕ್ಕದ್ದು, ಮತ್ತು ಡಿಪಾಜಿಟರಿನ ರುಜು, ಅಥವಾ ಅವನಿಗೆ ಬರೆಯಲು ಬಾರದಿದ್ದರೆ ಅವನ ಗುರ್ತನ್ನು ಅವನಿಂದ ಯಾವ ಡಿಪಾಜಿಟ್ಟಾದರೂ ಅಂಗೀಕರಿಸಲ್ಪಡುವುದಕ್ಕೆ ಪೂರ್ವ ಇದಕ್ಕೆ ಲಗತ್ತಿರುವ ಒಡಂಬಡಿಕೆಗೆ ಹಾಕಿಸಿಕೊಳ್ಳತಕ್ಕದ್ದು.

XVI. ಈ ನಿಬಂಧನೆಗಳು 1906ನೆ ಇಸವಿ ಅಕ್ಟೋಬರ್ ಗುರ್ರೆ ತಾರೀಖು ಲಾಗಾಯಿತು ಜಾರಿಯಲ್ಲಿ ಬರತಕ್ಕದ್ದು.

XVನೆ ನಿಬಂಧನೆ ಪ್ರಕಾರ ಬರೆಸಿಕೊಳ್ಳಲ್ಪಡಬೇಕಾದ ಒಡಂಬಡಿಕೆ.

....ನಾನು ಈ ನಿಬಂಧನೆಗಳನ್ನು ಓದಿಕೊಂಡಿರುತ್ತೇನೆ (ಅಥವಾ, ಅವನಿಗೆ ಓದುವುದಕ್ಕೆ ಬಾರದಿದ್ದರೆ ಈ ನಿಬಂಧನೆಗಳು ನನಗೆ ಓದಿ ಹೇಳಲ್ಪಟ್ಟಿರುತ್ತವೆ) ಎಂದು ಒಪ್ಪಿಕೊಳ್ಳುತ್ತೇನೆ.

ತಾರೀಖು..........

....

(ರುಜು ಅಥವಾ ಗುರ್ತು.)

ಆಫೀಸುಗಳು.

2. ಡಿಸ್ಟ್ರಿಕ್ಟು ಸೇವಿಂಗ್ಸು ಬ್ಯಾಂಕಿನ ಕೆಲಸವು ಟ್ರೆಜರಿ ಛಾರ್ಜಿನಲ್ಲಿರುವ ಆಫೀಸರಿಂದ ನಡೆಸಲ್ಪಡುವುದು.

ಕೆಲಸದ ಏರ್ಪಾಡುಗಳು.

3. ಪ್ರತಿ ಡಿಸ್ಟ್ರಿಕ್ಟು ಸೇವಿಂಗ್ಸು ಬ್ಯಾಂಕೂ ಆದಿತ್ಯವಾರಗಳು ರಜಾ ದಿನಗಳು ಶಿವಾಯಿ ಪ್ರತಿ ದಿವಸವೂ ಕೆಲಸದ ಬಗ್ಗೆ ಖುಲ್ಲಾ ಇರಬೇಕು.

ಲೆಕ್ಕಗಳ ರೀತಿ.

4. ಯಾವ ಮನುಷ್ಯನಿಗಾದರೂ ಪ್ರಕೃತಬಿದ್ದಹಾಗೆಲ್ಲಾ ಡಿಪಾಜಿಟ್ಟುಮಾಡಿ ವಾಪಸು ಪಡೆಯುವ ಕಾರ್ಬಾರ ನಡೆಸಲು ಚಾಲ್ತಿ ಹಣದ ಡಿಪಾಜಿಟ್ಟಿಗೆ ಸ್ಥಳವೆಂದು ಡಿಸ್ಟ್ರಿಕ್ಟ ಸೇವಿಂಗ್ಸು ಬ್ಯಾಂಕಿಗೆ ಸೇರಲು ಅಪ್ಪಣೆ ಕೊಡಕೂಡದು. ಅಂಥಾ ಲೆಕ್ಕಗಳನ್ನು ಮೈದುಮಾಡಲು ಟ್ರೆಜರಿ ಆಫೀಸರಿಗೆ ಸಂಪೂರ್ಣ ಸ್ವಾತಂತ್ರ್ಯವುಂಟು.

ತಕ್ಕ ಕಾರಣಗಳನ್ನು ತೋರಿಸಿ ಟ್ರೆಜರಿ ಆಫೀಸರಿಂದ ವಿಶೇಷ ಅಪ್ಪಣೆ ಪಡೆದ ವಿನಾ ಒಂದೇ ಲೆಕ್ಕದಿಂದ ಒಂದೇ ತಿಂಗಳಲ್ಲಿ ಒಂದಾವರ್ತಿಗಿಂತ ಹೆಚ್ಚಾಗಿ ಹಣ ವಾಪಸು ಪಡೆಯಲು ಆಸ್ಪದಕೊಡಲ್ಪಡಕೂಡದು.

5. ಖಾಸಗಿ ಲೆಕ್ಕಗಳ್ಯಾವುದನ್ನೂ ಇಬ್ಬರು ಅಥವಾ ಹೆಚ್ಚು ಮಂದಿಗಳ ಹೆಸರಿನಲ್ಲಿ ಜಂಟಿಯಾಗಿ ಇಡಕೂಡದು, ಅಥವಾ ಎರಡನೆಯವರ ಭರವಸೆ ಬಾಬತು ಯಾವ ಲೆಕ್ಕಗಳನ್ನಿಡುವುದಕ್ಕೂ ಆಸ್ಪದ ಕೊಡಕೂಡದು.

ಇದರಿಂದ ಎರಡನೆಯವರ ಭರವಸೆ ಲೆಕ್ಕಗಳನ್ನು ಇಡಲು ಅವಕಾಶಕೊಡಕೂಡದೆಂಬುದೇ ಹೊರತು ಮೈನರ್‌ಗಳ ವಗೈರೆ ಪರವಾಗಿ ಡಿಪಾಜಿಟ್ಟುಗಳನ್ನು ಇಡಕೂಡದೆಂದು ತಾತ್ಪರ್ಯವಲ್ಲವು.

ಸಂಘಗಳು.

6. ಒಂದು ಸಂಘ ಅಥವಾ ಸಭೆಯ ಹೆಸರಿನಲ್ಲಿ ಡಿಸ್ಟ್ರಿಕ್ಟು ಸೇವಿಂಗ್ಸು ಬ್ಯಾಂಕಿನಲ್ಲಿ ಲೆಕ್ಕವನ್ನಿಡಲು ಆಕ್ಷೇಪಣೆ ಇಲ್ಲವು, ಪರಂತು ಹಾಗೆ ಲೆಕ್ಕವಿಡಲ್ಪಡುವ ಕಾಲದಲ್ಲಿ, ಸದರಿ ಸಂಘ ಅಥವಾ ಸಭೆಯ ಯಾವ ಅಧಿಕಾರಿಯು ಸದರಿ ಲೆಕ್ಕದ ಬಾಬತ್ತು ಹಣ ಪಡೆಯಬಹುದು, ಮತ್ತು ಸದರಿ ಅಧಿಕಾರಿಯನ್ನು ಯಾರು ಮೊಕರರು ಮಾಡಿರುತ್ತಾರೆಂಬುದನ್ನು ತಿಳಿಯಪಡಿಸಬೇಕಲ್ಲದೆ ಸದರಿ ಅಧಿಕಾರದಲ್ಲಿರುವವನ ಹೆಸರನ್ನು, ಮತ್ತು ಅಂಥಾ ಅಧಿಕಾರಿಯು ಮೊಕರರಾದ ಈಚೆಗೆ ಅಧಿಕಾರಿಯ ಬದಲಾವಣೆ ಏನಾದರೂ ಆದರೆ ಆ ಬದಲಾವಣೆಯ ಸಂಗತಿಯನ್ನೂ ಖರ್ಜ ಬ್ಯಾಂಕಿಗೆ ಕ್ರಮವಾಗಿ ತಿಳಿಸತಕ್ಕದ್ದು. ಬ್ಯಾಂಕಿನವರು ತಮಗೆ ತಿಳಿಯಬಂದ ಮೇಲ್ಕಂಡ ಬದಲಾವಣೆಯ ಸಂಗತಿಯನ್ನು ಒಂದು ಹೊಸ ಇಂಡೆಕ್ಸು ಚೀಟಿಯ ಮೂಲಕವಾಗಿ ಕಂಟ್ರೋಲರವರ ಆಫೀಸಿಗೆ ರಿಪೋರ್ಟು ಮಾಡತಕ್ಕದ್ದು. ಶಿವಾಯಿ, ಒಂಟಿಯಾದ ಪ್ರತಿಯೊಬ್ಬ ಡಿಪಾಜಿಟರಿಗೂ ಲಗಾವಾಗತಕ್ಕ ನಿರ್ಬಂಧಗಳು ಆಚರಣೆಯಲ್ಲಿ ಬರತಕ್ಕದ್ದು, ಎಂದರೆ, ಒಂದು ಸರ್ಕಾರಿ ಸಾಲು ಎಂದರೆ ಜುಲೈ ಗುರ್ರೆ ಲಾಗಾಯಿತು ಮಾರನೆ ಜೂನ್ 30ರ ವರೆಗೆ 2,000 ರೂಪಾಯಿಗಳಿಗಿಂತ ಹೆಚ್ಚಾದ ಮೊಬಲಗನ್ನು ಡಿಪಾಜಿಟ್ಟಿನಲ್ಲಿ ಇಡಕೂಡದು; ಚಾಲ್ತಿ ಲೆಕ್ಕವನ್ನು ಇಟ್ಟುಕೊಳ್ಳಲು ಸದರಿ ಬ್ಯಾಂಕನ್ನು ಒಂದು ಅನುಕೂಲತೆಯಾಗಿ ಮಾಡಿಕೊಳ್ಳಕೂಡದು. ಆದರೆ ಒಂದು ಭಾರಿ ಲೆಕ್ಕವನ್ನು ಇಡಬೇಕೆಂದು ಅಪೇಕ್ಷಿಸಿದ ಸಂದರ್ಭದಲ್ಲಿ, ಅಂಥಾ ಲೆಕ್ಕದ ಸ್ವಭಾವವನ್ನು ಕುರಿತು ಪೂರಾ ತಪಸೀಲುಗಳ ನಮೂದಿನಿಂದ ತಿಳಿಸಿ ಕಂಟ್ರೋಲರವರ ಆಫೀಸಿನ ಹುಕುಮನ್ನು ಕೇಳಿಕೊಳ್ಳಬೇಕು.

7. ಧರ್ಮಾರ್ಥವಾಗಿ ನೆಲೆಗೊಂಡಿರುವ ಶಾಲೆಗಳ ಬಗ್ಗಾಗಲಿ ಸಾರ್ವಜನಿಕವೆಂದು ತೋರುವ ಸಭೆಗಳಿಗಾಗಿಯಾಗಲಿ ಪ್ರತ್ಯೇಕವಾದ ಲೆಕ್ಕಗಳನ್ನಿಡಬಹುದು, ಪರಂತು ಅಂಥಾ ಹಣಗಳು ವೃದ್ಧಿಯಾಗುತ್ತಾ ಹೋಗುವ ಸ್ವಭಾವದ್ದಾಗಿರಬೇಕು, ಮತ್ತು ಬರಿ ಚಾಲ್ತಿ ಡಿಪಾಜಿಟ್ಟುಗಳನ್ನ ಇಟ್ಟುಕೊಳ್ಳುವ ಬಗ್ಗೆ ಬ್ಯಾಂಕನ್ನು ಉಪಯೋಗಿಸಿಕೊಳ್ಳಬೇಕೆಂಬ ಉದ್ದೇಶವಲ್ಲವು. ಅಂಥಾ ಲೆಕ್ಕದ ಕಾರ್‌ಬಾರ್ ನಡೆಸಬಹುದಾದ ಅಧಿಕಾರಿಯ ವಿಷಯದಲ್ಲಿ ಹಿಂದಿನ ನಿಬಂಧನೆಯ ನಿಯಮವು ಇಲ್ಲಿಗೂ ಲಗಾವಾಗತಕ್ಕದ್ದು.

ಒಬ್ಬನ ಹೆಸರಿನಲ್ಲಿ ಒಂದಕ್ಕಿಂತ ಹೆಚ್ಚಾದ ಲೆಕ್ಕಗಳು ಕೂಡದು.

8. ಸಾಮಾನ್ಯವಾಗಿ ಒಂದು ಸೇವಿಂಗ್ಸು ಬ್ಯಾಂಕಿನಲ್ಲಿ ಒಬ್ಬ ಮನುಷ್ಯನ ಪರವಾಗಿ ಒಂದು ಲೆಕ್ಕವಿದ್ದಲ್ಲಿ ಆ ಮನುಷ್ಯನ ಹೆಸರಿನಲ್ಲಿ ಅದೇ ಬ್ಯಾಂಕು ಅಥವಾ ಇತರ ಗವರ್ನಮೆಂಟ ಸೇವಿಂಗ್ಸುಬ್ಯಾಂಕಿನಲ್ಲಿ ಬೇರೊಂದು ಲೆಕ್ಕಕ್ಕೆ ಆಸ್ಪದ ಕೊಡಲ್ಪಡಕೂಡದು. ಯದ್ಯಪಿ ಈ ನಿಬಂಧನೆಯಿಂದ ತಮ್ಮ ಸ್ವಂತ ಬಾಬಿನಲ್ಲಲ್ಲದೆ, ಸರ್ಕಾರಿ ಉದ್ಯೋಗಗಳ ನಿಮಿತ್ತವಾಗಿ ಒಂದು ಅಥವಾ ಹೆಚ್ಚು ಲೆಕ್ಕಗಳನ್ನು ಇಡಿಸಿಕೊಳ್ಳಲು ಜನಗಳಿಗೆ ಅಡ್ಡಿ ಮಾಡಬೇಕೆಂಬ ಉದ್ದೇಶವಿಲ್ಲ, ಪರಂತು ಅಂಥಾ ಸರ್ಕಾರಿ ಉದ್ಯೋಗಗಳ

ನಿಮಿತ್ತವಾಗಿ ಇಡಲ್ಪಡುವ ಲೆಕ್ಕಗಳು ಸಂಪೂರ್ಣವಾಗಿ ಸರ್ಕಾರಿ ಹಣಗಳದಾಗಿರಬೇಕೇ ಹೊರ್ತು ಸ್ವಂತ ಹಣಗಳಿಗಾಗಿ ಇರಕೂಡದು. ಮೊದಲೇ ಒಂದು ಲೆಕ್ಕವನ್ನು ಇಡಿಸಿಕೊಂಡಿರುವ ಒಬ್ಬ ಮನುಷ್ಯನ ಹೆಂಡತಿಯ ಹೆಸರಿನಲ್ಲಿ, ಹಣವು ಆ ಹೆಂಡತಿಯ ಆರ್ಜನೆ ಅಥವಾ ಸ್ವತ್ತಾಗಿದ್ದರೆ, ಒಂದು ಲೆಕ್ಕವನ್ನಿಡಬಹುದು. (18ನೆ ನಿಬಂಧನೆಯನ್ನು ನೋಡುವುದು.)

ಜಾಮೀನೀ ಡಿಪಾಜಿಟ್ಟುಗಳು.

9. ಗವರ್ನಮೆಂಟ್ ಆಫಿಸರುಗಳ ಬಳಿ ಇಡಲ್ಪಡುವ ಜಾಮೀನೀ ಡಿಪಾಜಿಟ್ಟುಗಳು ಈ ಕೆಳಗೆ ಕಂಡಿರುವ ಷರತ್ತುಗಳ ಪ್ರಕಾರ ಬರಮಾಡಿಕೊಳ್ಳಲ್ಪಡುವುವು:—ಹಣವು ಡಿಪಾಜಿಟ್ಟಿಡುವವನಿಂದ ನೇರಾ ಬರಮಾಡಿಕೊಳ್ಳಲ್ಪಟ್ಟು ಲೆಕ್ಕವು ಅವನ ಹೆಸರಿನಲ್ಲಿಡಲ್ಪಡುವುದು. ಅವನು ಗವರ್ನಮೆಂಟ್ ಆಫಿಸರ ಬರಹಮೂಲಕವಾದ ವಿಶೇಷ ಮಂಜೂರಾತಿ ಹೊರ್ತು ಡಿಪಾಜಿಟ್ ಇಟ್ಟಿರುವ ಅಸಲು ಹಣದ ಬಗ್ಯಾಗಿ ಬ್ಯಾಂಕಿನಮೇಲೆ ಯಾವ ಹಕ್ಕನ್ನೂ ತರುವುದಿಲ್ಲವೆಂದುನ್ನೂ, ಅಂಥಾ ಗವರ್ನಮೆಂಟು ಆಫಿಸರ್ ಕೇಳಿದಾಗ, ಬ್ಯಾಂಕಿನವರು ಸದರಿ ಆಫಿಸರಿಗೆ ಹಣವನ್ನು ಪಾವತಿ ಮಾಡುವುದಕ್ಕೆ ಆಕ್ಷೇಪಿಸುವದಿಲ್ಲವೆಂದುನ್ನೂ, ಮತ್ತು ಅಂಥಾ ಆಫಿಸರು ಬಡ್ಡಿಯನ್ನು ಬರಮಾಡಿಕೊಳ್ಳಲು ಡಿಪಾಜಿಟರ ಅಧಿಕಾರವನ್ನು ರದ್ದುಮಾಡಿದ ತರುವಾಯ ಸದರಿ ಬಡ್ಡಿಗಾಗಿ ಯಾವ ಹಕ್ಕನ್ನೂ ತರುವುದಿಲ್ಲವೆಂದುನ್ನೂ ಒಡಂಬಟ್ಟು ಡಿಸ್ಟ್ರಿಕ್ಟು ಸೇವಿಂಗ್ಸು ಬ್ಯಾಂಕಿನ ಟ್ರೆಜರಿ ಆಫಿಸರ ಹೆಸರಿಗೆ (1ನೆ ನಮೂನೆ ಮೇರೆ) ಬರೆಯಲ್ಪಟ್ಟ ಒಂದು ಕಾಗದಕ್ಕೆ ರುಜು ಹಾಕಬೇಕು. ಪ್ಯಾಸ್ ಬುಕ್ಕಿನ ಮೇಲ್ಪುಟದಲ್ಲಿಯೂ ಖಜಾನೆಯಲ್ಲಿರುವ ಡಿಪಾಜಿಟರ ಸೇವಿಂಗ್ಸು ಬ್ಯಾಂಕು ಖತಾವಣಿ ಲೆಕ್ಕದಲ್ಲಿಯೂ ಡಿಪಾಜಿಟರ ಹೆಸರಲ್ಲದೆ ಡಿಪಾಜಿಟಿನ ಮಜ್ಕೂರನ್ನೂ ಅವನ ಒಡಂಬಡಿಕೆ ಪತ್ರದ ತಾರೀಖು ವಗೈರೆಯನ್ನು ಟ್ರೆಜರಿ ಆಫಿಸರು ಸ್ಪಷ್ಟವಾಗಿ ರಿಕಾರ್ಡು ಮಾಡಬೇಕು, ಹೇಗೆಂದರೆ—

ಡಿಪಾಜಿಟರ ಹೆಸರು ....ಬಗ್ಯಾಗಿ................ನೆ ಮಸ್ಕೂಮಿನ ಡಿಪಾಜಿಟರ ಒಡಂಬಡಿಕೆ ಪತ್ರದ ಪ್ರಕಾರ ....ರಿಂದಙ್ಗೀಕರಿಸಲ್ಪಟ್ಟ ಜಾಮೀನೀ ಬಾಬತು.

ಹಣದ ಕ್ಲಪ್ತ.

10. ಒಂದು ಸಾಲಿನಲ್ಲಿ ಒಬ್ಬ ಡಿಪಾಜಿಟರಿಗೆ 2,000 ರೂಪಾಯಿಗಳ ವರೆಗಿನ ನಿಬಾಮುಕವು ಇದರಡಿ ಕಂಡ ಸಂದರ್ಭಗಳಲ್ಲಿ ಮಾತ್ರ ಅತಿಕ್ರಮಿಸಲ್ಪಡಬಹುದು:—

(1) ಒಬ್ಬ ಸರ್ಕಾರಿ ಆಫಿಸರ ಬಳಿ ಇಡಲ್ಪಡುವ ಒಂದು ಜಾಮೀನೀ ಡಿಪಾಜಿಟ್ಟಿನ ಸಂದರ್ಭದಲ್ಲಿ.

(2) (7ನೆ ನಿಬಂಧನೆಯಲ್ಲಿ ಕಂಡ) ಒಂದು ಧರ್ಮಾರ್ಥವಾಗಿ ನೆಲೆಗೊಂಡಿರುವ, ಅಥವಾ ಸಾರ್ವಜನಿಕವಾದುದೆಂದು ತೋರುವ ಶಾಲೆಯ ಸಂದರ್ಭದಲ್ಲಿ.

(3) ಚಾಲ್ತೀ ಸಾಲಿನಲ್ಲಿ ಇಟ್ಟ ಡಿಪಾಜಿಟ್ಟುಗಳ ಬಾಬತಲ್ಲದ ಹಣವು ಮೈಸೂರು ಸರ್ಕಾರದ ಮತ್ತೊಂದು ತಾಲ್ಲೂಕು ಅಥವಾ ಡಿಸ್ಟ್ರಿಕ್ಟು ಸೇವಿಂಗ್ಸ್ ಬ್ಯಾಂಕಿನಿಂದ ವರ್ಗಬಂದ ಸಂದರ್ಭದಲ್ಲಿ.

ಈ ಮೇರೆ ಪ್ರತಿ ಸಂದರ್ಭದಲ್ಲಿಯೂ ಡಿಪಾಜಿಟ್ಟನ್ನು ಇಡಲೀಸಲು ಉಂಟಾದ ಕಾರಣವನ್ನು ಡಿಪಾಜಿಟ್ಟುಗಳ ಮಾಹೇವಾರಿ ಲೆಕ್ಕದಲ್ಲಿ ವಿವರಿಸಬೇಕು.

2,000 ರೂಪಾಯಿಗಳ ಪರಿಮಿತಿಯನ್ನು ಖಂಡಿತವಾಗಿ ಅನ್ವಯಿಸಿಕೊಳ್ಳಬೇಕು; ಆ ಪರಿಮಿತಿಯಂತೆ ಆಚರಿಸುವುದರಲ್ಲಿ ವಾಪಸು ಪಡೆದ ಹಣಗಳನ್ನು ವಜಾ ಮಾಡಕೂಡದು.

ಲೆಕ್ಕವನ್ನಿಡೋಣ.

11. ಲೆಕ್ಕವನ್ನು ಇಡಿಸಿಕೊಳ್ಳುವ ಒಬ್ಬ ಡಿಪಾಜಿಟರಿಗೆ ಅವನ ಲೆಕ್ಕದ ನಂಬರು ನಮೂದು ಕಂಡು ಒಂದು ಪ್ಯಾಸ್ ಬುಕ್ಕನ್ನು (20ನೆ ನಿಬಂಧನೆಯಂತೆ) ಕೊಡಲಾಗುತ್ತದೆ. ಡಿಪಾಜಿಟರ ಹೆಸರು, ಕಸಬು (A ಗುರ್ತಿನ ಉಪಭಾಗದಂತೆ) ಮತ್ತು ವಾಸಸ್ಥಳವನ್ನು ಸದರಿ ಪ್ಯಾಸ್ ಬುಕ್ಕಿನಲ್ಲಿಯೂ, (2ನೆ ನಮೂನೆ ಮೇರೆ) ಒಂದು ಇಂಡೆಕ್ಸು ಚೀಟಿನ ಮೇಲೂ ಸ್ಪಷ್ಟವಾದ ಬರವಣಿಗೆಯಲ್ಲಿ ದಾಖಲ್ಮಾಡತಕ್ಕದ್ದು; ಡಿಪಾಜಿಟರಿಗೆ ಬರೆಯುವುದಕ್ಕೆ ಬರುವ ಪಕ್ಷದಲ್ಲಿ, ಸದರಿ ಇಂಡೆಕ್ಸು ಚೀಟಿನಮೇಲೆ ಅವನ ರುಜುವನ್ನೂ ಹಾಕಿಸಿಕೊಳ್ಳಬೇಕು. ಸದರಿ ಲೆಕ್ಕವು ಒಂದು ಜಾಮೀನೀ ಡಿಪಾಜಿಟ್ಟಿನದಾದರೆ, ಆ ಸಂಗತಿಯನ್ನು ಸದರಿ ಇಂಡೆಕ್ಸು ಚೀಟಿನಮೇಲೆ ನಮೂದಿಸತಕ್ಕದ್ದು.

1. ಡಿಪಾಜಿಟರುಗಳ ಲೆಕ್ಕಗಳಿಗೆ ಕೊಡಲ್ಪಡುವ ನಂಬರುಗಳು ಜಂಜರುಬಂದಿಯಾಗಿರಬೇಕು, ಮತ್ತು ಒಬ್ಬ ಡಿಪಾಜಿಟರ ನಂಬರನ್ನು ಎಂದಿಗೂ ಬದಲಾಯಿಸಕೂಡದು. ಅಥವಾ ಖೈದಾದ ಲೆಕ್ಕಗಳ ನಂಬರುಗಳನ್ನು ಹೊಸ ಡಿಪಾಜಿಟರುಗಳ ಲೆಕ್ಕಗಳಿಗೆ ಕೊಡಕೂಡದು.

2. ಒಬ್ಬ ಮಹಮ್ಮದ ಡಿಪಾಜಿಟರು ತನ್ನ ಲೆಕ್ಕವನ್ನಿಡಿಸಿಕೊಳ್ಳುವಾಗ್ಯೆ ತನ್ನ ಡಿಪಾಜಿಟು ಮೊಬಲಗಿಗೆ ಬಡ್ಡಿಯನ್ನು ಸೇರಿಸಕೂಡದೆಂದು ಖಂಡಿತವಾಗಿ ಕೇಳಿಕೊಂಡರೆ, ಆ ಅಭಿಪ್ರಾಯವನ್ನು ಕಂಡು ಇಂಡೆಕ್ಸು ಚೀಟಿಯಮೇಲೆ ಷರಾ ಮಾಡಿ ವರ್ಗಲೆಕ್ಕದಲ್ಲಿ ಸದರಿಯವನ ಡಿಪಾಜಿಟ್ಟು ದಾಖಲಾಗುವ ಕಡೆಯಲ್ಲಿ ಮೇಲ್ಭಾಗದಲ್ಲಿ "ಬಡ್ಡಿ ಇಲ್ಲ" ಎಂಬ ಮಾತುಗಳನ್ನು ಬರೆದಿಡಬೇಕು.

3. ಒಂದು ಲೆಕ್ಕವನ್ನು ಪ್ರಥಮತಃ ಇಡುವಾಗ್ಯೆ ಪ್ಯಾಸ್ ಬುಕ್ಕನ್ನು ಕಿಮ್ಮತ್ತು ತೆಗೆದುಕೊಳ್ಳದೆ ಕೊಡೋಣಾಗುತ್ತದೆ, ಆದರೆ ಹಳೇ ಪ್ಯಾಸ್ ಬುಕ್ಕು ಹೋಗಲಾಡಿಸಿಕೊಳ್ಳಲ್ಪಟ್ಟಾಗಾಗಲಿ ಅಥವಾ ಅದು ಡಿಪಾಜಿಟರ ವಶದಲ್ಲಿರುವಾಗ್ಯೆ ಪುನಃ ಹೊಸ ಬುಕ್ಕು ಆಗಬೇಕಾಗುವ ಹಾಗೆ ಕೊಳೆ ಯಾ ಜಾಯಾ ಆದಾಗಾಗಲಿ ಒಂದು ಹೊಸ ಪ್ಯಾಸ್ ಬುಕ್ಕಿಗೆ ಒಂದು ರೂಪಾಯಿನ ಫೀ ಛಾರ್ಜು ಮಾಡಲ್ಪಡುವುದು. ಪ್ಯಾಸ್ ಬುಕ್ಕನ್ನು ಕಳೆದುಕೊಂಡಲ್ಲಿ, ಆ ಡಿಪಾಜಿಟರು ಒಂದು ಹೊಸ ಪ್ಯಾಸ್ ಬುಕ್ಕನ್ನು ಪಡೆಯುವತನಕ ಸದರಿ ಲೆಕ್ಕದ ಜಮಾಖರ್ಚು ಜರುಗಲು ಹುಕುಂ ದೊರೆಯಲಾರದೆಂದು ತಿಳಿಯತಕ್ಕದ್ದು; ಮತ್ತು ಒಂದು ಲೆಕ್ಕವು ಖೈದ್ಮಾಡಲ್ಪಟ್ಟ ಹನ್ನೆರಡು ತಿಂಗ

ಳುಗಳಿಗಾಗಿ ಪುನಃ ಒಂದು ಹೊಸ ಲೆಕ್ಕವನ್ನು ಇಡಬೇಕಾದರೆ ಟ್ರೆಜರಿ ಆಫೀಸರ ಮುನಾಸಬು ಮೇರೆಗೆ ಒಂದು ರೂಪಾಯಿಯಿಂದಾಗಾಯಿತು ಹತ್ತು ರೂಪಾಯಿಗಳ ವರೆಗೆ ಒಂದು ಜುರ್ಮಾನೆಯನ್ನು ಕೊಟ್ಟ ಹೊರ್ತು ಹುಕುಂ ದೊರೆಯಲಾರದು.

ಹೆಸರುಗಳನ್ನು ದಾಖಲ್ಮಾಡುವ ಬಗ್ಗೆ ನಿಯಮಗಳು.

12. ಇಂಡೆಕ್ಸು ಚೀಟಿಯನ್ನು ಭರ್ತಿಮಾಡುವಾಗ್ಯೆ ಇದರಡಿ ಕಂಡ ನಿಬಂಧನೆಗಳನ್ನು ಅನುಸರಿಸಬೇಕು:—

(a) ಯೂರೋಪಿಯನ್ ಅಥವಾ ಈಸ್ಟ್ ಇಂಡಿಯನ್ನರ ಹೆಸರುಗಳ ವಿಷಯದಲ್ಲಿ, ಮೊದಲು ಕುಟುಂಬದ ಹೆಸರನ್ನು ದೊಡ್ಡ ಅಕ್ಷರಗಳಲ್ಲಿ ಬರೆಯಬೇಕು. ಅದರ ತರುವಾಯ ಕ್ರೈಸ್ತ ಹೆಸರು ಅಥವಾ ಹೆಸರುಗಳನ್ನು ಅಥವಾ ಒಂದು ಕುಟುಂಬದ ಹೆಸರಿಗೆ ಮುಂಚೆ ಬರುವ ಹೆಸರನ್ನು ಚಿಕ್ಕ ಅಕ್ಷರಗಳಲ್ಲಿ ದಾಖಲ್ಮಾಡಬೇಕು, ಹೇಗೆಂದರೆ—

ವಿಲ್ಕಿನ್ಸ್, ಜೇಂಸ್.

(b) ಹಿಂದೂ ಹೆಸರುಗಳ ವಿಚಾರದಲ್ಲಿ, ಮೊದಲು ಮನುಷ್ಯನ ಹೆಸರನ್ನು ಬರೆಯಬೇಕು, ಮತ್ತು ಸಾಧಾರಣ ವಾಡಿಕೆಯಲ್ಲಿರುವಂತೆ ವಂಶದ ಅಥವಾ ಸ್ವಂತ ಹೆಸರು ಅಥವಾ ಕುಟುಂಬದ ಮುಂತಾದ ಹೆಚ್ಚಿಗೆ ಹೆಸರನ್ನು ಕಡೆಗೆ ಬರೆಯಬೇಕು.

(c) ಮುಸಲ್ಮಾನ ಹೆಸರುಗಳ ವಿಚಾರದಲ್ಲಿ, (ಷೇಖ್, ಸೈಯದ್, ಮೌಲ್ವಿ) ಇಂಥಾ ಸಾಧಾರಣ ಉಪಸರ್ಗಗಳನ್ನು ಚಿಕ್ಕ ಅಕ್ಷರಗಳಲ್ಲಿ ಬರೆಯಬೇಕು, ಹೇಗೆಂದರೆ :—

ಸೈಯ್ಯದ್ ಅಬ್ಬಾಸ್ ಅಲ್ಲಿ.

13. ಒಬ್ಬ ಡಿಪಾಜಿಟರ ಹೆಸರನ್ನು ಡಿಪಾಜಿಟರ ಪಾಸ್ ಬುಕ್ಕಿನಲ್ಲಿ ಮತ್ತು ಇಂಡೆಕ್ಸು ಚೀಟಿಯ ಮೇಲೆ ಷುರು ಬರೆಯುವಾಗ್ಯೆ ಉತ್ತಮವೆಂದು ಎಣಿಸಲ್ಪಡಬಹುದಾದ ಯಾವ ರೀತಿಯಲ್ಲಾದರೂ ಅಕ್ಷರ ಕೂಡಿಸಿ ಬರೆಯಬಹುದು; ಆದರೆ ತದನಂತರ ತಯಾರಾಗುವ ಡಿಪಾಜಿಟ್ಟುಗಳ ಎಲ್ಲಾ ತಖ್ತೆಗಳಲ್ಲಿಯೂ, ಇತರ ಲೆಕ್ಕಗಳಲ್ಲಿಯೂ, ಖಂಡಿತವಾಗಿ ಮೇಲ್ಕಂಡಂತೆಯೇ ಅಕ್ಷರಗಳನ್ನು ಕೂಡಿಸಿ ಹೆಸರು ದಾಖಲಾಗುತ್ತಾ ಬರಬೇಕು. ಒಂದೇ ಹೆಸರುಳ್ಳ ಬೇರೆ ಬೇರೆ ಜನರ ಹೆಸರನ್ನು ಒಂದೇರೀತಿಯಲ್ಲಿ ಅಕ್ಷರ ಕೂಡಿಸಿ ಬರೆಯಬೇಕೆಂಬ ಅವಶ್ಯವಿಲ್ಲ.

1. ಇಂಗ್ಲಿಷಿನಲ್ಲಿ ರುಜು ಮಾಡಬಲ್ಲವರಾದ ದೇಶೀಯ ಡಿಪಾಜಿಟರುಗಳ ವಿಷಯದಲ್ಲಿ ಅವರು ಸಾಮಾನ್ಯವಾಗಿ ಉಪಯೋಗಿಸುವ ಅಕ್ಷರಗಳನ್ನು ಕೂಡಿಸಿಯೇ ಅವರ ಹೆಸರುಗಳನ್ನು ಬರೆಯತಕ್ಕದ್ದು.
2. ತಮ್ಮ ಖಾಯಂ ವಾಸಸ್ಥಳಗಳಿಗೆ ದೂರವಾಗಿ ಉದ್ಯೋಗಪ್ರಯುಕ್ತ ಇತರ ಕಡೆ ವಾಸಮಾಡುವ ಜನಗಳು ಡಿಪಾಜಿಟ್ಟು ಲೆಕ್ಕಗಳನ್ನು ಇಡಿಸಿಕೊಂಡಾಗ್ಯೆ ಇಂಡೆಕ್ಸು ಚೀಟಿನಮೇಲೆ ಅವರ ಕುಟುಂಬದ ಮತ್ತು ಅವರ ಹಂಗಾಮಿ ವಾಸಸ್ಥಳಗಳನ್ನು ದಾಖಲ್ಮಾಡಬೇಕು.
3. ದೇಶೀಯ ಡಿಪಾಜಿಟರುಗಳ ವಿಷಯದಲ್ಲಿ ಇಂಡೆಕ್ಸು ಚೀಟಿನಮೇಲೆ ಮತ್ತು ಡಿಪಾಜಿಟರ ಖಾತೆ ಲೆಕ್ಕದ ಶಿರ್ನಾಮೆಯಲ್ಲಿ ತಂದೆಯ ಹೆಸರನ್ನು ಸೇರಿಸಬಹುದು. ಆದರೆ ಹಾಗೆ ಸೇರಿಸಿರುವ ಸಂದರ್ಭದಲ್ಲಿ, ಡಿಪಾಜಿಟ್ಟು ಪಟ್ಟಿಗಳಲ್ಲಿಯೂ ಬದಸ್ತೂರ ಸೇರಿಸಬೇಕಾದುದಿಲ್ಲ

ಇಂಡೆಕ್ಸು ಚೀಟಿಗಳ ವಿಲೇವಾರಿ.

14. ಯಾವ ತಿಂಗಳಲ್ಲಿ ಷುರೂ ಡಿಪಾಜಿಟ್ಟು ಮಾಡಲ್ಪಟ್ಟಿತೋ ಆ ತಿಂಗಳ ಡಿಪಾಜಿಟ್ಟುಗಳ ಲೆಕ್ಕದೊಂದಿಗೆ ಇಂಡೆಕ್ಸು ಚೀಟಿಯನ್ನು ಮಡಿಸದೆ ಕಂಟ್ರೋಲರವರ ಆಫೀಸಿಗೆ ಕಳುಹಿಸತಕ್ಕದ್ದು.

ಈ ಚೀಟಿಗಳನ್ನು ಕಂಟ್ರೋಲರವರ ಆಫೀಸಿನಲ್ಲಿ ಡಿಸ್ಟ್ರಿಕ್ಟುವಾರಾಗಿ ವಿಂಗಡಿಸಿ ಪೇರಿಸಿ ಇಡಬೇಕು.

ಮೈನರರುಗಳ ಲೆಕ್ಕಗಳು.

15. ಒಬ್ಬ ಮೈನರ ಬಗ್ಗಾಗಿ ಡಿಪಾಜಿಟ್ ಮಾಡುವ ಹಣವನ್ನು ಸದರಿ ಮೈನರು ಚಿಕ್ಕತನದಲ್ಲಿ ಇರುವ ವರೆಗೂ ನ್ಯಾಯವಾದ ಪಾಲಕರಿಂದ ಹೊರತು ವಾಪಸುಪಡೆಯಲಾಗದೆಂದು ಡಿಪಾಜಿಟರಿಗೆ ಎಚ್ಚರಿಸಬೇಕು. ನ್ಯಾಯವಾದ ಪಾಲಕ ಎಂಬ ಶಬ್ದವು ಮೈನರ ತಂದೆ ಅಥವಾ ತಂದೆ ಬದುಕಿಲ್ಲದ ಪಕ್ಷದಲ್ಲಿ ತಾಯಿಯನ್ನು ಅಡಗಿಸಿಕೊಂಡಿರುತ್ತದೆ. ಹಣವನ್ನು ಮೈನರರು ವಾಪಸು ಪಡೆಯಲು ಸಮರ್ಥನಾಗಿರತಕ್ಕದ್ದೆಂದು ಅಪೇಕ್ಷಿಸಲ್ಪಟ್ಟರೆ, ಅಂಥಾ ಮೈನರ ಖುದ್ದಾಗಿ ಹಣವನ್ನು ಡಿಪಾಜಿಟ್ ಮಾಡಬೇಕು. (1873ನೇ ಇಸವಿಯ 5ನೆ ಆಕ್ಟಿನ 10ನೆ ಪ್ರಕರಣವನ್ನು ನೋಡಿ)

16. ಒಬ್ಬ ಮೈನರ ಪರವಾಗಿ ಬೇರೆ ಮತ್ತೊಬ್ಬ ಮನುಷ್ಯನಿಂದ ಹಣ ಡಿಪಾಜಿಟ್ ಮಾಡಲ್ಪಟ್ಟರೆ ಪಾಸ್ ಬುಕ್ಕಿನ ಕೊನೆಯಲ್ಲಿ ಅಚ್ಚು ಹಾಕಿರುವ ನೋಟೀಸಿಗೆ ಇದರಡಿ ಕಂಡ ಮಾತುಗಳನ್ನು ಸೇರಿಸತಕ್ಕದ್ದು:—

ಮೈನರ ಚಿಕ್ಕತನದಲ್ಲಿ ಡಿಪಾಜಿಟ್ಟುಗಳು ಕ್ರಮವಾಗಿ ಏರ್ಪಟ್ಟ ಪಾಲಕನಿಗೆ ಮಾತ್ರವೇ ವಾಪಸು ಪಾವತಿಯಾಗತಕ್ಕದ್ದು.

17. ಒಬ್ಬ ಮೈನರ ಆಸ್ತಿಗೆ ಪಾಲಕನೆಂದು ಕೋರ್ಟಿನಿಂದ ಮೊಕರರ್ಮಾಡಲ್ಪಟ್ಟ ಒಂದು ಸಿವಿಲ್ ಕೋರ್ಟಿನ ನಾಜರು ಆ ಉದ್ಯೋಗ ಧರ್ಮದಮೇಲೆ ಸೇವಿಂಗ್ಸ್ ಬ್ಯಾಂಕಿನಲ್ಲಿ ಒಬ್ಬ ಡಿಪಾಜಿಟರಾಗಕೂಡದು. ಅವನ ಲೆಕ್ಕವನ್ನು ಇಡುವುದಕ್ಕೆ ಸರಿಯಾದ ಸ್ಥಳವು "ಸಿವಿಲ್ ಕೋರ್ಟು ಡಿಪಾಜಿಟ್ಟುಗಳ ಲೆಕ್ಕ" ವಾಗಿರುತ್ತೆ.

ಒಬ್ಬ ಮೈನರ ಪರವಾಗಿ ಒಂದು ಲೆಕ್ಕ ಇಡಲ್ಪಟ್ಟರೆ ಇಂಡೆಕ್ಸು ಚೀಟಿಯಲ್ಲಿ ಡಿಪಾಜಿಟರಿನ ಹೆಸರನ್ನು ಬರೆಯುವ ಬಗ್ಗಾಗಿ ಇರುವ ಸ್ಥಳದಲ್ಲಿ ಈ ಕೆಳಗಿನ ತಪಸೀಲನ್ನು ದಾಖಲ್ಮಾಡಬೇಕು :—

"(ಮೈನರ್) ....ನ ಮಗ (ಅಥವಾ ಮಗಳು) ಬಂಧು (ಅಥವಾ ಪಾಲಕ) .... ದ್ವಾರಾ."

ಮತ್ತು ಸದರಿ ಇಂಡೆಕ್ಸು ಚೀಟಿಗಳು ಹಿಂಭಾಗದಲ್ಲಿರುವ ಹೇಳಿಕೆಯನ್ನು ಇದರಡಿ ಕಂಡಂತೆ ಬದಲಾಯಿಸಿ ಅವಕ್ಕೆ ಮೈನರ ನೆಂಟ ಅಥವಾ ಸಂರಕ್ಷಕನ ರುಜು ಮಾಡಿಸಬೇಕು :—

"ಡಿಸ್ಟ್ರಿಕ್ಟು ಸೇವಿಂಗ್ಸು ಬ್ಯಾಂಕು ನಿಬಂಧನೆಗಳು ನನ್ನಿಂದ ಓದಿಕೊಳ್ಳಲ್ಪಟ್ಟುವು (ಅಥವಾ ನನಗೆ ಓದಿ ಹೇಳಲ್ಪಟ್ಟುವು) ಮತ್ತು ನಾನು ಅವುಗಳಿಗೆ ಬದ್ಧನಾಗಿರುವೆನೆಂದು ಅವುಗಳನ್ನು ಒಪ್ಪಿಕೊಳ್ಳುತ್ತೇನೆ ಎಂಬದಾಗಿ ಈ ಮೂಲಕ ದೃಢವಾಗಿ ಹೇಳುತ್ತೇನೆ.

"ಮತ್ತು ಡಿಸ್ಟ್ರಿಕ್ಟು ಸೇವಿಂಗ್ಸು ಬ್ಯಾಂಕುಗಳ ಪೈಕಿ ಯಾವುದರಲ್ಲೂ ಕೆಳಗೆ ನಮೂದಾಗುವ ಮೈನರ ಪರವಾಗಿ ನಾನು ಲೆಕ್ಕ ಹಿಡಿಸಿಲ್ಲವೆಂದು ದೃಢವಾಗಿ ಹೇಳುತ್ತೇನೆ.

"ಈ ಲೆಕ್ಕವನ್ನು (ಅಕ್ಷರದಲ್ಲಿ) .... ರೂಪಾಯಿಗಳ ಮೊದಲನೆ ಡಿಪಾಜಿಟ್ಟು ನಿಸಿ ಷುರು ಮಾಡಿಸಿದೇನೆ ಮತ್ತು ಈ ಮೊಬಲಗು ಜಮಾ ದಾಖಲಾಗಿರುವ ಒಂದು ಪ್ಯಾಸ್ ಬುಕ್ಕನ್ನೂ ತೆಗದುಕೊಂಡಿದೇನೆ.

ತಾ|| 19

"ಮೈನರ.......ನ ಬಂಧು (ಅಥವಾ ಸಂರಕ್ಷಕ)"

18. ಒಂದು ಲೆಕ್ಕವನ್ನು ಇಡಿಸಬೇಕೆಂದು ಖಾಯಿಷ್ಮಾಡುವ ಡಿಪಾಜಿಟರ್ ಜೆನರೆಟುರಿಗೆ ಬರುವ ವಾಡಿಕೆಯಿಲ್ಲದ ಹೆಂಗಸಾಗಿದ್ದರೆ, ಅವಳ ಗಂಡ ಅಥವಾ ಮುತಾಲೀಕನು ಅವಳ ಪರವಾಗಿ ಕೆಲಸ ನಡೆಸಬಹುದು; ಆದರೆ ಒಬ್ಬ ಹೆಂಗಸಿನ ಪರವಾಗಿ ಒಂದು ಲೆಕ್ಕವನ್ನು ಷುರು ಮಾಡುವುದಕ್ಕೆ ಪೂರ್ವ ಅವಳ ಗಂಡ ಅಥವಾ ಮುತಾಲೀಕನು ತನಗೆ ಹಾಗೆ ನಡೆಸಲು ಅವಳು ಅಧಿಕಾರಕೊಟ್ಟಿರುವುದಾಗಿ ಆಕೆಯ ರುಜು ಅಥವಾ ಗುರ್ತು ಉಳ್ಳ ಮತ್ತು ಸದರಿ ರುಜು ಅಥವಾ ಗುರ್ತಿಗೆ ಟ್ರೆಜರಿ ಆಫಿಸರಿಗೆ ಸಂಬಿಗಸ್ಥನೆಂದು ತಿಳಿದಿರುವ ಒಬ್ಬ ಸಾಕ್ಷಿಯ ರುಜು ಸಹ ಉಳ್ಳ ಒಂದು ಕಾಗದವನ್ನು ಹಾಜರ್ಮಾಡಬೇಕು. ಅಂಥಾ ಅಧಿಕಾರ ಪತ್ರಿಕೆಯನ್ನು ಸದರಿ ಲೆಕ್ಕವನ್ನು ಅಡಗಿಸಿಕೊಂಡಿರುವ ಖಾತೆಯ ಪುಟಕ್ಕೆ ಅಂಟಿಸಿರಬೇಕು.

ಇಂಥಾ ಸಂದರ್ಭದಲ್ಲಿ ಇಡಿಕ್ಸ್ ಚೀಟಿನಮೇಲೆ ಡಿಪಾಜಿಟರ ಹೆಸರಿಗಾಗಿ ಇರುವ ಜಾಗಾದಲ್ಲಿ ಇದರಡಿ ಕಂಡ ಖತಾಯಿತಿಯನ್ನು ಮಾಡಬೇಕು:—

"ಫಲಾನೆಯುವನ ಹೆಂಡತಿ (ಯಾ ವಿತಂತು) ವಾದ ಫಲಾನೆಯುವಳು ಅವಳ ಗಂಡ (ಅಥವಾ ಮುತಾಲೀಕ) ನಾದ ಫಲಾನೆಯುವನ ಮೂಲಕ"

ಮತ್ತು ಸದರಿ ಚೀಟಿನ ಹಿಂಭಾಗದಲ್ಲಿರುವ ಹೇಳಿಕೆಯನ್ನು ಇದರಡಿ ಕಂಡಂತೆ ಬದಲಾಯಿಸಿ ಅದಕ್ಕೆ ಡಿಪಾಜಿಟರ ಗಂಡ (ಅಥವಾ ಮುತಾಲೀಕ) ನ ರುಜು ಮಾಡಿಸಬೇಕು:

"ಡಿಸ್ಟ್ರಿಕ್ಟು ಸೇವಿಂಗ್ಸು ಬ್ಯಾಂಕು ನಿಬಂಧನೆಗಳನ್ನು ಡಿಪಾಜಿಟರಿಗೆ ಓದಿ ಹೇಳಿದೆ (ಅಥವಾ ಡಿಪಾಜಿಟರ್ ಓದಿಕೊಂಡಿರುತ್ತಾಳೆ) ಮತ್ತು ಅವಳು ಆ ನಿಬಂಧನೆಗಳಿಗೆ ಬದ್ಧಳಾಗಿರುವುದಾಗಿ ಅವುಗಳನ್ನು ಒಪ್ಪಿಕೊಂಡಿರುತ್ತಾಳೆಂದು ನಾನು ಈ ಮೂಲಕವಾಗಿ ದೃಢವಾಗಿ ಹೇಳುವುದಲ್ಲದೆ ಮತ್ಯಾವ ಡಿಸ್ಟ್ರಿಕ್ಟು ಸೇವಿಂಗ್ಸು ಬ್ಯಾಂಕಿನಲ್ಲಿಯೂ ಅವಳ ಸ್ವಂತ ಹೆಸರಿನಲ್ಲಿ ಡಿಪಾಜಿಟರು ಲೆಕ್ಕ ಇಡಿಸಿಕೊಂಡಿಲ್ಲವೆನುತಲೂ ದೃಢವಾಗಿ ಹೇಳುತ್ತೇನೆ.

ಡಿಪಾಜಿಟರ ಪರವಾಗಿ ಈ ಲೆಕ್ಕವನ್ನು (ಅಕ್ಷರದಲ್ಲಿ) .... ರೂಪಾಯಿಗಳ ಅವಲ್ ಡಿಪಾಜಿಟ್ಟು ನಿಸಿ ಷುರು ಮಾಡಿಸಿರುತ್ತೇನೆ. ಮತ್ತು ಈ ಮೊಬಲಗು ಬಂದುದಕ್ಕೆ ಜಮೆ ಕಾಣಿಸಿರುವ ಒಂದು ಪ್ಯಾಸ್ ಬುಕ್ಕನ್ನು ತೆಗೆದುಕೊಂಡಿರುತ್ತೇನೆ."

19. ಸರಕಾರದ ಆಫಿಸರುಗಳ ಮೇಲ್ವಿಚಾರಣೆಯಲ್ಲಿರುವ ದೇವಸ್ಥಾನಗಳ ಪುದುವಟ್ಟು ಹಣಗಳನ್ನು ಅವುಗಳ ಮೇಲಿನ ಬಡ್ಡಿಯಿಂದ ಗೊತ್ತಾದ ಸೇವಾರ್ಥ ನಡೆಯುವ ಬಗ್ಯೆಂದು ಖುಷಬಾಷ್ ಜನಗಳಿಂದ ಡಿಪಾಜಿಟ್ಟು ಇಟ್ಟಿದ್ದ ಪಕ್ಷದಲ್ಲಿ ಗವರ್ನ್ಮೆಂಟು ಸೇವಿಂಗ್ಸು ಬ್ಯಾಂಕಿನಲ್ಲಿ ಹಾಕಬಹುದು. ಆದರೆ ಸರಕಾರದ ತಸ್ದೀಕು ಮೊಬಲಗುಗಳ ಪೈಕಿ ಉಳಿದ ಮೊಬಲಗುಗಳನ್ನು ಅಥವಾ ಕಾಣಿಕೆ ಮುಂತಾದ ಚಿಲ್ಲರೆ ಹಣಗಳನ್ನು ಗವರ್ನ್ಮೆಂಟು ಸೇವಿಂಗ್ಸು ಬ್ಯಾಂಕಿನಲ್ಲಿ ಡಿಪಾಜಿಟ್ ಇಡಕೂಡದು.

(1887ನೆ ಡಿಸೆಂಬರ 6ನೆ ತಾರೀಖಿನ 5112-20-132ನೆ ನಂಬರ ಪ್ರೊಸಿಡಿಂಗ್ಸು ನೋಡಿ.)

ಡಿಪಾಜಿಟ್ಟುಗಳ ಜಮಾ.

20. ಡಿಪಾಜಿಟ್ ಬಗ್ಯೆ ಹಾಜರ್ಮಾಡುವ ಹಣವನ್ನು (3ನೆ ನಮೂನೆಯಂತೆ) ಒಂದು ಚಲನ್ನೊಂದಿಗೆ ಪಾವತಿಮಾಡಬೇಕು. ಆ ಚಲನ್ನಿಗೆ ಟ್ರೆಜರಿ ಆಫಿಸರು ಸೈನ್ ಮಾಡಿ, (4ನೆ ನಮೂನೆಯ ಡಿಪಾಜಿಟ್ಟುಗಳ ಜರ್ನಲ್ ಯಾನೆ ರೋಜಿನಲ್ಲೂ ಡಿಪಾಜಿಟರಿನ ಪ್ಯಾಸ್ ಬುಕ್ಕಿನಲ್ಲೂ ಮೊಬಲಗು ಬಾರಾಗುವ ಉದ್ದೇಶ್ಯ ಅದನ್ನು ಸೇವಿಂಗ್ಸು ಬ್ಯಾಂಕು ರೈಟರಿಗೆ ಕೊಡಬೇಕು. ಡಿಪಾಜಿಟ್ ಮಾಡಲ್ಪಟ್ಟ ಪ್ರತಿ ಮೊಬಲಗಿಗೂ ಪ್ಯಾಸ್ ಬುಕ್ಕಿನಲ್ಲಿ ಹಣ ಜಮಾ ದಾಖಲಾದ ಬಗ್ಯೆ ಹೆಡ್ ಅಕೌಂಟೆಂಟರ ಮತ್ತು ಟ್ರೆಜರಿ ಆಫಿಸರ ಒಪ್ಪಿತ ಆಗಬೇಕು. ಸದರಿ ಜರ್ನಲ್ಲಿನೊಂದಿಗೆ ಪ್ಯಾಸ್ ಬುಕ್ಕನ್ನು ಮೊಕಾಬಿಲೆ ಮಾಡಿದ ಅನಂತರ ಅದಕ್ಕೆ ಟ್ರೆಜರಿ ಆಫಿಸರ ಚಿಕ್ಕ ರುಜು ಆಗಿ ಪ್ಯಾಸ್ ಬುಕ್ಕು ಡಿಪಾಜಿಟರಿಗೆ ಸಲ್ಲತಕ್ಕದ್ದು.

ಒಂದು ರೂಪಾಯಿನ ಅಂಶಗಳನ್ನು ಡಿಪಾಜಿಟ್ಟಾಗಿ ತೆಗೆದುಕೊಳ್ಳಕೂಡದು.

ವಿನಾಯಿತಿ.—ಅರ್ಧ ಸರ್ಕಾರಿ ಸಂಘಗಳ ವಿಚಾರದಲ್ಲಿ ರೂಪಾಯಿನ ಅಂಶಗಳು ಡಿಪಾಜಿಟ್ ಮಾಡಲ್ಪಡಬಹುದು.

21. ಈ ಕೆಳಗಿನ ನಮೂನೆಯಲ್ಲಿ ಕಂಡಂತೆ ಮೊಬಲಗು ಡಿಪಾಜಿಟರ ಪ್ಯಾಸ್ ಬುಕ್ಕಿನಲ್ಲಿ ಅಕ್ಷರಗಳಲ್ಲೂ ಅಂಕೆಗಳಲ್ಲೂ ದಾಖಲಾಗಿ ಹಣ ಜಮೆ ಅಥವಾ ವಾಪಸು ಪಾವತಿಯಾದನಂತರ ಪ್ರತಿ ಸಂದರ್ಭದಲ್ಲಿಯೂ ಬಾಕಿಯನ್ನು ತೇಲಿಸತಕ್ಕದ್ದು:—

ತಾರೀಖು.	ಪ್ರತಿ ಡಿಪಾಜಿಟ್ಟು ಮತ್ತು ವಾಪಸು ಪಾವತಿ ಮೊಬಲಗು ಅಕ್ಷರಗಳಲ್ಲಿ ದಾಖಲಾಗಬೇಕು.	ಡಿಪಾಜಿಟ್ ಮಾಡಲ್ಪಟ್ಟ ಮೊಬಲಗು.	ವಾಪಸು ಪಡೆದ ಮೊಬಲಗು.	ಡಿಪಾಜಿಟರಿನ ಜಮೆಯಲ್ಲಿರುವ ಬಾಕಿ ಮೊಬಲಗು.	ಹೆಡ್ ಅಕೌಂಟೆಂಟರ ಚಿಕ್ಕ ರುಜು.	ಟ್ರೆಜರಿ ಆಫಿಸರ ಚಿಕ್ಕ ರುಜು.
		ರೂ.	ರೂ.	ರೂ.		
1ನೆ ಆಗಸ್ಟು 1885.	ಡಿಪಾಜಿಟಾದ್ದು ರೂಪಾಯಿ ಹತ್ತು ಮಾತ್ರ.	10	...	10	D	A. B.
2ನೆ ಆಗಸ್ಟು 1885.	ವಾಪಸು ಪಾವತಿ ರೂಪಾಯಿ ಐದು ಮಾತ್ರ.	...	5	5	D	A. B.

ಡಿಪಾಜಿಟ್ಟುಗಳ ವಾಪಸು ಪಾವತಿ.

22. ಹಣವನ್ನು ವಾಪಸು ಪಡೆಯಲು (6ನೆ ನಮೂನೆಯಂತೆ) ಒಂದು ಅರ್ಜಿಯನ್ನು ಸರಿಯಾಗಿ ಬರೆದು ರುಜು ಮಾಡಿ ತನ್ನ ಪ್ಯಾಸ್ ಬುಕ್ಕಿನೊಂದಿಗೆ ಡಿಪಾಜಿಟರು ಹಾಜರ್ಮಾಡಬೇಕು ಅಥವಾ ಕಳುಹಿಸಬೇಕು. ಹಣ ವಾಪಸು ತೆಗೆದುಕೊಳ್ಳುವ ಬಗ್ಗೆ ಡಿಪಾಜಿಟರು ಖುದ್ದಾಗಿ ಟ್ರೆಜರಿಗೆ ಹಾಜರಾಗದೆ ಹೋದರೆ, ಅವನ ಮುತಾಲೀಕನ ಅಥವಾ ಆಳಿನ ಹೆಸರು ಸದರಿ ನಮೂನೆ ಅರ್ಜಿಯ ಕೆಳಗೆ ದಾಖಲ್ಮಾಡಬೇಕು. ಈ ಖತಾಯಿತಿ ಕೆಳಗೆ ಸದರಿ ಮುತಾಲೀಕ ಅಥವಾ ಆಳಿನ ರುಜು ಆಗತಕ್ಕದ್ದು. ಮೇಲ್ಕಂಡ ಅರ್ಜಿಯನ್ನು ಡಿಪಾಜಿಟರ ಇಷ್ಟಾನುಸಾರ ಇಂಗ್ಲೀಷಿನಲ್ಲಾದರೂ ಅಥವಾ ಕನ್ನಡದಲ್ಲಾದರೂ ಬರೆಯಬಹುದು. ಡಿಪಾಜಿಟರು ಬರೆಯಲು ಅಸಮರ್ಥನಾಗಿದ್ದರೆ ಅವನು ಟ್ರೆಜರಿಯಲ್ಲಿ ಸಾಧ್ಯವಾದರೆ ಖುದ್ದಾಗಿ ಹಾಜರಾಗಿ ಸದರಿ ಅರ್ಜಿಗೆ ತನ್ನ ಗುರ್ತನ್ನಾಗಲಿ ಮೊಹರನ್ನಾಗಲಿ ಹಾಕಬೇಕೆಂದು ಆಜ್ಞಾಪಿಸಲ್ಪಡತಕ್ಕದ್ದು; ಅವನು ಖುದ್ದಾಗಿ ಹಾಜರಾಗಲು ಅಸಮರ್ಥನಾಗಿದ್ದಲ್ಲಿ, ತನ್ನ ಗುರ್ತು ಅಥವಾ ಮೊಹರು ಹಾಕಿ ಆ ಬಗ್ಗೆ ಪ್ರಸಿದ್ಧ ಮಾತಬರಿಯುಳ್ಳ ಒಬ್ಬ ಸಾಕ್ಷಿಯು ರುಜು ಕ್ರಮವಾಗಿ ಹಾಕಿಸಿದ ಬಾಬತ್ತು ಅರ್ಜಿಯೊಂದಿಗೆ ಪ್ಯಾಸ್ ಬುಕ್ಕನ್ನು ಕಳುಹಿಸಬಹುದು.

ಈ ಅರ್ಜಿಯನ್ನು ಡಿಪಾಜಿಟರ್ ತನ್ನ ಪ್ಯಾಸ್ ಬುಕ್ಕು ನಿಸಿ ಕೊಡಬೇಕು; (7ನೆ ನಮೂನೆ) ವಾಪಸು ಪಾವತಿ ಮೊಬಲಗುಗಳ ಜರ್ನಲಿನಲ್ಲಿಯೂ ವಾಪಸುಸಂದ ಡಿಪಾಜಿಟ್ಟುಗಳ ಪಟ್ಟಿಯಲ್ಲಿಯೂ ಅವಶ್ಯಕವಾದ ಖತಾಯಿತಿಗಳನ್ನು ಮಾಡಬೇಕು.

ಒಂದು ಲಾಯಖು ಸಿವಿಲ್ ಕೋರ್ಟಿನ ಹುಕುಂ ಮೇರೆಗೆ ಹಣವನ್ನು ಪಾವತಿ ಮಾಡುವ ಸಂದರ್ಭದಲ್ಲಿ ಮಾತ್ರ ಪ್ಯಾಸ್ ಬುಕ್ಕನ್ನು ಹಾಜರ್ ಪಡಿಸುವುದನ್ನು ಮತ್ತು ವಾಪಸು ಪಾವತಿ ಬಗ್ಗೆ ಕೊಡುವ ಅರ್ಜಿಯಲ್ಲಿ ಡಿಪಾಜಿಟರು ರುಜು ಮಾಡುವುದನ್ನೂ ಅವಶ್ಯಕವಿಲ್ಲವೆನ್ನಬಹುದು.

23. ಅನಂತರ ಡಿಪಾಜಿಟರ ಲೆಡ್ಜರಿ ಯಾನೆ ಖಾತೆ ಲೆಕ್ಕವನ್ನು ನೋಡಿ ಮೇಲ್ಕಂಡ ಅರ್ಜಿಯ ಹಿಂಭಾಗದಲ್ಲಿ ಪಾವತಿ ಹುಕುಂ ಬರೆಯಲ್ಪಟ್ಟ ತರುವಾಯ ಹಣವನ್ನು ಡಿಪಾಜಿಟರಿಗೆ ಖಜಾಂಚಿಯು ಪಾವತಿ ಮಾಡಬೇಕು. ಆಮೇಲೆ ಸದರಿ ವಾಪಸು ಪಾವತಿಯನ್ನು ಅವನ ಪ್ಯಾಸ್ ಬುಕ್ಕಿನಲ್ಲಿ ದಾಖಲ್ಮಾಡಿ ಅದಕ್ಕೆ ಟ್ರೆಜರಿ ಆಫೀಸರ ಸಹಿ ಆಗಬೇಕು. ಟ್ರೆಜರಿ ಆಫೀಸರು ಪ್ಯಾಸ್ ಬುಕ್ಕಿಗೆ ರುಜು ಮಾಡುವಾಗ ಜರ್ನಲಿನಲ್ಲಿ ಸದರಿ ಖತಾಯಿತಿಯನ್ನು ಗುರ್ತಿಸಿ ಪ್ಯಾಸ್ ಬುಕ್ಕನ್ನು ಡಿಪಾಜಿಟರಿಗೆ ಕೊಡಬೇಕು.

ಎಲ್ಲಾ ಸಂದರ್ಭಗಳಲ್ಲಿಯೂ ಹಣ ಟ್ರೆಜರಿಯಲ್ಲಿ ಪಾವತಿಯಾಗಬೇಕು. ಹಣಗಳನ್ನು ಡಿಪಾಜಿಟರುಗಳಿಗೆ ಟ್ರೆಜರಿ ಆಫೀಸರುಗಳು ಕಳುಹಿಸುವುದನ್ನು ನಿಷೇಧಿಸಿರುತ್ತದೆ.

ಲೆಕ್ಕಗಳು.

24. (ಡಿಪಾಜಿಟರ ಸ್ವಾಧೀನದಲ್ಲಿ ಇರುವ ಪ್ಯಾಸ್ ಬುಕ್ಕಲ್ಲದೆ) ಇಡಲ್ಪಡಬೇಕಾದ ಲೆಕ್ಕಗಳು ಯಾವುವೆಂದರೆ:—

(1) "ಡಿಪಾಜಿಟುಗಳ ಜರ್ನಲ್" ಎಂದರೆ ಹಣ ಬಂದ ಹಾಗೆ ಜಮೆ ತೋರಿಸುವ ರೋಜು ಲೆಕ್ಕ.

(2) "ವಾಪಸು ಪಾವತಿಗಳ ಜರ್ನಲ್" ಎಂದರೆ ವಾಪಸು ಪಾವತಿ ಆದಹಾಗೆ ಖರ್ಚು ತೋರಿಸುವ ರೋಜು ಲೆಕ್ಕ.

(3) "ಲೆಡ್ಜರ್" ಎಂದರೆ ಪ್ರತಿಯೊಬ್ಬ ಡಿಪಾಜಿಟರಿಗೂ ಒಂದು ಪ್ರತ್ಯೇಕ ಲೆಕ್ಕವಾಗಿ ಜಮಾಖರ್ಚು ತೋರಿಸುವ ವರ್ಗ ಲೆಕ್ಕ.

ಡಿಪಾಜಿಟ್ಟುಗಳ ಜರ್ನಲ್.

25. ಹಣ ಜಮೆ ಬಂದಕಾಲದಲ್ಲೇ ಡಿಪಾಜಿಟ್ಟುಗಳ ಜರ್ನಲಿನಲ್ಲಿ ದಾಖಲಾಗಬೇಕು ಮತ್ತು ಸದರಿ ಜರ್ನಲಿನಲ್ಲಿ ತೇರೀಜು ಕ್ರಮವಾಗಿ ಮುಂದಕ್ಕೆ ದಾಖಲಾಗುತ್ತಾ ಹೋಗಬೇಕು. ಸಾಲಾಖೈರಿಗೆ ಜಾಗ ಬಿಟ್ಟು ಆ ಜಾಗದಲ್ಲಿ ಕಂಟ್ರೋಲರವರ ಆಫೀಸಿನಿಂದ ಮಂಜೂರಾಗಿ ಬಂದಮೇಲೆ ಬಡ್ಡಿಯನ್ನು ಡಿಪಾಜಿಟ್ಟುಗಳಿಗೆ ಕೂಡಿಸಿ ಒಟ್ಟುಮಾಡಿ ಅದರಲ್ಲಿ ವಾಪಸು ಪಾವತಿಗಳ ಜುಮ್ಲಾವನ್ನು ವಜಾಮಾಡಿ ಬಾಕಿ ತೇಲಿಸತಕ್ಕದ್ದು. ಆಮೇಲೆ ಈ ಬಾಕಿಯನ್ನು ಮಾರನೇ ಸಾಲಿಗೆ ಎತ್ತಿ ಬರೆದು ಡಿಪಾಜಿಟರುಗಳಿಗೆ ಸಲ್ಲಬೇಕಾದ ಒಟ್ಟು ಬಾಕಿಯೆಂದು ತೋರಿಸಬೇಕು.

ವಾಪಸು ಪಾವತಿಗಳ ಜರ್ನಲ್.

26. ಹಣಗಳು ವಾಪಸು ಪಾವತಿ ಆದಹಾಗೆಲ್ಲಾ ಸದರಿ ಜರ್ನಲಿನಲ್ಲಿ ದಾಖಲಾಗಬೇಕು. ಈ ಜರ್ನಲಿನಲ್ಲಿಯೂ ಪ್ರತಿ ಸಾಲಾಖೈರಿಗೆ ಒಂದು ಜುಮ್ಲಾ ದಾಖಲಾಗುತ್ತಾ ಹೋಗಬೇಕು.

1. ಈ ನಮೂನೆಗೆ ಹಚ್ಚಿಸಿರುವ ಮದ್ದಿಗೂ, "ಖೈದಾದ ಲೆಕ್ಕಗಳ ಮೇಲೆ ಸಂದ ಬಡ್ಡಿ" ಎಂದು ಹೆಡ್ಡು ಕಟ್ಟಿರುವ ನಮೂನೆಗೂ ಗಮನಿಕೆ ಕೊಡಬೇಕು. ಒಂದು ಲೆಕ್ಕವು ಖೈದಾದಾಗ ಆ ಹಿಂದಿನ ಮಾಹೆ ಆಖೈರುವರೆಗೆ ಡಿಪಾಜಿಟರಿಗೆ ಬಡ್ಡಿ ಸಲ್ಲಬೇಕು, ಮತ್ತು ವಾಪಸು ಸಂದಾಯವಾದ ಕುಲ್ ಮೊಬಲಗು "ವಾಪಸು ಸಂದ ಮೊಬಲಗು" ಎಂಬ ಮದ್ದಿನಲ್ಲಿ ದಾಖಲಾಗಬೇಕು. ಹಾಗೆ ಪಾವತಿಯಾದ ಬಡ್ಡಿಯು ಇಸಂವಾರ್ ಡಿಪಾಜಿಟರ ಲೆಕ್ಕಕ್ಕೆ ಯದ್ಯಪಿ ಜಮೆ ಬಂದರೂ, ಸಾಲಾಖೈರು ವರೆಗೆ ಡಿಪಾಜಿಟ್ಟುಗಳ ಜರ್ನಲಿನಲ್ಲಿ ಒಂದು ಜಮೆ ಬಾಬಾಗಿ ದಾಖಲಾಗುವುದಿಲ್ಲವಾಗಿ, ಆ ಸಾಲಿನಲ್ಲಿ ಮಾಡಲ್ಪಟ್ಟ ಅಂಥಾ ಪಾವತಿಗಳಿಂದ ತಗ್ಗದೇ ಇರುವ ಡಿಪಾಜಿಟ್ಟುಗಳ ನಿಜವಾದ ಬಾಕಿಯನ್ನು ಕಂಡು ಹಿಡಿಯುವುದಕ್ಕೋಸ್ಕರ ಹಾಗೆ ಪಾವತಿಯಾದ ಬಡ್ಡಿಗೆ ದಾಖಲೆಯಾಗಿ ಒಂದು ರಿಕಾರ್ಡನ್ನು ಇಡೋಣ ಅವಶ್ಯವಾಗಿರುತ್ತದೆ. ಈ ಬಗ್ಗೆಯಾಗಿ ಅಂಥಾ ಬಡ್ಡಿಯು ಅದಕ್ಕಾಗಿ ನಿಬಡಾಯಿಸಿರುವ ಮದ್ದಿನಲ್ಲಿ ಪ್ರತ್ಯೇಕವಾಗಿ ದಾಖಲಾಗಬೇಕಲ್ಲದೆ ಸಾಲಾಖೈರಿಗೆ ಕ್ರಮವಾಗಿ ಎತ್ತಿ ಬರೆಯಲ್ಪಡಬೇಕು.

2. ಸದರಿ ಬಡ್ಡಿಯು ಹೊಸ ಸರ್ಕಾರಿ ಸಾಲಿ ಷುರುವಿನಲ್ಲಿ ಅಸಲಿನ ಒಂದು ಭಾಗವಾಗುತ್ತದೆ ಆದ್ದುದರಿಂದ ಕಳೆದ ಸಾಲುಗಳ ಬಾಬತು ಅಸಲು ಡಿಪಾಜಿಟ್ಟುಗಳು ಮತ್ತು ಬಡ್ಡಿಯನ್ನು ವಾಪಸು ಕೊಡೋಣವಲ್ಲದೆ ಚಾಲ್ತಿ ಸಾ-

ಲಿನ ಒಂದು ಭಾಗಕ್ಕಾಗಿಯೂ ಬಡ್ಡಿ ಕೊಡಲ್ಪಟ್ಟದ್ದು ಹೊರತು "ಖೈದಾದ ಲೆಕ್ಕಗಳ ಬಾಬತು ಬಡ್ಡಿ" ಎಂಬ ಮದ್ದಿನಲ್ಲಿ ಯಾವ ಸಲ್ವಿಕೆಯನ್ನೂ ತೋರಿಸಕೂಡದೆಂಬುದನ್ನು ಸ್ಮರಣೆಯಲ್ಲಿಡತಕ್ಕದ್ದು; ಮುಖ್ಯ ಸದರಿ ಮದ್ದು ಅದ್ಯಾಪಿ ಅಸಲಿಗೆ ಕೂಡಿಸಲ್ಪಡದೆ ಇರುವ ಚಾಲ್ತಿ ಸಾಲಿನ ಬಡ್ಡಿಗೆ ಮಾತ್ರ ಉದ್ದೇಶಿಸಲ್ಪಟ್ಟಿರುತ್ತದೆ.

ಲೆಡ್ಜರ್.

27. (ಅಚ್ಚು ಹಾಕಿದ ಹಾಳೆಗಳಾಗಿ ಬದಗಿಸಲ್ಪಡುವ 7ನೆ ನಮೂನೆಯ) ಲೆಡ್ಜರು ಸಾಧ್ಯವಾದ ಮಟ್ಟಿಗೂ ಪ್ರತಿ ಆಡೆಳಿತ ನಡೆದ ಕೂಡಲೆ ಡಿಪಾಜಿಟ್ಟುಗಳ ಮತ್ತು ವಾಪಸು ಪಾವತಿಗಳ ಜರ್ನಲ್‌ನಿಂದ ಬಾರಾಗಬೇಕು.

ಡಿಪಾಜಿಟರುಗಳ ಪ್ಯಾಸ್ ಬುಕ್ಕುಗಳಿಗೆ ರುಜು ಮಾಡುವಾಗ್ಯೆ ಟ್ರೆಜರಿ ಆಫೀಸರು ಪ್ರತಿ ದಿನ ಕೆಲ ಕೆಲವು ಸಂದರ್ಭಗಳಲ್ಲಿ ಲೆಡ್ಜರನ್ನು ನೋಡಿ ಅದು ಸರಿಯಾಗಿ ಇಡಲ್ಪಟ್ಟಿರುತ್ತದೆಯೇ, ಲೆಡ್ಜರಿನಲ್ಲಿಯೂ ಪ್ಯಾಸ್ ಬುಕ್ಕುಗಳಲ್ಲಿಯೂ ನಮೂದಾಗುವ ಬಾಕಿಗಳು ತಾಳೆ ಬೀಳುತ್ತವೆಯೇ, ಎಂಬುವುದನ್ನು ತೃಪ್ತಿಪಡಿಸಿಕೊಳ್ಳುವ ಅವಕಾಶವನ್ನು ತೆಗೆದುಕೊಳ್ಳೋಣ ಇಷ್ಟವಾದುದು.

ಬಡ್ಡಿಯನ್ನು ಕೂಡಿಸುವಿಕೆ.

28. ಪ್ರತಿ ಮಾಹೇ ಆಖೈರಿನಲ್ಲಿ ಸೇವಿಂಗ್ಸ್ ಬ್ಯಾಂಕು ಕ್ಲರ್ಕು ಲೆಡ್ಜರನ್ನು ಪೂರಾ ನೋಡಿ "ಅಸಲು ಅಥವಾ ಕೇವಲ ಕಮ್ಮಿ ಬಾಕಿ" ಮತ್ತು "ಬಡ್ಡಿ" ಈ ಬಾಬತು ಪ್ರತಿ ಚಾಲ್ತಿ ಲೆಕ್ಕದ ಮದ್ದುಗಳನ್ನು ಭರ್ತಿ ಮಾಡಬೇಕು. "ಅಸಲು ಅಥವಾ ಕೇವಲ ಕಮ್ಮಿ ಬಾಕಿ" ಎಂದು ಹೆಡ್ಡು ಕಟ್ಟಿರುವ ಮದ್ದಿನಲ್ಲಿ ಪ್ರತಿ ತಿಂಗಳಿನ ನಾಲ್ಕನೇದಿನ ಸಾಯಂಕಾಲಕ್ಕು ಮತ್ತು ಆ ತಿಂಗಳಿನ ಆಖೈರಿಗೂ ಮಧ್ಯೆ ನಡೆದ ಲೆಕ್ಕದ ಕೇವಲ ಕಮ್ಮಿ ಬಾಕಿಯನ್ನು ಮಾಹೇವಾರಾಗಿ ದಾಖಲ್ಮಾಡಬೇಕು. (C ಗುರ್ತಿನ ಉಪಭಾಗವನ್ನು ನೋಡಿ.)

1. ಈ ಮದ್ದನ್ನು ಹೇಗೆ ಭರ್ತಿಮಾಡಬೇಕೆಂಬ ವಿಚಾರದಲ್ಲಿ ಪ್ರಯಾಸವೇನಾದರೂ ಕಂಡು ಬಂದರೆ, ಒಂದು ಬಿಡಿ ಲೆಡ್ಜರ ನಮೂನೆಯ ಮೇಲೆ ಲೆಕ್ಕವನ್ನು ಬರೆದು ಅಪ್ಪಣೆ ಬಗ್ಗೆ ಕಂಟ್ರೋಲರವರ ಆಫೀಸಿಗೆ ಕಳುಹಿಸತಕ್ಕದ್ದು; ಸದರಿ ಕ್ಲರ್ಕು ಈ ಅಂಶವನ್ನು ಸಂಪೂರ್ಣವಾಗಿ ತಿಳಿದುಕೊಂಡು ಇರುತ್ತಾನೆಂಬ ವಿಚಾರದಲ್ಲಿ ಎಚ್ಚರಿಕೆ ಇರಬೇಕು, ಏತಕ್ಕೆಂದರೆ, ಬಡ್ಡಿ ಗಣನೆಯು ಕಲಾರ್ವಾಕಾ ಆಗುವುದು "ಅಸಲು ಅಥವಾ ಕೇವಲ ಕಮ್ಮಿ ಬಾಕಿ" ಎಂಬ ಮದ್ದಿನಲ್ಲಿ ದಾಖಲಾಗುವ ಮೊಬಲಗು ಸರಿಯಾಗಿರುವುದನ್ನು ಅನುಸರಿಸಿ ಇರುತ್ತದೆ.
2. ವ್ಯತ್ಯಾಸಗಳನ್ನು ಕಂಡು ಹಿಡಿಯುವುದರಲ್ಲಿ ಏನಾದರೂ ಪ್ರಯಾಸವಿದ್ದರೆ ದೃಢಪಡಿಸಿಕೊಳ್ಳುವುದಕ್ಕೋಸ್ಕರ (ಸಾಧಾರಣ ಕಾಗದದ ಮೇಲೆ ಅಚ್ಚು ಹಾಕಿರುವ) ಬಿಡಿ ಲೆಡ್ಜರ್ ನಮೂನೆಗಳ ಮೇಲೆ ಯಾವುದಾದರೂ ಲೆಕ್ಕಗಳ ನಕಲುಗಳನ್ನು ಬರೆದು ಹೆಡ್ಡಾಫೀಸಿಗೆ ಕಳುಹಿಸಬಹುದು.

29. ವರುಷ ಒಂದಕ್ಕೆ ಸೇಕಡಾ $3\frac{1}{8}$ ರಂತೆ ಆಗುವ ಬಡ್ಡಿಯು ಸಾಲಿಯಾನಾ ಅಸಲಿಗೆ ಕೂಡಿಸಲ್ಪಟ್ಟಾಗ್ಯೂ ಮಾಹೇವಾರಾಗಿ ಲೆಕ್ಕಾಚಾರವಾಗಿ "ಬಡ್ಡಿ" ಎಂಬ ಮದ್ದಿನಲ್ಲಿ ದಾಖಲಾಗಬೇಕು. ಈ ಲೆಕ್ಕಾಚಾರಕ್ಕಾಗಿ ನಿಬಂಧನೆಯು 1ನೆ ನಿಬಂಧನೆಯ ಕೆಳಗೆ ಉದಹರಿಸಲ್ಪಟ್ಟಿರುವ ನಿಬಂಧನೆಗಳ ಪೈಕಿ VIIನೆ ನಂಬರಿನದಾಗಿರುತ್ತದೆಯಲ್ಲದೆ, C ಗುರ್ತಿನ ಉಪಭಾಗದಲ್ಲಿ ವಿಸ್ತಾರವಾದ ಬಡ್ಡಿ ತಖ್ತೆ ನಮೂದಾಗುತ್ತದೆ. ಆದರೆ 5,000 ರೂಪಾಯಿಗಳ ಮೇಲಣ ಬಡ್ಡಿಯಾದ 13—0—4 ಕ್ಕಿಂತ ಜಾಸ್ತಿಯಾದ ಮಾಹೇವಾರ್ ಬಡ್ಡಿಯನ್ನು ಯಾವ ಸಂದರ್ಭದಲ್ಲೂ ದಾಖಲ್ಮಾಡಕೂಡದೆಂಬುವುದನ್ನು ಜ್ಞಾಪಕದಲ್ಲಿಟ್ಟುಕೊಂಡಿರಬೇಕು.

ಬಡ್ಡಿ ಲೆಕ್ಕಾಚಾರ ಮಾಡುವುದಕ್ಕೆ ನಿಬಂಧನೆಯು ಈ ಮೇರೆಗಿರುತ್ತದೆ:—

ಬಡ್ಡಿ ದಾಖಲಾಗಬೇಕಾದ ಮೊಬಲಗಿನ ಪೈಕಿ ಪ್ರತಿ ಇಪ್ಪತ್ತು ನಾಲ್ಕು ರೂಪಾಯಿಗಳಿಗೆ ತಿಂಗಳು ಒಂದಕ್ಕೆ ಬಡ್ಡಿ ಒಂದು ಆಣೆ ಯೆಂದು ಇಟ್ಟುಕೊಳ್ಳಬೇಕು, ಮತ್ತು ಇಪ್ಪತ್ತು ನಾಲು ರೂಪಾಯಿಗಳಿಗೆ ಕಮ್ಮಿಯಾದ ಚಿಲ್ಲರೆ ಮೊಬಲಗುಗಳಿಗ ಈ ಕೆಳಗಿನ ತಖ್ತೆಯಂತೆ ಬಡ್ಡಿ ಲೆಕ್ಕಾಚಾರವಾಗತಕ್ಕದ್ದು:—

ಅಸಲು.			ಬಡ್ಡಿ.		ಅಸಲು.			ಬಡ್ಡಿ.	
ರೂ.	ಆ.	ಪೈ.	ಆ.	ಪೈ.	ರೂ.	ಆ.	ಪೈ.	ಆ.	ಪೈ.
2	0	0	0	1	14	0	0	0	7
4	0	0	0	2	16	0	0	0	8
6	0	0	0	3	18	0	0	0	9
8	0	0	0	4	20	0	0	0	10
10	0	0	0	5	22	0	0	0	11
12	0	0	0	6	24	0	0	1	0

ಉದಾಹರಣೆ—134-6-10 ಪೈನ ಮೇಲೆ ಒಂದು ತಿಂಗಳಿಗೆ ಬಡ್ಡಿ ತಿಳಿಯಬೇಕು.

		ಆ. ಪೈ.
120—0—0 ರೂಪಾಯಿಗಳ ಮೇಲೆ ಬಡ್ಡಿ	..	5—0 ಆಗುತ್ತದೆ.
14—6—10 ಪೈನ ಮೇಲ್ಲೆ ಬಡ್ಡಿ	..	0—7 ಆಗುತ್ತದೆ.
ಜುಮ್ಲಾ .. 134—6—10		5—7

ಲೆಡ್ಜರನ್ನು ಸಾಲಿಯಾನಾ ಖೈದ್ ಮಾಡೋಣ.

30. ಸಾಲಾಖೈರಿಗೆ ಪ್ರತಿ ಚಾಲ್ತಿ ಲೆಕ್ಕವೂ ಖೈದ್ ಮಾಡಲ್ಪಟ್ಟು ಷುರು ಬಾಕಿಯನ್ನು ಬಿಟ್ಟು ಡಿಪಾಜಿಟ್ಟುಗಳ ಜುಮ್ಲಾ ಮಾಡಿ ಆ ಜುಮ್ಲಾ ಕೆಳಗೆ ಸದರಿ ಸಾಲಿನ ಷುರು ಬಾಕಿ ಮತ್ತು ಬಡ್ಡಿಯನ್ನು ದಾಖಲ್ಮಾಡಬೇಕು. ಅನಂತರ ಡಿಪಾಜಿಟ್ಟುಗಳು, ಷುರು ಬಾಕಿ ಬಡ್ಡಿ ಈ ಮೂರನ್ನೂ ಜುಮ್ಲಾ ಮಾಡಿ ಆ ಜುಮ್ಲಾವಿನಿಂದ ವಾಪಸು ಪಾವತಿಯಾದ ಮೊಬಲಗುಗಳನ್ನು ವಜಾ ಮಾಡತಕ್ಕದ್ದು. ಈ ವಜಾ ಚಾತಾ ಬಾಕಿಯೇ ಆಖೈರು ಬಾಕಿಯಾಗುವುದು, ಮತ್ತು ಲೆಡ್ಜರಿನ "ಪ್ರತಿ ಆಡಳಿತದ ತರುವಾಯ ಬಾಕಿ" ಎಂಬ ಮದ್ದಿನಲ್ಲಿರುವ ಕೊನೆ ಅಂಕೆಗೆ ಸದರಿ ಸಾಲಿನ ಬಡ್ಡಿ ಸೇರಿದ ಜುಮ್ಲಾಕ್ಕೆ ತಾಳೆ ಇರುವುದು.

1. ಸಾಲಾಖೈರಿನಲ್ಲಿ ಬಡ್ಡಿ ಲೆಕ್ಕಾಚಾರಗಳನ್ನು ಪೂರೈಸುವ ಬಗ್ಗೆ ಬಹಳ ಜಲ್ದಿಯ ತರದೂದುಗಳನ್ನು ನಡೆಸಬೇಕು. ಜೂನ್ ಮಾಹೆ ನಾಲ್ಕನೆ ತಾರೀಖು ಮುಗಿದನಂತರ ದಾಖಲಾದ ಡಿಪಾಜಿಟ್ಟುಗಳ ಮೇಲೆ ಬಡ್ಡಿ ಸಲ್ಲುವುದಿಲ್ಲವಾಗಿ, ಜೂನ್ ಮಾಹೆ ಬಾಬತು ಅಸಲು ಬಡ್ಡಿಯನ್ನು (ಜೂನ್ ಮಾಹೆಯಲ್ಲಿ ಆದ ವಾಪಸು ಪಾವತಿಗಳ ವಿಚಾರದಲ್ಲಿ ಮಾತ್ರ ತಿದ್ದುಪಾಟಿಗೊಳಪಟ್ಟು) ಜೂನ್ ನಾಲ್ಕನೆ ತಾರೀಖು ಮುಗಿದೊಡನೆ ಪೆನ್ಸಲಿನಲ್ಲಿ ದಾಖಲ್ಮಾಡಿ, ಬಡ್ಡಿಯ ಜುಮ್ಲಾವನ್ನು ಪೆನ್ಸಲಿನಲ್ಲೇ ಮಾಡತಕ್ಕದ್ದು. ಜೂನಲ್ಲಿ ನಡೆದ ವಾಪಸು ಪಾವತಿಗಳನ್ನು ಚಾರ್ಜ್ಮಾಡುವಾಗ್ಯೆ ಅಗತ್ಯವಾದರೆ ಈ ಲೆಕ್ಕಾಚಾರಗಳ ಪೈಕಿ ಯಾವುದನ್ನಾದರೂ ಬದಲಾಯಿಸಬಹುದು.

2. ಹೀಗೆ ಮಾಡಿದರೆ, ಜುಲೈ 15ರ ಒಳಗೆ ಎಲ್ಲಾ ಡಿಪಾಜಿಟರುಗಳ ಲೆಕ್ಕಗಳನ್ನು ಖೈದು ಮಾಡುವುದರಲ್ಲಿ ಯಾದ ಪ್ರಯಾಸವೂ ಬಹುಶಃ ಉಂಟಾಗಲಾರದು; ಸಾಧ್ಯವಾದಲ್ಲಿ, ಹೀಗೆ ಯಾವಾಗಲೂ ಮಾಡಬೇಕು, ಮತ್ತು ಸಾಲ್ ಝಾಡೆ ಲೆಕ್ಕ ಕಂಟ್ರೋಲರ ಆಫೀಸಿನಲ್ಲಿ ಪ್ಯಾಸಾಗಿ ಅಲ್ಲಿಂದ ವಾಪಸುಬಂದ ತರುವಾಯ, ಮೊದಲನೆ ಸಾರಿ ಡಿಪಾಜಿಟರು ಅವನ ಪ್ಯಾಸ್ ಬುಕ್ಕನ್ನು ಹಾಜರ್ಮಾಡಿದಾಗ ಅದರಲ್ಲಿ ಕಳೆದ ಸಾಲಿನ ಬಡ್ಡಿಯನ್ನು ಬರೆದು ಡಿಪಾಜಿಟರ ಬಾಕಿ ಮೊಬಲಗಿಗೆ ಸೇರಿಸಬೇಕು.

ಲೆಕ್ಕಗಳನ್ನು ಮಧ್ಯಕಾಲದಲ್ಲಿ ಖೈದ್ ಮಾಡೋಣ.

31. ಒಬ್ಬ ಡಿಪಾಜಿಟರು ಸಾಲ್ ನಡೆಯುತ್ತಿರುವಾಗ್ಯೆ ತನ್ನ ಲೆಕ್ಕ ಖೈದಾಗಬೇಕೆಂದಪೇಕ್ಷಿಸಿದರೆ, ಹಿಂದಿನ ತಿಂಗಳು ಆಖೈರು ಪರ್ಯಂತ ಬಡ್ಡಿಯನ್ನು ಅವನ ಲೆಕ್ಕಕ್ಕೆ ಜಮೆ ಹಿಡಿದು ಅಸಲಿನೊಂದಿಗೆ ಅದನ್ನು ಡಿಪಾಜಿಟರಿಗೆ ಪಾವತಿ ಮಾಡತಕ್ಕದ್ದು; ಹಾಗಿಲ್ಲವಾದರೆ, ಚಾಲ್ತಿ ಸಾಲಿನ ಬಡ್ಡಿಗಾಗಿ ಆ ಸಾಲಿನ ಅಂದರ್ವಾರ್ ಹಣವೇ ಪಾವತಿಯಾಗಕೂಡದು. (26ನೆ ನಿಬಂಧನೆಯ ಕೆಳಗಣ ಟಿಪ್ಪಣಿಗಳನ್ನು ನೋಡುವುದು.)

1. ಒಂದು ಲೆಕ್ಕ ಖೈದಾದ ಸಂಗತಿಯನ್ನು (5ನೆ ನಮೂನೆಯ) ವಾಪಸು ಪಾವತಿಗಳ ಜರ್ನಲ್ಲಿನಮೇಲೆ ಟಪಾಯಿಸಿ ಪ್ಯಾಸ್ ಬುಕ್ಕನ್ನು ಡಿಪಾಜಿಟರಿಂದ ಒಪ್ಪಿಸಿಕೊಂಡು ಟ್ರೆಜರಿಯಲ್ಲಿ ದಾಖಲೆ ಬಗ್ಯೆ ನಿಲಿ ಇಡತಕ್ಕದ್ದು.

2. ಈ ಮೇರೆಗೆ ಒಂದು ಲೆಕ್ಕ ಖೈದಾಗಿ ಪ್ಯಾಸ್ ಬುಕ್ಕನ್ನು ವಾಪಸು ಒಪ್ಪಿಸಿಕೊಂಡ ತರುವಾಯ, ಬಡ್ಡಿ ಲೆಕ್ಕಾಚಾರ ಮಾಡುವುದರಲ್ಲಿ ಸ್ವಲ್ಪ ತಪ್ಪು ಸಿಕ್ಕಿ ಆ ತಪ್ಪನ್ನು ತಿದ್ದೋಣದರಿಂದ ಲೆಕ್ಕದಲ್ಲಿ ಒಂದು ಸಣ್ಣ ಬಾಕಿ ನಿಂತುಬಂದರೆ, ಸಾಧ್ಯವಾದಲ್ಲಿ ಡಿಪಾಜಿಟರಿಗೆ ಆ ಸಂಗತಿಯನ್ನು ತಿಳಿಸಿದ ತರುವಾಯ ಆರು ತಿಂಗಳುಗಳು ಕಳೆದ ಮೇಲೆ ಟ್ರೆಜರಿ ಆಫಿಸರು ತಮ್ಮ ಸ್ವಂತ ರಸೀದಿಯ ಮೇಲೆ ಸದರಿ ಮೊಬಲಗನ್ನು ತೆಗೆದುಕೊಂಡು ಒಂದು "ಚಿಲ್ರೆ ಜಮಾ" ತರೀಕು ಅದನ್ನು ಟ್ರೆಜರೀಗೆ ಪಾವತಿ ಮಾಡಿ ಅಬಗೆ ಆಡಳಿತವನ್ನು ಕುರಿತು ಸೇವಿಂಗ್ಸ್ ಬ್ಯಾಂಕು ಲೆಡ್ಜರಿನಲ್ಲಿ ಷರಾ ಕಾಣಿಸಬೇಕು. ಅಂಥಾ ಮೊಬಲಗನ್ನು ಕಂಟ್ರೋಲರವರ ಮಂಜೂರಾತಿಯಿಂದ ಯಾವಾಗಲಾದರೂ ವಾಪಸು ಪಾವತಿ ಮಾಡಬಹುದು.

ಹೆಡ್ಡಾಫಿಸಿಗೆ ಹೋಗಬೇಕಾದ ಲೆಕ್ಕಗಳು.

32. ಡಿಪಾಜಿಟ್ಟುಗಳ ಎಲ್ಲಾ ಜಮಾ ಖರ್ಚುಗಳ ವಿವರಗಳನ್ನು ವಿಧಾಯಕವಾದ ನಮೂನೆಗಳಲ್ಲಿ ದಾಖಲ್ಮಾಡಿ ಪ್ರತಿ ತಿಂಗಳ 10ನೆ ತಾರೀಖಿನೊಳಗಾಗಿ ಕಂಟ್ರೋಲರ ಆಫಿಸಿಗೆ ಕಳುಹಿಸತಕ್ಕದ್ದು. ಈ ಮಾಹೇವಾರಿ ಪಟ್ಟಿಗಳಲ್ಲಿ ಒಂದು ಪೂರಾ ತಿಂಗಳ ಆಡಳಿತಗಳು ನಮೂದಾಗಬೇಕು.

ಕಂಟ್ರೋಲರ ಆಫಿಸಿಗೆ ಕಳುಹಿಸಲ್ಪಡುವ ವಾಪಸ್ ಪಾವತಿಗಳ ಜರ್ನಲ್ಲಿನೊಂದಿಗೆ ಅಂಥಾ ವಾಪಸ್ ಪಾವತಿಗಳಿಗೆ ದಾಖಲೆಯಾಗಿ ಆ ಬಗ್ಯೆ ಬಂದ ಅರ್ಜಿಗಳನ್ನು ಕಳುಹಿಸಬೇಕು.

"ಡೆಡ್" ಎಂದರೆ ನಿಂತುಹೋದ ಲೆಕ್ಕಗಳು.

33. ಇವರಡಿ ಕಂಡ್ವೆ ಲೆಕ್ಕಗಳನ್ನು "ನಿಂತುಹೋದ ಲೆಕ್ಕಗಳು" ಎಂದು ಭಾವಿಸಿ ಮುಂದೆ ಬರುವ ಎರಡು ಕಲಂಗಳಲ್ಲಿ ವಿವರಿಸಿರುವ ನಡವಳಿಕೆ ಪ್ರಕಾರ ಕಂಟ್ರೋಲರವರ ಆಫಿಸಿಗೆ ವರ್ಗ ಮಾಡಬೇಕು.

ಯಾವ ಲೆಕ್ಕಗಳ ಬಾಕಿಯು 10 ರೂಪಾಯಿಗೆ ಮಿಂಚಿಲ್ಲವೊ ಆ ಲೆಕ್ಕಗಳು.	ಮತ್ತು	ಯಾವ ಲೆಕ್ಕಗಳಲ್ಲಿ 3 ಪೂರಾ ಸಾಲುಗಳ ಪರ್ಯಂತ ಡಿಪಾಜಿಟ್ಟು ದಾಖಲಾಗಿಲ್ಲ ಮತ್ತು ವಾಪಸ್ ಪಾವತಿಯೂ ದಾಖಲಾಗಿಲ್ಲವೊ ಆ ಲೆಕ್ಕಗಳು.
100 ರೂಪಾಯಿಗೆ ಮಿಂಚಿಲ್ಲವೊ ಆ ಲೆಕ್ಕಗಳು		6 ... ಡಿಟೋ
100 ರೂಪಾಯಿಗೆ ಮಿಂಚಿರುತ್ತವೆಯೊ ಆ ಲೆಕ್ಕಗಳು		12 ಡಿಟೋ

ಪರಂತು ಮೇಲ್ಕಂಡ ಕೊನೆ ಸಂದರ್ಭದಲ್ಲಿ ಎಂದರೆ 12 ಪೂರಾ ವರುಷಗಳ ವರೆಗೂ ಡಿಪಾಜಿಟ್ಟುಗಲಿ ವಾಪಸ್ ಪಾವತಿಯಾಗಲಿ ದಾಖಲಾಗದೇ ಇರುವ ಲೆಕ್ಕದ ವಿಷಯದಲ್ಲಿ, ಆ ಲೆಕ್ಕದ ಬಾಕೀಗಾಗಿ ಹಕ್ಕುದಾರಿಯು ಬಹುಶಃ ಜಾಗ್ರತೆಯಾಗಿ ಬರಬಹುದೆಂದು ನಂಬಲಿಕ್ಕೆ ಟ್ರೆಜರಿ ಆಫಿಸರಿಗೆ ಕಾರಣವಿದ್ದರೆ ಅಂಥಾ ಲೆಕ್ಕವನ್ನು ನಿಂತುಹೋದ ಲೆಕ್ಕವನ್ನಾಗಿ ಭಾವಿಸಿ ಕಂಟ್ರೋಲರವರ ಆಫಿಸಿಗೆ ವರ್ಗ ಮಾಡತಕ್ಕ ಕೆಲಸವಿಲ್ಲ.

34. ಪ್ರತಿ ಸಾಲ್ ಆಖೈರಿನಲ್ಲಿ, ಬಡ್ಡಿಯ ಲೆಕ್ಕಾಚಾರಗಳು ಪೂರೈಸಿದ ತರುವಾಯ ಮತ್ತು (30ನೆ ನಿಬಂಧನೆಯ ಕೊನೆಯ ಭಾಗದಲ್ಲಿ ಹೇಳಿರುವ ಮೇರೆಗೆ) ಖಾತೆಯ ಲೆಕ್ಕಗಳಲ್ಲಿ ಆಖೈರ್ ಬಾಕಿಗಳನ್ನು ದಾಖಲ್ಮಾಡುವುದರ ಜತೆಯಲ್ಲಿ, ಹಿಂದಿನ ನಿಬಂಧನೆಯ ಮೇರೆಗೆ, ಸಾಲಿನ ಆಖೈರಿನಲ್ಲಿ "ನಿಂತುಹೋದವುಗಳೆಂದು" ಎಣಿಸಲ್ಪಡುವ ಲೆಕ್ಕಗಳ ಬಾಕಿಯನ್ನು ಕೂಡ ಖಾತೆಯಲ್ಲಿ ದಾಖಲ್ಮಾಡತಕ್ಕದ್ದು. ಆದರೆ ಜೂನ್ ತಿಂಗಳಿನ ವಾಪಸು ಪಾವತಿಯನ್ನು ತೋರಿಸುವ ಪಂಕ್ತಿಯ ಕೆಳಗೆ "ನಿಂತು ಹೋದ ಲೆಕ್ಕವೆಂದು ಎಣಿಸಿ ಕಂಟ್ರೋಲರವರ ಆಫಿಸಿಗೆ ವರ್ಗಾಯಿಸಲ್ಪಟ್ಟದ್ದು" ಎಂದು ಬರೆಯಬೇಕು. ಮತ್ತು ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟುಗಳ ಸಾಲಿಯಾನಾ ಸ್ಟೇಟ್‌ಮೆಂಟಿನ 7 (b) ನೆ ಕಲಮಿನಲ್ಲಿ, ಅಂಥಾ ಪ್ರತಿ ಬಾಕಿಯೂ, ನಿಂತುಹೋದ ಲೆಕ್ಕಕ್ಕೆ ವರ್ಗಾಯಿಸುವುದರ ಮೂಲಕ ವಾಪಸು ತೆಗೆದುಕೊಂಡ ಮೊಬಲಗೆಂದು ದಾಖಲ್ಮಾಡಲ್ಪಡುವುದು. ಆದುದರಿಂದ ಇಂಥಾ ಲೆಕ್ಕಗಳಲ್ಲಿ ಆಖೈರು ಬಾಕಿಯೇನೂ ಇರುವುದಿಲ್ಲ, ಮತ್ತು ಹೊಸ ಸಾಲಿನಲ್ಲಿ ಆ ಲೆಕ್ಕವನ್ನು ಎತ್ತಿ ಮುಂದಕ್ಕೆ ಬರೆಯುವುದು ನಿಂತುಹೋಗುವುದು. ಅಂಥಾ ನಿಂತುಹೋದ ಲೆಕ್ಕಗಳಿಗೆ ಸಲ್ಲಬೇಕಾದ ಒಟ್ಟು ಮೊಬಲಗು ಜೂನ್ 30ನೆ ತಾರೀಖಿನಲ್ಲಿ ವಾಪಸು ಪಾವತಿಯಾದಂತೆ ವಾಪಸು ಪಾವತಿ ಜರ್ನಲಿನಲ್ಲಿ ಬರೆಯಲ್ಪಟ್ಟು, "ಸೇವಿಂಗ್ಸ್ ಬ್ಯಾಂಕು ಡಿಪಾಜಿಟ್ಟುಗಳ ಸಾಲಿಯಾನಾ ಸ್ಟೇಟ್‌ಮೆಂಟಿನ 7 (b) ನೆ ಕಲಮಿನ ಮೇರೆಗೆ ಕಂಟ್ರೋಲರವರ ಆಫಿಸಿಗೆ ವರ್ಗಾಯಿಸಲ್ಪಟ್ಟದ್ದೆಂದು" ವಿವರಿಸಲ್ಪಡುವುದು. ವಾಪಸು ಪಾವತಿಗಳ ಪಟ್ಟಿಯಲ್ಲಿ ಇದರ ಖಾತಾಯಿತಿಯೇನೂ ಬಾರು ಆಗಬೇಕಾಗಿಲ್ಲ, ಮತ್ತು ಸದರಿ ಅಡಳಿತ ಟ್ರೆಜರಿಯ ಮೂಲಕ ನಡೆಯತಕ್ಕದ್ದೂ ಅಲ್ಲ.

ವಾಡಿಕೆಯಲ್ಲಿರುವ ನಿಬಂಧನೆಗಳಂತೆ ಜೂನ್ ಆಖೈರು ವರೆಗೆ ಬಡ್ಡಿಯನ್ನು ಲೆಕ್ಕ ಮಾಡಬೇಕು. ಯಾಕೆಂದರೆ, ಲೆಕ್ಕವನ್ನು ಕಂಟ್ರೋಲರವರ ಆಫಿಸಿಗೆ ವರ್ಗಾಯಿಸಿದ್ದು ಜೂನ್ ತಿಂಗಳಿಗೆ ಬಡ್ಡಿ ಕಟ್ಟಿದಂತೆ ಅಡ್ಡಿ ಮಾಡುವ ಆ ತಿಂಗಳಿನ ವಾಪಸು ಪಾವತಿಯಲ್ಲ.

35. ಕಂಟ್ರೋಲರ ಆಫಿಸಿನಲ್ಲಿ ಈ ಲೆಕ್ಕಗಳು ಇದರಡಿ ಕಂಡ ನಮೂನೆ ಮೇರೆ ಒಂದು ಹೊಸ ಲೆಡ್ಜರಿಗೆ ದಾಖಲಾಗಬೇಕು :—

ಜಂಜರ್ ನಂಬರ್.		ಡಿಪಾಜಿಟರ ಹೆಸರು.	ನಿಂತುಹೋದ ಲೆಕ್ಕಕ್ಕೆ ವರ್ಗಾಯಿಸಿದ ತಾರೀಖು.	ನಿಂತುಹೋದ ಬಾಕಿ ಮೊಬಲಗು.	ವಾಪಸು ಪಾವತಿಯಾದುದು ಯಾವಾಗ.	ಜೂನ್ 30ರಲ್ಲಿ ಬಾಕಿ.	ವಾಪಸು ಪಾವತಿ ಯಾದುದು ಯಾವಾಗ.	ಜೂನ್ 30ರಲ್ಲಿ ಬಾಕಿ.	ಎಷ್ಟು ಸಾಲುಗಳಿಗೆ ಅನುಕೂಲವೋ ಅಷ್ಟು ಕಾಲುಗಳಿಗೆ ಈ ಮೇರೆ ಬಡಾಯಿಸಿಕೊಳ್ಳುವುದು.
ನಂ.	ಲೆಕ್ಕದ ಪುರು ನಂ.								

ಸದರಿ ಲೆಕ್ಕ ಕಂಟ್ರೋಲರ ಆಫಿಸಿನ ಲೆಡ್ಜರಿನಲ್ಲಿರುವತನಕ ಈ ಬಾಕಿಗಳ ಮೇಲಣ ಬಡ್ಡಿಯನ್ನು ಲೆಕ್ಕಾಚಾರ ಮಾಡುವುದಿಲ್ಲ ಹಾಗೂ ಬೇರೆ ಮೊಬಲಗಿಗೆ ಸೇರಿಸುವುದಿಲ್ಲವು.

ನಿಂತುಹೋದ ಲೆಕ್ಕವನ್ನು ಪುನಃ ಜಾರೀಲಿಡೋಣ.

36. ಒಂದು ಲೆಕ್ಕವು ಈ ಮೇರೆಗೆ ವರ್ಗಾಯಿಸಲ್ಪಟ್ಟ ತರುವಾಯ ಡಿಪಾಜಿಟರು ತನ್ನ ಪುರು ಪಾಸ್ ಬುಕ್ಕನ್ನು ಹಾಜರ್ಮಾಡಿ ಮತ್ತೊಂದು ಡಿಪಾಜಿಟನ್ನು ಮಾಡಿದರೆ, ಅಥವಾ ಅವನ ನ್ಯಾಯವಾದ ಪ್ರತಿನಿಧಿಯು, ಸದರಿ ಲೆಕ್ಕವು ವರ್ಗವಾಗದಿದ್ದರೆ ಟ್ರೆಜರಿ ಆಫಿಸರು ಒಪ್ಪಿಕೊಳ್ಳುತ್ತಿದ್ದಂಥಾ ವಾಪಸ್ ಪಾವತಿಯ ಹಕ್ಕನ್ನು ತಂದರೆ, ಟ್ರೆಜರಿ ಆಫಿಸರು ಬಾಕಿ ಬಡ್ಡಿನಿಸಿ ಒಟ್ಟು ಬಾಕಿಯನ್ನು ವಾಪಸು ಪಾವತಿ ಮಾಡುವ ಬಗ್ಗೆ ಕಂಟ್ರೋಲರ ಆಫಿಸಿಗೆ ಬರೆದುಕೊಳ್ಳಬೇಕು, ಅದರ ಮೇಲೆ ಇದರಡಿ ಕಂಡ ನಮೂನೆಯ ಪ್ರಕಾರ ಟ್ರೆಜರಿ ಆಫಿಸರಿಗೆ ಒಂದು ಹುಕುಂ ಹುಟ್ಟಬೇಕು.

ಮೈಸೂರು ಸರ್ಕಾರದ ಕಂಟ್ರೋಲರವರ ಆಫಿಸ್.
ಬೆಂಗಳೂರು, ತಾ॥ 190

.................ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಗೆ
ಟ್ರೆಜರಿ ಡಿಪಾರ್ಟ್‌ಮೆಂಟ್

ಈ ಬಾಜುವಿನಲ್ಲಿ ನಮೂದಿರುವ ನಿಂತುಹೋದ ಲೆಕ್ಕವನ್ನು ತಿರಿಗಿ ಆರಂಭಿಸಲು ಮಂಜೂರಾತಿಯ ಬಗ್ಗೆ ಬರೆದುಕೊಂಡ 190 ನೆ ಇಸವಿ ನೆ ತಾರೀಖಿನ ನೆ ನಂಬರಿನ ಅವರ ಲೆಟರಿನ ವಿಷಯು—

.........ತಾಲ್ಲೂಕು ಅಥವಾ ಡಿಸ್ಟ್ರಿಕ್ಟ್ ಟ್ರೆಜರಿಯ } ನಿಂತುಹೋದ ಲೆಕ್ಕದ ರಿಜಿಸ್ಟರ್ ನಂಬರ್— } ಲೆಕ್ಕದ ಪುರು ನಂಬರ್—

ಡಿಪಾಜಿಟರ ಹೆಸರು.—
ನಿಂತುಹೋದ ಲೆಕ್ಕಕ್ಕೆ ವರ್ಗವಾದ ತಾರೀಖು —
ನಿಂತುಹೋದ ಲೆಕ್ಕಕ್ಕೆ ವರ್ಗಾಯಿಸಿ ಬಾಕಿ ಮೊಬಲಗು-ರೂ.
ಬಡ್ಡಿ.................ಇಂದ.....................ಗೆ ರೂ.

ಮೇಲ್ಕಂಡ ಲೆಟರಿನಲ್ಲಿ ಕೇಳಿಕೊಂಡ ಮೇರೆ ಸದರಿ ಲೆಕ್ಕವನ್ನು ಪುನಃ ಆರಂಭಿಸಲು ಅವರಿಗೆ ಅಧಿಕಾರ ಕೊಟ್ಟಿರುತ್ತದೆಯಲ್ಲದೆ, ಈ ಬಾಜುವಿನಲ್ಲಿ ಕಂಡ ಡಿಪಾಜಿಟ್ ಮೊಬಲಗನ್ನೂ ಹಿಂದಿನ ಸಾಲಿನ ಆಖೈರ್ ವರೆಗೆ ಆದ ಬಡ್ಡಿಯನ್ನೂ ಅವರ ಸೇವಿಂಗ್ಸ್ ಬ್ಯಾಂಕ್ ಜರ್ನಲಿನಲ್ಲಿ ದಾಖಲ್ಮಾಡಬೇಕಾಗಿ ತಿಳಿಸಿ ಇದೆ.

ಜವಾಬ್ಬಾ ರೂಪಾಯಿಗಳು

ಕಂಟ್ರೋಲರ್.

ಸದರಿ ಮೊಬಲಗನ್ನು ಡಿಪಾಜಿಟ್‌ಗಳ ಮಾಹೇವಾರಿ ಪಟ್ಟಿಯ ಜವಾಬ್ಬಾವಿನಲ್ಲಿ ಸೇರಿಸಕೂಡದು, ಆದರೆ, ಈ ಆಫಿಸಿನ ತಿಳುವಳಿಕೆಯ ಬಗ್ಗೆ, ಸದರಿ ಜವಾಬ್ಬಾವಿನ ಕೆಳಗೆ ದಾಖಲ್ಮಾಡತಕ್ಕದ್ದು. (ಮೈಸೂರು ಸರ್ಕಾರದ ಸೇವಿಂಗ್ಸ್ ಬ್ಯಾಂಕು ನಿಬಂಧನೆಗಳ 36ನೆ ಪ್ಯಾರಾವನ್ನು ನೋಡುವುದು.)

37. ಜುಲೈ ಗುರೈಯಲ್ಲಿ ಬಾಕಿಯೆಂದು ಈ ಪ್ರಕಾರ ತಿಳಿಸಲ್ಪಟ್ಟ ಮೊಬಲಗಿನೊಂದಿಗೆ ಸದರಿ ಲೆಕ್ಕವನ್ನು ಖರ್ಚ ಡಿಪಾಜಿಟರ ಹೆಸರಿನಲ್ಲಿ ಹಳೇ ನಂಬರನ್ನೇ ಕೊಟ್ಟು ಹೊಸದಾಗಿ ಇಡಬೇಕು. ಡಿಪಾಜಿಟ್ಟುಗಳ ಜರ್ನಲಿನಲ್ಲಿನ ಖತಾಯಿತಿಗೆ ಸದರಿ ಜ

ಮೆಯು ನಿಜವಾದ ತಾರೀಖು ಬೀಳಬೇಕು, ಆದರೆ ಸದರಿ ಮೊಬಲಗು ಬಂದು ಷುರೂ ಬಾಕಿಯಾಗಿದ್ದರೆ ಹೇಗೋ ಹಾಗೆ ಚಾಲ್ತಿ ಸಾಲಿನ ಬಡ್ಡಿ ಲೆಕ್ಕಾಚಾರವನ್ನು ಮಾಡುವುದಕ್ಕೋಸ್ಕರ ಲೆಡ್ಜರ್ ಲೆಕ್ಕದಲ್ಲಿ ಸದರಿ ಮೊಬಲಗನ್ನು "ಎತ್ತಿ ಬರೆಯಲ್ಪಟ್ಟ ಬಾಕಿಯ ಕೆಳಗೆ ಮತ್ತು ಜುಲೈ ತಿಂಗಳಿನ ಜಮೆಗಳ ಮೇಲೆ" (ಫಲಾನೆ ತಾರೀಖಿನಲ್ಲಿ) ನಿಂತುಹೋದ ಲೆಕ್ಕದಿಂದ ಜಮಾ ಬಂದದ್ದು" ಎಂದು ಬಂದು ಪಂಕ್ತಿಯಲ್ಲಿ ತೋರಿಸಬೇಕು.

ಲೆಡ್ಜರಿನಲ್ಲಿ ಈ ಪ್ರಕಾರವಾಗಿ ಲೆಕ್ಕ ಷುರುವಾದ ಮೇಲೆ ಮಾಮೂಲ್ ನಿಬಂಧನೆಗಳ ಪ್ರಕಾರ ಸದರಿ ಮೊಬಲಗನ್ನು ಪೂರ್ತಿಯಾಗಿ ಆಗಲಿ ಅಥವಾ ಅದ್ಯಕಿ ಬಂದು ಭಾಗವನ್ನಾಗಲಿ ವಾಪಸ್ ಪಾವತಿ ಮಾಡಬಹುದು ಅಥವಾ ಖರ್ಜ ಲೆಕ್ಕವನ್ನೇ ಖೈದು ಮಾಡಬಹುದು.

ಸಾಲ್ವಾರು ಲೆಕ್ಕ ಮತ್ತು ವ್ಯವಸ್ಥೆ.

38. ಪ್ರತಿ ಸಾಲಾಖೈರಾದ ಆನಂತರ ಸಾಧ್ಯವಾದಷ್ಟು ಜಾಗ್ರತೆಯಾಗಿ ಸಾಲಿನ ಯಾವ ಭಾಗದಲ್ಲಿಡಲ್ಪಟ್ಟದ್ದಾಗಲಿ ಪ್ರತಿ ಡಿಪಾಜಿಟರ ಲೆಕ್ಕದ ಸ್ಥಿತಿಯನ್ನು ತೋರಿಸುವಂಥ (9ನೆ ನಮೂನೆಯ) ಬಂದು ತಖ್ತೆಯನ್ನು ಲೆಡ್ಜರ್ಮೇಲೆ ತಯಾರ್ಮಾಡಿ ಹಡ್ಮಾಫೀಸಿಗೆ ಕಳುಹಿಸತಕ್ಕದ್ದು.

ಪುರು ಬಾಕಿ, ಡಿಪಾಜಿಟ್ಟುಗಳು, ವಾಪಸ್ ಪಾವತಿಗಳು ಈ ಮುದ್ದುಗಳ ಜಮಾಗಳನ್ನು ಜರ್ನಲ್‌ಗಳ ಮೂಲಕ ತಾಳೆ ನೋಡಬೇಕು.

"ವಾಪಸ ಪಾವತಿಗಳು" ಎಂಬ ಹೆಡ್ಡಿನಲ್ಲಿ (34ನೆ ನಿಬಂಧನೆ ಪ್ರಕಾರ) ದಾಖಲಾಗುವ ಕಂಟ್ರೋಲರ ಆಫಿಸಿಗೆ ವರ್ಗವಾದ ನಿಂತುಹೋದ ಲೆಕ್ಕಗಳ ಖತಾಯಿತಿಗಳನ್ನೂ (37ನೆ ನಿಬಂಧನೆಯಂತೆ) ಅಂಥಾ ಲೆಕ್ಕಗಳನ್ನು ಪುನಃ ಬಹಲ ಇಟ್ಟ ಸಂದರ್ಭದ ಬಾಬತು "ಡಿಪಾಜಿಟ್ಟುಗಳು" ಎಂಬ ಹೆಡ್ಡಿನಲ್ಲಿ ಬರುವ ಖತಾಯಿತಿಗಳನ್ನೂ ಕೆಂಪು ಶಾಯಿಯಲ್ಲಿ ಬರೆಯಲ್ಪಟ್ಟ D ಎಂಬ ಅಕ್ಷರದಿಂದ ತೋರಿಸಬೇಕು.

39. ಮೇಲೆ ಕಂಡ ಈ ನಮೂನೆ ಲೆಕ್ಕವನ್ನು ಕಂಟ್ರೋಲರ ಆಫಿಸಿನಲ್ಲಿ ತನಿಖೆಯಿಂದ ಮಂಜೂರಾದ ನಂತರ ಸಲ್ಲಬೇಕಾದ ಬಡ್ಡಿಯನ್ನು ಕೊಡಬಹುದೆಂಬ ಹುಕುಂನಿಂದ ಡಿಸ್ಟ್ರಿಕ್ಟಿಗೆ ವಾಪಸ್ ಮಾಡತಕ್ಕದ್ದು. ಅನಂತರ ಸದರಿ ಬಡ್ಡಿಯನ್ನು ಡಿಪಾಜಿಟ್ಟುಗಳ ಜರ್ನಲಿನಲ್ಲಿ ದಾಖಲ್ಮಾಡಬೇಕು.

1. (24ನೆ ನಿಬಂಧನೆಯನ್ನು ನೋಡಿಕೊಂಡು) ಡಿಪಾಜಿಟಗಳ ಜರ್ನಲಿನಲ್ಲಿರುವ ಹಿಂದಿನ ಸಾಲಿನ ಬಾಕಿಗೆ ಬಡ್ಡಿಯ ಜುಮ್ಲಾ ಮೊಬಲಗನ್ನು ಒಟ್ಟಾಗಿ ಸೇರಿಸಬೇಕಲ್ಲದೆ ಪ್ರತಿ ಡಿಪಾಜಿಟ್ಟರ ಲೆಕ್ಕದಲ್ಲಿಯೂ ಇಸಂವಾರಾಗಿ ಅಂತೂ ಸೇರ್ಪಡಿಸಲೇಬೇಕು; ಆದರೆ ಅದನ್ನು ಕಂಟ್ರೋಲರಾಫಿಸಿಗೆ ರವಾನೆಯಾಗುವ ಮಾಹೇವಾರಿ ಲೆಕ್ಕಗಳಲ್ಲಿ ತೋರಿಸಕೂಡದು.

2. ಬ್ಯಾಂಕಿನಿಂದ ಸಂದ ಅಥವಾ ಬ್ಯಾಂಕಿಗೆ ದಾಖಲಾದ ಮೊಬಲಗುಗಳನ್ನು ಮಾತ್ರ ತೋರಿಸುವ ಟ್ರೆಜರಿ ಲೆಕ್ಕಗಳಲ್ಲಿ ಬಡ್ಡಿಗಾಗಿ ಖರ್ಚೇನು ಹಾಕಕೂಡದು. ಕಂಟ್ರೋಲರವರ ಬುಕ್ಕುಗಳಲ್ಲಿ ಅವಶ್ಯಕವಾದ ವ್ಯವಸ್ಥೆ ಮಾಡಿಕೊಳ್ಳಲ್ಪಡುವುದು.

ಲೆಕ್ಕಗಳ ವರ್ಗಾವರ್ಗಿಗಳು.

40. ಲೆಕ್ಕಗಳ ವರ್ಗಾವರ್ಗಿಗಳು ಬಂದು ಡಿಸ್ಟ್ರಿಕ್ಟು ಸೇವಿಂಗ್ಸ್ ಬ್ಯಾಂಕಿನಿಂದ ಮತ್ತೊಂದು ಡಿ|| ಸೇವಿಂಗ್ಸ್ ಬ್ಯಾಂಕಿಗೆ ಈ ಕೆಳಗಿನ ರೀತಿಯಲ್ಲಿ ಆಗಬಹುದು :—

(a) ಡಿಪಾಜಿಟರು ತಮ್ಮ ಪ್ಯಾಸ್ ಬುಕ್ಕನ್ನು ಖುದ್ದಾಗಿಯಾಗಲಿ ಅಥವಾ ಅರ್ಜಿ ಮೂಲಕವಾಗಿಯಾಗಲಿ ಒಪ್ಪಿಸಬೇಕು. ಆ ಪ್ಯಾಸ್ ಬುಕ್ಕಿನಲ್ಲಿ ದಾಖಲಾಗಿರುವ ಆಖೈರ್ ಖತಾಯಿತಿಗೆ ತರುವಾಯ ಸಂಗಡಲೇ ಈ ಕೆಳಗಿನ ಷರಾವನ್ನು ಟ್ರೆಜರಿ ಆಫಿಸರು ಟಿಪಾಯಿಸಬೇಕು: "..... ಲ್ಲಿರುವ ಸೇವಿಂಗ್ಸು ಬ್ಯಾಂಕಿಗೆ ವರ್ಗ ಮಾಡಲ್ಪಟ್ಟರುತ್ತದೆ." ಅವರು ಆ ಷರಾಕ್ಕೆ ರುಜು ಮಾಡಿ ತಮ್ಮ ವಾಪಸ್ ಪಾವತಿ ಲೆಕ್ಕದಲ್ಲಿಯೂ ಡಿಪಾಜಿಟ್ಟರ ಲೆಕ್ಕದಲ್ಲಿಯೂ ಅವಶ್ಯಕವಾದ ಖತಾಯಿತಿಗಳನ್ನು ಮಾಡಿಕೊಳ್ಳತಕ್ಕದ್ದು. ಆವರು ಚಾಲ್ತಿ ಸಾಲಿನ ಸದರಿ ಡಿಪಾಜಿಟರ ಲೆಕ್ಕದ ನಕಲಿನೊಂದಿಗೂ ಬಂದು ಪ್ರತ್ಯೇಕ ಕಾಗದದ ತುಂಡಿನಮೇಲೆ ತೆಗೆಯಲ್ಪಟ್ಟ ಅವನ ರುಜುವಿನೊಂದಿಗೂ, ಅಥವಾ (ಡಿಪಾಜಿಟರು ಖುದ್ದು ಹಾಜರಾಗಿದ್ದರೆ ಅಥವಾ ಇಲ್ಲದಿದ್ದರೆ ಆಯಾಯ ಸಂದರ್ಭಾನುಸಾರವಾಗಿ) ಅವನ ಅಸಲ ಅರ್ಜಿಯೊಂದಿಗೂ, ಲೆಕ್ಕ ವರ್ಗ ಮಾಡಲ್ಪಟ್ಟ ಬ್ಯಾಂಕಿಗೆ ಬಂದು ಅಡ್ವೈಸ್ ಮೂಲಕ ವರ್ತಮಾನ ಕೊಟ್ಟು ತಾವು ಕಂಟ್ರೋಲರ ಆಫಿಸಿಗೆ ಕಳುಹಿಸು ವಾಪಸ್ ಪಾವತಿ ತಖ್ತೆ ಮೇಲೆ ವರ್ಗವಾದ ಸಂಗತಿಯನ್ನೂ ಯಾವ ಬ್ಯಾಂಕಿಗೆ ವರ್ಗ ಮಾಡಲ್ಪಟ್ಟತೋ ಅದರ ಹೆಸರನ್ನೂ ಟಿಪಾಯಿಸಬೇಕು. (8ನೆ ನಮೂನೆ ಮೇರೆ) ವರ್ಗದ ವರ್ತಮಾನ (ಅಡ್ವೈಸ್) ತಲಪಿದ ಕೂಡಲೆ ಅದನ್ನು ಖರಮಾಡಿಕೊಳ್ಳುವ ಬ್ಯಾಂಕಿನವರು ತಮ್ಮ ಸೇವಿಂಗ್ಸ್ ಬ್ಯಾಂಕ್ ಬುಕ್ಕುಗಳಲ್ಲಿ ಪ್ಯಾಸ್ ಬುಕ್ಕಿಗಾಗೇನೂ ಛಾರ್ಜ ಮಾಡದೆ ಲೆಕ್ಕವನ್ನಿಡಬೇಕು; ಮತ್ತು ತಾವು ಕಂಟ್ರೋಲರ ಆಫಿಸಿಗೆ ಕಳುಹಿಸುವ ಡಿಪಾಜಿಟ್ ತಖ್ತೆಗೆ ಸದರಿ ಅಡ್ವೈಸನ್ನು ಲಗತ್ಮಾಡಬೇಕು. ವರ್ಗ ತೆಗೆದುಕೊಳ್ಳುವ ಬ್ಯಾಂಕಿನವರು ವರ್ಗಾಯಿಸಲ್ಪಟ್ಟ ಮೊಬಲಗಿನ ಮೇಲೆ ವರ್ಗ ಕೊಟ್ಟ ಬ್ಯಾಂಕಿನಲ್ಲಿ ಸಲ್ಲಬೇಕಾಗಿರಬಹುದಾದ ಕಾಲಕ್ಕೆ ಬಡ್ಡಿಯನ್ನು ದಾಖಲ್ಮಾಡಬೇಕು.

(b) ಬಂದು ಸರ್ಕಾರಿ ಸಾಲಿನಲ್ಲಿ ಇಡಲ್ಪಡುವ ಡಿಪಾಜಿಟ್ಟುಗಳಿಗಾಗಿ ಗವರ್ನ್ಮೆಂಟಿನವರು ಗೊತ್ತು ಮಾಡಿರುವ 2,000 ರೂಪಾಯಿಗಳ ಕ್ಲುಪ್ತಿಯನ್ನು ಲೆಕ್ಕಾಚಾರ ಮಾಡುವುದರಲ್ಲಿ ಮೇಲ್ಕಂಡಂತೆ ವರ್ಗ ಬಂದ ಮೊಬಲಗಿನ ಪೈಕಿ ಹಿಂದಿನ ಸಾಲಿನಲ್ಲಿ ಇಡಲ್ಪಟ್ಟ ಡಿಪಾಜಿಟ್ಟುಗಳ ಬಾಬತಿನದು ಎಷ್ಟೋ ಅಷ್ಟನ್ನು ವಜಾ ಮಾಡಬೇಕು. ಆದರೆ ಚಾಲ್ತಿ ಸಾಲಿನಲ್ಲಿ ಇಡಲ್ಪಟ್ಟ ಡಿಪಾಜಿಟಗಳನ್ನು ವಜಾ ಮಾಡಕೂಡದು.

40A. ಒಬ್ಬ ಡಿಪಾಜಿಟರ ಲೆಕ್ಕವು ಒಂದು ಡಿಸ್ಟ್ರಿಕ್ಟು ಟ್ರೆಜರಿಯಿಂದ ಮತ್ತೊಂದಕ್ಕೆ ಅಥವಾ ಒಂದು ತಾಲ್ಲೂಕು ಟ್ರೆಜರಿಯಿಂದ ಮತ್ತೊಂದಕ್ಕೆ ವರ್ಗ ಮಾಡಲ್ಪಟ್ಟಾಗ, ವರ್ಗ ತೆಗೆದುಕೊಳ್ಳುವ ಟ್ರೆಜರಿಯಲ್ಲಿ ಅದನ್ನು ಒಂದು ಹೊಸ ಲೆಕ್ಕವಾಗಿ ಭಾವಿಸಿ ಆ ಲೆಕ್ಕದ ಪೂರ್ವದ ನಂಬರನ್ನು ಹೊಡೆದುಹಾಕಿ ಸೇವಿಂಗ್ಸ್ ಬ್ಯಾಂಕ್ ಲೆಡ್ಜರಿನಲ್ಲಿಯೂ ಪ್ಯಾಸ್ ಬುಕ್ಕಿನಲ್ಲಿಯೂ ಅದಕ್ಕೆ ಒಂದು ಹೊಸ ನಂಬರನ್ನು ಕೊಡತಕ್ಕದ್ದು.

(a) ಡಿಸ್ಟ್ರಿಕ್ಟು ಟ್ರೆಜರಿ ಆಫಿಸರ ಹುಕುಂ ಅದ ಹೊರತು ಒಂದೇ ಡಿಸ್ಟ್ರಿಕ್ಟಿನಲ್ಲಿ ಒಂದು ತಾಲ್ಲೂಕಿನಿಂದ ಮತ್ತೊಂದಕ್ಕೆ ಯಾವ ಸೇವಿಂಗ್ಸ್ ಬ್ಯಾಂಕ್ ಲೆಕ್ಕವನ್ನೂ ವರ್ಗ ಮಾಡಕೂಡದು.

(b) ಡಿಪಾಜಿಟ್ಟು ಹಾಲಿ ಇರುವ ತಾಲ್ಲೂಕಿನ (A) ಅಮಲ್‌ದಾರ್ರಿಗೆ ತಾನು ಯಾವ (B) ತಾಲ್ಲೂಕಿಗೆ ಅದನ್ನು ವರ್ಗ ಮಾಡಬೇಕೆಂದು ಅಪೇಕ್ಷಿಸುತ್ತಾನೆಯೋ ಅದನ್ನು ನಮೂದು ಮಾಡಿ ಒಂದು ಅರ್ಜಿಯ ನಿಸಿ ಡಿಪಾಜಿಟರು ತನ್ನ ಪ್ಯಾಸ್ ಬುಕ್ಕನ್ನು ಒಪ್ಪಿಸಿ ಬಿಡಬೇಕು. (A) ಅಮಲ್‌ದಾರ್ರು ಸದರಿ ಅರ್ಜಿಯನ್ನೂ ಪ್ಯಾಸ್ ಬುಕ್ಕನ್ನೂ ಸಹ ತಮ್ಮ ಡಿಸ್ಟ್ರಿಕ್ಟಿನ ಟ್ರೆಜರಿ ಆಫಿಸರಿಗೆ ಕಳುಹಿಸಿ ಅವರು ಸದರಿ ಪ್ಯಾಸ್ ಬುಕ್ಕಿನಲ್ಲಿ ಬಾರಾಗಿರುವ ಆಖೈರ್ ಖತಾಯಿತಿಗೆ ತರುವಾಯ ಸಲ್ಲಬೇಕಾದ ಬಾಕಿ ಮೊಬಲಗನ್ನು ದಾಖಲ್ಮಾಡಿ "............ಲ್ಲಿರುವ ತಾಲ್ಲೂಕು ಟ್ರೆಜರಿಗೆ ವರ್ಗ ಮಾಡಲ್ಪಟ್ಟಿದೆ" ಎಂದು ಷರಾ ಬರೆದು ರುಜು ಮಾಡಿ ಐರ್ಜ ಲೆಕ್ಕವನ್ನು ಖೈದ್ಮಾಡಬೇಕು. ಆ ಮೇಲೆ ಟ್ರೆಜರಿ ಆಫಿಸರು ಡಿಪಾಜಿಟರ ಅರ್ಜಿಯನ್ನೂ ಪ್ಯಾಸ್ ಬುಕ್ಕನ್ನೂ ಸಹ (B) ಅಮಲ್‌ದಾರ್ರಿಗೆ ಕಳುಹಿಸಿ ಡಿಪಾಜಿಟರ ಹೆಸರಿನಲ್ಲಿ (ಒಂದು ಹೊಸ ನಂಬರು ನಿಸಿ) ಒಂದು ಲೆಕ್ಕವನ್ನು ಇಟ್ಟು ಅದರಲ್ಲಿ ಸದರಿ ಪ್ಯಾಸ್ ಬುಕ್ಕಿನಿಂದ ಸಾಲ್ ಗುಜಷ್ತಾ ಆಖೈರಿನ ಬಾಕಿಯನ್ನೂ ಸಾಲ್ಮಜಕೂರಿಗೆ ಜಮಾ ಖತಾಯಿತಿಗಳನ್ನೂ ಮತ್ತು ವಾಪಸ್ ಪಾವತಿ ಮೊಬಲಗುಗಳನ್ನೂ ನಕಲ್ಮಾಡುವ ಹಾಗೂ, ಲೆಡ್ಜರಿನಲ್ಲೂ ಆ ರೋಜಿನ ತಾಲ್ಲೂಕು C ಲೆಕ್ಕದಲ್ಲೂ (A) ಯಿಂದ ವರ್ಗ ಬಂದ ಸೇವಿಂಗ್ಸು ಬ್ಯಾಂಕು ಡಿಪಾಜಿಟೆಂದು ವರ್ಗಕೊಟ್ಟ ಬಾಕಿಯನ್ನು ಡಿಪಾಜಿಟರಿಗೆ ಜಮೆ ಹಿಡಿಯಬೇಕಲ್ಲದೆ C ಲೆಕ್ಕದ ಮತ್ತೊಂದು ಭಾಗದಲ್ಲಿ ತಾಲ್ಲೂಕು ರಿಮಿಟೆನ್ಸಿಗಳ ಕೆಳಗೆ ಖರ್ಚ್ಮಾಡುವ ಹಾಗೂ ಅಪ್ಪಣೆ ಮಾಡಬೇಕು. ಡಿಪಾಜಿಟರು ಕೇಳಿಕೊಂಡಾಗ ವರ್ಗ ತೆಗೆದುಕೊಂಡ ತಾಲ್ಲೂಕು ಟ್ರೆಜರಿ (B) ಯವರು ಪ್ಯಾಸ್ ಬುಕ್ಕನ್ನು ಅವನಿಗೆ ಕೊಡಬೇಕು.

(c) ವರ್ಗ ಕೊಡುವ (A) ಅಮಲ್‌ದಾರ್ರು ಬಾಕಿ ಮೊಬಲಗನ್ನು ತಮ್ಮ C ಲೆಕ್ಕದಲ್ಲಿ (ವರ್ಗ ಮಾಡಲ್ಪಟ್ಟ) ಸೇವಿಂಗ್ಸು ಬ್ಯಾಂಕು ಡಿಪಾಜಿಟ್ಟುಗಳ ಕೆಳಗೆ ದಾಖಲ್ಮಾಡಿ ತಾಲ್ಲೂಕು ರಿಮಿಟೆನ್ಸಿಗಳ ಕೆಳಗೆ ಜಮೆ ಹಿಡಿದು, ಡಿಪಾಜಿಟರನ್ನು ಅವನ ಪ್ಯಾಸ್ ಬುಕ್ಕಿಗಾಗಿ ವರ್ಗ ತೆಗೆದುಕೊಂಡ (B) ಅಮಲ್‌ದಾರ್ರ ಬಳಿ ಹೋಗಹೇಳಬೇಕೆಂದು ಸಹ ಡಿಸ್ಟ್ರಿಕ್ಟು ಟ್ರೆಜರಿ ಆಫಿಸರ್ರು ಹುಕುಂ ಕೊಡಬೇಕು.

(d) ಒಂದು ಡಿಸ್ಟ್ರಿಕ್ಟಿನಲ್ಲಿರುವ ಒಂದು ತಾಲ್ಲೂಕಿನಿಂದ ಮತ್ತೊಂದು ಡಿಸ್ಟ್ರಿಕ್ಟಿನಲ್ಲಿರುವ ಒಂದು ತಾಲ್ಲೂಕಿಗೆ ವರ್ಗ ಖಾಯಿಷ್ಮಾಡಲ್ಪಟ್ಟಾಗ, ವರ್ಗ ಮಾಡುವ (A) ಅಮಲ್‌ದಾರ್ರು ಡಿಪಾಜಿಟರ ಅರ್ಜಿಯನ್ನು ಪ್ಯಾಸ್ ಬುಕ್ಕು ಸಹಿತ ಡಿಸ್ಟ್ರಿಕ್ಟು ಟ್ರೆಜರಿಗೆ ಕಳುಹಿಸಬೇಕು. ಅವರು ಸದರಿ ಬಾಕಿಯನ್ನು ತಾಲ್ಲೂಕು ರಿಮಿಟೆನ್ಸಿಗಳ ಕೆಳಗೆ ಖರ್ಚು ಹಾಕಿ, ಮೊಬಲಗನ್ನು ಒಂದು "ಪಬ್ಲಿಕ್ ಸರ್ವಿಸ್ ಟ್ರಾನ್ಸ್‌ಫರ್ ರಸೀದಿ" ಮೂಲಕವಾಗಿ ಪ್ಯಾಸ್ ಬುಕ್ಕು ಸಮೇತ ಐರ್ಜ ಇತರ ಡಿಸ್ಟ್ರಿಕ್ಟು ಟ್ರೆಜರಿಗೆ ಕಳುಹಿಸಬೇಕು. ಇವರು ಮುಂದಕ್ಕೆ ಅವುಗಳನ್ನು ವರ್ಗ ತೆಗೆದುಕೊಳ್ಳಬೇಕಾದ (B) ತಾಲ್ಲೂಕಿಗೆ ಕಳುಹಿಸಿಕೊಡಬೇಕು. ಉಭಯ (A) ಮತ್ತು (B) ತಾಲ್ಲೂಕು ಅಮಲ್‌ದಾರ್ರುಗಳು ಮೇಲೆ ವಿಧಿಸಲ್ಪಟ್ಟಿರುವಂತೆ ಅವರ C ಲೆಕ್ಕಗಳಲ್ಲಿಯೂ ಸೇವಿಂಗ್ಸ್ ಬ್ಯಾಂಕು ಲೆಡ್ಜರುಗಳಲ್ಲಿಯೂ ಅವಶ್ಯಕವಾದ ಖತಾಯಿತಿಗಳನ್ನು ಮಾಡಿಕೊಳ್ಳಬೇಕೆಂದು ಆಯಾ ಡಿಸ್ಟ್ರಿಕ್ಟು ಟ್ರೆಜರಿಗಳಿಂದ ಹುಕುಂಗಳನ್ನು ಕೊಡಬೇಕು.

(e) ದಾಖಲೆಗೆ ಅನುಕೂಲವಾಗಿರುವುದಕ್ಕೋಸ್ಕರ ಡಿಸ್ಟ್ರಿಕ್ಟಿನ ಒಟ್ಟು ಲೆಡ್ಜರಿನಲ್ಲಿ ಬಾರಾಗಿರುವ ಎಲ್ಲಾ ಡಿಪಾಜಿಟರುಗಳ ಹೆಸರುಗಳ ಬಗೆ ಒಂದು ಅಕ್ಷರಾನುಕ್ರಮವಾದ ಇಂಡೆಕ್ಸನ್ನು ಡಿಸ್ಟ್ರಿಕ್ಟು ಟ್ರೆಜರಿಗಳಲ್ಲಿ ಇಡಬೇಕು. ಪ್ರತಿ ತಾಲ್ಲೂಕಿನ ವಹಿಗಳಲ್ಲಿ ಬಾರಾಗಿರುವ ಡಿಪಾಜಿಟರುಗಳ ಹೆಸರುಗಳು ಹೇರಳವಾಗಿದ್ದರೆ ಅಲ್ಲಿಯೂ ಇಂಥಾ ಇಂಡೆಕ್ಸು ಒಂದನ್ನು ಇಡಬೇಕು.

1. ಒಬ್ಬ ಡಿಪಾಜಿಟರು ತನ್ನ ಲೆಕ್ಕವನ್ನು ಬಗರು ಲಾಗವಡು ಯಾವ ಡಿಸ್ಟ್ರಿಕ್ಟು ಅಥವಾ ತಾಲ್ಲೂಕು ಸೇವಿಂಗ್ಸು ಬ್ಯಾಂಕಿಗಾದರೂ ವರ್ಗ ಮಾಡಿಸಿಕೊಳ್ಳಬಹುದು; ಪರಂತು ಸದರಿ ಲೆಕ್ಕ ಹಾಗೆ ವರ್ಗವಾಗುವ ತಾರೀಖಿಗೆ ಪೂರ್ವ ಮೂರು ತಿಂಗಳ ತನಕ ಜಾರಿಯಲ್ಲಿ ಇದ್ದಿರಬೇಕು.
2. ಜೂನ್ 15ನೆ ತಾರೀಖಿಗೆ ತರುವಾಯ ಆಖೈರ ವರೆಗಿನ ಆ ತಿಂಗಳಿನ ಎರಡನೆ ಭಾಗದಲ್ಲಿ ಒಂದು ಡಿಸ್ಟ್ರಿಕ್ಟು ಅಥವಾ ತಾಲ್ಲೂಕಿನಿಂದ ಮತ್ತೊಂದಕ್ಕೆ ಯಾವ ವರ್ಗವನ್ನೂ ಮಾಡಕೂಡದು.
3. ವರ್ಗ ಮೂಲಕವಾಗಿ ಬಂದ ಮೊಬಲಗು ಸೇವಿಂಗ್ಸು ಬ್ಯಾಂಕಿನ ಜರ್ನಲ್‌ಗಳಲ್ಲಿ ದಾಖಲಾಗಬೇಕು.

ಡಿಪಾಜಿಟರುಗಳ ಮರಣ, ಮದುವೆ, ಚಿಕ್ಕತನ ಮತ್ತು ಚಿತ್ತವಿಭ್ರಮ.

41. ಡಿಪಾಜಿಟರುಗಳ ಮರಣ, (ಹೆಂಗಸರ) ಮದುವೆ, ಚಿಕ್ಕತನ ಮತ್ತು ಚಿತ್ತವಿಭ್ರಮ ಈ ಸಂದರ್ಭಗಳಲ್ಲಿ ಹೇಗೆ ಮಾಡಬೇಕೆಂಬುದನ್ನ ಕುರಿತು 1873ನೆ ಇಸವಿಯ Vನೆ ನಂಬರ ಆಕ್ಟಿನಲ್ಲಿ ಹೇಳಿರುತ್ತದೆ. ಮೈನರ್‌ಗಳ ಬಗೆ ನಿಬಂಧನೆಯೂ ಕೂಡ 15 ಮತ್ತು 16ನೆ ನಿಬಂಧನೆಗಳಲ್ಲಿಯೂ ಹೇಳಲ್ಪಟ್ಟಿರುತ್ತದೆ.

42. ಮೃತಪಟ್ಟ ಒಬ್ಬ ಡಿಪಾಜಿಟರ ಆಸ್ತಿಗೆ ಸೇರಿದ ಒಂದು ಡಿಪಾಜಿಟ್ ವಾಪಸ್ ಪಾವತಿ ಮಾಡಲ್ಪಟ್ಟಾಗ, ಅವನ ಅಥವಾ ಅವಳ ಆಸ್ತಿಗಾಗಿ ಮೃತಪಟ್ಟ ಡಿಪಾಜಿಟರ ವಿಲ್ಲಿನ ಪ್ರೊಬೇಟಾಗಲಿ, ಲೆಟರ್ಸ್ ಆಫ್ ಅಡ್ಮಿನಿಸ್ಟ್ರೇಷನ್ನಾಗಲಿ, ಅಥವಾ ಐರ್ಜ ಹಣವನ್ನು ವಾಪಸ್ ಪಡೆಯುವವನ ಪರವಾಗಿ 1860ನೆ ಇಸವಿಯ XXVIIನೆ ಆಕ್ಟು ಪ್ರಕಾರ ಕೊಡಲ್ಪಟ್ಟ ಸರ್ಟಿಫಿಕೇಟಾಗಲಿ ತಮ್ಮ ರೂಬರೂ ಹಾಜರ್ಮಾಡಲ್ಪಟ್ಟಿರುವುದಿಲ್ಲವೆಂಬ ಅಭಿಪ್ರಾಯ ಕಂಡು ಟ್ರೆಜರಿ ಆಫಿಸರಿಂದ ಒಂದು ಸರ್ಟಿಫಿಕೇಟ್ ವಾಪಸ್ ಪಾವತಿಗಳ ಪಟ್ಟಿಗೆ ಬಲೀಯುವಾಗಿ ಲಗತ್ತಿರಬೇಕು.

ಮೃತಪಟ್ಟ ಡಿಪಾಜಿಟರುಗಳ ಆಸ್ತಿಗಳ ವಿಷಯದಲ್ಲಿ ನಡೆಯಬೇಕಾದ ಆಡಳಿತಗಳಿಗೋಸ್ಕರವಾಗಿ ಬೇಕಾದ, 1873ನೆ ಇಸವಿ Vನೆ ಆಕ್ಟ್ (ಸೇವಿಂಗ್ಸ್ ಬ್ಯಾಂಕು ಆಕ್ಟು) ನ 8ನೆ ಪ್ರಕರಣಾನುಸಾರವಾದ ಸರ್ಟಿಫಿಕೇಟಿಗಾಗಿ ನಮೂನೆಯು ವಿಧಿಸಲ್ಪಟ್ಟಿರುತ್ತದೆ.

43. ಒಬ್ಬ ಡಿಪಾಜಿಟರು ಕನ್ನಿಕೆಯಾಗಿದ್ದು ಮದುವೆ ಆದಮೇಲೆ ತನ್ನ ಹೆಸರನ್ನು ಬದಲಾಯಿಸಿದಾಗ, ಅಂಥಾ ಹೆಸರನ್ನು ಲೆಡ್ಜರಿನಲ್ಲಿ ಬದಲಾಯಿಸಿ ಟ್ರೆಜರಿ ಆಫಿಸರ ಚಿಕ್ಕ ರುಜು ಮಾಡಿಸಬೇಕು, ಮತ್ತು ಹೊಸ ಹೆಸರಿನೊಂದಿಗೆ ರುಜು ಮಾಡಲ್ಪಟ್ಟ ಒಂದು ಹೊಸ ಕಾರ್ಡನ್ನು ರಿಕಾರ್ಡ್ ಬಗ್ಯೆ ಕಂಟ್ರೋಲರ ಆಫಿಸಿಗೆ ಕಳುಹಿಸಬೇಕಲ್ಲದೆ ಅದರ ಹಿಂಭಾಗದಲ್ಲಿ ಹಾಗೆ ಮಾಡುವುದಕ್ಕೋಸ್ಕರ ಉಂಟಾದ ಕಾರಣವನ್ನು ಕಾಣಿಸಿ (ಟ್ರೆಜರಿ ಆಫಿಸರ ದಸ್ತಖತ್ತಿನಿಂದ) ಒಂದು ಷರಾ ಆಗಬೇಕು.

ವಿವಿಧ ವಿಷಯ.

44. ಸೇವಿಂಗ್ಸ್ ಬ್ಯಾಂಕು ನಮೂನೆಗಳಲ್ಲಿಯೂ ಲೆಕ್ಕಗಳಲ್ಲಿಯೂ ಡಿಪಾಜಿಟಿಗಳ ಬಗೆ ಜಮೆಗಳು ಮತ್ತು ವಾಪಸ್ ಪಾವತಿಗಳು ಮಾತ್ರ ದಾಖಲ್ಮಾಡಲ್ಪಡಬೇಕು; ಇತರ ರಖಂಗಳು, ಎಂದರೆ ಹೊಸ ಬುಕ್ಕುಗಳನ್ನು ಅಪೇಕ್ಷಿಸುವ ಡಿಪಾಜಿಟರುಗಳಿಗೆ ಬ್ಯಾಂಕು ಪ್ಯಾಸ್ ಬುಕ್ಕುಗಳ ಮಾರಾಟದ ಹುಟ್ಟುವಳಿ ಮುಂತಾದುದನ್ನು ಜಮಾ ಬಾಬಿನ ಪಟ್ಟಿಯ ಕೊನೆಯಲ್ಲಿ ಜಾಮ್ಲಾ ಕೆಳಗೆ ಪ್ರತ್ಯೇಕವಾಗಿ ಟಿಪ್ಪಾಯಿಸಬೇಕು. ಅಂಥಾ ರಖಂಗಳನ್ನೂ ಕೂಡ ಜಮೆಗೆ (ಚಿಲ್ಲರೆ ಹುಟ್ಟುವಳಿಗೆ) ದಾಖಲಾಗುವುದಕ್ಕೋಸ್ಕರ ಟ್ರೆಜರಿಗೆ ಪ್ರತ್ಯೇಕವಾಗಿ ಪಾವತಿಮಾಡಿಬಿಡಬೇಕೇ ಹೊರತು ಸೇವಿಂಗ್ಸ್ ಬ್ಯಾಂಕಿನ ಲೆಕ್ಕಗಳೊಂದಿಗೆ ಮಿಶ್ರ ಮಾಡಲಾಗದು.

45. ದುಬಾರೆಯಾಗಿ ಪಾವತಿಯಾದ ಮೊಬಲಗುಗಳ ವಸೂಲಿಯು ಜರ್ನಲ್‌ನಲ್ಲಿಯೂ ಲೆಡ್ಜರಿನಲ್ಲಿಯೂ ಡಿಪಾಜಿಟಿಗಳ ಮಾಹೇವಾರಿ ಪಟ್ಟಿಯಲ್ಲಿಯೂ ದಾಖಲಾಗಬೇಕು.

46. ಯಾವ ಬಗ್ಯಾಗಿ ಛಾಪಾ ನಮೂನೆಗಳನ್ನು ಒದಗಿಸಿಕೊಟ್ಟಿದೆಯೋ ಆ ಬಗ್ಯೆ ಛಾಪಾ ನಮೂನೆಗಳನ್ನು ಹೊರತು ಇತರ ನಮೂನೆಗಳನ್ನು ಉಪಯೋಗಿಸಕೂಡದು.

ಉಪಭಾಗ A.

ಡಿಪಾಜಿಟರುಗಳ ತರಗತಿ ವಿಂಗಡ.

ಜನಗಳ ಸ್ಥಿತಿಗತಿ ಸಂಬಂಧವಾದ ತಪಶೀಲಗಳು ಗೊತ್ತಾಗುವುದಕ್ಕೋಸ್ಕರ ಡಿಪಾಜಿಟರುಗಳ ತರಗತಿ ವಿಂಗಡವನ್ನು ಇಂಡೆಕ್ಸ್ ಚೀಟಿಗಳ ಮೇಲೆ ನಮೂದಿರುವಂತೆ ಕಸಬಿನ ಪ್ರಕಾರ ಹೆಡ್ಡಾಫಿಸಿನಲ್ಲಿ ಮಾಡಬೇಕು. ಸದರಿ ವಿಚಾರದಲ್ಲಿ ಅನುಸರಿಸಬೇಕಾದ ವಿಭಾಗದ ವಿವರವನ್ನು ಇದರಡಿ ಕಾಣಿಸಿರುತ್ತದೆ.

ಸರ್ಕಾರದ ನೌಕರಿ ಅಥವಾ ಸಂಬಳದಲ್ಲಿರುವ ಎಲ್ಲಾ ಜನಗಳು ಪ್ರತ್ಯೇಕವಾಗಿ ಗೊತ್ತಾಗುವುದಕ್ಕೋಸ್ಕರ ಅವರ ಕಸಬಿನ ವಿವರಣೆಗೆ ಅನಂತರ "ಸರ್ಕಾರಿ" ಎಂಬ ಮಾತು ನಮೂದಾಗಬೇಕು.

1ನೆ ತರಗತಿ—ಕಸಬಿಗೆ ಸಂಬಂಧಪಟ್ಟದ್ದು.

(a) ಖಾಯಂ ಆದಾಯವುಳ್ಳವರು.

ಲಿಖಾವಟ್ಟಿನವರು ಮತ್ತು ಮೇಲ್ಪಟ್ಟ ಸರ್ಕಾರ ನೌಕರರು.

ಖಾಸ್ ನೌಕರಿಯಲ್ಲಿರುವ ಲಿಖಾವಟ್ಟಿನವರು.

ಮತಗುರುಗಳು.

ವಿದ್ಯಾಭ್ಯಾಸದಲ್ಲಿ ಉದ್ಯುಕ್ತರಾಗಿರುವ ಜನಗಳು.

(b) ಹೆಚ್ಚು ಕಮ್ಮಿಯಾಗುವ ಆದಾಯ ಉಳ್ಳವರು.

ಕಾಯಿದೆ ಕಾನೂನಿಗೆ ಸಂಬಂಧಪಟ್ಟವರು.

ವೈದ್ಯಗಾರಿಕೆಯವರು.

ಇಂಜನಿಯರಿನ ಕೆಲಸಗಳಿಗೆ ಸಂಬಂಧಿಸಿದವರು, ವಗೈರೆ—

IIನೆ ತರಗತಿ—ಗೃಹಕೃತ್ಯ ಸಂಬಂಧವಾದುದು.

ಗೊತ್ತಾದ ಸಂಬಳಕ್ಕೆ ಅಥವಾ ಕೂಲಿಗೆ ಕಸಬಿದಾರಿ ಸಂಬಂಧವಲ್ಲದ ಉದ್ಯೋಗದಲ್ಲಿರುವ ಜನಗಳು. ದೇಖೀಲ್ ಮನೆ ಚಾಕರವಾನರು.

ಪೋಲೀಸಿನವರು.

I ಅಥವಾ Vನೆ ತರಗತಿಗೆ ಸೇರದ ರೈಲ್ವೆ ನೌಕರರು.

ಮನೆ ಕೆಲಸದ ಚಾಕರರಲ್ಲದ ಕೀಳು ಸೇವಾವೃತ್ತಿಯವರು.

ಸೋಲ್ಜರುಗಳು.

IIIನೆ ತರಗತಿ ವ್ಯಾಪಾರ ಸಂಬಂಧವಾದುದು.

ಗೊತ್ತಾದ ಸಂಬಳ ಅಥವಾ ಕೂಲಿಯನ್ನು ಬರಮಾಡಿಕೊಳ್ಳದೆ ವ್ಯಾಪಾರದಲ್ಲಿ ಉದ್ಯುಕ್ತರಾಗಿರುವ ಎಲ್ಲಾ ಜನಗಳು.

IVನೆ ತರಗತಿ ವ್ಯವಸಾಯಸಂಬಂಧವಾದುದು.

ಸಾಕ್ಷಾತ್ತಾಗಿ ವ್ಯವಸಾಯದಿಂದ ಜೀವನ ಮಾಡುವ (ಖಾಯಂ ಆದಾಯಗಳಿಲ್ಲದ) ಜರಾಯತ್ತುದಾರರು ವಗೈರೇರು.

Vನೆ ತರಗತಿ—ಕೈಗಾರಿಕೆ ಕೆಲಸ ಸಂಬಂಧವಾದುದು.

ಎಲ್ಲಾ ತರಹೆಗಳ ಶಿಲ್ಪಗಾರರು ಮತ್ತು ಕೈವಾಡದವರು.
ಚಕ್ಕಡಾಭಂಡಿಯವರು.
ಅಂಬಿಗರು.
ಬೆಸ್ತರು.
ಅಗಸರು.
ನಾಯಿಂದರು.
ದಾದಿಗಳು.
ಕೂಲಿಯವರು ವಗೈರೆ.

VIನೆ ತರಗತಿ—ಕೆಲಸ ಗೊತ್ತಿಲ್ಲದ ಸಂಬಂಧ ಅಥವಾ ಫಲವತ್ತಾಗಿಲ್ಲದ್ದು.

ಜಹಗೀರ್, ಮನೆಗಳು, ಅಂಗಡಿಗಳು ವಗೈರೆಗಳ ಬಾಡಿಗೆ ಯಿಂದ ಜೀವನ ಮಾಡುವವರು.
ಸ್ವತಂತ್ರ ಬಂಡವಾಳಸ್ಥರಾದ ಇತರ ಜನಗಳು.
ಪೆನ್ಷನ್‌ದಾರರು.
ಮೈನರುಗಳು.
ಮದುವೆಯಾದ ಹೆಂಗಸರು.
ಮದುವೆಯಿಲ್ಲದ ಹೆಂಗಸರು.
ವಿಧವೆಯರು.

ಉಪಭಾಗ B.

ಟ್ರೆಜರಿ ಆಫಿಸರಿಗಾಗಿ ವಿಧಿಸಿರುವ ನಿಯಾಮಕಗಳ ಯಾದಾಸ್ತು.

ಟ್ರೆಜರಿ ಆಫಿಸರು ಏನುಮಾಡಬೇಕೆಂಬುದು.

1. ಲೆಡ್ಜರಿನಮೇಲೆ ಜಾಗರೂಕವಾದ ನಿಗಾಯಿಟ್ಟು ಅದಕ್ಕೂ ಪ್ಯಾಸ್ ಬುಕ್ಕುಗಳಿಗೂ ತಾಳೆ ಇರುವುದನ್ನು ನೋಡಿಕೊಳ್ಳಬೇಕು.

2. ಸೇವಿಂಗ್ಸ್ ಬ್ಯಾಂಕು ನಮೂನೆಗಳಲ್ಲಿರುವ ಎಲ್ಲಾ ಖಾಲಿ ಜಾಗಗಳು ಭರ್ತಿಯಾದುದನ್ನು ನೋಡಿಕೊಳ್ಳಬೇಕು.

ಬಳ್ಳಿ ಟ್ರೆಜರಿ ಆಫಿಸರು ಏನನ್ನು ಮಾಡಬಾರದು ಎಂಬುದು.

3. ಮಾಹೇವಾರಿ ಲೆಕ್ಕಗಳ ರವಾನೆಯಲ್ಲಿ ಒಂದುದಿನದ ಕಾಲವಿಳಂಬವನ್ನು ಕೂಡ ಆಗಲೀಸಬಾರದು.

4. ಒಂದು ಲೆಕ್ಕದಲ್ಲಿ ಆಗಿರುವ ತಿದ್ದುಪಾಟುಗಳಿಗೆ ರುಜುವಿಲ್ಲನೆಯಾಗಲಿ ಲೆಕ್ಕದ ನಮೂನೆಯನ್ನು ಬದಾಯಿಸುವುದಕ್ಕೋಸ್ಕರ ಅದಕ್ಕೆ ಕಾಗದವನ್ನಂಟಿಸಿಯಾಗಲಿ ರವಾನೆ ಮಾಡಿಸಕೂಡದು.

5. ಡಿಪಾಜಿಟ್ ದಾಖಲ್ಮಾಡಿಕೊಳ್ಳುವುದರಲ್ಲಿ ಇಡೀ ರೂಪಾಯಿಗಳ ಶಿವಾಯಿ ಚಿಲ್ರೆಯನ್ನು ತೆಗೆದುಕೊಳ್ಳಕೂಡದು.

6. ಕೈದಾದ ಲೆಕ್ಕಗಳಮೇಲೆ ಹೊರೆತು ಚಾಲ್ತಿ ಸಾಲಿಗೆ ಬಡ್ಡಿ ಕೊಡಕೂಡದು.

7. ಪ್ಯಾಸ್ ಬುಕ್ಕುಗಳ ಖರೀದಿಯ ಮೊಬಲಗನ್ನು ಸೇವಿಂಗ್ಸ್ ಬ್ಯಾಂಕು ಲೆಕ್ಕಕ್ಕೆ ಸೇರಿಸುವುದಕ್ಕಾಗಲಿ, ಸಾಲಿಯಾನಾ ಬಡ್ಡಿಯ ಜಮೆಯನ್ನು ಟ್ರೆಜರಿ ಲೆಕ್ಕಗಳಿಗೆ ತರುವುದಕ್ಕಾಗಲಿ ಅಸ್ಪದ ಕೊಡಕೂಡದು.

ಸೇವಿಂಗ್ಸ್ ಬ್ಯಾಂಕು ಕೆಲಸದ ಛಾರ್ಜಿನಲ್ಲಿರುವ ಟ್ರೆಜರಿ ಕ್ಲರ್ಕು ಖಚಿತವಾಗಿ ತಿಳಿದುಕೊಳ್ಳಬೇಕಾದ ಅಂಶಗಳು.

8. ಅವಸು ಬಡ್ಡಿಯನ್ನು ಗಣನೆ ಮಾಡುವ ಬಗ್ಗೆಯೂ ಸೇರಿಸುವ ಬಗ್ಗೆಯೂ ಇರುವ ನಿಬಂಧನೆಗಳನ್ನು ಸಂಪೂರ್ಣವಾಗಿ ತಿಳಿದುಕೊಳ್ಳಬೇಕು.

9. ಚಿತ್ತುಗಳನ್ನು ಎಂದಿಗೂ ಹೆರೆಯಕೂಡದು ; ಬದಲಾವಣೆಗಳನ್ನು ಕೆಂಪು ಶಾಯಿಯಲ್ಲಿ ಮಾಡಿ ಅವುಗಳಿಗೆ ಆಫಿಸರ ದಸ್ತಖತ್ಮಾಡಿಸಬಹುದು.

10. ಇಂಡೆಕ್ಸ್ ಕಾರ್ಡುಗಳನ್ನು (ಡಿಪಾಜಿಟರಿನ ರುಜು ಶಿವಾಯಿ) ಖುದ್ದು ತಾನೇ ಬರೆದು A ಉಪಭಾಗದಲ್ಲಿ ಕೊಟ್ಟಿರುವ ಪಟ್ಟಿಯ ಪ್ರಕಾರ ಡಿಪಾಜಿಟರ ಕಸಬನ್ನು ಸ್ಪಷ್ಟವಾಗಿ ದಾಖಲ್ಮಾಡಬೇಕು.

11. ರಸೀದಿಗಳನ್ನೂ ಹಣವನ್ನೂ ಜಲ್ದು ಕೊಡಬೇಕು. ಡಿಪಾಜಿಟರುಗಳನ್ನು ಯಾವಾಗ್ಯೂ ಕಾಯಿಸಕೂಡದು.

12. ಕಂಟ್ರೋಲರಿಗೆ ಅಥವಾ ಸೇವಿಂಗ್ಸ್ ಬ್ಯಾಂಕಿನ ಕೆಲಸವನ್ನು ನಡೆಸುವ ಇಲಾಖಾ ಮುಜ್ಜಾರ್ ಇತರರಿಗೆ ಹೊರತು, ಯಾವ ಡಿಪಾಜಿಟರ ಹೆಸರನ್ನಾಗಲಿ ಅಥವಾ ಅವನು ಡಿಪಾಜಿಟ್ ಇಟ್ಟ ಅಥವಾ ವಾಪಸು ಪಡೆದ ಮೊಬಲಗಿನ ಮೊತ್ತವನ್ನಾಗಲಿ ಟ್ರೆಜರಿ ನೌಕರ್ಮಾನೇರು ಹೊರಪಡಿಸಕೂಡದು.

ಉಪಭಾಗ ೮.

ಮೊಹೇವಾರಿ ಬಡ್ಡಿ ಗಣನೆಯ ತಖ್ತೆ.

ಮೈಸೂರು ಗವರ್ನ್ಮೆಂಟಿನ ಸೇವಿಂಗ್ಸ್ ಬ್ಯಾಂಕು ಡಿಪಾಜಿಟ್ಟುಗಳಿಗೆ ಸಾಲಿಯಾನಾ ಸೇಕಡಾ 3⅛ ರಂತೆ.

	ರೂಪಾಯಿಗಳು.														
ಆ. ಪೈ.	0	1	2	3	4	5	6	7	8	9	10	11	12	13	ಆ. ಪೈ.
0 0	0	384	768	1,152	1,536	1,920	2,304	2,688	3,072	3,456	3,840	4,224	4,608	4,992	0 0
0 6	12	396	780	1,164	1,548	1,932	2,316	2,700	3,084	3,468	3,852	4,236	4,620	,,	0 6
1 0	24	408	792	1,176	1,560	1,944	2,328	2,712	3,096	3,480	3,864	4,248	4,632	,,	1 0
1 6	36	420	804	1,188	1,572	1,956	2,340	2,724	3,108	3,492	3,876	4,260	4,644	,,	1 6
2 0	48	432	816	1,200	1,584	1,968	2,352	2,736	3,120	3,504	3,888	4,272	4,656	,,	2 0
2 6	60	444	828	1,212	1,596	1,980	2,364	2,748	3,132	3,516	3,900	4,284	4,668	,,	2 6
3 0	72	456	840	1,224	1,608	1,992	2,376	2,760	3,144	3,528	3,912	4,296	4,680	,,	3 0
3 6	84	468	852	1,236	1,620	2,004	2,388	2,772	3,156	3,540	3,924	4,308	4,692	,,	3 6
4 0	96	480	864	1,248	1,632	2,016	2,400	2,784	3,168	3,552	3,936	4,320	4,704	,,	4 0
4 6	108	492	876	1,260	1,644	2,028	2,412	2,796	3,180	3,564	3,948	4,332	4,716	,,	4 6
5 0	120	504	888	1,272	1,656	2,040	2,424	2,808	3,192	3,576	3,960	4,344	4,728	,,	5 0
5 6	132	516	900	1,284	1,668	2,052	2 436	2,820	3,204	3,588	3,972	4,356	4,740	,,	5 6
6 0	144	528	912	1,296	1,680	2,064	2,448	2,832	3,216	3,600	3,984	4,368	4,752	,,	6 0
6 6	156	540	924	1,308	1,692	2,076	2,460	2,844	3,228	3,612	3,996	4,380	4,764	,,	6 6
7 0	168	552	936	1,320	1,704	2,088	2,472	2,856	3,240	3,624	4,008	4,392	4,776	,,	7 0
7 6	180	564	948	1,332	1,716	2,100	2,484	2,868	3,252	3,636	4,020	4,404	4,788	,,	7 6

ಆ. ಪೈ.	0	1	2	3	4	5	6	7	8	9	10	11	12	13	ಆ. ಪೈ.
8 0	192	576	960	1,344	1,728	2,112	2,496	2,880	3,264	3,648	4,032	4,416	4,800	,,	8 0
8 6	204	588	972	1,356	1,740	2,124	2,508	2,892	3,276	3,660	4,044	4,428	4,812	,,	8 6
9 0	216	600	984	1,368	1,752	2,136	2,520	2,904	3,288	3,672	4,056	4,440	4,824	,,	9 0
9 6	228	612	996	1,380	1,764	2,148	2,532	2,916	3,300	3,684	4,068	4,452	4,836	,,	9 6
10 0	240	624	1,008	1,392	1,776	2,160	2,544	2,928	3,312	3,696	4,080	4,464	4,848	,,	10 0
10 6	252	636	1,020	1,404	1,788	2,172	2,556	2,940	3,324	3,708	4,092	4,476	4,860	,,	10 6
11 0	264	648	1,032	1,416	1,800	2,184	2,568	2,952	3,336	3,720	4,104	4,488	4,872	,,	11 0
11 6	276	660	1,044	1,428	1,812	2,196	2,580	2,964	3,348	3,732	4,116	4,500	4,884	,,	11 6
12 0	288	672	1,056	1,440	1,824	2,208	2,592	2,976	3,360	3,744	4,128	4,512	4,896	,,	12 0
12 6	300	684	1,068	1,452	1,836	2,220	2,604	2,988	3,372	3,756	4,140	4,524	4,908	,,	12 6
13 0	312	696	1,080	1,464	1,848	2,232	2,616	3,000	3,384	3,768	4,152	4,536	4,920	,,	13 0
13 6	324	708	1,092	1,476	1,860	2,244	2,628	3,012	3,396	3,780	4,164	4,548	4,932	,,	13 6
14 0	336	720	1,104	1,488	1,872	2,256	2,640	3,024	3,408	3,792	4,176	4,560	4,944	,,	14 0
14 6	348	732	1,116	1,500	1,886	2,268	2,652	3,036	3,420	3,804	4,188	4,572	4,956	,,	14 6
15 0	360	744	1,128	1,512	1,894	2,280	2,664	3,048	3,432	3,816	4,200	4,584	4,968	,,	15 0
15 6	372	756	1,140	1,524	1,908	2,292	2,676	3,060	3,444	3,828	4,212	4,596	4,980	,,	15 6
ಆ. ಪೈ.	0	1	2	3	4	5	6	7	8	9	10	11	12	13	ಆ. ಪೈ.

ರೂಪಾಯಿಗಳು.

ಷರಾ.—ಹನ್ನೆರಡು ರೂಪಾಯಿಗಳ ಪ್ರತಿ ಮೊತ್ತದ ಮೇಲಣ ಬಡ್ಡಿಯು ಮೇಲಿನ ತಖ್ತೆಯಲ್ಲಿ ನಮೂದಿರುತ್ತದೆ, ರೂಪಾಯಿಗಳ ಸಂಖ್ಯೆಯು ಮೇಲೂ ಕೆಳಗೂ, ಆಣೆ ಪೈಗಳ ಸಂಖ್ಯೆಯು ಪಕ್ಕಗಳಲ್ಲಿಯೂ ಕಂಡಿರುತ್ತದೆ. ಒಟ್ಟು ಹನ್ನೆರಡು ರೂಪಾಯಿಗಳಿಗೆ ಹೆಚ್ಚಿದ ಅಸಲಿನ ಜಾಸ್ತಿ ಮೊಬಲಗಿಗೆ, ಪ್ರತಿ ಎರಡು ರೂಪಾಯಿಗಳಿಗೆ ಒಂದು ಪೈ ನಂತೆ ಬಡ್ಡಿ ಸೇರಿಸಬೇಕು.

ಉಪಭಾಗ D.

ACT NO. V OF 1873.

1873ನೆ ಇಸವಿಯ 5ನೆ ನಂಬರ್ ಆಕ್ಟು.

THE GOVERNMENT SAVINGS' BANKS ACT, 1873

1873ನೆ ಇಸವಿಯ ಗವರ್ನ್ಮೆಂಟ್ ಸೇವಿಂಗ್ಸ್ ಬ್ಯಾಂಕ್ಸ್ ಆಕ್ಟು.

CONTENTS.
ವಿಷಯಸೂಚಿಕೆ.

ಪೀಠಿಕೆ.

ಅ ವ ತ ರ ಣಿ ಕೆ.

ಪ್ರಕರಣಗಳು.

1. ಚಿಕ್ಕ ಹೆಸರು.
ಸ್ಥಳೀಯ ವ್ಯಾಪ್ತಿ.
ಪ್ರಾರಂಭ.
2. 1855ನೆ ಇಸವಿಯ 26ನೆ ಆಕ್ಟಿನ ರದ್ದಿಯಾತಿ.
3. ಅರ್ಥ ವಿವರಣೆಯ ಕಲಂ.

DEPOSITS BELONGING TO THE ESTATES OF DECEASED PERSONS
ಮೃತಪಟ್ಟ ಮನುಷ್ಯರ ಆಸ್ತಿಗೆ ಸೇರಿದ ಠೇವಣಿಗಳು.

4. ಠೇವಣಿದಾರನ ಮರಣಾನಂತರ ಸಂದಾಯ.
5. ಸಂದಾಯ ಮಾಡೋಣ ವಿಲ್ಲಂಥ ಶುದ್ಧಿಯಾಗಿರುವಿಕೆ.
ಏಗ್ಸಿಕ್ಯೂಟರ ಬಾಧ್ಯತೆಯ ವಿನಾಯಿತಿ.
ದೇಣೇದಾರನ ಬಾಧ್ಯತೆಯ ವಿನಾಯತಿ.
6. ಕ್ರಮವಾಗಿ ಪ್ರಮಾಣ ಮಾಡಿಸುವುದಕ್ಕೋಸ್ಕರ ಜಾರ್ಿ.
7. ಪ್ರಮಾಣ ಮಾಡಿಸುವುದಕ್ಕೆ ಅಧಿಕಾರ.
ಸುಳ್ಳು ಹೇಳಿಕೆಗಳಿಗೋಸ್ಕರ ದಂಡನೆ.
8. ಕೋರ್ಟ್ ರುಸುಂಗಳ ಗಣನೆಯಿಂದ ಯಾವಾಗ ಠೇವಣಿಯನ್ನು ಬಿಟ್ಟುಬಿಡಬೇಕು.
9. ಯುರೋಪಿಯನ್ ಸೋಲ್ಜರುಗಳ ಅಥವಾ ಪರಾರಿಯಾದವರ ಸ್ವತ್ತುಗಳಿಗೆ ಸೇರುವಂಥಾ ಠೇವಣಿಗಳಿಗೆ ಆಕ್ಟು ಲಗಾವಾಗಕೂಡದು.

DEPOSITS BELONGING TO MINORS.
ಕಂ ವಯಸ್ಸಿನವರಿಗೆ ಸೇರುವಂಥಾ ಠೇವಣಿಗಳು.

10. ಕಂ ವಯಸ್ಸಿನವನಿಗಾಗಲಿ ಸಂರಕ್ಷಣಾಕರ್ತನಿಗಾಗಲಿ ಠೇವಣಿಗಳ ಸಂದಾಯ.
11. ಇದುವರೆಗೆ ಕೊಟ್ಟಂಥಾ ಅದೇ ವಿಧವಾದ ಸಂದಾಯಗಳು ಖಾನೂನಿನ ಪ್ರಕಾರವಿರುವಿಕೆ.

DEPOSITS BELONGING TO LUNATICS.
ಹುಚ್ಚರಿಗೆ ಸೇರುವಂಥಾ ಠೇವಣಿಗಳು.

12. ಹುಚ್ಚರಿಗೆ ಸೇರಿದಂಥಾ ಠೇವಣಿಗಳ ಸಂದಾಯ.

DEPOSITS MADE BY MARRIED WOMEN.
ವಿವಾಹವಾದ ಹೆಂಗಸರಿಂದ ಇಡಲ್ಪಟ್ಟ ಠೇವಣಿಗಳು.

13. ವಿವಾಹವಾದ ಹೆಂಗಸರ ಠೇವಣಿಗಳ ಸಂದಾಯ.

RULES.
ನಿಬಂಧನೆಗಳು.

14. 8ನೆ ಪ್ರಕರಣದ ಪ್ರಕಾರ ಸರ್ಟಿಫಿಕೇಟುಗಳನ್ನು ಕ್ರಮಪಡಿಸುವ ನಿಬಂಧನೆಗಳು, ಮತ್ತು 10ನೆ ಯಾ 12ನೆ ಯಾ 13ನೆ ಪ್ರಕರಣಕ್ಕನುಗುಣವಾದ ಸಂದಾಯಗಳು.

AN ACT TO AMEND THE LAW RELATING TO GOVERNMENT SAVINGS BANKS.

ಗವರ್ನ್ಮೆಂಟ್ ಸೇವಿಂಗ್ಸು ಬ್ಯಾಂಕುಗಳಿಗೆ ಸಂಬಂಧಪಡುವ ಕಾನೂನನ್ನು ತಿದ್ದುಪಾಟು ಮಾಡಲಿಕ್ಕೆ ಹುಟ್ಟಿದ ಆಕ್ಟು.

ಪೀಠಿಕೆ.

ಗವರ್ನ್ಮೆಂಟ್ ಸೇವಿಂಗ್ಸು ಬ್ಯಾಂಕುಗಳಲ್ಲಿರುವ ಠೇವಣಿಗಳನ್ನು ಪಾವತಿ ಮಾಡಲಿಕ್ಕೆ ಸಂಬಂಧ ಪಡುವ ಕಾನೂನನ್ನು ತಿದ್ದುಪಾಟು ಮಾಡುವುದು ಯುಕ್ತವಾಗಿರುವುದರಿಂದ, ಇದರಿಂದ ನಿರ್ಣಯಿಸುವುದೇನಂದರೆ :—

PRELIMINARY.
ಅವತರಣಿಕೆ.

ಚಿಕ್ಕ ಹೆಸರು.

1. ಈ ಆಕ್ಟನ್ನು "1873ನೆ ಇಸವಿಯ ಗವರ್ನ್ಮೆಂಟ್ ಸೇವಿಂಗ್ಸ್ ಬ್ಯಾಂಕುಗಳ ಆಕ್ಟು" ಎಂಬುದಾಗಿ ಕರೆಯಬಹುದು.

ಸ್ಥಳೀಯ ವ್ಯಾಪ್ತಿ.

ಇದು ಮೈಸೂರು ಸಂಸ್ಥಾನದೊಳಗೆಲ್ಲಾ ವ್ಯಾಪಿಸುತ್ತದೆ.

ಪ್ರಾರಂಭ.

ಮತ್ತು ಅದನ್ನು ಮಂಜೂರ್ಮಾಡಿದ ಕೂಡಲೆ ಜಾರಿಯಲ್ಲಿ ಬರತಕ್ಕದ್ದು.

1855ನೆ ಇಸವಿಯ 26ನೆ ಆಕ್ಟಿನ ರದ್ದಿಯಾತಿ.

2. (ಗವರ್ನ್ಮೆಂಟ್ ಸೇವಿಂಗ್ಸ್ ಬ್ಯಾಂಕುಗಳಲ್ಲಿಯ ಸ್ವಲ್ಪ ಠೇವಣಿಗಳನ್ನು ಮೃತಪಟ್ಟ ಠೇವಣಿದಾರರ ವಾರಸುದಾರರಿಗೆ ಸುಲಭವಾಗಿ ಕೊಡಿಸುವ ಬಗ್ಯೆ ಉಂಟಾದ) 1855ನೆ ಇಸವಿಯ 26ನೆ ನಂಬರು ಆಕ್ಟು ಇದರಿಂದ ರದ್ದಾಗಿದೆ.

ಅರ್ಥವಿವರಣೆಯ ಕಲಂ.

3. ಈ ಆಕ್ಟಿನಲ್ಲಿ—

"ಠೇವಣಿದಾರ" ಎಂಬುವುದು, ಗವರ್ನ್ಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಇದಕ್ಕೆ ಮುಂಚೆ ಹಣವನ್ನು ಯಾರು ಠೇವಣಿ ಮಾಡಿರುವನೋ ಆ ಮನುಷ್ಯನು ಎಂಬುದಾಗಿಯೂ ಅಥವಾ ಯಾರಿಗಾಗಿ ಇದಕ್ಕೆ ಮುಂಚೆ ಠೇವಣಿ ಇಟ್ಟಿದೆಯೋ ಆ ಮನುಷ್ಯನು ಎಂಬುದಾಗಿಯೂ ಅಥವಾ ಇನ್ನು ಮೇಲೆ, ಯಾರಿಂದ ಅಥವಾ ಯಾರಿಗಾಗಿ ಹಣವು ಠೇವಣಿ ಮಾಡಲ್ಪಡುವುದೋ ಆ ಮನುಷ್ಯನು ಎಂಬುದಾಗಿಯೂ ಅರ್ಥ ಕೊಡುತ್ತದೆ ಮತ್ತು "ಠೇವಣೀ" ಎಂಬುವುದಕ್ಕೆ ಹಾಗೆ ಠೇವಣಿ ಇಟ್ಟ ಹಣವೆಂದು ಅರ್ಥ.

"ಸೆಕ್ರೆಟರಿ" ಎಂಬುವುದು, ಗವರ್ನ್ಮೆಂಟ್ ಸೇವಿಂಗ್ಸ್ ಬ್ಯಾಂಕನ್ನು ನಿರ್ವಹಿಸಲಿಕ್ಕೆ ಅಧಿಕಾರಪಡೆದ ಮನುಷ್ಯನೆಂದು ಅರ್ಥ ಕೊಡುತ್ತದೆ.

ಮತ್ತು "ಕಂ ವಯಸ್ಸಿನವನು" ಎಂಬುವುದು, ಹದಿನೆಂಟು ಸಂವತ್ಸರಗಳ ವಯಸ್ಸನ್ನು ಪೂರೈಸದವನು ಎಂದು ಅರ್ಥ ಕೊಡುತ್ತದೆ.

DEPOSITS BELONGING TO THE ESTATES OF DECEASED PERSONS.
ಮೃತಪಟ್ಟ ಮನುಷ್ಯರ ಆಸ್ತಿಗೆ ಸೇರಿದ ಠೇವಣಿಗಳು.

ಠೇವಣಿದಾರನ ಮರಣಾನಂತರ ಸಂದಾಯ.

4. ಗವರ್ನ್ಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಸಾವಿರ ರೂಪಾಯಿಗೆ ಮೀರದ ಐವಜನ್ನು ಇಟ್ಟು, ಒಬ್ಬ ಠೇವಣೀದಾರನು ಮೃತಪಟ್ಟ ಪಕ್ಷದಲ್ಲಿ,

ಮತ್ತು ಅವನ ಉಯಿಲಿನ ಪ್ರೊಬೇಟನ್ನು ಅಥವಾ ಅವನ ಆಸ್ತಿಯನ್ನು ಕುರಿತ ಲೆಟರ್ ಆಫ್ ಅಡ್ಮಿನಿಸ್ಟ್ರೇಷನೆಂಬ ಅಧಿಕಾರ ಪತ್ರಿಕೆಯನ್ನು ಅಥವಾ (ಉತ್ತರಾಧಿಕಾರತ್ವ ಬಂದಮೇಲೆ ಸಾಲಗಳು ಸುಲಭವಾಗಿ ವಸೂಲಾಗುವಂತೆ ಮಾಡುವ ಬಗ್ಯೂ ಮೃತಪಟ್ಟ ಮನುಷ್ಯರ ವಾರಸುದಾರರಿಗೆ ಸಾಲಗಳನ್ನು ಸಂದಾಯ ಮಾಡುವಂಥಾ ಮನುಷ್ಯರಿಗೆ ಅನಂತರ ಆ ವಿಷಯದಲ್ಲಿ ವಿಲ್ಲಂಘವೇನೂ ಇಲ್ಲದಂತೆ ಮಾಡುವ ಬಗ್ಯೂ ಹುಟ್ಟಿದ) 1860ನೆ ಇಸವಿಯ 27ನೆ ನಂಬರು ಆಕ್ಟಿನ ಮೇರೆಗೆ ಕೊಡಲಾದ ಸರ್ಟಿಫಿಕೇಟನ್ನು ಸದರಿ ಠೇವಣಿದಾರನು ಮೃತಪಟ್ಟದ್ದು ಮೊದಲು ಮೂರು ತಿಂಗಳುಗಳೊಳಗಾಗಿ ಅಂಥಾ ಬ್ಯಾಂಕಿನ ಟ್ರೆಜರಿ ಆಫಿಸರ ಮುಂದೆ ಹಾಜರ್ಪಡಿಸದೆ ಇದ್ದರೆ,

ಅಂಥಾ ಬ್ಯಾಂಕಿನ ಟ್ರೆಜರಿ ಆಫಿಸರು ಅದನ್ನು ಈಸುಕೊಳ್ಳುವುದಕ್ಕೆ ಅಥವಾ ಮೃತಪಟ್ಟವನ ಆಸ್ತಿಯ ಆಡಳಿತ ನಡೆಸುವುದಕ್ಕೆ ಬಾಧ್ಯನಾಗಿ ತನಗೆ ತೋರುವ ಯಾವ ಮನುಷ್ಯನಿಗಾದರೂ ಸದರಿ ಹಣದ ಐವಜನ್ನು ಸಂದಾಯ ಮಾಡಬಹುದು.

ಸಂದಾಯ ಮಾಡೋಣ ವಿಲ್ಲಂಘ ಶುದ್ಧಿಯಾಗಿರುವಿಕೆ.

5. ಅಂಥಾ ಸಂದಾಯವು ಹಾಗೆ ಸಂದಾಯವಾದ ಹಣದವಿಷಯದಲ್ಲಿ ಸರ್ವ ವಿಲ್ಲಂಘಶುದ್ಧಿಯಾಗಿ ಇರತಕ್ಕದ್ದು.

ಎಗ್ಸಿಕ್ಯೂಟರ ಬಾಧ್ಯತೆಯ ವಿನಾಯಿತಿ.

ಆದರೆ ಅದನ್ನು ತೆಗೆದುಕೊಂಡಂಥಾ ಮನುಷ್ಯನ ಕೈಯಲ್ಲಿ ಆಡಳಿತದ ಕ್ರಮದಲ್ಲಿ ಸಲ್ಲಿಸಿದ ಅಥವಾ ತೀರಿಸಿದ ಸಮಸ್ತ ಸಾಲಗಳ ಅಥವಾ ಇತರ ತಗಾದೆಗಳ ಮೊಬಲಗು ಹೋಗಲಾಗಿ ಉಳಿದ ಮೊಬಲಗನ್ನು ಮೃತಪಟ್ಟವನ ಯಾವ ಎಗ್ಸಿಕ್ಯೂಟರು ಅಥವಾ ಅಡ್ಮಿನಿಸ್ಟ್ರೇಟರು ಅಥವಾ ಇತರ ವಾರಸುದಾರನು ವಸೂಲ್ಪಡಿಸಿಕೊಳ್ಳದಂತೆ ಇದರಲ್ಲಿ ಏನೂ ಏಧಿಸುವುದಿಲ್ಲ.

ದೇಣೆದಾರನ ಬಾಧ್ಯತೆಯ ವಿನಾಯಿತಿ.

ಯಾವ ಮನುಷ್ಯನಿಗಾದರೂ ಈ ಆಕ್ಟಿನ ಮೇರೆ ಅಥವಾ ಮೇಲ್ಕಂಡ 1855ನೆ ಇಸವಿಯ 26ನೆ ಆಕ್ಟಿನ ಮೇರೆ ಸಂದು ಅವನ ಕೈಯಲ್ಲಿ ವಿನಿಯೋಗವಾಗದೆ ನಿಂತಿರುವ ಹಣದಿಂದ ಮೃತಪಟ್ಟವನ ಆಸ್ತಿಯ ಮೇಲಿನ ಯಾವ ದೇಣೆದಾರನು ಅಥವಾ ಹಕ್ಕುದಾರನಾದರೂ ಅವನ ಸಾಲವನ್ನು ಅಥವಾ ಹಕ್ಕನ್ನು ಅಂಥಾ ಮನುಷ್ಯನು ಮೃತಪಟ್ಟವನ ಆಸ್ತಿಗೆ ಲೆಟರ್ಸ್ ಆಫ್ ಅಡ್ಮಿನಿಸ್ಟ್ರೇಷನ್ ಎಂಬ ಅಧಿಕಾರದ ಪತ್ರಿಕೆಗಳನ್ನು ಪಡೆದುಕೊಂಡಿದ್ದರೆ ಹೇಗೋ ಅದೇ ಪ್ರಕಾರ ಮತ್ತು ಆ ಮಟ್ಟಿಗೆ ವಸೂಲ್ಮಾಡಿಕೊಳ್ಳಬಹುದು.

ಕ್ರಮವಾದ ಆಡಳಿತಕ್ಕೋಸ್ಕರ ಜಾಮೀನ್.

6. ಅಂಥಾ ಯಾವ ಬ್ಯಾಂಕಿನ ಟ್ರೆಜರಿ ಆಫಿಸರು 4ನೆ ಪ್ರಕರಣದ ಪ್ರಕಾರ ತಾನು ಯಾರಿಗೆ ಹಣ ಕೊಡುತ್ತಾನೆಯೋ ಆ ಮನುಷ್ಯನಕಡೆಯಿಂದ ಹಾಗೆ ಕೊಟ್ಟ ಹಣ ಸರಿಯಾಗಿ ವಿನಿಯೋಗ ಆಗುವ ಬಗ್ಯೆ ತನಗೆ ಅವಶ್ಯವಾಗಿ ತೋರುವಂಥಾ ಜಾಮೀನನ್ನು ತೆಗೆದುಕೊಳ್ಳಬಹುದು.

ಮತ್ತು ಆತನು ಸದರಿ ಜಾಮೀನನ್ನು ಅಂಥಾ ವಿನಿಯೋಗದಲ್ಲಿ ಬಾಧ್ಯತೆಯುಳ್ಳ ಯಾವ ಮನುಷ್ಯನಿಗಾದರೂ ಪರಭಾರೆ ಮಾಡಬಹುದು.

7. ಸದರಿ ಮೇರೆಗೆ ಬಾಧ್ಯಸ್ಥನಾಗಿರುವುದಾಗಿ ದಾವೆ ಮಾಡುವ ಮನುಷ್ಯನ ಹಕ್ಕನ್ನು ಗೊತ್ತುಪಡಿಸಿಕೊಳ್ಳುವುದಕ್ಕೋಸ್ಕರ ತತ್ಕಾಲದಲ್ಲಿ ಪ್ರಮಾಣಗಳಿಗೆ ಅಥವಾ ಸತ್ಯಗಳಿಗೆ ಸಂಬಂಧಪಟ್ಟಿರುವ ಕಾನೂನಿಗನುಗುಣವಾಗಿ ಪ್ರಮಾಣದಮೇಲೆ ಅಥವಾ ಸತ್ಯಮಾಡಿಸಿಕೊಂಡು ಅಂಥಾ ಯಾವ ಬ್ಯಾಂಕಿನ ಟ್ರೆಜರಿ ಆಫಿಸರೂ ಸಾಕ್ಷ್ಯ ತೆಗೆದುಕೊಳ್ಳಬಹುದು.

ಪ್ರಮಾಣ ಮಾಡಿಸಲಿಕ್ಕೆ ಅಧಿಕಾರ.

ಯಾವ ಮನುಷ್ಯನು ಅಂಥಾ ಪ್ರಮಾಣ ಯಾ ಸತ್ಯ ಮಾಡಿಯೂ ಸುಳ್ಳು ವಾಂಗ್ಮೂಲ ಕೊಡುತ್ತಾನೆಯೋ ಅಥವಾ ಅದು ಸುಳ್ಳೆಂದು ತನಗೆ ತಿಳಿದಿರುವಂಥಾ ಅಥವಾ ನಂಬಿಕೆ ಇರುವಂಥಾ ಅಥವಾ ನಿಜವೆಂದು ತನಗೆ ನಂಬಿಕೆಯಿಲ್ಲದಂಥಾ ಸುಳ್ಳು ಹೇಳಿಕೆಯನ್ನು ಹೇಳುತ್ತಾನೆಯೋ ಆ ಮನುಷ್ಯನು ಇಂಡಿಯನ್ ಪಿನಲ್ ಕೋಡಿನ 193ನೆ ಪ್ರಕರಣದ ತಕ್ಸೀರನ್ನು ಮಾಡಿದಹಾಗೆ ಎಣಿಸಲ್ಪಡುತ್ತಾನೆ.

ಸುಳ್ಳು ಹೇಳಿಕೆಗೋಸ್ಕರ ದಂಡನೆ.

8. ಮೃತಪಟ್ಟ ಠೇವಣಿದಾರನ ಸ್ವತ್ತಿಗೆ ಸೇರಿದ ಠೇವಣಿ ಮೊಬಲಗು ಸಾವಿರ ರೂಪಾಯಿಗೆ ಮೀರದಿದ್ದರೆ ಆತನ ಆಸ್ತಿಯ ವಿಷಯವಾಗಿ ಕೊಡಲ್ಪಟ್ಟ (ಯಾವುದಾದರೂ ಇದ್ದರೆ) ಪ್ರೊಬೇಟಿನಮೇಲೆ ಅಥವಾ ಲೆಟರ್ಸ್ ಆಫ್ ಅಡ್ಮಿನಿಸ್ಟ್ರೇಷನೆಂಬ ವಾರಸು ನಿರ್ಣಯ ಪತ್ರಿಕೆಯಮೇಲೆ ಅಥವಾ ಸರ್ಟಿಫಿಕೇಟಿನ ಮೇಲೆ 1870ನೆ ಇಸವಿಯ ಕೋರ್ಟ್ ರುಸುಂಗಳ ಆಕ್ಟಿನ ಪ್ರಕಾರ ಕಟ್ಟಬೇಕಾದ ರುಸುಮನ್ನು ಗಣಿಸುವಾಗ್ಯೆ ಸದರಿ ಮೊಬಲಗನ್ನು ಬಿಟ್ಟುಬಿಡತಕ್ಕದ್ದು.

ಕೋರ್ಟ್ ರುಸುಂಗಳ ಗಣನೆಯಿಂದ ಯಾವಾಗ ಠೇವಣಿಯನ್ನು ಬಿಟ್ಟುಬಿಡಬೇಕು.

ಪರಂತು, ಪ್ರೊಬೇಟಗಾಗಿ, ಲೆಟರಸಗಾಗಿ ಅಥವಾ ಸರ್ಟಿಫಿಕೇಟಗಾಗಿ ದಾವೆ ಮಾಡುವ ಮನುಷ್ಯನು ಸದರಿ ಪ್ರೊಬೇಟನ್ನು ಲೆಟರಸನ್ನು ಅಥವಾ ಸರ್ಟಿಫಿಕೇಟನ್ನು ಕೊಡುವುದಕ್ಕೆ ಅಧಿಕಾರವಿರುವ ಕೋರ್ಟಿನವರಿಗೆ ಮೃತಪಟ್ಟವನ ಸ್ವತ್ತಿಗೆ ಸೇರಿದುದಾಗಿ ಯಾವ ಗವರ್ನಮೆಂಟನವರ ಸೇವಿಂಗ್ಸು ಬ್ಯಾಂಕಿನಲ್ಲಾಗಲೀ ಇರುವ ಠೇವಣೀ ಮೊಬಲಗಿನ ಸರ್ಟಿಫಿಕೇಟನ್ನು ತೋರಿಸತಕ್ಕದ್ದು. ಅಂಥಾ ಸರ್ಟಿಫಿಕೇಟ ಸದರಿ ಬ್ಯಾಂಕಿನ ಟ್ರೆಜರಿ ಆಫಿಸರಿಂದ ದಸ್ತಖತ್ತಾಗಿರತಕ್ಕದ್ದು. ಮತ್ತು ಕೋರ್ಟಿನವರು ಅದನ್ನು ಸದರಿ ಮೊಬಲಗಿನ ವಿಷಯವಾದ ಸಾಕ್ಷ್ಯವೆಂದು ಅಂಗೀಕರಿಸತಕ್ಕದ್ದು.

9. ಯಾವ ಯೂರೋಪಿಯನ್ ಆಫಿಸರ ಸ್ವತ್ತಿಗೂ, ಇದರಲ್ಲಿ ಈ ವರೆಗೂ ಅಡಗಿರುವಂಥಾದ್ದು ಯಾವುದೂ ಲಗಾವಾಗಕೂಡದು.

ಯೂರೋಪಿಯನ್ ಸೋಲ್ಜರುಗಳ ಅಥವಾ ಪರಾರಿಯಾದವರ ಸ್ವತ್ತುಗಳಿಗೆ ಸೇರುವಂಥಾ ಠೇವಣಿಗಳಿಗೆ ಆಕ್ಟು ಲಗಾವಾಗಕೂಡದು.

Deposits belonging to Minors.

ಕಂ ವಯಸ್ಸಿನವರಿಗೆ ಸೇರುವಂಥಾ ಠೇವಣಿಗಳು.

10. ಯಾವ ಕಂ ವಯಸ್ಸಿನವನಾದರೂ ತಾನೇ ಠೇವಣಿ ಮಡಗಿದ್ದರೆ ಆ ಠೇವಣಿಯನ್ನು ಅದಕ್ಕೆ ಉಂಟಾದ ಬಡ್ಡಿಯೊಡನೆ ಅವನಿಗೆ ಖುದ್ದು ಪಾವತಿ ಮಾಡಬಹುದು ಅಥವಾ ಯಾವ ಕಂ ವಯಸ್ಸಿನವನಿಗಾಗಿ ಇತರ ಮನುಷ್ಯನಿಂದ ಮಾಡಲ್ಪಟ್ಟ ಠೇವಣಿಯನ್ನು ಅದಕ್ಕೆ ಉಂಟಾದ ಬಡ್ಡಿಯೊಡನೆ ಅವನ ಉಪಯೋಗಾರ್ಥವಾಗಿ ಅವನ ಸಂರಕ್ಷಣಾಕರ್ತನಿಗೆ ಪಾವತಿ ಮಾಡಬಹುದು.

ಕಂ ವಯಸ್ಸಿನವನಿಗಾಗಲಿ ಸಂರಕ್ಷಣಾಕರ್ತನಿಗಾಗಲಿ ಠೇವಣಿಗಳ ಸಂದಾಯ.

ಯಾವ ಕಂ ವಯಸ್ಸಿನವನಿಗಾದರೂ ಅಥವಾ ಸಂರಕ್ಷಣಾ ಕರ್ತನಿಗಾದರೂ ಈ ಪ್ರಕರಣಕ್ಕನುಗುಣವಾಗಿ ಪಾವತಿಮಾಡಿದ ಹಣಕ್ಕೋಸ್ಕರ ಆತನು ಕೊಟ್ಟ ರಸೀದಿಯು ಹಾಗೆ ಪಾವತಿ ಮಾಡಿದ್ದದಕ್ಕೋಸ್ಕರ ಸಾಕಾದ ವಿಲ್ಲಂಘ ಶುದ್ಧಿಯಾಗಿರತಕ್ಕದ್ದು.

11. ಇದುವರೆಗೆ ಕಂ ವಯಸ್ಸಿನವರಿಗೆ ಅಥವಾ ಅವರ ಸಂರಕ್ಷಣಾ ಕರ್ತರಿಗೆ ಗವರ್ನಮೆಂಟ ಸೇವಿಂಗ್ಸು ಬ್ಯಾಂಕಿನ ಟ್ರೆಜರಿ ಆಫಿಸರು ಮಾಡಿದ ವಿಶಿಷ್ಟ ಠೇವಣಿ ಸಂದಾಯಗಳೂ ಕಾನೂನಿನ ಪ್ರಕಾರ ಮಾಡಿರುವ ಹಾಗೆ ಎಣಿಸತಕ್ಕದ್ದು.

ಇದುವರೆಗೆ ಕೊಟ್ಟಂಥಾ ಅದೇವಿಧವಾದ ಸಂದಾಯಗಳು ಕಾನೂನಿನ ಪ್ರಕಾರವಿರುವಿಕೆ.

Deposits belonging to Lunatics.

ಹುಚ್ಚರಿಗೆ ಸೇರುವಂಥಾ ಠೇವಣಿಗಳು.

12. ಯಾವ ಠೇವಣಿದಾರನಾಗಲಿ ಹುಚ್ಚನಾದರೆ, ಅಥವಾ, ಅನ್ಯಥಾ ತನ್ನ ಕೆಲಸಗಳನ್ನ ನಿರ್ವಹಿಸಲಿಕ್ಕೆ ಅಶಕ್ತನಾದರೆ,

ಹುಚ್ಚರಿಗೆ ಸೇರುವಂಥಾ ಠೇವಣಿಗಳ ಸಂದಾಯ.

ಮತ್ತು ಅಂಥಾ ಹುಚ್ಚ ತನವನ್ನು ಅಥವಾ ಅಶಕ್ತತೆಯನ್ನು ಆತನ ಠೇವಣಿ ಇರಬಹುದಾದ ಬ್ಯಾಂಕಿನ ಟ್ರೆಜರಿ ಆಫಿಸರಿಗೆ ತೃಪ್ತಿಕರವಾಗಿ ರುಜು ಮಾಡಿದರೆ,

ಅಂಥಾ ಟ್ರೆಜರಿ ಆಫಿಸರು ಆಗಿಂದಾಗ್ಯೆ ಯಾವನಾದರೂ ಸರಿಹೊದ ಮನುಷ್ಯನಿಗೆ ಠೇವಣಿಯಿಂದ ಸಂದಾಯಗಳನ್ನು ಮಾಡಬಹುದು.

ಮತ್ತು ಈ ಪ್ರಕರಣಕ್ಕನುಗುಣವಾಗಿ ಪಾವತಿಮಾಡಿದ ಹಣಕ್ಕೋಸ್ಕರ ಅಂಥಾ ಮನುಷ್ಯನು ಕೊಟ್ಟ ರಸೀದಿಯು ಸದರಿ ಪಾವತಿಯ ಬಗ್ಯೆ ಸಾಕಾದ ವಿಲ್ಲಂಘ ಶುದ್ಧಿಯಾಗಿರತಕ್ಕದ್ದು.

ಠೇವಣಿದಾರನ ಸ್ವತ್ತಿಗೆ ಒಂದು ಸಭೆಯು ಅಥವಾ ಮಾನೇಜರು ಕ್ರಮವಾಗಿ ಮೊಕರರಾಗಿದ್ದರೆ ಅಂಥಾ ಸಭೆಗೆ (ಅಥವಾ ಮಾನೇಜರಿಗೆ ಅಲ್ಲದೆ ಇತರ ಯಾವ ಮನುಷ್ಯನಿಗಾದರೂ ಸಂದಾಯಗಳನ್ನು ಮಾಡುವ ಹಾಗೆ ಈ ಪ್ರಕರಣದಲ್ಲಿರುವ ಯಾವುದೊ ಅಧಿಕಾರ ಕೊಡುವುದಿಲ್ಲ.

DEPOSITS MADE BY MARRIED WOMEN.

ವಿವಾಹವಾದ ಹೆಂಗಸರಿಂದ ಮಾಡಲ್ಪಟ್ಟ ಠೇವಣಿಗಳು.

ವಿವಾಹವಾದ ಹೆಂಗಸರ ಠೇವಣಿಗಳ ಸಂದಾಯ.

13. ವಿವಾಹವಾದವಳು ಮಡಗಿದ ಅಥವಾ ಅವಳಿಗಾಗಿ ಮಡಗಿದ ಅಥವಾ ಅನಂತರ ವಿವಾಹ ಮಾಡಿಕೊಂಡ ಬಳಿಕ ಮಡಗಿದ ಅಥವಾ ಆಕೆಗಾಗಿ ಇಟ್ಟ ಯಾವ ಠೇವಣಿಯನ್ನಾದರೂ ಆಕೆಗೆ ಪಾವತಿ ಮಾಡಿ ಬಿಡಬಹುದು. 1865ನೆ ಇಸವಿಯ ಇಂಡಿಯನ್ ಸಕ್ಸೆಷನ್ ಆಕ್ಟಿನ 4ನೆ ಪ್ರಕರಣವು ಆಕೆಯ ವಿವಾಹಕ್ಕೆ ಲಗಾವಾದರೂ ಲಗಾವಾಗದೇ ಇದ್ದರೂ ಚಿಂತೆಯಿಲ್ಲ; ಮತ್ತು ಈ ಪ್ರಕರಣಕ್ಕೆ ನುಗುಣವಾಗಿ ಆಕೆಗೆ ಪಾವತಿ ಮಾಡಿದ ಹಣಕ್ಕೋಸ್ಕರ ಆಕೆ ಕೊಟ್ಟ ರಸೀತಿಯು ಹಾಗೆ ಪಾವತಿ ಮಾಡಿದುದಕ್ಕೋಸ್ಕರ ಸಾಕಾದ ವಿಲ್ಲಂಘ ಶುದ್ಧಿಯಾಗಿರತಕ್ಕದ್ದು.

RULES.

ನಿಬಂಧನೆಗಳು.

8ನೆ ಪ್ರಕರಣದ ಪ್ರಕಾರದ ಸರ್ಟಿಫಿಕೇಟುಗಳನ್ನೂ ಮತ್ತು 10ನೆ ಅಥವಾ 12ನೆ ಅಥವಾ 13ನೆ ಪ್ರಕರಣಕ್ಕನುಗುಣವಾದ ಸಂದಾಯಗಳನ್ನೂ ಕ್ರಮಪಡಿಸುವ ನಿಬಂಧನೆಗಳು.

14. 8ನೆ ಪ್ರಕರಣಕ್ಕನುಗುಣವಾದ ವಿಶಿಷ್ಟ ಸರ್ಟಿಫಿಕೇಟುಗಳನ್ನೂ ಮತ್ತು 10ನೆ ಅಥವಾ 12ನೆ ಅಥವಾ 13ನೆ ಪ್ರಕರಣಕ್ಕನುಗುಣವಾದ ವಿಶಿಷ್ಟ ಸಂದಾಯಗಳನ್ನೂ ಈ ಆಕ್ಟಿಗನುಸಾರವಾಗಿ ಆಗಿಂದಾಗ್ಯೆ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ವಿಧಿಸುವಂಥಾ ನಿಬಂಧನೆಗಳಿಗೊಳಪಟ್ಟು ಬ್ಯಾಂಕಿನ ಟ್ರೆಜರಿ ಆಫಿಸರು ಕೊಡತಕ್ಕದ್ದು ಮತ್ತು ಪಾವತಿ ಮಾಡತಕ್ಕದ್ದು.

ಉಪಭಾಗ E.

(ನಮೂನೆ 1.)

(9ನೆ ನಿಬಂಧನೆ.)

ಡಿಸ್ಟ್ರಿಕ್ಟು / ತಾಲ್ಲೂಕು ಟ್ರೆಜರಿ ಛಾರ್ಜಿನಲ್ಲಿರುವ ಆಫಿಸರಿಗೆ.

....

ತಾರೀಖು..........................

ಅಯ್ಯಾ—ತಮ್ಮ ಟ್ರೆಜರಿಯಲ್ಲಿರುವ ಡಿಸ್ಟ್ರಿಕ್ಟ್ ಸೇವಿಂಗ್ಸು ಬ್ಯಾಂಕಿನಲ್ಲಿ ನಾನು ಸರ್ಕಾರಕ್ಕೆ ಕೊಡಬೇಕಾದ ಜಾಮಿನಿಗಾಗಿ ರೂಪಾಯಿಗಳನ್ನು ಡಿಪಾಜಿಟ್ಟು ಕಟ್ಟುವಂತೆ * ಗೆ ಆಜ್ಞಾಪಿಸಿರುತ್ತೀನಲ್ಲದೆ, ನಾನು ಯಾರ ತಾಬೆಯಲ್ಲಿ ನೌಕರಿ ಮಾಡುತ್ತಿರಬಹುದೋ ಆ * ರವರಿಂದ ಅದರ ಪಾವತಿ ಬಗ್ಗೆ ಕಂಡರೋಕ್ತವಾದ ಬರಹಮೂಲಕ ಮಂಜೂರಾತಿಯನ್ನು ನಾನು ತಮ್ಮಲ್ಲಿ ಹಾಜರ್ಮಾಡುವವರೆಗೂ ಸದರಿ ಮೊಬಲಗು ನನಗೆ ಸಲ್ಲತಕ್ಕದ್ದಲ್ಲವೆಂಬ ಸಂಗತಿಯನ್ನು ತಮಗೆ ತಿಳಿಸಿರುತ್ತೇನೆ. ಮತ್ತು ಸದರಿ ಬ್ಯಾಂಕಿನವರು ಈ ಡಿಪಾಜಿಟ್ಟನ್ನು ಸದರಿ * ಯವರು ಅಪೇಕ್ಷಿಸಿದಾಗ ಅವರಿಗೆ ಪಾವತಿ ಮಾಡಿದಲ್ಲಿ ಅದಕ್ಕೆ ನಾನು ಆಕ್ಷೇಪಿಸುವುದಿಲ್ಲವೆನುತಲೂ ಸದರಿ * ಯವರು ನನಗೆ ಈ ಡಿಪಾಜಿಟ್ಟಿನ ಬಡ್ಡಿ ಪಾವತಿಯಾಗಕೂಡದೆಂದು ಸದರಿ ಡಿಸ್ಟ್ರಿಕ್ಟು ಟ್ರೆಜರಿ ಆಫಿಸರಿಗೆ ನಿರೋಧಿಸಿದ ತರುವಾಯ ಐರ್ಜು ಬಡ್ಡಿ ನನಗೆ ಬರಬೇಕೆಂದು ನಾನು ಬೇರೆ ಅಪೇಕ್ಷಿಸುವುದಿಲ್ಲವೆನುತಲೂ ಒಪ್ಪಿಕೊಂಡಿರುತ್ತೇನೆ.

ತಮ್ಮ ಅತ್ಯಂತ ವಿಧೇಯ ಸೇವಕ,

ಡಿಪಾಜಿಟರ ರುಜು ಮತ್ತು ಉದ್ಯೋಗದ ಹೆಸರು.

ಷರಾ.—* ಈ ಗುರ್ತುಮಾಡಲ್ಪಟ್ಟಿರುವ ನಾಲ್ಕು ಖಾಲಿ ಜಾಗಾಗಳಲ್ಲಿ ಗವರ್ನ್ಮೆಂಟ್ ಆಫಿಸರ ಹುದ್ದೆಯನ್ನು ಕಾಣಿಸಬೇಕು.

ನಮೂನೆ 2.

(ನಿಬಂಧನೆ ನಂಬರ್ 14.)

ಇಂಡೆಕ್ಸ್ ಕಾರ್ಡು.

ಲೆಕ್ಕದ ನಂಬರ್.

1. ಠೇವಣಿದಾರನ ಹೆಸರು.
2. ಠೇವಣಿದಾರನ ತಂದೆಯ ಹೆಸರು.
3. ಠೇವಣಿದಾರನ ಕಸಬು.
4. ಠೇವಣಿದಾರನ ವಾಸಸ್ಥಾನ.
5. ಹಂಗಾಮಿ ವಾಸಸ್ಥಾನ.
6. ಸಂಬಂಧಿಯ / ರಕ್ಷಕನ ಅಥವಾ ಗಂಡನ / ಏಜೆಂಟನ ಹೆಸರು
7. ನಾನು ಈ ಸಂಸ್ಥಾನದಲ್ಲಿ ಯಾವ ಖಜಾನೆಯಲ್ಲಿಯೂ ಬೇರೆ ಸೇವಿಂಗ್ಸ್ ಬ್ಯಾಂಕು ಲೆಕ್ಕವನ್ನು ಈಗ ಸದ್ಯಕ್ಕೆ ಇಟ್ಟಿಲ್ಲವೆಂದು ಪ್ರಮಾಣವಾಗಿ ಹೇಳುತ್ತೇನೆ.

ತಾರೀಖು —

ಸ್ಥಳ —

ಠೇವಣಿದಾರನ ರುಜು.

ಷರಾಗಳು.

1. ತನ್ನ ಸ್ಥಳ ಮನೆಯಿಂದ ದೂರವಾಗಿ ನೌಕರರಾಗಿ ಮಾಡಲ್ಪಟ್ಟಿರುವ ಮನುಷ್ಯನಿಂದ ಒಂದು ಲೆಕ್ಕವು ಇಡಿಸಲ್ಪಟ್ಟಾಗ ಮಾತ್ರ 5ನೆ ಕಲಮನ್ನು ಭರ್ತಿ ಮಾಡಬೇಕು; ಮತ್ತು ಚಿಕ್ಕ ವೈನರ ಪರವಾಗಿಯಾಗಲಿ ಅಥವಾ ಜನರ ಮುಂದೆ ಬರುವ ವಾಡಿಕೆಯಿಲ್ಲದ ಹೆಂಗಸಿನ ಪರವಾಗಿಯಾಗಲಿ ಒಂದು ಲೆಕ್ಕವನ್ನು ಇಟ್ಟಾಗ 6ನೆ ಕಲಮನ್ನು ಭರ್ತಿ ಮಾಡಬೇಕು.

2. ಲೆಕ್ಕವು ಒಂದು ಸಂಘದ, ಅಥವಾ ಕೂಟದ, ಅಥವಾ ಶಾಲೆಯ, ಅಥವಾ ಸಾರ್ವಜನಿಕವೆಂದು ತೋರುವ ಸಮಾಜದ ಪರವಾಗಿ ಇಡಲ್ಪಟ್ಟಿದ್ದಾದರೆ ಲೆಕ್ಕದಮೇಲೆ ನಡವಳಿಕೆ ನಡೆಸಲು ಅಧಿಕಾರ ಹೊಂದಿರುವ ಆಫೀಸರ ಹೆಸರನ್ನೂ, ಮತ್ತು ಸಂಘದ, ಅಥವಾ ಕೂಟದ, ಅಥವಾ ಶಾಲೆಯ, ಅಥವಾ ಸಮಾಜದ ಹೆಸರನ್ನೂ ಮಾತ್ರ ಇಂಡೆಕ್ಸ್ ಕಾರ್ಡಿನ ಮೇಲೆ ಬರೆಯಬೇಕು.

ಇಂಡೆಕ್ಸ್ ಕಾರ್ಡನ್ನು ಭರ್ತಿಮಾಡುವುದಕ್ಕೆ ಅನುಜ್ಞೆಗಳು.

1. ಬರೆಯಲ್ಪಡತಕ್ಕ ಹೆಸರು, ತಂದೆಯ ಹೆಸರು, ಕಸಬು ಮತ್ತು ವಾಸಸ್ಥಳ—ಇವುಗಳು ಠೇವಣಿ ಇಡತಕ್ಕವರದೇ ಹೊರತು ಅವರ ಸಂಬಂಧಿ ಅಥವಾ ರಕ್ಷಕ ಅಥವಾ ಗಂಡ ಅಥವಾ ಏಜಂಟನದಲ್ಲ.

2. ಒಂದು ಲೆಕ್ಕವು.

   (a) ಒಬ್ಬ ಕಂ ವಯಸ್ಸಿನವನಿಂದ ಇಡಲ್ಪಟ್ಟರೆ ಇಂಡೆಕ್ಸ್ ಕಾರ್ಡಿನ ಮೇಲೆ ಅವನ ರುಜುವನ್ನು ತೆಗೆದುಕೊಳ್ಳಬೇಕು;

   (b) ಒಬ್ಬ ಕಂ ವಯಸ್ಸಿನವನ ಪರವಾಗಿ ಇಡಲ್ಪಟ್ಟರೆ ಅವನ ಸಂಬಂಧಿ ಅಥವಾ ರಕ್ಷಕನ ರುಜುವನ್ನು ತೆಗೆದುಕೊಳ್ಳಬೇಕು;

   (c) ಜನರ ಮುಂದೆ ಬರಲು ವಾಡಿಕೆ ಇಲ್ಲದ ಹೆಂಗಸಿನಪರವಾಗಿ ಇಡಲ್ಪಟ್ಟರೆ ಅವಳ ಗಂಡನ ಅಥವಾ ಏಜಂಟನ ರುಜುವನ್ನು ತೆಗೆದುಕೊಳ್ಳಬೇಕು.

3. (a) ಯೂರೋಪಿಯನ್ ಅಥವಾ ಈಸ್ಟ್ ಇಂಡಿಯನ್ ಠೇವಣಿದಾರನ ಇಂಡೆಕ್ಸ್ ಕಾರ್ಡನ್ನು ಭರ್ತಿ ಮಾಡುವುದರಲ್ಲಿ ಮೊದಲು ಮನೆತನದ ಹೆಸರನ್ನೂ ಆ ಮೇಲೆ ಕ್ರೈಸ್ತ ಹೆಸರನ್ನೂ ಬರೆಯತಕ್ಕದ್ದು;

   (b) ಹಿಂದೂ ಠೇವಣಿದಾರನ ಇಂಡೆಕ್ಸ್ ಕಾರ್ಡನ್ನು ಭರ್ತಿಮಾಡುವಾಗ ಮೊದಲು ಮನುಷ್ಯನ ಹೆಸರನ್ನೂ, ಅದರ ಮೇಲೆ ವಂಶದ ಅಥವಾ ಕುಟುಂಬದ ಹೆಸರನ್ನೂ ಬರೆಯಬೇಕು;

   (c) ಮಹಮ್ಮದೀಯ ಠೇವಣಿದಾರನ ಇಂಡೆಕ್ಸ್ ಕಾರ್ಡನ್ನು ಭರ್ತಿಮಾಡುವಾಗ (ಷೇಕ್, ಸೈಯದ್, ಮೌಲ್ವಿ) ಇಂಥಾ ಉಪಸರ್ಗಗಳನ್ನು ಮೊದಲು ಚಿಕ್ಕ ಅಕ್ಷರದಲ್ಲಿ ಬರೆದು ಆ ಮೇಲೆ ಹೆಸರನ್ನು ದೊಡ್ಡ ಅಕ್ಷರದಲ್ಲಿ ಬರೆಯಬೇಕು.

4. ಒಬ್ಬ ಮಹಮ್ಮದೀಯ ಠೇವಣಿದಾರನು ತನ್ನ ಲೆಕ್ಕಕ್ಕೆ ಬಡ್ಡಿಯನ್ನು ಸೇರಿಸಕೂಡದೆಂದು ಅಪೇಕ್ಷೆಪಟ್ಟರೆ ಆ ವಿಷಯವನ್ನು ಕುರಿತು ಇಂಡೆಕ್ಸ್ ಕಾರ್ಡಿನ ಮೇಲೆ ಷರಾ ಬರೆಯಬೇಕು.

5. ಒಬ್ಬ ಠೇವಣಿದಾರನು ಇಂಗ್ಲಿಷಿನಲ್ಲಿ ರುಜು ಮಾಡಿದರೆ ಅವನು ಮಾಡುವ ಅಕ್ಷರ ಸಂಯೋಜನವನ್ನೇ ಬದಲಾಗದಂತೆ ಏಕಪ್ರಕಾರವಾಗಿ ಅನುಸರಿಸಬೇಕು. ಇತರ ಸಂದರ್ಭಗಳಲ್ಲಿ ಇಂಡೆಕ್ಸ್ ಕಾರ್ಡು ಬರೆಯುವುದರಲ್ಲಿ ಮಾಡಿರುವ ಅಕ್ಷರ ಸಂಯೋಜನವನ್ನೇ ಎಲ್ಲಾ ತಃಖ್ತೆಗಳಲ್ಲಿಯೂ ಲೆಕ್ಕಗಳಲ್ಲಿಯೂ ಎಡೆಬಿಡದೆ ಅನುಸರಿಸಬೇಕು.

6. ಇಡಲ್ಪಟ್ಟ ಲೆಕ್ಕವು ಜಾಮೀನಿ ಡಿಪಾಜಿಟ್ಟಿನ ಲೆಕ್ಕವಾಗಿದ್ದರೆ "ಜಾ. ಡಿ." ಎಂಬ ಅಕ್ಷರಗಳನ್ನು ಆ ಲೆಕ್ಕದ ನಂಬರಿನ ಎದುರಿಗೆ ಸೇರಿಸಬೇಕು; ಮತ್ತು ಯಾವ ಸರ್ಕಾರಿ ಆಫೀಸರ ಬಳಿಯಲ್ಲಿ ಸದರಿ ಜಾಮೀನು ಇಡಲ್ಪಟ್ಟಿದೆಯೋ ಆ ಆಫೀಸರ ಉದ್ದೆಯ ಹೆಸರನ್ನು ಇಂಡೆಕ್ಸ್ ಕಾರ್ಡಿಗೆ ಅಡ್ಡಲಾಗಿ ಕೆಂಪು ಶಾಯಿನಲ್ಲಿ ಬರೆಯಬೇಕು.

ನಮೂನೆ 3.

(ನಿಬಂಧನೆ ನಂಬರ 20)

ಮೈಸೂರ ಗವರ್ನಮೆಂಟ್ ಸೇವಿಂಗ್ಸು ಬ್ಯಾಂಕು.

ಚಲನ್.

ಬೆಂಗಳೂರು.

ತಾರೀಖು..190

ರೂಪಾಯಿಗಳು (ಮಾತುಗಳಲ್ಲಿ) ....

....

....ನಿಂದ ಹಾಜರ್ಮಾಡಲ್ಪಟ್ಟದ್ದು.

....ಕ್ಯಾಷಿಯರ.

ಡಿಪಾಜಿಟರ ರುಜು.

ನಮೂನೆ 4.

(ನಿಬಂಧನೆ ನಂಬರ್ 20)

ಡಿಸ್ಟ್ರಿಕ್ಟು ಸೇವಿಂಗ್ಸು ಬ್ಯಾಂಕು.

190 ನೆ ಇಸವಿಯ.................................ಮಾಹೆಯ ಬಾಬತ್ತು ಡಿಪಾಜಿಟ್ಟುಗಳ ಜರ್ನಲ್.

ತಾರೀಖು.	ಡಿಪಾಜಿಟರ.		ನಗದಾಗಿ ಪಾವತಿ ಮಾಡಿದ ಡಿಪಾಜಿಟ್ ಮೊಬಲಗು.			ವರ್ಗ ಮೂಲಕ ಬಂದ ಡಿಪಾಜಿಟ್ ಮೊಬಲಗು.			ರೋಜೇನಾ ಜುಮ್ಲಾ.
	ನಂಬರ್.	ಹೆಸರು.							

ನಮೂನೆ 5.

(ನಿಬಂಧನೆ ನಂಬರ್ 22)

ಡಿಸ್ಟ್ರಿಕ್ಟು ಸೇವಿಂಗ್ಸು ಬ್ಯಾಂಕು.

190 ನೆ ಇಸವಿಯ..........ಮಾಹೆಯಲ್ಲಿ ಆದ ವಾಪಸು ಪಾವತಿಗಳ ಜರ್ನಲ್.

ವಾಚರ್ ನಂಬರ್	ತಾರೀಖು	ಡಿಪಾಜಿಟರ		ನಗದಾಗಿ ವಾಪಸು ಪಡೆದ ಮೊಬಲಗು			ವರ್ಗಮೂಲಕವಾಗಿ ವಾಪಸು ಪಡೆದ ಮೊಬಲಗು			ರೋಜೇನಾ ಜುಮ್ಲಾ		
		ನಂಬರ್	ಹೆಸರು									

ನಮೂನೆ 6.

(ನಿಬಂಧನೆ ನಂಬರ್ 22)

ಮೈಸೂರು ಗವರ್ನ್ಮೆಂಟ್ ಸೇವಿಂಗ್ಸು ಬ್ಯಾಂಕು.

ವಾಚರ್ ನಂಬರ್.....................

ವಾಪಸು ಪಾವತಿ ಬಗ್ಗೆ ಅರ್ಜಿ.

.................................ಲ್ಲಿರುವ ಸೇವಿಂಗ್ಸು ಬ್ಯಾಂಕಿಗೆ .... ನೆ ನಂಬರಿನ ನನ್ನ ಸೇವಿಂಗ್ಸು ಬ್ಯಾಂಕು ಲೆಕ್ಕದಿಂದ...................................(ಮಾತುಗಳಲ್ಲಿ) ರೂಪಾಯಿಗಳನ್ನು

ನಾನು ವಾಪಸು ಪಡೆಯಲು ಅಪೇಕ್ಷಿಸುತ್ತೇನೆ. ಈ ದಿನದ ವರೆಗೆ ನನಗೆ ಸಲ್ಲಬೇಕಾದ ಬಾಕಿ ಮೊಬಲಗು .... ರೂಪಾಯಿಗಳು ಆಗುತ್ತದೆ.

ಮೇಲ್ಕಂಡ ಮೊಬಲಗಾದ .... ರೂಪಾಯಿಗಳು ನನಗೆ ಸಂದುವು.

ತಾರೀಖು ....190 ನೆ ಇಸವಿ ಡಿಪಾಜಿಟರ ರುಜು.

ಡಿಪಾಜಿಟರು ಸೇವಿಂಗ್ಸು ಬ್ಯಾಂಕಿಗೆ ಖುದ್ದಾಗಿ ಬರದೆಹೋದ ಸಂದರ್ಭದಲ್ಲಿ ಹಣ ಯಾರಿಗೆ ಪಾವತಿಯಾಗಬೇಕಾಗಿರುತ್ತದೆಯೊ ಅಂಥಾವನ ಕಡೆ ಯಾವ ಮುತಾಲೀಕನ ಅಥವಾ ಆಳಿನ ಹೆಸರನ್ನೂ ಮತ್ತು ಸದರಿ ಮುತಾಲೀಕ ಅಥವಾ ಆಳು ತನ್ನ ಹೆಸರಿನ ರುಜುವನ್ನೂ ಈ ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ ಬರೆಯಬೇಕು.

ಆಳು ಅಥವಾ ಮುತಾಲೀಕನ ಹೆಸರು ....

ಆಳು ಅಥವಾ ಮುತಾಲೀಕನ ರುಜು ....

ನಮೂನೆ 7.

(ನಿಬಂಧನೆ ನಂಬರ್ 27.)

ಡಿಸ್ಟ್ರಿಕ್ಟು ಸೇವಿಂಗ್ಸು ಬ್ಯಾಂಕು.

ಡಿಪಾಜಿಟರ ನಂಬರ.
ಡಿಟೋ ಹೆಸರು. ...
ಡಿಟೋ ವಾಸಸ್ಥಳ ...
ಖರ್ಚು. ಡಿಟೋ ಕಸಬು ... ಜಮಾ.

ತಾರೀಖು.	ಡಿಪಾಜಿಟ್ಟುಗಳು.	ವಾಪಸು ಪಾವತಿಗಳು.	ಪ್ರತಿ ಆಡಳಿತದ ಶರುವಾಯ ಬಾಕಿ.	ಪ್ರತಿ ತಿಂಗಳಿನ ಅಸಲು ಅಥವಾ ಅತ್ಯಂತ ಕಮ್ಮಿಯಾದ ಬಾಕಿ.	ಕೇವಲ ಕಡಿಮೆಯಾದ ಬಾಕಿಯ ಮೇಲಣ ಬಡ್ಡಿ.
ಎತ್ತಿ ಬರೆದ ಬಾಕಿ.					
190 ಜುಲೈ ...					
,, ಅಗಸ್ಟು ...					
,, ಸೆಪ್ಟಂಬರ ...					
,, ಅಕ್ಟೋಬರ ...					
,, ನೊವೆಂಬರ ...					
,, ಡಿಸೆಂಬರ ...					
190 ಜನವರಿ ...					
,, ಫೆಬ್ರುವರಿ ...					
,, ಮಾರ್ಚಿ ...					
,, ಏಪ್ರಿಲ್ ...					
,, ಮೇ ...					
,, ಜೂನ್ ...					
ಜುಮ್ಲಾ ಡಿಪಾಜಿಟ್ಟುಗಳು ಮತ್ತು ವಾಪಸು ಪಾವತಿಗಳು.					
ಷುರು ಬಾಕಿ ...					
ಸಾಲಿನ ಬಡ್ಡಿ ...					
ಜುಮ್ಲಾ ...					
ವಾಪಸು ಪಾವತಿಗಳು ...					
ವಜಾ ...					
ಆಖೈರ ಬಾಕಿ ...					

..ನೆ ಮುಕರ್ರಂ ..ನೆ ..ನಂಬರ ಮೆಮೊ. ಡಿಪಾಜಿಟರ ನಂಬರ .. .. ಡಿಟ್ಟೋ ಹೆಸರು .... ಅಸಲು ರೂಪಾಯಿಗಳು ....ಲ್ಲಿರುವ ಡಿಸ್ಟ್ರಿಕ್ಟು ಅಥವಾ ತಾಲ್ಲೂಕು ಸೇವಿಂಗ್ಸು ಬ್ಯಾಂಕಿಗೆ ವ ರ್ಗ ಚಾಲ್ತಿ ಸಾಲಿನ ಬಡ್ಡಿ......... .... ತಾರೀಖು ....190 ಟ್ರೆಜರಿ ಆಫಿಸರ.	ನಮೂನೆ 8. (ನಿಬಂಧನೆ ನಂಬರ 40a) ಮೈಸೂರು ಗವರ್ನ್ಮೆಂಟ ಸೇವಿಂಗ್ಸು ಬ್ಯಾಂಕು. ಒಂದು ಲೆಕ್ಕದ ವರ್ಗ ಸಂಗತಿಯನ್ನು ಕುರಿತ ಅಡ್ವೈಸ (ಸೂಚನೆ). ಮೆಮೊ ನಂಬರ. ....ಡಿಸ್ಟ್ರಿಕ್ಟು ಟ್ರೆಜರಿ ಆಫಿಸರಿಂದ. .... ಡಿಟ್ಟೋ ಆಫಿಸರಿಗೆ. ....ಎಂಬುವನ ಕೋರಿಕೆ ಪ್ರಕಾರ ....ಲ್ಲಿರುವ ಡಿಸ್ಟ್ರಿಕ್ಟು (ಅಥವಾ ತಾಲ್ಲೂಕು) ಸೇವಿಂಗ್ಸು ಬ್ಯಾಂಕಿನ ....ನೆ ನಂಬರಿನ ಅವನ ಲೆಕ್ಕದಂತೆ ಅವನಿಂದ ಜಮೆಗೆ ಬಂದಿದ್ದು ಈಗ......ಲ್ಲಿರುವ ಡಿಸ್ಟ್ರಿಕ್ಟು (ಅಥವಾ ತಾಲ್ಲೂಕು) ಸೇವಿಂಗ್ಸು ಬ್ಯಾಂಕಿಗೆ ವರ್ಗ ಮಾಡಲ್ಪಟ್ಟಿರುವ ಅಸಲ ಮೊಬಲಗಾದ .... (ಮಾತುಗಳಲ್ಲಿ) ರೂಪಾಯಿಗಳಿಗಾಗಿ ಒಂದು ರಿವಿರ್ಸ ಟ್ರಾನ್ಸ್ಫರ ರಸೀದಿಯನ್ನು ಇದರೊಂದಿಗೆ ಕಳುಹಿಸಿರುತ್ತದೆ. .... ರೂಪಾಯಿಗಳು 190........ ಮಾಹೇ ಆಖೈರು ವರೆಗೆ ಚಾಲ್ತಿ ಸಾಲಿನ ಬಡ್ಡಿಯಾಗಿರುತ್ತದೆ. ಈ ಮೊಬಲಗನ್ನು "ಕೇವಲ ಕಡಮೆಯಾದ ಬಾಕಿಯ ಮೇಲಣ ಬಡ್ಡಿ" ಎಂಬ ಮದ್ದಿನಲ್ಲಿ ಅಸಲ ಮೊಬಲಗಿನ ಬಾಜೂದಲ್ಲಿ ಬಟ್ಟಾಗಿ ದಾಖಲ್ಮಾಡಬೇಕು. ಡಿಪಾಜಿಟರ ಲೆಡ್ಜರ ಲೆಕ್ಕದ ನಕಲು ಮತ್ತು ಅವನ ರುಜು (ಅಥವಾ ಅರ್ಜಿ) ಇದಕ್ಕೆ ಲಗತ್ತಾಗಿರುತ್ತದೆ. ತಾರೀಖು ....190 ಟ್ರೆಜರಿ ಆಫಿಸರ ....ಡಿಸ್ಟ್ರಿಕ್ಟು ಷರಾ—ವರ್ಗ ತೆಗೆದುಕೊಳ್ಳುವ ಟ್ರೆಜರಿಯಲ್ಲಿ ಅವನ ಪ್ಯಾಸ ಬುಕ್ಕಿನೊಂದಿಗೆ ಡಿಪಾಜಿಟರು ಖುದ್ದು ಹಾಜರಾಗಬೇಕೆಂದು ಕಾಯಿದೆ, ಸದರಿ ಅಡ್ವೈಸ ವಗೈರೆ ತಲಪಿದೊಡನೆ ಈ ಮೊಬಲಗನ್ನು ಜಮೆ ಹಿಡಿಯತಕ್ಕದ್ದು. ಯಾವ ಸಾಲಿನಲ್ಲಿಯಾಗಲಿ ಜೂನ್ ಮಾಹೆಯ ಎರಡನೆ ಅರ್ಧ ಭಾಗದಲ್ಲಿ ಯಾವ ವರ್ಗಾವರ್ಗಿಯನ್ನೂ ಮಾಡಕೂಡದು.

ಯಾವ ಟ್ರೆಜರಿ ಆಫಿಸಿಗೆ ಲೆಕ್ಕ ವರ್ಗವಾಯಿತೋ ಆ ಆಫಿಸಿನವರಿಂದ ಭರ್ತಿ ಮಾಡಲ್ಪಡಬೇಕಾದ ವಿವರಗಳು.

ಲೆಕ್ಕದ ನಂಬರ ....

ಡಿಪಾಜಿಟರ ಹೆಸರು ....

ಕಸಬು ....

ತಮ್ಮ ಆಫಿಸಿನಲ್ಲಿ ಲೆಕ್ಕ ಷುರುವಾದ ತಾರೀಖು ....

ಷರಾ—ವರ್ಗದ ಸೂಚನೆಯನ್ನ (ಅಡ್ವೈಸು) ಕಂಟ್ರೋಲರವರಿಗೆ ಸೇವಿಂಗ್ಸು ಬ್ಯಾಂಕು ಜರ್ನಲಿನೊಂದಿಗೆ ಕಳುಹಿಸಬೇಕು.

ನಮೂನೆ 9.

(ನಿಬಂಧನೆ ನಂಬರ್ 38.)

.... ಡಿಸ್ಟ್ರಿಕ್ಟು.

19 —19 ನೆ ಇಸವಿಯ ಬಾಬತು ಸೇವಿಂಗ್ಸ್ ಬ್ಯಾಂಕು ಡಿಪಾಜಿಟ್ಟುಗಳ ಸಾಲ್ ಝಾಡೆ ತಖ್ತೆ.

1	2	3	4		5			6	7		8	9
			ಡಿಪಾಜಿಟ್ಟುಗಳು.		ಬಡ್ಡಿ.				ವಾಪಸ್ಸು ಪಾವತಿಗಳು.			ಷರಾಗಳು.
ಲೆಕ್ಕದ ನಂಬರು.	ಡಿಪಾಜಿಟರ ಹೆಸರು ಮತ್ತು ಕಸಬು.	19 ನೆ ಇಸವಿಯ ಜುಲೈ ಗುರ್ರೆ ತಾರೀಖಿನಲ್ಲಿ ಷುರು ಬಾಕಿ.	ನಗದು.	ನಿಂತುಹೋದ ಲೆಕ್ಕಗಳಿಂದ ತೆಗೆದು ತಿರಿಗಿ ಇಟ್ಟ ಮೊಬಲಗು.	ಚಾಲ್ತಿ ಡಿಪಾಜಿಟ್ಟುಗಳ ಮೇಲೆ.	ನಿಂತುಹೋದ ಲೆಕ್ಕಗಳಿಗೆ ವರ್ಗಾಯಿಸಲ್ಪಟ್ಟ ಮೊಬಲಗುಗಳ ಮೇಲೆ.	ನಿಂತುಹೋದ ಲೆಕ್ಕಗಳಿಂದ ತೆಗೆದು ತಿರಿಗಿ ಇಟ್ಟ ಮೊಬಲಗುಗಳ ಮೇಲೆ.	3, 4 ಮತ್ತು 5ರ ಜುಮ್ಲಾ.	(a) ನಗದು.	(b) ನಿಂತುಹೋದ ಲೆಕ್ಕಗಳಿಗೆ ವರ್ಗಾಯಿಸಲ್ಪಟ್ಟ ಮೊಬಲಗುಗಳು.	19 ನೆ ಇಸವಿಯ ಜೂನ್ 30ನೆ ತಾರೀಖಿನಲ್ಲಿ ಅಖೈರು ಬಾಕಿ.	(1) ಯಾವ ಟ್ರೆಜರಿಗಳಿಗೆ ಮತ್ತು ಯಾವ ಟ್ರೆಜರಿಗಳಿಂದ ವರ್ಗಗಳು ಮಾಡಲ್ಪಟ್ಟವೋ ಆ ಟ್ರೆಜರಿಗಳ ಹೆಸರುಗಳನ್ನು ಲೆಕ್ಕಗಳ ಸದರಿಗೆ ಕೆಂಪು ಶಾಯಿನಲ್ಲಿ ಬರೆಯಬೇಕು. (2) ಜಾಮೀನಿ ಡಿಪಾಜಿಟ್ಟುಗಳನ್ನು ಕೂಡ 2ನೆ ಕಲಮಿನಲ್ಲಿ ಕೆಂಪು ಶಾಯಿನಲ್ಲಿ "ಜಾ. ಡಿ." ಎಂತ ಬರೆಯಬೇಕು.

ತಾರೀಖು 31ನೆ ಜನವರಿ 1907.

ನಂ. ಜಿ. 2285—ಕೋರಟ್ಸ್ 186-06—2, ಮಿ॥ ವಿ. ಎಸ್. ರಾಜಗೋಪಾಲಾಚಾರ್ರು ಒಂದು ತಿಂಗಳ ಪ್ರಿವಿಲೇಜ್ ರಜಾಮೇಲೆ ಇರುವಾಗ ಕೃಷ್ಣರಾಜಪೇಟೆ ತಾಲ್ಲೂಕಿನ ಚಾರ್ಜಿನಲ್ಲಿ ಇಡಲ್ಪಟ್ಟಿರುವ ಸದರಿ ತಾಲ್ಲೂಕಿನ ಸಿರಸ್ತೆದಾರ್ ಕೆ. ಎನ್. ರಾಮಚಂದ್ರಯ್ಯನವರಿಗೆ, ಕ್ರಿಮಿನಲ್ ಪ್ರೊಸೀಡ್ಯುರ್ ಕೋಡಿನ 12ನೆ ಪ್ರಕರಣದ ಮೇರೆಗೆ ಮೂರನೆ ತರಗತಿಯ ಮಾಜಿಸ್ಟ್ರೇಟಿನ ಅಧಿಕಾರಗಳನ್ನು, ಅವರು ಆ ತಾಲ್ಲೂಕಿನ ಚಾರ್ಜಿನಲ್ಲಿರುವ ವರೆಗೆ ನಡೆಸತಕ್ಕ ಬಗ್ಗೆ, ಕೊಟ್ಟಿರುತ್ತದೆ.

ತಾರೀಖು 31ನೆ ಜನವರಿ 1907.

ನಂ. ಜಿ. 4785—ಜಿ. ಎಂ. 243-06-2, ಸರ್ವ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಕಟಿಸುವುದೇನಂದರೆ:—ಅನ್ಯ ದೇಶಗಳಲ್ಲಿ ವಾಸಮಾಡುವ ಬ್ರಿಟಿಷ್ ಪ್ರಜೆಗಳು, ತಾವು ಬ್ರಿಟಿಷ್ ಪ್ರಜೆಗಳೆಂಬುದಾಗಿ ಬ್ರಿಟಿಷ್ ಕಾನ್ಸುಲೇಟುಗಳಲ್ಲಿ ರಿಜಿಸ್ಟರ್ರಾಮಾಡಿಸಿಕೊಳ್ಳೋಣದರ ಆವಶ್ಯಕತೆಯನ್ನು ಅವರಿಗೆ ಖಚಿತವಾಗಿ ತಿಳಿಯಪಡಿಸುವುದು ಆವಶ್ಯಕವಾಗಿ ಎಣಿಸಲ್ಪಟ್ಟಿದೆ, ಮತ್ತು ಇಂಡಿಯಾ ಸರ್ಕಾರದ ಮೂಲಕ ಬಂದ ಶ್ರೀಮನ್ ಇಂಡಿಯಾ ಚಕ್ರವರ್ತಿಯವರ ಸೆಕ್ರೆಟರಿ ಆಫ್ ಸ್ಟೇಟ್ ರವರ ಅಪ್ಪಣೆ ಮೇರೆಗೆ, ಅನ್ಯ ದೇಶಗಳಿಗೆ ಹೋಗುವ ಬ್ರಿಟಿಷ್ ಇಂಡಿಯಾ ದೇಶೀಯರು ತಾವು ವಾಸಮಾಡುವ ಅನ್ಯ ದೇಶಗಳ ಕಾನ್ಸುಲೇಟುಗಳಲ್ಲಿ ಬ್ರಿಟಿಷ್ ಪ್ರಜೆಗಳೆಂದು ರಿಜಿಸ್ಟರ್ರಾಮಾಡಲ್ಪಡಲು ಕಷ್ಟವಾಗದೆ ಇರುವುದಕ್ಕಾಗಿ ರಹದಾರಿಗಳನ್ನು ಪಡೆದುಕೊಳ್ಳತಕ್ಕದ್ದೆಂದು ಆಜ್ಞಾಪಿಸಿದೆ.

ತಾರೀಖು 6ನೆ ಫೆಬ್ರವರಿ 1907.

ನಂ. 6905—ಮ್ಯುನಿಸಿಪಲ್—324-05—9, ವಜಾ ಮಾಡಲ್ಪಟ್ಟ ರಾಮಕೃಷ್ಣಪ್ಪನವರಿಗೆ ಬದಲಾಗಿ ಪಡಿಗೇನಹಳ್ಳಿಯ ಮ್ಯುನಿಸಿಪಲ್ ಸಭೆಗೆ, ವರ್ತಕ ಮಿ॥ ನಂದಿ ಗಿರಿಯಪ್ಪ ಬಿನ್ ರುದ್ರಪ್ಪನವರನ್ನು ಸಭಿಕರನ್ನಾಗಿ ನೇಮಕ ಮಾಡಿದೆ.

ತಾರೀಖು 26ನೆ ಜನವರಿ 1907.

ನಂ. ಫೈ. 5807—ಜ. ಫೈ. 161-06—2, ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಂಡರ್ ಸೆಕ್ರೆಟರಿ, ಮಿ॥ ಪಿ. ಜಿ. ಡಿಸೋಜಾ ಯವರು 1906ನೆ ಇಸವಿಯ ಡಿಸೆಂಬರ್ 22ನೆ ತಾರೀಖಿನ ಆರ್. 6299 ಎಲ್. ಆರ್. 256-06—3ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ತಮಗೆ ಕೊಡಲ್ಪಟ್ಟ 15 ದಿವಸಗಳ ಪ್ರಿವಿಲೇಜು ರಜಾದಲ್ಲಿ 10 ದಿವಸಗಳನ್ನು ಮಾತ್ರವೇ ಕ್ರಿಸ್ತಮಸ್ ರಜಾದ ಜತೆಯಲ್ಲಿ ಉಪಯೋಗಿಸಿಕೊಂಡು 1907ನೆ ಇಸವಿಯ ಜನವರಿ 13ನೆ ತಾರೀಖಿನ ಪೂರ್ವಾಹ್ನದಿಂದ ಕೆಲಸದ ಮೇಲೆ ವಾಪಸು ಹಾಜರಾಗಿರುವುದರಿಂದ ಅವರು ಉಪಯೋಗಿಸಿಕೊಳ್ಳದೆ ಉಳಿದ ರಜಾವನ್ನು ಎಂದರೆ 5 ದಿವಸಗಳ ರಜಾವನ್ನು ಇದರಿಂದ ವಜಾಮಾಡಿ ಇದೆ.

ತಾರೀಖು 28ನೆ ಜನವರಿ 1907.

ನಂ. 6694—ಮ್ಯುನಿಸಿಪಲ್. 368-06—4, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ, ಎಂದರೆ, ಸಕಲೇಶಪುರ ಮ್ಯುನಿಸಿಪಾಲಿಟಿಯಲ್ಲಿ ಚಕಡಾ ಬಂಡಿಗಳು ತಿರುಗಾಡುವುದಕ್ಕೆ, ಒಂದು ಓಣಿ ಮಾಡುವುದಕ್ಕೋಸ್ಕರ ಆವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಸಕಲೇಶಪುರ ಸಬ್ ಡಿವಿಜನ್ನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರೀ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರು.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಸೀಮೆ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಹಾಸನ.	ಮಂಜರಾಬಾದು.	ಕಸಬಾ ಸಕಲೇಶಪುರ.	ಸಕಲೇಶಪುರ ಮ್ಯುನಿಸಿಪಾಲಿಟಿ.	ಸಕಲೇಶಪುರದ ಮಹಮದ್ ಹಸನಿನ ಮಗ ಅಬ್ದುಲ್ ಅಜೀಜ್.	ಸಂತೆ ಮಾಳವಾಗಿ ಉಪಯೋಗಿಸುತ್ತಿರುವ ಖಾಲಿ ನಿವೇಶನ.	ಎ. ಮೂಡಲ ಭಾಗ 10 × 6 = 60 ಚದರ ಗಜಗಳು. ಬಿ. ಪಡುವಲ ಭಾಗ 10 × 3 = 30 ಚದರ ಗಜಗಳು. 90	ಎ. ಶ್ರೀಕಂಠಯ್ಯನ ಮನೆ. ಬಿ. ಅಬ್ದುಲ್ ಅಜೀಜನ ಮನೆ.	ಎ. ಅಬ್ದುಲ್ ಅಜೀಜನ ಮನೆ. ಬಿ. ಹುಸೇನಿ ಪಾಟಾಸಾಬಿಯ ಮನೆ ನಿವೇಶನ.	ಎ. ಖಾಲಿ ಮನೆ ನಿವೇಶನ. ಬಿ. ಡಿಟೋ	ಎ. ಬೇಲೂರು ಮಂಜರಾಬಾದು ರಸ್ತೆಯ ಅಂಚಿನಲ್ಲಿ ಸರ್ಕಾರಕ್ಕೆ ಉಳಿಸಿ ಕೊಂಡಿರುವ ಜಮೀನು. ಬಿ. ಡಿಟೋ

ತಾರೀಖು 19ನೆ ಜನವರಿ 1907.

ನಂ. ರೆ. 6946—ಲ್ಯಾ. ರೆ. 225-06-6, ಸನ್ 1907ನೆ ಇಸವಿಯ ಜನವರಿ ಮೊದಲನೆ ತಾರೀಖಿನಿಂದ ಮಿ॥ ಎಂ. ಚೆಂಗಯ್ಯ ಶೆಟ್ಟರನ್ನು 3ನೆ ತರಗತಿಯ ಡೆಪ್ಯುಟಿ ಕಮಿಷನರಾಗಿ ಖಾಯಂಮಾಡಿದೆ.

ತಾರೀಖು 18ನೆ ಜನವರಿ 1907.

ನಂ. ಆರ್. 6943—ಎಲ್. ಆರ್. 415-06—3, ಸರ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:— ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ತರೀಕೆರೆ ತಾಲ್ಲೂಕಿನ ಶಿವನೆ-ಬುಕ್ಕಾಂಬುದಿ ಡಿಸ್ಟ್ರಿಕ್ಟ್ ಫಂಡು ರಸ್ತೆಯ ಉಪಯೋಗಕ್ಕೆ ಗ್ರಾವಲ್ ಅಗೆಯುವುದಕ್ಕೋಸ್ಕರ ಅವಶ್ಯಕವಾಗಿವೆ; ಮತ್ತು ಸೋಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಚಿಕ್ಕಮಗಳೂರು ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರೀ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ ಯಾ ಬಾಗಾಯತು.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ.			
								ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.				
ಕಡೂರು.	ತರೀಕೆರೆ.	[illegible]	ವೀರಾಪುರ ...	ದೊಡ್ಡ ದೇವರಪ್ಪ ಬಿನ್ ಕೃಷ್ಣಪ್ಪ	1	ಖುಷ್ಕಿ ...	1 0	ಸರ್ವೆ 5ನೆ ನಂಬರು	ಸರ್ವೆ 11ನೆ ನಂಬರ್	ಸರ್ವೆ 2ನೆ ನಂಬರ್	ಸರ್ವೆ 13ನೆ ನಂಬರ್.
			ಡಿಟೋ	ಡಿಟೋ ...	5	ಡಿಟೋ ...	0 20	ಬನೂರು ಎಲ್ಲೆ	ಸರ್ವೆ 1, 2, 3 ಮತ್ತು 4ನೆ ನಂಬರುಗಳು	ಸರ್ವೆ 6ನೆ ನಂಬರು	ಬನೂರು ಎಲ್ಲೆ
			ಡಿಟೋ ..	ಡಿಟೋ	11	ಡಿಟೋ ...	0 20	ಸರ್ವೆ 2, 3, 4 ಮತ್ತು 1ನೆ ನಂಬರುಗಳು ಗ್ರಾಮ ನಿವೇಶನ	ಸರ್ವೆ 10ನೆ ನಂಬರು ಮತ್ತು ಶಿವನೆ ಕೆರೆಯ ಕೋಡಿಹಳ್ಳ	ಸರ್ವೆ 7 ಮತ್ತು 8ನೆ ನಂಬರುಗಳು	ಸರ್ವೆ 13ನೆ ನಂಬರ್
			ಬುಕ್ಕಾಂಬುದಿ.	ಹಾಲಮ್ಮ ಕೋಂ ಶಿದ್ದಬಸವಯ್ಯ ...	59	ತರಿ	0 20	ಸರ್ವೆ 63, 64 ಮತ್ತು 65ನೆ ನಂಬರುಗಳು	ಸರ್ವೆ 58ನೆ ನಂಬರು	ರಸ್ತೆ	ಸರ್ವೆ 60ನೆ ನಂಬರ್
			ಶಿವನೆ ..	ನರಸಮ್ಮ ಕೋಂ ಕೃಷ್ಣಪ್ಪ ...	144	ಖುಷ್ಕಿ	0 20	ಸರ್ವೆ 143 ಮತ್ತು 146ನೆ ನಂಬರುಗಳು	ಸರ್ವೆ 145ನೆ ನಂಬರು	ಸರ್ವೆ 145ನೆ ನಂಬರು ಮತ್ತು ರಸ್ತೆ	ಸರ್ವೆ 135ನೆ ನಂಬರು
			ಡಿಟೋ ...	ತಿಮ್ಮ ಬಿನ್ ಹನುಮ ಪೂಜಾರಿ ..	147	ಡಿಟೋ	0 20	ಗ್ರಾಮ ನಿವೇಶನ	ಸರ್ವೆ 146ನೆ ನಂಬರು	ಸರ್ವೆ 148ನೆ ನಂಬರು ಮತ್ತು ರಸ್ತೆ	ಸರ್ವೆ 149ನೆ ನಂಬರು

ತಾರೀಖು 21ನೆ ಜನವರಿ 1907.

ನಂ. ಆರ್. 6977—ಎಲ್. ಆರ್. 422-06-3, 1894ನೆ ವರ್ಷದ 7ನೆಯ ನಂಬರ ಲ್ಯಾಂಡ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ನಂಜನಗೂಡು-ಹುರಾ ರಸ್ತೆಯ ಉಪಯೋಗಕ್ಕಾಗಿ ಗ್ರಾವಲ್ ಅಗೆಯುವದಕ್ಕೋಸ್ಕರ, ಅವಶ್ಯಕವಾಗಿವೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ನಂಜನಗೂಡು ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ ಕಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ :—

ಡಿಸ್ಟ್ರಿಕ್ಟು	ತಾಲೂಕು	ಹೋಬಳಿ	ಗ್ರಾಮ	ಖಾತೆದಾರನ ಹೆಸರು	ಸರ್ವೆ ನಂಬರು	ಜಮೀನಿನ ಬಾಬತು	ವಿಸ್ತೀರ್ಣ	ಕಂದಾಯ	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ: ವಿಸ್ತೀರ್ಣ	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ: ಕಂದಾಯ	ಚತುರ್ಸೀಮೆ: ಪೂರ್ವ	ಚತುರ್ಸೀಮೆ: ಪಶ್ಚಿಮ	ಚತುರ್ಸೀಮೆ: ಉತ್ತರ	ಚತುರ್ಸೀಮೆ: ದಕ್ಷಿಣ
								ರೂ. ಆ.	ಎ. ಗು. ಚ.	ಆಣೆ.				
ಮೈಸೂರು	ನಂಜನಗೂಡು	ಕಸಬಾ	ಚಾಮಲಾಪುರ	ಲಿಂಗನ ಹೆಂಡತಿ ನೀಲಮ್ಮ	322/1	ಖುಷ್ಕಿ	3 7	3 4	0 20 0	8	323ನೆ ಸರ್ವೆ ನಂ ಮತ್ತು ನೀಲಗಿರಿ ರಸ್ತೆ.	ಕೆಂಪಣ್ಣ ಮತ್ತು ಕೆಂಪನ 318ನೆ ಸರ್ವೆ ನಂಬರು.	80ಮತ್ತು 83ನೆ ಸರ್ವೆ ನಂಬರುಗಳು ಮತ್ತು ಹೈರೋಡ	317ನೆ ಸರ್ವೆ ನಂಬರು.
				ಹಾಲಿ ಹಿಡುವಳಿದಾರ ಮಾದಯ್ಯ ... ವಜೀರ ಮಾದಪ್ಪ ...	277	ಡಿಟ್ಟೋ.	6 17	5 0	0 [illegible] 59	4	ವೆಂಕಟಾದ್ರಿ ಶೆಟ್ಟಿಯ ಸರ್ವೆ 275ನೆ ನಂಬರು.	ಚೋಳನ ಸರ್ವೆ 272ನೆ ನಂಬರು.	ನಂಜುಂಡಗೌಡನ ಸರ್ವೆ 274ನೆ ನಂಬರು.	ಹುರಾ ರಸ್ತೆ ಮತ್ತು ಮಾಯಿಗಗೌಡನ ಸರ್ವೆ 301ನೆ ನಂಬರು.
				ವೆಂಕಟರಮಣ ಉಪಾಧ್ಯನ ಹೆಂಡತಿ ಸುಬ್ಬಮ್ಮ.	278	ಡಿಟ್ಟೋ	4 12	3 8	0 20 0	8	ಮಾಯಿಗಗೌಡನ 301ನೆ ಸರ್ವೆ ನಂಬರು.	ಸುಬ್ಬಮ್ಮನ 279ನೆ ಸರ್ವೆ ನಂಬರು.	ಹುರಾ ರಸ್ತೆ ಮತ್ತು 272ನೆ ಸರ್ವೆ ನಂಬರು.	ಸರ್ವೆ 287ನೆ ನಂಬರು ಕೆಂಪಣ್ಣ.
				ನಂಜುಂಡೇಶ್ವರಸ್ವಾಮಿಯ ದೇವಸ್ಥಾನದ ಇನಾಮು ಜಮೀನು. ಹಾಲಿ ಇಡುವಳಿದಾರ ಗಣಪತಿ ಶಾಸ್ತ್ರಿ.	226	ಡಿಟ್ಟೋ	4 31	3 0	0 35 33	12	ಚಾಮಲಾಪುರದ ಎಲ್ಲೆ.	ಕೆಂಚೇಗೌಡನ ಸರ್ವೆ 230ನೆ ನಂಬರು.	ಹುಲ್ಲಹಳ್ಳಿ ಹೈರೋಡು.	ಗಣಪತಿ ಶಾಸ್ತ್ರಿಗಳ 227ನೆ ಸರ್ವೆ ನಂಬರು.
			[illegible]	ಲಕ್ಕವಳ್ಳಿ ರಾಮರಾವ (ಫವತಿ) ಮಗ ಸುಬ್ಬರಾವ.	218	ಡಿಟ್ಟೋ	3 10	2 4	1 4 9	12	ಕುನ್ನನ 220ನೆ ಸರ್ವೆ ನಂಬರು.	ದ್ಯಾವೆಗೌಡನ 217ನೆ ಸರ್ವೆ ನಂಬರು.	ಲಕ್ಕವಳ್ಳಿ ರಾಮರಾಯರ 219ನೆ ಸರ್ವೆ ನಂಬರು.	ಹುಲ್ಲಹಳ್ಳಿ ರಸ್ತೆ.
				ಜಹಗೀರದಾರ ಭೀಮರಾವ	245	ಡಿಟ್ಟೋ	5 25	3 8	0 10 34	8	ಮಾರಿ ಚಿಕ್ಕನ ಸರ್ವೆ 242ನೆ ನಂಬರು	ವೋಜೆ ರಾಮಯ್ಯನ 246ನೆ ಸರ್ವೆ ನಂಬರ.	ಹುಲ್ಲಹಳ್ಳಿ ರಸ್ತೆ.	ಜಹಗೀರದಾರ ಭೀಮರಾಯರ 244ನೆ ಸರ್ವೆ ನಂಬರ.
				ಚಕ್ರಜಾಬ್ಲ	270	ಡಿಟ್ಟೋ	3 16	3 0	0 10 7	6	ಕೆರೆಯ ಅಂಗಳ.	ಗ್ರಾಮ ನಿವೇಶನ.	ಸರ್ವೆ 269ನೆ ನಂಬರು ಗೊಬ್ಬರ ಗುಂಡಿ.	ಸರ್ವೆ 275ನೆ ನಂಬರ ನಂಜುಂಡಯ್ಯ.
									4 18 7					

ತಾರೀಖು 22ನೆ ಡಿಸೆಂಬರ್ 1906.

ನಂ. ಆರ್. 6312—ಫಾ. 64-05—15. 1900ನೆ ಇಸವಿಯ 11ನೆ ನಂಬರ್ ಮೈಸೂರು ಫಾರೆಸ್ಟ್ ರೆಗ್ಯುಲೇಷನಿನ 17ನೆ ಪ್ರಕರಣದ ನಿಯಮಗಳ ಮೇರೆಗೆ, ಈ ಇಸ್ತಿಹಾರನಾಮೆಗೆ ಲಗತ್ತಿರುವ ಷೆಡ್ಯೂಲಿನಲ್ಲಿ ನಮೂದಿರುವ ಚತುರ್ಗಡಿಗಳೊಳಗೆ ಪ್ರದೇಶವು ಸದರಿ ಇಸ್ತಿಹಾರಿನ ಕೆಳಗೆ ವಿವರಿಸಿರುವ ಹಕ್ಕುಗಳ ಚಲಾವಣೆಗೆ ಒಳಪಟ್ಟು 1907ನೆ ಇಸವಿಯ ಜನವರಿ 1ನೆ ತಾರೀಖಿನಿಂದ "ಸಂಸ್ಥಾನ ಜಂಗಲಿ" ಎಂದು ಭಾವಿಸಲ್ಪಡುವುದೆಂತ ಪ್ರಕಟಿಸಲು ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ:—

ಷೆಡ್ಯೂಲ್.

ಡಿಸ್ಟ್ರಿಕ್ಟು	ತಾಲ್ಲೂಕು	ಸುಮಾರು ವಿಸ್ತೀರ್ಣ	ಜಂಗಲಿ ಹೆಸರು	ಚತುರ್ಗಡಿ.
ಶಿವಮೊಗ್ಗ	ನಗರ ತಾಲ್ಲೂಕು	2107 ಎಕರೆ	ಕಳಸಿ	ಉತ್ತರಕ್ಕೆ:—ಕಳಸಿ, ಮುಸ್ಕಾನಿ ಮತ್ತು ವಡಾಹೊಸಹಳ್ಳಿ ಗ್ರಾಮಗಳ ಮುಕ್ಕಪ್ಪ ಬಾಂದುಗಳಿಂದ ಎಲ್ಲೆಯ ರೇಖೆಯು ಹೊರಟು ಆಗ್ನೇಯವಾಗಿ ಕಳಸಿ ಗ್ರಾಮದ ದಕ್ಷಿಣ ಮೇರೆಯಲ್ಲಿ ಸುಮಾರು 6 ಫರ್ಲಾಂಗುಗಳ ದೂರದ ವರೆಗೆ ಮತ್ತು ಈಶಾನ್ಯಕ್ಕೆ ಕಳಸಿ ಮತ್ತು ಗುಬ್ಬಿಗ ಗ್ರಾಮಗಳ ದಕ್ಷಿಣ ಮೇರೆಗಳಲ್ಲಿ ಬೆಳ್ಳೂರು ಗ್ರಾಮದ 4ನೆ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಹೋಗಿ, ಅಲ್ಲಿಂದ ಆಗ್ನೇಯಕ್ಕೆ ಗುಬ್ಬಿಗ ಮತ್ತು ಕೋಡಿ ಗ್ರಾಮಗಳ ದಕ್ಷಿಣ ಮೇರೆಗಳಲ್ಲಿ ಕೋಡಿ ಗ್ರಾಮದ ಆಗ್ನೇಯ ಮೂಲೆಗೆ ಹೋಗುತ್ತದೆ. ಪೂರ್ವಕ್ಕೆ:—ಅಲ್ಲಿಂದ ತಮ್ಮಡಿಹಳ್ಳಿ ಗ್ರಾಮದ ಪಶ್ಚಿಮ ಮೇರೆಯಲ್ಲಿ ಅದರ ನೈರುತ್ಯ ಮೂಲೆಗೆ ಹೋಗಿ ಅಲ್ಲಿ ಆಯನೂರು ಹೈರೋಡನ್ನೂ ಶಂಕರ

ಸಂಸ್ಥಾನ ಜಂಗ್ಲಿಯ ಪಶ್ಚಿಮ ಮೇರೆಯನ್ನೂ ಸೇರುತ್ತದೆ; ಅಲ್ಲಿಂದ ಸದರಿ ಸಂಸ್ಥಾನ ಜಂಗ್ಲಿಯ ಪಶ್ಚಿಮ ಮೇರೆಯಲ್ಲಿ ಹೈರೋಡಿನ ಎಡಭಾಗಕ್ಕೆ ಸಂಸ್ಥಾನ ಜಂಗ್ಲಿಯ ನೈರುತ್ಯ ಮೂಲೆಗೆ ಹೋಗಿ ಅಲ್ಲಿ ಶೆಟ್ಟಿಹಳ್ಳಿ ಗ್ರಾಮದ ಮೇರೆಯ ವಾಯವ್ಯ ಮೂಲೆಯ ಬಾಂದುಗಳನ್ನು ಸೇರುತ್ತದೆ; ಅಲ್ಲಿಂದ ಶೆಟ್ಟಿಹಳ್ಳಿ ಹಗ್ಗಳತಿ ಮತ್ತು ತೋಟದ ಕೊಪ್ಪದ ಪಶ್ಚಿಮ ಮೇರೆಗಳಲ್ಲಿ ತೋಟದ ಕೊಪ್ಪದ ಸರಹದ್ದಿನ ನೈರುತ್ಯ ಮೂಲೆಗೆ ಹೋಗುತ್ತದೆ.

ದಕ್ಷಿಣಕ್ಕೆ:—ಅಲ್ಲಿಂದ ಗರ್ಗ ಮತ್ತು ವೆಂಕಣ್ಣಹಳ್ಳಿ ಗ್ರಾಮಗಳ ಉತ್ತರ ಮೇರೆಗಳಲ್ಲಿ ವೆಂಕಣ್ಣಹಳ್ಳಿ ಗ್ರಾಮದ ವಾಯವ್ಯ ಮೂಲೆಗೆ ಹೋಗಿ, ಅಲ್ಲಿಂದ ಜೋಗಿಕೊಪ್ಪ ಗ್ರಾಮದ ಉತ್ತರ ಮೇರೆಯಲ್ಲಿ ಸುಮಾರು $1\frac{1}{2}$ ಫರ್ಲಾಂಗುಗಳ ದೂರ ಹೋಗುತ್ತದೆ.

ಪಶ್ಚಿಮಕ್ಕೆ:—ಅಲ್ಲಿಂದ ಜೋಗಿಕೊಪ್ಪ, ಯೋಗಮಳಲಿ, ಹಾರಂಬಳ್ಳಿ, ಯೋಗ, ವಾಟೆಗಾರು ಮತ್ತು ವಡಾಹೊಸಹಳ್ಳಿ ಗ್ರಾಮಗಳ ಪೂರ್ವ ಮೇರೆಯಲ್ಲಿ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

ಎ. ಷರಾಗಳು:—

ಈ ತಾಕಿನಲ್ಲಿ, ಈ ಕೆಳಗೆ ನಮೂದಿಸುವ ದಾರಿಯ ಹಕ್ಕುಗಳನ್ನು ಮಂಜೂರ್ಮಾಡಿ ಇದೆ:—

(1) ಬೆಳ್ಳೂರಿಂದ ಆಯನೂರಿಗೆ ಹೋಗುವ ಗಾಡಿದಾರಿ, 15 ಅಡಿಗಳ ಅಗಲ ಮತ್ತು 1 ಫರ್ಲಾಂಗು ಉದ್ದ; ವರ್ಷವೆಲ್ಲಾ ಜನಗಳೂ, ದನಗಳೂ, ಮತ್ತು ಗಾಡಿಗಳೂ ತಿರುಗಾಡುವುದಕ್ಕೆ ಬಿಟ್ಟಿರತಕ್ಕದ್ದು. ಇದು ಸರ್ವೆ 4ನೆ ನಂಬರಿನ ವಾಯವ್ಯ ಮೂಲೆಯಿಂದ ನೈರುತ್ಯಕ್ಕೆ ಸುಮಾರು 3 ಫರ್ಲಾಂಗುಗಳ ದೂರದಲ್ಲಿ 1ನೆ ನಂಬರ್ ಆವರಣದ ಪಶ್ಚಿಮ ಮೇರೆಯಲ್ಲಿ ಒಂದು ಸ್ಥಳದಲ್ಲಿ, ಸಂಸ್ಥಾನ ಜಂಗ್ಲಿಯನ್ನು ಪ್ರವೇಶಿಸಿ, ಉತ್ತರಕ್ಕೆ ಸುಮಾರು 1 ಫರ್ಲಾಂಗುದೂರ ಸರ್ವೆ 3ನೆ ನಂಬರಿನಲ್ಲಿ ಹೋಗಿ, ಸರ್ವೆ 4ನೆ ನಂಬರಿನ ವಾಯವ್ಯ ಮೂಲೆಯಿಂದ ಪಶ್ಚಿಮಕ್ಕೆ ಸುಮಾರು $2\frac{1}{4}$ ಫರ್ಲಾಂಗುಗಳ ದೂರದಲ್ಲಿ ಸಂಸ್ಥಾನ ಜಂಗಲಿಯ ಉತ್ತರ ಮೇರೆಯಲ್ಲಿ ಒಂದು ಸ್ಥಳದಲ್ಲಿ ಸದರಿ ಜಂಗಲಿಯನ್ನು ಬಿಡುತ್ತದೆ.

(2) ಬೆಳ್ಳೂರಿಂದ ಗುಬ್ಬಿಗಕ್ಕೆ ಹೋಗುವ ಕಾಲುದಾರಿ, 6 ಅಡಿಗಳ ಅಗಲ ಮತ್ತು ಸುಮಾರು $\frac{1}{2}$ ಫರ್ಲಾಂಗು ಉದ್ದ, ವರ್ಷವೆಲ್ಲಾ ಜನರೂ, ದನಗಳೂ ತಿರುಗಾಡುವುದಕ್ಕೆ ಬಿಟ್ಟಿರತಕ್ಕದ್ದು. 1ನೆ ಆವರಣದ ಪಶ್ಚಿಮ ಮೇರೆಯ ಒಂದು ಸ್ಥಳದಲ್ಲಿ ಸರ್ವೆ 4ನೆ ನಂಬರಿನ ವಾಯುವ್ಯ ಮೂಲೆಯಿಂದ ನೈರುತ್ಯಕ್ಕೆ ಸುಮಾರು 1 ಫರ್ಲಾಂಗು ದೂರದಲ್ಲಿ ಸಂಸ್ಥಾನ ಜಂಗ್ಲಿಯನ್ನು ಪ್ರವೇಶಿಸಿ, ಸರ್ವೆ 3ನೆ ನಂಬರಿನಲ್ಲಿ ನುಗ್ಗಿ ಉತ್ತರಕ್ಕೆ ಸುಮಾರು ಅರ್ಧ ಫರ್ಲಾಂಗುದೂರ ಹೋಗುತ್ತದೆ. ಮತ್ತು ಜಂಗ್ಲಿಯ ಉತ್ತರ ಮೇರೆಯ ಒಂದು ಸ್ಥಳದಲ್ಲಿ ಸರ್ವೆ 4ನೆ ನಂಬರಿನ ವಾಯುವ್ಯ ಮೂಲೆಯಿಂದ ಪಶ್ಚಿಮಕ್ಕೆ ಸುಮಾರು ಒಂದು ಫರ್ಲಾಂಗು ದೂರದಲ್ಲಿ ಜಂಗ್ಲಿಯನ್ನು ಬಿಡುತ್ತದೆ.

ಇಂಡಿಯಾ ದೇಶದಿಂದ (ಉತ್ತರ ಅಮೇರಿಕಾದ) ಕೆನಡಾ ದೇಶಕ್ಕೆ ಜನರು ವಲಸೆ ಹೋಗುವುದನ್ನು ಅಡ್ಡಿ ಮಾಡಬೇಕೆಂದೂ, ಹಾಗೆ ವಲಸೆ ಹೋಗಬೇಕೆಂದಿರುವವರಿಗೆ ಆ ದೇಶದಲ್ಲಿ ಯಾವ ಕೆಲಸವನ್ನು ಸಂಪಾದಿಸುವುದು ಸಾಧ್ಯವಿಲ್ಲವೆಂದು ಅವರಿಗೆ ಎಚ್ಚರಿಸಬೇಕೆಂದೂ, ಅವರು ಗತಿಯಿಲ್ಲದವರಾಗಿರುವ ಸಂದರ್ಭದಲ್ಲಿ ಕೆನಡಾ ದೇಶದ ಕಾನೂನಿನ ಮೇರೆಗೆ ಅವರು ಗಡಿಪಾರು ಮಾಡಲ್ಪಡುವುದಕ್ಕೆ ಗುರಿಯಾಗುತ್ತಾರೆಂದು ತಿಳಿಸಬೇಕೆಂದೂ ಕೆನಡಾ ಸರ್ಕಾರದವರು ಕೋರುತ್ತಾರೆ.

ತಾರೀಖು 1ನೆ ಮಾರ್ಚಿ 1907.

ನಂ. ಜಿ. 2655—ಪೊಲೀಸ 142-06—4, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 157ನೆಯ ಪ್ರಕರಣದ ಮೇರೆಗೆ, ಪೊಲೀಸು ಪ್ರೊಬೇಷನರಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿ॥ ಮಿರ್ಜಾ ಮಹಮ್ಮದ್ ಇಸ್ಮೇಲ್ ಬಿ. ಎ., ಯವರಿಗೆ 1907ನೆಯ ಇಸವಿಯ ಫೆಬ್ರವರಿ 18ನೆ ತಾರೀಖಿನಿಂದ ಅಥವಾ ಆ ತಾರೀಖಿನ ತರುವಾಯ ಅವರು ರಜಾವನ್ನು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿರುತ್ತದೆ.

ತಾರೀಖು 1ನೆ ಮಾರ್ಚಿ 1907.

ನಂ. ಜಿ. 5389—ಜಿ. ಎಂ. 19-06—10, ಸನ್ 1894ನೆ ಇಸವಿಯ 11ನೆ ನಂಬರ್ (ನವೀನ ಕಲ್ಪನೆಗಳು ಮತ್ತು ನಕ್ಷೆಗಳ) ರೆಗ್ಯುಲೇಷನಿನ 8, 9, 10 ಮತ್ತು 11ನೆ ಪ್ರಕರಣಗಳನ್ನನುಸರಿಸಿ ಬಂದು ನವೀನ ಕಲ್ಪನೆಯ ಇದರಲ್ಲಿ ಕಂಡ ವಿವರಣೆಯು ತಲುಪಿರುತ್ತದೆ. ಮತ್ತು ಇಷ್ಟವಿರುವವರು ಮೈಸೂರು ಸರ್ಕಾರದ ಜನರಲ್ ಮತ್ತು ರೆವಿನ್ಯು ಇಲಾಖೆಗಳ ಸೆಕ್ರೆಟರಿಯವರಿಗೆ ಬರೆದುಕೊಂಡು ಬಂದು ರೂಪಾಯಿ ರುಸುಂ ಕೊಟ್ಟು ಅವರ ಕಚೇರಿಯಲ್ಲಿ ಆ ವಿವರಣೆಯನ್ನು ಪರೀಕ್ಷೆ ಮಾಡಿ ನೋಡಲು ಅಡಿ ಇರುವುದಿಲ್ಲ.

ಇಂಗ್ಲೆಂಡಿನ, ಲ್ಯಾಂಕಾಸ್ಟರ್ ಕೌಂಟಿಯ, ಲ್ಯಾಂಕಾಸ್ಟರ್ ಪಟ್ಟಣದಲ್ಲಿರುವ ಗಣಿಯ ಇಂಜನೀರ ಮಿ॥ ಚಾರ್ಲ್ಸ್ ಬ್ಲೇಡ್ಸ್ ಕವರ್ಡೇಲ್ ಸ್ಟೋರಿ ಯವರಿಂದ ಮಾಡಲ್ಪಟ್ಟದು.

ಪುಡಿ ಮಾಡುವ, ತೊಳೆಯುವ, ಶೋಧಿಸುವ ಯಂತ್ರಗಳಿಗೆ ಸಂಬಂಧಪಟ್ಟ ಅಭಿವೃದ್ಧಿಗಳು.

ತಾರೀಖು 2ನೆ ಮಾರ್ಚಿ 1907.

ನಂ. ಜೆ. 2667— ಕೋರ್ಟ್ಸ್ 207-06—2, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 37ನೆ ಪ್ರಕರಣದ ಮೇರೆಗೆ, ದಾವಣಗೆರೆ ಸಬ್ ಡಿವಿಜನಿನ ಅಸಿಸ್ಟೆಂಟ್ ಕಮಿಷನರು ಮತ್ತು ಮೊದಲನೆಯ ಕ್ಲಾಸ್ ಮಾಜಿಸ್ಟ್ರೇಟರಾದ ಮಿ|| ಕೆ. ಚಾಂಡಿಯವರಿಗೆ ಸದರಿ ಕೋಡಿನ 110ನೆ ಪ್ರಕರಣದ ಮೇರೆಗೆ ಒಳ್ಳೆಯ ನಡತೆಗೋಸ್ಕರ ಜಾಮಿನ್ ಕೇಳುವ ಅಧಿಕಾರವನ್ನು ಕೊಟ್ಟಿದೆ.

ತಾರೀಖು 5ನೆ ಮಾರ್ಚಿ 1907.

ನಂ. ಜೆ. 2693— ಕೋರ್ಟ್ಸ್ 210-06—2, ಸಿವಿಲ್ ಪ್ರೊಸೀಡ್ಯೂರ್ ಕೋಡಿನ 641ನೆ ಪ್ರಕರಣದ ಮೇರೆಗೆ, ತಿರುಮಕೂಡ್ಲು ನರಸೀಪುರ ತಾಲ್ಲೂಕಿನ ಸೋಸಲೆ ಗ್ರಾಮದ ಶ್ರೀ ವ್ಯಾಸರಾಯಸ್ವಾಮಿ ಮಠದ ಸ್ವಾಮಿಗಳು ಶ್ರೀಮದ್ವಿದ್ಯಾ ಶ್ರೀ ರತ್ನಾಕರ ತೀರ್ಥ ಶ್ರೀಪಾದಂಗಳವರನ್ನು ಸಿವಿಲ್ ಕೋರ್ಟುಗಳಲ್ಲಿ ಖುದ್ದು ಹಾಜರಾಗುವುದರಿಂದ ವಿನಾಯಿಸುವಂತೆ ಶ್ರೀಮನ್ ಮಹಾರಾಜರವರ ಸರ್ಕಾರದವರು ಇದರಿಂದ ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 22ನೆ ಫೆಬ್ರವರಿ 1907.

ನಂ. ರೆ. 7701— ಫಾರೆಸ್ಟ್ 128-06—2, ಸನ್ 1900ನೆ ಇಸವಿಯ XIನೆ ನಂಬರು ಮೈಸೂರು ಸೀಮೆಯ ಫಾರೆಸ್ಟ್ ರೆಗ್ಯುಲೇಷನ್ 4ನೆ ಪ್ರಕರಣದ ವಿಧಿಗಳನ್ನನುಸರಿಸಿ ಮೈಸೂರು ಸೀಮೆಯ ಶ್ರೀಮನ್ ಮಹಾರಾಜರವರ ಸರ್ಕಾರದವರು ಪ್ರಸಿದ್ಧಪಡಿಸುವದೇನಂದರೆ ಇದರಡೀ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ಮೇಲ್ಕಂಡ ರೆಗ್ಯುಲೇಷನಿನ ವಿಧಿಗಳಂತೆ ಸ್ಟೇಟ್ ಫಾರೆಸ್ಟಾಗಿ ಏರ್ಪಡತಕ್ಕದ್ದೆಂದು ಯೋಚಿಸಿರುತ್ತೆ.

ಡಿಸ್ಟ್ರಿಕ್ಟ್	ತಾಲ್ಲೂಕು ಮತ್ತು ಹೋಬಳಿ	ಸುಮಾರು ವಿಸ್ತೀರ್ಣ	ಫಾರೆಸ್ಟಿನ ಹೆಸರು	ಸ್ಥಳದ ಚಕ್ಕುಬಂದಿ
ಮೈಸೂರು.	ಹುಣಸೂರು ತಾಲ್ಲೂಕು, ಬಿಳಿಕೆರೆ ಹೋಬಳಿ	ಎಕರೆ 678 ಗುಂಟೆ 32	ದೊಡ್ಡಹರವೆ ಸ್ಟೇಟ್ ಫಾರೆಸ್ಟ್	ಸ್ಥಳ.—ದೊಡ್ಡಹರವೆ ಸ್ಟೇಟ್ ಫಾರೆಸ್ಟಿನ ಪೂರ್ವ ಸರಹದ್ದಿನಿರುವ ಕೆಂಬೋರೆ ಹಳ್ಳದಮೇಲೆ ಇರುತ್ತದೆ. ಮತ್ತು ಮೈಸೂರು ಡಿಸ್ಟ್ರಿಕ್ಟ್ ಹುಣಸೂರು ತಾಲ್ಲೂಕು ಪೆರಿಯಾಪಟ್ಣ ಫ್ರೇಜರಪೇಟೆ ಹೈರೋಡ್ ಮೇಲಿರುವ ಕೊಪ್ಪಗ್ರಾಮಕ್ಕೆ ನೈರುತ್ಯದಿಕ್ಕಿಗೆ ಸುಮಾರು ಒಂದು ಮೈಲಿ ದೂರದಲ್ಲಿರುತ್ತದೆ. ಚಕ್ಕುಬಂದಿ. ಉತ್ತರಕ್ಕೆ—ಕೆಂಬೋರೆಹಳ್ಳದ ಮೇಲಿರುವ ದೊಡ್ಡಹರವೆ ಫಾರೆಸ್ಟಿನ ಸರಹದ್ದು ಕಲ್ಲಿನ ವಾಯುವ್ಯ ಮೂಲೆಯಿಂದ ಹೊರಟು, ಲೈನ್ ಈಶಾನ್ಯದಿಕ್ಕಿಗೆ ಮೇಲೆ ಹೇಳಲ್ಪಟ್ಟ ನದಿಯನ್ನನುಸರಿಸಿ, ಸದರಿ ನದಿಯು ಜೋಡಹಳ್ಳವನ್ನು ಸೇರುವ ಜಾಗಕ್ಕೆ ಕಳ್ಳಮ್ಮನಕುಮರಿ ಗ್ರಾಮದ 38 ಸರ್ವೆ ನಂಬರ ಉತ್ತರ ದಿಕ್ಕಿನ ಕೊನೆ ಭಾಗದಲ್ಲಿ ಸೇರುತ್ತದೆ. ಪೂರ್ವಕ್ಕೆ—ಅಲ್ಲಿಂದ ಹೊರಟು, ಕಳ್ಳಮ್ಮನಕುಮರಿ, ಅರಳಿಕುಮರಿ ಮತ್ತು ಲಕ್ಷ್ಮೀಪುರ ಗ್ರಾಮಗಳು ಸೇರುವ ಜೋಡಹಳ್ಳಕ್ಕೆ ಹೋಗುತ್ತದೆ.

ದಕ್ಷಿಣಕ್ಕೆ—ಅಲ್ಲಿಂದ ಸದರಿ ಲೈನ್ ಅರಳಿಕುಮರಿ ಗ್ರಾಮದ ಉತ್ತರ ಸರಹದ್ದನ್ನು ಅನುಸರಿಸಿ, ಅರಳಿಕುಮರಿ, ಕಾಳಮ್ಮನ ಕುಮರಿ ಗ್ರಾಮಗಳ ಮತ್ತು ದೊಡ್ಡಹರವೆ ಸ್ಟೇಟ್ ಫಾರೆಸ್ಟು ಇವು ಮೂರು ಸೇರುವ ಕೆಂಬೋರೆಹಳ್ಳಕ್ಕೆ ಹೋಗುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ಮೇಲ್ಕಂಡ ಕೆಂಬೋರೆಹಳ್ಳವನ್ನು ತಟಾದು ಹೊರಟ ಜಾಗಕ್ಕೆ ಸೇರುತ್ತದೆ.

2. ಸದರಿ ಪ್ರಕರಣದ (c) ವಾಕ್ಯದ ಮೇರೆಗೆ, ಮೈಸೂರು ಸೀಮೆಯ ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಮಿ|| ಎಂ. ಶಾಮರಾಯರವರನ್ನು ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರನ್ನಾಗಿ ನೇಮಕರನ್ನಾಗಿ ಮಾಡಲು ಮೈಸೂರು ಶ್ರೀಮನ್ ಮಹಾರಾಜರವರು ಹುಕುಂ ದಯಪಾಲಿಸಿರುತ್ತಾರೆ. ಮತ್ತು ಮಿ|| ಶಾಮರಾಯರವರು ಸದರಿ ಎಲ್ಲೆಗಳಿಂದ ಆವೃತವಾಗಿರುವ ಜಮೀನಿನಲ್ಲಿ ಅಥವಾ ಜಮೀನಿನಮೇಲೆ ಅಥವಾ ಅಂಥಾ ಭೂಮಿಯ ಯಾವುದಾದರೂ ಜಂಗಲಿ ಉತ್ಪತ್ತಿಗೆ ಯಾವ ಮನುಷ್ಯನಿಗಾಗಲಿ ಅಥವಾ ಯಾವ ಮನುಷ್ಯನ ಪರವಾಗಿಯಾಗಲಿ ಉಂಟೆಂದು ಹೇಳಲ್ಪಡುವ ಹಕ್ಕುಗಳ ಇರುವಿಕೆ, ಸ್ವಭಾವ, ಮತ್ತು ಪರಿಮಾಣವನ್ನು ಕುರಿತು ವಿಚಾರಮಾಡಿ ಅವುಗಳನ್ನು ನಿಷ್ಕರ್ಷೆ ಮಾಡತಕ್ಕದ್ದು; ಮತ್ತು ಸದರಿ ರೆಗ್ಯುಲೇಷನಿನ 2ನೆ ಅಧ್ಯಾಯದ ನಿಯಮಗಳ ಮೇರೆಗೆ ಆ ವಿಷಯದಲ್ಲಿ ಕ್ರಮ ಜರಗಿಸತಕ್ಕದ್ದು. ಮತ್ತು ತತ್ಕಾಲದಲ್ಲಿ ಮೈಸೂರು ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರು ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರು ನಡೆಸುವ ವಿಚಾರಣೆಯಲ್ಲಿ ಅವರಿಗೆ ಸರ್ಕಾರದವರ ಪರವಾಗಿ ಸಹಾಯಕರಾಗಿರತಕ್ಕದ್ದು.

3. ಸದರಿ ರೆಗ್ಯುಲೇಷನಿನ 15ನೆ ಪ್ರಕರಣದಿಂದ ತಮಗೆ ಕೊಡಲ್ಪಟ್ಟ ಅಧಿಕಾರದ ಮೇರೆಗೆ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ತತ್ಕಾಲದಲ್ಲಿನ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರನ್ನು, ಸದರಿ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಪ್ರಕರಣಗಳ ಮೇರೆಗೆ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರ ಹುಕುಮಿನಮೇಲೆ ಬರುವ ಅಪ್ಪೀಲುಗಳನ್ನು ಕೇಳುವ ರೆವಿನ್ಯೂ ಇಲಾಖೆಯ ಆಫೀಸರಾಗಿ ನೇಮಿಸಲು ಹುಕುಂ ದಯಪಾಲಿಸಿರುತ್ತಾರೆ.

ತಾರೀಖು 13ನೇ ಫೆಬ್ರುವರಿ 1907.

ನಂ. ರೆ. 7493—ಫಾರೆಸ್ಟು 24-06—10, ಈ ಇಸ್ತಿಹಾರ್ನಾಮೆಯ ಮೂಲಕ ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಗಂಧದ ಮರಗಳಿಗೆ ಬರುವ ಸ್ಪೈಕ್ ರೋಗದ ಕಾರಣವನ್ನು ಕಂಡು ಹಿಡಿದು ಅದನ್ನು ಸಮೂಲವಾಗಿ ನಾಶಮಾಡುವುದಕ್ಕೆ ಪ್ರಬಲವಾಗಿಯೂ, ಕಾರ್ಯಕಾರಿಯಾಗಿಯೂ, ಅಗ್ಗವಾಗಿಯೂ, ಸುಲಭವಾಗಿ ಪ್ರಯೋಗಿಸತಕ್ಕದಾಗಿಯೂ ಇರುವ ಔಷಧವನ್ನು ತಿಳಿಸುವವರಿಗೆ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಹತ್ತು ಸಾವಿರ ರೂಪಾಯಿಗಳ ಬಹುಮಾನವನ್ನು ಕೊಡಲು ಸಿದ್ಧವಾಗಿರುತ್ತಾರೆ. ಈ ಬಹುಮಾನವು ಈ ಇಸ್ತಿಹಾರ್ನಾಮೆಯ ತಾರೀಖಿನಿಂದ ಮೂರು ವರ್ಷಗಳೊಳಗೆ ಯಾವಾಗಲಾದರೂ ಪಡೆಯತಕ್ಕದಾಗಿರುತ್ತದೆ.

2. ಮೇಲೆ ಕಂಡ ಬಹುಮಾನವನ್ನು ಅಪೇಕ್ಷಿಸುವ ಪ್ರತಿಯೊಬ್ಬರೂ ತಾವು ಶೋಧನೆ ಮಾಡಿದುದರ ರಿಪೋರ್ಟನ್ನು ಸೂಕ್ಷ್ಮದರ್ಶಿಯಲ್ಲಿ ಪರೀಕ್ಷಿಸುವುದಕ್ಕಾಗಿ ಪದಾರ್ಥಗಳ ಚಿತ್ರಗಳಿರುವ ಕನಡಿಗಳು, ನಕ್ಷೆಗಳು ಮೊದಲಾದುವುಗಳೊಡನೆ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದ ಜನರಲ್ ಮತ್ತು ರವಿನ್ಯೂ ಇಲಾಖೆಗಳ ಸೆಕ್ರೆಟರಿಯವರಿಗೆ ಕಳುಹಿಸಬೇಕು. ಈ ಬಹುಮಾನ ಪಡೆಯುವುದಕ್ಕೆ ತರುವ ಯಾವ ಬಿನ್ನಹವನ್ನೂ ಅಂಗೀಕರಿಸುವುದಕ್ಕೂ ಮೊದಲು ಈ ಕೆಳಗಿನ ಷರತ್ತುಗಳನ್ನು ನೆರವೇರಿಸಿರಬೇಕು :—

(1) ರೋಗದ ಕಾರಣವನ್ನು ನಿರ್ಣಯವಾಗಿಯೂ ಸ್ಪಷ್ಟವಾಗಿಯೂ ಗೊತ್ತುಮಾಡಿರಬೇಕು.

(2) ಕಾರ್ಯಕಾರಿಯಾಗಿಯೂ, ಅಗ್ಗವಾಗಿಯೂ, ಸುಲಭವಾಗಿ ಪ್ರಯೋಗಿಸತಕ್ಕದಾಗಿಯೂ ಇರುವ ಒಂದು ಔಷಧವನ್ನು ಹೇಳಿರಬೇಕು.

(3) ಆ ಔಷಧವು, ರೋಗ ಹರಡಿಕೊಳ್ಳುವುದನ್ನು ಒಂದು ವರ್ಷದೊಳಗಾಗಿ ಕಂಡಹಾಗೆ ನಿಲ್ಲಿಸುವಂಥಾದ್ದಾಗಿರಬೇಕು. ಎಲ್ಲಾ ಬಿನ್ನಹಗಳನ್ನೂ, ಸರ್ಕಾರದವರು ನೇಮಿಸುವ ಜಂಗಲಿ ಅಧಿಕಾರಿಗಳೂ ಸೇರಿ ಈ ವಿಷಯವನ್ನು ವಿಶೇಷವಾಗಿ ಪರಿಶೋಧಿಸಿರುವ ಮೂವರು ಪಂಡಿತರಿಗೆ ಕಡಮೆಯಿಲ್ಲದ ಒಂದು ಸಭೆಗೆ, ತೀರ್ಪಿನ ಬಗ್ಗೆ ಒಪ್ಪಿಸಲಾಗುವುದು; ಆ ಸಭೆಯು ಅಥವಾ ಅಲ್ಲಿನವರ ಪೈಕಿ ಹೆಚ್ಚು ಸಂಖ್ಯೆಯವರ ತೀರ್ಪೇ ಕಡೆಯದಾಗಿರುವುದು.

3. ಈ ವಿಷಯವನ್ನು ಶೋಧನೆ ಮಾಡಲು ಇಷ್ಟವುಳ್ಳವರು, ಸ್ಪೈಕ್ ರೋಗವನ್ನು ನಿರ್ಮೂಲಮಾಡುವ ವಿಷಯವನ್ನು ಕುರಿತ, ಮುಖ್ಯವಾದ ಮತ್ತು ಉಪಯೋಗವಾದ ಕಾಗದ ಪತ್ರಗಳನ್ನು ಸಂಗ್ರಹಿಸಿ ಒಟ್ಟಾಗಿ ಅಚ್ಚು ಹಾಕಿರುವ ಪುಸ್ತಕದ ಪ್ರತಿಗಳನ್ನು ಮೈಸೂರು ಜಂಗಲಿ ಕನ್ಸರ್ವೇಟರಿಂದ ಪಡೆಯಬಹುದು.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ವ ರವಿನ್ಯೂ ಇಲಾಖೆಗಳ ಗವರ್ನ್ಮೆಂಟ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 28ನೇ ಫೆಬ್ರುವರಿ 1907.

ನಂ. 182-1478, ಹಾಸನ ಡಿವೀಜನ್ ಅಫಿಷಿಯೇಟಿಂಗ್ ಎಗ್ಜಿಕ್ಯೂಟಿವ್ ಇಂಜನಿಯರ್ ಮಿ॥ ಎಫ್. ಎ. ಸ್ಟೀಲ್ ಯವರಿಗೆ 1907ನೇ ಫೆಬ್ರುವರಿ 11ನೇ ತಾರೀಖಿನಿಂದ 15 ದಿವಸಗಳು ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ತಾರೀಖು 1ನೇ ಮಾರ್ಚಿ 1907.

ನಂ. 187-1541, ಚಿತ್ರದುರ್ಗ ಡಿವೀಜನ್ ಎಗ್ಜಿಕ್ಯೂಟಿವ್ ಇಂಜನಿಯರ್ ಮಿ॥ ಕೆ. ಪ್ರಹ್ಲಾದರಾವ್ ಯವರಿಗೆ 1907ನೇ ಮಾರ್ಚಿ 4ನೇ ತಾರೀಖಿನಿಂದ 10 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಹುಕುಂ ಬಮೋಜೀಬ್,
ಬರ್ನಾರ್ಡ್ ಫಾಸ್ಕ್ಯಾಪ್ಟನ್, ಆರ್. ಇ.,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನ್ಮೆಂಟ್ ಅಂಡರ್ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಫಾಯಿಷ್ ಆದ್ದು. [ನಂ. 10.

ಬೆಂಗಳೂರು, ಗುರುವಾರ, ಮಾರ್ಚಿ ತಾ॥ 7, ಸನ 1907.

II ನೆ ಭಾಗ.

ಇಂಡ್ಯ ಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಮೈಸೂರ ರೆವಿನ್ಯೂ ಸರ್ವೆ ಮತ್ತು ಸೆಟ್ಲ್ಮೆಂಟ್ ಇಲಾಖಾ.

ಇಸ್ತಿಹಾರ್ನಾಮೆ.

ನಂ. 181 ಬೆಂಗಳೂರು, ತಾರೀಖು 20ನೆ ಫೆಬ್ರುವರಿ 1907ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯತಕ್ಕ ಬಗ್ಗೆ ಪ್ರಕಟಿಸಲ್ಪಡುವದೇನಂದರೆ— ಅವ್ವಲ್ ಸರ್ವೆ ಜಮಾಬಂದಿ ಕಾಲದಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಪೈಕಿ ಸಾಬಕು ಬೆಂಗಳೂರು ಮತ್ತು ಕೆಂಗೇರಿ ತಾಲ್ಲೂಕುಗಳಿಗೆ ಸೇರಿದ್ದು ಹಾಲಿ ಇದರಡಿ ನಮೂದಿಸಿರುವ 5 ಬೇರೆ ಬೇರೆ ತಾಲ್ಲೂಕುಗಳಲ್ಲಿ ಅಡಗಿರುವ 326 ಸರಕಾರಿ ಗ್ರಾಮಗಳಲ್ಲಿ ಪರಿಶೋಧಿಸಲ್ಪಟ್ಟ ಆಕಾರದ ದರಗಳನ್ನು ಶ್ರೀಮನ್ ಮಹಾರಾಜಾ ಸರ್ಕಾರದವರು ಮಂಜೂರು ಮಾಡಿರುತ್ತಾರಾಗಿ ಸದರಿ ಆಕಾರಯಾನೆ ಕಂದಾಯವನ್ನು ಪ್ರಸಿದ್ಧಪಡಿಸುವಿಕೆಯು ಬೆಂಗಳೂರಿನಲ್ಲಿ 1907ನೆ ಮಾರ್ಚಿ ತಾರೀಖು 18 ಅಥವಾ ಆ ಸುಮಾರಿಗೆ ಪ್ರಾರಂಭಿಸಲ್ಪಡುವದು.

281 ಗ್ರಾಮಗಳು ಹಾಲಿ ಬೆಂಗಳೂರು ತಾಲ್ಲೂಕಿನಲ್ಲಿರುವವು.
17 ಗ್ರಾಮಗಳು ಹಾಲಿ ಚೆನ್ನಪಟ್ಣ ತಾಲ್ಲೂಕು ಪೈಕಿ ಕ್ಲೋಸಪೇಟೆ ಸಬ್ ತಾಲ್ಲೂಕಿನಲ್ಲಿರುವವು.
22 ಗ್ರಾಮಗಳು ಹಾಲಿ ಮಾಗಡಿ ತಾಲ್ಲೂಕಿನಲ್ಲಿರುವವು.
4 ಗ್ರಾಮಗಳು ಹಾಲಿ ನೆಲಮಂಗಲ ತಾಲ್ಲೂಕಿನಲ್ಲಿರುವವು.
2 ಗ್ರಾಮಗಳು ಹಾಲಿ ಹೊಸಕೋಟೆ ತಾಲ್ಲೂಕಿನಲ್ಲಿರುವವು.

326

ಡಿ. ಶಾಮರಾವ್,
ಸೂಪರಿಂಟೆಂಡೆಂಟ್ ರೆವಿನ್ಯೂ ಸರ್ವೆ ಮತ್ತು ಸೆಟ್ಲ್ಮೆಂಟ್, ಮೈಸೂರು.

ಫಾರೆಸ್ಟ್ ಇಲಾಖಾ.

ಇಸ್ತಿಹಾರ

ತಾರೀಖು 26ನೆ ಫೆಬ್ರುವರಿ 1907.

ಬೆಂಗಳೂರು ಸಿಟಿ ಲೇಟ್ ದಿವಾನ್ ಕೃಷ್ಣಮನಾಯಿಡರವರ ಕೋಲಾಲಾಡ್ಜ್ ಬಂಗ್ಲೆಯಲ್ಲಿ, ಹಾಲಿ ಇರುವ ಮೈಸೂರು ಸೀಮೆಯ ಫಾರೆಸ್ಟು ಕನ್ಸರ್‍ವೇಟರ್ ಸಾಹೇಬರವರ ಆಫೀಸು ಕಂಪೌಂಡಿನಲ್ಲಿ ಮಾರ್ಚಿ 23ನೆ ತಾರೀಖು ಶನಿವಾರ ಮಧ್ಯಾಹ್ನ 12 ಘಂಟೆಗೆ ಇದರಡಿ ಕಂಡ ಸಾಮಾನುಗಳು ಹರಾಜು ಹಾಕಲ್ಪಡುವವು :—

ಹರಾಜು ಷರತ್ತುಗಳು.

ಚಡ ಸವಾಲಾದನು ಹರಾಜು ತಾರೀಖು ಲಾಗಾಯಿತು ಮೂರು ದಿವಸಗಳಲ್ಲಿ ಸವಾಲ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಬೇಕು. ಇದಕ್ಕೆ ತಪ್ಪಿದರೆ ಸದರಿ ಮಾಲು ದುಸರ ಹರಾಜು ಮಾಡಲ್ಪಡುತ್ತೆ. ಇದರಿಂದ ಉಂಟಾಗುವ ನಷ್ಟಕ್ಕೆ ಮೊದಲನೆ ಹರಾಜಿನ ಚಡ ಸವಾಲ್ದಾರನು ಬದ್ಧನಾಗಿರುವನು. ಅದರಿಂದ ಏನಾದರೂ ಫಾಯಿದೆ ಉಂಟಾದರೆ ಸದರಿ ಮೊದಲಿನ ಹರಾಜಿನ ಚಡ ಸವಾಲ್ದಾರನಿಗೆ ಯಾವ ಬಾಧ್ಯತೆಯೂ ಇರುವದಿಲ್ಲ.

ಹರಾಜಿನಲ್ಲಿ ಪಡೆದ ಮಾಲನ್ನು ಹರಾಜು ತಾರೀಖು ಲಾಗಾಯಿತು ಮೂರು ದಿವಸಗಳಲ್ಲಿ ಸಾಗಿಸಿಕೊಂಡುಹೋಗತಕ್ಕದ್ದು.

ಸಾಮಾನುಗಳ ಷೆಡ್ಯೂಲ್.

2	ದೊಡ್ಡ ಡೇರೆಗಳು.	9	ರಾವುಟಿಗಳು.
1	ಬಿಚೋಬಾ.	1	ಲಾಂದ್ರು.
1	ಸ್ಲೀಪಿಂಗ್ ಪಾಲ್.		

ಎಂ. ಮುತ್ತಣ್ಣ,
ಕನ್ಸರ್‍ವೇಟರ್ ಆಫ್ ಫಾರೆಸ್ಟ್ಸ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ.

ತಾರೀಖು 15ನೆ ಫೆಬ್ರುವರಿ 1907.

ತಿರುಮಕೂಡ್ಲು ನರಸೀಪುರ ತಾಲ್ಲೂಕು ಕಸಬಾ ನರಸೀಪುರದ ಹೋಬಳಿಗೆ ಸೇರಿದ ಜೋಡಿ ಹೊನ್ನೂರು ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ತಿರುಮಕೂಡ್ಲು ನರಸೀಪುರ ತಾಲ್ಲೂಕು ಕಛೇರಿಯಲ್ಲಿ 1907ನೆ ಏಪ್ರೆಲ್ ಮಾಹೆ 3ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಫೆಬ್ರುವರಿ 28ನೆ ಮರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 61—62ನೆ ಪೇಜುಗಳನ್ನು ನೋಡತಕ್ಕದ್ದು.

ತಾರೀಖು 15ನೆ ಫೆಬ್ರುವರಿ 1907.

ತಿರುಮಕೂಡ್ಲು ನರಸೀಪುರ ತಾಲ್ಲೂಕು ತಲ್ಕಾಡು ಹೋಬಳಿಗೆ ಸೇರಿದ ಕಾಯಂಗುತ್ತಾ ಮೇಗಡಹಳ್ಳಿ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ತಿರುಮಕೂಡ್ಲು ನರಸೀಪುರ ತಾಲ್ಲೂಕು ಕಛೇರಿಯಲ್ಲಿ 1907ನೆ ಏಪ್ರೆಲ್ ಮಾಹೆ 3ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಫೆಬ್ರುವರಿ 28ನೆ ಮರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 60—61ನೆ ಪೇಜುಗಳನ್ನು ನೋಡತಕ್ಕದ್ದು.

ತಾರೀಖು 15ನೆ ಫೆಬ್ರುವರಿ 1907.

ನಾಗಮಂಗಲ ತಾಲ್ಲೂಕು ನೆಲ್ಲಿಗೆರೆ ಹೋಬಳಿಗೆ ಸೇರಿದ ಜೋಡಿ ದೊಡ್ಡಾಘಟ್ಟ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಸದರಿ ದೊಡ್ಡಾಘಟ್ಟ ಗ್ರಾಮದಲ್ಲಿ 1907ನೆ ಏಪ್ರೆಲ್ ಮಾಹೆ 2ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಫೆಬ್ರುವರಿ 28ನೆ ಮರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 59—60ನೆ ಪೇಜುಗಳನ್ನು ನೋಡತಕ್ಕದ್ದು.

ಟಿ. ಜೆ. ಸುಂದರರಾಜೈಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟು.

ಇಸ್ತಿಹಾರ.

ತಾರೀಖು 9ನೆ ಫೆಬ್ರುವರಿ 1907.

ಆಲೂರು ಸಬ್ ತಾಲ್ಲೂಕು ಪಾಳ್ಯದ ಹೋಬಳಿ ಬಲ್ಲೂರುಪುರದ ಜೋಡಿ ಗ್ರಾಮವು ಜೋಡಿದಾರು ನರಸಿಹ್ಮಭಟ್ಟ ವಗೈರೇರಿಂದ ಬರತಕ್ಕ ಬಾಕಿಗಾಗಿ 1907ನೆ ಇಸವಿ ಏಪ್ರೆಲ್ ತಾರೀಖು 8ನೆ ಸೋಮವಾರ ದಿವಸ ದಿವಿ 11 ಘಂಟೆಗೆ ಆಲೂರು ಮೊಕ್ಕಾಂನಲ್ಲಿ ಹರಾಜು ಮಾಡಿಸುತ್ತೇದು ಈ ಮೂಲಕ ಪ್ರಸಿದ್ಧಪಡಿಸಲ್ಪಟ್ಟು ಇರುತ್ತೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಫೆಬ್ರುವರಿ 21ನೆ ಮರ್ಕುಂ ಮೈಸೂರು ಗೆಜೆಟ IIನೆ ಭಾಗದ 55—56ನೆ ಪುಟಗಳನ್ನು ನೋಡತಕ್ಕದ್ದು.

ಟಿ. ಧರ್ಮರಾಜು ಚೆಟ್ಟಿ,
ಫಾರ್ ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಅಬಸ್ಟ್ರಾಕ್ಟ್ ಇಸ್ತಿಹಾರ.

ತಾರೀಖು 15ನೆ ಫೆಬ್ರುವರಿ 1907.

ಯಡೆಹಳ್ಳಿ ಸಬ್ ತಾಲ್ಲೂಕಿನಲ್ಲಿ ಜಮೀನುದಾರರಾಗಿದ್ದ Mr. T. W. ಡಾರ್ಲಿಂಗ್ ಸಾಹೇಬರು ಮತ್ತು Mrs. J. D. ಡಾರ್ಲಿಂಗ್ ಬೀಬಿ ಸಾಹೇಬರವರಿಂದ ನೇರ್ಲಕೊಪ್ಪ ಮತ್ತು ಬಡಗಬೈಲು ಗ್ರಾಮಗಳಿಗೆ ಬರಬೇಕಾದ ಕಂದಾಯ ಬಾಕೀಗಾಗಿ ಇವರಿಗೆ ಸೇರಿದ ಸ್ಥಿರಸ್ವತ್ತನ್ನು ಕಡೂರು ಡಿಸ್ಟ್ರಿಕ್ಟು ಯಡೆಹಳ್ಳಿ ಸಬ್ ತಾಲ್ಲೂಕು ಕಛೇರಿ ರೂಬರೂಬು ಡೆಪ್ಯುಟಿ ಅಮಲ್ದಾರರಿಂದ 29—4—1907ರಲ್ಲಿ ಹರಾಜು ಮಾಡಲ್ಪಡುತ್ತೆಂತ ಇದರಿಂದ ಪ್ರಸಿದ್ಧಪಡಿಸಿಧೆ.

ಹೆಚ್ಚಿನ ತಪಶೀಲುಗಳಿಗೆ 1907ನೆ ಇಸವಿ ಫೆಬ್ರುವರಿ 28ನೆ ಮರ್ಕ್ಯುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 63—64ನೆ ಪೇಜುಗಳನ್ನು ನೋಡಬೇಕು.

ಎಂ. ಲಕ್ಷ್ಮೀಶಾಸ್ತ್ರಿ,
ಫೋರ್ ಡೆಪ್ಯುಟಿ ಕಮಿಷನರ್.

ಕ್ಲೋಸ್‌ಪೇಟೆ ಡಿವಿಜನ್.

ಇಸ್ತಿಹಾನಾಮೆ.

ಕ್ಲೋಸ್ಪೇಟೆ, ತಾರೀಖು 27ನೆ ಫೆಬ್ರುವರಿ 1907.

ಬೆಂಗಳೂರು ಡಿಸ್ಟ್ರಿಕ್ಟ್ ಕ್ಲೋಸ್‌ಪೇಟೆ ಸಬ್ ಡಿವಿಜನ್ ಸಾಹೇಬರವರ ಆಫೀಸಿನಿಂದ — ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ— ಈ ಸಬ್ ಡಿವಿಜನ್ ಮಜಕೂರು ಬಾಬತು ಜೋಡಿ, ಕಾಯಂಗುತ್ತ ಇನಾಂ ಸರ್ವಮಾನ್ಯ ವಗೈರೆ ಗ್ರಾಮಗಳ ಬಾಬತು ಆಯಾಯ ಇನಾಂದಾರರಿಗೆ ಸಲ್ಲತಕ್ಕ ಟಾಡಿ ಹುಟ್ಟುವಳಿ ಹಕೀಕತ್ತನ್ನು ಕೆಳಗೆ ನಮೂದಿಸಿರುವ ತಾರೀಖುಗಳಲ್ಲಿ ವಿಚಾರಣೆ ಮಾಡಲ್ಪಡುತ್ತೆ. ಆಯಾಯ ಗ್ರಾಮಗಳಿಗೆ ಸಂಬಂಧಪಟ್ಟ ಇನಾಂದಾರರುಗಳು ಸಾಕ್ಷ್ಯ ಮತ್ತು ತಮ್ಮಲ್ಲಿರತಕ್ಕ ದಾಖಲಾತೆಗಳೊಡನೆ ಕ್ಲೋಸ್‌ಪೇಟೆ ಮೊಕ್ಕಾಂಗೆ ಬಿ.ವಿ. 11 ಘಂಟೆಗೆ ಹಾಜರಾಗತಕ್ಕದ್ದು. ಹಾಗೆ ಹಾಜರಾಗದೆ ತಪ್ಪಿದಲ್ಲಿ ರೂಲ್ಸುಮೇರೆ ಕ್ರಮ ಜರಗಿಸಲ್ಪಡುತ್ತೆ. ನಂತರ ಬರುವ ಯಾವ ತಕರಾರನ್ನು ಅಂಗೀಕರಿಸಲು ಆಗಲಾರದು ತಿಳಿಯುವದು :—

ತಾಲ್ಲೂಕು.	ಗ್ರಾಮ.	ಹಿಯರಿಂಗ್ ತಾರೀಖು.	ಇನಾಂದಾರ್ರ ಹೆಸರು.
ಕಾನಕಾನಹಳ್ಳಿ ...	ಜೋಡಿ ಬಾಚಹಳ್ಳಿ ...	1907ನೆ ಏಪ್ರೆಲ್ 1 ...	ಬಿಂದುಮಾಧವಾಚಾರ್ರು ಮತ್ತು ಲಕ್ಷ್ಮೀಶಾಚಾರ್ರು.
ಡಿಟೋ ...	ಮರಳೆಬೇಕುಪ್ಪ ...	ಡಿಟೋ ...	ಗುರುಬಸಮ್ಮ, ಶಿದ್ದಲಿಂಗಪ್ಪ ಏಜಂಟ್
ಡಿಟೋ ...	ಕಾಯಂಗುತ್ತಾ ನೆಲಗುಳಿ ...	ಡಿಟೋ ...	ಗೌಡವೀರಭದ್ರಪ್ಪ.
ಕ್ಲೋಸ್ಪೇಟೆ ...	ತಾಳವಾಡಿ ...	1907ನೆ ಏಪ್ರೆಲ್ 2 ...	ಮ॥ ಬಿ. ಚನ್ನರಾಜೆ ಅರಸ್.
ಡಿಟೋ ...	ಕೋಡಿಮಾಲಕರೇನಹಳ್ಳಿ ...	ಡಿಟೋ ...	ವೆಂಕಟಸುಬ್ಬಯ್ಯ ಮತ್ತು ಇತರರು ಮತ್ತು ವ್ಯಾಸರಾಯ ಮುಖ್ಯ ಏಜಂಟ್.
ಡಿಟೋ ...	ಉರಗಹಳ್ಳಿ ...	ಡಿಟೋ ..	ಮ॥ ಎಸ್. ನರಸಿಂಹಯ್ಯಂಗಾರ್ ರಿಟೈರ್ಡ್ ಸಬ್ ಡಿವಿಜನ್ ಆಫೀಸರ್.
ಚನ್ನಪಟ್ಟ ...	ಜೋಡಿ ಡವಾಣಗುಂಡು ...	1907ನೆ ಏಪ್ರೆಲ್ 3 ...	,, ಕೆ. ವಿ. ಕೋದಂಡರಾಮ ಅಯ್ಯರ್.
ಮಾಗಡಿ ...	ಜೋಡಿ ಹುಲುವೇನಹಳ್ಳಿ ...	ಡಿಟೋ ...	ಚಂದ್ರಶೇಖರಶಾಸ್ತ್ರಿ.
ಡಿಟೋ ...	ಕುರುಬರಹಳ್ಳಿ ...	ಡಿಟೋ ...	ಮ॥ ವೇದಾಂತ ಐಯ್ಯಂಗಾರ್.
ಡಿಟೋ ...	ಜೋಡಿ ದಂಡೇನಹಳ್ಳಿ ...	1907ನೆ ಏಪ್ರೆಲ್ 4 ...	,, ಕರಣೀಕ ಕೃಷ್ಣಮೂರ್ತಿರಾವ್.
ಡಿಟೋ ...	ಬಸವಾಪಟ್ಟಣ ...	ಡಿಟೋ ...	ರಾಮಸ್ವಾಮಿಶಾಸ್ತ್ರಿ, ಸುಬ್ಬಮ್ಮ ಮತ್ತು ಇತರರು.

ಸಿ. ದೇವರಾಜ ಅರಸ್,
ಸಬ್ ಡಿವಿಜನ್ ಆಫೀಸರ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ಇಸ್ತಿಹಾರ.

ತಾರೀಖು 21ನೆ ಫೆಬ್ರವರಿ 1907.

ಚಿತ್ರದುರ್ಗ ಡಿಸ್ಟ್ರಿಕ್ಟು ಸಬ್ ರಿಜಿಸ್ಟ್ರೀ ಆಫೀಸುಗಳಲ್ಲಿ ಈ ಕೆಳಗೆ ನಮೂದಿಸಿರುವ ದಸ್ತಾವೇಜುಗಳು ಎರಡು ವರುಷಗಳಿಗೆ ಮೇಲ್ಪಟ್ಟು ಬೇವಾರಸಾಗಿ ನಿಂತಿವೆ. ಈ ಇಸ್ತಿಹಾರ ಪ್ರಾಯಿಷ್ ಆದ ಲಾಗಾಯತು ಒಂದು ತಿಂಗಳೊಳಗಾಗಿ ಅವುಗಳನ್ನು ಸಂಬಂಧಪಟ್ಟವರು ಆಯಾ ಸಬ್ ರಿಜಿಸ್ಟ್ರೀ ಆಫೀಸುಗಳಲ್ಲಿ ವಾಪಸು ಪಡಿಯಬಹುದು. ಹಾಗೆ ತೆಗದುಕೊಳ್ಳುವದಕ್ಕೆ ತಪ್ಪಿದರೆ ಮೈಸೂರು ರಿಜಿಸ್ಟ್ರೇಷನ್ ರೆಗ್ಯುಲೇಷನ್ 85ನೆ ಸೆಕ್ಷನ್ ಅನುಸರಿಸಿ ಸದರಿ ದಸ್ತಾವೇಜುಗಳನ್ನು ನಾಶಪಡಿಸುತ್ತೇವೆ ಇದರಿಂದ ತಿಳಿಯಪಡಿಸಿದೆ.

ಅನುಕ್ರಮ ನಂಬರು.	ಸಬ್ ರಿಜಿಸ್ಟ್ರೀ ಆಫೀಸಿನ ಹೆಸರು.	ಬುಕ್ಕಿನ ನಂಬರು.	ದಸ್ತಾವೇಜು ನಂಬರು.	ದಸ್ತಾವೇಜು ತಾರೀಖು.	ರಿಜಿಸ್ಟ್ರೇಷನ್ಗೆ ಹಾಜರುಪಡಿಸಿದ ತಾರೀಖು.	ಬರದುಕೊಟ್ಟವರ ಹೆಸರು.	ಬರಸಿಕೊಂಡವರ ಹೆಸರು.	ದಸ್ತಾವೇಜು ಸ್ವಭಾವ ಕಿಮ್ಮತು.
1	ಚಿತ್ರದುರ್ಗ ...	I	377	3—12—03	11—4—04	ಮುದ್ದೀರಪ್ಪನ ಮಗ ಕೊಪ್ರ ಬಸಪ್ಪ.	ಛಂಪಾಚ್ಛಳ ಮಲ್ಲಪ್ಪ.	150 ರೂಪಾಯಿನ ಆಧಾರ.
		,,	1903-04 397	4—1—04	4—5—04	ಮಠದ ದಾನಪ್ಪನ ಮಗ ಕೊಟ್ರಪ್ಪ.	ಸಣ್ಣ ನಾರಪ್ಪನ ಗುರುಸಿದ್ದಪ್ಪ.	350 ಡಿಟೋ
		,,	1903-04 425	18—5—04	20—5—04	1 ದೊಡ್ಡ ಮುಂಗಟಪ್ಪ. 2 ಸಣ್ಣ ಮುಂಗಟಪ್ಪ. 3 ಅಪ್ಪಯ್ಯ.	ತಿಮ್ಮಣ್ಣನ ಮಗ ಗೋವಿಂದಪ್ಪ.	400 ರೂಪಾಯಿನ ಆಧಾರ ಪತ್ರ.
	ದಾವಣಗೆರೆ ...	,,	1903-04 7	20—3—04	1—7—04	ಮೊಹರ್ದಿಸಾಬಿ ಮಗ ಹಯಾತ್‌ಸಾಬಿ.	ಚೆನ್ನಪ್ಪನ ಮಗ ಶಿವಲಿಂಗಪ್ಪ.	150 ಡಿಟೋ
		IV	1904-05 4	6—5—04	17—9—04	ಮಾಗೋನಹಳ್ಳಿ ಸಂಗಪ್ಪ.	ಮಾಗೋನಹಳ್ಳಿ ದೊಡ್ಡಬಸಪ್ಪ.	ಖುಲಾಸೆ ಪತ್ರ.
	ಹರಿಹರ ...	I	1904-05 2	19—6—04	2—7—04	ಅಡಿವಪ್ಪನ ಮಗ ಬಸಪ್ಪ.	ವೀರಪ್ಪನ ಮಗ ಹಾಲಪ್ಪ.	175 ರೂಪಾಯಿನ ಕ್ರಯ.
	ಹೊಳಲ್ಕೆರೆ ...	,,	1904-05 92	26—1—04	26—1—04	ಬಸಪ್ಪನ ಮಗ ಲಿಂಗಪ್ಪ.	ಶಿವೈಯ್ಯನ ಮಗ ಗೋವಿಂದಪ್ಪ.	100 ರೂಪಾಯಿನ ಕ್ರಯ.
		,,	1903-04 59	19—5—04	10—9—04	ಮಠದ ಗುರುಶಿದ್ದಪ್ಪ.	ರಂಗಣ್ಣ.	100 ರೂಪಾಯಿನ ಆಧಾರ.
	ಜಗಲೂರು ...	,,	1904-05 109	3—12—04	3—12—04	ನಾಗಪ್ಪನ ಮಗ ಬಸಪ್ಪ.	ಲಿಂಗಪ್ಪನ ಹೆಂಡತಿ ಸಂಕವ್ವ.	50 ರೂಪಾಯಿನ ಕ್ರಯ.
			1904-05					

ಮೈಸೂರ ಗೆಜೆಟ್.

ನಂ. 42.] ಸರ್ಕಾರದಿಂದ ಪ್ರಾಮಿಸ್ ಆದ್ದು. [ನಂ. 11.

ಬೆಂಗಳೂರು, ಗುರುವಾರ, ಮಾರ್ಚಿ ತಾ॥ 14, ಸನ್ 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮಿಷನರವರು, ಕಂಟ್ರೋಲರವರು, ಪಬ್ಲಿಕವರಕ್ಸ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡ್ ಪ್ರಸಿಡೆಂಟರು ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಸಗಳು.

3ನೆ ಭಾಗ—ಲೆಜಿಸಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲಾ.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

Iನೆ ಭಾಗ.

ಮೈಸೂರು ಸೀಮೆಯು ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರವಿನ್ಯೂ.

ತಾರೀಖು 21ನೆ ಫೆಬ್ರುವರಿ 1907.

ನಂ. 7241—ಸ್ಯಾನಿಟೆಂ 66-06—31, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಜಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ವ್ಯಾಧ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.		ತಾಲ್ಲೂಕು.
ಚೀಕನಹಳ್ಳಿ	....	ಬೇಲೂರು.
ಗೌಸೆಹಳ್ಳಿ	... ...	ಹಾಸನ.

ತಾರೀಖು 26ನೆ ಫೆಬ್ರುವರಿ 1907.

ನಂ. 7380—ಸ್ಯಾನಿಟರಿ. 129-06—6, ಶಿವಮೊಗ್ಗ ಡಿಸ್ಟ್ರಿಕ್ಟ್ಸು ಶಿವಮೊಗ್ಗ ತಾಲ್ಲೂಕಿನ ಕೂಡ್ಲಿ ಗ್ರಾಮಕ್ಕೆ ಶ್ರೀ ಸಂಗಮೇಶ್ವರ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮಾರ್ಚಿ 15ನೆ ತಾರೀಖಿನಿಂದ 1907ನೆ ಇಸವಿ ಮಾರ್ಚಿ 22ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 28ನೆ ಫೆಬ್ರುವರಿ 1907.

ನಂ. 7383—ಸ್ಯಾನಿಟರಿ 66—06—32, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :— ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9385—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21–96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವುದು.

ಸ್ಥಳ.	ತಾಲ್ಲೂಕು.
ಗೊಲ್ಲರಹೊಸಹಳ್ಳಿ	ಚನ್ನರಾಯಪಟ್ಟಣ.

ತಾರೀಖು 5ನೆ ಮಾರ್ಚಿ 1907.

ನಂ. 7587—ಸ್ಯಾನಿಟರಿ 156—06—12, ಕೋಲಾರ ಡಿಸ್ಟ್ರಿಕ್ಟ್ಸು ಬೌರಿಂಗ್‌ಪೇಟೆ ತಾಲ್ಲೂಕಿನ ಬೌರಿಂಗ್‌ಪೇಟೆಗೆ ಶ್ರೀ ಕೋದಂಡ ರಾಮಸ್ವಾಮಿಯವರ ರಥೋತ್ಸವ ಮತ್ತು ದನಗಳ ಸಂತೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮೇ 25ನೆ ತಾರೀಖಿನಿಂದ 1907ನೆ ಜೂನ್ 5ನೆ ತಾರೀಖಿನವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವ ಮತ್ತು ದನಗಳ ಸಂತೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 5ನೆ ಮಾರ್ಚಿ 1907.

ನಂ. 7589—ಸ್ಯಾನಿಟರಿ 170—06—10, ಮೈಸೂರು ಡಿಸ್ಟ್ರಿಕ್ಟ್ಸು ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕಿನ ಮೇಲ್ಕೋಟೆಗೆ ವೈರಮುಡಿ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮಾರ್ಚಿ 20ನೆ ತಾರೀಖಿನಿಂದ 30ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 5ನೇ ಮಾರ್ಚಿ 1907.

ನಂ. 7594—ಸ್ಯಾನಿಟೆರಿ 15-06-8, ಸಮಸ್ತ ಜನರ ತಿಳಿವಳಿಕೆ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಿಸಲ್ಪಟ್ಟಿದ್ದ ಮೈಸೂರು ಡಿಸ್ಟ್ರಿಕ್ಟಿನ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರೆಗೆ ಜಾಡ್ಯ ರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ	ತಾಲ್ಲೂಕು
ಕೊಟ್ಟಗಾಲ	ಟಿ. ನರಸೀಪುರ.
ದೊಡ್ಡಾಪುರ	ಡಿಟೋ
ದೊಡ್ಡಬಾಗಿಲು	ಡಿಟೋ
ದಾಸನಕೊಪ್ಪಲು	ಡಿಟೋ
ಹೊಸಹಳ್ಳಿ	ಡಿಟೋ
ಇಂಡವಾಳು	ಡಿಟೋ
ದೊಡ್ಡಬ್ಯಾಡರಹಳ್ಳಿ	ಶ್ರೀರಂಗಪಟ್ಟಣ
ಹುಲ್ಲೆಪುರ	ಚಾಮರಾಜನಗರ
ಗೋಪಾಲಪುರ	ಗುಂಡ್ಲುಪೇಟೆ.
ಹುಲ್ಲಮಾದನಹಳ್ಳಿ	ಡಿಟೋ
ಇರಸವಾಡಿ	ಡಿಟೋ
ಚಿಕ್ಕಾಟ್ಟಿ	ಡಿಟೋ
ಹಂಗಾಲ	ಡಿಟೋ
ಹರದಹಳ್ಳಿ	ಡಿಟೋ
ಕಳ್ಳಕೊಪ್ಪಲು	ಡಿಟೋ
ಅಂದಾಯಿನಗೌಡನ ಕೊಪ್ಪಲು	ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು.
ಲೂಲಂದೇವನಹಳ್ಳಿ	ಎಡತೊರೆ.
ಅಂಬಲರೆ	ಹುಣಸೂರು.
ಮುಬ್ಬಳ್ಳಿ	ನಂಜನಗೂಡು.
ಹನಿಯಂಬಲ್ಲಿ	ಡಿಟೋ
ಹೊಳೆಪುರ	ಡಿಟೋ

ತಾರೀಖು 7ನೆ ಮಾರ್ಚಿ 1907.

ನಂ. 7845—ಸ್ಯಾನಿಟೆರಿ 166-06-1, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ದಾಸಕೊಪ್ಪ	ಸಾಗರ.
ಹೊಸೂರು ಕ್ಯಾಂಪು	ಕುಂಸಿ ಸಬ್ ತಾಲ್ಲೂಕು.

ತಾರೀಖು 12ನೆ ಮಾರ್ಚಿ 1907.

ನಂ. 8161—ಸ್ಯಾನಿಟೆರಿ 99-06—6, ಹಾಸನ ಡಿಸ್ಟ್ರಿಕ್ಟು ಬೇಲೂರು ತಾಲ್ಲೂಕಿನ ಬೇಲೂರಿಗೆ ಶ್ರೀ ಚನ್ನಕೇಶವ ಸ್ವಾಮಿಯವರ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ ಎಪಿಡೆಮಿಕ ಡಿಸೀಸೆಸ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮಾರ್ಚಿ 20ನೆ ತಾರೀಖಿನಿಂದ 1907ನೆಯ ವರ್ಷದ ಏಪ್ರೈಲ್ 5ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 2ನೆ ಮಾರ್ಚಿ 1907.

ನಂ. ಜಿ. 5416—ಜಿ. ಎಂ. 240-06-10, ಸನ್ 1894ನೆ ಇಸವಿಯ 11ನೆ ನಂಬರ ರೆಗ್ಯುಲೇಷನಿನ (ಹೊಸ ಕಲ್ಪನೆಗಳು ಮತ್ತು ನಕ್ಷೆಗಳ ರೆಗ್ಯುಲೇಷನುಗಳ) 8, 9, 10 ಮತ್ತು 11ನೆ ಪ್ರಕರಣಗಳನ್ನನುಸರಿಸಿ ಈ ಕೆಳಗೆ ನಮೂದಿಸುವ ಹೊಸ ಕಲ್ಪನೆಯ ವಿವರಣೆಯು ದಾಖಲ್ಮಾಡಲ್ಪಟ್ಟಿದೆ. ಮತ್ತು ಇಷ್ಟವಿರುವವರು ಮೈಸೂರು ಸರ್ಕಾರದ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯವರಿಗೆ ಬರೆದುಕೊಂಡು ಒಂದು ರೂಪಾಯಿ ರುಸುಂ ಕೊಟ್ಟು ಅವರ ಕಚೇರಿಯಲ್ಲಿ ಆ ವಿವರಣೆಯನ್ನು ಪರೀಕ್ಷಿಸಿ ನೋಡಲು ಅಡ್ಡಿ ಇರುವುದಿಲ್ಲ.

ಇಂಗ್ಲೆಂಡ್ ದೇಶದ ಲಂಡನ್ ಕೌಂಟಿಯಲ್ಲಿ ವೆಸ್ಟ್ ಮಿನ್‌ಸ್ಟರಿನ ವಿಕ್ಟೋರಿಯಾ ಬೀದಿಯ 159ನೆ ಮನೆಯಲ್ಲಿರುವ ಶಿಲ್ಪಶಾಸ್ತ್ರಜ್ಞರಾದ ವಿಲಿಯಂ ಯೂಲ್ಬರ್ಟ್ ಯವರಿಂದ ಮಾಡಲ್ಪಟ್ಟದ್ದು.

ಹತ್ತಿಯನ್ನು ಹಸನು ಮಾಡುವ ಯಂತ್ರಗಳ ಕಸಗಳಿಂದ ಅಥವಾ ಕೆಲಸಕ್ಕೆ ಬಾರದ ಕಸರುಗಳಿಂದ ಮತ್ತು ಇತರ ವಸ್ತುಗಳಿಂದ ಕೊಳೆ ಮುಂತಾದವುಗಳನ್ನು ಪ್ರತ್ಯೇಕಿಸುವ ಸಾಧನಗಳ ಅಭಿವೃದ್ಧಿ.

ತಾರೀಖು 7ನೆ ಮಾರ್ಚಿ 1907.

ನಂ. ಜೆ. 5479—ಜಿ. ಎಂ. 255-06-4, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಈ ಇಸ್ತಿಹಾರ್ನಾಮೆಯಿಂದ ಪ್ರಸಿದ್ಧಪಡಿಸುವುದೇನಂದರೆ, ಇಂಡಿಯಾ ದೇಶದ ಕೂಲಿಯವರಿಗೆ ನ್ಯೂಕಾಲಿಡೋನಿಯಾದಲ್ಲಿ ಕೆಲಸ ದೊರೆಯುವ ಸಂಭವವಿರುವುದಿಲ್ಲವೆಂದೂ ಮತ್ತು ಸದರಿ ಕೂಲಿಯವರು ನಿರ್ಗತಿಕರಾದ ಸಂದರ್ಭದಲ್ಲಿ ನ್ಯೂಕಾಲಿಡೋನಿಯಾ ವಸತಿಯ ಸರ್ಕಾರದವರು ಅವರಿಗೆ ಸಹಾಯ ಮಾಡುವಹಾಗಿಲ್ಲವೆಂದೂ ಶ್ರೀಮದಿಂಡಿಯಾ ಚಕ್ರವರ್ತಿಯವರ ಇಂಡಿಯಾ ದೇಶದ ಸ್ಟೇಟ್ ಸೆಕ್ರೆಟರಿಯವರು ಇಂಡಿಯಾ ಸರ್ಕಾರದವರ ಅವಧಾನಕ್ಕೆ ತಂದಿರುತ್ತಾರೆ.

ತಾರೀಖು 13ನೆ ಮಾರ್ಚಿ 1907.

ನಂ. ಜೆ. 2803—ಕೋ. 216-06-2, ಮಿ|| ಬಿ. ಟಿ. ಸೀತಾರಾಮಯ್ಯನವರು 22 ದಿವಸಗಳ ಪ್ರಿವಿಲೇಜ್ ರಜಾ ಮೇಲೆ ಇರುವ ಕಾಲದಲ್ಲಿ ಮಂಡ್ಯ ತಾಲ್ಲೂಕಿನ ಚಾರ್ಜಿನಲ್ಲಿ ಇಡಲ್ಪಟ್ಟಿರುವ ಸದರಿ ತಾಲ್ಲೂಕಿನ ಶಿರಸ್ತೆದಾರ್ ಎ. ನಾರಣಯ್ಯಂಗಾರ್ರಿಗೆ, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೆ ಪ್ರಕರಣದ ಮೇರೆಗೆ ಮೂರನೆ ತರಗತಿಯ ಮಾಜಿಸ್ಟ್ರೇಟಿನ ಅಧಿಕಾರಗಳನ್ನು, ಅವರು ಸದರಿ ತಾಲ್ಲೂಕಿನ ಚಾರ್ಜಿನಲ್ಲಿರುವ ತನಕ ನಡೆಸತಕ್ಕ ಬಗ್ಗೆ, ಕೊಟ್ಟಿದೆ.

ತಾರೀಖು 25ನೆ ಜನವರಿ 1907.

ನಂ. ರೆ. 7790—ಫಾ. 163-06—3, ಸ್ 1901 ನೆ ಇಸವಿ 11ನೆ ನಂಬರು ಮೈಸೂರು ಸೀಮೆಯ ಫಾರೆಸ್ಟು ರೆಗ್ಯುಲೇಷನ್ 4ನೆ ಪ್ರಕರಣದ ವಿಧಿಗಳನ್ನನುಸರಿಸಿ ಮೈಸೂರು ಸೀಮೆಯ ಶ್ರೀಮನ್ಮಹಾರಾಜರವರ ಸರ್ಕಾರದವರು, ಈ ಕೆಳಗಿನ ಪಟ್ಟಿಯಲ್ಲಿ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ಮೇಲೆ ಕಂಡ ರೆಗ್ಯುಲೇಷನಿನ ವಿಧಿಗಳಂತೆ ಸ್ಟೇಟ್ ಫಾರೆಸ್ಟು ಆಗಿ ಏರ್ಪಡತಕ್ಕದ್ದೆಂದು ಯೋಚಿಸಿರುತ್ತದೆ ಎಂಬದಾಗಿ ಪ್ರಸಿದ್ಧಪಡಿಸಲು ಅಪ್ಪಣೆ ದಯಪಾಲಿಸಿರುತ್ತಾರೆ:—

ಪಟ್ಟಿ.

ಡಿಸ್ಟ್ರಿಕ್ಟು.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ಮತ್ತು ಚಕ್ಕುಬಂದಿ.
ಕಡೂರು.	ಮೂಡಗೆರೆ.	23,546 ಎಕರೆಗಳು 30 ಗುಂಟೆಗಳು ಅಥವಾ 36·79 ಚದರ ಮೈಲಿಗಳು.	ಪಶ್ಚಿಮ ಘಟ್ಟ.	ಸ್ಥಳ:—ಕಡೂರು ಡಿಸ್ಟ್ರಿಕ್ಟು ಮೂಡಗೆರೆ ತಾಲ್ಲೂಕಿನಲ್ಲಿ ಉತ್ತರಕ್ಕೆ ಭದ್ರಾನದಿ ಪೂರ್ವಕ್ಕೆ ಕಳಸ, ದಕ್ಷಿಣಕ್ಕು ಮತ್ತು ಪಶ್ಚಿಮಕ್ಕು ದಕ್ಷಿಣ ಕನಡ ಜಿಲ್ಲಾ ಸರಹದ್ದು. ಈ ಒಳಗೆ ಇರುವ ಪಶ್ಚಿಮ ಘಟ್ಟದ ಗುಡ್ಡದ ಪ್ರದೇಶಗಳು:— ಉತ್ತರಕ್ಕೆ: ಸಂಸೆ ಗ್ರಾಮದ ಸರ್ವೆ ನಂಬರು 33ರ ಪಶ್ಚಿಮ ಎಲ್ಲೆಯಲ್ಲಿ ಕಳಸದಿಂದ ದಕ್ಷಿಣ ಕನಡ ಜಿಲ್ಲೆಗೆ ಹೋಗುವ ಕಾಲು ದಾರಿಯು ದಕ್ಷಿಣ ಕನ್ನಡ ಡಿಸ್ಟ್ರಿಕ್ಟಿನ ಎಲ್ಲೆಯನ್ನು ದಾಟುವ ಸ್ಥಳದಿಂದ, ಎಲ್ಲೆಯ ರೇಖೆಯು ಹೊರಟು ಸದರಿ ಕಾಲುದಾರಿಯನ್ನನುಸರಿಸಿ ಸದರಿ ಸರ್ವೆ 33ನೆ ನಂಬರಿನೊಳಗೆ ಭದ್ರಾನದಿ ಸಿಕ್ಕುವ ವರೆಗೆ ಈಶಾನ್ಯಮುಖವಾಗಿ ಹೋಗುತ್ತದೆ; ಅನಂತರ ಸಂಸೆ ಗ್ರಾಮದ 79ನೆ ಸರ್ವೆ ನಂಬರಿನ ನೈರುತ್ಯ ಸರಹದ್ದನ್ನು ಸೇರುವ ವರೆಗೆ ಭದ್ರಾನದಿಯ ಬಲಗಡೆ ದಡದಮೇಲೆ ಹೋಗುತ್ತದೆ; ಅನಂತರ ಅದೇ ಗ್ರಾಮದ ಸರ್ವೆ ನಂಬರು 79–80 ಮತ್ತು 81ರ ದಕ್ಷಿಣ ಸರಹದ್ದಿನಮೇಲೆ ಪೂರ್ವಮುಖವಾಗಿ ಹೋಗುತ್ತದೆ; ಅನಂ

ತರ ಅದೇಗ್ರಾಮದ ಸರ್ವೆ ನಂಬರು 83ರ ವಾಯವ್ಯ ಸರಹದ್ದಿನ ಮೂಲೆಯನ್ನು ಸೇರುವ ವರೆಗೂ ದಕ್ಷಿಣಮುಖವಾಗಿ ಹಳ್ಳದಪಕ್ಕದಲ್ಲಿ ಹೋಗುತ್ತದೆ. ಅನಂತರ ಅದೇ ನಂಬರಿನ ನೈರುತ್ಯ ದಿಕ್ಕಿನಲ್ಲು; ಅನಂತರ ಅದೇ ನಂಬರಿನ ಪಶ್ಚಿಮ ಸರಹದ್ದಿನಮೇಲು; ಅನಂತರ ಒಂದು ಹಳ್ಳವನ್ನು ಮುಟ್ಟುವ ವರೆಗೂ ದಕ್ಷಿಣ ಸರಹದ್ದಿನಲ್ಲಿ ಹೋಗುತ್ತದೆ; ಅನಂತರ ಹಳ್ಳವನ್ನು ದಾಟಿ ಅದರ ಪಕ್ಕದಲ್ಲೆ ಅದೇ ಗ್ರಾಮದ ಸರ್ವೆ ನಂಬರು 82ರ ದಕ್ಷಿಣ ಮೂಲೆಯನ್ನು ಮುಟ್ಟುವ ವರೆಗೂ ಉತ್ತರಮುಖವಾಗಿ ಹೋಗುತ್ತದೆ. ಅನಂತರ ಭದ್ರಾನದಿ ದಡ ಸಿಕ್ಕುವ ವರೆಗೂ ಅದೇ ಗ್ರಾಮದ ಸರ್ವೆ ನಂಬರು 82ರ ಪೂರ್ವ ಸರಹದ್ದಿನ ಮೇಲೆ ಈಶಾನ್ಯ ಮುಖವಾಗಿ ಹೋಗುತ್ತದೆ; ಅನಂತರ ಆ ಸ್ಥಳದಿಂದ ತುಂಗಾನದಿಯ ಬಲಗಡೆ ದಡವನ್ನು ಅನುಸರಿಸಿ ಉತ್ತರ ಮತ್ತು ದಕ್ಷಿಣಮುಖವಾಗಿ ಅದೇ ಗ್ರಾಮದ ಸರ್ವೆ ನಂಬರು 90ರ ಪಶ್ಚಿಮ ಸರಹದ್ದು ಮೂಲೆಯನ್ನು ಮುಟ್ಟುವ ವರೆಗೂ ಹೋಗುತ್ತದೆ; ಅನಂತರ ಅದೇಗ್ರಾಮದ ಸರ್ವೆ ನಂಬರು 90 ಮತ್ತು 92ರ ದಕ್ಷಿಣ ಮತ್ತು ಪಶ್ಚಿಮ ಸರಹದ್ದುಗಳ ಮೇಲೆ ದಕ್ಷಿಣಮುಖವಾಗಿ ಸರ್ವೆ ನಂಬರು 92ರ ದಕ್ಷಿಣ ಮೂಲೆಗೆ ಹೋಗುತ್ತದೆ; ಅನಂತರ ಭದ್ರಾನದಿಯ ದಡವನ್ನು ಸೇರುವ ವರೆಗೆ ಅದೇ ಗ್ರಾಮದ ಸರ್ವೆ ನಂಬರು 92 ಮತ್ತು 94ರ ದಕ್ಷಿಣ ಸರಹದ್ದುಗಳ ಮೇಲೆ ಈಶಾನ್ಯಮುಖವಾಗಿ ಹೋಗುತ್ತದೆ; ಅನಂತರ ಅದೇ ಗ್ರಾಮದ ಸರ್ವೆ ನಂಬರು 95ರ ವಾಯವ್ಯ ಮೂಲೆಯನ್ನು ಸೇರುವ ವರೆಗೆ ಮೇಲೆ ಕಂಡ ನದಿಯ ಬಲಭಾಗವನ್ನನುಸರಿಸಿ ಪೂರ್ವ ಮುಖವಾಗಿಯೂ, ಅನಂತರ ಅದೇ ನದಿಯನ್ನು ಸೇರುವ ವರೆಗೆ ಸರ್ವೆ ನಂಬರು 95ರ ಪಶ್ಚಿಮ ದಕ್ಷಿಣ ಉತ್ತರ ಸರಹದ್ದಿನ ಮೇಲೆ ಆಗ್ನೇಯ ಮತ್ತು ಉತ್ತರ ಮುಖವಾಗಿಯೂ ಹೋಗುತ್ತದೆ; ಅನಂತರ ಸರ್ವೆ ನಂಬರು 112ರ ವಾಯವ್ಯ ಸರಹದ್ದಿನ ಮೂಲೆಯನ್ನು ಸೇರುವ ವರೆಗೂ ಸದರಿ ನದಿಯ ಬಲದಡವನ್ನು ಅನುಸರಿಸಿ ಪೂರ್ವ ಮುಖವಾಗಿ ಹೋಗುತ್ತದೆ; ಅನಂತರ ಸರ್ವೆ ನಂಬರು 112ರ

71

ಪಶ್ಚಿಮ, ದಕ್ಷಿಣ ಮತ್ತು ನೈರುತ್ಯ ಸರಹದ್ದಿನಮೇಲೆ ದಕ್ಷಿಣ, ಪೂರ್ವ ಮತ್ತು ದಕ್ಷಿಣ ಮುಖನಾಗಿ ಹೋಗುತ್ತದೆ; ಅನಂತರ ಪುನಃ ಭದ್ರಾನದಿಯನ್ನು ಸೇರುವ ವರೆಗೆ ಸರ್ವೆ ನಂಬರು 113 ಮತ್ತು 111ರ ದಕ್ಷಿಣ ಮತ್ತು ಪೂರ್ವ ಸರಹದ್ದಿನಮೇಲೆ ಹೋಗುತ್ತದೆ; ಅನಂತರ ಅದೇ ಗ್ರಾಮದ ಸರ್ವೆ 110ರ ಪಶ್ಚಿಮ ಸರಹದ್ದಿನ ಮೂಲೆಯನ್ನು ಸೇರುವ ವರೆಗೆ ನದಿಯ ಬಲಭಾಗವನ್ನು ಅನುಸರಿಸಿ ಪೂರ್ವಮುಖನಾಗಿ ಹೋಗುತ್ತದೆ; ಅನಂತರ ಅದೇ ಗ್ರಾಮದ ಸರ್ವೆ ನಂಬರು 110—109 ಮತ್ತು 108ರ ಪೂರ್ವ ಮತ್ತು ದಕ್ಷಿಣ ಸರಹದ್ದಿನ ಮೇಲು; ಅನಂತರ ಸರ್ವೆ ನಂಬರು 106ರ ದಕ್ಷಿಣ ಮೂಲೆಯನ್ನು ಸೇರುವವರೆಗೆ ಸರ್ವೆ ನಂಬರು 107 ಮತ್ತು 106ರ ಪಶ್ಚಿಮ ಸರಹದ್ದಿನ ಮೇಲೆ ದಕ್ಷಿಣ ಮುಖನಾಗಿಯೂ ಹೋಗುತ್ತದೆ; ಅನಂತರ ಪುನಃ ಭದ್ರಾನದಿಯನ್ನು ಸೇರುವ ವರೆಗೆ ಅದೇ ಗ್ರಾಮದ ಸರ್ವೆ ನಂಬರು 106–105 ಮತ್ತು 104ರ ಪಶ್ಚಿಮ ಸರಹದ್ದುಗಳನ್ನು ಅನುಸರಿಸಿ ಈಶಾನ್ಯಮುಖನಾಗಿ ಹೋಗುತ್ತದೆ; ಅನಂತರ ಸರ್ವೆ ನಂಬರು 103ರ ನೈರುತ್ಯ ಮೂಲೆಯನ್ನು ಸೇರುವ ವರೆಗೆ ನದಿಯ ಬಲಕಡೆ ದಡವನ್ನು ಅನುಸರಿಸಿ ಹೋಗುತ್ತದೆ; ಅನಂತರ ಪುನಃ ಭದ್ರಾನದಿಯನ್ನು ಸೇರುವ ವರೆಗೆ ಸರ್ವೆ ನಂಬರು 103ರ ದಕ್ಷಿಣ ಮತ್ತು ಪೂರ್ವ ಸರಹದ್ದನ್ನು ಅನುಸರಿಸಿ ಪೂರ್ವಮುಖನಾಗಿ ಹೋಗುತ್ತದೆ; ಅನಂತರ ಅದೇ ಗ್ರಾಮದ ಸರ್ವೆ ನಂಬರು 157ರ ವಾಯುವ್ಯ ಮೂಲೆಯನ್ನು ಸೇರುವ ವರೆಗೆ ಸದರಿ ನದಿಯ ಬಲಕಡೆ ದಡವನ್ನು ಅನುಸರಿಸಿ ಉತ್ತರಮುಖನಾಗಿ ಹೋಗುತ್ತದೆ; ಅನಂತರ ಪುನಃ ಭದ್ರಾನದಿಯನ್ನು ಸೇರುವ ವರೆಗೆ ಸರ್ವೆ ನಂಬರು 157ರ ಒಳಗೆ ಪೂರ್ವಮುಖನಾಗಿ ಎರಡು ಫರಲಾಂಗಿನಷ್ಟು ದೂರ ಹೋಗುತ್ತದೆ.

ಪೂರ್ವಕ್ಕೆ:—ಅನಂತರ ಅದೇಗ್ರಾಮದ ಸರ್ವೆ ನಂಬರು 158ರ ವಾಯುವ್ಯ ಮೂಲೆಯಲ್ಲಿರುವ ಒಂದು ಹಳ್ಳವನ್ನು ಸೇರುವ ವರೆಗೆ ಸರ್ವೆ ನಂಬರು 157ರ ಒಳಗೆ ಎರಡು ಫರಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿ ಹೋಗುತ್ತದೆ; ಅನಂತರ ಸರ್ವೆ ನಂಬರು 155ರ ಉತ್ತರ ಮೂಲೆಯನ್ನು ಸೇರುವ ವರೆಗೆ ಮೇಲೆ ಕಂಡ ಹಳ್ಳವನ್ನು ಅನುಸರಿಸಿ ನಾಲ್ಕು ಫರಲಾಂಗಿನಷ್ಟು ದೂರ ದಕ್ಷಿಣಮುಖನಾಗಿ ಹೋಗುತ್ತದೆ; ಅನಂತರ ದಕ್ಷಿಣ ಮುಖನಾಗಿ ತಿರಿಗಿ ಸರ್ವೆ ನಂಬರು 155ರ ಪಶ್ಚಿಮ ಸರಹದ್ದಿನಲ್ಲಿ ಹೋಗುತ್ತದೆ; ಅನಂತರ ಸರ್ವೆ ನಂಬರು 156ರ ಉತ್ತರ ಸರಹದ್ದಿನಮೇಲೆ ಪಶ್ಚಿಮ ಮುಖನಾಗಿಯೂ; ಅನಂತರ ಅದೇ ನಂಬರಿನ ಪಶ್ಚಿಮ ಸರಹದ್ದಿನ ಮೇಲು, ಅನಂತರ ಸರ್ವೆ ನಂಬರು 194ರ ಒಳಗೆ ನಾಲ್ಕು ಫರಲಾಂಗಿನಷ್ಟು ದೂರ ದಕ್ಷಿಣ ಮತ್ತು ನೈರುತ್ಯ ಮುಖನಾಗಿಯೂ, ಅನಂತರ ಸರ್ವೆ ನಂಬರು 127ರ ವಾಯುವ್ಯ ಮೂಲೆಯನ್ನು ಸೇರುವ ವರೆಗೆ ಸರ್ವೆ ನಂಬರು 147ರ ಒಳಗೆ ಹತ್ತು ಫರಲಾಂಗಿನಷ್ಟು ದೂರ ನೈರುತ್ಯ ಮುಖನಾಗಿಯೂ, ಅನಂತರ ಒಂದು ಹಳ್ಳವನ್ನು ಸೇರುವ ವರೆಗೆ ಸರ್ವೆ ನಂಬರು 147ರ ಒಳಗೆ ಎರಡು ಫರಲಾಂಗಿನಷ್ಟು ದೂರ ದಕ್ಷಿಣ ಮುಖನಾಗಿಯೂ; ಅನಂತರ ಹಳ್ಳವನ್ನನುಸರಿಸಿ ಸರ್ವೆ ನಂಬರು 117ರ ಒಳಗೆ ನಾಲ್ಕು ಫರಲಾಂಗಿನಷ್ಟು ದೂರ ನೈರುತ್ಯ ಮುಖನಾಗಿಯೂ; ಅನಂತರ ಹಳ್ಳವನ್ನು ದಾಟಿ ಸರ್ವೆ ನಂಬರು 117ರ ಒಳಗೆ ಒಂದು ಫರಲಾಂಗಿನಷ್ಟು ದೂರ ದಕ್ಷಿಣ ಮುಖನಾಗಿಯೂ, ಅನಂತರ ಸುಮಾರು ಮೂರು ಫರಲಾಂಗುಗಳ ದೂರ ಪೂರ್ವ ಮುಖನಾಗಿಯೂ ಮತ್ತೊಂದು ಹಳ್ಳವನ್ನು ಸೇರುವ ವರೆಗೆ ಮೂರು ಫರಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿಯೂ; ಅನಂತರ ಎರಡನೆ ಹಳ್ಳವನ್ನು ದಾಟಿ ಸಂಸೆಯಿಂದ ಕುದುರೆ ಮುಖಕ್ಕೆ ಹೋಗುವ ಕಾಲುದಾರಿ ಸಿಕ್ಕುವ ವರೆಗೆ ಮೇಲೆ ಕಂಡ ಸರ್ವೆ ನಂಬರಿನ ಒಳಗೆ ಎರಡು ಫರಲಾಂಗಿನಷ್ಟು ದೂರ ಪೂರ್ವ ಮುಖನಾಗಿಯೂ, ಅನಂತರ ಸರ್ವೆ ನಂಬರು 19ರ ಒಳಗೆ ಎರಡುವರೆ ಫರಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿಯೂ; ಅನಂತರ ಅದೇ ನಂಬರಿನೊಳಗೆ ಎರಡೂವರೆ ಫರಲಾಂಗಿನಷ್ಟು ದೂರ ಪೂರ್ವ ಮುಖನಾಗಿಯೂ, ಅನಂತರ ದಕ್ಷಿಣ ಕನ್ನಡ ಜಿಲ್ಲಾ ಸರಹದ್ದು ಸೇರುವ ವರೆಗೆ ಮೇಲೆ ಕಂಡ ಸರ್ವೆ ನಂಬರಿನೊಳಗೆ ಆರು ಫರಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿಯೂ; ಅನಂತರ ದಕ್ಷಿಣ ಕನ್ನಡ ಜಿಲ್ಲಾ ಸರಹದ್ದಿನಮೇಲೆ ಆರುಫರಲಾಂಗಿನಷ್ಟು ದೂರ ನೆಟ್ಟಗೆ ದಕ್ಷಿಣ ಮುಖನಾಗಿ ಹೋಗುತ್ತದೆ.

ದಕ್ಷಿಣಕ್ಕೆ:—ದಕ್ಷಿಣ ಕನ್ನಡ ಜಿಲ್ಲೆಯ ಸರಹದ್ದು.

ಪಶ್ಚಿಮಕ್ಕೆ:—ಸದರಿ ಲೈನ್ ದಕ್ಷಿಣ ಕನ್ನಡ ಜಿಲ್ಲೆಯ ಸರಹದ್ದಿನಮೇಲೆ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

2. ಮೇಲ್ಕಂಡ ಪ್ರಕರಣದ (c) ಕಲಮನ್ನನುಸರಿಸಿ, ಮೈಸೂರು ಕೋ ಆಪರೇಟಿವ್ ಸೊಸೈಟೀಸ್ ಯಾ ಅನ್ಯೋನ್ಯ ಸಹಾಯ ಸಂಘಗಳ ರಿಜಿಸ್ಟ್ರಾರ್ ಮಿ|| ಎಂ. ಶಾಮರಾವ್, ಎಂ. ಎ., ಯವರನ್ನು, ಅಂಥಾ ಎಲ್ಲೆಗಳಲ್ಲಿ ಅಡಗಿರುವ ಜಮೀನಿನಲ್ಲಿ ಅಥವಾ ಅದರ ಮೇಲೆ ಅಥವಾ ಅಂಥಾ ಜಂಗಲಿ ಜಮೀನಿನ ಉತ್ಪತ್ತಿಗೆ ಹಕ್ಕಿರುವುದಾಗಿ ದಾವೆ ಹೇಳಿಕೊಳ್ಳುವ ಅಥವಾ ಹಕ್ಕಿದೆಯೆಂದು ಹೇಳಲ್ಪಡುವ ಯಾವನಾದರೂ ಮನುಷ್ಯನ ಹಕ್ಕುಗಳ ಇರುವಿಕೆಯನ್ನು, ಅವುಗಳ ಸ್ವಭಾವ ಮತ್ತು ಪರಿಮಾಣವನ್ನು ಕುರಿತು ವಿಚಾರಣೆಮಾಡಿ ನಿಶ್ಚಯಿಸುವುದಲ್ಲದೆ ಅವುಗಳ ವಿಷಯದಲ್ಲಿ ಮೇಲ್ಕಂಡ ರೆಗ್ಯುಲೇಷನಿನ 2ನೆ ಅಧ್ಯಾಯದಲ್ಲಿ ವಿಧಿಸಿರುವಂತೆ ನಡಸುವುದಕ್ಕೆ ಫಾರೆಸ್ಟ್ ಸೆಟಲ್ಮೆಂಟ್ ಆಫಿಸರಾಗಿ ಮೊಕರರ್ಮಾಡಲೂ, ಕಡೂರು ಡಿಸ್ಟ್ರಿಕ್ಟಿನ ತತ್ಕಾಲದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರನ್ನು ಈ ವಿಚಾರಣೆಯಲ್ಲಿ ಫಾರೆಸ್ಟ್ ಸೆಟಲ್ಮೆಂಟ್ ಆಫಿಸರಿಗೆ ಗವರ್ನ್ಮೆಂಟ್ ತರಫು ಸಹಾಯ ಮಾಡುವುದಕ್ಕೆ ಹಾಜರಾಗುವುದಕ್ಕಾಗಿ ಮೊಕರರ್ಮಾಡಲು, ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಅಪ್ಪಣೆಯನ್ನು ದಯಪಾಲಿಸಿರುತ್ತಾರೆ.

3. ಮೇಲ್ಕಂಡ ರೆಗ್ಯುಲೇಷನಿನ 15ನೆ ಪ್ರಕರಣದಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರವನ್ನನುಸರಿಸಿ ಮೈಸೂರು ಶ್ರೀಮನ್ಮಹಾರಾಜರವರ ಸರಕಾರದವರು ಕಡೂರು ಡಿಸ್ಟ್ರಿಕ್ಟಿನ ತತ್ಕಾಲದ ಡೆಪ್ಯುಟಿ ಕಮಿಷನರನ್ನು ಫಾರೆಸ್ಟ್ ಸೆಟಲ್ಮೆಂಟ್ ಆಫಿಸರು ಸದರಿ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಪ್ರಕರಣವನ್ನು ಅನುಸರಿಸಿ ಕೊಡುವ ಹುಕುಮುಗಳ ಮೇಲೆ ಬರುವ ಅಪೀಲುಗಳನ್ನು ತನಿಖೆ ಮಾಡುವ ರೆವಿನ್ಯೂ ಆಫಿಸರಾಗಿ ಮೊಕರರ್ಮಾಡುವುದಕ್ಕೂ ಸಹ ಅಪ್ಪಣೆಯನ್ನು ದಯಪಾಲಿಸಿರುತ್ತಾರೆ.

ತಾರೀಖು 25ನೆ ಫೆಬ್ರುವರಿ 1907.

ನಂ. ರೆ. 7783—ಫಾರೆಸ್ಟ್ 119-06—3, ಸಕ 1900ನೆ ಇಸವಿಯ 11ನೆ ನಂಬರು ಮೈಸೂರು ಸೀಮೆಯ ಫಾರೆಸ್ಟು ರೆಗ್ಯುಲೇಷನಿನ 4ನೆ ಪ್ರಕರಣದ ವಿಧಿಗಳನ್ನು ಅನುಸರಿಸಿ ಮೈಸೂರು ಸೀಮೆಯ ಶ್ರೀಮನ್ಮಹಾರಾಜರವರ ಸರ್ಕಾರದವರು ಇದರಡಿ ಕಂಡ ಪಟ್ಟಿಯಲ್ಲಿ ವಿವರಿಸಲ್ಪಟ್ಟ ಚೆಕ್ಕುಬಂದಿಯುಳ್ಳ ಪ್ರದೇಶವು ಮೇಲ್ಕಂಡ ರೆಗ್ಯುಲೇಷನಿನ ವಿಧಿಗಳಂತೆ ಸ್ಟೇಟ್ ಫಾರೆಸ್ಟಾಗಿ ನಿರ್ಮಾಡಾಗತಕ್ಕದ್ದೆಂದು ಯೋಚಿಸಿರುತ್ತದೆ ಎಂಬದಾಗಿ ಪ್ರಸಿದ್ಧಪಡಿಸಲು ಅಪ್ಪಣೆ ದಯಪಾಲಿಸಿರುತ್ತಾರೆ:—

ಪಟ್ಟಿ.

ಡಿಸ್ಟ್ರಿಕ್ಟು	ತಾಲ್ಲೂಕು.	ಅಂದಾಜು ವಿಸ್ತೀರ್ಣ	ಕಾಡಿನ ಹೆಸರು.	ಸ್ಥಳ ಮತ್ತು ಚೆಕ್ಕುಬಂದಿ.
ಶಿವಮೊಗ್ಗ.	ಶಿವಮೊಗ್ಗ.	5497 ಎಕರೆ 38 ಗುಂಟೆ ಅಥವಾ 8 ಚದರ ಮೈಲಿ 477 ಎಕರೆ, 38 ಗುಂಟೆ.	ಕಾಚನ ಹಳ್ಳಿ.	ಸ್ಥಳ:—ಶಿವಮೊಗ್ಗ-ಎಡೆಹಳ್ಳಿ ರಸ್ತೆಯ 11, 12 ಮತ್ತು 13ನೆ ಮೈಲಿಗಳ ಪಶ್ಚಿಮ ಭಾಗದ ಡಿಸ್ಟ್ರಿಕ್ಟು ಜಂಗಲಿ.

ಉತ್ತರಕ್ಕೆ—ನೇರಲೆ ಮತ್ತು ಚಿಟ್ಟೆಮನೆ ಗ್ರಾಮಗಳು ಸಂಧಿಸುವ ಬಾಂದಿನಿಂದ ಎಲ್ಲೆಯ ಗುರುತು ಹೊರಟು ಪೂರ್ವ ದಿಕ್ಕಾಗಿ 60 ಸರಪಣಿಗಳು, ಅನಂತರ ದಕ್ಷಿಣಕ್ಕೆ 20 ಸರಪಣಿಗಳು ಚಿಟ್ಟೆಮನೆ ಮತ್ತು ನೇರಲೆ ಗ್ರಾಮಗಳ ಮಧ್ಯ ಗಡಿಯನ್ನನುಸರಿಸಿ ಹೋಗಿ ನೇರಲೆ, ಚಿಟ್ಟೆಮನೆ ಮತ್ತು ಸಿದ್ಧಮ್ಮಾಜಿ ಹೊಸೂರು ಗ್ರಾಮಗಳ ಮುಕ್ಕೂಪ್ಪೆ ಬಾಂದಿಗೆ ಸೇರುತ್ತದೆ. ಅನಂತರ ಪೂರ್ವದಿಕ್ಕಾಗಿ 30 ಸರಪಣಿಗಳು ಸಿದ್ಧಮ್ಮಾಜಿ ಹೊಸೂರ್ ಚಿಟ್ಟೆಮನೆ ಗ್ರಾಮಗಳ ಮಧ್ಯ ಗಡಿಯನ್ನನುಸರಿಸಿ ಸಿದ್ಧಮ್ಮಾಜಿ ಹೊಸೂರ್ ಚಿಟ್ಟೆಮನೆ ಕೈತೋಟ್ಲು ಗ್ರಾಮಗಳ ಮುಕ್ಕೂಪ್ಪೆ ಬಾಂದಿಗೆ ಹೋಗಿ ಸೇರುತ್ತದೆ. ಅನಂತರ ಈಶಾನ್ಯವಾಗಿ 35 ಸರಪಣಿಗಳು ಕೈತೋಟ್ಲು ಸರ್ವೆ ನಂ. 10ರಲ್ಲಿ ಹಾದು ಸರ್ವೆ ನಂ. 36ರ ನೈರುತ್ಯ ಮೂಲೆಗೆ ಸೇರುತ್ತದೆ. ಅನಂತರ ಪೂರ್ವದಿಕ್ಕಾಗಿ 23 ಸರಪಣಿಗಳು ಕೈತೊಟ್ಳು ಸರ್ವೆ ನಂ. 36, 35ರ ದಕ್ಷಿಣ ಗಡಿಯನ್ನನುಸರಿಸಿ ಕೊನೇ ನಂಬರಿನ ಆಗ್ನೇಯ ಮೂಲೆಯನ್ನು ಸೇರಿ, ಅಲ್ಲಿಂದ ಸರ್ವೆ ನಂ. 21ರಲ್ಲಿ ಹಾದು ಸದರಿ ಗ್ರಾಮ ಸರ್ವೆ ನಂ. 23ರ ನೈರುತ್ಯ ಮೂಲೆಗೆ ಹೋಗಿ ಸೇರುತ್ತದೆ ಮತ್ತು ಅದೇ ದಿಕ್ಕಿನಲ್ಲಿ 16 ಸರಪಣಿಗಳು ಹೋಗಿ ಕೈತೊಟ್ಳು ಸರ್ವೆ ನಂ. 23, 22ರ ದಕ್ಷಿಣ ಗಡಿಯನ್ನನುಸರಿಸಿ ಸದರಿ ಗ್ರಾಮದ ಸರ್ವೆ ನಂ. 22ರ ಆಗ್ನೇಯ ಮೂಲೆಗೆ ಹೋಗಿ ಸೇರುತ್ತದೆ. ಅನಂತರ ಈಶಾನ್ಯವಾಗಿ 22 ಸರಪಣಿಗಳು ಕೈತೊಟ್ಳು ಸರ್ವೆ ನಂ. 21ರಲ್ಲಿ ಹಾದು ಸದರಿ ಗ್ರಾಮ ಸರ್ವೆ ನಂ. 20, 19ರ ಪೂರ್ವಗಡಿಯನ್ನನುಸರಿಸಿ ಸರ್ವೆ ನಂ. 19ರ ಈಶಾನ್ಯ ಮೂಲೆಗೆ ಹೋಗಿ ಸೇರುತ್ತದೆ. ಅನಂತರ ವಾಯುವ್ಯವಾಗಿ 32 ಸರಪಣಿಗಳು ಕೈತೊಟ್ಳು ಸರ್ವೆ ನಂ. 12ರಲ್ಲು ಹಾದು ಸದರಿ ಗ್ರಾಮದ ಸರ್ವೆ ನಂ. 9ರ ಈಶಾನ್ಯ ಮೂಲೆಗೆ ಸೇರುತ್ತದೆ. ಅನಂತರ ವಾಯುವ್ಯವಾಗಿ 58 ಸರಪಣಿಗಳು ಕೈತೊಟ್ಳು ಸರ್ವೆ ನಂ. 10, 11ರ ನಡುವೆ ಇರುವ ಗಡಿಯನ್ನನುಸರಿಸಿ ಕೈತೊಟ್ಳು ಚೋರನಡಿಹಳ್ಳಿ ಗ್ರಾಮಗಳ ಮಧ್ಯ ಗಡಿಯನ್ನ ಚೋರನಡಿಹಳ್ಳಿ ಸ್ಟೇಟ್ ಫಾರೆಸ್ಟಿನ ಡಿಮಾರ್ಕೇಷನ್ ಲೈನ್ ದಾಟುವ ಕಡೆ ಇರುವ ಕೈತೊಟ್ಲು ಸರ್ವೆ ನಂ. 10ರ ಈಶಾನ್ಯ ಮೂಲೆಗೆ ಹೋಗಿ ಸೇರುತ್ತದೆ. ಅನಂತರ ಪೂರ್ವದಿಕ್ಕಾಗಿ 78 ಸರಪಣಿಗಳು ಆಗ್ನೇಯ ದಿಕ್ಕಾಗಿ 105 ಸರಪಣಿಗಳು ಚೋರನಡಿಹಳ್ಳಿ ಡಿಮಾರ್ಕೇಷನ್ ಲೈನ್ ಅನುಸರಿಸಿ ಹೋಗಿ ಹುರಳಿಹಳ್ಳಿ, ಜೋರ್ನಡೇಹಳ್ಳಿ ಮತ್ತು ಉಂಬ್ಳೆಬೈಲ್ ಸ್ಟೇಟು ಫಾರೆಸ್ಟುಗಳ ಮುಕ್ಕೂಪ್ಪೆ ಬಾಂದಿಗೆ ಸೇರುತ್ತದೆ.

ಪೂರ್ವಕ್ಕೆ—ಅಲ್ಲಿಂದ ನೈರುತ್ಯವಾಗಿ 50 ಸರಪಣಿಗಳು ಗಣೇದಹಾಳ ಸರ್ವೆ ನಂ. 7ರಲ್ಲಿ ಹಾದು ಸಾರಿಗೆರೆ ಸರ್ವೆ ನಂ. 28ರ ಈಶಾನ್ಯ ಮೂಲೆಗೆ ಸೇರುತ್ತದೆ. ಅನಂತರ ಪಶ್ಚಿಮವಾಗಿ 35 ಸರಪಣಿಗಳು ಸಾರಿಗೆರೆ ಸರ್ವೆ ನಂ. 29ರಲ್ಲು ಹಾದು ಸದರಿ ಗ್ರಾಮದ ಸರ್ವೆ ನಂ. 32ರ ಅತ್ಯಂತ ಉತ್ತರ ಮೂಲೆಗೆ ಹೋಗುತ್ತದೆ. ಅನಂತರ ನೈರುತ್ಯವಾಗಿ 20 ಸರಪಣಿಗಳು ಸಾರಿಗೆರೆಯ ಸರ್ವೆ ನಂ. 29ರಲ್ಲಿ ಹಾದು ಅದೇ ಗ್ರಾಮದ ಸರ್ವೆ ನಂ. 30ರ ವಾಯುವ್ಯ ಮೂಲೆಗೆ ಹೋಗುತ್ತದೆ. ಅನ್ಯಂತರ ನೈರುತ್ಯವಾಗಿ 5 ಸರಪಣಿಗಳು ಸಾರಿಗೆರೆ ಸರ್ವೆ ನಂ. 30ರ ಪಶ್ಚಿಮಗಡಿಯನ್ನನುಸರಿಸಿ ಹೋಗಿ, ಸದರಿ ನಂಬರಿನ ನೈರುತ್ಯ ಮೂಲೆಯನ್ನು ಸೇರುತ್ತದೆ. ಅನಂತರ ಸರ್ವೆ ನಂ. 29ರಲ್ಲಿ ಹಾದು 12 ಸರಪಣಿಗಳು ಹೋಗಿ ಸದರಿ ಗ್ರಾಮದ ಸರ್ವೆ ನಂ. 2ರ ಅತ್ಯಂತ ಪಶ್ಚಿಮ ಮೂಲೆಗೆ ಹೋಗುತ್ತದೆ. ಅನಂತರ ಅದೇ ದಿಕ್ಕಾಗಿ 14 ಸರಪಣಿಗಳು ಹೋಗಿ ಸದರಿ ಗ್ರಾಮದ ಸರ್ವೆ ನಂ. 4ರ ಅತ್ಯಂತ ಪಶ್ಚಿಮ ಮೂಲೆಗೆ ಸೇರುತ್ತದೆ. ಅನಂತರ ಆಗ್ನೇಯವಾಗಿ 38 ಸರಪಣಿಗಳು ಸಾರಿಗೆರೆ ಸರ್ವೆ ನಂ. 13ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂ. 12ರ ನೈರುತ್ಯ ಮೂಲೆಗೆ ಸೇರುತ್ತದೆ. ಅನಂತರ ಅದೇ ದಿಕ್ಕಾಗಿ 10 ಸರಪಣಿಗಳು ಹೋಗಿ ಸದರಿ ಗ್ರಾಮದ ಸರ್ವೆ ನಂ 15ರ ನೈರುತ್ಯ ಮೂಲೆಗೆ ಸೇರುತ್ತದೆ. ಅನಂತರ ಪೂರ್ವ ದಿಕ್ಕಾಗಿ 5 ಸರಪಣಿಗಳು ಸಾರಿಗೆರೆ ಸರ್ವೆ ನಂ. 15ರ ದಕ್ಷಿಣಗಡಿಯನ್ನನುಸರಿಸಿ ಸದರಿ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಅನಂತರ ಈಶಾನ್ಯ ದಿಕ್ಕಾಗಿ 50 ಸರಪಣಿಗಳು ಸಾರಿಗೆರೆ ಸರ್ವೆ ನಂ. 28ರಲ್ಲಿ ಹಾದು ಸದರಿ ಗ್ರಾಮ ಉಂಬಳಿ ಬೈಲ್ ಮತ್ತು ಗಣೇದಹಾಳ ಗ್ರಾಮಗಳ ಮುಕ್ಕೂಪ್ಪೆ ಬಾಂದಿಗೆ ಹೋಗಿ ಸೇರುತ್ತದೆ. ಅನಂತರ ನೈರುತ್ಯವಾಗಿ 48 ಸರಪಣಿಗಳು ಉಂಬಳಿಬೈಲ್ ಸಾರಿಗೆರೆ ಗ್ರಾಮಗಳ ಮಧ್ಯಗಡಿಯನ್ನನುಸರಿಸಿ

ಉಂಬಳಿ ಬೈಲ ಸರ್ವೆ ನಂ. 27ರ ನೈರುತ್ಯ ಮೂಲೆಗೆ ಹೋಗಿ ಸೇರುತ್ತದೆ. ಅನಂತರ ದಕ್ಷಿಣ ದಿಕ್ಕಾಗಿ 53 ಸರಪಣಿಗಳ ಉಂಬಳಿಬೈಲ್ ಸರ್ವೆ ನಂ. 13ರಲ್ಲಿ ಹಾದು ಶಿವಮೊಗ್ಗ, ಎಡೆಹಳ್ಳಿ ರಸ್ತೆಯು ಕಲ್ಲು ಹಳ್ಳದ ಸೇತುವೆ ಪಶ್ಚಿಮಕ್ಕೆ 17 ಸರಪಣಿಗಳ ಫಾಸಲೆಯಲ್ಲಿ ಸದರಿ ಹಳ್ಳದ ಎಡದ ದಡದಲ್ಲಿ ಕಟ್ಟಿರುವ ನಂ. 1ನೆ ಕಲ್ಲುಗುಡ್ಡೆಗೆ ಹೋಗಿ ಸೇರುತ್ತದೆ. ಅನಂತರ ಪೂರ್ವಕ್ಕಾಗಿ 17 ಸರಪಣಿಗಳು ಕಲ್ಲುಹಳ್ಳದ ಎಡದ ದಡವನ್ನು ಅನುಸರಿಸಿ ಹೋಗಿ ಸದರಿ ಸೇತುವೆಗೆ ಸೇರುತ್ತದೆ. ಅನಂತರ ದಕ್ಷಿಣದಿಕ್ಕಾಗಿ 1 ಮೈಲಿ ಪರಿಯಂತರ ಶಿವಮೊಗ್ಗ, ಎಡೆಹಳ್ಳಿ ರಸ್ತೆಯನ್ನನುಸರಿಸಿ ಸದರಿ ರಸ್ತೆಯು ಕಡೂರು ಡಿಸ್ಟ್ರಿಕ್ಟು ಸರಹದ್ದನ್ನು ದಾಟುವ ಸ್ಥಳಕ್ಕೆ ಹೋಗುತ್ತದೆ.

ದಕ್ಷಿಣಕ್ಕೆ.—ಅಲ್ಲಿಂದ ನೈರುತ್ಯವಾಗಿ 52 ಸರಪಣಿಗಳು ಪಶ್ಚಿಮವಾಗಿ 32 ಸರಪಣಿಗಳು ಪುನಃ ನೈರುತ್ಯವಾಗಿ 60 ಸರಪಣಿಗಳು ವಾಯುವ್ಯವಾಗಿ 69 ಸರಪಣಿಗಳು ಕಡೂರು ಡಿಸ್ಟ್ರಿಕ್ಟು ಸರಹದ್ದನ್ನು ಮತ್ತು ಆರಂಬಳ್ಳಿ ಸ್ಟೇಟ್ ಫಾರೆಸ್ಟು ಡಿಮಾರ್ಕೇಷನ್ ಲೈನನ್ನನುಸರಿಸಿ ಹೋಗಿ ಶಿವಮೊಗ್ಗ ಡಿಸ್ಟ್ರಿಕ್ಟು ಲಿಂಗಾಪುರ ಕಡೂರು ಡಿಸ್ಟ್ರಿಕ್ಟು ದೊಡ್ಡಮತಲಿ ಕೊರಲ್‌ಕೊಪ್ಪ ಗ್ರಾಮಗಳ ಮುಕ್ಕೂಪ್ಪ ಬಾಂದಿಗೆ ಸೇರುತ್ತದೆ.

ಪಶ್ಚಿಮಕ್ಕೆ.—ಅಲ್ಲಿಂದ ವಾಯುವ್ಯವಾಗಿ 47 ಸರಪಣಿಗಳು ಮತ್ತು ಅದೇ ದಿಕ್ಕಿನಲ್ಲಿ 35 ಸರಪಣಿಗಳು ಕಡೂರು ಡಿಸ್ಟ್ರಿಕ್ಟು ಸರಹದ್ದನ್ನನುಸರಿಸಿ ಲಿಂಗಾಪುರ ಸರ್ವೆ ನಂ. 15ರ ಪಶ್ಚಿಮ ಮೂಲೆಗೆ ಹೋಗಿ ಸೇರುತ್ತದೆ. ಅನಂತರ ಪೂರ್ವದಿಕ್ಕಾಗಿ 80 ಸರಪಣಿಗಳು ಸದರಿ ಸರ್ವೆ ನಂ. 15ರಲ್ಲಿ ಹಾದು ಸದರಿ ನಂಬರಿನ ಆಗ್ನೇಯದಿಕ್ಕು ಮೂಲೆಗೆ ಹೋಗಿ ಕೂಡುತ್ತದೆ. ಅನಂತರ ಆಗ್ನೇಯವಾಗಿ 35 ಸರಪಣಿಗಳು ಹೋಗಿ ಕಾಕನ ಹೊಸೂಡಿ ಸರ್ವೆ ನಂ. 24ರ ದಕ್ಷಿಣ ಮೂಲೆಯನ್ನು ಸೇರುತ್ತದೆ. ಅನಂತರ ಈಶಾನ್ಯವಾಗಿ 45 ಸರಪಣಿಗಳು ಕಾಕನ ಹೊಸೂಡಿ ಸರ್ವೆ ನಂ. 11ನೆ ಕೆರೆಯನ್ನು ವಿಭಾಗಿಸಿರತಕ್ಕ ಏರಿಯ ಆಗ್ನೇಯ ತುದಿಗೆ ಹೋಗಿ ಸೇರುತ್ತದೆ. ಅನಂತರ ಉತ್ತರ ದಿಕ್ಕಾಗಿ 12 ಸರಪಣಿಗಳು ಕಾಕನ ಹೊಸೂಡಿ ಸರ್ವೆ ನಂ. 11ನೆ ಕೆರೆ ಅಂಗಳದಲ್ಲಿ ಹಾದು ಸರ್ವೆ ನಂ. 10ರ ಪೂರ್ವ ಗಡಿಯನ್ನನುಸರಿಸಿ ಹೋಗಿ ಸದರಿ 10ನೆ ನಂಬರಿನ ಈಶಾನ್ಯಮೂಲೆಯನ್ನು ಸೇರುತ್ತದೆ. ಅನಂತರ ವಾಯುವ್ಯ ದಿಕ್ಕಿಗಾಗಿ 52 ಸರಪಣಿಗಳು ಕಾಕನ ಹೊಸೂಡಿ ಸರ್ವೆ ನಂ. 8ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂ. 6ರ ಈಶಾನ್ಯಮೂಲೆಗೆ ಉತ್ತರದಲ್ಲಿ ಸುಮಾರು 5 ಸರಪಣಿ ದೂರದಲ್ಲಿರುವ ಕಲ್ಲು ಹಳ್ಳವನ್ನು ಕಾಕನ ಹೊಸೂಡಿ-ಸಾರಿಗೆರೆ ಕಾಲುದಾರಿಯು ದಾಟುವ ಸ್ಥಳಕ್ಕೆ ಹೋಗಿ ಸೇರುತ್ತದೆ. ಅನಂತರ ಪಶ್ಚಿಮ ದಿಕ್ಕಾಗಿ ಸುಮಾರು $1\frac{1}{2}$ ಮೈಲಿ ಫಾಸಲೆ ಸದರಿ ಕಲ್ಲುಹಳ್ಳದ ಬಲಭಾಗದ ದಡವನ್ನನುಸರಿಸಿ ಹೋಗಿ ಶಿವಮೊಗ್ಗ ಡಿಸ್ಟ್ರಿಕ್ಟು ಲಿಂಗಾಪುರ ಸಿದ್ದಮ್ಮಾಜಿ ಹೊಸೂರು ಮತ್ತು ಕಡೂರು ಡಿಸ್ಟ್ರಿಕ್ಟು ಕೊರಲ್‌ಕೊಪ್ಪ ಈ ಗ್ರಾಮಗಳ ಮುಕ್ಕೂಪ್ಪ ಬಾಂದಿಗೆ ಸೇರುತ್ತದೆ. ಅಲ್ಲಿಂದ ವಾಯುವ್ಯದಿಕ್ಕಿಗಾಗಿ 52 ಸರಪಣಿಗಳು ಸಿದ್ದಮ್ಮಾಜಿ ಹೊಸೂರು ಸರ್ವೆ ನಂ. 7ರಲ್ಲಿ ಹಾದು ಅದೇ ಗ್ರಾಮದ ಸರ್ವೆ ನಂ. 1ರ ಪೂರ್ವದ ಮೂಲೆಗೆ ಸೇರುತ್ತದೆ. ಅನಂತರ ವಾಯುವ್ಯವಾಗಿ 73 ಸರಪಣಿಗಳು ಸಿದ್ದಮ್ಮಾಜಿ ಹೊಸೂರು ಸರ್ವೆ ನಂ. 22ರಲ್ಲಿ ಹಾದು ಹೋಗಿ ಬಿಳಿಗಲ್ಲು-ನೇರಲು-ಸಿದ್ದಮ್ಮಾಜಿ ಹೊಸೂರು ಮುಕ್ಕೂಪ್ಪ ಬಾಂದಿಗೆ ಸೇರುತ್ತದೆ. ಅನಂತರ ಉತ್ತರಕಾಗಿ ನೇರಲೆ ಸರ್ವೆ ನಂ. 1 ಮತ್ತು 5 ಇವುಗಳಲ್ಲಿ ಹಾದು ಹೊರಟ ಸ್ಥಳವನ್ನು ಸೇರುತ್ತದೆ.

(2) ಮೇಲ್ಕಂಡ ಪ್ರಕರಣದ (c) ಕಲಮನ್ನನುಸರಿಸಿ ಮೈಸೂರು ಕೋ ಆಪರೇಟಿವ ಸೊಸೈಟೀಸ್ ಯಾ ಅನ್ಯೋನ್ಯ ಸಹಾಯ ಸಂಘಗಳ ರಿಜಿಸ್ಟ್ರಾರ್ ಮಿ॥ ಎಂ. ಶಾಮರಾವ್, ಎಂ. ಎ., ಇವರನ್ನು ಅಂಥಾ ಎಲ್ಲೆಗಳಲ್ಲಿ ಅಡಗಿರುವ ಜಮೀನಿನಲ್ಲಿ ಅಥವಾ ಅದರಮೇಲೆ ಅಥವಾ ಅಂಥಾ ಜಂಗಲಿ ಜಮೀನಿನ ಉತ್ಪತ್ತಿಗೆ ಹಕ್ಕಿರುವುದಾಗಿ ದಾವೆ ಹೇಳಿಕೊಳ್ಳುವ ಅಥವಾ ಹಕ್ಕಿದೆಯೆಂದು ಹೇಳಲ್ಪಡುವ ಯಾವನಾದರೂ ಮನುಷ್ಯನ ಹಕ್ಕುಗಳ ಇರುವಿಕೆಯನ್ನು ಅವುಗಳ ಸ್ವಭಾವ, ಮತ್ತು ಪರಿಮಾಣವನ್ನು ಕುರಿತು ವಿಚಾರಣೆಮಾಡಿ ನಿಶ್ಚಯಿಸುವುದಲ್ಲದೆ ಅವುಗಳ ವಿಷಯದಲ್ಲಿ ಮೇಲ್ಕಂಡ ರೆಗ್ಯುಲೇಷನಿನ 2ನೆ ಅಧ್ಯಾಯದಲ್ಲಿ ವಿಧಿಸಿರುವಂತೆ ನಡೆಸುವುದಕ್ಕೆ ಫಾರೆಸ್ಟು ಸೆಟ್ಲಮೆಂಟ್ ಆಫೀಸರಾಗಿ ನೌಕರರನ್ನಾಗಿ ಮಾಡಲೂ, ಶಿವಮೊಗ್ಗ ಡಿಸ್ಟ್ರಿಕ್ಟಿನ ತತ್ಕಾಲದ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರನ್ನು ಈ ವಿಚಾರಣೆಯಲ್ಲಿ ಫಾರೆಸ್ ಸೆಟ್ಲಮೆಂಟ್ ಆಫೀಸರಿಗೆ ಗವರ್ನಮೆಂಟ್ ತರಫ ಸಹಾಯಮಾಡುವುದಕ್ಕೆ ಹಾಜರಾಗುವುದಕ್ಕಾಗಿ ನೌಕರರನ್ನಾಗಿ ಮಾಡಲು ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಅಪ್ಪಣೆಯನ್ನು ದಯಪಾಲಿಸಿರುತ್ತಾರೆ.

(3) ಮೇಲ್ಕಂಡ ರೆಗ್ಯುಲೇಷನಿನ 15ನೆ ಪ್ರಕರಣದಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರವನ್ನನುಸರಿಸಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಶಿವಮೊಗ್ಗ ಡಿಸ್ಟ್ರಿಕ್ಟಿನ ತತ್ಕಾಲದ ಡೆಪ್ಯುಟಿ ಕಮಿಷನರನ್ನು, ಫಾರೆಸ್ಟು ಸೆಟ್ಲಮೆಂಟ್ ಆಫೀಸರು ಸದರಿ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಪ್ರಕರಣವನ್ನನುಸರಿಸಿ ಕೊಡುವ ಹುಕುಮುಗಳ ಮೇಲೆ ಬರುವ ಅಪೀಲುಗಳನ್ನು ತನಿಖಿ ಮಾಡುವ ರೆವಿನ್ಯೂ ಆಫೀಸರಾಗಿ ನೌಕರರನ್ನಾಗಿ ಮಾಡುವುದಕ್ಕೂ ಸಹ ಅಪ್ಪಣೆಯನ್ನು ದಯಪಾಲಿಸಿರುತ್ತಾರೆ.

ತಾರೀಖು 28ನೆ ಫೆಬ್ರುವರಿ 1907.

ನಂ. ಫೈನಾನ್—6501-ಸ್. ರೆ. 58-06, ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್ ದೇಖೀಲ್ ಮೈಸೂರು ಸಂಸ್ಥಾನದಲ್ಲಿ 1907ನೆ ಇಸವಿ ಜುಲೈ ಗುರ್ರೇ ಲಾಗಾಯತು 1910ನೆ ಇಸವಿ ಜೂನ್ 30ನೆ ತಾರೀಖು ವರೆಗೆ ಆಗುವ ಮೂರು ವರುಷಗಳ ಕಾಲದಲ್ಲಿ ಷರಾಬನ್ನು ಯಾ ಇತರ ಬಳದೇಶದ ಸಾರಾಯಿಯನ್ನು ತಯಾರುಮಾಡುವ ಏಟ್ಟು ಸ್ವಾತಂತ್ರ್ಯಕ್ಕೋಸ್ಕರ ದರಖಾಸ್ತುಗಳು ಇದಕೆ ಸೇರಿಸಿರುವ ನಮೂನೆಯಲ್ಲಿ ಅಪೇಕ್ಷಿಸಲ್ಪಟ್ಟಿರುತ್ತವೆ.

2. ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನಿನ ಕಂಟ್ರಾಕ್ಟು, ಮೈಸೂರು ದೇಶದ ಘನವನ್ನು ಹೊಂದಿದ ರೆಸಿಡೆಂಟ್ ಸಾಹೇಬರವರ ಅಪ್ಪಣೆ ಮೇರೆ ಈ ಇಸ್ತಿಹಾರಿನಲ್ಲಿ ಅಡಗಿಸಲ್ಪಟ್ಟಿರುತ್ತದೆ.

3. ಯಾವ ಸ್ವಾತಂತ್ರ್ಯಕ್ಕೋಸ್ಕರ ಈಗ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆಯೋ ಅಂಥಾ ಸ್ವಾತಂತ್ರ್ಯವು, ಈ ಇಸ್ತಿಹಾರ್ನಾಮೆಯ 2ನೇ ಪ್ಯಾರಾದಲ್ಲಿ ವಿವರಿಸಲ್ಪಟ್ಟ ಷರತ್ತುಗಳಿಗೂ ಮತ್ತು ಮೈಸೂರು ಗವರ್ನಮೆಂಟಿನಿಂದ ಮಂಜೂರ್ಮಾಡಲ್ಪಟ್ಟ ಎಕ್ಸೈಜ್ ಕಾನೂನುಗಳಿಗೂ ಮತ್ತು ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್ನಲ್ಲಿ ಹಾಲೀ ಜಾರೀಲಿರುವ ಎಕ್ಸೈಸ್ ಕಾನೂನಿಗೂ ಒಳಪಟ್ಟು ಕೊಡಲ್ಪಡುವುದು. ಸದರೀ ಸ್ವಾತಂತ್ರ್ಯದಲ್ಲಿ ಸೇಂದಿ, ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಮತ್ತು ಪರಾಯಿ ದೇಶದ ಹುಳಿಸಿ ಉಕ್ಕಿದ ಮದ್ಯಗಳು, ಅಥವಾ ಒಳದೇಶದ ಬೀರೂ ಇವುಗಳನ್ನು ತಯಾರಿ ಅಥವಾ ಪುರೋಖ್ತು ಮಾಡುವ ಹಕ್ಕುದಾರಿಯು ಅಡಗಿರುವುದಿಲ್ಲವು.

4. ಮಾಹೆಯಾನಾ 34,000 ಸಾವಿರದ ಲಾಗಾಯಿತು 36,000 ಸಾವಿರದ ಗ್ಯಾಲನ್ ತೇದಾದು ವುಳ್ಳ ಷರಾಬ್ ಬೇಕಾಗುವದೆಂದು ಅಂದಾಜ್ ಮಾಡಲ್ಪಟ್ಟಿರುತ್ತದೆ. 1905—06ನೆ ಇಸವಿಯಲ್ಲಿ ಬೆಂಗಳೂರು ಡಿಸ್ಟಿಲರಿಯಿಂದ 4,07,272 ಗ್ಯಾಲನ್‌ಗಳ ತೇದಾದ್‌ವುಳ್ಳ ಷರಾಬ್ ಸಾರಾಯಿ ಮಾಡಲ್ಪಟ್ಟಿರುತ್ತದೆ. ಯದ್ಯಪಿ ಬೇಕಾಗುವ ಷರಾಬಿನ ತೇದಾದ್ ಯಾ ಪರಿಮಾಣದ ವಿಷಯದಲ್ಲಿ ಷರಾಬು ತಯಾರಿ ಗುತ್ತಿಗೆದಾರ್ರಿಗೆ ಕರಾರು ಮಾಡಲಿಕ್ಕಾಗುವುದಿಲ್ಲ. ಅಂದಾಜು ಮಾಡಲ್ಪಟ್ಟಿರುವ ತೇದಾದ್‌ಗಿಂತಲೂ ಅಧಿಕವಾಗಲೀ ಯಾ ಕಮ್ಮಿಯಾಗಲಿ ನಿಜವಾಗಿ ಎಷ್ಟು ಷರಾಬ್ ಬೇಕಾಗುತ್ತದೆಯೋ ಅಷ್ಟಕ್ಕೆ ಸದರೀ ಗುತ್ತಿಗೆದಾರ್ರು ಬದ್ಧರಾಗಿರುತ್ತಾರೆ.

5. ದರಖಾಸ್ತುದಾರರು ಕಂಟ್ರಾಕ್ಟಿನ ಪೂರಾ ವಾಯಿದೆಗೆ ಬೇಕಾಗು 20 ಡಿಗ್ರಿ ಅಂಡರ್ ಪ್ರೂಫ್ ಬಲವುಳ್ಳ ಎಲ್ಲಾ ಷರಾಬನ್ನು ಅಂದರೆ ಕಬ್ಬಿನ ಬೆಲ್ಲದಿಂದ ತಯಾರ್ಮಾಡಲ್ಪಟ್ಟ ಸಾರಾಯಿಗಾಗಿ ತಾಟಿ ಬೆಲ್ಲದಿಂದ ತಯಾರ್ಮಾಡಲ್ಪಟ್ಟ ಸಾರಾಯಿಗಾಗಿ ಮತ್ತು ಕಾಕಂಬಿಯಿಂದ ತಯಾರ್ಮಾಡಲ್ಪಟ್ಟ ಸಾರಾಯಿಗಾಗಿ ಗ್ಯಾಲನ್ ಒಂದಕ್ಕೆ ಯಾವ ಕನಿಷ್ಟ ದರಕ್ಕೆ ಸರಬರಾಯಿ ಮಾಡುತ್ತಾರೋ ಆ ದರವನ್ನು ಪ್ರತ್ಯೇಕವಾಗಿ ತಿಳಿಸಬೇಕು. ಈ ನೋಟಿಫಿಕೇಷನ್ ಅನುಸಾರವಾಗಿ ಕೊಡಲ್ಪಟ್ಟ ಕಂಟ್ರಾಕ್ಟಿನ ವಾಯಿದೆಯು ಜಾರಿ ಇರುವ ಕಾಲದಲ್ಲಿ ಸ್ವತಂತ್ರ ಅಂಗಡಿಕಾರರಿಗೂ ಗುತ್ತಾ ಫಿರಕಾವನ್ನು ಪಡೆದ ಗುತ್ತಿಗೆದಾರರಿಗೂ ಸರಬರಾಯಿ ಮಾಡುವ ಬಗ್ಗೆ ಮೇಲ್ಕಂಡ ಮೇರೆ ದರಖಾಸ್ತು ಮಾಡಲ್ಪಟ್ಟು ಗವರ್ನ್ಮೆಂಟಿನಿಂದ ಅಂಗೀಕರಿಸಲ್ಪಟ್ಟ ದರದ ಪ್ರಕಾರವೇ ಷರಾಬು ತಯಾರಿ ಕಂಟ್ರಾಕ್ಟುದಾರನಿಂದ ಗವರ್ನ್ಮೆಂಟಿಗೆ 20 ಡಿಗ್ರಿ ಅಂಡರ್‌ಪ್ರೂಫ್ ಷರಾಬು ಸರಬರಾಯಿ ಮಾಡಲ್ಪಡತಕ್ಕದ್ದು. ಡಬ್ಬಲ್ ಡಿಸ್ಟಿಲ್ಡ್ ಯಾ ಶುದ್ಧಿ ಮಾಡಲ್ಪಟ್ಟ ಮದ್ಯವನ್ನು ಮತ್ತು 20 ಡಿಗ್ರಿ ಅಂಡರ್‌ಪ್ರೂಫಿಗೆ ಜಾಸ್ತಿ ಯಾ ಕಮ್ಮಿ ಬಲವುಳ್ಳ ಸ್ಪೆಷಲ್ ಯಾ ವಿಶೇಷ ಮದ್ಯವನ್ನು ಷರಾಬ್ ತಯಾರಿ ಗುತ್ತಿಗೆದಾರನು ಗೊತ್ತು ಮಾಡಬಹುದಾದ ದರಗಳಲ್ಲಿ ಬಿಕರಿ ಮಾಡುವ ಬಗ್ಗೆ ಲೈಸೆನ್ಸು ಪಡೆದಿರುವ ಜನಗಳಿಗೆ ಸರಬರಾಯಿ ಮಾಡುವ ಬಗ್ಗೆ ಸರ್ಕಾರದವರು ಅಪ್ಪಣೆ ಮಾಡಿದಾಗ ಷರಾಬ್ ತಯಾರಿ ಗುತ್ತಿಗೆದಾರನು ಅಂಥಾ ಮದ್ಯಗಳನ್ನು ತಯಾರ್ಮಾಡಿ ಒದಗಿಸತಕ್ಕದ್ದು. ಪರಂತು 20 ಡಿಗ್ರಿ ಅಂಡರ್ ಪ್ರೂಫಿಗೆ ಜಾಸ್ತಿ ಯಾ ಕಮ್ಮಿ ಬಲವುಳ್ಳ ಸಿಂಗಲ್ ಡಿಸ್ಟಿಲ್ಡ್ ಷರಾಬಿಗೆ ಅವನು ಹಾಕುವ ಖರೀದಿಯು 20 ಡಿಗ್ರಿ ಅಂಡರ್‌ಪ್ರೂಫ್ ಷರಾಬಿಗೆ ಗೊತ್ತಾದ ದರದ ಮೇಲೆ ಕ್ಯಾಸಿಲಾಸ್ ರೂಲ್ಸ್ ಅನುಸರಿಸಿ ದಾಮಾಷಾಯಿ ಪ್ರಕಾರವಾಗಿ ಇರತಕ್ಕದ್ದು.

6. ಪ್ರತಿ ದರಖಾಸ್ತು ನಗದಾಗಿಯಾಗಲಿ "ಮೈಸೂರು ದಿವಾನರವರ ಹೆಸರಿಗೆ" ಕ್ರಮವಾಗಿ ಇಂಡಾರ್ಸ್ ಮಾಡಲ್ಪಟ್ಟ ಗವರ್ನ್ಮೆಂಟ್ ಬಾಂಡುಗಳ ಮೂಲಕವಾಗಿಯಾಗಲೀ 5,000 ರೂಪಾಯಿಗಳ ಠೇವಣಿ ಸಹಿತ ಲಕೋಟೆಯಲ್ಲಿ ಹಾಕಲ್ಪಟ್ಟು "ಷರಾಬ್ ತಯಾರಿಯ ಬಟ್ಟು ಸ್ವಾತಂತ್ರ್ಯದ ಬಗ್ಗೆ ದರಖಾಸ್ತು" ಎಂಬುದಾಗಿ ವಿಳಾಸ ಬರೆಯಲ್ಪಟ್ಟು ಬೆಂಗಳೂರಲ್ಲಿ ಎಕ್ಸೈಜ್ ಕಮ್ಮಿಷನರಿಗೆ 1907ನೆ ಇಸವಿ ಏಪ್ರಿಲ್ 3ನೆ ಮರ್ತುಮಿನ ಬುಧವಾರದ ಮಧ್ಯಾಹ್ನಕ್ಕೆ ಪೂರ್ವ ತಲಪುವಂತೆ ಕಳುಹಿಸಲ್ಪಡತಕ್ಕದ್ದು. ಸದರೀ ತಾರೀಖು ತರುವಾಯ ಯಾವ ದರಖಾಸ್ತೂ ಹಿಡಿಯಲ್ಪಡಲಾರದು. ದರಖಾಸ್ತುಗಳು 1907ನೆ ಇಸವಿ ಏಪ್ರಿಲ್ 3ನೆ ಮರ್ತುಮಿನ ಮಧ್ಯಾಹ್ನ 12 ಘಂಟೆಗೆ ಎಕ್ಸೈಜ್ ಕಮ್ಮಿಷನರಿಂದ ಅವರ ಆಫೀಸಿನಲ್ಲಿ ಹಾಜರ್ ಇರಬಹುದಾದ ದರಖಾಸ್ತುದಾರರ ರೂಬರೂ ಬಿಚ್ಚಲ್ಪಡುವವು. ದರಖಾಸ್ತುಗಳ ಆಖೈರ್ ವಿಲೇವಾರಿಯು ಸರ್ಕಾರದವರಿಗೆ ಸೇರಿದ್ದಾಗಿರುತ್ತದೆ. ಅವರ್ರು ಯಾವುದೊಂದು ಸಬಬೂ ತಿಳಿಸದೇನೇ ಯಾವ ದರಖಾಸ್ತನ್ನಾಗಲೀ ಎಲ್ಲಾ ದರಖಾಸ್ತುಗಳನ್ನಾಗಲೀ ತಿರಸ್ಕರಿಸುವ ಪೂರಾ ಸ್ವಾತಂತ್ರ್ಯವನ್ನು ತಮ್ಮಲ್ಲಿ ಉಳಿಸಿಕೊಂಡಿರುತ್ತಾರೆ. ತಿರಸ್ಕರಿಸಲ್ಪಡುವ ದರಖಾಸ್ತುದಾರರಿಂದ ಇಡಲ್ಪಟ್ಟ ಠೇವಣಿ ಮೊಬಲಗು ಅವರು ಕೇಳಿಕೊಂಡಾಗ ವಾಪಸ್ ಮಾಡಲ್ಪಡುವುದು.

7. ಮೈಸೂರು ಸರ್ಕಾರದವರಿಂದ ಆಖೈರಾಗಿ ಅಂಗೀಕರಿಸಲ್ಪಡುವ ದರಖಾಸ್ತುದಾರನು ಅಂಥಾ ಅಂಗೀಕರಿಸಲ್ಪಟ್ಟ ಸಂಗತಿ ಅವನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು ಎಂಟು ದಿವಸಗಳ ವಳಗಾಗಿ ಮೊದಲೇ ಇಡೋಣಾದ ಠೇವಣೀ ದೇಖೀಲ್ 50,000 ರೂಪಾಯಿಗೆ ಸರಿಯಾದ ಮೊಬಲಗನ್ನು ನಗದಾಗಿಯಾಗಲಿ, ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರ್ಸ್ ಮಾಡಲ್ಪಟ್ಟ ಪತ್ರಗಳ ಮೂಲಕವಾಗಿಯಾಗಲೀ ಬೆಂಗಳೂರಲ್ಲಿ ಇರತಕ್ಕ ಹುಜೂರು ಟ್ರೆಜರಿಯಲ್ಲಿ ಡಿಪಾಜಿಟ್ ಕಟ್ಟತಕ್ಕದ್ದು, ಮತ್ತು ಡಿಸ್ಟಿಲರಿಯಲ್ಲಿರುವ ಯಂತ್ರಗಳು, ಸಾಮಾನುಗಳು ಮತ್ತು ಸರಕುಗಳನ್ನು ಹೆಚ್ಚಾದ ಠೇವಣಿಯಾಗಿಟ್ಟು ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳಿಗೆ ಒಪ್ಪಿ ನಡೆಯುವ ಬಗ್ಯೆ ಬದ್ಧನಾಗಿ ತೋರಿಸುವ ನಮೂನೆಯಲ್ಲಿ ಕ್ರಮವಾದ ಛಾಪಾ ಕಾಗದದಲ್ಲಿ ಒಂದು ಒಡಂಬಡಿಕೆಯನ್ನು ಬರೆದುಕೊಡತಕ್ಕದ್ದು. ಮತ್ತು ಅಂಥಾ ವಾಯಿದೆ ಒಳಗೆ ಅವನು ಅವಶ್ಯಕವಾದ ಠೇವಣಿ ಕಟ್ಟುವುದಕ್ಕೆ ಅಥವಾ ಒಡಂಬಡಿಕೆಯನ್ನು ರುಜು ಮಾಡುವುದಕ್ಕೆ ತಪ್ಪಿಹೋದರೂ, ಅಥವಾ ನಿರಾಕರಿಸಿದರೂ ಮೊದಲೇ ಅವನಿಂದ ಇಡೋಣಾದ ಠೇವಣಿ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಟ್ಟು ಕಂಟ್ರಾಕ್ಟು ಅನ್ಯಥಾ ವಿಲೇವಾರಿ ಮಾಡಲ್ಪಡುವುದು.

8. ಈಗ ದರಖಾಸ್ತು ಮಾಡಲ್ಪಡುವ ಕಂಟ್ರಾಕ್ಟು, ಇದರಡೀ ಕಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು, ಯಾವುವೆಂದರೆ:—

I. ಕಂಟ್ರಾಕ್ಟುದಾರನು ಬೆಂಗಳೂರು ಬಳಿಯಣ ಗವರ್ನಮೆಂಟ್ ಡಿಸ್ಟಿಲರಿ ಆವರಣದಲ್ಲಾಗಲೀ ಅಥವಾ ಗವರ್ನ್ಮೆಂಟಿನಿಂದ ಮಂಜೂರ್ಮಾಡಲ್ಪಡುವ ಇತರ ಯಾವ ಸ್ಥಳದಲ್ಲಾಗಲೀ ಷರಾಬ್ ಮತ್ತು ಇತರ ಒಳದೇಶದ ಸಾರಾಯಿಯನ್ನು ತಯಾರ್ಮಾಡತಕ್ಕದ್ದು. ಬೆಂಗಳೂರು ಬಳಿಯಣ ಡಿಸ್ಟಿಲರಿ ಕಟ್ಟಡಗಳನ್ನೂ ನೀರಿನ ಸರಬರಾಯಿಗೆ

ಹಾಲಿ ಇರತಕ್ಕ ಪಿಪಾಯಿಗಳನ್ನು ಉಪಯೋಗಿಸುವ ಬಗ್ಗೆ ಕಂಟ್ರಾಕ್ಟುದಾರನು ಮಾಹೆಯಾನಾ 500 ರೂಪಾಯಿ ಬಾಡಿಗೆಯನ್ನು ಸರಕಾರಕ್ಕೆ ಕೊಡತಕ್ಕದ್ದು. ಸದರೀ ಕಟ್ಟಡಗಳಿಗೆ ಯಾ ನೀರಿನ ಸರಬರಾಯಿಗೆ ಸರಕಾರದವರು ಮಂಜೂರ್ಮಾಡಬಹುದಾದಂಥಾ ಅಭಿವೃದ್ಧಿಯು ಯಾ ಜಾಸ್ತಿ ಕಾಮಗಾರಿಯು, ಸರಕಾರದವರು ಗೊತ್ತು ಮಾಡಬಹುದಾದ ಜಾಸ್ತಿ ಬಾಡಿಗೆಯನ್ನು ಅಥವಾ ದರವನ್ನು ಕಂಟ್ರಾಕ್ಟುದಾರನು ಕೊಡತಕ್ಕದ್ದೆಂಬ ಷರತ್ತಿನ ಮೇಲೆ, ಸರ್ಕಾರದ ಲಾಗವಡುನಿಂದ ನಡೆಸಲ್ಪಡತಕ್ಕದ್ದು. ಮತ್ತು ಎಗ್ಸಿಕ್ಯೂಟಿವ್ ಇಂಜನಿಯರಿಂದ ತೋರಿಸಲ್ಪಡಬಹುದಾದ ಡಿಸ್ಟಿಲರಿ ಕಟ್ಟಡಗಳಿಗೂ ಮತ್ತು ನಾಲಾಗಳಿಗೂ ಆಗಬೇಕಾದ ಸಾಲಿಯಾನಾ 50 ರೂಪಾಯಿಗಳಿಗೆ ಮೀರದ ರಿಪೇರಿಗಳು ಕಂಟ್ರಾಕ್ಟುದಾರನಿಂದ ಕೂಡ ಮಾಡಲ್ಪಡಬೇಕು.

II. ಕಂಟ್ರಾಕ್ಟುದಾರನು ಸಾಧಾರಣವಾಗಿ ಚಾಲ್ತಿ ಖರ್ಚಿನ ದರ ಪ್ರಕಾರ ಒಂದು ತಿಂಗಳ ದಾಸ್ತಾ ಅಂದರೆ 34,000 ಸಾವಿರ ಗ್ಯಾಲನ್‌ಗಳನ್ನು ಡಿಸ್ಟಿಲರಿ ಗುಡಂಗಿನಲ್ಲಿ ಇಟ್ಟಿರತಕ್ಕದ್ದು. ಮತ್ತು 20 ಡಿಗ್ರಿ ಅಂಡರ್ ಪ್ರೂಫ್ ಲೆಕ್ಕದ ಮೇರಗೆ ಲಾಯಖ್ ಷರಾಬ್ ದಾಸ್ತಾ 18,000 ಗ್ಯಾಲನ್‌ಗಳಿಗಿಂತ ಕಮ್ಮಿಯಾಗಿ ಯಾವಾಗಲೂ ಇರಕೂಡದು.

III. ಕಂಟ್ರಾಕ್ಟುದಾರನು ಮೈಸೂರು ಸಂಸ್ಥಾನದಲ್ಲಿ ಸ್ಥಾಪಿಸಲ್ಪಟ್ಟು ಗವರ್ನಮೆಂಟನಿಂದ ಷರಾಬ್ ಯಾ ಇತರ ಬಳದೇಶದ ಸಾರಾಯಿ ತಯಾರಿ ಮಾಡುವ ಬಗ್ಗೆ ಅಪ್ಪಣೆ ಕೊಡಲ್ಪಡುವ ಯಾವುದಾದರೂ ಸಕ್ಕರ ಕಾರ್ಖಾನೆಯಿಂದ ಷರಾಬ್ ಯಾ ಇತರ ಬಳದೇಶದ ಸಾರಾಯಿಯನ್ನು ಕೊಂಡುಕೊಳ್ಳುವ ಬಗ್ಗೆ ಅಪ್ಪಣೆ ಕೊಡಲ್ಪಡತಕ್ಕದ್ದು. ಕಂಟ್ರಾಕ್ಟುದಾರನು ಗವರ್ನಮೆಂಟನವರ ಅಪ್ಪಣೆ ಪಡೆದು ಸ್ವಂತವಾಗಿ ಒಂದು ಸಕ್ಕರ ಕಾರ್ಖಾನೆಯನ್ನು ಇಟ್ಟು ಅದರಲ್ಲಿ ಷರಾಬ್ ಯಾ ಇತರ ಬಳದೇಶದ ಸಾರಾಯಿಯನ್ನು ತಯಾರ್ಮಾಡುವ ಸಂದರ್ಭದಲ್ಲಿ, ಅವನು ಅಂಥಾ ಕಾರ್ಖಾನೆಯಲ್ಲಿ ಗವರ್ನಮೆಂಟನಿಂದ ಗೊತ್ತು ಮಾಡಲ್ಪಡುವ ತೇದಾದವುಳ್ಳ ಷರಾಬನ್ನು ಯಾ ಇತರ ಬಳದೇಶದ ಸಾರಾಯಿಯನ್ನು ದಾಸ್ತಾ ಇಡುವ ಬಗ್ಗೆ ಬದ್ಧನಾಗಿರತಕ್ಕದ್ದು.

IV. ತಯಾರ್ಮಾಡಲ್ಪಟ್ಟ ಷರಾಬು ಒಳ್ಳೇ ರಖಂ ಉಳ್ಳದ್ದಾಗಿರಬೇಕು. ಡಿಸ್ಟಿಲರಿ ಜವಾಬ್ದಾರಿಯಲ್ಲಿರುವ ದೊಡ್ಡ ಉದ್ಯೋಗಸ್ಥರ ವಿಚಾರಣೆಗೆ ಒಳಪಟ್ಟು ಬಹಳ ಜೋರಾದ ಷರಾಬನ್ನು ವಿಧಾಯಕವಾದ ಜೋರಿಗೆ ತರುವುದಕ್ಕೆ ಡಿಸ್ಟಿಲರಿಯಲ್ಲಿ ಭಟ್ಟಿಯಿಂದ ಇಳಿಸಲ್ಪಟ್ಟ ನೀರನ್ನು ಮಾತ್ರವೇ ಯಾವಾಗಲೂ ಉಪಯೋಗಿಸತಕ್ಕದ್ದು. ಭಟ್ಟಿ ಇಳಿಸುವುದಕ್ಕೆ ಉಪಯೋಗಿಸುವ ಪದಾರ್ಥಗಳನ್ನು ಆ ಉದ್ಯೋಗಸ್ಥರು ಮಂಜೂರ್ಮಾಡಬೇಕು. ಭಟ್ಟಿ ಇಳಿಸುವುದರಲ್ಲಿ ದೇಹಕ್ಕೆ ವಿರೋಧವಾದ ಪದಾರ್ಥಗಳನ್ನು ಉಪಯೋಗಿಸಕೂಡದು. ಮತ್ತು ಅಂಥಾ ಪದಾರ್ಥಗಳನ್ನು ಷರಾಬಿನಲ್ಲಾಗಲೀ ಅಥವಾ ಇತರ ಬಳದೇಶದ ಸಾರಾಯಿನಲ್ಲಾಗಲೀ ಅಥವಾ ಇತರ ಮದ್ಯದಲ್ಲಾಗಲೀ ಅದು ತಯಾರಾದ ನಂತರ ಹಾಕಕೂಡದು. ತಯಾರ್ಮಾಡಲ್ಪಟ್ಟ ಷರಾಬುಗಳು ಕೆಟ್ಟ ಪದಾರ್ಥಗಳ ಮಿಶ್ರದಿಂದ ಕೆಡಿಸಲ್ಪಡಕೂಡದು ಅಥವಾ ಜೋರನ್ನು ಇಳಿಸಿ ವಿಧಾಯಕವಾದ ಜೋರಿಗೆ ತರುವುದಕ್ಕೆ ಭಟ್ಟಿ ಇಳಿಸಿದ ನೀರಿನಿಂದ ವಿನಾ ಮತ್ಯಾವ ನೀರಿನಿಂದಲೂ ಬೆರಸಲ್ಪಡಕೂಡದು.

V. ಜಾಜವಿ ಖರ್ಚಾಗುವುದರ ದೆಸೆಯಿಂದ ಅಥವಾ ಇತರ ಕಾರಣಗಳಿಂದ ಹೊರಗಿನ ಪ್ರದೇಶಗಳಲ್ಲಿ ಅಕ್ರಮವಾಗಿ ಷರಾಬ್ ತಯಾರ್ಮಾಡಲ್ಪಡುತ್ತದೆಂದು ಗುಮಾನಿ ತೋರುವ ಸಂಗತಿಗಳಲ್ಲಿ ಗವರ್ನಮೆಂಟನವರು ಹೊರಗೆ ಚಿಲ್ಲರೆ ಭಟ್ಟಿಗಳನ್ನು ಇಡಿಸುವುದಕ್ಕೆ ಸ್ವತಂತ್ರರಾಗಿರತಕ್ಕದ್ದು. ಪರಂತು ಅಂಥಾ ಭಟ್ಟಿಗಳನ್ನಿಡಿಸಲಿಕ್ಕೆ ಕಂಟ್ರಾಕ್ಟುದಾರ್ರಿಗೆ ಪ್ರಥಮ ಹಕ್ಕು ಇರತಕ್ಕದ್ದು.

VI. (1) ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟಿನಲ್ಲಿ ಗೊತ್ತು ಮಾಡಲ್ಪಟ್ಟ ದರದಂತೆ ಖರೀದಿ ಮೊಬಲಗು ತನಗೆ ಪಾವತಿ ಮಾಡಲ್ಪಟ್ಟ ತರುವಾಯ ಗವರ್ನಮೆಂಟ್ ಡಿಸ್ಟಿಲರಿಯಲ್ಲಾಗಲೀ ಅಥವಾ ಅವರು ಸಾರಾಯಿ ತಯಾರೀ ಬಗ್ಗೆ ಅಪ್ಪಣೆಕೊಡಬಹುದಾದಂಥಾ ಇತರ ಸ್ಥಳದಲ್ಲಾಗಲೀ ಈ ಕೆಳಗೆ ನಮೂದಾಗುವವರಿಗೆ ಸರಬರಾಯಿ ಮಾಡತಕ್ಕ ಬಗ್ಗೆ ಡಿಸ್ಟಿಲರಿಯ ಜವಾಬ್ದಾರಿಯಲ್ಲಿರುವ ದೊಡ್ಡ (ಸರ್ಕಾರಿ) ಉದ್ಯೋಗಸ್ಥರು ದರಖಾಸ್ತು ಮಾಡಬಹುದಾದಷ್ಟು ಷರಾಬನ್ನೂ ಇತರ ಮದ್ಯವನ್ನೂ ಸರಬರಾಯಿ ಮಾಡತಕ್ಕದ್ದು.

1ನೇದು—ಗವರ್ನಮೆಂಟನವರು ಆಗಿಂದಾಗ್ಯೆ ಸ್ಥಾಪಿಸಿ ಕಾಪಾಡುವಂಥಾ ಬಾಂಡೆಡ್ ಕೋಠಿಗಳಿಗೆ ;

2ನೇದು—ಬೆಂಗಳೂರು ವ ಮೈಸೂರು ಷಹರುಗಳಲ್ಲೂ ಮತ್ತು ಕೋಲಾರದ ಭಂಗಾರದ ಗಣಿಗಳಲ್ಲೂ ಮತ್ತು ಅಲಾಹಿದಾ ದುಕಾನ ಪದ್ಧತಿಯು ಜಾರೀಗೆ ತಂದಿರುವ ಮತ್ತು ತರಲ್ಪಡಬಹುದಾದ ಇತರ ಸ್ಥಳಗಳಲ್ಲೂ ಫುರೋಖ್ತು ಬಗ್ಗೆ ಲೈಸೆನ್ಸ್ ಪಡೆದಿರುವಂಥಾ, ಸ್ವತಂತ್ರ ಅಂಗಡಿಕಾರರಿಗೂ ;

3ನೇದು—ಗೊತ್ತಾದ ಸ್ಥಳಗಳಲ್ಲಿ ಷರಾಬ್ ಬಿಕರಿ ಮಾಡುವ ಹಕ್ಕುದಾರಿಯನ್ನು ಗವರ್ನಮೆಂಟನವರು ವಿಕ್ರಯಿಸುವಂಥಾ ಷರಾಬ್ ಬಿಕರಿ ಫಿರ್ಕಾ ಗುತ್ತಿಗೆದಾರರಿಗೂ ; ಮತ್ತು

4ನೇದು—ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್ ಎಕ್ಸೈಸ್ ಸೂಪರಿಂಟೆಂಡೆಂಟರವರಿಂದ ಬರುವ ದರಖಾಸ್ತುಗಳ ಪ್ರಕಾರ ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್ ಗವರ್ನಮೆಂಟ್ ಎಕ್ಸೈಜ್ ಕೋಠಿಗೆ.

ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನಿಗೆ ಸರಬರಾಯಿ ಮಾಡಲ್ಪಡುವ ಸಾರಾಯಿಯ ಖರೀದಿಯು ಮುಂಗಡವಾಗಿ ಕೊಡಲ್ಪಡುವುದಿಲ್ಲ ; ಪರಂತು 15 ದಿವಸಗಳಿಗೊಂದಾವರ್ತಿ ಸಿವಿಲ್ ವ ಮಿಲಿಟರಿ ಸ್ಟೇಷನ್ ಎಕ್ಸೈಸ್ ಸೂಪರಿಂಟೆಂಡೆಂಟರವರ ದ್ವಾರಾ ಕಂಟ್ರಾಕ್ಟುದಾರ್ರಿಂದ ಕಲೆಕ್ಟರವರಿಗೆ ಬಿಲ್ಲುಗಳು ಬಂದ ಕೂಡಲೆ ಪಾವತಿ ಮಾಡಲ್ಪಡುವುದು.

(2) ಕಂಟ್ರಾಕ್ಟುದಾರನು ಸಾರಾಯಿ ಚಿಲ್ಲರೆ ಮಾರಾಟದಲ್ಲಿ ಯಾವ ವಿಧವಾದ ಪ್ರಯೋಜನವನ್ನೂ ಉಂಟಾಗಿರಕೂಡದು ಮತ್ತು ಅಂಥಾ ಪ್ರಯೋಜನವುಳ್ಳ ಯಾವ ಮನುಷ್ಯನನ್ನಾಗಲಿ ಡಿಸ್ಟಿಲರಿಯಲ್ಲಿ ಏಜಂಟಾಗಿ ಅಥವಾ ಇನ್ನಾವ ಕೆಲಸದಲ್ಲಿಯಾಗಲಿ ಇಡಕೂಡದು.

(3) ಕಂಟ್ರಾಕ್ಟುದಾರನು ಮಾಲ್ಟ್ ಮದ್ಯ ಯಾನೆ ಬೀರು ವಿನಾ ಕಡಮೆ ಪರಾಯಿ ದೇಶದ ಸಾರಾಯಿಗಳನ್ನೂ ಮತ್ತು ಪರಾಯಿದೇಶದ ಉಕ್ತಿ ಪ ಮದ್ಯಗಳನ್ನೂ ಮಾರುವುದಕ್ಕೆ ಲೈಸೆನ್ಸ್ ಪಡೆದಿರುವವರಿಗೆ, ತಾನು ತಯಾರ್ಮಾಡಿದ ಡಬ್ಬಲ್ ಡಿಸ್ಟಿಲ್ಡ್ ಯಾನೆ ಎರಡಾವರ್ತಿ ಭಟ್ಟಿ ಇಳಿಸಿದ ಯಾ ಶುದ್ಧಿ ಮಾಡಿದ ಸಾರಾಯಿಯನ್ನೂ, ಇತರ ಸ್ಪೆಷಲ್ ಯಾ ವಿಶೇಷವಾದ ಮದ್ಯಗಳನ್ನೂ ಮಾರತಕ್ಕದ್ದು. ಎಕ್ಸೈಸ್ ಕಮಿಷನರ ಅಪ್ಪಣೆ ಪ್ರಕಾರ ಕಂಟ್ರಾಕ್ಟುದಾರನು ಮೇಲ್ಕಂಡ ಸಾರಾಯಿಗಳನ್ನು ಬಾಂಡೆಡ್ ಡಿಪೋಗಳಿಗೂ, ಆಸ್ಪತ್ರೆಗಳಿಗೂ ಮತ್ತು ಇತರ ಸರ್ಕಾರದ ಇಲಾಖೆಗಳಿಗೂ ಮಾರತಕ್ಕದ್ದು.

ಗವರ್ನ್ಮೆಂಟ್ ಡಿಸ್ಟಿಲರಿಯಿಂದಲಾಗಲೀ ಯಾ ಷರಾಬ್ ತಯಾರಿ ಬಗ್ಗೆ ಹುಕುಂ ಆಗಿರುವ ಇತರ ಸ್ಥಳದಿಂದಲಾಗಲೀ ಬಾಂಡೆಡ್ ಕೋಠಿಗಳಿಗೆ ಸರಬರಾಯಿಗೆ ವಿನಾ ಯಾವ ಷರಾಬನ್ನಾದರೂ, ಅದನ್ನು ಕೊಂಡುಕೊಂಡವನು ಅದಕ್ಕಾಗಿ ಖಜಾನೆಯಲ್ಲಿ ಡ್ಯೂಟಿಯನ್ನು ಮುಂಗಡವಾಗಿ ಕಟ್ಟಿದ್ದಕ್ಕೆ ಪಡೆದ ರಶೀತಿಯನ್ನು ಹಾಜರ್ಮಾಡಿದ ಹೊರ್ತು ಬಿಡ್ಯಕೂಡದು.

ಷರಾ—ಈ ಷರತ್ತು ಖಜಾನೆ ರಶೀತಿ ಇಲ್ಲದೆ ಸಿವಿಲ್ ವ ಮಿಲಿಟರಿ ಸ್ಟೇಷನ್ನಲ್ಲಿರತಕ್ಕ ಸರ್ಕಾರೀ ಎಕ್ಸೈಸ್ ಕೋಠಿಗೆ ಸರಬರಾಯಿ ಆಗತಕ್ಕ ಷರಾಬಿಗೆ ಅನ್ವಯಿಸುವುದಿಲ್ಲ.

VII. ಕಂಟ್ರಾಕ್ಟುದಾರನು ಮೈಸೂರು ಸೀಮೆಯಲ್ಲಿಯೂ, ಮತ್ತು ಸಿವಿಲ್ ವ ಮಿಲಿಟರಿ ಸ್ಟೇಷನಲ್ಲಿಯೂ ತತ್ಕಾಲಕ್ಕೆ ಜಾರಿಯಲ್ಲಿರುವ, ಎಕ್ಸೈಸ್ ಕಾನೂನುಗಳ ನಿಯಮಗಳನ್ನನುಸರಿಸಲು ಬದ್ಧನಾಗಿರತಕ್ಕದ್ದು. ಮತ್ತು ಅವನ ಕೈ ಕೆಳಗಿರುವ ನೌಕರ್ಮಾನೇರು ಅವುಗಳನ್ನು ಸಂಪೂರ್ಣವಾಗಿ ಜಾರಿಯಲ್ಲಿ ತರುವಂತೆ ನೋಡಿಕೊಳ್ಳತಕ್ಕದ್ದು.

VIII. ಒಂದು ಕಂಟ್ರಾಕ್ಟು ಮುಗಿಯುವ ಆಖೈರ್ ತಾರೀಖಿನಲ್ಲಿ, ದಾಸ್ತಾನ್ ಹಾಜರಿರಬಹುದಾದಂಥಾ ಒಂದು ತಿಂಗಳು ಸರಬರಾಯಿಗೆ ಮೀರದಷ್ಟು ಷರಾಬನ್ನು ಯಾ ಒಳದೇಶದ ಸಾರಾಯಿಯನ್ನು ಮತ್ತು ಸ್ಪೆಷಲ್ ಮದ್ಯಗಳನ್ನು ಹಳೇ ಕಂಟ್ರಾಕ್ಟುದಾರನು ಕೊಡಲಿಕ್ಕೂ ಮತ್ತು ಹೊಸ ಕಂಟ್ರಾಕ್ಟುದಾರನು ತೆಗೆದುಕೊಳ್ಳಲಿಕ್ಕೂ, ಮತ್ತು ಎಕ್ಸೈಸ್ ಕಮಿಷನರು ಅದಕ್ಕೆ ಗೊತ್ತು ಮಾಡುವ ಬೆಲೆಯನ್ನು ಹೊಸ ಕಂಟ್ರಾಕ್ಟುದಾರನು ಹಳೇ ಕಂಟ್ರಾಕ್ಟುದಾರನಿಗೆ ಕೊಡಲಿಕ್ಕೂ ಬದ್ಧರಾಗಿರತಕ್ಕದ್ದು.

IX. ಹೊಸ ಕಂಟ್ರಾಕ್ಟುದಾರನು ಯಾ ಎಕ್ಸೈಸ್ ಕಮಿಷನರು ಕನಿಷ್ಠಪಕ್ಷ ಒಂದು ವಾರಕ್ಕೆ ಮುಂಚೆ ನೋಟೀಸ್ ಕೊಟ್ಟು ಅಪೇಕ್ಷಿಸಿದರೆ ಮುಗಿಯುವ ಕಂಟ್ರಾಕ್ಟಿನ ಆಖೈರ್ ತಿಂಗಳಿನಲ್ಲಿ ಹಳೇ ಕಂಟ್ರಾಕ್ಟುದಾರನು ವಾಷ ಯಾನೆ ಊಟಿಯನ್ನು ತಯಾರ್ಮಾಡೋದನ್ನು ನಿಲ್ಲಿಸಿ ಹೊಸ ಕಂಟ್ರಾಕ್ಟುದಾರನು ಅವನ ಕೆಲಸಗಳನ್ನು ಶುರು ಮಾಡಲಿಕ್ಕೆ ಅನುಕೂಲಿಸುವಂತೆ ಕಟ್ಟಡಗಳನ್ನು ಖಾಲಿ ಮಾಡತಕ್ಕದ್ದು. ಅಂಥಾ ನೋಟೀಸನ್ನು ಕೊಡದೆ ಇದ್ದರೆ, ಹಳೇ ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಅವಧಿ ಪೂರೈಸುವ ಪರಿಯಂತ ಭಟ್ಟಿ ಇಳಿಸುತ್ತಿದ್ದು ಕಂಟ್ರಾಕ್ಟು ಅವಧಿ ಪೂರ್ತಿಯಾದೊಡನೆ ಭಟ್ಟಿ ಇಳಿಸುವುದನ್ನು ಮನ್ನಾ ಮಾಡತಕ್ಕದ್ದು. ಹೊಸ ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟಿನ ಮೊದಲನೇ ವರುಷದ ಜುಲೈ ಒಂದನೇ ತಾರೀಖು ಲಾಗಾಯಿತು ಸರಬರಾಯಿ ಮಾಡುವುದಕ್ಕಾಗಿ ಎಲ್ಲಾ ಬಾಂಡೆಡ್ ಡಿಪೋಗಳಲ್ಲಿ ಅವನ ಸರಕು ಸಿದ್ಧವಾಗಿರುವುದಕ್ಕೋಸ್ಕರ (ಅವನ ಕಂಟ್ರಾಕ್ಟು ಶುರುವಾಗಲಿಕ್ಕೆ ಮುಂಚೆ ಎರಡು ವಾರಗಳಿಗೆ ಮೀರದೆ) ಸಾಕಾದ ಕಾಲದಲ್ಲಿ ಎಕ್ಸೈಸ್ ಕಮಿಷನರಿಂದ ಆರೀತಿ ಅಪ್ಪಣೆ ಮಾಡಲ್ಪಟ್ಟರೆ, ಡಿಸ್ಟಿಲರಿಯಿಂದ ಬಾಂಡೆಡ್ ಡಿಪೋಗಳಿಗೆ ಷರಾಬು ಇತರ ಒಳದೇಶದ ಸಾರಾಯಿ ಮತ್ತು ಸ್ಪೆಷಲ್ ಷರಾಬುಗಳು ಇವುಗಳನ್ನು ರವಾನೆ ಮಾಡತಕ್ಕದ್ದು.

X. ಬೆಂಗಳೂರು ಬಳಿಯಿರುವ ಗವರ್ನ್ಮೆಂಟ್ ಸೆಂಟ್ರಲ್ ಡಿಸ್ಟಿಲರಿಯಲ್ಲಿರುವ ಯಾ ಭಟ್ಟಿ ಇಳಿಸುವುದಕ್ಕಾಗಿ ನೇಮಿಸಲ್ಪಟ್ಟ ಇತರ ಸ್ಥಳದಲ್ಲಿರುವ ಹಳೇ ಕಂಟ್ರಾಕ್ಟುದಾರನ ಬಾಬತು ಎಲ್ಲಾ ಯಂತ್ರಗಳು ಸಾಮಾನುಗಳು ವ ಸರಕುಗಳನ್ನು ಸವೆದುಹೋದ್ದಕ್ಕಾಗಿ ಶುರು ಖರೀದಿಯಲ್ಲಿ ನ್ಯಾಯವೆಂದು ತೋರುವ ಒಂದು ಭಾಗವನ್ನು ಸೋಡಿ ಮಾಡಿ ಎಕ್ಸೈಜ್ ಕಮಿಷನರು ಗೊತ್ತುಮಾಡುವ ನ್ಯಾಯವಾದ ಖರೀದಿಗೆ ಅವುಗಳನ್ನು ಕೊಂಡುಕೊಳ್ಳಲಿಕ್ಕೆ ಹೊಸ ಕಂಟ್ರಾಕ್ಟುದಾರನು ಬದ್ಧನಾಗಿರತಕ್ಕದ್ದು. ಹೀಗೆ ಗೊತ್ತು ಮಾಡಲ್ಪಟ್ಟ ಖರೀದಿಯು ಆ ಬಗ್ಗೆ ಕ್ರಮವಾಗಿ ಪ್ರಸಿದ್ಧಿಮಾಡಲ್ಪಡುವ ಇಸ್ತಿಹಾರ್ ಮೂಲಕ ಹಳೇ ಕಂಟ್ರಾಕ್ಟುದಾರನಿಗೂ, ಮತ್ತು ಹೊಸ ಕಂಟ್ರಾಕ್ಟಿಗೆ ದರಖಾಸ್ತು ಕೊಡಲು ಅಪೇಕ್ಷಿಸುವ ಜನರಿಗೂ ಸಹ ಸಕಾಲದಲ್ಲಿ ತಿಳಿಸಲ್ಪಡುತ್ತದೆ.

XI. ಖಾಯಂ ಆಗಿರತಕ್ಕ ಸ್ವಭಾವವುಳ್ಳ ಕಟ್ಟಡಗಳು ಮುಂತಾದ್ದು ಹಾಗೆಯೇ ಬಿಟ್ಟುಬಿಡಲ್ಪಡಬೇಕೇಹೊರ್ತು ಎಗ್ಸಿಕ್ಯೂಟಿವ್ ಇಂಜನಿಯರ ಮಂಜೂರಾತಿ ಇಲ್ಲದೆ ಕೆಡಿಸಲ್ಪಡಕೂಡದು.

XII. ಮೇಲ್ಕಂಡ ಷರತ್ತುಗಳ ಪೈಕಿ ಯಾವುದಾದರೂ ಉಲ್ಲಂಘಿಸಲ್ಪಟ್ಟರೆ, ಕಂಟ್ರಾಕ್ಟನ್ನು ರದ್ದು ಮಾಡುವುದಕ್ಕೂ, ಕಂಟ್ರಾಕ್ಟುದಾರನಿಂದ ಇಡಲ್ಪಟ್ಟ ಠೇವಣಿಯನ್ನೂ ಮತ್ತು ಅವನಿಂದ ಈಡು ಮಾಡಲ್ಪಟ್ಟ ಯಂತ್ರಗಳು, ಸಾಮಾನುಗಳು ವ ದಾಸ್ತಾನ್ ಇವುಗಳನ್ನೂ ದಂಡವಾಗಿ ತೆಗೆದುಕೊಳ್ಳುವುದಕ್ಕೂ ಅಂಥಾ ಉಲ್ಲಂಘನೆಯ ದೆಸೆಯಿಂದ ಉಂಟಾಗಬಹುದಾದ ಇತರ ನಷ್ಟವನ್ನು ತಪ್ಪಿತಸ್ಥನಾದ ಕಂಟ್ರಾಕ್ಟುದಾರನಿಂದ ವಸೂಲ್ಮಾಡಿಕೊಳ್ಳುವುದಕ್ಕೂ ಗವರ್ನ್ಮೆಂಟಿನವರಿಗೆ ಸ್ವತಂತ್ರವಿರತಕ್ಕದ್ದು.

9. ಈ ಕೆಳಗಿನ ಸಂಗತಿಗಳನ್ನು ಇದಕ್ಕೆ ಲಗತ್ತು ಮಾಡಿರುತ್ತದೆ:—

ಷರಾ—1. 1897—98ನೆ ಇಸವಿಯಿಂದ ಈಚೆಗೆ ಡಿಸ್ಟಿಲರಿಯಿಂದ ರವಾನೆಯಾದ ಷರಾಬಿನ ಸಾಲ್ವಾರ್ ತೇದಾದನ್ನು ತೋರಿಸುವ ತಖ್ತೆ:—

	1897—98 ಗ್ಯಾಲರ್.	1898—99 ಗ್ಯಾಲರ್.	1899—900 ಗ್ಯಾಲರ್.	1900—01 ಗ್ಯಾಲರ್.	1901—02 ಗ್ಯಾಲರ್.
ಮೈಸೂರು ಸಂಸ್ಥಾನ	3,54,131	3,46,223	3,26,469	3,14,803	3,16,837
ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷ್ನ ...	73,749	79,133	67,836	58,920	49,189
ಜುಮ್ಲಾ ...	4,27,880	4,25,356	3,94,305	3,63,723	3,66,076

	1902—03 ಗ್ಯಾಲರ್.	1903—04 ಗ್ಯಾಲರ್.	1904—05 ಗ್ಯಾಲರ್.	1905—06 ಗ್ಯಾಲರ್.
ಮೈಸೂರು ಸಂಸ್ಥಾನ ...	3,31,755	3,52,432	3,72,083	3,42,920
ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷ್ನ ..	58,924	62,703	66,804	64,352
ಜುಮ್ಲಾ ...	3,90,679	4,25,135	4,38,887	4,07,272

ಷರಾ 2—20 ಡಿಗ್ರಿ ಜೋರುಳ್ಳ ಸಾರಾಯಿಗೆ ಸ್ವತಂತ್ರ ಅಂಗಡಿಕಾರರೂ ಮತ್ತು ಫಿರ್ಕಾ ಗುತ್ತಿಗೇದಾರರೂ ಸರ್ಕಾರಕ್ಕೆ ಕೊಡಬೇಕಾದ ಹಾಸಲು ಗ್ಯಾಲರ್ 1ಕ್ಕೆ ನಾಲ್ಕು ಮುಕ್ಕಾಲು ರೂಪಾಯಿಯಾಗಿರುತ್ತದೆ. ಅವರುಗಳಿಗೆ ಪಾನಮಾಡುವವರು ಕೊಡಬೇಕಾದ ಚಿಲ್ಲರೆ ಬಿಕರಿ ದರವು ಗ್ಯಾಲರ್ 1ಕ್ಕೆ (6—6—0) ಆರು ರೂಪಾಯಿ ಆರು ಆಣೆಯಾಗಿರುತ್ತದೆ; ಅಥವಾ ಗ್ಯಾಲರ್ 1ರ $\frac{1}{5}$ನೆ ಭಾಗವಾದ ಬ್ರಾಂ 1ಕ್ಕೆ 2 ಎರಡು ಆಣೆಯಾಗಿರುತ್ತದೆ. 20 ಡಿಗ್ರಿ ಅಂಡರ್ ಪ್ರೂಫ್ ಗಿಂತ ಹೆಚ್ಚಾದ ಯಾ ಕನ್ಮಿಯಾದ ಜೋರುಳ್ಳ ಸಿಂಗಲ್ ಡಿಸ್ಟಿಲ್ಡ್ ಷರಾಬುಗಳ ಡ್ಯೂಟಿ ಯಾ ಚಿಲ್ಲರೆ ಬಿಕರಿ ದರಗಳು ಕ್ಯಾಸಲ್ಲಾವಿನ ರೂಲ್ಸ್‌ಗಳ ಪ್ರಕಾರ 20 ಡಿಗ್ರಿ ಅಂಡರ್ ಪ್ರೂಫಿನ ದರಗಳ ದಾಮಾಷಾಯಿನ ಮೇಲೆ ಲೆಖ್ಖಾ ಮಾಡಲ್ಪಡತಕ್ಕದ್ದು. ಡ್ಯೂಟಿ ಮತ್ತು ಚಿಲ್ಲರೆ ಬಿಕರಿ ದರಗಳನ್ನು ಬದಲಾಯಿಸುವ ಅಧಿಕಾರವನ್ನು ಗವರ್ನ್ಮೆಂಟಿನವರು ಉಳಿಸಿಕೊಂಡಿರುವುದರಿಂದ ಅಂಥಾ ಬದಲಾವಣೆಯ ದೆಸೆಯಿಂದ ಷರಾಬು ತಯಾರೀ ಕಂಟ್ರಾಕ್ಟದಾರನಿಗೆ ನಷ್ಟ ಉಂಟಾದರೆ ಅವನಿಗೆ ಪರಿಹಾರದ್ರವ್ಯಕ್ಕೆ ಹಕ್ಕಿರಲಾರದೆಂದು ಸ್ಪಷ್ಟವಾಗಿ ಅರಿಯತಕ್ಕದ್ದು. ಮೇಲ್ಕಂಡ ಬಟ್ಟು ಸ್ವಾತಂತ್ರ್ಯಕ್ಕೆ ಅನುಗುಣವಾಗಿ ತಯಾರ್ಮಾಡಲ್ಪಟ್ಟ ಸಾಧಾರಣ ಷರಾಬು ಶಿವಾಯಿ ಕಡಮೆ ಯಾವ ತರಹೇ ಮದ್ಯವಾಗಲೀ ಅಥವಾ ಪರಾಯಿದೇಶದ ಮದ್ಯವೆಂಬ ಅರ್ಥ ವಿವರಣೆಗೆ ಬಳಪಡಬಹುದಾದ ಯಾವ ಮದ್ಯವಾಗಲಿ ಸಿವಿಲ್ ವ ಮಿಲಿಟರಿ ಸ್ಟೇಷನ್ನಲ್ಲಿ ಬಿಕರಿ ಬಗ್ಗೆ ಕಂಟ್ರಾಕ್ಟದಾರನಿಂದ ಸರಬರಾಯಿ ಮಾಡಲ್ಪಟ್ಟರೆ, ಅದರಮೇಲೆ ವಸೂಲಾಗಬೇಕಾದ ಡ್ಯೂಟಿಯು 1906ನೆ ಇಸವಿ 1ನೆ ಟ್ಯಾರಿಫ ಆಕ್ಟು ಪ್ರಕಾರ ಅದೇ ಜೋರುಳ್ಳ ಅದೇ ಮಾದ್ರಿ ಮದ್ಯಕ್ಕೆ ಯಾವ ದರಗಳಂತೆ ವಸೂಲಾಗಬೇಕಾಗಿರುತ್ತದೆಯೋ ಆ ದರಗಳಂತೆ ಮೊಕರರ್ಮಾಡಲ್ಪಡತಕ್ಕದ್ದು.

ಷರಾ 3—ಎಲ್ಲಾ ಜೋರುಗಳ ಡಬ್ಬಲ್ ಡಿಸ್ಟಿಲ್ಡ್ ಯಾ ಶುದ್ಧಿ ಮಾಡಲ್ಪಟ್ಟ ಷರಾಬುಗಳಿಗೆ ಡ್ಯೂಟಿ ದರಗಳು ಕ್ಯಾಸಲ್ಲಾವಿನ ರೂಲ್ಸ್‌ಗಳ ಪ್ರಕಾರ 20 ಡಿಗ್ರಿ ಅಂಡರ್ ಪ್ರೂಫ್ ಷರಾಬಿನ ದರದ ದಾಮಾಷಾಯಿನ ಮೇಲೆ ಲೆಖ್ಖ ಮಾಡಲ್ಪಡತಕ್ಕದ್ದು. ಆದರೆ ಬೆಂಗಳೂರು ಗವರ್ನ್ಮೆಂಟ್ ಸೆಂಟ್ರಲ್ ಡಿಸ್ಟಿಲರಿಯಲ್ಲಿ ಯಾ ಗವರ್ನ್ಮೆಂಟಿನವರು ಮಂಜೂರ್ಮಾಡಿದ ಇತರ ಸ್ಥಳದಲ್ಲಿ ತಯಾರ್ಮಾಡಲ್ಪಟ್ಟ ಸದರೀ ಡಬ್ಬಲ್ ಡಿಸ್ಟಿಲ್ಡ್ ಯಾ ಶುದ್ಧಿ ಮಾಡಲ್ಪಟ್ಟ ಷರಾಬಿಗೆ ವ ಇತರ ಸ್ಪೆಷಲ್ ಯಾನೆ ವಿಶೇಷ ಮದ್ಯಗಳಿಗೆ ಷರಾಬ್ ತಯಾರೀ ಗುತ್ತಿಗೆದಾರರು ವ ಲೈಸೆನ್ಸ ಪಡೆದಿರುವ ಬಿಕರೀದಾರರು ಸಹ ಅವರ ಸ್ವಂತ ಖರೀದಿ ದರಗಳನ್ನು ಗೊತ್ತುಮಾಡಬಹುದು.

ಷರಾ 4—ಹಾಲಿ ಕಂಟ್ರಾಕ್ಟದಾರರು 1907ನೆ ಇಸವಿ ಜನವರಿ ಆಖೈರ್ ವರೆಗೆ ಭಟ್ಟಿಗಳು ಮುಂತಾದ್ದಕ್ಕೋಸ್ಕರ 73,253—4—8 ರೂಪಾಯಿಗಳನ್ನು ಖರ್ಚು ಮಾಡಿರುವಂತೆ ರಿಪೋರ್ಟಾಗಿರುತ್ತದೆ.

ಅಪೆಂಡಿಕ್ಸ ಯಾನೆ ಪರಿಸಿಷ್ಟ.

ದರಖಾಸ್ತಿನ ನಮೂನೆ.

ಬೆಂಗಳೂರಲ್ಲಿರುವ ಮೈಸೂರು ದೇಶದ ಎಕ್ಸೈಜ್ ಕಮಿಷನರಿಗೆ.

ಅಯ್ಯಾ,

ಸನ್ 1907ನೆ ಇಸವಿ ಮಾರ್ಚಿ ಮಾಹೆ 1ನೆ ಮರ್ಕ್ಯುಮಿನ ಮೈಸೂರು ಎಕ್ಸ್ಟ್ರಾಆರ್ಡಿನರಿ ಯಾ ವಿಶೇಷ ಗೆಜೆಟ್ಟಿನಲ್ಲಿ ಪ್ರಾ

ಯಿಷ್ ಮಾಡಲ್ಪಟ್ಟ ಮೈಸೂರು ಗವರ್ನಮೆಂಟನವರ 1907ನೆ ಇಸವಿ ಫೆಬ್ರುವರಿ ಮಾಹೆ 28ನೇ ಮರ್ಸ್ಯಾಂ ಫೈನಾನ್ಸ್ 6501-ಸೆ. ರ. 58-06ನೆ ನಂಬರ್ ಇಸ್ತಿಹಾರ್ನಾ ಪ್ರೆಯು ಶಾಖಲೆಮೇಲೆ ಬೆಂಗಳೂರಿನ ಸಿವಿಲ್ ವ ಮಿಲಿಟೆರಿ ಸ್ಟೇಷನ್ ದೇವೀಲ್ ಮೈಸೂರು ಸಂಸ್ಥಾನದಲ್ಲಿ ಮೂರು ವರುಷಗಳ ಕಾಲ ಅಂದರೆ 1907ನೆ ಇಸವಿ ಜುಲೈ 1ನೆ ತಾರೀಖು ಮೊದಲು 1910ನೆ ಇಸವಿ ಜೂನ್ 30ನೆ ತಾರೀಖು ಪರಿಯಂತರ ಮೇಲ್ಕಂಡ ಇಸ್ತಿಹಾರಿನಲ್ಲಿ ನಮೂದಾದ ಷರತ್ತುಗಳು ವ ಕಡಂಬಡಿಕೆಗಳಿಗೆ ಒಳಪಟ್ಟ ಷರಾಬ್ ವ ಬೇರೆ ಇತರ ಸಾರಾಯಿಗಳನ್ನು ತಯಾರ್ಮಾಡುವ ಬಟ್ಟಿ ಸ್ವಾತಂತ್ರ್ಯದ ಬಗ್ಗೆ ಧರಖಾಸ್ತು ಮಾಡುತ್ತೇನೆ.

2. ನಾನು ಈ ಕೆಳಗೆ ನಮೂದಿಸುವ ತಪಶೀಲು ಪ್ರಕಾರ 20 ಡಿಗ್ರಿ ಅಂಡರ್ ಪ್ರೂಫ್ ಬಲವುಳ್ಳ ಸಾರಾಯಿಯನ್ನು ತಯಾರ್ಮಾಡಿ ಒದಗಿಸುವುದಕ್ಕೆ ಇದರ ದೆಸೆಯಿಂದ ಒಪ್ಪುತ್ತೇನೆ.

	20 ಡಿಗ್ರಿ ಸಾರಾಯಿಗೆ ಗ್ಯಾಲನ್ 1ಕ್ಕೆ ದರ. ರೂ. ಆ. ಪೈ.	
ಕಾಕಂಬಿ ಸಾರಾಯಿಗೆ		ಕಂಟ್ರಾಕ್ಟಿನ ಪೂರಾ ಕಾಲಕ್ಕೆ
ಕಬ್ಬಿನ ಬೆಲ್ಲದ ಸಾರಾಯಿಗೆ ...		
ತಾಟ ಬೆಲ್ಲದ ಸಾರಾಯಿಗೆ ...		

3. ನಾನು ಸದರೀ ಇಸ್ತಿಹಾರಿನ 6ನೆ ಪ್ಯಾರಾದಲ್ಲಿ ಕಂಡ ಪ್ರಕಾರ ದಿವಾನರವರ ಹೆಸರಿಗೆ ಕ್ರಮಪ್ರಕಾರ ಇಂಡಾರ್ಸ್ ಮಾಡಲ್ಪಟ್ಟ 5,000 ರೂಪಾಯಿಗಳ ________ ನ್ನು ಮಲಪೂಫ್ ಮಾಡಿರುತ್ತೇನೆ.

ಹೀಗೆ ಇರುವ
ತಮ್ಮ ವಿಧೇಯ ಸೇವಕನಾದ,

ತಾರೀಖು

ವಿಳಾಸ.

ತಾರೀಖು 28ನೆ ಫೆಬ್ರುವರಿ 1907.

ನಂ. ರ. 7859-ಫಾರೆಸ್ಟು 160-06-2, 1900ನೆ ಇಸವಿಯ 11ನೆ ನಂಬರ್ ಮೈಸೂರು ಸೀಮೆಯ ಫಾರೆಸ್ಟು ರೆಗ್ಯುಲೇಷನ್ 4ನೆ ಪ್ರಕರಣದ ವಿಧಿಗಳನ್ನು ಅನುಸರಿಸಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಇದರಡೀ ಕಂಡ ಪಟ್ಟಿಯಲ್ಲಿ ನಮೂದಿಸಿರುವ ಚಕ್ಕು ಬಂಧಿಯುಳ್ಳ ಪ್ರದೇಶವನ್ನು ಸ್ಟೇಟ್ ಫಾರೆಸ್ಟನ್ನಾಗಿ ಮಾಡಬೇಕೆಂದು ಉದ್ದೇಶಿಸಲ್ಪಟ್ಟಿರುತ್ತದೆ ಎಂಬದಾಗಿ ಪ್ರಸಿದ್ಧಪಡಿಸಲು ಅಪ್ಪಣೆ ದಯಪಾಲಿಸಿರುತ್ತಾರೆ :—

ಪಟ್ಟಿ.

ಡಿಸ್ಟ್ರಿಕ್ಟು	ತಾಲ್ಲೂಕು	[illegible]	[illegible]	ಸ್ಥಳ ಮತ್ತು ಚಕ್ಕುಬಂದಿ.
ಚಿತ್ರದುರ್ಗ	ಹಿರಿಯೂರು ತಾಲ್ಲೂಕು	[illegible]	[illegible]	ಸ್ಥಳ.—ತುಮಕೂರು ಡಿಸ್ಟ್ರಿಕ್ಟಿಗೆ ಸೇರಿದ ಬುಕ್ಕಪಟ್ಟಣ ಸ್ಟೇಟ್ ಫಾರೆಸ್ಟಿಗೆ ಸಂಬಂಧಿಸಿರುವ ಹಿರಿಯೂರು ತಾಲ್ಲೂಕಿನ ಆಗ್ನೇಯ ಮೂಲೆಯಲ್ಲಿದೆ. ಉತ್ತರಕ್ಕೆ.—ದಿಂಡಾವರ ಗ್ರಾಮದ ಸರ್ವೆ ನಂಬರು 40ರ ನೈರುತ್ಯ ಮೂಲೆಯಲ್ಲಿ ಹೊರಟು ಎಲ್ಲೆಯಗುರುತು ಸರ್ವೆ ನಂಬರು 40, 39, 36, 37, 35, 34, 27 ಮತ್ತು 26 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಹೋಗಿ ಆಬ್ಕೈರ್ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ ; ತರುವಾಯ ಉತ್ತರ ಮಾರ್ಗವಾಗಿ ಸರ್ವೆ ನಂಬರು 26ರ ಪೂರ್ವ ಪಾರ್ಶ್ವವನ್ನೇ ಅನುಸರಿಸಿ ಸರ್ವೆ ನಂಬರು 16ರ ನೈರುತ್ಯ ಮೂಲೆಗೆ ಹೋಗುತ್ತದೆ ; ತರುವಾಯ ಸರ್ವೆ ನಂಬರು 16ರ ದಕ್ಷಿಣ

ಮತ್ತು ಪೂರ್ವ ಪಾರ್ಶ್ವಗಳನ್ನು ಅನುಸರಿಸಿ ಸರ್ವೆ ನಂಬರು 18ರ ನೈರುತ್ಯ ಮೂಲೆಗೆ ಹೋಗುತ್ತದೆ ; ತರುವಾಯ ಸರ್ವೆ ನಂಬರು 18 ಮತ್ತು 7ರ ದಕ್ಷಿಣ ಪಾರ್ಶ್ವವನ್ನು ಅನುಸರಿಸಿ ಆಬ್ಕೈರ್ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ ; ತರುವಾಯ ಸರ್ವೆ ನಂಬರು 8ರಲ್ಲಿ ಹಾದು ಸರ್ವೆ ನಂಬರು 8ರ ಪೂರ್ವ ದಿಕ್ಕಿಗೆ ಹೋಗಿ ಸರ್ವೆ 155ನೆ ನಂಬರಿನ ಆಗ್ನೇಯ ಮೂಲೆಯಿಂದ ದಕ್ಷಿಣಕ್ಕೆ ಸುಮಾರು 1¼ ಫರಲಾಂಗಿನಲ್ಲಿ ಹೋಗುತ್ತದೆ ; ತರುವಾಯ ಸರ್ವೆ ನಂಬರು 8ರ ಪೂರ್ವ ಪಾರ್ಶ್ವದ ಉದ್ದಕ್ಕೂ ಸರ್ವೆ ನಂಬರು 155ರ ಆಗ್ನೇಯ ಮೂಲೆಗೆ ಹೋಗುತ್ತದೆ ; ತರುವಾಯ ಸರ್ವೆ ನಂಬರು 153, 152, 137 ಮತ್ತು 138ರ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಅದೇ ಗ್ರಾಮದ ಆಬ್ಕೈರು ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ.

ಪೂರ್ವಕ್ಕೆ :—ತರುವಾಯ ಪೋಬಳಾಪುರದ ಸರ್ವೆ ನಂಬರು 14 ಮತ್ತು 13ರ ಮತ್ತು ಕಿಲಾರದಹಳ್ಳಿ ಗ್ರಾಮದ ಸರ್ವೆ ನಂಬರು 25ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಮಾವಿನ ಮಡು ಸರ್ವೆ ನಂಬರು 80ರ ವಾಯುವ್ಯ ದಿಕ್ಕಿನ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂಬರು 78ರ ಮಧ್ಯೆ ಹೋಗಿ ಸದರಿ ಗ್ರಾಮದ ಸರ್ವೆ ನಂಬರು 79ರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂಬರು 79, 30 ಮತ್ತು 27ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಆಬ್ಕೈರ್ ನಂಬರಿನ ನೈರುತ್ಯ

ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂಬರು 27 ಮತ್ತು 28ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಮತ್ತು ಸರ್ವೆ ನಂಬರು 23 ಮತ್ತು 24ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಆಖೈರ್ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂಬರು 24ರ ದಕ್ಷಿಣ ಪಾರ್ಶ್ವದ ಮತ್ತು ಸರ್ವೆ ನಂಬರು 24, 23 ಮತ್ತು 22ರ ಪೂರ್ವ ಪಾರ್ಶ್ವದ ಉದ್ದಕ್ಕೂ ಸರ್ವೆ ನಂಬರು 19ರ ಆಗ್ನೇಯ ಮೂಲೆಗೆ ಹೋಗುತ್ತದೆ; ತರುವಾಯ ಕಿಲಾರದಹಳ್ಳಿ ಸರ್ವೆ ನಂಬರು 25ರ ದಕ್ಷಿಣ ಪಾರ್ಶ್ವದ ಮತ್ತು ಸರ್ವೆ ನಂಬರು 23 ಮತ್ತು 27ರ ಪೂರ್ವ ಪಾರ್ಶ್ವದ ಉದ್ದಕ್ಕೂ ಆಖೈರ್ ಸರ್ವೆ ನಂಬರು ಈಶಾನ್ಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂಬರು 28ರಲ್ಲಿ ಹಾದು ಸರ್ವೆ ನಂಬರು 38ರ ಆಗ್ನೇಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂಬರು 38ರ ಪೂರ್ವ ಪಾರ್ಶ್ವದ ಉದ್ದಕ್ಕೂ ಹೊರಟು ಅದರ ಈಶಾನ್ಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂಬರು 29, 8 ಮತ್ತು 11 ಇವುಗಳ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಆಖೈರು ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಬುಕ್ಕಪಟ್ಟಣ ಫಾರೆಸ್ಟು ಪಶ್ಚಿಮ ಗಡಿ ಮಾರ್ಗವಾಗಿ ಹೋಗುತ್ತದೆ.

ದಕ್ಷಿಣಕ್ಕೆ:—ಬುಕ್ಕಪಟ್ಟಣ ಫಾರೆಸ್ಟು ಮತ್ತು ಮಾರೇನದೇವಿ ಗ್ರಾಮದ ಉತ್ತರ ಗಡಿ.

ಪಶ್ಚಿಮಕ್ಕೆ:—ತರುವಾಯ ಮಾವಿನ ಮಡು ಗ್ರಾಮದ ಸರ್ವೆ ನಂಬರು 49 ಮತ್ತು 51ರ ಪೂರ್ವ ಪಾರ್ಶ್ವದ ಉದ್ದಕ್ಕೂ ಅದೇ ಗ್ರಾಮದ ಸರ್ವೆ ನಂಬರು 52ರ ಆಗ್ನೇಯ ಮೂಲೆಗೆ ಹೋಗುತ್ತದೆ, ತರುವಾಯ ಸರ್ವೆ ನಂಬರು 54ರ ದಕ್ಷಿಣ ಪಾರ್ಶ್ವವಾಗಿ ಅದರ ಆಗ್ನೇಯ ಮೂಲೆಗೂ ಮತ್ತು ಸರ್ವೆ ನಂಬರು 54 ಮತ್ತು 6,ರ ಪೂರ್ವ ಪಾರ್ಶ್ವದ ಉದ್ದಕ್ಕೂ ಸರ್ವೆ ನಂಬರು 65ರ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂಬರು 65 ಮತ್ತು 64ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಸರ್ವೆ ನಂಬರು 64ರ ಆಗ್ನೇಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂಬರು 64 ಮತ್ತು [illegible]ರ ಪೂರ್ವ ಪಾರ್ಶ್ವದ ಉದ್ದಕ್ಕೂ ಆಖೈರ್ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ; ತರುವಾಯ ಪಿಲಾಲಿ ಗ್ರಾಮದ ಸರ್ವೆ ನಂಬರು 4ರ ಪೂರ್ವ ಪಾರ್ಶ್ವದ ಉದ್ದಕ್ಕೂ ಮತ್ತು ಸರ್ವೆ ನಂಬರು 4, 86, 84, 82, 72 ಮತ್ತು 71ರ ಉತ್ತರ ಪಾರ್ಶ್ವದ ಉದ್ದಕ್ಕೂ ಸದರಿ ಪಿಲಾಲಿ ಗ್ರಾಮದ ಆಖೈರ್ ಸರ್ವೆ ನಂಬರು 71ರ ಉತ್ತರ ದಿಕ್ಕಿನ ಮೂಲೆಯನ್ನು ಸೇರುತ್ತದೆ. ತರುವಾಯ ವೀರಾನಾಗತಿಹಳ್ಳಿ, ಪೂರ್ವದಿಕ್ಕಿನ, ಗಡಿ ಮಾರ್ಗವಾಗಿ ಹೊರಟ ಸ್ಥಳವನ್ನು ಸೇರುತ್ತದೆ.

ಲಕ್ಕೇನಹಳ್ಳಿ ಗ್ರಾಮದ 1, 2, 4, 5, 6, 7, 14, 15, 16, 17, 18, 19, 20, 21, 22, 23, 24, 34, 35, 49, 51, 52, 54, 55 ಮತ್ತು 56 ಸರ್ವೆ ನಂಬರುಗಳು ಫಾರೆಸ್ಟು ನೊಳಗೆ ಹಿಡುವಳಿ ನಂಬರುಗಳಾಗಿರುವುದರಿಂದ ಪ್ರದೇಶವು (Enclosure) ಆವರಣವಾಗಿ ಎಣಿಸಲ್ಪಟ್ಟಿದೆ.

2. ಮೇಲ್ಕಂಡ ಪ್ರಕರಣದ (c) ಕಲಮನ್ನನುಸರಿಸಿ, ಮೈಸೂರು ಕೋ ಆಪರೇಟಿವ್ ಸೊಸೈಟೀಸ್ ಎಂದರೆ ಅನ್ಯೋನ್ಯ ಸಹಾಯ ಸಂಘಗಳ ರಿಜಿಸ್ಟ್ರಾರ್ ಮಿ|| ಎಂ. ಶ್ಯಾಮರಾವ್, ಎಂ. ಎ. ಯವರನ್ನು, ಅಂಥಾ ಎಲ್ಲೆಗಳಲ್ಲಿ ಅಡಗಿರುವ ಜಮೀನಿನಲ್ಲಿ ಅಥವಾ ಅದರ ಮೇಲೆ ಅಥವಾ ಅಂಥಾ ಜಂಗಲಿ ಜಮೀನಿನ ಉತ್ಪತ್ತಿಗೆ ಹಕ್ಕಿರುವದಾಗಿ ಯಾವ ಹೇಳಿಕೊಳ್ಳುವ ಅಥವಾ ಹಕ್ಕಿದೆಯೆಂದು ಹೇಳಲ್ಪಡುವ ಯಾವನಾದರೂ ಮನುಷ್ಯನ ಹಕ್ಕುಗಳ ಇರುವಿಕೆಯನ್ನು ಅವುಗಳ ಸ್ವಭಾವ ಮತ್ತು ಪರಿಮಾಣವನ್ನು ಕುರಿತು ವಿಚಾರಣೆಮಾಡಿ ನಿಷ್ಕರ್ಷೆಯಿಸುವುದಲ್ಲದೆ ಅವುಗಳ ವಿಷಯದಲ್ಲಿ ಮೇಲ್ಕಂಡ ರೆಗ್ಯುಲೇಷನಿನ 2ನೆ ಅಧ್ಯಾಯದಲ್ಲಿ ವಿಧಿಸಿರುವಂತೆ ನಡೆಸುವದಕ್ಕೆ ಫಾರೆಸ್ಟು ಸೆಟಲ್ಮೆಂಟ್ ಆಫೀಸರಾಗಿ ನೇಮಕರನ್ನಾಗಿಮಾಡಲೂ, ಚಿತ್ರದುರ್ಗ ಡಿಸ್ಟ್ರಿಕ್ಟಿನ ತತ್ಕಾಲದ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರನ್ನು ಈ ವಿಚಾರಣೆಯಲ್ಲಿ ಫಾರೆಸ್ಟು ಸೆಟಲ್ಮೆಂಟ್ ಆಫೀಸರಿಗೆ ಗವರ್ನಮೆಂಟ್ ತರಫು ಸಹಾಯ ಮಾಡುವದಕ್ಕೆ ಹಾಜರಾಗುವುದಕ್ಕಾಗಿ ನೇಮಕರನ್ನಾಗಿಮಾಡಲೂ, ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಅಪ್ಪಣೆಯನ್ನು ದಯಪಾಲಿಸಿರುತ್ತಾರೆ.

3. ಮೇಲ್ಕಂಡ ರೆಗ್ಯುಲೇಷನಿನ 15ನೆ ಪ್ರಕರಣದಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರವನ್ನನುಸರಿಸಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಚಿತ್ರದುರ್ಗ ಡಿಸ್ಟ್ರಿಕ್ಟಿನ ತತ್ಕಾಲದ ಡೆಪ್ಯುಟಿ ಕಮಿಷನರನ್ನು ಫಾರೆಸ್ಟು ಸೆಟಲ್ಮೆಂಟ್ ಆಫೀಸರು ಸದರಿ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಪ್ರಕರಣವನ್ನು ಅನುಸರಿಸಿ ಕೊಡುವ ಹುಕುಮುಗಳ ಮೇಲೆ ಬರುವ ಅಪೀಲುಗಳನ್ನು ತನಿಖಿ ಮಾಡುವ ರೆವಿನ್ಯೂ ಆಫೀಸರಾಗಿ ನೇಮಕರನ್ನಾಗಿಮಾಡುವುದಕ್ಕೂ ಸಹ ಅಪ್ಪಣೆಯನ್ನು ದಯಪಾಲಿಸಿರುತ್ತಾರೆ.

ತಾರೀಖು 5ನೆ ಮಾರ್ಚಿ 1907.

ನಂ. ರೆ. 8010—ಫಾರೆಸ್ಟು. 138-06—3, 1900ನೆ ಇಸವಿಯ 11ನೆ ನಂಬರ್ ಮೈಸೂರು ಸೀಮೆಯ ಫಾರೆಸ್ಟು ರೆಗ್ಯುಲೇಷನ್ 4ನೆ ಪ್ರಕರಣದ ವಿಧಿಗಳನ್ನು ಅನುಸರಿಸಿ ಮೈಸೂರು ಸೀಮೆಯ ಶ್ರೀಮನ್ಮಹಾರಾಜರವರ ಸರ್ಕಾರದವರು ಈ ಕೆಳಗಿನ ಪಟ್ಟಿಯಲ್ಲಿ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ಮೇಲ್ಕಂಡ ರೆಗ್ಯುಲೇಷನಿನ ವಿಧಿಗಳಂತೆ ಸ್ಟೇಟ್ ಫಾರೆಸ್ಟು ಆಗಿ ಏರ್ಪಡತಕ್ಕದ್ದೆಂದು ಯೋಚಿಸಿ ಇರುತ್ತದೆ ಎಂಬದಾಗಿ ಪ್ರಸಿದ್ಧಪಡಿಸಲು ಅಪ್ಪಣೆ ದಯಪಾಲಿಸಿರುತ್ತಾರೆ:—

ಪಟ್ಟಿ.

ಡಿಸ್ಟ್ರಿಕ್ಟು	ತಾಲ್ಲೂಕು	ಸುಮಾರು ವಿಸ್ತೀರ್ಣ	ಫಾರೆಸ್ಟಿನ ಹೆಸರು	ಸ್ಥಳ ಮತ್ತು ಚಕ್ಕುಬಂದಿ.
ಹಾಸನ.	ಮೂಡಗೆರೆ.	33 ಚದರ ಮೈಲಿಗಳು, 27 1/2 ಎಕರೆಗಳು, 20 ಗುಂಟೆಗಳು.	ಬಿಸಲೆ.	ಸ್ಥಳ.—ಮೂಡಗೆರೆ ತಾಲ್ಲೂಕು ಬಳ್ಳಾಳರಾಯನ ದುರ್ಗದಿಂದ ಸೀಸ ಕಲ್ಲು ಬೆಟ್ಟದ ವರೆಗೆ ಉತ್ತರದಿಂದ ದಕ್ಷಿಣಕ್ಕೆ ವ್ಯಾಪಿಸಿ ಹಾಸನ ಡಿಸ್ಟ್ರಿಕ್ಟಿನ ಎಲ್ಲೆಯ ವರೆಗೆ ಬಂದಿರುವ ಪಶ್ಚಿಮ ಘಟ್ಟದ ಫಾರೆಸ್ಟಿನ ಸರಹದ್ದು. ಚಕ್ಕುಬಂದಿ. ಉತ್ತರಕ್ಕೆ:—ದುರ್ಗದಹಳ್ಳಿ ಗ್ರಾಮದ ಸರ್ವೆ ನಂಬರು 69ರ ದಕ್ಷಿಣ ಸರಹದ್ದು ಮೂಲೆಯಿಂದ ಒಂದು ಫರ್ಲಾಂಗು ಕೆಳಗೆ ಇರುವ ಸರ್ವೆ ನಂಬರು 66ರ ವಾಯುವ್ಯ ಮೂಲೆಯಲ್ಲಿ ದಕ್ಷಿಣ ಕನ್ನಡಾ ಜಿಲ್ಲಾ ಸರಹದ್ದು ಸೇರುವ ಸ್ಥಳದಿಂದ ಎಲ್ಲೆಯ ರೇಖೆಯು ಬಳ್ಳಾಳರಾಯನ ದುರ್ಗದ ಹಳೇ ಕೋಟೆಯ

ಉತ್ತರ ಭಾಗದ ಮೂಲೆಗೆ ದುರ್ಗದಹಳ್ಳಿ ಗ್ರಾಮದ ಸರ್ವೆ ನಂಬರು 61ರ ಒಳಗೆ ನಾಲ್ಕು ಫರಲಾಂಗಿನಷ್ಟು ದೂರ ಈಶಾನ್ಯ ಮುಖನಾಗಿ ಹೋಗುತ್ತದೆ. ಅನಂತರ ಅಲ್ಲಿಂದ ಅದೇ ನಂಬರು ಒಳಗೆ ಮುಕ್ಕಾಲು ಫರಲಾಂಗಿನಷ್ಟು ದೂರ ಪೂರ್ವ ಮುಖನಾಗಿಯೂ, ಅನಂತರ ಅದೇ ನಂಬರೊಳಗೆ ಒಂದು ಫರ್ಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿಯೂ, ಅನಂತರ ಅದೇ ನಂಬರೊಳಗೆ ಒಂಬೂವರೆ ಫರಲಾಂಗಿನಷ್ಟು ದೂರ ಸರ್ವೆ ನಂಬರು 65ರ ಆಗ್ನೇಯ ಮೂಲೆಯನ್ನು ಸಂಧಿಸುವ ವರೆಗೆ ಈಶಾನ್ಯ ಮುಖನಾಗಿಯೂ, ಅನಂತರ ಅದೇ ಗ್ರಾಮದ ಸರ್ವೆ ನಂಬರು 62ರ ನೈರುತ್ಯ ಮೂಲೆಯನ್ನು ಸಂಧಿಸುವ ವರೆಗೆ ಮೇಲ್ಕಂಡ 65ನೆ ನಂಬರೊಳಗೇನೆ ಎರಡು ಫರಲಾಂಗಿನಷ್ಟು ದೂರ ಪೂರ್ವ ಮುಖನಾಗಿಯೂ, ಅನಂತರ ಸರ್ವೆ ನಂಬರು 62ರ ಆಗ್ನೇಯ ದಕ್ಷಿಣ ಮೂಲೆಯನ್ನು ಸಂಧಿಸುವ ವರೆಗೂ ಸರ್ವೆ ನಂಬರು 61ರ ಒಳಗೆ ಎರಡು ಫರಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿಯೂ, ಅನಂತರ ಸರ್ವೆ ನಂಬರು 62ರ ಆಗ್ನೇಯ ಮೂಲೆಯನ್ನು ಸಂಧಿಸುವ ವರೆಗೆ ಸರ್ವೆ ನಂಬರು 61ರ ಒಳಗೆ ಸುಮಾರು 3 ಫರ್ಲಾಂಗು ದೂರ ಈಶಾನ್ಯ ಮುಖನಾಗಿಯೂ, ಅನಂತರ ಹಲಿಗಡಕ ಕಾಫಿ ಎಸ್ಟೇಟ್ ಸರ್ವೆ ನಂಬರು 1ರ ಪಶ್ಚಿಮ ಮೂಲೆಯನ್ನು ಸಂಧಿಸುವ ವರೆಗೂ ಒಂದು ಫರಲಾಂಗಿನಷ್ಟು ದೂರ ಸರ್ವೆ ನಂಬರು 78ರ ಆಗ್ನೇಯ ಸರಹದ್ದಿನ ಮೇಲೂ, ಸರ್ವೆ ನಂಬರು 61ರ ಒಳಗೂ ಉತ್ತರ ಮುಖನಾಗಿಯೂ ಸಹ ಹೋಗುತ್ತದೆ. ಅನಂತರ ಮುದಗುಂಡಿ ಗ್ರಾಮದ ಸರ್ವೆ ನಂಬರು 58ರ ಆಗ್ನೇಯ ದಕ್ಷಿಣ ಮೂಲೆಯನ್ನು ಸಂಧಿಸುವ ವರೆಗೂ ಆರು ಫರಲಾಂಗಿನಷ್ಟು ದೂರ ಹಲಿಗಡಕ ಕಾಫಿ ಎಸ್ಟೇಟ್ ನಂಬರು 1ರ ಒಳಗೆ ಪೂರ್ವ ಮುಖನಾಗಿ ಹೋಗುತ್ತದೆ. ಅನಂತರ ಅದೇ ಮುದಗುಂಡಿ ಗ್ರಾಮದ ಸರ್ವೆ ನಂಬರು 39ರ ದಕ್ಷಿಣ ಮೂಲೆಯನ್ನು ಸೇರುವ ವರೆಗೂ ಸರ್ವೆ ನಂಬರು 17ರ ವಾಯುವ್ಯ ಸರಹದ್ದಿನ ಮೇಲೆ ಮತ್ತು ಆ ನಂಬರು ಒಳಗೆ ಸಹ ಏಳು ಫರಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 40ರ ಆಗ್ನೇಯ ಭಾಗದ ಮೂಲೆಯನ್ನು ಸೇರುವ ವರೆಗೆ ಸುಮಾರು ಒಂದು ಫರಲಾಂಗಿನಷ್ಟು ದೂರ ಈಶಾನ್ಯ ಮುಖನಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 45ರ ನೈರುತ್ಯ ಮೂಲೆಯನ್ನು ಸೇರುವ ವರೆಗೆ ಸರ್ವೆ ನಂಬರು 44ರ ಒಳಗೆ ನಾಲ್ಕು ಫರಲಾಂಗಿನಷ್ಟು ದೂರ ಈಶಾನ್ಯ ಮುಖನಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 45ರ ಆಗ್ನೇಯ ಸರಹದ್ದಿನ ಮೇಲೆ ಈಶಾನ್ಯ ಮುಖನಾಗಿ ಹೋಗುತ್ತದೆ. ಅನಂತರ ಮೇಗೂರು ಗ್ರಾಮದ ಸರ್ವೆ ನಂಬರು 45ರ ಪಶ್ಚಿಮ ಸರಹದ್ದನ್ನು ಸೇರುವ ವರೆಗೆ ಮುದಗುಂಡಿ ಗ್ರಾಮದ ಸರ್ವೆ ನಂಬರು 44ರ ಒಳಗೆ ಐದು ಫರ್ಲಾಂಗಿನಷ್ಟು ದೂರ ಪೂರ್ವ ಮುಖನಾಗಿಯೂ, ಅನಂತರ ಮೇಗೂರು ಗ್ರಾಮದ ಸರ್ವೆ ನಂಬರು 45ರ ಒಳಗೆ ಆರು ಫರಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿಯೂ, ಅನಂತರ ಮೇಗೂರು ಗ್ರಾಮದ ಸರ್ವೆ ನಂಬರು 36ರ ಆಗ್ನೇಯ ದಕ್ಷಿಣ ಮೂಲೆಯನ್ನು ಮುಟ್ಟಿ ಮೇಗೂರು ಅಕಿಕಾಡು ಕಾಫಿ ಎಸ್ಟೇಟು ಸರ್ವೆ ನಂಬರು 2ರ ನೈರುತ್ಯ ಮೂಲೆಯನ್ನು ಸೇರುವ ವರೆಗೆ ಮೇಗೂರು ಗ್ರಾಮದ ಸರ್ವೆ ನಂಬರು 45ರ ಒಳಗೆ ಆರೂವರೆ ಫರಲಾಂಗಿನಷ್ಟು ದೂರ ಪೂರ್ವ ಮುಖನಾಗಿಯೂ ಸಹ ಹೋಗುತ್ತದೆ. ಅನಂತರ ಅಲ್ಲಿಂದ ಮೇಲ್ಕಂಡ ಕಾಫಿ ಎಸ್ಟೇಟು ಸರ್ವೆ ನಂಬರು 2ರ ದಕ್ಷಿಣ ಸರಹದ್ದಿನ ಮೇಲೆ ಪೂರ್ವ ಮುಖನಾಗಿಯೂ ಅನಂತರ ಬಾಳೂರು ಗ್ರಾಮದ ಸರ್ವೆ ನಂಬರು 220ರ ದಕ್ಷಿಣ ಸರಹದ್ದನ್ನು ಸಂಧಿಸುವ ವರೆಗೂ ಮೇಲ್ಕಂಡ ಎಸ್ಟೇಟಿನ ಸರ್ವೆ ನಂಬರು 2ರ ಆಗ್ನೇಯ ಸರಹದ್ದಿನ ಮೇಲೆ ಈಶಾನ್ಯ ಮುಖನಾಗಿಯೂ ಅನಂತರ ಬಾಳೂರು ಗ್ರಾಮದ ಸರ್ವೆ ನಂಬರು 173ರ ದಕ್ಷಿಣ ಮೂಲೆಯನ್ನು ಸಂಧಿಸುವ ವರೆಗೂ ಸರ್ವೆ ನಂಬರು 220ರ ಒಳಗೆ ಎರಡುವರೆ ಫರಲಾಂಗಿನಷ್ಟು ದೂರ ಪೂರ್ವ ಮುಖನಾಗಿಯೂ ಅನಂತರ ಒಂದು ಸಣ್ಣ ನದಿಯು ಮೂಡಗೆರೆ-ಮಂಗಳೂರು ಹೈ ರೋಡನ್ನು ದಾಟುವ ವರೆಗೆ ಮೇಲ್ಕಂಡ ಸರ್ವೆ ನಂಬರು 220ರ ಒಳಗೆ ಎರಡೂವರೆ ಫರಲಾಂಗಿನಷ್ಟು ದೂರ ಈಶಾನ್ಯ ಮುಖನಾಗಿಯೂ ಅನಂತರ ಅಲ್ಲಿಂದ ಅತ್ತಿಗೇರಿ ಗ್ರಾಮದ ಸರ್ವೆ ನಂಬರು 138ರ ದಕ್ಷಿಣಕ್ಕೆ ಅರ್ಧ ಫರಲಾಂಗಿನಲ್ಲಿ ಇರುವ ಮೇಲ್ಕಂಡ ಹೈರೋಡು ಜಾಗಾಕ್ಕೆ ಸದರಿ ಹೈರೋಡಿನ ಬಲಭಾಗದಲ್ಲಿ ಆಗ್ನೇಯ ಮುಖನಾಗಿ ಹೋಗಿ ಸೇರುತ್ತದೆ.

ಪೂರ್ವಕ್ಕೆ:—ಮೇಲೆ ಕಂಡ ಜಾಗದಿಂದ ಸದರಿ ಲೈನ್ ಮೂಡಗೆರೆ-ಮಂಗಳೂರು ಹೈರೋಡನ್ನು ದಾಟಿ ತರವೀ ಗ್ರಾಮದ ಸರ್ವೆ ನಂಬರು 47ರ ವಾಯುವ್ಯ ಮೂಲೆಯನ್ನು ಸಂಧಿಸುವ ವರೆಗೆ ಅತ್ತಿಗೇರಿ ಗ್ರಾಮದ ಸರ್ವೆ ನಂಬರು 139ರ ಒಳಗೆ ದಕ್ಷಿಣ ಮುಖನಾಗಿ ಹೋಗುತ್ತದೆ. ಅನಂತರ ತರವೀ ಗ್ರಾಮದ ಸರ್ವೆ ನಂಬರು 50ರ ವಾಯುವ್ಯ ಮೂಲೆಯನ್ನು ಸೇರುವ ವರೆಗೆ ಸರ್ವೆ ನಂಬರು 47ರ ಒಳಗೆ ಆಗ್ನೇಯ ಮುಖನಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 50ರ ಪಶ್ಚಿಮ ಸರಹದ್ದಿನ ಮೇಲೆ ದಕ್ಷಿಣ ಮುಖನಾಗಿಯೂ ಅನಂತರ ಸದರಿ ನಂಬರು 50ರ ನೈರುತ್ಯ ಸರಹದ್ದಿನ ಮೇಲೆ ಆಗ್ನೇಯ ಮುಖನಾಗಿಯೂ, ಅನಂತರ ಕೋಗಿಲೆ ಗ್ರಾಮದ ಸರ್ವೆ ನಂಬರು 5ರ ಪಶ್ಚಿಮ ಸರಹದ್ದಿನ ಮೇಲೆ ಆಗ್ನೇಯ ಮುಖನಾಗಿಯೂ, ಅನಂತರ ಸರ್ವೆ ನಂಬರು 99ರ ವಾಯುವ್ಯ ಮೂಲೆಯನ್ನು ಸೇರುವ ವರೆಗೆ ಮೇಲೆ ಕಂಡ ಸರ್ವೆ ನಂಬರು 5ರ ಪಶ್ಚಿಮ ಸರಹದ್ದಿನ ಮೇಲೆ ಆಗ್ನೇಯ ಮುಖನಾಗಿಯೂ, ಅನಂತರ ಸರ್ವೆ ನಂಬರು 99ರ ನೈರುತ್ಯ ಸರಹದ್ದಿನ ಮೇಲೆ ಆಗ್ನೇಯ ಮುಖನಾಗಿಯೂ, ಅನಂತರ ಸರ್ವೆ ನಂಬರು 5ರ ನೈರುತ್ಯ ಮೂಲೆಯನ್ನು ಸೇರುವ ವರೆಗೂ ಸರ್ವೆ ನಂಬರು 98ರ ಒಳಗೆ ಪೂರ್ವ ಮುಖನಾಗಿಯೂ, ಅನಂತರ ಸರ್ವೆ ನಂಬರು 104ರ ದಕ್ಷಿಣ ಸರಹದ್ದನ್ನು ಮುಟ್ಟಿ ಸರ್ವೆ ನಂಬರು 100ರ ಒಳಗೆ ಐದು ಫರ್ಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿಯೂ, ಅನಂತರ ಮೇಲೆ ಕಂಡ ಸರ್ವೆ ನಂಬರು 100ರ ಒಳಗೂ ಗುತ್ತಿ ಗ್ರಾಮದ ಸರ್ವೆ ನಂಬರು 15ರ ಒಳಗೂ 8 ಫರಲಾಂಗಿನಷ್ಟು ದೂರ ನೈರುತ್ಯ ಮುಖನಾಗಿಯೂ, ಅನಂತರ ಗುತ್ತಿ ಗ್ರಾಮದ ಸರ್ವೆ ನಂಬರು 236—200—199ರ ಒಳಗೆ ಹದಿನೈದು ಫರಲಾಂಗಿನಷ್ಟು ದೂರ ಅದೇ ಗ್ರಾಮದ ಸರ್ವೆ ನಂಬರು 195ರ ನೈರುತ್ಯ ಸರಹದ್ದನ್ನು ಸೇರುವ ವರೆಗೂ ದಕ್ಷಿಣ ಮುಖನಾಗಿ ಹೋಗುತ್ತದೆ. ಅನಂತರ ಮೂದರಹಳ್ಳಿ ಗ್ರಾಮದ ಸರ್ವೆ ನಂಬರು 25ರ ಉತ್ತರ ಸರಹದ್ದನ್ನು ಮುಟ್ಟುವ ವರೆಗೂ ಗುತ್ತಿ ಗ್ರಾಮದ ಸರ್ವೆ ನಂಬರು 199ರ ಒಳಗೆ ನಾಲ್ಕುವರೆ ಫರಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿಯೂ, ಅನಂತರ ಮೂದರಹಳ್ಳಿ ಗ್ರಾಮದ ಸರ್ವೆ ನಂಬರು 25ರ ಉತ್ತರ ಸರಹದ್ದಿನ ಮೇಲೆ ಎರಡು ಫರಲಾಂಗಿನಷ್ಟು ದೂರ ನೈರುತ್ಯ ಮುಖನಾಗಿಯೂ, ಅನಂತರ ಮೇಲೆ ಕಂಡ ಸರ್ವೆ ನಂಬರು 25ರ ಒಳಗೆ ಸರ್ವೆ ನಂಬರು 1 ಮತ್ತು 2ರ ಪಶ್ಚಿಮ ಸರಹದ್ದನ್ನು ಮುಟ್ಟಿ ಒಂದೂವರೆ ಫರಲಾಂಗಿನಷ್ಟು ದೂರ ದಕ್ಷಿಣ ಮುಖನಾಗಿಯೂ, ಅನಂತರ ಊರುಬಗೆ ಗ್ರಾಮದ ಸರ್ವೆ ನಂಬರು 185ರ ಒಳಗೆ

ಐದು ಫರಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿಯೂ, ಊರುಬಗೆ ಗ್ರಾಮದ ಸರ್ವೆ ನಂಬರು 193ರ ವಾಯುವ್ಯ ಮೂಲೆಯನ್ನು ಸೇರುವ ವರೆಗೂ ಸರ್ವೆ ನಂಬರು 185ರ ಒಳಗೆ ಮೂರು ಫರಲಾಂಗಿನಷ್ಟು ದೂರ ನೈರುತ್ಯ ಮುಖನಾಗಿಯೂ, ಅನಂತರ ಸರ್ವೆ ನಂಬರು 360ರ ಪಶ್ಚಿಮ ಮೂಲೆಯನ್ನು ಸೇರುವ ವರೆಗೆ ಸರ್ವೆ ನಂಬರು 193ರ ಪಶ್ಚಿಮ ಸರಹದ್ದಿನಮೇಲೆ ಆಗ್ನೇಯ ಮುಖನಾಗಿಯೂ, ಅನಂತರ ಸರ್ವೆ ನಂಬರು 330ರ ವಾಯುವ್ಯ ಮೂಲೆಯನ್ನು ಸೇರುವ ವರೆಗೆ ಸರ್ವೆ ನಂಬರು 191ರ ಒಳಗೆ ನೈರುತ್ಯ ಮುಖನಾಗಿಯೂ, ಅನಂತರ ಸರ್ವೆ ನಂಬರು 330ರ ಪಶ್ಚಿಮ ಸರಹದ್ದಿನಮೇಲೆ ಆಗ್ನೇಯ ಮುಖನಾಗಿಯೂ, ಅನಂತರ ಸರ್ವೆ ನಂಬರು 228ರ ನೈರುತ್ಯ ಮೂಲೆಯನ್ನು ಮುಟ್ಟುವ ವರೆಗೂ ಅದೇ ನಂಬರು ಪಶ್ಚಿಮ ಸರಹದ್ದಿನಮೇಲೆ ದಕ್ಷಿಣ ಮುಖನಾಗಿಯೂ, ಅನಂತರ ಸರ್ವೆ ನಂಬರು 228 ಮತ್ತು 227ರ ದಕ್ಷಿಣ ಸರಹದ್ದುಗಳಮೇಲೆ ನಾಲ್ಕು ಫರಲಾಂಗಿನಷ್ಟು ದೂರ ಪೂರ್ವ ಮುಖನಾಗಿಯೂ, ಅನಂತರ ಬೈರಾಪುರ ಗ್ರಾಮದ ಸರ್ವೆ ನಂಬರು 99ರ ವಾಯುವ್ಯ ಮೂಲೆಯನ್ನು ಮುಟ್ಟುವ ವರೆಗೂ ಅದೇ ಗ್ರಾಮದ ಸರ್ವೆ ನಂಬರು 41ರ ಒಳಗೆ ನೈರುತ್ಯ ಮುಖನಾಗಿಯೂ, ಅನಂತರ ಸರ್ವೆ ನಂಬರು 99 ಮತ್ತು 100ರ ಪಶ್ಚಿಮ ಸರಹದ್ದಿನಮೇಲೆ ದಕ್ಷಿಣ ಮುಖನಾಗಿಯೂ, ಅನಂತರ ಸರ್ವೆ ನಂಬರು 155ರ ವಾಯುವ್ಯ ಮೂಲೆಯನ್ನು ಸೇರುವ ವರೆಗೆ ಅದೇ ಮುಖನಾಗಿ ಸರ್ವೆ ನಂಬರು 99ರ ಒಳಗೂ ಅನಂತರ ಸರ್ವೆ ನಂಬರು 155ರ ಪಶ್ಚಿಮ ಸರಹದ್ದಿನ ಮೇಲೂ ಅನಂತರ ಸರ್ವೆ ನಂಬರು 91ರ ಒಳಗೆ ಒಂದೂವರೆ ಫರಲಾಂಗಿನಷ್ಟು ದೂರ ದಕ್ಷಿಣ ಮುಖನಾಗಿಯೂ, ಅನಂತರ ಸರ್ವೆ ನಂಬರು 96ರ ಒಳಗೆ ಎರಡು ಫರಲಾಂಗಿನಷ್ಟು ದೂರ ಆಗ್ನೇಯ ಮುಖನಾಗಿಯೂ, ಅನಂತರ ಸರ್ವೆ ನಂಬರು 84ರ ವಾಯುವ್ಯ ಮೂಲೆಯನ್ನು ಮುಟ್ಟುವ ವರೆಗೂ ಸರ್ವೆ ನಂಬರು 96ರ ಒಳಗೆ ನಾಲ್ಕುವರೆ ಫರಲಾಂಗಿನಷ್ಟು ದೂರ ದಕ್ಷಿಣ ಮುಖನಾಗಿಯೂ, ಅನಂತರ ಸರ್ವೆ ನಂಬರು 144ರ ಪಶ್ಚಿಮ ಸರಹದ್ದಿನಮೇಲೆ ದಕ್ಷಿಣ ಮುಖನಾಗಿಯೂ, ಅನಂತರ ದಕ್ಷಿಣ ಕನ್ನಡ ಜಿಲ್ಲಾ ಸರಹದ್ದನ್ನು ಸೇರುವ ವರೆಗೆ ಸರ್ವೆ ನಂಬರು 87ರ ಒಳಗೆ ಆರುವರೆ ಫರಲಾಂಗಿನಷ್ಟು ದೂರ ನೈರುತ್ಯ ಮುಖನಾಗಿಯೂ ಸಹ ಹೋಗುತ್ತದೆ.

ದಕ್ಷಿಣಕ್ಕೆ :—ಮೇಲ್ಕಂಡ ಜಾಗದಿಂದ ಸದರಿ ರೇಖೆಯು ದಕ್ಷಿಣ ಕನ್ನಡ ಜಿಲ್ಲ ಸರಹದ್ದಿನಲ್ಲಿ ಊರಬಗೆ ಮತ್ತು ಬೈರಾಪುರ ಗ್ರಾಮಗಳ ಎಲ್ಲೆಯು ಸೇರುವ ಜಾಗದ ವರೆಗೆ ಪಶ್ಚಿಮ ಮುಖನಾಗಿ ಹೋಗುತ್ತದೆ.

ಪಶ್ಚಿಮಕ್ಕೆ :—ಅಲ್ಲಿಂದ ಸದರಿ ರೇಖೆಯು ದಕ್ಷಿಣ ಕನ್ನಡ ಜಿಲ್ಲ ಸರಹದ್ದನ್ನನುಸರಿಸಿ ಹೊರಟು ಸ್ಥಳವನ್ನು ಸೇರುತ್ತದೆ.

2. ಮೇಲ್ಕಂಡ ಪ್ರಕರಣದ (೮) ಕಲಮನ್ನನುಸರಿಸಿ, ಮೈಸೂರು ಕೋ ಆಪರೇಟಿವ್ ಸೊಸೈಟೀಸ್ ಯಾ ಅನ್ಯೋನ್ಯ ಸಹಾಯ ಸಂಘಗಳ ರಿಜಿಸ್ಟ್ರಾರ್ ಮಿ॥ ಎಂ. ಶಾಮರಾವ್, ಎಂ. ಎ., ಯವರನ್ನು, ಅಂಥಾ ಎಲ್ಲೆಗಳಲ್ಲಿ ಅಡಗಿರುವ ಜಮೀನಿನಲ್ಲಿ ಅಥವಾ ಅದರ ಮೇಲೆ ಅಥವಾ ಅಂಥಾ ಜಂಗಲಿ ಜಮೀನಿನ ಉತ್ಪತ್ತಿಗೆ ಹಕ್ಕಿರುವುದಾಗಿ ದಾವೆ ಹೇಳಿಕೊಳ್ಳುವ ಅಥವಾ ಹಕ್ಕಿದೆಯೆಂದು ಹೇಳಲ್ಪಡುವ ಯಾವನಾದರೂ ಮನುಷ್ಯನ ಹಕ್ಕುಗಳ ಇರುವಿಕೆಯನ್ನು ಅವುಗಳ ಸ್ವಭಾವ ಮತ್ತು ಪರಿಮಾಣವನ್ನು ಕುರಿತು ವಿಚಾರಣೆ ಮಾಡಿ ನಿಶ್ಚಯಿಸುವುದಲ್ಲದೆ ಅವುಗಳ ವಿಷಯದಲ್ಲಿ ಮೇಲ್ಕಂಡ ರೆಗ್ಯುಲೇಷನಿನ 2ನೆ ಅಧ್ಯಾಯದಲ್ಲಿ ವಿಧಿಸಿರುವಂತೆ ನಡೆಸುವುದಕ್ಕೆ, ಫಾರೆಸ್ಟು ಸೆಟ್ಲ್‌ಮೆಂಟ್ ಆಫಿಸರಾಗಿ ಮೊಕರರ್ಮಾಡಲೂ, ಕಡೂರು ಡಿಸ್ಟ್ರಿಕ್ಟಿನ ತತ್ಕಾಲದ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರನ್ನು ಈ ವಿಚಾರಣೆಯಲ್ಲಿ ಫಾರೆಸ್ಟು ಸೆಟ್ಲ್‌ಮೆಂಟ್ ಆಫಿಸರಿಗೆ ಗವರ್ನಮೆಂಟ್ ತರಫ ಸಹಾಯ ಮಾಡುವುದಕ್ಕೆ ಹಾಜರಾಗುವುದಕ್ಕಾಗಿ ಮೊಕರರ್ಮಾಡಲೂ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ.

3. ಮೇಲ್ಕಂಡ ರೆಗ್ಯುಲೇಷನಿನ 15ನೆ ಪ್ರಕರಣದಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರವನ್ನನುಸರಿಸಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಕಡೂರು ಡಿಸ್ಟ್ರಿಕ್ಟಿನ ತತ್ಕಾಲದ ಡೆಪ್ಯುಟಿ ಕಮಿಷನರನ್ನು ಫಾರೆಸ್ಟು ಸೆಟ್ಲ್‌ಮೆಂಟು ಆಫಿಸರು ಸದರಿ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಪ್ರಕರಣವನ್ನು ಅನುಸರಿಸಿ ಕೊಡುವ ಹುಕುಮುಗಳ ಮೇಲೆ ಬರುವ ಅಪೀಲುಗಳನ್ನು ತನಿಖೆ ಮಾಡುವ ರೆವಿನ್ಯೂ ಆಫಿಸರಾಗಿ ಮೊಕರರ್ಮಾಡುವುದಕ್ಕೂ ಸಹ ಅಪ್ಪಣೆಯನ್ನು ದಯಪಾಲಿಸಿರುತ್ತಾರೆ.

ಹುಕುಂ ಖವೋಜೇಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರಿಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್‌ನಾಮೆ.

ತಾರೀಖು 6ನೆ ಮಾರ್ಚಿ 1907.

ನಂ. 205—1670, ಮೈಸೂರು ಡಿವಿಜನಿಗೆ ಸೇರಿದ ಅಸಿಸ್ಟೆಂಟು ಇಂಜನಿಯರ್ ಮ॥ ಬಿ. ಸಿ. ಶ್ರೀನಿವಾಸ ಅಯ್ಯಂಗಾರ್, ಬಿ. ಎ., ಬಿ. ಸಿ. ಇ., ಯವರಿಗೆ 1907ನೆ ಜನವರಿ 23ನೆ ತಾರೀಖಿನಿಂದ ಒಂದು ತಿಂಗಳು 6 ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ಹುಕುಂ ಖವೋಜೇಬ್,
ಬ್ಲ್ಯಾಂಡ್‌ಫೋರ್ಡ್ಸ್, ಕ್ರೈಟ್, ಆರ್. ಇ.,
ಪಬ್ಲಿಕ್ ವರ್ಕ್ಸ್ ಇಲಾಖಾ, ಮೈಸೂರು ಗವರ್ನಮೆಂಟ್, ಅಂಡರ್ ಸೆಕ್ರಿಟರಿ.

ಮೈಸೂರ ಗೆಜೆಟ್.

ನಂ. 42.] ಸರ್ಕಾರದಿಂದ ಫಾಯಿಷ್ ಆದ್ದು. [ನಂ. 12.

ಬೆಂಗಳೂರು, ಗುರುವಾರ, ಮಾರ್ಚಿ ತಾ|| 21, ಸನ 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮಿಷನರವರು, ಕಂಟ್ರೋಲರವರು, ಪಬ್ಲಿಕವರಕ್ಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜಿಯರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ ಜಡ್ಜಿಯರು, ಪೊಲೀಸ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 28ನೆ ಫೆಬ್ರುವರಿ 1907.

ಸಂ. 7383—ಸ್ಯಾನಿಟರಿ 66–06—32, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:— ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21–96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವುದು.

ಸ್ಥಳ.		ತಾಲ್ಲೂಕು.
ಗೊಲ್ಲರಹೊಸಹಳ್ಳಿ	... ...	ಚೆನ್ನರಾಯಪಟ್ಣ.

ತಾರೀಖು 5ನೆ ಮಾರ್ಚಿ 1907.

ನಂ. 7587—ಸ್ಯಾನಿಟರಿ 156-06—12, ಕೋಲಾರ ಡಿಸ್ಟ್ರಿಕ್ಟ್ ಬೌರಿಂಗ್‌ಪೇಟೆ ತಾಲ್ಲೂಕಿನ ಬೌರಿಂಗಪೇಟೆಗೆ ಶ್ರೀ ಕೋದಂಡ ರಾಮಸ್ವಾಮಿಯವರ ರಥೋತ್ಸವ ಮತ್ತು ದನಗಳ ಸಂತೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯುವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು, 1907ನೆಯ ವರ್ಷದ ಮೇ 25ನೆ ತಾರೀಖಿನಿಂದ 1907ನೇ ಜೂನ್ 8ನೆ ತಾರೀಖಿನವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವ ಮತ್ತು ದನಗಳ ಸಂತೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 5ನೆ ಮಾರ್ಚಿ 1907.

ನಂ. 7589—ಸ್ಯಾನಿಟರಿ 170-06-10, ಮೈಸೂರು ಡಿಸ್ಟ್ರಿಕ್ಟ್ ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕಿನ ಮೇಲ್‌ಕೋಟೆಗೆ ವೈರಮುಡಿ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮಾರ್ಚಿ 20ನೆ ತಾರೀಖಿನಿಂದ 30ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 5ನೆ ಮಾರ್ಚಿ 1907.

ನಂ. 7594—ಸ್ಯಾನಿಟರಿ 15-06-8, ಸಮಸ್ತ ಜನರ ತಿಳಿವಳಿಕೆ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:— ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಿಸಲ್ಪಟ್ಟಿದ್ದ ಮೈಸೂರು ಡಿಸ್ಟ್ರಿಕ್ಟಿನ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರೆಗೆ ಜಾಡ್ಯ ರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ	ತಾಲ್ಲೂಕು.
ಕೊಟ್ಟಗಾಲ	ಟಿ. ನರಸೀಪುರ.
ದೊಡ್ಡಪುರ	ಡಿಟೋ
ದೊಡ್ಡ ಬಾಗಿಲು	ಡಿಟೋ
ದಾಸನಕೊಪ್ಪಲು	ಡಿಟೋ
ಹೊಸಹಳ್ಳಿ	ಡಿಟೋ
ಇಂಡವಾಳು	ಡಿಟೋ
ದೊಡ್ಡಬ್ಯಾಡರಹಳ್ಳಿ	ಶ್ರೀರಂಗಪಟ್ಣ
ಹುಲ್ಲಿಪುರ	ಚಾಮರಾಜನಗರ.
ಗೋಪಾಲಪುರ	ಗುಂಡ್ಲುಪೇಟೆ.
ಹುಲ್ಲಮಾದನಹಳ್ಳಿ	ಡಿಟೋ
ಇರಸವಾಡಿ	ಡಿಟೋ
ಚಿಕ್ಕಟ್ಟಿ	ಡಿಟೋ
ಹರದಾಲ	ಡಿಟೋ
ಹರದನಹಳ್ಳಿ	ಡಿಟೋ
ಕಳ್ಳಿಕೊಪ್ಪಲು	ಡಿಟೋ
ತಿಂಬಾಯಿನಗೌಡನ ಕೊಪ್ಪಲು	ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು.
ಲಕ್ಷ್ಮೀದೇವನಹಳ್ಳಿ	ಎಡತೊರೆ.
ಅಂಬಲರೆ	ಹುಣಸೂರು
ಮಬ್ಬಳ್ಳಿ	ನಂಜನಗೂಡು.
ಹನಿಯಂಬಳ್ಳಿ	ಡಿಟೋ
ಹೊಳೆಪುರ	ಡಿಟೋ

ತಾರೀಖು 7ನೆ ಮಾರ್ಚಿ 1907.

ನಂ. 7845—ಸ್ಯಾನಿಟರಿ 166-06-4, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ದಾಸಕೊಪ್ಪ	ಸಾಗರ.
ಹೊಸೂರು ಕ್ಯಾಂಪು	ಶಿಕಾರಿಪುರ ಸಬ್ ತಾಲ್ಲೂಕು.

ತಾರೀಖು 12ನೆ ಮಾರ್ಚಿ 1907.

ನಂ. 8161—ಸ್ಯಾನಿಟರಿ 99-06—6, ಹಾಸನ ಡಿಸ್ಟ್ರಿಕ್ಟು ಬೇಲೂರು ತಾಲ್ಲೂಕಿನ ಬೇಲೂರಿಗೆ ಶ್ರೀ ಚನ್ನಕೇಶವ ಸ್ವಾಮಿಯವರ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮಾರ್ಚಿ 20ನೆ ತಾರೀಖಿನಿಂದ 1907ನೆಯ ವರ್ಷದ ಏಪ್ರೆಲ್ 5ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 12ನೆ ಮಾರ್ಚಿ 1907.

ನಂ. 8202—ಸ್ಯಾನಿಟರಿ 21-06—92, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು. ಇಂದ.	ತಾರೀಖು. ಗೆ.	ಅಧಿಕಾರ.
ಶ್ರೀ ರಾಜಗೋಪಾಲಸ್ವಾಮಿ ಪಂಗುಣಿ ಉತ್ಸವ.	ಮನ್ನಾರಗುಡಿ.	ಮನ್ನಾರಗುಡಿ.	ತಂಜಾವೂರು.	1—3—07	20—3—07	1ನೆ ಅಸಿಸ್ಟೆಂಟ್ ರೆಸಿಡೆಂಟರವರ 1907ನೆ ಇಸವಿ ಮಾರ್ಚಿ 6ನೆ ಮರ್ಸ್ತೂ 181ನೆ ನಂಬರ್ ಮೆಮೊ ಪ್ರಕಾರ.
				ಉಭಯ ದಿನಗಳೂ ಸೇರಿ.		
ಶ್ರೀ ದೇವರಾಜಸ್ವಾಮಿಯವರ ನಡಭಾವಿ ಉತ್ಸವ.	ಅಯ್ಯಂಗಾರು ಕೊಳ.	ಕಂಜೀವರಂ.	ಕಂಜೀವರಂ.	23—4—07	28—4—07	ಮಾರ್ಚಿ 8ನೆ ಮರ್ಸ್ತೂಂ 205-P ನಂಬರು ಮೆಮೊ ಪ್ರಕಾರ.
				ಉಭಯ ದಿನಗಳೂ ಸೇರಿ.		
*ಪಂಗುಣಿ ಉತ್ತರಹಬ್ಬ ಮತ್ತು ದಿನಗಳ ಸಂತೆ.	ಮೈಲಂ ಮತ್ತು ಅದರ ಸುತ್ತ ಮುತ್ತಲಿರುವ ಗ್ರಾಮಗಳು.	ತಿಂಡಿವನಂ.	ದಕ್ಷಿಣ ಆರ್ಕಾಡು.	14—3—07	2—4—07	ಡಿಟೋ 207-P ನಂಬರು ಮೆಮೊ ಪ್ರಕಾರ.
				ಉಭಯ ದಿನಗಳೂ ಸೇರಿ.		
†ಉಚ್ಚಂಗಮ್ಮನ ಹಬ್ಬ.	ಉಚ್ಚಂಗಿದುರ್ಗ.	ಹರಪನಹಳ್ಳಿ.	ಬಳ್ಳಾರಿ.	5—3—07	20—3—07	ಡಿಟೋ 6ನೆ ಮರ್ಸ್ತೂಂ 183-P ಮೆಮೊ ಪ್ರಕಾರ.

ಷರಾಗಳು.

* ಮೈಲಂನಲ್ಲಿಯೂ ಮತ್ತು ಅದಕ್ಕೆ 15 ಮೈಲಿ ಫಾಸಲೆಯಲ್ಲಿರುವ ಯಾವ ಗ್ರಾಮಗಳಲ್ಲಿಯೂ ದಿನಗಳ ಸಂತೆಯನ್ನು ನಡೆಸುವುದನ್ನು ನಿಷೇಧಿಸಿದೆ.

† ಈ ಉತ್ಸವಕ್ಕೆ ಯಾತ್ರೆ ಹೋಗುವದನ್ನು ನಿಷೇಧಿಸಿದೆ.

ತಾರೀಖು 16ನೆ ಮಾರ್ಚಿ 1907.

ನಂ. 8297—ಸ್ಯಾನಿಟೆರಿ 66-06—35, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವುದು.

ಸ್ಥಳ.	ತಾಲ್ಲೂಕು.
ಕಡವಿನಕೋಟೆ ...	ಹೊಳೆನರಸೀಪುರ.

ತಾರೀಖು 16ನೆ ಮಾರ್ಚಿ 1907.

ನಂ. 8299—ಸ್ಯಾನಿಟೆರಿ 15-06—10, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಕುಕ್ಕರಹಳ್ಳಿ ...	ಮೈಸೂರು.
ಕಾವನಕೆರೆಹುಂಡಿ ...	ಡಿಟೋ.
ನಂಜನಗೂಡು ...	ನಂಜನಗೂಡು.

ತಾರೀಖು 16ನೆ ಮಾರ್ಚಿ 1907.

ನಂ. 8301—ಸ್ಯಾ. 170-06-13, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಒಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ವೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

ಜಾತ್ರೆಯ ಹೆಸರುಗಳು	ನಡೆಯುವ ಸ್ಥಳ	ತಾಲ್ಲೂಕು	ತಾರೀಖು	
			ಇಂದ	ವರೆಗೆ
1. ಶ್ರೀ ಲಕ್ಷ್ಮೀಕಾಂತಸ್ವಾಮಿ ರಥೋತ್ಸವ.	ಕಳಲೆ ...	ನಂಜನಗೂಡು ...	1907ನೆ ಏಪ್ರೆಲ್ 1ನೆ ತಾರೀಖು.	
2. ಸಂಗಮ ಜಾತ್ರೆ	ತಿಪ್ಪೂರು ...	ಎಡತೊರೆ ...	15—5—07	18—5—07
3. ವರಸಿಷ್ಠಸ್ವಾಮಿ ರಥೋತ್ಸವ.	ಸಾಲಗ್ರಾಮ ...	ಡಿಟೋ ...	15—5—07	18—5—07

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 16ನೆ ಮಾರ್ಚಿ 1907.

ನಂ. 8306—ಸ್ಯಾನಿಟೆರಿ 139-06—12, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗುತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಕನ್ನಳ್ಳಿ ...	ಬೆಂಗಳೂರು.
ಕೊಡಿಗಳ್ಳಿ ...	ಡಿಟೋ
ಚಿಕ್ಕ ಬಾಣಾವಾರ ...	ಡಿಟೋ
ಜಕ್ಕಳ್ಳಿ ...	ಡಿಟೋ
ದಿವಾನರಪಾಳ್ಯ ...	ಡಿಟೋ
ಆನೆಗೊಂಡಪಳ್ಳಿ ...	ಆನೇಕಲ್ಲು.
ಅಲ್ಲಳ್ಳಿ ...	ಡಿಟೋ
ಅತ್ತಿಗಾರನ ಕಲ್ಲಹಳ್ಳಿ ...	ಡಿಟೋ
ವೇಡಹಳ್ಳಿ ...	ಡಿಟೋ
ಬಲ್ಲೂರು ...	ಡಿಟೋ
ಹಂಡೇನಹಳ್ಳಿ ...	ಹೊಸಕೋಟೆ.

79

ತಾರೀಖು 18ನೆ ಮಾರ್ಚಿ 1907.

ನಂ. 8481—ಸ್ಯಾ. 170-06-16, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಕೆಳಕಂಡ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು ಇಂದ	ತಾರೀಖು ಗೆ
1. ಚಿಕ್ಕದೇವರ ರಥೋತ್ಸವ ...	ಚಿಕ್ಕತ್ಯಾಸಿನಕೆರೆ ...	ಮಳವಳ್ಳಿ ...	29—3—07	31—3—07
2. ಶ್ರೀ ಲಕ್ಷ್ಮೀನರಸಿಂಹಸ್ವಾಮಿ ರಥೋತ್ಸವ.	ಮೊರೆಹಳ್ಳಿ ...	ಡಿಟೋ. ...	30—5—07	1—6—07

1897ನೆ ವರ್ಷದ 2ನೆ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಮಾರ್ಚಿ 1907.

ನಂ. 8623—ಸ್ಯಾನಿಟರಿ 150-06—8, ಬೆಂಗಳೂರು ಡಿಸ್ಟ್ರಿಕ್ಟು ಆನೇಕಲ್ಲು ತಾಲ್ಲೂಕಿನ ಮಾಯಸಂದ್ರ ಗ್ರಾಮಕ್ಕೆ ಮುತ್ಯಾಲಮ್ಮನವರ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮಾರ್ಚಿ 30ನೆ ತಾರೀಖಿನಿಂದ 1907ನೆ ಇಸವಿ ಏಪ್ರೆಲ್ 2ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಮಾರ್ಚಿ 1907.

ನಂ. 8625—ಸ್ಯಾನಿಟರಿ 156-06—14, ಕೋಲಾರ ಡಿಸ್ಟ್ರಿಕ್ಟು ಸಿಡ್ಲಘಟ್ಟ ತಾಲ್ಲೂಕಿನ ಮೇಲೂರು ಗ್ರಾಮಕ್ಕೆ ಶ್ರೀ ಗಂಗಮ್ಮನವರ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮಾರ್ಚಿ 27ನೆ ತಾರೀಖಿನಿಂದ 1907ನೆ ಇಸವಿ ಏಪ್ರೆಲ್ 6ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಮಾರ್ಚಿ 1907.

ನಂ. 8627—ಸ್ಯಾನಿಟರಿ 129-06—8, ಶಿವಮೊಗ್ಗ ಡಿಸ್ಟ್ರಿಕ್ಟು ನಗರ ತಾಲ್ಲೂಕಿನ ರಾಮಚಂದ್ರಪುರಕ್ಕೆ ಶ್ರೀ ರಾಮದೇವರ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಏಪ್ರೆಲ್ 20ನೆ ತಾರೀಖಿನಿಂದ 1907ನೆ ಏಪ್ರೆಲ್ 24ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಮಾರ್ಚಿ 1907.

ನಂ. 8629—ಸ್ಯಾನಿಟರಿ. 170-06—18, ಮೈಸೂರು ಡಿಸ್ಟ್ರಿಕ್ಟ್ಸು ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕಿನ ಮೇಲ್ಕೋಟೆಗೆ ಶ್ರೀ ರಾಮಾನುಜಾಚಾರ್ಯರವರ ತಿರುನಕ್ಷತ್ರ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಏಪ್ರಲ್ 9ನೆ ತಾರೀಖಿನಿಂದ ಅದೇ ತಿಂಗಳು 20ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ತಿರುನಕ್ಷತ್ರಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಮಾರ್ಚಿ 1907.

ನಂ. 8631—ಸ್ಯಾನಿಟರಿ 66-06—38, ಸಮಸ್ತ ಜನರ ತಿಳಿವಳಿಕೆಯು ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :— ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96, ಈ ನಂಬರುಗಳ ಇಸ್ತಿಹಾರ್‌ನಾಮೆಗಳ ಕೂಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವುದು.

ಸ್ಥಳ.	ತಾಲ್ಲೂಕು.
ಚಟ್ನಹಳ್ಳಿ	ಆಲೂರು ಸಬ್ ತಾಲ್ಲೂಕು.

ತಾರೀಖು 7ನೆ ಮಾರ್ಚಿ 1907.

ನಂ. 7847—ಮೆಡಿಕಲ್ 8-06—13, ಆಸ್ಪತ್ರೆ ಅಸಿಸ್ಟೆಂಟ್ ಎಂ. ಶ್ರೀನಿವಾಸರಾಯರು 2ನೆ ತರಗತಿಯಲ್ಲಿ 7 ವರ್ಷ ಕಾಲ ಪೂರ್ತಿಯಾಗಿ ಕೆಲಸ ಮಾಡಿ ಯೋಗ್ಯತಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾರೆಯಾಗಿ, ಅವರಿಗೆ 1907ನೆ ಇಸವಿ ಜನವರಿ 2ನೆ ತಾರೀಖಿನಿಂದ ಮೊದಲನ ತರಗತಿಗೆ ಬಡತಿ ಕೊಟ್ಟಿದೆ.

ತಾರೀಖು 13ನೆ ಮಾರ್ಚಿ 1907.

ನಂ. ಜಿ. 5601—ಜಿ. ಎಂ. 88-06—18, ಮೈಸೂರು ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಗಳಾದ ಮಿ॥ ಇ. ಮೆಕಾನಿಕಿ ಐ. ಸಿ. ಎಸ್., ರವರಿಗೆ, 1906ನೆ ಇಸವಿ ಸೆಪ್ಟಂಬರ್ 14ನೆ ತಾರೀಖಿನ ಜಿ. 1881—ಜಿ. ಎಂ. 88-06—5ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ಕೊಟ್ಟ ಮೂರು ತಿಂಗಳ ಪ್ರಿವಿಲೇಜು ರಜಾವಿನೊಂದಿಗೆ ಮೂರು ತಿಂಗಳ ಸ್ಪೆಷಲ್ ಯಾ ವಿಶೇಷತರಹದ ರಜಾವನ್ನು ಕೊಟ್ಟಿರುತ್ತದೆ.

ತಾರೀಖು 14ನೆ ಮಾರ್ಚಿ 1907.

ನಂ. ಜಿ. 5639—ಜಿ. ಎಂ. 232-06—9, ಇದಕ್ಕೆ ಲಗತ್ತಿರುವ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಮತ್ತು 371 ಎಕರೆಗಳು 16 ಗುಂಟೆಗಳ ಅಂದಾಜು ವಿಸ್ತೀರ್ಣವುಳ್ಳ ಜಮೀನುಗಳು ಗತಿಸಿದ ಮಿ॥ ಜೆ. ಎನ್. ಟಾಟಾರವರ ಹೆಸರಿನಿಂದ ಕೂಡಿರುವ "ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್" ಯಾ ಇಂಡಿಯಾ ದೇಶದ ಶಾಸ್ತ್ರಾಲಯವನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಬೇಕಾಗಿರುವದರಿಂದ;

ಮೈಸೂರು ಶ್ರೀಮನ್ಮಹಾರಾಜರವರು, ಸದರಿ ಜಮೀನುಗಳ ಸಂಪೂರ್ಣವಾದ ಆಡಳಿತವನ್ನೂ ಅವುಗಳ ಮೇಲಿನ ಸಂಪೂರ್ಣವಾದ ಸ್ವಾಮ್ಯಾಧಿಕಾರವನ್ನೂ, ಸದರಿ ಜಮೀನುಗಳು ಮೇಲ್ಕಂಡ ಉದ್ದೇಶಕ್ಕಾಗಿ ಉಪಯೋಗಿಸಲ್ಪಡುವ ಪರ್ಯಂತ, ಸಭಾಸಮೇತರಾದ ಇಂಡಿಯಾ ಗವರ್ನರ್ ಜನರಲ್‌ರವರಿಗೆ 1907ನೆ ಇಸವಿಯ ಮಾರ್ಚಿ 14ನೆ ತಾರೀಖಿನ ಲಾಗಾಯಿತು ಒಪ್ಪಿಸಲು ಹುಕುಂ ದಯಪಾಲಿಸಿರುತ್ತಾರೆ.

ವಿ. ಪಿ. ಮಾಧವರಾವ್,
ಮೈಸೂರು ಸೀಮೆಯ ದೀವಾನರು.

ಇಂಡಿಯಾ ದೇಶದ ಶಾಸ್ತ್ರಾಲಯಕ್ಕೋಸ್ಕರ ಕೊಡಲ್ಪಟ್ಟ ಜಮೀನುಗಳ ಚತುರ್ಗಡಿಗಳ ಪಟ್ಟಿ ಯಾ ಷೆಡ್ಯೂಲ್.

ಕೆಳಗೆ ವಿವರಿಸಿರುವ ಚತುರ್ಗಡಿಗಳಲ್ಲಿ ಅಡಗಿರುವ ಮತ್ತು ಬೆಂಗಳೂರು ಸ್ಯಾಂಕಿ ಕೆರೆಗೆ ನೀರು ಉರುಳಿ ಬರುವ ಪ್ರದೇಶದ ಭಾಗವಾದ ಜಮೀನುಗಳು :—

ಪೂರ್ವಕ್ಕೆ ಮೇಲೆಯ ರೇಖೆಯು ಸ್ಯಾಂಕಿ ಕೆರೆಯ (ಪೋರ್ಟರ್ಸ್ ಷೆಡ್) ಯಾ ದೋಣಿಗಳನ್ನಿಡುವ ಗುಡಿಸಿಲಿನ ಉತ್ತರಕ್ಕೆ ನಾಲೆಯು ಕೆರೆಯಂಗಳವನ್ನು ಸೇರುವ ಸ್ಥಳದಿಂದ ಹೊರಟು, ತರುವಾಯ ಸ್ಯಾಂಕಿ ಕೆರೆಯಂಗಳದೊಂದಿಗೆ ಉತ್ತರಕ್ಕೆ ಹೋಗಿ, "ಬಟ್ಸ್" ಎಂಬ ಗುರಿ ಹಲಿಗೆಗಳಿರುವ ಸ್ಥಳದಿಂದ ತುಮಕೂರು ರಸ್ತೆಗೆ ಹೋಗುವ ರಸ್ತೆಯನ್ನು ದಾಟಿ, ಈ ರಸ್ತೆಯ ಮೇಲ್ಭಾಗದಲ್ಲಿಯೇ ಸದರಿ ಕೆರೆಗೆ ನೀರು ಬರುವ ಕಾಲುವೆಯನ್ನು ಸೇರುತ್ತದೆ. ಆ ಮೇಲೆ ಈ ಕಾಲುವೆಯೇ ಪೂರ್ವ ದಿಕ್ಕಿನಲ್ಲಿ ಉಳಿದ ಭಾಗಕ್ಕೂ, ಉತ್ತರಕ್ಕೂ ಮತ್ತು ಪಶ್ಚಿಮಕ್ಕೂ ಮೇರೆಯಾಗಿ, ಶ್ರೀಮನ್ಮಹಾರಾಜರವರ (ಹತ್ತಿ) ಕಾರ್ಖಾನೆಗಳ ಹಿಂಭಾಗದಲ್ಲಿ ಹೋಗುವ ಹಳೆ ತುಮಕೂರು ರಸ್ತೆಯನ್ನು ಸೇರುವ ವರೆಗೆ ಹೋಗುತ್ತದೆ. ದಕ್ಷಿಣದ ಮೇರೆಯು, ಸ್ಯಾಂಕಿ ಕೆರೆಯ ಮೇಲಿನ ರಸ್ತೆಯು ಈಗಿನ ತುಮಕೂರು ರಸ್ತೆಗೆ ಸೇರುವವರೆಗೆ ಅದರೊಂದಿಗೆ ಹೋಗಿ ಅಲ್ಲಿಂದ ಹಳೆ ತುಮಕೂರು ರಸ್ತೆಗೆ ಸೇರುವುದಕ್ಕೆ ಹಾಕಬೇಕೆಂದು ಉದ್ದೇಶಿಸಿರುವ ರಸ್ತೆಯೊಂದಿಗೆ ಹೋಗುತ್ತದೆ.

ತಾರೀಖು 28ನೆ ಫೆಬ್ರುವರಿ 1907.

ನಂ. ಫೈನಾನ್ಸ್—6501-ಸೆ. ರೆ. 58-06, ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್ ದೇಖೀಲ್ ಮೈಸೂರು ಸಂಸ್ಥಾನದಲ್ಲಿ 1907ನೆ ಇಸವಿ ಜುಲೈ 1ನೇ ಲಾಗಾಯತು 1910ನೆ ಇಸವಿ ಜೂನ್ 30ನೆ ತಾರೀಖು ವರೆಗೆ ಆಗುವ ಮೂರು ವರುಷಗಳ ಕಾಲದಲ್ಲಿ ಷರಾಬನ್ನು ಯಾ ಇತರ ಒಳದೇಶದ ಸಾರಾಯಿಯನ್ನು ತಯಾರ್ಮಾಡುವ ಬಟ್ಟಿ ಸ್ವಾತಂತ್ರ್ಯಕ್ಕೋಸ್ಕರ ದರಖಾಸ್ತುಗಳು ಇದಕ್ಕೆ ಸೇರಿಸಿರುವ ನಮೂನೆಯಲ್ಲಿ ಅಪೇಕ್ಷಿಸಲ್ಪಟ್ಟಿರುತ್ತವೆ.

2. ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನಿನ ಕಂಟ್ರಾಕ್ಟು, ಮೈಸೂರು ದೇಶದ ಘನವನ್ನು ಹೊಂದಿದ ರೆಸಿಡೆಂಟ್ ಸಾಹೇಬರವರ ಅಪ್ಪಣೆ ಮೇರೆ ಈ ಇಸ್ತಿಹಾರಿನಲ್ಲಿ ಅಡಗಿಸಲ್ಪಟ್ಟಿರುತ್ತದೆ.

3. ಯಾವ ಸ್ವಾತಂತ್ರ್ಯಕ್ಕೋಸ್ಕರ ಈಗ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆಯೋ ಅಂಥಾ ಸ್ವಾತಂತ್ರ್ಯವು, ಈ ಇಸ್ತಿಹಾರ್ನಾಮೆಯ 8ನೆ ಪ್ಯಾರಾದಲ್ಲಿ ವಿವರಿಸಲ್ಪಟ್ಟ ಷರತ್ತುಗಳಿಗೂ ಮತ್ತು ಮೈಸೂರು ಗವರ್ನಮೆಂಟಿನಿಂದ ಮಂಜೂರ್ಮಾಡಲ್ಪಟ್ಟ ಎಕ್ಸೈಜ್ ಕಾನೂನುಗಳಿಗೂ ಮತ್ತು ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್ನಲ್ಲಿ ಹಾಲೀ ಜಾರೀಲಿರುವ ಎಕ್ಸೈಸ್ ಕಾನೂನಿಗೂ ಒಳಪಟ್ಟು ಕೊಡಲ್ಪಡುವದು. ಸದರೀ ಸ್ವಾತಂತ್ರ್ಯದಲ್ಲಿ ಶೇಂದಿ, ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಮತ್ತು ಪರಾಯಿ ದೇಶದ ಹುಳಿಸಿ ಉಕ್ಕಿದ ಮದ್ಯಗಳು, ಅಥವಾ ಒಳದೇಶದ ಬೀರೂ ಇವುಗಳನ್ನು ತಯಾರಿ ಅಥವಾ ಫುರೋಖ್ತು ಮಾಡುವ ಹಕ್ಕುದಾರಿಯು ಅಡಗಿರುವುದಿಲ್ಲವು.

4. ಮಾಹೆಯಾನಾ 34,000 ಸಾವಿರದ ಲಾಗಾಯಿತು 36,000 ಸಾವಿರದ ಗ್ಯಾಲನ್ ತೇದಾದು ವುಳ್ಳ ಷರಾಬ್ ಬೇಕಾಗುವದೆಂದು ಅಂದಾಜ್ ಮಾಡಲ್ಪಟ್ಟಿರುತ್ತದೆ. 1905-06ನೆ ಇಸವಿಯಲ್ಲಿ ಬೆಂಗಳೂರು ಡಿಸ್ಟಿಲರಿಯಿಂದ 4,07,272 ಗ್ಯಾಲನ್‌ಗಳ ತೇದಾದ್‌ವುಳ್ಳ ಷರಾಬ್ ಸಾರಾಯಿ ಮಾಡಲ್ಪಟ್ಟಿರುತ್ತದೆ. ಯದ್ಯಪಿ ಬೇಕಾಗುವ ಷರಾಬಿನ ತೇದಾದ್ ಯಾ ಪರಿಮಾಣದ ವಿಷಯದಲ್ಲಿ ಷರಾಬು ತಯಾರಿ ಗುತ್ತಿಗೆದಾರ್ರಿಗೆ ಕರಾರು ಮಾಡಲಿಕ್ಕಾಗುವುದಿಲ್ಲ. ಅಂದಾಜು ಮಾಡಲ್ಪಟ್ಟಿರುವ ತೇದಾದ್‌ಗಿಂತಲೂ ಅಧಿಕವಾಗಲೀ ಯಾ ಕಮ್ಮಿಯಾಗಲಿ ನಿಜವಾಗ ಎಷ್ಟು ಷರಾಬ್ ಬೇಕಾಗುತ್ತದೆಯೋ ಅಷ್ಟಕ್ಕೆ ಸದರೀ ಗುತ್ತಿಗೆದಾರ್ರು ಬದ್ಧರಾಗಿರುತ್ತಾರೆ.

5. ದರಖಾಸ್ತುದಾರರು ಕಂಟ್ರಾಕ್ಟಿನ ಪೂರಾ ಮಾಮಿದೆಗೆ ಬೇಕಾಗು 20 ಡಿಗ್ರಿ ಅಂಡರ್ ಪ್ರೂಫ್ ಬಲವುಳ್ಳ ಎಲ್ಲಾ ಷರಾಬನ್ನು ಅಂದರೆ ಕಬ್ಬಿನ ಬೆಲ್ಲದಿಂದ ತಯಾರ್ಮಾಡಲ್ಪಟ್ಟ ಸಾರಾಯಿಗಾಗಿ ತಾಟಿ ಬೆಲ್ಲದಿಂದ ತಯಾರ್ಮಾಡಲ್ಪಟ್ಟ ಸಾರಾಯಿಗಾಗಿ ಮತ್ತು ಕಾಕಂಬಿಯಿಂದ ತಯಾರ್ಮಾಡಲ್ಪಟ್ಟ ಸಾರಾಯಿಗಾಗಿ ಗ್ಯಾಲನ್ ಒಂದಕ್ಕೆ ಯಾವ ಕನಿಷ್ಟ ದರಕ್ಕೆ ಸರಬರಾಯಿ ಮಾಡುತಾರೋ ಆ ದರವನ್ನು ಪ್ರತ್ಯೇಕವಾಗಿ ತಿಳಿಸಬೇಕು. ಈ ನೋಟಿಫಿಕೇಷನ್ ಅನುಸಾರವಾಗಿ ಕೊಡಲ್ಪಟ್ಟ ಕಂಟ್ರಾಕ್ಟಿನ ಮಾಮಿದೆಯು ಜಾರಿ ಇರುವ ಕಾಲದಲ್ಲಿ ಸ್ವತಂತ್ರ ಅಂಗಡಿಕಾರರಿಗೂ ಗುತ್ತಾ ಫಿರಕಾವನ್ನು ಪಡೆದ ಗುತ್ತಿಗೆದಾರರಿಗೂ ಸರಬರಾಯಿ ಮಾಡುವಬಗ್ಗೆ ಮೇಲ್ಕಂಡಮೇರೆ ದರಖಾಸ್ತು ಮಾಡಲ್ಪಟ್ಟು ಗವರ್ನಮೆಂಟಿನಿಂದ ಅಂಗೀಕರಿಸಲ್ಪಟ್ಟ ದರದ ಪ್ರಕಾರವೇ ಷರಾಬು ತಯಾರಿ ಕಂಟ್ರಾಕ್ಟುದಾರನಿಂದ ಗವರ್ನಮೆಂಟಿಗೆ 20 ಡಿಗ್ರಿ ಅಂಡರ್‌ಪ್ರೂಫ್ ಷರಾಬು ಸರಬರಾಯಿ ಮಾಡಲ್ಪಡತಕ್ಕದ್ದು. ಡಬ್ಬಲ್ ಡಿಸ್ಟಿಲ್ಡ್ ಯಾ ಶುದ್ಧ ಮಾಡಲ್ಪಟ್ಟ ಮದ್ಯವನ್ನು ಮತ್ತು 20 ಡಿಗ್ರಿ ಅಂಡರ್‌ಪ್ರೂಫಿಗೆ ಜಾಸ್ತಿ ಯಾ ಕಮ್ಮಿ ಬಲವುಳ್ಳ ಸ್ಪೆಷಲ್ ಯಾ ವಿಶೇಷ ಮದ್ಯವನ್ನು ಷರಾಬ್ ತಯಾರಿ ಗುತ್ತಿಗೆದಾರನು ಗೊತ್ತು ಮಾಡಬಹುದಾದ ದರಗಳಲ್ಲಿ ಬಿಕರಿ ಮಾಡುವ ಬಗ್ಗೆ ಲೈಸೆನ್ಸು ಪಡೆದಿರುವ ಜನಗಳಿಗೆ ಸರಬರಾಯಿ ಮಾಡುವ ಬಗ್ಗೆ ಸರ್ಕಾರದವರು ಅಪ್ಪಣೆ ಮಾಡಿದಾಗ ಷರಾಬ್ ತಯಾರಿ ಗುತ್ತಿಗೆದಾರನು ಅಂಥಾ ಮದ್ಯಗಳನ್ನು ತಯಾರ್ಮಾಡಿ ಒದಗಿಸತಕ್ಕದ್ದು. ಪರಂತು 20 ಡಿಗ್ರಿ ಅಂಡರ್ ಪ್ರೂಫಿಗೆ ಜಾಸ್ತಿ ಯಾ ಕಮ್ಮಿ ಬಲವುಳ್ಳ ಸಿಂಗಲ್ ಡಿಸ್ಟಿಲ್ಡ್ ಷರಾಬಿಗೆ ಅವನು ಹಾಕುವ ಖರೀದಿಯು 20 ಡಿಗ್ರಿ ಅಂಡರ್ ಪ್ರೂಫ್ ಷರಾಬಿಗೆ ಗೊತ್ತಾದ ದರದ ಮೇಲೆ ಕ್ಯಾಸಿಲಾಸ್ ರೂಲ್ಸ್ ಅನುಸರಿಸಿ ದಾಮಾಷಾಯಿ ಪ್ರಕಾರವಾಗಿ ಇರತಕ್ಕದ್ದು.

6. ಪ್ರತಿ ದರಖಾಸ್ತು ನಗದಾಗಿಯಾಗಲಿ "ಮೈಸೂರು ದಿವಾನರವರ ಹೆಸರಿಗೆ" ಕ್ರಮವಾಗಿ ಇಂಡಾರ್ಸ್ ಮಾಡಲ್ಪಟ್ಟ ಗವರ್ನಮೆಂಟ್ ಬಾಂಡುಗಳ ಮೂಲಕವಾಗಿಯಾಗಲೀ 5,000 ರೂಪಾಯಿಗಳ ಠೇವಣಿ ನಿಸಿ ಲಿಫಾಫೆಯಲ್ಲಿ ಹಾಕಲ್ಪಟ್ಟು "ಷರಾಬ್ ತಯಾರಿಯ ಬಟ್ಟಿ ಸ್ವಾತಂತ್ರ್ಯದ ಬಗ್ಗೆ ದರಖಾಸ್ತು" ಎಂಬದಾಗಿ ವಿಳಾಸ ಬರೆಯಲ್ಪಟ್ಟು, ಬೆಂಗಳೂರಲ್ಲಿ ಎಕ್ಸೈಜ್ ಕಮ್ಮಿಷನರಿಗೆ 1907ನೆ ಇಸವಿ ಏಪ್ರಿಲ್ 3ನೆ ಮರ್ತ್ತುಮಿನ ಬುಧವಾರದ ಮಧ್ಯಾಹ್ನಕ್ಕೆ ಪೂರ್ವ ತಲಪುವಂತೆ ಕಳುಹಿಸಲ್ಪಡತಕ್ಕದ್ದು. ಸದರೀ ತಾರೀಖು ತರುವಾಯ ಯಾವ ದರಖಾಸ್ತೂ ಹಿಡಿಯಲ್ಪಡಲಾರದು. ದರಖಾಸ್ತುಗಳು 1907ನೆ ಇಸವಿ ಏಪ್ರಿಲ್ 3ನೆ ಮರ್ತ್ತುಮಿನ ಮಿಧ್ಯಾಹ್ನ 12 ಘಂಟೆಗೆ ಎಕ್ಸೈಜ್ ಕಮ್ಮಿಷನರಿಂದ ಅವರ ಆಫೀಸಿನಲ್ಲಿ ಹಾಜರ್ ಇರಬಹುದಾದ ದರಖಾಸ್ತುದಾರರ ರೊಬರೂ ಖುಲ್ಲಾ ಮಾಡಲ್ಪಡುವವು. ದರಖಾಸ್ತುಗಳ ಆಖೈರ್ ವಿಲೇವಾರಿಯು ಸರ್ಕಾರದವರಿಗೆ ಸೇರಿದ್ದಾಗಿರುತ್ತದೆ. ಅವರು ಯಾವುದೊಂದು ಸಬಬೂ ತಿಳಿಸದೇನೇ ಯಾವ ದರಖಾಸ್ತನ್ನಾಗಲೀ ಎಲ್ಲಾ ದರಖಾಸ್ತುಗಳನ್ನಾಗಲೀ ತಿರಸ್ಕರಿಸುವ ಪೂರಾ ಸ್ವಾತಂತ್ರ್ಯವನ್ನು ತಮ್ಮಲ್ಲಿ ಉಳಿಸಿಕೊಂಡಿರುತ್ತಾರೆ. ತಿರಸ್ಕರಿಸಲ್ಪಡುವ ದರಖಾಸ್ತುದಾರರಿಂದ ಇಡಲ್ಪಟ್ಟ ಠೇವಣಿ ಮೊಬಲಗು ಅವರು ಕೇಳಿಕೊಂಡಾಗ ವಾಪಸ್ ಮಾಡಲ್ಪಡುವುದು.

7. ಮೈಸೂರು ಸರ್ಕಾರದವರಿಂದ ಆಖೈರಾಗಿ ಅಂಗೀಕರಿಸಲ್ಪಡುವ ದರಖಾಸ್ತುದಾರನು ಅಂಥಾ ಅಂಗೀಕರಿಸಲ್ಪಟ್ಟ ಸಂಗತಿ ಅವನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು ಎಂಟು ದಿವಸಗಳ ಒಳಗಾಗಿ ಮೊದಲೇ ಇಡೋಣಾದ ಠೇವಣೀ ದೇಖೀಲ್ 5,000 ರೂಪಾಯಿಗೆ ಸರಿಹೂದ ಮೊಬಲಗನ್ನು ನಗದಾಗಿಯಾಗಲಿ, ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರ್ಸು ಮಾಡಲ್ಪಟ್ಟ ಪತ್ರಗಳ ಮೂಲಕವಾಗಿಯಾಗಲೀ ಬೆಂಗಳೂರಲ್ಲಿ ಇರತಕ್ಕ ಹುಜೂರು ಟ್ರೆಜರಿಯಲ್ಲಿ ಡಿಪಾಜಿಟ್ ಕಟ್ಟತಕ್ಕದ್ದು. ಮತ್ತು ಡಿಸ್ಟಿಲರಿಯಲ್ಲಿರುವ ಯಂತ್ರಗಳು, ಸಾಮಾನುಗಳು ಮತ್ತು ಸರಕುಗಳನ್ನು ಹೆಚ್ಚಾದ ಠೇವಣಿಯಾಗಿಟ್ಟು ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳಿಗೆ ಒಪ್ಪಿ ನಡೆಯುವ ಬಗ್ಗೆ ಬದ್ಧನಾಗಿ ತೋರಿಸುವ ನಮೂನೆಯಲ್ಲಿ ಕ್ರಮವಾದ ಛಾಪಾ ಕಾಗದದಲ್ಲಿ ಒಂದು ಒಡಂಬಡಿಕೆಯನ್ನು ಬರೆದುಕೊಡತಕ್ಕದ್ದು. ಮತ್ತು ಅಂಥಾ ಮಾಮಿದೆ ಒಳಗೆ ಅವನು ಅವಶ್ಯಕವಾದ ಠೇವಣಿ ಕಟ್ಟುವುದಕ್ಕೆ ಅಥವಾ ಒಡಂಬಡಿಕೆಯನ್ನು ರುಜು ಮಾಡುವುದಕ್ಕೆ ತಪ್ಪಿಹೋದರೂ, ಅಥವಾ ನಿರಾಕರಿಸಿದರೂ ಮೊದಲೇ ಅವನಿಂದ ಇಡೋಣಾದ ಠೇವಣಿ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಟ್ಟು ಕಂಟ್ರಾಕ್ಟು ಅನ್ಯಥಾ ವಿಲೇವಾರಿ ಮಾಡಲ್ಪಡುವದು.

8. ಈಗ ದರಖಾಸ್ತು ಮಾಡಲ್ಪಡುವ ಕಂಟ್ರಾಕ್ಟು, ಇದರಕೀ ಕಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು, ಯಾವುವೆಂದರೆ :—

I. ಕಂಟ್ರಾಕ್ಟುದಾರನು ಬೆಂಗಳೂರು ಬಳಿಯ ಗವರ್ನಮೆಂಟ್ ಡಿಸ್ಟಿಲರಿ ಆವರಣದಲ್ಲಾಗಲೀ ಅಥವಾ ಗವರ್ನಮೆಂಟಿನಿಂದ ಮಂಜೂರ್ಮಾಡಲ್ಪಡುವ ಇತರ ಯಾವ ಸ್ಥಳದಲ್ಲಾಗಲೀ ಷರಾಬ್ ಮತ್ತು ಇತರ ಒಳದೇಶದ ಸಾರಾಯಿಯನ್ನು ತಯಾರ್ಮಾಡತಕ್ಕದ್ದು. ಬೆಂಗಳೂರು ಬಳಿಯ ಡಿಸ್ಟಿಲರಿ ಕಟ್ಟಡಗಳನ್ನು ನೀರಿನ ಸರಬರಾಯಿಗೆ

ಖಾಲಿ ಇರತಕ್ಕ ಏರ್ಪಾಟನ್ನೂ ಉಪಯೋಗಿಸುವ ಬಗ್ಗೆ ಕಂಟ್ರಾಕ್ಟುದಾರನು ಮಾಹೆಯಾನಾ 500 ರೂಪಾಯಿ ಬಾಡಿಗೆಯನ್ನು ಸರಕಾರಕ್ಕೆ ಕೊಡತಕ್ಕದ್ದು. ಸದರೀ ಕಟ್ಟಡಗಳಿಗೆ ಯಾ ನೀರಿನ ಸರಬರಾಯಿಗೆ ಸರಕಾರದವರು ಮಂಜೂರ್ಮಾಡಬಹುದಾದಂಥಾ ಅಭಿವೃದ್ಧಿಯು ಯಾ ಜಾಸ್ತಿ ಕಾಮಗಾರಿಯು, ಸರಕಾರದವರು ಗೊತ್ತು ಮಾಡಬಹುದಾದ ಜಾಸ್ತಿ ಬಾಡಿಗೆಯನ್ನು ಅಥವಾ ದರವನ್ನು ಕಂಟ್ರಾಕ್ಟುದಾರನು ಕೊಡತಕ್ಕದ್ದೆಂಬ ಷರತ್ತಿನ ಮೇಲೆ, ಸರ್ಕಾರದ ಲಾಗವಡುನಿಂದ ನಡೆಸಲ್ಪಡತಕ್ಕದ್ದು. ಮತ್ತು ಎಗ್ಸಿಕ್ಯೂಟಿವ್ ಇಂಜನಿಯರಿಂದ ತೋರಿಸಲ್ಪಡಬಹುದಾದ ಡಿಸ್ಟಿಲರಿ ಕಟ್ಟಡಗಳಿಗೂ ಮತ್ತು ನಾಲಾಗಳಿಗೂ ಆಗಬೇಕಾದ ಸಾಲಿಯಾನಾ 50 ರೂಪಾಯಿಗಳಿಗೆ ಮೀರದ ರಿಪೇರಿಗಳು ಕಂಟ್ರಾಕ್ಟುದಾರನಿಂದ ಕೂಡ ಮಾಡಲ್ಪಡಬೇಕು.

II. ಕಂಟ್ರಾಕ್ಟುದಾರನು ಸಾಧಾರಣವಾಗಿ ಚಾಲ್ತಿ ಖರ್ಚಿನ ದರ ಪ್ರಕಾರ ಒಂದು ತಿಂಗಳ ದಾಸ್ತಾನ್ ಅಂದರೆ 34,000 ಸಾವಿರ ಗ್ಯಾಲನ್‌ಗಳನ್ನು ಡಿಸ್ಟಿಲರಿ ಗಡಂಗಿನಲ್ಲಿ ಇಟ್ಟಿರತಕ್ಕದ್ದು. ಮತ್ತು 20 ಡಿಗ್ರಿ, ಅಂಡರ್ ಪ್ರೂಫ್ ಬಿಕ್ಕದ ಜೋರಿಗೆ ಲಾಯಖ್ ಷರಾಬ್ ದಾಸ್ತಾನ್ 18,000 ಗ್ಯಾಲನ್‌ಗಳಿಗಿಂತ ಕಮ್ಮಿಯಾಗಿ ಯಾವಾಗಲೂ ಇರಕೂಡದು.

III. ಕಂಟ್ರಾಕ್ಟುದಾರನು ಮೈಸೂರು ಸಂಸ್ಥಾನದಲ್ಲಿ ಸ್ಥಾಪಿಸಲ್ಪಟ್ಟ ಗವರ್ನಮೆಂಟಿನಿಂದ ಷರಾಬ್ ಯಾ ಇತರ ಒಳದೇಶದ ಸಾರಾಯಿ ತಯಾರ್ ಮಾಡುವ ಬಗ್ಗೆ ಅಪ್ಪಣೆ ಕೊಡಲ್ಪಡುತ್ತ ಯಾವುದಾದರೂ ಸಕ್ಕರೆ ಕಾರ್ಖಾನೆಯಿಂದ ಷರಾಬ್ ಯಾ ಇತರ ಒಳದೇಶದ ಸಾರಾಯಿಯನ್ನು ಕೊಂಡುಕೊಳ್ಳುವ ಬಗ್ಗೆ ಅಪ್ಪಣೆ ಕೊಡಲ್ಪಡತಕ್ಕದ್ದು. ಕಂಟ್ರಾಕ್ಟುದಾರನು ಗವರ್ನಮೆಂಟಿನವರ ಅಪ್ಪಣೆ ಪಡೆದು ಸ್ವಂತವಾಗಿ ಒಂದು ಸಕ್ಕರೆ ಕಾರ್ಖಾನೆಯನ್ನು ಇಟ್ಟು ಅದರಲ್ಲಿ ಷರಾಬ್ ಯಾ ಇತರ ಒಳದೇಶದ ಸಾರಾಯಿಯನ್ನು ತಯಾರ್ಮಾಡುವ ಸಂದರ್ಭದಲ್ಲಿ, ಅವನು ಅಂಥಾ ಕಾರ್ಖಾನೆಯಲ್ಲಿ ಗವರ್ನಮೆಂಟಿನಿಂದ ಗೊತ್ತು ಮಾಡಲ್ಪಡುವ ತೀದಾದ್‌ವುಳ್ಳ ಷರಾಬನ್ನು ಯಾ ಇತರ ಒಳದೇಶದ ಸಾರಾಯಿಯನ್ನು ದಾಸ್ತಾನ್ ಇಡುವ ಬಗ್ಗೆ ಬದ್ಧನಾಗಿರತಕ್ಕದ್ದು.

IV. ತಯಾರ್ಮಾಡಲ್ಪಟ್ಟ ಷರಾಬು ಒಳ್ಳೇ ರಖಂ ಉಳ್ಳದ್ದಾಗಿರಬೇಕು. ಡಿಸ್ಟಿಲರಿ ಜಿಮ್ಮೆಯಲ್ಲಿರುವ ದೊಡ್ಡ ಉದ್ಯೋಗಸ್ಥರ ವಿಚಾರಣೆಗೆ ಒಳಪಟ್ಟು ಬಹಳ ಜೋರಾದ ಷರಾಬನ್ನು ವಿಧಾಯುಕವಾದ ಜೋರಿಗೆ ತರುವುದಕ್ಕೆ ಡಿಸ್ಟಿಲರಿಯಲ್ಲಿ ಭಟ್ಟಿಯಿಂದ ಇಳಿಸಲ್ಪಟ್ಟ ನೀರನ್ನು ಮಾತ್ರವೇ ಯಾವಾಗಲೂ ಉಪಯೋಗಿಸತಕ್ಕದ್ದು. ಭಟ್ಟಿ ಇಳಿಸುವುದಕ್ಕೆ ಉಪಯೋಗಿಸುವ ಪದಾರ್ಥಗಳನ್ನು ಆ ಉದ್ಯೋಗಸ್ಥರು ಮಂಜೂರ್ಮಾಡಬೇಕು. ಭಟ್ಟಿ ಇಳಿಸುವುದರಲ್ಲಿ ದೇಹಕ್ಕೆ ವಿರೋಧವಾದ ಪದಾರ್ಥಗಳನ್ನು ಉಪಯೋಗಿಸಕೂಡದು. ಮತ್ತು ಅಂಥಾ ಪದಾರ್ಥಗಳನ್ನು ಷರಾಬಿನಲ್ಲಾಗಲೀ ಅಥವಾ ಇತರ ಒಳದೇಶದ ಸಾರಾಯಿನಲ್ಲಾಗಲೀ ಅಥವಾ ಇತರ ಮದ್ಯದಲ್ಲಾಗಲೀ ಅದು ತಯಾರಾದ ನಂತರ ಹಾಕಕೂಡದು. ತಯಾರ್ಮಾಡಲ್ಪಟ್ಟ ಷರಾಬುಗಳು ಕೆಟ್ಟ ಪದಾರ್ಥಗಳ ಮಿಶ್ರದಿಂದ ಕೆಡಿಸಲ್ಪಡಕೂಡದು ಅಥವಾ ಜೋರನ್ನು ಇಳಿಸಿ ವಿಧಾಯುಕವಾದ ಜೋರಿಗೆ ತರುವುದಕ್ಕೆ ಭಟ್ಟಿ ಇಳಿಸಿದ ನೀರಿನಿಂದ ವಿನಾ ಮತ್ಯಾವ ನೀರಿನಿಂದಲೂ ಬೆರಸಲ್ಪಡಕೂಡದು.

V. ಜಾಜವಿ ಖರ್ಚಾಗುವುದರ ದೆಸೆಯಿಂದ ಅಥವಾ ಇತರ ಕಾರಣಗಳಿಂದ, ಹೊರಗಿನ ಪ್ರದೇಶಗಳಲ್ಲಿ ಅಕ್ರಮವಾಗಿ ಷರಾಬ್ ತಯಾರ್ಮಾಡಲ್ಪಡುತ್ತದೆಂದು ಗುಮಾನಿ ತೋರುವ ಸಂಗತಿಗಳಲ್ಲಿ, ಗವರ್ನಮೆಂಟಿನವರು ಹೊರಗೆ ಚಿಲ್ಲರೆ ಭಟ್ಟಿಗಳನ್ನು ಇಡಿಸುವುದಕ್ಕೆ ಸ್ವತಂತ್ರರಾಗಿರತಕ್ಕದ್ದು. ಪರಂತು ಅಂಥಾ ಭಟ್ಟಿಗಳನ್ನಿಡಿಸಲಿಕ್ಕೆ ಕಂಟ್ರಾಕ್ಟುದಾರರಿಗೆ ಪ್ರಥಮ ಹಕ್ಕು ಇರತಕ್ಕದ್ದು.

VI. (1) ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟಿನಲ್ಲಿ ಗೊತ್ತು ಮಾಡಲ್ಪಟ್ಟ ದರದಂತೆ ಖರೀದಿ ಮೊಬಲಗು ತನಗೆ ಪಾವತಿ ಮಾಡಲ್ಪಟ್ಟ ತರುವಾಯ ಗವರ್ನಮೆಂಟ್ ಡಿಸ್ಟಿಲರಿಯಲ್ಲಾಗಲೀ ಅಥವಾ ಅವರು ಸಾರಾಯಿ ತಯಾರೀ ಬಗ್ಗೆ ಅಪ್ಪಣೆಕೊಡಬಹುದಾದಂಥಾ ಇತರ ಸ್ಥಳದಲ್ಲಾಗಲೀ ಈ ಕೆಳಗೆ ನಮೂದಾಗುವವರಿಗೆ ಸರಬರಾಯಿ ಮಾಡತಕ್ಕ ಬಗ್ಗೆ ಡಿಸ್ಟಿಲರಿಯ ಜಿಮ್ಮೆಯಲ್ಲಿರುವ ದೊಡ್ಡ (ಸರ್ಕಾರಿ) ಉದ್ಯೋಗಸ್ಥರು ದರಖಾಸ್ತು ಮಾಡಬಹುದಾದಷ್ಟು ಷರಾಬನ್ನೂ ಇತರ ಮದ್ಯವನ್ನೂ ಸರಬರಾಯಿ ಮಾಡತಕ್ಕದ್ದು.

1ನೇದು—ಗವರ್ನಮೆಂಟಿನವರು ಆಗಿಂದಾಗ್ಯೆ ಸ್ಥಾಪಿಸಿ ಕಾಪಾಡುವಂಥಾ ಬಾಂಡೆಡ್ ಕೋಠಿಗಳಿಗೆ;

2ನೇದು—ಬೆಂಗಳೂರು ವ ಮೈಸೂರು ಷಹರುಗಳಲ್ಲೂ ಮತ್ತು ಕೋಲಾರದ ಭಂಗಾರದ ಗಣಿಗಳಲ್ಲೂ ಮತ್ತು ಅಲಾಹಿದಾ ದುಕಾನ್ ಪದ್ಧತಿಯು ಜಾರೀಗೆ ತಂದಿರುವ ಮತ್ತು ತರಲ್ಪಡಬಹುದಾದ ಇತರ ಸ್ಥಳಗಳಲ್ಲೂ ಫುರೋಖ್ತಿ ಬಗ್ಗೆ ಲೈಸೆನ್ಸ್ ಪಡೆದಿರುವಂಥಾ, ಸ್ವತಂತ್ರ ಅಂಗಡಿಕಾರರಿಗೂ;

3ನೇದು—ಗೊತ್ತಾದ ಸ್ಥಳಗಳಲ್ಲಿ ಷರಾಬ್ ಬಿಕರಿ ಮಾಡುವ ಹಕ್ಕುದಾರಿಯನ್ನು ಗವರ್ನಮೆಂಟಿನವರು ವಿಕ್ರಯಿಸುವಂಥಾ ಷರಾಬ್ ಬಿಕರಿ ಫಿರ್ತಾ ಗುತ್ತಿಗೆದಾರರಿಗೂ; ಮತ್ತು

4ನೇದು—ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್ ಎಕ್ಸೈಸ್ ಸೂಪರಿಂಟೆಂಡೆಂಟರವರಿಂದ ಬರುವ ದರಖಾಸ್ತುಗಳ ಪ್ರಕಾರ ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್ ಗವರ್ನಮೆಂಟ್ ಎಕ್ಸೈಜ್ ಕೋಠಿಗೆ.

ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್‌ಗೆ ಸರಬರಾಯಿ ಮಾಡಲ್ಪಡುವ ಸಾರಾಯಿಯ ಖರೀದಿಯು ಮುಂಗಡವಾಗಿ ಕೊಡಲ್ಪಡುವುದಿಲ್ಲ; ಪರಂತು 15 ದಿವಸಗಳಿಗೊಂದಾವರ್ತಿ ಸಿವಿಲ್ ವ ಮಿಲಿಟರಿ ಸ್ಟೇಷನ್ ಎಕ್ಸೈಸ್ ಸೂಪರಿಂಟೆಂಡೆಂಟರವರ ದ್ವಾರಾ ಕಂಟ್ರಾಕ್ಟುದಾರರಿಂದ ಕಲೆಕ್ಟರವರಿಗೆ ಬಿಲ್ಲುಗಳು ಬಂದ ಕೂಡ್ಲೆ ಪಾವತಿ ಮಾಡಲ್ಪಡುವುದು.

(2) ಕಂಟ್ರಾಕ್ಟುದಾರನು ಸಾರಾಯಿ ಚಿಲ್ಲರೆ ಮಾರಾಟದಲ್ಲಿ ಯಾವ ವಿಧವಾದ ಪ್ರಯೋಜನವನ್ನೂ ಉಂಟಾಗಕೂಡದು. ಮತ್ತು ಅಂಥಾ ಪ್ರಯೋಜನವುಳ್ಳ ಯಾವ ಮನುಷ್ಯನನ್ನಾಗಲಿ ಡಿಸ್ಟಿಲರಿಯಲ್ಲಿ ಏಜಂಟಾಗಿ ಅಥವಾ ಇನ್ಯಾವ ಕೆಲಸದಲ್ಲಿಯಾಗಲಿ ಇಡಕೂಡದು.

(3) ಕಂಟ್ರಾಕ್ಟುದಾರನು ಮಾಲ್ಟ್ ಮದ್ಯ ಯಾನೆ ಬೀರು ವಿನಾ ಕಡವೆ ಪರಾಯಿ ದೇಶದ ಸಾರಾಯಿಗಳನ್ನೂ ಮತ್ತು ಪರಾಯಿದೇಶದ ಉಕ್ತ್ತಿದ ಮದ್ಯಗಳನ್ನೂ ಮಾರುವುದಕ್ಕೆ ಲೈಸೆನ್ಸ್ ಪಡೆದಿರುವವರಿಗೆ ತಾನು ತಯಾರ್ಮಾಡಿದ ಡಬ್ಬಲ್ ಡಿಸ್ಟಿಲ್ಡ್ ಯಾನೆ ಎರಡಾವರ್ತಿ ಭಟ್ಟಿ ಇಳಿಸಿದ ಯಾ ಶುದ್ಧಿ ಮಾಡಿದ ಸಾರಾಯಿಯನ್ನೂ, ಇತರ ಸ್ಪೆಷಲ್ ಯಾ ವಿಶೇಷವಾದ ಮದ್ಯಗಳನ್ನೂ ಮಾರತಕ್ಕದ್ದು; ಎಕ್ಸೈಸ್ ಕಮಿಷನರ ಅಪ್ಪಣೆ ಪ್ರಕಾರ ಕಂಟ್ರಾಕ್ಟುದಾರನು ಮೇಲ್ಕಂಡ ಸಾರಾಯಿಗಳನ್ನು ಬಾಂಡೆಡ್ ಡಿಪೋಗಳಿಗೂ, ಆಸ್ಪತ್ರೆಗಳಿಗೂ ಮತ್ತು ಇತರ ಸರ್ಕಾರದ ಇಲಾಖೆಗಳಿಗೂ ಮಾರತಕ್ಕದ್ದು.

ಗವರ್ನ್ಮೆಂಟ್ ಡಿಸ್ಟಿಲರಿಯಿಂದಲಾಗಲೀ ಯಾ ಷರಾಬ್ ತಯಾರಿ ಬಗ್ಗೆ ಹುಕುಂ ಆಗಿರುವ ಇತರ ಸ್ಥಳದಿಂದಲಾಗಲೀ ಬಾಂಡೆಡ್ ಕೋಠಿಗಳಿಗೆ ಸರಬರಾಯಿಗೆ ವಿನಾ ಯಾವ ಷರಾಬನ್ನಾದರೂ, ಅದನ್ನು ಕೊಂಡುಕೊಂಡವನು ಅದಕ್ಕಾಗಿ ಖಜಾನೆಯಲ್ಲಿ ಡ್ಯೂಟಿಯನ್ನು ಮುಂಗಡವಾಗಿ ಕಟ್ಟಿದ್ದಕ್ಕೆ ಪಡೆದ ರಶೀತಿಯನ್ನು ಹಾಜರ್ಮಾಡಿದ ಹೊರತು ಬಿಡ್ಯಕೂಡದು.

ಷರಾ—ಈ ಷರತ್ತು ಖಜಾನೆ ರಶೀತಿ ಇಲ್ಲದ ಸಿವಿಲ್ ವ ಮಿಲಿಟರಿ ಸ್ಟೇಷನ್ನಲ್ಲಿರತಕ್ಕ ಸರ್ಕಾರೀ ಎಕ್ಸೈಸ್ ಕೋಠಿಗೆ ಸರಬರಾಯಿ ಆಗತಕ್ಕ ಷರಾಬಿಗೆ ಅನ್ವಯಿಸುವುದಿಲ್ಲ.

VII. ಕಂಟ್ರಾಕ್ಟುದಾರನು ಮೈಸೂರು ಸೀಮೆಯಲ್ಲಿಯೂ, ಮತ್ತು ಸಿವಿಲ್ ವ ಮಿಲಿಟರಿ ಸ್ಟೇಷನ್ನಲ್ಲಿಯೂ ತತ್ಕಾಲಕ್ಕೆ ಜಾರಿಯಲ್ಲಿರುವ ಎಕ್ಸೈಸ್ ಕಾನೂನುಗಳ ನಿಯಮಗಳನ್ನನುಸರಿಸಲು ಬದ್ಧನಾಗಿರತಕ್ಕದ್ದು. ಮತ್ತು ಅವನ ಕೈ ಕೆಳಗಿರುವ ನೌಕರ್ಮಾನೇರು ಅವುಗಳನ್ನು ಸಂಪೂರ್ಣವಾಗಿ ಜಾರಿಯಲ್ಲಿ ತರುವಂತೆ ನೋಡಿಕೊಳ್ಳತಕ್ಕದ್ದು.

VIII. ಒಂದು ಕಂಟ್ರಾಕ್ಟು ಮುಗಿಯುವ ಆಖೈರ್ ತಾರೀಖಿನಲ್ಲಿ, ದಾಸ್ತಾನು ರಾಜರಿರಬಹುದಾದಂಥಾ ಒಂದು ತಿಂಗಳು ಸರಬರಾಯಿಗೆ ಮೀರದಷ್ಟು ಷರಾಬನ್ನು ಯಾ ಒಳದೇಶದ ಸಾರಾಯಿಯನ್ನು ಮತ್ತು ಸ್ಪೆಷಲ್ ಮದ್ಯಗಳನ್ನು ಹಳೇ ಕಂಟ್ರಾಕ್ಟುದಾರನು ಕೊಡಲಿಕ್ಕೂ ಮತ್ತು ಹೊಸ ಕಂಟ್ರಾಕ್ಟುದಾರನು ತೆಗೆದುಕೊಳ್ಳಲಿಕ್ಕೂ, ಮತ್ತು ಎಕ್ಸೈಸ್ ಕಮಿಷನರು ಅದಕ್ಕೆ ಗೊತ್ತು ಮಾಡುವ ಬೆಲೆಯನ್ನು ಹೊಸ ಕಂಟ್ರಾಕ್ಟುದಾರನು ಹಳೇ ಕಂಟ್ರಾಕ್ಟುದಾರನಿಗೆ ಕೊಡಲಿಕ್ಕೂ ಬದ್ಧರಾಗಿರತಕ್ಕದ್ದು.

IX. ಹೊಸ ಕಂಟ್ರಾಕ್ಟುದಾರನು ಯಾ ಎಕ್ಸೈಸ್ ಕಮಿಷನರು ಕನಿಷ್ಠಪಕ್ಷ ಒಂದು ವಾರಕ್ಕೆ ಮುಂಚೆ ನೋಟಿಸ್ ಕೊಟ್ಟು ಅಪೇಕ್ಷಿಸಿದರೆ ಮುಗಿಯುವ ಕಂಟ್ರಾಕ್ಟಿನ ಆಖೈರ್ ತಿಂಗಳಿನಲ್ಲಿ ಹಳೇ ಕಂಟ್ರಾಕ್ಟುದಾರನು ವಾಷ್ ಯಾನೆ ಊಟೆಯನ್ನು ತಯಾರ್ಮಾಡೋಣವನ್ನು ನಿಲ್ಲಿಸಿ ಹೊಸ ಕಂಟ್ರಾಕ್ಟುದಾರನು ಅವನ ಕೆಲಸಗಳನ್ನು ಶುರು ಮಾಡಲಿಕ್ಕೆ ಅನುಕೂಲಿಸುವಂತೆ ಕಟ್ಟಡಗಳನ್ನು ಖಾಲಿ ಮಾಡತಕ್ಕದ್ದು. ಅಂಥಾ ನೋಟಿಸನ್ನು ಕೊಡದೆ ಇದ್ದರೆ ಹಳೇ ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಅವಧಿ ಪೂರೈಸುವ ಪರ್ಯಂತ ಭಟ್ಟಿ ಇಳಿಸುತ್ತಿದ್ದು ಕಂಟ್ರಾಕ್ಟು ಅವಧಿ ಪೂರ್ತಿಯಾದೊಡನೆ ಭಟ್ಟಿ ಇಳಿಸುವುದನ್ನೂ ಮುನ್ನಾ ಮಾಡತಕ್ಕದ್ದು. ಹೊಸ ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟಿನ ಮೊದಲನೇ ಶರುವದ ಜುಲೈ ಗುರ್ರೆ ತಾರೀಖು ಲಾಗಾಯಿತು ಸರಬರಾಯಿ ಮಾಡುವುದಕ್ಕಾಗಿ ಎಲ್ಲಾ ಬಾಂಡೆಡ್ ಡಿಪೋಗಳಲ್ಲಿ ಅವನ ಸರಕು ಸಿದ್ಧವಾಗಿರುವುದಕ್ಕೋಸ್ಕರ (ಅವನ ಕಂಟ್ರಾಕ್ಟು ಶುರುವಾಗಲಿಕ್ಕೆ ಮುಂಚೆ ಎರಡು ವಾರಗಳಿಗೆ ಮೀರದೆ) ಸಾಕಾದ ಕಾಲದಲ್ಲಿ ಎಕ್ಸೈಸ್ ಕಮಿಷನರಿಂದ ಆರೀತಿ ಅಪ್ಪಣೆ ಮಾಡಲ್ಪಟ್ಟರೆ, ಡಿಸ್ಟಿಲರಿಯಿಂದ ಬಾಂಡೆಡ್ ಡಿಪೋಗಳಿಗೆ ಷರಾಬು ಇತರೆ ಒಳದೇಶದ ಸಾರಾಯಿ ಮತ್ತು ಸ್ಪೆಷಲ್ ಷರಾಬುಗಳು ಇವುಗಳನ್ನು ರವಾನೆ ಮಾಡತಕ್ಕದ್ದು.

X. ಬೆಂಗಳೂರು ಬಳಿಯಿರುವ ಗವರ್ನ್ಮೆಂಟ್ ಸೆಂಟ್ರಲ್ ಡಿಸ್ಟಿಲರಿಯಲ್ಲಿರುವ ಯಾ ಭಟ್ಟಿ ಇಳಿಸುವುದಕ್ಕಾಗಿ ನೇಮಿಸಲ್ಪಟ್ಟ ಇತರ ಸ್ಥಳದಲ್ಲಿರುವ ಹಳೇ ಕಂಟ್ರಾಕ್ಟುದಾರನ ಬಾಬತ್ತು ಎಲ್ಲಾ ಎಂತ್ರಗಳು ಸಾಮಾನುಗಳು ವ ಸರಕುಗಳನ್ನು ಸವೆದುಹೋದ್ದಕ್ಕಾಗಿ ಶುರು ಖರೀದಿಯಲ್ಲಿ ನ್ಯಾಯವೆಂದು ತೋರುವ ಒಂದು ಭಾಗವನ್ನು ಸೋಡಿ ಮಾಡಿ ಎಕ್ಸೈಜ್ ಕಮಿಷನರು ಗೊತ್ತು ಮಾಡುವ ನ್ಯಾಯವಾದ ಖರೀದಿಗೆ ಅವುಗಳನ್ನು ಕೊಂಡುಕೊಳ್ಳಲಿಕ್ಕೆ ಹೊಸ ಕಂಟ್ರಾಕ್ಟುದಾರನು ಬದ್ಧನಾಗಿರತಕ್ಕದ್ದು. ಹೀಗೆ ಗೊತ್ತು ಮಾಡಲ್ಪಟ್ಟ ಖರೀದಿಯು ಆ ಬಗ್ಗೆ ಕ್ರಮವಾಗಿ ಪ್ರಾಯಿಷ್ಮಾಡಲ್ಪಡುವ ಇಸ್ತಿಹಾರ್ ಮೂಲಕ ಹಳೇ ಕಂಟ್ರಾಕ್ಟುದಾರನಿಗೂ, ಮತ್ತು ಹೊಸ ಕಂಟ್ರಾಕ್ಟಿಗೆ ದರಖಾಸ್ತು ಕೊಡಲು ಅಪೇಕ್ಷಿಸುವ ಜನರಿಗೂ ಸಹ ಸಕಾಲದಲ್ಲಿ ತಿಳಿಸಲ್ಪಡುತ್ತದೆ.

XI. ಖಾಯಂ ಆಗಿರತಕ್ಕ ಸ್ವಭಾವವುಳ್ಳ ಕಟ್ಟಡಗಳು ಮುಂತಾದ್ದು ಹಾಗೆಯೇ ಬಿಟ್ಟುಬಿಡಲ್ಪಡಬೇಕೇ ಹೊರತು ಎಗ್ಸಿಕ್ಯುಟಿವ್ ಇಂಜನಿಯರ ಮಂಜೂರಾತಿ ಇಲ್ಲದೆ ಕೆಡಿಸಲ್ಪಡಕೂಡದು.

XII. ಮೇಲ್ಕಂಡ ಷರತ್ತುಗಳ ಪೈಕಿ ಯಾವುದಾದರೂ ಉಲ್ಲಂಘಿಸಲ್ಪಟ್ಟರೆ, ಕಂಟ್ರಾಕ್ಟನ್ನು ರದ್ದು ಮಾಡುವುದಕ್ಕೂ, ಕಂಟ್ರಾಕ್ಟುದಾರನಿಂದ ಇಡಲ್ಪಟ್ಟ ಠೇವಣಿಯನ್ನೂ ಮತ್ತು ಅವನಿಂದ ಈಡು ಮಾಡಲ್ಪಟ್ಟ ಯಂತ್ರಗಳು, ಸಾಮಾನುಗಳು ವ ದಾಸ್ತಾನು ಇವುಗಳನ್ನೂ ದಂಡವಾಗಿ ತೆಗೆದುಕೊಳ್ಳುವುದಕ್ಕೂ ಅಂಥಾ ಉಲ್ಲಂಘನೆಯ ದೆಸೆಯಿಂದ ಉಂಟಾಗಬಹುದಾದ ಇತರ ನಷ್ಟವನ್ನು ತಪ್ಪಿತಸ್ಥನಾದ ಕಂಟ್ರಾಕ್ಟುದಾರನಿಂದ ವಸೂಲ್ಮಾಡಿಕೊಳ್ಳುವುದಕ್ಕೂ ಗವರ್ನ್ಮೆಂಟಿನವರಿಗೆ ಸ್ವತಂತ್ರವಿರತಕ್ಕದ್ದು.

9. ಈ ಕೆಳಗಿನ ಸಂಗತಿಗಳನ್ನು ಇದಕ್ಕೆ ಲಗತ್ತು ಮಾಡಿರುತ್ತದೆ:—

ಷರಾ 1. 1897—98ನೆ ಇಸವಿಯಿಂದ ಈಚೆಗೆ ಡಿಸ್ಟಿಲರಿಯಿಂದ ರವಾನೆಯಾದ ಷರಾಬಿನ ಸಾಲ್ವಾರ್ ತೇದಾದನ್ನು ತೋರಿಸುವ ತಖ್ತೆ:—

	1897—98. ಗ್ಯಾಲನ್.	1898—99. ಗ್ಯಾಲನ್.	1899—900. ಗ್ಯಾಲನ್.	1900—01. ಗ್ಯಾಲನ್.	1901—02. ಗ್ಯಾಲನ್.
ಮೈಸೂರು ಸಂಸ್ಥಾನ	3,54,131	3,46,223	3,26,469	3,14,803	3,16,837
ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್	73,749	79,133	67,836	58,920	49,189
ಜುಮ್ಲಾ	4,27,880	4,25,356	3,94,305	3,63,723	3,66,076

	1902—03. ಗ್ಯಾಲನ್.	1903—04. ಗ್ಯಾಲನ್.	1904—05. ಗ್ಯಾಲನ್.	1905—06. ಗ್ಯಾಲನ್.
ಮೈಸೂರು ಸಂಸ್ಥಾನ	3,31,755	3,52,432	3,72,083	3,42,920
ಬೆಂಗಳೂರು ಸಿವಿಲ್ ವ ಮಿಲಿಟರಿಸ್ಟೇಷನ್	58,924	62,703	66,804	64,352
ಜುಮ್ಲಾ	3,90,679	4,25,135	4,38,887	4,07,272

ಷರಾ 2—20 ಡಿಗ್ರಿ ಜೋರುಳ್ಳ ಸಾರಾಯಿಗೆ ಸ್ವತಂತ್ರ ಅಂಗಡಿಕಾರರೂ ಮತ್ತು ಖಿರ್ದಾ ಗುತ್ತಿಗೇದಾರರೂ ಸರ್ಕಾರಕ್ಕೆ ಕೊಡಬೇಕಾದ ಹಾಸಲು ಗ್ಯಾಲನ್ 1ಕ್ಕೆ ನಾಲ್ಕು ಮುಕ್ಕಾಲು ರೂಪಾಯಿಯಾಗಿರುತ್ತದೆ. ಅವರುಗಳಿಗೆ ಪಾನಮಾಡುವವರು ಕೊಡಬೇಕಾದ ಚಿಲ್ಲರೆ ಬಿಕರಿ ದರವು ಗ್ಯಾಲನ್ 1ಕ್ಕೆ (6—6—0) ಆರು ರೂಪಾಯಿ ಆರು ಆಣೆಯಾಗಿರುತ್ತದೆ; ಅಥವಾ ಗ್ಯಾಲನ್ನಿನ 1/48ನೆ ಭಾಗವಾದ ಡ್ರಾಂ 1ಕ್ಕೆ 2 ಎರಡು ಆಣೆಯಾಗಿರುತ್ತದೆ. 20 ಡಿಗ್ರಿ ಅಂಡರ್ ಪ್ರೂಫ್‌ಗಿಂತ ಹೆಚ್ಚಾದ ಯಾ ಕಮ್ಮಿಯಾದ ಜೋರುಳ್ಳ ಸಿಂಗಲ್ ಡಿಸ್ಟಿಲ್ಡ್ ಷರಾಬುಗಳ ಡ್ಯೂಟಿ ಯಾ ಚಿಲ್ಲರೆ ಬಿಕರಿ ದರಗಳು ಕ್ಯಾಸಲ್ಲಾವಿನ ರೂಲ್ಸ್‌ಗಳ ಪ್ರಕಾರ 20 ಡಿಗ್ರಿ ಅಂಡರ್ ಪ್ರೂಫಿನ ದರಗಳ ದಾಮಾಷಾಯಿನ ಮೇಲೆ ಲೆಖ್ಖಾ ಮಾಡಲ್ಪಡತಕ್ಕದ್ದು. ಡ್ಯೂಟಿ ಮತ್ತು ಚಿಲ್ಲರೆ ಬಿಕರಿ ದರಗಳನ್ನು ಬದಲಾಯಿಸುವ ಅಧಿಕಾರವನ್ನು ಗವರ್ನಮೆಂಟಿನವರು ಉಳಿಸಿಕೊಂಡಿರುವುದರಿಂದ ಅಂಥಾ ಬದಲಾವಣೆಯ ದೆಸೆಯಿಂದ ಷರಾಬು ತಯಾರೀ ಕಂಟ್ರಾಕ್ಟುದಾರನಿಗೆ ನಷ್ಟ ಉಂಟಾದರೆ ಅವನಿಗೆ ಪರಿಹಾರದ್ರವ್ಯಕ್ಕೆ ಹಕ್ಕಿರಲಾರದೆಂದು ಸ್ಪಷ್ಟವಾಗಿ ಅರಿಯತಕ್ಕದ್ದು. ಮೇಲ್ಕಂಡ ಬಿಟ್ಟು ಸ್ವಾತಂತ್ರ್ಯಕ್ಕೆ ಅನುಗುಣವಾಗಿ ತಯಾರ್ಮಾಡಲ್ಪಟ್ಟ ಸಾಧಾರಣ ಷರಾಬು ಶಿವಾಯಿ ಕಡಮೆ ಯಾವ ತರಹೇ ಮದ್ಯವಾಗಲೀ ಅಥವಾ ಪರಾಯಿದೇಶದ ಮದ್ಯವೆಂಬ ಅರ್ಥ ವಿವರಣೆಗೆ ಒಳಪಡಬಹುದಾದ ಯಾವ ಮದ್ಯವಾಗಲಿ ಸಿವಿಲ್ ವ ಮಿಲಿಟರಿ ಸ್ಟೇಷನ್ನಲ್ಲಿ ಬಿಕರಿ ಬಗ್ಗೆ ಕಂಟ್ರಾಕ್ಟುದಾರನಿಂದ ಸರಬರಾಯಿ ಮಾಡಲ್ಪಟ್ಟರೆ, ಅದರಮೇಲೆ ವಸೂಲಾಗಬೇಕಾದ ಡ್ಯೂಟಿಯು 1906ನೇ ಇಸವಿ 1ನೆ ಟ್ಯಾರಿಫ್ ಆಕ್ಟು ಪ್ರಕಾರ ಅದೇ ಜೋರುಳ್ಳ ಅದೇ ಮಾದ್ರಿ ಮದ್ಯಕ್ಕೆ ಯಾವ ದರಗಳಂತೆ ವಸೂಲಾಗಬೇಕಾಗಿರುತ್ತದೆಯೋ ಆ ದರಗಳಂತೆ ಮೊಕರರ್ಮಾಡಲ್ಪಡತಕ್ಕದ್ದು.

ಷರಾ 3—ಎಲ್ಲಾ ಜೋರುಗಳ ಡಬ್ಬಲ್ ಡಿಸ್ಟಿಲ್ಡ್ ಯಾ ಶುದ್ಧಿ ಮಾಡಲ್ಪಟ್ಟ ಷರಾಬುಗಳಿಗೆ ಡ್ಯೂಟಿ ದರಗಳು ಕ್ಯಾಸಲ್ಲಾವಿನ ರೂಲ್ಸ್‌ಗಳ ಪ್ರಕಾರ 20 ಡಿಗ್ರಿ ಅಂಡರ್ ಪ್ರೂಫ್ ಷರಾಬಿನ ದರದ ದಾಮಾಷಾಯಿನ ಮೇಲೆ ಲೆಖ್ಖ ಮಾಡಲ್ಪಡತಕ್ಕದ್ದು. ಆದರೆ ಬೆಂಗಳೂರು ಗವರ್ನಮೆಂಟ್ ಸೆಂಟ್ರಲ್ ಡಿಸ್ಟಿಲರಿಯಲ್ಲಿ ಯಾ ಗವರ್ನಮೆಂಟಿನವರು ಮಂಜೂರ್ಮಾಡಿದ ಇತರ ಸ್ಥಳದಲ್ಲಿ ತಯಾರ್ಮಾಡಲ್ಪಟ್ಟ ಸದರೀ ಡಬ್ಬಲ್ ಡಿಸ್ಟಿಲ್ಡ್ ಯಾ ಶುದ್ಧಿ ಮಾಡಲ್ಪಟ್ಟ ಷರಾಬಿಗೆ ವ ಇತರ ಸ್ಪೆಷಲ್ ಯಾನೆ ವಿಶೇಷ ಮದ್ಯಗಳಿಗೆ ಷರಾಬ್ ತಯಾರೀ ಗುತ್ತಿಗೆದಾರರು ವ ಲೈಸೆನ್ಸ್ ಪಡೆದಿರುವ ಬಿಕರೀದಾರರು ಸಹ ಅವರ ಸ್ವಂತ ಕರೀದಿ ದರಗಳನ್ನು ಗೊತ್ತುಮಾಡಬಹುದು.

ಷರಾ 4—ಹಾಲಿ ಕಂಟ್ರಾಕ್ಟುದಾರರು 1907ನೆ ಇಸವಿ ಜನವರಿ ಆಖೈರ್ ವರೆಗೆ ಭಟ್ಟಿಗಳು ಮುಂತಾದ್ದಕ್ಕೋಸ್ಕರ 73,253—4—8 ರೂಪಾಯಿಗಳನ್ನು ಖರ್ಚು ಮಾಡಿರುವಂತೆ ರಿಪೋರ್ಟಾಗಿರುತ್ತದೆ.

ಅಪೆಂಡಿಕ್ಸ್ ಯಾನೆ ಪರಿಸಿಷ್ಟ.

ದರಖಾಸ್ತಿನ ನಮೂನೆ.

ಬೆಂಗಳೂರಲ್ಲಿರುವ ಮೈಸೂರು ದೇಶದ ಎಕ್ಸೈಜ್ ಕಮ್ಮಿಷನರಿಗೆ.

ಅಯ್ಯಾ,

ಸನ್ 1907ನೆ ಇಸವಿ ಮಾರ್ಚಿ ಮಾಹೆ 1ನೆ ಮರ್ಕುಮಿನ ಮೈಸೂರು ಎಕಸ್ಟ್ರಾಆರ್ಡಿನರಿ ಯಾ ವಿಶೇಷ ಗೆಜೆಟ್ಟಿನಲ್ಲಿ ಪ್ರಕಾ

ಯಿಷ್ ಮಾಡಲ್ಪಟ್ಟ ಮೈಸೂರು ಗವರ್ನ್ಮೆಂಟಿನವರ 1907ನೆ ಇಸವಿ ಫೆಬ್ರುವರಿ ಮಾಹೆ 28ನೆ ಮರ್ಸ್ಕುಂ ಫೈನಾನ್ಸ್. 6501–ಸೆ. ರೆ. 58–06ನೆ ನಂಬರ್ ಇಸ್ತಿಹಾರ್ನಾಮೆಯ ದಾಖಲೆಮೇಲೆ ಬೆಂಗಳೂರಿನ ಸಿವಿಲ್ ವ ಮಿಲಿಟರಿ ಸ್ಟೇಷನ್ ದೇಟಿಲ್ ಮೈಸೂರು ಸಂಸ್ಥಾನದಲ್ಲಿ ಮೂರು ವರುಷಗಳ ಕಾಲ ಅಂದರೆ 1907ನೆ ಇಸವಿ ಜುಲೈ 1ನೆ ತಾರೀಖು ಮೊದಲು 1910ನೆ ಇಸವಿ ಜೂನ್ 30ನೆ ತಾರೀಖು ಪರಿಯಂತ ಮೇಲ್ಕಂಡ ಇಸ್ತಿಹಾರನಲ್ಲಿ ನಮೂದಾದ ಷರತ್ತುಗಳು ವ ಒಡಂಬಡಿಕೆಗಳಿಗೆ ಒಳಪಟ್ಟು ಷರಾಬ್ ವ ಒಳದೇಶದ ಇತರ ಸಾರಾಯಿಗಳನ್ನು ತಯಾರ್ಮಾಡುವ ಒಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತು ಮಾಡುತ್ತೇನೆ.

2. ನಾನು ಈ ಕೆಳಗೆ ನಮೂದಿಸುವ ತಪಶೀಲು ಪ್ರಕಾರ 20 ಡಿಗ್ರಿ ಅಂಡರ್ ಫ್ರೂಫ್ ಬಲವುಳ್ಳ ಸಾರಾಯಿಯನ್ನು ತಯಾರ್ಮಾಡಿ ಒದಗಿಸುವುದಕ್ಕೆ ಇದರ ದೆಸೆಯಿಂದ ಒಪ್ಪುತ್ತೇನೆ.

20 ಡಿಗ್ರಿ ಸಾರಾಯಿಗೆ
ಗ್ಯಾಲನ್ 1ಕ್ಕೆ ದರ.

	ರೂ.	ಆ.	ಪೈ.	
ಕಾಕಂಬಿ ಸಾರಾಯಿಗೆ ...				} ಕಂಟ್ರಾಕ್ಟಿನ ಪೂರಾ ಕಾಲಕ್ಕೆ.
ಕಬ್ಬಿನ ಬೆಲ್ಲದ ಸಾರಾಯಿಗೆ ...				
ತಾಟಿ ಬೆಲ್ಲದ ಸಾರಾಯಿಗೆ ...				

3. ನಾನು ಸದರೀ ಇಸ್ತಿಹಾರಿನ 6ನೆ ಪ್ಯಾರಾದಲ್ಲಿ ಕಂಡ ಪ್ರಕಾರ ದಿವಾನರವರ ಹೆಸರಿಗೆ ಕ್ರಮಪ್ರಕಾರ ಇಂಡಾರ್ಸ್ ಮಾಡಲ್ಪಟ್ಟ 5,000 ರೂಪಾಯಿಗಳ ______ ನ್ನ ಮುಲಫೂಫ್ ಮಾಡಿರುತ್ತೇನೆ.

ಹೀಗೆ ಇರುವ
ತಮ್ಮ ವಿಧೇಯ ಸೇವಕನಾದ,

ತಾರೀಖು } ವಿಳಾಸ.

ತಾರೀಖು 7ನೆ ಮಾರ್ಚಿ 1907.

ನಂ. ಆರ್. 8105 A ಎಲ್. ಆರ್. 463-06—3, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡೀ ವಿವರಿಸಿರುವ ಜಮೀನು ರೈಲ್ವೆಯ ಕೆಲಸಕ್ಕೆ, ಎಂದರೆ, ಬಾಣಸಂದ್ರ ಸ್ಟೇಷನಿನಲ್ಲಿ ನೀರು ಸರಬರಾಯಿಯ ಬಗ್ಗೆ ಒಂದು ಬಾವಿಯನ್ನು ತೆಗೆಯುವುದಕ್ಕೋಸ್ಕರ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (ಸಿ) ಪ್ರಕರಣಗಳನ್ನನುಸರಿಸಿ ಗುಬ್ಬಿ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂಪಡೆಯಲು ಅಧಿಕಾರ ಕೊಟ್ಟಿದೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು.	ಖುಷ್ಕಿ, ತರಿ ಅಥವಾ ಬಾಗಾಯತು.	ಒಟ್ಟು ವಿಸ್ತೀರ್ಣ.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚೆಕ್ಕುಬಂದಿ. ಪೂರ್ವ.	ಚೆಕ್ಕುಬಂದಿ. ಪಶ್ಚಿಮ.	ಚೆಕ್ಕುಬಂದಿ. ಉತ್ತರ.	ಚೆಕ್ಕುಬಂದಿ. ದಕ್ಷಿಣ.
ತುಮಕೂರು	ತಿಪಟೂರು	ಕಿಬ್ಬನಹಳ್ಳಿ	ಜೋಡಿ ಬಾಣಸಂದ್ರ)	ಸರಕಾರ	ಖುಷ್ಕಿ	ಸುಮಾರು 11 ಗುಂಟೆ	ಸುಮಾರು 11 ಗುಂಟೆ ಪೂರ್ವ ಪಶ್ಚಿಮ 150 ಅಡಿ, ಉತ್ತರ ದಕ್ಷಿಣ 90 ಅಡಿ	ಸರಕಾರಿ ಬಾಣಸಂದ್ರ ಗ್ರಾಮದ ತಿಪಟೂರು ರಸ್ತೆ	ಸರಕಾರಿ ಬಾಣಸಂದ್ರ ಗ್ರಾಮಕ್ಕೆ ಹೋಗುವ ದಾರಿ	ಸರಕಾರಿ ಬಂಜರು	ರೈಲ್ವೆ

ತಾರೀಖು 12ನೆ ಮಾರ್ಚಿ 1907.

ನಂ. ಫೈ. 6845—ಪ್ಯಾ. 51-06—3, ಮೈಸೂರು ಸಂಸ್ಥಾನದ ಲೈಫ್ ಇನ್ಷೂರೆನ್ಸ್ ಯಾ ಸರ್ಕಾರಿ ಬೀಮಾ ಕಮಿಟಿಯ ಸೆಕ್ರಿಟರಿಗಳ ಕಚೇರಿಯ ಮ್ಯಾನೇಜರನ್ನು ಸದರಿ ಇನ್ಷೂರೆನ್ಸ್ ಕಮಿಟಿಗೆ ಉದ್ಯೋಗಪ್ರಯುಕ್ತವಾದ ಅಸಿಸ್ಟೆಂಟ್ ಸೆಕ್ರಿಟರಿಯನ್ನಾಗಿ ನೇಮಕರ್ಮಾಡಿ ಇದೆ.

ತಾರೀಖು 14ನೆ ಮಾರ್ಚಿ 1907.

ಇಸ್ತಿಹಾರು.

ನಂ. ಫೈ. 6889, ಈ ಕೆಳಗಣ ಸರ್ಕಾರಿ ಹುಕುಮನ್ನು ಸರ್ವ ಜನರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿ ಇದೆ :—

ತಾರೀಖು 14ನೆ ಮಾರ್ಚಿ 1907.

ನಂ. ಫೈ. 6878-88. ಹುಕುಂ—ಅಡಕೆಯ (ಸುಪಾರಿ) ಮೇಲಿನ ಹಾಳತವನ್ನು ತೆಗೆದುಹಾಕುವ ವಿಷಯವೂ, ಸಂಸ್ಥಾನದ ಆದಾಯ ವ್ಯಯಗಳಿಗೆ ತೊಂದರೆಯಿಲ್ಲದೆ ಅದನ್ನು ಹೇಗೆ ನೆರವೇರಿಸುವುದು ಒಳ್ಳೆಯದು ಎಂಬುದೂ ಸ್ವಲ್ಪ ಕಾಲದಿಂದ ಶ್ರೀಮನ್ಮಹಾರಾಜರವರ ಸರ್ಕಾರದವರ ಪರ್ಯಾಲೋಚನೆಯಲ್ಲಿತ್ತು. ಸದರಿ ಸುಂಕವು ನಿಜವಾಗಿ ಯಾರ ಮೇಲೆ ಬೀಳುತ್ತದೆ ಎಂಬ ವಿಷಯದಲ್ಲಿ ಅಭಿಪ್ರಾಯಭೇದವಿದ್ದರೂ ಮೇಲ್ಕಂಡ ತಿದ್ದುಪಾಟು ಆಡಳಿತಕ್ಕೆ ಅತ್ಯವಶ್ಯವಾದುದು ಎಂಬುದೂ ಅದರ ಪ್ರಯೋಜನವು ಬಹುದೂರ ವ್ಯಾಪಿಸುವಂಥಾದ್ದು ಎಂಬುದೂ ಯೋಗ್ಯರಾದ ಎಲ್ಲಾ ಅಧಿಕಾರಿಗಳಿಂದಲೂ ಅಂಗೀಕರಿಸಲ್ಪಟ್ಟಿವೆ.

2. ಇದಕ್ಕೆ ಲಗತ್ತು ಮಾಡಿರುವ ಪ್ರತ್ಯೇಕವಾದ ಸಂಗ್ರಹವು ಅಡಕೆಯ ಮೇಲಿನ ಹಾಳತದ ಉತ್ಪತ್ತಿಯನ್ನೂ ಸ್ವಭಾವವನ್ನೂ, ಅದನ್ನು ಇಟ್ಟುಕೊಂಡಿರುವುದರಿಂದ ಆಡಳಿತಕ್ಕೂ ದೇಶದ ಸಂಪತ್ತಿಗೂ ಉಂಟಾಗುವ ಕೇಡನ್ನೂ ಈ ಕೇಡನ್ನು ಹಿಮ್ಮೆಟ್ಟಿಸುವುದಕ್ಕೆ ಹಿಂದೆ ಮಾಡಿದ ಪ್ರಯತ್ನಗಳನ್ನೂ ಸಂಕ್ಷೇಪವಾಗಿ ತೋರಿಸುತ್ತದೆ. ಇಲ್ಲಿ ಇಷ್ಟು ಮಟ್ಟಿಗೆ ಹೇಳಿದರೆ ಸಾಕು—ಮಲೆನಾಡು ಜನಗಳ ಕ್ಷೀಣದೆಶೆಯು ಇಪ್ಪತ್ತು ವರ್ಷಗಳಿಗೆ ಮುಂಚೆಯೇ ಗೋಚರಕ್ಕೆ ಬಂದು ಅದರ ಕಾರಣಗಳ ವಿಷಯದಲ್ಲಿಯೂ ಅದಕ್ಕೆ ಪ್ರಯೋಗಿಸತಕ್ಕ ಪರಿಹಾರದ ವಿಷಯದಲ್ಲಿಯೂ ವಿಶೇಷವಾದ ವಿಚಾರಣೆಗಳು ನಡೆದಿದ್ದರೂ ಈಚಿನ ವರ್ಷಗಳಲ್ಲಿ ಕ್ಷೀಣಾವಸ್ಥೆಯು ಬರಬರುತ್ತ ಅಡಕೆಯ ವ್ಯವಸಾಯವನ್ನೇ ನಿರ್ಮೂಲ ಮಾಡುತ್ತದೆಯೋ ಎಂದು ಭಯಪಡಿಸುವಷ್ಟು ವಿಶೇಷವಾಗಿ ಹೆಚ್ಚಿತು. ಮಲೆನಾಡಿನ ಪ್ರಜಾಸಂಖ್ಯೆಯು ಕಡಮೆಯಾಗುತ್ತಿರುವುದೂ ಅವರ ದರಿದ್ರಾವಸ್ಥೆಯು ಸಾಮಾನ್ಯವಾಗಿ ಹೆಚ್ಚುತ್ತಿರುವುದೂ, ಸ್ವಲ್ಪ ಸ್ವಲ್ಪ ಕಾಲದ ಮಟ್ಟಿಗೆ ಕಷ್ಟ ಬಂದರೂ ಅದನ್ನು ಅವರು ನೀಸಲಾರದೆ ಇರುವುದೂ ಎಲ್ಲರಿಗೂ ತಿಳಿದೇ ಇದೆ. ಮುಖ್ಯವಾಗಿ ಕಳೆದ ಎರಡು ಸಲದ ಅನಾವೃಷ್ಟಿಯಿಂದ ತೋಟಗಾರರಿಗೆ ಬಹಳ ಕಷ್ಟವುಂಟಾಗಿದೆ. ಕ್ರಮವಾದ ನೀರು ಸರಬರಾಯಿಯು ತಪ್ಪಿಹೋದ ಪ್ರಯುಕ್ತ ಉಂಟಾದ ನಷ್ಟದಿಂದ ಅವರು ಚೇತರಿಸಿಕೊಳ್ಳಬೇಕಾದರೆ ಇನ್ನೂ ಕೆಲವು ವರ್ಷಗಳು ಬೇಕಾಗುತ್ತವೆ; ಯಾತಕ್ಕೆಂದರೆ ಮರಗಳು ನಿಜವಾಗಿ ಸತ್ತುಹೋಗದೆ ಇದ್ದ ಕಡೆಗಳಲ್ಲಿಯೂ ಕೂಡ ಅವುಗಳ ಜೀವವು ಬಹಳವಾಗಿ ಉಡುಗಿಹೋಗಿ ಇರುವುದರಿಂದ ಇನ್ನೂ ಸ್ವಲ್ಪಕಾಲದವರೆಗೆ ಅವು ಯಾವ ಫಲವನ್ನೂ ಕೊಡಲಾರವು. ಇಂಥಾ ಸ್ಥಿತಿಯಲ್ಲಿ, ಮಲೆನಾಡು ಜನಗಳು ಬಹುಕಾಲದಿಂದ ಚಿಂತಾಕ್ರಾಂತರಾಗಿ ನಿರೀಕ್ಷಿಸುತ್ತಿದ್ದ ಸಹಾಯವನ್ನು ಮಾಡುವುದಕ್ಕೆ ತಡವಾದರೆ ಕಷ್ಟವು ಮತ್ತಷ್ಟು ವಿಶೇಷವಾಗಿ ಹೆಚ್ಚುವುದೆಂದು ಸರ್ಕಾರದವರು ದೃಢವಾಗಿ ನಂಬುತ್ತಾರೆ.

3. ಕಾರ್ಯಸಾಧಕವಾದ ಸಹಾಯ ಮಾಡಲು ಯತ್ನಿಸುವುದಕ್ಕೆ ಇದುವರೆಗೆ ಅಡ್ಡಿಯಾಗಿದ್ದ ಮುಖ್ಯವಾದ ಕಷ್ಟವು ಯಾವುದೆಂದರೆ — ಈ ಬಾಬಿನಿಂದ ಭಾರಿ ಹುಟ್ಟುವಳಿಯು (ವರ್ಷ ಒಂದಕ್ಕೆ ಸುಮಾರು 3½ ಲಕ್ಷ) ಆಗುತ್ತಿತ್ತು. ಹಿಂದಿನ ಆದಾಯವ್ಯಯದ ಸ್ಥಿತಿಯಲ್ಲಿ ಮೇಲ್ಕಂಡ ಭಾರಿ ಮೊಬಲಗನ್ನು ಬಿಟ್ಟುಬಿಡುವುದರಿಂದ ಸರ್ಕಾರಕ್ಕೆ ಕಷ್ಟವಾಗುವದೆಂದು ತೋರಿತು. ಶ್ರೀಮನ್ಮಹಾರಾಜರವರ ಸರ್ಕಾರದವರು ಈಚೆಗೆ ಈ ವಿಷಯಕ್ಕೆ ಚೆನ್ನಾಗಿ ಪ್ರವೇಶಿಸಿ ಈಗಿನ ಆದಾಯವ್ಯಯದ ಸ್ಥಿತಿಯನ್ನೂ ಮುಂದಿನ ಆಪೇಕ್ಷೆಗಳನ್ನೂ (ನಾನಾ ಇಲಾಖೆಗಳ ಖರ್ಚು ಕಡಮೆಯ ವಿಷಯದಲ್ಲಿ ಆಗಲೆ ಜಾರಿಗೆ ಬರುತ್ತಿರುವ ತಿದ್ದುಪಾಟುಗಳು ಮೊದಲಾದ) ಸಾಮಾನ್ಯವಾಗಿ ಆದಾಯ ವ್ಯಯಗಳನ್ನು ಭದ್ರವಾದ ಸ್ಥಿತಿಯಲ್ಲಿ ಇಡುವುದಕ್ಕೆ ಅವಶ್ಯವಾದ ನಿರ್ವಾಹಗಳನ್ನೂ ವಿಚಾರಮಾಡಿ ಆದಾಯವ್ಯಯದ ಸ್ಥಿತಿಗೆ ವಿಶೇಷ ತೊಂದರೆಯಿಲ್ಲದೆ ಹಾಳತದ ಎಲ್ಲಾ ಹುಟ್ಟುವಳಿಯನ್ನೂ ತಾವು ಈಗ ಸುಖವಾಗಿ ಬಿಟ್ಟುಬಿಡಬಹುದೆಂಬ ತೀರ್ಮಾನಕ್ಕೆ ಬಂದಿರುತ್ತಾರೆ.

4. ಆದುದರಿಂದ, 1907—1908ನೆ ಸರ್ಕಾರಿ ವರ್ಷ ಮೊದಲುಗೊಂಡು ಅಡಕೆಯ (ಸುಪಾರಿ) ಮೇಲಿನ ಹಾಳತವನ್ನು ತೆಗೆದುಹಾಕಲಾಗುವುದೆಂದು ಸರ್ಕಾರದವರು ಅತ್ಯಂತ ಸಂತೋಷದಿಂದ ತಿಳಿಸುತ್ತಾರೆ. ಹಾಗೆಯೇ ಬಾಗಾಯಿತು ಜಮೀನುಗಳ ಕಂದಾಯಕ್ಕೆ ಸುಮಾರು ಸಮವಾಗಿರುವಷ್ಟು ಮೊಬಲಗನ್ನು ಮನ್ನಿಸುವ ಈ ಏರ್ಪಾಡಿನಿಂದ ತೋಟಗಾರರಿಗೆ ಉಂಟಾಗುವ ಅಪರಿಮಿತವಾದ ಪ್ರಯೋಜನವನ್ನು ದೃಷ್ಟಿಯಲ್ಲಿಟ್ಟುಕೊಂಡು ಅಡಕೆ ಸಾಗುವಳಿ, ಅಡಕೆ ಮರಕ್ಕೆ ತಗುಲಬಹುದಾದ ರೋಗಗಳು ಮೊದಲಾದ ಅಡಕೆ ತೋಟಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಶಾಸ್ತ್ರೀಯವಾಗಿ ವಿಚಾರ ಮಾಡುವುದಕ್ಕಾಗಿ ಒಂದು ಮೂಲಧನವನ್ನು ಏರ್ಪಡಿಸುವುದಕ್ಕೋಸ್ಕರ ಒಂದು ಚಿಕ್ಕ ವರಿಯನ್ನು ಕೊಡುವಂತೆ ತೋಟಗಾರರನ್ನು ಕೇಳಬೇಕೆಂದು ಸರ್ಕಾರದವರು ಅಪ್ಪಣೆ ಮಾಡುತ್ತಾರೆ. ಸದರಿ ವರಿಯನ್ನು ಪ್ರಕೃತದಲ್ಲಿ ಅಡಕೆತೋಟದ ಜಮೀನುಗಳ ಮೇಲಿನ ಕಂದಾಯಕ್ಕೆ ಅನುಗುಣವಾಗಿ ರೂಪಾಯಿಗೆ ಒಂದಾಣೆಯಂತೆ ಗೊತ್ತು ಮಾಡಿ ಅದರ ಹುಟ್ಟುವಳಿಯನ್ನು ಮೇಲ್ಕಂಡ ವಿಶೇಷ ಕಾರ್ಯಕ್ಕಾಗಿ ಪ್ರತ್ಯೇಕವಾಗಿ ಇಡಲಾಗುವುದು. ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರುಗಳು ಸರ್ವೆ ಇಲಾಖೆಗೆ ಬರೆದು ಈ ಹುಕುಮನ್ನು ಜಾರಿಗೆ ತರಲು ಅವಶ್ಯವಾದ ಕೆಲಸವನ್ನು ಮಾಡಬೇಕೆಂದು ಕೋರಿ ಇದೆ.

5. ಹಾಳತದ ವಸೂಲಾತಿಯ ಕೆಲಸದಲ್ಲಿ ಇಟ್ಟಿರುವ ಸಿಬ್ಬಂದಿಗಳನ್ನು 1907ನೆ ಜುಲೈ 1ನೆ ತಾರೀಖಿನಿಂದ ತೆಗೆದುಹಾಕಲಾಗುವುದು. ಆದಾಗ್ಯೂ ಡೆಪ್ಯುಟಿ ಕಮಿಷನರುಗಳು ಕೆಲಸದಿಂದ ತೆಗೆದುಹಾಕಲ್ಪಟ್ಟವರಲ್ಲಿ ಸಾಧ್ಯವಾದಷ್ಟು ಮಂದಿ ಜನಗಳಿಗೆ ಕ್ಷವಿನ್ನೂ ಅಥವಾ ಇತರ ಇಲಾಖೆಗಳಲ್ಲಿ ಕೆಲಸಗಳನ್ನು ದೊರಕಿಸಿಕೊಡಲು ಪ್ರಯತ್ನ ಮಾಡತಕ್ಕದ್ದು. ಆದರೆ ಯಾರು ಇತರ ಕೆಲಸಕ್ಕೆ ತಕ್ಕವರಾಗಿಲ್ಲದೆ ಇದ್ದಾರೆಯೋ ಅಥವಾ ಯಾರಿಗೆ ಕೆಲಸ ಸಿಕ್ಕಲಾರದೊ ಅಂಥವರನ್ನೆಲ್ಲಾ ಅವರಿಗೆ ಹಕ್ಕು ಬರಬಹುದಾದ ಕಾಂಪೆನ್ಸೇಷನ್ ಅಥವಾ ಇತರ ಪೆನ್ಷನ್ ಅಥವಾ ಗ್ರಾಟ್ಯುಯಿಟಿ ಮೇಲೆ ಕೆಲಸದಿಂದ ನಿವೃತ್ತಿ ಮಾಡಲಾಗುವುದು.

6. ಈಗ ಕಟ್ಟೆಗಳಾಗಿ ಉಪಯೋಗಿಸಲ್ಪಡುತ್ತಿರುವ ಕಟ್ಟಡಗಳ ಮುಂದಿನ ಉಪಯೋಗದ ವಿಷಯದಲ್ಲಿ ಡೆಪ್ಯುಟಿ ಕಮಿಷನರುಗಳ ಸಲಹೆಗಳನ್ನು ನಿರೀಕ್ಷಿಸಲಾಗುವುದು.

ಅಪ್ಪಣೆಯ ಮೇರೆಗೆ,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಸರ್ಕಾರಿ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.

ಪರಿಸಿಷ್ಟ.

ಅಡಕೆ (ಸುಪಾರಿ) ಹಾಳತದ ಚರಿತ್ರಸಂಗ್ರಹ.

ಮೈಸೂರು, ಬ್ರಿಟಿಷ್ ಆಳ್ವಿಕೆಗೆ ಹೋದ 1831ನೇ ವರ್ಷಕ್ಕೆ ಮುಂಚೆ, ಜನಗಳ ಆಹಾರ ಧಾನ್ಯಗಳು, ಹತ್ತಿ, ಮೆಣಸು ಮೊದಲಾದುವುಗಳು ಸೇರಿ ಸುಮಾರು 550 ಪದಾರ್ಥಗಳು ಸಾಯರು ಹಾಸಲೆಂದು ಕರೆಯಲ್ಪಡುವ ಸುಂಕದ ಮಾವತಿಗೆ ಒಳಪಟ್ಟಿದ್ದವು. ಸಾಯರು ಸುಂಕಕ್ಕೆ ಗುರಿಯಾಗಿದ್ದ ಪದಾರ್ಥಗಳು ಈ ಸಂಸ್ಥಾನದಲ್ಲಿ ಕರಗುಪಡಿಯಾಗಲಿ ಅಥವಾ ಹೊರಗೆ ರಫ್ತಾಗಲಿ ಸುಂಕವನ್ನು ತೆರುತ್ತಿದ್ದವು. ಯಾವುದರ ಮೇಲೆ ಸುಂಕವು ವಸೂಲ್ಮಾಡಲ್ಪಟ್ಟಿತೊ ಆ ಪದಾರ್ಥವು ಹೋಗಿ ಸೇರುವ ಸ್ಥಳಕ್ಕೆ ಅನುಗುಣವಾಗಿ ಸುಂಕವು ಸಾಯರು ಹಾಸಲಾಗಿ, ಅಥವಾ ಬಾರಾಮಾರ್ಗದ ಹಾಸಲಾಗಿ ಅಥವಾ ಭರ್ತಿ ಹಾಸಲಾಗಿ ವಸೂಲಾಗುತ್ತಿತ್ತು. ಬಾರಾಮಾರ್ಗದ ಹಾಸಲು ಸುಮಾರು ಅರುವತ್ತು ವರ್ಷಗಳ ಹಿಂದೆ ತೆಗೆದುಹಾಕಲ್ಪಟ್ಟಿತು ಮತ್ತು ಸುಂಕಕ್ಕೆ ಗುರಿಯಾಗಿದ್ದ ಪದಾರ್ಥಗಳ ಸಂಖ್ಯೆಯು ಕ್ರಮವಾಗಿ ಕಡಮೆಯಾಗಿ ಕಡೆಗೆ 1885ನೆ ವರ್ಷದಿಂದ ಅಡಕೆ ಒಂದು ಪದಾರ್ಥದ ಮೇಲೆಯೇ ಸಾಯರು ಹಾಸಲು ವಸೂಲಾಗುತ್ತಾ ಇದೆ. 1875ನೆ ವರ್ಷಕ್ಕೆ ಮುಂಚಿನವರೆಗೆ ಫಸಲಿನ ತರಕ್ಕನುಗುಣವಾಗಿ 24 ತೊಲೆಯ 40 ಸೇರಿನ ಮಣ ಒಂದಕ್ಕೆ 6 ಆಣೆ ಲಾಗಾಯಿತು ರೂ. 1-4 ಆಣೆ ವರೆಗೆ ಸುಂಕವು ವಸೂಲಾಗುತ್ತಿದ್ದು ಆ ವರ್ಷದಲ್ಲಿ ಮಣ ಒಂದಕ್ಕೆ 12 ಆಣೆಯಂತೆ ಏಕರೀತಿಯಾದ ದರದ ಸುಂಕವು ಗೊತ್ತುಮಾಡಲ್ಪಟ್ಟಿತು. ಈ ದರದ ಸುಂಕವೇ ಈಗಲೂ ವಸೂಲಾಗುತ್ತಿದೆ. 1863-64ನೆ ವರ್ಷದಲ್ಲಿ ಸಾಯರಿಂದ 11 ಲಕ್ಷ ರೂಪಾಯಿಗೆ ಮೀರಿ ಹುಟ್ಟುವಳಿಯಾಯಿತು. ಅದರ ವಸೂಲಾತಿಯ ಸಿಬ್ಬಂದಿಗೆ 1 ಲಕ್ಷಕ್ಕೆ ಮೀರಿ ಖರ್ಚಾಯಿತು. ಅನೇಕ ಪದಾರ್ಥಗಳ ಮೇಲಿನ ಸಾಯರು ಸುಂಕವನ್ನು ಕ್ರಮೇಣ ತೆಗೆದುಹಾಕುವುದರಿಂದ ಸಾಯರು ಹುಟ್ಟುವಳಿಯು ಸುಮಾರು 3½ ಲಕ್ಷಕ್ಕೆ ಇಳಿಯಿತು; ಅದರ ವಸೂಲಾತಿಯ ಸಿಬ್ಬಂದಿಗೆ ವರ್ಷ ಒಂದಕ್ಕೆ 11,676 ರೂಪಾಯಿ ಖರ್ಚಾಗುತ್ತಿದೆ.

2. ಈ ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ ಅವುಗಳಲ್ಲಿ ಮುಖ್ಯವಾಗಿ ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳ ಮಲೆನಾಡು ತಾಲ್ಲೂಕುಗಳಲ್ಲಿಯೂ ತುಮಕೂರು ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿಯೂ ಇರುವ ತೋಟಗಳಲ್ಲಿ ಅಡಕೆಯು ಪೈರಾಗುತ್ತದೆ. ಈ ಪ್ರದೇಶಗಳಲ್ಲಿ ವಿನಾ ಸಾಯರು ಹುಟ್ಟುವಳಿಯು ಗ್ರಾಮದ ಪಟೇಲನ ಮತ್ತು ರೆವಿನ್ಯೂ ಇಲಾಖೆಯ ಕೆಳಗಿನ ಉದ್ಯೋಗಸ್ಥರ ಮೂಲಕ ವಸೂಲಾಗುತ್ತದೆ. ಆದರೆ, ಭಾರಿ ಹುಟ್ಟುವಳಿಯು ವಸೂಲಾಗಬೇಕಾಗಿರುವ ಕಡೂರು, ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿಯೂ ತುಮಕೂರು ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿಯೂ ಅದಕ್ಕೆ ಪ್ರತ್ಯೇಕವಾದ ಸಿಬ್ಬಂದಿ ಇದೆ. ಆ ಸಿಬ್ಬಂದಿಗೆ ಸೇರಿದವರಿಗೆ ತಿಂಗಳಿಗೆ 5ರ ಲಾಗಾಯಿತು 15 ರೂಪಾಯಿನ ವರೆಗೆ ಸಂಬಳ ಸಲ್ಲುತ್ತದೆ.

3. ಮೈಸೂರು ದೇಶದಲ್ಲಿ ಬೆಳೆವ ಅಡಕೆಯಲ್ಲಿ ಬಹಳ ಭಾಗವು ಅಡಕೆ ವ್ಯಾಪಾರಕ್ಕೆ ಮುಖ್ಯಸ್ಥಳವಾದ ಬಳ್ಳಾರಿಗೆ ಹೋಗುತ್ತದೆ. ಕಡೂರು, ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ರೈತನು ತನ್ನ ಫಸಲನ್ನು (ಮೈಸೂರು ಸಂಸ್ಥಾನ) ಬೀರೂರಿನಲ್ಲಿ ಅಥವಾ ಬಳ್ಳಾರಿಯಲ್ಲಿರುವ ಒಬ್ಬ ವರ್ತಕನಿಗೆ ನೇರಾಗಿ ಅಥವಾ ದಳ್ಳಾಳಿಯ ಮೂಲಕ ಮಾರುತ್ತಾನೆ. ಪ್ರತಿ ಸಂದರ್ಭದಲ್ಲಿಯೂ ಅಡಕೆಯನ್ನು ಸಾಗಿಸುವಾಗ ಸಾಯರು ಕಟ್ಟೆಗೆ ಅದನ್ನು ತೆಗೆದುಕೊಂಡು ಹೋಗಬೇಕಾಗಿದೆ. ಅಲ್ಲಿ ಅದು ತೂಕವಾಗಿ ಹಾಳತವು ವಸೂಲಾಗಿ ರಹದಾರಿ ಕೊಟ್ಟನಂತರ ರಹದಾರಿಸಹಿ ಅದನ್ನು ಸಾಗಿಸಬಹುದು. ರೈತನು ತನ್ನ ಫಸಲನ್ನು ನೇರಾಗಿ ವರ್ತಕನ ಬಳಿಗೆ ತೆಗೆದುಕೊಂಡು ಹೋದರೆ ಮೊದಲು ಅವನೇ ಹಾಳತವನ್ನು ಕೊಡುತ್ತಾನೆ. ಆದರೆ ಉತ್ಪತ್ತಿಯ ಸ್ಥಳದಲ್ಲೇ ದಳ್ಳಾಳಿಯು ಅವನಿಂದ ಖರೀದಿಗೆ ತೆಗೆದುಕೊಂಡರೆ ದಳ್ಳಾಳಿಯೇ ಮೊದಲು ಹಾಳತವನ್ನು ಕೊಡುತ್ತಾನೆ.

4. ಮೈಸೂರಿನ ಅಡಕೆಗೆ ಮಾತ್ರ ಹಾಳತವನ್ನು ಕೊಡಬೇಕೆಂದು ಇಲ್ಲಿ ಹೇಳಬೇಕಾಗಿದೆ. ಹೊರಗಿನಿಂದ ಸಂಸ್ಥಾನದೊಳಕ್ಕೆ ತಂದ ಅಡಕೆಯು ಸುಂಕಕ್ಕೆ ಒಳಪಟ್ಟಿಲ್ಲ. ಅನ್ಯದೇಶದ ಅಡಕೆಯು ಮೈಸೂರು ಸಂಸ್ಥಾನಕ್ಕೆ ಪ್ರವೇಶಿಸಿದ ಕೂಡಲೆ ಅದನ್ನು ಸಮೀಪಸ್ಥವಾದ ಸಾಯರು ಕಟ್ಟೆಗೆ ತೆಗೆದುಕೊಂಡುಹೋಗಿ ಅಲ್ಲಿ ಅದಕ್ಕೆ ಒಂದು ಮಾಫಿ ರಹದಾರಿಯನ್ನು ಕೊಟ್ಟ ತರುವಾಯ ಅಂಥಾ ರಹದಾರಿಸಹಿ ಅದನ್ನು ಎಲ್ಲಿಗೆ ಬೇಕಾದರೂ ಸಾಗಿಸಬಹುದು. ಅನ್ಯದೇಶದ ಪದಾರ್ಥವನ್ನು ಹೀಗೆ ಸುಂಕದಿಂದ ವಿನಾಯಿಸಿರುವುದು ಸಹಜವಾಗಿ ಮೈಸೂರು ಫಸಲನ್ನು ಮೈಸೂರು ಗಡಿಯ ಆಚೆಗೆ ಕಳ್ಳತನದಿಂದ ತೆಗೆದುಕೊಂಡುಹೋಗಿ ಅದನ್ನು ಅಲ್ಲಿ ಎಲೆವಾರಿ ಹುಟ್ಟಿಸುವುದಕ್ಕೂ ಅಥವಾ ಅದನ್ನು ಅನ್ಯದೇಶದ ಫಸಲಿನೋಪಾದಿಯಲ್ಲಿ ಸಂಸ್ಥಾನದೊಳಕ್ಕೆ ವಾಪಸು ತರುವುದಕ್ಕೂ ಕಾರಣವಾಗಿದೆ. ಗಡಿಗಳಲ್ಲಿರುವ ತಾಲ್ಲೂಕುಗಳಲ್ಲಿ ಸ್ವಲ್ಪಮಟ್ಟಿಗೆ ಕಳ್ಳವ್ಯಾಪಾರವು ನಡೆಯುತ್ತಿರುವುದಾಗಿ ನಂಬಲ್ಪಟ್ಟಿದೆ. ಕಳ್ಳವ್ಯಾಪಾರವನ್ನು ತಪ್ಪಿಸುವುದಕ್ಕಾಗಿ ಪ್ರತ್ಯೇಕವಾದ ಸಾಯರು ಸಿಬ್ಬಂದಿಯ ಒಂದು ಭಾಗವನ್ನು ಗಡಿಯಲ್ಲಿ ಅಂಥಾ ತಪ್ಪಿಸುವ ಕೆಲಸಕ್ಕೆ ನೇಮಿಸಿ ಇದೆ.

.5 ಆದರೆ ಅಡಕೆ ಫಸಲಿನ ಕಟಾವಿಗೂ ಅದರ ಎಲೆವಾರಿಗೂ ಸಂಬಂಧಪಟ್ಟು ತೋಟಗಾರರಿಗೆ ಮಾಡಿರುವ ನಿರ್ಬಂಧವೇ ಕಳ್ಳವ್ಯಾಪಾರಕ್ಕೆ ಮುಖ್ಯವಾದ ಅಡ್ಡಿಯ ಏರ್ಪಾಡಾಗಿದೆ. ಕಟಾವಿನ ಕಾಲಕ್ಕೆ ಸ್ವಲ್ಪ ಮುಂಚೆ ಸಾಯರು ನೌಕರರು ಪ್ರತಿ ತೋಟವನ್ನೂ ಅಜಮಾಯಿಷಿ ಮಾಡಿ ಆಗಬಹುದಾದ ಉತ್ಪತ್ತಿಯನ್ನು ಅಂದಾಜುಮಾಡಿ ಪ್ರತಿ ತೋಟದ ಅಂದಾಜನ್ನೂ ಮುಂದಿನ ದಾಖ

ಲೆಬಗ್ಗೆ ಪಟೇಲನಿಂದ ಇಡಲ್ಪಟ್ಟಿರುವ ಒಂದು ರಿಜಿಸ್ಟರಿನಲ್ಲಿ ಬರೆದುಕೊಳ್ಳುತ್ತಾರೆ. ಫಸಲನ್ನು ಕಟಾವು ಮಾಡುವುದಕ್ಕೆ ಮುಂಚೆ ತೋಟಗಾರನು ಹಾಗೆ ಮಾಡಬೇಕೆಂಬ ತನ್ನ ಉದ್ದೇಶವನ್ನು ಪಟೇಲನಿಗೆ ತಿಳಿಸುತ್ತಾನೆ. ಪಟೇಲನು ಒಂದು ರಹದಾರಿ ಚೀಟಿಯನ್ನು ಕೊಟ್ಟು, ತಾನು ಬಂದು ಫಸಲನ್ನು ಅಳೆಯುವುದಕ್ಕೆ ಮುಂಚೆ ಅದನ್ನು ತೋಟದಿಂದ ಸಾಗಿಸಕೂಡದೆಂದು ತೋಟಗಾರನನ್ನು ಆಗಲೆ ಎಚ್ಚರಿಸುತ್ತಾನೆ. ಈ ರಹದಾರಿಯ ಅಧಿಕಾರದ ಮೇಲೆ ಅಡಕೆಗೊನೆಗಳನ್ನು ಜಮಾಯಿಸಿ ಗೊನೆಯಿಂದ ಕಾಯನ್ನು ಬಿಡಿಸಿ ಆಗ ಪಟೇಲನಿಗೆ ವರ್ತಮಾನ ಕೊಡುತ್ತಾರೆ. ಅವನು ತೋಟಕ್ಕೆ ಹೋಗಿ ಅಡಕೆಕಾಯನ್ನು ಅಳೆದು ಅದರಿಂದ ಎಷ್ಟು ಅಡಕೆ ತಯಾರಾಗಬಹುದೊ ಅದನ್ನು ಅಂದಾಜುಮಾಡಿ ಈ ತಪಶೀಲುಗಳನ್ನು ರಹದಾರಿಯಲ್ಲಿ ಬರೆದು ಮಾರಾಟಕ್ಕೆ ಅಡಕೆಯನ್ನು ತಯಾರ್ಮಾಡಲು ತೋಟಗಾರನಿಗೆ ಅಪ್ಪಣೆಕೊಡುತ್ತಾನೆ. ಕೊನೆಯಲ್ಲಿ ಅಡಕೆಯು ತಯಾರಾದಾಗ ಪಟೇಲನೂ ಸಾಯರು ನೌಕರರೂ ಅದನ್ನು ಮತ್ತೊಂದಾವರ್ತಿ ತೂಕಮಾಡಿ ನಿಜವಾಗಿ ಆದ ಒಟ್ಟು ಉತ್ಪತ್ತಿಯನ್ನು ಒಂದು ಪಟ್ಟಿಯಲ್ಲಿ ಬರೆದು ಅದನ್ನು ತೋಟಗಾರನಿಗೆ ಕೊಡುತ್ತಾರೆ. ಪ್ರತಿ ತೋಟಗಾರನ ಬಳಿಯಲ್ಲಿಯೂ ಇರುವ ಅಡಕೆಯ ದಾಸ್ತಾನನ್ನು ತೋರಿಸುವ ಒಂದು ರಿಜಿಸ್ಟರು ಪಟೇಲನ ಬಳಿಯಲ್ಲಿ ಇಡಲ್ಪಡುತ್ತದೆ. ಮನೆಯ ಬಳಕೆಗಾಗಿ ಮಾಫಿಯಾಗಿ ಬಿಡಲ್ಪಡುವ ಸ್ವಲ್ಪ ಅಡಕೆ ಹೋಗಲಾಗಿ ರಿಜಿಸ್ಟರಿನಲ್ಲಿ ತೋರಿಸಿರುವ ಅಡಕೆಯ ಪ್ರಮಾಣಕ್ಕೆ ತೋಟಗಾರನು ಜವಾಬ್ದಾರನಾಗಿರುತ್ತಾನೆ. ಅಡಕೆಯಲ್ಲಿ ಯಾವ ಭಾಗವಾದರೂ ಮಾರಲ್ಪಟ್ಟಾಗ ಮಾರಲ್ಪಟ್ಟ ಪ್ರಮಾಣವು ಪಟೇಲನ ಬಳಿ ಇರುವ ರಿಜಿಸ್ಟರಿನಲ್ಲಿ ತೋರಿಸಲ್ಪಡುತ್ತದೆ. ಕೈಯಲ್ಲಿರುವ ದಾಸ್ತಾನು ಆಗಾಗ್ಯೆ ಅಜಮಾಯಿಷಿ ಮಾಡಲ್ಪಡುತ್ತದೆ ಮತ್ತು ಅದು ರಿಜಿಸ್ಟರಿನ ಪ್ರಕಾರದ ನಿಲ್ವಳಿ ಶಿಲ್ಕಿಗೆ ಸರಿಯಾಗಿ ಇಲ್ಲದೆ ಇದ್ದರೆ ಹಾಗೆ ಬಿದ್ದ ಕಡಮೆಗೆ ತೋಟಗಾರನು ಜವಾಬ್ದಾರನಾಗಿ ಮಾಡಲ್ಪಡುತ್ತಾನೆ. ರೈತನ ಗ್ರಾಮದಿಂದ ಅಡಕೆಯು ಸಾಗಿಸಲ್ಪಡುವಾಗಲೆ ಸಾಯರು ಕಟ್ಟೆಯಲ್ಲಿ ಹಾಳತವು ವಸೂಲ್ಮಾಡಲ್ಪಡುತ್ತದೆ.

6. ಮೇಲ್ಕಂಡ ಕ್ರಮದಿಂದ ರೈತನಿಗೆ ಬಹಳ ತೊಂದರೆ ಉಂಟಾಗುವುದಾಗಿ ಯಾವಾಗಲೂ ಒಪ್ಪಿಕೊಳ್ಳಲ್ಪಟ್ಟಿದೆ. ಈ ಕ್ರಮವು ಸರ್ಕಾರಿ ಕೀಳ್ ನೌಕರರೂ, ಗ್ರಾಮದ ಪಟೇಲನೂ, ನಿರಂತರವಾಗಿ ರೈತನ (1) ಕೊಯ್ಲಿನ ಕೆಲಸಗಳಲ್ಲಿಯೂ (2) ಗಿರಾಕಿಗಳ ಸಂಗಡ ವ್ಯಾಪಾರದಲ್ಲಿಯೂ, (3) ದಾಸ್ತಾನು ವಿಚಾರವಾಗಿಯೂ ಅವನ ತಂಟೆಗೆ ಹೋಗುವುದಕ್ಕೂ ನಾನಾರೀತಿಯಲ್ಲಿ ಅವನನ್ನು ಹಿಂಸಿಸುವುದಕ್ಕೂ ಅವರಿಗೆ ಅನೇಕ ಅವಕಾಶಗಳನ್ನು ಕೊಡುತ್ತದೆ. ಆದುದರಿಂದ ಅಡಕೆಯ ಹಾಳತವು ಬೇಸರಗೊಳಿಸುವುದಾಗಿಯೂ, ಪೀಡಿಸುವುದಾಗಿಯೂ ಅತಿ ವಿಚಾರಣೆಗೆ ಅಥವಾ ದಂಡನೆಗೆ ಒಳಪಡಿಸುವುದಾಗಿಯೂ ಇದೆಯೆಂದು ರೆವಿನ್ಯೂ ಆಫಿಸರುಗಳಿಂದ ಸಾಮಾನ್ಯವಾಗಿ ವಿವರಿಸಲ್ಪಟ್ಟಿದೆ ; ಸಾಯರು ಹುಟ್ಟುವಳಿಯ ರೂಪವಾಗಿ ಸರಕಾರಕ್ಕೆ ಬರುವ ಮೂರುವರೆ ಲಕ್ಷಕ್ಕೋಸ್ಕರ ಅದಕ್ಕಿಂತ ಬಹಳ ಹೆಚ್ಚಾದಷ್ಟು ಮೊಬಲಗು ನಿಜವಾಗಿ ರೈತರ ಕೈಬಿಟ್ಟು ಹೋಗುವುದಾಗಿ ಬಹಳ ಅನುಭವಶಾಲಿಗಳಾದ ಕೆಲವು ಆಫಿಸರುಗಳು ಅಭಿಪ್ರಾಯ ಪಡುತ್ತಾರೆ.

7. ಈಗ್ಗೆ ಈ ಗುರುವಾದ ಭಾರವು ಯಾರ ಮೇಲೆ ಬೀಳುತ್ತದೆಯೋ ಅಂಥಾ ಜನಗಳು ಅದನ್ನು ತಾಳುವುದಕ್ಕೆ ಅತ್ಯಂತ ಬಲಹೀನರಾಗಿರುವುದಾಗಿ ಎಲ್ಲರೂ ಒಪ್ಪಿಕೊಳ್ಳುತ್ತಾರೆ ; ನಿರ್ಣಯಿಸಲು ಅರ್ಹರಾಗಿರುವವರು ಈ ಅಡಕೆ ತೋಟಗಳಿಗೆ ಬಹಳ ಭಾರಿ ಕಂದಾಯ ಬಿದ್ದಿರುವುದಾಗಿ ಅಭಿಪ್ರಾಯ ಪಡುತ್ತಾರೆ. ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟಿನ ನೆರೆಯ ತಾಲ್ಲೂಕುಗಳಲ್ಲಿ ಇರುವ 15 ರೂಪಾಯಿಗೆ ಪ್ರತಿಯಾಗಿ ಇಲ್ಲಿನ ಪರಮಾವಧಿಯ ಕಂದಾಯದ ದರವು ಎಕರೆ ಒಂದಕ್ಕೆ 28 ರೂಪಾಯಿನಷ್ಟು ಭಾರಿಯಾಗಿದೆ. ಸಾಯರಿನಿಂದ ಎಕರೆ ಒಂದಕ್ಕೆ ಮತ್ತೆ 13 ರೂಪಾಯಿ ಕಂದಾಯ ಬೀಳುತ್ತದೆ. ಕಳೆದ ಕೆಲವು ದಶಕಗಳಿಗೆ ಈ ತೋಟಗಳಿಗಾಗಿ ಕೊಟ್ಟ ಅತಿ ಅಧಿಕವಾದ ಕಂದಾಯದಿಂದಲೊ ಅಥವಾ ಅದಿಲ್ಲದೆಯೊ ಬಹಳ ಮಂದಿ ಮಲೆನಾಡಿನ ತೋಟಗಾರರು ಅನೇಕ ವರ್ಷಗಳಿಂದ ಸಾಹುಕಾರರ ಹಿಡಿತಕ್ಕೆ ಸಿಕ್ಕಿಕೊಂಡಿದಾರೆ. ಇದಲ್ಲದೆ ಫಲಗಳು ಉಳಿದುಹೋದುದರಿಂದಲೂ, ಮರಗಳಿಗೆ ತಗುಲಿ ಪೈರನ್ನು ನಾಶಮಾಡುವ ಕೊಳೆ ರೋಗದಿಂದಲೂ, ವರ್ಷೇ ವರ್ಷೇ ಮಳೆ ಸಾಲದೆ ಇರುವುದರಿಂದಲೂ ತೋಟಗಾರರು ಬಹಳ ಕಷ್ಟಪಟ್ಟಿದಾರೆ. ಸಾಧಾರಣವಾದ ತರೀ ಖುಷ್ಕಿ ಜಮೀನುಗಳ ಒಡೆಯನಿಗೆ ಒಂದು ಸಲದ ಅನಾವೃಷ್ಟಿಯಿಂದ ಕೊಂಚಕಾಲದ ಮಟ್ಟಿಗೆ ನಷ್ಟವಾದರೂ ಮುಂದಿನ ವರ್ಷ ಒಳ್ಳೆ ಮಳೆಯಾದರೆ ಸಂಪೂರ್ಣವಾದ ಬೆಳೆಯನ್ನು ಹೊಂದಬಹುದಾಗಿರುವಲ್ಲಿ ಅಡಕೆ ತೋಟಗಾರನಿಗೆ ಒಂದು ವರ್ಷದ ಅನಾವೃಷ್ಟಿಯಿಂದುಂಟಾಗುವ ನಷ್ಟವು ಸ್ಥಿರವಾಗಿರುವುದು ಏತಕೆಂದರೆ ಬಹಳ ಕಷ್ಟದಿಂದಲೂ, ವಿಶೇಷ ಖರ್ಚಿನಿಂದಲೂ, ಸ್ವಮಾರು ಹನ್ನೆರಡು ವರ್ಷಗಳ ವರೆಗೆ ಯಾವ ಪ್ರತಿ ಫಲವೂ ಇಲ್ಲದೆಯೂ ಎಬ್ಬಿಸಿದ ಮರಗಳು ಒಂದು ವರ್ಷ ಮಳೆಯಿಲ್ಲದಿರುವುದರಿಂದ ಸಾಯುತ್ತವೆ. ಅಥವಾ ಮಾರನೆ ವರ್ಷ ಎಷ್ಟುಮಳೆ ಬಿದ್ದರೂ ಸಂಪೂರ್ಣವಾಗಿ ತಿರಿಗಿ ಚೇತರಿಸಿಕೊಳ್ಳಲಾರದಷ್ಟು ಮಟ್ಟಿಗೆ ಸತ್ವವನ್ನು ಕಳೆದುಕೊಳ್ಳುತ್ತವೆ. ಕಳೆದ ವರ್ಷದ ವಿಶೇಷ ಅನಾವೃಷ್ಟಿಯಿಂದ ಸುಮಾರು ಅಡಕೆ ತೋಟಗಳು ತಿರಿಗಿ ನೆಟ್ಟಗಾಗದಷ್ಟು ಹಾನಿಯು ಉಂಟಾಯಿತೆಂದು ಸ್ಥೂಲವಾಗಿ ಹೇಳಬಹುದು. ಈ ಪರಿಯಾದ ವಿದ್ಯಮಾನಗಳಿಂದ ಕಳೆದ ವರ್ಷಗಳಲ್ಲಿ ಅಡಕೆ ತೋಟಗಳು ಸ್ಥಿರವಾಗಿ ಹೀನಸ್ಥಿತಿಗೆ ಬಂದಿರುವುದರಿಂದ ಮಲೆನಾಡಿನ ತೋಟಗಾರರು ಯಾವುದಾದರೂ ಒಂದು ವಿಧವಾದ ಸಹಾಯಕ್ಕೆ ಸಂಪೂರ್ಣವಾಗಿ ಅರ್ಹರಾಗಿರುತ್ತಾರೆಂತು ಅಡಕೆಯ ವ್ಯವಸಾಯವನ್ನು ಬಲ್ಲ ಎಲ್ಲಾ ಆಫಿಸರುಗಳೂ ಅಭಿಪ್ರಾಯಪಡುತ್ತಾರೆ.

8. ಆಗಾಗ್ಗೆ ಸಹಾಯದ ನಾನಾ ಏರ್ಪಾಟುಗಳು ಸೂಚಿಸಲ್ಪಟ್ಟು ಪರ್ಯಾಲೋಚಿಸಲ್ಪಟ್ಟವು. 1891ರಲ್ಲಿ ಈಗಿನ ದಿವಾನರಾದ ಮಿ|| ಮಾಧವರಾಯರು ತೋಟಗಾರರ ಸ್ಥಿತಿಯನ್ನೂ, ತೋಟದ ಕಂದಾಯವು ಯಾರಮೇಲೆ ಬೀಳುತ್ತದೆ ಎಂಬುವುದನ್ನೂ, ಸಾಯರು ಸುಂಕವನ್ನೂ, ಅವುಗಳಿಗೆ ಸಂಬಂಧಪಟ್ಟ ಇತರ ವಿಷಯಗಳನ್ನೂ ವಿಚಾರಮಾಡಿ ರಿಪೋರ್ಟು ಮಾಡುವ ಕೆಲಸಕ್ಕಾಗಿಯೇ ಕಳುಹಿಸಲ್ಪಟ್ಟರು. ಅವರು ತಪಶೀಲುವಾರು ರಿಪೋರ್ಟು ಕಳುಹಿಸಿ ಅದರಲ್ಲಿ (1) ತೋಟದ ಕಂದಾಯವನ್ನು ಕಡಮೆ ಮಾಡಬೇಕು ಮತ್ತು (2) ಸಾಯರನ್ನು ತೆಗೆದುಹಾಕಬೇಕು ಅಥವಾ ಅದರ ದರವನ್ನು ಕಡಮೆ ಮಾಡಬೇಕೆಂದು ಶಿಫಾರಸು ಮಾಡಿದರು. ಆಗ ಸರ್ ಶೇಷಾದ್ರಯ್ಯರವರು ತೋಟದ ಕಂದಾಯವನ್ನು ಸಾಧಾರಣವಾದ ತರೀ ಕಂದಾಯದ ಮಟ್ಟಕ್ಕೆ ಇಳಿಸಬೇಕೆಂದು ಸಾಯರು ಸುಂಕವನ್ನು ತೆಗೆದುಹಾಕಬೇಕೆಂದೂ ಅದಕ್ಕೆ ಬದಲಾಗಿ ಒಂದು ಮರಗಂದಾಯವನ್ನು ಹಾಕಬೇಕೆಂದೂ ಆಲೋಚಿಸಿ ಒಂದು ವಿಕಲ್ಪವಾದ (ಒಂದಲ್ಲದಿದ್ದರೆ ಮತ್ತೊಂದು ಎಂಬ) ಸಲಹೆಯನ್ನು ಕೊಟ್ಟರು. ಬಹಳ ಚರ್ಚೆ ನಡೆದ ತರುವಾಯ ಸಾಯರು

ಸುಂಕದ ತಂಟೆಗೆ ತತ್ಕಾಲಕ್ಕೆ ಹೋಗದೆ ಎಲ್ಲಿ ಕಂದಾಯವು ಅತಿ ಭಾರವಾಗಿ ಬಿದ್ದಿತ್ತೋ ಅಂಥಾ ತಾಲ್ಲೂಕುಗಳಲ್ಲಿ ತೋಟದ ಕಂದಾಯವನ್ನು ಮೂರರಲ್ಲಿ ಒಂದು ಭಾಗದಷ್ಟು ಇಳಿಸಿ ಅದಕ್ಕೆ ದೃಷ್ಟಾಂತವಾಗಿ ಸೊರಬ ತಾಲ್ಲೂಕಿನ ಸಾಧಾರಣವಾದ ದರವನ್ನು ಎಕರೆ ಒಂದಕ್ಕೆ 15 ರೂಪಾಯಿಂದ 10 ರೂಪಾಯಿಗೆ ಇಳಿಸುವ ಹಾಗೆ ಮಾಡಬೇಕೆಂದು 1896ರಲ್ಲಿ ತೀರ್ಮಾನಿಸಲ್ಪಟ್ಟಿತು.

9. ಆದಾಗ್ಯೂ ತೋಟದ ಕಂದಾಯದ ಒಂದು ಭಾಗವನ್ನು ಈ ರೀತಿಯಾಗಿ ಮನ್ನಿಸುವುದರಿಂದ ರೈತನಿಗೆ ನಿಜವಾಗಿ ಎಷ್ಟು ಸಹಾಯವು ಅಗತ್ಯವಾಗಿತ್ತೋ ಅಷ್ಟು ಸಹಾಯವೂ ಪೂರ್ತಿಯಾಗಿ ಅವನಿಗೆ ಉಂಟಾಗಲಿಲ್ಲವೆಂದು ಕಂಡುಬಂತು. ಅಂದಿನ ಸರ್ಕಾರಿ ಆದಾಯ ವ್ಯಯದ ಸ್ಥಿತಿಯು ಸಂಸ್ಥಾನದ ಬೊಕ್ಕಸಕ್ಕೆ 3½ ಲಕ್ಷ ವರಮಾನವನ್ನು ಕೊಡುವ ಬಾಬನ್ನು ಬಿಟ್ಟುಬಿಡುವುದಕ್ಕೆ ಅವಕಾಶಕೊಡದೆ ಹೋದುದೇ ಸಾಯರು ಸುಂಕದ ತಂಟೆಗೆ ಹೋಗಕೂಡದೆಂದು ತೀರ್ಮಾನಿಸುವುದಕ್ಕೆ ಮುಖ್ಯವಾದ ಕಾರಣವಾಗಿತ್ತು. ಆದಾಯವ್ಯಯಗಳು ಸಾಮಾನ್ಯವಾಗಿ ಅಭಿವೃದ್ಧಿಯಾದಾಗ ಸಾಯರು ಸುಂಕವನ್ನು ಒಟ್ಟಿಗೆ ಅಥವಾ ಅದರಲ್ಲಿ ಒಂದು ಭಾಗವನ್ನು ತೆಗೆದುಹಾಕಬೇಕೆಂಬುದಾಗಿ ಸಲಹೆಗಳು ಮಾಡಲ್ಪಟ್ಟುವು. ಎಂಟು ವರ್ಷಗಳ ಹಿಂದೆ ಸರ್. ಪಿ. ಎನ್. ಕೃಷ್ಣಮೂರ್ತಿಯವರು ಸಾಯರು ಹುಟ್ಟುವಳಿಯಲ್ಲಿ ಮೂರರಲ್ಲಿ ಒಂದು ಭಾಗವನ್ನು ಮನ್ನಿಸಿ ಉಳಿದುದನ್ನು ಎಕರೆಗೆ ಇಷ್ಟೆಂದು ವರಿ ಹಾಕಿ ವಸೂಲ್ಮಾಡಬೇಕೆಂದು ಸೂಚಿಸಿದರು. ಆದರೆ ರೈತನು ಈ ಏರ್ಪಾಡನ್ನು ಮೇಲೆ ಹೇಳಿದ ಏರ್ಪಾಡಿಗಿಂತ ಮತ್ತಷ್ಟು ಕಷ್ಟದ್ದಾಗಿರುವುದಾಗಿ ಬಹುಶಃ ಯೋಚಿಸಬಹುದೆಂದು ತೋರುವುದು; ಯಾತಕ್ಕೆಂದರೆ, ಅಂಥಾ ವರಿಯು ಹಾಳತದಹಾಗೆ ನಿಜವಾಗಿ ಆದ ಫಸಲನ್ನು ನೋಡದೆ ಬಹುಶಃ ರೈತನು ತನ್ನ ಫಸಲಿನ ಬೆಲೆಯನ್ನು ಹೊಂದುವ ಕಾಲಕ್ಕೆ ಮುಂಚೆಯೇ ವಸೂಲ್ಮಾಡಲ್ಪಡುವುದು.

10. ಮುಂದೆ ಇನ್ನೂ ಕಡಮೆ ಮಾಡುವುದಕ್ಕೂ ಕೊನೆಗೆ ತೆಗೆದುಹಾಕುವುದಕ್ಕೂ ಪೂರ್ವಭಾವಿಯಾಗಿ ಹಾಳತವನ್ನು ಮಣ ಒಂದಕ್ಕೆ 12 ಆಣೆಯಿಂದ 8 ಆಣೆಗೆ ಸ್ವಲ್ಪಮಟ್ಟಿಗೆ ಇಳಿಸೋಣವು ಈಚೆಗೆ ಪರ್ಯಾಲೋಚನೆಯಲ್ಲಿತ್ತು; ಆದರೆ ಇದು ಈಗಿನ ಕೆಡುಕನ್ನು ಉಂಟುಮಾಡುವ ಪದ್ಧತಿಯನ್ನು ಸರಿಯಾಗಿ ಈಗ ಇರುವ ಸ್ಥಿತಿಯಲ್ಲಿಯೇ ಬಿಡುವುದರಿಂದ ಈ ಸಲಹೆಯನ್ನೂ ಕೂಡ ಬಿಟ್ಟುಬಿಡಲಾಯಿತು. ಈಗ ಒಂದೇಸರ್ತಿಗೆ ಸಂಪೂರ್ಣವಾಗಿ ಸಾಯರು ಸುಂಕವನು ತೆಗೆದುಹಾಕುವುದಾಗಿ ಯೋಚಿಸಿ ಇದೆ.

11. ಎಷ್ಟುದೂರ ಇದು ತೋಟಗಾರರಿಗೆ ಪ್ರಯೋಜನವನ್ನುಂಟುಮಾಡುವುದೋ ಆ ಅಂಶವನ್ನು ಆಲೋಚಿಸಬೇಕಾಗಿದೆ. ಗೂಢವಾದ ಅರ್ಥಶಾಸ್ತ್ರ ಪ್ರಕಾರ ಉತ್ಪತ್ತಿಯ ಖರ್ಚನ್ನು ಹೆಚ್ಚು ಮಾಡುವ ಪ್ರತಿ ಖರ್ಚೂ ಕೊನೆಯಲ್ಲಿ ಪದಾರ್ಥವನ್ನು ಉಪಯೋಗಿಸುವವನಮೇಲೆ ಬೀಳುತ್ತದೆ; ಮತ್ತು ಈ ಉತ್ಪತ್ತಿಯ ಖರ್ಚಿನಲ್ಲಿ ಆಗುವ ಯಾವುದಾದರೂ ಕಡಮೆಯು ಪದಾರ್ಥವನ್ನು ಉಪಯೋಗಿಸುವವನಿಗೆ ಪ್ರಯೋಜನ ಉಂಟಾಗುವ ಹಾಗೆ ಪದಾರ್ಥದ ಬೆಲೆಯನ್ನು ಕಡಮೆ ಮಾಡುತ್ತದೆ. ಗೌರವಾರ್ಹವಾದ ಅಭಿಪ್ರಾಯವುಳ್ಳ ಕೆಲವು ಆಫೀಸರುಗಳು ಹಾಳತವು ನಿಜವಾಗಿ ಫಸಲನ್ನು ಬೆಳೆಯುವವನಮೇಲೆ ಬೀಳುತ್ತದೆಯೆಂದು ಅಭಿಪ್ರಾಯಪಡುತ್ತಾರೆ. ಈ ವಿಷಯದಲ್ಲಿ ಬಹಳ ವಿವಾದವು ನಡೆಯಿತು; ಅದನ್ನು ಕುರಿತು ಬಹಳವಾಗಿ ಬರೆಯಲ್ಪಟ್ಟಿತು. ಇಂಥಾ ವಿಷಯಗಳಲ್ಲಿ ಖಂಡಿತವಾಗಿ ಹೀಗೆ ಸರಿಯೆಂದು ಹೇಳಲು ಕಷ್ಟವಾಗಿದೆ, ಮತ್ತು ಸ್ಪರ್ಧೆಗೆ ಪೂರಾ ಅವಕಾಶವಿದೆ, ಎಂಬ ಮತ್ತು ಪ್ರತಿ ಮನುಷ್ಯನೂ ತನಗೆ ಯಾವುದು ಒಳ್ಳೆಯದೋ ಅದನ್ನು ತಿಳಿದುಕೊಂಡು ಆ ಪ್ರಕಾರ ನಡೆಯುತ್ತಾನೆಂಬ ಊಹೆಯೇ ಅರ್ಥಶಾಸ್ತ್ರದ ಸಿದ್ಧಾಂತಕ್ಕೆ ಆಧಾರವಾಗಿದೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಆದರೆ, ಮಲೆನಾಡಿನ ರೈತನು ತಿಳಿವಳಿಕೆ ಇಲ್ಲದವನೂ ಮತ್ತು ಅನೇಕವೇಳೆ ಬಡವನೂ ಆಗಿದ್ದಾನೆ ಮತ್ತು ಸಂಪೂರ್ಣವಾಗಿ ದಳ್ಳಾಳಿಯ ಕೈಯಲ್ಲಿದ್ದಾನೆ, ಈ ದಳ್ಳಾಳಿಯ ಸಹಾಯವಿಲ್ಲದೆ ಹಾಳತವನ್ನೂ ಕೊಡಲಾರನು ಮತ್ತು ತನ್ನ ಫಸಲನ್ನೂ ಮಾರಾಟಕ್ಕೆ ಕಳುಹಿಸಲಾರನು. ಹಾಳತವನ್ನು ತೆಗೆದುಹಾಕುವುದರಿಂದ ಫಸಲನ್ನು ಬೆಳೆಯುವವನಿಗೆ ದಳ್ಳಾಳಿಯಮೇಲಿನ ಆಶ್ರಯವನ್ನು ಬಹಳವಾಗಿ ಕಡಮೆಮಾಡುವುದಲ್ಲದೆ ಅದರಿಂದ ಅವನಿಗೆ ಗಣನೆಗೆ ಬರುವಷ್ಟು ಸಹಾಯವಾಗುವುದೆಂದು ನಂಬಲು ನಾನಾ ಕಾರಣಗಳಿವೆ.

1 . ಮೈಸೂರು ಅಡಕೆಯು ಪೇಟೆಯಲ್ಲಿರುವವುಗಳಲ್ಲಿ ಉತ್ತಮವಾದುದೆಂದು ಒಪ್ಪಿಕೊಳ್ಳಲ್ಪಟ್ಟಿರುವುದಲ್ಲದೆ ಸಾಮಾನ್ಯವಾಗಿ ಅದಕ್ಕೆ ಇತರ ದೇಶಗಳ ಅಡಕೆಗಿಂತ ಹೆಚ್ಚು ಬೆಲೆ ಸಿಕ್ಕುತ್ತದೆ. ದೇಶಾವಾರವೆಂದು ಕರೆಯಲ್ಪಟ್ಟ ಮೈಸೂರು ದೇಶದಲ್ಲಿ ಉತ್ಪತ್ತಿಯಾಗುವ ಉತ್ಕೃಷ್ಟವಾದ ಅಡಕೆಗೆ ಸಮಾನವಾದುದು ಇಲ್ಲವೇ ಇಲ್ಲ. ಸಂದೇಹವಿಲ್ಲದೆ ಇದರಮೇಲಿನ ಹಾಳತವನ್ನು ಇದನ್ನು ಉಪಯೋಗಿಸುವವನು ಕೊಡುತ್ತಾನೆ. ಮತ್ತು ಈ ವರಿಯನ್ನು ಮನ್ನಿಸುವುದರಿಂದ ಫಸಲನ್ನು ಉತ್ಪತ್ತಿಮಾಡುವವನಿಗೆ ನೇಟಾಗಿ ಪ್ರಯೋಜನವಾಗುವುದಿಲ್ಲ. ಆದರೆ ಕೆಲವು ಕೀಳ್ ತರದ ಅಡಕೆಗಳಿವೆ, ಈಗ ಅವುಗಳ ಮೇಲಿನ ಹಾಳತದ ದೆಸೆಯಿಂದ ಅವುಗಳು ನಿಜವಾಗಿ ವಿಕ್ರಯವಾಗಲು ಸಾಧ್ಯವಿಲ್ಲ. 1875ಕ್ಕೆ ಮುಂಚೆ ಬೇರೆ ಬೇರೆ ತರದ ಅಡಕೆಗಳಿಗೆ 6 ಆಣೆ, 12 ಆಣೆ ಮತ್ತು 1 ರೂಪಾಯಿ 4 ಆಣೆಯ ಸಾಯರು ದರಗಳಿದ್ದುವು. ಏಕರೀತಿಯಾದ 12 ಆಣೆ ದರವು ನಿಸ್ಸಂದೇಹವಾಗಿ ಕೀಳ್ ತರದ ಅಡಕೆಗಳಿಗೆ ಬಹಳ ಬಾಧಕವಾಯಿತು. ಹಾಳತವನ್ನು ತೆಗೆದುಹಾಕೋಣದರಿಂದ ಕೀಳ್ ತರದ ಅಡಕೆಯ ಮಾರಾಟವು ಒಡನೇ ಅಭಿವೃದ್ಧಿಯಾಗಿ ತನ್ಮೂಲಕ ಪ್ರಾಯಶಃ ಪೈರು ಬೆಳೆದವನಿಗೆ ವಿಶೇಷ ಸಹಾಯವಾಗುವುದು.

13. ಕೊನೆಯಲ್ಲಿ, ಈಗ ಸರ್ಕಾರದವರು ಬಿಟ್ಟುಬಿಡಬೇಕೆಂದು ಅಭಿಪ್ರಾಯಪಡುವ ಹುಟ್ಟುವಳಿಯ 3½ ಲಕ್ಷದಲ್ಲಿ ಎಷ್ಟು ಅಡಕೆಯ ತೋಟಗಾರರ ಪಾಲಿಗೆ ಹೋಗುವುದೋ ಅದನ್ನು ಹೇಳಲಸಾಧ್ಯವಾದರೂ ಅದು, ಜನಗಳನ್ನು ಪೀಡಿಸುವ ಮತ್ತು ನೀತಿಗೆಡಿಸುವ, ವ್ಯವಸಾಯಗಾರರನ್ನು ದಳ್ಳಾಳಿಯ ಬಂಧನದಲ್ಲಿ ಇಡುವ, ಮತ್ತು ಸರ್ಕಾರಕ್ಕೆ ಈ ತೆರಿಗೆಯಿಂದ ನೇಟಾಗಿ ಆಗುವ ಹುಟ್ಟುವಳಿಗಿಂತ ಬಹಳ ಹೆಚ್ಚಾದ ಹಣದ ಭಾರವನ್ನು ವ್ಯವಸಾಯಗಾರನಮೇಲೆ ಹಾಕುವ ಈಗಿನ ಅನಿಷ್ಟವಾದ ಮತ್ತು ಕೆಡುಕಿನ ಪದ್ಧತಿಯನ್ನು ತೆಗೆದುಹಾಕುವುದಕ್ಕೆ ಸಂದೇಹವಿಲ್ಲ.

14. ಸಾಯರು ಸುಂಕವನ್ನು ಹಾಕೋಣವು, ಅದನ್ನು ಅನುಸರಿಸಿರುವ ಕೇಡುಗಳಿಲ್ಲದೆ ಇದ್ದರೆ, ಕಂದಾಯ ಹಾಕುವುದಕ್ಕೆ ಬಹಳ ಅನುಕೂಲವಾದ ರೀತಿಯಾಗಿದೆಯೆಂದೂ, ಮತ್ತು ಸಾಯರು ಸುಂಕವಿಲ್ಲದೆ ಭಾರಿ ಜಮೀನ್ ಕಂದಾಯಕ್ಕಿಂತ ಸಾಯರು ಸುಂಕದೊಡನೆ ಒಂದು ಲಘುವಾದ ಜಮೀನ್ ಕಂದಾಯವು ರೈತರಿಗೆ ಇಷ್ಟವಾಗಿರುವುದೆಂದೂ ಒಪ್ಪಿಕೊಳ್ಳಬೇಕಾಗಿದೆ. ಊಹೆಯಲ್ಲಿಯಾದರೂ ಸಾಯರು ಸುಂಕವು ಈ ಪ್ರಯೋಜನಗಳನ್ನುಳ್ಳದೆಂದು ಹೇಳಬಹುದು; ಅದು ನಿಜವಾಗಿ ಆಗುವ ಫಸಲಿನಿಂದ ಕ್ರಮ ಪಡಿಸಲ್ಪಡುವ ಪ್ರಯೋಜನವನ್ನುಂಟಾಗಿರುವುದರಿಂದ ಫಸಲಾಗದ ವರ್ಷದಲ್ಲಿ ರೈತನಿಗೆ ಭಾರವಾಗಿರಲಾರದು, ಮತ್ತು ಅದು ಕ

ಳವಾಗದಂತೆ ಇರಲು ಕೆಲವು ರಕ್ಷಣೆಗಳನ್ನೂ ಕೂಡ ಏರ್ಪಡಿಸುತ್ತದೆ, ಯಾತಕ್ಕೆಂದರೆ ಸಾಯರು ನಿಬಂಧನೆಗಳ ಮೇರೆ ಜಬ್ತು ಮಾಡಿದ ಸಾಮಾನು ಸುಪ್ಪೈನು, ತನ್ನ ಹೆಸರು ರಿಜಿಸ್ಟರುಗಳಲ್ಲಿ ದಾಖಲಾದ ಹೊರತು ಅಡಕೆಯನ್ನು ಸುಲಭವಾಗಿ ವಿಲೆವಾರು ಮಾಡಲಾಗುವುದಿಲ್ಲ. ಆದರೆ ಈ ಪ್ರಯೋಜನಗಳಿರುವುದಾಗಿ ಹೇಳಬಹುದಾದರೂ ಈ ಪದ್ಧತಿಯ ಷರತ್ತುಗಳು ವಿಶೇಷವಾಗಿರುವುದರಿಂದ ರೈತನಿಗೆ ಅಸಹ್ಯಕರವಾದ ಹೊರೆಯನ್ನು ತಪ್ಪಿಸುವುದಕ್ಕೋಸ್ಕರ ಮೇಲ್ಕಂಡ ಪ್ರಯೋಜನಗಳನ್ನು ಬಿಟ್ಟುಬಿಡಬೇಕು; ಮತ್ತು ಸಂಸ್ಥಾನದ ವಿಷಯದಲ್ಲಿ ಪ್ರಜೆಗಳಲ್ಲಿ ಒಂದು ಮುಖ್ಯವಾದ ಮತ್ತು ಅರ್ಹರಾದ ವಂಗಡದವರ ಹೆಚ್ಚಿದ ಸಂಪತ್ತಿನಿಂದ ಹುಟ್ಟುವಳಿಯಲ್ಲಿ 3½ ಲಕ್ಷವನ್ನು ಬಿಟ್ಟುಬಿಡುವುದಕ್ಕೆ ಆಗಬೇಕಾದುದಕ್ಕಿಂತ ಹೆಚ್ಚು ಪ್ರತಿಫಲವು ಉಂಟಾಗುವುದೆಂದು ದೃಢವಾಗಿ ನಂಬಿದೆ; ಅಂಥಾ ಸಂಪತ್ತು ಎಕರೆಗೆ 13 ರೂಪಾಯಿನಂತೆ ಬೀಳಬಹುದಾದ ತೆರಿಗೆಯು ರೈತನಿಗೆ ತಪ್ಪುವುದರಿಂದ ಉಂಟಾಗಬಹುದೆಂದು ಸುಖವಾಗಿ ನಿರೀಕ್ಷಿಸಬಹುದು.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರಿಟೆರಿ.

ಪಬ್ಲಿಕ್ ವರ್ಕ್ಸ.

ಇಸ್ತಿಹಾರ್ನಾಮೆ.

ತಾರೀಖು 13ನೆ ಮಾರ್ಚಿ 1907.

ನಂ. 226–1845, ತುಮಕೂರು ಡಿವಿಜನಿಗೆ ಸೇರಿದ ಎಗ್ಸಿಕ್ಯೂಟಿವ್ ಇಂಜನಿಯರ್ ಮಿ|| ಸಿ. ಎ. ಮಹದೇವಶಾಸ್ತ್ರಿ, ಬಿ. ಎ., ಬಿ. ಸಿ. ಇ., ಯವರಿಗೆ 1907ನೆ ಮಾರ್ಚಿ 15ನೆ ತಾರೀಖು ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಮೈಸೂರು ಸರ್ವಿಸ್ ರೆಗ್ಯುಲೇಷನ್ 177ನೆ ಆರ್ಟಿಕಲ್ ಅನುಸರಿಸಿ ಮೂರು ತಿಂಗಳು ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

2. ಮಿ|| ಮಹದೇವಶಾಸ್ತ್ರಿಯವರು ರಜಾದಮೇಲೆ ಇರುವ ವರಿವಿಗೂ ಅಥವಾ ಇನ್ನೊಂದು ಹುಕುಂ ಕೊಡುವ ವರಿವಿಗೂ ಅಸಿಸ್ಟೆಂಟ್ ಇಂಜನಿಯರ್ ಮಿ|| ಆರ್. ಎಸ್. ನವರತ್ನ, ಎಲ್. ಸಿ. ಇ., ಯವರನ್ನು ತುಮಕೂರು ಡಿವಿಜನ್ ಅಫಿಷಿಯೇಟಿಂಗ್ ಎಗ್ಸಿಕ್ಯೂಟಿವ್ ಇಂಜನಿಯರಾಗಿ ನೋಕರರು ಮಾಡಲ್ಪಟ್ಟಿದೆ.

ತಾರೀಖು 20ನೆ ಮಾರ್ಚಿ 1907.

ನಂ. 241-2000, ಚಿತ್ರದುರ್ಗ ಡಿವಿಜನ್ ಎಗ್ಸಿಕ್ಯೂಟಿವ್ ಇಂಜನಿಯರ್ ಮಿ|| ಕೆ. ಪ್ರಹ್ಲಾದರಾವ್ ಯವರಿಗೆ 1907ನೆ ಮಾರ್ಚಿ 1ನೆ ತಾರೀಖು ಪಬ್ಲಿಕ್ ವರ್ಕ್ಸ 187–1541ನ ನಂಬರ ಇಸ್ತಿಹಾರ್ನಾಮೆಯಲ್ಲಿ ಮಾರ್ಚಿ 4ನೆ ತಾರೀಖು ಲಾಗಾಯಿತು ಕೊಟ್ಟಿದ್ದ 10 ದಿನಗಳ ಪ್ರಿವಿಲೇಜ್ ರಜಾವನ್ನು ಇನ್ನೂ 5 ದಿನಗಳು ಜಾಸ್ತಿ ಮಾಡಲ್ಪಟ್ಟಿದೆ.

ಹುಕುಂ ಬಮೋಜೀಬ್,
ಡಬ್ಲ್ಯೂ. ಮೆಕಹರ್ಚೀ,
ಪಬ್ಲಿಕ್ ವರ್ಕ್ಸ ಇಲಾಖಾ ಮೈಸೂರ ಗವರ್ನಮೆಂಟ್ ಸೆಕ್ರಿಟೆರಿ.

ತಾರೀಖು 14ನೆ ಮಾರ್ಚಿ 1907.

ನಂ. 229–1871, ಚೀಫ್ ಇಂಜನಿಯರ್ ಮತ್ತು ಮೈಸೂರು ಗವರ್ನಮೆಂಟ್ ಪಬ್ಲಿಕ್ ವರ್ಕ್ಸ ಮತ್ತು ರೈಲ್ವೆಗಳ ಸೆಕ್ರಿಟೆರಿ ಮಿ|| ಡಬ್ಲ್ಯೂ. ಮೆಕಹರ್ಚಿ, ಎಂ. ಐ. ಸಿ. ಇ., ಯವರಿಗೆ 1907ನೆ ಏಪ್ರಿಲ್ 3ನೆ ತಾರೀಖಿನಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಸಿವಿಲ್ ಸರ್ವಿಸ್ ರೆಗ್ಯುಲೇಷನ್ಸ 260ನೆ ಆರ್ಟಿಕಲ್ ಅನುಸರಿಸಿ ಒಂದು ತಿಂಗಳು ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

II. ಡೆಪ್ಯುಟಿ ಚೀಫ್ ಇಂಜನಿಯರ ಮತ್ತು ಮೈಸೂರು ಗವರ್ನಮೆಂಟ್ ಪಬ್ಲಿಕ್ ವರ್ಕ್ಸ ಮತ್ತು ರೈಲ್ವೆಗಳ ಅಂಡರ ಸೆಕ್ರಿಟೆರಿ ಕ್ಯಾಪ್ಟನ್, ಎಚ್. ಬರ್ನಾರ್ಡ್, ಇ. ಥಾಸ್, ಆರ್. ಇ., ಯವರು ಮಿ|| ಮೆಕ ಹರ್ಚಿ ಯವರು ರಜಾದಮೇಲೆ ಇರುವ ವರಿವಿಗೂ ಆಫೀಸಿನ ಚಾರ್ಜಿನಲ್ಲಿರತಕ್ಕದ್ದು.

ಹುಕುಂ ಬಮೋಜೀಬ್,
ಬರ್ನಾರ್ಡ್ ಥಾಸ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ್ ವರ್ಕ್ಸ ಇಲಾಖಾ ಮೈಸೂರು ಗವರ್ನಮೆಂಟ್ ಅಂಡರ ಸೆಕ್ರಿಟೆರಿ.

85

ಮೈಸೂರ ಗೆಜೆಟ್.

ನಂ. 42.] ಸರ್ಕಾರದಿಂದ ಫರ್ಮಾಯಿಷ್ ಆದ್ದು. [ನಂ. 13.

ಬೆಂಗಳೂರು, ಗುರುವಾರ, ಮಾರ್ಚಿ ತಾ|| 28, ಸನ್ 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕ್‌ವರಕ್ಸ್ ಆಫೀಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೋಲೀಸ ಸೂಪರಿಂಟೆಂಡೆಂಟರು, ಫಾರೆಸ್ಟು ಆಫೀಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಕಾಫೀಸ್ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 14ನೆ ಮಾರ್ಚಿ 1907.

ಇಸ್ತಿಹಾರ್

ನಂ. ಫೈ. 6889, ಈ ಕೆಳಗಿನ ಸರ್ಕಾರಿ ಹುಕುಮನ್ನು ಸರ್ವ ಜನರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿ ಇದೆ :—

ತಾರೀಖು 14ನೆ ಮಾರ್ಚಿ 1907.

ನಂ. ಫೈ. 6878–88, ಹುಕುಂ—ಅಡಕೆಯ (ಸುಪಾರಿ) ಮೇಲಿನ ಹಾಸಿಲನ್ನು ತೆಗದುಹಾಕುವ ವಿಷಯವೂ, ಸಂಸ್ಥಾನದ ಆದಾಯ ವ್ಯಯಗಳಿಗೆ ತೊಂದರೆಯಿಲ್ಲದೆ ಅದನ್ನು ಹೇಗೆ ನೆರವೇರಿಸುವುದು ಒಳ್ಳೆಯದು ಎಂಬುದೂ ಸ್ವಲ್ಪ ಕಾಲದಿಂದ ಶ್ರೀಮನ್ ಮಹಾರಾಜರವರ ಸರ್ಕಾರದವರ ಪರ್ಯಾಲೋಚನೆಯಲ್ಲಿತ್ತು. ಸದರಿ ಸುಂಕವು ನಿಜವಾಗಿ ಯಾರ ಮೇಲೆ ಬೀಳುತ್ತದೆ ಎಂಬ ವಿಷಯದಲ್ಲಿ ಅಭಿಪ್ರಾಯಭೇದವಿದ್ದರೂ ಮೇಲ್ಕಂಡ ತಿದ್ದುಪಾಟು ಆಡಳಿತಕ್ಕೆ ಅತ್ಯವಶ್ಯವಾದುದು ಎಂಬುದೂ ಅದರ ಪ್ರಯೋಜನವು ಬಹುದೂರ ವ್ಯಾಪಿಸುವಂಥಾದ್ದು ಎಂಬುದೂ ಯೋಗ್ಯರಾದ ಎಲ್ಲಾ ಅಧಿಕಾರಿಗಳಿಂದಲೂ ಅಂಗೀಕರಿಸಲ್ಪಟ್ಟವೆ.

2. ಇದಕ್ಕೆ ಲಗತ್ತು ಮಾಡಿರುವ ಪ್ರತ್ಯೇಕವಾದ ಸಂಗ್ರಹವು ಅಡಕೆಯ ಮೇಲಿನ ಹಾಳತದ ಉತ್ಪತ್ತಿಯನ್ನೂ ಸ್ವಭಾವ
ವನ್ನೂ, ಅದನ್ನು ಇಟ್ಟುಕೊಂಡಿರುವುದರಿಂದ ಆಡಳಿತಕ್ಕೂ ದೇಶದ ಸಂಪತ್ತಿಗೂ ಉಂಟಾಗುವ ಕೇಡನ್ನೂ,. ಈ ಕೇಡನ್ನು ಹಿಮ್ಮೆ
ಟ್ಟಿಸುವುದಕ್ಕೆ ಹಿಂದೆ ಮಾಡಿದ ಪ್ರಯತ್ನಗಳನ್ನೂ ಸಂಕ್ಷೇಪವಾಗಿ ತೋರಿಸುತ್ತದೆ. ಇಲ್ಲಿ ಇಷ್ಟುಮಟ್ಟಿಗೆ ಹೇಳಿದರೆ ಸಾಕು—
ಮಲೆನಾಡು ಜನಗಳ ಕ್ಷೀಣದೆಶೆಯು ಇಪ್ಪತ್ತು ವರ್ಷಗಳಿಗೆ ಮುಂಚೆಯೇ ಗೋಚರಕ್ಕೆ ಬಂದು ಅದರ ಕಾರಣಗಳ ವಿಷಯದಲ್ಲಿ
ಯೂ ಅದಕ್ಕೆ ಪ್ರಯೋಗಿಸತಕ್ಕ ಪರಿಹಾರದ ವಿಷಯದಲ್ಲಿಯೂ ವಿಶೇಷವಾದ ವಿಚಾರಣೆಗಳು ನಡೆದಿದ್ದರೂ ಈಚಿನ ವರ್ಷಗಳಲ್ಲಿ ಕ್ಷೀ
ಣಾವಸ್ಥೆಯು ಬರಬರುತ್ತ ಅಡಕೆಯ ವ್ಯವಸಾಯವನ್ನೇ ನಿರ್ಮೂಲ ಮಾಡುತ್ತದೆಯೋ, ಎಂದು ಭಯಪಡಿಸುವಷ್ಟು ವಿಶೇಷವಾಗಿ
ಹೆಚ್ಚಿತು. ಮಲೆನಾಡಿನ ಪ್ರಜಾ ಸಂಖ್ಯೆಯು ಕಡಮೆಯಾಗುತ್ತಿರುವುದೂ ಅವರ ದಾರಿದ್ರಾವಸ್ಥೆಯು ಸಾಮಾನ್ಯವಾಗಿ ಹೆಚ್ಚುತ್ತಿರು
ವುದೂ, ಸ್ವಲ್ಪ ಸ್ವಲ್ಪ ಕಾಲದ ಮಟ್ಟಿಗೆ ಕಷ್ಟ ಬಂದರೂ ಅದನ್ನು ಅವರು ನೀಗಲಾರದೆ ಇರುವುದೂ ಎಲ್ಲರಿಗೂ ತಿಳಿದೇ ಇವೆ. ಮು
ಖ್ಯವಾಗಿ ಕಳೆದ ಎರಡು ಸಲದ ಅನಾವೃಷ್ಟಿಯಿಂದ ತೋಟಗಾರರಿಗೆ ಬಹಳ ಕಷ್ಟವುಂಟಾಗಿದೆ. ಕ್ರಮವಾದ ನೀರು ಸರಬರಾ
ಯಿಯು ತಪ್ಪಿಹೋದ ಪ್ರಯುಕ್ತ ಉಂಟಾದ ನಷ್ಟದಿಂದ ಅವರು ಚೇತರಿಸಿಕೊಳ್ಳಬೇಕಾದರೆ ಇನ್ನೂ ಕೆಲವು ವರ್ಷಗಳು ಬೇಕಾಗು
ತ್ತವೆ ; ಯಾತಕ್ಕೆಂದರೆ ಮರಗಳು ನಿಜವಾಗಿ ಸತ್ತುಹೋಗದೆ ಇದ್ದ ಕಡೆಗಳಲ್ಲಿಯೂ ಕೂಡ ಅವುಗಳ ಜೀವವು ಬಹಳವಾಗಿ ಉಡುಗಿ
ಹೋಗಿ ಇರುವುದರಿಂದ ಇನ್ನೂ ಸ್ವಲ್ಪಕಾಲದವರೆಗೆ ಅವು ಯಾವ ಫಲವನ್ನೂ ಕೊಡಲಾರವು. ಇಂಥಾ ಸ್ಥಿತಿಯಲ್ಲಿ, ಮಲೆನಾಡು ಜನ
ಗಳು ಬಹುಕಾಲದಿಂದ ಚಿಂತಾಕ್ರಾಂತರಾಗಿ ನಿರೀಕ್ಷಿಸುತ್ತಿದ್ದ ಸಹಾಯವನ್ನು ಮಾಡುವುದಕ್ಕೆ ತಡವಾದರೆ ಕಷ್ಟವು ಮತ್ತಷ್ಟು
ವಿಶೇಷವಾಗಿ ಹೆಚ್ಚುವುದೆಂದು ಸರ್ಕಾರದವರು ದೃಢವಾಗಿ ನಂಬುತ್ತಾರೆ.

3. ಕಾರ್ಯಸಾಧಕವಾದ ಸಹಾಯ ಮಾಡಲು ಯತ್ನಿಸುವುದಕ್ಕೆ ಇದುವರೆಗೆ ಅಡ್ಡಿಯಾಗಿದ್ದ ಮುಖ್ಯವಾದ ಕಷ್ಟವು ಯಾ
ವುದೆಂದರೆ—ಈ ಬಾಬಿನಿಂದ ಭಾರಿ ಹುಟ್ಟುವಳಿಯು (ವರ್ಷ ಒಂದಕ್ಕೆ ಸುಮಾರು $3\frac{1}{2}$ ಲಕ್ಷ) ಆಗುತ್ತಿತ್ತು. ಹಿಂದಿನ ಆದಾಯವ್ಯ
ಯದ ಸ್ಥಿತಿಯಲ್ಲಿ ಮೇಲ್ಕಂಡ ಭಾರಿ ಮೊಬಲಗನ್ನು ಬಿಟ್ಟುಬಿಡುವುದರಿಂದ ಸರ್ಕಾರಕ್ಕೆ ಕಷ್ಟವಾಗುವದೆಂದು ತೋರಿ ಇತ್ತು. ಶ್ರೀ
ಮನ್ಮಹಾರಾಜರವರ ಸರ್ಕಾರದವರು ಈಚೆಗೆ ಈ ವಿಷಯಕ್ಕೆ ಚೆನ್ನಾಗಿ ಪ್ರವೇಶಿಸಿ ಈಗಿನ ಆಯವ್ಯಯದ ಸ್ಥಿತಿಯನ್ನೂ
ಮುಂದಿನ ಆಮದುಗಳನ್ನೂ (ನಾನಾ ಇಲಾಖೆಗಳ ಖರ್ಚು ಕಡಮೆಯ ವಿಷಯದಲ್ಲಿ ಆಗಲೆ ಚುರುಕಾಗಿ ನಡೆಯುತ್ತಿರುವ ತಿದ್ದು
ಪಾಟುಗಳು ಮೊದಲಾದ) ಸಾಮಾನ್ಯವಾಗಿ ಆದಾಯವ್ಯಯಗಳನ್ನು ಭದ್ರವಾದ ಸ್ಥಿತಿಯಲ್ಲಿ ಇಡುವುದಕ್ಕೆ ಅವಶ್ಯವಾದ ಏರ್ಪಾಡುಗಳ
ನ್ನೂ ವಿಚಾರಮಾಡಿ ಆದಾಯವ್ಯಯದ ಸ್ಥಿತಿಗೆ ವಿಶೇಷ ತೊಂದರೆಯಿಲ್ಲದೆ ಹಾಳತದ ಎಲ್ಲಾ ಹುಟ್ಟುವಳಿಯನ್ನೂ ತಾವು ಈಗ ಸುಖ
ವಾಗಿ ಬಿಟ್ಟುಬಿಡಬಹುದೆಂಬ ತೀರ್ಮಾನಕ್ಕೆ ಬಂದಿರುತ್ತಾರೆ.

4. ಆದುದರಿಂದ, 1907—1908ನೆ ಸರ್ಕಾರಿ ವರ್ಷ ಮೊದಲುಗೊಂಡು ಅಡಕೆಯ (ಸುಪಾರಿ) ಮೇಲಿನ ಹಾಳತವನ್ನು
ತೆಗೆದುಹಾಕಲಾಗುವುದೆಂದು ಸರ್ಕಾರದವರು ಅತ್ಯಂತ ಸಂತೋಷದಿಂದ ತಿಳಿಸುತ್ತಾರೆ. ಹಾಗೆಯೇ ಬಾಗಾಯಿತು ಜಮೀನುಗಳ ಕಂ
ದಾಯಕ್ಕೆ ಸುಮಾರು ಸಮವಾಗಿರುವಷ್ಟು ಮೊಬಲಗನ್ನು ಮನ್ನಿಸುವ ಈ ಏರ್ಪಾಡಿನಿಂದ ತೋಟಗಾರರಿಗೆ ಉಂಟಾಗುವ ಅಪರಿ
ಮಿತವಾದ ಪ್ರಯೋಜನವನ್ನು ದೃಷ್ಟಿಯಲ್ಲಿಟ್ಟುಕೊಂಡು ಅಡಕೆ ಸಾಗುವಳಿ, ಅಡಕೆ ಮರಕ್ಕೆ ತಗುಲಬಹುದಾದ ರೋಗಗಳು ಮೊ
ದಲಾದ ಅಡಕೆ ತೋಟಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಶಾಸ್ತ್ರೀಯವಾಗಿ ವಿಚಾರ ಮಾಡುವುದಕ್ಕಾಗಿ ಒಂದು ಮೂಲಧನವನ್ನು
ಏರ್ಪಡಿಸುವುದಕ್ಕೋಸ್ಕರ ಒಂದು ಚಿಕ್ಕ ವರಿಯನ್ನು ಕೊಡುವಂತೆ ತೋಟಗಾರರನ್ನು ಕೇಳಬೇಕೆಂದು ಸರ್ಕಾರದವರು ಅಪ್ಪಣೆ
ಮಾಡುತ್ತಾರೆ. ಸದರಿ ವರಿಯನ್ನು ಪ್ರಕೃತದಲ್ಲಿ ಅಡಕೆತೋಟದ ಜಮೀನುಗಳ ಮೇಲಿನ ಕಂದಾಯಕ್ಕೆ ಅನುಗುಣವಾಗಿ ರೂಪಾ
ಯಿಗೆ ಒಂದಾಣೆಯಂತೆ ಗೊತ್ತುಮಾಡಿ ಅದರ ಹುಟ್ಟುವಳಿಯನ್ನು ಮೇಲ್ಕಂಡ ವಿಶೇಷ ಕಾರ್ಯಕ್ಕಾಗಿ ಪ್ರತ್ಯೇಕವಾಗಿ ಇಡಲಾಗುವು
ದು. ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರುಗಳು ಸರ್ವೆ ಇಲಾಖೆಗೆ ಬರೆದು ಈ ಹುಕುಮನ್ನು ಜಾರಿಗೆ ತರಲು ಅವಶ್ಯವಾದ ಕೆಲಸವ
ನ್ನು ಮಾಡಬೇಕೆಂದು ಕೋರಿ ಇದೆ.

5 ಹಾಳತದ ವಸೂಲಾತಿಯ ಕೆಲಸದಲ್ಲಿ ಇಟ್ಟಿರುವ ಶಿಬ್ಬಂದಿಗಳನ್ನು 1907ನೆ ಜುಲೈ 1ನೆ ತಾರೀಖಿನಿಂದ ತೆಗೆದುಹಾಕ
ಲಾಗುವುದು. ಆದಾಗ್ಯೂ ಡೆಪ್ಯುಟಿ ಕಮಿಷನರುಗಳು ಕೆಲಸದಿಂದ ತೆಗೆದುಹಾಕಲ್ಪಟ್ಟವರಲ್ಲಿ ಸಾಧ್ಯವಾದಷ್ಟು ಮಂದಿ ಜನಗಳಿಗೆ
ರೆವಿನ್ಯೂ ಅಥವಾ ಇತರ ಇಲಾಖೆಗಳಲ್ಲಿ ಕೆಲಸಗಳನ್ನು ದೊರಕಿಸಿಕೊಡಲು ಪ್ರಯತ್ನ ಮಾಡತಕ್ಕದ್ದು ; ಆದರೆ ಯಾರು ಇತರ ಕೆಲ
ಸಕ್ಕೆ ತಕ್ಕವರಾಗಿಲ್ಲದೆ ಇದ್ದಾರೆಯೋ ಅಥವಾ ಯಾರಿಗೆ ಕೆಲಸ ಸಿಕ್ಕಲಾರದೋ ಅಂಥವರನ್ನೆಲ್ಲಾ ಅವರಿಗೆ ಹಕ್ಕಿರಬಹುದಾದ ಕಾಂಪೆನ್ಸೇ
ಷನ್ ಅಥವಾ ಇತರ ಪೆನ್ಷನ್ ಅಥವಾ ಗ್ರಾಟ್ಯುಯಿಟಿ ಮೇಲೆ ಕೆಲಸದಿಂದ ನಿವೃತ್ತಿ ಮಾಡಲಾಗುವುದು.

6. ಈಗ ಕಟ್ಟೆಗಳಾಗಿ ಉಪಯೋಗಿಸಲ್ಪಡುತ್ತಿರುವ ಕಟ್ಟಡಗಳ ಮುಂದಿನ ಉಪಯೋಗದ ವಿಷಯದಲ್ಲಿ ಡೆಪ್ಯುಟಿ ಕಮಿ
ಷನರುಗಳ ಸಲಹೆಗಳನ್ನು ನಿರೀಕ್ಷಿಸಲಾಗುವುದು.

ಅಪ್ಪಣೆಯ ಮೇರೆಗೆ,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಸರ್ಕಾರಿ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.

ಪರಿಶಿಷ್ಟ.

ಅಡಕೆ (ಸುಪಾರಿ) ಹಾಳತದ ಚರಿತ್ರಸಂಗ್ರಹ.

ಮೈಸೂರು, ಬ್ರಿಟಿಷ್ ಆಡ್ಮಿನಿಸ್ಟ್ರೇಶನ್‌ಗೆ ಸೇರಿದ 1831ನೆ ವರ್ಷಕ್ಕೆ ಮುಂಚೆ, ದನಗಳು ಆಹಾರ ಧಾನ್ಯಗಳು, ಹತ್ತಿ, ಮೆಣಸು ಮೊ
ದಲಾದುವುಗಳು ಸೇರಿ ಸುಮಾರು 550 ಪದಾರ್ಥಗಳು ಸಾಯರು ಹಾಸಲೆಂದು ಕರೆಯಲ್ಪಡುವ ಸುಂಕದ ಬಾಬತಿಗೆ ಒಳಪಟ್ಟಿದ್ದವೆ

ಸಾಯರು ಸುಂಕಕ್ಕೆ ಗುರಿಯಾಗಿದ್ದ ಪದಾರ್ಥಗಳು ಈ ಸಂಸ್ಥಾನದಲ್ಲಿ ಕರಗುಪಡಿಯಾಗಲಿ ಅಥವಾ ಹೊರಗೆ ರಫ್ತಾಗಲಿ ಸುಂಕವನ್ನು ತೆರುತ್ತಿದ್ದವು. ಯಾವುದರ ಮೇಲೆ ಸುಂಕವು ವಸೂಲ್ಮಾಡಲ್ಪಟ್ಟಿತೊ ಆ ಪದಾರ್ಥವು ಹೋಗಿ ಸೇರುವ ಸ್ಥಳಕ್ಕೆ ಅನುಗುಣವಾಗಿ ಸುಂಕವು ಸಾಯರು ಹಾಸಲಾಗಿ, ಅಥವಾ ಬಾರಾಮಾರ್ಗದ ಹಾಸಲಾಗಿ ಅಥವಾ ಭರ್ತಿ ಹಾಸಲಾಗಿ ವಸೂಲಾಗುತ್ತಿತ್ತು. ಬಾರಾಮಾರ್ಗದ ಹಾಸಲು ಸುಮಾರು ಅರುವತ್ತು ವರ್ಷಗಳ ಹಿಂದೆ ತೆಗೆದುಹಾಕಲ್ಪಟ್ಟಿತು ಮತ್ತು ಸುಂಕಕ್ಕೆ ಗುರಿಯಾಗಿದ್ದ ಪದಾರ್ಥಗಳ ಸಂಖ್ಯೆಯು ಕ್ರಮವಾಗಿ ಕಡಮೆಯಾಗಿ ಕಡೆಗೆ 1885ನೆ ವರ್ಷದಿಂದ ಅಡಕೆ ಒಂದು ಪದಾರ್ಥದ ಮೇಲೆಯೇ ಸಾಯರು ಹಾಸಲು ವಸೂಲಾಗುತ್ತಾ ಇದೆ. 1875ನೆ ವರ್ಷಕ್ಕೆ ಮುಂಚಿನವರೆಗೆ ಫಸಲಿನ ತರಕ್ಕನುಗುಣವಾಗಿ 24 ತೊಲೆಯ 40 ಸೇರಿನ ಮಣ ಒಂದಕ್ಕೆ 6 ಆಣೆ ಲಾಗಾಯಿತು ರೂ. 1–4 ಆಣೆ ವರೆಗೆ ಸುಂಕವು ವಸೂಲಾಗುತ್ತಿದ್ದು ಆ ವರ್ಷದಲ್ಲಿ ಮಣ ಒಂದಕ್ಕೆ 12 ಆಣೆಯಂತೆ ಏಕರೀತಿಯಾದ ದರದ ಸುಂಕವು ಗೊತ್ತುಮಾಡಲ್ಪಟ್ಟಿತು. ಈ ದರದ ಸುಂಕವೇ ಈಗಲೂ ವಸೂಲಾಗುತ್ತಿದೆ. 1863-64ನೆ ವರ್ಷದಲ್ಲಿ ಸಾಯರಿಂದ 11 ಲಕ್ಷ ರೂಪಾಯಿಗೆ ಮೀರಿ ಹುಟ್ಟುವಳಿಯಾಯಿತು. ಅದರ ವಸೂಲಾತಿಯ ಸಿಬ್ಬಂದಿಗೆ 1 ಲಕ್ಷಕ್ಕೆ ಮೀರಿ ಖರ್ಚಾಯಿತು. ಅನೇಕ ಪದಾರ್ಥಗಳ ಮೇಲಿನ ಸಾಯರು ಸುಂಕವನ್ನು ಕ್ರಮೇಣ ತೆಗೆದುಹಾಕುವುದರಿಂದ ಸಾಯರು ಹುಟ್ಟುವಳಿಯು ಸುಮಾರು 3½ ಲಕ್ಷಕ್ಕೆ ಇಳಿಯಿತು. ಅದರ ವಸೂಲಾತಿಯ ಸಿಬ್ಬಂದಿಗೆ ವರ್ಷ ಒಂದಕ್ಕೆ 11,676 ರೂಪಾಯಿ ಖರ್ಚಾಗುತ್ತಿದೆ.

2. ಈ ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ ಅವುಗಳಲ್ಲಿ ಮುಖ್ಯವಾಗಿ ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳ ಮಲೆನಾಡು ತಾಲ್ಲೂಕುಗಳಲ್ಲಿಯೂ ತುಮಕೂರು ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿಯೂ ಇರುವ ತೋಟಗಳಲ್ಲಿ ಅಡಕೆಯು ಪೈರಾಗುತ್ತದೆ. ಈ ಪ್ರದೇಶಗಳಲ್ಲಿ ವಿನಾ ಸಾಯರು ಹುಟ್ಟುವಳಿಯು ಗ್ರಾಮದ ಪಟೇಲರ ಮತ್ತು ರೆವಿನ್ಯೂ ಇಲಾಖೆಯ ಕೆಳಗಿನ ಉದ್ಯೋಗಸ್ಥರ ಮೂಲಕ ವಸೂಲಾಗುತ್ತದೆ. ಆದರೆ, ಭಾರಿ ಹುಟ್ಟುವಳಿಯು ವಸೂಲಾಗಬೇಕಾಗಿರುವ ಕಡೂರು, ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿಯೂ ತುಮಕೂರು ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿಯೂ ಅದಕ್ಕೆ ಪ್ರತ್ಯೇಕವಾದ ಸಿಬ್ಬಂದಿ ಇದೆ. ಆ ಸಿಬ್ಬಂದಿಗೆ ಸೇರಿದವರಿಗೆ ತಿಂಗಳಿಗೆ 5ರ ಲಾಗಾಯಿತು 15 ರೂಪಾಯಿನ ವರೆಗೆ ಸಂಬಳ ಸಲ್ಲುತ್ತದೆ.

3. ಮೈಸೂರು ದೇಶದಲ್ಲಿ ಬೆಳೆವ ಅಡಕೆಯಲ್ಲಿ ಬಹಳ ಭಾಗವು ಅಡಕೆ ವ್ಯಾಪಾರಕ್ಕೆ ಮುಖ್ಯಸ್ಥಳವಾದ ಬಳ್ಳಾರಿಗೆ ಹೋಗುತ್ತದೆ. ಕಡೂರು, ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ರೈತನು ತನ್ನ ಫಸಲನ್ನು (ಮೈಸೂರು ಸಂಸ್ಥಾನ) ಬೇರೂರಿನಲ್ಲಿ ಅಥವಾ ಬಳ್ಳಾರಿಯಲ್ಲಿರುವ ಒಬ್ಬ ವರ್ತಕನಿಗೆ ನೇಟಾಗಿ ಅಥವಾ ದಳ್ಳಾಳಿಯ ಮೂಲಕ ಮಾರುತ್ತಾನೆ. ಪ್ರತಿ ಸಂದರ್ಭದಲ್ಲಿಯೂ ಅಡಕೆಯನ್ನು ಸಾಗಿಸುವಾಗ ಸಾಯರು ಕಟ್ಟೆಗೆ ಅದನ್ನು ತೆಗದುಕೊಂಡು ಹೋಗಬೇಕಾಗಿದೆ. ಅಲ್ಲಿ ಅದು ತೂಕವಾಗಿ ಹಾಳತವು ವಸೂಲಾಗಿ ರಹದಾರಿ ಕೊಟ್ಟನಂತರ ರಹದಾರಿನಿಶಿ ಅದನ್ನು ಸಾಗಿಸಬಹುದು. ರೈತನು ತನ್ನ ಫಸಲನ್ನು ನೇಟಾಗಿ ವರ್ತಕನ ಬಳಿಗೆ ತೆಗೆದುಕೊಂಡು ಹೋದರೆ ಮೊದಲು ಅವನೇ ಹಾಳತವನ್ನು ಕೊಡುತ್ತಾನೆ. ಆದರೆ ಉತ್ಪತ್ತಿಯ ಸ್ಥಳದಲ್ಲೇ ದಳ್ಳಾಳಿಯು ಅವನಿಂದ ಖರೀದಿಗೆ ತೆಗೆದುಕೊಂಡರೆ ದಳ್ಳಾಳಿಯೇ ಮೊದಲು ಹಾಳತವನ್ನು ಕೊಡುತ್ತಾನೆ.

4. ಮೈಸೂರಿನ ಅಡಕೆಗೆ ಮಾತ್ರ ಹಾಳತವನ್ನು ಕೊಡಬೇಕೆಂದು ಇಲ್ಲಿ ಹೇಳಬೇಕಾಗಿದೆ. ಹೊರಗಿನಿಂದ ಸಂಸ್ಥಾನದೊಳಕ್ಕೆ ತಂದ ಅಡಕೆಯು ಸುಂಕಕ್ಕೆ ಒಳಪಟ್ಟಿಲ್ಲ. ಅನ್ಯದೇಶದ ಅಡಕೆಯು ಮೈಸೂರು ಸಂಸ್ಥಾನಕ್ಕೆ ಪ್ರವೇಶಿಸಿದ ಕೂಡಲೆ ಅದನ್ನು ಸಮೀಪತಮವಾದ ಸಾಯರು ಕಟ್ಟೆಗೆ ತೆಗದುಕೊಂಡುಹೋಗಿ ಅಲ್ಲಿ ಅದಕ್ಕೆ ಒಂದು ಮಾಫಿ ರಹದಾರಿಯನ್ನು ಕೊಟ್ಟ ತರುವಾಯ ಅಂಥಾ ರಹದಾರಿನಿಶಿ ಅದನ್ನು ಎಲ್ಲಿಗೆ ಬೇಕಾದರೂ ಸಾಗಿಸಬಹುದು. ಅನ್ಯದೇಶದ ಪದಾರ್ಥವನ್ನು ಹೀಗೆ ಸುಂಕದಿಂದ ವಿನಾಯಿಸಿರುವುದು ಸಹಜವಾಗಿ ಮೈಸೂರು ಫಸಲನ್ನು ಮೈಸೂರು ಗಡಿಯ ಆಚೆಗೆ ಕಳ್ಳತನದಿಂದ ತೆಗದುಕೊಂಡುಹೋಗಿ ಅದನ್ನು ಅಲ್ಲಿ ವಿಲೆವಾರಿ ಹುಟ್ಟಿಸುವುದಕ್ಕೂ ಅಥವಾ ಅದನ್ನು ಅನ್ಯದೇಶದ ಫಸಲಿನೋಪಾದಿಯಲ್ಲಿ ಸಂಸ್ಥಾನದೊಳಕ್ಕೆ ವಾಪಸು ತರುವುದಕ್ಕೂ ಕಾರಣವಾಗಿದೆ. ಗಡಿಗಳಲ್ಲಿರುವ ತಾಲ್ಲೂಕುಗಳಲ್ಲಿ ಸ್ವಲ್ಪಮಟ್ಟಿಗೆ ಕಳ್ಳವ್ಯಾಪಾರವು ನಡೆಯುತ್ತಿರುವುದಾಗಿ ನಂಬಲ್ಪಟ್ಟಿದೆ. ಕಳ್ಳವ್ಯಾಪಾರವನ್ನು ತಪ್ಪಿಸುವುದಕ್ಕಾಗಿ ಪ್ರತ್ಯೇಕವಾದ ಸಾಯರು ಸಿಬ್ಬಂದಿಯ ಒಂದು ಭಾಗವನ್ನು ಗಡಿಯಲ್ಲಿ ಅಂಥಾ ತಪ್ಪಿಸುವ ಕೆಲಸಕ್ಕೆ ನೇಮಿಸಿ ಇದೆ.

5. ಆದರೆ ಅಡಕೆ ಫಸಲಿನ ಕಟಾವಿಗೂ ಅದರ ವಿಲೆವಾರಿಗೂ ಸಂಬಂಧಪಟ್ಟ ತೋಟಗಾರರಿಗೆ ಮಾಡಿರುವ ನಿರ್ಬಂಧವೇ ಕಳ್ಳವ್ಯಾಪಾರಕ್ಕೆ ಮುಖ್ಯವಾದ ಅಡ್ಡಿಯು ಏರ್ಪಾಡಾಗಿದೆ. ಕಟಾವಿನ ಕಾಲಕ್ಕೆ ಸ್ವಲ್ಪ ಮುಂಚೆ ಸಾಯರು ನೌಕರರು ಪ್ರತಿ ತೋಟವನ್ನೂ ಅಜಮಾಯಿಷಿ ಮಾಡಿ ಆಗಬಹುದಾದ ಉತ್ಪತ್ತಿಯನ್ನು ಅಂದಾಜುಮಾಡಿ ಪ್ರತಿ ತೋಟದ ಅಂದಾಜನ್ನೂ ಮುಂದಿನ ದಾಖಲೆಬಗ್ಗೆ ಪಟೇಲನಿಂದ ಇಡಲ್ಪಟ್ಟಿರುವ ಒಂದು ರಿಜಿಸ್ಟರಿನಲ್ಲಿ ಬರೆದುಕೊಳ್ಳುತ್ತಾರೆ. ಫಸಲನ್ನು ಕಟಾವು ಮಾಡುವುದಕ್ಕೆ ಮುಂಚೆ ತೋಟಗಾರನು ಹಾಗೆ ಮಾಡಬೇಕೆಂಬ ತನ್ನ ಉದ್ದೇಶವನ್ನು ಪಟೇಲನಿಗೆ ತಿಳಿಸುತ್ತಾನೆ. ಪಟೇಲನು ಒಂದು ರಹದಾರಿ ಚೀಟಿಯನ್ನು ಕೊಟ್ಟು ತಾನು ಬಂದು ಫಸಲನ್ನು ಅಳೆಯುವುದಕ್ಕೆ ಮುಂಚೆ ಅದನ್ನು ತೋಟದಿಂದ ಸಾಗಿಸಕೂಡದೆಂದು ತೋಟಗಾರನನ್ನು ಆಗಲೆ ಎಚ್ಚರಿಸುತ್ತಾನೆ. ಈ ರಹದಾರಿಯ ಅಧಿಕಾರದ ಮೇಲೆ ಅಡಕೆಗೊನೆಗಳನ್ನು ಜಮಾಯಿಸಿ ಗೊನೆಯಿಂದ ಕಾಯನ್ನು ಬಿಡಿಸಿ ಆಗ ಪಟೇಲನಿಗೆ ವರ್ತಮಾನ ಕೊಡುತ್ತಾರೆ. ಅವನು ತೋಟಕ್ಕೆ ಹೋಗಿ ಅಡಕೆಕಾಯನ್ನು ಅಳೆದು ಅದರಿಂದ ಎಷ್ಟು ಅಡಕೆ ತಯಾರಾಗಬಹುದೋ ಅದನ್ನು ಅಂದಾಜುಮಾಡಿ ಈ ತಪಶೀಲುಗಳನ್ನು ರಹದಾರಿಯಲ್ಲಿ ಬರೆದು ಮಾರಾಟಕ್ಕೆ ಅಡಕೆಯನ್ನು ತಯಾರ್ಮಾಡಲು ತೋಟಗಾರನಿಗೆ ಅಪ್ಪಣೆಕೊಡುತ್ತಾನೆ. ಕೊನೆಯಲ್ಲಿ ಅಡಕೆಯು ತಯಾರಾದಾಗ ಪಟೇಲನೂ ಸಾಯರು ನೌಕರರೂ ಅದನ್ನು ಮತ್ತೊಂದಾವರ್ತಿ ತೂಕಮಾಡಿ ನಿಜವಾಗಿ ಆದ ಒಟ್ಟು ಉತ್ಪತ್ತಿಯನ್ನು ಒಂದು ಪಟ್ಟಿಯಲ್ಲಿ ಬರೆದು ಅದನ್ನು ತೋಟಗಾರನಿಗೆ ಕೊಡುತ್ತಾರೆ. ಪ್ರತಿ ತೋಟಗಾರನ ಬಳಿಯಲ್ಲಿಯೂ ಇರುವ ಅಡಕೆಯ ದಾಸ್ತಾನನ್ನು ತೋರಿಸುವ ಒಂದು ರಿಜಿಸ್ಟರು ಪಟೇಲನ ಬಳಿಯಲ್ಲಿ ಇಡಲ್ಪಡುತ್ತದೆ. ಮನೆಯ ಬಳಕೆಗಾಗಿ ಮಾಫಿಯಾಗಿ ಬಿಡಲ್ಪಡುವ ಸ್ವಲ್ಪ ಅಡಕೆ ಹೋಗಲಾಗಿ ರಿಜಿಸ್ಟರಿನಲ್ಲಿ ತೋರಿಸಿರುವ ಅಡಕೆಯ ಪ್ರಮಾಣಕ್ಕೆ ತೋಟಗಾರನು ಜವಾಬ್ದಾರನಾಗಿರುತ್ತಾನೆ. ಅಡಕೆಯಲ್ಲಿ ಯಾವ ಭಾಗವಾದರೂ ಮಾರಲ್ಪಟ್ಟಾಗ ಮಾರಲ್ಪಟ್ಟ ಪ್ರಮಾಣವು ಪಟೇಲನ ಬಳಿ ಇರುವ ರಿಜಿಸ್ಟರಿನಲ್ಲಿ ತೋರಿಸಲ್ಪಡುತ್ತದೆ. ಕೈಯಲ್ಲಿರುವ ದಾಸ್ತಾನು ಆಗಾಗ್ಗೆ ಅಜ

ವಾಯಿಷಿ ಮಾಡಲ್ಪಡುತ್ತದೆ ಮತ್ತು ಅದು ರಿಜಿಸ್ಟರಿನ ಪ್ರಕಾರದ ನಿಶ್ಯೇಷ ಶಿಲ್ಕಿಗೆ ಸರಿಯಾಗಿ ಇಲ್ಲದೆ ಇದ್ದರೆ ಹಾಗೆ ಬಿದ್ದ ಕಡಮೆಗೆ ತೋಟಗಾರನು ಜವಾಬ್ದಾರನಾಗಿ ಮಾಡಲ್ಪಡುತ್ತಾನೆ. ರೈತನ ಗ್ರಾಮದಿಂದ ಅಡಕೆಯು ಸಾಗಿಸಲ್ಪಡುವಾಗಲೆ ಸಾಯರು ಕಟ್ಟೆಯಲ್ಲಿ ಹಾಳತವು ವಸೂಲ್ಮಾಡಲ್ಪಡುತ್ತದೆ.

6. ಮೇಲ್ಕಂಡ ಕ್ರಮದಿಂದ ರೈತನಿಗೆ ಬಹಳ ತೊಂದರೆ ಉಂಟಾಗುವುದಾಗಿ ಯಾವಾಗಲೂ ಒಪ್ಪಿಕೊಳ್ಳಲ್ಪಟ್ಟಿದೆ. ಈ ಕ್ರಮವು ಸರ್ಕಾರಿ ಕೀಳು ನೌಕರರೂ, ಗ್ರಾಮದ ಪಟೇಲರೂ, ನಿರಂತರವಾಗಿ ರೈತನ (1) ಕೊಯ್ಲಿನ ಕೆಲಸಗಳಲ್ಲಿಯೂ (2) ಗಿರಾಕಿಗಳ ಸಂಗಡ ವ್ಯಾಪಾರದಲ್ಲಿಯೂ; (3) ದಾಸ್ತಾನು ವಿಚಾರವಾಗಿಯೂ ಅವನ ತಂಟೆಗೆ ಹೋಗುವುದಕ್ಕೂ, ನಾನಾರೀತಿಯಲ್ಲಿ ಅವನನ್ನು ಹಿಂಸಿಸುವುದಕ್ಕೂ ಅವರಿಗೆ ಅನೇಕ ಅವಕಾಶಗಳನ್ನು ಕೊಡುತ್ತದೆ. ಆದುದರಿಂದ ಅಡಕೆಯ ಹಾಳತವು ಬೇಸರಗೊಳಿಸುವುದಾಗಿಯೂ, ಪೀಡಿಸುವುದಾಗಿಯೂ ಅತಿ ವಿಚಾರಣೆಗೆ ಅಥವಾ ದಂಡನೆಗೆ ಒಳಪಡಿಸುವುದಾಗಿಯೂ ಇದೆಯೆಂದು ರೆವಿನ್ಯೂ ಆಫೀಸರುಗಳಿಂದ ಸಾಮಾನ್ಯವಾಗಿ ವಿವರಿಸಲ್ಪಟ್ಟಿದೆ; ಸಾಯರು ಹುಟ್ಟುವಳಿಯ ರೂಪವಾಗಿ ಸರಕಾರಕ್ಕೆ ಬರುವ ಮೂರುವರೆ ಲಕ್ಷಕ್ಕೋಸ್ಕರ ಅದಕ್ಕಿಂತ ಬಹಳ ಹೆಚ್ಚಾದಷ್ಟು ಮೊಬಲಗು ನಿಜವಾಗಿ ರೈತರ ಕೈಬಿಟ್ಟು ಹೋಗುವುದಾಗಿ ಬಹಳ ಅನುಭವಶಾಲಿಗಳಾದ ಕೆಲವು ಆಫೀಸರುಗಳು ಅಭಿಪ್ರಾಯ ಪಡುತ್ತಾರೆ.

7. ಈಗ, ಈ ಗುರುವಾದ ಭಾರವು ಯಾರ ಮೇಲೆ ಬೀಳುತ್ತದೆಯೋ ಅಂಥಾ ಜನಗಳು ಅದನ್ನು ತಾಳುವುದಕ್ಕೆ ಅತ್ಯಂತ ಬಲಹೀನರಾಗಿರುವುದಾಗಿ ಎಲ್ಲರೂ ಒಪ್ಪಿಕೊಳ್ಳುತ್ತಾರೆ; ನಿರ್ಣಯಿಸಲು ಅರ್ಹರಾಗಿರುವವರು ಈ ಅಡಕೆ ತೋಟಗಳಿಗೆ ಬಹಳ ಭಾರಿ ಕಂದಾಯ ಬಿದ್ದಿರುವುದಾಗಿ ಅಭಿಪ್ರಾಯ ಪಡುತ್ತಾರೆ. ದಕ್ಷಿಣ ಕನಡಾ ಡಿಸ್ಟ್ರಿಕ್ಟಿನ ನೆರೆಯ ತಾಲ್ಲೂಕುಗಳಲ್ಲಿ ಇರುವ 15 ರೂಪಾಯಿಗೆ ಪ್ರತಿಯಾಗಿ ಇಲ್ಲಿನ ಪರಮಾವಧಿಯ ಕಂದಾಯದ ದರವು ಎಕರೆ ಒಂದಕ್ಕೆ 28 ರೂಪಾಯಿನಷ್ಟು ಭಾರಿಯಾಗಿದೆ. ಸಾಯರಿಸಿದ ಎಕರೆ ಒಂದಕ್ಕೆ ಮತ್ತೆ 13 ರೂಪಾಯಿ ಕಂದಾಯ ಬೀಳುತ್ತದೆ. ಕಳೆದ ಕೆಲವು ದಶಕಗಳಿಗೆ ಈ ತೋಟಗಳಿಗಾಗಿ ಕೊಟ್ಟ ಅತಿ ಅಧಿಕವಾದ ಕಂದಾಯದಿಂದಲೂ ಅಥವಾ ಅದಿಲ್ಲದೆಯೂ ಬಹಳ ಮಂದಿ ಮಲೆನಾಡಿನ ತೋಟಗಾರರು ಅನೇಕ ವರ್ಷಗಳಿಂದ ಸಾಹುಕಾರರ ಹಿಡಿತಕ್ಕೆ ಸಿಕ್ಕಿಕೊಂಡಿದ್ದಾರೆ. ಇದಲ್ಲದೆ ಫಲಗಳು ಉಳಿದುಹೋದುದರಿಂದಲೂ, ಮರಗಳಿಗೆ ತಗುಲಿ ಪೈರನ್ನು ನಾಶಮಾಡುವ ಕೊಳೆ ರೋಗದಿಂದಲೂ, ವರ್ಷೇ ವರ್ಷೇ ಮಳೆ ಸಾಲದೆ ಇರುವುದರಿಂದಲೂ ತೋಟಗಾರರು ಬಹಳ ಕಷ್ಟಪಟ್ಟಿದ್ದಾರೆ. ಸಾಧಾರಣವಾದ ತರೀ ಖುಷ್ಕಿ ಜಮೀನುಗಳ ಒಡೆಯನಿಗೆ ಒಂದು ಸಲದ ಅನಾವೃಷ್ಟಿಯಿಂದ ಕೊಂಚಕಾಲದ ಮಟ್ಟಿಗೆ ನಷ್ಟವಾದರೂ ಮುಂದಿನ ವರ್ಷ ಒಳ್ಳೆ ಮಳೆಯಾದರೆ ಸಂಪೂರ್ಣವಾದ ಬೆಳೆಯನ್ನು ಹೊಂದಬಹುದಾಗಿರುವಲ್ಲಿ ಅಡಕೆ ತೋಟಗಾರನಿಗೆ ಒಂದು ವರ್ಷದ ಅನಾವೃಷ್ಟಿಯಿಂದುಂಟಾಗುವ ನಷ್ಟವು ಸ್ಥಿರವಾಗಿರುವುದು ಏತಕ್ಕೆಂದರೆ ಬಹಳ ಕಷ್ಟದಿಂದಲೂ, ವಿಶೇಷ ಖರ್ಚಿನಿಂದಲೂ, ಸುಮಾರು ಹನ್ನೆರಡು ವರ್ಷಗಳ ವರೆಗೆ ಯಾವ ಪ್ರತಿಫಲವೂ ಇಲ್ಲದೆಯೂ ಎಬ್ಬಿಸಿದ್ದ ಮರಗಳು ಒಂದು ವರ್ಷ ಮಳೆಯಿಲ್ಲದಿರುವುದರಿಂದ ಸಾಯುತ್ತವೆ. ಅಥವಾ ಮಾರನೆ ವರ್ಷ ಎಷ್ಟುಮಳೆ ಬಿದ್ದರೂ ಸಂಪೂರ್ಣವಾಗಿ ತಿರಿಗಿ ಚೇತರಿಸಿಕೊಳ್ಳಲಾರದಷ್ಟು ಮಟ್ಟಿಗೆ ಸತ್ವವನ್ನು ಕಳೆದುಕೊಳ್ಳುತ್ತವೆ. ಕಳೆದ ವರ್ಷದ ವಿಶೇಷ ಅನಾವೃಷ್ಟಿಯಿಂದ ಸುಮಾರು ಅಡಕೆ ತೋಟಗಳು ತಿರಿಗಿ ನೆಟ್ಟಗಾಗದಷ್ಟು ಹಾನಿಯು ಉಂಟಾಯಿತೆಂದು ಸ್ಥೂಲವಾಗಿ ಹೇಳಬಹುದು. ಈ ಪರಿಯಾದ ವಿಧ್ವಂಸನಗಳಿಂದ ಕಳೆದ ವರ್ಷಗಳಲ್ಲಿ ಅಡಕೆ ತೋಟಗಳು ಸ್ಥಿರವಾಗಿ ಹೀನಸ್ಥಿತಿಗೆ ಬಂದಿರುವುದರಿಂದ; ಮಲೆನಾಡಿನ ತೋಟಗಾರರು ಯಾವುದಾದರೂ ಒಂದು ವಿಧವಾದ ಸಹಾಯಕ್ಕೆ ಸಂಪೂರ್ಣವಾಗಿ ಅರ್ಹರಾಗಿರುತ್ತಾರೆಂದು, ಅಡಕೆಯ ವ್ಯವಸಾಯವನ್ನು ಬಲ್ಲ ಎಲ್ಲಾ ಆಫೀಸರುಗಳೂ ಅಭಿಪ್ರಾಯಪಡುತ್ತಾರೆ.

8. ಆಗಾಗ್ಗೆ ಸಹಾಯದ ನಾನಾ ಏರ್ಪಾಟುಗಳು ಸೂಚಿಸಲ್ಪಟ್ಟು, ಪರ್ಯಾಲೋಚಿಸಲ್ಪಟ್ಟವು. 1891ರಲ್ಲಿ ಈಗಿನ ದಿವಾನರಾದ ವಿ॥ ಮಾಧವರಾಯರು ತೋಟಗಾರರ ಸ್ಥಿತಿಯನ್ನೂ, ತೋಟದ ಕಂದಾಯವು ಯಾರಮೇಲೆ ಬೀಳುತ್ತದೆ ಎಂಬುವುದನ್ನೂ, ಸಾಯರು ಸುಂಕವನ್ನೂ, ಇವುಗಳಿಗೆ ಸಂಬಂಧಪಟ್ಟ ಇತರ ವಿಷಯಗಳನ್ನೂ ವಿಚಾರಮಾಡಿ ರಿಪೋರ್ಟು ಮಾಡುವ ಕೆಲಸಕ್ಕಾಗಿ ಯೋ ಕಳುಹಿಸಲ್ಪಟ್ಟರು. ಅವರು ತಪಶೀಲುವಾರು ರಿಪೋರ್ಟು ಕಳುಹಿಸಿ ಅದರಲ್ಲಿ (1) ತೋಟದ ಕಂದಾಯವನ್ನು ಕಡಮೆ ಮಾಡಬೇಕು ಮತ್ತು (2) ಸಾಯರನ್ನು ತೆಗೆದುಹಾಕಬೇಕು ಅಥವಾ ಅದರ ದರವನ್ನು ಕಡಮೆ ಮಾಡಬೇಕೆಂದು ಶಿಫಾರಸು ಮಾಡಿದರು. ಆಗ ಸರ್. ಶೇಷಾದ್ರಿಅಯ್ಯರವರು ತೋಟದ ಕಂದಾಯವನ್ನು ಸಾಧಾರಣವಾದ ತರೀ ಕಂದಾಯದ ಮಟ್ಟಕ್ಕೆ ಇಳಿಸಬೇಕೆಂದು ಸಾಯರು ಸುಂಕವನ್ನು ತೆಗೆದುಹಾಕಬೇಕೆಂದೂ ಅದಕ್ಕೆ ಬದಲಾಗಿ ಒಂದು ಮರಗಂದಾಯವನ್ನು ಹಾಕಬೇಕೆಂದೂ ಆಲೋಚಿಸಿ ಒಂದು ವಿಕಲ್ಪವಾದ (ಒಂದಲ್ಲದಿದ್ದರೆ ಮತ್ತೊಂದು ಎಂಬ) ಸಲಹೆಯನ್ನು ಕೊಟ್ಟರು. ಬಹಳ ಚರ್ಚೆ ನಡೆದ ತರುವಾಯ ಸಾಯರು ಸುಂಕದ ತಂಟೆಗೆ ತತ್ಕಾಲಕ್ಕೆ ಹೋಗದೆ, ಎಲ್ಲಿ ಕಂದಾಯವು ಅತಿ ಭಾರವಾಗಿ ಬಿದ್ದಿತ್ತೋ ಅಂಥಾ ತಾಲ್ಲೂಕುಗಳಲ್ಲಿ ತೋಟದ ಕಂದಾಯವನ್ನು ಮೂರರಲ್ಲಿ ಒಂದು ಭಾಗದಷ್ಟು ಇಳಿಸಿ, ಅದಕ್ಕೆ ದೃಷ್ಟಾಂತವಾಗಿ ನಗರದ ತಾಲ್ಲೂಕಿನ ಸಾಧಾರಣವಾದ ದರವನ್ನು ಎಕರೆ ಒಂದಕ್ಕೆ 15 ರೂಪಾಯಿಂದ 10 ರೂಪಾಯಿಗೆ ಇಳಿಸುವ ಹಾಗೆ ಮಾಡಬೇಕೆಂದು 1896ರಲ್ಲಿ ತೀರ್ಮಾನಿಸಲ್ಪಟ್ಟಿತು.

9. ಆದಾಗ್ಯೂ ತೋಟದ ಕಂದಾಯದ ಒಂದು ಭಾಗವನ್ನು ಈ ರೀತಿಯಾಗಿ ಮನ್ನಿಸುವುದರಿಂದ ರೈತನಿಗೆ ನಿಜವಾಗಿ ಎಷ್ಟು ಸಹಾಯವು ಅಗತ್ಯವಾಗಿತ್ತೋ ಅಷ್ಟು ಸಹಾಯವೂ ಪೂರ್ತಿಯಾಗಿ ಅವನಿಗೆ ಉಂಟಾಗಲಿಲ್ಲವೆಂದು ಕಂಡುಬಂತು. ಅಂದಿನ ಸರ್ಕಾರಿ ಆದಾಯ ವ್ಯಯದ ಸ್ಥಿತಿಯು ಸಂಸ್ಥಾನದ ಬೊಕ್ಕಸಕ್ಕೆ 3½ ಲಕ್ಷ ವರಮಾನವನ್ನು ಕೊಡುವ ಬಾಬನ್ನು ಬಿಟ್ಟುಬಿಡುವುದಕ್ಕೆ ಅವಕಾಶಕೊಡದೆ ಹೋದುದೇ ಸಾಯರು ಸುಂಕದ ತಂಟೆಗೆ ಹೋಗಕೂಡದೆಂದು ತೀರ್ಮಾನಿಸುವುದಕ್ಕೆ ಮುಖ್ಯವಾದ ಕಾರಣವಾಗಿತ್ತು. ಆಯವ್ಯಯಗಳು ಸಾಮಾನ್ಯವಾಗಿ ಅಭಿವೃದ್ಧಿಯಾದಾಗ ಸಾಯರು ಸುಂಕವನ್ನು ಒಟ್ಟಿಗೆ ಅಥವಾ ಅದರಲ್ಲಿ ಒಂದು ಭಾಗವನ್ನು ತೆಗೆದುಹಾಕಬೇಕೆಂದು ತಿರಿಗಿ ಸಲಹೆಗಳು ಮಾಡಲ್ಪಟ್ಟುವು. ಎರಡು ವರ್ಷಗಳ ಹಿಂದೆ ಸರ್. ಪಿ. ಎನ್. ಕೃಷ್ಣಮೂರ್ತಿಯವರು ಸಾಯರು ಹುಟ್ಟುವಳಿಯಲ್ಲಿ ಮೂರರಲ್ಲಿ ಒಂದು ಭಾಗವನ್ನು ಮನ್ನಿಸಿ ಉಳಿದುದನ್ನು ಎಕರೆಗೆ ಇಷ್ಟೆಂದು ವರಿ ಹಾಕಿ ವಸೂಲ್ಮಾಡಬೇಕೆಂದು ಸೂಚಿಸಿದರು. ಆದರೆ ರೈತನು ಈ ಏರ್ಪಾಡನ್ನು ಮೇಲೆ ಹೇಳಿದ ಏರ್ಪಾಡಿಗಿಂತ ಮತ್ತಷ್ಟು ಕಷ್ಟದ್ದಾಗಿರುವುದಾಗಿ ಬಹುಶಃ ಯೋಚಿಸಬಹುದೆಂದು ತೋರಿತು, ಏತಕ್ಕೆಂದರೆ, ಅಂಥಾ ವರಿಯು ಹಾಳತದಹಾಗೆ ನಿಜವಾಗಿ ಆದ ಫಸಲನ್ನು ನೋಡದೆ ಬಹುಶಃ ರೈತನು ತನ್ನ ಫಸಲಿಗೆ ಬೆಲೆಯನ್ನು ಹೊಂದುವ ಕಾಲಕ್ಕೆ ಮುಂಚೆಯೇ ವಸೂಲ್ಮಾಡಲ್ಪಡುವುದು.

10. ಮುಂದೆ ಇನ್ನೂ ಕಡಮೆ ಮಾಡುವುದಕ್ಕೂ ಕೊನೆಗೆ ತೆಗೆದುಹಾಕುವುದಕ್ಕೂ ಪೂರ್ವಭಾವಿಯಾಗಿ ಹಾಳತವನ್ನು ಮಣ ಒಂದಕ್ಕೆ 12 ಆಣೆಯಿಂದ 8 ಆಣೆಗೆ ಸ್ವಲ್ಪಮಟ್ಟಿಗೆ ಇಳಿಸೋಣವು ಈಚೆಗೆ ಪರ್ಯಾಲೋಚನೆಯಲ್ಲಿತ್ತು; ಆದರೆ ಇದು ಈಗಿನ ಕೆಡುಕನ್ನು ಉಂಟುಮಾಡುವ ಪದ್ಧತಿಯನ್ನು ಸರಿಯಾಗಿ ಈಗ ಇರುವ ಸ್ಥಿತಿಯಲ್ಲಿಯೇ ಬಿಡುವುದರಿಂದ ಈ ಸಲಹೆಯನ್ನೂ ಕೂಡ ಬಿಟ್ಟುಬಿಡಲಾಯಿತು. ಈಗ ಒಂದೇಸರ್ತಿಗೆ ಸಂಪೂರ್ಣವಾಗಿ ಸಾಯರು ಸುಂಕವನ್ನು ತೆಗೆದುಹಾಕುವುದಾಗಿ ಯೋಚಿಸಿ ಇದೆ.

11. ಎಷ್ಟುದೂರ ಇದು ತೋಟಗಾರರಿಗೆ ಪ್ರಯೋಜನವನ್ನುಂಟುಮಾಡುವುದೊ ಆ ಅಂಶವನ್ನು ಆಲೋಚಿಸಬೇಕಾಗಿದೆ. ಗೂಢವಾದ ಅರ್ಥಶಾಸ್ತ್ರ ಪ್ರಕಾರ ಉತ್ಪತ್ತಿಯ ಖರ್ಚನ್ನು ಹೆಚ್ಚು ಮಾಡುವ ಪ್ರತಿ ಖರ್ಚೂ ಕೊನೆಯಲ್ಲಿ ಪದಾರ್ಥವನ್ನು ಉಪಯೋಗಿಸುವವನಮೇಲೆ ಬೀಳುತ್ತದೆ; ಮತ್ತು ಈ ಉತ್ಪತ್ತಿಯ ಖರ್ಚಿನಲ್ಲಿ ಆಗುವ ಯಾವುದಾದರೂ ಕಡಮೆಯು ಪದಾರ್ಥವನ್ನು ಉಪಯೋಗಿಸುವವನಿಗೆ ಪ್ರಯೋಜನ ಉಂಟಾಗುವ ಹಾಗೆ ಪದಾರ್ಥದ ಬೆಲೆಯನ್ನು ಕಡಮೆ ಮಾಡುತ್ತದೆ. ಗೌರವಾರ್ಹವಾದ ಅಭಿಪ್ರಾಯವುಳ್ಳ ಕೆಲವು ಆಫಿಸರುಗಳು ಹಾಳತವು ನಿಜವಾಗಿ ಫಸಲನ್ನು ಬೆಳೆಯುವವನಮೇಲೆ ಬೀಳುತ್ತದೆಯೆಂದು ಅಭಿಪ್ರಾಯಪಡುತ್ತಾರೆ. ಈ ವಿಷಯದಲ್ಲಿ ಬಹಳ ವಿವಾದವು ನಡೆಯಿತು; ಅದನ್ನು ಕುರಿತು ಬಹಳವಾಗಿ ಬರೆಯಲ್ಪಟ್ಟಿತು. ಇಂಥಾ ವಿಷಯಗಳಲ್ಲಿ ಖಂಡಿತವಾಗಿ ಹೀಗೆ ಸರಿಯೆಂದು ಹೇಳಲು ಕಷ್ಟವಾಗಿದೆ; ಮತ್ತು ಸ್ಪರ್ಧೆಗೆ ಪೂರಾ ಅವಕಾಶವಿದೆ, ಎಂಬ ಮತ್ತು ಪ್ರತಿ ಮನುಷ್ಯನೂ ತನಗೆ ಯಾವುದು ಒಳ್ಳೆಯದೊ ಅದನ್ನು ತಿಳಿದುಕೊಂಡು ಆ ಪ್ರಕಾರ ನಡೆಯುತ್ತಾನೆಂಬ ಊಹೆಯೇ ಅರ್ಥಶಾಸ್ತ್ರದ ಸಿದ್ಧಾಂತಕ್ಕೆ ಆಧಾರವಾಗಿದೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಆದರೆ ಮಲೆನಾಡಿನ ರೈತನು ತಿಳಿವಳಿಕೆ ಇಲ್ಲದವನೂ ಮತ್ತು ಅನೇಕವೇಳೆ ಬಡವನೂ ಆಗಿದಾನೆ ಮತ್ತು ಸಂಪೂರ್ಣವಾಗಿ ದಳ್ಳಾಳಿಯ ಕೈಯಲ್ಲಿದ್ದಾನೆ, ಈ ದಳ್ಳಾಳಿಯ ಸಹಾಯವಿಲ್ಲದೆ ಹಾಳತವನ್ನೂ ಕೊಡಲಾರನು ಮತ್ತು ತನ್ನ ಫಸಲನ್ನೂ ಮಾರಾಟಕ್ಕೆ ಕಳುಹಿಸಲಾರನು. ಹಾಳತವನ್ನು ತೆಗೆದುಹಾಕುವುದರಿಂದ ಫಸಲನ್ನು ಬೆಳೆಯುವವನಿಗೆ ದಳ್ಳಾಳಿಯ ಮೇಲಿನ ಆಶ್ರಯವನ್ನು ಬಹಳವಾಗಿ ಕಡಮೆಮಾಡುವುದಲ್ಲದೆ ಅದರಿಂದ ಅವನಿಗೆ ಗಣನೆಗೆ ಬರುವಷ್ಟು ಸಹಾಯವಾಗುವುದೆಂದು ನಂಬಲು ನಾನಾ ಕಾರಣಗಳಿವೆ.

12. ಮೈಸೂರು ಅಡಕೆಯು ಪೇಟೆಯಲ್ಲಿರುವವುಗಳಲ್ಲಿ ಉತ್ತಮವಾದುದೆಂದು ಒಪ್ಪಿಕೊಳ್ಳಲ್ಪಟ್ಟಿರುವುದಲ್ಲದೆ ಸಾಮಾನ್ಯವಾಗಿ ಅವಕ್ಕೆ ಇತರ ದೇಶಗಳ ಅಡಕೆಗಿಂತ ಹೆಚ್ಚು ಬೆಲೆ ಸಿಕ್ಕುತ್ತದೆ. ದೇಶಾವಾರವೆಂದು ಕರೆಯಲ್ಪಟ್ಟ ಮೈಸೂರು ದೇಶದಲ್ಲಿ ಉತ್ಪತ್ತಿಯಾಗುವ ಉತ್ಕೃಷ್ಟವಾದ ಅಡಕೆಗೆ ಸಮಾನವಾದುದು ಇಲ್ಲವೇ ಇಲ್ಲ. ನಿಸ್ಸಂದೇಹವಿಲ್ಲದೆ ಇದರಮೇಲಿನ ಹಾಳತವನ್ನು ಇದನ್ನು ಉಪಯೋಗಿಸುವವನು ಕೊಡುತ್ತಾನೆ; ಮತ್ತು ಈ ವರಿಯನ್ನು ಮನ್ನಿಸುವುದರಿಂದ ಫಸಲನ್ನು ಉತ್ಪತ್ತಿ ಮಾಡುವವನಿಗೆ ನೇರಾಗಿ ಪ್ರಯೋಜನವಾಗುವುದಿಲ್ಲ. ಆದರೆ ಕೆಲವು ಕೀಳ್ ತರದ ಅಡಕೆಗಳಿವೆ, ಈಗ ಅವುಗಳ ಮೇಲಿನ ಹಾಳತದ ದೆಸೆಯಿಂದ ಅವುಗಳು ನಿಜವಾಗಿ ವಿಕ್ರಯವಾಗಲು ಸಾಧ್ಯವಿಲ್ಲ. 1875ಕ್ಕೆ ಮುಂಚೆ ಬೇರೆ ಬೇರೆ ತರದ ಅಡಕೆಗಳಿಗೆ 6 ಆಣೆ, 12 ಆಣೆ ಮತ್ತು 1 ರೂಪಾಯಿ 4 ಆಣೆಯ ಸಾಯರು ದರಗಳಿದ್ದುವು. ಏಕರೀತಿಯಾದ 12 ಆಣೆ ದರವು ನಿಸ್ಸಂದೇಹವಾಗಿ ಕೀಳ್ ತರದ ಅಡಕೆಗಳಿಗೆ ಬಹಳ ಬಾಧಕವಾಯಿತು. ಹಾಳತವನ್ನು ತೆಗೆದುಹಾಕೋಣದರಿಂದ ಕೀಳ್ ತರದ ಅಡಕೆಯ ವ್ಯಾಪಾರವು ಒಡನೇ ಅಭಿವೃದ್ಧಿಯಾಗಿ ತನ್ಮೂಲಕ ಪುನಃ ಪೈರು ಬೆಳೆದವನಿಗೆ ವಿಶೇಷ ಸಹಾಯವಾಗುವುದು.

13. ಕೊನೆಯಲ್ಲಿ, ಈಗ ಸರ್ಕಾರದವರು ಬಿಟ್ಟುಬಿಡಬೇಕೆಂದು ಅಭಿಪ್ರಾಯಪಡುವ ಹುಟ್ಟುವಳಿಯ $3\frac{1}{2}$ ಲಕ್ಷದಲ್ಲಿ ಎಷ್ಟು ಅಡಕೆಯ ತೋಟಗಾರನ ಪಾಲಿಗೆ ಹೋಗುವುದೊ ಅದನ್ನು ಹೇಳಲಸಾಧ್ಯವಾದರೂ ಅದು, ಜನಗಳನ್ನು ಪೀಡಿಸುವ ಮತ್ತು ನೀತಿಗೆಡಿಸುವ, ವ್ಯವಸಾಯಗಾರನನ್ನು ದಳ್ಳಾಳಿಯ ಬಂಧನದಲ್ಲಿ ಇಡುವ, ಮತ್ತು ಸರ್ಕಾರಕ್ಕೆ ಈ ತೆರಿಗೆಯಿಂದ ನೇರಾಗಿ ಆಗುವ ಹುಟ್ಟುವಳಿಗಿಂತ ಬಹಳ ಹೆಚ್ಚಾದ ಹಣದ ಭಾರವನ್ನು ವ್ಯವಸಾಯಗಾರನಮೇಲೆ ಹಾಕುವ ಈಗಿನ ಅನಿಷ್ಟವಾದ ಮತ್ತು ಕೆಡುಕಿನ ಪದ್ಧತಿಯನ್ನು ತೆಗೆದುಹಾಕುವುದಕ್ಕೆ ಸಂದೇಹವಿಲ್ಲ.

14. ಸಾಯರು ಸುಂಕವನ್ನು ಹಾಕೋಣವು, ಅದನ್ನು ಅನುಸರಿಸಿರುವ ಕೇಡುಗಳಿಲ್ಲದೆ ಇದ್ದರೆ, ಕಂದಾಯ ಹಾಕುವುದಕ್ಕೆ ಬಹಳ ಅನುಕೂಲವಾದ ರೀತಿಯಾಗಿದೆಯೆಂದೂ, ಮತ್ತು ಸಾಯರು ಸುಂಕವಿಲ್ಲದೆ ಭಾರಿ ಜಮೀನು ಕಂದಾಯಕ್ಕಿಂತ ಸಾಯರು ಸುಂಕದೊಡನೆ ಒಂದು ಲಘುವಾದ ಜಮೀನು ಕಂದಾಯವು ರೈತರಿಗೆ ಇಷ್ಟವಾಗಿರುವುದೆಂದೂ ಒಪ್ಪಿಕೊಳ್ಳಬೇಕಾಗಿದೆ. ಊಹೆಯಲ್ಲಿಯಾದರೂ ಸಾಯರು ಸುಂಕವು ಈ ಪ್ರಯೋಜನಗಳನ್ನುಳ್ಳದೆಂದು ಹೇಳಬಹುದು; ಅದು ನಿಜವಾಗಿ ಆಗುವ ಫಸಲಿನಿಂದ ಕ್ರಮಪಡಿಸಲ್ಪಡುವ ಪ್ರಯೋಜನವನ್ನುಂಟುಗಿರುವುದರಿಂದ ಫಸಲಾಗದ ವರ್ಷದಲ್ಲಿ ರೈತನಿಗೆ ಭಾರವಾಗಿರಲಾರದು; ಮತ್ತು ಅದು ಕಳವಾಗದಂತೆ ಇರಲು ಕೆಲವು ರಕ್ಷಣೆಗಳನ್ನೂ ಕೂಡ ಏರ್ಪಡಿಸುತ್ತದೆ, ಯಾತಕ್ಕೆಂದರೆ ಸಾಯರು ನಿಬಂಧನೆಗಳ ಮೇರೆ ಒಬ್ಬ ಮನುಷ್ಯನು, ತನ್ನ ಹೆಸರು ರಿಜಿಸ್ಟರುಗಳಲ್ಲಿ ದಾಖಲಾದ ಹೊರತು ಅಡಕೆಯನ್ನು ಸುಲಭವಾಗಿ ವಿಲೆವಾರಿ ಮಾಡಲಾಗುವುದಿಲ್ಲ. ಆದರೆ ಈ ಪ್ರಯೋಜನಗಳಿರುವುದಾಗಿ ಹೇಳಬಹುದಾದರೂ ಈ ಪದ್ಧತಿಯ ಕೊರತೆಗಳು ವಿಶೇಷವಾಗಿರುವುದರಿಂದ ರೈತನಿಗೆ ಅಸಹ್ಯಕರವಾದ ಹೊರೆಯನ್ನು ತಪ್ಪಿಸುವುದಕ್ಕೋಸ್ಕರ ಮೇಲ್ಕಂಡ ಪ್ರಯೋಜನಗಳನ್ನು ಬಿಟ್ಟುಬಿಡಬೇಕು; ಮತ್ತು ಸಂಸ್ಥಾನದ ವಿಷಯದಲ್ಲಿ ಪ್ರಜೆಗಳಲ್ಲಿ ಒಂದು ಮುಖ್ಯವಾದ ಮತ್ತು ಅರ್ಹರಾದ ಪಂಗಡದವರ ಹೆಚ್ಚಿದ ಸಂಪತ್ತಿನಿಂದ ಹುಟ್ಟುವಳಿಯಲ್ಲಿ $3\frac{1}{2}$ ಲಕ್ಷವನ್ನು ಬಿಟ್ಟುಬಿಡುವುದಕ್ಕೆ ಆಗಬೇಕಾದುದಕ್ಕಿಂತ ಹೆಚ್ಚು ಪ್ರತಿ ಫಲವು ಉಂಟಾಗುವುದೆಂದು, ದೃಢವಾಗಿ ನಂಬಿದೆ; ಅಂಥಾ ಸಂಪತ್ತು ಎಕರೆಗೆ 13 ರೂಪಾಯಿನಂತೆ ಬೀಳಬಹುದಾದ ತೆರಿಗೆಯು ರೈತನಿಗೆ ತಪ್ಪುವುದರಿಂದ ಉಂಟಾಗಬಹುದೆಂದು ಸುಖವಾಗಿ ನಿರೀಕ್ಷಿಸಬಹುದು.

ತಾರೀಖು 7ನೆ ಮಾರ್ಚಿ 1907.

ನಂ. 7845—ಸ್ಯಾನಿಟರಿ 166-06-4, ಸಮಸ್ತ ಜನರ ತಿಳುವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ :— ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವುವು.

ಸ್ಥಳ.	ತಾಲ್ಲೂಕು.
ದಾಸಕೊಪ್ಪ	ಸಾಗರ.
ಹೊಸೂರು ಕ್ಯಾಂಪು ...	ಕುಂಸಿ ಸಬ್ ತಾಲ್ಲೂಕು.

ತಾರೀಖು 12ನೆ ಮಾರ್ಚಿ 1907.

ನಂ. 8161—ಸ್ಯಾನಿಟರಿ 99—06—6, ಹಾಸನ ಡಿಸ್ಟ್ರಿಕ್ಟ್ ಬೇಲೂರು ತಾಲ್ಲೂಕಿನ ಬೇಲೂರಿಗೆ ಶ್ರೀ ಚನ್ನಕೇಶವ ಸ್ವಾಮಿಯವರ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮಾರ್ಚಿ 20ನೆ ತಾರೀಖಿನಿಂದ 1907ನೆಯ ವರ್ಷದ ಏಪ್ರೈಲ್ 5ನೆ ತಾರೀಖಿನ ವರಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 16ನೆ ಮಾರ್ಚಿ 1907.

ನಂ. 8297—ಸ್ಯಾನಿಟರಿ 66—06—35, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನೆಂದರೆ:—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವುದು.

ಸ್ಥಳ.	ತಾಲ್ಲೂಕು.
ಕಡವಿನಕೋಟೆ	ಹೊಳೆನರಸೀಪುರ.

ತಾರೀಖು 16ನೆ ಮಾರ್ಚಿ 1907.

ನಂ. 8299—ಸ್ಯಾನಿಟರಿ 15—06—10, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವದೇನೆಂದರೆ:—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವುವು.

ಸ್ಥಳ.	ತಾಲ್ಲೂಕು.
ಕುಕ್ಕರಹಳ್ಳಿ	ಮೈಸೂರು.
ಕಾಮನಕೆರೆಹುಂಡಿ	ಡಿಟೋ.
ನಂಜನಗೂಡು	ನಂಜನಗೂಡು.

ತಾರೀಖು 16ನೆ ಮಾರ್ಚಿ 1907.

ನಂ. 8301—ಸ್ಯಾ. 170-06-13, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬಂದೊಂದರ ಪಕ್ಷದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು ಇಂದ	ತಾರೀಖು ಗೆ
1. ಶ್ರೀ ಲಕ್ಷ್ಮೀಕಾಂತಸ್ವಾಮಿ ರಥೋತ್ಸವ.	ಕಳಲೆ ...	ನಂಜನಗೂಡು ..	1907ನೆ ಏಪ್ರೈಲ್ 1ನೆ ತಾರೀಖು.	
2. ಸಂಗಮ ಜಾತ್ರೆ	ತಿಪ್ಪೂರು ...	ಎಡತೊರೆ ...	15—5—07	18—5—07
3. ನರಸಿಹ್ಮಸ್ವಾಮಿ ರಥೋತ್ಸವ.	ಸಾಲಗ್ರಾಮ ...	ಡಿಟೋ	15—5—07	18—5—07

1897ನೆಯ ವರ್ಷದ 2ನೆಯ ನಂಬರ ಎಪಿಡೆಮಿಕ ಡಿಸೀಸಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 1[illegible]ನೆ ಮಾರ್ಚಿ 1907.

ನಂ. 8306—ಸ್ಯಾನಿಟರಿ 139-06—12, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗುತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಕನ್ನಲ್ಲಿ ...	ಬೆಂಗಳೂರು.
ಕೊಡಿಗಲ್ಲಿ ...	ಡಿಟೋ
ಚಿಕ್ಕ ಬಾಣಾವಾರ ...	ಡಿಟೋ
ಚಲ್ಲಘಟ್ಟ ...	ಡಿಟೋ
ದಿವಾನರಪಾಳ್ಯ ...	ಡಿಟೋ
ಆಡಿಗೊಂಡನಹಳ್ಳಿ ...	ಆನೆಕಲ್ಲು.
ಅಲ್ಲಿಳ್ಳಿ ...	ಡಿಟೋ
ಆಡಿಗಾರ್ರ ಕಲ್ಲಹಳ್ಳಿ ...	ಡಿಟೋ
ಮೇಡಹಳ್ಳಿ ...	ಡಿಟೋ
ಬಲ್ಲೂರು ...	ಡಿಟೋ
ಹಂಡೇನಹಳ್ಳಿ ...	ಹೊಸಕೋಟೆ.

ತಾರೀಖು 18ನೆ ಮಾರ್ಚಿ 1907.

ನಂ. 8481—ಸ್ಯಾ. 170-06-16, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಒಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡು ಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು	
			ಇಂದ	ಗೆ
1. ಚಿಕ್ಕದೇವರ ರಥೋತ್ಸವ ...	ಚಿಕ್ಕತ್ತಾಸಿನಕೆರೆ ...	ಮಳವಳ್ಳಿ ...	29—3—07	31—3—07
2. ಶ್ರೀ ಲಕ್ಷ್ಮೀನರಸಿಂಹಸ್ವಾಮಿ ರಥೋತ್ಸವ.	ಮೊರೆಹಳ್ಳಿ ...	ಡಿಟೋ ...	30—5—07	1—6—07

1897ನೆ ವರ್ಷದ 2ನೆ ನಂಬರ ಎಪಿಡೆಮಿಕ ಡಿಸೀಸಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಮಾರ್ಚಿ 1907.

ನಂ. 8623—ಸ್ಯಾನಿಟರಿ 150-06—8, ಬೆಂಗಳೂರು ಡಿಸ್ಟ್ರಿಕ್ಟ್ ಆನೆಕಲ್ಲು ತಾಲ್ಲೂಕಿನ ಮಾಯಸಂದ್ರ ಗ್ರಾಮಕ್ಕೆ ಮುತ್ಯಾಲಮ್ಮನವರ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

1897ನೆಯ ವರ್ಷದ 2ನೆಯ ನಂಬರ ಎಪಿಡೆಮಿಕ ಡಿಸೀಸಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮಾರ್ಚಿ 30ನೆ ತಾರೀಖಿನಿಂದ 1907ನೆ ಇಸವಿ ಏಪ್ರಿಲ್ 2ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಮಾರ್ಚಿ 1907.

ನಂ. 8625—ಸ್ಯಾನಿಟರಿ 156-06—14, ಕೋಲಾರ ಡಿಸ್ಟ್ರಿಕ್ಟು ಸಿಡ್ಲಘಟ್ಟ ತಾಲ್ಲೂಕಿನ ಮೇಲೂರು ಗ್ರಾಮಕ್ಕೆ ಶ್ರೀ ಗಂಗಮ್ಮನವರ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮಾರ್ಚಿ 27ನೆ ತಾರೀಖಿನಿಂದ 1907ನೆ ಇಸವಿ ಏಪ್ರೆಲ್ 6ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು

ತಾರೀಖು 20ನೆ ಮಾರ್ಚಿ 1907.

ನಂ. 8627—ಸ್ಯಾನಿಟರಿ 129-06—8, ಶಿವಮೊಗ್ಗ ಡಿಸ್ಟ್ರಿಕ್ಟು ನಗರ ತಾಲ್ಲೂಕಿನ ರಾಮಚಂದ್ರಪುರಕ್ಕೆ ಶ್ರೀ ರಾಮದೇವರ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಏಪ್ರೆಲ್ 20ನೆ ತಾರೀಖಿನಿಂದ 1907ನೆ ಏಪ್ರೆಲ್ 24ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಮಾರ್ಚಿ 1907.

ನಂ. 8629—ಸ್ಯಾನಿಟರಿ 170-06—18, ಮೈಸೂರು ಡಿಸ್ಟ್ರಿಕ್ಟು ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕಿನ ಮೇಲ್ಕೋಟೆಗೆ ಶ್ರೀ ರಾಮಾನುಜಾಚಾರ್ಯರವರ ತಿರುನಕ್ಷತ್ರ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಏಪ್ರೆಲ್ 9ನೆ ತಾರೀಖಿನಿಂದ ಅದೇ ತಿಂಗಳು 20ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ತಿರುನಕ್ಷತ್ರಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಮಾರ್ಚಿ 1907.

ನಂ. 8631—ಸ್ಯಾನಿಟರಿ 66—06—38, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :— ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸ್ಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವದು.

ಸ್ಥಳ.	ತಾಲ್ಲೂಕು.
ಚಟ್ಟನಹಳ್ಳಿ	ಆಲೂರು ಸಬ್ ತಾಲ್ಲೂಕು.

ತಾರೀಖು 21ನೆ ಮಾರ್ಚಿ 1907.

ನಂ. 8720—ಸ್ಯಾನಿಟರಿ 21-06—103, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿ ಪಡಿಸುವುದೇನಂದರೆ:—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು. ಇಂದ.	ಗೆ.	ಅಧಿಕಾರ.
ಪಂಗುಣಿ ಉತ್ತಿರಂ ಉತ್ಸವ ಮತ್ತು ದನಗಳ ಸಂತೆ	ಈರುಗುವುಮಲೈ ಗ್ರಾಮ	ಒಟ್ಟಪಿದರಂ	ತಿನ್ನವಲ್ಲಿ	15—3—07	8—4—07	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1907ನೇ ಇಸವಿ ಮಾರ್ಚಿ 16ನೆ ಮರ್ತ್ಯಂ 273ನೆ ನಂಬರ್ ಮೆಮೊ ಪ್ರಕಾರ.
* ಕುಟಂಡರಸ್ವಾಮಿಯವರ ಉತ್ಸವ ಮತ್ತು ದನಗಳ ಸಂತೆ	ಕುವಗಂ ಮತ್ತು ಅದರ ಸುತ್ತಮುತ್ತಲಿರುವ ಗ್ರಾಮಗಳು	ತಿರುಕ್ಕಾಯಿಲೂರು	ದಕ್ಷಿಣ ಆರ್ಕಾಡು	4—4—07 ಉಭಯ ದಿನಗಳೂ ಸೇರಿ.	24—4—07	ಡಿಟೋ ನಂಬರ್ 269
ಹಿರಿಯಡಕ ವೀರಭದ್ರಸ್ವಾಮಿಯವರ ದೇವಸ್ಥಾನದ ರಥೋತ್ಸವ	ಬೊಮ್ಮರಬೆಟ್ಟುಗ್ರಾಮ	ಉಡುಪಿ	ದಕ್ಷಿಣ ಕನ್ನಡೀಯ	20—4—07	1—5—07	ಡಿಟೋ ನಂಬರ್ 267
† ಕಾಲಿಯಮ್ಮನ ಜಾತ್ರೆ	ಅದಮ್ಮನ ಕೋಟೆ	ಧರ್ಮಪುರಿ	ಸೇಲಂ	25—3—07 ಉಭಯ ದಿನಗಳೂ ಸೇರಿ.	20—4—07	ಡಿಟೋ ನಂಬರ್ 275

ಷರಾಗಳು.

* ಕುವಗಂನಲ್ಲಿಯಾಗಲಿ ಅಥವಾ ಅದಕ್ಕೆ 5 ಮೈಲಿ ಫಾಸಲೆಯಲ್ಲಿರುವ ಯಾವ ಗ್ರಾಮಗಳಲ್ಲಿಯಾಗಲಿ ದನಗಳ ಸಂತೆಯನ್ನು ನಡೆಸುವದನ್ನು ನಿಷೇಧಿಸಿದೆ.

† ಈ ಜಾತ್ರೆಗೆ ಯಾತ್ರೆ ಹೋಗುವದನ್ನು ನಿಷೇಧಿಸಿದೆ.

ತಾರೀಖು 18ನೆ ಮಾರ್ಚಿ 1907.

ನಂ. 8483—ಸ್ಯಾನಿಟರಿ—66-06—36, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಹಾಸನ ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಿಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರೆಗೆ ಜಾಡ್ಯರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.	ತಾಲ್ಲೂಕು.
ಉದ್ದೂರು	ಹಾಸನ
ದೊಡ್ಡಬಸವನಹಳ್ಳಿ	ಡಿಟೋ
ಚೆನ್ನೂರು	ಬೇಲೂರು
ಚೆನ್ನಾಪುರ	ಡಿಟೋ
ಮಾಡಬಕೊಪ್ಪಲು	ಚೆನ್ನರಾಯಪಟ್ಟಣ
ಕೋಡಿಗರಹಳ್ಳಿ	ಆಲೂರು ಸಬ್ ತಾಲ್ಲೂಕು.

ತಾರೀಖು 25ನೆ ಮಾರ್ಚಿ 1907.

ನಂ. ಜೆ. 3009—ಪೋಲೀಸ್ 3—06—9, ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ಕೆಲಸ ನೋಡುತ್ತಿರುವ ಆಕ್ಟಿಂಗ್ ಎಕ್ಸಟ್ರಾ ಅಸಿಸ್ಟೆಂಟ್ ಕಮಿಷನರು ಮಿ|| ಬಿ. ರಾಮಸ್ವಾಮಯ್ಯ, ಬಿ. ಎ., ಯವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣವನ್ನನುಸರಿಸಿ 1907ನೆ ಮಾರ್ಚಿ 5ನೆ ತಾರೀಖಿನಿಂದ 10 ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತು.

ತಾರೀಖು 16ನೆ ಮಾರ್ಚಿ 1907.

ನಂ. ಜಿ. 5651—ಜಿ. ಎಂ. 201-06—8, ಸರ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಸ್ವತ್ತು ಸರ್ಕಾರಿ ಕೆಲಸಕ್ಕೆ ಎಂದರೆ, ಕೋಲಾರದಲ್ಲಿ ಒಂದು ರೆವಿನ್ಯೂ ಸಬ್ ಡಿವಿಜನ್ ಆಫೀಸಿಗೆ ಉಪಯೋಗಿಸುವುದಕ್ಕೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಕೋಲಾರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಿಗೆ ಸದರೀ ಸ್ವತ್ತನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು.	ಖಾನೆ ನಂಬರು.	ವಿವರ.	ಅಳತೆಗಳು.			ಚತುರ್ಗಡಿ			
							ಉದ್ದ (ಅಡಿಗಳು)	ಅಗಲ (ಅಡಿಗಳು)	ಒಟ್ಟು ಚದರ ಗಜಗಳು.	ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.
ಕೋಲಾರ	ಕೋಲಾರ	ಕೋಲಾರ	ಕೋಲಾರ	ವಿ॥ ಜೇಮ್ಸ್		ನಿವೇಶನ ..	312	208	$7210\frac{2}{3}$	[illegible]	[illegible] ನಂಬರು 286	ಕೋಲಾರ-[illegible] ರಸ್ತೆ	ಕೋಲಾರ [illegible]
						ಅದರ ಮಧ್ಯದಲ್ಲಿ ತಾರಸಿ ಮತ್ತು ಹೆಂಚಿನ ಮೇಲ್ಛಾವಣಿಯುಳ್ಳ ಬಂಗಲೆ	56	37	$230\frac{2}{9}$				

ತಾರೀಖು 26ನೆ ಮಾರ್ಚಿ 1907.

ನಂ. ಜಿ. 3019—ಪೋಲೀಸ್ 142—06—6, ಪ್ರೊಬೇಷನರಿ ಪೋಲೀಸು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್, ವಿ॥ ಮಿರ್ಜಾ ಮಹಮದ್ ಇಸ್ಮಾಯಿಲ್, ಬಿ. ಎ., ಯವರು, ತಮಗೆ 1907ನೆ ಇಸವಿಯ ಮಾರ್ಚಿ ಮೊದಲನೆ ತಾರೀಖಿನ ಜಿ. 2655-ಪೋಲೀಸ್ 142—06—4 ನಂಬರಿನ ಇಸಿ ಹಾರ್ನಾಮೆಯಲ್ಲಿ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೇಜ್ ರಜಾವನ್ನು ಸದರೀ ತಾರೀಖಿನ ಪೂರ್ವಾಹ್ನದಿಂದ ಉಪಯೋಗಿಸಿಕೊಂಡು ಅದೇ ತಿಂಗಳು 12ನೆ ತಾರೀಖಿನ ಪೂರ್ವಾಹ್ನದಲ್ಲಿ ಪುನಃ ಕೆಲಸದಮೇಲೆ ಬಂದುದರಿಂದ ರಜಾದಲ್ಲಿ ಅವರು ಉಪಯೋಗಿಸಿಕೊಳ್ಳದೆ ಉಳಿದ ಭಾಗವನ್ನು ಇದರಿಂದ ರದ್ದುಮಾಡಿದೆ.

ತಾರೀಖು 9ನೆ ಮಾರ್ಚಿ 1907.

ನಂ. ಆರ್. 8207—ಎಲ್. ಆರ್. 470-06—3, ಸರ್ 1894ನೆ ವರ್ಷದ 7ನೆ ನಂಬರ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಗುಂಡ್ಲುಪೇಟೆ ತಾಲ್ಲೂಕಿನ ಕೋಟೆಕೆರೆ ಗ್ರಾಮದ ದಾಖಲೆ ಬೋಗಯ್ಯನ ಹುಂಡಿ ಗ್ರಾಮ ನಿವೇಶನದ ವಿಸ್ತರಣೆಯ ಬಗ್ಗೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ನಂಜನಗೂಡು ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ ತರಿ ಬಾಗಾಯತು.	ಒಟ್ಟು ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಗಡಿ			
									ವಿಸ್ತೀರ್ಣ	ಕಂದಾಯ	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ.	ರೂ.	ಎ.	ಅ.				
ಮೈಸೂರು	ಗುಂಡ್ಲುಪೇಟೆ	ಬೇಗೂರು	ಕೋಟೆಕೆರೆ	(1) ಚನ್ನೇಗೌಡ (2) ನಾಗೇಗೌಡ	60	ಖುಷ್ಕಿ	3	2	1	11	ಸರ್ವೆ 60ನೇ ನಂಬರಿನ ಭಾಗ	ಗ್ರಾಮಠಾಣ	ಸರ್ವೆ 59ನೇ ನಂಬರು	ಸರ್ವೆ 61ನೇ ನಂಬರು

ತಾರೀಖು 28ನೆ ಫೆಬ್ರುವರಿ 1907.

ನಂ. ಫೈನಾನ್ಸ್—6501-ಸ. ರಿ. 58-06, ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್ ದೇಖೀಲ್ ಮೈಸೂರು ಸಂಸ್ಥಾನದಲ್ಲಿ 1907ನೆ ಇಸವಿ ಜುಲೈ ಗುರ್ರೇ ಲಾಗಾಯತು 1910ನೆ ಇಸವಿ ಜೂನ್ 30ನೆ ತಾರೀಖು ವರೆಗೆ ಆಗುವ ಮೂರು ವರುಷಗಳ ಕಾಲದಲ್ಲಿ ಷರಾಬನ್ನು ಯಾ ಇತರ ಬೆಳದೇಶದ ಸಾರಾಯಿಯನ್ನು ತಯಾರ್ಮಾಡುವ ಬಟ್ಟಿ ಸ್ವಾತಂತ್ರ್ಯಕ್ಕೋಸ್ಕರ ದರಖಾಸ್ತುಗಳು ಇದಕ್ಕೆ ಸೇರಿಸಿರುವ ನಮೂನೆಯಲ್ಲಿ ಅಪೇಕ್ಷಿಸಲ್ಪಟ್ಟಿರುತ್ತವೆ.

2. ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನಿನ ಕಂಟ್ರಾಕ್ಟು, ಮೈಸೂರು ದೇಶದ ಘನವನ್ನು ಹೊಂದಿದ ರೆಸಿಡೆಂಟ್ ಸಾಹೇಬರವರ ಅಪ್ಪಣೆ ಮೇರೆ ಈ ಇಸ್ತಿಹಾರಿನಲ್ಲಿ ಅಡಗಿಸಲ್ಪಟ್ಟಿರುತ್ತದೆ.

3. ಯಾವ ಸ್ವಾತಂತ್ರ್ಯಕ್ಕೋಸ್ಕರ ಈಗ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆಯೋ ಅಂಥಾ ಸ್ವಾತಂತ್ರ್ಯವು, ಈ ಇಸ್ತಿಹಾರ್ನಾಮೆಯ 8ನೆ ಪ್ಯಾರಾದಲ್ಲಿ ವಿವರಿಸಲ್ಪಟ್ಟ ಷರತ್ತುಗಳಿಗೂ ಮತ್ತು ಮೈಸೂರು ಗವರ್ನಮೆಂಟಿನಿಂದ ಮಂಜೂರ್ಮಾಡಲ್ಪಟ್ಟ ಎಕ್ಸೈಜ್ ಕಾನೂನುಗಳಿಗೂ ಮತ್ತು ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್ನಲ್ಲಿ ಹಾಲೀ ಜಾರೀಲಿರುವ ಎಕ್ಸೈಸ್ ಕಾನೂನಿಗೂ ಒಳಪಟ್ಟು ಕೊಡಲ್ಪಡುವುದು. ಸದರೀ ಸ್ವಾತಂತ್ರ್ಯದಲ್ಲಿ ಸೀಮೆ, ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಮತ್ತು ಪರಾಯಿ ದೇಶದ ಹುಳಿಸಿ ಉಕ್ಕಿದ ಮದ್ಯಗಳು, ಅಥವಾ ಒಳದೇಶದ ಬೀರೂ ಇವುಗಳನ್ನು ತಯಾರಿ ಅಥವಾ ಫುರೋಖ್ತು ಮಾಡುವ ಹಕು ದಾರಿಯು ಅಡಗಿರುವುದಿಲ್ಲವು.

4. ಮಾಹೆಯಾನಾ 34,000 ಸಾವಿರದ ಲಾಗಾಯಿತು 36,000 ಸಾವಿರದ ಗ್ಯಾಲನ್ ತೇದಾದು ವುಳ್ಳ ಷರಾಬ್ ಬೇಕಾಗುವದೆಂದು ಅಂದಾಜ್ ಮಾಡಲ್ಪಟ್ಟಿರುತ್ತದೆ. 1905-06ನೆ ಇಸವಿಯಲ್ಲಿ ಬೆಂಗಳೂರು ಡಿಸ್ಟಿಲರಿಯಿಂದ 4,07,272 ಗ್ಯಾಲನ್‌ಗಳ ತೇದಾದುವುಳ್ಳ ಷರಾಬ್ ಸರಬರಾಯಿ ಮಾಡಲ್ಪಟ್ಟಿರುತ್ತದೆ. ಯದ್ಯಪಿ ಬೇಕಾಗುವ ಷರಾಬಿನ ತೇದಾದ್ ಯಾ ಪರಿಮಾಣದ ವಿಷಯದಲ್ಲಿ ಷರಾಬು ತಯಾರಿ ಗುತ್ತಿಗೆದಾರನಿಗೆ ಕರಾರು ಮಾಡಲಿಕ್ಕಾಗುವುದಿಲ್ಲ. ಅಂದಾಜು ಮಾಡಲ್ಪಟ್ಟಿರುವ ತೇದಾದ್‌ಗಿಂತಲೂ ಅಧಿಕವಾಗಲೀ ಯಾ ಕಮ್ಮಿಯಾಗಲಿ ನಿಜವಾಗಿ ಎಷ್ಟು ಷರಾಬ್ ಬೇಕಾಗುತ್ತದೆಯೋ ಅಷ್ಟಕ್ಕೆ ಸದರೀ ಗುತ್ತಿಗೆದಾರನು ಬದ್ಧರಾಗಿರುತ್ತಾರೆ.

5. ದರಖಾಸ್ತುದಾರರು ಕಂಟ್ರಾಕ್ಟಿನ ಪೂರಾ ಮಾಯಿದೆಗೆ ಬೇಕಾಗುವ 20 ಡಿಗ್ರಿ ಅಂಡರ್ ಪ್ರೂಫ್ ಬಲವುಳ್ಳ ಎಲ್ಲಾ ಷರಾಬನ್ನು ಅಂದರೆ ಕಬ್ಬಿನ ಬೆಲ್ಲದಿಂದ ತಯಾರ್ಮಾಡಲ್ಪಟ್ಟ ಸಾರಾಯಿಗಾಗಿ ತಾಟಿ ಬೆಲ್ಲದಿಂದ ತಯಾರ್ಮಾಡಲ್ಪಟ್ಟ ಸಾರಾಯಿಗಾಗಿ ಮತ್ತು ಕಾಕಂಬಿಯಿಂದ ತಯಾರ್ಮಾಡಲ್ಪಟ್ಟ ಸಾರಾಯಿಗಾಗಿ ಗ್ಯಾಲನ್ 1ಕ್ಕೆ ಹಿಡಿಯುವ ಕನಿಷ್ಟ ದರಕ್ಕೆ ಸರಬರಾಯಿ ಮಾಡುತಾರೋ ಆ ದರವನ್ನು ಪ್ರತ್ಯೇಕವಾಗಿ ತಿಳಿಸಬೇಕು. ಈ ನೋಟಿಫಿಕೇಷನ್ ಅನುಸ್ಸಾರವಾಗಿ ಕೊಡಲ್ಪಟ್ಟ ಕಂಟ್ರಾಕ್ಟಿನ ಮಾಯಿದೆಯು ಜಾರಿ ಇರುವ ಕಾಲದಲ್ಲಿ ಸ್ವತಂತ್ರ ಅಂಗಡಿಕಾರರಿಗೂ ಗುತ್ತಾ ಫಿರಕಾವನ್ನು ಪಡೆದ ಗುತ್ತಿಗೆದಾರರಿಗೂ ಸರಬರಾಯಿ ಮಾಡುವ ಬಗ್ಗೆ ಮೇಲ್ಕಂಡ ಮೇರೆ ದರಖಾಸ್ತು ಮಾಡಲ್ಪಟ್ಟು ಗವರ್ನಮೆಂಟಿನಿಂದ ಅಂಗೀಕರಿಸಲ್ಪಟ್ಟ ದರದ ಪ್ರಕಾರವೇ ಷರಾಬು ತಯಾರಿ ಕಂಟ್ರಾಕ್ಟುದಾರನಿಂದ ಗವರ್ನಮೆಂಟಿಗೆ 20 ಡಿಗ್ರಿ ಅಂಡರ್‌ಪ್ರೂಫ್ ಷರಾಬು ಸರಬರಾಯಿ ಮಾಡಲ್ಪಡತಕ್ಕದ್ದು. ಡಬ್ಬಲ್ ಡಿಸ್ಟಿಲ್ಡ್ ಯಾ ಶುದ್ಧ ಮಾಡಲ್ಪಟ್ಟ ಮದ್ಯವನ್ನೂ ಮತ್ತು 20 ಡಿಗ್ರಿ ಅಂಡರ್‌ಪ್ರೂಫಿಗೆ ಜಾಸ್ತಿ ಯಾ ಕಮ್ಮಿ ಬಲವುಳ್ಳ ಸ್ಪೆಷಲ್ ಯಾ ವಿಶೇಷ ಮದ್ಯವನ್ನು ಷರಾಬ್ ತಯಾರಿ ಗುತ್ತಿಗೆದಾರನು ಗೊತ್ತುಮಾಡಬಹುದಾದ ದರಗಳಲ್ಲಿ ಬಿಕರಿ ಮಾಡುವ ಬಗ್ಗೆ ಲೈಸೆನ್ಸು ಪಡೆದಿರುವ ಜನಗಳಿಗೆ ಸರಬರಾಯಿ ಮಾಡುವ ಬಗ್ಗೆ ಸರ್ಕಾರದವರು ಅಪ್ಪಣೆ ಮಾಡಿದಾಗ್ಗ ಷರಾಬ್ ತಯಾರಿ ಗುತ್ತಿಗೆದಾರನು ಅಂಥಾ ಮದ್ಯಗಳನ್ನು ತಯಾರ್ಮಾಡಿ ಒದಗಿಸತಕ್ಕದ್ದು. ಪರಂತು 20 ಡಿಗ್ರಿ ಅಂಡರ್ ಪ್ರೂಫಿಗೆ ಜಾಸ್ತಿ ಯಾ ಕಮ್ಮಿ ಬಲವುಳ್ಳ ಸಿಂಗಲ್ ಡಿಸ್ಟಿಲ್ಡ್ ಷರಾಬಿಗೆ ಅವನು ಹಾಕುವ ಖರೀದಿಯು 20 ಡಿಗ್ರಿ ಅಂಡರ್ ಪ್ರೂಫ್ ಷರಾಬಿಗೆ ಗೊತ್ತಾದ ದರದ ಮೇಲೆ ಕ್ಯಾಸಿಲಾಸ್ ರೂಲ್ಸ್ ಅನುಸರಿಸಿ ದಾಮಾಷಾಯಿ ಪ್ರಕಾರವಾಗಿ ಇರತಕ್ಕದ್ದು.

6. ಪ್ರತಿ ದರಖಾಸ್ತು ನಗದಾಗಿಯಾಗಲಿ "ಮೈಸೂರು ದಿವಾನರವರ ಹೆಸರಿಗೆ" ಕ್ರಮವಾಗಿ ಇಂಡಾರ್ಸ್ ಮಾಡಲ್ಪಟ್ಟ ಗವರ್ನಮೆಂಟ್ ಬಾಂಡುಗಳ ಮೂಲಕವಾಗಿಯಾಗಲೀ 5,000 ರೂಪಾಯಿಗಳ ಠೇವಣಿ ಸಹಿತ ಲಿಫಾಫೆಯಲ್ಲಿ ಹಾಕಲ್ಪಟ್ಟು "ಷರಾಬ್ ತಯಾರಿಯ ಬಟ್ಟಿ ಸ್ವಾತಂತ್ರ್ಯದ ಬಗ್ಗೆ ದರಖಾಸ್ತು" ಎಂಬದಾಗಿ ವಿಳಾಸ ಬರೆಯಲ್ಪಟ್ಟು ಬೆಂಗಳೂರಲ್ಲಿ ಎಕ್ಸೈಜ್ ಕಮ್ಮಿಷನರಿಗೆ 1907ನೆ ಇಸವಿ ಏಪ್ರಿಲ್ 3ನೆ ಮಂಗಳವಾರದ ಮಧ್ಯಾಹ್ನಕ್ಕೆ ಪೂರ್ವ ತಲಪುವಂತೆ ಕಳುಹಿಸಲ್ಪಡತಕ್ಕದ್ದು. ಸದರೀ ತಾರೀಖು ತರುವಾಯ ಯಾವ ದರಖಾಸ್ತೂ ಹಿಡಿಯಲ್ಪಡಲಾರದು. ದರಖಾಸ್ತುಗಳು 1907ನೆ ಇಸವಿ ಏಪ್ರಿಲ್ 3ನೆ ಮಂಗಳವಾರದ ಮಧ್ಯಾಹ್ನ 12 ಘಂಟೆಗೆ ಎಕ್ಸೈಜ್ ಕಮ್ಮಿಷನರರವರ ಆಫೀಸಿನಲ್ಲಿ ಹಾಜರ್ ಇರಬಹುದಾದ ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು. ದರಖಾಸ್ತುಗಳ ಆಖೈರ್ ವಿಲೇವಾರಿಯು ಸರ್ಕಾರದವರಿಗೆ ಸೇರಿದ್ದಾಗಿರುತ್ತದೆ. ಅವರು ಯಾವುದೊಂದು ಸಬಬೂ ತಿಳಿಸದೇನೇ ಯಾವ ದರಖಾಸ್ತನ್ನಾಗಲೀ ಎಲ್ಲಾ ದರಖಾಸ್ತುಗಳನ್ನಾಗಲೀ ತಿರಸ್ಕರಿಸುವ ಪೂರಾ ಸ್ವಾತಂತ್ರ್ಯವನ್ನು ತಮ್ಮಲ್ಲಿ ಉಳಿಸಿಕೊಂಡಿರುತ್ತಾರೆ. ತಿರಸ್ಕರಿಸಲ್ಪಡುವ ದರಖಾಸ್ತುದಾರರಿಂದ ಇಡಲ್ಪಟ್ಟ ಠೇವಣಿ ಮೊಬಲಗು ಅವರು ಕೇಳಿಕೊಂಡಾಗ ವಾಪಸ್ ಮಾಡಲ್ಪಡುವುದು.

7. ಮೈಸೂರು ಸರ್ಕಾರದವರಿಂದ ಆಖೈರಾಗಿ ಅಂಗೀಕರಿಸಲ್ಪಡುವ ದರಖಾಸ್ತುದಾರನು ಅಂಥಾ ಅಂಗೀಕರಿಸಲ್ಪಟ್ಟ ಸಂಗತಿ ಅವನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು ಎಂಟು ದಿವಸಗಳ ವಳಗಾಗಿ ಮೊದಲೇ ಇಡೋಣಾದ ಠೇವಣೀ ದೇಖೀಲ್ 50,000 ರೂಪಾಯಿಗೆ ಸರಿಯಾದ ಮೊಬಲಗನ್ನು ನಗದಾಗಿಯಾಗಲಿ ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರ್ಸು ಮಾಡಲ್ಪಟ್ಟ ಪತ್ರಗಳ ಮೂಲಕವಾಗಿಯಾಗಲೀ ಬೆಂಗಳೂರಲ್ಲಿ ಇರತಕ್ಕ ಹುಜೂರು ಟ್ರೆಜರಿಯಲ್ಲಿ ಡಿಪಾಜಿಟ್ ಕಟ್ಟತಕ್ಕದ್ದು, ಮತ್ತು ಡಿಸ್ಟಿಲರಿಯಲ್ಲಿರುವ ಯಂತ್ರಗಳು, ಸಾಮಾನುಗಳು ಮತ್ತು ಸರಕುಗಳನ್ನು ಹೆಚ್ಚಾದ ಠೇವಣಿಯಾಗಿಟ್ಟು ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳಿಗೆ ಒಪ್ಪಿ ನಡೆಯುವ ಬಗ್ಗೆ ಬದ್ಧನಾಗಿ ತೋರಿಸುವ ನಮೂನೆಯಲ್ಲಿ ಕ್ರಮವಾದ ಛಾಪಾ ಕಾಗದದಲ್ಲಿ ಒಂದು ಒಡಂಬಡಿಕೆಯನ್ನು ಬರೆದುಕೊಡತಕ್ಕದ್ದು. ಮತ್ತು ಅಂಥಾ ಮಾಯಿದೆ ಒಳಗೆ ಅವನು ಅವಶ್ಯಕವಾದ ಠೇವಣಿ ಕಟ್ಟುವುದಕ್ಕೆ ಅಥವಾ ಒಡಂಬಡಿಕೆಯನ್ನು ರುಜು ಮಾಡುವುದಕ್ಕೆ ತಪ್ಪಿಹೋದರೂ ಅಥವಾ ನಿರಾಕರಿಸಿದರೂ ಮೊದಲೇ ಅವನಿಂದ ಇಡೋಣಾದ ಠೇವಣಿ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಟ್ಟು ಕಂಟ್ರಾಕ್ಟು ಅನ್ಯಥಾ ವಿಲೇವಾರಿ ಮಾಡಲ್ಪಡುವುದು.

8. ಈಗ ದರಖಾಸ್ತು ಮಾಡಲ್ಪಡುವ ಕಂಟ್ರಾಕ್ಟು, ಇದರಡಿ ಕಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು; ಯಾವುವೆಂದರೆ :—

I. ಕಂಟ್ರಾಕ್ಟುದಾರನು ಬೆಂಗಳೂರು ಬಳಿಯಣ ಗವರ್ನಮೆಂಟ್ ಡಿಸ್ಟಿಲರಿ ಆವರಣದಲ್ಲಾಗಲೀ ಅಥವಾ ಗವರ್ನಮೆಂಟಿನಿಂದ ಮಂಜೂರ್ಮಾಡಲ್ಪಡುವ ಇತರ ಯಾವ ಸ್ಥಳದಲ್ಲಾಗಲೀ ಷರಾಬ್ ಮತ್ತು ಇತರ ಒಳದೇಶದ ಸಾರಾಯಿಯನ್ನು ತಯಾರ್ಮಾಡತಕ್ಕದ್ದು. ಬೆಂಗಳೂರು ಬಳಿಯಣ ಡಿಸ್ಟಿಲರಿ ಕಟ್ಟಡಗಳನ್ನೂ ನೀರಿನ ಸರಬರಾಯಿಗೆ

ಹಾಲಿ ಇರತಕ್ಕ ಏರ್ಪಾಟನ್ನೂ ಉಪಯೋಗಿಸುವ ಬಗ್ಗಾಗಿ ಕಂಟ್ರಾಕ್ಟದಾರನು ಮಾಹೇಯಾನಾ 500 ರೂಪಾಯಿ ಬಾಡಿಗೆಯನ್ನು ಸರಕಾರಕ್ಕೆ ಕೊಡತಕ್ಕದ್ದು. ಸದರೀ ಕಟ್ಟಡಗಳಿಗೆ ಯಾ ನೀರಿನ ಸರಬರಾಯಿಗೆ ಸರಕಾರದವರು ಮಂಜೂರ್ಮಾಡಬಹುದಾದಂಥಾ ಅಭಿವೃದ್ಧಿಯು ಯಾ ಜಾಸ್ತಿ ಕಾಮಗಾರಿಯು, ಸರಕಾರದವರು ಗೊತ್ತು ಮಾಡಬಹುದಾದ ಜಾಸ್ತಿ ಬಾಡಿಗೆಯನ್ನು ಅಥವಾ ದರವನ್ನು ಕಂಟ್ರಾಕ್ಟದಾರನು ಕೊಡತಕ್ಕದ್ದೆಂಬ ಷರತ್ತಿನ ಮೇಲೆ, ಸರ್ಕಾರದ ಲಾಗವಡುನಿಂದ ನಡೆಸಲ್ಪಡತಕ್ಕದ್ದು. ಮತ್ತು ಎಗ್ಸಿಕ್ಯೂಟಿವ್ ಇಂಜನಿಯರಿಂದ ತೋರಿಸಲ್ಪಡಬಹುದಾದ ಡಿಸ್ಟಿಲೆರಿ ಕಟ್ಟಡಗಳಿಗೂ ಮತ್ತು ನಾಲಾಗಳಿಗೂ ಅಗಬೇಕಾದ ಸಾಲಿಯಾನಾ 50 ರೂಪಾಯಿಗಳಿಗೆ ಮೀರದ ರಿಪೇರಿಗಳು ಕಂಟ್ರಾಕ್ಟದಾರನಿಂದ ಕೂಡ್ಲೆ ಮಾಡಲ್ಪಡಬೇಕು.

II. ಕಂಟ್ರಾಕ್ಟದಾರನು ಸಾಧಾರಣವಾಗಿ ಚಾಲ್ತಿ ಖರ್ಚಿನ ದರ ಪ್ರಕಾರ ಒಂದು ತಿಂಗಳ ದಾಸ್ತಾ ಅಂದರೆ 34,000 ಸಾವಿರ ಗ್ಯಾಲನ್‌ಗಳನ್ನು ಡಿಸ್ಟಿಲರಿ ಗಡಂಗಿನಲ್ಲಿ ಇಟ್ಟಿರತಕ್ಕದ್ದು. ಮತ್ತು 20 ಡಿಗ್ರಿ ಅಂಡರ್ ಪ್ರೂಫ್ ಲೆಖ್ಖದ ಮೇರೆಗೆ ಲಾಯಖ್ ಷರಾಬ್ ದಾಸ್ತಾ 18,000 ಗ್ಯಾಲನ್‌ಗಳಿಗಿಂತ ಕಮ್ಮಿಯಾಗಿ ಯಾವಾಗಲೂ ಇರಕೂಡದು.

III. ಕಂಟ್ರಾಕ್ಟದಾರನು ಮೈಸೂರು ಸಂಸ್ಥಾನದಲ್ಲಿ ಸ್ಥಾಪಿಸಲ್ಪಟ್ಟ ಗವರ್ನ್ಮೆಂಟನಿಂದ ಷರಾಬ್ ಯಾ ಇತರ ಒಳದೇಶದ ಸಾರಾಯಿ ತಯಾರಿ ಮಾಡುವ ಬಗ್ಯೆ ಅಪ್ಪಣೆ ಕೊಡಲ್ಪಡುವ ಯಾವುದಾದರೂ ಸಕ್ಕರೆ ಕಾರ್ಖಾನೆಯಿಂದ ಷರಾಬ್ ಯಾ ಇತರ ಒಳದೇಶದ ಸಾರಾಯಿಯನ್ನು ಕೊಂಡುಕೊಳ್ಳುವ ಬಗ್ಯೆ ಅಪ್ಪಣೆ ಕೊಡಲ್ಪಡತಕ್ಕದ್ದು. ಕಂಟ್ರಾಕ್ಟದಾರನು ಗವರ್ನ್ಮೆಂಟನವರ ಅಪ್ಪಣೆ ಪಡೆದು ಸ್ವಂತವಾಗಿ ಒಂದು ಸಕ್ಕರೆ ಕಾರ್ಖಾನೆಯನ್ನು ಇಟ್ಟು ಅದರಲ್ಲಿ ಷರಾಬ್ ಯಾ ಇತರ ಒಳದೇಶದ ಸಾರಾಯಿಯನ್ನು ತಯಾರ್ಮಾಡುವ ಸಂದರ್ಭದಲ್ಲಿ, ಅವನು ಅಂಥಾ ಕಾರ್ಖಾನೆಯಲ್ಲಿ ಗವರ್ನ್ಮೆಂಟನಿಂದ ಗೊತ್ತು ಮಾಡಲ್ಪಡುವ ತೇದಾದ್‌ವುಳ್ಳ ಷರಾಬನ್ನು ಯಾ ಇತರ ಒಳದೇಶದ ಸಾರಾಯಿಯನ್ನು ದಾಸ್ತಾ ಇಡುವ ಬಗ್ಯೆ ಬದ್ಧನಾಗಿರತಕ್ಕದ್ದು.

IV. ತಯಾರ್ಮಾಡಲ್ಪಟ್ಟ ಷರಾಬು ಒಳ್ಳೇ ರಖಂ ಉಳ್ಳದ್ದಾಗಿರಬೇಕು. ಡಿಸ್ಟಿಲೆರಿ ಜಿಮ್ಮೆಯಲ್ಲಿರುವ ದೊಡ್ಡ ಉದ್ಯೋಗಸ್ಥರ ವಿಚಾರಣೆಗೆ ಒಳಪಟ್ಟು ಬಹಳ ಜೋರಾದ ಷರಾಬನ್ನು ವಿಧಾಯಕವಾದ ಜೋರಿಗೆ ತರುವುದಕ್ಕೆ ಡಿಸ್ಟಿಲರಿಯಲ್ಲಿ ಭಟ್ಟಿಯಿಂದ ಇಳಿಸಲ್ಪಟ್ಟ ನೀರನ್ನು ಮಾತ್ರವೇ ಯಾವಾಗಲೂ ಉಪಯೋಗಿಸತಕ್ಕದ್ದು. ಭಟ್ಟಿ ಇಳಿಸುವುದಕ್ಕೆ ಉಪಯೋಗಿಸುವ ಪದಾರ್ಥಗಳನ್ನು ಆ ಉದ್ಯೋಗಸ್ಥರು ಮಂಜೂರ್ಮಾಡಬೇಕು. ಭಟ್ಟಿ ಇಳಿಸುವುದರಲ್ಲಿ ದೇಹಕ್ಕೆ ವಿರೋಧವಾದ ಪದಾರ್ಥಗಳನ್ನು ಉಪಯೋಗಿಸಕೂಡದು. ಮತ್ತು ಅಂಥಾ ಪದಾರ್ಥಗಳನ್ನು ಷರಾಬಿನಲ್ಲಾಗಲೀ ಅಥವಾ ಇತರ ಒಳದೇಶದ ಸಾರಾಯಿನಲ್ಲಾಗಲೀ ಅಥವಾ ಇತರ ಮದ್ಯದಲ್ಲಾಗಲೀ ಅದು ತಯಾರಾದ ನಂತರ ಹಾಕಕೂಡದು. ತಯಾರ್ಮಾಡಲ್ಪಟ್ಟ ಷರಾಬುಗಳು ಕೆಟ್ಟ ಪದಾರ್ಥಗಳ ಮಿಶ್ರದಿಂದ ಕೆಡಿಸಲ್ಪಡಕೂಡದು ಅಥವಾ ಜೋರನ್ನು ಇಳಿಸಿ ವಿಧಾಯಕವಾದ ಜೋರಿಗೆ ತರುವುದಕ್ಕೆ ಭಟ್ಟಿ ಇಳಿಸಿದ ನೀರಿನಿಂದ ವಿನಾ ಮತ್ಯಾವ ನೀರಿನಿಂದಲೂ ಬೆರೆಸಲ್ಪಡಕೂಡದು.

V. ಜಾಜವಿ ಖರ್ಚಾಗುವುದರ ದೆಸೆಯಿಂದ ಅಥವಾ ಇತರ ಕಾರಣಗಳಿಂದ, ಹೊರಗಿನ ಪ್ರದೇಶಗಳಲ್ಲಿ ಅಕ್ರಮವಾಗಿ ಷರಾಬ್ ತಯಾರ್ಮಾಡಲ್ಪಡುತ್ತದೆಂದು ಗುಮಾನಿ ತೋರುವ ಸಂಗತಿಗಳಲ್ಲಿ, ಗವರ್ನ್ಮೆಂಟನವರು ಹೊರಗೆ ಚಿಲ್ಲರೆ ಭಟ್ಟಿಗಳನ್ನು ಇಡಿಸುವುದಕ್ಕೆ ಸ್ವತಂತ್ರರಾಗಿರತಕ್ಕದ್ದು. ಪರಂತು ಅಂಥಾ ಭಟ್ಟಿಗಳನ್ನಿಡಿಸಲಿಕ್ಕೆ ಕಂಟ್ರಾಕ್ಟದಾರ್ರಿಗೆ ಪ್ರಥಮ ಹಕ್ಕು ಇರತಕ್ಕದ್ದು.

VI. (1) ಕಂಟ್ರಾಕ್ಟದಾರನು ತನ್ನ ಕಂಟ್ರಾಕ್ಟಿನಲ್ಲಿ ಗೊತ್ತು ಮಾಡಲ್ಪಟ್ಟ ದರದಂತೆ ಖರೀದಿ ಮೊಬಲಗು ತನಗೆ ಪಾವತಿ ಮಾಡಲ್ಪಟ್ಟ ತರುವಾಯ ಗವರ್ನ್ಮೆಂಟ ಡಿಸ್ಟಿಲೆರಿಯಲ್ಲಾಗಲೀ ಅಥವಾ ಅವರು, ಸಾರಾಯಿ ತಯಾರೀ ಬಗ್ಯೆ ಅಪ್ಪಣೆಕೊಡಬಹುದಾದಂಥಾ ಇತರ ಸ್ಥಳದಲ್ಲಾಗಲೀ, ಈ ಕೆಳಗೆ ನಮೂದಾಗುವವರಿಗೆ ಸರಬರಾಯಿ ಮಾಡತಕ್ಕ ಬಗ್ಗೆ ಡಿಸ್ಟಿಲೆರಿಯ ಜಿಮ್ಮೆಯಲ್ಲಿರುವ ದೊಡ್ಡ (ಸರ್ಕಾರಿ) ಉದ್ಯೋಗಸ್ಥರು ದರಖಾಸ್ತು ಮಾಡಬಹುದಾದಷ್ಟು ಷರಾಬನ್ನೂ ಇತರ ಮದ್ಯವನ್ನೂ ಸರಬರಾಯಿ ಮಾಡತಕ್ಕದ್ದು.

1ನೇದು—ಗವರ್ನ್ಮೆಂಟನವರು ಆಗಿಂದಾಗ್ಯೆ ಸ್ಥಾಪಿಸಿ ಕಾಪಾಡುವಂಥಾ ಬಾಂಡೆಡ್ ಕೋಠಿಗಳಿಗೆ;

2ನೇದು—ಬೆಂಗಳೂರು ವ ಮೈಸೂರು ಷಹರುಗಳಲ್ಲೂ ಮತ್ತು ಕೋಲಾರದ ಭಂಗಾರದ ಗಣಿಗಳಲ್ಲೂ ಮತ್ತು ಅಲಾಹಿದಾ ದುಕಾನ್ ಪದ್ಧತಿಯು ಜಾರೀಗೆ ತಂದಿರುವ ಮತ್ತು ತರಲ್ಪಡಬಹುದಾದ ಇತರ ಸ್ಥಳಗಳಲ್ಲೂ ಫುರೋಖ್ತು ಬಗ್ಯೆ ಲೈಸೆನ್ಸ್ ಪಡೆದಿರುವಂಥಾ ಸ್ವತಂತ್ರ ಅಂಗಡಿಕಾರರಿಗೂ;

3ನೇದು—ಗೊತ್ತಾದ ಸ್ಥಳಗಳಲ್ಲಿ ಷರಾಬ್ ಬಿಕರಿ ಮಾಡುವ ಹಕ್ಕುದಾರಿಯನ್ನು ಗವರ್ನ್ಮೆಂಟನವರು ವಿಕ್ರಯಿಸುವಂಥಾ ಷರಾಬ್ ಬಿಕರಿ ಫಿರ್ಕಾ ಗುತ್ತಿಗೆದಾರರಿಗೂ; ಮತ್ತು

4ನೇದು—ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್ ಎಕ್ಸೈಸ್ ಸೂಪರಿಂಟೆಂಡೆಂಟರವರಿಂದ ಬರುವ ದರಖಾಸ್ತುಗಳ ಪ್ರಕಾರ ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್ ಗವರ್ನ್ಮೆಂಟ ಎಕ್ಸೈಜ್ ಕೋಠಿಗೆ.

ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್‌ಗೆ ಸರಬರಾಯಿ ಮಾಡಲ್ಪಡುವ ಸಾರಾಯಿಯ ಖರೀದಿಯು ಮುಂಗಡವಾಗಿ ಕೊಡಲ್ಪಡುವುದಿಲ್ಲ; ಪರಂತು 15 ದಿವಸಗಳಿಗೊಂದಾವರ್ತಿ ಸಿವಿಲ್ ವ ಮಿಲಿಟರಿ ಸ್ಟೇಷನ್ ಎಕ್ಸೈಸ್ ಸೂಪರಿಂಟೆಂಡೆಂಟರವರ ದ್ವಾರಾ ಕಂಟ್ರಾಕ್ಟದಾರ್ರಿಂದ ಕಲೆಕ್ಟರವರಿಗೆ ಬಿಲ್ಲುಗಳು ಬಂದ ಕೂಡ್ಲೆ ಪಾವತಿ ಮಾಡಲ್ಪಡುವುದು.

(2) ಕಂಟ್ರಾಕ್ಟುದಾರನು ಸಾರಾಯಿ ಚಿಲ್ಲರೆ ಮಾರಾಟದಲ್ಲಿ ಯಾವ ವಿಧವಾದ ಪ್ರಯೋಜನವನ್ನೂ ಉಂಟಾಗಿರಕೂಡದು. ಮತ್ತು ಅಂಥಾ ಪ್ರಯೋಜನವುಳ್ಳ ಯಾವ ಮನುಷ್ಯನನ್ನಾಗಲಿ ಡಿಸ್ಟಿಲರಿಯಲ್ಲಿ ಏಜಂಟಾಗಿ ಅಥವಾ ಇನ್ಯಾವ ಕೆಲಸದಲ್ಲಿಯಾಗಲಿ ಇಡಕೂಡದು.

(3) ಕಂಟ್ರಾಕ್ಟುದಾರನು ಮಾಲ್ಟ್ ಮದ್ಯ ಯಾನೆ ಬೀರು ವಿನಾ ಕಡಮೆ ಪರಾಯಿ ದೇಶದ ಸಾರಾಯಿಗಳನ್ನೂ ಮತ್ತು ಪರಾಯಿದೇಶದ ಉಕ್ತ ದ ಮದ್ಯಗಳನ್ನೂ ಮಾರುವುದಕ್ಕೆ ಲೈಸೆನ್ಸ್ ಪಡೆದಿರುವವರಿಗೆ ತಾನು ತಯಾರ್ಮಾಡಿದ ಡಬ್ಬಲ್ ಡಿಸ್ಟಿಲ್ಡ್ ಯಾನೆ ಎರಡಾವರ್ತಿ ಭಟ್ಟಿ ಇಳಿಸಿದ ಯಾ ಶುದ್ಧಿ ಮಾಡಿದ ಸಾರಾಯಿಯನ್ನೂ, ಇತರ ಸ್ಪೆಷಲ್ ಯಾ ವಿಶೇಷವಾದ ಮದ್ಯಗಳನ್ನೂ ಮಾರತಕ್ಕದ್ದು; ಎಕ್ಸೈಸ್ ಕಮಿಷ್ನರ ಅಪ್ಪಣೆ ಪ್ರಕಾರ ಕಂಟ್ರಾಕ್ಟುದಾರನು ಮೇಲ್ಕಂಡ ಸಾರಾಯಿಗಳನ್ನು ಬಾಂಡೆಡ್ ಡಿಪೋಗಳಿಗೂ, ಆಸ್ಪತ್ರೆಗಳಿಗೂ ಮತ್ತು ಇತರ ಸರ್ಕಾರದ ಇಲಾಖೆಗಳಿಗೂ ಮಾರತಕ್ಕದ್ದು.

ಗವರ್ನ್ಮೆಂಟ್ ಡಿಸ್ಟಿಲರಿಯಿಂದಲಾಗಲೀ ಯಾ ಷರಾಬ್ ತಯಾರಿ ಬಗ್ಗೆ ಹುಕುಂ ಆಗಿರುವ ಇತರ ಸ್ಥಳದಿಂದಲಾಗಲೀ ಬಾಂಡೆಡ್ ಕೋಠಿಗಳಿಗೆ ಸರಬರಾಯಿಗೆ ವಿನಾ ಯಾವ ಷರಾಬನ್ನಾದರೂ, ಅದನ್ನು ಕೊಂಡುಕೊಂಡವನು ಅದಕ್ಕಾಗಿ ಖಜಾನೆಯಲ್ಲಿ ಡ್ಯೂಟಿಯನ್ನು ಮುಂಗಡವಾಗಿ ಕಟ್ಟಿದ್ದಕ್ಕೆ ಪಡೆದ ರಶೀತಿಯನ್ನು ಹಾಜರ್ಮಾಡಿದ ಹೊರ್ತು ಬಯ್ಯಕೂಡದು.

ಷರಾ—ಈ ಷರತ್ತು ಖಜಾನೆ ರಶೀತಿ ಇಲ್ಲದೆ ಸಿವಿಲ್ ವ ಮಿಲಿಟರಿ ಸ್ಟೇಷನ್ನಲ್ಲಿರತಕ್ಕ ಸರ್ಕಾರೀ ಎಕ್ಸೈಸ್ ಕೋಠಿಗೆ ಸರಬರಾಯಿ ಆಗತಕ್ಕ ಷರಾಬಿಗೆ ಅನ್ವಯಿಸುವುದಿಲ್ಲ.

VII. ಕಂಟ್ರಾಕ್ಟುದಾರನು ಮೈಸೂರು ಸೀಮೆಯಲ್ಲಿಯೂ, ಮತ್ತು ಸಿವಿಲ್ ವ ಮಿಲಿಟರಿ ಸ್ಟೇಷನ್ನಲ್ಲಿಯೂ ತತ್ಕಾಲಕ್ಕೆ ಜಾರಿಯಲ್ಲಿರುವ, ಎಕ್ಸೈಸ್ ಕಾನೂನುಗಳ ನಿಯಮಗಳನ್ನನುಸರಿಸಲು ಬದ್ಧನಾಗಿರತಕ್ಕದ್ದು. ಮತ್ತು ಅವನ ಕೈ ಕೆಳಗಿರುವ ನೌಕರ್ಮಾನೇರು ಅವುಗಳನ್ನು ಸಂಪೂರ್ಣವಾಗಿ ಜಾರಿಯಲ್ಲಿ ತರುವಂತೆ ನೋಡಿಕೊಳ್ಳತಕ್ಕದ್ದು.

VIII. ಒಂದು ಕಂಟ್ರಾಕ್ಟು ಮುಗಿಯುವ ಆಖೈರ್ ತಾರೀಖಿನಲ್ಲಿ, ದಾಸ್ತಾ ಹಾಜರಿರಬಹುದಾದಂಥಾ ಒಂದು ತಿಂಗಳು ಸರಬರಾಯಿಗೆ ಮೀರದಷ್ಟು ಷರಾಬನ್ನು ಯಾ ಒಳದೇಶದ ಸಾರಾಯಿಯನ್ನು ಮತ್ತು ಸ್ಪೆಷಲ್ ಮದ್ಯಗಳನ್ನು ಹಳೇ ಕಂಟ್ರಾಕ್ಟುದಾರನು ಕೊಡಲಿಕ್ಕೂ ಮತ್ತು ಹೊಸ ಕಂಟ್ರಾಕ್ಟುದಾರನು ತೆಗೆದುಕೊಳ್ಳಲಿಕ್ಕೂ, ಮತ್ತು ಎಕ್ಸೈಸ್ ಕಮಿಷ್ನರು ಅದಕ್ಕೆ ಗೊತ್ತುಮಾಡುವ ಬೆಲೆಯನ್ನು ಹೊಸ ಕಂಟ್ರಾಕ್ಟುದಾರನು ಹಳೆ ಕಂಟ್ರಾಕ್ಟುದಾರನಿಗೆ ಕೊಡಲಿಕ್ಕೂ ಬದ್ಧರಾಗಿರತಕ್ಕದ್ದು.

IX. ಹೊಸ ಕಂಟ್ರಾಕ್ಟುದಾರನು ಯಾ ಎಕ್ಸೈಸ್ ಕಮಿಷ್ನರು ಕನಿಷ್ಠಪಕ್ಷ ಒಂದು ವಾರಕ್ಕೆ ಮುಂಚೆ ನೋಟೀಸ್ ಕೊಟ್ಟು ಅಪೇಕ್ಷಿಸಿದರೆ ಮುಗಿಯುವ ಕಂಟ್ರಾಕ್ಟಿನ ಆಖೈರ್ ದಿಂಗಳಿನಲ್ಲಿ ಹಳೇ ಕಂಟ್ರಾಕ್ಟುದಾರನು ವಾಷ್ ಯಾನೆ ಊಟೆಯನ್ನು ತಯಾರ್ಮಾಡೋಣವನ್ನು ನಿಲ್ಲಿಸಿ ಹೊಸ ಕಂಟ್ರಾಕ್ಟುದಾರನು ಅವನ ಕೆಲಸಗಳನ್ನು ಷುರು ಮಾಡಲಿಕ್ಕೆ ಅನುಕೂಲಿಸುವಂತೆ ಕಟ್ಟಡಗಳನ್ನು ಖಾಲಿ ಮಾಡತಕ್ಕದ್ದು. ಅಂಥಾ ನೋಟೀಸನ್ನು ಕೊಡದೆ ಇದ್ದರೆ, ಹಳೇ ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಅವಧಿ ಪೂರೈಸುವ ಪರಿಯಂತ ಭಟ್ಟಿ ಇಳಿಸುತ್ತಿದ್ದು ಕಂಟ್ರಾಕ್ಟು ಅವಧಿ ಪೂರ್ತಿಯಾದೊಡನೆ ಭಟ್ಟಿ ಇಳಿಸುವುದನ್ನೂ ಮನ್ನಾ ಮಾಡತಕ್ಕದ್ದು. ಹೊಸ ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟಿನ ಮೊದಲನೇ ವರುಷದ ಜುಲೈ ಗುರ್ರೇ ತಾರೀಖು ಲಾಗಾಯಿತು ಸರಬರಾಯಿ ಮಾಡುವುದಕ್ಕಾಗಿ ಎಲ್ಲಾ ಬಾಂಡೆಡ್ ಡಿಪೋಗಳಲ್ಲಿ ಅವನ ಸರಕು ಸಿದ್ಧವಾಗಿರುವುದಕ್ಕೋಸ್ಕರ (ಅವನ ಕಂಟ್ರಾಕ್ಟು ಷುರುವಾಗಲಿಕ್ಕೆ ಮುಂಚೆ ಎರಡು ವಾರಗಳಿಗೆ ಮೀರದೆ) ಸಾಕಾದ ಕಾಲದಲ್ಲಿ ಎಕ್ಸೈಸ್ ಕಮಿಷ್ನರಿಂದ ಆರೀತಿ ಅಪ್ಪಣೆ ಮಾಡಲ್ಪಟ್ಟರೆ, ಡಿಸ್ಟಿಲರಿಯಿಂದ ಬಾಂಡೆಡ್ ಡಿಪೋಗಳಿಗೆ ಷರಾಬು ಇತರ ಒಳದೇಶದ ಸಾರಾಯಿ, ಮತ್ತು ಸ್ಪೆಷಲ್ ಷರಾಬುಗಳು ಇವುಗಳನ್ನು ರವಾನೆ ಮಾಡತಕ್ಕದ್ದು.

X. ಬೆಂಗಳೂರು ಬಳಿಯಣ ಗವರ್ನ್ಮೆಂಟ್ ಸೆಂಟ್ರಲ್ ಡಿಸ್ಟಿಲರಿಯಲ್ಲಿರುವ ಯಾ ಭಟ್ಟಿ ಇಳಿಸುವುದಕ್ಕಾಗಿ ನೇಮಿಸಲ್ಪಟ್ಟ ಇತರ ಸ್ಥಳದಲ್ಲಿರುವ ಹಳೇ ಕಂಟ್ರಾಕ್ಟುದಾರನ ಬಾಬತು ಎಲ್ಲಾ ಎಂತ್ರಗಳು ಸಾಮಾನುಗಳು ವ ಸರಕುಗಳನ್ನು ಸವೆದುಹೋದ್ದಕ್ಕಾಗಿ ಷುರು ಖರೀದಿಯಲ್ಲಿ ನ್ಯಾಯವೆಂದು ತೋರುವ ಒಂದು ಭಾಗವನ್ನು ಸೋಡಿ ಮಾಡಿ ಎಕ್ಸೈಜ್ ಕಮಿಷ್ನರು ಗೊತ್ತುಮಾಡುವ ನ್ಯಾಯವಾದ ಖರೀದಿಗೆ ಅವುಗಳನ್ನು ಕೊಂಡುಕೊಳ್ಳಲಿಕ್ಕೆ ಹೊಸ ಕಂಟ್ರಾಕ್ಟುದಾರನು ಬದ್ಧನಾಗಿರತಕ್ಕದ್ದು. ಹೀಗೆ ಗೊತ್ತು ಮಾಡಲ್ಪಟ್ಟ ಖರೀದಿಯು ಆ ಬಗ್ಯೆ ಕ್ರಮವಾಗಿ ಪ್ರಾಯಿಷ್ಮಾಡಲ್ಪಡುವ ಇಸ್ತಿಹಾರ್ ಮೂಲಕ ಹಳೇ ಕಂಟ್ರಾಕ್ಟುದಾರನಿಗೂ, ಮತ್ತು ಹೊಸ ಕಂಟ್ರಾಕ್ಟಿಗೆ ದರಖಾಸ್ತು ಕೊಡಲು ಅಪೇಕ್ಷಿಸುವ ಜನರಿಗೂ ಸಹ ಸಕಾಲದಲ್ಲಿ ತಿಳಿಸಲ್ಪಡುತ್ತದೆ.

XI. ಖಾಯಂ ಆಗಿರತಕ್ಕ ಸ್ವಭಾವವುಳ್ಳ ಕಟ್ಟಡಗಳು ಮುಂತಾದ್ದು ಹಾಗೆಯೇ ಬಿಟ್ಟುಬಿಡಲ್ಪಡಬೇಕೇಹೊರ್ತು ಎಗ್ಸಿಕ್ಯುಟಿವ್ ಇಂಜನಿಯರ ಮಂಜೂರಾತಿ ಇಲ್ಲದೆ ಕೆಡಿಸಲ್ಪಡಕೂಡದು.

XII. ಮೇಲ್ಕಂಡ ಷರತ್ತುಗಳ ಪೈಕಿ ಯಾವುದಾದರೂ ಉಲ್ಲಂಘಿಸಲ್ಪಟ್ಟರೆ, ಕಂಟ್ರಾಕ್ಟನ್ನು ರದ್ದು ಮಾಡುವುದಕ್ಕೂ, ಕಂಟ್ರಾಕ್ಟುದಾರನಿಂದ ಇಡಲ್ಪಟ್ಟ ಠೇವಣಿಯನ್ನೂ ಮತ್ತು ಅವನಿಂದ ಈಡು ಮಾಡಲ್ಪಟ್ಟ ಯಂತ್ರಗಳು, ಸಾಮಾನುಗಳು ವ ದಾಸ್ತಾ ಇವುಗಳನ್ನೂ ದಂಡವಾಗಿ ತೆಗೆದುಕೊಳ್ಳುವುದಕ್ಕೂ ಅಂಥಾ ಉಲ್ಲಂಘನೆಯ ದೆಸೆಯಿಂದ ಉಂಟಾಗಬಹುದಾದ ಇತರ ನಷ್ಟವನ್ನು ತಪ್ಪಿತಸ್ಥನಾದ ಕಂಟ್ರಾಕ್ಟುದಾರನಿಂದ ವಸೂಲ್ಮಾಡಿಕೊಳ್ಳುವುದಕ್ಕೂ ಗವರ್ನ್ಮೆಂಟಿನವರಿಗೆ ಸ್ವತಂತ್ರವಿರತಕ್ಕದ್ದು.

D

9. ಈ ಕೆಳಗಿನ ಸಂಗತಿಗಳನ್ನು ಇದಕ್ಕೆ ಲಗತ್ತು ಮಾಡಿರುತ್ತದೆ:—

ಷರಾ—1. 1897—98ನೆ ಇಸವಿಯಿಂದ ಈಚೆಗೆ ಡಿಸ್ಟಿಲರಿಯಿಂದ ರವಾನೆಯಾದ ಷರಾಬಿನ ಸಾಲ್ವಾರ ತೇದಾವನ್ನು ತೋರಿಸುವ ತಖ್ತೆ:—

	1897—98 ಗ್ಯಾಲನ್.	1898—99 ಗ್ಯಾಲನ್.	1899—900 ಗ್ಯಾಲನ್.	1900—01 ಗ್ಯಾಲನ್.	1901—02 ಗ್ಯಾಲನ್.
ಮೈಸೂರು ಸಂಸ್ಥಾನ ...	3,54,131	3,46,223	3,26,469	3,14,803	3,16,837
ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್ ...	73,749	79,133	67,836	58,920	49,189
ಜುಮ್ಲಾ ...	4,27,880	4,25,356	3,94,305	3,63,723	3,66,076

	1902—03 ಗ್ಯಾಲನ್.	1903—04 ಗ್ಯಾಲನ್.	1904—05 ಗ್ಯಾಲನ್.	1905—06 ಗ್ಯಾಲನ್.
ಮೈಸೂರು ಸಂಸ್ಥಾನ ...	3,31,755	3,52,432	3,72,083	3,42,920
ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್ ...	58,924	62,703	66,804	64,352
ಜುಮ್ಲಾ ...	3,90,679	4,25,135	4,38,887	4,07,272

ಷರಾ 2—20 ಡಿಗ್ರಿ ಜೋರುಳ್ಳ ಸಾರಾಯಿಗೆ ಸ್ವತಂತ್ರ ಅಂಗಡಿಕಾರರೂ ಮತ್ತು ಫಿರ್ಕಾ ಗುತ್ತಿಗೆದಾರರೂ ಸರ್ಕಾರಕ್ಕೆ ಕೊಡಬೇಕಾದ ಹಾಸಲು ಗ್ಯಾಲನ್ 1ಕ್ಕೆ ನಾಲ್ಕು ಮುಕ್ಕಾಲು ರೂಪಾಯಿಯಾಗಿರುತ್ತದೆ. ಅವರುಗಳಿಗೆ ಪಾನಮಾಡುವವರು ಕೊಡಬೇಕಾದ ಚಿಲ್ಲರೆ ಬಿಕರಿ ದರವು ಗ್ಯಾಲನ್ 1ಕ್ಕೆ (6—6—0) ಆರು ರೂಪಾಯಿ ಆರು ಆಣೆಯಾಗಿರುತ್ತದೆ; ಅಥವಾ ಗ್ಯಾಲನ್ 1ರ 1/5ನೆ ಭಾಗವಾದ ಡ್ರಾಂ 1ಕ್ಕೆ 2 ಎರಡು ಆಣೆಯಾಗಿರುತ್ತದೆ. 20 ಡಿಗ್ರಿ ಅಂಡರ್ ಪ್ರೂಫಿಗಿಂತ ಹೆಚ್ಚಾದ ಯಾ ಕಮ್ಮಿಯಾದ ಜೋರುಳ್ಳ ಸಿಂಗಲ್ ಡಿಸ್ಟಿಲ್ಡ ಷರಾಬುಗಳ ಡ್ಯೂಟಿ ಯಾ ಚಿಲ್ಲರೆ ಬಿಕರಿ ದರಗಳು ಕ್ಯಾಸಲ್ಲಾವಿನ ರೂಲ್ಸಗಳ ಪ್ರಕಾರ 20 ಡಿಗ್ರಿ ಅಂಡರ್ ಪ್ರೂಫಿನ ದರಗಳ ದಾಮಾಷಾಯಿನ ಮೇಲೆ ಲೆಖ್ಖಾ ಮಾಡಲ್ಪಡತಕ್ಕದ್ದು. ಡ್ಯೂಟಿ ಮತ್ತು ಚಿಲ್ಲರೆ ಬಿಕರಿ ದರಗಳನ್ನು ಬದಲಾಯಿಸುವ ಅಧಿಕಾರವನ್ನು ಗವರ್ನಮೆಂಟಿನವರು ಉಳಿಸಿಕೊಂಡಿರುವುದರಿಂದ ಅಂಥಾ ಬದಲಾವಣೆಯ ದೆಸೆಯಿಂದ ಷರಾಬು ತಯಾರೀ ಕಂಟ್ರಾಕ್ಟದಾರನಿಗೆ ನಷ್ಟ ಉಂಟಾದರೆ ಅವನಿಗೆ ಪರಿಹಾರದ್ರವ್ಯಕ್ಕೆ ಹಕ್ಕಿರಲಾರದೆಂದು ಸ್ಪಷ್ಟವಾಗಿ ಅರಿಯತಕ್ಕದ್ದು. ಮೇಲ್ಕಂಡ ಬಟ್ಟು ಸ್ವಾತಂತ್ರ್ಯಕ್ಕೆ ಅನುಗುಣವಾಗಿ ತಯಾರ್ಮಾಡಲ್ಪಟ್ಟ ಸಾಧಾರಣ ಷರಾಬು ಶಿವಾಯಿ ಕಡಮೆ ಯಾವ ತರಹೇ ಮದ್ಯವಾಗಲೀ ಅಥವಾ ಪರಾಯಿದೇಶದ ಮದ್ಯವೆಂಬ ಅರ್ಥ ವಿವರಣೆಗೆ ಒಳಪಡಬಹುದಾದ ಯಾವ ಮದ್ಯವಾಗಲಿ ಸಿವಿಲ್ ವ ಮಿಲಿಟರಿ ಸ್ಟೇಷನ್ನಲ್ಲಿ ಬಿಕರಿ ಬಗ್ಗೆ ಕಂಟ್ರಾಕ್ಟದಾರನಿಂದ ಸರಬರಾಯಿ ಮಾಡಲ್ಪಟ್ಟರೆ, ಅದರಮೇಲೆ ವಸೂಲಾಗಬೇಕಾದ ಡ್ಯೂಟಿಯು 1906ನೆ ಇಸವಿ 1ನೆ ಟ್ಯಾರಿಫ್ ಆಕ್ಟು ಪ್ರಕಾರ ಅದೇ ಜೋರುಳ್ಳ ಅದೇ ಮಾದ್ರಿ ಮದ್ಯಕ್ಕೆ ಯಾವ ದರಗಳಂತೆ ವಸೂಲಾಗಬೇಕಾಗಿರುತ್ತದೆಯೋ ಆ ದರಗಳಂತೆ ಮೊಕರರ್ಮಾಡಲ್ಪಡತಕ್ಕದ್ದು.

ಷರಾ 3—ಎಲ್ಲಾ ಜೋರುಗಳ ಡಬ್ಬಲ್ ಡಿಸ್ಟಿಲ್ಡ ಯಾ ಶುದ್ಧಿ ಮಾಡಲ್ಪಟ್ಟ ಷರಾಬುಗಳಿಗೆ ಡ್ಯೂಟಿ ದರಗಳು ಕ್ಯಾಸಲ್ಲಾವಿನ ರೂಲ್ಸಗಳ ಪ್ರಕಾರ 20 ಡಿಗ್ರಿ ಅಂಡರ್ ಪ್ರೂಫ್ ಷರಾಬಿನ ದರದ ದಾಮಾಷಾಯಿನ ಮೇಲೆ ಲೆಖ್ಖ ಮಾಡಲ್ಪಡತಕ್ಕದ್ದು. ಆದರೆ ಬೆಂಗಳೂರು ಗವರ್ನಮೆಂಟ ಸೆಂಟ್ರಲ್ ಡಿಸ್ಟಿಲರಿಯಲ್ಲಿ ಯಾ ಗವರ್ನಮೆಂಟಿನವರು ಮಂಜೂರ್ಮಾಡಿದ ಇತರ ಸ್ಥಳದಲ್ಲಿ ತಯಾರ್ಮಾಡಲ್ಪಟ್ಟ ಸದರೀ ಡಬ್ಬಲ್ ಡಿಸ್ಟಿಲ್ಡ ಯಾ ಶುದ್ಧಿ ಮಾಡಲ್ಪಟ್ಟ ಷರಾಬಿಗೆ ಪ ಇತರ ಸ್ಪೆಷಲ್ ಯಾನೆ ವಿಶೇಷ ಮದ್ಯಗಳಿಗೆ ಷರಾಬು ತಯಾರೀ ಗುತ್ತಿಗೆದಾರರು ವ ಲೈಸೆನ್ಸ ಪಡೆದಿರುವ ಬಿಕರೀದಾರರು ಸಹ ಅವರ ಸ್ವಂತ ಖರೀದಿ ದರಗಳನ್ನು ಗೊತ್ತುಮಾಡಬಹುದು.

ಷರಾ 4—ಹಾಲಿ ಕಂಟ್ರಾಕ್ಟುದಾರರು 1907ನೆ ಇಸವಿ ಜನವರಿ ಆಖೈರ ವರೆಗೆ ಭಟ್ಟಿಗಳು ಮುಂತಾದ್ದಕ್ಕೋಸ್ಕರ 73,253—4—8 ರೂಪಾಯಿಗಳನ್ನು ಖರ್ಚು ಮಾಡಿರುವಂತೆ ರಿಪೋರ್ಟಾಗಿರುತ್ತದೆ.

ಅಪೆಂಡಿಕ್ಸ ಯಾನೆ ಪರಿಶಿಷ್ಟ.

ದರಖಾಸ್ತಿನ ನಮೂನೆ.

ಬೆಂಗಳೂರಲ್ಲಿರುವ ಮೈಸೂರು ದೇಶದ ಎಕ್ಸೈಜ ಕಮಿಷನರಿಗೆ.

ಅಯ್ಯಾ,

ಸರ್ 1907ನೆ ಇಸವಿ ಮಾರ್ಚಿ ಮಾಹೆ 1ನೆ ತಾರೀಖಿನ ಮೈಸೂರು ಎಕ್ಸೈಜ್ ಆರ್ಡರ್ನಂ. ಯಾ ವಿಶೇಷ ಗೆಜೆಟ್ಟನಲ್ಲಿ ಪ್ರಕಾ

ಯಿಷ್ ಮಾಡಲ್ಪಟ್ಟ ಮೈಸೂರು ಗವರ್ನ್ಮೆಂಟಿನವರ 1907ನೆ ಇಸವಿ ಫೆಬ್ರವರಿ ಮಾಹೆ 28ನೆ ಮುರ್ಖ್ಖಂ ಫೈನಾನ್ . 6501—ಸೆ. ರೆ. 58–06ನೆ ನಂಬರ್ ಇಸ್ತಿಹಾರ್ನಾಮೆಯ ದಾಖಲೆಮೇಲೆ ಬೆಂಗಳೂರಿನ ಸಿವಿಲ್ ವ ಮಿಲಿಟರಿ ಸ್ಟೇಷನ್ ದೇಶೀಲ್ ಮೈಸೂರು ಸಂಸ್ಥಾನದಲ್ಲಿ ಮೂರು ವರುಷಗಳ ಕಾಲ ಅಂದರೆ 1907ನೆ ಇಸವಿ ಜುಲೈ 1ನೆ ತಾರೀಖು ಮೊದಲು 1910ನೆ ಇಸವಿ ಜೂನ್ 30ನೆ ತಾರೀಖು ಪರಿಯಂತ ಮೇಲ್ಕಂಡ ಇಸ್ತಿಹಾರ್ನಲ್ಲಿ ನಮೂದಾದ ಷರತ್ತುಗಳು ವ ಒಡಂಬಡಿಕೆಗಳಿಗೆ ಬಳಪಟ್ಟು ಷರಾಬ್ ವ ಬಳದೇಶದ ಇತರ ಸಾರಾಯಿಗಳನ್ನು ತಯಾರ್ಮಾಡುವ ಬಟ್ಟು ಸ್ವಾತಂತ್ರ್ಯದ ಬಗ್ಗೆ ದರಖಾಸ್ತು ಮಾಡುತ್ತೇನೆ.

2. ನಾನು ಈ ಕೆಳಗೆ ನಮೂದಿಸುವ ತಪಶೀಲು ಪ್ರಕಾರ 20 ಡಿಗ್ರಿ ಅಂಡರ್-ಪ್ರೂಫ್ ಬಲವುಳ್ಳ ಸಾರಾಯಿಯನ್ನು ತಯಾರ್ಮಾಡಿ ಒದಗಿಸುವುದಕ್ಕೆ ಇದರ ದೆಸೆಯಿಂದ ಒಪ್ಪುತ್ತೇನೆ.

20 ಡಿಗ್ರಿ ಸಾರಾಯಿಗೆ
ಗ್ಯಾಲನ್ 1ಕ್ಕೆ ದರ.

	ರೂ.	ಆ.	ಪೈ.	
ಕಾಕಂಬಿ ಸಾರಾಯಿಗೆ ...				ಕಂಟ್ರಾಕ್ಟಿನ ಪೂರಾ ಕಾಲಕ್ಕೆ
ಕಬ್ಬಿನ ಬೆಲ್ಲದ ಸಾರಾಯಿಗೆ ...				
ತಾಟಿ ಬೆಲ್ಲದ ಸಾರಾಯಿಗೆ ...				

3. ನಾನು ಸದರೀ ಇಸ್ತಿಹಾರಿನ 6ನೆ ಪ್ಯಾರಾದಲ್ಲಿ ಕಂಡ ಪ್ರಕಾರ ದಿವಾನರವರ ಹೆಸರಿಗೆ ಕ್ರಮಪ್ರಕಾರ ಇಂಡಾರ್ಸ್ ಮಾಡಲ್ಪಟ್ಟ 5,000 ರೂಪಾಯಿಗಳ ____________ನ್ನು ಮುಲಪೂಫ್ ಮಾಡಿರುತ್ತೇನೆ.

ಹೀಗೆ ಇರುವ
ತಮ್ಮ ವಿಧೇಯ ಸೇವಕನಾದ,

ತಾರೀಖು }
ವಿಳಾಸ.

ತಾರೀಖು 7ನೆ ಮಾರ್ಚಿ 1907.

ನಂ. ಆರ್. 8105 A ಎಲ್. ಆರ್. 463-06—3, ಸರ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಕೆಳಗಡೆ ವಿವರಿಸಿರುವ ಜಮೀನು ರೈಲ್ವೆಯ ಕೆಲಸಕ್ಕೆ ಎಂದರೆ, ಬಾಣಸಂದ್ರ ಸ್ಟೇಷನಿನಲ್ಲಿ ನೀರು ಸರಬರಾಯಿಯ ಬಗ್ಗೆ ಒಂದು ಬಾವಿಯನ್ನು ತೆಗೆಯುವುದಕ್ಕೋಸ್ಕರ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (ಸಿ) ಪ್ರಕರಣಗಳನ್ನನುಸರಿಸಿ ಗುಬ್ಬಿ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂಪಡೆಯಲು ಅಧಿಕಾರ ಕೊಟ್ಟಿದೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು.	ಖುಷ್ಕಿ, ತರಿ ಯಾ ಬಾಗಾಯತು.	ಒಟ್ಟು ವಿಸ್ತೀರ್ಣ.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ತುಮಕೂರು	ತಿಪಟೂರು	ಕಿಬ್ಬನಹಳ್ಳಿ	ಜೋಡಿ ಹುಲಿಸಂದ್ರ	ಸೂರಪ್ಪ	ಖುಷ್ಕಿ	ಸುಮಾರು 11 ಗುಂಟೆ	ಸುಮಾರು 11 ಗುಂಟೆ; ಪೂರ್ವ ಪಶ್ಚಿಮ 150 ಅಡಿ, ಉತ್ತರ ದಕ್ಷಿಣ 90 ಅಡಿ	ಸೂರಪ್ಪ, ರಾಮಭಟ್ಟ ಮತ್ತು ಸುಬ್ಬಜೋಯಿಸರ ಜಮೀನು	ಸೂರಪ್ಪ, ರಾಮಯ್ಯ ಮತ್ತು ನಾರಣಪ್ಪನ ಜಮೀನುಗಳು	ಸೂರಪ್ಪನ ಜಮೀನು	ರೈಲ್ವೆ ರಸ್ತೆ

ತಾರೀಖು 23ನೆ ಮಾರ್ಚಿ 1907.

ನಂ. ಫೈ. 7138—ಬಿ. 62-06—2, ಸರ್ 190[illegible]ನೆ ಇಸವಿಯ ನವೆಂಬರ್ 16ನೆ ತಾರೀಖಿನಲ್ಲಿ ನೌಕರಿಯಿಂದ ಡಿಸ್ಮಿಸ್ ಮಾಡಲ್ಪಟ್ಟ ದೊಡ್ಡಬಳ್ಳಾಪುರ ಮುನ್ಸಿಫ್ ಕೋರ್ಟಿನ ನಾಜರು ರಾಘವೇಂದ್ರರಾಯನು ಪುನಃ ಸರ್ಕಾರಿ ಕೆಲಸಕ್ಕೆ ಸೇರಿಸಿಕೊಳ್ಳಲ್ಪಡಲು ಅನರ್ಹನಾಗಿರುತ್ತಾನೆಂತ ಇದರಿಂದ ಪ್ರಕಟಿಸಿ ಇದೆ.

ತಾರೀಖು 6ನೆ ಮಾರ್ಚಿ 1907.

ನಂ. ರ. 8059—ಫಾರೆಸ್ಟ್ 139-06-3, 1900ನೆ ಇಸವಿಯ 11ನೆ ನಂಬರು ಮೈಸೂರು ಸೀಮೆಯ ಫಾರೆಸ್ಟ್ ರೆಗ್ಯುಲೇಷನ್ 4ನೆ ಪ್ರಕರಣದ ವಿಧಿಗಳನ್ನನುಸರಿಸಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ಮಹಾರಾಜ ಸರ್ಕಾರದವರು ಈ ಕೆಳಗಿನ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ಮೇಲೆ ಕಂಡ ರೆಗ್ಯುಲೇಷನಿನ ವಿಧಿಗಳಂತೆ ಸ್ಟೇಟ್ ಫಾರೆಸ್ಟು ಆಗಿ ಏರ್ಪಡತಕ್ಕದ್ದೆಂದು ಯೋಚಿಸಿರುತ್ತದೆ ಎಂಬದಾಗಿ ಪ್ರಸಿದ್ಧಪಡಿಸಲು ಅಪ್ಪಣೆ ದಯಪಾಲಿಸಿರುತ್ತಾರೆ:—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು ಯಾ ಜಹಗೀರು.	ವಿಸ್ತೀರ್ಣ.	ಫಾರೆಸ್ಟಿನ ಹೆಸರು.	ಚಕ್ಕುಬಂದಿ.
ಕಡೂರು.	ಕೊಪ್ಪ.	$34\frac{117}{160}$ ಚದರ ಮೈಲಿ.	ನರಸಿಂಹಪರ್ವತ.	ಸ್ಥಳ:—ಶೃಂಗೇರಿ ಜಹಗೀರ್ ಪಶ್ಚಿಮ ದಿಕ್ಕಿಗೆ ಕೊಪ್ಪ—ಆಗುಂಬೆ ಹೈರೋಡಿಗೂ ತುಂಗಾ ನದಿಗೂ ಮಧ್ಯೆ ಇರುವ ಪಶ್ಚಿಮ ಘಟ್ಟದ ಜಂಗ್ಲಿ ಪ್ರದೇಶ. ಉತ್ತರಕ್ಕೆ:—ಆಸನಬಾಳು ಗ್ರಾಮದ ಸರ್ವೆ ನಂಬರು 89ರ ನೈರುತ್ಯ ಮೂಲೆಯಲ್ಲಿ ಎಲ್ಲೆಯ ರೇಖೆಯು ಷುರುವಾಗಿ ಅದೇ ಗ್ರಾಮದ ಸರ್ವೆ ನಂಬರು 84ರ ನೈರುತ್ಯ ಮೂಲೆಗೆ ಹೋಗುವ ವರೆಗೆ ಸದರಿ ಗ್ರಾಮದ ಸರ್ವೆ ನಂಬರು 89 ಮತ್ತು 83ರ ದಕ್ಷಿಣ ಭಾಗದ ಎಲ್ಲೆಯ ಮೇಲೆ ಪೂರ್ವ ಮುಖನಾಗಿ ಹೋಗುತ್ತದೆ. ಅನಂತರ ನೈರುತ್ಯಕ್ಕೆ ತಿರಿಗಿ ಸದರಿ ಗ್ರಾಮದ ಸರ್ವೆ ನಂಬರು 72ರ ಪಶ್ಚಿಮ ಎಲ್ಲೆಯಲ್ಲಿ ಸುಮಾರು ಎರಡೂವರೆ ಫರಲಾಂಗುದೂರ ಹೋಗುತ್ತದೆ.

ಅನಂತರ ಸರ್ವೆ ನಂಬರು 72ರಲ್ಲಿ ಮೂರುವರೆ ಫರ್ಲಾಂಗು ವರೆಗೆ ಪೂರ್ವ ಮುಖನಾಗಿ ಹೋಗುತ್ತದೆ. ಅನಂತರ ಅದೇ ನಂಬರಿನೊಳಗೆ ಎರಡೂಕಾಲು ಫರಲಾಂಗುದೂರ ಆಗ್ನೇಯ ದಿಕ್ಕಿನಲ್ಲಿ ಹೋಗುತ್ತದೆ. ಅನಂತರ ಸದರಿ ಗ್ರಾಮದ ಸರ್ವೆ ನಂಬರು 71ರ ನೈರುತ್ಯ ಮೂಲೆಯನ್ನು ಸೇರುವ ವರೆಗೆ ಅರ್ಧ ಫರಲಾಂಗಿನಷ್ಟುದೂರ ಸರ್ವೆ ನಂಬರು 72 ರೊಳಗೆ ಪೂರ್ವ ಮುಖನಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 71ರ ದಕ್ಷಿಣ ಸರಹದ್ದಿನ ಮೇಲೆ ಉದ್ದಕ್ಕೂ ಹೋಗುತ್ತದೆ. ಆ ಮೇಲೆ ಮಸಗಿ ಗ್ರಾಮದ ಸರ್ವೆ ನಂಬರು 25ರ ದಕ್ಷಿಣ ಭಾಗದ ಮೂಲೆಯನ್ನು ಮುಟ್ಟುವ ವರೆಗೆ ಸುಮಾರು ಆರು ಫರಲಾಂಗಿನ ವರೆಗೆ ಆಸನಬಾಳು ಗ್ರಾಮದ ಸರ್ವೆ ನಂಬರು 72 ಮತ್ತು 11 ರೊಳಗೆ ಪೂರ್ವ ಮುಖನಾಗಿ ಹೋಗುತ್ತದೆ. ಅನಂತರ ಮಾಗ ಗ್ರಾಮದ ಸರ್ವೆ ನಂಬರು 81ರ ವಾಯುವ್ಯ ಸರಹದ್ದಿನ ಮೂಲೆಗೆ ಸೇರುವ ವರಿಗೂ ಸುಮಾರು ಎರಡೂಕಾಲು ಫರಲಾಂಗುದೂರ ಮಸಗಿ ಗ್ರಾಮದ 21ನೆ ಸರ್ವೆ ನಂಬರಿನೊಳಗೆ ಆಗ್ನೇಯ ಮಾರ್ಗವಾಗಿ ಹೋಗುತ್ತದೆ.

ಪೂರ್ವಕ್ಕೆ:—ಮೇಲೆ ಹೇಳಲ್ಪಟ್ಟ ಜಾಗಾದಿಂದ ಸದರಿ ಲೈನ್ ಮಾಗದ ಗ್ರಾಮದ ಸರ್ವೆ ನಂಬರು 81 ಮತ್ತು 66ರ ಪಶ್ಚಿಮ ಸರಹದ್ದಿನ ಮೇಲೂ ಕೆಗ್ಗದ ಗ್ರಾಮದ ಸರ್ವೆ ನಂಬರು 111 ಮತ್ತು 57 ರೊಳಗೆ ನಾಲ್ಕುವರೆ ಫರಲಾಂಗುದೂರದ ವರೆಗೂ ಸದರಿ ಕೆಗ್ಗದ ಗ್ರಾಮದ ಸರ್ವೆ ನಂಬರು 45ರ ಉತ್ತರ ಸರಹದ್ದು ಸೇರುವ ವರೆಗೂ ದಕ್ಷಿಣ ಮುಖನಾಗಿ ಹೋಗುತ್ತದೆ. ಅನಂತರ ಕೆಗ್ಗದ ಗ್ರಾಮದ ಸರ್ವೆ ನಂಬರು 45 ರೊಳಗೆ ಆಗ್ನೇಯ ದಿಕ್ಕಿಗೆ ತಿರಿಗಿ ಒಂದು ಮೈಲಿ ವರೆಗೂ ಹೋಗುತ್ತದೆ; ಮತ್ತು ಅದೇ ಗ್ರಾಮದ ಸರ್ವೆ ನಂಬರು 38ರ ಪಶ್ಚಿಮ ಸರಹದ್ದಿನ ಮೇಲೆ ನೈರುತ್ಯ ಮುಖನಾಗಿ ಹೋಗುತ್ತದೆ: ಅನಂತರ ಯಡದಲ್ಲಿ ಗ್ರಾಮದ ಸರ್ವೆ ನಂಬರು 120ರ ಪಶ್ಚಿಮ ಸರಹದ್ದಿನ ಮೇಲೆ ಒಂದು ಹಳ್ಳ ಸಿಕ್ಕುವ ವರೆಗೂ ದಕ್ಷಿಣ ಮುಖನಾಗಿಯೂ, ಅನಂತರ ಯಡದಲ್ಲಿ ಗ್ರಾಮದ ಸರ್ವೆ ನಂಬರು 119 ರೊಳಗೆ ನಾಲ್ಕುವರೆ ಫರಲಾಂಗಿನಷ್ಟುದೂರ ನೈರುತ್ಯ ಮುಖನಾಗಿಯೂ ಅನಂತರ ಯಡದಲ್ಲಿ ಗ್ರಾಮದ ಸರ್ವೆ ನಂಬರು 197ರ ವಾಯುವ್ಯ ಮೂಲೆಯನ್ನು ಸಂಧಿಸುವ ವರೆಗೂ ಅದೇ ಗ್ರಾಮದ ಸರ್ವೆ ನಂಬರು 106 ರೊಳಗೆ ಎರಡೂ ಮುಕ್ಕಾಲು ಫರಲಾಂಗಿನಷ್ಟುದೂರ ದಕ್ಷಿಣ ಮುಖನಾಗಿಯೂ, ಅನಂತರ ಸರ್ವೆ ನಂಬರು 197ರ ಪಶ್ಚಿಮ ಸರಹದ್ದಿನ ಮೇಲೂ ಅನಂತರ ಸರ್ವೆ ನಂಬರು 106 ಮತ್ತು 136 ರೊಳಗೆ ಮೂರೂಕಾಲು ಫರಲಾಂಗಿನಷ್ಟುದೂರ ಈಶಾನ್ಯ ಮುಖನಾಗಿಯೂ ಸಹ ಹೋಗುತ್ತದೆ. ಅನಂತರ ಅದೇ ಗ್ರಾಮದ ಸರ್ವೆ ನಂಬರು 136 ಮತ್ತು 85 ರೊಳಗೆ ಸುಮಾರು ಒಂದು ಮೈಲಿದೂರ ಆಗ್ನೇಯ ಮುಖನಾಗಿ ಹಾದು ಹೋಗುತ್ತದೆ. ಅನಂತರ ಅದೇ ಗ್ರಾಮದ ಸರ್ವೆ ನಂಬರು 85 ರೊಳಗೆ ಒಂದೂವರೆ ಫರಲಾಂಗಿನಷ್ಟುದೂರ ನೈರುತ್ಯ ಮಾರ್ಗವಾಗಿ ಹಾದು ಹೋಗುತ್ತದೆ. ಅನಂತರ ಅದೇ ಗ್ರಾಮದ ಸರ್ವೆ ನಂಬರು 108ರ ಉತ್ತರ ಸರಹದ್ದಿನ ಮೂಲೆಯನ್ನು ಮುಟ್ಟುವ ವರೆಗೂ ಸರ್ವೆ ನಂಬರು 88 ಮತ್ತು 106 ರೊಳಗೆ ಸುಮಾರು ಏಳು ಫರಲಾಂಗು ವರೆಗೂ ನೈರುತ್ಯ ಮಾರ್ಗವಾಗಿ ಹೋಗುತ್ತದೆ. ಅನಂತರ ಒಂದು ಹಳ್ಳವನ್ನು ಸೇರುವ ವರೆಗೂ ಸುಮಾರು ಮುಕ್ಕಾಲು ಫರಲಾಂಗುದೂರ ನೈರುತ್ಯ ಮಾರ್ಗದಲ್ಲಿ ಹೋಗುತ್ತದೆ; ಅನಂತರ ಅದೇ ಗ್ರಾಮದ ಸರ್ವೆ ನಂಬರು 96ರ ಪಶ್ಚಿಮ ಸರಹದ್ದನ್ನು ಸೇರುವ ವರೆಗೂ ಸರ್ವೆ ನಂಬರು 108, 109ರ ಪಶ್ಚಿಮ ಎಲ್ಲೆಯ ಮೇಲು, ಸರ್ವೆ ನಂಬರು 106 ಮತ್ತು 88 ರೊಳಗೆ ಆಗ್ನೇಯ ಮಾರ್ಗವಾಗಿ ಹೋಗುತ್ತದೆ. ಅನಂತರ ಅದೇ ಗ್ರಾಮದ ಸರ್ವೆ ನಂಬರು 88 ಮತ್ತು 99 ರೊಳಗೆ ಸುಮಾರು 7 ಫರಲಾಂಗಿನಷ್ಟುದೂರ ನೈರುತ್ಯ ಮಾರ್ಗವಾಗಿ ಹೋಗುತ್ತದೆ. ಅನಂತರ ಅದೇ ಗ್ರಾಮದ ಸರ್ವೆ ನಂಬರು 99ರ ನೈರುತ್ಯ ಸರಹದ್ದಿನ ಮೇಲೆ ಪೂರ್ವ ಮಾರ್ಗವಾಗಿ ಹೋಗುತ್ತದೆ. ಅನಂತರ ಆಗ್ನೇಯ ದಿಕ್ಕಿಗೆ ತಿರಿಗಿ ಸುಂಕದಮಕ್ಕಿ ಗ್ರಾಮದ ಸರ್ವೆ ನಂಬರು 196ರ ವಾಯುವ್ಯ ಸರಹದ್ದಿನ ಮೂಲೆಯನ್ನು ಮುಟ್ಟುವ ವರೆಗೂ ಯಡದಲ್ಲಿ ಗ್ರಾಮದ ಸರ್ವೆ ನಂಬರು 42ರ ಪಶ್ಚಿಮ ಸರಹದ್ದಿನ ಮೇಲೆ ಹೋಗುತ್ತದೆ. ಅನಂತರ ತುಂಗಾ ನದಿಯ ಎಡಗಡೆ ದಡವನ್ನು ಮುಟ್ಟುವವರೆಗೂ ಸುಂಕದಮಕ್ಕಿ ಗ್ರಾಮದ ಸರ್ವೆ ನಂಬರು 19 ಮತ್ತು 30ರ ಪಶ್ಚಿಮ ಸರಹದ್ದಿನ ಮೇಲೆ ಆಗ್ನೇಯ ಮಾರ್ಗವಾಗಿ ಹೋಗುತ್ತದೆ;

ದಕ್ಷಿಣಕ್ಕೆ :—ಮೇಲೆ ಹೇಳಲ್ಪಟ್ಟ ಜಾಗಾದಿಂದ ಸದರಿ ಲೈನ್ ಬಲಕಡಿ ಗ್ರಾಮದ ಸರ್ವೆ ನಂಬರು 50ರ ಪೂರ್ವ ಕಡೆ ಸರ ಹದ್ದನ್ನು ಮುಟ್ಟುವ ವರೆಗೂ ತುಂಗಾ ನದಿಯ ಎಡಗಡೆ ದಡದ ಮೇಲೆ ನೈರುತ್ಯ ಮಾರ್ಗವಾಗಿ ಹೋಗುತ್ತದೆ. ಅನಂತರ ಬಲ ಕಡಿ ಗ್ರಾಮದ ಸರ್ವೆ ನಂಬರು 50ರ ಪೂರ್ವ ಭಾಗದ ಸರಹದ್ದಿನ ಮೇಲೆ ಐದು ಫರಲಾಂಗಿನಷ್ಟು ದೂರವೂ ಅನಂತರ ಬಂದು ಹಳ್ಳ ದ ಪೂರ್ವಕಡೆಯೂ, ಅನಂತರ ಸರ್ವೆ ನಂಬರು 54ರ ಪೂರ್ವದ ಸರಹದ್ದಿನಲ್ಲೂ; ಅನಂತರ ನಂಬರು 51ರ ವಳಗೆ ಪಶ್ಚಿ ಮ ಮುಖನಾಗಿಯೂ ಸಹ ಹೋಗುತ್ತದೆ. ಅನಂತರ ಸರ್ವೆ ನಂಬರು 56 ರೊಳಗೆ ಬಂದು ಫರಲಾಂಗಿನಷ್ಟು ದೂರ ನೈರುತ್ಯ ಮಾ ರ್ಗವಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 12ರ ಒಳಗೆ ಒಂದು ಮೈಲಿಯಷ್ಟು ದೂರ ನೈರುತ್ಯ ಮಾರ್ಗವಾಗಿ ಹೋಗು ತ್ತದೆ. ಅನಂತರ ಬಂದು ಹಳ್ಳವನ್ನು ದಾಟಿ ಸರ್ವೆ ನಂಬರು 12 ಮತ್ತು 21 ರೊಳಗೆ ಒಂದೂವರೆ ಫರಲಾಂಗಿನಷ್ಟು ದೂರ ದಕ್ಷಿ ಣ ಮಾರ್ಗವಾಗಿ ಹೋಗುತ್ತದೆ. ಅನಂತರ ಸರ್ವೆ ನಂಬರು 21 ರೊಳಗೆ ಬಂದುವ್ಮುಕ್ಕಾಲು ಫರಲಾಂಗಿನಷ್ಟು ದೂರ ಪೂರ್ವ ಮುಖನಾಗಿ ಹೋಗುತ್ತದೆ. ಅನಂತರ ದಕ್ಷಿಣ ದಿಕ್ಕಿಗೆ ತಿರಿಗಿ ತುಂಗಾನದಿಯ ಎಡಗಡೆ ದಡವನ್ನು ಸೇರುವವರಿಗೂ ಬಲಕಡಿ ಗ್ರಾ ಮದ ಸರ್ವೆ ನಂಬರು 17ರ ಪಶ್ಚಿಮ ಎಲ್ಲಿಯ ಮೇಲೆ ಹೋಗುತ್ತದೆ. ಅನಂತರ ಗುಲಗಂಜಿ ಮನೆ ಸರ್ವೆ ನಂಬರು 4ರ ಉ ತ್ತರ ದಿಕ್ಕಿನಲ್ಲಿ ಕೆರೆ ಗ್ರಾಮದಿಂದ ಬರುವ ಬಂದು ದೊಡ್ಡ ಹಳ್ಳವು ತುಂಗಾ ನದಿಗೆ ಸಂಗಮವಾಗುವ ಜಾಗಾಕ್ಕೆ ಮೇಲ್ಕಂಡ ನದಿಯ ಎಡದ ದಡದಲ್ಲಿ ದಕ್ಷಿಣ ಮತ್ತು ಪಶ್ಚಿಮ ಮಾರ್ಗವಾಗಿ ಹೋಗುತ್ತದೆ. ಅನಂತರ ನದಿಯ ದಡದ ಮೇಲೆ ಬಂದು ಫರಲಾಂಗಿನ ಷ್ಟು ದೂರ ಹೋಗುತ್ತದೆ. ಅನಂತರ ಕೆರೆ ಗ್ರಾಮದ ಸರ್ವೆ ನಂಬರು 64ರ ಆಗ್ನೇಯ ಮೂಲೆಯನ್ನು ಸೇರುವ ವರೆಗೂ ಗುಲ ಗಂಜಿಮನೆ ಸರ್ವೆ ನಂಬರು 10 ರೊಳಗೆ ಹಾದು ಪಶ್ಚಿಮ ಮಾರ್ಗವಾಗಿ ಹೋಗುತ್ತದೆ. ಅನಂತರ ಕೆರೆ ಗ್ರಾಮದ ಸರ್ವೆ ನಂ ಬರು 64 ಮತ್ತು 46ರ ಪೂರ್ವ ಸರಹದ್ದುಗಳ ಮೇಲೆ ವಾಯುವ್ಯ ಮಾರ್ಗವಾಗಿ ಹೋಗುತ್ತದೆ. ಅನಂತರ ಕೆರೆ ಗ್ರಾಮದ ಸರ್ವೆ ನಂಬರು 46ರ ಉತ್ತರ ಸರಹದ್ದಿನ ಮೇಲೆ ನೈರುತ್ಯ ಮಾರ್ಗವಾಗಿ ಹೋಗುತ್ತದೆ. ಅನಂತರ ಅದೇ ಗ್ರಾಮದ ಸರ್ವೆ ನಂಬರು 22ರ ಉತ್ತರ ದಿಕ್ಕಿನ ಸರಹದ್ದಿನ ಮೇಲೆ ಮೂರೂಕಾಲು ಫರಲಾಂಗುದೂರದಷ್ಟು ವಾಯುವ್ಯ ದಿಕ್ಕಿನಲ್ಲಿ ಹೋಗುತ್ತದೆ. ಅನಂತರ ಅದೇ ಗ್ರಾಮದ ಸರ್ವೆ ನಂಬರು 22 ರೊಳಗೆ ಸುಮಾರು ಏಳು ಫರಲಾಂಗಿನಷ್ಟು ದೂರ ನೈರುತ್ಯ ದಿಕ್ಕಿನಲ್ಲಿ ಹೋಗು ತ್ತದೆ. ಅನಂತರ ಮುಡಬ ಗ್ರಾಮದ ಸರ್ವೆ ನಂಬರು 10ರ ವಾಯುವ್ಯ ಸರಹದ್ದಿನ ಮೂಲೆಯನ್ನು ಸೇರುವ ವರೆಗೆ ಅದೇ ಗ್ರಾ ಮದ ಸರ್ವೆ ನಂಬರು 11 ರೊಳಗೆ ಒಂದೂವರೆ ಫರಲಾಂಗಿನಷ್ಟು ದೂರ ನೈರುತ್ಯ ಮಾರ್ಗವಾಗಿ ಹೋಗುತ್ತದೆ. ಅನಂತರ ಬಂದು ಹಳ್ಳದ ಪಕ್ಕದಲ್ಲಿ ಪಶ್ಚಿಮ ಮತ್ತು ಉತ್ತರ ಮಾರ್ಗವಾಗಿಯೂ ಸರ್ವೆ ನಂಬರು 39ರ ಉತ್ತರ ಸರಹದ್ದಿನ ಮೇಲೆ ಮೂ ರು ಫರಲಾಂಗಿನಷ್ಟು ದೂರ ಪಶ್ಚಿಮ ಮಾರ್ಗವಾಗಿಯೂ ಮತ್ತು ಅದೇ ಗ್ರಾಮದ ಸರ್ವೆ ನಂಬರು 34ರ ಪಶ್ಚಿಮ ಸರಹದ್ದಿನ ಮೇಲೆ 5 ಫರಲಾಂಗಿನಷ್ಟು ದೂರ ದಕ್ಷಿಣ ಮಾರ್ಗವಾಗಿಯೂ; ಸರ್ವೆ ನಂಬರು 11ರ ದಕ್ಷಿಣ ಸರಹದ್ದಿನ ಮೇಲೆ ಪೂರ್ವ ಮಾ ರ್ಗವಾಗಿಯೂ ಮತ್ತು ಸರ್ವೆ ನಂಬರು 11ರ ಪಶ್ಚಿಮ ಸರಹದ್ದಿನ ಮೇಲೆ ಐದು ಫರಲಾಂಗಿನಷ್ಟು ದೂರ ದಕ್ಷಿಣ ಮಾರ್ಗವಾಗಿ ಯೂ ಹೋಗುತ್ತದೆ. ಅನಂತರ ಸರ್ವೆ ನಂಬರು 12 ರೊಳಗೆ ಹತ್ತು ಫರಲಾಂಗಿನಷ್ಟು ದೂರ ನೈರುತ್ಯ ಮತ್ತು ದಕ್ಷಿಣ ಮಾ ರ್ಗವಾಗಿ ಹೋಗುತ್ತದೆ. ಅನಂತರ ಮುಡಬ ಗ್ರಾಮದ ಸರ್ವೆ ನಂಬರು 12 ರೊಳಗೆ ಬಂದುಕಾಲು ಫರಲಾಂಗಿನಷ್ಟು ದೂರ ನೈರುತ್ಯ ಮಾರ್ಗವಾಗಿ ಹೋಗುತ್ತದೆ. ಅನಂತರ ದಕ್ಷಿಣ ಕನ್ನಡ ಜಿಲ್ಲಾ ಸರಹದ್ದನ್ನು ಸೇರುವುದಕ್ಕೆ ಮುಡಬ ಗ್ರಾಮದ ಸರ್ವೆ ನಂಬರು 46 ರೊಳಗೆ ಐದು ಫರಲಾಂಗಿನಷ್ಟು ದೂರ ನೈರುತ್ಯ ಮಾರ್ಗವಾಗಿ ಹೋಗುತ್ತದೆ. ಅನಂತರ ಮುಡಬ ಗ್ರಾ ಮದ ಸರ್ವೆ ನಂಬರು 46ರ ನೈರುತ್ಯ ಸರಹದ್ದಿನ ಮೂಲೆಯನ್ನು ಸೇರುವ ವರೆಗೂ ಪಶ್ಚಿಮ ಮುಖವಾಗಿ ಸದರಿ ಕನಡ ಜಿಲ್ಲಾ ಸರಹದ್ದನ್ನು ಅನುಸರಿಸಿ ಹೋಗುತ್ತದೆ.

ಪಶ್ಚಿಮಕ್ಕೆ :—ಮೇಲೆ ಕಂಡ ಸ್ಥಳದಿಂದ ಸದರೀ ಲೈನ್ ಶಿವಮೊಗ್ಗಾ ಡಿಸ್ಟ್ರಿಕ್ಟು ತೀರ್ಥಹಳ್ಳಿ ತಾಲ್ಲೂಕು ಬಾಳೆಹಳ್ಳಿ ಗ್ರಾ ಮದ ಆಗ್ನೇಯ ಸರಹದ್ದಿನ ಮೂಲೆಯನ್ನು ಸೇರುವ ವರೆಗೂ ಕನಡ ಜಿಲ್ಲಾ ಸರಹದ್ದನ್ನು ಅನುಸರಿಸಿ ಉತ್ತರ ಮಾರ್ಗವಾಗಿ ಹೋಗುತ್ತದೆ. ಅನಂತರ ಬಾಳೆಹಳ್ಳಿ ಗ್ರಾಮದ ಪೂರ್ವ ಮತ್ತು ಆಗ್ನೇಯ ಸರಹದ್ದುಗಳನ್ನು ಅನುಸರಿಸಿ ಉತ್ತರ, ಪೂರ್ವ ಮತ್ತು ಈಶಾನ್ಯ ದಿಕ್ಕಿನಲ್ಲಿ ಹೋಗಿ ಪೂರುವಾದ ಜಾಗವನ್ನು ಸೇರುತ್ತದೆ.

(2) ಮೇಲ್ಕಂಡ ಪ್ರಕರಣದ (c) ಕಲಮನ್ನನುಸರಿಸಿ ಮೈಸೂರು ಸೀಮೆಯ ಅನ್ಯೋನ್ಯಸಹಾಯಕ ಸಂಘಗಳ ರಿಜಿ ಸ್ಟ್ರಾರ್ ಮಿ|| ಎಂ. ಶಾಮರಾವ್ ಯವರನ್ನು ಅಂಥಾ ಎಲ್ಲೆಗಳಲ್ಲಿ ಅಡಗಿರುವ ಜಮೀನಿನಲ್ಲಿ ಅಥವಾ ಜಮೀನಿನ ಮೇಲೆ ಅಥವಾ ಅಂಥಾ ಜಮೀನಿನ ಜಂಗಲಿ ಉತ್ಪತ್ತಿಗೆ ಹಕ್ಕಿರುವುದಾಗಿ ದಾವೆ ಹೇಳಿಕೊಳ್ಳುವ ಅಥವಾ ಹಕ್ಕಿದೆಯೆಂದು ಹೇಳಲ್ಪಡುವ ಯಾವನಾ ದರೂ ಮನುಷ್ಯನ ಹಕ್ಕುಗಳ ಇರುವಿಕೆಯನ್ನು ಅವುಗಳ ಸ್ವಭಾವ, ಮತ್ತು ಪರಿಮಾಣವನ್ನು ಕುರಿತು ವಿಚಾರಣೆಮಾಡಿ ನಿಶ್ಚ ಯಿಸುವುದಲ್ಲದೆ ಅವುಗಳ ವಿಷಯದಲ್ಲಿ ಮೇಲ್ಕಂಡ ರೆಗ್ಯುಲೇಷನಿನ 2ನೆ ಅಧ್ಯಾಯದಲ್ಲಿ ವಿಧಿಸಿರುವಂತೆ ನಡೆಸುವುದಕ್ಕೆ ಫಾರೆಸ್ಟ್ ಸೆಟ್ಲ್ ಮೆಂಟ್ ಆಫೀಸರಾಗಿ ನೇಮಕರ್ಮಾಡಲು ಮತ್ತು ಕಡೂರು ಡಿಸ್ಟ್ರಿಕ್ಟಿನ ತಾತ್ಕಾಲಿಕ ಡಿಸ್ಟ್ರಿಕ್ಟ್ ಆಫೀಸರನ್ನು ಈ ವಿಚಾರಣೆ ಯಲ್ಲಿ ಫಾರೆಸ್ಟ್ ಸೆಟ್ಲ್ ಮೆಂಟ್ ಆಫೀಸರಿಗೆ ಸರ್ಕಾರ್ ತರಫ ಕುಮ್ಮಕ್ಕು ಕೊಡಲು ಹಾಜರಾಗುವುದಕ್ಕಾಗಿ ನೇಮಕರ್ಮಾಡಲು ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಅಪ್ಪಣೆಯನ್ನು ದಯಪಾಲಿಸಿರುತ್ತಾರೆ.

(3) ಮೇಲ್ಕಂಡ ರೆಗ್ಯುಲೇಷನಿನ 15ನೆ ಪ್ರಕರಣದಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರವನ್ನನುಸರಿಸಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಕಡೂರು ಡಿಸ್ಟ್ರಿಕ್ಟಿನ ತತ್ಕಾಲದ ಡೆಪ್ಯುಟಿ ಕಮೀಷನರನ್ನು, ಫಾರೆಸ್ಟ್ ಸೆಟ್ಲ್ ಮೆಂಟ್ ಆಫೀಸರು ಸದರಿ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಪ್ರಕರಣವನ್ನನುಸರಿಸಿ ಕೊಡುವ ಹುಕುಮುಗಳ ಮೇಲೆ ಬರುವ ಅಪೀಲುಗಳನ್ನು ತನಿಖೆ ಮಾಡುವ ರೆವಿನ್ಯೂ ಆಫೀಸರಾಗಿ ನೇಮಕರ್ಮಾಡುವುದಕ್ಕೂ ಸಹ ಅಪ್ಪಣೆಯನ್ನು ದಯಪಾಲಿಸಿ ರುತ್ತಾರೆ.

ತಾರೀಖು 7ನೆ ಮಾರ್ಚಿ 1907.

ನಂ. ಎಫ್. 8014—ಫಾ. 17-05-16, ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು, 1900ನೆ ಇಸವಿಯ 11ನೆ ನಂಬರ್ ಮೈಸೂರು ಫಾರೆಸ್ಟು ರೆಗ್ಯುಲೇಷನ್ನಿನ 17ನೆ ಪ್ರಕರಣದ ನಿಯಮಗಳನ್ನನುಸರಿಸಿ, ಈ ಇಸ್ತಿಹಾರಿನ ಕೆಳಗೆ ಲಗತ್ತಿರುವ ಷೆಡ್ಯೂಲಿನಲ್ಲಿ ನಮೂದಿಸಿದ ಮೇರೆಗಳುಳ್ಳ ವಿಸ್ತೀರ್ಣವು, ಸದರಿ ಇಸ್ತಿಹಾರಿನ ಕೆಳಭಾಗದಲ್ಲಿ ನಮೂದಿಸುವ ಹಕ್ಕುಗಳ ಚಲಾವಣೆಗೆ ಒಳಪಟ್ಟು, 1907ನೆ ಇಸವಿಯ ಮೇ ಗುರ್ರೆ ತಾರೀಖಿನ ಆಗಾಯಿತು "ಸಂಸ್ಥಾನ ಜಂಗಲ್" ಯಾ "ಸ್ಟೇಟ್ ಫಾರೆಸ್ಟು" ಎಂದು ಎಣಿಸಲ್ಪಡತಕ್ಕದ್ದೆಂದು, ಪ್ರಕಟಿಸಲು ಹುಕುಂ ದಯಪಾಲಿಸುತ್ತಾರೆ:—

ಷೆಡ್ಯೂಲ್.

ಜಿಲ್ಲೆ	ತಾಲ್ಲೂಕು ಮತ್ತು ಹೋಬಳಿ	ಅಂದಾಜು ವಿಸ್ತೀರ್ಣ	ಅರಣ್ಯದ ಹೆಸರು	ಚಕ್ಕುಬಂಧಿ.
ಶಿವಮೊಗ್ಗ	ನಗರ ತಾಲ್ಲೂಕು ಕಸಬಾ ಮತ್ತು ಹೊಸನಗರ ಹೋಬಳಿಗಳು	3.40 ಚದರ ಮೈಲಿಗಳು	ಶಿವಗಂಗ	ಉತ್ತರಕ್ಕೆ—ಎಣ್ಣೆಹೊಳೆಯು ಶ್ರೀಗಿರಿಪುರ ಗ್ರಾಮದ ಸರ್ವೆ 15ನೆ ನಂಬರಿನ ಈಶಾನ್ಯ ಮೂಲೆಯಿಂದ ಹೊರಟು ಪೂರ್ವಕ್ಕೆ ವೀರಸಾಗರ ಗ್ರಾಮದ ಸರ್ವೆ 12ನೆ ನಂಬರಿನ ದಕ್ಷಿಣ ಮೇರೆಯಲ್ಲಿ ಹೋಗಿ; ಅಲ್ಲಿಂದ ಈಶಾನ್ಯಕ್ಕೂ ಪೂರ್ವಕ್ಕೂ ಅದೇ ನಂಬರಿನ ಪೂರ್ವ ಮೇರೆಯಲ್ಲಿ ಅದರ ಆಗ್ನೇಯ ಮೂಲೆಗೆ ಹೋಗಿ; ಅಲ್ಲಿಂದ ದಕ್ಷಿಣಕ್ಕೆ ಸರ್ವೆ 13ನೆ ನಂಬರಿನ ಪಶ್ಚಿಮ ಮೇರೆಯಲ್ಲಿ ಅದರ ನೈರುತ್ಯ ಮೂಲೆಗೆ ಹೋಗಿ; ಅಲ್ಲಿಂದ ಪೂರ್ವಕ್ಕೆ ಸರ್ವೆ 13ನೆ ನಂಬರಿನ ದಕ್ಷಿಣ ಮೇರೆಯಲ್ಲಿ ಅದರ ಆಗ್ನೇಯ ಮೂಲೆಗೆ ಹೋಗಿ; ಅಲ್ಲಿಂದ ಈಶಾನ್ಯಕ್ಕೆ ಸರ್ವೆ 53, 47 ಮತ್ತು 64ನೆ ನಂಬರುಗಳ ದಕ್ಷಿಣ ಮೇರೆಯಲ್ಲಿ 64 ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ.

ಪೂರ್ವಕ್ಕೆ—ಅಲ್ಲಿಂದ ಆಗ್ನೇಯಕ್ಕೆ ಸರ್ವೆ 48ನೆ ನಂಬರಿನ ಪಶ್ಚಿಮ ಮೇರೆಯಲ್ಲಿ ಅದರ ಅತ್ಯಂತ ದಕ್ಷಿಣ ಮೂಲೆಗೆ (ಶಿವಗಂಗ, ವೀರಸಾಗರ ಮತ್ತು ಕಂಬಾಲ ಗ್ರಾಮಗಳ ಮುಕ್ಕೊಪ್ಪಿಗೆ) ಹೋಗಿ; ಅಲ್ಲಿಂದ ನೈರುತ್ಯಕ್ಕೆ ವೀರಸಾಗರ ಗ್ರಾಮದ ಸರ್ವೆ 50ನೆ ನಂಬರಿನ ಉತ್ತರ ಮೇರೆಯಲ್ಲಿ ಅದರ ವಾಯುವ್ಯ ಮೂಲೆಗೆ ಹೋಗಿ; ಅಲ್ಲಿಂದ ಆಗ್ನೇಯಕ್ಕೆ ಅದೇ ನಂಬರಿನ ಪಶ್ಚಿಮ ಮೇರೆಯಲ್ಲಿ ಹೋಗಿ; ಅಲ್ಲಿಂದ ದಕ್ಷಿಣಕ್ಕೂ ಆಗ್ನೇಯಕ್ಕೂ ಕಂಬಾಲ ಗ್ರಾಮದ ಸರ್ವೆ 112ನೆ ನಂಬರಿನ ಮತ್ತು ಮೈಲನಹಳ್ಳಿ ಗ್ರಾಮದ ಸರ್ವೆ 45ನೆ ನಂಬರಿನ ಪಶ್ಚಿಮ ಮೇರೆಯಲ್ಲಿ ಸದರಿ 45ನೆ ನಂಬರಿನ ನೈರುತ್ಯ ಮೂಲೆಗೆ ಹೋಗಿ, ಅಲ್ಲಿಂದ ಪೂರ್ವಕ್ಕೆ ಆ ಸರ್ವೆ ನಂಬರಿನ ದಕ್ಷಿಣ ಮೇರೆಯಲ್ಲಿ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ಆಗ್ನೇಯಕ್ಕೆ ಸರ್ವೆ 44ನೆ ನಂಬರಿನ ಪಶ್ಚಿಮ ಮೇರೆಯಲ್ಲಿ ಅದರ ನೈರುತ್ಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ಪಶ್ಚಿಮಕ್ಕೂ ನೈರುತ್ಯಕ್ಕೂ ಉದಕುಂಟೆ ಗ್ರಾಮದ ಸರ್ವೆ 112ನೆ ನಂಬರಿನ ಉತ್ತರ ಮೇರೆಯಲ್ಲಿ ಅದರ ನೈರುತ್ಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ದಕ್ಷಿಣಕ್ಕೆ ಸರ್ವೆ 110ನೆ ನಂಬರನ್ನು ದಾಟಿ ಸುಮಾರು 27 ಸರಪಣಿಗಳ ದೂರ ಸರ್ವೆ 111ನೆ ನಂಬರಿನ ನೈರುತ್ಯ ಮೂಲೆಗೆ ಹೋಗಿ, ಅಲ್ಲಿಂದ ಆಗ್ನೇಯಕ್ಕೆ ಸರ್ವೆ 111ನೆ ನಂಬರಿನ ದಕ್ಷಿಣ ಮೇರೆಯಲ್ಲಿ ಅದರ ಆಗ್ನೇಯ ಮೂಲೆಗೆ ಹೋಗಿ, ಅಲ್ಲಿಂದ ದಕ್ಷಿಣಕ್ಕೆ ಸರ್ವೆ 109ನೆ ನಂಬರಿನ ಪಶ್ಚಿಮ ಮೇರೆಯಲ್ಲಿ ಅದರ ನೈರುತ್ಯ ಮೂಲೆಗೆ ಹೋಗುತ್ತದೆ.

ದಕ್ಷಿಣಕ್ಕೆ—ಅಲ್ಲಿಂದ ನೈರುತ್ಯಕ್ಕೆ ವೀರಾಪುರ ಗ್ರಾಮದ ಸರ್ವೆ 19 ಮತ್ತು 81ನೆ ನಂಬರುಗಳ ಉತ್ತರ ಮೇರೆಗಳಲ್ಲಿ ಸರ್ವೆ 81ನೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ವಾಯುವ್ಯಕ್ಕೆ ಅದರಂಗಿ ಗ್ರಾಮದ ಸರ್ವೆ 81 ಮತ್ತು 30ನೆ ಸರ್ವೆ ನಂಬರುಗಳ ಈಶಾನ್ಯ ಮೇರೆಗಳಲ್ಲಿ 30ನೆ ನಂಬರಿನ ಅತ್ಯಂತ ಉತ್ತರ ಮೂಲೆಗೆ ಹೋಗುತ್ತದೆ; ಅಲ್ಲಿಂದ ದಕ್ಷಿಣಕ್ಕೆ ಆ ಸರ್ವೆ ನಂಬರಿನ ಪಶ್ಚಿಮ ಮೇರೆಯಲ್ಲಿ ಸುಮಾರು 25 ಸರಪಣಿಗಳ ದೂರ ಹೋಗುತ್ತದೆ; ಅಲ್ಲಿಂದ ವಾಯುವ್ಯಕ್ಕೆ ಸರ್ವೆ 76ನೆ ನಂಬರನ್ನು ದಾಟಿ ಸುಮಾರು 45 ಸರಪಣಿಗಳ ದೂರ ಸರ್ವೆ 75ನೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ಪಶ್ಚಿಮಕ್ಕೆ ಆ ನಂಬರಿನ ಉತ್ತರ ಮೇರೆಯಲ್ಲಿ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ.

ಪಶ್ಚಿಮಕ್ಕೆ—ಅಲ್ಲಿಂದ ಉತ್ತರಕ್ಕೂ ವಾಯುವ್ಯಕ್ಕೂ ಚಿಟ್ಟಹಳ್ಳಿ ಗ್ರಾಮದ ಸರ್ವೆ 70ನೆ ನಂಬರಿನ ಪೂರ್ವ ಮೇರೆಯಲ್ಲಿ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ಪಶ್ಚಿಮಕ್ಕೆ ಅದರ ಉತ್ತರ ಮೇರೆಯಲ್ಲಿ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ದಕ್ಷಿಣಕ್ಕೆ ಅದೇ ನಂಬರಿನ ಪಶ್ಚಿಮ ಮೇರೆಯಲ್ಲಿ ಸರ್ವೆ 72ನೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ;

ಅಲ್ಲಿಂದ ಪಶ್ಚಿಮಕ್ಕೆ ಆ ನಂಬರಿನ ಉತ್ತರ ಮೇರೆಯಲ್ಲಿ ಸುಮಾರು 21 ಸರಪಣಿಗಳ ದೂರ ಹೋಗುತ್ತದೆ; ಅಲ್ಲಿಂದ ಉತ್ತರಕ್ಕೆ ಸರ್ವೆ 73 ಮತ್ತು 62ನೆ ನಂಬರುಗಳ ಪೂರ್ವ ಮೇರೆ ರೇಖೆಗಳಿಗೂ ಸರ್ವೆ 68ನೆ ನಂಬರಿನ ದಕ್ಷಿಣ ಮತ್ತು ಪೂರ್ವ ಮೇರೆ ರೇಖೆಗಳಿಗೂ ಸಮಾನಾಂತರವಾಗಿ ಸುಮಾರು 5 ಸರಪಣಿಗಳ ದೂರದಲ್ಲಿ ಸರ್ವೆ 69ನೆ ನಂಬರನ್ನು ದಾಟಿ ಸುಮಾರು 45 ಸರಪಣಿಗಳ ದೂರ ಸರ್ವೆ 68ನೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ಆಗ್ನೇಯಕ್ಕೆ ಶ್ರೀಗಿರಿಪುರ ಗ್ರಾಮದ ಸರ್ವೆ 22ನೆ ನಂಬರಿನ ದಕ್ಷಿಣ ಮೇರೆಯಲ್ಲಿ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ಈಶಾನ್ಯಕ್ಕೆ ಆ ನಂಬರಿನ ಪೂರ್ವ ಮೇರೆಯಲ್ಲಿ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ; ಅಲ್ಲಿಂದ 164ನೆ ಸರ್ವೆ ನಂಬರಿನ ದಕ್ಷಿಣ ಮೇರೆಯಲ್ಲಿ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ಉತ್ತರಕ್ಕೆ ಸರ್ವೆ 163, 139, 162, 138, 161, 26, 160 ಮತ್ತು 27ನೆ ನಂಬರುಗಳ ಪೂರ್ವ ಮೇರೆಗಳಲ್ಲಿ 27ನೆ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ಪೂರ್ವಕ್ಕೆ ಸರ್ವೆ 28ನೆ ನಂಬರಿನ ದಕ್ಷಿಣ ಮೇರೆಯಲ್ಲಿ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ಉತ್ತರಕ್ಕೆ ಆ ನಂಬರಿನ ಮತ್ತು ಸರ್ವೆ 29 ಮತ್ತು 157ನೆ ನಂಬರುಗಳ ಪೂರ್ವ ಮೇರೆಯಲ್ಲಿ ಹೊರಟ ಸ್ಥಳಕ್ಕೆ ಸೇರುತ್ತದೆ.

ಎ. ಷರಾಗಳು.

I. ಈ ತಾಕಿನಲ್ಲಿ ಈ ಕೆಳಗೆ ನಮೂದಿಸುವ ದಾರಿ ಹಕ್ಕುಗಳು ಮಂಜೂರ್ಮಾಡಲ್ಪಟ್ಟಿವೆ:—

(i) ಶಿರಿಗಿರಿಪುರದಿಂದ ಅದರಂಗಿಗೆ ಹೋಗುವ ಗಾಡಿದಾರಿ. 12 ಅಡಿಗಳ ಅಗಲ—ಜನ, ಜಾನುವಾರು, ಗಾಡಿಗಳಿಗೆ ವರ್ಷಾವಧಿ ಖುಲ್ಲಾ ಇರತಕ್ಕದ್ದು; ಇದು ಶಿರಿಗಿರಿಪುರ ಗ್ರಾಮದ ಸರ್ವೆ 22ನೆ ನಂಬರಿನ ದಕ್ಷಿಣ ಮೇರೆಯಲ್ಲಿ ಸದರಿ ನಂಬರಿನ ಆಗ್ನೇಯ ಮೂಲೆಯಿಂದ ಸುಮಾರು 2 ಸರಪಣಿಗಳ ದೂರದಲ್ಲಿ ಒಂದು ಸ್ಥಳದಲ್ಲಿ ಜಂಗಲಿಯನ್ನು ಪ್ರವೇಶಿಸಿ, ಬಿಟ್ಟಹಳ್ಳಿ ಗ್ರಾಮದ ಸರ್ವೆ 69ನೆ ನಂಬರನ್ನು ದಾಟಿ ಸುಮಾರು 40 ಸರಪಣಿಗಳ ದೂರ ದಕ್ಷಿಣಕ್ಕೆ ಹೋಗಿ, ಅದರಂಗಿ ಗ್ರಾಮದ ಸರ್ವೆ 75ನೆ ನಂಬರಿನ ಈಶಾನ್ಯ ಮೂಲೆಯಿಂದ ಪಶ್ಚಿಮಕ್ಕೆ ಸುಮಾರು 2 ಸರಪಣಿಗಳ ದೂರದಲ್ಲಿರುವ ಒಂದು ಸ್ಥಳದಲ್ಲಿ ಜಂಗಲಿಯನ್ನು ಬಿಡುತ್ತದೆ.

(ii) ವೀರಸಾಗರದಿಂದ ಶಿವಗಂಗಾಕ್ಕೆ ಹೋಗುವ ಗಾಡಿ ದಾರಿ. 12 ಅಡಿಗಳ ಅಗಲ—ಜನ, ಜಾನ್ವಾರು, ಗಾಡಿಗಳಿಗೆ ವರ್ಷಾವಧಿ ಕಾಲವೆಲ್ಲಾ ಖುಲ್ಲಾ ಇರತಕ್ಕದ್ದು. ಇದು ವೀರಸಾಗರ ಗ್ರಾಮದ ಸರ್ವೆ 64ನೆ ನಂಬರಿನ ದಕ್ಷಿಣ ಗಡಿಯಲ್ಲಿ ಸದರಿ ನಂಬರಿನ ಆಗ್ನೇಯ ಮೂಲೆಯಿಂದ ಪಶ್ಚಿಮಕ್ಕೆ ಸುಮಾರು 5 ಸರಪಣಿಗಳ ದೂರದಲ್ಲಿ ಜಂಗಲಿಯನ್ನು ಪ್ರವೇಶಿಸಿ, ಆಗ್ನೇಯವಾಗಿ ಸರ್ವೆ 49ನೆ ನಂಬರನ್ನು ದಾಟಿ ಸುಮಾರು 10 ಸರಪಣಿಗಳ ದೂರ ಹೋಗಿ, ಸರ್ವೆ 64ನೆ ನಂಬರಿನ ಆಗ್ನೇಯ ಮೂಲೆಯಿಂದ ದಕ್ಷಿಣಕ್ಕೆ ಸುಮಾರು 7 ಸರಪಣಿಗಳ ದೂರದಲ್ಲಿ ಸರ್ವೆ 48ನೆ ನಂಬರಿನ ಪಶ್ಚಿಮ ಗಡಿಯಲ್ಲಿ ಜಂಗಲಿಯನ್ನು ಬಿಡುತ್ತದೆ.

(iii) ವೀರಸಾಗರದಿಂದ ಶಿವಗಂಗೆಗೆ ಹೋಗುವ 6 ಅಡಿ ಅಗಲದ ಕಾಲು ದಾರಿ—ಜನ, ಜಾನ್ವಾರುಗಳ ತಿರುಗಾಟಕ್ಕೆ ಸಾರ್ವಕಾಲದಲ್ಲಿಯೂ ಖುಲ್ಲಾ ಇರತಕ್ಕದ್ದು. ಇದು ವೀರಸಾಗರ ಗ್ರಾಮದ ಸರ್ವೆ 49ನೆ ನಂಬರಿನ ವಾಯುವ್ಯ ಮೂಲೆಯಲ್ಲಿ ಜಂಗಲಿಯನ್ನು ಪ್ರವೇಶಿಸಿ, ಅದೇ ನಂಬರನ್ನು ದಾಟಿ ಪೂರ್ವಕ್ಕೆ ಸುಮಾರು 25 ಸರಪಣಿಗಳ ದೂರ ಹೋಗಿ ಮೇಲೆ ಹೇಳಿದ ii ನೆ ನಂಬರು ದಾರಿಯು ಜಂಗಲಿಯನ್ನು ಬಿಡುವ ಸ್ಥಳದಲ್ಲಿ ಜಂಗಲಿಯನ್ನು ಬಿಡುತ್ತದೆ.

(iv) ಮೈಲನಹಳ್ಳಿಯಿಂದ ಅದರಂಗಿಗೆ ಹೋಗುವ 6 ಅಡಿಗಳ ಅಗಲದ ಕಾಲುದಾರಿ—ಜನ, ಜಾನ್ವಾರುಗಳ ತಿರುಗಾಟಕೆ ಸಾರ್ವಕಾಲದಲ್ಲಿಯೂ ಖುಲ್ಲಾ ಇರತಕ್ಕದ್ದು. ಇದು ಮೈಲನಹಳ್ಳಿ ಗ್ರಾಮದ ಸರ್ವೆ 44ನೆ ನಂಬರಿನ ಪಶ್ಚಿಮ ಗಡಿಯಲ್ಲಿ ಸದರಿ ನಂಬರಿನ ನೈರುತ್ಯ ಮೂಲೆಯಿಂದ ಉತ್ತರಕ್ಕೆ ಸುಮಾರು 5 ಸರಪಣಿಗಳ ದೂರದಲ್ಲಿ ಜಂಗಲಿಯನ್ನು ಪ್ರವೇಶಿಸಿ, ಮೈಲನಹಳ್ಳಿ ಗ್ರಾಮದ 46 ಮತ್ತು 47ನೆ ನಂಬರುಗಳನ್ನು ಉದಕುಂಟೆ ಗ್ರಾಮದ ಸರ್ವೆ 113ನೆ ನಂಬರನ್ನು ದಾಟಿ ನೈರುತ್ಯವಾಗಿ ಸುಮಾರು 80 ಸರಪಣಿಗಳ ದೂರ ಹೋಗಿ, ಪಶ್ಚಿಮಕ್ಕೆ ಉದಕುಂಟೆ ಗ್ರಾಮದ ಸರ್ವೆ 113 ಮತ್ತು 114ನೆ ನಂಬರುಗಳನ್ನು ದಾಟಿ ಸುಮಾರು 30 ಸರಪಣಿಗಳ ದೂರ ಹೋಗಿ, ಅಲ್ಲಿಂದ ಪಶ್ಚಿಮಕ್ಕೆ ಅದರಂಗಿ ಗ್ರಾಮದ ಸರ್ವೆ 79 ಮತ್ತು 77ನೆ ನಂಬರುಗಳನ್ನು ದಾಟಿ ಸುಮಾರು 65 ಸರಪಣಿಗಳ ದೂರ ಹೋಗಿ, ಅದರಂಗಿ ಗ್ರಾಮದ ಸರ್ವೆ 75ನೆ ನಂಬರಿನ ಈಶಾನ್ಯ ಮೂಲೆಯಲ್ಲಿ ಜಂಗಲಿಯನ್ನು ಬಿಡುತ್ತದೆ.

(v) ಉದಕುಂಟೆಯಿಂದ ಶ್ರೀಗಿರಿಪುರಕ್ಕೆ ಹೋಗುವ 6 ಅಡಿ ಅಗಲದ ಕಾಲು ದಾರಿ—ಜನ, ಜಾನ್ವಾರುಗಳ ತಿರುಗಾಟಕ್ಕೆ ಸಾರ್ವಕಾಲದಲ್ಲಿಯೂ ಖುಲ್ಲಾ ಇರತಕ್ಕದ್ದು. ಇದು ಜಂಗಲಿಯ ಪೂರ್ವ ಗಡಿಯಲ್ಲಿ ಉದಕುಂಟೆ ಗ್ರಾಮದ ಸರ್ವೆ 110ನೆ ನಂಬರಿನಲ್ಲಿ ಸರ್ವೆ 111ನೆ ನಂಬರಿನ ನೈರುತ್ಯ ಮೂಲೆಯಿಂದ ಉತ್ತರಕ್ಕೆ ಸುಮಾರು 3 ಸರಪಣಿಗಳ ದೂರದಲ್ಲಿ ಜಂಗಲಿಯನ್ನು ಪ್ರವೇಶಿಸಿ, ಉದಕುಂಟೆ ಗ್ರಾಮದ ಸರ್ವೆ 110, 113 ಮತ್ತು 114ನೆ ನಂಬರುಗಳನ್ನು ಅದರಂಗಿ ಗ್ರಾಮದ ಸರ್ವೆ 79 ಮತ್ತು 77ನೆ ನಂಬರುಗಳನ್ನು ದಾಟಿ ಪಶ್ಚಿಮಕ್ಕೆ ಸುಮಾರು 138 ಸರಪಣಿಗಳ ದೂರವೂ, ಉತ್ತರಕ್ಕೆ ಸರ್ವೆ 77ನೆ ನಂಬರನ್ನು ದಾಟಿ ಸುಮಾರು 7 ಸರಪಣಿಗಳ ದೂರವೂ ಹೋಗಿ ಕೆಳಗೆ ಹೇಳುವ (vi) (1) ನೇ ನಂಬರ್ ಗಾಡಿ ದಾರಿಯನ್ನು ಸೇರುತ್ತದೆ.

(vi) ಈ ಕೆಳಗೆ ನಮೂದಿರುವ ಆವರಣಗಳಿಗೆ ಅವುಗಳ ಎದುರಿಗೆ ಬರೆದಿರುವ ದಾರಿಗಳಿಂದ ಪ್ರವೇಶವು ಕೊಡಲ್ಪಟ್ಟಿದೆ:—

ನಂಬರು	ಹೆಸರು	ಸ್ಥಳ	ಪ್ರವೇಶ
1	ಸರ್ವೆ ನಂಬರ್ 78 ...	ಅದರಂಗಿ ಗ್ರಾಮದ ಸರ್ವೆ 77ನೆ ನಂಬರಿನಲ್ಲಿ.	ಜನರಿಗೂ, ಜಾನ್ವಾರುಗಳಿಗೂ, ಗಾಡಿಗಳಿಗೂ ವರ್ಷವೆಲ್ಲಾ ಖುಲ್ಲಾ ಇರತಕ್ಕ 12 ಅಡಿಗಳ ಅಗಲವೂ, 5 ಸರಪಣಿಗಳ ಉದ್ದವೂ ವುಳ್ಳ ಒಂದು ಗಾಡಿದಾರಿಯಿಂದ ಪ್ರವೇಶ—ಇದು ಶ್ರೀಗಿರಿಪುರ ಗ್ರಾಮದ ಸರ್ವೆ 22ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ಜಂಗಲಿಯನ್ನು ಪ್ರವೇಶಿಸಿ ಆಗ್ನೇಯವಾಗಿ ಆವರಣಕ್ಕೆ ಹೋಗಿ ಅಲ್ಲಿ ಮೇಲೆ ನಮೂದಿಸಿದ 1ನೆ ನಂಬರ್ ಕಾಲು ದಾರಿಯನ್ನು ಸೇರುತ್ತದೆ.
2	ಶ್ರೀನಿವಾಸದೇವರಗುಡಿ...	ಶ್ರೀಗಿರಿಪುರ ಗ್ರಾಮದ ಸರ್ವೆ 135ನೆ ನಂಬರಿನಲ್ಲಿ.	ವರ್ಷವೆಲ್ಲಾ ಜನ, ಜಾನ್ವಾರುಗಳಿಗೆ ಖುಲ್ಲಾ ಇರತಕ್ಕ 6 ಅಡಿಗಳ ಅಗಲ ಮತ್ತು 60 ಸರಪಣಿಗಳ ಉದ್ದ ವುಳ್ಳ ಕಾಲು ದಾರಿಯಿಂದ—ಇದು ಶ್ರೀಗಿರಿಪುರ ಗ್ರಾಮದ ಸರ್ವೆ 27ನೆ ನಂಬರಿನ ಈಶಾನ್ಯ ಮೂಲೆಯಲ್ಲಿ ಜಂಗಲಿಯನ್ನು ಪ್ರವೇಶಿಸಿ ಆಗ್ನೇಯವಾಗಿ ಸರ್ವೆ 135ನೆ ನಂಬರನ್ನು ದಾಟಿ ಗುಡಿಗೆ ಹೋಗುತ್ತದೆ.
3	ಆಂಜನೇಯನ ಗುಡಿ	ಡಿಟ್ಟೋ	ಮೇಲೆ ಬರೆದಿರುವ vi (2) ನೆ ನಂಬರು ದಾರಿಯಿಂದ—ದಾರಿಯ ಉದ್ದವು 15 ಸರಪಣಿಗಳು. ಇದು ಮೇಲೆ vi (2) ನಂಬರಿನಲ್ಲಿ ಹೇಳಿದ ಗುಡಿಯಿಂದ ಸರ್ವೆ 135ನೆ ನಂಬರನ್ನು ದಾಟಿ ಉತ್ತರಕ್ಕೆ ಗುಡಿಗೆ ಹೋಗುತ್ತದೆ.
4.	ಮುನೀಶ್ವರನ ಗುಡಿ ...	ಮೈಲನಹಳ್ಳಿ ಗ್ರಾಮದ ಸರ್ವೆ 46ನೆ ನಂಬರು.	ವರ್ಷವೆಲ್ಲಾ ಜನ, ಜಾನ್ವಾರುಗಳಿಗೆ ಖುಲ್ಲಾ ಇರತಕ್ಕ 6 ಅಡಿ ಅಗಲದ ಕಾಲುದಾರಿಯಿಂದ—ಇದು ಮೇಲೆ ಹೇಳಿದ iv ನಂಬರ್ ದಾರಿಯಿಂದ ಸರ್ವೆ 46ನೆ ನಂಬರಿನಲ್ಲಿ ಕವಲು ಒಡೆದು ಉತ್ತರಕ್ಕೆ ಗುಡಿಗೆ ಹೋಗುತ್ತದೆ. ಉದ್ದವು 3 ಸರಪಣಿಗಳು.

B. I. ಈ ಕೆಳಗೆ ನಮೂದಿಸಿರುವವು ಆವರಣಗಳೆಂದು ಭಾವಿಸಲ್ಪಟ್ಟಿವೆ.

1	ಸರ್ವೆ 78ನೆ ನಂಬರು ...	ಅದರಂಗಿ ಗ್ರಾಮದ ಸರ್ವೆ 77ನೆ ನಂಬರಿನಲ್ಲಿ.	ಸುತ್ತಮುತ್ತಲೂ ಒಂದು ಎಕರೆ (4,840 ಚದರ ಗಜಗಳು ಸುತ್ತಲೂ)
2	ಶ್ರೀನಿವಾಸದೇವರ ಗುಡಿ ...	ಶ್ರೀಗಿರಿಪುರ ಗ್ರಾಮದ ಸರ್ವೆ 135ನೆ ನಂಬರಿನಲ್ಲಿ.	ಸುತ್ತಲೂ ½ ಎಕರೆ (2,420 ಚದರ ಗಜಗಳೂ)
3	ಆಂಜನೇಯನ ಗುಡಿ ...	ಡಿಟ್ಟೋ	ಡಿಟ್ಟೋ
4	ಮುನೀಶ್ವರನ ಗುಡಿ ...	ಮೈಲನಹಳ್ಳಿ ಗ್ರಾಮದ ಸರ್ವೆ 46ನೆ ನಂಬರಿನಲ್ಲಿ.	ಡಿಟ್ಟೋ

B. II. ಈ ತಾಕಿನಲ್ಲಿ ಈ ಕೆಳಗೆ ನಮೂದು ಮಾಡುವ ರಿಯಾಯಿತಿಗಳನ್ನು ಮಂಜೂರ್ಮಾಡಿ ಇದೆ:—

(1) ಸಂಸ್ಥಾನದ ಜಂಗಲಿಯಿಂದ ಕುಟುಂಬ ಒಂದಕ್ಕೆ ತಿಂಗಳು ಒಂದಕ್ಕೆ 6 ತಲೆ ಹೊರೆಯಷ್ಟು ಬಣಗಿಬಿದ್ದು ಕೆಲಸಕ್ಕೆ ಬಾರದ ತರಗತಿ ವಿಂಗಡಿಸದ ಮರಗಳ ಸೌದೆಯನ್ನು ಮುಫತ್ತಾಗಿ ಕೊಡತಕ್ಕದ್ದು.

(2) ತರಗತಿ ವಿಂಗಡಿಸದ ಮರಗಳ ಹಸಿ ಮರವನ್ನು ವ್ಯವಸಾಯದ ಮುಟ್ಟುಗಳಿಗಾಗಿ ಅಂದರೆ ಒಬ್ಬ ರೈತನಿಗೆ ಒಂದು ವರುಷಕ್ಕೆ 2 ನೇಗಿಲುಗಳ ಮೇರೆಗೆ ಮುಫತ್ತಾಗಿ ಕೊಡತಕ್ಕದ್ದು. ಇದನ್ನು ವರ್ಷಂಪ್ರತಿ ಗೊತ್ತು ಮಾಡುವ ಕೂಪುಗಳಲ್ಲಿಯಾಗಲಿ ಅಥವಾ ಇದಕ್ಕಾಗಿಯೇ ಪ್ರತ್ಯೇಕವಾಗಿ ವಿಂಗಡಿಸತಕ್ಕ ಪ್ರದೇಶಗಳಲ್ಲಿಯಾಗಲಿ ಕಡಿದುಕೊಳ್ಳತಕ್ಕದ್ದು.

(1) ನೆ ರಿಯಾಯಿತಿಯು ಶ್ರೀಗಿರಿಪುರ, ವೀರಸಾಗರ, ಮೈಲನಹಳ್ಳಿ ರೈತರಿಗೆಲ್ಲಾ ಲಗಾವಾಗುತ್ತದೆ.

(2) ನೆ ರಿಯಾಯಿತಿಯು ಮೈಲನಹಳ್ಳಿ ರೈತರಿಗೆ ಮಾತ್ರ ಲಗಾವಾಗುತ್ತದೆ.

(3) ಸಂಸ್ಥಾನ ಜಂಗಲಿಯಲ್ಲಿ ದನ ಮೇಯಿಸಕೂಡದೆಂದು ಅಡ್ಡಿ ಮಾಡದೆ ಇರುವ ಪ್ರದೇಶಗಳಲ್ಲಿ ಶ್ರೀಗಿರಿಪುರದ 601 ಕಾಲ್ನಡೆ ದನಗಳನ್ನೂ 383 ಕುರಿಗಳನ್ನೂ ದನ ಒಂದಕ್ಕೆ 0—2—6 ನಂತೆಯೂ, ಕುರಿ ಒಂದಕ್ಕೆ 0—1—3 ನಂತೆಯೂ ಚಾರ್ಜ್ ಕೊಟ್ಟು ವರ್ಷವೆಲ್ಲಾ ಮೇಯಿಸಿಕೊಳ್ಳಬಹುದು.

ಷರಾ—ಜಂಗಲಿಯ ಮೇರೆಗುರ್ತನ್ನು ಆಖೈರಿನಲ್ಲಿ ಸಾಫ್ ಮಾಡುವ ಕಾಲದಲ್ಲಿ ಸಾಗುವಳಿ ಜಮೀನಿನ ಪಕ್ಕದಲ್ಲಿ 5 ಸರಪಣಿಗಳ ಅಗಲದ ಪ್ರದೇಶವನ್ನು ಉದ್ದಕ್ಕೂ ಬಿಟ್ಟುಬಿಡತಕ್ಕದ್ದು.

ತಾರೀಖು 7ನೆ ಮಾರ್ಚಿ 1907.

ನಂ: ರೆ. 8100—ಫಾರೆಸ್ಟು 211-05—9; ಸೆ॥ 1900ನೇ ಇಸವಿ VIIನೆ ನಂಬರು ಮೈಸೂರು ಫಾರೆಸ್ಟು ರೆಗ್ಯುಲೇಷನ್ 17ನೆ ಪ್ರಕರಣವನ್ನು ಅನುಸರಿಸಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಪ್ರಸಿದ್ಧಪಡಿಸುವದೇನಂದರೆ—ಈ ಇಸ್ತಿಹಾರ್ನಾಮೆಗೆ ಲಗತ್ತು ಇರುವ ಷೆಡ್ಯೂಲ್‌ನಲ್ಲಿ ಕಂಡ ಚಕ್ಕುಬಂದಿಯುಳ್ಳ ಪ್ರದೇಶವನ್ನು ಸದರಿ ಷೆಡ್ಯೂಲಿನ ಅಡಿಯಲ್ಲಿ ನಮೂದಿಸಿರುವ ಹಕ್ಕುಗಳ ಚಲಾವಣೆಗೆ ಒಳಪಟ್ಟು 1907ನೆ ಇಸವಿ ಏಪ್ರಿಲ್ 1ನೆ ತಾರೀಖು ಲಾಗಾಯಿತು ಒಂದು ಸ್ಟೇಟ್ ಜಂಗಲಿಯಾಗಿ ಮಾಡತಕ್ಕದ್ದು.

ಷೆಡ್ಯೂಲ್ ಯಾದಿ ಪಟ್ಟಿ.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ಮತ್ತು ಗ್ರಾಮ.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಚಕ್ಕುಬಂದಿ.
ಕಡೂರು.	ಯಡೆಹಳ್ಳಿ ಸಬ್ ತಾಲ್ಲೂಕು ಮತ್ತು ತರೀಕೆರೆ ತಾಲ್ಲೂಕು.	5·5 ಚದರ ಮೈಲಿ.	ಲಕ್ಕವಳ್ಳಿ ಎಕ್ಸ್‌ಟೆನ್‌ಷನ್ (ಹೊಸಹಳ್ಳಿ ಬ್ಲಾಕ್).	ಉತ್ತರಕ್ಕೆ—ಹೊಸಹಳ್ಳಿ ಗ್ರಾಮದ ಸರ್ವೆ ನಂಬರು 61ರ ವಾಯವ್ಯ ಮೂಲೆಯಿಂದ ಲೈನ್ ಹೊರಟು ಪೂರ್ವ ದಿಕ್ಕಿಗೆ ಭದ್ರಾನದಿಯ ಬಲಗಡದಲ್ಲಿ ಉದ್ದಕ್ಕೂ ಹೋಗಿ ಲಕ್ಕವಳ್ಳಿ ಸ್ಟೇಟ್ ಫಾರೆಸ್ಟಿನ ಪಶ್ಚಿಮದ ಎಲ್ಲೆಯಲ್ಲಿ ಸರ್ವೆ ನಂಬರು 61ರ ಈಶಾನ್ಯ ಮೂಲೆಗೆ ಸೇರುತ್ತದೆ. ಪೂರ್ವಕ್ಕೆ—ಅಲ್ಲಿಂದಾ ಲಕ್ಕವಳ್ಳಿ ಸ್ಟೇಟ್ ಫಾರೆಸ್ಟಿನ ಪಶ್ಚಿಮ ಗಡಿಯಲ್ಲಿಯೇ ಹೋಗಿ ತರೀಕೆರೆ ಯಡೇಹಳ್ಳಿ ರಸ್ತೆಯಲ್ಲಿ ಹೊಸಹಳ್ಳಿ ಗ್ರಾಮದ ಸರ್ವೆ ನಂಬರು 60ರ ಆಗ್ನೇಯ ಮೂಲೆಗೆ ಸೇರಿ ಅಲ್ಲಿಂದಾ ಅದೇ ರಸ್ತೆಯಲ್ಲಿಯೆ ಲಕ್ಕವಳ್ಳಿ ಸ್ಟೇಟ್ ಫಾರೆಸ್ಟಿನ ಪಶ್ಚಿಮ ಗಡಿ ಬಂದಹಾಗೆ ಹೋಗಿ ತಡಸದ ಬಳಿ ಸರ್ಕಾರ ಹೈರೋಡ್ ಸ್ಟೇಟ್ ಫಾರೆಸ್ಟು ಬ್ಲಾಕಿಗೆ ತಿರುಗುವ ತಡಸದ ಗ್ರಾಮದ ಸರ್ವೆ ನಂಬರು 8ರ ದಕ್ಷಿಣ ಗಡಿಯಲ್ಲಿ ಸೇರಿ ಅಲ್ಲಿಂದಾ ಲಕ್ಕವಳ್ಳಿ ಸ್ಟೇಟ್ ಫಾರೆಸ್ಟ್ ಪಶ್ಚಿಮ ಗಡಿ ಬಂದಹಾಗೆ ಸದರೀ ಫಾರೆಸ್ಟಿಗೆ ನಂದಿಗಾವೆಯಿಂದ ಹೋಗುವ ಗಾಡಿ ಜಾಡಿನ ಬಳಿ ಇರುವ ನಂದಿಗಾವೆ ಗ್ರಾಮದ 51—52ರ ಸಮೀಪ ಇರುವ ಮೂರು ಬಾಂದುಗಳು ಕೂಡಿ ಇರುವ ಸ್ಥಳಕ್ಕೆ ಹೋಗುತ್ತದೆ.

ದಕ್ಷಿಣಕ್ಕೆ ಮತ್ತು ಪಶ್ಚಿಮಕ್ಕೆ—ಸದರಿ ಮೂರು ಬಾಂದಗಳು ಕೂಡುವ ಸ್ಥಳದಿಂದ ವಾಯುವ್ಯವಾಗಿ ಹೊರಟು ನಂದಿಗಾವೆ ಗ್ರಾಮದ ಸರ್ವೆ ನಂಬರು 41ರ ಉತ್ತರ ಗಡಿಯಲ್ಲಿ 75 ಸರಪಳಿ ವರೆಗೆ ಹೋಗಿ ಅದರ ಈಶಾನ್ಯ ಮೂಲೆಯಿಂದ ಪಶ್ಚಿಮ ದಿಕ್ಕಿಗೆ 37 ಸರಪಳಿ ದೂರದಲ್ಲಿರುವ ಒಂದು ಸ್ಥಳವನ್ನು ಸೇರಿ ಅಲ್ಲಿಂದಾ ಉತ್ತರವಾಗಿ ಸರ್ವೆ ನಂಬರು 30ರ ಮೂಲಕ 84 ಸರಪಳೀ ದೂರ ಹೋಗಿ ಸರ್ವೆ ನಂಬರು 29ರ ಈಶಾನ್ಯ ಮೂಲೆಗೆ ಸೇರಿ ಅಲ್ಲಿಂದಾ 85 ಸರಪಳಿ ತಡಸಗ್ರಾಮದ ಸರ್ವೆ ನಂಬರು 91ರ ಉತ್ತರ ಗಡೀಯಲ್ಲಿ ಅದೇನಂಬರಿನ ಈಶಾನ್ಯ ಮೂಲೆಯಿಂದ ಪಶ್ಚಿಮವಾಗಿ 32 ಸರಪಳಿ ದೂರದಲ್ಲಿರುವ ಒಂದು ಸ್ಥಳಕ್ಕೆ ಹೋಗಿ ಅನಂತರ ಸರ್ವೆ ನಂಬರು 74ರಲ್ಲಿ ಅದರ ಈಶಾನ್ಯ ಮೂಲೆಯಿಂದ ಪಶ್ಚಿಮಕ್ಕೆ 30 ಸರಪಳಿ ಬಿಟ್ಟು 37 ಸರಪಳೀದೂರ ಉತ್ತರ ದಿಕ್ಕಿನಲ್ಲಿ ಹೋಗಿ ಸೇರಿ ಅಲ್ಲಿಂದ ಸರ್ವೆ ನಂಬರು 61ರಲ್ಲಿ ಈಶಾನ್ಯ ಮೂಲೆ ಪಶ್ಚಿಮ ಭಾಗದಲ್ಲಿ 3 ಸರಪಳಿ ಬಿಟ್ಟು ಉತ್ತರವಾಗಿ 61 ಸರಪಳಿದೂರ ಹೋಗಿ ಅಲ್ಲಿಂದಾ ಸರ್ವೆ ನಂಬರು 8ರ ಈಶಾನ್ಯ ಮೂಲೆಯಿಂದ ಪಶ್ಚಿಮಕ್ಕೆ 13 ಸರಪಳಿ ಬಿಟ್ಟು ಅದರ ಉತ್ತರ ಮೇರೆಯಲ್ಲಿ 40 ಸರಪಳಿ ದೂರದಲ್ಲಿ ಒಂದು ಸ್ಥಳಕ್ಕೆ ಹೋಗಿ ಅಲ್ಲಿಂದಾ ಸರ್ವೆ ನಂಬರು 50ರೊಳಗೆ 25 ಸರಪಳಿ ದೂರ ಹೋಗಿ ಹೊಸಹಳ್ಳಿ ಗ್ರಾಮದ 27—50 ಮತ್ತು ತಡಸದ 50ನೆ ನಂಬರುಗಳ ಮಧ್ಯೆ ಇರುವ ಮೂರು ಬಾಂದುಗಳ ಬಳಿ ಸೇರಿ ಅಲ್ಲಿಂದಾ ಹೊಸಹಳ್ಳಿ ಗ್ರಾಮದ ನಂಬರು 50ರ ಉತ್ತರ ಗಡೀಯಲ್ಲಿ ವಾಯುವ್ಯ ಮೂಲೆಯಿಂದ ಈಶಾನ್ಯವಾಗಿ 46 ಸರಪಳಿ ಬಿಟ್ಟು ಉತ್ತರವಾಗಿ 69 ಸರಪಳಿ ದೂರ ಹೋಗಿ ಅಲ್ಲಿಂದಾ ಸರ್ವೆ 52ರ ವಾಯುವ್ಯ ಮೂಲೆಯಿಂದ ಆಗ್ನೇಯಕ್ಕೆ 30 ಸರಪಳಿ ಬಿಟ್ಟು ಉತ್ತರವಾಗಿ 25 ಸರಪಳಿ ವರೆಗೂ ಹೋಗಿ ಅಲ್ಲಿಂದಾ ಸರ್ವೆ ನಂಬರು 59ರ ನೈರುತ್ಯ ಮೂಲೆಯಿಂದ ಈಶಾನ್ಯಕ್ಕೆ 36 ಸರಪಳಿ ದೂರದಲ್ಲಿರುವ ಒಂದು ಸ್ಥಳಕ್ಕೆ ವಾಯುವ್ಯವಾಗಿ 38 ಸರಪಳಿ ಹೋಗಿ ಅಲ್ಲಿಂದ ಈಶಾನ್ಯಕ್ಕೆ 58ನೆ ನಂಬರಿನಲ್ಲಿ 21 ಸರಪಳಿ ಹೋಗಿ 61ನೆ ನಂಬರಿನ ದಕ್ಷಿಣ ಮೇರೆಯಲ್ಲಿ ಒಂದು ಸ್ಥಳಕ್ಕೆ ಸೇರಿ ಅಲ್ಲಿಂದಾ ಉತ್ತರಕ್ಕೆ ಸರ್ವೆ ನಂಬರು 61ರಲ್ಲಿ ಸುಮಾರು 28 ಸರಪಳಿಗಳ ದೂರ 58ನೆ ನಂಬರಿನ ಈಶಾನ್ಯ ಮೂಲೆಗೆ ಹೋಗಿ ಅಲ್ಲಿ ಭದ್ರಾನದಿ ಬಲದಡಕ್ಕೆ ಸೇರಿ ಅಲ್ಲಿಂದ ಗಡಿ ಶುರುಮಾಡಿದ ಸ್ಥಳಕ್ಕೆ ಸದರಿ ನದಿ ಬಲಭಾಗದಲ್ಲೇ ಹೋಗಿ ಸೇರುತ್ತದೆ.

ಷರಾ:—ಈ ಪ್ರದೇಶದಲ್ಲಿ ಈ ಕೆಳಗೆ ನಮೂದಾಗುವ ದಾರಿಯ ಹಕ್ಕುಗಳು ಬಿಟ್ಟುಕೊಡಲ್ಪಟ್ಟಿವೆ.

ನಂ I. ಹೊಸಹಳ್ಳಿ ಗ್ರಾಮದ ಸರ್ವೆ ನಂಬರು 58—59—60ರಲ್ಲಿ ಹೊಸಹಳ್ಳಿಯಿಂದ ಲಕ್ಕವಳ್ಳಿಗೆ ಹೋಗುವ 15 ಅಡಿ ಅಗಲದ ಗಾಡಿ ಜಾಡು ಜನ, ಜಾನ್ವರ್ ಮತ್ತು ಗಾಡಿಗಳ ತಿರುಗಾಟದ ಬಗ್ಯೆ ಸಾರ್ವ ಕಾಲದಲ್ಲಿಯೂ ಬಿಟ್ಟಿರತಕ್ಕದ್ದು. ಈ ಜಾಡು ಸರ್ವೆ 59ನೆ ನಂಬರಿನ ವಾಯುವ್ಯ ಮೇರೆಯಲ್ಲಿ ಅದರ ನೈರುತ್ಯ ಮೂಲೆಯಿಂದ ಈಶಾನ್ಯಕ್ಕೆ ಸುಮಾರು 36 ಸರಪಳಿಗಳ ದೂರದಲ್ಲಿ ಒಂದು ಸ್ಥಳದಿಂದ ಉತ್ತರಕ್ಕೆ 4 ಸರಪಳಿ ಬಿಟ್ಟು ಸರ್ವೆ ನಂಬರು 58ರ ಪಶ್ಚಿಮ ಗಡಿಯಲ್ಲಿ ಫಾರೆಸ್ಟಿಗೆ ಸೇರಿ ಅನಂತರ ಸರ್ವೆ ನಂಬರು 58—59ರಲ್ಲಿ ಪೂರ್ವವಾಗಿ

ಸುಮಾರು 65 ಸರಪಳಿ ಹೋಗಿ ಪುನಃ ಸರ್ವೆ ನಂಬರು 60ರಲ್ಲಿ ಆಗ್ನೇಯವಾಗಿ 50 ಸರಪಳಿ ದೂರ ಹೋಗಿ ಅನಂತರ ಸರ್ವೆ ನಂಬರು 60ರ ಆಗ್ನೇಯ ಮೂಲೆಯಲ್ಲಿ ಉತ್ತರವಾಗಿ 20 ಸರಪಳಿ ಬಿಟ್ಟು ಫಾರೆಸ್ಟನ್ನು ಅದರ ಪೂರ್ವ ಗಡಿಯಲ್ಲಿ ಬಿಡುತ್ತದೆ.

II. ತರೀಕೆರೆಯಿಂದ ಯಡೇಹಳ್ಳಿಗೆ ಹೋಗುವ 24 ಅಡಿ ಅಗಲದ ಸುಮಾರು ಮೂರು ಸರಪಳಿ ಉದ್ದ ಇರುವ ಸರ್ಕಾರಿ ಹೈರೋಡ್—ಜನ, ಜಾನ್ವಾರ್ ಮತ್ತು ಗಾಡಿಗಳಿಗೆ ಸಾರ್ವಕಾಲದಲ್ಲಿ ಖುಲ್ಲಾ ಇರತಕ್ಕದ್ದು. ಇದು ಫಾರೆಸ್ಟಿ ಪಶ್ಚಿಮ ಗಡಿಯಲ್ಲಿ ಸರ್ವೆ ನಂಬರು 9ರಲ್ಲಿ ಸರ್ವೆ 61ನೆ ಉತ್ತರ ಮೇರೆಯಲ್ಲಿ ಅದರ ಈಶಾನ್ಯ ಮೂಲೆಯಿಂದ ಪಶ್ಚಿಮಕ್ಕೆ ಸುಮಾರು 3 ಸರಪಳಿಗಳ ದೂರದಲ್ಲಿ ಒಂದು ಸ್ಥಳದಲ್ಲಿ ಫಾರೆಸ್ಟಿಗೆ ಪ್ರವೇಶಿಸಿ ಅಲ್ಲಿಂದ ಪೂರ್ವವಾಗಿ ಸರ್ವೆ ನಂಬರು 9ರಲ್ಲಿ ಹೋಗಿ ಅನಂತರ ತಡಸಗ್ರಾಮದ ಸರ್ವೆ ನಂಬರು 8, 61 ಮತ್ತು ಲಕ್ಕವಳ್ಳಿ ಸ್ಟೇಟ್ ಫಾರೆಸ್ಟು ಇವುಗಳ ಮಧ್ಯ ಇರುವ ಮೂರು ಬಾಂದು ಸೇರಿದ ಸ್ಥಳದಲ್ಲಿ ಫಾರೆಸ್ಟನ್ನು ಬಿಡುತ್ತದೆ.

2. ತಡಸದ ಮಜರೆ ಕಲ್ಲಿಳದಿಂದ ತಡಸಗ್ರಾಮದ ಸರ್ವೆ 91ನೆ ನಂಬರಿನಲ್ಲಿ ಕೊರಮರಗುಡ್ಡದಲ್ಲಿರುವ ಶ್ರೀ ರಂಗನಾಥ ಸ್ವಾಮಿ ದೇವಸ್ಥಾನಕ್ಕೆ ಹೋಗಲು, ಜನಗಳಿಗೂ ಮತ್ತು ಕಾಲ್ನಡೆಗಳಿಗೂ, 12 ಅಡಿ ಅಗಲವುಳ್ಳ 50 ಸರಪಳಿ (ಸರಪಳಿ 22 ಗಜದ ಬಾಬತು) ಉದ್ದಳತೆಯುಳ್ಳ ದಾರಿ ಹಕ್ಕು ಕೊಡಲ್ಪಟ್ಟಿರುತ್ತದೆ.

ಈ ದಾರಿಯು ಇದೇ ಹೊಸಹಳ್ಳಿ ಮನ್ನಾ ಜಂಗಲಿನ ಪಶ್ಚಿಮ ಎಲ್ಲೆಯಲ್ಲಿ, ತಡಸಗ್ರಾಮದ 92ನೆ ಸರ್ವೆ ನಂಬರಿನ ಆಗ್ನೇಯ ಮೂಲೆಯಿಂದ 35 ಸರಪಳಿ ದೂರದಲ್ಲಿರುವ ಸ್ಥಳದಲ್ಲಿ ಮನ್ನಾ ಜಂಗಲನ್ನು ಪ್ರವೇಶಿಸಿ, ಪೂರ್ವಾಭಿಮುಖವಾಗಿ ಮೇಲ್ಕಂಡ ದೇವಸ್ಥಾನಕ್ಕೆ ಹೋಗಿ ಸೇರುತ್ತದೆ.

ಷರಾ.—ಈ ದೇವಸ್ಥಾನದ ಸುತ್ತಲೂ ಒಂದು ಎಕರೆ ಅಥವಾ (4840 ಚದರ ಗಜದಷ್ಟು) ಸ್ಥಳವನ್ನು ಭಕ್ತಾದಿಗಳ ಅನುಕೂಲದ ಬಗ್ಗೆ, ದೇವಸ್ಥಾನದ ಆವರಣವೆಂದು ಗುರ್ತು ಮಾಡಿರುತ್ತದೆ.

ತಾರೀಖು 11ನೆ ಮಾರ್ಚಿ 1907.

ನಂ. ಆರ್. 8230—ಎಲ್. ಆರ್. 297-06—5, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಮಳವಳ್ಳಿ ತಾಲ್ಲೂಕು ಬ ಫ'ನಲ್ಲಿ ಕೂಲಿ ಲೈನ್ ಯಾ ಕೂಲಿ ಜನಗಳ ಗುಡಿಸಲುಗಳನ್ನು ಬಡಾಯಿಸುವುದಕ್ಕೋಸ್ಕರ ಆವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರೀ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ ಯಾ ಬಾಗಾಯತು.	ಒಟ್ಟು ವಿಸ್ತೀರ್ಣ.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಗಡಿ.			
								ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ಮಳವಳ್ಳಿ	ಬೊಪ್ಪಗೌಡನಪುರ	ಜಲಕವಾಡಿ	ವಿ|| ಟಿ. ಆರ್. ಆನಂದರಾಯ ಮೊದಲಿಯಾರ್	371	ಖುಷ್ಕಿ	ಎ. 492 ಗು. 29	ಎ. 47 ಗು. 7	...	ಕಾವೇರಿ ನದಿ ಮತ್ತು ಖರಾಬ್ ಜಮೀನು	371ನೆ ಗೋಮಾಳ	ಊಳಬಳ್ಳಿ ಮತ್ತು ಕಾಡಂಕನಹಳ್ಳಿ ಗ್ರಾಮ	371ನೆ ಗೋಮಾಳ

ತಾರೀಖು 16ನೆ ಮಾರ್ಚಿ 1907.

ನಂ. ರೆ. 8402—ಲ್ಯಾ. ರೆ. 476-06—3. ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ರಥವನ್ನು ನಿಲ್ಲಿಸುವುದಕ್ಕೆ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಮೈಸೂರು ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರೀ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರ್ ಹೆಸರು.	ಸರ್ವೆ ನಂಬರ್.	ಖುಷ್ಕಿ, ತರಿ ಯಾ ಬಾಗಾಯಿತು.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ.			
								ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ಮೈಸೂರು	ಮೈಸೂರು	ಚಾಮುಂಡಿ ಬೆಟ್ಟ	ಕಡಬದ ರಾಮಭಟ್ಟ	60	ಮನೆ (ಅದರ ದಕ್ಷಿಣಭಾಗ)	ಪೂರ್ವದಿಂದ ಪಶ್ಚಿಮಕ್ಕೆ 32 ಅಡಿಗಳು, ಉತ್ತರದಿಂದ ದಕ್ಷಿಣಕ್ಕೆ $7\frac{3}{4}$ ಅಡಿಗಳು. 248 ಚದರ ಅಡಿಗಳು.	ರಸ್ತೆ	ಓಣಿ	ಮಾಲೀಕನ ಮನೆ	ರಸ್ತೆ

ತಾರೀಖು 16ನೆ ಮಾರ್ಚಿ 1907.

ನಂ. ರೆ. 8404-ಲ್ಯಾ. ರೆ. 477-06—3, ಸೆ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಮರಹಮ್ಮತ್ತು ಇಲಾಖೆಯವರು ಗ್ರಾವೆಲ್ ತೆಗೆದುಕೊಳ್ಳುವುದಕ್ಕೆ ಆವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಕೃಷ್ಣರಾಜಪೇಟೆ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರೀ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜಮೀನಿನ ಖಾತೆದಾರ ಅಥವಾ ಖಾತೆದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ ತರಿ ಬಾಗಾಯ್ತು.	ಒಟ್ಟು ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಗಡಿ.			
									ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ನಾಗಮಂಗಲ	ಹೊಣಕೆರೆ	ಕೋಣನೂರು	1. [illegible] 2. [illegible] 3. [illegible] 4. [illegible]	ಸರ್ವೆ ನಂಬರು 6 ರ ಪೈಕಿ 1ನೇ ಭಾಗ	ಖುಷ್ಕಿ	ಎ. ಗು. 1 39	ರೂ. [illegible]	ಎ. ಗು. 0 17		[illegible]	[illegible]	[illegible]	[illegible]

ತಾರೀಖು 26ನೆ ಮಾರ್ಚಿ 1907.

ನಂ. ಆರ್. 8808—ಎಲ್. ಆರ್. 499-06—2, ಸೆ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ಬೆಂಗಳೂರಿನಲ್ಲಿ ಲಾ ಕೋರ್ಟುಗಳಿಗೋಸ್ಕರ ಒಂದು ಹೊಸ ಕಟ್ಟಡವನ್ನು ಕಟ್ಟುವ ಬಗ್ಗೆ ಆವಶ್ಯಕವಾಗಿವೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸರ್ವೆ ನಂಬರು.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಗಡಿ.			
						ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ ಮತ್ತು ನೈರುತ್ಯ	ಉತ್ತರ.	ದಕ್ಷಿಣ.
						ಎ. ಗು.	ರೂ. ಅ.				
ಬೆಂಗಳೂರು	ಬೆಂಗಳೂರು	...	[illegible]	[illegible]	105	3 13	4 8	[illegible]	[illegible]	[illegible]	[illegible]
					106	9 23	11 0				
					107	1 5	7 8				
					109	0 3	0 4				
					110	4 2	1 12				
						18 6	25 0				

ಹುಕುಂ ಬಮೋಜಿಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್ಮೆಂಟ್ ಸಕ್ರೆಟೆರಿ.

ಪಬ್ಲಿಕ ವರ್ಕ್ಸ.

ಇಸ್ತಿಹಾರ್ನಾಮೆ.

ತಾರೀಖು 25ನೆ ಮಾರ್ಚಿ 1907.

ನಂ. 265—2130, ಮಾರಿಕನವೆ ಡಿವಿಜನ ಆಫೀಷಿಯೇಟಿಂಗ ಎಗ್ಜಿಕ್ಯೂಟಿವ ಇಂಜಿನಿಯರ್, ಮೆ|| ಹೆಚ್. ಡಿ. ರೈಸ್, ಯ ವರಿಗೆ, ಸ. 1907ನೆ ಏಪ್ರಿಲ 24ನೆ ತಾರೀಖಿನಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ 2 ತಿಂಗಳು, 5 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

2. ಅಸಿಸ್ಟೆಂಟು ಇಂಜನಿಯರ್ ಮೆ|| ಕೆ. ಅನಂತಾಚಾರಿಯಾ, ಎಲ. ಸಿ. ಇ. ಯವರು, ಮೆ|| ರೈಸ್ ಯವರು ರಜಾದಮೇಲೆ ಇರುವವರಿವಿಗೂ ತಮ್ಮ ಕೆಲಸದೊಂದಿಗೆ, ಮಾರೀಕನವೇ ಡಿವಿಜನಿನ ಚಾರ್ಜಿನಲ್ಲಿರತಕ್ಕದ್ದು.

ಹುಕುಂ ಬಮೋಜಿಬ್,
ಬರ್ನ್ನಾರ್ಡ್ ಥಾಸ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ ವರಕ್ಸ್ ಇಲಾಖಾ ಮೈಸೂರು ಗವರ್ನಮೆಂಟ ಅಂಡರ ಸೆಕ್ರೆಟರಿ.

ಮುಜರೈ.

ಇಸ್ತಿಹಾರ್ನಾಮೆ.

ತಾರೀಖು 8-23ನೆ ಮಾರ್ಚಿ 1907.

ನಂ. 4410, ಗುಬ್ಬಿ ತಾಲ್ಲೂಕು ಕಡಬದಲ್ಲಿರುವ ಶ್ರೀ ರಾಮದೇವರ ದೇವಸ್ಥಾನದ ಮೇಲ್ವಿಚಾರಣೆ ಬಗ್ಗೆ ಮೊಕರರಾಗಿ ಇದ್ದ ಪವತಿ ಕಡಾಂಬಿ ಗರುಡಾಚಾರ್ಯರು, ಮತ್ತು ರಾಜೀನಾಮೆ ಕೊಟ್ಟ ಚಿಕ್ಕ ವೆಂಕಟರಮಣ ಶೆಟ್ಟರು, ಇವರುಗಳಿಗೆ ಬದಲಾಗಿ ಈ ಕೆಳಗೆ ನಮೂದಿಸುವವರನ್ನು ಧರ್ಮದರ್ಶಿಗಳಾಗಿ ನೇಮಿಸಿ ಇದೆ.

1. ಮ|| ರಾ|| ಹುಚ್ಚೀರೆ ಗೌಡರು, ಪಟೇಲರು ಮತ್ತು ರಿಪ್ರಜಂಟೇಟಿವ ಮೆಂಬರ.
2. ,, ಸುಬ್ರಾಯಶೆಟ್ಟರು, ಕಡಬದಪೇಟೆ ಯಜಮಾನರು.

ಹುಕುಂ ಬಮೋಜಿಬ್,
ಎಲ್. ಅನಂತಸ್ವಾಮಿರಾವ್,
ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 14.

ಬೆಂಗಳೂರು, ಗುರುವಾರ, ಏಪ್ರೈಲ್ ತಾ|| 4, ಸಿ 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿ ಷ ಯ ಸೂ ಚಿ ಕೆ .

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರಕ್ಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡುಗಳ ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜ ನ ರ ಲ್ ಮ ತ್ತು ರೆ ವಿ ನ್ಯೂ .

ತಾರೀಖು 14ನೆ ಮಾರ್ಚ 1907.

ಇಸ್ತಿಹಾರ್

ನಂ. ಫೈ. 6889, ಈ ಕೆಳಗಿನ ಸರ್ಕಾರಿ ಹುಕುಮನ್ನು ಸರ್ವ ಜನರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿ ಇದೆ :—

ತಾರೀಖು 14ನೆ ಮಾರ್ಚ 1907.

ನಂ. ಫೈ. 6878–83, ಹುಕುಂ—ಅಡಿಕೆಯ (ಸುಪಾರಿ) ಮೇಲಿನ ಹಾಳತವನ್ನು ತೆಗದುಹಾಕುವ ವಿಷಯವೂ, ಸಂಸ್ಥಾನದ ಆದಾಯ ವ್ಯಯಗಳಿಗೆ ತೊಂದರೆಯಿಲ್ಲದೆ ಅದನ್ನು ಹೇಗೆ ನೆರವೇರಿಸುವುದು ಒಳ್ಳೆಯದು ಎಂಬುದೂ ಸ್ವಲ್ಪ ಕಾಲದಿಂದ ಶ್ರೀಮನ್ ಮಹಾರಾಜರವರ ಸರ್ಕಾರದವರ ಪರ್ಯಾಲೋಚನೆಯಲ್ಲಿತ್ತು. ಸದರಿ ಸುಂಕವು ನಿಜವಾಗಿ ಯಾರ ಮೇಲೆ ಬೀಳುತ್ತದೆ ಎಂಬ ವಿಷಯದಲ್ಲಿ ಅಭಿಪ್ರಾಯಭೇದವಿದ್ದರೂ ಮೇಲ್ಕಂಡ ತಿದ್ದುಪಾಟು ಆಡಳಿತಕ್ಕೆ ಅತ್ಯವಶ್ಯವಾದುದು ಎಂಬುದೂ ಅದರ ಪ್ರಯೋಜನವು ಬಹುದೂರ ವ್ಯಾಪಿಸುವಂಥಾದ್ದು ಎಂಬುದೂ ಯೋಗ್ಯರಾದ ಎಲ್ಲಾ ಅಧಿಕಾರಿಗಳಿಂದಲೂ ಅಂಗೀಕರಿಸಲ್ಪಟ್ಟಿವೆ.

2. ಇದಕ್ಕೆ ಲಗತ್ತು ಮಾಡಿರುವ ಪ್ರತ್ಯೇಕವಾದ ಸಂಗ್ರಹವು ಅಡಕೆಯ ಮೇಲಿನ ಹಾಳತದ ಉತ್ಪತ್ತಿಯನ್ನೂ, ಸ್ವಭಾವವನ್ನೂ, ಅದನ್ನು ಇಟ್ಟುಕೊಂಡಿರುವುದರಿಂದ ಅಡಕೆತೋಟಕ್ಕೂ ದೇಶದ ಸಂಪತ್ತಿಗೂ ಉಂಟಾಗುವ ಕೇಡನ್ನೂ, ಈ ಕೇಡನ್ನು ಹಿಮ್ಮೆಟ್ಟಿಸುವುದಕ್ಕೆ ಹಿಂದೆ ಮಾಡಿದ ಪ್ರಯತ್ನಗಳನ್ನೂ ಸಂಕ್ಷೇಪವಾಗಿ ತೋರಿಸುತ್ತದೆ. ಇಲ್ಲಿ ಇಷ್ಟುಮಟ್ಟಿಗೆ ಹೇಳಿದರೆ ಸಾಕು— ಮಲೆನಾಡು ಜನಗಳ ಕ್ಷೀಣದೆಶೆಯು ಇಪ್ಪತ್ತು ವರ್ಷಗಳಿಗೆ ಮುಂಚೆಯೇ ಗೋಚರಕ್ಕೆ ಬಂದು ಅದರ ಕಾರಣಗಳ ವಿಷಯದಲ್ಲಿಯೂ ಅದಕ್ಕೆ ಪ್ರಯೋಗಿಸತಕ್ಕ ಪರಿಹಾರದ ವಿಷಯದಲ್ಲಿಯೂ ವಿಶೇಷವಾದ ವಿಚಾರಣೆಗಳು ನಡೆದಿದ್ದರೂ ಈಚಿನ ವರ್ಷಗಳಲ್ಲಿ ಕ್ಷೀಣಾವಸ್ಥೆಯು ಬರಬರುತ್ತ ಅಡಕೆಯ ವ್ಯವಸಾಯವನ್ನೇ ನಿರ್ಮೂಲ ಮಾಡುತ್ತದೆಯೊ ಎಂದು ಭಯಪಡಿಸುವಷ್ಟು ವಿಶೇಷವಾಗಿ ಹೆಚ್ಚಿತು. ಮಲೆನಾಡಿನ ಪ್ರಜಾ ಸಂಖ್ಯೆಯು ಕಡಮೆಯಾಗುತ್ತಿರುವುದೂ ಅವರ ದುರವಸ್ಥೆಯು ಸಾಮಾನ್ಯವಾಗಿ ಹೆಚ್ಚುತ್ತಿರುವುದೂ, ಸ್ವಲ್ಪ ಸಲ್ಪ ಕಾಲದ ಮಟ್ಟಿಗೆ ಕಷ್ಟಬಂದರೂ ಅದನ್ನು ಅವರು ನೀಸಲಾರದೆ ಇರುವುದೂ ಎಲ್ಲರಿಗೂ ತಿಳಿದೇ ಇವೆ. ಮುಖ್ಯವಾಗಿ ಕಳೆದ ಎರಡು ಸಲದ ಅನಾವೃಷ್ಟಿಯಿಂದ ತೋಟಗಾರರಿಗೆ ಬಹಳ ಕಷ್ಟವುಂಟಾಗಿದೆ. ಕ್ರಮವಾದ ನೀರು ಸರಬರಾಯಿಯು ತಪ್ಪಿಹೋದ ಪ್ರಯುಕ್ತ ಉಂಟಾದ ನಷ್ಟದಿಂದ ಅವರು ಚೇತರಿಸಿಕೊಳ್ಳಬೇಕಾದರೆ ಇನ್ನೂ ಕೆಲವು ವರ್ಷಗಳು ಬೇಕಾಗುತ್ತವೆ; ಯಾತಕ್ಕೆಂದರೆ ಮರಗಳು ನಿಜವಾಗಿ ಸತ್ತುಹೋಗದೆ ಇದ್ದ ಕಡೆಗಳಲ್ಲಿಯೂ ಕೂಡ ಅವುಗಳ ಜೀವವು ಬಹಳವಾಗಿ ಉಡುಗಿಹೋಗಿ ಇರುವುದರಿಂದ ಇನ್ನೂ ಸ್ವಲ್ಪಕಾಲದವರೆಗೆ ಅವು ಯಾವ ಫಲವನ್ನೂ ಕೊಡಲಾರವು. ಇಂಥಾ ಸ್ಥಿತಿಯಲ್ಲಿ, ಮಲೆನಾಡು ಜನಗಳು ಬಹುಕಾಲದಿಂದ ಚಿಂತಾಕ್ರಾಂತರಾಗಿ ನಿರೀಕ್ಷಿಸುತ್ತಿರುವ ಸಹಾಯವನ್ನು ಮಾಡುವುದಕ್ಕೆ ತಡವಾದರೆ ಕಷ್ಟವು ಮತ್ತಷ್ಟು ವಿಶೇಷವಾಗಿ ಹೆಚ್ಚುವುದೆಂದು ಸರ್ಕಾರದವರು ದೃಢವಾಗಿ ನಂಬುತ್ತಾರೆ.

3. ಕಾರ್ಯಸಾಧಕವಾದ ಸಹಾಯ ಮಾಡಲು ಯತ್ನಿಸುವುದಕ್ಕೆ ಇದುವರಗೆ ಅಡ್ಡಿಯಾಗಿದ್ದ ಮುಖ್ಯವಾದ ಕಷ್ಟವು ಯಾವುದೆಂದರೆ—ಈ ಬಾಬಿನಿಂದ ಭಾರಿ ಹುಟ್ಟುವಳಿಯು (ವರ್ಷ ಒಂದಕ್ಕೆ ಸುಮಾರು 3½ ಲಕ್ಷ) ಆಗುತ್ತಿತ್ತು. ಹಿಂದಿನ ಆದಾಯವ್ಯಯದ ಸ್ಥಿತಿಯಲ್ಲಿ ಮೇಲ್ಕಂಡ ಭಾರಿ ಮೊಬಲಗನ್ನು ಬಿಟ್ಟುಬಿಡುವುದರಿಂದ ಸರ್ಕಾರಕ್ಕೆ ಕಷ್ಟವಾಗುವದೆಂದು ತೋರಿ ಇತ್ತು. ಶ್ರೀಮನ್ ಮಹಾರಾಜರವರ ಸರ್ಕಾರದವರು ಈಚೆಗೆ ಈ ವಿಷಯಕ್ಕೆ ಚೆನ್ನಾಗಿ ಪ್ರವೇಶಿಸಿ ಈಗಿನ ಆಯವ್ಯಯದ ಸ್ಥಿತಿಯನ್ನೂ ಮುಂದಿನ ಆದಾಯಗಳನ್ನೂ (ನಾನಾ ಇಲಾಖೆಗಳ ಖರ್ಚು ಕಡಮೆಯ ವಿಷಯದಲ್ಲಿ ಆಗಲೆ ಚುರುಕಾಗಿ ನಡೆಯುತ್ತಿರುವ ತಿದ್ದುಪಾಟುಗಳು ಮೊದಲಾದ) ಸಾಮಾನ್ಯವಾಗಿ ಆದಾಯವ್ಯಯಗಳನ್ನು ಭದ್ರವಾದ ಸ್ಥಿತಿಯಲ್ಲಿ ಇಡುವುದಕ್ಕೆ ಅವಶ್ಯವಾದ ಏರ್ಪಾಡುಗಳನ್ನೂ ವಿಚಾರಮಾಡಿ ಆದಾಯವ್ಯಯದ ಸ್ಥಿತಿಗೆ ವಿಶೇಷ ತೊಂದರೆಯಿಲ್ಲದ ಹಾಳತದ ಎಲ್ಲಾ ಹುಟ್ಟುವಳಿಯನ್ನೂ ತಾವು ಈಗ ಸುಖವಾಗಿ ಬಿಟ್ಟುಬಿಡಬಹುದೆಂಬ ತೀರ್ಮಾನಕ್ಕೆ ಬಂದಿರುತ್ತಾರೆ.

4. ಆದುದರಿಂದ, 1907—1908ನೆ ಸರ್ಕಾರಿ ವರ್ಷ ಮೊದಲುಗೊಂಡು ಅಡಕೆಯ (ಸುಪಾರಿ) ಮೇಲಿನ ಹಾಳತವನ್ನು ತೆಗೆದುಹಾಕಲಾಗುವುದೆಂದು ಸರ್ಕಾರದವರು ಅತ್ಯಂತ ಸಂತೋಷದಿಂದ ತಿಳಿಸುತ್ತಾರೆ. ಹಾಗೆಯೇ ಬಾಗಾಯಿತು ಜಮೀನುಗಳ ಕಂದಾಯಕ್ಕೆ ಸುಮಾರು ಸಮವಾಗಿರುವಷ್ಟು ಮೊಬಲಗನ್ನು ಮನ್ನಿಸುವ ಈ ಏರ್ಪಾಡಿನಿಂದ ತೋಟಗಾರರಿಗೆ ಉಂಟಾಗುವ ಅಪರಿಮಿತವಾದ ಪ್ರಯೋಜನವನ್ನು ದೃಷ್ಟಿಯಲ್ಲಿಟ್ಟುಕೊಂಡು ಅಡಕೆ ಸಾಗುವಳಿ, ಅಡಕೆ ಮರಕ್ಕೆ ತಗುಲಬಹುದಾದ ರೋಗಗಳು ಮೊದಲಾದ ಅಡಕೆ ತೋಟಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಶಾಸ್ತ್ರೀಯವಾಗಿ ವಿಚಾರ ಮಾಡುವುದಕ್ಕಾಗಿ ಒಂದು ಮೂಲಧನವನ್ನು ಏರ್ಪಡಿಸುವುದಕ್ಕೋಸ್ಕರ ಒಂದು ಚಿಕ್ಕ ವರಿಯನ್ನು ಕೊಡುವಂತೆ ತೋಟಗಾರರನ್ನು ಕೇಳಬೇಕೆಂದು ಸರ್ಕಾರದವರು ಅಪ್ಪಣೆ ಮಾಡುತ್ತಾರೆ. ಸದರಿ ವರಿಯನ್ನು ಪ್ರಕೃತದಲ್ಲಿ ಅಡಕೆತೋಟದ ಜಮೀನುಗಳ ಮೇಲಿನ ಕಂದಾಯಕ್ಕೆ ಅನುಗುಣವಾಗಿ ರೂಪಾಯಿಗೆ ಒಂದಾಣೆಯಂತೆ ಗೊತ್ತುಮಾಡಿ ಅದರ ಹುಟ್ಟುವಳಿಯನ್ನು ಮೇಲ್ಕಂಡ ವಿಶೇಷ ಕಾರ್ಯಕ್ಕಾಗಿ ಪ್ರತ್ಯೇಕವಾಗಿ ಇಡಲಾಗುವುದು. ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರುಗಳು ಸರ್ವೆ ಇಲಾಖೆಗೆ ಬರೆದು ಈ ಹುಕುಮನ್ನು ಜಾರಿಗೆ ತರಲು ಅವಶ್ಯವಾದ ಕೆಲಸವನ್ನು ಮಾಡಬೇಕೆಂದು ಕೋರಿ ಇದೆ.

5. ಹಾಳತದ ವಸೂಲಾತಿಯ ಕೆಲಸದಲ್ಲಿ ಇಟ್ಟಿರುವ ಶಿಬ್ಬಂದಿಗಳನ್ನು 1907ನೆ ಜುಲೈ 1ನೆ ತಾರೀಖಿನಿಂದ ತೆಗೆದುಹಾಕಲಾಗುವುದು. ಆದಾಗ್ಯೂ ಡೆಪ್ಯುಟಿ ಕಮಿಷನರುಗಳು ಕೆಲಸದಿಂದ ತೆಗೆದುಹಾಕಲ್ಪಟ್ಟವರಲ್ಲಿ ಸಾಧ್ಯವಾದಷ್ಟು ಮಂದಿ ಜನಗಳಿಗೆ ರೆವಿನ್ಯೂ ಅಥವಾ ಇತರ ಇಲಾಖೆಗಳಲ್ಲಿ ಕೆಲಸಗಳನ್ನು ದೊರಕಿಸಿಕೊಡಲು ಪ್ರಯತ್ನ ಮಾಡತಕ್ಕದ್ದು; ಆದರೆ ಯಾರು ಇತರ ಕೆಲಸಕ್ಕೆ ತಕ್ಕವರಾಗಿಲ್ಲದೆ ಇದ್ದಾರೆಯೊ ಅಥವಾ ಯಾರಿಗೆ ಕೆಲಸ ಸಿಕ್ಕಲಾರದೊ ಅಂಥವರನ್ನೆಲ್ಲಾ ಅವರಿಗೆ ಹಕ್ಕು ಬರಬಹುದಾದ ಕಾಂಪೆನ್‌ಸೇಷನ್ ಅಥವಾ ಇತರ ಪೆನ್‌ಷನ್ ಅಥವಾ ಗ್ರಾಟ್ಯುಯಿಟಿ ಮೇಲೆ ಕೆಲಸದಿಂದ ನಿವೃತ್ತಿ ಮಾಡಲಾಗುವುದು.

6. ಈಗ ಕಟ್ಟೆಗಳಾಗಿ ಉಪಯೋಗಿಸಲ್ಪಡುತ್ತಿರುವ ಕಟ್ಟಡಗಳ ಮುಂದಿನ ಉಪಯೋಗದ ವಿಷಯದಲ್ಲಿ ಡೆಪ್ಯುಟಿ ಕಮಿಷನರುಗಳ ಸಲಹೆಗಳನ್ನು ನಿರೀಕ್ಷಿಸಲಾಗುವುದು.

ಅಪ್ಪಣೆಯ ಮೇರೆಗೆ,

ಕೆ. ಎಸ್. ಚಂದ್ರಶೇಖರ ಐಯ್ಯರ್,

ಸರ್ಕಾರಿ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.

ಪರಿಶಿಷ್ಟ.

ಅಡಕೆ (ಸುಪಾರಿ) ಹಾಳತದ ಚರಿತ್ರಸಂಗ್ರಹ.

ಮೈಸೂರು ಬ್ರಿಟಿಷ್ ಆಳ್ವಿಕೆಗೆ ಹೋದ 1831ನೆ ವರ್ಷಕ್ಕೆ ಮುಂಚೆ, ದನಗಳು ಆಹಾರ ಧಾನ್ಯಗಳು, ಹತ್ತಿ, ಮೆಣಸು ಮೊದಲಾದುವುಗಳು ಸೇರಿ ಸುಮಾರು 550 ಪದಾರ್ಥಗಳು ಸಾಯರು ಹಾಸಿಲು ಎಂದು ಕರೆಯಲ್ಪಡುವ ಸುಂಕದ ಪಾವತಿಗೆ ಒಳಪಟ್ಟಿದ್ದವು.

ಸಾಯರು ಸುಂಕಕ್ಕೆ ಗುರಿಯಾಗಿದ್ದ ಪದಾರ್ಥಗಳು ಈ ಸಂಸ್ಥಾನದಲ್ಲಿ ಕರಗುಪಡಿಯಾಗಲಿ ಅಥವಾ ಹೊರಗೆ ರಫ್ತಾಗಲಿ ಸುಂಕವನ್ನು ತೆರುತ್ತಿದ್ದವು. ಯಾವುದರ ಮೇಲೆ ಸುಂಕವು ವಸೂಲುಮಾಡಲ್ಪಟ್ಟಿತೊ ಆ ಪದಾರ್ಥವು ಹೋಗಿ ಸೇರುವ ಸ್ಥಳಕ್ಕೆ ಅನುಗುಣವಾಗಿ ಸುಂಕವು ಸಾಯರು ಹಾಸಲಾಗಿ, ಅಥವಾ ಬಾರಾಮಾರ್ಗದ ಹಾಸಲಾಗಿ ಅಥವಾ ಭರ್ತಿ ಹಾಸಲಾಗಿ ವಸೂಲಾಗುತ್ತಿತ್ತು. ಬಾರಾಮಾರ್ಗದ ಹಾಸಲು ಸುಮಾರು ಅರುವತ್ತು ವರ್ಷಗಳ ಹಿಂದೆ ತೆಗೆದುಹಾಕಲ್ಪಟ್ಟಿತು ಮತ್ತು ಸುಂಕಕ್ಕೆ ಗುರಿಯಾಗಿದ್ದ ಪದಾರ್ಥಗಳ ಸಂಖ್ಯೆಯು ಕ್ರಮವಾಗಿ ಕಡಮೆಯಾಗಿ ಕಡೆಗೆ 1885ನೆ ವರ್ಷದಿಂದ ಅಡಕೆ ಒಂದು ಪದಾರ್ಥದ ಮೇಲೆಯೇ ಸಾಯರು ಹಾಸಲು ವಸೂಲಾಗುತ್ತಾ ಇದೆ. 1875ನೆ ವರ್ಷಕ್ಕೆ ಮುಂಚಿನವರೆಗೆ ಫಸಲಿನ ತರಕ್ಕನುಗುಣವಾಗಿ 24 ತೊಲೆಯ 40 ಸೇರಿನ ಮಣ ಒಂದಕ್ಕೆ 6 ಆಣೆ ಲಾಗಾಯಿತು ರೂ. 1—4 ಆಣೆ ವರೆಗೆ ಸುಂಕವು ವಸೂಲಾಗುತ್ತಿದ್ದು ಆ ವರ್ಷದಲ್ಲಿ ಮಣ ಒಂದಕ್ಕೆ 12 ಆಣೆಯಂತೆ ಏಕರೀತಿಯಾದ ದರದ ಸುಂಕವು ಗೊತ್ತುಮಾಡಲ್ಪಟ್ಟಿತು. ಈ ದರದ ಸುಂಕವೇ ಈಗಲೂ ವಸೂಲಾಗುತ್ತಿದೆ. 1863-64ನೆ ವರ್ಷದಲ್ಲಿ ಸಾಯರಿಂದ 11 ಲಕ್ಷ ರೂಪಾಯಿಗೆ ಮೀರಿ ಹುಟ್ಟುವಳಿಯಾಯಿತು. ಅದರ ವಸೂಲಾತಿಯ ಸಿಬ್ಬಂದಿಗೆ 1 ಲಕ್ಷಕ್ಕೆ ಮೀರಿ ಖರ್ಚಾಯಿತು. ಅನೇಕ ಪದಾರ್ಥಗಳ ಮೇಲಿನ ಸಾಯರು ಸುಂಕವನ್ನು ಕ್ರಮೇಣ ತೆಗೆದುಹಾಕುವುದರಿಂದ ಸಾಯರು ಹುಟ್ಟುವಳಿಯು ಸುಮಾರು 3½ ಲಕ್ಷಕ್ಕೆ ಇಳಿಯಿತು. ಅದರ ವಸೂಲಾತಿಯ ಸಿಬ್ಬಂದಿಗೆ ವರ್ಷ ಒಂದಕ್ಕೆ 11,676 ರೂಪಾಯಿ ಖರ್ಚಾಗುತ್ತಿದೆ.

2. ಈ ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿಯೂ ಅವುಗಳಲ್ಲಿ ಮುಖ್ಯವಾಗಿ ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳ ಮಲೆನಾಡು ತಾಲ್ಲೂಕುಗಳಲ್ಲಿಯೂ ತುಮಕೂರು ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿಯೂ ಇರುವ ತೋಟಗಳಲ್ಲಿ ಅಡಕೆಯು ಪೈರಾಗುತ್ತದೆ. ಈ ಪ್ರದೇಶಗಳಲ್ಲಿ ವಿನಾ ಸಾಯರು ಹುಟ್ಟುವಳಿಯು ಗ್ರಾಮದ ಪಟೇಲನ ಮತ್ತು ರೆವಿನ್ಯೂ ಇಲಾಖೆಯ ಕೆಳಗಿನ ಉದ್ಯೋಗಸ್ಥರ ಮೂಲಕ ವಸೂಲಾಗುತ್ತದೆ. ಆದರೆ, ಭಾರಿ ಹುಟ್ಟುವಳಿಯು ವಸೂಲಾಗಬೇಕಾಗಿರುವ ಕಡೂರು, ಶಿವಮೊಗ್ಗಾ ಡಿಸ್ಟ್ರಿಕ್ಟುಗಳಲ್ಲಿಯೂ ತುಮಕೂರು ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿಯೂ ಅದಕ್ಕೆ ಪ್ರತ್ಯೇಕವಾದ ಸಿಬ್ಬಂದಿ ಇದೆ. ಆ ಸಿಬ್ಬಂದಿಗೆ ಸೇರಿದವರಿಗೆ ತಿಂಗಳಿಗೆ 5ರ ಲಾಗಾಯಿತು 15 ರೂಪಾಯಿನ ವರೆಗೆ ಸಂಬಳ ಸಲ್ಲುತ್ತದೆ.

3. ಮೈಸೂರು ದೇಶದಲ್ಲಿ ಬೆಳೆವ ಅಡಕೆಯಲ್ಲಿ ಬಹಳ ಭಾಗವು ಅಡಕೆ ವ್ಯಾಪಾರಕ್ಕೆ ಮುಖ್ಯಸ್ಥಳವಾದ ಬಳ್ಳಾರಿಗೆ ಹೋಗುತ್ತದೆ. ಕಡೂರು, ಶಿವಮೊಗ್ಗಾ ಡಿಸ್ಟ್ರಿಕ್ಟುಗಳಲ್ಲಿ ರೈತನು ತನ್ನ ಫಸಲನ್ನು (ಮೈಸೂರು ಸಂಸ್ಥಾನ) ಬೀರೂರಿನಲ್ಲಿ ಅಥವಾ ಬಳ್ಳಾರಿಯಲ್ಲಿರುವ ಖುದ್ದು ವರ್ತಕನಿಗೆ ನೇರಾಗಿ ಅಥವಾ ದಳ್ಳಾಳಿಯ ಮೂಲಕ ಮಾರುತ್ತಾನೆ. ಪ್ರತಿ ಸಂದರ್ಭದಲ್ಲಿಯೂ ಅಡಕೆಯನ್ನು ಸಾಗಿಸುವಾಗ ಸಾಯರು ಕಟ್ಟೆಗೆ ಅದನ್ನು ತೆಗೆದುಕೊಂಡು ಹೋಗಬೇಕಾಗಿದೆ. ಅಲ್ಲಿ ಅದು ತೂಕವಾಗಿ ಹಾಸಲು ವಸೂಲಾಗಿ ರಹದಾರಿ ಕೊಟ್ಟನಂತರ ರಹದಾರಿನಿಸಿ ಅದನ್ನು ಸಾಗಿಸಬಹುದು. ರೈತನು ತನ್ನ ಫಸಲನ್ನು ನೇರಾಗಿ ವರ್ತಕನ ಬಳಿಗೆ ತೆಗೆದುಕೊಂಡು ಹೋದರೆ ಮೊದಲು ಅವನೇ ಹಾಸಲನ್ನು ಕೊಡುತ್ತಾನೆ. ಆದರೆ ಉತ್ಪತ್ತಿಯ ಸ್ಥಳದಲ್ಲೇ ದಳ್ಳಾಳಿಯು ಅವನಿಂದ ಖರೀದಿಗೆ ತೆಗೆದುಕೊಂಡರೆ ದಳ್ಳಾಳಿಯೇ ಮೊದಲು ಹಾಸಲನ್ನು ಕೊಡುತ್ತಾನೆ.

4. ಮೈಸೂರಿನ ಅಡಕೆಗೆ ಮಾತ್ರ ಹಾಸಲನ್ನು ಕೊಡಬೇಕೆಂದು ಇಲ್ಲಿ ಹೇಳಬೇಕಾಗಿದೆ. ಹೊರಗಿನಿಂದ ಸಂಸ್ಥಾನದೊಳಕ್ಕೆ ತಂದ ಅಡಕೆಯು ಸುಂಕಕ್ಕೆ ಒಳಪಟ್ಟಿಲ್ಲ. ಅನ್ಯದೇಶದ ಅಡಕೆಯು ಮೈಸೂರು ಸಂಸ್ಥಾನಕ್ಕೆ ಪ್ರವೇಶಿಸಿದ ಕೂಡಲೆ ಅದನ್ನು ಸಮೀಪತರವಾದ ಸಾಯರು ಕಟ್ಟೆಗೆ ತೆಗೆದುಕೊಂಡುಹೋಗಿ ಅಲ್ಲಿ ಅದಕ್ಕೆ ಒಂದು ಮಾಫಿ ರಹದಾರಿಯನ್ನು ಕೊಟ್ಟ ತರುವಾಯ ಅಂಥಾ ರಹದಾರಿನಿಸಿ ಅದನ್ನು ಎಲ್ಲಿಗೆ ಬೇಕಾದರೂ ಸಾಗಿಸಬಹುದು. ಅನ್ಯದೇಶದ ಪದಾರ್ಥವನ್ನು ಹೀಗೆ ಸುಂಕದಿಂದ ವಿನಾಯಿಸಿರುವುದು ಸಹಜವಾಗಿ ಮೈಸೂರು ಫಸಲನ್ನು ಮೈಸೂರು ಗಡಿಯ ಆಚೆಗೆ ಕಳ್ಳತನದಿಂದ ತೆಗೆದುಕೊಂಡುಹೋಗಿ ಅದನ್ನು ಅಲ್ಲಿ ವಿಲೆವಾರಿ ಹುಟ್ಟಿಸುವುದಕ್ಕೂ ಅಥವಾ ಅದನ್ನು ಅನ್ಯದೇಶದ ಫಸಲಿನೋಪಾದಿಯಲ್ಲಿ ಸಂಸ್ಥಾನದೊಳಕ್ಕೆ ವಾಪಸು ತರುವುದಕ್ಕೂ ಕಾರಣವಾಗಿದೆ. ಗಡಿಗಳಲ್ಲಿರುವ ತಾಲ್ಲೂಕುಗಳಲ್ಲಿ ಸ್ವಲ್ಪಮಟ್ಟಿಗೆ ಕಳ್ಳವ್ಯಾಪಾರವು ನಡೆಯುತ್ತಿರುವುದಾಗಿ ನಂಬಲ್ಪಟ್ಟಿದೆ. ಕಳ್ಳವ್ಯಾಪಾರವನ್ನು ತಪ್ಪಿಸುವುದಕ್ಕಾಗಿ ಪ್ರತ್ಯೇಕವಾದ ಸಾಯರು ಸಿಬ್ಬಂದಿಯ ಒಂದು ಭಾಗವನ್ನು ಗಡಿಯಲ್ಲಿ ಅಂಥಾ ತಪ್ಪಿಸುವ ಕೆಲಸಕ್ಕೆ ನೇಮಿಸಿ ಇದೆ.

5. ಆದರೆ ಅಡಕೆ ಫಸಲಿನ ಕಟಾವಿಗೂ ಅದರ ವಿಲೆವಾರಿಗೂ ಸಂಬಂಧಪಟ್ಟು ತೋಟಗಾರರಿಗೆ ಮಾಡಿರುವ ನಿರ್ಬಂಧವೇ ಕಳ್ಳವ್ಯಾಪಾರಕ್ಕೆ ಮುಖ್ಯವಾದ ಅಡ್ಡಿಯು ಏರ್ಪಾಡಾಗಿದೆ. ಕಟಾವಿನ ಕಾಲಕ್ಕೆ ಸ್ವಲ್ಪ ಮುಂಚೆ ಸಾಯರು ನೌಕರರು ಪ್ರತಿ ತೋಟವನ್ನೂ ಅಜಮಾಯಿಷಿ ಮಾಡಿ ಆಗಬಹುದಾದ ಉತ್ಪತ್ತಿಯನ್ನು ಅಂದಾಜುಮಾಡಿ ಪ್ರತಿ ತೋಟದ ಅಂದಾಜನ್ನೂ ಮುಂದಿನ ದಾಖಲೆಗಾಗಿ ಪಟೇಲನಿಂದ ಇಡಲ್ಪಟ್ಟಿರುವ ಒಂದು ರಿಜಿಸ್ಟರಿನಲ್ಲಿ ಬರೆದುಕೊಳ್ಳುತ್ತಾರೆ. ಫಸಲನ್ನು ಕಟಾವು ಮಾಡುವುದಕ್ಕೆ ಮುಂಚೆ ತೋಟಗಾರನು ಹಾಗೆ ಮಾಡಬೇಕೆಂಬ ತನ್ನ ಉದ್ದೇಶವನ್ನು ಪಟೇಲನಿಗೆ ತಿಳಿಸುತ್ತಾನೆ. ಪಟೇಲನು ಒಂದು ರಹದಾರಿ ಚೀಟಿಯನ್ನು ಕೊಟ್ಟು ತಾನು ಒಂದು ಫಸಲನ್ನು ಅಳೆಯುವುದಕ್ಕೆ ಮುಂಚೆ ಅದನ್ನು ತೋಟದಿಂದ ಸಾಗಿಸಕೂಡದೆಂದು ತೋಟಗಾರನನ್ನು ಆಗಲೆ ಎಚ್ಚರಿಸುತ್ತಾನೆ. ಈ ರಹದಾರಿಯ ಅಧಿಕಾರದ ಮೇಲೆ ಅಡಕೆಗೊನೆಗಳನ್ನು ಜಮಾಯಿಸಿ ಗೊನೆಯಿಂದ ಕಾಯನ್ನು ಬಿಡಿಸಿ ಆಗ ಪಟೇಲನಿಗೆ ವರ್ತಮಾನ ಕೊಡುತ್ತಾರೆ. ಅವನು ತೋಟಕ್ಕೆ ಹೋಗಿ ಅಡಕೆಕಾಯನ್ನು ಅಳೆದು ಅದರಿಂದ ಎಷ್ಟು ಅಡಕೆ ತಯಾರಾಗಬಹುದೊ ಅದನ್ನು ಅಂದಾಜುಮಾಡಿ ಈ ತಪಶೀಲುಗಳನ್ನು ರಹದಾರಿಯಲ್ಲಿ ಬರೆದು ಮಾರಾಟಕ್ಕೆ ಅಡಕೆಯನ್ನು ತಯಾರುಮಾಡಲು ತೋಟಗಾರನಿಗೆ ಅಪ್ಪಣೆಕೊಡುತ್ತಾನೆ. ಕೊನೆಯಲ್ಲಿ ಅಡಕೆಯು ತಯಾರಾದಾಗ ಪಟೇಲನೂ ಸಾಯರು ನೌಕರರೂ ಅದನ್ನು ಮತ್ತೊಂದಾವರ್ತಿ ತೂಕಮಾಡಿ ನಿಜವಾಗಿ ಆದ ಒಟ್ಟು ಉತ್ಪತ್ತಿಯನ್ನು ಒಂದು ಪಟ್ಟಿಯಲ್ಲಿ ಬರೆದು ಅದನ್ನು ತೋಟಗಾರನಿಗೆ ಕೊಡುತ್ತಾರೆ. ಪ್ರತಿ ತೋಟಗಾರನ ಬಳಿಯಲ್ಲಿಯೂ ಇರುವ ಅಡಕೆಯ ದಾಸ್ತಾನನ್ನು ತೋರಿಸುವ ಒಂದು ರಿಜಿಸ್ಟರು ಪಟೇಲನ ಬಳಿಯಲ್ಲಿ ಇಡಲ್ಪಡುತ್ತದೆ. ಮನೆಯ ಬಳಕೆಗಾಗಿ ಮಾಫಿಯಾಗಿ ಬಿಡಲ್ಪಡುವ ಸ್ವಲ್ಪ ಅಡಕೆ ಹೋಗಲಾಗಿ ರಿಜಿಸ್ಟರಿನಲ್ಲಿ ತೋರಿಸಿರುವ ಅಡಕೆಯ ಪ್ರಮಾಣಕ್ಕೆ ತೋಟಗಾರನು ಜವಾಬ್ದಾರನಾಗಿರುತ್ತಾನೆ. ಅಡಕೆಯಲ್ಲಿ ಯಾವ ಭಾಗವಾದರೂ ಮಾರಲ್ಪಟ್ಟಾಗ ಮಾರಲ್ಪಟ್ಟ ಪ್ರಮಾಣವು ಪಟೇಲನ ಬಳಿ ಇರುವ ರಿಜಿಸ್ಟರಿನಲ್ಲಿ ತೋರಿಸಲ್ಪಡುತ್ತದೆ. ಕೈಯಲ್ಲಿರುವ ದಾಸ್ತಾನು ಆಗಾಗ್ಯೆ ಅಜ

ಪೋಯಿಷಿ ಮಾಡಲ್ಪಡುತ್ತದೆ ಮತ್ತು ಅದು ರಿಜಿಸ್ಟರಿನ ಪ್ರಕಾರದ ನಿಷ್ಪಳಿ ಶಿಲ್ಕಿಗೆ ಸರಿಯಾಗಿ ಇಲ್ಲದೆ ಇದ್ದರೆ ಹಾಗೆ ಬಿದ್ದ ಕಡವೆಗೆ ತೋಟಗಾರನು ಜವಾಬ್ದಾರನಾಗಿ ಮಾಡಲ್ಪಡುತ್ತಾನೆ. ರೈತನ ಗ್ರಾಮದಿಂದ ಅಡಕೆಯು ಸಾಗಿಸಲ್ಪಡುವಾಗಲೆ ಸಾಯರು ಕಟ್ಟೆಯಲ್ಲಿ ಹಾಳತವು ವಸೂಲ್ಮಾಡಲ್ಪಡುತ್ತದೆ.

6. ಮೇಲ್ಕಂಡ ಕ್ರಮದಿಂದ ರೈತನಿಗೆ ಬಹಳ ತೊಂದರೆ ಉಂಟಾಗುವುದಾಗಿ ಯಾವಾಗಲೂ ಒಪ್ಪಿಕೊಳ್ಳಲ್ಪಟ್ಟಿದೆ. ಈ ಕ್ರಮವು ಸರ್ಕಾರಿ ಕೀಳ್ ನೌಕರರೂ, ಗ್ರಾಮದ ಪಟೇಲನೂ, ನಿರಂತರವಾಗಿ ರೈತನ (1) ಕೊಯ್ಲಿನ ಕೆಲಸಗಳಲ್ಲಿಯೂ (2) ಗಿರಾಕಿಗಳ ಸಂಗಡ ವ್ಯಾಪಾರದಲ್ಲಿಯೂ, (3) ದಾಸ್ತಾನು ವಿಚಾರವಾಗಿಯೂ ಅವನ ತಂಟೆಗೆ ಹೋಗುವುದಕ್ಕೂ ನಾನಾರೀತಿಯಲ್ಲಿ ಅವನನ್ನು ಹಿಂಸಿಸುವುದಕ್ಕೂ ಅವರಿಗೆ ಅನೇಕ ಅವಕಾಶಗಳನ್ನು ಕೊಡುತ್ತದೆ. ಆದುದರಿಂದ ಅಡಕೆಯ ಹಾಳತವು ಬೇಸರಗೊಳಿಸುವುದಾಗಿಯೂ, ಪೀಡಿಸುವುದಾಗಿಯೂ ಅತಿ ವಿಚಾರಣೆಗೆ ಅಥವಾ ದಂಡನೆಗೆ ಒಳಪಡಿಸುವುದಾಗಿಯೂ ಇದೆಯೆಂದು ರೆವಿನ್ಯೂ ಆಫಿಸರುಗಳಿಂದ ಸಾಮಾನ್ಯವಾಗಿ ವಿವರಿಸಲ್ಪಟ್ಟಿದೆ ; ಸಾಯರು ಹುಟ್ಟುವಳಿಯ ರೂಪವಾಗಿ ಸರಕಾರಕ್ಕೆ ಬರುವ ಮೂರುವರೆ ಲಕ್ಷಕ್ಕೋಸ್ಕರ ಅದಕ್ಕಿಂತ ಬಹಳ ಹೆಚ್ಚಾದಷ್ಟು ಮೊಬಲಗು ನಿಜವಾಗಿ ರೈತರ ಕೈಬಿಟ್ಟು ಹೋಗುವುದಾಗಿ ಬಹಳ ಅನುಭವಶಾಲಿಗಳಾದ ಕೆಲವು ಆಫಿಸರುಗಳು ಅಭಿಪ್ರಾಯ ಪಡುತ್ತಾರೆ.

7. ಈಗ, ಈ ಗುರುವಾದ ಭಾರವು ಯಾರ ಮೇಲೆ ಬೀಳುತ್ತದೆಯೊ ಅಂಥಾ ಜನಗಳು ಅದನ್ನು ತಾಳುವುದಕ್ಕೆ ಅತ್ಯಂತ ಬಲಹೀನರಾಗಿರುವುದಾಗಿ ಎಲ್ಲರೂ ಒಪ್ಪಿಕೊಳ್ಳುತ್ತಾರೆ ; ನಿರ್ಣಯಿಸಲು ಅರ್ಹರಾಗಿರುವವರು ಈ ಅಡಕೆ ತೋಟಗಳಿಗೆ ಬಹಳ ಭಾರಿ ಕಂದಾಯ ಬಿದ್ದಿರುವುದಾಗಿ ಅಭಿಪ್ರಾಯ ಪಡುತ್ತಾರೆ. ದಕ್ಷಿಣ ಕನಡಾ ಡಿಸ್ಟ್ರಿಕ್ಟಿನ ನೆರೆಯ ತಾಲ್ಲೂಕುಗಳಲ್ಲಿ ಇರುವ 15 ರೂಪಾಯಿಗೆ ಪ್ರತಿಯಾಗಿ ಇಲ್ಲಿನ ಪರಮಾವಧಿಯ ಕಂದಾಯದ ದರವು ಎಕರೆ ಒಂದಕ್ಕೆ 28 ರೂಪಾಯಿನಷ್ಟು ಭಾರಿಯಾಗಿದೆ. ಸಾಯರಿನಿಂದ ಎಕರೆ ಒಂದಕ್ಕೆ ಮಾತ್ರ 13 ರೂಪಾಯಿ ಕಂದಾಯ ಬೀಳುತ್ತದೆ. ಕಳೆದ ಕೆಲವು ದಶಕಗಳಿಗೆ ಈ ತೋಟಗಳಿಗಾಗಿ ಕೊಟ್ಟ ಅತಿ ಅಧಿಕವಾದ ಕಂದಾಯದಿಂದಲೊ ಅಥವಾ ಅದಿಲ್ಲದೆಯೊ ಬಹಳ ಮಂದಿ ಮಲೆನಾಡಿನ ತೋಟಗಾರರು ಅನೇಕ ವರ್ಷಗಳಿಂದ ಸಾವುಕಾರರ ಹಿಡಿತಕ್ಕೆ ಸಿಕ್ಕಿಕೊಂಡಿದಾರೆ. ಇದಲ್ಲದೆ ಬೆಲೆಗಳು ಇಳಿದುಹೋದುದರಿಂದಲೂ, ಮರಗಳಿಗೆ ತಗುಲಿ ಪೈರನ್ನು ನಾಶಮಾಡುವ ಕೊಳೆ ರೋಗದಿಂದಲೂ, ವರ್ಷೇ ವರ್ಷೇ ಮಳೆ ಸಾಲದೆ ಇರುವುದರಿಂದಲೂ ತೋಟಗಾರರು ಬಹಳ ಕಷ್ಟಪಟ್ಟಿದಾರೆ. ಸಾಧಾರಣವಾದ ತರೀ ಖುಷ್ಕಿ ಜಮೀನುಗಳ ಒಡೆಯನಿಗೆ ಒಂದು ಸಲದ ಅನಾವೃಷ್ಟಿಯಿಂದ ಕೊಂಚಕಾಲದ ಮಟ್ಟಿಗೆ ನಷ್ಟವಾದರೂ ಮುಂದಿನ ವರ್ಷ ಒಳ್ಳೆ ಮಳೆಯಾದರೆ ಸಂಪೂರ್ಣವಾದ ಬೆಳೆಯನ್ನು ಹೊಂದಬಹುದಾಗಿರುವಲ್ಲಿ ಅಡಕೆ ತೋಟಗಾರನಿಗೆ ಒಂದು ವರ್ಷದ ಅನಾವೃಷ್ಟಿಯಿಂದುಂಟಾಗುವ ನಷ್ಟವು ಸ್ಥಿರವಾಗಿರುವುದು ಏತಕೆಂದರೆ ಬಹಳ ಕಷ್ಟದಿಂದಲೂ, ವಿಶೇಷ ಖರ್ಚಿನಿಂದಲೂ, ಸುಮಾರು ಹನ್ನೆರಡು ವರ್ಷಗಳ ವರೆಗೆ ಯಾವ ಪ್ರತಿ ಫಲವೂ ಇಲ್ಲದೆಯೂ ಎಬ್ಬಿಸಿದ ಮರಗಳು ಒಂದು ವರ್ಷ ಮಳೆಯಿಲ್ಲದಿರುವುದರಿಂದ ಸಾಯುತ್ತವೆ. ಅಥವಾ ಮಾರನೆ ವರ್ಷ ಎಷ್ಟುಮಳೆ ಬಿದ್ದರೂ ಸಂಪೂರ್ಣವಾಗಿ ತಿರಿಗಿ ಚೇತರಿಸಿಕೊಳ್ಳಲಾರದಷ್ಟು ಮಟ್ಟಿಗೆ ಸತ್ವವನ್ನು ಕಳೆದುಕೊಳ್ಳುತ್ತವೆ. ಕಳೆದ ವರ್ಷದ ವಿಶೇಷ ಅನಾವೃಷ್ಟಿಯಿಂದ ಸುಮಾರು ಅಡಕೆ ತೋಟಗಳು ತಿರಿಗಿ ನೆಟ್ಟಗಾಗದಷ್ಟು ಹಾನಿಯು ಉಂಟಾಯಿತೆಂದು ಸ್ಥೂಲವಾಗಿ ಹೇಳಬಹುದು. ಈ ಪರಿಯಾದ ವಿದ್ಯಮಾನಗಳಿಂದ ಕಳೆದ ವರ್ಷಗಳಲ್ಲಿ ಅಡಕೆ ತೋಟಗಳು ಸ್ಥಿರವಾಗಿ ಹೀನಸ್ಥಿತಿಗೆ ಬಂದಿರುವುದರಿಂದ ಮಲೆನಾಡಿನ ತೋಟಗಾರರು ಯಾವುದಾದರೂ ಒಂದು ವಿಧವಾದ ಸಹಾಯಕ್ಕೆ ಸಂಪೂರ್ಣವಾಗಿ ಅರ್ಹರಾಗಿರುತ್ತಾರೆಂದು ಅಡಕೆಯ ವ್ಯವಸಾಯವನ್ನು ಬಲ್ಲ ಎಲ್ಲಾ ಆಫಿಸರುಗಳೂ ಅಭಿಪ್ರಾಯಪಡುತ್ತಾರೆ.

8. ಆಗಾಗ್ಗೆ ಸಹಾಯದ ನಾನಾ ಏರ್ಪಾಟುಗಳು ಸೂಚಿಸಲ್ಪಟ್ಟು ಪರ್ಯಾಲೋಚಿಸಲ್ಪಟ್ಟುವು. 1891ರಲ್ಲಿ ಈಗಿನ ದಿವಾನರಾದ ವಿ|| ಮಾಧವರಾಯರು ತೋಟಗಾರರ ಸ್ಥಿತಿಯನ್ನೂ; ತೋಟದ ಕಂದಾಯವು ಯಾರಮೇಲೆ ಬೀಳುತ್ತದೆ ಎಂಬುವುದನ್ನೂ, ಸಾಯರು ಸುಂಕವನ್ನೂ, ಅವುಗಳಿಗೆ ಸಂಬಂಧಪಟ್ಟ ಇತರ ವಿಷಯಗಳನ್ನೂ ವಿಚಾರಮಾಡಿ ರಿಪೋರ್ಟು ಮಾಡುವ ಕೆಲಸಕ್ಕಾಗಿಯೇ ಕಳುಹಿಸಲ್ಪಟ್ಟರು. ಅವರು ತಪಶೀಲುವಾರು ರಿಪೋರ್ಟು ಕಳುಹಿಸಿ ಅದರಲ್ಲಿ (1) ತೋಟದ ಕಂದಾಯವನ್ನು ಕಡಮೆ ಮಾಡಬೇಕು ಮತ್ತು (2) ಸಾಯರನ್ನು ತೆಗೆದುಹಾಕಬೇಕು ಅಥವಾ ಅದರ ದರವನ್ನು ಕಡಮೆ ಮಾಡಬೇಕೆಂದು ಶಿಫಾರಸು ಮಾಡಿದರು. ಆಗ ಸರ್ ಶೇಷಾದ್ರಿಅಯ್ಯರವರು ತೋಟದ ಕಂದಾಯವನ್ನು ಸಾಧಾರಣವಾದ ತರೀ ಕಂದಾಯದ ಮಟ್ಟಕ್ಕೆ ಇಳಿಸಬೇಕೆಂದು ಸಾಯರು ಸುಂಕವನ್ನು ತೆಗೆದುಹಾಕಬೇಕೆಂದೂ ಅದಕ್ಕೆ ಬದಲಾಗಿ ಒಂದು ಮರಗಂದಾಯವನ್ನು ಹಾಕಬೇಕೆಂದೂ ಆಲೋಚಿಸಿ ಒಂದು ವಿಕಲ್ಪವಾದ (ಒಂದಲ್ಲದಿದ್ದರೆ ಮತ್ತೊಂದು ಎಂಬ) ಸಲಹೆಯನ್ನು ಕೊಟ್ಟರು. ಬಹಳ ಚರ್ಚೆ ನಡೆದ ತರುವಾಯ ಸಾಯರು ಸುಂಕದ ತಂಟೆಗೆ ತತ್ಕಾಲಕ್ಕೆ ಹೋಗದೆ ಎಲ್ಲಿ ಕಂದಾಯವು ಅತಿ ಭಾರವಾಗಿ ಬಿದ್ದಿತ್ತೋ ಅಂಥಾ ತಾಲ್ಲೂಕುಗಳಲ್ಲಿ ತೋಟದ ಕಂದಾಯವನ್ನು ಮೂರರಲ್ಲಿ ಒಂದು ಭಾಗದಷ್ಟು ಇಳಿಸಿ ಅದಕ್ಕೆ ದೃಷ್ಟಾಂತವಾಗಿ ಸೊರಬ ತಾಲ್ಲೂಕಿನ ಸಾಧಾರಣವಾದ ದರವನ್ನು ಎಕರೆ ಒಂದಕ್ಕೆ 15 ರೂಪಾಯಿಂದ 10 ರೂಪಾಯಿಗೆ ಇಳಿಸುವ ಹಾಗೆ ಮಾಡಬೇಕೆಂದು 1896ರಲ್ಲಿ ತೀರ್ಮಾನಿಸಲ್ಪಟ್ಟಿತು.

9. ಆದಾಗ್ಯೂ ತೋಟದ ಕಂದಾಯದ ಒಂದು ಭಾಗವನ್ನು ಈ ರೀತಿಯಾಗಿ ಮನ್ನಿಸುವುದರಿಂದ ರೈತನಿಗೆ ನಿಜವಾಗಿ ಎಷ್ಟು ಸಹಾಯವು ಅಗತ್ಯವಾಗಿತ್ತೊ ಅಷ್ಟು ಸಹಾಯವೂ ಪೂರ್ತಿಯಾಗಿ ಅವನಿಗೆ ಉಂಟಾಗಲಿಲ್ಲವೆಂದು ಕಂಡುಬಂತು. ಅಂದಿನ ಸರ್ಕಾರಿ ಆದಾಯ ವ್ಯಯದ ಸ್ಥಿತಿಯು ಸಂಸ್ಥಾನದ ಬೊಕ್ಕಸಕ್ಕೆ 3½ ಲಕ್ಷ ವರಮಾನವನ್ನು ಕೊಡುವ ಬಾಬನ್ನು ಬಿಟ್ಟುಬಿಡುವುದಕ್ಕೆ ಅವಕಾಶಕೊಡದೆ ಹೋದುದೇ ಸಾಯರು ಸುಂಕದ ತಂಟೆಗೆ ಹೋಗಕೂಡದೆಂದು ತೀರ್ಮಾನಿಸುವುದಕ್ಕೆ ಮುಖ್ಯವಾದ ಕಾರಣವಾಗಿತ್ತು. ಆಯವ್ಯಯಗಳು ಸಾಮಾನ್ಯವಾಗಿ ಅಭಿವೃದ್ಧಿಯಾದಾಗ ಸಾಯರು ಸುಂಕವನ್ನು ಬಿಟ್ಟಿಗೆ ಅಥವಾ ಅದರಲ್ಲಿ ಒಂದು ಭಾಗವನ್ನು ತೆಗೆದುಹಾಕಬೇಕೆಂದು ತಿರಿಗಿ ಸಲಹೆಗಳು ಮಾಡಲ್ಪಟ್ಟುವು. ಎರಡು ವರ್ಷಗಳ ಹಿಂದೆ ಸರ್. ಪಿ. ಎನ್. ಕೃಷ್ಣಮೂರ್ತಿಯವರು ಸಾಯರು ಹುಟ್ಟುವಳಿಯಲ್ಲಿ ಮೂರರಲ್ಲಿ ಒಂದು ಭಾಗವನ್ನು ಮನ್ನಿಸಿ ಉಳಿದುದನ್ನು ಎಕರೆಗೆ ಇಷ್ಟೆಂದು ವರಿ ಹಾಕಿ ವಸೂಲ್ಮಾಡಬೇಕೆಂದು ಸೂಚಿಸಿದರು. ಆದರೆ ರೈತನು ಈ ಏರ್ಪಾಡನ್ನು ಮೇಲೆ ಹೇಳಿದ ಏರ್ಪಾಡಿಗಿಂತ ಮತ್ತಷ್ಟು ಕೆಟ್ಟದ್ದಾಗಿರುವುದಾಗಿ ಬಹುಶಃ ಯೋಚಿಸಬಹುದೆಂದು ತೋರಿತು, ಯಾತಕ್ಕೆಂದರೆ, ಅಂಥಾ ವರಿಯು ಹಾಳತದಹಾಗೆ ನಿಜವಾಗಿ ಆದ ಫಸಲನ್ನು ನೋಡದೆ ಬಹುಶಃ ರೈತನು ತನ್ನ ಫಸಲಿಗೆ ಬೆಲೆಯನ್ನು ಹೊಂದುವ ಕಾಲಕ್ಕೆ ಮುಂಚೆಯೇ ವಸೂಲ್ಮಾಡಲ್ಪಡುವುದು.

10. ಮುಂದೆ ಇನ್ನೂ ಕಡಮೆ ಮಾಡುವುದಕ್ಕೂ ಕೊನೆಗೆ ತೆಗೆದುಹಾಕುವುದಕ್ಕೂ ಪೂರ್ವಭಾವಿಯಾಗಿ ಹಾಳತವನ್ನು ಮಣ ಒಂದಕ್ಕೆ 12 ಆಣೆಯಿಂದ 8 ಆಣೆಗೆ ಸ್ವಲ್ಪಮಟ್ಟಿಗೆ ಇಳಿಸೋಣವು ಈಚೆಗೆ ಪರ್ಯಾಲೋಚನೆಯಲ್ಲಿತ್ತು ; ಆದರೆ ಇದು ಈಗಿನ ಕ್ಲೇಶಕನ್ನು ಉಂಟುಮಾಡುವ ಪದ್ಧತಿಯನ್ನು ಸರಿಯಾಗಿ ಈಗ ಇರುವ ಸ್ಥಿತಿಯಲ್ಲಿಯೇ ಬಿಡುವುದರಿಂದ ಈ ಸಲಹೆಯನ್ನೂ ಕೂಡ ಬಿಟ್ಟುಬಿಡಲಾಯಿತು. ಈಗ ಬಂದೇಸತ್ತಿಗೆ ಸಂಪೂರ್ಣವಾಗಿ ಸಾಯರು ಸುಂಕವನ್ನು ತೆಗೆದುಹಾಕುವುದಾಗಿ ಯೋಚಿಸಿ ಇದೆ.

11. ಎಷ್ಟುದೂರ ಇದು ತೋಟಗಾರರಿಗೆ ಪ್ರಯೋಜನವನ್ನುಂಟುಮಾಡುವುದೋ ಆ ಅಂಶವನ್ನು ಆಲೋಚಿಸಬೇಕಾಗಿದೆ. ಗೂಢವಾದ ಅರ್ಥಶಾಸ್ತ್ರ ಪ್ರಕಾರ ಉತ್ಪತ್ತಿಯ ಖರ್ಚನ್ನು ಹೆಚ್ಚು ಮಾಡುವ ಪ್ರತಿ ಖರ್ಚೂ ಕೊನೆಯಲ್ಲಿ ಪದಾರ್ಥವನ್ನು ಉಪಯೋಗಿಸುವವನಮೇಲೆ ಬೀಳುತ್ತದೆ ; ಮತ್ತು ಈ ಉತ್ಪತ್ತಿಯ ಖರ್ಚಿನಲ್ಲಿ ಆಗುವ ಯಾವುದಾದರೂ ಕಡಮೆಯು ಪದಾರ್ಥವನ್ನು ಉಪಯೋಗಿಸುವವನಿಗೆ ಪ್ರಯೋಜನ ಉಂಟಾಗುವ ಹಾಗೆ ಪದಾರ್ಥದ ಬೆಲೆಯನ್ನು ಕಡಮೆ ಮಾಡುತ್ತದೆ. ಗೌರವಾರ್ಹವಾದ ಅಭಿಪ್ರಾಯವುಳ್ಳ ಕೆಲವು ಆಫಿಸರುಗಳು ಹಾಳತವು ನಿಜವಾಗಿ ಫಸಲನ್ನು ಬೆಳೆಯುವವನಮೇಲೆ ಬೀಳುತ್ತದೆಯೆಂದು ಅಭಿಪ್ರಾಯಪಡುತ್ತಾರೆ. ಈ ವಿಷಯದಲ್ಲಿ ಬಹಳ ವಿವಾದವು ನಡೆಯಿತು ; ಅದನ್ನು ಕುರಿತು ಬಹಳವಾಗಿ ಬರೆಯಲ್ಪಟ್ಟಿತು. ಇಂಥಾ ವಿಷಯಗಳಲ್ಲಿ ಖಂಡಿತವಾಗಿ ಹೀಗೆ ಸರಿಯೆಂದು ಹೇಳಲು ಕಷ್ಟವಾಗಿದೆ, ಮತ್ತು ಸ್ಪರ್ಧೆಗೆ ಪೂರಾ ಅವಕಾಶವಿದೆ, ಎಂಬ ಮತ್ತು ಪ್ರತಿ ಮನುಷ್ಯನೂ ತನಗೆ ಯಾವುದು ಒಳ್ಳೆಯದೋ ಅದನ್ನು ತಿಳಿದುಕೊಂಡು ಆ ಪ್ರಕಾರ ನಡೆಯುತ್ತಾನೆಂಬ ಊಹೆಯೇ ಅರ್ಥಶಾಸ್ತ್ರದ ಸಿದ್ಧಾಂತಕ್ಕೆ ಆಧಾರವಾಗಿದೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಆದರೆ, ಮಲೆನಾಡಿನ ರೈತನು ತಿಳಿವಳಿಕೆ ಇಲ್ಲದವನೂ ಮತ್ತು ಅನೇಕವೇಳೆ ಬಡವನೂ ಆಗಿದ್ದಾನೆ ಮತ್ತು ಸಂಪೂರ್ಣವಾಗಿ ದಳ್ಳಾಳಿಯ ಕೈಯಲ್ಲಿದ್ದಾನೆ, ಈ ದಳ್ಳಾಳಿಯ ಸಹಾಯವಿಲ್ಲದೆ ಹಾಳತವನ್ನೂ ಕೊಡಲಾರನು ಮತ್ತು ತನ್ನ ಫಸಲನ್ನೂ ಮಾರಾಟಕ್ಕೆ ಕಳುಹಿಸಲಾರನು. ಹಾಳತವನ್ನು ತೆಗೆದುಹಾಕುವುದರಿಂದ ಫಸಲನ್ನು ಬೆಳೆಯುವವನಿಗೆ ದಳ್ಳಾಳಿಯಮೇಲಿನ ಆಶ್ರಯವನ್ನು ಬಹಳವಾಗಿ ಕಡಮೆಮಾಡುವುದಲ್ಲದೆ ಅದರಿಂದ ಅವನಿಗೆ ಗಣನೆಗೆ ಬರುವಷ್ಟು ಸಹಾಯವಾಗುವುದೆಂದು ನಂಬಲು ನಾನಾ ಕಾರಣಗಳಿವೆ.

12. ಮೈಸೂರು ಅಡಕೆಯು ಪೇಟೆಯಲ್ಲಿರುವವುಗಳಲ್ಲಿ ಉತ್ತಮವಾದುದೆಂದು ಒಪ್ಪಿಕೊಳ್ಳಲ್ಪಟ್ಟಿರುವುದಲ್ಲದೆ ಸಾಮಾನ್ಯವಾಗಿ ಅದಕ್ಕೆ ಇತರ ದೇಶಗಳ ಅಡಕೆಗಿಂತ ಹೆಚ್ಚು ಬೆಲೆ ಸಿಕ್ಕುತ್ತದೆ. ಬೇಶಾವಾರವೆಂದು ಕರೆಯಲ್ಪಟ್ಟ ಮೈಸೂರು ದೇಶದಲ್ಲಿ ಉತ್ಪತ್ತಿಯಾಗುವ ಉತ್ಕೃಷ್ಟವಾದ ಅಡಕೆಗೆ ಸಮಾನವಾದುದು ಇಲ್ಲವೇ ಇಲ್ಲ. ಸಂದೇಹವಿಲ್ಲದೆ ಇದರಮೇಲಿನ ಹಾಳತವನ್ನು ಇದನ್ನು ಉಪಯೋಗಿಸುವವನು ಕೊಡುತ್ತಾನೆ. ಮತ್ತು ಈ ತೆರಿಗೆಯನ್ನು ಮನ್ನಿಸುವುದರಿಂದ ಫಸಲನ್ನು ಉತ್ಪತ್ತಿಮಾಡುವವನಿಗೆ ನೇರಾಗಿ ಪ್ರಯೋಜನವಾಗುವುದಿಲ್ಲ. ಆದರೆ ಕೆಲವು ಕೀಳ್ ತರದ ಅಡಕೆಗಳಿವೆ, ಈಗ ಅವುಗಳ ಮೇಲಿನ ಹಾಳತದ ದೆಸೆಯಿಂದ ಅವುಗಳು ನಿಜವಾಗಿ ವಿಕ್ರಯವಾಗಲು ಸಾಧ್ಯವಿಲ್ಲ. 1875ಕ್ಕೆ ಮುಂಚೆ ಬೇರೆ ಬೇರೆ ತರದ ಅಡಕೆಗಳಿಗೆ 6 ಆಣೆ, 12 ಆಣೆ ಮತ್ತು 1 ರೂಪಾಯಿ 4 ಆಣೆಯ ಸಾಯರು ದರಗಳಿದ್ದುವು. ಏಕರೀತಿಯಾದ 12 ಆಣೆ ದರವು ನಿಸ್ಸಂದೇಹವಾಗಿ ಕೀಳ್ ತರದ ಅಡಕೆಗಳಿಗೆ ಬಹಳ ದುಬಾರಿಯಾಯಿತು. ಹಾಳತವನ್ನು ತೆಗೆದುಹಾಕೋಣದರಿಂದ ಕೀಳ್ ತರದ ಅಡಕೆಯ ಮಾರಾಟವು ಒಡನೇ ಅಭಿವೃದ್ಧಿಯಾಗಿ ತನ್ಮೂಲಕ ಪುನಃ ಪೈರು ಬೆಳೆದವನಿಗೆ ವಿಶೇಷ ಸಹಾಯವಾಗುವುದು.

13. ಕೊನೆಯಲ್ಲಿ, ಈಗ ಸರ್ಕಾರದವರು ಬಿಟ್ಟುಬಿಡಬೇಕೆಂದು ಅಭಿಪ್ರಾಯಪಡುವ ಹುಟ್ಟುವಳಿಯ $3\frac{1}{2}$ ಲಕ್ಷದಲ್ಲಿ ಎಷ್ಟು ಅಡಕೆಯ ತೋಟಗಾರನ ಪಾಲಿಗೆ ಹೋಗುವುದೋ ಅದನ್ನು ಹೇಳಲಸಾಧ್ಯವಾದರೂ ಅದು, ಜನಗಳನ್ನು ಪೀಡಿಸುವ ಮತ್ತು ನೀತಿಗೆಡಿಸುವ, ವ್ಯವಸಾಯಗಾರನನ್ನು ದಳ್ಳಾಳಿಯ ಬಂಧನದಲ್ಲಿ ಇಡುವ, ಮತ್ತು ಸರ್ಕಾರಕ್ಕೆ ಈ ತೆರಿಗೆಯಿಂದ ನೇರಾಗಿ ಆಗುವ ಹುಟ್ಟುವಳಿಗಿಂತ ಬಹಳ ಹೆಚ್ಚಾದ ಹಣದ ಭಾರವನ್ನು ವ್ಯವಸಾಯಗಾರನಮೇಲೆ ಹಾಕುವ ಈಗಿನ ಅನಿಷ್ಟವಾದ, ಮತ್ತು ಕೆಡುಕಿನ ಪದ್ಧತಿಯನ್ನು ತೆಗೆದುಹಾಕುವುದಕ್ಕೆ ಸಂದೇಹವಿಲ್ಲ.

14. ಸಾಯರು ಸುಂಕವನ್ನು ಹಾಕೋಣವು, ಅದನ್ನು ಅನುಸರಿಸಿರುವ ಕೇಡುಗಳಿಲ್ಲದೆ ಇದ್ದರೆ, ಕಂದಾಯ ಹಾಕುವುದಕ್ಕೆ ಬಹಳ ಅನುಕೂಲವಾದ ರೀತಿಯಾಗಿದೆಯೆಂದೂ, ಮತ್ತು ಸಾಯರು ಸುಂಕವಿಲ್ಲದೆ ಭಾರಿ ಜಮೀನ್ ಕಂದಾಯಕ್ಕಿಂತ ಸಾಯರು ಸುಂಕದೊಡನೆ ಒಂದು ಲಘುವಾದ ಜಮೀನ್ ಕಂದಾಯವು ರೈತರಿಗೆ ಇಷ್ಟವಾಗಿರುವುದೆಂದೂ ಒಪ್ಪಿಕೊಳ್ಳಬೇಕಾಗಿದೆ. ಊಹೆಯಲ್ಲಿಯಾದರೂ ಸಾಯರು ಸುಂಕವು ಈ ಪ್ರಯೋಜನಗಳನ್ನುಳ್ಳದೆಂದು ಹೇಳಬಹುದು ; ಅದು ನಿಜವಾಗಿ ಆಗುವ ಫಸಲಿನಿಂದ ಕ್ರಮ ಪಡಿಸಲ್ಪಡುವ ಪ್ರಯೋಜನವನ್ನುಂಟುಗಿರುವುದರಿಂದ ಫಸಲಾಗದ ವರ್ಷದಲ್ಲಿ ರೈತನಿಗೆ ಭಾರವಾಗಿರಲಾರದು. ಮತ್ತು ಅದು ಕಳವಾಗದಂತೆ ಇರಲು ಕೆಲವು ರಕ್ಷಣೆಗಳನ್ನೂ ಕೂಡ ಏರ್ಪಡಿಸುತ್ತದೆ, ಯಾತಕ್ಕೆಂದರೆ ಸಾಯರು ನಿಬಂಧನೆಗಳ ಮೇರೆ ಒಬ್ಬ ಮನುಷ್ಯನು, ತನ್ನ ಹೆಸರು ರಿಜಿಸ್ಟರುಗಳಲ್ಲಿ ದಾಖಲಾದ ಹೊರತು ಅಡಕೆಯನ್ನು ಸುಲಭವಾಗಿ ವಿಲೆವಾರಿ ಮಾಡಲಾಗುವುದಿಲ್ಲ. ಆದರೆ ಈ ಪ್ರಯೋಜನಗಳಿರುವುದಾಗಿ ಹೇಳಬಹುದಾದರೂ ಈ ಪದ್ಧತಿಯ ಕೊರತೆಗಳು ವಿಶೇಷವಾಗಿರುವುದರಿಂದ ರೈತನಿಗೆ ಅಸಹ್ಯಕರವಾದ ಹೊರೆಯನ್ನು ತಪ್ಪಿಸುವುದಕ್ಕೋಸ್ಕರ ಮೇಲ್ಕಂಡ ಪ್ರಯೋಜನಗಳನ್ನು ಬಿಟ್ಟುಬಿಡಬೇಕು ; ಮತ್ತು ಸಂಸ್ಥಾನದ ವಿಷಯದಲ್ಲಿ ಪ್ರಜೆಗಳಲ್ಲಿ ಒಂದು ಮುಖ್ಯವಾದ ಮತ್ತು ಅರ್ಹರಾದ ಪಂಗಡದವರ ಹೆಚ್ಚಿದ ಸಂಪತ್ತಿನಿಂದ ಹುಟ್ಟುವಳಿಯಲ್ಲಿ $3\frac{1}{2}$ ಲಕ್ಷವನ್ನು ಬಿಟ್ಟುಬಿಡುವುದಕ್ಕೆ ಆಗಬೇಕಾದುದಕ್ಕಿಂತ ಹೆಚ್ಚು ಪ್ರತಿ ಫಲವು ಉಂಟಾಗುವುದೆಂದು, ದೃಢವಾಗಿ ನಂಬಿದೆ ; ಅಂಥಾ ಸಂಪತ್ತು ಎಕರೆಗೆ 13 ರೂಪಾಯಿನಂತೆ ಬೀಳಬಹುದಾದ ತೆರಿಗೆಯು ರೈತನಿಗೆ ತಪ್ಪುವುದರಿಂದ, ಉಂಟಾಗಬಹುದೆಂದು ಸುಖವಾಗಿ ನಿರೀಕ್ಷಿಸಬಹುದು.

ತಾರೀಖು 16ನೆ ಮಾರ್ಚಿ 1907.

ನಂ. 8297—ಸ್ಯಾನಿಟರಿ 100-06—35; ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವುದು.

ಸ್ಥಳ.	ತಾಲ್ಲೂಕು.
ಕಾಡವಿನಕೋಟೆ ...	ಹೊಳೆನರಸೀಪುರ.

ತಾರೀಖು 16ನೆ ಮಾರ್ಚಿ 1907.

ನಂ. 8299—ಸ್ಯಾನಿಟರಿ 15-06—10, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಕುಕ್ಕರಹಳ್ಳಿ ...	ಮೈಸೂರು.
ಕಾಮನಕೆರೆಹುಂಡಿ ...	ಡಿಟೋ
ನಂಜನಗೂಡು. ...	ನಂಜನಗೂಡು.

ತಾರೀಖು 16ನೆ ಮಾರ್ಚಿ 1907.

ನಂ. 8301—ಸ್ಯಾ. 170-06-13, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಒಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು ಇಂದ	ತಾರೀಖು ಗೆ
1. ಶ್ರೀ ಲಕ್ಷ್ಮೀಕಾಂತಸ್ವಾಮಿ ರಥೋತ್ಸವ.	ಕಳಲೆ ...	ನಂಜನಗೂಡು ..	1907ನೆ ಏಪ್ರಿಲ್ 1ನೆ ತಾರೀಖು.	
2. ಸಂಗಮ ಜಾತ್ರೆ	ತಿಪ್ಪೂರು ...	ಎಡತೊರೆ ...	15—5—07	18—5—07
3. ವರಸಿಮ್ಹಸ್ವಾಮಿ ರಥೋತ್ಸವ.	ಸಾಲಗ್ರಾಮ ...	ಡಿಟೋ ...	15—5—07	18—5—07

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 16ನೆ ಮಾರ್ಚಿ 1907.

ನಂ. 8306—ಸ್ಯಾನಿಟರಿ 139-06—12, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗುತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಕನ್ನೆಲ್ಲಿ ...	ಬೆಂಗಳೂರು.
ಕೊಡಿಗಲ್ಲಿ ...	ಡಿಟೋ
ಚಿಕ್ಕಬಾಣಾವಾರ ...	ಡಿಟೋ
ಚಲ್ಲಘಟ್ಟ ...	ಡಿಟೋ
ದಿವಾರಪಾಳ್ಯ ...	ಡಿಟೋ
ಆಡಿಗೊಂಡಹಳ್ಳಿ ...	ಆನೆಕಲ್ಲು.
ಅಲ್ಲಳ್ಳಿ ...	ಡಿಟೋ
ಅಡಿಗಾರ್ರಕಲ್ಲಹಳ್ಳಿ ...	ಡಿಟೋ
ಮೇಡಹಳ್ಳಿ ...	ಡಿಟೋ
ಬಲ್ಲೂರು ...	ಡಿಟೋ
ಹಂಡೇನಹಳ್ಳಿ ...	ಹೊಸಕೋಟೆ.

ತಾರೀಖು 18ನೆ ಮಾರ್ಚಿ 1907.

ನಂ. 8481—ಸ್ಯಾ. 170-06-16, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಒಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡು ಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು	
			ಇಂದ	ಗೆ
1. ಚಿಕ್ಕದೇವರ ರಥೋತ್ಸವ.	ಚಿಕ್ಕತ್ಯಾಸಿನಕೆರೆ ...	ಮಳವಳ್ಳಿ ...	29—3—07	31—3—07
2. ಶ್ರೀ ಲಕ್ಷ್ಮೀನರಸಿಹ್ಮಸ್ವಾಮಿ ರಥೋತ್ಸವ.	ಮೊರೆಹಳ್ಳಿ ...	ಡಿಟೋ ...	30—5—07	1—6—07

1897ನೆ ವರ್ಷದ 2ನೆ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಮಾರ್ಚಿ 1907.

ನಂ. 8623—ಸ್ಯಾನಿಟೆರಿ 150-06—8, ಬೆಂಗಳೂರು ಡಿಸ್ಟ್ರಿಕ್ಟು ಆನೆಕಲ್ಲು ತಾಲ್ಲೂಕಿನ ಮಾಯಸಂದ್ರ ಗ್ರಾಮಕೆ ಮುತ್ಯಾಲಮ್ಮನವರ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮಾರ್ಚಿ 30ನೆ ತಾರೀಖಿನಿಂದ 1907ನೆ ಇಸವಿ ಏಪ್ರೈಲ್ 2ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಮಾರ್ಚಿ 1907.

ನಂ. 8625—ಸ್ಯಾನಿಟೆರಿ 156-06—14, ಕೋಲಾರ ಡಿಸ್ಟ್ರಿಕ್ಟು ಸಿಡ್ಲಘಟ್ಟ ತಾಲ್ಲೂಕಿನ ಮೇಲೂರು ಗ್ರಾಮಕ್ಕೆ ಶ್ರೀ ಗಂಗಮ್ಮನವರ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮಾರ್ಚಿ 27ನೆ ತಾರೀಖಿನಿಂದ 1907ನೆ ಇಸವಿ ಏಪ್ರೈಲ್ 6ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಮಾರ್ಚಿ 1907.

ನಂ. 8627—ಸ್ಯಾನಿಟೆರಿ 129-06—8, ಶಿವಮೊಗ್ಗ ಡಿಸ್ಟ್ರಿಕ್ಟು ನಗರ ತಾಲ್ಲೂಕಿನ ರಾಮಚಂದ್ರಪುರಕ್ಕೆ ಶ್ರೀ ರಾಮದೇವರ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಏಪ್ರೈಲ್ 20ನೆ ತಾರೀಖಿನಿಂದ 1907ನೆ ಏಪ್ರೈಲ್ 24ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಮಾರ್ಚಿ 1907.

ನಂ. 8629—ಸ್ಯಾನಿಟರಿ 170-06—18, ಮೈಸೂರು ಡಿಸ್ಟ್ರಿಕ್ಟು ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕಿನ ಮೇಲ್ಕೋಟೆಗೆ ಶ್ರೀ ರಾಮಾನುಜಾಚಾರ್ಯರವರ ತಿರುನಕ್ಷತ್ರ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಏಪ್ರಿಲ್ 9ನೆ ತಾರೀಖಿನಿಂದ ಅದೇ ತಿಂಗಳು 20ನೆ ತಾರೀಖಿನ ವರಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಮೇಲ್ಕಂಡ ತಿರುನಕ್ಷತ್ರಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 20ನೆ ಮಾರ್ಚಿ 1907.

ನಂ. 8631—ಸ್ಯಾನಿಟರಿ 66-06—38, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :— ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವದು.

ಸ್ಥಳ.	ತಾಲ್ಲೂಕು.
ಚಟ್ನಹಳ್ಳಿ	ಆಲೂರು ಸಬ್ ತಾಲ್ಲೂಕು.

ತಾರೀಖು 28ನೆ ಮಾರ್ಚಿ 1907.

ನಂ. 8967—ಸ್ಯಾನಿಟರಿ 21-06—109, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು. ಇಂದ.	ತಾರೀಖು. ಗೆ.	ಅಧಿಕಾರ.
ಸಪ್ತಸ್ಥಾನಂ ಉತ್ಸವ.	ತಂಜಾವೂರು ಬಳಿ ಇರುವ ತಿರುವಡಿ.		...	13—4—07	29—4—07	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1907ನೆ ಇಸವಿ ಮಾರ್ಚಿ 25ನೆ ಮರ್ಮಂ 307ನೆ ನಂಬರ್ ಮೆಮೊ ಪ್ರಕಾರ.
				ಉಭಯ ದಿನಗಳೂ ಸೇರಿ.		
ಚಿತ್ರಿ ಉತ್ಸವ ಮತ್ತು ದನಗಳ ಸಂತೆ.	ಶಿವಲಾಪೇರಿ ಗ್ರಾಮ.	ತಿನವಲ್ಲಿ	ತಿನವಲ್ಲಿ ...	31—3—07	30—4—07	ಡಿಟೋ ನಂಬರ್ 301

ತಾರೀಖು 28ನೆ ಮಾರ್ಚಿ 1907.

ನಂ. 8968—ಸ್ಯಾನಿಟರಿ 21-06—110, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಕ್ಕೆ ಯಾತ್ರೆ ಹೋಗುವದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು. ಇಂದ.	ತಾರೀಖು. ಗೆ.	ಅಧಿಕಾರ.
ಕಾಳಮ್ಮನ ಜಾತ್ರೆ.	ನಾತಪಟ್ಟಿ.	ಧರ್ಮಪುರಿ	ಸೇಲಂ	20—4—07	20—5—07	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1907ನೆ ಇಸವಿ ಮಾರ್ಚಿ 25ನೆ ಮರ್ಮಂ 303ನೆ ಮೆಮೊ ಪ್ರಕಾರ.
				ಉಭಯ ದಿನಗಳೂ ಸೇರಿ.		
ಬ್ಯಾಟರಾಯಸ್ವಾಮಿ ರಥೋತ್ಸವ	ಡಂಕಣಿಕೋಟೆ.	ಹೊಸೂರು	ಡಿಟೋ	10—4—07	28—4—07	ಡಿಟೋ ನಂಬರ್ 299
				ಉಭಯ ದಿನಗಳೂ ಸೇರಿ.		

ತಾರೀಖು 3ನೆ ಏಪ್ರೆಲ್ 1907.

ನಂ. 9116—ಸ್ಯಾನಿಟೆರಿ (21-06)-114, ಸಮಸ್ತ ಜನರ ತಿಳಿವಳಿಕೆಯು ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಕ್ಕೆ ಯಾತ್ರೆ ಹೋಗುವುದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯು ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಧಿಕಾರ.
				ಇಂದ.	ಗೆ.	
ಮರುಳಸಿದ್ಧೇಶ್ವರ ಸ್ವಾಮಿಯವರ ರಥೋತ್ಸವ.	ಉಜ್ಜಿನಿ ...	ಕೂಡ್ಲಿಗಿ ...	ಬಳ್ಳಾರಿ ...	8—5—07	20—5—07	ಫಸ್ಟ್ ಅಸಿಸ್ಟೆಂಟ ರೆಸಿಡೆಂಟರವರ 1907ನೆ ಇಸವಿ ಮಾರ್ಚಿ 29ನೆ ಮರ್ರ್ಯಂ 343ನೆ ನಂಬರ ಮೆಮೋ ಪ್ರಕಾರ.
				(ಉಭಯ ದಿನಗಳೂ ಸೇರಿ)		

ತಾರೀಖು 3ನೆ ಏಪ್ರೆಲ್ 1907.

ನಂ. 9117—ಸ್ಯಾನಿಟೆರಿ 21-06—15, ಸಮಸ್ತ ಜನರ ತಿಳಿವಳಿಕೆಯು ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಕ್ಕೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯು ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಧಿಕಾರ.
				ಇಂದ.	ಗೆ.	
* ಮಾಣಿಕ್ಯವರದ ರಾಜಸ್ವಾಮಿ ಉತ್ಸವ ಮತ್ತು ದನಗಳ ಸಂತೆ.	ಪುಂಗನೂರು.	ಪುಂಗನೂರು ಸಂಸ್ಥಾನ.	ಉತ್ತರ ಆರಾಡು.	14—5—07	9—6—07	ಫಸ್ಟ್ ಅಸಿಸ್ಟೆಂಟ ರೆಸಿಡೆಂಟರವರ 1907ನೆ ಇಸವಿ ಮಾರ್ಚಿ 29ನೆ ಮರ್ರ್ಯಂ 345ನೆ ನಂಬರ ಮೆಮೋ ಪ್ರಕಾರ.
				ಉಭಯ ದಿನಗಳೂ ಸೇರಿ.		

* 1907ನೆ ಮೇ 31ನೆ ತಾರೀಖಿನಿಂದ 1907ನೆ ಜೂನ್ 9ರ ವರೆಗೆ ದನಗಳ ಸಂತೆಯನ್ನು ನಡೆಸುವದನ್ನು ನಿಷೇಧಿಸಿದೆ.

ತಾರೀಖು 3ನೆ ಏಪ್ರೆಲ್ 1907.

ನಂ. 9118—ಸ್ಯಾನಿಟೆರಿ 2—06—20, ಮೈಸೂರು ಡಿಸ್ಟ್ರಿಕ್ಟು ಹೆಗ್ಗಡದೇವನಕೋಟೆ ತಾಲ್ಲೂಕಿನ ಬೆಳತ್ತೂರ್ರು ಗ್ರಾಮಕ್ಕೆ ಶ್ರೀ ನರಸಿಹ್ಮಸ್ವಾಮಿಯವರ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ ಎಪಿಡೆಮಿಕ ಡಿಸೀಸೆಸ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಏಪ್ರೆಲ್ 15ನೆ ತಾರೀಖಿನಿಂದ 22ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಷ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಉತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 16ನೆ ಮಾರ್ಚಿ 1907.

ನಂ. ಜಿ. 5651—ಜಿ. ಎಂ. 201-06—8, ಸನ್ 1894ನೆಯ ವರ್ಷದ 7ನೆಯ ನಂಬರ ಲ್ಯಾಂಡ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಸ್ವತ್ತು ಸರ್ಕಾರಿ ಕೆಲಸ

ಕ್ಕೆ ಎಂದರೆ, ಕೋಲಾರದಲ್ಲಿ ಒಂದು ರೆವಿನ್ಯೂ ಸಬ್ ಡಿವಿಜನ್ ಆಫೀಸಿಗೆ ಸ್ಥಳವೇರ್ಪಡಿಸುವುದಕ್ಕೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಕೋಲಾರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಿಗೆ ಸದರೀ ಸ್ವತ್ತನ್ನು ಹೊಂದುವುದಕ್ಕೆ ಹುಕ್ಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು.	ಖಾನೆ ನಂಬರು.	ವಿವರ.	ಅಳತೆಗಳು.			ಚತುರ್ಗಡಿ			
							ಉದ್ದ (ಅಡಿಗಳು)	ಅಗಲ (ಅಡಿಗಳು)	ಒಟ್ಟು ಚದರ ಗಜಗಳು	ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.
ಕೋಲಾರ	ಕೋಲಾರ	ಕೋಲಾರ	ಕೋಲಾರ	ಸರ್ಕಾರು	...	ನಿವೇಶನ	312	208	$7210\frac{2}{3}$	ಡಿಸ್ಟ್ರಿಕ್ಟು ಆಫೀಸಿನ ದಾರಿ ಮತ್ತು ರಸ್ತೆ	ಮುನ್ಸಿಪಲ್ ಮಾರ್ಕೆಟು ಮತ್ತು ಕಂಚೆನಹಳ್ಳಿ ಖಾನೆ ನಂಬರು 286.	ಕೋಲಾರ-ಶ್ರೀನಿವಾಸಪುರದ ರಸ್ತೆ	ಕೋಲಾರದ ಅಮಾನಿ ಕೆರೆಯಿಂದ ನಾಲೆ
						ಅದರ ಮಧ್ಯದಲ್ಲಿ ತಾರಸಿಯ ಮತ್ತು ಹೆಂಚಿನ ಮೇಲ್ಛಾವಣಿಯುಳ್ಳ ಬಂಗಲೆ	56	37	$230\frac{2}{9}$				

ತಾರೀಖು 25ನೆ ಮಾರ್ಚಿ 1907.

ನಂ. 8845—ಎಡ್ಯು. 336-06—2, ಮೈಸೂರಿನ ಸರ್ಕಾರಿ ಓರಿಎಂಟಲ್ ಲೈಬ್ರರಿ ಯಾ ಪ್ರಾಚೀನ ಗ್ರಂಥಾಲಯದ ಕ್ಯೂರೇಟರ್ ಮಿ॥ ಎ. ಮಹದೇವಶಾಸ್ತ್ರಿ, ಬಿ. ಎ., ಯವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ 1907ನೆ ಇಸವಿಯ ಮಾರ್ಚಿ 11ನೆಯ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾವನ್ನು ಕೊಟ್ಟಿರುತ್ತೆ. ಲೈಬ್ರೇರಿಯನ್ ಮಿ॥ ಆರ್. ಶಾಮಶಾಸ್ತ್ರಿ, ಬಿ. ಎ. ಯವರು, ಕ್ಯೂರೇಟರ ಖಾಲಿ ಕೆಲಸಗಳ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 27ನೆ ಮಾರ್ಚಿ 1907.

ನಂ. ಜಿ. 5936—ಜಿ. ಎಂ. 88-06—20, ಮಿ॥ ಇ. ಮೆಕಾನಿಕಿ, ಐ. ಸಿ. ಎಸ್., ರವರು, 1907ನೆ ಇಸವಿಯ ಮಾರ್ಚಿ 13ನೆ ತಾರೀಖಿನ ಜಿ. 5601ನೆ ನಂಬರಿನ ಇಸ್ತಿಹಾರಿನಾಮೆಯಲ್ಲಿ (ಪ್ರಿವಿಲೇಜ್ ರಜಾವಿನ ಜತೆಗೆ) ಕೊಡಲ್ಪಟ್ಟ ವಿಶೇಷ ರಜಾವಿನ ಮೇಲೆ ಇರುವವರೆಗೆ ಅಥವಾ ಮತ್ತೊಂದು ಹುಕ್ಕುಂ ಕೊಡುವವರೆಗೆ ಸೂಪರಿಂಟೆಂಡಿಂಗ್ ಇಂಜನೀರ್ ಮಿ॥ ಜೆ. ಜೆ. ವೈಟ್, ಎಂ. ಐ. ಸಿ. ಇ., ಯವರು, ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯಾಗಿ ಮುಂದೂ ಬದಲಿ ನೋಡುತ್ತಿರುವರು.

ತಾರೀಖು 2ನೆ ಏಪ್ರಿಲ್ 1907.

ನಂ. ಜಿ. 6014—ಜಿ. ಎಂ. 282—06—2, ಹಾಲಿ ಖಾಲಿ ಇರುವ ಸ್ಥಳಗಳನ್ನು ಭರ್ತಿಮಾಡುವುದಕ್ಕೋಸ್ಕರ ಈ ಕೆಳಗೆ ನಮೂದಿಸುವ ಆಫೀಸರುಗಳನ್ನು 1907ನೆ ಇಸವಿಯ ಜನವರಿ ಗುರ್ರೆ ತಾರೀಖು ಲಾಗಾಯಿತು ಸೀನಿಯರ್ ಅಸಿಸ್ಟೆಂಟ್ ಕಮಿಷನರುಗಳನ್ನಾಗಿ ಮೊಕರರ್ ಮಾಡಿ ಇದೆ:—

1. ಮಿ॥ ಸಿ. ರಾಮರಾವ್.
2. ,, ಸಿ. ಬಿ. ಶೇಷಗಿರಿರಾವ್.
3. ,, ಕೆ. ಆರ್. ಶ್ರೀನಿವಾಸಯ್ಯಂಗಾರ್.
4. ,, ಬಿ. ಜೆ. ಕುಮಾರಸಾಮಿನಾಯಕ್.
5. ,, ಕೆ. ಶ್ರೀನಿವಾಸರಾವ್.

ತಾರೀಖು 9ನೆ ಮಾರ್ಚಿ 1907.

ನಂ. ಆರ್. 8207—ಎಲ್. ಆರ್. 470-06—3, ಸ್ 1894ನೆ ವರ್ಷದ 7ನೆ ನಂಬರ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಗುಂಡ್ಲುಪೇಟೆ ತಾಲ್ಲೂಕಿನ ಕೋಟೆಕೆರೆ ಗ್ರಾಮದ ದಾಖಲೆ ಜೋಗಯ್ಯನ ಹುಂಡಿ ಗ್ರಾಮ ನಿವೇಶನದ ಬಡಾವಣೆಯ ಬಗ್ಗೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ನಂಜನಗೂಡು

ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ ಕಮಿಷ್ನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸರ್ವೆ ನಂ.	ಖುಷ್ಕಿ, ತರಿ, ಬಾಗಾಯತು.	ಒಟ್ಟು ವಿಸ್ತೀರ್ಣ.	ಕಂದಾಯ.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಗಡಿ.			
									ವಿಸ್ತೀರ್ಣ	ಕಂದಾಯ	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ.	ರೂ.	ಎ.	ಆ.				
ಮೈಸೂರು	ಗುಂಡ್ಲುಪೇಟೆ	ಬೇಗೂರು	ಕೋಟೆಕೆರೆ	(1) ಬಸವೇಗೌಡ (2) ಬಸವೇಗೌಡ	60	ಖುಷ್ಕಿ	3	2	1	11	ಸರ್ವೆ 60ನೇ ನಂಬರಿನ ಭಾಗ	ಗ್ರಾಮಠಾಣಾ	ಸರ್ವೆ 59ನೇ ನಂಬರು	ಸರ್ವೆ 61ನೇ ನಂಬರು

ತಾರೀಖು 11ನೆ ಮಾರ್ಚಿ 1907.

ನಂ. ಆರ್. 8230—ಎಲ್. ಆರ್. 297-06—5, ಸ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಿ ಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಮಳವಳ್ಳಿ ತಾಲ್ಲೂಕು ಬ್ಲಫ್‌ನಲ್ಲಿ ಕೂಲಿ ಲೈನ್ಸ್ ಯಾ ಕೂಲಿ ಜನಗಳ ಗುಡಿಸಲುಗಳನ್ನು ಬಡಾಯಿಸುವುದಕ್ಕೋಸ್ಕರ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3. (c) ಪ್ರಕರಣಗಳನ್ನನುಸರಿಸಿ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ ಕಮಿಷ್ನರಿಗೆ ಸದರೀ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ, ಬಾಗಾಯತು.	ಒಟ್ಟು ವಿಸ್ತೀರ್ಣ.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಗಡಿ.			
								ವಿಸ್ತೀರ್ಣ.	ಕಂದಾಯ	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ಮಳವಳ್ಳಿ	ಚಿಕ್ಕಗೊಂಡನಹಳ್ಳಿ	ಬೆಳಕವಾಡಿ	ವಿ॥ ಟಿ. ಆರ್. ಅನಂದರಾವು ಕೇಶವರಾವು	371	ಖುಷ್ಕಿ	ಎ. 492 ಗು. 29	ಎ. 47 ಗು. 7	...	ಕಾವೇರಿ ನದಿ ಮತ್ತು ಸರ್ಕಾರಿ ಜಮೀನು	371ನೇ ಗೋಮಾಳ	ಊರ ಕೆರೆ ಮತ್ತು ಕಾಡೆಂಕನಹಳ್ಳಿ ಗ್ರಾಮ	371ನೇ ಗೋಮಾಳ

ತಾರೀಖು 16ನೆ ಮಾರ್ಚಿ 1907.

ನಂ. ರೆ. 8402—ಲ್ಯಾ. ರ. 476-06—3. ಸ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ಸ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ. ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ರಥವನ್ನು ನಿಲ್ಲಿಸುವುದಕ್ಕೆ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಮೈಸೂರು ಡಿವೀಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ ಕಮಿಷ್ನರಿಗೆ ಸದರೀ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ, ಬಾಗಾಯತು.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ.			
								ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ಮೈಸೂರು	ಮೈಸೂರು	ಚಾಮುಂಡಿ ಬೆಟ್ಟ	ಕಡಬದ ರಾಮಭಟ್ಟ	60	ಮನೆ (ಅದರ ದಕ್ಷಿಣಭಾಗ)	ಪೂರ್ವದಿಂದ ಪಶ್ಚಿಮಕ್ಕೆ 32 ಅಡಿಗಳು, ಉತ್ತರದಿಂದ ದಕ್ಷಿಣಕ್ಕೆ 7¾ ಅಡಿಗಳು. 248 ಚದರ ಅಡಿಗಳು	ರಸ್ತೆ	ಬಣಿ	ಮಾಲೀಕನ ಮನೆ	ರಸ್ತೆ

ತಾರೀಖು 16ನೆ ಮಾರ್ಚಿ 1907.

ನಂ. ರೆ. 8404—ಲ್ಯಾ. ರೆ. 477-06—3, ಸ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನೆಂದರೆ:—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಮರಹನ್ನುತ್ತು ಇಲಾಖೆಯವರು ಗ್ರಾವೆಲ್ ತೆಗೆದುಕೊಳ್ಳುವುದಕ್ಕೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಕೃಷ್ಣರಾಜಪೇಟೆ ಸಬ್ ಡಿವೀಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರೀ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜಮೀನಿನ ಖಾತೆದಾರ ಅಥವಾ ಖಾತೆದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ ಬಾಗಾಯತು.	ಒಟ್ಟು ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ. ವಿಸ್ತೀರ್ಣ.	ಕಂದಾಯ.	ಚತುರ್ಗಡಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ನಾಗಮಂಗಲ	ಹೊಣಕೆರೆ	ಕೋಣನೂರು	1. ಕೃಷ್ಣ ಬಿನ್ ಕೆಂಚ, 2. ತಿಮ್ಮ, 3. ಕೆಂಚಣ್ಣ, 4. [illegible]	ಸರ್ವೆ ನಂಬರು 6ರ ಪೈಕಿ 1ನೇ ಭಾಗ	ಖುಷ್ಕಿ	ಎ. ಗು. 1 39	ರೂ. 3	ಎ. ಗು. 0 17	—	ಹೈರೋಡು	ತಿಮ್ಮೇಗೌಡನ ಜಮೀನು	ಕರಿಯಣ್ಣನ ಜಮೀನು	ಚಿಕ್ಕ ಬೋರೇಗೌಡನ ಜಮೀನು

ತಾರೀಖು 26ನೆ ಮಾರ್ಚಿ 1907.

ನಂ. ಆರ್. 8808—ಎಲ್. ಆರ್. 499-06—2, ಸ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ:—ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ಬೆಂಗಳೂರಿನಲ್ಲಿ ಲಾ ಕೋರ್ಟುಗಳಿಗೋಸ್ಕರ ಒಂದು ಹೊಸ ಕಟ್ಟಡವನ್ನು ಕಟ್ಟುವ ಬಗ್ಗೆ ಅವಶ್ಯಕವಾಗಿವೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸರ್ವೆ ನಂಬರು.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ. ವಿಸ್ತೀರ್ಣ.	ಕಂದಾಯ.	ಚತುರ್ಗಡಿ. ಪೂರ್ವ.	ಪಶ್ಚಿಮ ಮತ್ತು ನೈರುತ್ಯ.	ಉತ್ತರ.	ದಕ್ಷಿಣ.
ಬೆಂಗಳೂರು	ಬೆಂಗಳೂರು	...	ಸಂಪಿಗೆ	[illegible]	105 106 107 109 110	ಎ. ಗು. 3 13 9 23 1 5 0 3 4 2 18 6	ರೂ. ಆ. 4 8 11 0 7 8 0 4 1 12 25 0	ಸೆಂಟ್ರಲ್ ಕಾಲೇಜು ಅಥವಾ ರಸ್ತೆ	ಪೃಥ್ವಿ ಕಾಲೇಜು ರಸ್ತೆ	ಅವೆನ್ಯೂ ರಸ್ತೆ	ಸೆಂಟ್ರಲ್ ಕಾಲೇಜ್ ಪ್ಯಾಲೆಸ್ ರಸ್ತೆ

ತಾರೀಖು 19ನೆ ಮಾರ್ಚಿ 1907.

ನಂ. ರೆ. 8602—ಲ್ಯಾ. ರೆ. 479-06—3, ಸ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನೆಂದರೆ:—ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ತರೀಕೆರೆ ತಾಲ್ಲೂಕು ಬೆಳೇನಹಳ್ಳಿ ಮತ್ತು ಪೆರಮೇನಹಳ್ಳಿ ಗ್ರಾಮಗಳ ದನಗಳು ತಿರುಗಾಡಲು ದಾರಿ ಮಾಡುವು

ದಕ್ಕೆ ಅವಶ್ಯಕವಾಗಿವೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ತರೀಕೆರೆ ಸಬ್ ಡಿವಿಜನ್ನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರೀ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ ತರಿ ಬಾಗಾಯತು.	ವಿಸ್ತೀರ್ಣ.	ಕಂದಾಯ.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಸೀಮೆ: ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.	ರೂ. ಆ.	ಎ. ಗು.				
ಕಡೂರು.	ತರೀಕೆರೆ.	ತರೀಕೆರೆ.	ಬೆಟ್ಟದಹಳ್ಳಿ.	ಚೆಂಪಯ್ಯ ಬಿನ್ ಮಲ್ಲಯ್ಯ	27	ಖುಷ್ಕಿ	1·14	1 14	0 4	ರೈಲ್ವೆ ಗೇಟು	ಬೆಳೇನಹಳ್ಳಿ ಗ್ರಾಮ.	ಸರ್ವೆ 27ನೆ ನಂಬರು.	ಸರ್ವೆ 27ನೆ ನಂಬರು.
				ಡಿಟೋ ..	24	ಡಿಟೋ	3·16	2 8	0 15	ಬೆಳೇನಹಳ್ಳಿ ಗ್ರಾಮ.	ರೈಲ್ವೆ ಗೇಟು.	ರುದ್ರಯ್ಯ ಬಿನ್ ನಂಜಯ್ಯನ ಜಮೀನು.	ಸರ್ವೆ 26ನೆ ನಂಬರು.
				ಕೂಡ್ಲಿ ಮಠದ ಮಹಾಸ್ವಾಮಿಯವರ ಸುಬ್ಬಣ್ಣಾಚಾರ್.	15	ಡಿಟೋ	12 29	8 0	0 19	ಶಿವಮೊಗ್ಗೆಗೆ ಹೋಗುವ ಭೂಟಾ ಮಾರ್ಗ.	ಪೆರಮೇನಹಳ್ಳಿ ಗ್ರಾಮ.	ಶಿವಮೊಗ್ಗೆಗೆ ಹೋಗುವ ಭೂಟಾ ಮಾರ್ಗ.	ಪೆರಮೇನಹಳ್ಳಿ ಗ್ರಾಮ.

ತಾರೀಖು 21ನೆ ಮಾರ್ಚಿ 1907.

ನಂ. ಆರ್. 8675—ಎಲ್. ಆರ್. 490—06—1, ಸುಧಾರಿಸು ಮೇಲಿನ ಹಾಳತವನ್ನು ತೆಗೆದುಹಾಕಿ ಪ್ರಕಟಿಸಿದ 1907ನೆ ಇಸವಿಯ ಮಾರ್ಚಿ 14ನೆ ತಾರೀಖಿನ ಫೈ. 6878—38ನೆ ನಂಬರಿನ ಸರ್ಕಾರಿ ಹುಕುಮಿನ 4ನೆ ಪರಿಚ್ಛೇದವನ್ನನುಸರಿಸಿ 1907—08ನೆ ಸರ್ಕಾರಿ ವರ್ಷದಿಂದ ಮೈಸೂರು ಸಂಸ್ಥಾನದಲ್ಲಿರುವ ಅಡಕೆ ತೋಟಗಳ ಮೇಲಿನ ಕಂದಾಯದ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ವರಿಯ ವಸೂಲಾತಿಯನ್ನು ಮಂಜೂರ್ಮಾಡಲು ಶ್ರೀಮನ್ ಮಹಾರಾಜರವರು ಹುಕುಂ ದಯಪಾಲಿಸಿರುತ್ತಾರೆ.

2. ಅಡಕೆಯ ಸಾಗುವಳಿ, ಅಡಕೆಯ ಮರಕ್ಕೆ ತಗುಲಬಹುದಾದ ರೋಗಗಳು ಇವೇಮೊದಲಾದ ಅಡಕೆ ತೋಟಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಶಾಸ್ತ್ರೀಯವಾಗಿ ವಿಚಾರಮಾಡುವುದಕ್ಕಾಗಿ ಒಂದು ಮೂಲಧನವನ್ನು ಏರ್ಪಡಿಸುವುದಕ್ಕೋಸ್ಕರ ಸದರಿ ವರಿಯ ಹುಟ್ಟುವಳಿಯನ್ನು ಪ್ರತ್ಯೇಕವಾಗಿ ಇಡಲಾಗುವುದು.

ತಾರೀಖು 25ನೆ ಮಾರ್ಚಿ 1907.

ನಂ. ಆರ್. 8765-ಫಾ. 19-06—11, 1900ನೆ ಇಸವಿಯ 11ನೆ ನಂಬರ್ ಫಾರೆಸ್ಟ್ ರೆಗ್ಯುಲೇಷನಿನ 17ನೆ ಪ್ರಕರಣದ ನಿಯಮಗಳ ಮೇರೆಗೆ, 1907ನೆ ಇಸವಿಯ ಮೇ ಗುರ್ರೆ ತಾರೀಖಿನ ಲಾಗಾಯಿತು ಈ ಇಸ್ತಿಹಾರ್‌ನಾಮೆಗೆ ಲಗತ್ತು ಮಾಡಿರುವ ಷೆಡ್ಯೂಲಿನಲ್ಲಿ ತೋರಿಸಿದ ಚಕ್ಕುಬಂದಿಗಳೊಳಗಿರುವ ಪ್ರದೇಶವು, ಸದರಿ ಇಸ್ತಿಹಾರ್‌ನಾಮೆಯು ಕೆಳಗೆ ನಮೂದಿರುವ ಹಕ್ಕುಗಳ ಚಲಾವಣೆಗೆ ಒಳಪಟ್ಟು, "ಸಂಸ್ಥಾನ ಜಂಗಲಿ" ಎಂದು ಭಾವಿಸಲ್ಪಡುವುದೆಂತ ಪ್ರಕಟಿಸಲು ಮೈಸೂರು ಸರ್ಕಾರದವರು ಹುಕುಂ ದಯಪಾಲಿಸುತ್ತಾರೆ:—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಅಂದಾಜು ವಿಸ್ತೀರ್ಣ.	ಜಂಗಲಿನ ಹೆಸರು.	ಚಕ್ಕುಬಂದಿ.
ಮೈಸೂರು.	ಚಾಮರಾಜನಗರ.	11·98 ಚದರ ಮೈಲಿಗಳು.	ಮೇಟಿಕುಪ್ಪೆ ಬ್ಲಾಕ್ ಎ ಜಂಗಲಿ.	ಉತ್ತರಕ್ಕೆ.—ಮೇರೆಯು ರೇಖೆಯು ಅಗಸನಹುಂಡಿ, ಮೇಟಿಕುಪ್ಪೆ ಕಾವಲು ಮತ್ತು ಮೇಟಿಕುಪ್ಪೆ ಸಂಸ್ಥಾನ ಜಂಗಲಿಯ (ಅಗಸನಹುಂಡಿ ಗ್ರಾಮದ ಸರ್ವೆ 11ನೆ ನಂಬರಿನ ನೈರುತ್ಯ ಮೂಲೆ) ಮುಕ್ಕೂಪ್ಪೆಯಿಂದ ಹೊರಟು, ಪೂರ್ವಕ್ಕೆ ಅಗಸನಹುಂಡಿ ಗ್ರಾಮದ ಸರ್ವೆ 11ನೆ ನಂಬರಿನ ದಕ್ಷಿಣ ಮೇರೆಯಲ್ಲಿ ಅಗಸನಹುಂಡಿ ಮೇಟಿಕುಪ್ಪೆ ಮತ್ತು ಮೇಟಿಕುಪ್ಪೆಯ ಕಾವಲುಗಳ ಮುಕ್ಕೂಪ್ಪೆಗೆ ಹೋಗುತ್ತದೆ; ಅಲ್ಲಿಂದ ಆಗ್ನೇಯಕ್ಕೆ ಮೇಟಿಕುಪ್ಪೆ ಗ್ರಾಮದ 60ನೆ ಸರ್ವೆ ನಂಬರಿನ ಪಶ್ಚಿಮ ಮೇರೆಯಲ್ಲಿ ಅದರ ಅತ್ಯಂತ ದಕ್ಷಿಣ ಮೂಲೆಗೆ ಹೋಗುತ್ತದೆ; ಅಲ್ಲಿಂದ ಮೇಟಿಕುಪ್ಪೆ ಮತ್ತು ಜಗತೆಕುಪ್ಪೆ ಗ್ರಾಮಗಳ ನಡುವೆ ಸರಹದ್ದಿನಲ್ಲಿ ಜಗತೆಕುಪ್ಪೆ ಗ್ರಾಮದ ಸರ್ವೆ 4ನೆ ನಂಬರಿನ ಅತ್ಯಂತ ದಕ್ಷಿಣ ಮೂಲೆಗೆ ಹೋಗುತ್ತದೆ; ಅಲ್ಲಿಂದ ವಾಯುವ್ಯಕ್ಕೆ ಜಗತೆಕುಪ್ಪೆ ಗ್ರಾಮದ ಸರ್ವೆ 4ನೆ ನಂಬರಿನ ಆಗ್ನೇಯ ಮೇರೆಯಲ್ಲಿ ಜಗತೆಕುಪ್ಪೆ ಗ್ರಾಮದ 4ನೆ ಮತ್ತು ಮೇಟಿಕುಪ್ಪೆ ಗ್ರಾಮದ 53, 57ನೆ ಸರ್ವೆ ನಂಬರುಗಳ ಮುಕ್ಕೂಪ್ಪೆ ಬಾಂದುಗಳಿಗೆ ಹೋಗುತ್ತದೆ;

ತಾರೀಖು 3ನೆ ಏಪ್ರೆಲ್ 1907.

ನಂ. 9179—ಸ್ಯಾನಿಟೆರಿ 129-06—10, ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿ ಗು ತಗುಲಿರುವ ಪ್ರದೇಶಗಳಿಂದ ಒಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲ ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾ ರು ಶ್ರೀಮತ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾ
			ಇಂದ.
1. ಶ್ರೀ ಅಶ್ವತ್ಥನಾರಾಯಣ ಸ್ವಾಮಿಯವರ ರಥೋತ್ಸವ.	ಮಹಿಷಿ ..	ತೀರ್ಥಹಳ್ಳಿ	25—4—07
2. ಶ್ರೀ ಹುಚ್ಚರಾಯಸ್ವಾಮಿಯವರ ರಥೋತ್ಸವ.	ಶಿಕಾರಿಪುರ ..	ಶಿಕಾರಿಪುರ ...	27—4—07
3. ಬಸವಣ್ಣದೇವರ ರಥೋತ್ಸವ ...	ಬಸವನಂದಿಹಳ್ಳಿ ..	ಡಿಟೋ ..	27—4—07
4. ಶ್ರೀ ಹನುಮಂತದೇವರ ರಥೋತ್ಸವ.	ಮಂಚಿ ..	ಸೊರಬ ...	22—4—07
5. ಶ್ರೀ ಆಂಜನೇಯದೇವರ ರಥೋತ್ಸವ.	ಹುರಳಿ ..	ಡಿಟೋ ...	28—

1897ನೆಯ ವರ್ಷದ 2ನೆಯ ನಂಬರ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮತ್ ಮಹಾರಾಜರವರ ಸ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿ

ತಾರೀಖು 16ನೆ ಮಾರ್ಚಿ 1907.

ನಂ. ಜಿ. 5651—ಜಿ. ಎಂ. 201-06—8, ಸನ್ 1894ನೆಯ ವರ್ಷದ 7ನೆಯ ನಂಬರ ಲ್ಯಾಂಡ ಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ :—ಇದರಡಿ ವಿವರಿಸಿರುವ ಸ್ಥ ಕ್ಕೆ ಎಂದರೆ, ಕೋಲಾರದಲ್ಲಿ ಒಂದು ರೆವಿನ್ಯೂ ಸಬ್ ಡಿವಿಜನ್ ಆಫೀಸಿಗೆ ಸ್ಥಳವೇರ್ಪಡಿಸುವುದಕ್ಕೆ ಅವಶ್ಯ ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಕೋಲಾರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿ ತ್ತನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು.	ಸರ್ವೆ ನಂಬರು.	ವಿವರ.	ಅಳತೆಗಳು.			ಚತು
							ಉದ್ದ (ಅಡಿಗಳು)	ಅಗಲ (ಅಡಿಗಳು)	ಒಟ್ಟು ಚದರ ಗಜಗಳು.	ಪೂರ್ವ.	ಪಶ್ಚಿ
ಕೋಲಾರ	ಕೋಲಾರ	ಕೋಲಾರ	ಕೋಲಾರ	ಸರ್ಕಾರು	..	ನಿವೇಶನ ..	312	208	7210$\frac{8}{9}$	ಡಿಸ್ಟ್ರಿಕ್ಟು ಆಫೀಸಿನ ದಾರಿ ರಸ್ತೆ	... ಮಾರ್ಗ ರಸ್ತೆ, ಸರ್ವೆ ನಂಬರು 246
						ಅದರ ಮಧ್ಯದಲ್ಲಿ ಕಾರಣಿಯ ಮತ್ತು ಹೆಂಚಿನ ಮೇಲ್ಛಾವಣಿಯುಳ್ಳ ಬಂಗಲೆ	56	37	230$\frac{2}{9}$		

ತಾರೀಖು 6ನೆ ಏಪ್ರಿಲ್ 1907.

—06—11, ಸ್ 1894ನೆಯ ವರ್ಷದ 7ನೆಯ ನಂಬರ ಲ್ಯಾಂಡ ಅಕ್ವಿಸಿಷನ್ ರೆಗ್ಯುಲೇಷನಿನ ದರಿಂದ ಪ್ರಸಿದ್ಧಪಡಿಸುವುದೇನಂದರೆ:—ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸ ಕೆರಾ ಗಾಡಿಗಳ ತಿರುಗಾಟಕ್ಕೆ ಬಂಧು ರಸ್ತೆಯನ್ನು ಹಾಕುವುದಕ್ಕೆ ಅವಶ್ಯಕವಾಗಿವೆ; ಮತ್ತು ತ್ತು 3 (c) ಪ್ರಕರಣಗಳನ್ನನುಸರಿಸಿ ಕೋಲಾರ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

...ನಂಬರು.	ಜಮೀನು.	ಒಟ್ಟು ವಿಸ್ತೀರ್ಣ.	ಕಂದಾಯ ಅಥವಾ ಜೋಡಿ ವಗೈರೆ.	ಈಗ ಸ್ವಾಧೀನ ಪಡಿಸಿಕೊಳ್ಳುವ ವಿಸ್ತೀರ್ಣ.	ಚತುರ್ಸೀಮೆ.			
					ಪೂರ್ವಕ್ಕೆ.	ಪಶ್ಚಿಮಕ್ಕೆ.	ಉತ್ತರ.	ದಕ್ಷಿಣ.
			ರೂ. ಅ.	ಎ. ಗು.				
...ನಂಬರು 2844.	ಮನೆಯು ನಿವೇಶನ.	236⅓ ಚದರಗಜಗಳು.	0 8 ನೋಹಕ ಫಾ.	20⅔ ಚದರ ಗಜಗಳು.	[illegible]	[illegible]	ಸರ್ಕಾರಿ ರಸ್ತೆ.	ಸರ್ಕಾರಿ ರಸ್ತೆ.
...ನಂಬರು 2849.	ಡಿಟೋ	250 ಚದರ ಗಜಗಳು.	ಡಿಟೋ	56⅔ ಚದರ ಗಜಗಳು.	[illegible]	ಸರ್ಕಾರಿ ರಸ್ತೆ.	ಸರ್ಕಾರಿ ರಸ್ತೆ.	[illegible]
		486⅓ ಚದರ ಗಜಗಳು.	1 0	77⅓ ಚದರ ಗಜಗಳು.				

ತಾರೀಖು 9ನೆ ಏಪ್ರಿಲ್ 1907.

—06—37, ಸಬ್ ಅಸಿಸ್ಟೆಂಟ ಸರ್ಜನ್ ಮಿ॥ ಕೆ. ಅನಂತರಾಮಯ್ಯಂಗಾರ್ರನ್ನು ಸಕಲೇಶ ಯ ಚಾರ್ಜಿನಿಂದ ದಾವಣಗೆರೆಯ ಲೋಕಲ್ ಫಂಡ ಡಿಸ್ಪೆನ್ಸರಿಯ ಚಾರ್ಜಿಗೆ ವರ್ಗಾಯಿಸಿ ಇದೆ. ರ್ಯಯನ್ನಲ್ಪಟ್ಟು ಕೆಲಸಕ್ಕೆ ಸೇರತಕ್ಕದ್ದು.

ತಾರೀಖು 9ನೆ ಏಪ್ರಿಲ್ 1907.

—06—4, ಇದರಿಂದ ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ —) ಐಯ್ಯರ ಜ್ಞಾಪಕಾರ್ಥವಾಗಿ, ಬೆಂಗಳೂರು ನಗರದಲ್ಲಿರುವ "ಜೈಲ ರಸ್ತೆ" ಗೆ ಇತಃಪರ ರತಕ್ಕದ್ದು.

ತಾರೀಖು 9ನೆ ಏಪ್ರಿಲ್ 1907.

—06—12, ಸಾಮಾಜಿಕತನಕ್ಕೆ ರಾಜೀನಾಮೆಯನ್ನು ಕೊಟ್ಟ ಮ॥ ಬಿ. ನಂಜಪ್ಪನವರು ಗಿ ಮ॥ ಜಿ. ರಾಮಣ್ಣನವರನ್ನೂ ಮತ್ತು ಸೋಮರಾಜಪ್ಪನವರನ್ನೂ ಹೊಸಪೇಟೆಯ ಮ್ಯು ಗಳನ್ನಾಗಿ ಮೊಕರರ್ಮಾಡಿ ಇದೆ.

ತಾರೀಖು 9ನೆ ಮಾರ್ಚಿ 1907.

ಆರ್. 470—06—3, ಸ್ 1894ನೆ ವರ್ಷದ 7ನೆ ನಂಬರ ಲ್ಯಾಂಡ ಅಕ್ವಿಸಿಷನ್ ರೆಗ್ಯುಲೇ ಸಾರಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲ ಲ್ಲೂಕಿನ ಕೋಟೆಕೆರೆ ಗ್ರಾಮದ ದಾಖಲಾ ಬೋಗಯ್ಯನ ಹುಂಡಿ ಗ್ರಾಮ ನಿವೇಶನದ ಏಡಾವಣೆ

ಅಲ್ಲಿಂದ ಈಶಾನ್ಯಕ್ಕೆ ಸರ್ವೆ 57ನೆ ನಂಬರಿನಲ್ಲಿ ಸುಮಾರು 50 ಸರಪಣಿಗಳ ದೂರ ಸರ್ವೆ 55ನೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ವಾಯುವ್ಯಕ್ಕೆ ಸರ್ವೆ 55ನೆ ನಂಬರಿನ ಪೂರ್ವ ಮೇರೆಯಲ್ಲಿ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ಪೂರ್ವಕ್ಕೆ ಸರ್ವೆ 32ನೆ ನಂಬರಿನ ದಕ್ಷಿಣ ಮೇರೆಯಲ್ಲಿ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ.

ಪೂರ್ವಕ್ಕೆ.—ಅಲ್ಲಿಂದ ದಕ್ಷಿಣಕ್ಕೆ ಸೋನಹಳ್ಳಿ ಮತ್ತು ಮೇಟಿಕುಪ್ಪೆ ಗ್ರಾಮಗಳ ಮೇರೆಯಲ್ಲಿ ಸೋನಹಳ್ಳಿ, ಮೇಟಿಕುಪ್ಪೆ ಮತ್ತು ಹಿರಿಹಳ್ಳಿ ಗ್ರಾಮಗಳ ಮುಕ್ಕೂಪ್ಪೆಗೆ ಹೋಗುತ್ತದೆ; ಅಲ್ಲಿಂದ ನೈರುತ್ಯಕ್ಕೆ ಹಿರಿಹಳ್ಳಿ ಗ್ರಾಮದ ಸರ್ವೆ 17ನೆ ನಂಬರಿನ ಉತ್ತರಮೇರೆಯಲ್ಲಿ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ದಕ್ಷಿಣಕ್ಕೆ ಹಿರಿಹಳ್ಳಿ ಗ್ರಾಮದ ಸರ್ವೆ 17, 14 ಮತ್ತು 112ನೆ ನಂಬರುಗಳ ಪಶ್ಚಿಮ ಮೇರೆಗಳಲ್ಲಿ 112ನೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ಪಶ್ಚಿಮಕ್ಕೆ ಪೆಂಜಹಳ್ಳಿ ಗ್ರಾಮದ ಸರ್ವೆ 22ನೆ ನಂಬರಿನ ಉತ್ತರ ಮೇರೆಯಲ್ಲಿ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ಆಗ್ನೇಯಕ್ಕೆ ಆ ಸರ್ವೆ ನಂಬರಿನ ಪಶ್ಚಿಮ ಮೇರೆಯಲ್ಲಿಯೂ ಹಿರಿಹಳ್ಳಿ ಗ್ರಾಮದ ಸರ್ವೆ 111ನೆ ನಂಬರಿನ ಪಶ್ಚಿಮ ಮೇರೆಯಲ್ಲಿಯೂ 111ನೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ಪೂರ್ವಕ್ಕೆ ಹಿರಿಹಳ್ಳಿ ಗ್ರಾಮದ ಸರ್ವೆ 111ನೆ ನಂಬರಿನ ದಕ್ಷಿಣ ಮೇರೆಯಲ್ಲಿ ಹುಣಸೆಕುಪ್ಪೆ ಗ್ರಾಮದ ಸರ್ವೆ 6ನೆ ನಂಬರಿನ ವಾಯುವ್ಯ ಮೂಲೆಗೆ ಹೋಗಿ, ಅಲ್ಲಿಂದ ದಕ್ಷಿಣಕ್ಕೆ ಹುಣಸೆಕುಪ್ಪೆ ಗ್ರಾಮದ ಸರ್ವೆ 6ನೆ ನಂಬರಿನ ಪಶ್ಚಿಮ ಮೇರೆಯಲ್ಲಿ ಅದರ ನೈರುತ್ಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ನೈರುತ್ಯಕ್ಕೆ ಸರ್ವೆ 56ನೆ ನಂಬರಿನ ಪಶ್ಚಿಮ ಮೇರೆಯಲ್ಲಿ ಅದರ ನೈರುತ್ಯ ಮೂಲೆಗೆ ಹೋಗುತ್ತದೆ.

ದಕ್ಷಿಣಕ್ಕೆ.—ಅಲ್ಲಿಂದ ಅಂತರಸಂತೆ ಮತ್ತು ಮಂಚೆಗೌಡನಹಳ್ಳಿ ಗ್ರಾಮಗಳ ಮಧ್ಯೆ ಇರುವ ಎಲ್ಲೆಯಲ್ಲಿ ಮೇಲೆಹೇಳಿದ ಗ್ರಾಮಗಳ ಮತ್ತು ಮೇಟಿಕುಪ್ಪೆ ಸಂಸ್ಥಾನ ಜಂಗಲಿನ ಮುಕ್ಕೂಪ್ಪೆಗೆ ಹೋಗುತ್ತದೆ.

ಪಶ್ಚಿಮಕ್ಕೆ.—ಅಲ್ಲಿಂದ ಸಂಸ್ಥಾನ ಜಂಗಲಿನ ಪೂರ್ವ ಮೇರೆಯಲ್ಲಿ (ಎಲ್ಲೆಯ ರೇಖೆ) ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

ಷರಾಗಳು.

A ಈ ತಾಕಿನಲ್ಲಿ ಈ ಕೆಳಗೆ ನಮೂದಿಸುವ ದಾರಿಯ ಹಕ್ಕನ್ನು ಮಂಜೂರ್ಮಾಡಿ ಇದೆ:—

ಅಂತರಸಂತೆಯಿಂದ ಮಲಬಾರು ಎಲ್ಲೆಯ ಮೇಲಿನ ಕೈಮರಕ್ಕೆ ಹೋಗುವ ಗಾಡಿ ದಾರಿ, 12 ಅಡಿಗಳ ಅಗಲ, ಸುಮಾರು ಒಂದು ಮೈಲಿ ಒಂದುವರೆ ಫರ್ಲಾಂಗುಗಳ ಉದ್ದ, ಜನರಿಗೂ ಜಾನ್ವಾರುಗಳಿಗೂ, ಗಾಡಿಗಳಿಗೂ, ಸರ್ವಕಾಲದಲ್ಲಿಯೂ ತಿರುಗಾಟಕ್ಕೆ ಬಿಟ್ಟಿರತಕ್ಕದ್ದು. ಇದು ಅಂತರಸಂತೆ ಗ್ರಾಮದ ಸರ್ವೆ 56ನೆ ನಂಬರಿನ ವಾಯುವ್ಯ ಮೂಲೆಯಿಂದ ದಕ್ಷಿಣಕ್ಕೆ ಸುಮಾರು 4 ಸರಪಣಿಗಳ ದೂರದಲ್ಲಿ ಒಂದು ಸ್ಥಳದಲ್ಲಿ ಜಂಗಲಿಯನ್ನು ಪ್ರವೇಶಿಸಿ, ಸರ್ವೆ 57ನೆ ನಂಬರಿನಲ್ಲಿ ನೈರುತ್ಯವಾಗಿ ಹೋಗಿ, ಸರ್ವೆ 56ನೆ ನಂಬರಿನ ನೈರುತ್ಯ ಮೂಲೆಯಿಂದ ಸುಮಾರು 44 ಸರಪಣಿಗಳ ದೂರದಲ್ಲಿ ಮಂಚೆಗೌಡನಹಳ್ಳಿಯ ಉತ್ತರ ಮೇರೆಯಲ್ಲಿ ಒಂದು ಸ್ಥಳದಲ್ಲಿ ಜಂಗಲಿಯನ್ನು ಬಿಟ್ಟು, ಮಂಚೆಗೌಡನಹಳ್ಳಿ ಅಂತರಸಂತೆ ಮತ್ತು ಮೇಟಿಕುಪ್ಪೆ ಸಂಸ್ಥಾನ ಜಂಗಲಿನ ಮುಕ್ಕೂಪ್ಪೆಯಿಂದ ಸುಮಾರು 34 ಸರಪಣಿಗಳಲ್ಲಿ ಮಂಚೆಗೌಡನ ಹಳ್ಳಿಯ ಉತ್ತರ ಮೇರೆಯಲ್ಲಿ ಒಂದು ಜಾಗದಲ್ಲಿ ಜಂಗಲಿಯನ್ನು ಪುನಃ ಪ್ರವೇಶಿಸಿ ಸರ್ವೆ 59ನೆ ನಂಬರಿನಲ್ಲಿ ಕೈಮರಕ್ಕೆ ಹೋಗುತ್ತದೆ.

ತಾರೀಖು 28ನೆ ಮಾರ್ಚಿ 1907.

ನಂ. ಫೈ. 7298-315—06, ಅಸಿಸ್ಟೆಂಟ್ ಕಮಿಷನರ್ ಮಿ|| ವಿ. ಆರ್. ತ್ಯಾಗರಾಜ ಐಯ್ಯರ್, ಎಂ. ಎ., ರವರು, ರಜಾವಿನಿಂದ ವಾಪಸು ಬಂದ ತರುವಾಯ ಕಂಟ್ರೋಲರವರ ಆಫೀಸಿಗೆ ಕೆಲಸಕ್ಕೆ ನೇಮಿಸಲ್ಪಡುವರು.

ಹುಕುಂ ಬಮೋಜಿಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್ಮೆಂಟ್ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪಬ್ಲಿಷ್ ಆದ್ದು. [ಸಂ. 15.

ಬೆಂಗಳೂರು, ಗುರುವಾರ, ಏಪ್ರಿಲ್ ತಾ॥ 11, ಸನ 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರ್ಕ್ಸ ಆಫೀಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು / ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು, ವಗ್ಯೆರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಮಾಫೀಸ ನೋಟೀಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲ.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 3ನೆ ಏಪ್ರಿಲ್ 1907.

ನಂ. 9176—ಸ್ಯಾನಿಟರಿ 141-06—10, ತುಮಕೂರು ಡಿಸ್ಟ್ರಿಕ್ಟು ಕೊರಟಗೆರೆ ಸಬ್ ತಾಲ್ಲೂಕಿನ ರಾಮಪುರ ಗ್ರಾಮಕ್ಕೆ ಶ್ರೀ ವೆಂಕಟರಮಣಸ್ವಾಮಿಯವರ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ ಎಪಿಡೆಮಿಕ ಡಿಸೀಸೆಸ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು, 1907ನೆಯ ವರ್ಷದ ಏಪ್ರಿಲ್ 27ನೆ ತಾರೀಖಿನಿಂದ 1907ನೆ ಮೇ 2ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂ.	ಖುಷ್ಕಿ ತರಿ ಬಾಗಾಯತು.	ಒಟ್ಟು ವಿಸ್ತೀರ್ಣ.	ಕಂದಾಯ.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಗಡಿ.			
									ವಿಸ್ತೀರ್ಣ	ಕಂದಾಯ	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ಗುಂಡ್ಲುಪೇಟೆ	ಬೇಗೂರು	ಕೋಟೆಕೆರೆ	(1) ಬಸವೇಗೌಡ (2) ಸೂರೇಗೌಡ	60	ಖುಷ್ಕಿ	ಎ. 3	ರೂ. 2	ಎ. 1	ಅ. 11	ಸರ್ವೆ 60ನೇ ನಂಬರಿನ ಭಾಗ	ಗ್ರಾಮಠಾಣ	ಸರ್ವೆ 59ನೇ ನಂಬರು	ಸರ್ವೆ 61ನೇ ನಂಬರು

ತಾರೀಖು 11ನೆ ಮಾರ್ಚಿ 1907.

ನಂ. ಆರ್. 8230—ಎಲ್. ಆರ್. 297-06—5, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ, ಎಂದರೆ, ಮಳವಳ್ಳಿ ತಾಲ್ಲೂಕು ಬ್ಲಫ್‌ನಲ್ಲಿ ಕೂಲಿ ಲೈನ್ ಯಾ ಕೂಲಿ ಜನಗಳ ಗುಡಿಸಲುಗಳನ್ನು ಬಿಡಾಯಿಸುವುದಕ್ಕೋಸ್ಕರ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರೀ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ ತರಿ ಬಾಗಾಯತು.	ಒಟ್ಟು ವಿಸ್ತೀರ್ಣ.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಗಡಿ.			
								ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ಮಳವಳ್ಳಿ	ಬೆಪ್ಪಗೊಂಡನಪುರ	ಬೆಳಕವಾಡಿ	ಮ|| ಟಿ. ಆರ್. ಆನಂದರಾವು ಮೊದಲಿಯಾರ	371	ಖುಷ್ಕಿ	ಎ. 492 ಗು. 29	ಎ. 47 ಗು. 7	...	ಕಾವೇರಿ ನದಿ ಮತ್ತು ಸರಕಾರಿ ಬಂಜರು	371ನೇ ಗೋಮಾಳ	ಆಲಾಬ್ಯ ಮತ್ತು ಕಾಡಂಕನಹಳ್ಳಿ ಗ್ರಾಮ	371ನೇ ಗೋಮಾಳ

ತಾರೀಖು 16ನೆ ಮಾರ್ಚಿ 1907.

ನಂ. ರೆ. 8402—ಲ್ಯಾ. ರೆ. 476-06—3, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ, ಎಂದರೆ, ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ರಥವನ್ನು ನಿಲ್ಲಿಸುವುದಕ್ಕೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಮೈಸೂರು ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರೀ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ ತರಿ ಬಾಗಾಯತು.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ.			
								ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ಮೈಸೂರು	ಮೈಸೂರು	ಚಾಮುಂಡಿ ಬೆಟ್ಟ	ಕಡಬದ ರಾಮಭಟ್ಟ	60	ಮನೆ (ಅದರ ದಕ್ಷಿಣಭಾಗ)	ಪೂರ್ವದಿಂದ ಪಶ್ಚಿಮಕ್ಕೆ 32 ಅಡಿಗಳು, ಉತ್ತರದಿಂದ ದಕ್ಷಿಣಕ್ಕೆ 7¼ ಅಡಿಗಳು. 248 ಚದರ ಅಡಿಗಳು.	ರಸ್ತೆ	ಓಣಿ	ಮಾಲೀಕನ ಮನೆ	ರಸ್ತೆ

ತಾರೀಖು 16ನೆ ಮಾರ್ಚಿ 1907.

ನಂ. ರೆ. 8404—ಲ್ಯಾ. ರೆ. 477–06—3, ಸರ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೇಷರ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ, ಎಂದರೆ, ಮರಾಮತ್ತು ಇಲಾಖೆಯವರು ಗ್ರಾವೆಲ್ ತೆಗೆದುಕೊಳ್ಳುವುದಕ್ಕೆ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಕೃಷ್ಣರಾಜಪೇಟೆ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರೀ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜಮೀನಿನ ಖಾತೆದಾರರ ಅಥವಾ ಅನುಭವದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ, ಬಾಗಾಯತು.	ಒಟ್ಟು ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಗಡಿ.			
									ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ನಾಗಮಂಗಲ	ಹೊಣಕೆರೆ	ಚೋಳೇನಹಳ್ಳಿ	1. ಕೃಷ್ಣ ಪಟೇಲ ಹೊನ್ನ, 2. ಕೃಷ್ಣ, 3. ಕೆಂಚಣ್ಣ, 4. ಕೃಷ್ಣ.	ಸರ್ವೆ ನಂಬರು (? ನೆ ಪೈಕಿ 12 ಭಾಗ	ಖುಷ್ಕಿ	ಎ. ಗು. 1 39	ರೂ. 3	ಎ. ಗು. 0 17	...	[illegible]	ಕೃಷ್ಣೇಗೌಡನ ಜಮೀನು	ಹೊರಟನ ಜಮೀನು	ಚಿಕ್ಕ ಬೋರೇಗೌಡನ ಜಮೀನು

ತಾರೀಖು 26ನೆ ಮಾರ್ಚಿ 1907.

ನಂ. ಆರ್. 8808—ಎಲ್. ಆರ್. 499–06—2, ಸರ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷರ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ಬೆಂಗಳೂರಿನಲ್ಲಿ ಲಾ ಕೋರ್ಟುಗಳಿಗೋಸ್ಕರ ಒಂದು ಹೊಸ ಕಟ್ಟಡವನ್ನು ಕಟ್ಟುವ ಬಗ್ಗೆ ಅವಶ್ಯಕವಾಗಿವೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸರ್ವೆ ನಂಬರು.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಗಡಿ.			
						ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ ಮತ್ತು ನೈರುತ್ಯ.	ಉತ್ತರ.	ದಕ್ಷಿಣ.
						ಎ. ಗು.	ರೂ. ಆ.				
ಬೆಂಗಳೂರು	ಬೆಂಗಳೂರು	...	ಸಂಪಿಗೆಹಳ್ಳಿ	[illegible]	105	3 13	4 8	[illegible] ರಸ್ತೆ	[illegible] ರಸ್ತೆ	[illegible] ರಸ್ತೆ	[illegible] ರಸ್ತೆ
					106	9 23	11 0				
					107	1 5	7 8				
					109	0 3	0 4				
					110	4 2	1 12				
						18 6	25 0				

ತಾರೀಖು 19ನೆ ಮಾರ್ಚಿ 1907.

ನಂ. ರೆ. 8602—ಲ್ಯಾ. ರೆ. 479–06—3, ಸರ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷರ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ಇದರಡೀ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ, ಎಂದರೆ, ತರೀಕೆರೆ ತಾಲ್ಲೂಕು ಬೆಳೇನಹಳ್ಳಿ ಮತ್ತು ಪೆರಮೇನಹಳ್ಳಿ ಗ್ರಾಮಗಳ ದನಗಳು ತಿರುಗಾಡಲು ದಾರಿ ಮಾಡುವು

ದಕ್ಕೆ ಅವಶ್ಯಕವಾಗಿವೆ ; ಮತ್ತು ಮೇಲ್ಕಂಡ ರಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ತರೀಕೆರೆ ಸಬ್ ಡಿವಿಜನ್ನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರೀ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ ಬಾಗಾಯತು.	ಪೂರ್ತಿ ವಿಸ್ತೀರ್ಣ.	ಕಂದಾಯ.	ಈಗ ತಕ್ಕೊಳ್ಳಬೇಕಾದ ವಿಸ್ತೀರ್ಣ.	ಚತುರ್ಗಡಿ.			
										ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.	ರೂ. ಅ.	ಎ. ಗು.				
ಕಡೂರು.	ತರೀಕೆರೆ.	ತರೀಕೆರೆ.	ಬೆಳೇನಹಳ್ಳಿ.	ಚೆಂದಯ್ಯನ ಬಿನ್ ಮಲ್ಲಯ್ಯ.	27	ಖುಷ್ಕಿ.	1 14	1 14	0 4	ರೈಲ್ವೆ ಗೇಟು.	ಬೆಳೇನಹಳ್ಳಿ ಗ್ರಾಮ.	ಸರ್ವೆ 2ನೆ ನಂಬರು.	ಸರ್ವೆ 27ನೆ ನಂಬರು.
				ಡಿಟ್ಟೋ.	24	ಡಿಟ್ಟೋ.	3 16	2 8	0 15	ಬೆಳೇನಹಳ್ಳಿ ಗ್ರಾಮ.	ರೈಲ್ವೆ ಗೇಟು.	ರುದ್ರಯ್ಯನ ಬಿನ್ ನಂಜೈಯ್ಯನ ಜಮೀನು.	ಸರ್ವೆ 26ನೆ ನಂಬರು.
				ಕೂಡ್ಲಿ ಮಠದ ವಹಿವಾಟುದಾರ ಸುಬ್ಬಣ್ಣಾಚಾರ್.	15	ಡಿಟ್ಟೋ.	12 29	8 0	0 19	ಶಿವಮೊಗ್ಗೆಗೆ ಹೋಗುವ ಭಾಟೂ ವರ್ಗ.	ಪೆರಮೇನಹಳ್ಳಿ ಗ್ರಾಮ.	ಶಿವಮೊಗ್ಗೆಗೆ ಹೋಗುವ ಭಾಟೂವರ್ಗ.	ಪೆರಮೇನಹಳ್ಳಿ ಗ್ರಾಮ.

ತಾರೀಖು 30ನೆ ಮಾರ್ಚಿ 1907.

ನಂ. ರೆ. 8922—ಲ್ಯಾ. ರೆ. 494—06—2, ಶ್ರೀನಿವಾಸಪುರ, ತಾಲ್ಲೂಕಿನ ಅಮಲ್ದಾರ ಮಿ॥ ಎಸ್. ವೆಂಕಟರಮಣಶಾಸ್ತ್ರಿಗಳಿಗೆ, ಮೈಸೂರು ಸರ್ವಿಸ ರೆಗ್ಯುಲೇಷನ್ಸ್‌ಗಳ 177ನೆ ನಿಬಂಧನೆಯ ಮೇರೆ, 2 ತಿಂಗಳವರೆಗೆ ಪ್ರಿವಿಲೇಜ್ ರಜಾವನ್ನು ಅವರು ಉಗಯೋಗಿಸಿಕೊಳ್ಳುವ ತಾರೀಖಿನಿಂದ ಕೊಟ್ಟಿದೆ.

2. ಮಿ॥ ವೆಂಕಟರಮಣ ಶಾಸ್ತ್ರಿಗಳು ರಜಾಮೇಲೆ ಇರುವ ವರೆಗೆ ಅಥವಾ ಮತ್ತೊಂದು ಹುಕುಂ ಕೊಡುವ ವರೆಗೆ, ಬೆಂಗಳೂರು ಡಿಸ್ಟ್ರಿಕ್ಟು ಶಿರಸ್ತೆದಾರ್ ವೈ. ನರಸಿಂಗರಾಯರನ್ನು, ಶ್ರೀನಿವಾಸಪುರ ತಾಲ್ಲೂಕಿನ ಅಮಲ್ದಾರ್ ಮತ್ತು ಮೂರನೆ ತರಗತಿಯ ಮಾಜಿಸ್ಟ್ರೇಟಾಗಿ ಬದಲಿ ನೋಡಲು ನೇಮಕರನ್ನಾಗಿದೆ.

ತಾರೀಖು 1ನೆ ಏಪ್ರಿಲ್ 1907.

ನಂ. ಫೈ. 7425—ಜಿ. ಫೈ. 101—06—8, ಕಂಟ್ರೋಲರಿಗೆ ಚೀಫ್ ಅಸಿಸ್ಟೆಂಟರಾದ ಮಿ॥ಟಿ. ವೈಯಾಪುರಿ ಶೆಟ್ಟರಿಗೆ 1905ನೆ ಇಸವಿಯ ನವೆಂಬರ್ ಒಂದನೆ ತಾರೀಖಿನ ಫೈ. 2806 ಜಿ. ಫೈ. 21—05—7ನೆ ನಂಬರಿನ ಸರ್ಕಾರಿ ಇಸ್ತಿಹಾರನಾಮೆಯಲ್ಲಿ ಖಾಸಗಿ ಕೆಲಸಗಳ ಬಗ್ಗೆ ಕೊಡಲ್ಪಟ್ಟ 35 ದಿವಸಗಳ ರಜಾವನ್ನು ಮೈಸೂರು ಸರ್ವಿಸ ರೆಗ್ಯುಲೇಷನ್‌ಗಳ 154ನೆ ಪ್ರಕರಣದ ಮೇರೆಗೆ ವೈದ್ಯರ ಸರ್ಟಿಫಿಕೇಟಿನ ಮೇಲೆ ಕೊಟ್ಟ ರಜಾವಾಗಿ ಬದಲಾಯಿಸಿ ಇದೆ.

2. ಮಿ॥ ವೈಯಾಪುರಿ ಶೆಟ್ಟರಿಗೆ ಮೈಸೂರು ಸರ್ವಿಸ ರೆಗ್ಯುಲೇಷನುಗಳ 207ನೆ ಪ್ರಕರಣದ ಮೇರೆಗೆ ಖಾಸಗಿ ಕೆಲಸಗಳ ಬಗ್ಗೆ 1907ನೆ ಇಸವಿಯ ಜನವರಿ 12ನೆ ತಾರೀಖಿನಿಂದ ಮೂರು ತಿಂಗಳವರೆಗೆ ರಜಾ ಕೊಟ್ಟಿರುತ್ತದೆ ; 1907ನೆ ಇಸವಿಯ ಜನವರಿ 31ನೆ ತಾರೀಖಿನ ಫೈ. 5983—ಜಿ. ಫೈ. 101—06—6ನೆ ನಂಬರಿನ ಸರ್ಕಾರಿ ಇಸ್ತಿಹಾರನಾಮೆಯಲ್ಲಿ ಅವರಿಗೆ ಕೊಟ್ಟ ಒಂದು ತಿಂಗಳ ಪ್ರಿವಿಲೇಜ್ ರಜಾವನ್ನು ಖಾಸಗಿ ಕೆಲಸಗಳಿಗೆ ಕೊಟ್ಟ ರಜಾವಾಗಿ ಬದಲಾಯಿಸಿ ಇದೆ.

3. ಮಿ॥ ವೈಯಾಪುರಿ ಶೆಟ್ಟರು ರಜಾದ ಮೇಲೆ ಗೈರಹಾಜರಾಗಿರುವ ಕಾಲದಲ್ಲಿ, ಕಂಟ್ರೋಲರ ಕಚೇರಿಯ ಸೀನಿಯರ್ ಎಗ್ಸಾಮಿನರ್ ಮಿ॥ ಜೆ. ವಾಟರ್‌ಹ್‌ಯವರು ಕಂಟ್ರೋಲರಿಗೆ ಚೀಫ್ ಅಸಿಸ್ಟೆಂಟರಾಗಿ ಕೆಲಸ ನೋಡತಕ್ಕದ್ದು.

ತಾರೀಖು 2ನೆ ಏಪ್ರಿಲ್ 1907.

ನಂ. ಫೈ. 7437—ಎಸ್. ಆರ್. 18—06—07, ಎಕ್ಸೈಜ್ ಇಲಾಖಾ ಎಕ್ಸಟ್ರಾ ಅಸಿಸ್ಟೆಂಟ್ ಕಮಿಷನರ ಮಿ॥ ಎಂ. ರಂಗರಾಯರಿಗೆ ಮೈಸೂರು ಸಿವಿಲ್ ಸರ್ವಿಸ ರೆಗ್ಯುಲೇಷನುಗಳ 177ನೆ ಪ್ರಕರಣಾನುಸಾರವಾಗಿ 1907ನೆ ಇಸವಿಯ ಮಾರ್ಚಿ 20ನೆ ತಾರೀಖು ಲಾಗಾಯತು ಎರಡು ವಾರಗಳ ರಜಾ ಕೊಟ್ಟಿರುತ್ತದೆ.

ತಾರೀಖು 2ನೆ ಏಪ್ರಿಲ್ 1907.

ನಂ. ರೆ. 8963—ಲ್ಯಾ. ರೆ. 318-06—6, 1906ನೆ ಇಸವಿಯ ಡಿಸೆಂಬರು 18ನೆ ತಾರೀಖಿನ ರೆ. 6104—ಲ್ಯಾ. ರೆ. 318—06—3ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಅಸಿಸ್ಟೆಂಟ್ ಕಮಿಷನರ ಮಿ॥ ಸಿ. ವೆಂಕಟರಾಯರಿಗೆ ಕೊಟ್ಟಿದ್ದ ಮೂರು ತಿಂಗಳ ಪ್ರಿವಿಲೇಜ್ ರಜಾವಿನ ಜತೆಗೆ ಮೈಸೂರು ಸರ್ವಿಸ ರೆಗ್ಯುಲೇಷನ್‌ಗಳ 155ನೆ ನಿಬಂಧನೆಯ ಮೇರೆ ಮೂರು ತಿಂಗಳ ಫರ್ಲೋ ರಜಾವನ್ನು ಸೇರಿಸಿಕೊಟ್ಟಿದೆ.

ಬಮೋಜಿಬ್ ಹುಕುಂ,

ಕೆ. ಎಸ್. ಚಂದ್ರಶೇಖರ ಐಯ್ಯರ್,

ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್ಮೆಂಟ್ ಸೆಕ್ರೆಟರಿ.

ಪಬ್ಲಿಕ ವರ್ಕ್ಸ.

ಇಸ್ತಿಹಾರ್ನಾಮೆ.

ತಾರೀಖು 8ನೆ ಏಪ್ರೈಲ 1907.

ನಂ. 306—2505, ಪ್ಯಾಲೆಸ ಡಿವೀಜನಿಗೆ ಸೇರಿದ ಅಸಿಸ್ಟೆಂಟ ಇಂಜನಿಯರ ಮ॥ ಟಿ. ಎಸ್. ಶೇಷ ಐಯ್ಯಂಗಾರ, ಬಿ. ಸಿ. ಇ., ಯವರಿಗೆ, ಮೈಸೂರು ಸರ್ವಿಸ ರೆಗ್ಯುಲೇಷನ 206ನೆ ಆರ್ಟಿಕಲ ಅನುಸರಿಸಿ 1907ನೆ ಜನವರಿ 3ನೆ ತಾರೀಖಿನಿಂದ ಮೆಡಿಕಲ ಸರ್ಟಿಫಿಕೇಟಿನ ಮೇಲೆ 6 ತಿಂಗಳು ರಜಾ ಕೊಡಲ್ಪಟ್ಟಿದೆ.

ತಾರೀಖು 10ನೆ ಏಪ್ರೈಲ 1907.

ನಂ. 309—2523, ವೆಸ್ಟರ್ನ ಸರ್ಕಲ್ಲಿಗೆ ಸೇರಿದ ಸಬ್ ಅಸಿಸ್ಟೆಂಟು ಇಂಜನಿಯರ ಮ॥ ಟಿ. ಕೆ. ಅರುಣಾಚಲ ಐಯ್ಯರ್, ಎ. ಎಮ್. ಐ. ಸಿ. ಇ., ಯವರಿಗೆ, ಮೈಸೂರು ಸರ್ವಿಸ ರೆಗ್ಯುಲೇಷನ 177ನೆ ಆರ್ಟಿಕಲ ಅನುಸರಿಸಿ 1907ನೆ ಮಾರ್ಚಿ 27ನೆ ತಾರೀಖಿನಿಂದ 15 ದಿನಗಳ ಪ್ರಿವಿಲೇಜ ರಜಾ ಕೊಡಲ್ಪಟ್ಟಿದೆ.

ಹುಕುಂ ಬಮೋಜೀಬ್,
ಬರ್ನಾರ್ಡ ಫಾಸ, ಕ್ಯಾಪ್ಟನ, ಆರ್. ಇ.,
ಪಬ್ಲಿಕ ವರ್ಕ್ಸ ಇಲಾಖಾ ಮೈಸೂರು ಗವರ್ನಮೆಂಟ ಅಂಡರ ಸೆಕ್ರೆಟರಿ.

ಮುಜರೈ.

ಇಸ್ತಿಹಾರ್ನಾಮೆ.

ನೋಟಿಫಿಕೇಷನ, ತಾರೀಖು 18-3-07, 2—4—1907.

ನಂ. 4526, ಗುಬ್ಬಿ ತಾಲ್ಲೂಕು ಕಡಬದ ಶ್ರೀ ಕೈಲಾಸೇಶ್ವರ ಸ್ವಾಮಿಯವರ ದೇವಸ್ಥಾನಕ್ಕೆ ಇದರಡಿ ನಮೂದು ಮಾಡಿರುವವರನ್ನ ಧರ್ಮದರ್ಶಿಗಳನ್ನಾಗಿ ನೇಮಿಸಿ ಇದೆ.

(1) ಮ॥ ರಾ॥ ಮೈಲಾರಯ್ಯನವರು, ಕಡಬದ ರಿಟೈರ್ಡ ಷೇಕದಾರ
(2) ,, ನಾರಣಭಟ್ಟರು, ಡಿಟೋ ಜೋಯಿಸರು
(3) ,, ಸುಬ್ಬರಾಯಶೆಟ್ಟರು, ಡಿಟೋ ಸಾಹುಕಾರ
(4) ,, ಹುಚ್ಚವೀರೆ ಗೌಡರು, ಡಿಟೋ ಪಟೇಲ

ಹುಕುಂ ಬಮೋಜೀಬ್,
ಎಲ್. ಅನಂತಸ್ವಾಮಿರಾವ್,
ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪ್ರಾಯಿಷ್ ಆಪ್ಟು. [ನಂ. 16.

ಬೆಂಗಳೂರು, ಗುರುವಾರ, ಏಪ್ರೆಲ್ ತಾ|| 18, ಸನ್ 1907.

ಈ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ–ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರಕ್ಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರೆಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೊಲೀಸ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು, ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪ್ರೋಸ್ಪಾಫೀಸ ನೋಟಿಸಗಳು.

3ನೆ ಭಾಗ–ಲೆಜಿಸಲೇಟಿವ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ–ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 3ನೆ ಏಪ್ರೆಲ್ 1907.

ನಂ. 9176—ಸ್ಯಾನಿಟರಿ 141–06—10, ತುಮಕೂರು ಡಿಸ್ಟ್ರಿಕ್ಟು ಕೊರಟಗೆರೆ ಸಬ್ ತಾಲ್ಲೂಕಿನ ರಾಮಪುರ ಗ್ರಾಮಕ್ಕೆ ಶ್ರೀ ವೆಂಕಟರಮಣಸ್ವಾಮಿಯವರ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ ಡಿಸೀಸೆಸ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು, 1907ನೆಯ ವರ್ಷದ ಏಪ್ರೆಲ್ 27ನೆ ತಾರೀಖಿನಿಂದ 1907ನೆ ಮೇ 2ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 3ನೆ ಏಪ್ರೆಲ್ 1907.

ನಂ. 9179—ಸ್ಯಾನಿಟೆರಿ 129-06—10, ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಒಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು.	
			ಇಂದ.	ಗೆ.
1. ಶ್ರೀ ಅಶ್ವತ್ಥನಾರಾಯಣ ಸ್ವಾಮಿಯವರ ರಥೋತ್ಸವ.	ಮಹಿಷಿ ..	ತೀರ್ಥಹಳ್ಳಿ ...	25—4—07	30—4—07
2. ಶ್ರೀ ಹುಚ್ಚರಾಯಸ್ವಾಮಿಯವರ ರಥೋತ್ಸವ.	ಶಿಕಾರಿಪುರ	ಶಿಕಾರಿಪುರ ...	27—4—07	3—5—07
3. ಬಸವಣ್ಣದೇವರ ರಥೋತ್ಸವ ...	ಬಸವನಂದಿಹಳ್ಳಿ	ಡಿಟೋ	27—4—07	30—4—07
4. ಶ್ರೀ ಹನುಮಂತದೇವರ ರಥೋತ್ಸವ.	ವುಂಚಿ ..	ಸೊರಬ ...	22—4—07	23—4—07
5. ಶ್ರೀ ಅಂಜನೇಯದೇವರ ರಥೋತ್ಸವ.	ಹುರಳಿ	ಡಿಟೋ	28—4—07	

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 12ನೆ ಏಪ್ರೆಲ್ 1907.

ನಂ. 9464—ಸ್ಯಾ. 156-06-17, ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಒಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡು ಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು	
			ಇಂದ	ಗೆ
1. ಶ್ರೀ ವೆಂಕಟರಮಣಸ್ವಾಮಿ ರಥೋತ್ಸವ.	ಚಿಕ್ಕ ತಿರುಪತಿ	ಮಾಲೂರು ...	20—4—07	29—4—07
2. ಪೀರಲಪ್ಪನ ಜಾತ್ರೆ ..	ವಾನರಾಸಿ	ಕೋಲಾರ ...	18—4—07	25—4—07

1897ನೆ ವರ್ಷದ 2ನೆ ನಂಬರ್ ಎಪಿಡೆಮಿಕ ಡಿಸೀಸಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 12ನೆ ಏಪ್ರೆಲ್ 1907.

ನಂ. 9466—ಸ್ಯಾ. 170-06-22, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಒಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು

ಸೇರುವುದಕ್ಕೆ ಅವಕಾಶಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದ್ದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು	
			ಇಂದ	ಗೆ
1. ಶ್ರೀ ಬಿಳಿಗಿರಿರಂಗಸ್ವಾಮಿಯವರ ಜಾತ್ರೆ.	ಬಿಳಿಗಿರಿರಂಗಸ್ವಾಮಿ ಬೆಟ್ಟ.	ಎಳಂದೂರು ...	26—4—07	29—4—07
2. ಕನ್ನಂಬಾಡಿ ಅಮ್ಮನವರ ಜಾತ್ರೆ.	ಕನ್ನಂಬಾಡಿ	ಕೃಷ್ಣರಾಜಪೇಟೆ.	17—4—07	25—4—07

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ಸೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ಮಹಾರಾಜರವರ ಸರ್ಕಾರದವರು ಪ್ರತಿ ಒಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 12ನೆ ಏಪ್ರೈಲ್ 1907.

ನಂ. 9468—ಸ್ಯಾನಿಟೆರಿ—166-06—5, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ :— ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಿಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರೆಗೆ ಜಾಡ್ಯರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.	ತಾಲ್ಲೂಕು.
ಮಲ್ಲೇನಹಳ್ಳಿ ...	... ಶಿವಮೊಗ್ಗ.
ಏಡೆಹಳ್ಳಿ ...	... ಡಿಟೋ.
ಕುಂಸಿ ಟೌನ್ ...	... ಕುಂಸಿ ಸಬ್ ತಾಲ್ಲೂಕು.

ತಾರೀಖು 15ನೆ ಏಪ್ರೈಲ್ 1907.

ನಂ. 9578—ಸ್ಯಾನಿಟೆರಿ 21—06-120, ಸನ್ 1907ನೆ ಇಸವಿಯ ಏಪ್ರೈಲ್ 6ನೆ ತಾರೀಖಿನ 394ನೆ ನಂಬರಿನ ಎಂಡಾರ್ಸ್ಮೆಂಟಿನೊಡನೆ ತಲುಪಿದ ಮದ್ರಾಸು ಸರ್ಕಾರದವರ ಈ ಕೆಳಗೆ ನಮೂದಿಸುವ ಇಸ್ತಿಹಾರ್ನಾಮೆಯನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಪುನಃ ಪ್ರಕಟಿಸಿ ಇದೆ:—

ಬರುವ ಉಚ್ಚಂಗಮ್ಮನ ಜಾತ್ರೆಯ ಕಾಲದಲ್ಲಿ ಬಳ್ಳಾರಿ ಡಿಸ್ಟ್ರಿಕ್ಟ್ ಹರಪನಹಳ್ಳಿ ತಾಲ್ಲೂಕಿನ ಉಚ್ಚಂಗಿದುರ್ಗವೆಂಬ ಸ್ಥಳಕ್ಕೆ ಯಾತ್ರಾರ್ಥಿಗಳನ್ನು ಬಿಟ್ಟರೆ ಸದರಿ ಸ್ಥಳದಲ್ಲಿ ಪ್ಲೇಗು ತಗುಲುವ ಅಪಾಯವಿರುವುದಾಗಿ ಸಭಾ ಸಮೇತರಾದ ಗವರ್ನರವರಿಗೆ ತೃಪ್ತಿಕರವಾಗಿ ಕಂಡುಬಂದಿರುವುದರಿಂದ :

1897ನೆ ಇಸವಿಯ ಸಾಂಕ್ರಾಮಿಕ ಜಾಡ್ಯಗಳ ಆಕ್ಟಿಗನುಗುಣವಾಗಿ ತಮಗೆ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ, ಸಭಾಸಮೇತರಾದ ಗವರ್ನರವರು 1907ನೆ ಇಸವಿಯ ಏಪ್ರೈಲ್ 8ನೆ ತಾರೀಖಿನ ಲಾಗಾಯಿತು 18ನೆ ತಾರೀಖಿನ ವರೆಗೆ ಸದರಿ ಜಾತ್ರೆಗೆ ಜನರು ಹೋಗಕೂಡದೆಂದು ನಿಷೇಧಿಸುತ್ತಾರೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಸದರಿ ಜಾತ್ರೆಗೆ ಹೋಗುವವರನ್ನೆಲ್ಲಾ ವಾಪಸು ಕಳುಹಿಸಲಾಗುವದು.

2. 1907ನೆ ಇಸವಿಯ ಮಾರ್ಚಿ 21ನೆ ತಾರೀಖಿನ ಮೈಸೂರು ಗೆಜೆಟ್ಟಿನ 1ನೆ ಭಾಗದ 210ನೆ ಪುಟದಲ್ಲಿ ಪ್ರಕಟಿಸಿದ 1907ನೆ ಇಸವಿಯ ಮಾರ್ಚಿ 12ನೆ ತಾರೀಖಿನ 8202—ಸ್ಯಾ. 21—06—2ನೆ ನಂಬರಿನ ಇಸ್ತಿಹಾರ್ನಾಮೆಯು ಅದರ ಆಖೈರಿನಲ್ಲಿ ನಮೂದಿಸಲ್ಪಟ್ಟ ಜಾತ್ರೆಗೆ ಸಂಬಂಧಪಡುವಷ್ಟರಮಟ್ಟಿಗೆ ಇದರಿಂದ ರದ್ದಾಗಿರುತ್ತದೆ.

ತಾರೀಖು 15ನೆ ಏಪ್ರೈಲ್ 1907.

ನಂ. 9581—ಸ್ಯಾನಿಟೆರಿ 21-06-121, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನೆಂದರೆ :— ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಜಾತ್ರೆಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಧಿಕಾರ.
				ಇಂದ.	ಗೆ.	
ಶ್ರೀ ದೈವಂಗಲ ಸಂವತ್ಸರ ಜಾತ್ರೆ	ಉದಯವಾರ್ ಗ್ರಾಮ.	ಕಾಸರಗೋಡು.	ದಕ್ಷಿಣ ಕನ್ನಡಿಯ.	2—5—07	12—5—07	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1907ನೆ ಇಸವಿ ಏಪ್ರೈಲ್ 6ನೆ ಮಕ್ಕಾಂ 384ನೆ ಮೆಮೋ ಪ್ರಕಾರ.
				(ಉಭಯ ದಿನಗಳೂ ಸೇರಿ)		

ತಾರೀಖು 10ನೇ ಏಪ್ರಿಲ್ 1907.

ನಂ. 9376—ಮ್ಯುನಿ. 433-06—3, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ, ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಇದರಡಿ ವಿವರಿಸಿರುವ ಸ್ವತ್ತುಗಳು ಸರ್ಕಾರಿ ಕೆಲಸಕ್ಕೆ, ಎಂದರೆ, ಗುಂಡ್ಲುಪೇಟೆ ಮ್ಯುನಿಸಿಪಾಲಿಟಿಯಲ್ಲಿರುವ ಆಸ್ಪತ್ರೆ ರಸ್ತೆಯನ್ನು ಅಭಿವೃದ್ಧಿ ಮಾಡಿ ಖಡಾಯಿಸುವುದಕ್ಕೆ ಅವಶ್ಯಕವಾಗಿವೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರನ ಅಥವಾ ಖಾತೆದಾರನ ಹೆಸರು.	ಸರಕಾರಕ್ಕೆ ಬೇಕಾಗಿರುವ ಸ್ವತ್ತುಗಳ ವಿವರಣೆ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಸೀಮೆ: ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
						ಚದರ ಗಜಗಳು.				
ಮೈಸೂರು	ಗುಂಡ್ಲುಪೇಟೆ	ಕಸಬಾ ಹೋಬಳಿ	ಗುಂಡ್ಲುಪೇಟೆ ಟೌನು	ದವಲತ್‌ಖಾನ್ ಪೀರ್‌ಖಾನ್ ಸಾಬ್	ಹಿತ್ತಲು	51	ಪೀರ್‌ಖಾನನ ಹುಲ್ಲಮನೆ	ಅಗಳು	ಪೀರ್‌ಖಾನ್‌ಸಾಬ್ ಮನೆಯ ಹಿತ್ತಲು	ಖುರ್ದಸಾಬಿಯ ಹಿತ್ತಲು
					ಹುಲ್ಲಮನೆ	17	ಡಿಟ್ಟೋ ಖಾಲಿ ನಿವೇಶನ	ಪೀರ್‌ಖಾನನ ಹಿತ್ತಲು	ಪೀರ್‌ಖಾನಿನ ಖಾಲಿ ನಿವೇಶನ ಮತ್ತು ಹುಲ್ಲಮನೆ	ಡಿಟ್ಟೋ ಖಾಲಿ ನಿವೇಶನ
					ಖಾಲಿ ನಿವೇಶನ	47	ಸರ್ಕಾರಿ ರಸ್ತೆ	ಡಿಟ್ಟೋ ಹುಲ್ಲಮನೆ	ಡಿಟ್ಟೋ	ಡಿಟ್ಟೋ
				ಖುರ್ದಸಾಹಿಬ್	ಹಿತ್ತಲು	23	ಖುರ್ದಸಾಬಿಯ ಹೆಂಚು ಮನೆ	ಅಗಳು	ಪೀರ್‌ಖಾನನ ಹಿತ್ತಲು	ಖುರ್ದಸಾಬಿಯ ಮನೆ
					ಹೆಂಚು ಮನೆ	14	ಖುರ್ದಸಾಬಿಯ ಖಾಲಿ ನಿವೇಶನ	ಖುರ್ದಸಾಬಿಯ ಹಿತ್ತಲು	ಡಿಟ್ಟೋ ಹುಲ್ಲಮನೆ	ಡಿಟ್ಟೋ
					ಖಾಲಿ ನಿವೇಶನ	24	ಸರ್ಕಾರಿ ರಸ್ತೆ	ಡಿಟ್ಟೋ ಹೆಂಚುಮನೆ	ಡಿಟ್ಟೋ ಖಾಲಿ ನಿವೇಶನ	ಡಿಟ್ಟೋ ಖಾಲಿ ನಿವೇಶನ
				ಹೋಬಳಿದಾರ ಹುಸ್ಮಾನ್ ಸಾಬ್	ಡಿಟ್ಟೋ	247	ಖಾದರ್‌ಸಾಬಿಯ ಖಾಲಿ ನಿವೇಶನ	ಸರ್ಕಾರಿ ರಸ್ತೆ	ಕುಂಬಾರ ಬಸವನ ಖಾಲಿ ನಿವೇಶನ	ಮಂಡಯಂ ಖಾಸಿಂಸಾಬಿಯ ಮನೆ
				ಖಾದರ್‌ಸಾಬ್	ಡಿಟ್ಟೋ	80	ಪೀರ್‌ಖಾನನ ಹಿತ್ತಲು	ಹುಸ್ಮಾನ್‌ಸಾಬಿಯ ಖಾಲಿ ನಿವೇಶನ	ಖಾದರ್‌ಸಾಬಿಯ ಖಾಲಿ ನಿವೇಶನ	ಖಾದರ್‌ಸಾಬಿಯ ಖಾಲಿ ನಿವೇಶನ ಮತ್ತು ಹುಲ್ಲಮನೆ
				ದವಲತ್‌ಖಾನ್ ಪೀರ್‌ಖಾನ್	ಹಿತ್ತಲು	62	ಕುಂಬಾರ ಬಸವನ ಖಾಲಿ ನಿವೇಶನ	ಖಾದರ್‌ಸಾಬಿಯ ಖಾಲಿ ನಿವೇಶನ	ಕುಂಬಾರ ಬಸವನ ಹೆಂಚು ಮನೆ	ಓಣಿ
				ಹುಸೇನ್‌ಸಾಬಿ	ಡಿಟ್ಟೋ	49	ಹುಸೇನ್‌ಸಾಬಿಯ ಹೆಂಚು ಮನೆ	ಕುಂಬಾರ ಬಸವನ ಖಾಲಿ ನಿವೇಶನ	ಡಿಟ್ಟೋ	ಡಿಟ್ಟೋ
					ಹೆಂಚಿನ ಮನೆ	32	ಹುಸೇನ್‌ಸಾಬಿಯ ಖಾಲಿ ನಿವೇಶನ	ಹುಸೇನ್‌ಸಾಬಿಯ ಹಿತ್ತಲು	ಹುಸೇನ್‌ಸಾಬಿಯ ಹೆಂಚಿನ ಮನೆ	ಡಿಟ್ಟೋ
					ಖಾಲಿ ನಿವೇಶನ	36	ಹೊಂಗಹಳ್ಳಿ ಗೋಪೇಗೌಡನ ಹೆಂಚಿನಮನೆ	ಹುಸೇನ್‌ಸಾಬಿಯ ಹೆಂಚಿನ ಮನೆ	ಹುಸೇನ್‌ಸಾಬಿಯ ಖಾಲಿ ನಿವೇಶನ ಮತ್ತು ಹೆಂಚಿನ ಮನೆ	ಡಿಟ್ಟೋ
				ಹೊಂಗಹಳ್ಳಿ ಗೋಪೇಗೌಡ	ಹೆಂಚಿನ ಮನೆ	55	ಸರ್ಕಾರಿ ರಸ್ತೆ	ಹುಸೇನ್‌ಸಾಬಿಯ ಖಾಲಿ ನಿವೇಶನ	ಸ್ವಂತಗಾರನ ಹೆಂಚಿನ ಮನೆ	ಡಿಟ್ಟೋ

ತಾರೀಖು 10ನೆ ಏಪ್ರೈಲ್ 1907.

ನಂ. 9362—ಪಿಡಿ. 270-06—3, ಶಿವನ ಸಮುದ್ರದಲ್ಲಿನ ಸಬ್ ಅಸಿಸ್ಟೆಂಟ್ ಸರ್ಜನ್ ಮಿ|| ಟಿ. ಎಸ್. ಸಿದ್ದಪ್ಪನವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನಿನ 177ನೆ ಪ್ರಕರಣವನ್ನನುಸರಿಸಿ 1907ನೆ ಇಸವಿಯ ಮಾರ್ಚಿ 21ನೆ ತಾರೀಖಿನ ಅಪರಾಹ್ನದ ಲಾಗಾಯಿತು 15 ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 10ನೆ ಏಪ್ರೈಲ್ 1907.

ನಂ. 9381—ಎಡ್ಯು. 198-06—9, ಮೈಸೂರು ಸೀಮೆಯ ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲ್ ಮಿ|| ಎಚ್. ಜೆ. ಭಾಭಾ ಯವರಿಗೆ, 1907ನೆ ಇಸವಿಯ ಜನವರಿ 16ನೆ ತಾರೀಖಿನ 6438—ಎಡ್ಯು. 198-06—3 ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ಪ್ರಿವಿಲೇಜ್ ರಜಾಗೆ ಸೇರಿಸಿ 1907ನೆ ಇಸವಿಯ ಫೆಬ್ರವರಿ ತಿಂಗಳ ಕಡೆಯ ವರೆಗೆ ಕೊಟ್ಟಿದ್ದ ಫರ್ಲೋ ರಜಾವನ್ನು, ಮೊದಲೇ ಮಂಜೂರಾಗಿದ್ದ ಒದಲಿ ಏರ್ಪಾಡುಗಳ ಮೇಲೆ, 1907ನೆ ಇಸವಿಯ ಮಾರ್ಚಿ 3ನೆ ತಾರೀಖಿನ ವರೆಗೆ (ಆ ದಿನವೂ ಸೇರಿ) ಪುನಃ ಹೆಚ್ಚಿಸಿದೆ.

ತಾರೀಖು 15ನೆ ಏಪ್ರೈಲ್ 1907.

ನಂ. 9573—Med. 41-06—10, ಕೂನೂರಲ್ಲಿರುವ ದಕ್ಷಿಣ ಇಂಡಿಯಾದ ಪ್ಯಾಸ್ಟರ್ ಇನ್ಸ್‌ಟಿಟ್ಯೂಟಿನ ಡೈರೆಕ್ಟರವರಿಂದ ಕೊಡಲ್ಪಟ್ಟ ಈ ಕೆಳಗೆ ನಮೂದಿಸುವ ನೋಟೀಸನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಪುನಃ ಪ್ರಕಟಿಸಿ ಇದೆ :—

ನೋಟಿಸ್.

ಕೂನೂರಲ್ಲಿರುವ ದಕ್ಷಿಣ ಇಂಡಿಯಾದ ಪ್ಯಾಸ್ಟರ್ ಇನ್ಸ್‌ಟಿಟ್ಯೂಟ್ ಎಂಬ ಆಸ್ಪತ್ರೆಯು, ಹುಚ್ಚು ಪ್ರಾಣಿಗಳಿಂದ ಕಡಿಯಲ್ಪಟ್ಟವರ ಚಿಕಿತ್ಸೆಗೋಸ್ಕರ, 1907ನೆ ಇಸವಿಯ ಏಪ್ರೈಲ್ ಒಂದನೆ ತಾರೀಖಿನ ಲಾಗಾಯಿತು ತೆರೆಯಲ್ಪಡುತ್ತದೆ.

ತಾರೀಖು 15ನೆ ಏಪ್ರೈಲ್ 1907.

10. ಶಿದ್ದಾಪುರ, ಮೊಳಕಾಲ್ಮುರು ತಾಲ್ಲೂಕು.	1. ಅಮಲ್ದಾರ್ ಚೇರ್ಮನ್.		
	2. ಶಾನುಭೋಗ ಹನುಮಂತಪ್ಪ ..	ಶಾನುಭೋಗ ...	ಶಿದ್ದಾಪುರ.
	3. ಪಟೇಲ ಹುಳಿಪ್ಪ ...	ಪಟೇಲ ...	ಡಿಟೋ
	4. ಶೆಟ್ಟಿ ಶಿದ್ದಯ್ಯ ...	ವ್ಯವಸಾಯಗಾರ ..	ಡಿಟೋ
	5. ಕೋಮಟಿ ಈರಣ್ಣ ..	ಡಿಟೋ ..	ಡಿಟೋ
	6. ಗಡಿಗೆ ಸಂಗಪ್ಪ	ಡಿಟೋ ...	ಡಿಟೋ
	7. ನೀರುಗಂಟೆ ಶಿದ್ದಯ್ಯ ..	ಡಿಟೋ ..	ಡಿಟೋ

ತಾರೀಖು 21ನೆ ಜೂನ್ 1907.

ನಂ. ಜೆ. 3789—ಪೋಲೀಸ್ 102-06—6, ಕೋಲಾರದ ಚಿನ್ನದ ಗಣಿಯ ಅಧಿಕಾರಿಗಳ ಕೈಕೆಳಗಣ ಕಾವಲು ಶಿಬ್ಬಂದಿಯ ಮುಖ್ಯ ಮೇಲ್ವಿಚಾರಣೆ ಕರ್ತರು ಮಿ|| ಸಿಡ್ನಿ ಎಂ. ಪ್ರಿಚರ್ಡ್‌ರವರನ್ನು ಕೋಲಾರ ಚಿನ್ನದ ಗಣಿಗಳ ಅಸಿಸ್ಟೆಂಟ್ ಪೋಲೀಸು ಸೂಪರ್‌ಇಂಟೆಂಡೆಂಟಾಗಿ ಮೊಕರರ್‌ಮಾಡಿ ಇದೆ.

ತಾರೀಖು 22ನೆ ಜೂನ್ 1907.

ಕ್ಯಾಂಪು ನಂ. 4, ಇದರಡಿ ಕಂಡ ಮುನ್‌ಸಿಫ್‌ಗಳ ವರ್ಗಾವರ್ಗಿಗಳನ್ನು 1907ನೆ ಇಸವಿಯ ಜುಲೈ 1ನೆ ತಾರೀಖಿನಿಂದ ಮಂಜೂರ್‌ಮಾಡಿದೆ :—

1. ಮಿ|| ಟಿ. ವೆಂಕೋಬರಾವ್, ಮದ್ದಗಿರಿಯಿಂದ ಚಿಕ್ಕಬಳ್ಳಾಪುರಕ್ಕೆ.
2. ಮಿ|| ಪಿ. ಮಹದೇವಯ್ಯ, ಚಿಕ್ಕಬಳ್ಳಾಪುರದಿಂದ ಚಿಕ್ಕಮಗಳೂರಿಗೆ.
3. ಮಿ|| ಪಿ. ಎ. ಶಿವಪ್ರಕಾಶಂಪಿಳ್ಳೆ, ದೊಡ್ಡಬಳ್ಳಾಪುರದಿಂದ ಮದ್ದಗಿರಿಗೆ.
4. ಮಿ|| ಎನ್. ನರಸಿಂಹೈಯ್ಯಂಗಾರ್, ಯಡೆಹಳ್ಳಿಯಿಂದ ಹಾಸನಕೆ.

ತಾರೀಖು 22ನೆ ಜೂನ್ 1907.

ಕ್ಯಾಂಪು ನಂ. 9, ಮೊದಲನೆ ತರಗತಿಯ ಡೆಪ್ಯುಟಿ ಕಮಿಷನರಾದ ಮಿ॥ ಎಚ್. ಎಚ್. ಸ್ಪಾರ್ಕ್ಸ್‌ರವರನ್ನು, 1907ನೆ ಇಸವಿಯ ಜುಲೈ 1ನೆ ತಾರೀಖು ಮೊದಲುಗೊಂಡು ಎಕ್ಸೈಜು ಕಮಿಷನರ್ ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ ಮತ್ತು ಉದ್ಯೋಗ ಪ್ರಯುಕ್ತವಾದ ಸ್ಟಾಂಪು ಕಮಿಷನರಾಗಿ ನೌಕರರ್ರಾಡಿದೆ.

ತಾರೀಖು 25ನೆ ಜೂನ್ 1907.

ನಂ. 12137—ಎಲ್. ಬಿ. 473-06—3, ಸ. 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ :—ಇದರಡಿ ವಿವರಿಸಿರುವ ಮತ್ತು 1 ಎಕರೆ ಮತ್ತು 22 ಗುಂಟೆಗಳ ವಿಸ್ತೀರ್ಣವುಳ್ಳ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಮಲ್ಲತಹಳ್ಳಿ ಗ್ರಾಮದಲ್ಲಿ ಹೊಸಗ್ರಾಮ ನಿವೇಶನಕ್ಕಾಗಿ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ದೊಡ್ಡಬಳ್ಳಾಪುರ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು.	ಸರ್ವೆ ನಂ.	ಖುಷ್ಕಿ, ತರಿ ಬಾಗಾಯತು.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಸೀಮೆ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಬೆಂಗಳೂರು	ದೊಡ್ಡಬಳ್ಳಾಪುರ	ಕಸಬಾ	ಮಲ್ಲತಹಳ್ಳಿ	[illegible]	2	ಬಾಗಾಯತು	ಎ. 1 ಗು. 22, ಇದರಲ್ಲಿ 6 ಗುಂಟೆಗಳ ಖರಾಬು ಸೇರಿ ಕಂದಾಯ ರೂ. 9-8-0	ಸರ್ವೆ ನಂಬರು 3	ಸರ್ವೆ ನಂಬರು 1	ಹೊಸಹಳ್ಳಿ ಗ್ರಾಮದ ಎಲ್ಲೆ	ಮಲ್ಲತಹಳ್ಳಿ ಗ್ರಾಮದ ಎಲ್ಲೆ

ತಾರೀಖು 25ನೆ ಜೂನ್ 1907.

ನಂ. 12160—ಮ್ಯು. 509-06, ಮಿ॥ ಎ. ಕೋದಂಡಪಾಣಿ ಮೊದಲಿಯಾರ್, ಎಲ್. ಎಂ. ಎಸ್., ಡಿ. ಪಿ. ಎಚ್., ರವರನ್ನು ಬೆಂಗಳೂರು ಪಟ್ಟಣದ ಹೆಲ್ತ್ ಆಫಿಸರಾಗಿಯೂ, ಮಿ॥ ಬಿ. ಕೃಷ್ಣರಾವ್, ಎಲ್. ಎಂ. ಎಸ್., ಎಲ್. ಎಸ್. ಎಸ್ಸಿ., ಯವರನ್ನು ಮೈಸೂರು ಪಟ್ಟಣದ ಹೆಲ್ತ್ ಆಫಿಸರಾಗಿಯೂ ನೌಕರರ್ರಾಡಿದೆ.

ತಾರೀಖು 26ನೆ ಜೂನ್ 1907.

ನಂ. ಜೆ. 3840—ಕೋರ್ಟ್ಸ್ 275-06—3, ಮಿ॥ ಕೆ. ಎಸ್. ಚಂದ್ರಶೇಖರ ಅಯ್ಯರ್, ಬಿ. ಎ., ಬಿ. ಎಲ್., ರವರು ತಮಗೆ ನೇಮಕವಾಗಿದ್ದ ಚೀಫ್ ಕೋರ್ಟಿನ ಜಡ್ಜಿಯ ಉದ್ಯೋಗವನ್ನು ಇದೇ ತಿಂಗಳು 17ನೇ ತಾರೀಖಿನ ಪೂರ್ವಾಹ್ನದಲ್ಲಿ ವಹಿಸಿದರು.

ತಾರೀಖು 26ನೆ ಜೂನ್ 1907.

ನಂ. ಜೆ. 3843—ಕೋರ್ಟ್ಸ್ 274-06—2, 1907ನೆ ಇಸವಿಯ ಜುಲೈ 1ನೆ ತಾರೀಖಿನಿಂದ ಮತ್ತು ಆ ತರುವಾಯ ಶಿವಮೊಗ್ಗಾ ಸಬಾರ್ಡಿನೇಟ್ ಜಡ್ಜಿಯ ಕೋರ್ಟಿನ ಅಧಿಕಾರಸ್ಥಳಹದ್ದು, ಶಿವಮೊಗ್ಗಾ, ಚಿತ್ರದುರ್ಗ ಮತ್ತು ಕಡೂರು ರೆವಿನ್ಯೂ ಡಿಸ್ಟ್ರಿಕ್ಟುಗಳಿಗೆಲ್ಲಾ ವ್ಯಾಪಿಸತಕ್ಕದ್ದೆಂದು 1883ನೆ ಇಸವಿಯ ಮೈಸೂರು ಸಿವಿಲ್ ಕೋರ್ಟ್ಸ್ ರೆಗ್ಯುಲೇಷನಿನ 5ನೆ ಪ್ರಕರಣದ ಪ್ರಕಾರ ವಿಧಿಸಲು ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 25ನೆ ಜೂನ್ 1907.

ನಂ. 12141—L. B. 450-06-3, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಇದರಡಿ ವಿವರಿಸಿರುವ ಮತ್ತು ಸ್ವಲ್ಪ ಹೆಚ್ಚು ಕಡಮೆ 10752 ಚದರ ಗಜಗಳ ವಿಸ್ತೀರ್ಣವುಳ್ಳ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ಶಿರಾಳಕೊಪ್ಪದ ಟವನಿನ ಬಡಾವಣೆಗಾಗಿಯೂ ಶಿಕಾರಿಪುರದ ತಾಲ್ಲೂಕಿನಲ್ಲಿ ಒಂದು ಮೂಡಲ್‌ಫಾರಂ ಯೂ ಮಾದರಿ ಹೊಲವನ್ನು ಏರ್ಪಡಿಸುವುದಕ್ಕೂ ಅವಶ್ಯಕವಾಗಿವೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3(c) ಪ್ರಕರಣಗಳನ್ನನುಸರಿಸಿ ಹೊನ್ನಾಳಿ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಖಾತೇದಾರನಹೆಸರು.	ಮನೆ ನಿವೇಶನದ ನಂಬರ್.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.			ಚತುರ್ಗಡಿ.				ಷರಾಗಳು.
					ಉದ್ದ.	ಅಗಲ.	ಚದರಗಜ	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	
ಶಿವಮೊಗ್ಗ	ಶಿಕಾರಿಪುರ	ಶಿರಾಳಕೊಪ್ಪ	ಗಾಣಿಗ ಗಂಗಪ್ಪ ...	1	96	8	768	ಕುಡಿಯುವ ನೀರಿನ ಹೊಂಡದ ಏರಿ ಮತ್ತು ಹುಳಿಯೂರಿಗೆ ಹೋಗುವ ರಸ್ತೆ.	ಗಾಣಿಗರ ಬಡಯಪ್ಪನ ಮನೆಯ ನಿವೇಶನ ನಂಬರ್ 15.	ಹುಳಿಯೂರಿಂದ ಬೆಳ್ಳಾಮಿಗೆ ಹೋಗುವ ಬಣಿ.	ಪೋಲೀಸು ಸ್ಟೇಷನು ಮತ್ತು ಸರ್ಕಾರಿ ಪಾಠಶಾಲೆಯ ವಠಾರಕ್ಕೆ ಸೇರಿದ ನೀರುದಾರಿ.	ಸನ್ 1903ನೆ ಇಸವಿಯ ಜೂನ್ 11ನೆ ತಾರೀಖಿನ ಮೈಸೂರು ಗೆಜೆಟ್ಟಿನ ಒಂದನೆ ಭಾಗದ 408ನೆ ಪೇಜಿನಲ್ಲಿ ಪ್ರಕಟಿಸಿದ್ದ ಇಸ್ತಿಹಾರನಾಮೆಯನ್ನು ರದ್ದುಮಾಡಿ ಇದು ಹುಟ್ಟಿರುತ್ತದೆ.
			ಚೌತಾಯಿ ರಾಮರಾವ್ ...	2	96	8	768					
			ಕದರಮಂಡಿಗೆ ಕೃಷ್ಣಪ್ಪ ...	3	96	8	768					
			ರಾಮಂಣ ...	4	96	8	768					
			ಬಸಪ್ಪ ...	5	96	8	768					
			ಕುರುಬರ ಕರಿಯಪ್ಪ ...	6	96	8	768					
			ಚೌತಾಯಿ ರಾಮರಾವ್ ...	7	96	8	768					
			ಗಾಣಿಗರ ಸಂಗಪ್ಪ ...	8	96	8	768					
			ಡಿಟ್ಟೋ ...	9	96	8	768					
			ಅಂತಪ್ಪ ಜೋಯಿಸ ...	10	96	8	768					
			ವಾಲೆ ಕೊಟ್ರಪ್ಪ ...	11	96	8	768					
			ಮಣೆಗಾರ ಗುರುರಾವ್ ...	12	96	8	768					
			ಚೌತಾಯಿ ಹುಚ್ಚರಾವ್ ...	13	96	8	768					
			ಲಕ್ಷ್ಮೀಶ್ವರಯ್ಯ-ರಂಗರಾವ್ ...	14	96	8	768					
			ಒಟ್ಟು ...	...	..		10,752					

ತಾರೀಖು 15ನೆ ಜೂನ್ 1907.

ನಂ. ಫೈ. 9255—ಜಿ. ಎಫ್. 4-06—8, ಅಸಿಸ್ಟೆಂಟ್ ಕಂಟ್ರೋಲರ ಮಿ|| ಎಲ್. ಬಿಷ್ಟೋಪಂತ ಬಾದಾಮಿಯವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 177ನೆ ಪ್ರಕರಣದ ಮೇರೆಗೆ, 1907ನೆ ಇಸವಿಯ ಜೂನ್ 17ನೆ ತಾರೀಖಿನಿಂದ ಹದಿನೈದು ದಿವಸಗಳವರೆಗೆ ಪ್ರಿವಿಲೇಜ್ ರಜಾ ಕೊಟ್ಟಿದೆ.

ತಾರೀಖು 20ನೆ ಜೂನ್ 1907.

ನಂ. ರೆ. 10813—ಲ್ಯಾ. ರೆ. 494-06—4, ಶ್ರೀನಿವಾಸಪುರದ ತಾಲ್ಲೂಕಿನ ಅಮಲ್ದಾರ ಮಿ|| ಎಸ್. ವೆಂಕಟರಮಣಶಾಸ್ತ್ರಿಯವರಿಗೆ 1907ನೆ ಇಸವಿಯ ಮಾರ್ಚಿ 30ನೆ ತಾರೀಖಿನ ರೆ. 8922—ಲ್ಯಾ. ರೆ. 494-06—2ನೆ ನಂಬರಿನ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟ ಎರಡು ತಿಂಗಳ ಪ್ರಿವಿಲೇಜ್ ರಜಾವಿನ ಜತೆಗೆ ಇನ್ನೂ ಹದಿನೈದು ದಿನಗಳ ರಜಾ ಕೊಟ್ಟಿದೆ.

2. ಆ ಇಸ್ತಿಹಾರ್ನಾಮೆಯಲ್ಲಿ ಹುಕುಂ ಮಾಡಿರುವಂತೆಯೇ ಬದಲಿ ಏರ್ಪಾಡು ಮುಂದೆಯೂ ನಡೆಯತಕ್ಕದ್ದು.

ಹುಕುಂ ಬಮೋಜೀಬ್,

ಸಿ. ಎಸ್. ಬಾಲಸುಂದರಂ ಐಯ್ಯರ್,

ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ.

ಇಸ್ತಿಹಾರ್ನಾಮೆ.

ತಾರೀಖು 20ನೆ ಜೂನ್ 1907.

ನಂ. 570—4506, ಅಸಿಸ್ಟೆಂಟು ಇಂಜಿನಿಯರ ಮೆ|| ಕೆ. ಅನಂತಾಚಾರಿಯಾ, ಎಲ್. ಸಿ. ಇ., ಯವರನ್ನು ಮಾರಿಕಣಿವೆ ಡಿವಿಜನ್‌ನಿಂದ ಹಾಸನ ಡಿವಿಜನ್ನಿಗೆ ವರ್ಗ ಮಾಡಲ್ಪಟ್ಟಿದೆ.

ತಾರೀಖು 24ನೆ ಜೂನ್ 1907.

ನಂ. 581—4567, ಪ್ಯಾಲೆಸ್ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ ಮೆ|| ಬಿ. ಪಿ. ರಾಘವಲುನಾಯಿಡು ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನ್ 177ನೆ ಆರ್ಟಿಕಲ್ ಅನುಸರಿಸಿ ಸನ್ 1907ನೆ ಜೂನ್ 24ನೆ ತಾರೀಖು ಲಾಗಾಯಿತು ಅಥವಾ ಅವರು ಉಪಯೋಗಿಸಿಕೊಂಡ ತಾರೀಖು ಲಾಗಾಯಿತು ಒಂದುವರೆ ತಿಂಗಳು ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

2. ಎಗ್ಜಿಕ್ಯೂಟಿವ್ ಇಂಜನಿಯರ ಮೆ|| ಸಿ. ಮಾಧವರಾವ್ ಯವರು, ಮೆ|| ರಾಘವಲುನಾಯಿಡು ಯವರು ರಜಾದ ಮೇಲೆ ಇರುವ ಪರಿಯಂತರವೂ ಪ್ಯಾಲೆಸ್ ಡಿವಿಜನ್ ಚಾರ್ಜಿನಲ್ಲಿ ಇರತಕ್ಕದ್ದು.

ಹುಕುಂ ಬಮೋಜೀಬ್,

ಬರ್ನಾರ್ಡ್ ಥಾಸ್, ಕ್ಯಾಪ್ಟನ್, ಆರ್. ಇ.,

ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನಮೆಂಟ್ ಅಂಡರ್ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 27.

ಬೆಂಗಳೂರು, ಗುರುವಾರ, ಜುಲೈ ತಾ|| 4, ಸ್ 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮಿಷನರವರು, ಕಂಟ್ರೋಲರವರು, ಪಬ್ಲಿಕವರಕ್ಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೋಲೀಸ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲಾ.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

Iನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ನಂ. ಜಿ. 8139—ಜಿ. ಎಂ. 12-06—68, ತಾರೀಖು 27ನೆ ಜೂನ್ 1907.

ಹುಕುಂ:—ಸ್ಪರ್ಧಾಪೂರ್ವಕವಾದ ಪರೀಕ್ಷೆಯ ಮೂಲಕವಾಗಿಯೂ, ವಿಶೇಷವಾಗಿ ಚುನಾಯಿಸೋಣದರಿಂದಲೂ, ಮೈಸೂರು ಸಿವಿಲ್ ಸರ್ವಿಸ್ಸಿಗೆ ಸೇರಿಸಿಕೊಳ್ಳಲ್ಪಟ್ಟ ಆಫಿಸರುಗಳ ಸಂಬಳವನ್ನೂ ಆಯತಿಗಳನ್ನೂ ಕೂಡಿದಷ್ಟು ಮಟ್ಟಿಗೆ ಸಮವಾಗಿ ಮಾಡುವುದಕ್ಕೋಸ್ಕರ ಶ್ರೀಮನ್‌ಮಹಾರಾಜರವರು 1906ನೆ ಜೂನ್ 28ನೆ ತಾರೀಖಿನ 8964—ಎಫ್. ಎಲ್. ನಂಬರಿನ ಸರ್ಕಾರಿ ಹುಕುಮಿನ ಕೆಳಗೆ ಕೊಟ್ಟಿರುವ ನಿಬಂಧನೆಗಳನ್ನು ಈ ಕೆಳಗಿನಂತೆ ತಿದ್ದುಪಾಟು ಮಾಡಲು ಅಪ್ಪಣೆ ದಯಪಾಲಿಸಿರುತ್ತಾರೆ:—

1. ಈ ಕೆಳಗಿನ ಆಫಿಸರುಗಳು ಮೈಸೂರು ಸಿವಿಲ್ ಸರ್ವಿಸಿನ ಏರ್ಪಾಡಿಗೆ ಸೇರಿರುವರು:—

ಹೊಸ ಎ. ಮತ್ತು ಬಿ. ಪಟ್ಟಿಗಳ ಅಸಿಸ್ಟೆಂಟ್ ಕಮಿಷನರುಗಳು, ರೆವಿನ್ಯೂ, ಎಕ್ಸೈಸ್, ಪೋಲೀಸ್, ಸರ್ವೆ, ಜುಡಿಷಲ್ ಮತ್ತು ಅಕೌಂಟ್ ಯಾ ಲೆಕ್ಕದ ಇಲಾಖೆಗಳಲ್ಲಿಯೂ ಮತ್ತು ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯ ಆಫಿಸಿನಲ್ಲಿಯೂ ಕೆಲಸ ಮಾಡುತ್ತಿರುವ ಆ ದರ್ಜೆಯ ಎಲ್ಲಾ ಆಫಿಸರುಗಳ ಸಹಿತ; ಡೆಪ್ಯುಟಿ ಕಮಿಷನರುಗಳು; ಡಿಸ್ಟ್ರಿಕ್ಟು ಜಡ್ಜಿಗಳು; ಡೆಪ್ಯುಟಿ ಸೆಕ್ರಿಟೆರಿ* ಮತ್ತು ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿ.

2. ಮೈಸೂರು ಸಿವಿಲ್ ಸರ್ವಿಸಿಗೆ ಮುಂದೆ ಎಲ್ಲಾ ಆಫಿಸರುಗಳ ಹೊಸದಾಗಿ ಸೇರಿಸೋಣವು ಈ ಕೆಳಗಿನ ಎರಡು ಮಾರ್ಗಗಳ ಪೈಕಿ ಒಂದರಲ್ಲಿ ಮಾತ್ರ ಆಗಿರತಕ್ಕದ್ದು, ಯಾವುವೆಂದರೆ:—

* ಪ್ರತ್ಯೇಕವಾದ ಮುಜರೈ ಸೆಕ್ರಿಟೆರಿಯನ್ನು ಇಟ್ಟಿರುವವರೆಗೂ ಈ ಉದ್ಯೋಗವನ್ನು ಭರ್ತಿ ಮಾಡುವುದಿಲ್ಲ.

ಮೊದಲನೇದು, ಎ. ಪಟ್ಟಿಗೆ, ಶ್ರೀಮನ್ಮಹಾರಾಜರವರಿಂದ ಸಮ್ಮತಿಸಲ್ಪಟ್ಟ ಉಮೇದುವಾರರ ಪರೀಕ್ಷೆಯಲ್ಲಿ ತೇರ್ಗಡೆಯಿಂದ; ಮತ್ತು

ಎರಡನೇದು, ಬಿ. ಪಟ್ಟಿಗೆ—

(a) ಶ್ಲಾಘ್ಯತರವಾಗಿ ಕೆಲಸ ಮಾಡಿ ಮೇಲ್ಪಟ್ಟ ಉದ್ಯೋಗಗಳನ್ನು ವಹಿಸುವುದಕ್ಕೆ ಸರ್ವ ಪ್ರಕಾರದಲ್ಲೂ ಅರ್ಹರಾಗಿದಾರೆಂದು ತಿಳಿಯಬಂದಿರುವ ಮತ್ತು ವಿಧಿಸಲ್ಪಟ್ಟ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದರ ಮೂಲಕ ಯೋಗ್ಯತೆಯನ್ನು ಹೊಂದಿರುವ ಮೈಸೂರು ಸರ್ಕಾರಿ ನೌಕರಿಯ ಕೆಳಗಿನ ದರ್ಜೆಗಳ ಸ್ಥಾನಾಪನ್ನರಿಂದ.

(b) ಅಥವಾ ಘರಾಣೆಯ ಯಾ ಅರ್ಹತೆಯ ಇತರ ಕಾರಣಗಳಿಂದ, ಶ್ರೀಮನ್ಮಹಾರಾಜರವರಿಂದ ಮಾಡಲ್ಪಡುವ ವಿಶೇಷ ಚುನಾವಣೆಯಿಂದ.

3. 1908ನೆ ಇಸವಿಯಲ್ಲಿಯೂ ಆ ತರುವಾಯ ಪ್ರತಿ ಎರಡು ವರ್ಷಗಳಲ್ಲಿಯೂ ಒಂದಾವರ್ತಿ ಸಿವಿಲ್ ಸರ್ವಿಸಿಗೆ ಹೊಸ ಮನುಷ್ಯರನ್ನು ಸೇರಿಸುವುದಕ್ಕಾಗಿ ಸ್ಪರ್ಧಾಪೂರ್ವಕವಾದ ಪರೀಕ್ಷೆಯು ನಡೆಸಲ್ಪಡುವುದು; ಆದರೆ 1906ಕ್ಕೆ ಹಿಂದಿನ ಐದು ವರ್ಷಗಳಲ್ಲಿ ಅಂಥಾ ಪರೀಕ್ಷೆಗಳೇ ನಡೆಸಲ್ಪಡದೆ ಇರುವುದರಿಂದ ಎರಡು ಹೆಚ್ಚು ಪರೀಕ್ಷೆಗಳು ಎಂದರೆ 1907ರಲ್ಲಿ ಒಂದೂ, 1909ರಲ್ಲಿ ಮತ್ತೊಂದೂ ನಡೆಸಲ್ಪಡುವುವು. ಪರೀಕ್ಷಾ ಗ್ರಂಥಗಳೂ, ಪರೀಕ್ಷೆಯು ನಡೆಸಲ್ಪಡುವ ತಾರೀಖು ಮತ್ತು ಕ್ರಮ, ಉತ್ತೀರ್ಣರಾಗುವುದಕ್ಕೆ ಅವಶ್ಯವಾದ ಅಂಕಗಳ ಸಂಖ್ಯೆಗಳು ಇವು ಕನಿಷ್ಠಪಕ್ಷ ಪರೀಕ್ಷೆಗೆ ಮೂರು ತಿಂಗಳುಗಳು ಮುಂಚೆ ಕ್ರಮವಾಗಿ ಪ್ರಕಟಿಸಲ್ಪಡುವುವು. ಪರೀಕ್ಷೆಗಳ ಕಠಿಣತೆಯ ವಿಷಯದಲ್ಲಿಯೂ ಗ್ರಂಥಗಳ ವಿಸ್ತಾರದ ವಿಷಯದಲ್ಲಿಯೂ, ಮೇಲ್ಕಂಡ ಸ್ಪರ್ಧಾಪೂರ್ವಕವಾದ ಪರೀಕ್ಷೆಯು ಬ್ರಿಟಿಷ್ ಇಂಡಿಯಾವಿನಲ್ಲಿ ಪ್ರೊವಿನ್ಷಲ್ ಸಿವಿಲ್ ಸರ್ವಿಸಿಗಾಗಿ ಅನುಸರಿಸಲ್ಪಟ್ಟಿರುವುದರ ಹಾಗೆ ಇರುವುದು.

4. ಪರೀಕ್ಷೆಗೆ ಬರುವ ಉಮೇದುವಾರರು ಪರೀಕ್ಷೆಯ ತಾರೀಖಿನ ದಿನ 25 ವರ್ಷಗಳ ವಯಸ್ಸಿಗೆ ಮೀರಿರಕೂಡದು, ಮತ್ತು ಇಂಡಿಯಾ ದೇಶದ ಅಥವಾ ಇತರ ದೇಶದ ಯೂನಿವರ್ಸಿಟಿಯ ಕಲೆಗಳ ಗ್ರಾಜ್ಯುಯೇಟುಗಳಾಗಿರಬೇಕು; ಆದರೆ, ಉಮೇದುವಾರನು ಮೈಸೂರು ದೇಶೀಯನಾಗಿ ಅಥವಾ ಮೈಸೂರಿನಲ್ಲಿ ವಾಸವುಳ್ಳವನಾಗಿ ಇಲ್ಲದೆ ಇದ್ದರೆ ಅವನು ಮದರಾಸಿನ ಅಥವಾ ಬೊಂಬಾಯಿನ ಯೂನಿವರ್ಸಿಟಿಯ ಗ್ರಾಜ್ಯುಯೇಟಾಗಿರಬೇಕು.

5. ಈ ಷರತ್ತುಗಳನ್ನು ನೆರವೇರಿಸುವ ಮತ್ತು ಪರೀಕ್ಷೆಗೆ ಬರಲಪೇಕ್ಷಿಸುವ ಉಮೇದುವಾರರು ಅವರ ಹೆಸರುಗಳನ್ನೂ ಮತ್ತು ವಯಸ್ಸು ಯೋಗ್ಯತೆಗಳ ವಿಷಯದಲ್ಲಿ ಸಾಕ್ಷ್ಯವನ್ನೂ; ಜನನಸ್ಥಳ, ಜಾತಿ, ವಂಶ, ಉದ್ಯೋಗ, ಜನಮಂಡಲಿಯಲ್ಲಿ ಅವರ ಸ್ಥಿತಿ ಇವುಗಳನ್ನು ಕುರಿತು ವರ್ತಮಾನವನ್ನೂ; ಮತ್ತು ಗುಣ ಮತ್ತು ನಡತೆಗಳ ಸರ್ಟಿಫಿಕೇಟುಗಳನ್ನೂ; ಸರ್ಕಾರಿ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರಿಗೆ ಮುಂದೆ ಗೊತ್ತು ಮಾಡಲ್ಪಡುವ ತಾರೀಖಿಗೆ ಮೀರದೆ ಕಳುಹಿಸತಕ್ಕದ್ದು. ಈ ಉಮೇದುವಾರರಿಂದ ಚುನಾವಣೆಯು ಶ್ರೀಮನ್ಮಹಾರಾಜರವರಿಂದ ಮಾಡಲ್ಪಡುವುದು ಮತ್ತು ಹಾಗೆ ಚುನಾಯಿಸಲ್ಪಟ್ಟವರ ಹೆಸರುಗಳು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಡುವುವು. ಹಾಗೆ ಪ್ರಕಟಿಸಲ್ಪಟ್ಟ ಒಂದು ತಿಂಗಳೊಳಗಾಗಿ ಚುನಾಯಿಸಲ್ಪಟ್ಟ ಉಮೇದುವಾರರು ಮುಂದೆ ಸರ್ಕಾರದಿಂದ ಪ್ರಕಟಿಸಲ್ಪಡುವ ಸ್ಥಳದಲ್ಲಿ ಮತ್ತು ತಾರೀಖಿನಲ್ಲಿ ಒಂದು ಮೆಡಿಕಲ್ ಬೋರ್ಡ್ ಯಾ ವೈದ್ಯರ ಸಭೆಯ ಮುಂದೆ ಹಾಜರಾಗತಕ್ಕದ್ದು. ದೃಢಕಾಯವೂ ಶಕ್ತಿಯೂ ಇಲ್ಲದವರನ್ನು ಮತ್ತು ಒಬ್ಬ ಕಾರ್ಯನಿರ್ವಾಹಕ ಆಫೀಸರ ಚಟುವಟಿಕೆಯಾದ ಕೆಲಸಗಳಿಗೆ ವಿಶೇಷವಾಗಿ ಅರ್ಹರಾಗದೆ ಇರುವ ಉಮೇದುವಾರರನ್ನು ತಳ್ಳಿಬಿಡಬೇಕೆಂದು ಈ ಬೋರ್ಡಿಗೆ ಅಪ್ಪಣೆ ಕೊಡಲ್ಪಡುವುದು. ಬೋರ್ಡಿನವರಿಂದ ಮಂಜೂರ್ಮಾಡಲ್ಪಟ್ಟ ಮೇಲೆ ಉಮೇದುವಾರರು ಪರೀಕ್ಷೆಗೆ ಅರ್ಹರಾಗಿರತಕ್ಕದ್ದು.

6. ತೃಪ್ತಿಕರವಾಗಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಉಮೇದುವಾರರ ಪಟ್ಟಿಯ ಮೇಲ್ಭಾಗದಿಂದ ಇಬ್ಬರು ಉಮೇದುವಾರರು ಚುನಾಯಿಸಲ್ಪಟ್ಟು ಎ. ಪಟ್ಟಿಯಲ್ಲಿ 5ನೆ ತರಗತಿಯ ಅಸಿಸ್ಟೆಂಟ್ ಕಮಿಷನರ ದರ್ಜೆಗೆ ಅಜಮಾಯಿಷಿ ತರೀಖು ಸೇರಿಸಲ್ಪಡುವರು.

7. ಮೇಲ್ಕಂಡ ಮೇರೆ ಸ್ಪರ್ಧಾಪೂರ್ವಕವಾಗಿ ಮೈಸೂರು ಸಿವಿಲ್ ಸರ್ವಿಸಿಗೆ ಸೇರಿಸಲ್ಪಟ್ಟ ಮನುಷ್ಯರು ಅಜಮಾಯಿಷಿ ಕಾಲದಲ್ಲಿ ಎಂದರೆ ಎರಡು ವರ್ಷಗಳ ಅವಧಿವರೆಗೆ ತಿಂಗಳು ಒಂದಕ್ಕೆ 200 ರೂಪಾಯಿ ಸಂಬಳ ತೆಗೆದುಕೊಳ್ಳುವರು. ಆ ಕಾಲದಲ್ಲಿ ಅವರು

ಮೊದಲನೇದು, ಕುದುರೆ ಸವಾರಿಯಲ್ಲಿ ನಡೆಯುವ ಪರೀಕ್ಷೆಯಲ್ಲಿಯೂ,

ಎರಡನೇದು, ತತ್ಕಾಲದಲ್ಲಿ ಜಾರಿಯಲ್ಲಿರುವ ನಿಬಂಧನೆಗಳ ಮೇರೆ ಇಲಾಖೆಯ ನೌಕರಿಗೆ ಸಂಬಂಧಪಟ್ಟ ಪರೀಕ್ಷೆಯಲ್ಲಿಯೂ

ಮೂರನೇದು, ಅವರ ಪೈಕಿ ಬಿ. ಎ. ಪರೀಕ್ಷೆಯಲ್ಲಿ ಐಚ್ಛಿಕ ಭಾಷೆಯನ್ನಾಗಿ ಕನ್ನಡವನ್ನು ತೆಗೆದುಕೊಳ್ಳದೆ ಇದ್ದವರು ಆ ಭಾಷೆಯಲ್ಲಿ ವಿಧಿಸಲ್ಪಟ್ಟ ಪರಿಮಾಣದ ಪರೀಕ್ಷೆಯಲ್ಲಿಯೂ, ತೇರ್ಗಡೆಯಾಗತಕ್ಕದ್ದು.

ಮೇಲ್ಕಂಡ ಅಜಮಾಯಿಷಿಯ ಎರಡು ವರ್ಷಗಳು ಮುಗಿಯುವುದರೊಳಗೆ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದಕ್ಕೆ ತಪ್ಪಿದ ಪ್ರೊಬೇಷನರ್ ಯಾ ಉಮೇದುವಾರನಿಗೆ ಮತ್ತೊಂದು ವರ್ಷದ ಮಾಯಿದೆಯು ದಯೆಯಿಂದ ಕೊಡಲ್ಪಡುವುದು. ಮೂರನೆಯ ವರ್ಷದಲ್ಲಿ ತೇರ್ಗಡೆಯಾಗಲು ತಪ್ಪಿದ್ದರೆ ಆತನ ಹೆಸರು ಅಸಿಸ್ಟೆಂಟ್ ಕಮಿಷನರುಗಳ ಪಟ್ಟಿಯಿಂದ ತೆಗೆದುಹಾಕಲ್ಪಡುವುದು.

8. ಮೇಲಂಡ ಮೇರೆ ಸಂಪೂರ್ಣವಾಗಿ ಯೋಗ್ಯತೆಯನ್ನು ಹೊಂದಿದಾಗ ಬಿ. ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರು ಎ. ಪಟ್ಟಿಯಲ್ಲಿ 250 ರೂಪಾಯಿಯ ಮೇಲೆ 5ನೆ ತರಗತಿಯ ಅಸಿಸ್ಟೆಂಟ್ ಕಮಿಷನರನ್ನಾಗಿ ಖಾಯಂ ಮಾಡಲ್ಪಟ್ಟು ತರುವಾಯ ಆ ಪಟ್ಟಿಯಲ್ಲಿ ಕೆಳಗೆ ತೋರಿಸಿರುವ ಪರಿಮಾಣದ ಮೇರೆ ಏರುವರು:—

ಅಜಮಾಯಿಷಿ ತರೀಕಿನ ಕಾಲವಲ್ಲದೆ 5ನೆ ತರಗತಿಯಲ್ಲಿ 1 ವರ್ಷ ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯ,	300 ರೂಪಾಯಿ ಸಂಬಳವುಳ್ಳ 4ನೆ ತರಗತಿಯ ಅಸಿಸ್ಟೆಂಟ್ ಕಮಿಷನರ್ ಕೆಲಸಕ್ಕೆ;
4ನೆ ತರಗತಿಯಲ್ಲಿ 3 ವರ್ಷಗಳು ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯ,	350 ರೂಪಾಯಿ ಸಂಬಳವುಳ್ಳ 3ನೆ ತರಗತಿಯ ಅಸಿಸ್ಟೆಂಟ್ ಕಮಿಷನರ್ ಕೆಲಸಕ್ಕೆ;
3ನೆ ತರಗತಿಯಲ್ಲಿ 3 ವರ್ಷಗಳು ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯ,	400 ರೂಪಾಯಿ ಸಂಬಳವುಳ್ಳ 2ನೆ ತರಗತಿಯ ಅಸಿಸ್ಟೆಂಟ್ ಕಮಿಷನರ್ ಕೆಲಸಕ್ಕೆ;
2ನೆ ತರಗತಿಯಲ್ಲಿ 3 ವರ್ಷಗಳು ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯ,	450 ರೂಪಾಯಿ ಸಂಬಳವುಳ್ಳ 1ನೆ ತರಗತಿಯ ಅಸಿಸ್ಟೆಂಟ್ ಕಮಿಷನರ್ ಕೆಲಸಕ್ಕೆ.

9. (1) ಸಿವಿಲ್ ಸರ್ವಿಸ್ ಪರೀಕ್ಷೆಯ ಫಲಿತಾಂಶಗಳು ತಿಳಿದ ಕೂಡಲೆ 2ನೆ ನಿಬಂಧನೆಯ ಎರಡನೆ ವಾಕ್ಯದಲ್ಲಿ ವಿವರಿಸಿರುವಂತೆ ಖಾಲಿಗಳಿಗೆ ಅನುಗುಣವಾಗಿ ಬೇಕಾದಷ್ಟು ಸಂಖ್ಯೆಯ ಜನಗಳನ್ನು ವಿಶೇಷವಾಗಿ ಚುನಾಯಿಸುವುದರಿಂದ ಬಿ. ಪಟ್ಟಿಯ ಅಸಿಸ್ಟೆಂಟ್ ಕಮಿಷನರುಗಳ ದರ್ಜೆಗೆ ಹೊಸ ಆಫಿಸರುಗಳು ಸೇರಿಸಲ್ಪಡುವರು; ಆದರೆ ಸಾಧಾರಣವಾಗಿ ಇಂಡಿಯಾ ಅಥವಾ ಇತರ ದೇಶದ ಯೂನಿವರ್ಸಿಟಿಯ ಬಿ. ಎ. ಡಿಗ್ರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದ ಹೊರತು ಘರಾಣೆಯ ಯಾ ಇತರ ಕಾರಣಗಳ ಮೇಲೆ ಯಾವ ಮನುಷ್ಯನೂ ಚುನಾಯಿಸಲ್ಪಡುವುದಿಲ್ಲ.

(2) ಈ ನಿಬಂಧನೆಯ (1)ನೆ ವಾಕ್ಯದಲ್ಲಿರುವ ಯಾವ ಅಂಶವೂ, ಹಾಲಿ ಇರುವ ಖಾಲಿಗಳನ್ನು ಭರ್ತಿ ಮಾಡುವುದಕ್ಕೋಸ್ಕರ ಕೆಳಗಿನ ದರ್ಜೆಗಳಿಂದ ಬಿ. ಪಟ್ಟಿಯ ಅಸಿಸ್ಟೆಂಟ್ ಕಮಿಷನರ್ ದರ್ಜೆಗೆ ಹಂಗಾಮಿ ಬಡತಿಗಳನ್ನು ನಿರ್ಬೋಧಿಸಬೇಕೆಂದು ಉದ್ದೇಶಿಸಿ ಇಲ್ಲ; ಆದರೆ ಹಾಗೆ ಬಡತಿ ಮಾಡಲ್ಪಟ್ಟ ಆಫಿಸರು ಅಂಥಾ ಬಡತಿಯ ಕಾರಣಮಾತ್ರದಿಂದ (1)ನೆ ವಾಕ್ಯದ ಮೇರೆ ಖಾಯಂ ನೌಕರರಾತಿಗಳು ಮಾಡಲ್ಪಟ್ಟಾಗ ಖಾಯಮಿಗೆ ಹಕ್ಕುಳ್ಳವನಾಗುವುದಿಲ್ಲ.

10. ಘರಾಣೆಯ ಅಥವಾ ಇತರ ಕಾರಣಗಳ ಮೇಲೆ ಮೈಸೂರು ಸಿವಿಲ್ ಸರ್ವಿಸಿಗೆ ಸೇರಿಸಲ್ಪಟ್ಟ ಮನುಷ್ಯರನ್ನು ಬಿ. ಪಟ್ಟಿಯ 5ನೆ ತರಗತಿಯ ಅಸಿಸ್ಟೆಂಟ್ ಕಮಿಷನರ ದರ್ಜೆಗೆ ಅಜಮಾಯಿಷಿ ತರೀಕು ತಿಂಗಳು ಒಂದಕ್ಕೆ 200 ರೂಪಾಯಿಯ ಸಂಬಳದ ಮೇಲೆ ನೌಕರರನ್ನಾಗಿ ಡಲಾಗುವುದು; ಇವರ ವಿಷಯದಲ್ಲಿ ಅಜಮಾಯಿಷಿ ತರೀಕಿನ ಕಾಲವು ಮೂರು ವರ್ಷಗಳಾಗಿರುವುದು, ಇತರ ವಿಷಯಗಳಲ್ಲಿ 7 ಮತ್ತು 8ನೆ ನಿಬಂಧನೆಗಳ ನಿಯಮಗಳು ಇಂಥಾ ಪ್ರೊಬೇಷನರುಗಳಿಗೆ ಲಗಾವಾಗತಕ್ಕದ್ದು.

11. ಸರ್ಕಾರಿ ನೌಕರಿಯ ಕೆಳಗಿನ ದರ್ಜೆಗಳಿಂದ ಬಿ. ಪಟ್ಟಿಗೆ ಸೇರಿಸಲ್ಪಟ್ಟ ಮನುಷ್ಯರು ಪ್ರೊಬೇಷನರುಗಳಾಗಿರಬೇಕೆಂದು ವಿಧಿಸದೆ ಅವರನ್ನು 250 ರೂಪಾಯಿ ಸಂಬಳವುಳ್ಳ 5ನೆ ತರಗತಿಯ ಅಸಿಸ್ಟೆಂಟು ಕಮಿಷನರುಗಳಾಗಿ ನೌಕರರನ್ನಾಗಿ ಡಲಾಗುವುದು; ಅವರು ಒಂದೊಂದು ತರಗತಿಯಲ್ಲಿ ಮೂರು ವರ್ಷಗಳ ಕಾಲ ಸರ್ಕಾರದವರು ಒಪ್ಪುವಂತೆ ಕೆಲಸಮಾಡಿದ ತರುವಾಯ ಮೇಲಿನ ತರಗತಿಗೆ ಏರತಕ್ಕದ್ದು;

ಆದರೆ, ಈರೀತಿಯಾಗಿ ನೌಕರರನ್ನಾಗಿ ಡಲ್ಪಟ್ಟ ಆಫಿಸರು ಮೊದಲೇ 250 ರೂಪಾಯಿ ಸಂಬಳ ತೆಗೆದುಕೊಳ್ಳುತ್ತಿದ್ದರೆ ಆ ಸಂಬಳವನ್ನು ತೆಗೆದುಕೊಳ್ಳುತ್ತಿದ್ದ ಕಾಲವನ್ನು 4ನೆ ತರಗತಿಗೆ ಬಡತಿಯಾಗುವುದಕ್ಕೆ ಬೇಕಾಗಿರುವ ಮೂರು ವರ್ಷಗಳ ಕಾಲದ ವಿಷಯದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು;

ಮತ್ತು ಸಬ್ ಜಡ್ಜಾಗಿ ನೌಕರರನ್ನಾಗಿ ಡುವ ಉದ್ದೇಶದಿಂದ ಒಬ್ಬ ಮುನ್ಸಿಫನನ್ನು ಅಸಿಸ್ಟೆಂಟ್ ಕಮಿಷನರಾಗಿ ನೌಕರರನ್ನಾಗಿ ಡಿದರೆ ಆತನನ್ನು 400 ರೂಪಾಯಿ ಸಂಬಳವುಳ್ಳ 2ನೆ ತರಗತಿಯ ಅಸಿಸ್ಟೆಂಟ್ ಕಮಿಷನರಾಗಿ ನೌಕರರನ್ನಾಗಿ ಡತಕ್ಕದ್ದು.

12. ಆತನ ದರ್ಜೆಯ ಮೊದಲನೆ ತರಗತಿಯಲ್ಲಿ ಕನಿಷ್ಠ ಪಕ್ಷ ಎರಡು ವರ್ಷಗಳು ನೌಕರಿ ಮಾಡಿದ ಉಭಯ ಪಟ್ಟಿಗಳ ಅಸಿಸ್ಟೆಂಟ್ ಕಮಿಷನರು ಅರ್ಹನಾಗಿ ಕಂಡು ಬಂದು ಖಾಲಿಗಳೂ ಇದ್ದರೆ ಸಾಲಿಯಾನಾ 50 ರೂಪಾಯಿ ಬಡತಿಗಳ ಮೂಲಕ 600 ರೂಪಾಯಿಗೆ ಏರುವ 500 ರೂಪಾಯಿ ಸಂಬಳವುಳ್ಳ ಸೀನಿಯರ್ ಅಸಿಸ್ಟೆಂಟ್ ಕಮಿಷನರ ದರ್ಜೆಗೆ ಬಡತಿಗೆ ಅರ್ಹನಾಗಿರತಕ್ಕದ್ದು; ಈ ಕಡೆಯಲ್ಲಿ ಹೇಳಿದ ದರ್ಜೆಯಲ್ಲಿ ಒಟ್ಟು ಎಂಟು ಸ್ಥಳಗಳು ಇರತಕ್ಕದ್ದು.

13. ನಿಬಂಧನೆಗಳ ಮೇಲೆ ಪರೀಕ್ಷೆಯ ಮೂಲಕ ಅಥವಾ ವಿಶೇಷ ಚುನಾವಣೆಯ ಮೂಲಕ ಹೊಸದಾಗಿ ಸೇರಿಸಲ್ಪಟ್ಟ ಪ್ರತಿ ಆಫಿಸರೂ ಆ ಮೊದಲೇ ತರಬೇತನ್ನು ಹೊಂದಿ ಇದ್ದ ಹೊರತು ಸರ್ವೆ ಇಲಾಖೆಯಲ್ಲಿ ಆರು ತಿಂಗಳಿಗೆ ಕಡಮೆಯಿಲ್ಲದೆಯೂ ಮತ್ತು ಅಕೌಂಟ್ಸ್ ಯಾ ಲೆಕ್ಕದ ಇಲಾಖೆಯಲ್ಲಿ 6 ತಿಂಗಳಿಗೆ ಕಡಮೆಯಿಲ್ಲದೆಯೂ ತರಬೇತು ಮಾಡಲ್ಪಡತಕ್ಕದ್ದು ಮತ್ತು ಸ್ಪರ್ಧಾಪೂರ್ವಕವಾಗಿ ಹೊಸದಾಗಿ ಸೇರಿಸಲ್ಪಟ್ಟ ಪ್ರತಿ ಆಫಿಸರೂ ಒಟ್ಟು ಒಂದು ವರ್ಷಕ್ಕೆ ಕಡಮೆಯಿಲ್ಲದೆ ಮುನ್ಸಿಫಾಗಿ ಅಥವಾ ಸಬ್ ಜಡ್ಜಾಗಿ ಜುಡಿಷಲ್ ಇಲಾಖೆಯಲ್ಲಿ ಕೂಡ ತರಬೇತು ಮಾಡಲ್ಪಡತಕ್ಕದ್ದು.

ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರ ಆಫೀಸಿನಲ್ಲಿ ಅಂಡರ್ ಮತ್ತು ಅಸಿಸ್ಟೆಂಟ್ ಸೆಕ್ರೆಟರಿಗಳು, ರೆವಿನ್ಯೂ ಇಲಾಖೆಯಲ್ಲಿ (ಸಬ್) ಡಿವಿಜನ್ ಮತ್ತು ಟ್ರೆಜರಿ ಆಫೀಸರುಗಳು, ಸಬಾರ್ಡಿನೇಟ್ ಜಡ್ಜಿಗಳು, ಪೊಲೀಸು ಸೂಪರಿಂಟೆಂಡೆಂಟುಗಳು, ಎಕ್ಸೈಸ್ ಡಿವಿಜನ್ ಆಫೀಸರುಗಳು, ಸರ್ವೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟುಗಳು, ಅಸಿಸ್ಟೆಂಟ್ ಕಂಟ್ರೋಲರ್‌ಗಳು ಮತ್ತು ಮೇಲ್ಕಂಡ ಇಲಾಖೆಗಳಲ್ಲಿ ಅವುಗಳಿಗೆ ಸಮವಾದ ಇತರ ಉದ್ಯೋಗಗಳು—ಈ ಉದ್ಯೋಗಗಳು ಪಟ್ಟಿಗಳ ಭೇದವನ್ನೆಣಿಸದೆ ಅಸಿಸ್ಟೆಂಟ್ ಕಮಿಷನರುಗಳ ದರ್ಜೆಯಿಂದ ಅರ್ಹತೆಯಿಂದಲೂ ತರಬೇತಿನಿಂದಲೂ ಯೋಗ್ಯತೆ ಹೊಂದಿದ ಆಫೀಸರುಗಳಿಂದ ಭರ್ತಿ ಮಾಡಲ್ಪಡತಕ್ಕದ್ದು. ಅಂಥಾ ಆಫೀಸರುಗಳು ಆಗಾಗ್ಯೆ ಅವರವರು ಇರುವ ಹಾಗೆ ಸಂಭವಿಸುವ ತರಗತಿಯ ಕ್ರಮವಾದ ಸಂಬಳವನ್ನು ಅವರು ವಹಿಸುವ ಉದ್ಯೋಗಕ್ಕೆ ಲಗತ್ತು ಮಾಡಿರುವ ಯಾವುದಾದರೂ ವಿಶೇಷವಾದ ಅಥವಾ ಸ್ಥಳೀಯ ಅಲೋವೆನ್ಸ್ ಯಾ ವೇತನ ಸಹಿತ ತೆಗೆದುಕೊಳ್ಳುವರು.

14. (1) ಶ್ರೀಮನ್ಮಹಾರಾಜರವರಿಂದ ಆಗಾಗ್ಯೆ ಮಂಜೂರ್ಮಾಡಲ್ಪಡಬಹುದಾದ ಬದಲಾವಣೆಗಳಿಗೆ ಒಳಪಟ್ಟು, ಈ ಕೆಳಗಿನ ಇಲಾಖೆಗಳಲ್ಲಿರುವ ಅಸಿಸ್ಟೆಂಟ್ ಕಮಿಷನರುಗಳ ಉದ್ಯೋಗಗಳ ಪರಿಮಾಣವು ಪ್ರತಿ ಒಂದು ಇಲಾಖೆಯ ಎದುರಿಗೂ ನಮೂದು ಮಾಡಿರುವಂತೆ ಇರತಕ್ಕದ್ದು:—

ಇಲಾಖೆ.	ಸಂಖ್ಯೆ.	ಉದ್ಯೋಗದ ಸ್ವಭಾವ.
ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರ ಆಫೀಸು	2	ಅಂಡರ್ ಸೆಕ್ರೆಟರಿಗಳು.
	2	ಅಸಿಸ್ಟೆಂಟ್ ಸೆಕ್ರೆಟರಿಗಳು.
	1	ದೀವಾನರವರ ಬಳಿ ಕೆಲಸ ಮಾಡುವ ಅಸಿಸ್ಟೆಂಟ್ ಅಥವಾ ಅಂಡರ್ ಸೆಕ್ರೆಟರಿ ಕೆಲಸ ಮಾಡುವ ಆಫೀಸರ ದರ್ಜೆಗೆ ತನುಗುಣವಾಗಿ.
	1	ದೀವಾನರವರ ಪ್ರೈವೇಟ್ ಸೆಕ್ರೆಟರಿ.
ರೆವಿನ್ಯೂ ಇಲಾಖೆ ...	17	ಸಬ್ ಡಿವಿಜನ್‌ಗಳ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರುಗಳು.
	8	ಟ್ರೆಜರಿ ಅಸಿಸ್ಟೆಂಟ್ ಕಮಿಷನರುಗಳು.
	1	ಹುಜೂರು ಟ್ರೆಜರಿ ಆಫೀಸರು.
	2	ಬೆಂಗಳೂರು ಮತ್ತು ಮೈಸೂರು ನಗರಗಳ ಅಸಿಸ್ಟೆಂಟ್ ಕಮಿಷನರ್ ಮಾಜಿಸ್ಟ್ರೇಟುಗಳು.
	2	ರೆವಿನ್ಯೂ ಕಮಿಷನರ ಅಸಿಸ್ಟೆಂಟುಗಳು.
ಎಕ್ಸೈಸ್ ಇಲಾಖೆ	4	ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರುಗಳು.
	1	ಎಕ್ಸೈಸ್ ಕಮಿಷನರ ಹೆಡ್ ಕ್ವಾರ್ಟರ್ ಅಸಿಸ್ಟೆಂಟು.
ಸರ್ವೆ ಮತ್ತು ಸೆಟಲ್‌ಮೆಂಟ್ ಇಲಾಖೆ	5	ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ಗಳು.
ಪೊಲೀಸು ಇಲಾಖೆ	9	ಸೂಪರಿಂಟೆಂಡೆಂಟ್‌ಗಳು.
	1	ಪೊಲೀಸು ಇನ್ಸ್‌ಪೆಕ್ಟರ್ ಜನರಲ್‌ರವರ ಹೆಡ್ ಕ್ವಾರ್ಟರ್ ಅಸಿಸ್ಟೆಂಟ್.
ಜುಡಿಷಲ್ ಇಲಾಖೆ ..	3	ಸಬಾರ್ಡಿನೇಟ್ ಜಡ್ಜಿಗಳು.
	1	ಚೀಫ್ ಕೋರ್ಟ್ ರಿಜಿಸ್ಟ್ರಾರ್ ಮತ್ತು ಉದ್ಯೋಗಪ್ರಯುಕ್ತ ಚೀಫ್ ಕೋರ್ಟ್ ತೀರ್ಮಾನಗಳ ರಿಪೋರ್ಟರ್.
ಅಕೌಂಟ್ ಯಾ ಲೆಕ್ಕದ ಇಲಾಖೆ	5	ಅಸಿಸ್ಟೆಂಟ್ ಕಂಟ್ರೋಲರ್‌ಗಳು.
ಆಕಸ್ಮಿಕವಾದ ಸಂಗತಿಗಳಿಗಾಗಿಯೂ, ರಜಾ ಮೇಲೆ ಗೈರ್ ಹಾಜರಿಗಾಗಿಯೂ, ಯಾವುದಾದರೂ ಬೇರೆ ಕೆಲಸಗಳಿಗೆ ನೇಮಿಸುವುದಕ್ಕಾಗಿಯೂ, ಮತ್ತು ಕೆಲಸದಲ್ಲಿ ತರಬೇತಾಗುತ್ತಿರಬಹುದಾದ ಪ್ರೊಬೇಷನರಗಳಿಗಾಗಿಯೂ ಸೇರಿಸತಕ್ಕದ್ದು.	8	
ಜುಮ್ಲಾ ..	73	

(2) ಇದರಡಿ ಕಂಡ ಉದ್ಯೋಗಗಳು (1)ನೇ ವಾಕ್ಯದಲ್ಲಿ ಕೊಟ್ಟಿರುವ ಪಟ್ಟಿಯ ಹೊರಗೆ ಇರತಕ್ಕದ್ದು, ಅವು ಯಾವುವೆಂದರೆ, ಮ್ಯುನಿಸಿಪಾಲಿಟಿಗೋಸ್ಕರ ಪ್ರತ್ಯೇಕವಾಗಿ ಮುಕರರ್ಮಾಡಲ್ಪಟ್ಟ ವೈಸ್ ಪ್ರೆಸಿಡೆಂಟ್, ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರ್, ಅರಮನೆಯ ಕಿಲ್ಲೆಂದಿಗಳ ಚಾರ್ಜಿನಲ್ಲಿರುವ ಆಫೀಸರು, ಕೋಲಾರದ ಚಿನ್ನದ ಗಣಿಗಳ ಸ್ಪೆಷಲ್ ಮಾಜಿಸ್ಟ್ರೇಟು, ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರ ಆಫೀಸಿನ ರಿಜಿಸ್ಟ್ರಾರು, ಮತ್ತು ಈ ವಿಚಾರದಲ್ಲಿ ಸರ್ಕಾರದವರು ಆಗಿಂದಾಗ ನಮೂದಿಸಬಹುದಾದ ಇತರ ಆಫೀಸರುಗಳು.

(3) (2)ನೇ ವಾಕ್ಯದಲ್ಲಿ ಸೂಚಿಸಿರುವ ಉದ್ಯೋಗಗಳ ಪೈಕಿ ಯಾವುದಕ್ಕಾದರೂ, ಅಥವಾ ಇಷ್ಟೆಂದು ಗೊತ್ತಾಗಿ ಹೇಳುವುದಕ್ಕಾಗದ ಕಾಲದವರೆಗೆ ಅಥವಾ ದೀರ್ಘಕಾಲದವರೆಗೆ ನಿಲ್ಲಿಸಿಕೊಳ್ಳಬಹುದಾದ ವಿಶೇಷವಾದ ಕೆಲಸಕ್ಕಾಗಿ, ಅಸಿಸ್ಟೆಂಟ್

ಕವಿಷನರ ದರ್ಜೆಯಲ್ಲಿರುವ ಒಬ್ಬ ಆಫಿಸರು ಹಂಗಾಮಿಯಾಗಿ ನೇಮಿಸಲ್ಪಟ್ಟಾಗ, ಆತನನ್ನು ಬೇರೆ ಕೆಲಸದಲ್ಲಿರುವುದಾಗಿ ತೋರಿಸಿ (1)ನೆ ವಾಕ್ಯದಲ್ಲಿ ನಮೂದಾದ ಪಟ್ಟಿಯಲ್ಲಿರುವ ಉದ್ಯೋಗಗಳ ಒಟ್ಟು ಸಂಖ್ಯೆಯನ್ನು ಏಕರೀತಿಯಾಗಿ ಕಾಪಾಡುವ ಹಾಗೆ ಆತನ ಸ್ಥಳವನ್ನು ತತ್ಕಾಲಕ್ಕೆ ಖಾಯುವಾಗಿ ಭರ್ತಿ ಮಾಡಬಹುದು.

15. ಖಾಲಿಗಳಿಗೆ ಅನುಗುಣವಾಗಿ ಅರ್ಹತೆಯ ಮೇಲೆ ಚುನಾಯಿಸುವುದರಿಂದ ಅಸಿಸ್ಟೆಂಟ ಕವಿಷನರಗಳಿಗೆ ದೊರೆಯಬಹುದಾದ ಮೇಲ್ಪಟ್ಟ ಉದ್ಯೋಗಗಳು ಯಾವುವೆಂದರೆ:—

ಎಂಟು ಡೆಪ್ಯುಟಿ ಕವಿಷನರಗಳು :—

ಮೊದಲನೆ ತರಗತಿ 1,200 ರೂಪಾಯಿನ ಮೇಲೆ ...	2	ಇದಲ್ಲದೆ ಕೋಲಾರದ ಡೆಪ್ಯುಟಿ ಕವಿಷನರಿಗೆ ಸ್ಥಳೀಯ ವೇತನ 150 ರೂಪಾಯಿ ಸಹಿತ.
ಎರಡನೆ ತರಗತಿ 1,000 ರೂಪಾಯಿನ ಮೇಲೆ ...	3	
ಮೂರನೆ ತರಗತಿ 800ಕ್ಕೆ ಏರುವ 700 ರೂಪಾಯಿನ ಮೇಲೆ	3	

ಇಬ್ಬರು ಡಿಸ್ಟ್ರಿಕ್ಟ ಜಡ್ಜಿಗಳು :—

ಮೊದಲನೆ ತರಗತಿ 1,200 ರೂಪಾಯಿನ ಮೇಲೆ ...	ಪ್ರತಿ ತರಗತಿಯಲ್ಲಿಯೂ ಎರಡು ವರ್ಷಗಳಿಗೆ ಕಡಮೆಯಿಲ್ಲದೆ ನೌಕರಿ ಮಾಡಿದ ತರುವಾಯ ಅದಕ್ಕೆ ಮೇಲಿನ ತರಗತಿಗೆ ಏರತಕ್ಕದ್ದು, ಆದರೆ ಯಾವಕಾಲದಲ್ಲಿಯೂ ಮೊದಲನೆ ತರಗತಿಯಲ್ಲಿ ಒಬ್ಬರಿಗಿಂತ ಹೆಚ್ಚು ಆಫಿಸರು ಇರಕೂಡದು.
ಎರಡನೆ ತರಗತಿ 1,000 ರೂಪಾಯಿನ ಮೇಲೆ ...	
ಮೂರನೆ ತರಗತಿ 800ಕ್ಕೆ ಏರುವ 700 ರೂಪಾಯಿನ ಮೇಲೆ	

ಸಾಲಿಯಾನಾ 100 ರೂಪಾಯಿನ ಬಡತಿಗಳ ಮೇಲೆ 1,200 ರೂಪಾಯಿಗಳಿಗೆ ಏರುವ 800 ರೂಪಾಯಿನ ಮೇಲೆ ಒಬ್ಬರು ಜನರಲ ಮತ್ತು ರೆವಿನ್ಯೂ ಸೆಕ್ರೆಟರಿ—ಅವರು ಡೆಪ್ಯುಟಿ ಕವಿಷನರ ದರ್ಜೆಯ ಆಫಿಸರಾಗಿರುವ ಪಕ್ಷದಲ್ಲಿ ಸ್ಥಳೀಯ ವೇತನ 150 ರೂಪಾಯಿಗಳ ಸಹಿತ ಅವರ ದರ್ಜೆಯ ಸಂಬಳವನ್ನು ಅವರು ಹೊಂದತಕ್ಕದ್ದು.

ಸಾಲೀಯಾನಾ 40 ರೂಪಾಯಿನ ಮೇರೆ ಬಡತಿಗಳಿಂದ 800 ರೂಪಾಯಿಗಳಿಗೆ ಏರುವ 600 ರೂಪಾಯಿನ ಮೇಲೆ ಒಬ್ಬರು ಡೆಪ್ಯುಟಿ ಸೆಕ್ರೆಟರಿ.*

16. ಇಪ್ಪತ್ತೈದು ವರ್ಷಗಳಿಗೆ ಕಡಮೆಯಿಲ್ಲದೆ ನಿರಂತರವಾಗಿ ನೌಕರಿಮಾಡಿದ ತರುವಾಯ ಮೈಸೂರು ಸಿವಿಲ ಸರ್ವಿಸಿನ ಆಫಿಸರುಗಳಿಗೆ ಸರಾಸರಿ ಸಂಬಳಗಳಲ್ಲಿ ಅರ್ಧದಷ್ಟು ಪೆನಷನಿನ ಪರಮಾವಧಿಯು ವರ್ಷ ಒಂದಕ್ಕೆ 6,000 ರೂಪಾಯಾಗಿರುವುದು.

* ಪ್ರತ್ಯೇಕವಾದ ಮುಜರೈ ಸೆಕ್ರೆಟರಿಯ ಉದ್ಯೋಗವನ್ನು ಇಟ್ಟಿರುವ ವರೆಗೂ ಈ ಕೆಲಸವು ಭರ್ತಿ ಮಾಡಲ್ಪಡುವುದಿಲ್ಲ.

ತಾರೀಖು 27ನೆ ಜೂನ 1907.

ನಂ. ಜಿ. 8140—ಜಿ. ಎಂ. 12-06-69, ಸ್ಟ 1907ನೆ ಇಸವಿಯಲ್ಲಿ ಮೈಸೂರು ಸಿವಿಲ ಸರ್ವಿಸಿಗೆ ಪ್ರೊಬೇಷನರಿ ಅಸಿಸ್ಟೆಂಟ ಕವಿಷನರುಗಳನ್ನು ಸೇರಿಸುವುದಕ್ಕೋಸ್ಕರ 1907ನೆ ಇಸವಿಯ ನವೆಂಬರು 11ನೆ ತಾರೀಖು ಸೋಮವಾರವೂ ಆ ತರುವಾಯ ಕೆಲವು ದಿವಸಗಳೂ ಬೆಂಗಳೂರು ಪಬ್ಲಿಕ ಆಫಿಸ ಕಟ್ಟಡದಲ್ಲಿ, ಮಂಜೂರ್ಮಾಡಲ್ಪಟ್ಟ ಉಮೇದುವಾರರ ಸ್ಪರ್ಧಾಪೂರ್ವಕವಾದ ಪರೀಕ್ಷೆಯು ನಡೆಸಲ್ಪಡುವುದು.

2. ಪರೀಕ್ಷೆಗೆ ಬರುವ ಉಮೇದುವಾರರು 1907ನೆ ಇಸವಿಯ ನವೆಂಬರು 11ನೆ ತಾರೀಖಿನ ದಿನ ಇಪ್ಪತ್ತೈದು ವರ್ಷಗಳ ವಯಸ್ಸಿಗೆ ಮೀರಿರಕೂಡದು, ಮತ್ತು ಇಂಡಿಯಾ ದೇಶದ ಅಥವಾ ಇತರ ದೇಶದ ಯೂನಿವರ್ಸಿಟಿಯ ಕೆಲಗಳ ಗ್ರಾಡ್ಯುಯೇಟುಗಳಾಗಿರಬೇಕು; ಆದರೆ, ಉಮೇದುವಾರನು ಮೈಸೂರು ದೇಶೀಯನಾಗಿ ಅಥವಾ ಮೈಸೂರು ದೇಶದಲ್ಲಿ ವಾಸವುಳ್ಳವನಾಗಿ ಇಲ್ಲದೆ ಇದ್ದರೆ ಅವನು ಮದರಾಸಿನ ಅಥವಾ ಬೊಂಬಾಯಿನ ಯೂನಿವರ್ಸಿಟಿಯ ಗ್ರಾಡ್ಯುಯೇಟಾಗಿರಬೇಕು.

3. ಸದರೀ ಪರೀಕ್ಷೆಗೆ ಸೇರಿಸಲ್ಪಡಲಪೇಕ್ಷಿಸುವ ಉಮೇದುವಾರರು ತಾವು ಯಾವ ಐಚ್ಛಿಕ ವಿಷಯದಲ್ಲಿ ಪರೀಕ್ಷಿಸಲ್ಪಡಲು ಅಪೇಕ್ಷಿಸುತ್ತಾರೆಯೋ ಅದನ್ನೂ ತಿಳಿಸಿ 1907ನೆ ಇಸವಿಯ ಆಗಸ್ಟು 15ನೆ ತಾರೀಖಿನ ದಿನ ಅಥವಾ ಅದಕ್ಕೆ ಪೂರ್ವ ತಲಪುವಂತೆ ಬೆಂಗಳೂರಿನಲ್ಲಿರುವ ಸರ್ಕಾರಿ ಜನರಲ ಮತ್ತು ರೆವಿನ್ಯೂ ಸೆಕ್ರೆಟರಿಯವರಿಗೆ ತಮ್ಮ ಅರ್ಜಿಗಳನ್ನು ಕಳುಹಿಸತಕ್ಕದ್ದು.

ಅರ್ಜಿಗಳು ಇದಕ್ಕೆ ಸೇರಿಸಿರುವ ಎ. ನಮೂನೆಯಲ್ಲಿರತಕ್ಕದ್ದು. ಈ ನಮೂನೆಯ ಅಚ್ಚು ಪ್ರತಿಗಳನ್ನು ಬೆಂಗಳೂರಿನಲ್ಲಿರುವ ಸರ್ಕಾರಿ ಜನರಲ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿಯವರ ಕಚೇರಿಯಿಂದ ಅಥವಾ ಬೆಂಗಳೂರಿನಲ್ಲಿರುವ ವಿದ್ಯಾಭ್ಯಾಸದ ಇನ್ಸ್ಪೆಕ್ಟರ ಜನರಲವರ ಕಚೇರಿಯಿಂದ ಪಡೆಯಬಹುದು.

4. ಯಾವ ಉಮೇದುವಾರನಾಗಲಿ, ಮೈಸೂರು ಸರ್ಕಾರಕ್ಕೆ ಸೇರಿದ ಖಜಾನೆಗೆ ಐವತ್ತು ರೂಪಾಯಿಗಳ ಮೊಬಲಗನ್ನು ಸಲ್ಲಿಸಿರುವುದಾಗಿ ತಿಳಿಸುವ ಖಜಾನೆಯ ರಸೀದಿಯನ್ನಾಗಲಿ ಅಥವಾ ಬೆಂಗಳೂರಿನಲ್ಲಿರುವ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರಿಗೆ ಸಲ್ಲುವಂತೆ ಐವತ್ತು ರೂಪಾಯಿನ ತಪಾಲು ಮಣಿಆರ್ಡರನ್ನಾಗಲಿ ತನ್ನ ಅರ್ಜಿಗೆ ಸೇರಿಸಿದ್ದ ಹೊರತು ಆತನ ಹೆಸರು ರಿಜಿಸ್ಟರಿಗೆ ದಾಖಲ್ಮಾಡಿಕೊಳ್ಳಲ್ಪಡುವುದಿಲ್ಲ.

5. ಪ್ರತಿ ಉಮೇದುವಾರನೂ ತನ್ನ ಅರ್ಜಿಯ ಜತೆಯಲ್ಲಿ ಇದರಡಿ ಕಂಡ ಸರ್ಟಿಫಿಕೇಟುಗಳನ್ನೂ ಪಟ್ಟಿಯನ್ನೂ ರವಾನಿಸತಕ್ಕದ್ದು.

(1) ಒಂದು ಜನನದ ಸರ್ಟಿಫಿಕೇಟು.

ಇದು ಜನನದ ರಿಜಿಸ್ಟ್ರಾರಿಂದ ಕೊಡಲ್ಪಟ್ಟ ಸರ್ಟಿಫಿಕೇಟಾಗಿ, ಬ್ಯಾಪ್ಟಿಸಮ್ ಎಂಬ ಕ್ರೈಸ್ತಸ್ನಾನದ ಸರ್ಟಿಫಿಕೇಟಾಗಿ, ಅಥವಾ ಜಸ್ಟಿಸ್ ಆಫ್ ದಿ ಪೀಸ್ ಎಂಬ ನ್ಯಾಯಾಧಿಕಾರಿಯಿಂದ ಅಥವಾ ಮಾಜಿಸ್ಟ್ರೇಟರಿಂದ ಕೊಡಲ್ಪಟ್ಟ ಸರ್ಟಿಫಿಕೇಟಾಗಿ ಇರಬಹುದು. ಈ ನ್ಯಾಯಾಧಿಕಾರಿಯು ಅಥವಾ ಮಾಜಿಸ್ಟ್ರೇಟರು ಅರ್ಜಿದಾರನ ಜಾತಕದಿಂದ, ಅಥವಾ ಸ್ಕೂಲು ಯಾ ಪಾಠಶಾಲೆಯ ರಿಜಿಸ್ಟರುಗಳಿಂದ ಉದ್ಧರಿಸಲ್ಪಟ್ಟು ಪ್ರಮಾಣಿಸಲ್ಪಟ್ಟಿರುವ ಭಾಗಗಳಿಂದ ಅಥವಾ ಸಾಕಾದಷ್ಟು ಸಾಕ್ಷ್ಯವೆಂದು ತಾವು ಎಣಿಸಬಹುದಾದ ಇತರ ಸಾಕ್ಷ್ಯದಿಂದ ಅರ್ಜಿದಾರನು ಕೊಟ್ಟ ಜನನದ ತಾರೀಖು ಕರಾರ್ವಾಕಾಗಿದೆಯೆಂದು ತೃಪ್ತನಾದಮೇಲೆ ಮಾತ್ರವೇ ಸರ್ಟಿಫಿಕೇಟನ್ನು ಕೊಡತಕ್ಕದ್ದು.

(2) ಒಳ್ಳೆಯ ಗುಣವುಳ್ಳವನೆಂದು ಒಂದು ಸರ್ಟಿಫಿಕೇಟು.

ಈ ಸರ್ಟಿಫಿಕೇಟು 1907ನೇ ಇಸವಿಯ ಜನವರಿ 1ಕ್ಕಿಂತ ಹಿಂದಿನ ತಾರೀಖಿನದಾಗಿರಕೂಡದು, ಮತ್ತು ಕನಿಷ್ಠಪಕ್ಷ ಹಿಂದಲ ಮೂರು ವರ್ಷಗಳಿಂದಾದರೂ ಉಮೇದುವಾರನ ಆಪ್ತಪರಿಚಿತಸ್ಥರಾಗಿರುವ, ಬಂಧುವಲ್ಲದ, ಗೌರವಸ್ಥರೆಂದು ಪ್ರಸಿದ್ಧರಾದ ಒಬ್ಬ ಮನುಷ್ಯರಿಂದ ಕೊಡಲ್ಪಟ್ಟಿರತಕ್ಕದ್ದು.

(3) ಉಮೇದುವಾರನು ವಿದ್ಯಾಭ್ಯಾಸಮಾಡಿರುವ ಕಾಲೇಜು ಅಥವಾ ಕಾಲೇಜುಗಳ ಅಧಿಕಾರಿಗಳಿಂದ ಉಮೇದುವಾರನ ಅಭಿವೃದ್ಧಿಯ ಮತ್ತು ನಡತೆಯ ವಿಚಾರವಾಗಿ ಸರ್ಟಿಫಿಕೇಟು ಅಥವಾ ಸರ್ಟಿಫಿಕೇಟುಗಳು.

(4) ಉಮೇದುವಾರನ ತಂದೆಯ ಅಥವಾ ಪಾಲಕನ ಉದ್ಯೋಗವನ್ನೂ ಜನಮಂಡಲಿಯಲ್ಲಿ ಉಮೇದುವಾರನ ಮನೆತನದ ಸ್ಥಿತಿಯನ್ನೂ ತಿಳಿಸುವ ಸಾಕ್ಷ್ಯ.

(5) ಉಮೇದುವಾರನಿಗೆ ಒಳ್ಳೆಯ ದೇಹದಾರ್ಢ್ಯವುಂಟೆಂದೂ, ಎಗ್ಸಿಕ್ಯೂಟಿವ್ ಆಫೀಸರ ಚಟುವಟಿಕೆಯಾದ ಕೆಲಸಗಳಿಗೆ ಅವನು ಅರ್ಹನೆಂದೂ ಡಿಸ್ಟ್ರಿಕ್ಟು ಸಿವಿಲ್ ಸರ್ಜನಿನ ದರ್ಜೆಗೆ ಕೆಳಪಡದೆ ಇರುವ ಒಬ್ಬ ವೈದ್ಯಾಧಿಕಾರಿಯಿಂದ ಇದಕ್ಕೆ ಸೇರಿಸಿರುವ ಬಿ ನಮೂನೆಯಲ್ಲಿ ತತ್ಕಾಲೀನವಾದ ಒಂದು ಸರ್ಟಿಫಿಕೇಟು.

(6) ಉಮೇದುವಾರನು ಬಿ. ಎ. ಡಿಗ್ರಿ ಪರೀಕ್ಷೆಯಲ್ಲಿ ಯಾವಾಗ, ಮತ್ತು ಯಾವ ಶಾಖೆಗಳಲ್ಲಿ (ಯಾವುದಾದರೂ ಇದ್ದರೆ) ಮತ್ತು ಯಾವ ತರಗತಿಯಲ್ಲಿ ಅಥವಾ ತರಗತಿಗಳಲ್ಲಿ ತೇರ್ಗಡೆಯಾಗಿರುತ್ತಾನೆಂದು ತೋರಿಸುವ ಒಂದು ಪಟ್ಟಿ.

6. ರಿಜಿಸ್ಟರಿಗೆ ದಾಖಲ್ಮಾಡಿಕೊಳ್ಳಲ್ಪಟ್ಟ ಅರ್ಜಿದಾರರ ಪೈಕಿ ಶ್ರೀಮನ್ ಮಹಾರಾಜರವರಿಂದ ಮಂಜೂರ್ಮಾಡಲ್ಪಡಬಹುದಾದವರು ಮಾತ್ರವೇ ಸ್ಪರ್ಧಾಪೂರ್ವಕವಾದ ಪರೀಕ್ಷೆಗೆ ಸೇರಿಸಲ್ಪಡುವರು. 1907ನೇ ಇಸವಿಯ ಆಗಸ್ಟು 29ನೇ ತಾರೀಖಿಗೆ ವಿಹಿತವಾಗಿ ಮೈಸೂರು ಗೆಜೆಟಿನಲ್ಲಿ ಅವರ ಹೆಸರುಗಳು ಪ್ರಕಟಿಸಲ್ಪಡುವುವು.

7. ಹಿಂದಿನ ಕಡೇ ಪರಿಚ್ಛೇದದ ಪ್ರಕಾರ ಪ್ರಕಟಿಸಲ್ಪಡುವ ಪಟ್ಟಿಯಲ್ಲಿ ಹೆಸರಿರುವ ಮಂಜೂರ್ಮಾಡಲ್ಪಟ್ಟ ಉಮೇದುವಾರರು ಸರ್ಕಾರದಿಂದ ಪ್ರಕಟಿಸಲ್ಪಡುವ ದಿನ ಬೆಂಗಳೂರಿನಲ್ಲಿ ಒಂದು ಮೆಡಿಕಲ್ ಬೋರ್ಡ್ ಯಾ ವೈದ್ಯರ ಸಭೆಯ ಮುಂದೆ ಹಾಜರಾಗತಕ್ಕದ್ದು ಮತ್ತು ಅವರ ಪೈಕಿ ವೈದ್ಯರ ಸಭೆಯಿಂದ ಮಂಜೂರ್ಮಾಡಲ್ಪಡುವವರು ಮಾತ್ರವೇ ಪರೀಕ್ಷೆಗೆ ಹೋಗಲು ಅಪ್ಪಣೆ ಕೊಡಲ್ಪಡುವರು.

8. ಶ್ರೀಮನ್ ಮಹಾರಾಜರವರಿಂದ ಮಂಜೂರ್ಮಾಡಲ್ಪಡದೆ ಇರಬಹುದಾದ ಅಥವಾ ಶ್ರೀಮನ್ ಮಹಾರಾಜರವರಿಂದ ಮಂಜೂರ್ಮಾಡಲ್ಪಟ್ಟು ವೈದ್ಯರ ಸಭೆಯಿಂದ ಮಂಜೂರ್ಮಾಡಲ್ಪಡದೆ ಇರಬಹುದಾದ ಯಾವನಾದರೂ ಉಮೇದುವಾರನು ಕೊಟ್ಟಿರುವ ಫೀಜು ವಾಪಸು ಕೊಡಲ್ಪಡುವುದು.

9. ಪರೀಕ್ಷೆಗೆ ಇದರಡಿ ಕಂಡ ಆವಶ್ಯಕ ಮತ್ತು ಐಚ್ಛಿಕ ವಿಷಯಗಳು ಸೇರಿರತಕ್ಕದ್ದು.

	ಕಾಲ.	ಅಂಕಗಳು.	
		ಪತ್ರಿಕೆ.	ವಾಚಾ.
ಆವಶ್ಯಕ ವಿಷಯಗಳು.			
ಎ. ಗುಂಪು.			
1. ವಿವರಿಸಲ್ಪಟ್ಟ ಮೂರು ವಿಷಯಗಳ ಪೈಕಿ ಒಂದನ್ನು ಕುರಿತು ಪ್ರಬಂಧರಚನೆ.	3 ಗಂಟೆಗಳು ...	150	
2. ಪರೀಕ್ಷೆಗೆ ಪೂರ್ವ ಮೂರು ತಿಂಗಳಿಗೆ ಮೀರದೆ ವಿಧಿಸಲ್ಪಡುವ, ಈಚೆಗೆ ಪ್ರಕಟವಾದ ಒಂದು ಅಥವಾ ಅಧಿಕ ಪುಸ್ತಕಗಳು—			
1ನೆ ಪತ್ರಿಕೆ	2 ಸದರೀ ...	100	50
2ನೆ ಪತ್ರಿಕೆ	2 ಸದರೀ ...	100	
ಬಿ. ಗುಂಪು.			
3. ಇಂಗ್ಲಿಷ ಭಾಷೆ ಮತ್ತು ಗ್ರಂಥ ಸಮುದಾಯ—			
1ನೆ ಪತ್ರಿಕೆ	3 ಸದರೀ ...	150	50
2ನೆ ಪತ್ರಿಕೆ	2 ಸದರೀ ...	100	
ಐಚ್ಛಿಕ ವಿಷಯಗಳು.			
1. ಮಾಥಮಾಟಿಕ್ಸ್ ಯಾ ಗಣಿತಶಾಸ್ತ್ರ—			
ಪ್ಯೂರ್ ಯಾ ಶುದ್ಧ ಗಣಿತಶಾಸ್ತ್ರ	3 ಸದರೀ ...	250	
ಮಿಕ್ಸೆಡ್ ಯಾ ಮಿಶ್ರ ಸದರೀ	3 ಸದರೀ ...	250	
2. ಫಿಸಿಕಲ್ ಸಯನ್ಸ್ ಯಾ ಪದಾರ್ಥ ವಿಜ್ಞಾನ—			
ಫಿಸಿಕ್ಸ್ ಯಾ ಪದಾರ್ಥವಿಜ್ಞಾನಶಾಸ್ತ್ರ, ಪ್ರಥಮ ಪತ್ರಿಕೆ ...	3 ಸದರೀ ...	165	
ಸದರೀ ಎರಡನೆ ಪತ್ರಿಕೆ ...	3 ಸದರೀ ...	165	
ಸದರೀ ಮೂರನೆ ಪತ್ರಿಕೆ ...	3 ಸದರೀ ...	170	
ಇದಾಗಲಿ, ಅಥವಾ—			
ಕೆಮಿಸ್ಟ್ರಿ ಯಾ ರಸಾಯನಶಾಸ್ತ್ರ, ಪ್ರಥಮ ಪತ್ರಿಕೆ ...	3 ಸದರೀ ...	150	
ಸದರೀ ಎರಡನೆ ಪತ್ರಿಕೆ ...	3 ಸದರೀ ...	150	
ಕಾರ್ಯತಃ ಪರೀಕ್ಷೆ		200	
ಇದಾಗಲಿ.			
3. ನಾಚುರಲ್ ಸಯನ್ಸ್ ಯಾ ಪ್ರಾಕೃತಿಕಶಾಸ್ತ್ರ—			
ಸಾಮಾನ್ಯ ಜೀವಶಾಸ್ತ್ರ (ಬಯಾಲಜಿ) ...	3 ಗಂಟೆಗಳು ...	150	
ಮತ್ತು ಬಾಟನಿ ಯಾ ಓಷಧಿಶಾಸ್ತ್ರವಾಗಲಿ, ಅಥವಾ ಮೃಗಗಳ ಶರೀರ ಧರ್ಮಶಾಸ್ತ್ರವಾಗಲಿ, ಅಥವಾ ಜಂತುಶಾಸ್ತ್ರ (ಜೂಆಲಜಿ) ಯಾಗಲಿ ಅಥವಾ ಭೂಗರ್ಭಶಾಸ್ತ್ರ (ಜಿಯಾಲಜಿ).	3 ಸದರೀ ...	150	
ಕಾರ್ಯತಃ ಪರೀಕ್ಷೆ ...		200	
4. ಮನಶ್ಶಾಸ್ತ್ರ ಮತ್ತು ನೀತಿಶಾಸ್ತ್ರ—			
ಸೈಕಾಲಜಿ ಯಾ ಆತ್ಮತತ್ವವಿದ್ಯಾ ಮತ್ತು ಮೆಟಫಿಸಿಕ್ಸ್ ಯಾ ಆನ್ವೀಕ್ಷಿಕೀ ಶಾಸ್ತ್ರ.	3 ಗಂಟೆಗಳು ...	200	50
ತರ್ಕಶಾಸ್ತ್ರ ಮತ್ತು ನೀತಿಶಾಸ್ತ್ರ	3 ಸದರೀ ...	200	50
5. ಚರಿತ್ರೆ—			
ಇಂಡಿಯಾ ದೇಶದ ಚರಿತ್ರೆ, ಇಂಗ್ಲೆಂಡಿನ ಕಾನ್ಸ್ಟಿಟ್ಯೂಷನಲ್ ಯಾ ವ್ಯವಸ್ಥಾನುರೂಪವಾದ ಚರಿತ್ರೆ, ಮತ್ತು 1715ರಿಂದ 1815ರ ವರೆಗೆ ಸಾಮಾನ್ಯ ನವೀನ ಚರಿತ್ರೆ.	3 ಸದರೀ ...	200	50
ರಾಜನೀತಿಶಾಸ್ತ್ರ, ಅರ್ಥಶಾಸ್ತ್ರ, ತಕ್ಕಷ್ಟು ಕಾರ್ಯನಿರ್ವಾಹಕ ಸಂಬಂಧವಾದ ಚರಿತ್ರೆಯ ತಿಳುವಳಿಕೆ ಸಹಿತ.	3 ಸದರೀ ...	200	50

ಐಚ್ಛಿಕ ವಿಷಯಗಳಲ್ಲಿ ಪರೀಕ್ಷೆಗಳು ವ್ಯಾಪ್ತಿಯಲ್ಲಿ ಇಂಡಿಯಾ ದೇಶದ ಯೂನಿವರ್ಸಿಟಿಗಳ ಪೈಕಿ ಯಾವುದಾದರೂ ಒಂದರ ಬಿ. ಎ. ಪರೀಕ್ಷೆಗಳಿಗೆ ಸದೃಶವಾಗಿರುವವು. ಆದರೆ ಪ್ರಶ್ನೆ ಪತ್ರಿಕೆಗಳು ಸ್ವಲ್ಪ ಅಧಿಕ ಪರಿಮಾಣದವುಗಳಾಗಿರುವವು. ಪ್ರತಿ ಪತ್ರಿಕೆಯಲ್ಲಿಯೂ ಹಾಕಿರುವ ಪ್ರಶ್ನೆಗಳು ಪೂರಾ ಅಂಕಗಳನ್ನು ಪಡೆಯುವುದಕ್ಕಾಗಿ ಉತ್ತರ ಬರೆಯಲವಶ್ಯಕವಾಗಿರುವಷ್ಟಕ್ಕಿಂತ ಕನಿಷ್ಠಪಕ್ಷ ಎರಡರಷ್ಟು ಹೆಚ್ಚಾಗಿರತಕ್ಕದ್ದು.

10. ಒಂದು ಐಚ್ಛಿಕ ವಿಷಯಕ್ಕಿಂತ ಅಧಿಕವಾಗಿ ತೆಗೆದುಕೊಳ್ಳಲು ಯಾವ ಉಮೇದುವಾರನಿಗೂ ಅಪ್ಪಣೆ ಕೊಡಲ್ಪಡುವುದಿಲ್ಲ. ಬರಹಮೂಲಕವಾದ ಪರೀಕ್ಷೆಯಲ್ಲಿ ಪರೀಕ್ಷಕರಿಗೆ ಸಮರ್ಪಕವಾಗಿ ತೋರಿಬಂದ ಉಮೇದುವಾರರು ಮಾತ್ರವೇ ವಾಚಾ

ಪರೀಕ್ಷೆಗೆ ಅಥವಾ ಕಾರ್ಯತಃ ಮಾಡಲ್ಪಡುವ ಪರೀಕ್ಷೆಗೆ ಹಾಜರಾಗಲು ಅಪೇಕ್ಷಿಸಲ್ಪಡುವರು. ವಾಚಾ ಪರೀಕ್ಷೆ ಮತ್ತು ಕಾರ್ಯತಃ ಪರೀಕ್ಷೆಗಳು, ಬರಹ ಮೂಲಕವಾದ ಪರೀಕ್ಷೆಯ ಕಾಲದಲ್ಲಿ ಉಮೇದುವಾರರಿಗೆ ಕ್ರಮವಾಗಿ ಇಸ್ತಿಹಾರಿನ ಮೂಲಕ ತಿಳಿಯಪಡಿಸಲ್ಪಡುವ ಮೇರೆ ಬೆಂಗಳೂರಿನಲ್ಲಾಗಲಿ ಅಥವಾ ಮದರಾಸಿನಲ್ಲಾಗಲಿ ನಡೆಸಲ್ಪಡುವವು.

11. ಬರಹ ಮೂಲಕವಾದ ಪರೀಕ್ಷೆಗಳು ಈ ಕೆಳಗೆ ಕಂಡ ಪಟ್ಟಿಯಲ್ಲಿ ವಿವರಿಸಿರುವ ಕಾಲದ ಮತ್ತು ವಿಷಯಗಳ ಕ್ರಮದಲ್ಲಿ ನಡೆಸಲ್ಪಡತಕ್ಕದ್ದು:—

ದಿವಸ.	ಗಂಟೆಗಳು.	ವಿಷಯಗಳು.
1907ನೆ ಇಸವಿಯ ನವೆಂಬರು 11ನೆ ಸೋಮವಾರ.	ಪೂರ್ವಾಹ್ನ 10 ಗಂಟೆಯಿಂದ ಅಪರಾಹ್ನ 1 ಘಂಟೆಯುವರೆಗೆ.	ಇಂಗ್ಲಿಷ್ ಪ್ರಬಂಧರಚನೆ.
	ಅಪರಾಹ್ನ 2 ಗಂಟೆಯಿಂದ 5 ಗಂಟೆಯ ವರೆಗೆ.	ಇಂಗ್ಲಿಷ್ ಭಾಷೆ ಮತ್ತು ಕವಿಚರಿತ್ರೆ ಪ್ರಥಮ ಪತ್ರಿಕೆ.
1907ನೆ ಇಸವಿಯ ನವೆಂಬರು 12ನೆ ಮಂಗಳವಾರ.	ಪೂರ್ವಾಹ್ನ 10 ಗಂಟೆಯಿಂದ ಮಧ್ಯಾಹ್ನ 12 ಗಂಟೆಯುವರೆಗೆ.	ಇಂಗ್ಲಿಷ್ ಭಾಷೆ ಮತ್ತು ಗ್ರಂಥ ಸಮುದಾಯ, ಎರಡನೆ ಪತ್ರಿಕೆ.
	ಅಪರಾಹ್ನ 1 ಗಂಟೆಯಿಂದ 3 ಗಂಟೆಯ ವರೆಗೆ.	ವಿಧಿಸಲ್ಪಟ್ಟ ಪುಸ್ತಕ ಅಥವಾ ಪುಸ್ತಕಗಳು, ಪ್ರಥಮ ಪತ್ರಿಕೆ.
	ಅಪರಾಹ್ನ 3-30 ಗಂಟೆಯಿಂದ 5-30 ಗಂಟೆಯುವರೆಗೆ.	ವಿಧಿಸಲ್ಪಟ್ಟ ಪುಸ್ತಕ ಅಥವಾ ಪುಸ್ತಕಗಳು, ಎರಡನೆ ಪತ್ರಿಕೆ.
1907ನೆ ಇಸವಿಯ ನವೆಂಬರು 13ನೆ ಬುಧವಾರ.	ಪೂರ್ವಾಹ್ನ 10 ಘಂಟೆಯಿಂದ ಅಪರಾಹ್ನ 1 ಗಂಟೆಯುವರೆಗೆ.	ಐಚ್ಛಿಕ ವಿಷಯ, ಪ್ರಥಮ ಪತ್ರಿಕೆ.
	ಅಪರಾಹ್ನ 2 ಗಂಟೆಯಿಂದ 5 ಗಂಟೆವರೆಗೆ.	ಐಚ್ಛಿಕ ವಿಷಯ, ಎರಡನೆ ಪತ್ರಿಕೆ.
1907ನೆ ಇಸವಿಯ ನವೆಂಬರು 14ನೆ ಗುರುವಾರ.	ಪೂರ್ವಾಹ್ನ 10 ಗಂಟೆಯಿಂದ ಅಪರಾಹ್ನ 1 ಗಂಟೆಯುವರೆಗೆ.	ಐಚ್ಛಿಕ ವಿಷಯ, ಫಿಸಿಕ್ಸ್, ಮೂರನೆ ಪತ್ರಿಕೆ

ವಾಚಾ ಪರೀಕ್ಷೆ ಮತ್ತು ಕಾರ್ಯತಃ ಪರೀಕ್ಷೆಗಳ ದಿವಸಗಳೂ, ಗಂಟೆಗಳೂ ಬರಹ ಮೂಲಕವಾದ ಪರೀಕ್ಷೆಯ ಕಾಲದಲ್ಲಿ ತಿಳಿಸಲ್ಪಡುವವು.

12. ಆವಶ್ಯಕ ವಿಷಯಗಳ ಪೈಕಿ ಎ. ಗುಂಪಿನಲ್ಲಿ ಅಂಕಗಳ ಒಟ್ಟು ಸಂಖ್ಯೆಯ ಪೈಕಿ ಐದರಲ್ಲಿ ಎರಡಂಶಕ್ಕೆ ಕಡಮೆಯಿಲ್ಲದಷ್ಟನ್ನೂ, ಮತ್ತು ಬಿ. ಗುಂಪಿನಲ್ಲಿ ಅಂಕಗಳ ಒಟ್ಟು ಸಂಖ್ಯೆಯ ಪೈಕಿ ಮೂರರಲ್ಲಿ ಒಂದಂಶಕ್ಕೆ ಕಡಮೆಯಿಲ್ಲದಷ್ಟನ್ನೂ, ಚುನಾಯಿಸಲ್ಪಟ್ಟ ಐಚ್ಛಿಕ ವಿಷಯದಲ್ಲಿ ಅಂಕಗಳ ಒಟ್ಟು ಸಂಖ್ಯೆಯ ಪೈಕಿ ಮೂರರಲ್ಲಿ ಒಂದಂಶಕ್ಕೆ ಕಡಮೆಯಿಲ್ಲದಷ್ಟನ್ನೂ ಪಡೆಯುವ ಉಮೇದುವಾರರು ಅವರವರು ಪಡೆದ ಒಟ್ಟು ಅಂಕಗಳ ಕ್ರಮದಲ್ಲಿ ದಾಖಲ್ಮಾಡಲ್ಪಡುವರು. ಹಾಗೆ ದಾಖಲಾದ ಉಮೇದುವಾರರ ಪಟ್ಟಿಯು ಸರ್ಕಾರದವರಿಗೆ ಕಳುಹಿಸಲ್ಪಡುವುದು.

13. ತೇರ್ಗಡೆಯಾದ ಉಮೇದುವಾರರ ಪಟ್ಟಿಯ ಮೇಲ್ಭಾಗದಲ್ಲಿ ಇರಬಹುದಾದ ಇಬ್ಬರು ಮೈಸೂರು ಸಿವಿಲ್ ಸರ್ವಿಸ್ಸಿಗೆ ಸೇರಿಸಲ್ಪಟ್ಟು ತಿಂಗಳಿಗೆ 200 ರೂಪಾಯಿ ತಲಬಿನ ಮೇಲೆ ಎ. ಪಟ್ಟಿಯ 5ನೆ ತರಗತಿಯ ಅಸಿಸ್ಟೆಂಟ್ ಕಮಿಷನರುಗಳಾಗಿ ದಾಖಲ್ಮಾಡಲ್ಪಟ್ಟು ಎರಡು ವರ್ಷಗಳ ವರೆಗೆ ಅಜಮಾಯಿಷಿ ತರೀಕು ಇರುವುದಾಗಿ ಭಾವಿಸಲ್ಪಡುವರು. ಈ ಕಾಲದಲ್ಲಿ ಅವರು ಮನಸ್ಸುಕೊಟ್ಟು ತಮ್ಮ ಕೆಲಸವನ್ನು ಮಾಡುವ ಬಗ್ಗೆ ಸಮರ್ಪಕವಾದ ರುಜುವಾತನ್ನು ಕೊಡುವರೆಂದು ನಿರೀಕ್ಷಿಸಲ್ಪಡುವುದು. ಮತ್ತು ಅವರು—

(1) ಕುದುರೆ ಸವಾರಿಯಲ್ಲಿ ಪರೀಕ್ಷೆಯಲ್ಲಿಯೂ,

(2) ತತ್ಕಾಲದಲ್ಲಿ ಜಾರಿಯಲ್ಲಿರುವ ನಿಬಂಧನೆಗಳ ಮೇರೆ ಇಲಾಖೆಯ ನೌಕರಿಗೆ ಸಂಬಂಧಪಟ್ಟ ಪರೀಕ್ಷೆಯಲ್ಲಿಯೂ,

ಬಿ. ಎ. ಪರೀಕ್ಷೆಯಲ್ಲಿ ಐಚ್ಛಿಕ ಭಾಷೆಯನ್ನಾಗಿ ಕನ್ನಡವನ್ನು ತೆಗೆದುಕೊಳ್ಳದೆ ಇದ್ದರೆ ಕನ್ನಡದಲ್ಲಿ ವಿಧಿಸಲ್ಪಟ್ಟ ಪರೀಕ್ಷೆಯಲ್ಲಿಯೂ — ತೇರ್ಗಡೆಯಾಗತಕ್ಕದ್ದು.

ಮೊದಲ ಎರಡು ವರ್ಷಗಳು ಮುಗಿಯುವುದರೊಳಗೆ ಮೇಲ್ಕಂಡ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದಕ್ಕೆ ತಪ್ಪಿದ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರಿಗೆ ಮತ್ತೊಂದು ವರ್ಷದ ವಾಯಿದೆಯು ದಯೆಯಿಂದ ಕೊಡಲ್ಪಡುವುದು. ಮೂರನೆಯ ವರ್ಷದಲ್ಲಿ ತೇರ್ಗಡೆಯಾಗಲು ತಪ್ಪಿದರೆ ಆತನ ಹೆಸರು ಅಸಿಸ್ಟೆಂಟ್ ಕಮಿಷನರುಗಳ ಪಟ್ಟಿಯಿಂದ ತೆಗೆದುಹಾಕಲ್ಪಡುವುದು.

14. ಮೇಲ್ಕಂಡ ಮೇರೆ ಸಂಪೂರ್ಣವಾಗಿ ಯೋಗ್ಯತೆಯನ್ನು ಹೊಂದಿದಾಗ, ಮನಸ್ಸಿಟ್ಟು ಕೆಲಸ ಮಾಡುವುದಾಗಿ ಸಮರ್ಪಕವಾದ ರುಜುವಾತನ್ನು ಕೊಟ್ಟ ಬಳಿಕ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರು ಎ. ಪಟ್ಟಿಯಲ್ಲಿ 250 ರೂಪಾಯಿನ ಮೇಲೆ 5ನೆ ತರಗತಿಯ ಅಸಿಸ್ಟೆಂಟ್ ಕಮಿಷನರಾಗಿ ಖಾಯಂ ಮಾಡಲ್ಪಟ್ಟು ತರುವಾಯ ಕೆಳಗೆ ತೋರಿಸಿರುವ ಪರಿಮಾಣದ ಮೇರೆ ಏರುವನು :—

ಅಜಮಾಯಿಷಿ ತರೀಕಿನ ಕಾಲವಲ್ಲದೆ 5ನೆ ತರಗತಿಯಲ್ಲಿ ಒಂದು ವರ್ಷ ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯ,	300 ರೂಪಾಯಿ ಸಂಬಳವುಳ್ಳ 4ನೆ ತರಗತಿಯ ಅಸಿಸ್ಟೆಂಟ್ ಕಮಿಷನರ್ ಕೆಲಸಕ್ಕೆ;
4ನೆ ತರಗತಿಯಲ್ಲಿ ಮೂರು ವರ್ಷಗಳು ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯ,	350 ರೂಪಾಯಿ ಸಂಬಳವುಳ್ಳ 3ನೆ ತರಗತಿಯ ಅಸಿಸ್ಟೆಂಟ್ ಕಮಿಷನರ್ ಕೆಲಸಕ್ಕೆ;
3ನೆ ತರಗತಿಯಲ್ಲಿ ಮೂರು ವರ್ಷಗಳು ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯ,	400 ರೂಪಾಯಿ ಸಂಬಳವುಳ್ಳ 2ನೆ ತರಗತಿಯ ಅಸಿಸ್ಟೆಂಟ್ ಕಮಿಷನರ್ ಕೆಲಸಕ್ಕೆ;
2ನೆ ತರಗತಿಯಲ್ಲಿ ಮೂರು ವರ್ಷಗಳು ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯ,	450 ರೂಪಾಯಿ ಸಂಬಳವುಳ್ಳ 1ನೆ ತರಗತಿಯ ಅಸಿಸ್ಟೆಂಟ್ ಕಮಿಷನರ್ ಕೆಲಸಕ್ಕೆ.

ಸಂಸ್ಥಾನದ ಇನ್ನೂ ಮೇಲ್ಪಟ್ಟ ಕೆಲಸಗಳಿಗೆ ಬಡತಿಗಳು ಖಾಲಿಗಳಿಗೆ ಅನುಗುಣವಾಗಿಯೂ ಯೋಗ್ಯತಾನುಸಾರವಾಗಿ ಚುನಾಯಿಸುವುದರಿಂದಲೂ ಮಾಡಲ್ಪಡುವುವು.

ಪರಿಶಿಷ್ಟ ಎ.

1907ನೆ ಇಸವಿಯ ನವೆಂಬರು 11ನೆ ತಾರೀಖಿನ ದಿನವೂ ಆ ತರುವಾಯ ಕೆಲವು ದಿವಸಗಳೂ ನಡೆಸಲ್ಪಡುವ ಮೈಸೂರು ಸಿವಿಲ್ ಸರ್ವಿಸಿನ ಸ್ಪರ್ಧಾಪೂರ್ವಕವಾದ ಪರೀಕ್ಷೆಗೆ ಹೋಗುವುದಕ್ಕೆ ಅಪ್ಪಣೆ ಪಡೆಯಲು ಅರ್ಜಿಯ ನಮೂನೆ:—

ಉಮೇದುವಾರನ ಹೆಸರು ಪೂರ್ತಿಯಾಗಿ.	ವಯಸ್ಸು ಮತ್ತು ಜನನದ ತಾರೀಖು.	ಜನನದ ಸ್ಥಳ.	ವಾಡಿಕೆಯಾಗಿ ವಾಸಮಾಡುವ ಸ್ಥಳ.	ತಂದೆಯ ಅಥವಾ ಇತರ ಪಾಲಕನ ಹೆಸರು ಮತ್ತು ಉದ್ಯೋಗ.	ತಂದೆಯು ಅಥವಾ ಇತರ ಪಾಲಕನು ವಾಡಿಕೆಯಾಗಿ ವಾಸಮಾಡುವ ಸ್ಥಳ.	ಉಮೇದುವಾರನ ವಂಶ ಅಥವಾ ಜಾತಿ.	ಈಗಿನ ಸ್ಥಿತಿ ಉದ್ಯೋಗ ಅಥವಾ ವಿಳಾಸ.	ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾದ ತಾರೀಖು ಅಥವಾ ಬಿ. ಎ. ಪರೀಕ್ಷೆಯ ಶಾಖೆಗಳಲ್ಲಿ ಬೇರೆಬೇರೆ ವರ್ಷಗಳಲ್ಲಿ ತೇರ್ಗಡೆಯಾಗಿದ್ದರೆ ಹಾಗೆ ತೇರ್ಗಡೆಯಾದ ತಾರೀಖುಗಳು.	ಉಮೇದುವಾರನು ಇನ್ನು ಯಾವ ಯೂನಿವರ್ಸಿಟಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿದಾನೆ ಎಂಬುವುದು, ಅವುಗಳಲ್ಲಿ ತೇರ್ಗಡೆಯಾದ ತಾರೀಖುಗಳ ಸಮೇತ.	ಯೂನಿವರ್ಸಿಟಿ ಪರೀಕ್ಷೆಗಳಿಗೆ ಉಮೇದುವಾರನು ಎಲ್ಲಿ ಓದಿದನೋ ಆ ಕಾಲೇಜು ಯಾ ಕಾಲೇಜುಗಳು.	ಮೈಸೂರು ಸಂಸ್ಥಾನದಲ್ಲಿ ಉಮೇದುವಾರನಿಗೆ ಏನಾದರೂ ಸ್ವತ್ತು ಇದ್ದರೆ ಅದು.	ಉಮೇದುವಾರನು ಪರೀಕ್ಷಿಸಲ್ಪಡಲಪೇಕ್ಷಿಸುವ ಐಚ್ಛಿಕ ವಿಷಯ.	ಉಮೇದುವಾರನಿಂದ ಕಳುಹಿಸಲ್ಪಟ್ಟ ಯೋಗ್ಯತಾ ಪತ್ರಿಕೆಗಳು.

ತಾರೀಖು. ಬೆಂಗಳೂರಿಗೆ— ದಸ್ತಖತ್ತು.

ಮೈಸೂರು ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ

ಸೆಕ್ರೆಟರಿಯವರಿಗೆ—

ಪರಿಶಿಷ್ಟ ಬಿ.

ದೇಹವು ದೃಢವಾಗಿರುವ ಬಗ್ಗೆ ಕೊಡುವ ಸರ್ಟಿಫಿಕೇಟಿನ ನಮೂನೆ.

....ನ್ನು ನಾನು ಪರೀಕ್ಷಿಸಿರುತ್ತೇನೆಂದೂ, ಎಗ್ಸಿಕ್ಯೂಟಿವ್ ಯಾ ಕಾರ್ಯನಿರ್ವಾಹಕ ಅಧಿಕಾರಿಯ ಚಟುವಟಿಕೆಯಾದ ಕೆಲಸಗಳನ್ನು ಮಾಡುವುದಕ್ಕೆ ಆತನನ್ನು ಅಯೋಗ್ಯ ನನ್ನಾಗಿ ಮಾಡುವ ಯಾವ ಜಾಡ್ಯವನ್ನಾಗಲಿ, ದೇಹದೊಡನೆ ಹುಟ್ಟಿ ಬಂದ ಜಾಡ್ಯವನ್ನಾಗಲಿ ಅಶಕ್ತಿಯನ್ನಾಗಲಿ ಕಾಣಲಿಲ್ಲವೆಂದೂ ನಾನು ಇದರಿಂದ ಸರ್ಟಿಫೈ ಮಾಡುತ್ತೇನೆ. ಆತನಿಗೆ ಒಳ್ಳೆಯ ದೃಢವಾದ ದೇಹವಿರುವುದಾಗಿ ನಾನು ಎಣಿಸುತ್ತೇನೆ.

ದಸ್ತಖತು ....

ಉದ್ಯೋಗದ ಹೆಸರು } ....
ಮತ್ತು ವಿಳಾಸ } ....

ತಾರೀಖು ....

ತಾರೀಖು 26ನೆ ಜೂನ್ 1907.

ನಂ. 12224—ಸ್ಯಾನಿಟರಿ 66-06-53, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :— ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವದು.

ಸ್ಥಳ.	ತಾಲ್ಲೂಕು.
ಚಿಕ್ಕೊಳಿ	ಬೇಲೂರು.

ತಾರೀಖು 26ನೆ ಜೂನ್ 1907.

ನಂ. 12226—ಸ್ಯಾನಿಟರಿ 56-06-6, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗುತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಶಿರವಲಾಲು	ಚಿಕ್ಕಮಗಳೂರು.
ಹಳುವಳ್ಳಿ	ಡಿಟ್ಟೋ
ಕುನ್ನಾಳ	ಡಿಟ್ಟೋ
ಬಿಗ್ಗನಹಳ್ಳಿ	ಡಿಟ್ಟೋ
ಮಳಲೂರು	ಡಿಟ್ಟೋ
ಮತ್ತಿಕೆರೆ ...	ಡಿಟ್ಟೋ
ದಂಬದಹಳ್ಳಿ	ಡಿಟ್ಟೋ
ಅತ್ತಿಗನಾಳ್	ತರೀಕೆರೆ.

ತಾರೀಖು 3ನೆ ಜುಲೈ 1907.

ನಂ. 47–ಸ್ಯಾನಿಟರಿ 66-06-55, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುಪ್ರದೇನಂದರೆ :— ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಹೊಸೂರು ...	ಆಲ್ಲೂರು ಸಬ್ ತಾಲ್ಲೂಕು.
ಬಾಚನಹಳ್ಳಿ	ಡಿಟ್ಟೋ
ನಿಡ್ನೂರು	ಡಿಟ್ಟೋ
ಕೆಂದೂರು	ಡಿಟ್ಟೋ

ತಾರೀಖು 3ನೆ ಜುಲೈ 1907.

ನಂ. 49—ಸ್ಯಾನಿಟೆರಿ 56-06—8, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿ ಪಡಿಸುವುದೇನಂದರೆ:—ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ಸ್ ಎಂಬ ಸ್ಥಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ ಫೈಲ್ 21—96 ಮತ್ತು ನಂಬರ 9384—ಮಿಸಲೇನಿಯಸ ಫೈಲ್ 21—96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಕಂಚಿಗಾರನಹಳ್ಳಿ ...	ಕಡೂರು.
ಕಬ್ಬಿಕೆರೆ ...	ಚಿಕ್ಕಮಗಳೂರು.
ರಾಮದೇವರಹಳ್ಳಿ ...	ಡಿಟೋ.
ಮತ್ತಾವರ ...	ಡಿಟೋ.
ಕಲ್ಲಹಳ್ಳಿ ...	ಡಿಟೋ.
ಮಾಗಡಿ ...	ಡಿಟೋ.

ತಾರೀಖು 3ನೆ ಜುಲೈ 1907.

ನಂ. 51—ಸ್ಯಾನಿಟೆರಿ 21-06—145, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿ ಪಡಿಸುವುದೇನಂದರೆ:—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಉತ್ಸವಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು. ಇಂದ.	ತಾರೀಖು. ವರೆಗೆ.	ಅಧಿಕಾರ.
ಆದಿಕೃತ್ತಿಕೋತ್ಸವ.	ತಿರುತಣ್ಣಿ ...	...	ದಕ್ಷಿಣ ಆರ್ಕಾಡು.	28—7—07	4—8—07 ಉಭಯ ದಿನಗಳೂ ಸೇರಿ.	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1907ನೆ ಇಸವಿ ಜೂನ್ 26ನೆ ಮರ್ಕ್ಯೂಂ 684ನೆ ಮೆಮೊ ಪ್ರಕಾರ.
ಬಾಬಯ್ಯನ ಉರಸು.	ಪೆನುಗೊಂಡೆ.	ಪೆನುಗೊಂಡೆ.	ಅನಂತಪುರ.	16—7—07	27—7—07 ಉಭಯ ದಿನಗಳೂ ಸೇರಿ.	ಡಿಟೋ ನಂಬರ 686

ತಾರೀಖು 25ನೆ ಜೂನ್ 1907.

ನಂ. ಜಿ. 8023—ಜಿ. ಎಂ. 344-06—3, ಮೈಸೂರು ಸೀಮೆಯೊಳಗೆ ಮತ್ತು ಬೆಂಗಳೂರು ಸಿವಿಲ್ ಮತ್ತು ಮಿಲಿಟೆರಿ ಸ್ಟೇಷನ್ ಯಾ ದಂಡಿನ ಜೊತೆಗೆ ವಿವಾಹಗಳನ್ನು ಮಾಡಿಸುವದಕ್ಕೂ ವಿವಾಹದ ಸರ್ಟಿಫಿಕೇಟುಗಳನ್ನು ಕೊಡುವುದಕ್ಕೂ, ವೆಸ್ಲಿಯನ್ ಮಿಷನಿಗೆ ಸೇರಿದ ರೆವೆರೆಂಡ ಜಿ. ಸಿ. ವಾಕರ ಬಿ. ಎ., ಯವರಿಗೆ 1900ನೆ ಇಸವಿಯ ಫೆಬ್ರುವರಿ 12ನೆ ತಾರೀಖಿನ 9201—267-92ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ಲೈಸೆನ್ಸನ್ನು ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1872ನೆ ಇಸವಿಯ ಇಂಡಿಯಾ ದೇಶದ ಕ್ರೀಸ್ತರ ವಿವಾಹಾಚರಣೆಯನ್ನು ಕುರಿತ ಆಕ್ಟಿನ 6ನೆ ಮತ್ತು 9ನೆ ಪ್ರಕರಣಗಳ ಪ್ರಕಾರ ಇದರಿಂದ ರದ್ದು ಮಾಡಿರುತ್ತಾರೆ.

ತಾರೀಖು 26ನೆ ಜೂನ್ 1907.

ನಂ. ಜಿ. 8108—ಜಿ. ಎಂ. 344-06—5, ಇದರಿಂದ ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ:—1890ನೆ ಇಸವಿಯ ಆಗಸ್ಟು 6ನೆ ತಾರೀಖಿನ 175ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ಮೈಸೂರು ಸೀಮೆಗೆ ವಿವಾಹದ ರಿಜಿಸ್ಟ್ರಾರುಗಳಾಗಿ ನೇಮಕ ಮಾಡಲ್ಪಟ್ಟ, ವೆಸ್ಲಿಯನ್ ಮಿಷನಿಗೆ ಸೇರಿದ ರೆವೆರೆಂಡ ಸ್ಯಾಮ್ಯುಯಲ್ ನತೇನಿಯಲ್ ಮತ್ತು ರೆವೆರೆಂಡ ಜಾನ್ ಮಾರ್ಕ ಎಂಬವರು ಅಂಥಾ ಅಧಿಕಾರಗಳನ್ನು ನಡೆಸತಕ್ಕ ಅಗತ್ಯವಿರುಪ್ಪದಿಲ್ಲವಾಗಿ, ವಿವಾಹದ ರಿಜಿಸ್ಟ್ರಾರುಗಳಾಗಿ ಅವರನ್ನು ನೇಮಕ ಮಾಡಿದುದನ್ನು ಇದರಿಂದ ರದ್ದು ಮಾಡಿದೆ.

ತಾರೀಖು 26ನೆ ಜೂನ್ 1907.

ನಂ. 12233—ಎಲ್. ಬಿ. 90-06—9, ಮೈಸೂರು ಡಿಸ್ಟ್ರಿಕ್ಟಿನ ನಾನಾ ತಾಲ್ಲೂಕು ಬೋರ್ಡು
ರುವ ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರ ಉದ್ಯೋಗದ ವಾಯಿದೆಯು ಗತಿಸಿದುದರಿಂದ, ಸದರಿ ತಾಲ್ಲೂ
ಕೆಳಗೆ ಕಂಡ ಮೇರೆಗೆ ಪುನಃ ಏರ್ಪಡಿಸಿದೆ :—

I. ಮೈಸೂರು ತಾಲ್ಲೂಕು ಬೋರ್ಡು.

ಉದ್ಯೋಗ ಪ್ರಯುಕ್ತವಾದ ಸಭಿಕರು.

1. (a) ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ ಕಮಿಷನರ ... ಸ
2. (b) ತಾಲ್ಲೂಕಿನ ಅಮಲ್ದಾರ ... ... ಉ
3. (c) ತಾಲ್ಲೂಕು ಕಸಬೆಯಲ್ಲಿ ಒಂದು ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ವೈದ್ಯ ಉ
4. (d) ಮರಹಮ್ಮತು ಇಲಾಖೆಯ ಚಾರ್ಜಿನಲ್ಲಿರುವ ಸಬ್ ಡಿವಿಜನ್ ಆಫಿಸರ.
5. (e) ಸಬ್ ರಿಜಿಸ್ಟ್ರಾರ.

(f) ವಾಕ್ಯದ ಮೇರೆಗೆ ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು

6. ಮೆ॥ ಸಿದ್ದೆಗೌಡ.
7. ,, ನಂಜೇಗೌಡ.
8. ,, ಕೃಷ್ಣಸ್ವಾಮೈಯ್ಯ.
9. ,, ಚಿಕ್ಕ ಚಾಮುಂಡಿಗೌಡ.

(g) ವಾಕ್ಯದ ಮೇರೆಗೆ.

10. ಮೆ॥ ಮಾದಪ್ಪ.

(h) ವಾಕ್ಯದ ಮೇರೆಗೆ.

11. ಮೆ॥ ಲಿಂಗೇಗೌಡ.
12. ,, ಚಾಡಯ್ಯ.
13. ,, ಸುಬ್ಬಯ್ಯ.
14. ,, ಶೆಟ್ಟಿನಾಯಕನಹಳ್ಳಿಯ ಮಾದಪ್ಪ.
15. ,, ಪುಟ್ಟಣ್ಣ.

II. ಎಡತೊರೆ ತಾಲ್ಲೂಕು ಬೋರ್ಡು.

ಉದ್ಯೋಗಪ್ರಯುಕ್ತವಾದ ಸಭಿಕರು.

1. (a) ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ ಕಮಿಷನರ ...
2. (b) ತಾಲ್ಲೂಕಿನ ಅಮಲ್ದಾರ ... .
3. (c) ತಾಲ್ಲೂಕು ಕಸಬೆಯಲ್ಲಿ ಇರುವ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ವೈದ್ಯ
4. (d) ಮರಹಮ್ಮತು ಇಲಾಖೆಯ ಚಾರ್ಜಿನಲ್ಲಿರುವ ಸಬ್ ಡಿವಿಜನ್ ಆಫಿಸರ.
5. (e) ಸಬ್ ರಿಜಿಸ್ಟ್ರಾರ.

(f) ವಾಕ್ಯದ ಮೇರೆಗೆ ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕ

6. ಮೆ॥ ವೆಂಡರ ಸುಬ್ಬರಾವ.
7. ,, ಹಳೆಯೂರು ವೆಂಕಟೇಗೌಡ.
8. ,, ಮಾಮಿಲೆ ಲಕ್ಕೇಗೌಡ.
9. ,, ಸಾಲಿಗ್ರಾಮದ ಕುಬೇರಶೆಟ್ಟಿ.

(g) ವಾಕ್ಯದ ಮೇರೆಗೆ.

10. ಮೆ॥ ಬಾದಾಮಿ ಅಜ್ಜಯ್ಯ ಶೆಟ್ಟಿ.

(h) ವಾಕ್ಯದ ಮೇರೆಗೆ.

11. ಮೆ॥ ಶಠಗೋಪಾಲಾಚಾರ.
12. ,, ವೈ. ಸುಬ್ಬರಾವ.
13. ,, ಸೈಯದ ಅಹಮದ ಸಾಹೆಬ.
14. ,, ಸಿ. ಕೃಷ್ಣಪ್ಪ.
15. ,, ಎಳೆ ಬಸವಣ್ಣ.

III. ಹುಣಸೂರು ತಾಲ್ಲೂಕು ಬೋರ್ಡ್.

ಉದ್ಯೋಗಪ್ರಯುಕ್ತವಾದ ಸಭಿಕರು.

1. (a) ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ... ಸಭಾಧ್ಯಕ್ಷರು.
2. (b) ತಾಲ್ಲೂಕಿನ ಅಮಲ್ದಾರ್ ... ಉಪಾಧ್ಯಕ್ಷರು.
3. (c) ತಾಲ್ಲೂಕು ಕಸಬೆಯಲ್ಲಿ ಇರುವ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ವೈದ್ಯ ಉದ್ಯೋಗಸ್ಥರು.
4. (d) ಮರಹಮ್ಮತು ಇಲಾಖೆಯ ಸಬ್ ಡಿವಿಜನ್ ಆಫಿಸರ್.
5. (e) ಸಬ್ ರಿಜಿಸ್ಟ್ರಾರ್.

(f) ವಾಕ್ಯದ ಮೇರೆಗೆ ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

6. ಮಿ॥ ಹಾರನಹಳ್ಳಿ ಮಲ್ಲಪ್ಪ.
7. ,, ರಜಾ ಅಲಿ ಸಾಬ್.
8. ,, ಅಂಗಟಹಳ್ಳಿ ಮುದ್ದೆಗೌಡ.
9. ,, ಉಂಡವಾಡಿ ನರಸಿಂಗರಾವ್.

(g) ವಾಕ್ಯದ ಮೇರೆಗೆ.

10. ಮಿ" ಡಬ್ಲ್ಯು. ಸಿ. ಷಟ್ಲ್[illegible]

(h) ವಾಕ್ಯದ ಮೇರೆಗೆ.

11. ಮಿ॥ ಚಿಕ್ಕನೇರ್ಲೆ ಸಿದ್ಧಲಿಂಗಯ್ಯ.
12. ,, ಎಚ್. ಸಿ. ಸುಬ್ಬರಾವ್.
13. ,, ರಾವೆಂದೂರು ಹುಚ್ಚಣ್ಣ.
14. ,, ಮಾನಂಗಿ ತಿಮ್ಮೆಗೌಡ.
15. ,, ಬಿಳಿಕೆರೆ ಮಲ್ಲಯ್ಯ.

IV. ಹೆಗ್ಗಡದೇವನಕೋಟೆ ತಾಲ್ಲೂಕು ಬೋರ್ಡ್.

ಉದ್ಯೋಗ ಪ್ರಯುಕ್ತವಾದ ಸಭಿಕರು.

1. (a) ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ... ಸಭಾಧ್ಯಕ್ಷರು.
2. (b) ತಾಲ್ಲೂಕಿನ ಅಮಲ್ದಾರ್ ... ಉಪಾಧ್ಯಕ್ಷರು.
3. (c) ತಾಲ್ಲೂಕು ಕಸಬೆಯಲ್ಲಿ ಇರುವ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ವೈದ್ಯ ಉದ್ಯೋಗಸ್ಥರು.
4. (d) ಮರಹಮ್ಮತು ಇಲಾಖೆಯ ಸಬ್ ಡಿವಿಜನ್ ಆಫಿಸರ್.
5. (e) ಸಬ್ ರಿಜಿಸ್ಟ್ರಾರ್.

(f) ವಾಕ್ಯದ ಮೇರೆಗೆ ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

6. ಮಿ॥ ವೆಂಕಟಶೇಷಯ್ಯ.
7. ,, ಲಕ್ಷ್ಮೀನಾರಣಪ್ಪ.
8. ,, ಸೈಯದ್ ರಹಿಂಸಾಹೇಬ್.
9. ,, ದೊಡ್ಡೆಗೌಡ.

(g) ವಾಕ್ಯದ ಮೇರೆಗೆ.

10. ಮಿ" ನಾಗಪ್ಪ.

(h) ವಾಕ್ಯದ ಮೇರೆಗೆ.

11. ಮಿ॥ ಪುಟ್ಟಣ್ಣರಾಜ ಅರಸು.
12. ,, ಎಂ. ಸುಬ್ಬರಾವ್.
13. ,, ಪುದುಕೋಟೆ ಸುಬ್ಬರಾವ್.
14. ,, ಕೆಂಪೆಗೌಡ.
15. ,, ಸಣ್ಣಪ್ಪ ಶೆಟ್ಟಿ.

V. ಗುಂಡ್ಲುಪೇಟೆ ತಾಲ್ಲೂಕು ಬೋರ್ಡ್.

ಉದ್ಯೋಗಪ್ರಯುಕ್ತವಾದ ಸಭಿಕರು.

1. (a) ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ... ಸಭಾಧ್ಯಕ್ಷರು.
2. (b) ತಾಲ್ಲೂಕಿನ ಅಮಲ್ದಾರ್ ... ಉಪಾಧ್ಯಕ್ಷರು.
3. (c) ತಾಲ್ಲೂಕು ಕಸಬೆಯಲ್ಲಿ ಇರುವ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ವೈದ್ಯ ಉದ್ಯೋಗಸ್ಥರು.

4. (d) ಮರಹಮ್ಮತು ಇಲಾಖೆಯ ಸಬ್ ಡಿವಿಜನ್ ಆಫಿಸರು.
5. (e) ಸಬ್ ರಿಜಿಸ್ಟ್ರಾರ್.

(f) ವಾಕ್ಯದ ಮೇರೆಗೆ ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

6. ಮಿ|| ಗುರುಕಾರ ನಂಜಪ್ಪ
7. ,, ಮಾದಸೆಟ್ಟಿ.
8. ,, ಬೆಂಡಗಹಳ್ಳಿ ಸುಬ್ಬರಾವ್.
9. ,, ಗುರುಕಾರ ಮಾದಪ್ಪ.

(g) ವಾಕ್ಯದ ಮೇರೆಗೆ.

10. ಮಿ|| ಗುರುಮೂರ್ತಪ್ಪ.

(h) ವಾಕ್ಯದ ಮೇರೆಗೆ.

11. ಮಿ|| ಲಿಂಗಸೆಟ್ಟಿ.
12. ,, ಪುಟ್ಟವೀರಪ್ಪ.
13. ,, ಸಿದ್ದಲಿಂಗಪ್ಪ.
14. ,, ಅಪ್ಪಾಜಯ್ಯ
15. ,, ಬಾಲಕೃಷ್ಣಯ್ಯ.

VI. ಚಾಮರಾಜನಗರ ತಾಲ್ಲೂಕು ಬೋರ್ಡು.

ಉದ್ಯೋಗಪ್ರಯುಕ್ತವಾದ ಸಭಿಕರು.

1. (a) ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ... ಸಭಾಧ್ಯಕ್ಷರು.
2. (b) ತಾಲ್ಲೂಕಿನ ಅಮಲ್ದಾರ್ ... ... ಉಪಾಧ್ಯಕ್ಷರು.
3. (c) ತಾಲ್ಲೂಕು ಕಸಬೆಯಲ್ಲಿರುವ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ವೈದ್ಯ ಉದ್ಯೋಗಸ್ಥರು.
4. (d) ಮರಹಮ್ಮತು ಇಲಾಖೆಯ ಸಬ್ ಡಿವಿಜನ್ ಆಫಿಸರು.
5. (e) ಸಬ್ ರಿಜಿಸ್ಟ್ರಾರ್.

(f) ವಾಕ್ಯದ ಮೇರೆಗೆ ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

6. ಮಿ|| ಸುಬ್ರಾಯ ಸೆಟ್ಟಿ
7. ,, ವಾಸುದೇವಯ್ಯ
8. ,, ಶ್ರೀಕಂಠಯ್ಯ.
9. ,, ಪುಟ್ಟಣ್ಣ.

(g) ವಾಕ್ಯದ ಮೇರೆಗೆ.

10. ಮಿ|| ಶಾಮೈಯ್ಯಂಗಾರ್.

(h) ವಾಕ್ಯದ ಮೇರೆಗೆ

11. ಮಿ|| ಮುಹಮ್ಮದ್ ಉಮರ್ ಸಾಹೇಬ್
12. ,, ಅಡ್ಡಿ ನಂಜುಂಡಯ್ಯ.
13. ,, ಹರದನಹಳ್ಳಿ ಲಕ್ಷ್ಮೀನಾರಣಪ್ಪ.
14. ,, ವಿಜಪ್ಪ ಸೆಟ್ಟಿ.
15. ,, ವೆಂಕಟಸುಬ್ಬರಾಜ ಅರಸು.

VII. ನಂಜನಗೂಡು ತಾಲ್ಲೂಕು ಬೋರ್ಡು.

ಉದ್ಯೋಗಪ್ರಯುಕ್ತವಾದ ಸಭಿಕರು

1. (a) ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ... ಸಭಾಧ್ಯಕ್ಷರು.
2. (b) ತಾಲ್ಲೂಕು ಅಮಲ್ದಾರು ... ... ಉಪಾಧ್ಯಕ್ಷರು.
3. (c) ತಾಲ್ಲೂಕು ಕಸಬೆಯಲ್ಲಿರುವ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ವೈದ್ಯ ಉದ್ಯೋಗಸ್ಥರು.
4. (d) ಮರಹಮ್ಮತು ಇಲಾಖೆಯ ಸಬ್ ಡಿವಿಜನ್ ಆಫಿಸರು.
5. (e) ಸಬ್ ರಿಜಿಸ್ಟ್ರಾರ್.

(f) ವಾಕ್ಯದ ಮೇರೆಗೆ ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

6. ಮಿ|| ಇ. ರಾಮರಾವ್.
7. ,, ಪದ್ಮಣ್ಣ. ...
8. ,, ಕೆಂಪವೀರಣ್ಣ.
9. ,, ತಗಡೂರು ಗೋವಿಂದಸಾಮಯ್ಯ

(g) ವಾಕ್ಯದ ಮೇರೆಗೆ.

10. ಮಿ|| ಗುರುರಾವ್.

(h) ವಾಕ್ಯದ ಮೇರೆಗೆ.

11. ಮಿ|| ತಾಯೂರು ಕೃಷ್ಣರಾವ್.
12. ,, ಬಾದಾಮಿ ಭೀಮರಾವ್.
13. ,, ಶ್ರೀನಿವಾಸಯ್ಯ.
14. ,, ಅಣ್ಣಾಸ್ವಾಮಯ್ಯ.
15. ,, ಅಹಮದ್ ಸಾಬ್.

VIII. ತಿ. ನರಸೀಪುರ ತಾಲ್ಲೂಕು ಬೋರ್ಡು.

ಉದ್ಯೋಗಪ್ರಯುಕ್ತವಾದ ಸಭಿಕರು.

1. (a) ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ ... ಸಭಾಧ್ಯಕ್ಷರು.
2. (b) ತಾಲ್ಲೂಕಿನ ಅಮಲ್ದಾರ ... ಉಪಾಧ್ಯಕ್ಷರು.
3. (c) ತಾಲ್ಲೂಕು ಕಸಬೆಯಲ್ಲಿರುವ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ವೈದ್ಯ ಉದ್ಯೋಗಸ್ಥರು.
4. (d) ಮರಹಮ್ಮತು ಇಲಾಖೆಯ ಸಬ್ ಡಿವಿಜನ್ ಆಫೀಸರು.
5. (e) ಸಬ್ ರಿಜಿಸ್ಟ್ರಾರ್.

(f) ವಾಕ್ಯದ ಮೇರೆಗೆ ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

6. ಮಿ|| ಸಿದ್ದಲಿಂಗ ಮರಿದೇವರು.
7. ,, ಗರ್ಗೇಶ್ವರಿಯ ಶ್ರೀನಿವಾಸರಾಯರು.
8. ,, ದಣಾಯಕನಪುರದ ಬಲರಾಜ ಅರಸು.
9. ,, ವೆಂಕಟನಾರಣಪ್ಪ.

(g) ವಾಕ್ಯದ ಮೇರೆಗೆ.

10. ಮಿ|| ಗಂಜಾಂ ವೆಂಕಟರಮಣ ಶೆಟ್ಟಿ.

(h) ವಾಕ್ಯದ ಮೇರೆಗೆ.

11. ಮಿ|| ಬನ್ನೂರಿನ ಮೊಹದೀನ್ ಖಾನ್.
12. ,, ಮುತ್ತಲವಾಡಿಯ ಕಾಳಸಾದಗೌಡ.
13. ,, ಮೂಗೂರು ವೀರಶೆಟ್ಟರ ಸುಬ್ಬಣ್ಣ.
14. ,, ಹೊಳಸಳೆದ ವೆಂಕಾದ್ರಿಶೆಟ್ಟಿ.
15. ,, ಕೃಷ್ಣಮಾಚಾರ್.

IX. ಶ್ರೀರಂಗಪಟ್ಟಣ ತಾಲ್ಲೂಕು ಬೋರ್ಡು.

ಉದ್ಯೋಗಪ್ರಯುಕ್ತವಾದ ಸಭಿಕರು.

1. (a) ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ ... ಸಭಾಧ್ಯಕ್ಷರು.
2. (b) ತಾಲ್ಲೂಕಿನ ಅಮಲ್ದಾರ ... ಉಪಾಧ್ಯಕ್ಷರು.
3. (c) ತಾಲ್ಲೂಕು ಕಸಬೆಯಲ್ಲಿರುವ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ವೈದ್ಯ ಉದ್ಯೋಗಸ್ಥರು.
4. (d) ಮರಹಮ್ಮತ್ತು ಇಲಾಖೆಯ ಸಬ್ ಡಿವಿಜನ್ ಆಫೀಸರು.
5. (e) ಸಬ್ ರಿಜಿಸ್ಟ್ರಾರ್.

(f) ವಾಕ್ಯದ ಮೇರೆಗೆ ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

6. ಮಿ|| ವೀಣೆ ರಂಗಸ್ವಾಮಯ್ಯಂಗಾರ್.
7. ,, ಚಂದಗಾಲ ಜೋರೇಗೌಡ.
8. ,, ಶಿವಕೃಷ್ಣಯ್ಯ.
9. ,, ಸಿದ್ದಲಿಂಗಗೌಡ.

(g) ವಾಕ್ಯದ ಮೇರೆಗೆ.

10. ಮಿ|| ಮೈಲಾರಯ್ಯ.

(h) ವಾಕ್ಯದ ಮೇರೆಗೆ.

11. ಮಿ|| ನರಸಿಂಗರಾವ್.
12. ,, ಕರಿಮೊಹದೀನ್ ಸಾಬ್.
13. ,, ಕೃಷ್ಣಶೆಟ್ಟಿ.
14. ,, ಸುಬ್ರಾಯ ಮೊದಲಿಯಾರ್.
15. ,, ಕೃಷ್ಣಾಚಾರ್.

X. ಕೃಷ್ಣರಾಜಪೇಟೆ ತಾಲ್ಲೂಕು ಬೋರ್ಡು.

ಉದ್ಯೋಗಪ್ರಯುಕ್ತವಾದ ಸಭಿಕರು.

1. (a) ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ... ಸಭಾಧ್ಯಕ್ಷರು.
2. (b) ತಾಲ್ಲೂಕಿನ ಅಮಲ್ದಾರ್ ... ಉಪಾಧ್ಯಕ್ಷರು.
3. (c) ತಾಲ್ಲೂಕು ಕಸಬೆಯಲ್ಲಿರುವ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ವೈದ್ಯ ಉದ್ಯೋಗಸ್ಥರು.
4. (d) ಮರಹಮ್ಮತು ಇಲಾಖೆಯ ಸಬ್ ಡಿವಿಜನ್ ಆಫಿಸರು.
5. (e) ಸಬ್ ರಿಜಿಸ್ಟ್ರಾರ್.

(f) ವಾಕ್ಯದ ಮೇರೆಗೆ ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

6. ಮಿ|| ಕೃಷ್ಣಶಾಸ್ತ್ರಿ.
7. ,, ಕಿಲನೆರ ಲಿಂಗಗೌಡ
8. ,, ಕೃಷ್ಣರಾಜಪೇಟೆಯ ನಂಜೇಗೌಡ
9. ,, ಕಿಕ್ಕೇರಿಯ ಸೀತಾರಾಮಯ್ಯ.

(g) ವಾಕ್ಯದ ಮೇರೆಗೆ.

10. ,, ಚೆನ್ನಪ್ಪಶೆಟ್ಟಿ.

(h) ವಾಕ್ಯದ ಮೇರೆಗೆ.

11. ,, ಹೊಸಕೋಟೆಯ ಕೃಷ್ಣಪ್ಪ.
12. ,, ಚಿಕ್ಕರುಳಿಯ ಶೀನಪ್ಪ.
13. ,, ಸಾಯಪ್ಪನಹಳ್ಳಿಯ ಲಕ್ಕೆಗೌಡ.
14. ,, ಸಿಂಗನಹಳ್ಳಿಯ ವೇದಾಂತಾಚಾರ್.
15. ,, ಹೊಸಹೊಳಲೂರಿನ ರಂಗಶೆಟ್ಟಿ.

XI. ನಾಗಮಂಗಲ ತಾಲ್ಲೂಕು ಬೋರ್ಡು.

ಉದ್ಯೋಗಪ್ರಯುಕ್ತವಾದ ಸಭಿಕರು.

1. (a) ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ... ಸಭಾಧ್ಯಕ್ಷರು.
2. (b) ತಾಲ್ಲೂಕಿನ ಅಮಲ್ದಾರ್ ... ಉಪಾಧ್ಯಕ್ಷರು.
3. (c) ತಾಲ್ಲೂಕು ಕಸಬೆಯಲ್ಲಿರುವ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ವೈದ್ಯ ಉದ್ಯೋಗಸ್ಥರು
4. (d) ಮರಹಮ್ಮತ್ತು ಇಲಾಖೆಯ ಸಬ್ ಡಿವಿಜನ್ ಆಫಿಸರು.
5. (e) ಸಬ್ ರಿಜಿಸ್ಟ್ರಾರ್.

(f) ವಾಕ್ಯದ ಮೇರೆಗೆ ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

6. ಮಿ|| ಚಂದ್ರಶೇಖರಯ್ಯ.
7. ,, ಗಂಗಪ್ಪ.
8. ,, ಗುಂಡಪ್ಪ ...
9. ,, ಬಕ್ಷಿ ಗರುಡಾಚಾರ್.

(g) ವಾಕ್ಯದ ಮೇರೆಗೆ.

10. ,, ಹುಡಿಗಡ್ಡೆ ತಿರುಮಲಾಚಾರಿ.

(h) ವಾಕ್ಯದಮೇರೆಗೆ.

11. ,, ದೇವಶೆಟ್ಟಿಗೌಡ.
12. ,, ತಮ್ಮಯ್ಯ.
13. ,, ಖಾಜಿ ಮಹಮದ್ ಎಸೂಫ್.
14. ,, ರಾಮಕೃಷ್ಣಯ್ಯ.
15. ,, ನಿಜಗುಣೆಗೌಡ.

XII. ಮಂಡ್ಯ ತಾಲ್ಲೂಕು ಬೋರ್ಡು.

ಉದ್ಯೋಗಪ್ರಯುಕ್ತವಾದ ಸಭಿಕರು.

1. (a) ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ... ಸಭಾಧ್ಯಕ್ಷರು.
2. (b) ತಾಲ್ಲೂಕಿನ ಅಮಲ್ದಾರ್ ... ಉಪಾಧ್ಯಕ್ಷರು.
3. (c) ತಾಲ್ಲೂಕು ಕಸಬೆಯಲ್ಲಿರುವ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ವೈದ್ಯ ಉದ್ಯೋಗಸ್ಥರು.
4. (d) ಮರಹಮ್ಮತ್ತು ಇಲಾಖೆಯ ಸಬ್ ಡಿವಿಜನ್ ಆಫಿಸರ್.
5. (e) ಸಬ್ ರಿಜಿಸ್ಟ್ರಾರ್.

(f) ವಾಕ್ಯದ ಮೇರೆಗೆ ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

6. ಮಿ|| ಬಸರಾಳಿನ ಲಿಂಗಣ್ಣಯ್ಯ.
7. ,, ವೀರೇಗೌಡ ಅಣ್ಣೇಗೌಡ.
8. ,, ಡಿ. ರಾಮಯ್ಯ.
9. ,, ಸೀತಾರಾಮಯ್ಯ.

(g) ವಾಕ್ಯದ ಮೇರೆಗೆ.

10. ಮಿ|| ರಂಗೈಯ್ಯನ ತಿಂಗ್ರೈಯ್ಯಂಗಾರ್.

(h) ವಾಕ್ಯದ ಮೇರೆಗೆ.

11. ಮಿ|| ದೊಡ್ಡಿ ಖಾಸಿಂಸ್ಸಾಬ್.
12. ,, ಅಣ್ಣೇಗೌಡ.
13. ,, ಅಮ್ಮಣ್ಣಿ ಯಪ್ಪ.
14. ,, ಅರಳಿ ಸಂಗಪ್ಪ.
15. ,, ಕ್ಯಾತನಕೆರೆ ಜಿಟ್ಟಸೆಟ್ಟಿ.

XIII. ಮಳವಳ್ಳಿ ತಾಲ್ಲೂಕು ಬೋರ್ಡು.

ಉದ್ಯೋಗಪ್ರಯುಕ್ತವಾದ ಸಭಿಕರು.

1. (a) ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಅಥವಾ ತಾಲ್ಲೂಕು ನೇರಾಗಿ ಡೆಪ್ಯುಟಿ ಕಮಿಷನರ ಚಾರ್ಜಿನಲ್ಲಿರುವಾಗ ಡೆಪ್ಯುಟಿ ಕಮಿಷನರ್ ... ... ಸಭಾಧ್ಯಕ್ಷರು.
2. (b) ತಾಲ್ಲೂಕಿನ ಅಮಲ್ದಾರ್ ... ... ಉಪಾಧ್ಯಕ್ಷರು.
3. (c) ತಾಲ್ಲೂಕು ಕಸಬೆಯಲ್ಲಿರುವ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ವೈದ್ಯ ಉದ್ಯೋಗಸ್ಥರು.
4. (d) ಮರಾಮತ್ತು ಇಲಾಖೆಯ ಸಬ್ ಡಿವಿಜನ್ ಆಫೀಸರ್.
5. (e) ಸಬ್ ರಿಜಿಸ್ಟ್ರಾರ್.

(f) ವಾಕ್ಯದ ಮೇರೆಗೆ ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

6. ಮಿ|| ಅಣ್ಣೂರು ಜೋರೇಗೌಡ.
7. ,, ಕಿರಗಾವಲು ಕಾಳಲಿಂಗೇಗೌಡ.
8. ,, ಹನುಮಯ್ಯಶೆಟ್ಟಿ.
9. ,, ಶಂಕರಪ್ಪ.

(g) ವಾಕ್ಯದ ಮೇರೆಗೆ.

10. ಮಿ|| ರಾಜಾರಾವ್.

(h) ವಾಕ್ಯದಮೇರೆಗೆ.

11. ಮಿ|| ಕೆ. ಸುಬ್ಬಯ್ಯಶೆಟ್ಟಿ.
12. ,, ಕಿರಗಾವಲು ಬಿರಾಂಖಾನ್.
13. ,, ಪೂರಕಾಲು ವೀರೇಗೌಡ.
14. ,, ನರಸಿಂಹಮೂರ್ತಿ.
15. ,, ರಂಗನಾಥಮೊದಲಿಯಾರ್.

XIV. ಫ್ರೆಂಚ್‌ರಾಕ್ಸ್ ತಾಲ್ಲೂಕು ಬೋರ್ಡು.

ಉದ್ಯೋಗ ಪ್ರಯುಕ್ತವಾದ ಸಭಿಕರು.

1. (a) ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ... ಸಭಾಧ್ಯಕ್ಷರು.
2. (b) ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ... ಉಪಾಧ್ಯಕ್ಷರು.
3. (c) ಸಬ್ ತಾಲ್ಲೂಕು ಕಸಬೆಯಲ್ಲಿರುವ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ವೈದ್ಯ ಉದ್ಯೋಗಸ್ಥರು.
4. (d) ಮರಾಮತ್ತು ಇಲಾಖೆಯ ಸಬ್ ಡಿವಿಜನ್ ಆಫೀಸರ್.
5. (e) ವಿಶೇಷವಾಗಿಯಾಗಲಿ ಉದ್ಯೋಗಪ್ರಯುಕ್ತವಾಗಿಯಾಗಲಿ ಇಲ್ಲಿ ಯಾವ ಸಬ್ ರಿಜಿಸ್ಟ್ರಾರೂ ಇಲ್ಲದೆ ಇರುವ ಕಾರಣ ಉದ್ಯೋಗಪ್ರಯುಕ್ತವಾದ 5ನೆ ಸಭಿಕರು ಇಲ್ಲಿ ಇರುವುದಿಲ್ಲ (1905ನೆ ಇಸವಿಯ ಜುಲೈ 14ನೆ ತಾರೀಖಿನ ಜಿ. 27-34—ರಿಜಿಸ್. 7-13ನೆ ನಂಬರಿನ ಸರ್ಕಾರಿ ಹುಕುಮನ್ನು ನೋಡಿ).

(f) ವಾಕ್ಯದಮೇರೆಗೆ ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

6. ಮಿ|| ಲಿಂಗೇಗೌಡ.
7. ,, ಸಿಂಗರಿಗೌಡ.
8. ,, ಸಿದ್ದೇಗೌಡ.
9. ,, ಕೊಮಾರಿಗೌಡ.

(g) ವಾಕ್ಯದಮೇರೆಗೆ.

10. ಮಿ|| ಬಾಪ್ಜಿ ಅಬ್ದುಲ್ ರಹಿಮಾನ್ ಖಾನ್.

(h) ವಾಕ್ಯದಮೇರೆಗೆ.

11. ಮಿ|| ಮೇಲ್ಕೋಟೆ ಇಂಡಸ್ಟ್ರಿಯಲ್ ಸ್ಕೂಲ್ ಯಾ ಕೈಗಾರಿಕೆ ಪಾಠಶಾಲೆಯ ಮಿ|| ಎಂ. ಜಿ. ಶಾಮಯ್ಯಂಗಾರ್.
12. ,, ಹಿರೋಡೆಯ ಮಿ|| ಶ್ರೀಕಂಠಶೆಟ್ಟಿ.
13. ,, ತಿರುಮಲಸಾಗರ ಛತ್ರದ ಮಿ|| ಗುರುಕಾರ ಹುಚ್ಚಣ್ಣ.

ತಾರೀಖು 2 ನೆ ಜೂನ್ 1907.

ನಂ. ಜಿ. 8131—ಜಿ. ಎಂ. 12-06—65, ಮಿ|| ಮಿರ್ಜಾ ಮಹಮದ್ ಇಸ್ಮೇಲ್, ಬಿ. ಎ. ಯವರನ್ನೂ ಮತ್ತು ಮಿ|| ಜಿ. ಬಿ. ಹೇಬ್ಲಿಕರ್, ಬಿ. ಎ., ಎಲ್. ಎಲ್. ಬಿ. ಯವರನ್ನು 1907ನೆ ಜೂನ್ 1ನೆ ತಾರೀಖು ಮೊದಲುಗೊಂಡು, ಮೈಸೂರು ಸಿವಿಲ್ ಸರ್ವಿಸ್ಸಿಗೆ, ಬಿ. ಪಟ್ಟಿಯಲ್ಲಿ 5ನೆ ತರಗತಿಯ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರುಗಳಾಗಿ ನೇಮಕ ಮಾಡಿದೆ.

ತಾರೀಖು 27ನೆ ಜೂನ್ 1907.

ನಂ. ಜಿ. 8132—ಜಿ. ಎ. 12-06—66, ಪ್ರೊಬೇಷನರಿ ಎಕಸ್ಟ್ರಾ ಅಸಿಸ್ಟೆಂಟ್ ಕಮಿಷನರುಗಳಾದ ಮಿ|| ಬಿ. ಭೀಮರಾವ್ ಮತ್ತು ಮಿ|| ಎಂ. ಹರ್ಸ ಅಲಿ ಯವರನ್ನು 1907ನೆ ಇಸವಿಯ ಜೂನ್ 1ನೆ ತಾರೀಖಿನ ಲಾಗಾಯಿತು ಬಿ. ಪಟ್ಟಿಯಲ್ಲಿ 5ನೆ ತರಗತಿಯ ಅಸಿಸ್ಟೆಂಟ್ ಕಮಿಷನರನ್ನಾಗಿ ಮೈಸೂರು ಸಿವಿಲ್ ಸರ್ವಿಸ್ಸಿಗೆ ಮುಕರ್ರರ್ ಮಾಡಿ ಇದೆ.

ತಾರೀಖು 27ನೆ ಜೂನ್ 1907.

ನಂ. ಜಿ. 8152—ಜಿ. ಎಂ. 95-06-06, ಇಂಡಿಯಾ ಸರ್ಕಾರದ ಹೋಂ ಇಲಾಖೆಯ 1897ನೆ ಇಸವಿಯ ಮೇ 21ನೆ ತಾರೀಖಿನ 178ನೆ ನಂಬರಿನ ಇಸ್ತಿಹಾರ್ನಾಮೆಯಿಂದ ಪ್ರಕಟಿಸಲ್ಪಟ್ಟು 1900ನೆ ಇಸವಿಯ ಜುಲೈ 28ನೆ ತಾರೀಖಿನ 1400—ಮಿಸ್. ಫೈಲ್ 160-92ನೆ ನಂಬರಿನ ಇಸ್ತಿಹಾರ್ನಾಮೆಯಿಂದ ಮೈಸೂರು ಸಂಸ್ಥಾನಕ್ಕೆ ಲಗುವಾಗುವಂತೆ ಮಾಡಲ್ಪಟ್ಟ ಎಕ್ಲೀಸಿಯಾಸ್ಟಿಕಲ್ ಯಾ ಕ್ರೈಸ್ತಮತಕ್ಕೆ ಸಂಬಂಧಪಟ್ಟ ನಿಬಂಧನೆಗಳ 4ನೆ ಭಾಗದ 29ನೆ ನಿಬಂಧನೆಗೆ ಒಂದು ಭಾಗವನ್ನು ಹೆಚ್ಚಾಗಿ ಸೇರಿಸುವಂತೆ ಹುಕುಂ ಮಾಡುವ 1907ನೆ ಇಸವಿಯ ಮೇ 13ನೆ ತಾರೀಖಿನ 241ನೆ ನಂಬರಿನ ಇಂಡಿಯಾ ಸರ್ಕಾರದ ಹೋಂ ಇಲಾಖೆ (ಎಕ್ಲೀಸಿಯಾಸ್ಟಿಕಲ್) ಯಿಂದ ಕೊಡಲ್ಪಟ್ಟ ಇದಡಿ ಕಂಡ ಇಸ್ತಿಹಾರ್ನಾಮೆಯನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಅನುಸರಿಸುವ ಬಗ್ಗೆ ಪ್ರಕಟಿಸಿ ಇದೆ:—

1897ನೆ ಇಸವಿಯ ಮೇ 21ನೆ ತಾರೀಖಿನ 178ನೆ ನಂಬರಿನ ಹೋಂ ಇಲಾಖೆಯ ಇಸ್ತಿಹಾರ್ನಾಮೆಯಲ್ಲಿ ಪ್ರಕಟಿಸಲ್ಪಟ್ಟ ಕ್ರೈಸ್ತಮತ ಸಂಬಂಧವಾದ ನಿಬಂಧನೆಗಳ 4ನೆ ಭಾಗದ 29ನೆ ನಿಬಂಧನೆಗೆ ಇದಡಿ ಕಂಡ ಭಾಗವನ್ನು ಸೇರಿಸಿ ಇದೆ:—

ಅಂಥಾ ಫಂಡು ಇಲ್ಲದ ಸ್ಥಳದಲ್ಲಿ ಗಡಿಯಾರಗಳನ್ನು ಇಡುವ ಖರ್ಚನ್ನು ಸರ್ಕಾರದವರು ವಹಿಸತಕ್ಕದ್ದು.

ತಾರೀಖು 29ನೆ ಜೂನ್ 1907.

ನಂ. 12316—ಎಲ್. ಬಿ. 48-06—3, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ:—ಇದರಡಿ ವಿವರಿಸಿರುವ ಜಮೀನು ಸರ್ಕಾರದ ಕೆಲಸಕ್ಕೆ ಎಂದರೆ, ಚನ್ನಪಟ್ಟಣ ತಾಲ್ಲೂಕಿನಲ್ಲಿರುವ ಅಕ್ಕೂರು ಗ್ರಾಮವನ್ನು ವಿಸ್ತರಿಸುವುದಕ್ಕೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 8 (c) ಪ್ರಕರಣಗಳನ್ನನುಸರಿಸಿ ಕ್ಲೋಸ್‌ಪೇಟೆ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು.	ಸರ್ವೆ ನಂಬರು.	ಖುಷ್ಕಿ ತರಿ ಬಾಗಾಯಿತು.	ಪೂರ್ತಿ ವಿಸ್ತೀರ್ಣ.	ಕಂದಾಯ.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚಕ್ಕುಬಂದಿ.			
									ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಬೆಂಗಳೂರು	ಚನ್ನಪಟ್ಟಣ	ಬಿರೂಡಹಳ್ಳಿ	ಅಕ್ಕೂರು	ಕೆಂಚಣ್ಣ	217	ಖುಷ್ಕಿ	ಎ. ಗು. 4 38	ರೂ. 4	ಎ. ಗು. 4 38	ರೂ. 4	ಚನ್ನಪಟ್ಟಣ ಮಳವಳ್ಳಿ ರಸ್ತೆ	ಸರ್ವೆ 215ನೆ ನಂಬರು	ಸರ್ವೆ 216ನೆ ನಂಬರು (ಬಂಡಿ ಜಾಡು)	ಅಕ್ಕೂರು ಗ್ರಾಮದ ಠಾಣೆ

ತಾರೀಖು 29ನೆ ಜೂನ್ 1907.

ನಂ. 12329—Ml. 35-06—13, ಜಮೀನ್ದಾರ್ ಮತ್ತು ಸಾಹುಕಾರರಾದ ಮಿ|| ಧನರಾಂ ಪ್ರಸಾದ್ ಎಂಬುವರನ್ನು, ಮೃತಪಟ್ಟ ಮಿ|| ವೆಂಕಾಜಟ್ಟಿಗೆ ಬದಲಾಗಿ, ಕುಂಸಿ ಊರಿನ ಮ್ಯುನಿಸಿಪಲ್ ಬೋರ್ಡಿಗೆ ಸಭಿಕರನ್ನಾಗಿ ನೇಮಕ ಮಾಡಿದೆ.

ತಾರೀಖು 2ನೆ ಜುಲೈ 1907.

ನಂ. 15—Ml. 8-06-66, ಸ್ನ 1894ನೆ ಇಸವಿಯ 7ನೆ ನಂಬರ್ ಭೂಸಂಪಾದನೆಯ ರೆಗ್ಯುಲೇಷನಿನ 6ನೆ ಪ್ರಕರಣವನ್ನನುಸರಿಸಿ ಇದರಿಂದ ಪ್ರಕಟಿಸುವುದೇನಂದರೆ,—ಈ ಕೆಳಗೆ ನಮೂದಾದ ಜಮೀನುಗಳೂ ಕಟ್ಟಡಗಳೂ ಸರ್ಕಾರಿ ಕೆಲಸಕ್ಕೆ ಎಂದರೆ ಬೆಂಗಳೂರು ಸಿಟಿಯ 3ನೆ ಡಿವಿಜನಿನ ಗಾಣಿಗರ ಪಿಲ್ಲಣ್ಣನ ಗಲ್ಲಿಯಲ್ಲಿ ಕಚರಾ ಬಂಡಿಗಳ ತಿರುಗಾಟಕ್ಕೆ ಒಂದು ಓಣಿಯನ್ನು ಏರ್ಪಡಿಸುವುದಕ್ಕೆ ಬೇಕಾಗಿವೆ. ಸದರಿ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳ ಮೇರೆಗೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿನ ವೈಸ್ ಪ್ರೆಸಿಡೆಂಟರು ಸದರಿ ಜಮೀನುಗಳನ್ನೂ ಮನೆಗಳನ್ನೂ ಹೊಂದಲು ಹುಕುಂ ಪಡೆಯಲಿಕ್ಕೆ ಅಧಿಕಾರ ಹೊಂದಿರುತ್ತಾರೆ :—

ಸ್ಥಳ	ಬ್ಲಾಕ್ ನಂಬರು	ಪೇಟೆಯ ಅಥವಾ ಬೀದಿಯ ಹೆಸರು	ಮನೆಯ ನಂಬರು	ಒಡೆಯರ ಹೆಸರು	ಸರ್ಕಾರಕ್ಕೆ ಬೇಕಾಗಿರುವ ಸ್ವತ್ತಿನ ವಿವರ	ಅಳತೆ		
						ಉದ್ದ ಅಡಿ.	ಅಗಲ ಅಡಿ.	ಒಟ್ಟು ವಿಸ್ತೀರ್ಣ
ಬೆಂಗಳೂರು ಪಟ್ಟಣ	1	ಗಾಣಿಗರ ಪಿಲ್ಲಣ್ಣನ ಗಲ್ಲಿ.	2	ಮುನಿವೆಂಕಟಪ್ಪ.	ಮಣ್ಣು ಮಾಳಿಗೆ ...	14½ 11 25⅓	11¾ 9 18¼	170 99 424
					ಜಮಾ ಅಂಕಣಗಳು.	...	...	17
					ಖಾಲಿ ನಿವೇಶನ ..	12½ 11	15 16	187½ 66
					ಜುಮ್ಲಾ ಚದರಗಜ.	...	...	28
	2	ಸುಬ್ಬಣ್ಣಾಚಾರಿಯ ಗಲ್ಲಿ.	23	ಡಿಟ್ಟೋ	ಮಣ್ಣು ಮಾಳಿಗೆ ..	15 21¾	10 3	150 65¼
					ಜುಮ್ಲಾ ಅಂಕಣಗಳು.	...	...	5 5/16
					ಖಾಲಿ ನಿವೇಶನ ...	11¾ 21¾	15 12	176¼ 261
					ಜುಮ್ಲಾ ಚದರಗಜ.	...	..	48⅔

ತಾರೀಖು 2ನೆ ಜುಲೈ 1907.

ನಂ. 18—Med. 4-06—51, 1907ನೆ ಜುಲೈ 1ನೆ ತಾರೀಖಿನ ದಿನ ಕೆಲಸದಿಂದ ನಿವೃತ್ತಿ ಮಾಡಲ್ಪಡುವ ಆನರರಿ ಅಸಿಸ್ಟೆಂಟ್ ಸರ್ಜನ್ ಮಿ|| ಎ. ಆರ್. ಪೊನ್ನುಸಾಮಿ ಪಿಳ್ಳೆಯವರಿಗೆ ಬದಲಾಗಿ, ತುಮಕೂರು ಡಿಸ್ಟ್ರಿಕ್ಟಿನಲ್ಲಿ ಡಿಸ್ಟ್ರಿಕ್ಟು ವೈದ್ಯ ಮತ್ತು ಆರೋಗ್ಯಾಧಿಕಾರಿಯಾಗಿ ಬದಲಿ ನೋಡುತ್ತಿರುವ ಅಸಿಸ್ಟೆಂಟ್ ಸರ್ಜನ್ ಮಿ|| ಸಿ. ಅಪ್ಪಾದೊರೆ ಮೊದಲಿಯಾರ್‌ರನ್ನು ಕೋಲಾರಕ್ಕೆ ಡಿಸ್ಟ್ರಿಕ್ಟು ವೈದ್ಯ ಮತ್ತು ಆರೋಗ್ಯಾಧಿಕಾರಿಯಾಗಿ ವರ್ಗಮಾಡಿದೆ.

ತಾರೀಖು 2ನೆ ಜುಲೈ 1907.

ನಂ. J. 25—Regis. 27-06, ಮೊದಲನೆ ತರಗತಿಯ ಸ್ಪೆಷಲ್ ಸಬ್ ರಿಜಿಸ್ಟ್ರಾರ್ ಎಸ್. ರಾಮಯ್ಯನವರು 1907ನೆ ಜುಲೈ 1ನೆ ತಾರೀಖಿನ ದಿನ ಕೆಲಸದಿಂದ ನಿವೃತ್ತರಾಗುವ ಪ್ರಯುಕ್ತ ಸ್ಪೆಷಲ್ ಸಬ್ ರಿಜಿಸ್ಟ್ರಾರುಗಳ ಇದರಡಿ ಕಂಡ ಬಡತಿಗಳನ್ನು ಮಂಜೂರ್ ಮಾಡಿದೆ :—

ಸಬ್ ರಿಜಿಸ್ಟ್ರಾರ್ ಜಿ. ಶ್ರೀಕಂಠರಾಯರನ್ನು 3ನೆ ತರಗತಿಯಿಂದ 2ನೆ ತರಗತಿಗೂ, ಸಬ್ ರಿಜಿಸ್ಟ್ರಾರ್, ಬಿ. ಎಂ. ರಂಗಯ್ಯ ನಾಯಿಡುಯವರನ್ನು 4ನೆ ತರಗತಿಯಿಂದ 3ನೆ ತರಗತಿಗೂ ಬಡತಿ ಮಾಡಿದೆ.

ತಾರೀಖು 12ನೆ ಜೂನ್ 1907.

ನಂ. ರೆ. 10619—ಲ್ಯಾ. ರೆ. 580-06-2, ಬೆಂಗಳೂರು ಸಬ್ ಡಿವಿಜನಿನ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮಿ|| ಸಿ. ರಾಮರಾಯರಿಗೆ 1907ನೆ ಇಸವಿಯ ಜೂನ್ 12ನೆ ತಾರೀಖಿನಿಂದ, ಅಥವ ಮ್ಯಾಜಿಸ್ಟ್ರೇಟರು ಅನಂದ ಚಾರ್ಜು ವಹಿಸುವ ತಾರೀಖಿನಿಂದ, ಒಂದು ತಿಂಗಳ ವರೆಗೆ ಪ್ರಿವಿಲೇಜ್ ರಜಾ ಕೊಟ್ಟಿದೆ.

2. ಈಗ ರಜಾಮೇಲೆ ಇರುವ ಮಿ|| ಸಿ. ವೆಂಕಟರಾಯರನ್ನು ಕೆಲಸಕ್ಕೆ ವಾಪಸು ಕರಸಿ, ಅವರನ್ನು ಕೊಂಚ ಕಾಲದ ವ್ಯಟ್ಟಿಗೆ, ಮಿ|| ಸಿ. ರಾಮರಾಯರು ರಜಾಮೇಲೆ ಇರುವ ತನಕ ಅಥವಾ ಇನ್ನೊಂದು ಹುಕುಂ ಕೊಡುವ ತನಕ, ಬೆಂಗಳೂರು ಸಬ್ ಡಿವಿಜನಿನ ಚಾರ್ಜಿಗೆ ನೇಮಿಸಿದೆ.

ತಾರೀಖು 12ನೆ ಜೂನ್ 1907.

ನಂ. ರೆ. 10622—ಲ್ಯಾ. ರೆ. 318-06—7, ರಿಕಾರ್ಡ್ಸ್ ಸಾರ್ಟಿಂಗ್ ಇನ್ಸ್ಪೆಕ್ಟರಾಗಿ ನೊಕರರ್ರ್ಮಾಡಲ್ಪಟ್ಟ ಮಿ|| ಆನಂದರಾವ್ ಸಿರ್ಸಿಯವರಿಗೆ ಬದಲಾಗಿ ಅಸಿಸ್ಟೆಂಟ್ ಕಮಿಷನರ್ ಮಿ|| ಸಿ. ವೆಂಕಟರಾಯರನ್ನು ಮದ್ದಗಿರಿಸಬ್ ಡಿವಿಜನಿಗೆ ನೇಮಿಸಿದೆ.

(1907ನೆ ಇಸವಿಯ ಜೂನ್ 12ನೆ ತಾರೀಖಿನ ರೆ. 10169—ಲ್ಯಾ. ರೆ. 580-06—2 ನಂಬರಿನ ಇಸ್ತಿಹಾರ್ನಾಮೆಯ ಮೇರೆ ಇವರಿಗೆ ನೇಮಕವಾಗಿರುವ ಬೆಂಗಳೂರು ಸಬ್ ಡಿವಿಜನಿನ ಚಾರ್ಜು ಮತ್ತೊಬ್ಬರಿಂದ ವಹಿಸಲ್ಪಟ್ಟ ತರುವಾಯ ಹೊಸ ಕೆಲಸಕ್ಕೆ ಹೋಗಿ ಸೇರತಕ್ಕದ್ದು.

ತಾರೀಖು 19ನೆ ಜೂನ್ 1907.

ನಂ. ರೆ. 10737—ಲ್ಯಾ. ರೆ. 525-06—12, ಅಮಲ್ದಾರ್ ಮಿ|| ಸಿ. ಸುಬ್ಬರಾಯುಲು ನಾಯುಡು ಯವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನ್ಗಳ 155ನೆ ನಿಬಂಧನೆಯ ಮೇರೆಗೆ, 1907ನೆ ಇಸವಿಯ ಮೇ 5ನೆ ತಾರೀಖಿನಿಂದ ಆರು ತಿಂಗಳ ಕಾಲ ರಜಾ ಕೊಟ್ಟಿದೆ. ಈ ಪೈಕಿ ಮೊದಲ 2 ತಿಂಗಳೂ 17 ದಿವಸಗಳು ಪ್ರಿವಿಲೇಜ್ ರಜಾವಾಗಿಯೂ ಉಳಿದುದು ಸ್ವಂತ ಕೆಲಸದ ಮೇಲಿನ ರಜಾವಾಗಿಯೂ ಎಣಿಸಲ್ಪಡತಕ್ಕದ್ದು.

ತಾರೀಖು 20ನೆ ಜೂನ್ 1907.

ನಂ. ರೆ. 10808—ಲ್ಯಾ. ರೆ. 83-06—15, ಕಡೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್ ಮಿ|| ದಳವಾಯಿ ದೇವರಾಜ ಅರಸಿನವರನ್ನು ಬೆಂಗಳೂರು ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ.

1907ನೆ ಇಸವಿಯ ಜುಲೈ ಮೊದಲನೆ ತಾರೀಖಿನ ದಿವಸ ಕೆಲಸಕ್ಕೆ ಬಂದು ಸೇರತಕ್ಕದ್ದು.

ಹುಕುಂ ಬಮೋಜಿಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸಕ್ರಿಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 27—28ನೆ ಜೂನ್ 1907.

ನಂ. 589—4654, ಶಿವಮೊಗ್ಗ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್ (ಹಂಗಾಮಿ) ಮ|| ಆರ್. ವಿ. ಸುಂದರಮ್ ಐಯ್ಯರ್, ಬಿ. ಎ., ಬಿ. ಸಿ. ಇ., ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನ್ 177ನೆ ಆರ್ಟಿಕಲ್ ಅನುಸರಿಸಿ ಸರ್ 1907ನೆ ಜುಲೈ 3ನೆ ತಾರೀಖು ಲಾಗಾಯಿತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ತಾರೀಖು 2ನೆ ಜುಲೈ 1907.

ನಂ. 596—4762, ವಾಟರ್ ಸಪ್ಲೈ ಮತ್ತು ಸ್ಟೋರ್ಸ್ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್ ಮಿ|| ವಿ. ರಂಗಸ್ವಾಮಿ ಐಯ್ಯಂಗಾರ್, ಬಿ. ಸಿ. ಇ., ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನ್ 177ನೆ ಆರ್ಟಿಕಲ್ ಅನುಸರಿಸಿ ಸರ್ 1907ನೆ ಜೂನ್ 24ನೆ ತಾರೀಖಿನಿಂದ 12 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಹುಕುಂ ಬಮೋಜಿಬ್,
ಬರ್ನಾರ್ಡ್ ಥಾಮ್ಸ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನಮೆಂಟ್ ಅಂಡರ್ ಸಕ್ರಿಟರಿ.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 28.

ಬೆಂಗಳೂರು, ಗುರುವಾರ, ಜುಲೈ ತಾ|| 11, ಸ್ನ. 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರ್ರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರ್ಕಸ ಆಫೀಸರಗಳು, ಫಾರೆಸ್ಟು ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್‌ಪೆಕ್ಟರ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೊಲೀಸ್ ಸೂಪರ್ರಿಂಟೆಂಡೆಂಟರು, ಫಾರೆಸ್ಟು ಆಫೀಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಆಫೀಸ್ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲಾ.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ನಂ. ಜಿ. 8139—ಜಿ. ಎಂ. 12-06—68, ತಾರೀಖು 27ನೆ ಜೂನ್ 1907.

ಹುಕುಂ:—ಸ್ಪರ್ಧಾಪೂರ್ವಕವಾದ ಪರೀಕ್ಷೆಯ ಮೂಲಕವಾಗಿಯೂ, ವಿಶೇಷವಾಗಿ ಚುನಾಯಿಸೋಣದರಿಂದಲೂ, ಮೈಸೂರು ಸಿವಿಲ್ ಸರ್ವಿಸ್ಸಿಗೆ ಸೇರಿಸಿಕೊಳ್ಳಲ್ಪಟ್ಟ ಆಫಿಸರುಗಳ ಸಂಬಳವನ್ನೂ ಆಯುತಿಗಳನ್ನೂ ಕೂಡಿದಷ್ಟು ಮಟ್ಟಿಗೆ ಸಮವಾಗಿ ಮಾಡುವುದಕ್ಕೋಸ್ಕರ ಶ್ರೀಮನ್ ಮಹಾರಾಜರವರು 1906ನೆ ಜೂನ್ 28ನೆ ತಾರೀಖಿನ 8964—ಎಫ್. ಎಲ್. ನಂಬರಿನ ಸರ್ಕಾರಿ ಹುಕುಮಿನ ಕೆಳಗೆ ಕೊಟ್ಟಿರುವ ನಿಬಂಧನೆಗಳನ್ನು ಈ ಕೆಳಗಿನಂತೆ ತಿದ್ದುಪಾಟು ಮಾಡಲು ಅಪ್ಪಣೆ ದಯಪಾಲಿಸಿರುತ್ತಾರೆ:—

1. ಈ ಕೆಳಗಿನ ಆಫಿಸರುಗಳು ಮೈಸೂರು ಸಿವಿಲ್ ಸರ್ವಿಸಿನ ಏರ್ಪಾಡಿಗೆ ಸೇರಿರುವರು:—

ಹೊಸ ಎ. ಮತ್ತು ಬಿ. ಪಟ್ಟಿಗಳ ಅಸಿಸ್ಟೆಂಟ ಕಮಿಷನರುಗಳು, ರೆವಿನ್ಯೂ, ಎಕ್ಸೈಸ್, ಪೋಲೀಸ್, ಸರ್ವೆ, ಜುಡಿಷಲ್ ಮತ್ತು ಅಕೌಂಟ ಯಾ ಲೆಕ್ಕದ ಇಲಾಖೆಗಳಲ್ಲಿಯೂ ಮತ್ತು ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯ ಆಫಿಸಿನಲ್ಲಿಯೂ ಕೆಲಸ ಮಾಡುತ್ತಿರುವ ಆ ದರ್ಜೆಯ ಎಲ್ಲಾ ಆಫಿಸರುಗಳ ಸಹಿತ; ಡೆಪ್ಯುಟಿ ಕಮಿಷನರುಗಳು; ಡಿಸ್ಟ್ರಿಕ್ಟು ಜಡ್ಜಿಗಳು; ಡೆಪ್ಯುಟಿ ಸೆಕ್ರೆಟೆರಿ* ಮತ್ತು ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿ.

2. ಮೈಸೂರು ಸಿವಿಲ್ ಸರ್ವಿಸಿಗೆ ಮುಂದೆ ಎಲ್ಲಾ ಆಫಿಸರುಗಳ ಹೊಸದಾಗಿ ಸೇರಿಸೋಣವು ಈ ಕೆಳಗಿನ ಎರಡು ಮಾರ್ಗಗಳ ಪೈಕಿ ಒಂದರಲ್ಲಿ ಮಾತ್ರ ಆಗಿರತಕ್ಕದ್ದು. ಯಾವುವೆಂದರೆ:—

---

* ಪ್ರತ್ಯೇಕವಾದ ಮುಜರ್ಯೆ ಸೆಕ್ರೆಟೆರಿಯನ್ನು ಇಟ್ಟಿರುವವರೆಗೂ ಈ ಉದ್ಯೋಗವನ್ನು ಭರ್ತಿ ಮಾಡುವುದಿಲ್ಲ.

ಮೊದಲನೇದು, ಎ. ಪಟ್ಟಿಗೆ, ಶ್ರೀಮನ್ ಮಹಾರಾಜರವರಿಂದ ಸಮ್ಮತಿಸಲ್ಪಟ್ಟ ಉಮೇದುವಾರರ ಪರೀಕ್ಷೆಯಲ್ಲಿ ತೇರ್ಗಡೆಯಿಂದ; ಮತ್ತು

ಎರಡನೇದು, ಬಿ. ಪಟ್ಟಿಗೆ —

(a) ಶ್ಲಾಘ್ಯತರವಾಗಿ ಕೆಲಸ ಮಾಡಿ ಮೇಲ್ಪಟ್ಟ ಉದ್ಯೋಗಗಳನ್ನು ವಹಿಸುವುದಕ್ಕೆ ಸರ್ವ ಪ್ರಕಾರದಲ್ಲೂ ಅರ್ಹರಾಗಿದಾರೆಂದು ತಿಳಿಯಬಂದಿರುವ ಮತ್ತು ವಿಧಿಸಲ್ಪಟ್ಟ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದರ ಮೂಲಕ ಯೋಗ್ಯತೆಯನ್ನು ಹೊಂದಿರುವ ಮೈಸೂರು ಸರ್ಕಾರಿ ನೌಕರಿಯ ಕೆಳಗಿನ ದರ್ಜೆಗಳ ಸ್ವಾಮಾಜಿಕರಿಂದ.

(b) ಅಥವಾ ಘರಾಣಿಯ ಯಾ ಅರ್ಹತೆಯ ಇತರ ಕಾರಣಗಳಿಂದ, ಶ್ರೀಮನ್ ಮಹಾರಾಜರವರಿಂದ ಮಾಡಲ್ಪಡುವ ವಿಶೇಷ ಚುನಾವಣೆಯಿಂದ.

3. 1908ನೆ ಇಸವಿಯಲ್ಲಿಯೂ ಆ ತರುವಾಯ ಪ್ರತಿ ಎರಡು ವರ್ಷಗಳಲ್ಲಿಯೂ ಒಂದಾವರ್ತಿ ಸಿವಿಲ್ ಸರ್ವಿಸಿಗೆ ಹೊಸ ಮನುಷ್ಯರನ್ನು ಸೇರಿಸುವುದಕ್ಕಾಗಿ ಸ್ಪರ್ಧಾಪೂರ್ವಕವಾದ ಪರೀಕ್ಷೆಯು ನಡೆಸಲ್ಪಡುವುದು; ಆದರೆ, 1906ಕ್ಕೆ ಹಿಂದಿನ ಐದು ವರ್ಷಗಳಲ್ಲಿ ಅಂಥಾ ಪರೀಕ್ಷೆಗಳೇ ನಡೆಸಲ್ಪಡದೆ ಇರುವುದರಿಂದ ಎರಡು ಹೆಚ್ಚು ಪರೀಕ್ಷೆಗಳು ಎಂದರೆ 1907ರಲ್ಲಿ ಒಂದೂ, 1909ರಲ್ಲಿ ಮತ್ತೊಂದೂ ನಡೆಸಲ್ಪಡುವುವು. ಪರೀಕ್ಷಾ ಗ್ರಂಥಗಳೂ, ಪರೀಕ್ಷೆಯು ನಡೆಸಲ್ಪಡುವ ತಾರೀಖು ಮತ್ತು ಕ್ರಮ, ಉತ್ತೀರ್ಣರಾಗುವುದಕ್ಕೆ ಅವಶ್ಯವಾದ ಅಂಕಗಳ ಸಂಖ್ಯೆಗಳು ಇವು ಕನಿಷ್ಠ ಪಕ್ಷ ಪರೀಕ್ಷೆಗೆ ಮೂರು ತಿಂಗಳುಗಳು ಮುಂಚೆ ಕ್ರಮವಾಗಿ ಪ್ರಕಟಿಸಲ್ಪಡುವುವು. ಪರೀಕ್ಷೆಗಳ ಕಠಿಣತೆಯ ವಿಷಯದಲ್ಲಿಯೂ ಗ್ರಂಥಗಳ ವಿಸ್ತಾರದ ವಿಷಯದಲ್ಲಿಯೂ, ಮೇಲ್ಕಂಡ ಸ್ಪರ್ಧಾಪೂರ್ವಕವಾದ ಪರೀಕ್ಷೆಯು ಬ್ರಿಟಿಷ್ ಇಂಡಿಯಾದಿನಲ್ಲಿ ಪ್ರಾವಿನ್ಷಲ್ ಸಿವಿಲ್ ಸರ್ವಿಸಿಗಾಗಿ ಅನುಸರಿಸಲ್ಪಟ್ಟಿರುವುದರ ಹಾಗೆ ಇರುವುದು.

4. ಪರೀಕ್ಷೆಗೆ ಬರುವ ಉಮೇದುವಾರರು ಪರೀಕ್ಷೆಯ ತಾರೀಖಿನ ದಿನ 25 ವರ್ಷಗಳ ವಯಸ್ಸಿಗೆ ಮೀರಿರಕೂಡದು, ಮತ್ತು ಇಂಡಿಯಾ ದೇಶದ ಅಥವಾ ಇತರ ದೇಶದ ಯೂನಿವರ್ಸಿಟಿಯ ಕಲೆಗಳ ಗ್ರಾಜ್ಯುಯೇಟುಗಳಾಗಿರಬೇಕು; ಆದರೆ, ಉಮೇದುವಾರನು ಮೈಸೂರು ದೇಶೀಯನಾಗಿ ಅಥವಾ ಮೈಸೂರಿನಲ್ಲಿ ವಾಸವುಳ್ಳವನಾಗಿ ಇಲ್ಲದೆ ಇದ್ದರೆ ಅವನು ಮದರಾಸಿನ ಅಥವಾ ಬೊಂಬಾಯಿನ ಯೂನಿವರ್ಸಿಟಿಯ ಗ್ರಾಜ್ಯುಯೇಟಾಗಿರಬೇಕು.

5. ಈ ಷರತ್ತುಗಳನ್ನು ನೆರವೇರಿಸುವ ಮತ್ತು ಪರೀಕ್ಷೆಗೆ ಬರಲಪೇಕ್ಷಿಸುವ ಉಮೇದುವಾರರು ಅವರ ಹೆಸರುಗಳನ್ನೂ ಮತ್ತು ವಯಸ್ಸು, ಯೋಗ್ಯತೆಗಳ ವಿಷಯದಲ್ಲಿ ಸಾಕ್ಷ್ಯವನ್ನೂ; ಜನನಸ್ಥಳ, ಜಾತಿ, ವಂಶ, ಉದ್ಯೋಗ, ಜನಮಂಡಲಿಯಲ್ಲಿ ಅವರ ಸ್ಥಿತಿ ಇವುಗಳನ್ನು ಕುರಿತು ವರ್ತಮಾನವನ್ನೂ; ಮತ್ತು ಗುಣ ಮತ್ತು ನಡತೆಗಳ ಸರ್ಟಿಫಿಕೇಟುಗಳನ್ನೂ; ಸರ್ಕಾರಿ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರಿಗೆ ಮುಂದೆ ಗೊತ್ತು ಮಾಡಲ್ಪಡುವ ತಾರೀಖಿಗೆ ಮೀರದೆ ಕಳುಹಿಸತಕ್ಕದ್ದು. ಈ ಉಮೇದುವಾರರಿಂದ ಚುನಾವಣೆಯು ಶ್ರೀಮನ್ ಮಹಾರಾಜರವರಿಂದ ಮಾಡಲ್ಪಡುವುದು ಮತ್ತು ಹಾಗೆ ಚುನಾಯಿಸಲ್ಪಟ್ಟವರ ಹೆಸರುಗಳು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಡುವುವು. ಹಾಗೆ ಪ್ರಕಟಿಸಲ್ಪಟ್ಟ ಒಂದು ತಿಂಗಳೊಳಗಾಗಿ ಚುನಾಯಿಸಲ್ಪಟ್ಟ ಉಮೇದುವಾರರು ಮುಂದೆ ಸರ್ಕಾರದಿಂದ ಪ್ರಕಟಿಸಲ್ಪಡುವ ಸ್ಥಳದಲ್ಲಿ ಮತ್ತು ತಾರೀಖಿನಲ್ಲಿ ಒಂದು ಮೆಡಿಕಲ್ ಬೋರ್ಡ್ ಯಾ ವೈದ್ಯರ ಸಭೆಯ ಮುಂದೆ ಹಾಜರಾಗತಕ್ಕದ್ದು. ದೃಢಕಾಯವೂ, ಶಕ್ತಿಯೂ ಇಲ್ಲದವರನ್ನು, ಮತ್ತು ಒಬ್ಬ ಕಾರ್ಯನಿರ್ವಾಹಕ ಆಫೀಸರ ಚಟುವಟಿಕೆಯಾದ ಕೆಲಸಗಳಿಗೆ ವಿಶೇಷವಾಗಿ ಅರ್ಹರಾಗದೆ ಇರುವ ಉಮೇದುವಾರರನ್ನು ತಳ್ಳಿಬಿಡಬೇಕೆಂದು ಈ ಬೋರ್ಡಿಗೆ ಅಪ್ಪಣೆ ಕೊಡಲ್ಪಡುವುದು. ಬೋರ್ಡಿನವರಿಂದ ಮಂಜೂರ್ಮಾಡಲ್ಪಟ್ಟ ಮೇಲೆ ಉಮೇದುವಾರರು ಪರೀಕ್ಷೆಗೆ ಅರ್ಹರಾಗಿರತಕ್ಕದ್ದು.

6. ತೃಪ್ತಿಕರವಾಗಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಉಮೇದುವಾರರ ಪಟ್ಟಿಯ ಮೇಲ್ಭಾಗದಿಂದ ಇಬ್ಬರು ಉಮೇದುವಾರರು ಚುನಾಯಿಸಲ್ಪಟ್ಟು ಎ. ಪಟ್ಟಿಯಲ್ಲಿ 5ನೆ ತರಗತಿಯ ಅಸಿಸ್ಟೆಂಟ್ ಕಮಿಷನರ ದರ್ಜೆಗೆ ಅಜಮಾಯಿಷಿ ತರೀಕು ಸೇರಿಸಲ್ಪಡುವರು.

7. ಮೇಲ್ಕಂಡ ಮೇರೆ ಸ್ಪರ್ಧಾಪೂರ್ವಕವಾಗಿ ಮೈಸೂರು ಸಿವಿಲ್ ಸರ್ವಿಸಿಗೆ ಸೇರಿಸಲ್ಪಟ್ಟ ಮನುಷ್ಯರು ಅಜಮಾಯಿಷಿ ಕಾಲದಲ್ಲಿ ಎಂದರೆ ಎರಡು ವರ್ಷಗಳ ಅವಧಿವರೆಗೆ ತಿಂಗಳು ಒಂದಕ್ಕೆ 200 ರೂಪಾಯಿ ಸಂಬಳ ತೆಗೆದುಕೊಳ್ಳುವರು. ಆ ಕಾಲದಲ್ಲಿ ಅವರು

ಮೊದಲನೇದು, ಕುದುರೆ ಸವಾರಿಯಲ್ಲಿ ನಡೆಯುವ ಪರೀಕ್ಷೆಯಲ್ಲಿಯೂ,

ಎರಡನೇದು, ತತ್ಕಾಲದಲ್ಲಿ ಜಾರಿಯಲ್ಲಿರುವ ನಿಬಂಧನೆಗಳ ಮೇರೆ ಇಲಾಖೆಯ ನೌಕರಿಗೆ ಸಂಬಂಧಪಟ್ಟ ಪರೀಕ್ಷೆಯಲ್ಲಿಯೂ

ಮೂರನೇದು, ಅವರ ಪೈಕಿ ಬಿ. ಎ. ಪರೀಕ್ಷೆಯಲ್ಲಿ ಐಚ್ಛಿಕ ಭಾಷೆಯನ್ನಾಗಿ ಕನ್ನಡವನ್ನು ತೆಗೆದುಕೊಳ್ಳದೆ ಇದ್ದವರು ಆ ಭಾಷೆಯಲ್ಲಿ ವಿಧಿಸಲ್ಪಟ್ಟ ಪರಿಮಾಣದ ಪರೀಕ್ಷೆಯಲ್ಲಿಯೂ, ತೇರ್ಗಡೆಯಾಗತಕ್ಕದ್ದು.

ಮೇಲ್ಕಂಡ ಅಜಮಾಯಿಷಿಯ ಎರಡು ವರ್ಷಗಳು ಮುಗಿಯುವುದರೊಳಗೆ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದಕ್ಕೆ ತಪ್ಪಿದ ಪ್ರೊಬೇಷನರ್ ಯಾ ಉಮೇದುವಾರನಿಗೆ ಮತ್ತೊಂದು ವರ್ಷದ ವಾಯಿದೆಯು ದಯೆಯಿಂದ ಕೊಡಲ್ಪಡುವುದು. ಮೂರನೆಯ ವರ್ಷದಲ್ಲಿ ತೇರ್ಗಡೆಯಾಗಲು ತಪ್ಪಿದರೆ ಆತನ ಹೆಸರು ಅಸಿಸ್ಟೆಂಟ್ ಕಮಿಷನರುಗಳ ಪಟ್ಟಿಯಿಂದ ತೆಗೆದುಹಾಕಲ್ಪಡುವುದು.

8. ಮೇಲ ಂಡ ಮೇರೆ ಸಂಪೂರ್ಣವಾಗಿ ಯೋಗ್ಯತೆಯನ್ನು ಹೊಂದಿದಾದ ಬಳಿಕ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರು ಎ. ಪಟ್ಟಿಯಲ್ಲಿ 250 ರೂಪಾಯಿನ ಮೇಲೆ 5ನೆ ತರಗತಿಯ ಅಸಿಸ್ಟೆಂಟ್ ಕಮಿಷನರಾಗಿ ಖಾಯಂ ಮಾಡಲ್ಪಟ್ಟ ತರುವಾಯ ಆ ಪಟ್ಟಿಯಲ್ಲಿ ಕೆಳಗೆ ತೋರಿಸಿರುವ ಪರಿಮಾಣದ ಮೇರೆ ಏರುವನು:—

ಅಜಮಾಯಿಷಿ ತರೀಕಿನ ಕಾಲವಲ್ಲದೆ 5ನೆ ತರಗತಿಯಲ್ಲಿ 1 ವರ್ಷ ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯು,	300 ರೂಪಾಯಿ ಸಂಬಳವುಳ್ಳ 4ನೆ ತರಗತಿಯ ಅಸಿಸ್ಟೆಂಟ್ ಕಮಿಷನರ್ ಕೆಲಸಕ್ಕೆ
4ನೆ ತರಗತಿಯಲ್ಲಿ 3 ವರ್ಷಗಳು ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯು,	350 ರೂಪಾಯಿ ಸಂಬಳವುಳ್ಳ 3ನೆ ತರಗತಿಯ ಅಸಿಸ್ಟೆಂಟ್ ಕಮಿಷನರ್ ಕೆಲಸಕ್ಕೆ
3ನೆ ತರಗತಿಯಲ್ಲಿ 3 ವರ್ಷಗಳು ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯು,	400 ರೂಪಾಯಿ ಸಂಬಳವುಳ್ಳ 2ನೆ ತರಗತಿಯ ಅಸಿಸ್ಟೆಂಟ್ ಕಮಿಷನರ್ ಕೆಲಸಕ್ಕೆ
2ನೆ ತರಗತಿಯಲ್ಲಿ 3 ವರ್ಷಗಳು ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯು,	450 ರೂಪಾಯಿ ಸಂಬಳವುಳ್ಳ 1ನೆ ತರಗತಿಯ ಅಸಿಸ್ಟೆಂಟ್ ಕಮಿಷನರ್ ಕೆಲಸಕ್ಕೆ

9. (1) ಸಿವಿಲ್ ಸರ್ವಿಸ್ ಪರೀಕ್ಷೆಯ ಫಲಿತಾಂಶಗಳು ತಿಳಿದ ಕೂಡಲೆ 2ನೆ ನಿಬಂಧನೆಯ ಎರಡನೆ ವಾಕ್ಯದಲ್ಲಿ ವಿವರಿಸಿರುವಂತೆ ಖಾಲಿಗಳಿಗೆ ಅನುಗುಣವಾಗಿ ಬೇಕಾದಷ್ಟು ಸಂಖ್ಯೆಯ ಜನಗಳನ್ನು ವಿಶೇಷವಾಗಿ ಚುನಾಯಿಸುವುದರಿಂದ ಬಿ. ಪಟ್ಟಿಯ ಅಸಿಸ್ಟೆಂಟ್ ಕಮಿಷನರುಗಳ ದರ್ಜೆಗೆ ಹೊಸ ಆಫಿಸರುಗಳು ಸೇರಿಸಲ್ಪಡುವರು; ಆದರೆ ಸಾಧಾರಣವಾಗಿ ಇಂಡಿಯಾ ಅಥವಾ ಇತರ ದೇಶದ ಯೂನಿವರ್ಸಿಟಿಯ ಬಿ. ಎ. ಡಿಗ್ರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದ ಹೊರತು ಘರಾಣೆಯ ಯಾ ಇತರ ಕಾರಣಗಳ ಮೇಲೆ ಯಾವ ಮನುಷ್ಯನೂ ಚುನಾಯಿಸಲ್ಪಡುವುದಿಲ್ಲ.

(2) ಈ ನಿಬಂಧನೆಯ (1)ನೆ ವಾಕ್ಯದಲ್ಲಿರುವ ಯಾವ ಅಂಶವೂ ಹಾಲಿ ಇರುವ ಖಾಲಿಗಳನ್ನು ಭರ್ತಿ ಮಾಡುವುದಕ್ಕೋಸ್ಕರ ಕೆಳಗಿನ ದರ್ಜೆಗಳಿಂದ ಬಿ. ಪಟ್ಟಿಯ ಅಸಿಸ್ಟೆಂಟ್ ಕಮಿಷನರ್ ದರ್ಜೆಗೆ ಹಂಗಾಮಿ ಬಡತಿಗಳನ್ನು ನಿರೋಧಿಸಬೇಕೆಂದು ಉದ್ದೇಶಿಸಿ ಇಲ್ಲ; ಆದರೆ ಹಾಗೆ ಬಡತಿ ಮಾಡಲ್ಪಟ್ಟ ಆಫೀಸರು ಅಂಥಾ ಬಡತಿಯ ಕಾರಣಮಾತ್ರದಿಂದ (1)ನೆ ವಾಕ್ಯದ ಮೇರೆ ಖಾಯಂ ನೌಕರರಾತಿಗಳು ಮಾಡಲ್ಪಟ್ಟಾಗ ಖಾಯಮಿಗೆ ಹಕ್ಕುಳ್ಳವನಾಗುವುದಿಲ್ಲ.

10. ಘರಾಣೆಯ ಅಥವಾ ಇತರ ಕಾರಣಗಳ ಮೇಲೆ ಮೈಸೂರು ಸಿವಿಲ್ ಸರ್ವಿಸಿಗೆ ಸೇರಿಸಲ್ಪಟ್ಟ ಮನುಷ್ಯರನ್ನು ಬಿ. ಪಟ್ಟಿಯ 5ನೆ ತರಗತಿಯ ಅಸಿಸ್ಟೆಂಟ್ ಕಮಿಷನರ ದರ್ಜೆಗೆ ಅಜಮಾಯಿಷಿ ತರೀಕು ತಿಂಗಳು ಒಂದಕ್ಕೆ 200 ರೂಪಾಯಿನ ಸಂಬಳದ ಮೇಲೆ ನೌಕರರ್ಮಾಡಲಾಗುವುದು; ಇವರ ವಿಷಯದಲ್ಲಿ ಅಜಮಾಯಿಷಿ ತರೀಕಿನ ಕಾಲವು ಮೂರು ವರ್ಷಗಳಾಗಿರುವುದು. ಇತರ ವಿಷಯಗಳಲ್ಲಿ 7 ಮತ್ತು 8ನೆ ನಿಬಂಧನೆಗಳ ನಿಯಮಗಳು ಇಂಥಾ ಪ್ರೊಬೇಷನರುಗಳಿಗೆ ಲಗಾವಾಗತಕ್ಕದ್ದು.

11. ಸರ್ಕಾರಿ ನೌಕರಿಯ ಕೆಳಗಿನ ದರ್ಜೆಗಳಿಂದ ಬಿ. ಪಟ್ಟಿಗೆ ಸೇರಿಸಲ್ಪಟ್ಟ ಮನುಷ್ಯರು ಪ್ರೊಬೇಷನರುಗಳಾಗಿರಬೇಕೆಂದು ವಿಧಿಸದೆ ಅವರನ್ನು 250 ರೂಪಾಯಿ ಸಂಬಳವುಳ್ಳ 5ನೆ ತರಗತಿಯ ಅಸಿಸ್ಟೆಂಟು ಕಮಿಷನರುಗಳಾಗಿ ನೌಕರರ್ಮಾಡಲಾಗುವುದು; ಅವರು ಒಂದೊಂದು ತರಗತಿಯಲ್ಲಿ ಮೂರು ವರ್ಷಗಳ ಕಾಲ ಸರ್ಕಾರದವರು ಒಪ್ಪುವಂತೆ ಕೆಲಸಮಾಡಿದ ತರುವಾಯ ಮೇಲಿನ ತರಗತಿಗೆ ಏರತಕ್ಕದ್ದು;

ಆದರೆ, ಈರೀತಿಯಾಗಿ ನೌಕರರ್ಮಾಡಲ್ಪಟ್ಟ ಆಫಿಸರು ಮೊದಲೇ 250 ರೂಪಾಯಿ ಸಂಬಳ ತೆಗೆದುಕೊಳ್ಳುತ್ತಿದ್ದರೆ ಆ ಸಂಬಳವನ್ನು ತೆಗೆದುಕೊಳ್ಳುತ್ತಿದ್ದ ಕಾಲವನ್ನು 4ನೆ ತರಗತಿಗೆ ಬಡತಿಯಾಗುವುದಕ್ಕೆ ಬೇಕಾಗಿರುವ ಮೂರು ವರ್ಷಗಳ ಕಾಲದ ವಿಷಯದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು;

ಮತ್ತು ಸಬ್ ಜಡ್ಜಾಗಿ ನೌಕರರ್ಮಾಡುವ ಉದ್ದೇಶದಿಂದ ಒಬ್ಬ ಮುನ್ಸಿಫನನ್ನು ಅಸಿಸ್ಟೆಂಟ್ ಕಮಿಷನರಾಗಿ ನೌಕರರ್ಮಾಡಿದರೆ ಆತನನ್ನು 400 ರೂಪಾಯಿ ಸಂಬಳವುಳ್ಳ 2ನೆ ತರಗತಿಯ ಅಸಿಸ್ಟೆಂಟ್ ಕಮಿಷನರಾಗಿ ನೌಕರರ್ಮಾಡತಕ್ಕದ್ದು.

12. ಆತನ ದರ್ಜೆಯ ಮೊದಲನೆ ತರಗತಿಯಲ್ಲಿ ಕನಿಷ್ಠಪಕ್ಷ ಎರಡು ವರ್ಷಗಳು ನೌಕರಿ ಮಾಡಿದ ಉಭಯ ಪಟ್ಟಿಗಳ ಅಸಿಸ್ಟೆಂಟ್ ಕಮಿಷನರು ಅರ್ಹನಾಗಿ ಕಂಡು ಬಂದು ಖಾಲಿಗಳೂ ಇದ್ದರೆ ಸಾಲಿಯಾನಾ 50 ರೂಪಾಯಿ ಬಡತಿಗಳ ಮೂಲಕ 600 ರೂಪಾಯಿಗೆ ಏರುವ 500 ರೂಪಾಯಿ ಸಂಬಳವುಳ್ಳ ಸೀನಿಯರ್ ಅಸಿಸ್ಟೆಂಟ್ ಕಮಿಷನರ ದರ್ಜೆಗೆ ಬಡತಿಗೆ ಅರ್ಹನಾಗಿರತಕ್ಕದ್ದು. ಈ ಕಡೆಯಲ್ಲಿ ಹೇಳಿದ ದರ್ಜೆಯಲ್ಲಿ ಒಟ್ಟು ಎಂಟು ಸ್ಥಳಗಳು ಇರತಕ್ಕದ್ದು.

13. ನಿಬಂಧನೆಗಳ ಮೇರೆ ಪರೀಕ್ಷೆಯ ಮೂಲಕ ಅಥವಾ ವಿಶೇಷ ಚುನಾವಣೆಯ ಮೂಲಕ ಹೊಸದಾಗಿ ಸೇರಿಸಲ್ಪಟ್ಟ ಪ್ರತಿ ಆಫಿಸರೂ ಆ ಮೊದಲೇ ತರಬೇತನ್ನು ಹೊಂದಿ ಇದ್ದ ಹೊರತು ಸರ್ವೆ ಇಲಾಖೆಯಲ್ಲಿ ಆರು ತಿಂಗಳಿಗೆ ಕಡಮೆಯಿಲ್ಲದೆಯೂ ಮತ್ತು ಅಕೌಂಟ್ಸ್ ಯಾ ಲೆಕ್ಕದ ಇಲಾಖೆಯಲ್ಲಿ 6 ತಿಂಗಳಿಗೆ ಕಡಮೆಯಿಲ್ಲದೆಯೂ ತರಬೇತು ಮಾಡಲ್ಪಡತಕ್ಕದ್ದು ಮತ್ತು ಸ್ಪರ್ಧಾಪೂರ್ವಕವಾಗಿ ಹೊಸದಾಗಿ ಸೇರಿಸಲ್ಪಟ್ಟ ಪ್ರತಿ ಆಫಿಸರೂ ಒಟ್ಟು ಒಂದು ವರ್ಷಕ್ಕೆ ಕಡಮೆಯಿಲ್ಲದೆ ಮುನ್ಸಿಫನಾಗಿ ಅಥವಾ ಸಬ್ ಜಡ್ಜಾಗಿ ಜುಡಿಷಲ್ ಇಲಾಖೆಯಲ್ಲಿ ಕೂಡ ತರಬೇತು ಮಾಡಲ್ಪಡತಕ್ಕದ್ದು.

ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯವರ ಆಫಿಸಿನಲ್ಲಿ ಅಂಡರ್ ಮತ್ತು ಅಸಿಸ್ಟೆಂಟ್ ಸೆಕ್ರಿಟೆರಿಗಳು, ರೆವಿನ್ಯೂ ಇಲಾಖೆಯಲ್ಲಿ (ಸಬ್) ಡಿವಿಜನ್ ಮತ್ತು ಟ್ರೆಜರಿ ಆಫಿಸರುಗಳು, ಸಬಾರ್ಡಿನೇಟ್ ಜಡ್ಜಿಗಳು, ಪೊಲೀಸು ಸೂಪರಿಂಟೆಂಡೆಂಟುಗಳು, ಎಕ್ಸೈಸ್ ಡಿವಿಜನ್ ಆಫಿಸರುಗಳು, ಸರ್ವೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟುಗಳು, ಅಸಿಸ್ಟೆಂಟ್ ಕಂಟ್ರೋಲರ್‌ಗಳು ಮತ್ತು ಮೇಲ್ಕಂಡ ಇಲಾಖೆಗಳಲ್ಲಿ ಇವುಗಳಿಗೆ ಸಮವಾದ ಇತರ ಉದ್ಯೋಗಗಳು—ಈ ಉದ್ಯೋಗಗಳು ಪಟ್ಟಿಗಳ ಭೇದವನ್ನೆಣಿಸದೆ ಅಸಿಸ್ಟೆಂಟ್ ಕಮಿಷನರುಗಳ ದರ್ಜೆಯಿಂದ ಅರ್ಹತೆಯಿಂದಲೂ ತರಬೇತಿನಿಂದಲೂ ಯೋಗ್ಯತೆ ಹೊಂದಿದ ಆಫಿಸರುಗಳಿಂದ ಭರ್ತಿ ಮಾಡಲ್ಪಡತಕ್ಕದ್ದು. ಅಂಥಾ ಆಫಿಸರುಗಳು ಆಗಾಗ್ಯೆ ಅವರವರು ಇರುವ ಹಾಗೆ ಸಂಭವಿಸುವ ತರಗತಿಯ ಕ್ರಮವಾದ ಸಂಬಳವನ್ನು ಅವರು ವಹಿಸುವ ಉದ್ಯೋಗಕ್ಕೆ ಲಗತ್ತು ಮಾಡಿರುವ ಯಾವುದಾದರೂ ವಿಶೇಷವಾದ ಅಥವಾ ಸ್ಥಳೀಯ ಅಲೋವೆನ್ಸ್ ಯಾ ವೇತನ ಸಹಿತ ತೆಗೆದುಕೊಳ್ಳುವರು.

14. (1) ಶ್ರೀಮನ್ ಮಹಾರಾಜರವರಿಂದ ಆಗಾಗ್ಯೆ ಮಂಜೂರ್ಮಾಡಲ್ಪಡಬಹುದಾದ ಬದಲಾವಣೆಗಳಿಗೆ ಬಳಪಟ್ಟು, ಈ ಕೆಳಗಿನ ಇಲಾಖೆಗಳಲ್ಲಿರುವ ಅಸಿಸ್ಟೆಂಟ್ ಕಮಿಷನರುಗಳ ಉದ್ಯೋಗಗಳ ಪರಿಮಾಣವು ಪ್ರತಿ ಒಂದು ಇಲಾಖೆಯ ಎದುರಿಗೂ ನಮೂದು ಮಾಡಿರುವಂತೆ ಇರತಕ್ಕದ್ದು :—

ಇಲಾಖೆ.	ಸಂಖ್ಯೆ.	ಉದ್ಯೋಗದ ಸ್ವಭಾವ.
ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯವರ ಆಫಿಸು..	2	ಅಂಡರ್ ಸೆಕ್ರಿಟೆರಿಗಳು.
	2	ಅಸಿಸ್ಟೆಂಟ್ ಸೆಕ್ರಿಟೆರಿಗಳು.
	1	ದೀವಾನರವರ ಬಳಿ ಕೆಲಸ ಮಾಡುವ ಅಸಿಸ್ಟೆಂಟ್ ಅಥವಾ ಅಂಡರ್ ಸೆಕ್ರಿಟೆರಿ, ಕೆಲಸ ಮಾಡುವ ಆಫಿಸರ ದರ್ಜೆಗೆ ಅನುಗುಣವಾಗಿ.
	1	ದೀವಾನರವರ ಪ್ರೈವೆಟ್ ಸೆಕ್ರಿಟೆರಿ.
ರೆವಿನ್ಯೂ ಇಲಾಖೆ ...	17	ಸಬ್ ಡಿವಿಜನ್‌ಗಳ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್‌ಗಳು.
		ಟ್ರೆಜರಿ ಅಸಿಸ್ಟೆಂಟ್ ಕಮಿಷನರುಗಳು.
	1	ಹುಜೂರು ಟ್ರೆಜರಿ ಆಫಿಸರು.
	2	ಬೆಂಗಳೂರು ಮತ್ತು ಮೈಸೂರು ನಗರಗಳ ಅಸಿಸ್ಟೆಂಟ್ ಕಮಿಷನರ್ ಮಾಜಿಸ್ಟ್ರೇಟುಗಳು.
	2	ರೆವಿನ್ಯೂ ಕಮಿಷನರ ಅಸಿಸ್ಟೆಂಟುಗಳು.
ಎಕ್ಸೈಸ್ ಇಲಾಖೆ ...	4	ಡಿಸ್ಟ್ರಿಕ್ಟ್ ಎಕ್ಸೈಜ್ ಆಫಿಸರುಗಳು.
	1	ಎಕ್ಸೈಸ್ ಕಮಿಷನರ ಹೆಡ್ ಕ್ವಾರ್ಟರ್ ಅಸಿಸ್ಟೆಂಟು.
ಸರ್ವೆ ಮತ್ತು ಸೆಟ್ಲ್ಮೆಂಟ್ ಇಲಾಖೆ ...	5	ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ಗಳು.
ಪೊಲೀಸು ಇಲಾಖೆ	9	ಸೂಪರಿಂಟೆಂಡೆಂಟ್‌ಗಳು.
	1	ಪೊಲೀಸು ಇನ್ಸ್‌ಪೆಕ್ಟರ್ ಜನರಲ್‌ರವರ ಹೆಡ್ ಕ್ವಾರ್ಟರ್ ಅಸಿಸ್ಟೆಂಟ್.
ಜುಡಿಷಲ್ ಇಲಾಖೆ ...	3	ಸಬಾರ್ಡಿನೇಟ್ ಜಡ್ಜಿಗಳು.
	1	ಚೀಫ್ ಕೋರ್ಟ್ ರಿಜಿಸ್ಟ್ರಾರ್ ಮತ್ತು ಉದ್ಯೋಗಪ್ರಯುಕ್ತ ಚೀಫ್ ಕೋರ್ಟ್ ತೀರ್ಮಾನಗಳ ರಿಪೋರ್ಟರ್.
ಅಕೌಂಟ್ ಯಾ ಲೆಕ್ಕದ ಇಲಾಖೆ ..	5	ಅಸಿಸ್ಟೆಂಟ್ ಕಂಟ್ರೋಲರ್‌ಗಳು.
ಆಕಸ್ಮಿಕವಾದ ಸಂಗತಿಗಳಿಗಾಗಿಯೂ, ರಜಾ ಮೇಲೆ ಗೈರ್ ಹಾಜರಿಗಾಗಿಯೂ, ಯಾವುದಾದರೂ ಬೇರೆ ಕೆಲಸಗಳಿಗೆ ನೇಮಿಸುವುದಕ್ಕಾಗಿಯೂ, ಮತ್ತು ಕೆಲಸದಲ್ಲಿ ತರಬೇತಾಗುತ್ತಿರಬಹುದಾದ ಪ್ರೊಬೇಷನರ್‌ಗಳಿಗಾಗಿಯೂ ಸೇರಿಸತಕ್ಕದ್ದು.	8	
ಜಮಾ ...	73	

(2) ಇದರಡಿ ಕಂಡ ಉದ್ಯೋಗಗಳು (1) ನೆ ವಾಕ್ಯದಲ್ಲಿ ಕೊಟ್ಟಿರುವ ಪಟ್ಟಿಯ ಹೊರಗೆ ಇರತಕ್ಕದ್ದು, ಅವು ಯಾವುವೆಂದರೆ, ಮ್ಯುನಿಸಿಪಾಲಿಟಿಗೋಸ್ಕರ ಪ್ರತ್ಯೇಕವಾಗಿ ನೌಕರರ್ಮಾಡಲ್ಪಟ್ಟ ವೈಸ್ ಪ್ರೆಸಿಡೆಂಟ್, ಫಾರೆಸ್ಟ್ ಸೆಟ್ಲ್ಮೆಂಟ್ ಆಫಿಸರ್, ಅರಮನೆಯ ಶಿಬ್ಬಂದಿಗಳ ಚಾರ್ಜಿನಲ್ಲಿರುವ ಆಫಿಸರು, ಕೋಲಾರದ ಚಿನ್ನದ ಗಣಿಗಳ ಸ್ಪೆಷಲ್ ಮಾಜಿಸ್ಟ್ರೇಟು, ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯವರ ಆಫಿಸಿನ ರಿಜಿಸ್ಟ್ರಾರು, ಮತ್ತು ಈ ವಿಚಾರದಲ್ಲಿ ಸರ್ಕಾರದವರು ಆಗಿಂದಾಗ ನಮೂದಿಸಬಹುದಾದ ಇತರ ಆಫಿಸರುಗಳು.

(3) (2) ನೆ ವಾಕ್ಯದಲ್ಲಿ ಸೂಚಿಸಿರುವ ಉದ್ಯೋಗಗಳ ಪೈಕಿ ಯಾವುದಕ್ಕಾದರೂ, ಅಥವಾ ಇಷ್ಟೆಂದು ಗೊತ್ತಾಗಿ ಹೇಳುವುದಕ್ಕಾಗದ ಕಾಲದವರೆಗೆ ಅಥವಾ ದೀರ್ಘಕಾಲದವರೆಗೆ ಸಿಲ್ಲಿಸಿಕೊಳ್ಳಬಹುದಾದ ವಿಶೇಷವಾದ ಕೆಲಸಕ್ಕಾಗಿ, ಅಸಿಸ್ಟೆಂಟ್

ಕಮಿಷನರ್ ದರ್ಜೆಯಲ್ಲಿರುವ ಒಬ್ಬ ಆಫೀಸರು ಹಂಗಾಮಿಯಾಗಿ ನೇಮಿಸಲ್ಪಟ್ಟಾಗ ಆತನನ್ನು ಬೇರೆ ಕೆಲಸದಲ್ಲಿರುವುದಾಗಿ ತೋರಿಸಿ (1) ನೆ ವಾಕ್ಯದಲ್ಲಿ ಸಮೂದಾದ ಪಟ್ಟಿಯಲ್ಲಿರುವ ಉದ್ಯೋಗಗಳ ಒಟ್ಟು ಸಂಖ್ಯೆಯನ್ನು ಏಕರೀತಿಯಾಗಿ ಕಾಪಾಡುವ ಹಾಗೆ ಆತನ ಸ್ಥಳವನ್ನು ತತ್ಕಾಲಕ್ಕೆ ಖಾಯಮ್ಮಾಗಿ ಭರ್ತಿ ಮಾಡಬಹುದು.

15. ಖಾಲಿಗಳಿಗೆ ಅನುಗುಣವಾಗಿ ಅರ್ಹತೆಯ ಮೇಲೆ ಚುನಾಯಿಸುವುದರಿಂದ ಅಸಿಸ್ಟೆಂಟ್ ಕಮಿಷನರ್‌ಗಳಿಗೆ ದೊರೆಯಬಹುದಾದ ಮೇಲ್ಪಟ್ಟ ಉದ್ಯೋಗಗಳು ಯಾವುವೆಂದರೆ :—

ಎಂಟು ಡೆಪ್ಯುಟಿ ಕಮಿಷನರ್‌ಗಳು :—

ಮೊದಲನೆ ತರಗತಿ	1,200 ರೂಪಾಯಿನ ಮೇಲೆ	2	ಇವಲ್ಲದೆ ಕೋಲಾರದ ಡೆಪ್ಯುಟಿ ಕಮಿಷನರಿಗೆ ಸ್ಥಳೀಯ ವೇತನ 150 ರೂಪಾಯಿ ಸಹಿತ.
ಎರಡನೆ ತರಗತಿ	1,000 ರೂಪಾಯಿನ ಮೇಲೆ	3	
ಮೂರನೆ ತರಗತಿ	800ಕ್ಕೆ ಏರುವ 700 ರೂಪಾಯಿನ ಮೇಲೆ	3	

ಇಬ್ಬರು ಡಿಸ್ಟ್ರಿಕ್ಟ್ ಜಡ್ಜಿಗಳು :—

ಮೊದಲನೆ ತರಗತಿ	1,200 ರೂಪಾಯಿನ ಮೇಲೆ	ಪ್ರತಿ ತರಗತಿಯಲ್ಲಿಯೂ ಎರಡು ವರ್ಷಗಳಿಗೆ ಕಡಮೆಯಿಲ್ಲದೆ ನೌಕರಿ ಮಾಡಿದ ತರುವಾಯ ಅದಕ್ಕೆ ಮೇಲಿನ ತರಗತಿಗೆ ಪ್ರತ್ಯಕ್ಷ ವೃದ್ಧಿ. ಆದರೆ ಯಾವಕಾಲದಲ್ಲಿಯೂ ಮೊದಲನೆ ತರಗತಿಯಲ್ಲಿ ಒಬ್ಬರಿಗಿಂತ ಹೆಚ್ಚು ಆಫೀಸರು ಇರಕೂಡದು.
ಎರಡನೆ ತರಗತಿ	1,000 ರೂಪಾಯಿನ ಮೇಲೆ	
ಮೂರನೆ ತರಗತಿ	800ಕ್ಕೆ ಏರುವ 700 ರೂಪಾಯಿನ ಮೇಲೆ	

ಸಾಲಿಯಾನಾ 100 ರೂಪಾಯಿನ ಬಡತಿಗಳ ಮೇಲೆ 1,200 ರೂಪಾಯಿಗಳಿಗೆ ಏರುವ 800 ರೂಪಾಯಿನ ಮೇಲೆ ಒಬ್ಬರು ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿ—ಅವರು ಡೆಪ್ಯುಟಿ ಕಮಿಷನರ ದರ್ಜೆಯ ಆಫೀಸರಾಗಿರುವ ಪಕ್ಷದಲ್ಲಿ ಸ್ಥಳೀಯ ವೇತನ 150 ರೂಪಾಯಿಗಳ ಸಹಿತ ಅವರ ದರ್ಜೆಯ ಸಂಬಳವನ್ನು ಅವರು ಹೊಂದತಕ್ಕದ್ದು.

ಸಾಲೀಯಾನಾ 40 ರೂಪಾಯಿನ ಮೇರೆ ಬಡತಿಗಳಿಂದ 800 ರೂಪಾಯಿಗಳಿಗೆ ಏರುವ 600 ರೂಪಾಯಿನ ಮೇಲೆ ಒಬ್ಬರು ಡೆಪ್ಯುಟಿ ಸೆಕ್ರೆಟರಿ. *

16. ಇಪ್ಪತ್ತೈದು ವರ್ಷಗಳಿಗೆ ಕಡಮೆಯಿಲ್ಲದೆ ನಿರಂತರವಾಗಿ ನೌಕರಿಮಾಡಿದ ತರುವಾಯ ಮೈಸೂರು ಸಿವಿಲ್ ಸರ್ವಿಸಿನ ಆಫೀಸರುಗಳಿಗೆ ಸರಾಸರಿ ಸಂಬಳಗಳಲ್ಲಿ ಅರ್ಧದಷ್ಟು ಪೆನ್ಷನಿನ ಪರಮಾವಧಿಯು ವರ್ಷ ಒಂದಕ್ಕೆ 6,000 ರೂಪಾಯಿಯಾಗಿರುವುದು.

* ಪ್ರತ್ಯೇಕವಾದ ಮುಜರೈ ಸೆಕ್ರೆಟರಿಯ ಉದ್ಯೋಗವನ್ನು ಇಟ್ಟಿರುವ ವರೆಗೂ ಈ ಕೆಲಸವು ಭರ್ತಿ ಮಾಡಲ್ಪಡುವುದಿಲ್ಲ.

ತಾರೀಖು 27ನೆ ಜೂನ್ 1907.

ನಂ ಜಿ. 8140—ಜಿ. ಎಂ. 12-06-69, ಸನ್ 1907ನೆ ಇಸವಿಯಲ್ಲಿ ಮೈಸೂರು ಸಿವಿಲ್ ಸರ್ವಿಸಿಗೆ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರುಗಳನ್ನು ಸೇರಿಸುವುದಕ್ಕೋಸ್ಕರ 1907ನೆ ಇಸವಿಯ ನವೆಂಬರು 11ನೆ ತಾರೀಖು ಸೋಮವಾರವೂ ಆತರುವಾಯ ಕೆಲವು ದಿವಸಗಳೂ ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಮುಂದಾಮಾಡಲ್ಪಟ್ಟ ಉಮೇದುವಾರರ ಸ್ಪರ್ಧಾಪೂರ್ವಕವಾದ ಪರೀಕ್ಷೆಯು ನಡೆಸಲ್ಪಡುವುದು.

2. ಪರೀಕ್ಷೆಗೆ ಬರುವ ಉಮೇದುವಾರರು 1907ನೆ ಇಸವಿಯ ನವೆಂಬರು 11ನೆ ತಾರೀಖಿನ ದಿನ ಇಪ್ಪತ್ತೈದು ವರ್ಷಗಳ ವಯಸ್ಸಿಗೆ ಮೀರಿರಕೂಡದು, ಮತ್ತು ಇಂಡಿಯಾ ದೇಶದ ಅಥವಾ ಇತರ ದೇಶದ ಯೂನಿವರ್ಸಿಟಿಯ ಕೆಲಗಳ ಗ್ರಾಜ್ಯುಯೇಟುಗಳಾಗಿರಬೇಕು. ಅದಲ್ಲದೆ ಉಮೇದುವಾರನು ಮೈಸೂರು ದೇಶೀಯನಾಗಿ ಅಥವಾ ಮೈಸೂರು ದೇಶದಲ್ಲಿ ವಾಸವುಳ್ಳವನಾಗಿ ಇಲ್ಲದೆ ಇದ್ದರೆ ಅವನು ಮದರಾಸಿನ ಅಥವಾ ಬೊಂಬಾಯಿನ ಯೂನಿವರ್ಸಿಟಿಯ ಗ್ರಾಜ್ಯುಯೇಟಾಗಿರಬೇಕು.

3. ಸದರಿ ಪರೀಕ್ಷೆಗೆ ಸೇರಿಸಲ್ಪಡಲಪೇಕ್ಷಿಸುವ ಉಮೇದುವಾರರು ತಾವು ಯಾವ ಐಚ್ಛಿಕ ವಿಷಯದಲ್ಲಿ ಪರೀಕ್ಷಿಸಲ್ಪಡಲು ಅಪೇಕ್ಷಿಸುತ್ತಾರೆಯೋ ಅದನ್ನೂ ತಿಳಿಸಿ 1907ನೆ ಇಸವಿಯ ಆಗಸ್ಟು 15ನೆ ತಾರೀಖಿನ ದಿನ ಅಥವಾ ಅದಕ್ಕೆ ಪೂರ್ವ ತಲಪುವಂತೆ ಬೆಂಗಳೂರಿನಲ್ಲಿರುವ ಸರ್ಕಾರಿ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರಿಗೆ ತಮ್ಮ ಅರ್ಜಿಗಳನ್ನು ಕಳುಹಿಸತಕ್ಕದ್ದು.

4. ಅರ್ಜಿಗಳು ಇದಕ್ಕೆ ಸೇರಿಸಿರುವ ಎ ನಮೂನೆಯಲ್ಲಿರತಕ್ಕದ್ದು. ಈ ನಮೂನೆಯ ಅಚ್ಚು ಪ್ರತಿಗಳನ್ನು ಬೆಂಗಳೂರಿನಲ್ಲಿರುವ ಸರ್ಕಾರಿ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿಯವರ ಕಚೇರಿಯಿಂದ ಅಥವಾ ಬೆಂಗಳೂರಿನಲ್ಲಿರುವ ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲವರ ಕಚೇರಿಯಿಂದ ಪಡೆಯಬಹುದು.

4. ಯಾವ ಉಮೇದುವಾರನಾಗಲಿ, ಮೈಸೂರು ಸರ್ಕಾರಕ್ಕೆ ಸೇರಿದ ಖಜಾನೆಗೆ ಐವತ್ತು ರೂಪಾಯಿಗಳ ಮೊಬಲಗನ್ನು ಸಲ್ಲಿಸಿರುವುದಾಗಿ ತಿಳಿಸುವ ಖಜಾನೆಯ ರಸೀದಿಯನ್ನಾಗಲಿ ಅಥವಾ ಬೆಂಗಳೂರಿನಲ್ಲಿರುವ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರಿಗೆ ಸಲ್ಲುವಂತೆ ಐವತ್ತು ರೂಪಾಯಿನ ತಪಾಲು ಮಣಿಆರ್ಡರನ್ನಾಗಲಿ ತನ್ನ ಅರ್ಜಿಗೆ ಸೇರಿಸಿದ್ದ ಹೊರತು ಆತನ ಹೆಸರು ರಿಜಿಸ್ಟರಿಗೆ ದಾಖಲ್ಮಾಡಿಕೊಳ್ಳಲ್ಪಡುವುದಿಲ್ಲ.

5. ಪ್ರತಿ ಉಮೇದುವಾರನೂ ತನ್ನ ಅರ್ಜಿಯ ಜತೆಯಲ್ಲಿ ಇದರಡಿ ಕಂಡ ಸರ್ಟಿಫಿಕೇಟುಗಳನ್ನೂ ಪಟ್ಟಿಯನ್ನೂ ರವಾನಿಸತಕ್ಕದ್ದು.

(1) ಒಂದು ಜನನದ ಸರ್ಟಿಫಿಕೇಟು.

ಇದು ಜನನದ ರಿಜಿಸ್ಟ್ರಾರಿಂದ ಕೊಡಲ್ಪಟ್ಟ ಸರ್ಟಿಫಿಕೇಟಾಗಿ, ಬ್ಯಾಪ್ಟಿಸಮ್ ಎಂಬ ಕ್ರೈಸ್ತಸ್ನಾನದ ಸರ್ಟಿಫಿಕೇಟಾಗಿ, ಅಥವಾ ಜಸ್ಟಿಸ್ ಆಫ್ ದಿ ಪೀಸ್ ಎಂಬ ನ್ಯಾಯಾಧಿಕಾರಿಯಿಂದ ಅಥವಾ ಮಾಜಿಸ್ಟ್ರೇಟರಿಂದ ಕೊಡಲ್ಪಟ್ಟ ಸರ್ಟಿಫಿಕೇಟಾಗಿ ಇರಬಹುದು. ಈ ನ್ಯಾಯಾಧಿಕಾರಿಯು ಅಥವಾ ಮಾಜಿಸ್ಟ್ರೇಟರು ಅರ್ಜಿದಾರನ ಜಾತಕದಿಂದ, ಅಥವಾ ಸ್ಕೂಲು ಯಾ ಪಾಠಶಾಲೆಯ ರಿಜಿಸ್ಟರುಗಳಿಂದ ಉದ್ಧರಿಸಲ್ಪಟ್ಟ ಪ್ರಮಾಣಿಸಲ್ಪಟ್ಟಿರುವ ಭಾಗಗಳಿಂದ ಅಥವಾ ಸಾಕಾದಷ್ಟು ಸಾಕ್ಷ್ಯವೆಂದು ತಾವು ಎಣಿಸಬಹುದಾದ ಇತರ ಸಾಕ್ಷ್ಯದಿಂದ ಅರ್ಜಿದಾರನು ಕೊಟ್ಟ ಜನನದ ತಾರೀಖು ಕರಾರ್ವಾಕಾಗಿದೆಯೆಂದು ತೃಪ್ತನಾದರೆ ಮಾತ್ರವೇ ಸರ್ಟಿಫಿಕೇಟನ್ನು ಕೊಡತಕ್ಕದ್ದು.

(2) ಒಳ್ಳೆಯ ಗುಣವುಳ್ಳವನೆಂದು ಒಂದು ಸರ್ಟಿಫಿಕೇಟು.

ಈ ಸರ್ಟಿಫಿಕೇಟು 1907ನೆ ಇಸವಿಯ ಜನವರಿ 1ಕ್ಕಿಂತ ಹಿಂದಿನ ತಾರೀಖಿನದಾಗಿರಕೂಡದು; ಮತ್ತು ಕನಿಷ್ಠಪಕ್ಷ ಹಿಂದಲ ಮೂರು ವರ್ಷಗಳಿಂದಾದರೂ ಉಮೇದುವಾರನ ಆಪ್ತಪರಿಚಿತಸ್ಥರಾಗಿರುವ, ಬಂಧುವಲ್ಲದ, ಗೌರವಸ್ಥರೆಂದು ಪ್ರಸಿದ್ಧರಾದ ಒಬ್ಬ ಮನುಷ್ಯರಿಂದ ಕೊಡಲ್ಪಟ್ಟಿರತಕ್ಕದ್ದು.

(3) ಉಮೇದುವಾರನು ವಿದ್ಯಾಭ್ಯಾಸಮಾಡಿರುವ ಕಾಲೇಜು ಅಥವಾ ಕಾಲೇಜುಗಳ ಅಧಿಕಾರಿಗಳಿಂದ ಉಮೇದುವಾರನ ಅಭಿವೃದ್ಧಿಯ ಮತ್ತು ನಡತೆಯ ವಿಚಾರವಾಗಿ ಸರ್ಟಿಫಿಕೇಟು ಅಥವಾ ಸರ್ಟಿಫಿಕೇಟುಗಳು.

(4) ಉಮೇದುವಾರನ ತಂದೆಯ ಅಥವಾ ಪಾಲಕನ ಉದ್ಯೋಗವನ್ನೂ ಜನಮಂಡಲಿಯಲ್ಲಿ ಉಮೇದುವಾರನ ಮನೆತನದ ಸ್ಥಿತಿಯನ್ನೂ ತಿಳಿಸುವ ಸಾಕ್ಷ್ಯ.

(5) ಉಮೇದುವಾರನಿಗೆ ಒಳ್ಳೆಯ ದೇಹದಾರ್ಢ್ಯವುಂಟೆಂದೂ, ಎಗ್ಸಿಕ್ಯೂಟಿವ್ ಆಫಿಸರ ಚಟುವಟಿಕೆಯಾದ ಕೆಲಸಗಳಿಗೆ ಅವನು ಅರ್ಹನೆಂದೂ ಡಿಸ್ಟ್ರಿಕ್ಟ ಸಿವಿಲ್ ಸರ್ಜನಿನ ದರ್ಜೆಗೆ ಕೆಳಪಡದೆ ಇರುವ ಒಬ್ಬ ವೈದ್ಯಾಧಿಕಾರಿಯಿಂದ ಇದಕ್ಕೆ ಸೇರಿಸಿರುವ ಬಿ. ನಮೂನೆಯಲ್ಲಿ ತತ್ಕಾಲೀನವಾದ ಒಂದು ಸರ್ಟಿಫಿಕೇಟು.

(6) ಉಮೇದುವಾರನು ಬಿ. ಎ. ಡಿಗ್ರಿ ಪರೀಕ್ಷೆಯಲ್ಲಿ ಯಾವಾಗ, ಮತ್ತು ಯಾವ ಶಾಖೆಗಳಲ್ಲಿ (ಯಾವುದಾದರೂ ಇದ್ದರೆ) ಮತ್ತು ಯಾವ ತರಗತಿಯಲ್ಲಿ ಅಥವಾ ತರಗತಿಗಳಲ್ಲಿ ತೇರ್ಗಡೆಯಾಗಿರುತ್ತಾನೆಂದು ತೋರಿಸುವ ಒಂದು ಪಟ್ಟಿ.

6. ರಿಜಿಸ್ಟರಿಗೆ ದಾಖಲ್ಮಾಡಿಕೊಳ್ಳಲ್ಪಟ್ಟ ಅರ್ಜಿದಾರರ ಪೈಕಿ ಶ್ರೀಮನ್ ಮಹಾರಾಜರವರಿಂದ ಮಂಜೂರ್ಮಾಡಲ್ಪಡಬಹುದಾದವರು ಮಾತ್ರವೇ ಸ್ಪರ್ಧಾಪೂರ್ವಕವಾದ ಪರೀಕ್ಷೆಗೆ ಸೇರಿಸಲ್ಪಡುವರು. 1907ನೆ ಇಸವಿಯ ಆಗಸ್ಟ್ 29ನೆ ತಾರೀಖಿಗೆ ಮೀರದ ಹಾಗೆ ಮೈಸೂರು ಗೆಜೆಟಿನಲ್ಲಿ ಅವರ ಹೆಸರುಗಳು ಪ್ರಕಟಿಸಲ್ಪಡುವುವು.

7. ಹಿಂದಿನ ಕಡೇ ಪರಿಚ್ಛೇದದ ಪ್ರಕಾರ ಪ್ರಕಟಿಸಲ್ಪಡುವ ಪಟ್ಟಿಯಲ್ಲಿ ಹೆಸರಿರುವ ಮಂಜೂರ್ಮಾಡಲ್ಪಟ್ಟ ಉಮೇದುವಾರರು ಸರ್ಕಾರದಿಂದ ಪ್ರಕಟಿಸಲ್ಪಡುವ ದಿನ ಬೆಂಗಳೂರಿನಲ್ಲಿ ಒಂದು ಮೆಡಿಕಲ್ ಬೋರ್ಡ್ ಯಾ ವೈದ್ಯರ ಸಭೆಯ ಮುಂದೆ ಹಾಜರಾಗತಕ್ಕದ್ದು ಮತ್ತು ಅವರ ಪೈಕಿ ವೈದ್ಯರ ಸಭೆಯಿಂದ ಮಂಜೂರ್ಮಾಡಲ್ಪಡುವವರು ಮಾತ್ರವೇ ಪರೀಕ್ಷೆಗೆ ಹೋಗಲು ಅಪ್ಪಣೆ ಕೊಡಲ್ಪಡುವರು.

8. ಶ್ರೀಮನ್ ಮಹಾರಾಜರವರಿಂದ ಮಂಜೂರ್ಮಾಡಲ್ಪಡದೆ ಇರಬಹುದಾದ ಅಥವಾ ಶ್ರೀಮನ್ ಮಹಾರಾಜರವರಿಂದ ಮಂಜೂರ್ಮಾಡಲ್ಪಟ್ಟು ವೈದ್ಯರ ಸಭೆಯಿಂದ ಮಂಜೂರ್ಮಾಡಲ್ಪಡದೆ ಇರಬಹುದಾದ ಯಾವನಾದರೂ ಉಮೇದುವಾರನು ಕೊಟ್ಟಿರುವ ಫೀಜು ವಾಪಸು ಕೊಡಲ್ಪಡುವುದು.

9 ಪರೀಕ್ಷೆಗೆ ಇದರಡಿ ಕಂಡ ಆವಶ್ಯಕ ಮತ್ತು ಐಚ್ಛಿಕ ವಿಷಯಗಳು ಸೇರಿರತಕ್ಕದ್ದು:—

	ಕಾಲ.	ಅಂಕಗಳು.	
		ಪತ್ರಿಕೆ.	ವಾಚಾ.
ಆವಶ್ಯಕ ವಿಷಯಗಳು.			
ಎ. ಗುಂಪು.			
1. ವಿವರಿಸಲ್ಪಟ್ಟ ಮೂರು ವಿಷಯಗಳ ಪೈಕಿ ಒಂದನ್ನು ಕುರಿತು ಪ್ರಬಂಧರಚನೆ.	3 ಗಂಟೆಗಳು ...	150	
2. ಪರೀಕ್ಷೆಗೆ ಪೂರ್ವ ಮೂರು ತಿಂಗಳಿಗೆ ಮೀರದೆ ವಿಧಿಸಲ್ಪಡುವ, ಈಚೆಗೆ ಪ್ರಕಟವಾದ, ಒಂದು ಅಥವಾ ಅಧಿಕ ಪುಸ್ತಕಗಳು—			
1ನೆ ಪತ್ರಿಕೆ	2 ಸದರೀ ..	100	} 50
2ನೆ ಪತ್ರಿಕೆ	2 ಸದರೀ ..	100	
ಬಿ. ಗುಂಪು.			
3. ಇಂಗ್ಲಿಷ ಭಾಷೆ ಮತ್ತು ಗ್ರಂಥ ಸಮುದಾಯ—			
1ನೆ ಪತ್ರಿಕೆ	3 ಸದರೀ ...	150	} 50
2ನೆ ಪತ್ರಿಕೆ	2 ಸದರೀ ..	100	
ಐಚ್ಛಿಕ ವಿಷಯಗಳು.			
1. ಮೆಥಮೆಟಿಕ್ಸ ಯಾ ಗಣಿತಶಾಸ್ತ್ರ—			
ಪ್ಯೂರ್ ಯಾ ಶುದ್ಧ ಗಣಿತಶಾಸ್ತ್ರ ...	3 ಸದರೀ ...	250	
ಮಿಕ್ಸೆಡ ಯಾ ಮಿಶ್ರ ಸದರೀ	3 ಸದರೀ ...	250	
2. ಫಿಸಿಕಲ್ ಸಯನ್ಸ್ ಯಾ ಪದಾರ್ಥ ವಿಜ್ಞಾನ—			
ಫಿಸಿಕ್ಸ ಯಾ ಪದಾರ್ಥವಿಜ್ಞಾನಶಾಸ್ತ್ರ, ಪ್ರಥಮ ಪತ್ರಿಕೆ ..	3 ಸದರೀ ...	165	
ಸದರೀ ಎರಡನೆ ಪತ್ರಿಕೆ ..	3 ಸದರೀ ..	165	
ಸದರೀ ಮೂರನೆ ಪತ್ರಿಕೆ ...	3 ಸದರೀ ...	170	
ಇದಾಗಲಿ, ಅಥವಾ—			
ಕೆಮಿಸ್ಟ್ರಿ ಯಾ ರಸಾಯನಶಾಸ್ತ್ರ, ಪ್ರಥಮ ಪತ್ರಿಕೆ ...	3 ಸದರೀ ..	150	
ಸದರೀ ಎರಡನೆ ಪತ್ರಿಕೆ ..	3 ಸದರೀ ..	150	
ಕಾರ್ಯತಃ ಪರೀಕ್ಷೆ		200	
ಇದಾಗಲಿ.			
3. ನಾಚುರಲ್ ಸಯನ್ಸ್ ಯಾ ಪ್ರಾಕೃತಿಕಶಾಸ್ತ್ರ—			
ಸಾಮಾನ್ಯ ಜೀವಶಾಸ್ತ್ರ (ಬಯಾಲಜಿ) ...	3 ಗಂಟೆಗಳು ..	150	
ಮತ್ತು ಬಾಟನಿ ಯಾ ಓಷಧಿಶಾಸ್ತ್ರವಾಗಲಿ, ಅಥವಾ ಮೃಗಗಳ ಶರೀರಧರ್ಮಶಾಸ್ತ್ರವಾಗಲಿ, ಅಥವಾ ಜಂತುಶಾಸ್ತ್ರ (ಜೂಆಲಜಿ) ಯಾಗಲಿ ಅಥವಾ ಭೂಗರ್ಭಶಾಸ್ತ್ರ (ಜಿಯಾಲಜಿ).	3 ಸದರೀ ..	150	
ಕಾರ್ಯತಃ ಪರೀಕ್ಷೆ	..	200	
4. ಮನಶ್ಶಾಸ್ತ್ರ ಮತ್ತು ನೀತಿಶಾಸ್ತ್ರ—			
ಸೈಕಾಲಜಿ ಯಾ ಆತ್ಮತತ್ವವಿದ್ಯಾ, ಮತ್ತು ಮೆಟಫಿಸಿಕ್ಸ ಯಾ ಆನ್ವೀಕ್ಷಿಕೀ ಶಾಸ್ತ್ರ.	3 ಗಂಟೆಗಳು ..	200	50
ತರ್ಕಶಾಸ್ತ್ರ ಮತ್ತು ನೀತಿಶಾಸ್ತ್ರ ...	3 ಸದರೀ ...	200	50
5. ಚರಿತ್ರೆ—			
ಇಂಡಿಯಾ ದೇಶದ ಚರಿತ್ರೆ, ಇಂಗ್ಲೆಂಡಿನ ಕಾನ್‌ಸ್ಟಿಟ್ಯೂಷನಲ್ ಯಾ ವ್ಯವಸ್ಥಾನುರೂಪವಾದ ಚರಿತ್ರೆ, ಮತ್ತು 1715ರಿಂದ 1815ರ ವರೆಗ ಸಾಮಾನ್ಯ ನವೀನ ಚರಿತ್ರೆ.	3 ಸದರೀ ...	200	50
ರಾಜನೀತಿಶಾಸ್ತ್ರ, ಅರ್ಥಶಾಸ್ತ್ರ, ತಕ್ಕಷ್ಟು ಕಾರ್ಯನಿರ್ವಾಹ ಸಂಬಂಧವಾದ ಚರಿತ್ರೆಯ ತಿಳಿವಳಿಕೆ ಸಹಿತ.	3 ಸದರೀ ...	200	50

ಐಚ್ಛಿಕ ವಿಷಯಗಳಲ್ಲಿ ಪರೀಕ್ಷೆಗಳು ವ್ಯಾಪ್ತಿಯಲ್ಲಿ ಇಂಡಿಯಾ ದೇಶದ ಯೂನಿವರ್ಸಿಟಿಗಳ ಪೈಕಿ ಯಾವುದಾದರೂ ಒಂದರ ಬಿ. ಎ. ಪರೀಕ್ಷೆಗಳಿಗೆ ಸದೃಶವಾಗಿರುವವು. ಆದರೆ ಪ್ರಶ್ನೆ ಪತ್ರಿಕೆಗಳು ಸ್ವಲ್ಪ ಅಧಿಕ ಪರಿಮಾಣದವುಗಳಾಗಿರುವವು. ಪ್ರತಿ ಪತ್ರಿಕೆಯಲ್ಲಿಯೂ ಹಾಕಿರುವ ಪ್ರಶ್ನೆಗಳು ಪೂರಾ ಅಂಕಗಳನ್ನು ಪಡೆಯುವುದಕ್ಕಾಗಿ ಉತ್ತರ ಬರೆಯಲವಶ್ಯಕವಾಗಿರುವಷ್ಟಕ್ಕಿಂತ ಕನಿಷ್ಠಪಕ್ಷ ಎರಡರಷ್ಟು ಹೆಚ್ಚಾಗಿರತಕ್ಕದ್ದು.

10. ಒಂದು ಐಚ್ಛಿಕ ವಿಷಯಕ್ಕಿಂತ ಅಧಿಕವಾಗಿ ತೆಗೆದುಕೊಳ್ಳಲು ಯಾವ ಉಮೇದುವಾರನಿಗೂ ಅಪ್ಪಣೆ ಕೊಡಲ್ಪಡುವುದಿಲ್ಲ. ಬರಹಮೂಲಕವಾದ ಪರೀಕ್ಷೆಯಲ್ಲಿ ಪರೀಕ್ಷಕರಿಗೆ ಸಮರ್ಪಕವಾಗಿ ತೋರಿಬಂದ ಉಮೇದುವಾರರು ಮಾತ್ರವೇ ವಾಚಾ

ಪರೀಕ್ಷೆಗೆ ಅಥವಾ ಕಾರ್ಯತಃ ಮಾಡಲ್ಪಡುವ ಪರೀಕ್ಷೆಗೆ ಹಾಜರಾಗಲು ಅಪೇಕ್ಷಿಸಲ್ಪಡುವರು. ವಾಚಾ ಪರೀಕ್ಷೆ ಮತ್ತು
ಪರೀಕ್ಷೆಗಳು, ಬರಹ ಮೂಲಕವಾದ ಪರೀಕ್ಷೆಯ ಕಾಲದಲ್ಲಿ ಉಮೇದುವಾರರಿಗೆ ಕ್ರಮವಾಗಿ ಇನ್ಸ್ಪೆಕ್ಟರ ಪ...
ಸಲ್ಪಡುವ ಮೇರೆ ಬೆಂಗಳೂರಿನಲ್ಲಾಗಲಿ ಅಥವಾ ಮೈಸೂರಿನಲ್ಲಾಗಲಿ ನಡೆಸಲ್ಪಡುವವು.

11. ಬರಹ ಮೂಲಕವಾದ ಪರೀಕ್ಷೆಗಳು ಈ ಕೆಳಗೆ ಕಂಡ ಪಟ್ಟಿಯಲ್ಲಿ ವಿವರಿಸಿರುವ ಕಾಲದ ಮತ್ತು ...
ಮದಲ್ಲಿ ನಡೆಸಲ್ಪಡತಕ್ಕದ್ದು:—

ದಿವಸ.	ಗಂಟೆಗಳು.	ವಿಷಯಗಳು...
1907ನೆ ಇಸವಿಯ ನವೆಂಬರು 11ನೆ. ಸೋಮವಾರ.	ಪೂರ್ವಾಹ್ನ 10 ಗಂಟೆಯಿಂದ ಅಪರಾಹ್ನ 1 ಘಂಟೆಯವರೆಗೆ.	ಇಂಗ್ಲಿಷ ಪ್ರಬಂಧರಚನ...
	ಅಪರಾಹ್ನ 2 ಗಂಟೆಯಿಂದ 5 ಗಂಟೆಯವರೆಗೆ.	ಇಂಗ್ಲಿಷ ಭಾಷೆ ಮತ್ತು ... ಮೊ ಪತ್ರಿಕೆ.
1907ನೆ ಇಸವಿಯ ನವೆಂಬರು 12ನೆ ಮಂಗಳವಾರ.	ಪೂರ್ವಾಹ್ನ 10 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ.	ಇಂಗ್ಲಿಷ ಭಾಷೆ ಮತ್ತು ... ಯ, ಎರಡನೆ ಪತ್ರಿಕೆ
	ಅಪರಾಹ್ನ 1 ಗಂಟೆಯಿಂದ 3 ಗಂಟೆಯವರೆಗೆ.	ವಿಧಿಸಲ್ಪಟ್ಟ ಪುಸ್ತಕಳ... ಪ್ರಥಮ ಪತ್ರಿಕೆ.
	ಅಪರಾಹ್ನ 3-30 ಗಂಟೆಯಿಂದ 5-30 ಗಂಟೆಯವರೆಗೆ.	ವಿಧಿಸಲ್ಪಟ್ಟ ಪುಸ್ತಕಳ... ಎರಡನೆ ಪತ್ರಿಕೆ.
1907ನೆ ಇಸವಿಯ ನವೆಂಬರು 13ನೆ ಬುಧವಾರ.	ಪೂರ್ವಾಹ್ನ 10 ಘಂಟೆಯಿಂದ ಅಪರಾಹ್ನ 1 ಗಂಟೆಯವರೆಗೆ.	ಐಚ್ಛಿಕ ವಿಷಯ, ಪ್ರಥ...
	ಅಪರಾಹ್ನ 2 ಗಂಟೆಯಿಂದ 5 ಗಂಟೆವರೆಗೆ.	ಐಚ್ಛಿಕ ವಿಷಯ, ಎರ...
1907ನೆ ಇಸವಿಯ ನವೆಂಬರು 14ನೆ ಗುರುವಾರ.	ಪೂರ್ವಾಹ್ನ 10 ಗಂಟೆಯಿಂದ ಅಪರಾಹ್ನ 1 ಗಂಟೆಯವರೆಗೆ.	ಐಚ್ಛಿಕ ವಿಷಯ, ಮೂ...

ವಾಚಾ ಪರೀಕ್ಷೆ ಮತ್ತು ಕಾರ್ಯತಃ ಪರೀಕ್ಷೆಗಳ ದಿವಸಗಳೂ, ಗಂಟೆಗಳೂ ಬರಹ ಮೂಲಕವಾದ ...
ತಿಳಿಸಲ್ಪಡುವವು.

12. ಆವಶ್ಯಕ ವಿಷಯಗಳ ಪೈಕಿ ಎ. ಗುಂಪಿನಲ್ಲಿ ಅಂಕಗಳ ಒಟ್ಟು ಸಂಖ್ಯೆಯ ಪೈಕಿ ಐದರಲ್ಲಿ ಎರ...
ಲ್ಲದಷ್ಟನ್ನೂ, ಮತ್ತು ಬಿ. ಗುಂಪಿನಲ್ಲಿ ಅಂಕಗಳ ಒಟ್ಟು ಸಂಖ್ಯೆಯ ಪೈಕಿ ಮೂರರಲ್ಲಿ ಒಂದಂಶಕ್ಕೆ ಕಡ...
ಚುನಾಯಿಸಲ್ಪಟ್ಟ ಐಚ್ಛಿಕ ವಿಷಯದಲ್ಲಿ ಅಂಕಗಳ ಒಟ್ಟು ಸಂಖ್ಯೆಯ ಪೈಕಿ ಮೂರರಲ್ಲಿ ಒಂದಂಶಕ್ಕೆ ಕ...
ಪಡೆಯುವ ಉಮೇದುವಾರರು ಅವರವರು ಪಡೆದ ಒಟ್ಟು ಅಂಕಗಳ ಕ್ರಮದಲ್ಲಿ ದಾಖಲ್ಮಾಡಲ್ಪಡುವರು,
ಉಮೇದುವಾರರ ಪಟ್ಟಿಯು ಸರ್ಕಾರದವರಿಗೆ ಕಳುಹಿಸಲ್ಪಡುವುದು.

13. ತೇರ್ಗಡೆಯಾದ ಉಮೇದುವಾರರ ಪಟ್ಟಿಯ ಮೇಲ್ಭಾಗದಲ್ಲಿ ಇರಬಹುದಾದ ಇಬ್ಬರು ಮೈಸೂ...
ಗೆ ಸೇರಿಸಲ್ಪಟ್ಟು ತಿಂಗಳಿಗೆ 200 ರೂಪಾಯಿ ಕಲಬಿನ ಮೇಲೆ ಎ. ಪಟ್ಟಿಯ 5ನೆ ತರಗತಿಯ ಅಸಿಸ್ಟೆಂಟ ಕ...
ಲ್ಮಾಡಲ್ಪಟ್ಟು ಎರಡು ವರ್ಷಗಳ ವರೆಗೆ ಅಜಮಾಯಿಷಿ ತರೀಕು ಇರುವುದಾಗಿ ಭಾವಿಸಲ್ಪಡುವರು. ಈ ...
ಸ್ಸುಕೊಟ್ಟು ತಮ್ಮ ಕೆಲಸವನ್ನು ಮಾಡುವ ಟ್ಟೆ ಸಮರ್ಪಕವಾದ ರುಜುವಾತನ್ನು ಕೊಡುವರೆಂದು...
ಮತ್ತು ಅವರು

(1) ಕುದುರೆ ಸವಾರಿಯಲ್ಲಿ ಪರೀಕ್ಷೆಯಲ್ಲಿಯೂ,

(2) ಕಚ್ಚಾ ಲದಲ್ಲಿ ಜಾರಿಯಲ್ಲಿರುವ ನಿಬಂಧನೆಗಳ ಮೇರೆ ಇಲಾಖೆಯ ನೌಕರಿಗೆ ಸಂಬಂಧಪಟ್ಟ...
ಬಿ. ಎ ಪರೀಕ್ಷೆಯಲ್ಲಿ ಐಚ್ಛಿಕ ಭಾಷೆಯನ್ನಾಗಿ ಕನ್ನಡವನ್ನು ತೆಗೆದುಕೊಳ್ಳದೆ ಇದ್ದರೆ ಕನ್ನಡ...
ಕ್ಷೆಯಲ್ಲಿಯೂ,— ತೇರ್ಗಡೆಯಾಗತಕ್ಕದ್ದು.

ಮೊದಲ ಎರಡು ವರ್ಷಗಳು ಮುಗಿಯುವುದರೊಳಗೆ ಮೇಲ್ಕಂಡ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವ...
ಷನರಿ ಅಸಿಸ್ಟೆಂಟ ಕಮಿಷನರಿಗೆ ಮತ್ತೊಂದು ವರ್ಷದ ವಾಯಿದೆಯು ದಯೆಯಿಂದ ಕೊಡಲ್ಪಡುವುದು.
ತೇರ್ಗಡೆಯಾಗಲು ತಪ್ಪಿದರೆ ಆತನ ಹೆಸರು ಅಸಿಸ್ಟೆಂಟ ಕಮಿಷನರುಗಳ ಪಟ್ಟಿಯಿಂದ ತೆಗೆದುಹಾಕಲ್ಪಡು...

14. ಮೇಲ್ಕಂಡ ಮೇರೆ ಸಂಪೂರ್ಣವಾಗಿ ಯೋಗ್ಯತೆಯನ್ನು ಹೊಂದಿದಾಗ, ಮನಸ್ಸಿಟ್ಟು ಕೆಲ...
ರ್ಪಕವಾದ ರುಜುವಾತನ್ನು ಕೊಟ್ಟ ಬಳಿಕ ಪ್ರೊಬೇಷನರಿ ಅಸಿಸ್ಟೆಂಟ ಕಮಿಷನರು ಎ. ಪಟ್ಟಿಯಲ್ಲಿ 2...
5ನೆ ತರಗತಿಯ ಅಸಿಸ್ಟೆಂಟ ಕಮಿಷನರಾಗಿ ಖಾಯಂ ಮಾಡಲ್ಪಟ್ಟು ತರುವಾಯ ಕೆಳಗೆ ತೋರಿಸಿರು...
ಷರುವನು :—

ಅಜಮಾಯಿಷಿ ತರೀಕಿನ ಕಾಲವಲ್ಲದೆ 5ನೆ ತರಗತಿಯಲ್ಲಿ ಒಂದು ವರ್ಷ ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯ,	300 ರೂಪಾಯಿ ಸಂಬಳವು... ಸ್ಟೆಂಟ ಕಮಿಷನರ ಕೆಲಸಕ್ಕೆ ;
4ನೆ ತರಗತಿಯಲ್ಲಿ ಮೂರು ವರ್ಷಗಳು ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯ,	350 ರೂಪಾಯಿ ಸಂಬಳವುಳ್ಳ 3... ಕಮಿಷನರ ಕೆಲಸಕ್ಕೆ ;
3ನೆ ತರಗತಿಯಲ್ಲಿ ಮೂರು ವರ್ಷಗಳು ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯ,	400 ರೂಪಾಯಿ ಸಂಬಳವುಳ್ಳ 2... ಕಮಿಷನರ ಕೆಲಸಕ್ಕೆ ;
2ನೆ ತರಗತಿಯಲ್ಲಿ ಮೂರು ವರ್ಷಗಳು ಸರ್ಕಾರದವರು ...	450 ರೂಪಾಯಿ ಸಂಬಳವುಳ್ಳ 1... ಕಮಿಷನರ ಕೆಲಸಕ್ಕೆ ;

ಉಮೇದುವಾರನ ಹೆಸರು ಪೂರ್ತಿಯಾಗಿ.	
ವಯಸ್ಸು ಮತ್ತು ಜನನದ ತಾರೀಖು.	
ಜನನದ ಸ್ಥಳ.	
ವಾಡಿಕೆಯಾಗಿ ವಾಸಮಾಡುವ ಸ್ಥಳ.	
ತಂದೆಯ ಅಥವಾ ಇತರ ಪಾಲಕನ ಹೆಸರು ಮತ್ತು ಉದ್ಯೋಗ.	
ತಂದೆಯು ಅಥವಾ ಇತರ ಪಾಲಕನು ವಾಡಿಕೆಯಾಗಿ ವಾಸಮಾಡುವ ಸ್ಥಳ.	
ಉಮೇದುವಾರನ ವಂಶ ಅಥವಾ ಜಾತಿ.	
ಈಗಿನ ಸ್ಥಿತಿ ಉದ್ಯೋಗ ಅಥವಾ ವಿಳಾಸ.	
ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾದ ತಾರೀಖು ಅಥವಾ ಬಿ. ಎ. ಪರೀಕ್ಷೆಯ ಶಾಖೆಗಳಲ್ಲಿ ಬೇರೆಬೇರೆ ವರ್ಷಗಳಲ್ಲಿ ತೇರ್ಗಡೆಯಾಗಿದ್ದರೆ ಕಡೆ ತೇರ್ಗಡೆಯಾದ ತಾರೀಖುಗಳು.	
ಉಮೇದುವಾರನು ಇನ್ನು ಯಾವ ಯೂನಿವರ್ಸಿಟಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿದ್ದಾನೆ ಎಂಬುದನ್ನು, ಅವುಗಳಲ್ಲಿ ತೇರ್ಗಡೆಯಾದ ತಾರೀಖುಗಳ ಸಮೇತ.	
ಯೂನಿವರ್ಸಿಟಿ ಪರೀಕ್ಷೆಗಳಿಗೆ ಉಮೇದುವಾರನು ಎಲ್ಲಿ ಓದಿದನೋ ಆ ಕಾಲೇಜು ಯಾ ಕಾಲೇಜುಗಳು.	
ಮೈಸೂರು ಸಂಸ್ಥಾನದಲ್ಲಿ ಉಮೇದುವಾರನಿಗೆ ಏನಾದರೂ ಸ್ವತ್ತು ಇದ್ದರೆ ಅದು.	
ಉಮೇದುವಾರನು ಪರೀಕ್ಷಿಸಲ್ಪಡಲಪೇಕ್ಷಿಸುವ ಐಚ್ಛಿಕ ವಿಷಯು.	
ಉಮೇದುವಾರನಿಂದ ಕಳುಹಿಸಲ್ಪಟ್ಟ ಯೋಗ್ಯತಾ ಪತ್ರಿಕೆಗಳು.	

ತಾರೀಖು.

ಬೆಂಗಳೂರಿಗೆ —
ಮೈಸೂರು ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ
ಸೆಕ್ರೆಟರಿಯವರಿಗೆ—

ದಸ್ತಖತ್ತು.

ಪರಿಶಿಷ್ಟ ಬಿ.

ದೇಹವು ದೃಢವಾಗಿರುವ ಬಗ್ಗೆ ಕೊಡುವ ಸರ್ಟಿಫಿಕೇಟಿನ ನಮೂನೆ.

....ನ್ನು ನಾನು ಪರೀಕ್ಷಿಸಿರುತ್ತೇನೆಂದೂ, ಎಗ್ಸಿಕ್ಯೂಟಿವ್ ಯಾ ಕಾರ್ಯನಿರ್ವಾಹಕ ಅಧಿಕಾರಿಯ ಚಟುವಟಿಕೆಯಾದ ಕೆಲಸಗಳನ್ನು ಮಾಡುವುದಕ್ಕೆ ಆತನನ್ನು ಅಯೋಗ್ಯನನ್ನಾಗಿ ಮಾಡುವ ಯಾವ ಜಾಡ್ಯವನ್ನಾಗಲಿ, ದೇಹದೊಡನೆ ಹುಟ್ಟಿ ಬಂದ ಜಾಡ್ಯವನ್ನಾಗಲಿ, ಅಶಕ್ತಿಯನ್ನಾಗಲಿ ಕಾಣಲಿಲ್ಲವೆಂದೂ ನಾನು ಇದರಿಂದ ಸರ್ಟಿಫೈ ಮಾಡುತ್ತೇನೆ. ಆತನಿಗೆ ಒಳ್ಳೆಯ ದೃಢವಾದ ದೇಹವಿರುವುದಾಗಿ ನಾನು ಎಣಿಸುತ್ತೇನೆ.

ದಸ್ತಖತು..

ಉದ್ಯೋಗದ ಹೆಸರು, ಮತ್ತು ವಿಳಾಸ. { ....

ತಾರೀಖು..

ತಾರೀಖು 26ನೆ ಜೂನ್ 1907.

ನಂ. 12224—ಸ್ಯಾನಿಟರಿ 66-06—53, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:— ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21-96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವದು.

ಸ್ಥಳ.	ತಾಲ್ಲೂಕು.
ಚಿಕ್ಕೊಳ	ಬೇಲೂರು.

ತಾರೀಖು 10ನೆ ಜುಲೈ 1907.

ನಂ. 280—ಸ್ಯಾನಿಟರಿ (15-06)—17, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವದೇನಂದರೆ:— ಮೈಸೂರು ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಿಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳಿಗೆ ಮೀರಿ ಜಾಡ್ಯರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.	ತಾಲ್ಲೂಕು.
ಅನಗಲ್ಲಿ	ಮೈಸೂರು.
ಗೋಪಾಲಪುರ	ಡಿಟೋ
ಉಂದವಾಡಿ	ಡಿಟೋ
ದೇವಗಲ್ಲಿ	ಡಿಟೋ
ಮಾದೇವರ ಕೊಪ್ಪಲು	ಡಿಟೋ
	ಡಿಟೋ.
ದಂಡಿಕೆರೆ	ಡಿಟೋ
ಹಂಚ	ಡಿಟೋ
ಕ್ಯಾತಬಾಯಿನಹಳ್ಳಿ	ಡಿಟೋ
ರಮ್ಮನಹಳ್ಳಿ	ಡಿಟೋ
ನಾಗನಹಳ್ಳಿ	ಡಿಟೋ
ಸಕ್ಕಳ್ಳಿ	ಡಿಟೋ
ವರುಣ	ಡಿಟೋ
ವೀರಪ್ಪನಹಳ್ಳಿ	ಡಿಟೋ
ಮಾದಮಂಗಲ	ಡಿಟೋ
ಸಾಲಹುಂಡಿ	ಡಿಟೋ
ಹೊಸಹುಂಡಿ	ಡಿಟೋ
ಕರಡಿ ಮಾಯನ ಹುಂಡಿ	ಡಿಟೋ
ಮೈಸೂರು ತಾಲ್ಲೂಕು	ಡಿಟೋ
ಹೆಬ್ಬಾಳು	ಎಡತೊರೆ
ಸಿದ್ದನಕೊಪ್ಪಲು	ಡಿಟೋ
ಬ್ಯಾಡರಹಳ್ಳಿ	ಡಿಟೋ
ಬಾಚಹಳ್ಳಿ	ಡಿಟೋ
ಮುದ್ದನಹಳ್ಳಿ	ಡಿಟೋ
ಅರಸಿನಕೆರೆ	ಡಿಟೋ
ಚಂದಗಾಲ್	ಡಿಟೋ
ತಾ. ಡೈ	ನಂಜನಗೂಡು
ಈಚಗಲ್ಲಿ	ಡಿಟೋ
ವಳಗೆರೆ	ಡಿಟೋ
ಇಬ್ಜಾಲ	ಡಿಟೋ
ಉಪ್ಪಳಿಗೆರಹುಂಡಿ	ಡಿಟೋ
ಬಿಲ್ಲಗೆರೆ	ಡಿಟೋ

ತಾರೀಖು 26ನೇ ಜೂನ್ 1907.

ನಂ. 12226—ಸ್ಯಾನಿಟರಿ 56-06—5, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:—ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೇ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗುತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ತಿರವಲಾಲು	ಚಿಕ್ಕಮಗಳೂರು.
ಹಳುವಳ್ಳಿ ...	ಡಿಟ್ಟೋ
ಕುನ್ನಾಳ ...	ಡಿಟ್ಟೋ
ಭಿಗ್ಗನಹಳ್ಳಿ ...	ಡಿಟ್ಟೋ
ಮಳಲೂರು	ಡಿಟ್ಟೋ
ಮತ್ತಿಕೆರೆ ...	ಡಿಟ್ಟೋ
ದಂಬದಹಳ್ಳಿ ...	ಡಿಟ್ಟೋ
ಅತ್ತಿಗನಾಳ್	ತರೀಕೆರೆ.

ತಾರೀಖು 4ನೇ ಜುಲೈ 1907.

ನಂ. 92—Med. 329-06—2, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೇ ಪ್ರಕರಣದ ಮೇರೆಗೆ, ಅಸಿಸ್ಟೆಂಟ್ ಸರ್ಜನ್ ಮಿ॥ ಎಂ. ಜಗನ್ನಾಥಂ ಪಿಳ್ಳೆಯವರಿಗೆ, ಮೈಸೂರು ನಗರಕ್ಕೆ ಹೊಸದಾಗಿ ನೌಕರರ್ನಾಡಲ್ಪಟ್ಟಿರುವ ಆರೋಗ್ಯಾಧಿಕಾರಿಯು ಚಾರ್ಜು ತೆಗೆದುಕೊಂಡ ತರುವಾಯ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾವನ್ನು ಕೊಟ್ಟಿರುತ್ತದೆ.

ತಾರೀಖು 8ನೇ ಜುಲೈ 1907.

ನಂ. 193—L. B. (190-06)—2, ಚಿತ್ರದುರ್ಗ ಡಿಸ್ಟ್ರಿಕ್ಟಿನ ನಾನಾ ತಾಲ್ಲೂಕು ಬೋರ್ಡುಗಳಲ್ಲಿ ಸರ್ಕಾರಿ ಉದ್ಯೋಗಸ್ಥರಲ್ಲದೆ ಈಗ ಸಭಿಕರಾಗಿರುವವರ ಉದ್ಯೋಗ ಕಾಲವು ಮುಗಿದು ಹೋಗಿರುವುದರಿಂದ ಸದರಿ ತಾಲ್ಲೂಕು ಬೋರ್ಡುಗಳನ್ನು ಈ ಕೆಳಗೆ ನಮೂದಿಸುವಂತೆ ಪುನಃ ಏರ್ಪಡಿಸಿ ಇರುತ್ತದೆ:—

ಚಿತ್ರದುರ್ಗದ ತಾಲ್ಲೂಕು.

ಉದ್ಯೋಗಪ್ರಯುಕ್ತವಾದ ಸಭಿಕರು.

(a) ಅಸಿಸ್ಟೆಂಟ್ ಕಮಿಷನರು, ಪ್ರಸಿಡೆಂಟ್.
(b) ಅಮಲ್ದಾರ್, ವೈಸ್‌ಪ್ರಸಿಡೆಂಟ್.
(c) ಡಿಸ್ಟ್ರಿಕ್ಟಿನ ವೈದ್ಯ ಮತ್ತು ಆರೋಗ್ಯಾಧಿಕಾರಿ.
(d) ಮರಾಮತ್ತು ಸಬ್ ಡಿವಿಜನ್ ಆಫೀಸರು.
(e) ಸಬ್ ರಿಜಿಸ್ಟ್ರಾರ್.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ॥ ಸಾಹುಕಾರ ನಂಜುಂಡಪ್ಪ.
2. ,, ತೋಟದ ಸಿದ್ದಪ್ಪ.
3. ,, ದುಮ್ಮಿ ಗುರುಸಿದ್ದಪ್ಪ.
4. ,, ಪಟೇಲ ಕರಿಯಣ್ಣ.

(ಜಿ) ವಾಕ್ಯದ ಮೇರೆಗೆ.

ಮಿ॥ ಪಾವಗಡ ಭೀಮಸೇನರಾವ್, ರಿಟೈರ್ಡ್ ಅಮಲ್ದಾರ್.

(ಎಚ್) ವಾಕ್ಯದ ಮೇರೆಗೆ.

1. ಮಿ॥ ಅನಂತಶೆಟ್ಟಿ ಅಡ್ವೋಕೇಟ್.
2. ,, ಜೋಡಿದಾರ ಹನುಮಂತಾಚಾರ್.
3. ,, ದಸ್ತಗೀರ ಸಾಬ್, ಪೋಸ್ಟಲ್ ಸ್ಟಾಂಪ್ ವೆಂಡರ್.
4. ,, ಖಾಜಿ ಸೈಯದ್ ಮೊಹರ್ೞ.
5. ,, ಪಟೇಲ ಬಸಪ್ಪ, ಮಾರಘಟ್ಟ.

2. ಚಳ್ಳಕೆರೆ ತಾಲ್ಲೂಕು.

ಉದ್ಯೋಗಪ್ರಯುಕ್ತವಾದ ಸಭಿಕರು.

(a) ಅಸಿಸ್ಟೆಂಟ್ ಕಮಿಷನರ್, ಪ್ರೆಸಿಡೆಂಟ್.
(b) ಅಮಲ್ದಾರ್, ವೈಸ್ ಪ್ರೆಸಿಡೆಂಟ್.
(c) ಆಸ್ಪತ್ರೆಯ ಅಸಿಸ್ಟೆಂಟ್.
(d) ಮರಾಮತ್ತು ಸಬ್ ಡಿವಿಜನ್ ಆಫೀಸರು.
(e) ತಾಲ್ಲೂಕು ಶಿರಸ್ತೇದಾರ್.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ॥ ಶಾನುಭೋಗ ಸುಬ್ಬಣ್ಣ.
2. ,, ತುಪ್ಪದ ವೀರಣ್ಣ.
3. ,, ಮನ್ನೆಕೋಟೆ ಶಾನುಭೋಗ ರಾಮಣ್ಣ.
4. ,, ನಾಯಕನಹಟ್ಟಿ ಶಾನುಭೋಗ ರಾಮಪ್ಪ.

(ಜಿ) ವಾಕ್ಯದ ಮೇರೆಗೆ.

ಮಿ॥ ಕಂಟ್ರಾಕ್ಟರ್ ಸುಬ್ಬರಾವ್.

(ಎಚ್) ವಾಕ್ಯದ ಮೇರೆಗೆ.

1. ಮಿ॥ ಕೋಮಟಿ ನಾರಣಪ್ಪ.
2. ,, ಮಹಮದ್ ಆಲಿ ಸಾಹೇಬ್.
3. ,, ಬಲ್ಲೆಗಟ್ಟೆ ಅಜ್ಜಪ್ಪ.
4. ,, ಪಟೇಲ ಸಣ್ಣ ತಿಪ್ಪಯ್ಯ.
5. ,, ವೀರಭದ್ರಪ್ಪ ಜಿನ್ ಸೂಗೂರಪ್ಪ.

3. ಹೊಳಲ್ಕೆರೆ ತಾಲ್ಲೂಕು.

ಉದ್ಯೋಗಪ್ರಯುಕ್ತವಾದ ಸಭಿಕರು.

(a) ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟ್.
(b) ಅಮಲ್ದಾರ್, ವೈಸ್ ಪ್ರೆಸಿಡೆಂಟ್.
(c) ಆಸ್ಪತ್ರೆ ಅಸಿಸ್ಟೆಂಟ್.
(d) ಮರಾಮತ್ತು ಸಬ್ ಡಿವಿಜನ್ ಆಫೀಸರು.
(e) ತಾಲ್ಲೂಕು ಶಿರಸ್ತೇದಾರ್.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ॥ ನಾಡಿಗ ವೆಂಕಟಸುಬ್ಬಯ್ಯ.
2. ,, ರೇವನ ಸಿದ್ದಪ್ಪ.
3. ,, ನಾಡಿಗ ಸಿದ್ದರಾಮಯ್ಯ.
4. ,, ಶಾನುಭೋಗ ಸುಬ್ಬಣ್ಣ.

(ಜಿ) ವಾಕ್ಯದ ಮೇರೆಗೆ.

ಮಿ॥ ಸತಿಮಲ್ಲಪ್ಪ.

(ಎಚ್) ವಾಕ್ಯದ ಮೇರೆಗೆ.

1. ಮಿ॥ ಕಸ್ತೂರು ರಂಗಪ್ಪ.
2. ,, ಸರ್ವೆಗಾರ ವೀರಪ್ಪ.
3. ,, ರವಿಕೀರ್ತಪ್ಪ.
4. ,, ಪಟೇಲ ಚಂದಪ್ಪ.
5. ,, ಪಟೇಲ ಮಡಿವಾಳಪ್ಪ.

4. ಹಿರಿಯೂರು ತಾಲ್ಲೂಕು.

ಉದ್ಯೋಗಪ್ರಯುಕ್ತವಾದ ಸಭಿಕರು.

(a) ಅಮಲ್ದಾರ್ ಪ್ರೆಸಿಡೆಂಟ್.
(c) ಆಸ್ಪತ್ರೆ ಅಸಿಸ್ಟೆಂಟ್.

(d) ಚಿತ್ರದುರ್ಗದ ಮರಹಮ್ಮತ್ತು ಸಬ್ ಡಿವಿಜನ್ ಆಫೀಸರು.
(e) ತಾಲ್ಲೂಕು ಶಿರಸ್ತೇದಾರ್.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ|| ಮಠದ ವೀರೈಯ್ಯ.
2. ,, ಪಟೇಲ ತಿಪ್ಪಯ್ಯ.
3. ,, ಶಾನುಭೋಗ ಚನ್ನಗಿರಿಯಪ್ಪ.
4. ,, ಪಟೇಲ ತಿಮ್ಮೆಗೌಡ.

(ಜಿ) ವಾಕ್ಯದ ಮೇರೆಗೆ.

ಮಿ|| ಸಿ. ಎನ್. ಕೃಷ್ಣಪ್ಪ, ಕಂಟ್ರಾಕ್ಟರ್.

(ಎಚ್) ವಾಕ್ಯದ ಮೇರೆಗೆ.

1. ಮಿ|| ಪಟೇಲ ಮಹಲಿಂಗಪ್ಪ.
2. ,, ಅಬ್ದುಲ್ ರಜಾಕ್.
3. ,, ಪಟೇಲ ಚಿಕ್ಕಣ್ಣ.
4. ,, ಪಟೇಲ ಪರಸೇಗೌಡ.
5. ,, ಶಾನುಭೋಗ ರಾಮಣ್ಣ.
6. ,, ಶಾನುಭೋಗ ರಂಗದಾಸಪ್ಪ.

5. ಜಗಲೂರು ತಾಲ್ಲೂಕು.

ಉದ್ಯೋಗಪ್ರಯುಕ್ತವಾದ ಸಭಿಕರು.

(a) ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟ್.
(b) ಅಮಲ್ದಾರ್, ವೈಸ್‌ಪ್ರೆಸಿಡೆಂಟ್.
(c) ಆಸ್ಪತ್ರೆ ಅಸಿಸ್ಟೆಂಟ್.
(d) ಮರಹಮ್ಮತ್ ಸಬ್ ಡಿವಿಜನ್ ಆಫೀಸರ್.
(e) ತಾಲ್ಲೂಕು ಶಿರಸ್ತೇದಾರ್.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ|| ಪಟೇಲಶಾಂತಪ್ಪ.
2. ,, ಶಾನುಭೋಗ ಮೂಡಲಗಿರಿರಾವ್.
3. ,, ಶಿದ್ದಯ್ಯನಕೋಟೆ ಪಾಲಯ್ಯ.
4. ,, ಶಾನುಭೋಗ ಅಶ್ವತ್ಥಪ್ಪ.

(ಜಿ) ವಾಕ್ಯದ ಮೇರೆಗೆ.

ಮಿ|| ಸಾಹುಕಾರ ತಿಪ್ಪಣ್ಣ.

(ಹೆಚ್) ವಾಕ್ಯದಮೇರೆಗೆ.

1. ಮಿ|| ಗೊಂಚಿಕರ ಹನುಮಂತಪ್ಪ.
2. ,, ಪಟೇಲ ಮುರಿಗಪ್ಪ.
3. ,, ಶಾನುಭೋಗ ಗುರುರಾವ್.
4. ,, ಶಾನುಭೋಗ ನರಸಿಂಗಪ್ಪ.
5. ,, ನಾಗೋಜಿರಾವ್.

6. ದಾವಣಗೆರೆ ತಾಲ್ಲೂಕು

ಉದ್ಯೋಗಪ್ರಯುಕ್ತವಾದ ಸಭಿಕರು.

(a) ದಾವಣಗೆರೆಯ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್, ಪ್ರೆಸಿಡೆಂಟ್.
(b) ಅಮಲ್ದಾರ್ ವೈಸ್ ಪ್ರೆಸಿಡೆಂಟ್.
(c) ಆಸ್ಪತ್ರೆ ಅಸಿಸ್ಟೆಂಟ್.
(d) ಮರಹಮ್ಮತ್ತು ಸಬ್ ಡಿವಿಜನ್ ಆಫೀಸರ್.
(e) ಸಬ್ ರಿಜಿಸ್ಟ್ರಾರ್.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ॥ ಮೋತಿ ಬಸಪ್ಪ.
2. ,, ಹಾಲಪ್ಪ.
3. ,, ಶಾನುಭೋಗ ಹುನುಮಂತಪ್ಪ.
4. ,, ಭಿಷ್ಟಪ್ಪ.

(ಜಿ) ವಾಕ್ಯದ ಮೇರೆಗೆ.

ಮಿ॥ ಸಿ. ವಿರೂಪಾಕ್ಷಪ್ಪ, ದಾವಣಗೆರೆ.

(ಎಚ್) ವಾಕ್ಯದ ಮೇರೆಗೆ.

1. ಮಿ॥ ರಾಣಿಬಿನ್ನೂರು ನಬಿಸಾಬ್.
2. ,, ಗುಬ್ಬಿ ನಬಿಸಾಬ್.
3. ,, ಧರ್ಮರಾಯಾಚಾರ್.
4. ,, ಎಚ್. ಸುಬ್ಬರಾವ್,
5. ,, ಗೊಳಸಂಗಿ ವೀರಭದ್ರಪ್ಪ.

7. ಹೊಸದುರ್ಗ ತಾಲ್ಲೂಕು.

ಉದ್ಯೋಗಪ್ರಯುಕ್ತವಾದ ಸಭಿಕರು.

(a) ದಾವಣಗೆರೆ ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟ್.
(b) ಅಮಲ್ದಾರ್ ವೈಸ್‌ಪ್ರೆಸಿಡೆಂಟ್.
(c) ಆಸ್ಪತ್ರೆ ಅಸಿಸ್ಟೆಂಟ್.
(d) ಹೊಳಲ್ಕೆರೆ ಮರಹಮ್ಮತ್ ಸಬ್ ಡಿವಿಜನ್ ಆಫೀಸರ್.
(e) ತಾಲ್ಲೂಕು ಶಿರಸ್ತೆದಾರ್.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ॥ ಪಿ. ನಾಗಪ್ಪ.
2. ,, ಜಿ. ಮಲ್ಲಯ್ಯ.
3. ,, ಸಿ. ಹನುಮೆಗೌಡ.
4. ,, ರಾಮಕೃಷ್ಣಪ್ಪ.

(ಜಿ) ವಾಕ್ಯದ ಮೇರೆಗೆ.

ಮಿ॥ ಯಜಮಾನ ಕೊಟ್ರಯ್ಯ.

(ಎಚ್) ವಾಕ್ಯದ ಮೇರೆಗೆ.

1. ಮಿ॥ ಜಿ. ರಾಮಣ್ಣ.
2. ,, ಚೆನ್ನಿಗೌಡ.
3. ,, ಕಾಜಾ ಮಹಮ್ಮದ್ ಹುಸೇನ್ ಬೇಗಸಾಬ್.
4. ,, ಬಿ. ವಿ. ನಾರಾಯಣರಾವ್.
5. ,, ಕಾಸಿಂಸಾಬ್.

8. ಮೊಳಕಾಲ್ಮುರು ತಾಲ್ಲೂಕು.

ಉದ್ಯೋಗಪ್ರಯುಕ್ತವಾದ ಸಭಿಕರು.

(a) ಚಳ್ಳಕೆರೆ ಸಬ್ ಡಿವಿಜನಿನ ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟ್.
(b) ಅಮಲ್ದಾರ್ ವೈಸ್‌ಪ್ರೆಸಿಡೆಂಟ್.
(c) ಆಸ್ಪತ್ರೆ ಅಸಿಸ್ಟೆಂಟ್.
(d) ಮರಹಮ್ಮತ್ ಸಬ್ ಡಿವಿಜನ್ ಆಫೀಸರ್, ಚಳ್ಳಕೆರೆ.
(e) ತಾಲ್ಲೂಕು ಶಿರಸ್ತೆದಾರ್.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ॥ ಶಾನುಭೋಗ ಹನುಮಂತಪ್ಪ.
2. ,, ಅಮ್ಕುಂಡಿ ಗುಂಡಪ್ಪ.

3. ,, ಪಟೇಲ ವೀರಗಾಡ.
4. ,, ಪಟೇಲ ಹಂಪಣ್ಣ.

(ಎಚ್) ವಾಕ್ಯದ ಮೇರೆಗೆ.

1. ಮಿ॥ ಶ್ರೀನಿವಾಸದಾಸ್.
2. ,, ಖುಬಾಜಿ ದುರ್ಗಪ್ಪ.
3. ,, ಕೊಪ್ಪೂರಪ್ಪ.
4. ,, ನೇರಲಹಳ್ಳಿ ಸಣ್ಣಪ್ಪ.
5. ,, ಭಾರಿ ಸಣ್ಣರುದ್ರಪ್ಪ.

9. ಹರಿಹರ ಸಬ್ ತಾಲ್ಲೂಕು.

ಉದ್ಯೋಗ ಪ್ರಯುಕ್ತವಾದ ಸಭಿಕರು.

(a) ದಾವಣಗೆರೆ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು.
(b) ಡೆಪ್ಯುಟಿ ಅಮಲ್ದಾರ್ ವೈಸ್‌ಪ್ರೆಸಿಡೆಂಟ್.
(c) ಆಸ್ಪತ್ರೆ ಅಸಿಸ್ಟೆಂಟ್.
(d) ದಾವಣಗೆರೆ ಮರಹಮ್ಮತ್ ಸಬ್ ಡಿವಿಜನಿನ ಆಫೀಸರು.

ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದಮೇರೆಗೆ.

1. ಮಿ॥ ಪಟೇಲ ಲಿಂಗಪ್ಪ.
2. ,, ಅನಂತನಾಯಕ್.
3. ,, ವೆಂಕಣ್ಣ.
4. ,, ಡಿ. ಶ್ರೀನಿವಾಸರಾವ್.

(ಜಿ) ವಾಕ್ಯದಮೇರೆಗೆ.

ಮಿ॥ ಕೇಶವನಾಯಕ್.

(ಎಚ್) ವಾಕ್ಯದ ಮೇರೆಗೆ.

1. ಮಿ॥ ಉಸ್ಮಾನ್‌ಸಾಬ್.
2. ,, ಷರಾಫ್ ದೀನ್ ಸಾಬ್.
3. ,, ರಟ್ಟಿಹಳ್ಳಿ ಗೋವಿಂದಪ್ಪ.
4. ,, ತಿಪ್ಪಣ್ಣನವರ ಮುರಗಪ್ಪ.
5. ,, ಶಾನುಭೋಗ ಶ್ರೀನಿವಾಸರಾವ್.
6 ,, ಬಾಲಕೃಷ್ಣರಾವ್.

ತಾರೀಖು 9ನೆ ಜುಲೈ 1907.

ನಂ. ಜಿ. 99—Legis. ಜನರಲ್ ಮತ್ತು ರವಿನ್ಯೂ ಸೆಕ್ರೆಟೆರಿಯವರ ಕಚೇರಿಯ ಜುಡಿಷಲ್ ಮತ್ತು ಲೆಜಿಸ್ಲೆಟಿವ್ ಶಾಖೆಯ ಚಾರ್ಜಿನಲ್ಲಿ ತತ್ಕಾಲದಲ್ಲಿರುವ ಸದರಿ ಸೆಕ್ರೆಟೆರಿಯವರ ಕಚೇರಿಯ ಆಫೀಸರನ್ನು ಈ ಮೂಲಕ, ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್ ಯಾ ನ್ಯಾಯ ವಿಧಾಯಕ ಸಭೆಯ ಸೆಕ್ರೆಟೆರಿಯ ಕೆಲಸಗಳನ್ನು ಮಾಡುವುದಕ್ಕೆ ಮೊಕರರ್ಮಾಡಿ ಇದೆ.

ತಾರೀಖು 9ನೆ ಜುಲೈ 1907.

ನಂ. ಜಿ. 100—Legis. ಮೈಸೂರು ಚೀಫ್ ಕೋರ್ಟಿನ ಆಕ್ಟಿಂಗ್ ಜಡ್ಜ್ ಮಿ॥ ಕೆ. ಎಸ್. ಚಂದ್ರಶೇಖರ ಐಯರ್, ಬಿ. ಎ., ಬಿ. ಎಲ್. ರವರು ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್ ಯಾ ನ್ಯಾಯ ವಿಧಾಯಕ ಸಭೆಯಲ್ಲಿ ಅವರಿಗಿರುವ ಅಧಿಕ ಸಭಿಕರ ಉದ್ಯೋಗಕ್ಕೆ ಕೊಟ್ಟ ರಾಜೀನಾಮೆಯನ್ನು ಅಂಗೀಕರಿಸಲು ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 9ನೆ ಜುಲೈ 1907.

ನಂ. ಜಿ. 102—Legis. 1907ನೆ ಇಸವಿಯ 1ನೆ ರೆಗ್ಯುಲೇಷನಿನ 4 (2)ನೆ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಇದರಡಿ ಕಂಡ ದೊಡ್ಡ ಮನುಷ್ಯರನ್ನು ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್ ಯಾ ನ್ಯಾಯ ವಿಧಾಯಕ ಸಭೆಯ ಅಧಿಕ ಸಭಿಕರಾಗಿ ನೇಮಿಸಲು ಅಪ್ಪಣೆ ದಯಪಾಲಿಸಿರುತ್ತಾರೆ.

ಸರ್ಕಾರಿ ಉದ್ಯೋಗಸ್ಥರಾದ ಸಭಿಕರು.

ರಾಯಬಹದ್ದೂರ್ ಮಿ॥ ಎಂ. ಮುತ್ತಣ್ಣ, ಮೈಸೂರು ಸೀಮೆಯ ಫಾರೆಸ್ಟ್ ಕನ್ಸರ್ವೇಟರ್.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

1. ಮಿ॥ ವಿ. ಎನ್. ನರಸಿಂಹೈಯಂಗಾರ್.
2. ,, ಸೈಯದ್ ಅಮೀರ್ ಹಸ್ಸನ್.

ತಾರೀಖು 10ನೆ ಜುಲೈ 1907.

ನಂ. ಜಿ. 121, ಸರ್ಕಾರಿ ಕೆಲಸವು ಸರಿಯಾಗಿ ನಡೆಯತಕ್ಕ ಬಗ್ಗೆ ಇದರಡಿ ಕಂಡ ಮುನ್ಸಿಫರುಗಳ ವರ್ಗಾವರ್ಗಿಗಳನ್ನು ಮಂಜೂರ್ಮಾಡಿದೆ:—

1. ಮಿ॥ ಕೆ. ಲಕ್ಷ್ಮೀನಾರಣೈಯ್ಯ, ಶಿವಮೊಗ್ಗೆಯಿಂದ ಮೈಸೂರಿಗೆ (ಅಡಿಷನಲ್ ಯಾ ಅಧಿಕ ಮುನ್ಸಿಫರಾಗಿ).
2. ಮಿ॥ ಎಸ್. ಹಿರಿಯಣ್ಣೈಯ್ಯ, ಮೈಸೂರಿಂದ (ಅಧಿಕ ಮುನ್ಸಿಫ್) ಶಿವಮೊಗ್ಗೆಗೆ.

ತಾರೀಖು 29ನೆ ಜೂನ್ 1907.

ನಂ. ರೆ. 10934—ಲ್ಯಾ. ರೆ. 602-06-3, 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ:— ಇದರಡಿ ವಿವರಿಸಿರುವ ಮತ್ತು 29 ಗುಂಟೆಗಳ ವಿಸ್ತೀರ್ಣವುಳ್ಳ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಚನ್ನಪಟ್ಟಣದ ಮ್ಯುನಿಸಿಪಲ್ ಎಲ್ಲೆಗಳಲ್ಲಿ ಸೇರಿಸುವುದಕ್ಕೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಕ್ಲೋಸ್‌ಪೇಟೆ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ ಯಾ ಬಾಗಾಯತು.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ: ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಬೆಂಗಳೂರು	ಚನ್ನಪಟ್ಟಣ	ಕಸಬಾ	ಚಕ್ರಾವರಪಲ್ಲಿ	ಖಾತೆದಾರರು, ರಾಮಸ್ವಾಮಿ; ಕೊಂಡಜಕೊಂಡಯ್ಯನ ಹುಡುಗರ ಚಕ್ಕ ಬಂಗ ...	1	ಬಾಗಾಯತು	ಎ. ಗು. 0 29 * ಈ ಪೈಕಿ ಒಂದು ಗುಂಟೆ ಖರಾಬು	ಮತ್ತೆ ಕಂಚೀರನ ಕ್ಯಾಂಪು ಬಗ್ಗ ಮತ್ತು ಚಕ್ರಾವರ ... ಹಿತ್ತಿಲು ಅಂಗಳಾಳ್ಯಾವಿಯ ...	ಚಕ್ರಾವರಪಲ್ಲಿಯ ಕೆರೆಯಾಗಾಲಿ ತಿರುಗಾಡುವ ಬೀದಿ	ಮುನಿಸಿಪಲ್ ಎಲ್ಲೆ ...	ಅಜ್ಜಿಗೌಡನ ಮನೆ ಮನೆ ಮತ್ತು ಚಕ್ಕವೆಂಕಟಪ್ಪನ ಮನೆ ಮತ್ತು ಇವರ ಹಿತ್ತಲ ಹಾಗೆ ಇರುವ ಚಕ್ರಾವರಪಲ್ಲಿಯ ಹುಳ್ಳಗೊಪ್ಪ.

ತಾರೀಖು 2ನೆ ಜುಲೈ 1907.

ನಂ. ರೆ. 13—ಲ್ಯಾ. ರೆ. 610-06-3, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ:—ಇದರಡಿ ವಿವರಿಸಿರುವ ಮತ್ತು 6 ಗುಂಟೆ ವಿಸ್ತೀರ್ಣವುಳ್ಳ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ ಅವರಗೆರೆ ಕೆರೆಯಹಿಂದೆ ಒಂದು ಕಾಲುವೆ ತೋಡುವದಕ್ಕೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಗುಬ್ಬಿ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ ಯಾ ಬಾಗಾಯತು.	ಒಟ್ಟು ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ: ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ತುಮಕೂರು	ಕುಣಿಗಲು	ಹುಲಿಯೂರು	ಅವರಗೆರೆ	ಹುಚ್ಚ ಬಿನ್ ಕೆಂಚ	57	ಖುಷ್ಕಿ	ಎ. ಗು. 11 37	ರೂ. ಆ. 1 12	ಎ. ಗು. 0 6	ಅವರಗೆರೆಯ ಸರ್ವೆ ನಂ. 57ರ ಪೈಕಿ ನಂಬರು	ನಡೆನಾಯಕನಪುರ ಎಲ್ಲೆ ಹಂಚಿನ ಸರ್ವೆ ನಂ. 309	ಕೆರೆಯ ಅಂಗಳ	ನಡೆನಾಯಕನಪುರ ಎಲ್ಲೆ ಹಂಚಿನ ಸರ್ವೆ ನಂ. 322

ತಾರೀಖು 2ನೆ ಜುಲೈ 1907.

ನಂ. ಫೈ. 16—ಜ. ಫೈ. 101-06—14, ಕಂಟ್ರೋಲರಿಗೆ ಚೀಫ್ ಅಸಿಸ್ಟೆಂಟರಾದ ಮಿ|| ಟ. ವೈದ್ಯನಾಥಪುರಿಚೆಟ್ಟಿಯ ವರಿಗೆ 1907ನೆ ಇಸವಿಯ ಜನವರಿ 31ನೆ ತಾರೀಖಿನ ಫೈ. 5893ನೆ ನಂಬರಿನ, ಅದೇ ಇಸವಿಯ ಏಪ್ರೆಲ್ 1ನೆ ತಾರೀಖಿನ ಫೈ. 7425ನೆ ನಂಬರಿನ ಮತ್ತು ಅದೇ ಇಸವಿ ಏಪ್ರೆಲ್ 30ನೆ ತಾರೀಖಿನ ಫೈ. 8154ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಗಳಲ್ಲಿ ಸ್ವಂತ ಕೆಲಸಗಳ ಬಗ್ಗೆ ಕೊಡಲ್ಪಟ್ಟ 5 ತಿಂಗಳ ರಜಾವನ್ನು 1907ನೆ ಇಸವಿಯ ಜೂನ್ 30ನೆ ತಾರೀಖಿನ ವರೆಗೆ (ಆ ದಿನವೂ ಸೇರಿ) ಹೆಚ್ಚಿಸಿ ಇದೆ.

ತಾರೀಖು 5ನೆ ಜುಲೈ 1907.

ನಂ. ರೆ. 89—ಲ್ಯಾ. ರೆ. 1-07—3, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ನೆಲವಂಗಲ ತಾಲ್ಲೂಕಿನ ಮಾಚೋಹಳ್ಳಿ ಕೆರೆಯ (ರಿಜಿಸ್ಟರ್ ನಂಬರ್ 306) ಕೋಡಿಗೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ದೊಡ್ಡಬಳ್ಳಾಪುರ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರೀ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ, ಬಾಗಾಯ್ತು.	ಈಗ ಸರ್ಕಾರಕ್ಕೆ ಬೇಕಾಗುವ ವಿಸ್ತೀರ್ಣ.	ಚತುರ್ಸೀಮೆ.			
								ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.				
ಬೆಂಗಳೂರು	ನೆಲಮಂಗಲ.	ದಾಸನಪುರ	ಮಾಚೋಹಳ್ಳಿ	ಕರಿಯಪ್ಪ ...	57	ಖುಷ್ಕಿ	0 5	ಮಾಚೋಹಳ್ಳಿ ಕೆರೆ.	ಸರ್ವೆ ನಂ. 57ರ ಬಾಕಿ ಉಳಿದ ಭಾಗ	ಸರ್ವೆ ನಂ. 57ರಲ್ಲಿ ಹಾಯುವ ಹಳ್ಳ ಕೆರೆಯ ಕೋಡಿ.	ಸರ್ವೆ ನಂ. 57ರ ಬಾಕಿ ಉಳಿದ ಭಾಗ

ತಾರೀಖು 8ನೆ ಜುಲೈ 1907.

ನಂ. ರ. 226—ಫಾ. 5-07—2, ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ಮಿ|| ಎಚ್. ರಾಮಯ್ಯನವರು 1907ನೆ ಇಸವಿಯ ಮೇ 29ನೆ ತಾರೀಖಿನ ಆರ್. 10150—ಫಾ. 198-06—2ನೆ ನಂಬರ್ ಮತ್ತು 1907ನೆ ಇಸವಿ ಜೂನ್ 5ನೆ ತಾರೀಖಿನ ಆರ್. 10430—ಫಾ. 198-06—4ನೆ ನಂಬರುಗಳ ಇಸ್ತಿಹಾರ್ನಾಮೆಗಳಲ್ಲಿ ತಮಗೆ ಕೊಡಲ್ಪಟ್ಟ ಪ್ರಿವಿಲೇಜ್ ರಜಾವನ್ನು 1907ನೆ ಇಸವಿಯ ಮೇ 17ನೇ ತಾರೀಖಿನಿಂದ ಉಪಯೋಗಿಸಿಕೊಂಡು 1907ನೆ ಇಸವಿ ಜೂನ್ 14ನೆ ದಿವಸದ ಅಪರಾಹ್ನದಲ್ಲಿ ಕೆಲಸದ ಮೇಲೆ ವಾಪಸು ಹಾಜರಾಗಿರುವುದರಿಂದ ಅವರು ಉಪಯೋಗಿಸಿಕೊಳ್ಳದೆ ನಿಂತಿರುವ ಬಂತು ದಿವಸದ ರಜಾವನ್ನು ಈ ಮೂಲಕ ರದ್ದುಮಾಡಿ ಇದೆ.

ಹುಕುಂ ಬಮೋಜೀಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 5ನೆ ಜುಲೈ 1907.

ನಂ. 612-4848, ಮೈಸೂರು ಡಿವಿಜನ್ನಿಗೆ ಸೇರಿದ ಸಬ್ ಅಸಿಸ್ಟೆಂಟ್ ಇಂಜನಿಯರ್ ಮಿ|| ವಿ. ವಿ. ಕರ್ರಿ, ಎಲ್. ಸಿ. ಇ., ಯವರಿಗೆ ಈ ಆಫೀಸಿನ ಸನ್ 1907ನೆ ಜೂನ್ 12ನೆ ತಾರೀಖು 542-4263ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಸನ್ 1907ನೆ ಮೇ 20ನೆ ತಾರೀಖು ಲಾಗಾಯಿತು ಕೊಟ್ಟಿದ್ದ ಒಂದು ತಿಂಗಳು ಪ್ರಿವಿಲೇಜ್ ರಜಾವನ್ನು ಅವರು ಉಪಯೋಗಿಸಿಕೊಂಡು ಜೂನ್ 15ನೆ ತಾರೀಖಿನ ಮಧ್ಯಾಹ್ನ ಕೆಲಸದ ಮೇಲೆ ಹಾಜರಾದ್ದರಿಂದ, ಅವರು ಉಪಯೋಗಿಸಿಕೊಳ್ಳದ ರಜವನ್ನು ವಜಾ ಮಾಡಲ್ಪಟ್ಟಿದೆ.

ತಾರೀಖು 6ನೆ ಜುಲೈ 1907.

ನಂ. 614—4859, ಮಾಗಡಿ ಡಿವಿಜನ್ನಿಗೆ ಸೇರಿದ ಅಸಿಸ್ಟೆಂಟು ಇಂಜನಿಯರ್ ಮಿ|| ಕೆ. ಅನಂತಾಚಾರಿಯ, ಎಲ್. ಸಿ. ಇ., ಯವರಿಗೆ ಸನ್ 1907ನೆ ಜೂನ್ 15ನೆ ತಾರೀಖಿನಿಂದ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ತಾರೀಖು 6ನೆ ಜುಲೈ 1907.

ನಂ. 615—4860, ಚಿತ್ರದುರ್ಗದ ಡಿವಿಜನ್ನಿಗೆ ಸೇರಿದ ಅಸಿಸ್ಟೆಂಟು ಇಂಜನಿಯರ್ ಮಿ|| ಬಿ. ನಂಜುಂಡಾರಾಧ್ಯ, ಎಲ್. ಸಿ. ಇ., ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನಿನ 177ನೆ ಆರ್ಟಿಕಲ್ ಅನುಸರಿಸಿ ಸನ್ 1907ನೆ ಜುಲೈ 31ನೆ ತಾರೀಖಿನಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದುವರೆ ತಿಂಗಳು ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ಹುಕುಂ ಬಮೋಜೀಬ್,
ಬರ್ನಾರ್ಡ್ ಥಾಸ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನಮೆಂಟ್ ಅಂಡರ್ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 29.

ಬೆಂಗಳೂರು, ಗುರುವಾರ, ಜುಲೈ ತಾ॥ 18, ಸನ್ 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮಿಷನರವರು, ಕಂಟ್ರೋಲರವರು, ಪಬ್ಲಿಕ್‌ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀಯರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀಯರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು. ವಗೈರೆ ಕಾಲಸ್ಥಿತಿ ರಿಪೋರ್ಟುಗಳು ಪೋಸ್ಟಾಫೀಸ್ ನೋಟೀಸುಗಳು.

3ನೆ ಭಾಗ—ಲೆಜಿಸ್ಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲಾ.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ನಂ. ಜಿ. 8139—ಜಿ. ಎಂ. 12-06—68, ತಾರೀಖು 27ನೆ ಜೂನ್ 1907.

ಹುಕುಂ:—ಸ್ಪರ್ಧಾಪೂರ್ವಕವಾದ ಪರೀಕ್ಷೆಯ ಮೂಲಕವಾಗಿಯೂ, ವಿಶೇಷವಾಗಿ ಚುನಾಯಿಸೋಣದರಿಂದಲೂ, ಮೈಸೂರು ಸಿವಿಲ್ ಸರ್ವಿಸ್ಸಿಗೆ ಸೇರಿಸಿಕೊಳ್ಳಲ್ಪಟ್ಟ ಆಫಿಸರುಗಳ ಸಂಬಳವನ್ನೂ ಆಯತಿಗಳನ್ನೂ ಕೂಡಿದಷ್ಟು ಮಟ್ಟಿಗೆ ಸಮವಾಗಿ ಮಾಡುವುದಕ್ಕೋಸ್ಕರ ಶ್ರೀಮನ್ಮಹಾರಾಜರವರು 1906ನೆ ಜೂನ್ 28ನೆ ತಾರೀಖಿನ 8964—ಎಫ್. ಎಲ್. ನಂಬರಿನ ಸರ್ಕಾರಿ ಹುಕುಮಿನ ಕೆಳಗೆ ಕೊಟ್ಟಿರುವ ನಿಬಂಧನೆಗಳನ್ನು ಈ ಕೆಳಗಿನಂತೆ ತಿದ್ದುಪಾಟು ಮಾಡಲು ಅಪ್ಪಣೆ ದಯಪಾಲಿಸಿರುತ್ತಾರೆ:—

1. ಈ ಕೆಳಗಿನ ಆಫಿಸರುಗಳು ಮೈಸೂರು ಸಿವಿಲ್ ಸರ್ವಿಸಿನ ಏರ್ಪಾಡಿಗೆ ಸೇರಿರುವರು:—

ಹೊಸ ಎ. ಮತ್ತು ಬಿ. ಪಟ್ಟಿಗಳ ಅಸಿಸ್ಟೆಂಟ್ ಕಮಿಷನರುಗಳು, ರೆವಿನ್ಯೂ, ಎಕ್ಸೈಸ್, ಪೊಲೀಸ್, ಸರ್ವೆ, ಜುಡಿಷಲ್ ಮತ್ತು ಅಕೌಂಟ್ ಯಾ ಲೆಕ್ಕದ ಇಲಾಖೆಗಳಲ್ಲಿಯೂ ಮತ್ತು ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯ ಆಫಿಸಿನಲ್ಲಿಯೂ ಕೆಲಸ ಮಾಡುತ್ತಿರುವ ಆ ದರ್ಜೆಯ ಎಲ್ಲಾ ಆಫೀಸರುಗಳ ಸಹಿತ; ಡೆಪ್ಯುಟಿ ಕಮಿಷನರುಗಳು; ಡಿಸ್ಟ್ರಿಕ್ಟು ಜಡ್ಜಿಗಳು; ಡೆಪ್ಯುಟಿ ಸೆಕ್ರೆಟರಿ* ಮತ್ತು ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿ.

2. ಮೈಸೂರು ಸಿವಿಲ್ ಸರ್ವಿಸಿಗೆ ಮುಂದೆ ಎಲ್ಲಾ ಆಫಿಸರುಗಳ ಹೊಸದಾಗಿ ಸೇರಿಸೋಣವು ಈ ಕೆಳಗಿನ ಎರಡು ಮಾರ್ಗಗಳ ಪೈಕಿ ಒಂದರಲ್ಲಿ ಮಾತ್ರ ಆಗಿರತಕ್ಕದ್ದು, ಯಾವುವೆಂದರೆ:—

* ಪ್ರತ್ಯೇಕವಾದ ಮುಜರೈ ಸೆಕ್ರೆಟರಿಯನ್ನು ಇಟ್ಟಿರುವವರೆಗೂ ಈ ಉದ್ಯೋಗವನ್ನು ಭರ್ತಿ ಮಾಡುವುದಿಲ್ಲ.

ಮೊದಲನೇದು, ಎ. ಪಟ್ಟಿಗೆ, ಶ್ರೀಮನ್ಮಹಾರಾಜರವರಿಂದ ಸಮ್ಮತಿಸಲ್ಪಟ್ಟ ಉಮೇದುವಾರರ ಪರೀಕ್ಷೆಯಲ್ಲಿ ತೇರ್ಗಡೆಯಿಂದ; ಮತ್ತು

ಎರಡನೇದು, ಬಿ. ಪಟ್ಟಿಗೆ —

(a) ಖ್ಯಾತಿಯಿಂದಾಗಿ ಕೆಲಸ ಮಾಡಿ ಮೇಲ್ಪಟ್ಟ ಉದ್ಯೋಗಗಳನ್ನು ವಹಿಸುವುದಕ್ಕೆ ಸರ್ವ ಪ್ರಕಾರದಲ್ಲೂ ಅರ್ಹರಾಗಿದಾರೆಂದು ತಿಳಿಯಬಂದಿರುವ ಮತ್ತು ವಿಧಿಸಲ್ಪಟ್ಟ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದರ ಮೂಲಕ ಯೋಗ್ಯತೆಯನ್ನು ಹೊಂದಿರುವ ಮೈಸೂರು ಸರ್ಕಾರಿ ನೌಕರಿಯ ಕೆಳಗಿನ ದರ್ಜೆಗಳ ಸಾಮಾಜಿಕರಿಂದ.

(b) ಅಥವಾ ಘರಾಣಿಯ ಯಾ ಅರ್ಹತೆಯ ಇತರ ಕಾರಣಗಳಿಂದ, ಶ್ರೀಮನ್ಮಹಾರಾಜರವರಿಂದ ಮಾಡಲ್ಪಡುವ ವಿಶೇಷ ಚುನಾವಣೆಯಿಂದ.

3. 1908ನೆ ಇಸವಿಯಲ್ಲಿಯೂ ಆ ತರುವಾಯ ಪ್ರತಿ ಎರಡು ವರ್ಷಗಳಲ್ಲಿಯೂ ಒಂದಾವರ್ತಿ ಸಿವಿಲ್ ಸರ್ವಿಸಿಗೆ ಹೊಸ ಮನುಷ್ಯರನ್ನು ಸೇರಿಸುವುದಕ್ಕಾಗಿ ಸ್ಪರ್ಧಾಪೂರ್ವಕವಾದ ಪರೀಕ್ಷೆಯು ನಡೆಸಲ್ಪಡುವುದು; ಆದರೆ 1906ಕ್ಕೆ ಹಿಂದಿನ ಐದು ವರ್ಷಗಳಲ್ಲಿ ಅಂಥಾ ಪರೀಕ್ಷೆಗಳೇ ನಡೆಸಲ್ಪಡದೆ ಇರುವುದರಿಂದ ಎರಡು ಹೆಚ್ಚು ಪರೀಕ್ಷೆಗಳು, ಎಂದರೆ 1907ರಲ್ಲಿ ಒಂದೂ, 1909ರಲ್ಲಿ ಮತ್ತೊಂದೂ ನಡೆಸಲ್ಪಡುವುವು. ಪರೀಕ್ಷಾ ಗ್ರಂಥಗಳೂ, ಪರೀಕ್ಷೆಯು ನಡೆಸಲ್ಪಡುವ ತಾರೀಖು ಮತ್ತು ಕ್ರಮ, ಉತ್ತೀರ್ಣರಾಗುವುದಕ್ಕೆ ಅವಶ್ಯವಾದ ಅಂಕಗಳ ಸಂಖ್ಯೆಗಳು ಇವು ಕನಿಷ್ಠಪಕ್ಷ ಪರೀಕ್ಷೆಗೆ ಮೂರು ತಿಂಗಳುಗಳು ಮುಂಚೆ ಕ್ರಮವಾಗಿ ಪ್ರಕಟಿಸಲ್ಪಡುವುವು. ಪರೀಕ್ಷೆಗಳ ಕಠಿಣತೆಯ ವಿಷಯದಲ್ಲಿಯೂ ಗ್ರಂಥಗಳ ವಿಸ್ತಾರದ ವಿಷಯದಲ್ಲಿಯೂ, ಮೇಲ್ಕಂಡ ಸ್ಪರ್ಧಾಪೂರ್ವಕವಾದ ಪರೀಕ್ಷೆಯು ಬ್ರಿಟಿಷ್ ಇಂಡಿಯಾದಲ್ಲಿ ಪ್ರೊವಿನ್ಷಲ್ ಸಿವಿಲ್ ಸರ್ವಿಸಿಗಾಗಿ ಅನುಸರಿಸಲ್ಪಟ್ಟಿರುವುದರ ಹಾಗೆ ಇರುವುದು.

4. ಪರೀಕ್ಷೆಗೆ ಬರುವ ಉಮೇದುವಾರರು ಪರೀಕ್ಷೆಯ ತಾರೀಖಿನ ದಿನ 25 ವರ್ಷಗಳ ವಯಸ್ಸಿಗೆ ಮೀರಿರಕೂಡದು, ಮತ್ತು ಇಂಡಿಯಾ ದೇಶದ ಅಥವಾ ಇತರ ದೇಶದ ಯೂನಿವರ್ಸಿಟಿಯ ಕಲೆಗಳ ಗ್ರಾಜ್ಯುಯೇಟುಗಳಾಗಿರಬೇಕು; ಆದರೆ, ಉಮೇದುವಾರನು ಮೈಸೂರು ದೇಶೀಯನಾಗಿ ಅಥವಾ ಮೈಸೂರಿನಲ್ಲಿ ವಾಸವುಳ್ಳವನಾಗಿ ಇಲ್ಲದೆ ಇದ್ದರೆ ಅವನು ಮದರಾಸಿನ ಅಥವಾ ಬೊಂಬಾಯಿನ ಯೂನಿವರ್ಸಿಟಿಯ ಗ್ರಾಜ್ಯುಯೇಟಾಗಿರಬೇಕು.

5. ಈ ಷರತ್ತುಗಳನ್ನು ನೆರವೇರಿಸುವ ಮತ್ತು ಪರೀಕ್ಷೆಗೆ ಬರಲಪೇಕ್ಷಿಸುವ ಉಮೇದುವಾರರು ಅವರ ಹೆಸರುಗಳನ್ನೂ ಮತ್ತು ವಯಸ್ಸು, ಯೋಗ್ಯತೆಗಳ ವಿಷಯದಲ್ಲಿ ಸಾಕ್ಷ್ಯವನ್ನೂ; ಜನನಸ್ಥಳ, ಜಾತಿ, ವಂಶ, ಉದ್ಯೋಗ, ಜನಮಂಡಲಿಯಲ್ಲಿ ಅವರ ಸ್ಥಿತಿ ಇವುಗಳನ್ನು ಕುರಿತು ವರ್ತಮಾನವನ್ನೂ; ಮತ್ತು ಗುಣ ಮತ್ತು ನಡತೆಗಳ ಸರ್ಟಿಫಿಕೇಟುಗಳನ್ನೂ; ಸರ್ಕಾರಿ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರಿಗೆ ಮುಂದೆ ಗೊತ್ತು ಮಾಡಲ್ಪಡುವ ತಾರೀಖಿಗೆ ಮೀರದೆ ಕಳುಹಿಸತಕ್ಕದ್ದು. ಈ ಉಮೇದುವಾರರಿಂದ ಚುನಾವಣೆಯು ಶ್ರೀಮನ್ಮಹಾರಾಜರವರಿಂದ ಮಾಡಲ್ಪಡುವುದು ಮತ್ತು ಹಾಗೆ ಚುನಾಯಿಸಲ್ಪಟ್ಟವರ ಹೆಸರುಗಳು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಡುವುವು. ಹಾಗೆ ಪ್ರಕಟಿಸಲ್ಪಟ್ಟ ಒಂದು ತಿಂಗಳೊಳಗಾಗಿ ಚುನಾಯಿಸಲ್ಪಟ್ಟ ಉಮೇದುವಾರರು ಮುಂದೆ ಸರ್ಕಾರದಿಂದ ಪ್ರಕಟಿಸಲ್ಪಡುವ ಸ್ಥಳದಲ್ಲಿ ಮತ್ತು ತಾರೀಖಿನಲ್ಲಿ ಒಂದು ಮೆಡಿಕಲ್ ಬೋರ್ಡ್ ಯಾ ವೈದ್ಯರ ಸಭೆಯ ಮುಂದೆ ಹಾಜರಾಗತಕ್ಕದ್ದು. ದೃಢಕಾಯವೂ ಶಕ್ತಿಯೂ ಇಲ್ಲದವರನ್ನು ಮತ್ತು ಒಬ್ಬ ಕಾರ್ಯನಿರ್ವಾಹಕ ಆಫೀಸರ ಚಟುವಟಿಕೆಯಾದ ಕೆಲಸಗಳಿಗೆ ವಿಶೇಷವಾಗಿ ಅರ್ಹರಾಗದೆ ಇರುವ ಉಮೇದುವಾರರನ್ನು ತಳ್ಳಿಬಿಡಬೇಕೆಂದು ಈ ಬೋರ್ಡಿಗೆ ಅಪ್ಪಣೆ ಕೊಡಲ್ಪಡುವುದು. ಬೋರ್ಡಿನವರಿಂದ ಮಂಜೂರ್ಮಾಡಲ್ಪಟ್ಟ ಮೇಲೆ ಉಮೇದುವಾರರು ಪರೀಕ್ಷೆಗೆ ಅರ್ಹರಾಗಿರತಕ್ಕದ್ದು.

6. ತೃಪ್ತಿಕರವಾಗಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಉಮೇದುವಾರರ ಪಟ್ಟಿಯ ಮೇಲ್ಭಾಗದಿಂದ ಇಬ್ಬರು ಉಮೇದುವಾರರು ಚುನಾಯಿಸಲ್ಪಟ್ಟು, ಎ. ಪಟ್ಟಿಯಲ್ಲಿ 5ನೆ ತರಗತಿಯ ಅಸಿಸ್ಟೆಂಟ್ ಕಮಿಷನರ ದರ್ಜೆಗೆ ಅಜಮಾಯಿಷಿ ತರೀಕು ಸೇರಿಸಲ್ಪಡುವರು.

7. ಮೇಲ್ಕಂಡ ಮೇರೆ ಸ್ಪರ್ಧಾಪೂರ್ವಕವಾಗಿ ಮೈಸೂರು ಸಿವಿಲ್ ಸರ್ವಿಸಿಗೆ ಸೇರಿಸಲ್ಪಟ್ಟ ಮನುಷ್ಯರು ಅಜಮಾಯಿಷಿ ಕಾಲದಲ್ಲಿ ಎಂದರೆ ಎರಡು ವರ್ಷಗಳ ಅವಧಿವರೆಗೆ ತಿಂಗಳು ಒಂದಕ್ಕೆ 200 ರೂಪಾಯಿ ಸಂಬಳ ತೆಗೆದುಕೊಳ್ಳುವರು. ಆ ಕಾಲದಲ್ಲಿ ಅವರು

ಮೊದಲನೇದು, ಕುದುರೆ ಸವಾರಿಯಲ್ಲಿ ನಡೆಯುವ ಪರೀಕ್ಷೆಯಲ್ಲಿಯೂ,

ಎರಡನೇದು, ತತ್ಕಾಲದಲ್ಲಿ ಜಾರಿಯಲ್ಲಿರುವ ನಿಬಂಧನೆಗಳ ಮೇರೆ ಇಲಾಖೆಯ ನೌಕರಿಗೆ ಸಂಬಂಧಪಟ್ಟ ಪರೀಕ್ಷೆಯಲ್ಲಿಯೂ,

ಮೂರನೇದು, ಅವರ ಪೈಕಿ ಬಿ. ಎ. ಪರೀಕ್ಷೆಯಲ್ಲಿ ಐಚ್ಛಿಕ ಭಾಷೆಯನ್ನಾಗಿ ಕನ್ನಡವನ್ನು ತೆಗೆದುಕೊಳ್ಳದೆ ಇದ್ದವರು ಆ ಭಾಷೆಯಲ್ಲಿ ವಿಧಿಸಲ್ಪಟ್ಟ ಪರಿಮಾಣದ ಪರೀಕ್ಷೆಯಲ್ಲಿಯೂ, ತೇರ್ಗಡೆಯಾಗತಕ್ಕದ್ದು.

ಮೇಲ್ಕಂಡ ಅಜಮಾಯಿಷಿಯ ಎರಡು ವರ್ಷಗಳು ಮುಗಿಯುವುದರೊಳಗೆ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದಕ್ಕೆ ತಪ್ಪಿದ ಪ್ರೊಬೇಷನರ ಯಾ ಉಮೇದುವಾರನಿಗೆ ಮತ್ತೊಂದು ವರ್ಷದ ವಾಯಿದೆಯು ದಯೆಯಿಂದ ಕೊಡಲ್ಪಡುವದು. ಮೂರನೆಯ ವರ್ಷದಲ್ಲಿ ತೇರ್ಗಡೆಯಾಗಲು ತಪ್ಪಿದರೆ ಆತನ ಹೆಸರು ಅಸಿಸ್ಟೆಂಟ್ ಕಮಿಷನರುಗಳ ಪಟ್ಟಿಯಿಂದ ತೆಗೆದುಹಾಕಲ್ಪಡುವುದು. —

8. ಮೇಲಿನಂತೆ ಮೇಲೆ ಸಂಪೂರ್ಣವಾಗಿ ಯೋಗ್ಯತೆಯನ್ನು ಹೊಂದಿದಾಗ ಬ. ಪಟ್ಟಿ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರು ಎ. ಪಟ್ಟಿಯಲ್ಲಿ 250 ರೂಪಾಯಿನ ಮೇಲೆ 5ನೆ ತರಗತಿಯ ಅಸಿಸ್ಟೆಂಟ್ ಕಮಿಷನರಾಗಿ ಖಾಯಂ ಮಾಡಲ್ಪಟ್ಟು ತರುವಾಯ ಆ ಪಟ್ಟಿಯಲ್ಲಿ ಕೆಳಗೆ ತೋರಿಸಿರುವ ಪರಿಮಾಣದ ಮೇಲೆ ಏರುವನು:—

ಅಜಮಾಯಿಷಿ ತರೀಕಿನ ಕಾಲವಲ್ಲದೆ 5ನೆ ತರಗತಿಯಲ್ಲಿ 1 ವರ್ಷ ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯ,	300 ರೂಪಾಯಿ ಸಂಬಳವುಳ್ಳ 4ನೆ ತರಗತಿಯ ಅಸಿಸ್ಟೆಂಟ್ ಕಮಿಷನರ್ ಕೆಲಸಕ್ಕೆ;
4ನೆ ತರಗತಿಯಲ್ಲಿ 3 ವರ್ಷಗಳು ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯ,	350 ರೂಪಾಯಿ ಸಂಬಳವುಳ್ಳ 3ನೆ ತರಗತಿಯ ಅಸಿಸ್ಟೆಂಟ್ ಕಮಿಷನರ್ ಕೆಲಸಕ್ಕೆ;
3ನೆ ತರಗತಿಯಲ್ಲಿ 3 ವರ್ಷಗಳು ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯ,	400 ರೂಪಾಯಿ ಸಂಬಳವುಳ್ಳ 2ನೆ ತರಗತಿಯ ಅಸಿಸ್ಟೆಂಟ್ ಕಮಿಷನರ ಕೆಲಸಕ್ಕೆ;
2ನೆ ತರಗತಿಯಲ್ಲಿ 3 ವರ್ಷಗಳು ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯ,	450 ರೂಪಾಯಿ ಸಂಬಳವುಳ್ಳ 1ನೆ ತರಗತಿಯ ಅಸಿಸ್ಟೆಂಟ್ ಕಮಿಷನರ ಕೆಲಸಕ್ಕೆ.

9. (1) ಸಿವಿಲ್ ಸರ್ವಿಸ್ ಪರೀಕ್ಷೆಯ ಫಲಿತಾಂಶಗಳು ತಿಳಿದ ಕೂಡಲೆ 2ನೆ ನಿಬಂಧನೆಯ ಎರಡನೆ ವಾಕ್ಯದಲ್ಲಿ ವಿವರಿಸಿರುವಂತೆ ಖಾಲಿಗಳಿಗೆ ಅನುಗುಣವಾಗಿ ಬೇಕಾದಷ್ಟು ಸಂಖ್ಯೆಯ ಜನಗಳನ್ನು ವಿಶೇಷವಾಗಿ ಚುನಾಯಿಸುವುದರಿಂದ ಬಿ. ಪಟ್ಟಿಯ ಅಸಿಸ್ಟೆಂಟ್ ಕಮಿಷನರುಗಳ ದರ್ಜೆಗೆ ಹೊಸ ಆಫೀಸರುಗಳು ಸೇರಿಸಲ್ಪಡುವರು; ಆದರೆ ಸಾಧಾರಣವಾಗಿ ಇಂಡಿಯಾ ಅಥವಾ ಇತರ ದೇಶದ ಯೂನಿವರ್ಸಿಟಿಯ ಬಿ. ಎ. ಡಿಗ್ರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದ ಹೊರತು ಘರಾಣೆಯ ಯಾ ಇತರ ಕಾರಣಗಳ ಮೇಲೆ ಯಾವ ಮನುಷ್ಯನೂ ಚುನಾಯಿಸಲ್ಪಡುವುದಿಲ್ಲ.

(2) ಈ ನಿಬಂಧನೆಯ (1)ನೆ ವಾಕ್ಯದಲ್ಲಿರುವ ಯಾವ ಅಂಶವೂ ಹಾಲಿ ಇರುವ ಖಾಲಿಗಳನ್ನು ಭರ್ತಿ ಮಾಡುವುದಕ್ಕೋಸ್ಕರ ಕೆಳಗಿನ ದರ್ಜೆಗಳಿಂದ ಬಿ. ಪಟ್ಟಿಯ ಅಸಿಸ್ಟೆಂಟ್ ಕಮಿಷನರ ದರ್ಜೆಗೆ ಹಂಗಾಮಿ ಬಡತಿಗಳನ್ನು ನಿರೋಧಿಸಬೇಕೆಂದು ಉದ್ದೇಶಿಸಿ ಇಲ್ಲ; ಆದರೆ ಹಾಗೆ ಬಡತಿ ಮಾಡಲ್ಪಟ್ಟ ಆಫಿಸರು ಅಂಥಾ ಬಡತಿಯ ಕಾರಣಮಾತ್ರದಿಂದ (1)ನೆ ವಾಕ್ಯದ ಮೇರೆ ಖಾಯಂ ನೌಕರರಾತಿಗಳು ಮಾಡಲ್ಪಟ್ಟಾಗ ಖಾಯಮಿಗೆ ಹಕ್ಕುಳ್ಳವನಾಗುವುದಿಲ್ಲ.

10. ಘರಾಣೆಯ ಅಥವಾ ಇತರ ಕಾರಣಗಳ ಮೇಲೆ ಮೈಸೂರು ಸಿವಿಲ್ ಸರ್ವಿಸಿಗೆ ಸೇರಿಸಲ್ಪಟ್ಟ ಮನುಷ್ಯರನ್ನು ಬಿ. ಪಟ್ಟಿಯ 5ನೆ ತರಗತಿಯ ಅಸಿಸ್ಟೆಂಟ್ ಕಮಿಷನರ ದರ್ಜೆಗೆ ಅಜಮಾಯಿಷಿ ತರೀಕು ತಿಂಗಳು ಒಂದಕ್ಕೆ 200 ರೂಪಾಯಿನ ಸಂಬಳದ ಮೇಲೆ ನೌಕರರ್ಮಾಡಲಾಗುವುದು; ಇವರ ವಿಷಯದಲ್ಲಿ ಅಜಮಾಯಿಷಿ ತರೀಕಿನ ಕಾಲವು ಮೂರು ವರ್ಷಗಳಾಗಿರುವುದು. ಇತರ ವಿಷಯಗಳಲ್ಲಿ 7 ಮತ್ತು 8ನೆ ನಿಬಂಧನೆಗಳ ನಿಯಮಗಳು ಇಂಥಾ ಪ್ರೊಬೇಷನರುಗಳಿಗೆ ಲಗಾವಾಗತಕ್ಕದ್ದು.

11. ಸರ್ಕಾರಿ ನೌಕರಿಯ ಕೆಳಗಿನ ದರ್ಜೆಗಳಿಂದ ಬಿ. ಪಟ್ಟಿಗೆ ಸೇರಿಸಲ್ಪಟ್ಟ ಮನುಷ್ಯರು ಪ್ರೊಬೇಷನರುಗಳಾಗಿರಬೇಕೆಂದು ವಿಧಿಸದೆ ಅವರನ್ನು 250 ರೂಪಾಯಿ ಸಂಬಳವುಳ್ಳ 5ನೆ ತರಗತಿಯ ಅಸಿಸ್ಟೆಂಟು ಕಮಿಷನರುಗಳಾಗಿ ನೌಕರರ್ಮಾಡಲಾಗುವುದು; ಅವರು ಒಂದೊಂದು ತರಗತಿಯಲ್ಲಿ ಮೂರು ವರ್ಷಗಳ ಕಾಲ ಸರ್ಕಾರದವರು ಒಪ್ಪುವಂತೆ ಕೆಲಸಮಾಡಿದ ತರುವಾಯ ಮೇಲಿನ ತರಗತಿಗೆ ಏರತಕ್ಕದ್ದು;

ಆದರೆ, ಈರೀತಿಯಾಗಿ ನೌಕರರ್ಮಾಡಲ್ಪಟ್ಟ ಆಫಿಸರು ಮೊದಲೇ 250 ರೂಪಾಯಿ ಸಂಬಳ ತೆಗೆದುಕೊಳ್ಳುತ್ತಿದ್ದರೆ ಆ ಸಂಬಳವನ್ನು ತೆಗೆದುಕೊಳ್ಳುತ್ತಿದ್ದ ಕಾಲವನ್ನು 4ನೆ ತರಗತಿಗೆ ಬಡತಿಯಾಗುವುದಕ್ಕೆ ಬೇಕಾಗಿರುವ ಮೂರು ವರ್ಷಗಳ ಕಾಲದ ವಿಷಯದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು;

ಮತ್ತು ಸಬ್ ಜಡ್ಜಾಗಿ ನೌಕರರ್ಮಾಡುವ ಉದ್ದೇಶದಿಂದ ಒಬ್ಬ ಮುನ್ಸಿಫನನ್ನು ಅಸಿಸ್ಟೆಂಟ್ ಕಮಿಷನರಾಗಿ ನೌಕರರ್ಮಾಡಿದರೆ ಆತನನ್ನು 400 ರೂಪಾಯಿ ಸಂಬಳವುಳ್ಳ 2ನೆ ತರಗತಿಯ ಅಸಿಸ್ಟೆಂಟ್ ಕಮಿಷನರಾಗಿ ನೌಕರರ್ಮಾಡತಕ್ಕದ್ದು.

12. ಆತನ ದರ್ಜೆಯ ಮೊದಲನೆ ತರಗತಿಯಲ್ಲಿ ಕನಿಷ್ಠಪಕ್ಷ ಎರಡು ವರ್ಷಗಳು ನೌಕರಿ ಮಾಡಿದ ಉಭಯ ಪಟ್ಟಿಗಳ ಅಸಿಸ್ಟೆಂಟ್ ಕಮಿಷನರು ಅರ್ಹನಾಗಿ ಕಂಡು ಬಂದು ಖಾಲಿಗಳೂ ಇದ್ದರೆ ಸಾಲಿಯಾನಾ 50 ರೂಪಾಯಿ ಬಡತಿಗಳ ಮೂಲಕ 600 ರೂಪಾಯಿಗೆ ಏರುವ 500 ರೂಪಾಯಿ ಸಂಬಳವುಳ್ಳ ಸೀನಿಯರ್ ಅಸಿಸ್ಟೆಂಟ್ ಕಮಿಷನರ ದರ್ಜೆಗೆ ಬಡತಿಗೆ ಅರ್ಹನಾಗಿರತಕ್ಕದ್ದು. ಈ ಕಡೆಯಲ್ಲಿ ಹೇಳಿದ ದರ್ಜೆಯಲ್ಲಿ ಒಟ್ಟು ಎಂಟು ಸ್ಥಳಗಳು ಇರತಕ್ಕದ್ದು.

13. ನಿಬಂಧನೆಗಳ ಮೇರೆ ಪರೀಕ್ಷೆಯ ಮೂಲಕ ಅಥವಾ ವಿಶೇಷ ಚುನಾವಣೆಯ ಮೂಲಕ ಹೊಸದಾಗಿ ಸೇರಿಸಲ್ಪಟ್ಟ ಪ್ರತಿ ಆಫಿಸರೂ ಆ ಮೊದಲೇ ತರಬೇತನ್ನು ಹೊಂದಿ ಇದ್ದ ಹೊರತು ಸರ್ವೆ ಇಲಾಖೆಯಲ್ಲಿ ಆರು ತಿಂಗಳಿಗೆ ಕಡಮೆಯಿಲ್ಲದೆಯೂ ಮತ್ತು ಅಕೌಂಟ್ಸ್ ಯಾ ಲೆಕ್ಕದ ಇಲಾಖೆಯಲ್ಲಿ 6 ತಿಂಗಳಿಗೆ ಕಡಮೆಯಿಲ್ಲದೆಯೂ ತರಬೇತು ಮಾಡಲ್ಪಡತಕ್ಕದ್ದು ಮತ್ತು ಸ್ಪರ್ಧಾಪೂರ್ವಕವಾಗಿ ಹೊಸದಾಗಿ ಸೇರಿಸಲ್ಪಟ್ಟ ಪ್ರತಿ ಆಫಿಸರೂ ಒಟ್ಟು ಒಂದು ವರ್ಷಕ್ಕೆ ಕಡಮೆಯಿಲ್ಲದೆ ಮುನ್ಸಿಫನಾಗಿ ಅಥವಾ ಸಬ್ ಜಡ್ಜಾಗಿ ಜುಡಿಷಲ್ ಇಲಾಖೆಯಲ್ಲಿ ಕೂಡ ತರಬೇತು ಮಾಡಲ್ಪಡತಕ್ಕದ್ದು.

ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯವರ ಆಫೀಸಿನಲ್ಲಿ ಅಂಡರ್ ಮತ್ತು ಅಸಿಸ್ಟೆಂಟ್ ಸೆಕ್ರೆಟೆರಿಗಳು, ರೆವಿನ್ಯೂ ಇಲಾಖೆಯಲ್ಲಿ (ಸಬ್) ಡಿವಿಜನ್ ಮತ್ತು ಟ್ರೆಜರಿ ಆಫೀಸರುಗಳು, ಸಬಾರ್ಡಿನೇಟ್ ಜಡ್ಜಿಗಳು, ಪೊಲೀಸು ಸೂಪರಿಂಟೆಂಡೆಂಟುಗಳು, ಎಕ್ಸೈಸ್ ಡಿವಿಜನ್ ಆಫೀಸರುಗಳು, ಸರ್ವೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟುಗಳು, ಅಸಿಸ್ಟೆಂಟ್ ಕಂಟ್ರೋಲರ್‌ಗಳು ಮತ್ತು ಮೇಲ್ಕಂಡ ಇಲಾಖೆಗಳಲ್ಲಿ ಇವುಗಳಿಗೆ ಸಮವಾದ ಇತರ ಉದ್ಯೋಗಗಳು—ಈ ಉದ್ಯೋಗಗಳು ಪಟ್ಟಿಗಳ ಭೇದವನ್ನೆಣಿಸದೆ ಅಸಿಸ್ಟೆಂಟ್ ಕಮಿಷನರುಗಳ ದರ್ಜೆಯಿಂದ ಅರ್ಹತೆಯಿಂದಲೂ ತರಬೇತಿನಿಂದಲೂ ಯೋಗ್ಯತೆ ಹೊಂದಿದ ಆಫೀಸರುಗಳಿಂದ ಭರ್ತಿ ಮಾಡಲ್ಪಡತಕ್ಕದ್ದು. ಅಂಥಾ ಆಫೀಸರುಗಳು ಆಗಾಗ್ಯೆ ಅವರವರು ಇರುವ ಹಾಗೆ ಸಂಭವಿಸುವ ತರಗತಿಯ ಕ್ರಮವಾದ ಸಂಬಳವನ್ನು ಅವರು ವಹಿಸುವ ಉದ್ಯೋಗಕ್ಕೆ ಲಗತ್ತು ಮಾಡಿರುವ ಯಾವುದಾದರೂ ವಿಶೇಷವಾದ ಅಥವಾ ಸ್ಥಳೀಯ ಅಲೋವೆನ್ಸ್ ಯಾ ವೇತನ ಸಹಿತ ತೆಗೆದುಕೊಳ್ಳುವರು.

14. (1) ಶ್ರೀಮನ್ ಮಹಾರಾಜರವರಿಂದ ಆಗಾಗ್ಯೆ ಮಂಜೂರ್ಮಾಡಲ್ಪಡಬಹುದಾದ ಬದಲಾವಣೆಗಳಿಗೆ ಒಳಪಟ್ಟು ಈ ಕೆಳಗಿನ ಇಲಾಖೆಗಳಲ್ಲಿರುವ ಅಸಿಸ್ಟೆಂಟ್ ಕಮಿಷನರುಗಳ ಉದ್ಯೋಗಗಳ ಪರಿಮಾಣವು ಪ್ರತಿ ಒಂದು ಇಲಾಖೆಯ ಎದುರಿಗೂ ನಮೂದು ಮಾಡಿರುವಂತೆ ಇರತಕ್ಕದ್ದು :—

ಇಲಾಖೆ.	ಸಂಖ್ಯೆ.	ಉದ್ಯೋಗದ ಸ್ವಭಾವ.
ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯವರ ಆಫೀಸು..	2	ಅಂಡರ್ ಸೆಕ್ರೆಟೆರಿಗಳು.
	2	ಅಸಿಸ್ಟೆಂಟ್ ಸೆಕ್ರೆಟರಿಗಳು.
	1	ದಿವಾನರವರ ಬಳಿ ಕೆಲಸ ಮಾಡುವ ಅಸಿಸ್ಟೆಂಟ್ ಅಥವಾ ಅಂಡರ್ ಸೆಕ್ರೆಟೆರಿ, ಕೆಲಸ ಮಾಡುವ ಆಫೀಸರ ದರ್ಜೆಗೆ ಅನುಗುಣವಾಗಿ.
	1	ದಿವಾನರವರ ಪ್ರೈವೆಟ್ ಸೆಕ್ರೆಟರಿ.
ರೆವಿನ್ಯೂ ಇಲಾಖೆ	17	ಸಬ್ ಡಿವಿಜನ್‌ಗಳ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್‌ಗಳು.
		ಟ್ರೆಜರಿ ಅಸಿಸ್ಟೆಂಟ್ ಕಮಿಷನರುಗಳು.
	1	ಹುಜೂರು ಟ್ರೆಜರಿ ಆಫೀಸರು.
	2	ಬೆಂಗಳೂರು ಮತ್ತು ಮೈಸೂರು ನಗರಗಳ ಅಸಿಸ್ಟೆಂಟ್ ಕಮಿಷನರ್ ಮಾಜಿಸ್ಟ್ರೇಟುಗಳು.
	2	ರೆವಿನ್ಯೂ ಕಮಿಷನರ ಅಸಿಸ್ಟೆಂಟುಗಳು.
ಎಕ್ಸೈಸ್ ಇಲಾಖೆ ...	4	ಡಿಸ್ಟ್ರಿಕ್ಟು ಎಕ್ಸೈಜ್ ಆಫೀಸರುಗಳು.
	1	ಎಕ್ಸೈಸ್ ಕಮಿಷನರ ಹೆಡ್ ಕ್ವಾರ್ಟರ್ ಅಸಿಸ್ಟೆಂಟು.
ಸರ್ವೆ ಮತ್ತು ಸೆಟ್ಲ್‌ಮೆಂಟ್ ಇಲಾಖೆ ...	5	ಅಸಿಸ್ಟೆಂಟ್ ಸೂಪರಿಂಟೆಂಡೆಂಟುಗಳು.
ಪೊಲೀಸು ಇಲಾಖೆ ...	9	ಸೂಪರಿಂಟೆಂಡೆಂಟುಗಳು.
	1	ಪೊಲೀಸು ಇನ್ಸ್‌ಪೆಕ್ಟರ್ ಜನರಲ್‌ರವರ ಹೆಡ್ ಕ್ವಾರ್ಟರ್ ಅಸಿಸ್ಟೆಂಟ್.
ಜುಡಿಷಲ್ ಇಲಾಖೆ ..	3	ಸಬಾರ್ಡಿನೇಟ್ ಜಡ್ಜಿಗಳು.
	1	ಚೀಫ್ ಕೋರ್ಟ್ ರಿಜಿಸ್ಟ್ರಾರ್ ಮತ್ತು ಉದ್ಯೋಗಪ್ರಯುಕ್ತ ಚೀಫ್ ಕೋರ್ಟ್ ತೀರ್ಮಾನಗಳ ರಿಪೋರ್ಟರ್.
ಅಕೌಂಟ್ ಯಾ ಲೆಕ್ಕದ ಇಲಾಖೆ ..	5	ಅಸಿಸ್ಟೆಂಟ್ ಕಂಟ್ರೋಲರ್‌ಗಳು.
ಆಕಸ್ಮಿಕವಾದ ಸಂಗತಿಗಳಿಗಾಗಿಯೂ, ರಜಾ ಮೇಲೆ ಗೈರ್ ಹಾಜರಿಗಾಗಿಯೂ, ಯಾವುದಾದರೂ ಬೇರೆ ಕೆಲಸಗಳಿಗೆ ನೇಮಿಸುವುದಕ್ಕಾಗಿಯೂ, ಮತ್ತು ಕೆಲಸದಲ್ಲಿ ತರಬೇತಾಗುತ್ತಿರಬಹುದಾದ ಪ್ರೊಬೇಷನರ್‌ಗಳಿಗಾಗಿಯೂ ಸೇರಿಸತಕ್ಕದ್ದು.	8	
ಒಟ್ಟು ಜುಮ್ಲಾ ...	73	

(2) ಇದರಡಿ ಕಂಡ ಉದ್ಯೋಗಗಳು (1) ನೆ ವಾಕ್ಯದಲ್ಲಿ ಕೊಟ್ಟಿರುವ ಪಟ್ಟಿಯ ಹೊರಗೆ ಇರತಕ್ಕದ್ದು, ಅವು ಯಾವುವೆಂದರೆ, ಮ್ಯುನಿಸಿಪಾಲಿಟಿಗೋಸ್ಕರ ಪ್ರತ್ಯೇಕವಾಗಿ ನೌಕರರ್ಮಾಡಲ್ಪಟ್ಟ ವೈಸ್‌ಪ್ರೆಸಿಡೆಂಟ್, ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರ್, ಅರಮನೆಯ ಶಿಬ್ಬಂದಿಗಳ ಚಾರ್ಜಿನಲ್ಲಿರುವ ಆಫೀಸರು, ಕೋಲಾರದ ಚಿನ್ನದ ಗಣಿಗಳ ಸ್ಪೆಷಲ್ ಮಾಜಿಸ್ಟ್ರೇಟು, ಜನರಲ್ ಮತ್ತು ರೆವಿನ್ಯೂ ಸೆಕ್ರೆಟೆರಿಯವರ ಆಫೀಸಿನ ರಿಜಿಸ್ಟ್ರಾರ್‌ರು, ಮತ್ತು ಈ ವಿಚಾರದಲ್ಲಿ ಸರ್ಕಾರದವರು, ಆಗಿಂದಾಗ ನಮೂದಿಸಬಹುದಾದ ಇತರ ಆಫೀಸರುಗಳು.

(3) (2) ನೆ ವಾಕ್ಯದಲ್ಲಿ ಸೂಚಿಸಿರುವ ಉದ್ಯೋಗಗಳ ಪೈಕಿ ಯಾವುದಕ್ಕಾದರೂ, ಅಥವಾ ಇಷ್ಟೆಂದು ಗೊತ್ತಾಗಿ ಹೇಳುವುದಕ್ಕಾಗದ ಕಾಲದವರೆಗೆ ಅಥವಾ ದೀರ್ಘಕಾಲದವರೆಗೆ ನಿಲ್ಲಿಸಿಕೊಳ್ಳಬಹುದಾದ ವಿಶೇಷವಾದ ಕೆಲಸಕ್ಕಾಗಿ, ಅಸಿಸ್ಟೆಂಟ್

ಕಮಿಷನರ್ ದರ್ಜೆಯಲ್ಲಿರುವ ಒಬ್ಬ ಆಫಿಸರು ಹಂಗಾಮಿಯಾಗಿ ನೇಮಿಸಲ್ಪಟ್ಟಾಗ ಆತನನ್ನು ಬೇರೆ ಕೆಲಸದಲ್ಲಿರುವುದಾಗಿ ತೋರಿಸಿ (1) ನೇ ವಾಕ್ಯದಲ್ಲಿ ನಮೂದಾದ ಪಟ್ಟಿಯಲ್ಲಿರುವ ಉದ್ಯೋಗಗಳ ಒಟ್ಟು ಸಂಖ್ಯೆಯನ್ನು ಏಕರೀತಿಯಾಗಿ ಕಾಪಾಡುವ ಹಾಗೆ ಆತನ ಸ್ಥಳವನ್ನು ತತ್ಕಾಲಕ್ಕೆ ಖಾಯಮವಾಗಿ ಭರ್ತಿ ಮಾಡಬಹುದು.

15. ಖಾಲಿಗಳಿಗೆ ಅನುಗುಣವಾಗಿ ಅರ್ಹತೆಯ ಮೇಲೆ ಚುನಾಯಿಸುವುದರಿಂದ ಅಸಿಸ್ಟೆಂಟ್ ಕಮಿಷನರ್‌ಗಳಿಗೆ ದೊರೆಯಬಹುದಾದ ಮೇಲ್ಪಟ್ಟ ಉದ್ಯೋಗಗಳು ಯಾವುವೆಂದರೆ :—

ಎಂಟು ಡೆಪ್ಯುಟಿ ಕಮಿಷನರ್‌ಗಳು :—

ಮೊದಲನೆ ತರಗತಿ 1,200 ರೂಪಾಯಿನ ಮೇಲೆ	..	2	ಇದಲ್ಲದೆ ಕೋಲಾರದ ಡೆಪ್ಯುಟಿ ಕಮಿಷನರಿಗೆ ಸ್ಥಳೀಯ ವೇತನ 150 ರೂಪಾಯಿ ಸಹಿತ.
ಎರಡನೆ ತರಗತಿ 1,000 ರೂಪಾಯಿನ ಮೇಲೆ	...	3	
ಮೂರನೆ ತರಗತಿ 800ಕ್ಕೆ ಏರುವ 700 ರೂಪಾಯಿನ ಮೇಲೆ		3	

ಇಬ್ಬರು ಡಿಸ್ಟ್ರಿಕ್ಟ್ ಜಡ್ಜಿಗಳು :—

ಮೊದಲನೆ ತರಗತಿ 1,200 ರೂಪಾಯಿನ ಮೇಲೆ	...	ಪ್ರತಿ ತರಗತಿಯಲ್ಲಿಯೂ ಎರಡು ವರ್ಷಗಳಿಗೆ ಕಡಮೆಯಿಲ್ಲದೆ ನೌಕರಿ ಮಾಡಿದ ತರುವಾಯ ಅದಕ್ಕೆ ಮೇಲಿನ ತರಗತಿಗೆ ಏರತಕ್ಕದ್ದು, ಆದರೆ ಯಾವಕಾಲದಲ್ಲಿಯೂ ಮೊದಲನೆ ತರಗತಿಯಲ್ಲಿ ಒಬ್ಬರಿಗಿಂತ ಹೆಚ್ಚು ಆಫಿಸರು ಇರಕೂಡದು.
ಎರಡನೆ ತರಗತಿ 1,000 ರೂಪಾಯಿನ ಮೇಲೆ	...	
ಮೂರನೆ ತರಗತಿ 800ಕ್ಕೆ ಏರುವ 700 ರೂಪಾಯಿನ ಮೇಲೆ		

ಸಾಲಿಯಾನಾ 100 ರೂಪಾಯಿನ ಬಡತಿಗಳ ಮೇಲೆ 1,200 ರೂಪಾಯಿಗಳಿಗೆ ಏರುವ 800 ರೂಪಾಯಿನ ಮೇಲೆ ಒಬ್ಬರು ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿ — ಅವರು ಡೆಪ್ಯುಟಿ ಕಮಿಷನರ ದರ್ಜೆಯ ಆಫಿಸರಾಗಿರುವ ಪಕ್ಷದಲ್ಲಿ ಸ್ಥಳೀಯ ವೇತನ 150 ರೂಪಾಯಿಗಳ ಸಹಿತ ಅವರ ದರ್ಜೆಯ ಸಂಬಳವನ್ನು ಅವರು ಹೊಂದತಕ್ಕದ್ದು.

ಸಾಲೀಯಾನಾ 40 ರೂಪಾಯಿನ ಮೇರೆ ಬಡತಿಗಳಿಂದ 800 ರೂಪಾಯಿಗಳಿಗೆ ಏರುವ 600 ರೂಪಾಯಿನ ಮೇಲೆ ಒಬ್ಬರು ಡೆಪ್ಯುಟಿ ಸೆಕ್ರೆಟರಿ.*

16. ಇಪ್ಪತ್ತೈದು ವರ್ಷಗಳಿಗೆ ಕಡಮೆಯಿಲ್ಲದೆ ನಿರಂತರವಾಗಿ ನೌಕರಿಮಾಡಿದ ತರುವಾಯ ಮೈಸೂರು ಸಿವಿಲ್ ಸರ್ವಿಸಿನ ಆಫಿಸರುಗಳಿಗೆ ಸರಾಸರಿ ಸಂಬಳಗಳಲ್ಲಿ ಅರ್ಧದಷ್ಟು ಪೆನ್ಷನಿನ ಪರಮಾವಧಿಯು ವರ್ಷ ಒಂದಕ್ಕೆ 6,000 ರೂಪಾಯಾಗಿರುವುದು.

* ಪ್ರತ್ಯೇಕವಾದ ಮುಜರೈ ಸೆಕ್ರೆಟರಿಯ ಉದ್ಯೋಗವನ್ನು ಇಟ್ಟಿರುವ ವರೆಗೂ ಈ ಕೆಲಸವು ಭರ್ತಿ ಮಾಡಲ್ಪಡುವುದಿಲ್ಲ.

ತಾರೀಖು 27ನೆ ಜೂನ್ 1907.

ನಂ. ಜಿ. 8140—ಜಿ. ಎಂ. 12-06-69, ಸ್ತ 1907ನೆ ಇಸವಿಯಲ್ಲಿ ಮೈಸೂರು ಸಿವಿಲ್ ಸರ್ವಿಸಿಗೆ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರುಗಳನ್ನು ಸೇರಿಸುವುದಕ್ಕೋಸ್ಕರ 1907ನೆ ಇಸವಿಯ ನವೆಂಬರು 11ನೆ ತಾರೀಖು ಸೋಮವಾರವೂ ಆ ತರುವಾಯ ಕೆಲವು ದಿವಸಗಳೂ ಬೆಂಗಳೂರು ಪಬ್ಲಿಕ್ ಆಫಿಸ್ ಕಟ್ಟಡದಲ್ಲಿ, ಮಂಜೂರ್ಮಾಡಲ್ಪಟ್ಟ ಉಮೇದುವಾರರ ಸ್ಪರ್ಧಾಪೂರ್ವಕವಾದ ಪರೀಕ್ಷೆಯು ನಡೆಸಲ್ಪಡುವುದು.

2. ಪರೀಕ್ಷೆಗೆ ಬರುವ ಉಮೇದುವಾರರು 1907ನೆ ಇಸವಿಯ ನವೆಂಬರು 11ನೆ ತಾರೀಖಿನ ದಿನ ಇಪ್ಪತ್ತೈದು ವರ್ಷಗಳ ವಯಸ್ಸಿಗೆ ಮೀರಿರಕೂಡದು, ಮತ್ತು ಇಂಡಿಯಾ ದೇಶದ ಅಥವಾ ಇತರ ದೇಶದ ಯೂನಿವರ್ಸಿಟಿಯ ಕೆಲೆಗಳ ಗ್ರಾಜ್ಯುಯೇಟುಗಳಾಗಿರಬೇಕು ; ಆದರೆ, ಉಮೇದುವಾರನು ಮೈಸೂರು ದೇಶೀಯನಾಗಿ ಅಥವಾ ಮೈಸೂರು ದೇಶದಲ್ಲಿ ವಾಸವುಳ್ಳವನಾಗಿ ಇಲ್ಲದೆ ಇದ್ದರೆ ಅವನು ಮದರಾಸಿನ ಅಥವಾ ಬೊಂಬಾಯಿನ ಯೂನಿವರ್ಸಿಟಿಯ ಗ್ರಾಜ್ಯುಯೇಟಾಗಿರಬೇಕು.

3. ಸದರೀ ಪರೀಕ್ಷೆಗೆ ಸೇರಿಸಲ್ಪಡಲಪೇಕ್ಷಿಸುವ ಉಮೇದುವಾರರು ತಾವು ಯಾವ ಐಚ್ಛಿಕ ವಿಷಯದಲ್ಲಿ ಪರೀಕ್ಷಿಸಲ್ಪಡಲು ಅಪೇಕ್ಷಿಸುತ್ತಾರೆಯೋ ಅದನ್ನೂ ತಿಳಿಸಿ 1907ನೆ ಇಸವಿಯ ಆಗಸ್ಟು 15ನೆ ತಾರೀಖಿನ ದಿನ ಅಥವಾ ಅದಕ್ಕೆ ಪೂರ್ವದ ತಲೆಪುವರೆಗೆ ಬೆಂಗಳೂರಿನಲ್ಲಿರುವ ಸರ್ಕಾರಿ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರಿಗೆ ತಮ್ಮ ಅರ್ಜಿಗಳನ್ನು ಕಳುಹಿಸತಕ್ಕದ್ದು.

ಅರ್ಜಿಗಳು ಇದಕ್ಕೆ ಸೇರಿಸಿರುವ ಎ. ನಮೂನೆಯಲ್ಲಿರತಕ್ಕದ್ದು. ಈ ನಮೂನೆಯ ಅಚ್ಚು ಪ್ರತಿಗಳನ್ನು ಬೆಂಗಳೂರಿನಲ್ಲಿರುವ ಸರ್ಕಾರಿ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿಯವರ ಕಚೇರಿಯಿಂದ ಅಥವಾ ಬೆಂಗಳೂರಿನಲ್ಲಿರುವ ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲವರ ಕಚೇರಿಯಿಂದ ಪಡೆಯಬಹುದು.

4. ಯಾವ ಉಮೇದುವಾರನಾಗಲಿ, ಮೈಸೂರು ಸರ್ಕಾರಕ್ಕೆ ಸೇರಿದ ಖಜಾನೆಗೆ ಐವತ್ತು ರೂಪಾಯಿಗಳ ಮೊಬಲಗನ್ನು ಸಲ್ಲಿಸಿರುವುದಾಗಿ ತಿಳಿಸುವ ಖಜಾನೆಯ ರಸೀದಿಯನ್ನಾಗಲಿ ಅಥವಾ ಬೆಂಗಳೂರಿನಲ್ಲಿರುವ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯ ವರಿಗೆ ಸಲ್ಲುವಂತೆ ಐವತ್ತು ರೂಪಾಯಿನ ತಪಾಲು ಮಣಿಆರ್ಡರನ್ನಾಗಲಿ ತನ್ನ ಅರ್ಜಿಗೆ ಸೇರಿಸಿದ್ದ ಹೊರತು ಆತನ ಹೆಸರು ರಿಜಿಸ್ಟ ರಿಗೆ ದಾಖಲ್ಮಾಡಿಕೊಳ್ಳಲ್ಪಡುವುದಿಲ್ಲ.

5. ಪ್ರತಿ ಉಮೇದುವಾರನೂ ತನ್ನ ಅರ್ಜಿಯ ಜತೆಯಲ್ಲಿ ಇದರಡಿ ಕಂಡ ಸರ್ಟಿಫಿಕೇಟುಗಳನ್ನೂ ಪಟ್ಟಿಯನ್ನೂ ರವಾ ನಿಸತಕ್ಕದ್ದು.

(1) ಒಂದು ಜನನದ ಸರ್ಟಿಫಿಕೇಟು.

ಇದು ಜನನದ ರಿಜಿಸ್ಟ್ರರಿಂದ ಕೊಡಲ್ಪಟ್ಟ ಸರ್ಟಿಫಿಕೇಟಾಗಿ, ಬ್ಯಾಪ್ಟಿಸಮ್ ಎಂಬ ಕ್ರೈಸ್ತಸ್ನಾನದ ಸರ್ಟಿಫಿಕೇಟಾಗಿ, ಅಥವಾ ಜಸ್ಟಿಸ್ ಆಫ್ ದಿ ಪೀಸ್ ಎಂಬ ನ್ಯಾಯಾಧಿಕಾರಿಯಿಂದ ಅಥವಾ ಮಾಜಿಸ್ಟ್ರೇಟರಿಂದ ಕೊಡಲ್ಪಟ್ಟ ಸರ್ಟಿಫಿಕೇಟಾಗಿ ಇರಬಹುದು. ಈ ನ್ಯಾಯಾಧಿಕಾರಿಯು ಅಥವಾ ಮಾಜಿಸ್ಟ್ರೇಟರು ಅರ್ಜಿದಾರನ ಜಾತಕದಿಂದ, ಅಥವಾ ಸ್ಕೂಲು ಯಾ ಪಾಠಶಾಲೆಯ ರಿಜಿಸ್ಟರು ಗಳಿಂದ ಉದ್ಧರಿಸಲ್ಪಟ್ಟು ಪ್ರಮಾಣಿಸಲ್ಪಟ್ಟಿರುವ ಭಾಗಗಳಿಂದ ಅಥವಾ ಸಾಕಾದಷ್ಟು ಸಾಕ್ಷ್ಯವೆಂದು ತಾವು ಎಣಿಸಬಹುದಾದ ಇತರ ಸಾಕ್ಷ್ಯದಿಂದ ಅರ್ಜಿದಾರನು ಕೊಟ್ಟ ಜನನದ ತಾರೀಖು ಕರಾರ್ವಾಕಾಗಿದೆಯೆಂದು ತೃಪ್ತನಾದಮೇಲೆ ಮಾತ್ರವೇ ಸರ್ಟಿಫಿಕೇಟ ನ್ನು ಕೊಡತಕ್ಕದ್ದು.

(2) ಒಳ್ಳೆಯ ಗುಣವುಳ್ಳವನೆಂದು ಒಂದು ಸರ್ಟಿಫಿಕೇಟು.

ಈ ಸರ್ಟಿಫಿಕೇಟು 1907ನೆ ಇಸವಿಯ ಜನವರಿ 1ಕ್ಕಿಂತ ಹಿಂದಿನ ತಾರೀಖಿನದಾಗಿರಕೂಡದು, ಮತ್ತು ಕನಿಷ್ಠಪಕ್ಷ ಹಿಂ ದಲ ಮೂರು ವರ್ಷಗಳಿಂದಾದರೂ ಉಮೇದುವಾರನ ಆಪ್ತಪರಿಚಿತಸ್ಥರಾಗಿರುವ, ಬಂಧುವಲ್ಲದ, ಗೌರವಸ್ಥರೆಂದು ಪ್ರಸಿದ್ಧರಾದ ಇಬ್ಬ ಮನುಷ್ಯರಿಂದ ಕೊಡಲ್ಪಟ್ಟಿರತಕ್ಕದ್ದು.

(3) ಉಮೇದುವಾರನು ವಿದ್ಯಾಭ್ಯಾಸಮಾಡಿರುವ ಕಾಲೇಜು ಅಥವಾ ಕಾಲೇಜುಗಳ ಅಧಿಕಾರಿಗಳಿಂದ ಉಮೇದುವಾರನ ಅಭಿವೃದ್ಧಿಯ ಮತ್ತು ನಡತೆಯ ವಿಚಾರವಾಗಿ ಸರ್ಟಿಫಿಕೇಟು ಅಥವಾ ಸರ್ಟಿಫಿಕೇಟುಗಳು.

(4) ಉಮೇದುವಾರನ ತಂದೆಯ ಅಥವಾ ಪಾಲಕನ ಉದ್ಯೋಗವನ್ನೂ ಜನಮಂಡಲಿಯಲ್ಲಿ ಉಮೇದುವಾರನ ಮನೆತ ನದ ಸ್ಥಿತಿಯನ್ನೂ ತಿಳಿಸುವ ಸಾಕ್ಷ್ಯ.

(5) ಉಮೇದುವಾರನಿಗೆ ಒಳ್ಳೆಯ ದೇಹದಾರ್ಢ್ಯವುಂಟೆಂದೂ, ಎಗ್ಸಿಕ್ಯೂಟಿವ್ ಆಫಿಸರ ಚಟುವಟಿಕೆಯಾದ ಕೆಲಸಗ ಳಿಗೆ ಅವನು ಅರ್ಹನೆಂದೂ ಡಿಸ್ಟ್ರಿಕ್ಟು ಸಿವಿಲ್ ಸರ್ಜನಿನ ದರ್ಜೆಗೆ ಕೆಳಪಡದ ಇರುವ ಒಬ್ಬ ವೈದ್ಯಾಧಿಕಾರಿಯಿಂದ ಇದಕ್ಕೆ ಸೇರಿ ಸಿರುವ ಬಿ. ನಮೂನೆಯಲ್ಲಿ ತತ್ಕಾಲೀನವಾದ ಒಂದು ಸರ್ಟಿಫಿಕೇಟು.

(6) ಉಮೇದುವಾರನು ಬಿ. ಎ. ಡಿಗ್ರಿ ಪರೀಕ್ಷೆಯಲ್ಲಿ ಯಾವಾಗ, ಮತ್ತು ಯಾವ ಶಾಖೆಗಳಲ್ಲಿ (ಯಾವುದಾದರೂ ಇದ್ದರೆ) ಮತ್ತು ಯಾವ ತರಗತಿಯಲ್ಲಿ ಅಥವಾ ತರಗತಿಗಳಲ್ಲಿ ತೇರ್ಗಡೆಯಾಗಿರುತ್ತಾನೆಂದು ತೋರಿಸುವ ಒಂದು ಪಟ್ಟಿ.

6. ರಿಜಿಸ್ಟರಿಗೆ ದಾಖಲ್ಮಾಡಿಕೊಳ್ಳಲ್ಪಟ್ಟ ಅರ್ಜಿದಾರರ ಪೈಕಿ ಶ್ರೀಮನ್ ಮಹಾರಾಜರವರಿಂದ ಮಂಜೂರ್ಮಾಡಲ್ಪಡಬಹುದಾದ ವರು ಮಾತ್ರವೇ ಸ್ಪರ್ಧಾಪೂರ್ವಕವಾದ ಪರೀಕ್ಷೆಗೆ ಸೇರಿಸಲ್ಪಡುವರು. 1907ನೆ ಇಸವಿಯ ಆಗಸ್ಟು 29ನೆ ತಾರೀಖಿಗೆ ಮೀರದ ಹಾಗೆ ಮೈಸೂರು ಗೆಜೆಟಿನಲ್ಲಿ ಅವರ ಹೆಸರುಗಳು ಪ್ರಕಟಿಸಲ್ಪಡುವುವು.

7. ಹಿಂದಿನ ಕಡೇ ಪರಿಚ್ಛೇದದ ಪ್ರಕಾರ ಪ್ರಕಟಿಸಲ್ಪಡುವ ಪಟ್ಟಿಯಲ್ಲಿ ಹೆಸರಿರುವ ಮಂಜೂರ್ಮಾಡಲ್ಪಟ್ಟ ಉಮೇದುವಾ ರರು ಸರ್ಕಾರದಿಂದ ಪ್ರಕಟಿಸಲ್ಪಡುವ ದಿನ ಬೆಂಗಳೂರಿನಲ್ಲಿ ಒಂದು ಮೆಡಿಕಲ್ ಬೋರ್ಡ್ ಯಾ ವೈದ್ಯರ ಸಭೆಯ ಮುಂದೆ ಹಾ ಜರಾಗತಕ್ಕದ್ದು ಮತ್ತು ಅವರ ಪೈಕಿ ವೈದ್ಯರ ಸಭೆಯಿಂದ ಮಂಜೂರ್ಮಾಡಲ್ಪಡುವವರು ಮಾತ್ರವೇ ಪರೀಕ್ಷೆಗೆ ಹೋಗಲು ಅಪ್ಪ ಣೆ ಕೊಡಲ್ಪಡುವರು.

8. ಶ್ರೀಮನ್ ಮಹಾರಾಜರವರಿಂದ ಮಂಜೂರ್ಮಾಡಲ್ಪಡದೆ ಇರಬಹುದಾದ ಅಥವಾ ಶ್ರೀಮನ್ ಮಹಾರಾಜರವರಿಂದ ಮಂ ಜೂರ್ಮಾಡಲ್ಪಟ್ಟು ವೈದ್ಯರ ಸಭೆಯಿಂದ ಮಂಜೂರ್ಮಾಡಲ್ಪಡದೆ ಇರಬಹುದಾದ ಯಾವನಾದರೂ ಉಮೇದುವಾರನು ಕೊಟ್ಟಿರುವ ಫೀಜು ವಾಪಸು ಕೊಡಲ್ಪಡುವುದು.

9. ಪರೀಕ್ಷೆಗೆ ಇದರಡಿ ಕಂಡ ಆವಶ್ಯಕ ಮತ್ತು ಐಚ್ಛಿಕ ವಿಷಯಗಳು ಸೇರಿರತಕ್ಕದ್ದು :—

	ಕಾಲ.	ಅಂಕಗಳು. ಪತ್ರಿಕೆ.	ವಾಚಾ.
ಆವಶ್ಯಕ ವಿಷಯಗಳು.			
ಎ. ಗುಂಪು.			
1. ವಿವರಿಸಲ್ಪಟ್ಟ ಮೂರು ವಿಷಯಗಳ ಪೈಕಿ ಒಂದನ್ನು ಕುರಿತು ಪ್ರಬಂಧರಚನೆ.	3 ಗಂಟೆಗಳು ...	150	
2. ಪರೀಕ್ಷೆಗೆ ಪೂರ್ವ ಮೂರು ತಿಂಗಳಿಗೆ ಮೀರದೆ ವಿಧಿಸಲ್ಪಡುವ, ಈಚೆಗೆ ಪ್ರಕಟವಾದ, ಒಂದು ಅಥವಾ ಅಧಿಕ ಪುಸ್ತಕಗಳು—			
1ನೆ ಪತ್ರಿಕೆ	2 ಸದರೀ ...	100	50
2ನೆ ಪತ್ರಿಕೆ	2 ಸದರೀ ...	100	
ಬಿ. ಗುಂಪು.			
3. ಇಂಗ್ಲಿಷ ಭಾಷೆ ಮತ್ತು ಗ್ರಂಥ ಸಮುದಾಯ —			
1ನೆ ಪತ್ರಿಕೆ	3 ಸದರೀ ...	150	50
2ನೆ ಪತ್ರಿಕೆ	2 ಸದರೀ ...	100	
ಐಚ್ಛಿಕ ವಿಷಯಗಳು.			
1. ಮಾಥಮಾಟಿಕ್ಸ ಯಾ ಗಣಿತಶಾಸ್ತ್ರ—			
ಪ್ಯೂರ್ ಯಾ ಶುದ್ಧ ಗಣಿತಶಾಸ್ತ್ರ	3 ಸದರೀ ...	250	
ಮಿಕ್ಸೆಡ ಯಾ ಮಿಶ್ರ ಸದರೀ	3 ಸದರೀ ...	250	
2. ಫಿಸಿಕಲ್ ಸಯನ್ಸ್ ಯಾ ಪದಾರ್ಥ ವಿಜ್ಞಾನ—			
ಫಿಸಿಕ್ಸ ಯಾ ಪದಾರ್ಥವಿಜ್ಞಾನಶಾಸ್ತ್ರ, ಪ್ರಥಮ ಪತ್ರಿಕೆ ...	3 ಸದರೀ ...	165	
ಸದರೀ ಎರಡನೆ ಪತ್ರಿಕೆ ...	3 ಸದರೀ ...	165	
ಸದರೀ ಮೂರನೆ ಪತ್ರಿಕೆ ...	3 ಸದರೀ ...	170	
ಇದಾಗಲಿ, ಅಥವಾ—			
ಕೆಮಿಸ್ಟ್ರಿ ಯಾ ರಸಾಯನಶಾಸ್ತ್ರ, ಪ್ರಥಮ ಪತ್ರಿಕೆ ...	3 ಸದರೀ ...	150	
ಸದರೀ ಎರಡನೆ ಪತ್ರಿಕೆ ...	3 ಸದರೀ ...	150	
ಕಾರ್ಯತಃ ಪರೀಕ್ಷೆ		200	
ಇದಾಗಲಿ.			
3. ನಾಚುರಲ್ ಸಯನ್ಸ್ ಯಾ ಪ್ರಾಕೃತಿಕಶಾಸ್ತ್ರ—			
ಸಾಮಾನ್ಯ ಜೀವಶಾಸ್ತ್ರ (ಬಯಾಲಜಿ) ...	3 ಗಂಟೆಗಳು ...	150	
ಮತ್ತು ಬಾಟನಿ ಯಾ ಓಷಧಿಶಾಸ್ತ್ರವಾಗಲಿ, ಅಥವಾ ಮೃಗಗಳ ಶರೀರ ಧರ್ಮಶಾಸ್ತ್ರವಾಗಲಿ, ಅಥವಾ ಜಂತುಶಾಸ್ತ್ರ (ಜೂಆಲಜಿ) ಯಾಗಲಿ ಅಥವಾ ಭೂಗರ್ಭಶಾಸ್ತ್ರ (ಜಿಯಾಲಜಿ).	3 ಸದರೀ	150	
ಕಾರ್ಯತಃ ಪರೀಕ್ಷೆ	..	200	
4. ಮನಶ್ಶಾಸ್ತ್ರ ಮತ್ತು ನೀತಿಶಾಸ್ತ್ರ—			
ಸೈಕಾಲಜಿ ಯಾ ಆತ್ಮತತ್ವವಿದ್ಯಾ, ಮತ್ತು ಮೆಟಫಿಸಿಕ್ಸ ಯಾ ಆನ್ವೀಕ್ಷಿಕೀ ಶಾಸ್ತ್ರ.	3 ಗಂಟೆಗಳು ..	200	50
ತರ್ಕಶಾಸ್ತ್ರ ಮತ್ತು ನೀತಿಶಾಸ್ತ್ರ ...	3 ಸದರೀ ...	200	50
5. ಚರಿತ್ರೆ—			
ಇಂಡಿಯಾ ದೇಶದ ಚರಿತ್ರೆ, ಇಂಗ್ಲೆಂಡಿನ ಕಾನ್ಸ್ಟಿಟ್ಯೂಷನಲ್ ಯಾ ವ್ಯವಸ್ಥಾನುರೂಪವಾದ ಚರಿತ್ರೆ, ಮತ್ತು 1715ರಿಂದ 1815ರ ವರೆಗೆ ಸಾಮಾನ್ಯ ನವೀನ ಚರಿತ್ರೆ.	3 ಸದರೀ ...	200	50
ರಾಜನೀತಿಶಾಸ್ತ್ರ; ಅರ್ಥಶಾಸ್ತ್ರ, ತಕ್ಕಷ್ಟು ಕಾರ್ಯನಿರ್ವಾಹ ಸಂಬಂಧವಾದ ಚರಿತ್ರೆಯ ತಿಳವಳಿಕೆ ಸಹಿತ.	3 ಸದರೀ ..	200	50

ಐಚ್ಛಿಕ ವಿಷಯಗಳಲ್ಲಿ ಪರೀಕ್ಷೆಗಳು ವ್ಯಾಪ್ತಿಯಲ್ಲಿ ಇಂಡಿಯಾ ದೇಶದ ಯೂನಿವರ್ಸಿಟಿಗಳ ಪೈಕಿ ಯಾವುದಾದರೂ ಒಂದರ ಬಿ. ಎ. ಪರೀಕ್ಷೆಗಳಿಗೆ ಸದೃಶವಾಗಿರುವವು. ಆದರೆ ಪ್ರಶ್ನೆ ಪತ್ರಿಕೆಗಳು ಸ್ವಲ್ಪ ಅಧಿಕ ಪರಿಮಾಣದವುಗಳಾಗಿರುವುವು. ಪ್ರತಿ ಪತ್ರಿಕೆಯಲ್ಲಿಯೂ ಹಾಕಿರುವ ಪ್ರಶ್ನೆಗಳು ಪೂರಾ ಅಂಕಗಳನ್ನು ಪಡೆಯುವುದಕ್ಕಾಗಿ ಉತ್ತರ ಬರೆಯಲವಶ್ಯಕವಾಗಿರುವಷ್ಟಕ್ಕಿಂತ ಕನಿಷ್ಠಪಕ್ಷ ಎರಡರಷ್ಟು ಹೆಚ್ಚಾಗಿರತಕ್ಕದ್ದು.

10. ಒಂದು ಐಚ್ಛಿಕ ವಿಷಯಕ್ಕಿಂತ ಅಧಿಕವಾಗಿ ತೆಗೆದುಕೊಳ್ಳಲು ಯಾವ ಉಮೇದುವಾರನಿಗೂ ಅಪ್ಪಣೆ ಕೊಡಲ್ಪಡುವುದಿಲ್ಲ. ಬರಹಮೂಲಕವಾದ ಪರೀಕ್ಷೆಯಲ್ಲಿ ಪರೀಕ್ಷಕರಿಗೆ ಸಮರ್ಪಕವಾಗಿ ತೋರಿಬಂದ ಉಮೇದುವಾರರು ಮಾತ್ರವೇ ವಾಚಾ

ಪರೀಕ್ಷೆಗೆ ಅಥವಾ ಕಾರ್ಯತಃ ಮಾಡಲ್ಪಡುವ ಪರೀಕ್ಷೆಗೆ ಹಾಜರಾಗಲು ಅಪೇಕ್ಷಿಸಲ್ಪಡುವರು. ವಾಚಾ ಪರೀಕ್ಷೆ ಮತ್ತು ಕಾರ್ಯತಃ ಪರೀಕ್ಷೆಗಳು, ಬರಹ ಮೂಲಕವಾದ ಪರೀಕ್ಷೆಯ ಕಾಲದಲ್ಲಿ ಉಮೇದುವಾರರಿಗೆ ಕ್ರಮವಾಗಿ ಇಸ್ತಿಹಾರಿನ ಮೂಲಕ ತಿಳಿಯಪಡಿಸಲ್ಪಡುವ ಮೇರೆ ಬೆಂಗಳೂರಿನಲ್ಲಾಗಲಿ ಅಥವಾ ಮದರಾಸಿನಲ್ಲಾಗಲಿ ನಡೆಸಲ್ಪಡುವವು.

11. ಬರಹ ಮೂಲಕವಾದ ಪರೀಕ್ಷೆಗಳು ಈ ಕೆಳಗೆ ಕಂಡ ಪಟ್ಟಿಯಲ್ಲಿ ವಿವರಿಸಿರುವ ಕಾಲದ ಮತ್ತು ವಿಷಯಗಳ ಕ್ರಮದಲ್ಲಿ ನಡೆಸಲ್ಪಡತಕ್ಕದ್ದು :—

ದಿವಸ.	ಗಂಟೆಗಳು.	ವಿಷಯಗಳು.
1907ನೆ ಇಸವಿಯ ನವೆಂಬರು 11ನೆ ಸೋಮವಾರ.	ಪೂರ್ವಾಹ್ನ 10 ಗಂಟೆಯಿಂದ ಅಪರಾಹ್ನ 1 ಘಂಟೆಯವರೆಗೆ.	ಇಂಗ್ಲಿಷ್ ಪ್ರಬಂಧರಚನೆ.
	ಅಪರಾಹ್ನ 2 ಗಂಟೆಯಿಂದ 5 ಗಂಟೆಯವರೆಗೆ.	ಇಂಗ್ಲಿಷ್ ಭಾಷೆ ಮತ್ತು ಕವಿಚರಿತ್ರೆ ಪ್ರಥಮ ಪತ್ರಿಕೆ.
1907ನೆ ಇಸವಿಯ ನವೆಂಬರು 12ನೆ ಮಂಗಳವಾರ.	ಪೂರ್ವಾಹ್ನ 10 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ.	ಇಂಗ್ಲಿಷ್ ಭಾಷೆ ಮತ್ತು ಗ್ರಂಥ ಸಮುದಾಯ, ಎರಡನೆ ಪತ್ರಿಕೆ.
	ಅಪರಾಹ್ನ 1 ಗಂಟೆಯಿಂದ 3 ಗಂಟೆಯವರೆಗೆ.	ವಿಧಿಸಲ್ಪಟ್ಟ ಪ್ರಸ್ತಕ ಅಥವಾ ಪುಸ್ತಕಗಳು, ಪ್ರಥಮ ಪತ್ರಿಕೆ.
	ಅಪರಾಹ್ನ 3-30 ಗಂಟೆಯಿಂದ 5-30 ಗಂಟೆಯವರೆಗೆ.	ವಿಧಿಸಲ್ಪಟ್ಟ ಪುಸ್ತಕ ಅಥವಾ ಪುಸ್ತಕಗಳು, ಎರಡನೆ ಪತ್ರಿಕೆ.
1907ನೆ ಇಸವಿಯ ನವೆಂಬರು 13ನೆ ಬುಧವಾರ.	ಪೂರ್ವಾಹ್ನ 10 ಘಂಟೆಯಿಂದ ಅಪರಾಹ್ನ 1 ಗಂಟೆಯವರೆಗೆ.	ಐಚ್ಛಿಕ ವಿಷಯ, ಪ್ರಥಮ ಪತ್ರಿಕೆ.
	ಅಪರಾಹ್ನ 2 ಗಂಟೆಯಿಂದ 5 ಗಂಟೆವರೆಗೆ.	ಐಚ್ಛಿಕ ವಿಷಯ, ಎರಡನೆ ಪತ್ರಿಕೆ.
1907ನೆ ಇಸವಿಯ ನವೆಂಬರು 14ನೆ ಗುರುವಾರ.	ಪೂರ್ವಾಹ್ನ 10 ಗಂಟೆಯಿಂದ ಅಪರಾಹ್ನ 1 ಗಂಟೆಯವರೆಗೆ.	ಐಚ್ಛಿಕ ವಿಷಯ, ಫಿಸಿಕ್ಸ್, ಮೂರನೆ ಪತ್ರಿಕೆ.

ವಾಚಾ ಪರೀಕ್ಷೆ ಮತ್ತು ಕಾರ್ಯತಃ ಪರೀಕ್ಷೆಗಳ ದಿವಸಗಳೂ, ಗಂಟೆಗಳೂ ಬರಹ ಮೂಲಕವಾದ ಪರೀಕ್ಷೆಯ ಕಾಲದಲ್ಲಿ ತಿಳಿಸಲ್ಪಡುವವು.

12. ಆವಶ್ಯಕ ವಿಷಯಗಳ ಪೈಕಿ ಎ. ಗುಂಪಿನಲ್ಲಿ ಅಂಕಗಳ ಒಟ್ಟು ಸಂಖ್ಯೆಯ ಪೈಕಿ ಐದರಲ್ಲಿ ಎರಡಂಶಕ್ಕೆ ಕಡಮೆಯಿಲ್ಲದಷ್ಟನ್ನೂ, ಮತ್ತು ಬಿ. ಗುಂಪಿನಲ್ಲಿ ಅಂಕಗಳ ಒಟ್ಟು ಸಂಖ್ಯೆಯ ಪೈಕಿ ಮೂರರಲ್ಲಿ ಒಂದಂಶಕ್ಕೆ ಕಡಮೆಯಿಲ್ಲದಷ್ಟನ್ನೂ, ಚುನಾಯಿಸಲ್ಪಟ್ಟ ಐಚ್ಛಿಕ ವಿಷಯದಲ್ಲಿ ಅಂಕಗಳ ಒಟ್ಟು ಸಂಖ್ಯೆಯ ಪೈಕಿ ಮೂರರಲ್ಲಿ ಒಂದಂಶಕ್ಕೆ ಕಡಮೆಯಿಲ್ಲದಷ್ಟನ್ನೂ ಪಡೆಯುವ ಉಮೇದುವಾರರು ಅವರವರು ಪಡೆದ ಒಟ್ಟು ಅಂಕಗಳ ಕ್ರಮದಲ್ಲಿ ದಾಖಲ್ಮಾಡಲ್ಪಡುವರು. ಹಾಗೆ ದಾಖಲಾದ ಉಮೇದುವಾರರ ಪಟ್ಟಿಯು ಸರ್ಕಾರದವರಿಗೆ ಕಳುಹಿಸಲ್ಪಡುವುದು.

13. ತೇರ್ಗಡೆಯಾದ ಉಮೇದುವಾರರ ಪಟ್ಟಿಯ ಮೇಲ್ಭಾಗದಲ್ಲಿ ಇರಬಹುದಾದ ಇಬ್ಬರು ಮೈಸೂರು ಸಿವಿಲ್ ಸರ್ವಿಸ್ಸಿಗೆ ಸೇರಿಸಲ್ಪಟ್ಟು ತಿಂಗಳಿಗೆ 200 ರೂಪಾಯಿ ತಲಬಿನ ಮೇಲೆ ಎ. ಪಟ್ಟಿಯ 5ನೆ ತರಗತಿಯ ಅಸಿಸ್ಟೆಂಟ್ ಕಮಿಷನರುಗಳಾಗಿ ದಾಖಲ್ಮಾಡಲ್ಪಟ್ಟು ಎರಡು ವರ್ಷಗಳ ವರೆಗೆ ಅಜಮಾಯಿಷಿ ತರೀಕು ಇರುವುದಾಗಿ ಭಾವಿಸಲ್ಪಡುವರು. ಈ ಕಾಲದಲ್ಲಿ ಅವರು ಮನಸ್ಸುಕೊಟ್ಟು ತಮ್ಮ ಕೆಲಸವನ್ನು ಮಾಡುವ ಬಗ್ಗೆ ಸಮರ್ಪಕವಾದ ರುಜುವಾತನ್ನು ಕೊಡುವರೆಂದು ನಿರೀಕ್ಷಿಸಲ್ಪಡುವುದು. ಮತ್ತು ಅವರು—

(1) ಕುದುರೆ ಸವಾರಿಯಲ್ಲಿ ಪರೀಕ್ಷೆಯಲ್ಲಿಯೂ,

(2) ತತ್ಕಾಲದಲ್ಲಿ ಜಾರಿಯಲ್ಲಿರುವ ನಿಬಂಧನೆಗಳ ಮೇರೆ ಇಲಾಖೆಯ ನೌಕರಿಗೆ ಸಂಬಂಧಪಟ್ಟ ಪರೀಕ್ಷೆಯಲ್ಲಿಯೂ, ಬಿ. ಎ. ಪರೀಕ್ಷೆಯಲ್ಲಿ ಐಚ್ಛಿಕ ಭಾಷೆಯನ್ನಾಗಿ ಕನ್ನಡವನ್ನು ತೆಗೆದುಕೊಳ್ಳದೆ ಇದ್ದರೆ ಕನ್ನಡದಲ್ಲಿ ವಿಧಿಸಲ್ಪಟ್ಟ ಪರೀಕ್ಷೆಯಲ್ಲಿಯೂ,— ತೇರ್ಗಡೆಯಾಗತಕ್ಕದ್ದು.

ಮೊದಲ ಎರಡು ವರ್ಷಗಳು ಮುಗಿಯುವುದರೊಳಗೆ ಮೇಲ್ಕಂಡ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದಕ್ಕೆ ತಪ್ಪಿದ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರಿಗೆ ಮತ್ತೊಂದು ವರ್ಷದ ವಾಯಿದೆಯು ದಯೆಯಿಂದ ಕೊಡಲ್ಪಡುವುದು. ಮೂರನೆಯ ವರ್ಷದಲ್ಲಿ ತೇರ್ಗಡೆಯಾಗಲು ತಪ್ಪಿದರೆ ಆತನ ಹೆಸರು ಅಸಿಸ್ಟೆಂಟ್ ಕಮಿಷನರುಗಳ ಪಟ್ಟಿಯಿಂದ ತೆಗೆದುಹಾಕಲ್ಪಡುವುದು.

14. ಮೇಲ್ಕಂಡ ಮೇರೆ ಸಂಪೂರ್ಣವಾಗಿ ಯೋಗ್ಯತೆಯನ್ನು ಹೊಂದಿದಾಗ, ಮನಸ್ಸಿಟ್ಟು ಕೆಲಸ ಮಾಡುವುದಾಗಿ ಸಮರ್ಪಕವಾದ ರುಜುವಾತನ್ನು ಕೊಟ್ಟ ಬಳಿಕ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರು ಎ. ಪಟ್ಟಿಯಲ್ಲಿ 250 ರೂಪಾಯಿನ ಮೇಲೆ 5ನೆ ತರಗತಿಯ ಅಸಿಸ್ಟೆಂಟ್ ಕಮಿಷನರಾಗಿ ಖಾಯಂ ಮಾಡಲ್ಪಟ್ಟು ತರುವಾಯ ಕೆಳಗೆ ತೋರಿಸಿರುವ ಪರಿಮಾಣದ ಮೇರೆ ಏರುವನು :—

ಅಜಮಾಯಿಷಿ ತರೀಕಿನ ಕಾಲವಲ್ಲದೆ 5ನೆ ತರಗತಿಯಲ್ಲಿ ಒಂದು ವರ್ಷ ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯ,	300 ರೂಪಾಯಿ ಸಂಬಳವುಳ್ಳ 4ನೆ ತರಗತಿಯ ಅಸಿಸ್ಟೆಂಟ್ ಕಮಿಷನರ್ ಕೆಲಸಕ್ಕೆ;
4ನೆ ತರಗತಿಯಲ್ಲಿ ಮೂರು ವರ್ಷಗಳು ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯ,	350 ರೂಪಾಯಿ ಸಂಬಳವುಳ್ಳ 3ನೆ ತರಗತಿಯ ಅಸಿಸ್ಟೆಂಟ್ ಕಮಿಷನರ್ ಕೆಲಸಕ್ಕೆ;
3ನೆ ತರಗತಿಯಲ್ಲಿ ಮೂರು ವರ್ಷಗಳು ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯ,	400 ರೂಪಾಯಿ ಸಂಬಳವುಳ್ಳ 2ನೆ ತರಗತಿಯ ಅಸಿಸ್ಟೆಂಟ್ ಕಮಿಷನರ್ ಕೆಲಸಕ್ಕೆ;
2ನೆ ತರಗತಿಯಲ್ಲಿ ಮೂರು ವರ್ಷಗಳು ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿದ ತರುವಾಯ,	450 ರೂಪಾಯಿ ಸಂಬಳವುಳ್ಳ 1ನೆ ತರಗತಿಯ ಅಸಿಸ್ಟೆಂಟ್ ಕಮಿಷನರ್ ಕೆಲಸಕ್ಕೆ.

ಸಂಸ್ಥಾನದ ಇನ್ನೂ ಮೇಲ್ಪಟ್ಟ ಕೆಲಸಗಳಿಗೆ ಬಡತಿಗಳು ಖಾಲಿಗಳಿಗೆ ಅನುಗುಣವಾಗಿಯೂ ಯೋಗ್ಯತಾನುಸಾರವಾಗಿ ಚುನಾಯಿಸುವುದರಿಂದಲೂ ಮಾಡಲ್ಪಡುವುವು.

ಪರಿಶಿಷ್ಟ ಎ.

1907ನೆ ಇಸವಿಯ ನವೆಂಬರು 11ನೆ ತಾರೀಖಿನ ದಿನವೂ ಆ ತರುವಾಯ ಕೆಲವು ದಿವಸಗಳೂ ನಡೆಸಲ್ಪಡುವ ಮೈಸೂರು ಸಿವಿಲ್ ಸರ್ವಿಸಿನ ಸ್ಪರ್ಧಾಪೂರ್ವಕವಾದ ಪರೀಕ್ಷೆಗೆ ಹೋಗುವುದಕ್ಕೆ ಅಪ್ಪಣೆ ಪಡೆಯಲು ಅರ್ಜಿಯ ನಮೂನೆ:—

ಉಮೇದುವಾರನ ಹೆಸರು ಪೂರ್ತಿಯಾಗಿ.	ವಯಸ್ಸು ಮತ್ತು ಜನನದ ತಾರೀಖು.	ಜನನದ ಸ್ಥಳ.	ವಾಡಿಕೆಯಾಗಿ ವಾಸಮಾಡುವ ಸ್ಥಳ.	ತಂದೆಯು ಅಥವಾ ಇತರ ಪಾಲಕನ ಹೆಸರು ಮತ್ತು ಉದ್ಯೋಗ.	ತಂದೆಯು ಅಥವಾ ಇತರ ಪಾಲಕನು ವಾಡಿಕೆಯಾಗಿ ವಾಸಮಾಡುವ ಸ್ಥಳ.	ಉಮೇದುವಾರನ ವಂಶ ಅಥವಾ ಜಾತಿ.	ಈಗಿನ ಸ್ಥಿತಿ ಉದ್ಯೋಗ ಅಥವಾ ವಿಳಾಸ.	ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾದ ತಾರೀಖು ಅಥವಾ ಬಿ. ಎ. ಪರೀಕ್ಷೆಯ ಶಾಖೆಗಳಲ್ಲಿ ಬೇರೆಬೇರೆ ವರ್ಷಗಳಲ್ಲಿ ತೇರ್ಗಡೆಯಾಗಿದ್ದರೆ ಹಾಗೆ ತೇರ್ಗಡೆಯಾದ ತಾರೀಖುಗಳು.	ಉಮೇದುವಾರನು ಇನ್ನು ಯಾವ ಯೂನಿವರ್ಸಿಟಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿದಾನೆ ಎಂಬುವುದು, ಅವುಗಳಲ್ಲಿ ತೇರ್ಗಡೆಯಾದ ತಾರೀಖುಗಳ ಸಮೇತ.	ಯೂನಿವರ್ಸಿಟಿ ಪರೀಕ್ಷೆಗಳಿಗೆ ಉಮೇದುವಾರನು ಎಲ್ಲಿ ಓದಿದ್ದನೋ ಆ ಕಾಲೇಜು ಯಾ ಕಾಲೇಜುಗಳು.	ಮೈಸೂರು ಸಂಸ್ಥಾನದಲ್ಲಿ ಉಮೇದುವಾರನಿಗೆ ಏನಾದರೂ ಸ್ವತ್ತು ಇದ್ದರೆ ಅದು.	ಉಮೇದುವಾರನು ಪರೀಕ್ಷಿಸಲ್ಪಡಲಪೇಕ್ಷಿಸುವ ಐಚ್ಛಿಕ ವಿಷಯ.	ಉಮೇದುವಾರನಿಂದ ಕಳುಹಿಸಲ್ಪಟ್ಟ ಯೋಗ್ಯತಾ ಪತ್ರಿಕೆಗಳು.

ಬೆಂಗಳೂರಿಗೆ.—

ತಾರೀಖು.

ದಸ್ತಖತ್ತು.

ಮೈಸೂರು ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ

ಸೆಕ್ರೆಟೆರಿಯವರಿಗೆ.—

ಪರಿಶಿಷ್ಟ ಬಿ.

ದೇಹವು ದೃಢವಾಗಿರುವ ಬಗ್ಯೆ ಕೊಡುವ ಸರ್ಟಿಫಿಕೇಟಿನ ನಮೂನೆ.

....ನ್ನು ನಾನು ಪರೀಕ್ಷಿಸಿರುತ್ತೇನೆಂದೂ, ಎಗ್ಸಿಕ್ಯೂಟಿವ್ ಯಾ ಕಾರ್ಯನಿರ್ವಾಹಕ ಅಧಿಕಾರಿಯ ಚಟುವಟಿಕೆಯಾದ ಕೆಲಸಗಳನ್ನು ಮಾಡುವುದಕ್ಕೆ ಅತನನ್ನು ಅಯೋಗ್ಯನನ್ನಾಗಿ ಮಾಡುವ ಯಾವ ಜಾಡ್ಯವನ್ನಾಗಲಿ, ದೇಹದೊಡನೆ ಹುಟ್ಟಿ ಬಂದ ಜಾಡ್ಯವನ್ನಾಗಲಿ, ಅಶಕ್ತಿಯನ್ನಾಗಲಿ ಕಾಣಲಿಲ್ಲವೆಂದೂ ನಾನು ಇದರಿಂದ ಸರ್ಟಿಫೈ ಮಾಡುತ್ತೇನೆ. ಆತನಿಗೆ ಒಳ್ಳೆಯ ದೃಢವಾದ ದೇಹವಿರುವುದಾಗಿ ನಾನು ಎಣಿಸುತ್ತೇನೆ.

ದಸ್ತಖತು ....

ಉದ್ಯೋಗದ ಹೆಸರು, ಮತ್ತು ವಿಳಾಸ { ....

ತಾರೀಖು ....

ತಾರೀಖು 10ನೆ ಜುಲೈ 1907.

ನಂ. 280—ಸ್ಯಾನಿಟರಿ (15–06)—17, ಸಮಸ್ತ ಜನರ ತಿಳುವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವದೇನೆಂದರೆ:— ಮೈಸೂರು ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ ಪ್ರಕಟಿಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳಿಗೆ ಮೀರಿ ಜಾಡ್ಯರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.	ತಾಲ್ಲೂಕು.
ಅನಗಲ್ಲಿ	ಮೈಸೂರು.
ಗೋಪಾಲಪುರ	ಡಿಟೋ
ಉಂದವಾಡಿ	ಡಿಟೋ
ದೇವಗಲ್ಲಿ	ಡಿಟೋ
ಮಾದೇವರ ಕೊಪ್ಪಲು	ಡಿಟೋ
[illegible]	ಡಿಟೋ
ದಂಡಿಕೆರೆ	ಡಿಟೋ
ಹಂಚ	ಡಿಟೋ
ಕ್ಯಾತಮಾರಯನಹಳ್ಳಿ	ಡಿಟೋ
ರಮ್ಮನಹಳ್ಳಿ	ಡಿಟೋ
ನಾಗನಹಳ್ಳಿ	ಡಿಟೋ
ಸಕ್ಕಳ್ಳಿ	ಡಿಟೋ
ವರುಣ	ಡಿಟೋ
ವೀರಪ್ಪನಹಳ್ಳಿ	ಡಿಟೋ
ಮಾಜಮಂಗಲ	ಡಿಟೋ
ಸಾಲಹುಂಡಿ	ಡಿಟೋ
ಹೊಸಹುಂಡಿ	ಡಿಟೋ
ಕಾಡಿ ಮಾಯಿನ ಹುಂಡಿ	ಡಿಟೋ
ಮೈಸೂರು ತಾಲ್ಲೂಕು	ಡಿಟೋ
ಹೆಬ್ಬಾಳು	ಎಡತೊರ
ಸಿದ್ದನಕೊಪ್ಪಲು	ಡಿಟೋ
ಬ್ಯಾಡರಹಳ್ಳಿ	ಡಿಟೋ
ಬಾಚಹಳ್ಳಿ	ಡಿಟೋ
ಮುದ್ದನಹಳ್ಳಿ	ಡಿಟೋ
ಅರಸಿನಕೆರೆ	ಡಿಟೋ
ಚಂದಗಾಲ	ಡಿಟೋ
ತಾಂಡ್ಯ	ನಂಜನಗೂಡು
ಈಚಗಲ್ಲಿ	ಡಿಟೋ
ವಳಗೆರೆ	ಡಿಟೋ
ಇಬ್ಬಜಾಲ	ಡಿಟೋ
ಉಪ್ಪಳಿಗರಹುಂಡಿ	ಡಿಟೋ
ಬಿಲ್ಲಗೆರೆ	ಡಿಟೋ

ತಾರೀಖು 16ನೆ ಜುಲೈ 1907.

ನಂ. 542—ಸ್ಯಾನಿಟರಿ 18-07—2, ಹಾಸನದ ಡಿಸ್ಟ್ರಿಕ್ಟು ಅರಸಿಕೆರೆ ತಾಲ್ಲೂಕಿನ ಮಾಳೆಕಲ್ಲು ತಿರುಪತಿ ಗ್ರಾಮಕ್ಕೆ ಶ್ರೀ ವೆಂಕಟರಮಣ ಸ್ವಾಮಿ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ —

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಜುಲೈ 16ನೆ ತಾರೀಖಿನಿಂದ 1907ನೆ ಇಸವಿ ಜುಲೈ 28ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 8ನೇ ಜುಲೈ 1907.

ನಂ. 193—L. B. (480-06)—2, ಚಿತ್ರದುರ್ಗ ಡಿಸ್ಟ್ರಿಕ್ಟಿನ ನಾನಾ ತಾಲ್ಲೂಕು ಬೋರ್ಡುಗಳಲ್ಲಿ ಸರ್ಕಾರಿ ಉದ್ಯೋಗಸ್ಥರಲ್ಲದೆ ಈಗ ಸಭಿಕರಾಗಿರುವವರ ಉದ್ಯೋಗ ಕಾಲವು ಮುಗಿದು ಹೋಗಿರುವುದರಿಂದ ಸದರಿ ತಾಲ್ಲೂಕು ಬೋರ್ಡುಗಳನ್ನು ಈ ಕೆಳಗೆ ನಮೂದಿಸುವಂತೆ ಪುನಃ ಏರ್ಪಡಿಸಿ ಇರುತ್ತದೆ:—

ಚಿತ್ರದುರ್ಗದ ತಾಲ್ಲೂಕು.

ಉದ್ಯೋಗಪ್ರಯುಕ್ತವಾದ ಸಭಿಕರು.

(a) ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟ್.
(b) ಅಮಲ್ದಾರ್, ವೈಸ್‌ಪ್ರೆಸಿಡೆಂಟ್.
(c) ಡಿಸ್ಟ್ರಿಕ್ಟಿನ ವೈದ್ಯ ಮತ್ತು ಆರೋಗ್ಯಾಧಿಕಾರಿ.
(d) ಮರಹಮ್ಮತು ಸಬ್ ಡಿವಿಜನ್ ಆಫೀಸರು.
(e) ಸಬ್ ರಿಜಿಸ್ಟ್ರಾರ್.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ|| ಸಾಹುಕಾರ ನಂಜುಂಡಪ್ಪ.
2. ,, ತೋಟದ ಸಿದ್ದಪ್ಪ.
3. ,, ದುಮ್ಮಿ ಗುರುಸಿದ್ದಪ್ಪ.
4. ,, ಪಟೇಲ ಕರಿಯಣ್ಣ.

(ಜಿ) ವಾಕ್ಯದ ಮೇರೆಗೆ.

ಮಿ|| ಪಾವಗಡ ಭೀಮಸೇನರಾವ್, ರಿಟೈರ್ಡ್ ಅಮಲ್ದಾರ್.

(ಎಚ್) ವಾಕ್ಯದ ಮೇರೆಗೆ.

1. ಮಿ|| ಅನಂತಶೆಟ್ಟಿ ಅಡ್ವೋಕೇಟ್.
2. ,, ಜೋಡಿದಾರ ಹನುಮಂತಾಚಾರ್.
3. ,, ದಸ್ತಗೀರಸಾಬ್, ಪೋಸ್ಟಾಫೀಸ್ ಸ್ಟಾಂಪ್ ವೆಂಡರ್.
4. ,, ಖಾಜಿ ಸೈಯದ್ ಮೊಹಿದೀನ್.
5. ,, ಪಟೇಲ ಬಸಪ್ಪ, ಮಾರಗಟ್ಟ.

2. ಚಳ್ಳಕೆರೆ ತಾಲ್ಲೂಕು.

ಉದ್ಯೋಗಪ್ರಯುಕ್ತವಾದ ಸಭಿಕರು.

(a) ಅಸಿಸ್ಟೆಂಟ್ ಕಮಿಷನರ್, ಪ್ರೆಸಿಡೆಂಟ್.
(b) ಅಮಲ್ದಾರ್, ವೈಸ್ ಪ್ರೆಸಿಡೆಂಟ್.
(c) ಆಸ್ಪತ್ರೆಯ ಅಸಿಸ್ಟೆಂಟ್.
(d) ಮರಹಮ್ಮತು ಸಬ್ ಡಿವಿಜನ್ ಆಫೀಸರು.
(e) ತಾಲ್ಲೂಕು ಶಿರಸ್ತೇದಾರ್.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ|| ಶಾನುಭೋಗ ಸುಬ್ಬಣ್ಣ.
2. ,, ತುಪ್ಪದ ವೀರಣ್ಣ.
3. ,, ಮನ್ನೆಕೋಟೆ ಶಾನುಭೋಗ ರಾಮಣ್ಣ.
4. ,, ನಾಯಕನಹಟ್ಟಿ ಶಾನುಭೋಗ ರಾಮಪ್ಪ.

(ಜಿ) ವಾಕ್ಯದ ಮೇರೆಗೆ.

ಮಿ|| ಕಂಟ್ರಾಕ್ಟರ್ ಸುಬ್ಬರಾವ್.

(ಎಚ್) ವಾಕ್ಯದ ಮೇರೆಗೆ.

1. ಮಿ|| ಕೋಮಟಿ ನಾರಣಪ್ಪ.
2. ,, ಮಹಮುದ್ ಆಲಿ ಸಾಹೇಬ್.
3. ,, ಬಲ್ಲೆಗಟ್ಟೆ ಅಜ್ಜಪ್ಪ.
4. ,, ಪಟೇಲ ಸಣ್ಣ ತಿಪ್ಪಯ್ಯ.
5. ,, ವೀರಭದ್ರಪ್ಪ ಬಿನ್ ಸೂಗೂರಪ್ಪ.

3. ಹೊಳಲಕೆರೆ ತಾಲ್ಲೂಕು.

ಉದ್ಯೋಗಪ್ರಯುಕ್ತವಾದ ಸಭಿಕರು

(a) ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟ.
(b) ಅಮಲ್ದಾರ, ವೈಸ ಪ್ರೆಸಿಡೆಂಟ.
(c) ಆಸ್ಪತ್ರೆ ಅಸಿಸ್ಟೆಂಟ.
(d) ಮುರಹಮ್ಮತ್ ಸಬ್ ಡಿವಿಜ಼ ಆಫೀಸರು.
(e) ತಾಲ್ಲೂಕು ಶಿರಸ್ತೆದಾರ.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ|| ನಾಡಿಗ ವೆಂಕಟಸುಬ್ಬಯ್ಯ.
2. ,, ರೇವನ ಸಿದ್ದಪ್ಪ.
3. ,, ನಾಡಿಗ ಸಿದ್ದರಾಮಯ್ಯ.
4. ,, ಶಾನುಭೋಗ ಸುಬ್ಬಣ್ಣ.

(ಜಿ) ವಾಕ್ಯದ ಮೇರೆಗೆ.

ಮಿ|| ಸಶಿಮಲ್ಲಪ್ಪ.

(ಎಚ್) ವಾಕ್ಯದ ಮೇರೆಗೆ.

1. ಮಿ|| ಕಸ್ತೂರು ರಂಗಪ್ಪ.
2. ,, ಸರ್ವೆಗಾರ ವೀರಪ್ಪ.
3. ,, ರವಿಕೀರ್ತಪ್ಪ.
4. ,, ಪಟೇಲ ಚಂದಪ್ಪ.
5. ,, ಪಟೇಲ ಮುಡಿವಾಳಪ್ಪ.

4. ಹಿರಿಯೂರು ತಾಲ್ಲೂಕು.

ಉದ್ಯೋಗಪ್ರಯುಕ್ತವಾದ ಸಭಿಕರು.

(a) ಅಮಲ್ದಾರ ಪ್ರೆಸಿಡೆಂಟ.
(c) ಆಸ್ಪತ್ರೆ ಅಸಿಸ್ಟೆಂಟ.
(d) ಚಿತ್ರದುರ್ಗದ ಮುರಹಮ್ಮತ್ ಸಬ್ ಡಿವಿಜ಼ ಆಫೀಸರು.
(e) ತಾಲ್ಲೂಕು ಶಿರಸ್ತೇದಾರ.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ|| ಮಠದ ವೀರೈಯ್ಯ.
2. ,, ಪಟೇಲ ತಿಪ್ಪಯ್ಯ.
3. ,, ಶಾನುಭೋಗ ಚನ್ನಗಿರಿಯಯ್ಯ.
4. ,, ಪಟೇಲ ತಿಮ್ಮಗೌಡ.

(ಜಿ) ವಾಕ್ಯದ ಮೇರೆಗೆ.

ಮಿ|| ಸಿ. ಎ. ಕೃಷ್ಣಪ್ಪ, ಕಂಟ್ರಾಕ್ಟರ.

(ಎಚ್. ವಾಕ್ಯದ ಮೇರೆಗೆ.

1. ಮಿ|| ಪಟೇಲ ಮಹಲಿಂಗಪ್ಪ.
2. ,, ಅಬ್ದುಲ್ ರಜಾಕ.
3. ,, ಪಟೇಲ ಚಿಕ್ಕಣ್ಣ.
4. ,, ಪಟೇಲ ಪರಸೇಗೌಡ.

5. ಜಗಲೂರು ತಾಲ್ಲೂಕು.

ಉದ್ಯೋಗಪ್ರಯುಕ್ತವಾದ ಸಭಿಕರು.

(a) ಅಸಿಸ್ಟಂಟ್ ಕಮಿಷನರು, ಪ್ರೆಸಿಡೆಂಟ್.
(b) ಅಮಲ್ದಾರ್, ವೈಸ್‌ಪ್ರೆಸಿಡೆಂಟ್.
(c) ಆಸ್ಪತ್ರೆ ಅಸಿಸ್ಟೆಂಟ್.
(d) ಮರಹಮ್ಮತ್ ಸಬ್ ಡಿವಿಜನ್ ಆಫೀಸರ್.
(e) ತಾಲ್ಲೂಕು ಶಿರಸ್ತೇದಾರ್.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ|| ಪಟೇಲ ಶಾಂತಪ್ಪ.
2. ,, ಶಾನುಭೋಗ ಮೂಡಲಗಿರಿರಾವ್.
3. ,, ಶಿದ್ಧಯ್ಯನಕೋಟೆ ಪಾಲಯ್ಯ
4. ,, ಶಾನುಭೋಗ ಅಶ್ವತ್ಥಪ್ಪ.

(ಜಿ) ವಾಕ್ಯದ ಮೇರೆಗೆ.

ಮಿ|| ಸಾಹುಕಾರ ತಿಪ್ಪಣ್ಣ.

(ಹೆಚ್) ವಾಕ್ಯದಮೇರೆಗೆ.

1. ಮಿ|| ಗೊಂಚಿಕರ ಹನುಮಂತಪ್ಪ.
2. ,, ಪಟೇಲ ಮುರಗಪ್ಪ.
3. ,, ಶಾನುಭೋಗ ಗುರುರಾವ್.
4. ,, ಶಾನುಭೋಗ ನರಸಿಂಗಪ್ಪ.
5. ,, ನಾಗೋಜಿರಾವ್.

6. ದಾವಣಗೆರೆ ತಾಲ್ಲೂಕು

ಉದ್ಯೋಗಪ್ರಯುಕ್ತವಾದ ಸಭಿಕರು.

(a) ದಾವಣಗೆರೆಯ ಸಬ್ ಡಿವಿಜನ್ ಅಸಿಸ್ಟೆಂಟ್ ಕಮಿಷನರ್, ಪ್ರೆಸಿಡೆಂಟ್.
(b) ಅಮಲ್ದಾರ್ ವೈಸ್ ಪ್ರೆಸಿಡೆಂಟ್.
(c) ಆಸ್ಪತ್ರೆ ಅಸಿಸ್ಟೆಂಟ್.
(d) ಮರಹಮ್ಮತ್ತು ಸಬ್ ಡಿವಿಜನ್ ಆಫೀಸರ್.
(e) ಸಬ್ ರಿಜಿಸ್ಟ್ರಾರ್.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ|| ಕೋತಿ ಬಸಟ್ಟಪ್ಪ.
2. ,, ಹಾಲಪ್ಪ.
3. ,, ಶಾನುಭೋಗ ಹುನುಮಂತಪ್ಪ.
4. ,, ಭಿಷ್ಟಪ್ಪ.

(ಜಿ) ವಾಕ್ಯದ ಮೇರೆಗೆ.

ಮಿ|| ಸಿ. ವಿರೂಪಾಕ್ಷಪ್ಪ, ದಾವಣಗೆರೆ.

(ಎಚ್) ವಾಕ್ಯದ ಮೇರೆಗೆ.

1. ಮಿ|| ರಾಣಿಬಿನ್ನೂರು ನಬಿಸಾಬ್.
2. ,, ಗುಬ್ಬಿ ನಬಿಸಾಬ್.
3. ,, ಧರ್ಮರಾಯಾಚಾರ್.
4. ,, ಎಚ್. ಸುಬ್ಬರಾವ್,
5. ,, ಗೋಳಸಂಗಿ ವೀರಭದ್ರಪ್ಪ.

7. ಹೊಸದುರ್ಗ ತಾಲ್ಲೂಕು.

ಉದ್ಯೋಗಪ್ರಯುಕ್ತವಾದ ಸಭಿಕರು.

(a) ದಾವಣಗೆರೆ ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟ್.
(b) ಅಮಲ್ದಾರ್ ವೈಸ್‌ಪ್ರೆಸಿಡೆಂಟ್.
(c) ಆಸ್ಪತ್ರೆ ಅಸಿಸ್ಟೆಂಟ್.
(d) ಹೊಳಲ್ಕೆರೆ ಮರಹಮ್ಮತ್ ಸಬ್ ಡಿವಿಜನ್ ಆಫೀಸರ್.
(e) ತಾಲ್ಲೂಕು ಶಿರಸ್ತೇದಾರ್.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ|| ಪಿ. ನಾಗಪ್ಪ.
2. ,, ಜಿ. ಮಲ್ಲಯ್ಯ.
3. ,, ಸಿ. ಹನುಮೇಗೌಡ.
4. ,, ರಾಮಕೃಷ್ಣಪ್ಪ.

(ಜಿ) ವಾಕ್ಯದ ಮೇರೆಗೆ.

ಮಿ|| ಯಜಮಾನ ಕೊಟ್ರಯ್ಯ.

(ಎಚ್) ವಾಕ್ಯದ ಮೇರೆಗೆ.

1. ಮಿ|| ಜಿ. ರಾಮಣ್ಣ.
2. ,, ಚೆನ್ನೆಗೌಡ.
3. ,, ಖಾಜಾ ಮಹಮ್ಮದ್ ಹುಸೇನ್ ಬೇಗ್ ಸಾಹೇಬ್.
4. ,, ಬಿ. ವಿ. ನಾರಾಯಣರಾವ್.
5. ,, ಕಾಸಿಂಸಾಹೇಬ್.

8. ಮೊಳಕಾಲ್ಮುರು ತಾಲ್ಲೂಕು.

ಉದ್ಯೋಗಪ್ರಯುಕ್ತವಾದ ಸಭಿಕರು.

(a) ಚಳ್ಳಕೆರೆ ಸಬ್ ಡಿವಿಜನಿನ ಅಸಿಸ್ಟಂಟ್ ಕಮಿಷನರು, ಪ್ರಸಿಡೆಂಟ್.
(b) ಅಮಲ್ದಾರ ವೈಸ್‌ಪ್ರಸಿಡೆಂಟ್.
(c) ಆಸ್ಪತ್ರೆ ಅಸಿಸ್ಟಂಟ್.
(d) ಮರಾಮತ್ತು ಸಬ್ ಡಿವಿಜನ್ ಆಫೀಸರ್, ಚಳ್ಳಕೆರೆ.
(e) ತಾಲ್ಲೂಕು ಶಿರಸ್ತೆದಾರ್.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ|| ಶಾನುಭೋಗ ಹನುಮಂತಪ್ಪ.
2. ,, ಅಮ್ಕುಂದಿ ಗುಂಡಪ್ಪ.
3. ,, ಪಟೇಲ ವೀರಗೌಡ.
4. ,, ಪಟೇಲ ಹಂಪಣ್ಣ.

(ಎಚ್) ವಾಕ್ಯದ ಮೇರೆಗೆ.

1. ಮಿ|| ಶ್ರೀನಿವಾಸದಾಸ್.
2. ,, ಮುಖಾಜಿ ದುರ್ಗಪ್ಪ.
3. ,, ಕೊಮಾರಪ್ಪ.
4. ,, ನೇರಲಹಳ್ಳಿ ಸಣ್ಣಪ್ಪ.
5. ,, ಖಾರಿ ಸಣ್ಣರುದ್ರಪ್ಪ.

9. ಹರಿಹರ ಸಬ್ ತಾಲ್ಲೂಕು.

ಉದ್ಯೋಗಪ್ರಯುಕ್ತವಾದ ಸಭಿಕರು.

(a) ದಾವಣಗೆರೆ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟಂಟ್ ಕಮಿಷನರು.
(b) ಡೆಪ್ಯುಟಿ ಅಮಲ್ದಾರ ವೈಸ್‌ಪ್ರಸಿಡೆಂಟ್.
(c) ಆಸ್ಪತ್ರೆ ಅಸಿಸ್ಟಂಟ್.
(d) ದಾವಣಗೆರೆ ಮರಾಮತ್ತು ಸಬ್ ಡಿವಿಜನಿನ ಆಫೀಸರು.

ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದಮೇರೆಗೆ.

1. ಮಿ|| ಪಟೇಲ ಲಿಂಗಪ್ಪ.
2. ,, ಅನಂತನಾಯಕ್.
3. ,, ವೆಂಕಣ್ಣ.
4. ,, ಡಿ. ಶ್ರೀನಿವಾಸರಾವ್.

(ಜಿ) ವಾಕ್ಯದ ಮೇರೆಗೆ.

ಮಿ|| ಕೇಶವನಾಯಕ್.

(ಎಚ್) ವಾಕ್ಯದ ಮೇರೆಗೆ.

1. ಮಿ|| ಉಸ್ಮಾನ್‌ಸಾಹೇಬ್.
2. ,, ಷರಾಫ್‌ದೀನ್ ಸಾಹೇಬ್.
3. ,, ರಟ್ಟಿಹಳ್ಳಿ ಗೋವಿಂದಪ್ಪ.
4. ,, ತಿಪ್ಪಣ್ಣನವರ ಮುರಗಪ್ಪ.
5. ,, ಶಾನುಭೋಗ ಶ್ರೀನಿವಾಸರಾವ್.
6 ,, ಬಾಲಕೃಷ್ಣರಾವ್.

ಮೊಕ್ಕಾಂ ಮೈಸೂರು, ತಾರೀಖು 25ನೆ ಜೂನ್ 1907, ಕ್ಯಾಂಪು ನಂಬರು 21.

ಸರ್ಕಾರಿ ಕೆಲಸದ ಅನುಕೂಲತೆ ಬಗ್ಗೆ ಕೆಳಗೆ ಕಂಡ ಅಸಿಸ್ಟೆಂಟ್ ಕಮಿಷನರುಗಳ ವರ್ಗಾವರ್ಗಿಗಳನ್ನೂ ಸ್ಥಳ ನಿರ್ಣಯಗಳನ್ನೂ ಮಂಜೂರ್ಮಾಡಿದೆ :—

(1) ಮಿ|| ಪಿ. ಶ್ರೀನಿವಾಸರಾವ್, ಶಿವಮೊಗ್ಗೆಯಿಂದ ಸಿಟಿ ಮಾಜಿಸ್ಟ್ರೇಟ್ ಕೋರ್ಟಿನ ಚಾರ್ಜಿನ ಬಗ್ಗೆ ಮೈಸೂರಿಗೆ. (ಒಡನೆಯೇ ಕೆಲಸದ ಮೇಲೆ ಹಾಜರಾಗತಕ್ಕದ್ದು.)

(2) ಮಿ|| ಬಿ. ಕೃಷ್ಣರಾವ್, ಕೃಷ್ಣರಾಜಪೇಟೆ ಸಬ್ ಡಿವಿಜನಿನ ಚಾರ್ಜಿನಿಂದ ಫ್ರೆಂಚ್‌ರಾಕ್ಸ್ ಸಬ್ ಡಿವಿಜನಿನ ಚಾರ್ಜಿಗೆ. (ಒಡನೆಯೇ ಕೆಲಸದ ಮೇಲೆ ಹಾಜರಾಗತಕ್ಕದ್ದು.)

(3) ಮಿ|| ಬಿ. ವೆಂಕೋಬರಾವ್, ಫ್ರೆಂಚ್‌ರಾಕ್ಸ್ ಸಬ್ ಡಿವಿಜನಿನ ಚಾರ್ಜಿನಿಂದ ಡಿಸ್ಟ್ರಿಕ್ಟು ಖಜಾನೆಯ ಚಾರ್ಜು ಬಗ್ಗೆ ಕೋಲಾರಕ್ಕೆ. (ಒಡನೆಯೇ ಕೆಲಸದ ಮೇಲೆ ಹಾಜರಾಗತಕ್ಕದ್ದು.)

(4) ಮಿ|| ಹಸನ್ ಅಲ್ಲಿ, ಕೋಲಾರದ ಡಿಸ್ಟ್ರಿಕ್ಟು ಖಜಾನೆಯ ಚಾರ್ಜಿನಿಂದ ಡಿಸ್ಟ್ರಿಕ್ಟು ಎಕ್ಸೈಸು ಆಫಿಸರಾಗಿ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ. (ಒಡನೆಯೇ ಕೆಲಸದ ಮೇಲೆ ಹಾಜರಾಗತಕ್ಕದ್ದು.)

(5) ಚಿತ್ರದುರ್ಗದ ಡಿಸ್ಟ್ರಿಕ್ಟು ಎಕ್ಸೈಸು ಆಫಿಸರ್ ಮಿ|| ಕೆ. ಶ್ರೀಕಂಠಯ್ಯ, ಡಿಸ್ಟ್ರಿಕ್ಟು ಖಜಾನೆಯ ಚಾರ್ಜು ಬಗ್ಗೆ ಕಡೂರು ಡಿಸ್ಟ್ರಿಕ್ಟಿಗೆ. (ಒಡನೆಯೇ ಕೆಲಸದ ಮೇಲೆ ಹಾಜರಾಗತಕ್ಕದ್ದು.)

(6) ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರ್ ಮಿ|| ಎಂ. ಲಕ್ಷ್ಮಣಶಾಸ್ತ್ರಿ, ಕಡೂರು ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟು ಖಜಾನೆಯ ಚಾರ್ಜಿನಿಂದ ಚನ್ನರಾಯಪಟ್ಟಣ ಸಬ್ ಡಿವಿಜನಿನ ಚಾರ್ಜು ಬಗ್ಗೆ ಹಂಗಾಮಿಯಾಗಿ ಹಾಸನ ಡಿಸ್ಟ್ರಿಕ್ಟಿಗೆ. (ಒಡನೆಯೇ ಕೆಲಸದ ಮೇಲೆ ಹಾಜರಾಗತಕ್ಕದ್ದು.)

(7) ಮಿ|| ಎಂ. ಎ. ನಾರಾಯಣಯ್ಯಂಗಾರ್, ಹಾಸನದಿಂದ ಸಕಲೇಶಪುರ ಸಬ್ ಡಿವಿಜನ್ ಚಾರ್ಜಿನ ಬಗ್ಗೆ ಸಕಲೇಶಪುರಕ್ಕೆ. (1907ನೆ ಇಸವಿಯ ಜುಲೈ 1ನೆ ತಾರೀಖಿನಲ್ಲಿ ಕೆಲಸದ ಮೇಲೆ ಹಾಜರಾಗತಕ್ಕದ್ದು.)

(8) ಮಿ|| ನರಸಿಂಗರಾವ್ ಪೂರ್ಣಯ್ಯ, ಕೋಲಾರ ಡಿಸ್ಟ್ರಿಕ್ಟಿನಿಂದ ಡಿಸ್ಟ್ರಿಕ್ಟು ಖಜಾನೆಯ ಚಾರ್ಜಿನ ಬಗ್ಗೆ ಹಾಸನ ಡಿಸ್ಟ್ರಿಕ್ಟಿಗೆ. (ಅವರ ರಜಾ ಮುಗಿದ ತರುವಾಯ ಕೆಲಸದ ಮೇಲೆ ಹಾಜರಾಗತಕ್ಕದ್ದು.)

(9) ಮಿ|| ಡಿ. ಎಂ. ನರಸಿಂಗರಾವ್, ಸಾಮಾನ್ಯವಾದ ಕೆಲಸ ನೋಡತಕ್ಕ ಬಗ್ಗೆ ಕಡೂರು ಡಿಸ್ಟ್ರಿಕ್ಟಿಗೆ. (1907ನೆ ಇಸವಿಯ ಜುಲೈ 1ನೆ ತಾರೀಖಿನಲ್ಲಿ ಕೆಲಸದ ಮೇಲೆ ಹಾಜರಾಗತಕ್ಕದ್ದು.)

(10) ಕಡೂರು ಡಿಸ್ಟ್ರಿಕ್ಟಿನಲ್ಲಿ ಸಾಮಾನ್ಯವಾದ ಕೆಲಸ ನೋಡುತ್ತಿರುವ ಮಿ|| ಕೆ. ಮೈಲಾರರಾವ್, ಹಂಗಾಮಿಯಾಗಿ ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಸಿಸ್ಟೆಂಟ್ ಸೆಕ್ರಿಟೆರಿಯಾಗಿ ನೇಮಿಸುವ ಬಗ್ಗೆ ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯವರ ಕಛೇರಿಗೆ.

ತಾರೀಖು 15ನೆ ಜುಲೈ 1907.

ನಂ. ಜೆ. 165—ರಿಜಿಸ್. 4-07—3, 1907ನೆ ಇಸವಿಯ ಜುಲೈ 3ನೆ ತಾರೀಖಿನ ಪೂರ್ವಾಹ್ನದಲ್ಲಿ, ಮೈಸೂರು ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್, ಜಾಯಿಂಟ್ ಸ್ಟಾಕ್ ಕಂಪೆನಿಗಳ ರಿಜಿಸ್ಟ್ರಾರ್, ಮತ್ತು ಸ್ಟಾಂಪು ಕಮಿಷನರ್, ಈ ಉದ್ಯೋಗಗಳ ಚಾರ್ಜನ್ನು ಮಿ|| ಪಿ. ಎನ್. ಪೂರ್ಣಯ್ಯ, ಬಿ. ಎ., ಯವರು ಒಪ್ಪಿಸಿದರು ಮತ್ತು ಮಿ|| ಎಚ್. ಎಚ್. ಸ್ಪಾರ್ಕ್ಸ್‌ರವರು ವಹಿಸಿದ್ದರು.

ತಾರೀಖು 15ನೆಯ ಜುಲೈ 1907.

ನಂ. ಜೆ. 167—ಕೋರ್ಟ್ಸ್. 15-07—2, 1883ನೆಯ ಇಸವಿ ಮೈಸೂರು ಸಿವಿಲ್ ಕೋರ್ಟ್ಸ್ ರೆಗ್ಯುಲೇಷನಿನ 5ನೆಯ ಪ್ರಕರಣದ ಮೇರೆ 1907ನೆಯ ಇಸವಿ ಜುಲೈ ತಾರೀಖು 1ರಿಂದ ಮತ್ತು ಅದರ ತರುವಾಯ ಮೈಸೂರು ಸಬಾರ್ಡಿನೇಟ್ ಕೋರ್ಟಿನ ಅಧಿಕಾರ ಸರಹದ್ದು ಹಾಸನದ ರೆವಿನ್ಯೂ ಡಿಸ್ಟ್ರಿಕ್ಟಿಗೂ ಕೂಡ ವ್ಯಾಪಿಸುವುದು.

ತಾರೀಖು 15ನೆ ಜುಲೈ 1907.

ನಂ. 435—Med· 82-06—7, ಸನ್ 1907ನೆ ಇಸವಿಯ ಮೇ 14ನೆ ತಾರೀಖಿನ 10685-ಮೆಡಿ. (32-06)-4ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಅಸಿಸ್ಟೆಂಟ್ ಸರ್ಜನ್ ಮಿ|| ಮುತ್ತುಸ್ವಾಮಿದಾಸರಿಗೆ ಕೊಟ್ಟ 6 ವಾರಗಳ ಪ್ರಿವಿಲೇಜ್ ರಜಾ ಪೈಕಿ ಅವರು 4 ವಾರಗಳೂ ಒಂದು ದಿವಸದ ರಜಾವನ್ನು ಮಾತ್ರವೇ ಉಪಯೋಗಿಸಿಕೊಂಡು ತರುವಾಯ 1907ನೆ ಇಸವಿಯ ಜೂನ್ 23ನೆ ತಾರೀಖಿನ ಪೂರ್ವಾಹ್ನದಲ್ಲಿ ವಾಪಸು ಬಂದು ಡಿಸ್ಟ್ರಿಕ್ಟು ವೈದ್ಯ ಮತ್ತು ಆರೋಗ್ಯಾಧಿಕಾರಿಯ ಉದ್ಯೋಗದ ಚಾರ್ಜನ್ನು ಅಸಿಸ್ಟೆಂಟ್ ಸರ್ಜನ್ ಮಿ|| ಸಿ. ಅಪ್ಪಾದೊರೆ ಮೊದಲಿಯಾರ್‌ರಿಂದ ವಹಿಸಿದ ಪ್ರಯುಕ್ತ, ಅವರ ರಜಾ ಪೈಕಿ ಉಪಯೋಗವಾಗದೆ ಉಳಿದ ಭಾಗವನ್ನು ಇದರಿಂದ ರದ್ದುಮಾಡಿದೆ.

ತಾರೀಖು 17ನೆ ಜುಲೈ 1907.

ಅಶುದ್ಧದ ಇಸ್ತಿಹಾರ್‌ನಾಮೆ.

ನಂ. J. 185—Regis. 5-07, 1907ನೆಯ ಇಸವಿ ಜೂನ್ ತಾರೀಖು 22ನೆಯ ಕ್ಯಾಂಪ್ ನಂಬರ್ 9ನೆಯ ಇಸ್ತಿಹಾರ್ನಾಮೆಯಲ್ಲಿ ಬರುವ "ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್" ಎಂಬ ಮಾತುಗಳಿಗೆ ತರುವಾಯ "ಕಂಪೆನಿಗಳ ರಿಜಿಸ್ಟ್ರಾರ್" ಎಂಬ ಮಾತುಗಳನ್ನು ಸೇರಿಸಬೇಕು.

ಮೊಕ್ಕಾಂ ಮೈಸೂರು, ತಾರೀಖು 24ನೆ ಜೂನ್ 1907.

ಕ್ಯಾಂಪು ನಂ. 13, ಬೆಂಗಳೂರು ಡಿವಿಜನಿನ ಡಿಸ್ಟ್ರಿಕ್ಟು ಮತ್ತು ಸೆಷನ್ಸ್ ಕೋರ್ಟನ್ನು 1907ನೆ ಇಸವಿಯ ಜುಲೈ 1ನೆ ತಾರೀಖಿನಿಂದ ತೆಗೆದುಹಾಕಿದ ಪ್ರಯುಕ್ತ—

ಬೆಂಗಳೂರು ಡಿವಿಜನಿನ ಡಿಸ್ಟ್ರಿಕ್ಟು ಮತ್ತು ಸೆಷನ್ ಜಡ್ಜ್ ಮಿ॥ ಟ. ಪರಮಶಿವ ಐಯ್ಯರ್, ಬಿ. ಎ., ಯವರನ್ನು, ಮಿ॥ ಎಸ್. ವೆಂಕಟವರದ ಐಯ್ಯಂಗಾರ್ರು ಕೆಲಸದಿಂದ ನಿವೃತ್ತರಾಗುವ ತಾರೀಖು ಮೊದಲ್ಗೊಂಡು, ಮೈಸೂರು ಡಿವಿಜನಿನ ಡಿಸ್ಟ್ರಿಕ್ಟು ಮತ್ತು ಸೆಷನ್ ಜಡ್ಜಾಗಿ ನೊಕರರ್ಮಾಡಿದೆ.

ಮೊಕಾಂ ಮೈಸೂರು, ತಾರೀಖು 24ನೆ ಜೂನ್ 1907.

ಕ್ಯಾಂಪು ನಂ. 18, ಸರ್ಕಾರಿ ಕೆಲಸವು ಸರಿಯಾಗಿ ನಡೆಯತಕ್ಕ ಬಗ್ಗೆ ಕೆಳಗೆ ಕಂಡ ಜುಡಿಷಲ್ ಅಧಿಕಾರಿಗಳ ವರ್ಗಾವರ್ಗಿಗಳನ್ನೂ, ಸ್ಥಳ ನಿರ್ಣಯಗಳನ್ನೂ 1907ನೆ ಇಸವಿಯ ಜುಲೈ 1ನೆ ತಾರೀಖಿನಿಂದ ಮಂಜೂರ್ಮಾಡಿದೆ :

(1) ಸಬ್ ಜಡ್ಜ್ ಮಿ॥ ಮಿರ್ ಹಂಜಾಹುಸೇನ್, ಬಿ. ಎ., ಬಿ. ಎಲ್, ಮೈಸೂರಿಂದ ಶಿವಮೊಗ್ಗೆಗೆ.

(2) ಸಬ್ ಜಡ್ಜ್ ಮಿ॥ ಬಿ. ಎಸ್. ಕೃಷ್ಣಸ್ವಾಮಿ ಐಯ್ಯಂಗಾರ್, ಬಿ. ಎ., ಬಿ. ಎಲ್, ಶಿವಮೊಗ್ಗೆಯಿಂದ ಮೈಸೂರಿಗೆ.

(3) ಚಿಕ್ಕಮಗಳೂರಿನ ಸಬ್ ಜಡ್ಜ್ ಮಿ॥ ಡಿ. ಎಂ. ನರಸಿಂಗರಾವ್, ಬಿ. ಎ., ಬಿ. ಎಲ್, ರೆವಿನ್ಯೂ ಇಲಾಖೆಯಲ್ಲಿ ಕೆಲಸ ಮಾಡುವುದಕ್ಕೆ.

ತಾರೀಖು 21ನೆ ಜೂನ್ 1907.

ನಂ. ರೆ. 10846—ಲ್ಯಾ. ಸ. 75-06-2, ಸರ್ವೆ ಮತ್ತು ಸೆಟ್ಲಮೆಂಟ ಕಮಿಷನರ ಮತ್ತು ಇನಾಂ ಸೆಟ್ಲಮೆಂಟುಗಳ ಸೂಪರಿಂಟೆಂಡೆಂಟ ಕರ್ನಲ್ ಜೆ. ಪಿ. ಗ್ರಾಂಟ ರವರು 1907ನೆ ಇಸವಿಯ ಜುಲೈ 1ನೆ ತಾರೀಖಿನಲ್ಲಿ ಕೆಲಸದಿಂದ ನಿವೃತ್ತರಾದಾಗ್ಯೆ ಸರ್ವೆ ಮತ್ತು ಸೆಟ್ಲಮೆಂಟು ಕಮಿಷನರ ಉದ್ಯೋಗವನ್ನು ತೆಗೆದುಹಾಕಬೇಕೆಂದೂ, ಮತ್ತು ಇನಾಂ ಇಲಾಖೆಯ ಚಾರ್ಜು, ಹಂಗಾಮಿಯಾಗಿ ಅಥವಾ ಇನ್ನೊಂದು ಹುಕುಂ ಕೊಡುವವರೆಗೆ, ಸರ್ವೆ ಮತ್ತು ಸೆಟ್ಲಮೆಂಟ ಸೂಪರಿಂಟೆಂಡೆಂಟಿಗೆ ವಹಿಸಲ್ಪಡಬೇಕೆಂದೂ ವಿಧಿಸಲು ಶ್ರೀಮನ್ ಮಹಾರಾಜರವರ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 27ನೆ ಜೂನ್ 1907.

ನಂ. ರೆ. 10902—ಲ್ಯಾ. ರೆ. 609-06-1, ಸರ್ಕಾರಿ ಕೆಲಸದ ಅನುಕೂಲತೆ ಬಗ್ಗೆ ಕೆಳಗೆ ಕಂಡ ಅಸಿಸ್ಟೆಂಟ ಕಮಿಷನರುಗಳ ವರ್ಗಾವರ್ಗಿಗಳನ್ನೂ ಸ್ಥಳ ನಿರ್ಣಯಗಳನ್ನೂ ಮಂಜೂರ್ಮಾಡಿದೆ :—

(1) ಡೆಪ್ಯುಟಿ ಕಮಿಷನರರಾಗಿ ಬದಲಿ ನೋಡುವುದಕ್ಕೆ ನೊಕರರ್ಮಾಡಲ್ಪಟ್ಟ ಮಿ॥ ಬಿ. ಜೆ. ಕೊಮಾರಸಾಮಿ ನಾಯಕರಿಗೆ ಬದಲಾಗಿ ಆಕ್ಟಿಂಗ್ ಅಸಿಸ್ಟೆಂಟ ಕಮಿಷನರ ಮಿ॥ ಟಿ. ಧರ್ಮರಾಜ ಶೆಟ್ಟರನ್ನು ಹಾಸನದಿಂದ ಚಳ್ಳಕೆರೆ ಸಬ್ ಡಿವಿಜನಿನ ಚಾರ್ಜು ಬಗ್ಗೆ ಚಿತ್ರದುರ್ಗಕ್ಕೆ. (ಒಡನೆಯೇ ಹೋಗಿ ಕೆಲಸದ ಮೇಲೆ ಹಾಜರಾಗತಕ್ಕದ್ದು.)

(2) ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಆಕ್ಟಿಂಗ್ ಅಸಿಸ್ಟೆಂಟ ಕಮಿಷನರಾಗಿರುವ ಮಿ॥ ಎ. ಕೃಷ್ಣಸಾಮೈಯ್ಯಂಗಾರ್, ಬಿ. ಎ. ಯವರನ್ನು, ಹಂಗಾಮಿಯಾಗಿ, ಖಜಾನೆಯ ಚಾರ್ಜಿನ ಬಗ್ಗೆ ಹಾಸನ ಡಿಸ್ಟ್ರಿಕ್ಟಿಗೆ. (ಮಿ॥ ವೇದಾಂತ ದೇಶಿಗಂ ಐಯ್ಯಂಗಾರ್ರಿಂದ ಶಿವಮೊಗ್ಗೆಯ ಚಾರ್ಜು ವಹಿಸಲ್ಪಟ್ಟ ತರುವಾಯ ಈ ಕೆಲಸದ ಮೇಲೆ ಹಾಜರಾಗತಕ್ಕದ್ದು.)

ತಾರೀಖು 8ನೆ ಜುಲೈ 1907.

ನಂ. ರೆ. 240—ಲ್ಯಾ. ರೆ. 20-07-1, ಸರ್ಕಾರಿ ಕೆಲಸದ ಅನುಕೂಲತೆ ಬಗ್ಗೆ ಇದರಡಿ ಕಂಡ ಅಮಲ್ದಾರರುಗಳ ಮತ್ತು ಡೆಪ್ಯುಟಿ ಅಮಲ್ದಾರರುಗಳ ವರ್ಗಾವರ್ಗಿಗಳನ್ನೂ, ಹಂಗಾಮಿ ನೊಕರರಾತಿಗಳನ್ನೂ, ಸ್ಥಳ ನಿರ್ಣಯಗಳನ್ನೂ ಮಂಜೂರ್ಮಾಡಿದೆ :—

	ಎಲ್ಲಿಂದ.	ಎಲ್ಲಿಗೆ.
ಮಿ॥ ಸಿ. ರಂಗನಾಥರಾವ್ ಸಾಹೇಬ್ ...	ದೊಡ್ಡಬಳ್ಳಾಪುರ	ಚನ್ನಪಟ್ಣ.
,, ಎಂ. ಸದಾಶಿವರಾವ್ ...	ನೆಲಮಂಗಲ	ದೊಡ್ಡಬಳ್ಳಾಪುರ.
,, ಸಿ. ಕೃಷ್ಣರಾವ್ ...	ಚಾಮರಾಜನಗರ	ನೆಲಮಂಗಲ.
,, ಎಸ್. ವೆಂಕಟರಮಣ ಶಾಸ್ತ್ರಿ ...	ಶ್ರೀನಿವಾಸಪುರ	ಚಾಮರಾಜನಗರ.

ಬೆಂಗಳೂರು ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟು ಶಿರಸ್ತೆದಾರ, ಮಿ॥ ವೈ. ನರಸಿಂಗರಾಯರು ಶ್ರೀನಿವಾಸಪುರ ತಾಲ್ಲೂಕಿನ ಅಮಲ್ದಾರ ಮತ್ತು 3ನೆ ತರಗತಿಯ ಮಾಜಿಸ್ಟ್ರೇಟಾಗಿ ಬದಲಿ ನೋಡತಕ್ಕದ್ದು.

	ಎಲ್ಲಿಂದ.	ಎಲ್ಲಿಗೆ.
ಮಿ॥ ಸೈಯದ್ ಯಾಕೂಬ್ ...	ಶ್ರೀರಂಗಪಟ್ಣ	ಮೈಸೂರು.
,, ಷೇಕ ಅಬ್ದುಲ್ಲಾ ...	ಚನ್ನಗಿರಿ	ಶ್ರೀರಂಗಪಟ್ಣ.
,, ಬಿ. ಸಿ. ಕೇಶವಯ್ಯ	ಮೊಳಕಾಲ್ಮುರು	ಚನ್ನಗಿರಿ.

ಮುಜರಾಯಿ ಸೆಕ್ರೆಟರಿಯವರ ಕಛೇರಿಯ ಮ್ಯಾನೇಜರ್ ಮಿ॥ ಎಚ್. ಶ್ರೀನಿವಾಸರಾಯರು ಮೊಳಕಾಲ್ಮೂರು ತಾಲ್ಲೂಕಿನ ಅಮಲ್ದಾರ್ ಮತ್ತು 3ನೆ ತರಗತಿಯ ಮ್ಯಾಜಿಸ್ಟ್ರೇಟಾಗಿ ಬದಲಿ ನೋಡತಕ್ಕದ್ದು.

	ಎಲ್ಲಿಂದ.	ಎಲ್ಲಿಗೆ.
ಮಿ॥ ಎಚ್. ಬಸವರಾಜ ಅರಸು	ಹೊಸಕೋಟೆ	ಮಧುಗಿರಿ.

ಕುಂಸಿಯಲ್ಲಿ ಡೆಪ್ಯುಟಿ ಅಮಲ್ದಾರ್‌ರಾದ ಮಿ॥ ಜಿ. ಮುರುಡಪ್ಪನವರು ಸೊರಬ ತಾಲ್ಲೂಕಿನ ಅಮಲ್ದಾರ್ ಮತ್ತು 3ನೆ ತರಗತಿಯ ಮ್ಯಾಜಿಸ್ಟ್ರೇಟಾಗಿ ಬದಲಿ ನೋಡತಕ್ಕದ್ದು.

ಚೀಫ್ ಕೋರ್ಟಿನ ಡೆಪ್ಯುಟಿ ಟ್ರಾನ್ಸಲೇಟರ್ ಮಿ॥ ಎಂ. ಎಲ್. ಶಾಮೇಗೌಡರು ಕುಂಸಿ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮತ್ತು 3ನೆ ತರಗತಿಯ ಮ್ಯಾಜಿಸ್ಟ್ರೇಟಾಗಿ ಬದಲಿ ನೋಡತಕ್ಕದ್ದು.

ಬೆಂಗಳೂರು ಮ್ಯುನಿಸಿಪಲ್ ಕಲೆಕ್ಟರ್ ಮಿ॥ ಎಂ. ರಾಮಚಂದ್ರರಾಯರು ನಗರ ತಾಲ್ಲೂಕಿನ ಅಮಲ್ದಾರ್ ಮತ್ತು 3ನೆ ತರಗತಿಯ ಮ್ಯಾಜಿಸ್ಟ್ರೇಟಾಗಿ ಬದಲಿ ನೋಡತಕ್ಕದ್ದು.

ತುಮಕೂರು ಡೆಪ್ಯುಟಿ ಕಮಿಷನರ ಕಛೇರಿಯ ಹೆಡ್ ಕ್ಲಾರ್ಕ ಮಿ॥ ಟಿ. ಟಿ. ರಾಮಚಂದ್ರರಾಯರು ಕೊರಟಗೆರೆ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮತ್ತು 3ನೆ ತರಗತಿಯ ಮ್ಯಾಜಿಸ್ಟ್ರೇಟಾಗಿ ಬದಲಿ ನೋಡತಕ್ಕದ್ದು.

ಕಡೂರು ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಶಿರಸ್ತೆದಾರ್ ಚಕ್ರಪಾಣಿ ಐಯ್ಯಂಗಾರ್ರು ಚಿಕ್ಕಮಗಳೂರು ತಾಲ್ಲೂಕಿನ ಅಮಲ್ದಾರ್ ಮತ್ತು 3ನೆ ತರಗತಿಯ ಮ್ಯಾಜಿಸ್ಟ್ರೇಟಾಗಿ ಬದಲಿ ನೋಡತಕ್ಕದ್ದು.

ತಾರೀಖು 8ನೆ ಜುಲೈ 1907.

ನಂ. ರೆ. 232—ಲ್ಯಾ. ರೆ. 2-07—3. ಸೆ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಮತ್ತು ಸುಮಾರು $13\frac{1}{2}$ ಗುಂಟೆಗಳ ವಿಸ್ತೀರ್ಣವುಳ್ಳ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ ತುಮಕೂರು ತಾಲ್ಲೂಕು ತುಮಕೂರು ಅಮಾನಿಕೆರೆ ಗ್ರಾಮದಲ್ಲಿ ಸದರ್ನಮರಾಟಾ ರೈಲ್ವೆ ರಸ್ತೆಯ 165—14-15ನೆ ಮೈಲಿಯಲ್ಲಿ ನೀರು ಸರಬರಾಯಿಗೆ ಕಾಯಂ ಏರ್ಪಾಟು ಮಾಡುವ ಬಗ್ಗೆ ಅವಶ್ಯಕವಾಗಿವೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಗುಬ್ಬಿ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬಳಿ	ಗ್ರಾಮ	ಖಾತೆದಾರರ ಹೆಸರು	ಸರ್ವೆ ನಂಬರು	ಜಮೀನಿನ ಬಾಬತ್ತು	ವಿಸ್ತೀರ್ಣ	ಕಂದಾಯ	ಕೆಲಸಕ್ಕೆ ಬೇಕಾಗುವ ವಿಸ್ತೀರ್ಣ	ಚತುರ್ಸೀಮೆ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.	ರೂ. ಆ.	ಎ. ಗು.				
ತುಮಕೂರು	ತುಮಕೂರು	ತುಮಕೂರು	ಅಮಾನಿಕೆರೆ	ಅಬ್ದುಲ್ ಕರೀಂ ಖಾನ್.	91	ತರಿ ...	3 32	27 0	0 $3\frac{1}{4}$	ಸರ್ವೆ ನಂ. $\frac{94}{2}$; $\frac{93}{2}$	ಸರ್ವೆ ನಂ. 91	ಸರ್ವೆ ನಂ. 91	ರೈಲ್ವೆಯ ರಸ್ತೆ ಖರಾಬು ಜಮೀನು.
				ವೀರಶೆಟ್ಟಿ	92	ಡಿಟ್ಟೋ	4 17	27 0	0 $\frac{1}{4}$	ಸರ್ವೆ ನಂ. 92 ರೈಲ್ವೆ ರಸ್ತೆ ಖರಾಬ್ ಜಮೀನು	ಸರ್ವೆ ನಂ. $\frac{93}{2}$	ಸರ್ವೆ ನಂ. $\frac{93}{2}$	ಡಿಟ್ಟೋ
				ಸಿದ್ಧಲಿಂಗಯ್ಯ.	$\frac{93}{2}$	ಡಿಟ್ಟೋ	1 15	9 8	0 $8\frac{1}{4}$	ಸರ್ವೆ ನಂ. $\frac{92}{2}$	ಸರ್ವೆ ನಂ. 91	ಸರ್ವೆ ನಂ. $\frac{94}{2}$	ಸರ್ವೆ ನಂ. 92 ರೈಲ್ವೆ ರಸ್ತೆ ಖರಾಬ್ ಜಮೀನು
				ಸೈಯದ್ ಅಹ್ಮದ್ ಬುಖಾರ್.	$\frac{94}{2}$	ಡಿಟ್ಟೋ	3 0	20 12	0 $1\frac{3}{4}$	ಸರ್ವೆ ನಂ. $\frac{94}{2}$	ಸರ್ವೆ ನಂ. 91	ಸರ್ವೆ ನಂ. $\frac{94}{2}$	ಸರ್ವೆ ನಂ. 92

ತಾರೀಖು 9ನೆ ಜುಲೈ 1907.

ನಂ. ರೆ. 292—ಲ್ಯಾ. ರೆ. 3-07—3, ಸನ್ 1894ನೆಯ ವರ್ಷದ 7ನೆಯ ನಂಬರ ಲ್ಯಾಂಡ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಮತ್ತು 4 ಎಕರೆ 6 ಗುಂಟೆ ಗಳ ವಿಸ್ತೀರ್ಣವುಳ್ಳ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ಹಾಸನ ತಾಲ್ಲೂಕಿನಲ್ಲಿ 86ನೆ ರಿಜಿಸ್ಟರ ನಂಬರ ಹೊಳಲುಕೆರೆಯ ಅಂಗಳವನ್ನು ವಿಸ್ತರಿಸುವದಕ್ಕೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಹಾಸನ ಡಿಸ್ಟ್ರಿಕ್ಟು ಖಜಾನೆಯ ಚಾರ್ಜಿನಲ್ಲಿರುವ ಅಸಿಸ್ಟೆಂಟ ಕಮ್ಮಿಷನರಿಗೆ ಸದರೀ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯುಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬಳಿ	ಗ್ರಾಮ	ಖಾತೆದಾರರ ಹೆಸರು	ಸರ್ವೆ ನಂಬರು	ಖುಷ್ಕಿ, ತರಿ, ಬಾಗಾಯಿತು	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ	ಚತುರ್ಗಡಿ ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಹಾಸನ	ಹಾಸನ	[illegible]	[illegible]	ಹಲಗ ಬಿನ್ ಈರಣ್ಣ.	1	ಖುಷ್ಕಿ	ಎ. ಗು. 0 37	ಕೆರೆ [illegible]	ಸರ್ವೆ ನಂ. 2, ಗ್ರಾಮನಿವೇಶನ ತಳವಾರ ಇನಾಮು ಜಮೀನು.	ತಳವಾರ ಇನಾಮು ಜಮೀನು.	ಕೆರೆ ಅಂಗಳ
				ಡಿಟೋ...	2	ಡಿಟೋ	1 9	ಸರ್ವೆ ನಂ. 1 ಮತ್ತು ತಳವಾರ ಇನಾಮು ಜಮೀನು.	ಸರ್ವೆ ನಂ. 2ರ ಭಾಗ.	ಡಿಟೋ	ಸರ್ವೆ ನಂ. 1 ಮತ್ತು ಗ್ರಾಮನಿವೇಶನ.
				ತಳವಾರ ಸರ್ವಿಸ್ ಇನಾಮು	3	ಡಿಟೋ	1 12	ಕೆರೆ ಅಂಗಳ	ಸರ್ವೆ ನಂ. 3 ಮತ್ತು 2ರ ಭಾಗಗಳು.	ಸರ್ವೆ ನಂ. 4ರ ಭಾಗ	ಸರ್ವೆ ನಂ. 1 ಮತ್ತು 2
				ಹಲಗ ಬಿನ್ ಈರಣ್ಣ.	4	ಡಿಟೋ	0 28	ಡಿಟೋ	ತಳವಾರ ಇನಾಮು ಜಮೀನು.	ಡಿಟೋ	ತಳವಾರ ಇನಾಮು ಜಮೀನು.

ತಾರೀಖು 10ನೆ ಜುಲೈ 1907.

ನಂ. ರೆ. 327—ಲ್ಯಾ. ರೆ. 17-07—3, 1894ನೆಯ ವರ್ಷದ 7ನೆಯ ನಂಬರ ಲ್ಯಾಂಡ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ : ಇದರಡಿ ವಿವರಿಸಿರುವ ಮತ್ತು ಎರಡು ಎಕರೆ ವಿಸ್ತೀರ್ಣವುಳ್ಳ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಒಂದು ಡಿಸ್ಪೆನ್ಸರಿ ಕಟ್ಟುವುದಕ್ಕೆ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಶಿವಮೊಗ್ಗ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ ಕಮ್ಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯುಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ	ಗ್ರಾಮ	ಖಾತೆದಾರರ ಹೆಸರು	ಸರ್ವೆ ನಂಬರು	ಖುಷ್ಕಿ, ತರಿ ಬಾಗಾಯಿತು.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ	ಚತುರ್ಗಡಿ ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
ಶಿವಮೊಗ್ಗ	ಕುಂಸಿ ಸಬ್ ತಾಲ್ಲೂಕು	ಕುಂಸಿ	[illegible]	ತಿಮ್ಮ ಬಿನ್ ಸಿದ್ದ	6	ಖುಷ್ಕಿ	ಎ. ಗು. 2 0	ಸರ್ವೆ ನಂಬರು 6ರ ಬಾಕಿ ಉಳಿದ ಭಾಗ.	[illegible]	ಸರ್ವೆ ನಂಬರು 7	ಸರ್ವೆ ನಂಬರು 5

ತಾರೀಖು 12ನೆ ಜುಲೈ 1907.

ನಂ. ಫೈ. 132—ಎಸ್. ಆರ್. 3-07—4, 1907ನೆ ಇಸವಿಯ ಜುಲೈ 3ನೆ ತಾರೀಖಿನ ಪೂರ್ವಾಹ್ನದಲ್ಲಿ ಮಿ|| ಎಚ್. ಎಚ್. ಸ್ಪಾರ್ಕ್ಸ್‌ರವರು ಮಿ|| ಪಿ. ಎನ್. ಪೂರ್ಣಯ್ಯನವರಿಂದ ಮೈಸೂರು ಎಕ್ಸೈಸ್ ಕಮಿಷನರ ಉದ್ಯೋಗದ ಚಾರ್ಜನ್ನು ವಹಿಸಿದರು.

ತಾರೀಖು 12ನೆ ಜುಲೈ 1907.

ನಂ. ಫೈ. 133—ಜಿ. ಎಫ್. 2-07—2, ಅಸಿಸ್ಟೆಂಟ್ ಕಂಟ್ರೋಲರ್ ಮಿ|| ಟಿ. ಸತ್ಯರಾಜಶೆಟ್ಟರಿಗೆ 1907ನೆ ಇಸವಿಯ ಜೂನ್ 19ನೆ ತಾರೀಖಿನಿಂದ 8 ದಿನಗಳ ವರೆಗೆ ಪ್ರಿವಿಲೇಜ್ ರಜಾ ಕೊಟ್ಟಿತು.

ಹುಕುಂ ಬಮೋಜೆಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರಿಟೆರಿ.

ತಾರೀಖು 16ನೆ ಜುಲೈ 1907.

ನಂ. 1—ಎಲ್. ಸಿ. 1907ನೆ ಇಸವಿಯ ಜುಲೈ 24ನೆ ತಾರೀಖು ಬುಧವಾರ ಅಪರಾಹ್ನ 3 ಘಂಟೆಗೆ ಬೆಂಗಳೂರು ಪಬ್ಲಿಕ್ ಆಫೀಸು ಕಟ್ಟಡದಲ್ಲಿ ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್ ಯಾ ನ್ಯಾಯವಿಧಾಯಕ ಸಭೆಯ ಒಂದು ಸಮಾಗಮವು ನಡೆಸಲ್ಪಡುವುದು.

ಅಪ್ಪಣೆಯ ಮೇರೆಗೆ,
ಕೆ. ಮೈಲಾರಿರಾವ್,
ಮೈಸೂರು ನ್ಯಾಯವಿಧಾಯಕ ಸಭೆಯ ಸೆಕ್ರಿಟೆರಿ.

ಮಿಲಿಟರಿ.

ಇಸ್ತಿಹಾರ್‌ನಾಮೆ.

ತಾರೀಖು 17ನೆ ಜುಲೈ 1907.

ನಂ. 168-70, ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜರವರು ಮೈಸೂರು 2ನೆ ಪೈದಲ್ ಪಟಾಲಮಿನಲ್ಲಿ ಈ ಕೆಳಗೆ ಕಂಡ ಖಿದ್ಮತ್‌ಗಳನ್ನು ನಮೂದಿಸಿರುವ ತಾರೀಖುಗಳ ಲಾಗಾಯಿತು ಮಂಜೂರ್ಮಾಡಿರುತ್ತಾರೆ:—

ಹೆಸರು.	ಯಾವ ದರ್ಜೆಯಿಂದ.	ಯಾವ ದರ್ಜೆಗೆ.	ಯಾವ ತಾರೀಖು ಲಾಗಾಯಿತು.
ಮಹಮ್ಮದ್ ಅಬ್ಬಾಸ್.	ಜಮೆದಾರ್, 1ನೆ ಗ್ರೇಡ್	ಸುಬೇದಾರ್, 2ನೆ ಗ್ರೇಡ್	ಫೆಬ್ರುವರಿ 15—1907
ಮಹಮ್ಮದ್ ಇದ್ರೂಸ್.	ರೆಜಿಮೆಂಟಲ್ ಹವಿಲ್‌ದಾರ್ ಮೇಜರ್.	ಜಮೆದಾರ್, 2ನೆ ಗ್ರೇಡ್	ಜುಲೈ 11—1907

ಹುಕುಂ ಬಮೋಜೆಬ್,
ಆರ್. ಜಿ. ಜೋನ್ಸ್, ಲೆಫ್ಟಿನೆಂಟ್ ಕರ್ನಲ್,
ಮಿಲಿಟರಿ ಅಸಿಸ್ಟೆಂಟ್.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 11ನೆ ಜುಲೈ 1907.

ಇದರಡಿ ಕಂಡ ವರ್ಗವನ್ನು ಹುಕುಂ ಮಾಡಲ್ಪಟ್ಟಿದೆ.

ನಂ. 626—4953, ಅಸಿಸ್ಟೆಂಟು ಇಂಜನಿಯರ್ ಮಿ|| ಕೆ. ಎಸ್. ನವರತ್ನ, ಎಲ್. ಸಿ. ಇ., ಯವರನ್ನು ತುಮಕೂರು ಡಿವಿಜನ್‌ನಿಂದ ಕಡೂರು ಡಿವಿಜನ್‌ನಿಗೆ ವರ್ಗ ಮಾಡಲ್ಪಟ್ಟಿದೆ.

ತಾರೀಖು 16ನೆ ಜುಲೈ 1907.

ನಂ. 643-5068, ಪ್ಯಾಲೆಸ್ ಡಿವಿಜನ್ನಿಗೆ ಸೇರಿದ ಅಸಿಸ್ಟೆಂಟು ಇಂಜನಿಯರ್ ಮಿ|| ಟಿ. ಎಸ್. ಶೇಷಅಯ್ಯಂಗಾರ್, ಬಿ. ಸಿ. ಇ., ಯವರಿಗೆ ಈ ಆಫೀಸಿನ ಸನ್ 1907ನೆ ಏಪ್ರಿಲ್ 8ನೆ ತಾರೀಖು 306—2505ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಜನವರಿ 3ನೆ ತಾರೀಖಿನಿಂದ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಟ್ಟಿದ್ದ 6 ತಿಂಗಳು ರಜವನ್ನು ಇನ್ನೂ 2 ತಿಂಗಳು ಜಾಸ್ತಿ ಮಾಡಲ್ಪಟ್ಟಿದೆ.

ಹುಕುಂ ಬಮೋಜೆಬ್,
ಬರ್ನಾರ್ಡ್ ಢಾಸ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನ್ಮೆಂಟ್ ಅಂಡರ್ ಸೆಕ್ರಿಟೆರಿ.

ರೈಲ್ವೆ ಇಲಾಖೆ.

ತಾರೀಖು 12ನೆ ಏಪ್ರಿಲ್ 1907.

ನಂ. 542—ರೈಲ. 124, ಮೈಸೂರು ಮ್ಯಾಂಗನೀಸ್ ಕಂಪನಿ ಲಿಮಿಟೆಡ್ಡರವರು ಬೀರೂರು-ಶಿವಮೊಗ್ಗ ರೈಲ್ವೆಗೆ ಸೇರಿದ ಶಿವಮೊಗ ರೈಲ್ವೆ ಸ್ಟೇಷನ್ನಿಂದ ಕುಮಸಿ ಹತ್ರ ಇರುವ ಮ್ಯಾಂಗನೀಸ್ ಘಣಿಗಳಿಗೆ ಟ್ರಾಮು ಲೈನನ್ನು ಹಾಕಿಕೊಳ್ಳಲು ಶಿವಮೊಗ್ಗ ಮ್ಯುನಿಸಿಪಲ್ ಬೋರ್ಡಿನವರ ಇರಾದೆಯನ್ನು ಪಡದು ಮಂಜೂರಿ ಹುಕ್ಕುಂ ಬಗ್ಯೆ ಅರ್ಜಿ ಕೊಟ್ಟಿರುವದ್ದರಿಂದ ಮೈಸೂರು ಶ್ರೀ ಮನ್ ಮಹಾರಾಜರ ಸರಕಾರದವರು 1906ನೆ ಇಸವಿ 2ನೆ ಮೈಸೂರು ಟ್ರಾಮುವೆಗಳ ರೆಗ್ಯುಲೇಷನ್ 6ನೆ ಪ್ರಕರಣದ 3ನೆ ಕಲಂಗಳ ಅನುಸರಿಸಿ ಈ ಕೆಳಗೆ ನಮೂದಾಗುವ ಹುಕುಂ ದಯಪಾಲಿಸಿರುತ್ತಾರೆ.

ಅವತರಣಿಕೆ.

ಚಿಕ್ಕ ಹೆಸರು.

1. ಈ ಹುಕ್ಕುಂನ 1907ನೆ ಇಸವಿ ಮೈಸೂರು ಮ್ಯಾಂಗನೀಸ್ ಕಂಪನಿ ಲಿಮಿಟೆಡ್ ಸ್ಟೀಮ್ ಟ್ರಾಮುವೆ—ಹುಕುಂ ಎಂಬದಾಗಿ ಕರಿಯಲ್ಪಡತಕ್ಕದ್ದು.

ಅರ್ಥ ವಿವರಣೆ ಕಲಂ.

2. 1906ನೆ ಇಸವಿ ಮೈಸೂರು ಟ್ರಾಮುವೆ—ರೆಗ್ಯುಲೇಷನ್ನಲ್ಲಿ ವಿವರಿಸಲ್ಪಟ್ಟಿರುವ ಅರ್ಥಗಳೇ ಈ ಹುಕುಂನಲ್ಲಿ ಉದಹರಿಸಲ್ಪಟ್ಟಿರುವ ಶಬ್ದಗಳಿಗು ಮತ್ತು ಉಚ್ಚಾರಣೆಗಳಿಗು ಅನ್ವಯವಾಗತಕ್ಕದ್ದು. ಆದರೆ ಈ ಹುಕುಂನಲ್ಲಿ "ಟ್ರಾಮುವೆ" ಅಥವಾ "ಕೆಲಸ" ಎಂಬ ಉಚ್ಚಾರಣೆಗಳು ಈ ಹುಕುಂನಿಂದ ಮಂಜೂರಾಗಿರುವ ಟ್ರಾಮುವೆ ಮತ್ತು ಕೆಲಸಗಳು ಮತ್ತು ಕಾರ್ಯಗಳೆಂದು ಅರ್ಥವಾಗತಕ್ಕದ್ದು.

ಅನ್ವಯವಾಗತಕ್ಕ ಷರತ್ತುಗಳು.

3. ಈ ಹುಕುಂನಿಂದ ಮಂಜೂರಾಗಿರುವ ಟ್ರಾಮುವೆ ಎಂಬುವದು 1906ನೆ ಇಸವಿ 2ನೆ ಮೈಸೂರು ಟ್ರಾಮುವೆ ರೆಗ್ಯುಲೇಷನ್ ಅನುಸರಿಸಿ ಮತ್ತು ಈ ಹುಕುಂ ನಿಬಂಧನೆಗಳಿಗೆ ಬೆಳಪಟ್ಟು ಹಾಕಲ್ಪಡತಕ್ಕದ್ದು ಮತ್ತು ಕೆಲಸ ನಡಿಸಲ್ಪಡತಕ್ಕದ್ದು.

ಪ್ರಮೋಟರ್ಸ್ ಯಾ ಪ್ರವರ್ತಕರು.

4. ಮೈಸೂರು ಮ್ಯಾಂಗನಿಸ ಕಂಪನಿ ಲಿಮಿಟೆಡ್ಡರವರು ಈ ಹುಕ್ಕುಮಿನ ಉದ್ದೇಶಕ್ಕಾಗಿ ಪ್ರಮೋಟರ್ಸ್ ಯಾ ಪ್ರವರ್ತಕರಾಗಿಯೂ ಮತ್ತು ಈ ಹುಕುಮಿನಲ್ಲಿ ಪ್ರಮೋಟರ್ಸ್ ಯಾ ಪ್ರವರ್ತಕರೆಂದು ಉದಹರಿಸಲ್ಪಟ್ಟಿರುವದಾಗಿಯೂ ಇರತಕ್ಕದ್ದು.

ಕಟ್ಟತಕ್ಕ ಟ್ರಾಮುವೆ.

ಮಂಜೂರಾಗಿರುವ ಟ್ರಾಮುವೆಯು ವಿವರಣೆ.

5. ಈ ಹುಕುಂಗೆ ಒಳಪಟ್ಟು ಮತ್ತು ಈ ಹುಕುಮಿನ ಉದ್ದೇಶಗಳಿಗೋಸ್ಕರ ಹಾಜರು ಮಾಡಲ್ಪಟ್ಟ ಪ್ಲಾನ್ ಮತ್ತು ಸೆಕ್ಷನ್ಗಳಿಗನುಸಾರವಾಗಿ ಈ ಮುಂದೆ ವಿವರಿಸಲ್ಪಟ್ಟಿರುವ ಟ್ರಾಮುವೆಯನ್ನು ಮತ್ತು ಇದಕ್ಕೆ ಸಂಬಂಧಪಟ್ಟ ಅಥವಾ ಇದರ ಉದ್ದೇಶಕ್ಕೋಸ್ಕರ ಯುಕ್ತವಾದ ಕಂಬಿಗಳು ಬೆರಿಂಗ್ಸ್ ಆಫಿಸಗಳು ಸ್ಟೇಷನ್ ಕಟ್ಟಡಗಳು ಕೆಲಸಗಳು ಮತ್ತು ಅನುಕೂಲತೆಗಳ ವಡನೆ ಪ್ರಮೋಟರು ಕಟ್ಟತಕ್ಕದ್ದು ಮತ್ತು ಕಾಪಾಡತಕ್ಕದ್ದು ಮತ್ತು ಅದನ್ನು ಉಪಯೋಗಿಸಿಕೊಂಡು ಕೆಲಸ ನಡಸತಕ್ಕದ್ದು. ಈ ಹುಕುಮಿನಿಂದ ಮಂಜೂರು ಮಾಡಲ್ಪಟ್ಟಿರುವ ಟ್ರಾಮುವೆಯು ಅವಶ್ಯಕವಾದ ಅಡ್ಡದಾರಿಗಳೊಡನೆ ಸುಮಾರು 30 ಮೈಲಿಗಳ ಫಾಸಲೆಯುಳ್ಳ ಒಂಟಿ ಲೈನಾಗಿರುತ್ತೆ. ಇದು ಕೊಂಚ ಭಾಗ ಅದಕ್ಕಾಗಿ ರೂಪಿಸಲ್ಪಟ್ಟಿರುವ ಹಾದಿಯು ಮತ್ತು ಕೆಲವು ಭಾಗ ಸಂಸ್ಥಾನದ ರಸ್ತೆ ಮೇಲಿಯೂ ಬೀರೂರು—ಶಿವಮೊಗ್ಗಾ ರೈಲ್ ಮಾರ್ಗದ ಶಿವಮೊಗ್ಗ ರೈಲ್ವೆ ಸ್ಟೇಷನ್ಗೆ ಶಿವಮೊಗ್ಗ ಟವನ್ ಮುಖಾಂತರವಾಗಿ ಹಾಕಲ್ಪಡತಕ್ಕದ್ದು.

ಪ್ರಮೋಟರ್ ತಮ್ಮ ಟ್ರಾಮುವೆಯನ್ನು ಕಟ್ಟತಕ್ಕ ಯಾವ ಇತರ ಮನುಷ್ಯನಾಗಲಿ ಅಥವಾ ಸ್ಥಳೀಯ ಅಧಿಕಾರಿಯಾಗಲಿ ಅವಶ್ಯಕವಾದ ಕಡೆಗಳಲ್ಲಿ ಉಪಯೋಗಿಸಿಕೊಳ್ಳಲು ಅವಕಾಶ ಕೊಡೋಣ.

6. 1906ನೆ ಇಸವಿ 2ನೆ ಮೈಸೂರು ಟ್ರಾಮುವೆ—ರೆಗ್ಯುಲೇಷನ್ 4ನೆ ಪ್ರಕರಣಕ್ಕನುಗುಣವಾಗಿ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಟ್ರಾಮುವೆಯನ್ನು ಕಟ್ಟುವದಕ್ಕೆ ಈ ತರುವಾಯ ಅಧಿಕಾರ ಕೊಡಲ್ಪಡತಕ್ಕ ಯಾವ ಇತರ ಮನುಷ್ಯನಾಗಲಿ ಅಥವಾ ಸ್ಥಳೀಯ ಅಧಿಕಾರಿಯಾಗಲಿ ಈ ಮೂಲಕ ಅಧಿಕಾರ ಹೊಂದಿ ಬಹಿರಂಗವಾದ ರಸ್ತೆಯ ಮೇಲೆ ಹಾಕಲ್ಪಟ್ಟಿರುವ ಟ್ರಾಮುವೆಯ ಭಾಗವನ್ನು ಉಪಯೋಗಿಸಲು ಸರಕಾರದವರಿಂದ ಹಾಗೆ ಅಪೇಕ್ಷಿಸಲ್ಪಟ್ಟರೆ ಪ್ರಮೋಟರು ಅವಕಾಶ ಕೊಡತಕ್ಕದ್ದು. ಹಾಗೆ ಉಪಯೋಗಿಸೋಣದರ ಷರತ್ತುಗಳು ಅಂಥಾ ಯಾವ ಒಬ್ಬ ಮನುಷ್ಯ ಅಥವಾ ಸ್ಥಳೀಯ ಅಧಿಕಾರಿ ಮತ್ತು ಪ್ರಮೋಟರ್ ಸರಕಾರದವರ ಇರಾದೆಯಿಂದ ಒಪ್ಪತಕ್ಕಂಥಾದ್ದಾಗಿರತಕ್ಕದ್ದು. ಆದರೆ ವಿವಾದ ಹುಟ್ಟಿದ ಕಾಲದಲ್ಲಿ ಸರಕಾರದವರ ತೀರ್ಪು ಅಖೈರಾಗಿರತಕ್ಕದ್ದು ಮತ್ತು ಉಭಯತ್ರರು ಒಪ್ಪತಕ್ಕದ್ದಾಗಿರುತ್ತೆ.

ತಂತಿಯ ಬೇಲಿ.

7. 9ನೆ ನಿಬಂಧನೆ ಪ್ರಕಾರ ಹೆಚ್ಚಿಗೆ ಷರತ್ತುಗಳು ವಿಧಾಯಕವಾಗಿರುವ ತುಂಗಾನದಿ ಸೇತುವೆ ಮೇಲೆ ವಿನಹ ಮುನಸಿಪಲ್ ರಸ್ತೆ ಮೇಲೆ ಅಥವಾ ಅದರ ಪಕ್ಕದಲ್ಲಿ ಹೋಗುವ ಕಡೆ ಲೈನಿಗೆ ತಂತಿ ಬೇಲಿ ಪ್ರಮೋಟರ್ ಹಾಕತಕ್ಕದ್ದು.

ಲಿಮಿಟೇಷನ್ಯನ್ನು ಕಾಲ್ಲಸಿಬಂಧನೆಗೆ, ಒಳಪಟ್ಟು ರಸ್ತೆಯಲ್ಲಿ ಉಪಯೋಗಿಸಲು, ಪ್ರಮೋಟರ ಅಧಿಕಾರ ಹೊಂದಿರೋಣ.

8. ಪ್ರಮೋಟರ ಯಾವದೊಂದು ಕಟ್ಟಡಕ್ಕೆ ಅಥವಾ ಅದರ ಪ್ರಯುಕ್ತವಾದ ಕಾಮಗಾರಿಗೆ ವಿನಹ ಪಕ್ಕ ಟ್ರಾಮುವೆಯನ್ನು ಹಾಕುವದಕ್ಕಾಗಿ ಸ್ಥಳೀಯ ಅಧಿಕಾರಿಯು ಸಂಸ್ಥಾನದ ರಸ್ತೆಯ ಭಾಗವನ್ನು ಮಂಜೂರು ಮಾಡುವ ಪಕ್ಷದಲ್ಲಿ ಚರಂಡಿಯಿಂದ ಅಥವಾ ರಸ್ತೆಯು ದಡವುಳ್ಳದ್ದಾಗಿದ್ದರೆ ಆ ದಡದಿಂದ 5 ಅಡಿ ಅಗಲ ಮಾತ್ರ ಉಪಯೋಗಿಸಿಕೊಳ್ಳಬಹುದು ಮತ್ತು ದಾಟುವ ಸ್ಥಳಗಳು ಅಥವಾ ಅಡ್ಡಸೇತುವೆಗಳು ಅಥವಾ ಮೋಹರಿಗಳು ಇವುಗಳನ್ನು ಕಟ್ಟಬೇಕಾದಾಗ ಪ್ರತಿ ಬಂದಕ್ಕು ಮೈಸೂರು ದೇಶದ ಚೀಫ ಇಂಜನಿಯರವರು ಅವಶ್ಯಕವೆಂದು ಆಲೋಚಿಸುವ ಮಟ್ಟಿಗೆ ರಸ್ತೆಯ ಮಧ್ಯದ ವರಿಗು ವ್ಯಾಪಿಸಬಹುದು, ಆದರೆ ಟ್ರಾಮುವೆಗೋಸ್ಕರ ಸೇತುವೆ ಅಥವಾ ಮೋಹರಿಯ ಬಡಾವಣೆಯು ಅಥವಾ ಬದಲಾವಣೆಯು ಅವಶ್ಯಕವೆಂದು ಸದರಿ ಇಂಜಿನಿಯರವರಿಗೆ ತೋರುವ ಪಕ್ಷದಲ್ಲಿ ಅವರ ಸಮಾಧಾನಕ್ಕೆ ಒಳಪಟ್ಟು ಪ್ರಮೋಟರ ತಮ್ಮ ಲಾಗವಡಿನಿಂದ ಆ ಕೆಲಸಗಳನ್ನು ನಡಿಸತಕ್ಕದ್ದು ಮತ್ತು ಅವುಗಳ ಕಾಮಗಾರಿ ನಡಿಯುತ್ತಾ ಇರುವಾಗ ಏನಾದರೂ ತಿದ್ದುಪಾಟುಗಳು ಅವಶ್ಯಕವೆಂದು ಕಂಡುಬಂದರೆ ಅವು ಸ್ಥಳೀಯ ಅಧಿಕಾರಿ ಮತ್ತು ಮೇಲ್ಕಂಡ ಇಂಜನಿಯರ ಇವರಿಂದ ಬರಹ ಮೂಲಕ ಮೊದಲು ಅನುಮತಿಯನ್ನು ಪಡದು ನಡಸಲ್ಪಡಬಹುದು.

ಮುನಿಸಿಪಲ ರೋಡುಗಳಿಗೆ ಟ್ರಾಮ ಲೈನ ಅಡ್ಡವಾಗಿ ಬರುವಕಡೆಗಳಲ್ಲೆಲ್ಲಾ ಪ್ರಮೋಟರ ಗೇಟು ಯಾನೆ ಬಾಗಲಗಳನ್ನು ಇಡತಕ್ಕದ್ದು.

ಶಿವಮೊಗ್ಗ ಬಳಿ ಇರುವ ತುಂಗಾನದಿ ಸೇತುವೆಯನ್ನು ಕೆಲವು ಷರತ್ತುಗಳಿಗೆ ಒಳಪಟ್ಟು ಉಪಯೋಗಿಸಿಕೊಳ್ಳಲು ಪ್ರಮೋಟರ ಅಧಿಕಾರ ಹೊಂದಿರೋಣ.

9. ಈ ಕೆಳಗೆ ನಮೂದಿಸುವ ನಿಬಂಧನೆಗಳಿಗೆ ಒಳಪಟ್ಟು ಶಿವಮೊಗ್ಗ ಬಳಿ ತುಂಗಾನದಿ ಸೇತುವೆಯ ಮೇಲಣ ಹಾಲಿ ಇರುವ ರಸ್ತೆ ಮೇಲೆ ಟ್ರಾಮುವೆಯನ್ನು ಹಾಕಲು ಪ್ರಮೋಟರ ಅಧಿಕಾರ ಹೊಂದಿರುತ್ತಾರೆ.

(1) ಇಂಡಿಯ ಸರಕಾರದವರು ವಿಧಾಯಿಸಿ ಇರುವ ಸ್ಟ್ಯಾಂಡರಡ ಅಳತೆಯು ಅವಕಾಶಕೊಡುವ ಮಟ್ಟಿಗೆ ರಸ್ತೆಯ ಒಂದು ಪಕ್ಕದ ಸಮೀಪದಲ್ಲಿ ಕಂಬಿಗಳನ್ನ ಹಾಕತಕ್ಕದ್ದು.

(2) ಕಂಬಿಯ ಮೇಲ ಭಾಗವು ರಸ್ತೆಯ ನೆಲಕ್ಕೆ ಸಮನಾಗಿರತಕ್ಕದ್ದು.

(3) ಗಾರಡ ರೈಲ್ಸ ಯಾನೆ ತಡೆ ಕಂಬಿಗಳು ಅಥವಾ ಅನುಕೂಲವಾದ ವಿಶೇಷ ತರಹದ ಕಂಬಿಗಳು ಸೇತುವೆ ಮೇಲೆ ಉದ್ದಕ್ಕು ಹಾಕಲ್ಪಡತಕ್ಕದ್ದು.

(4) ಸೇತುವೆ ಮೇಲೆ ಯಾವದಾದರು ಗಾಡಿ ಇದ್ದರೆ ಅವಕ್ಕೆ ಒದಗಬಹುದಾದ ಅಪಾಯವನ್ನು ನಿಲ್ಲಿಸುವದಕ್ಕಾಗಿ ಸದರಿ ಗಾಡಿಯು ಸೇತುವೆಯನ್ನು ದಾಟ ಹೋಗುವವರಿಗೂ ಟ್ರಾಮ ಗಾಡಿಗಳು ಸೇತುವೆಯ ಕೊನೆಯಿಂದ (100) ಗಜಗಳ ಧೂರದಲ್ಲಿ ಸುಮ್ಮನೆ ನಿಲ್ಲಿಸಲ್ಪಡತಕ್ಕದ್ದು.

(5) ಸೇತುವೆಮೇಲೆ ವೇಗವು ಒಂದು ಘಂಟೆಗೆ 5 ಮೈಲಿಗಿಂತ ಹೆಚ್ಚು ಕೂಡದು.

(6) ಸೇತುವೆಯ ಎರಡು ಕೊನೆಗಳಲ್ಲಿಯೂ ಪ್ರಮೋಟರ ಬಾಗಿಲಗಳ ಇಡತಕ್ಕದ್ದು.

(7) ಶಿವಮೊಗ್ಗಾ ರೈಲ್ವೆ ಸ್ಟೇಷನ ಬಳಿಗೆ ಟ್ರೈನ ಯಾನೆ ಗಾಡಿಗಳು ಬಹಿರಂಗವಾಗಿ ತಿಳಿಸಲ್ಪಟ್ಟಿರುವ ಕಾಲಕ್ಕೆ ಅರ್ಧ ಘಂಟೆ ಮುಂಚಿತವಾಗಿ ಮತ್ತು ಅರ್ಧ ಘಂಟೆ ತರುವಾಯ ಪ್ರಮೋಟರ ಯಾವ ಟ್ರಾಮು ಗಾಡಿಗಳನ್ನು ಸೇತುವೆ ಮೇಲೆ ಬಿಡಕೊಡದು.

(8) ತುಂಗಾನದಿ ಸೇತುವೆಯ ಪಶ್ಚಿಮ ದಿಕ್ಕಿನ ಕೈಪಿಡಿ ಗೋಡೆ ಮೇಲೆ ಎರಡು ಅಡಿ ಎತ್ತರಕ್ಕೆ ಪ್ರಮೋಟರ ತಂತಿ ಬೇಲಿಯನ್ನ ಹಾಕತಕ್ಕದ್ದು.

(9) ಟ್ರಾಮ ಲೈನಿನ ಮಟ್ಟವು ತುಂಗಾನದಿ ಸೇತುವೆ ಮೇಲಣ ರಸ್ತೆಯಿಂದ ಕೆಳಕ್ಕೆ ಹೊಳೆ ಹೊನ್ನೂರು ರಸ್ತೆ ವರಿವಿಗೆ 25ರಲ್ಲಿ ಒಂದಕ್ಕಿಂತಲು ಹೆಚ್ಚಾದ ಮಟ್ಟವುಳ್ಳದ್ದಾಗಿರಕೂಡದು.

ಉಳಕೆ ರಸ್ತೆಯನ್ನು ಖಾಲಿ ಬಿಟ್ಟಿರೋಣ.

10. ಪ್ರಮೋಟರ ಟ್ರಾಮುವೆ ಉದ್ದಿಶ್ಯಕ್ಕಾಗಿ ಉಪಯೋಗಿಸಲು ಈ ಹುಕುಂನಿಂದ ಅಥವಾ ಅದರ ಮೂಲಕ ಅಧಿಕಾರ ಹೊಂದದ ರಸ್ತೆ ಭಾಗವನ್ನ ಸಹಜವಾದ ಆಮದ ರಪ್ತಿಗಾಗಿ ಅಭ್ಯಂತರವಿಲ್ಲದೆ ಖಾಲಿಯಾಗಿ ಬಿಟ್ಟಿರತಕ್ಕದ್ದು. ಮತ್ತು ಸದರಿ ಇಂಜನಿಯರವರು ಬರಹ ಮೂಲಕ ಅನುಮತಿಯನ್ನ ಮೊದಲೆ ಹೊಂದದೆ ಯಾವ ವಿಧವಾದ ತಡೆಯನ್ನ ಅದರ ಮೇಲೆ ಇಡಕೂಡದು ಅಥವಾ ಅದಕ್ಕೆ ಉಂಟಾಗುವ ಹಾಗೆ ಮಾಡಕೂಡದು.

ಸಾಮಾನುಗಳನ್ನ ಜಮಾಯಿಸುವದಕ್ಕಾಗಿ ರಸ್ತೆಯನ್ನ ಉಪಯೋಗಿಸೋಣ.

11. ಟ್ರಾಮುವೆಯನ್ನ ಕಟ್ಟುವದಕ್ಕೆ ಅದರ ಕಾಪಾಡುವಿಕೆಗಾಗಿ ಜಲ್ಲಿಯನ್ನು ಮತ್ತು ಇತರ ಸಾಮಾನುಗಳನ್ನ ಮೈಸೂರು ಚೀಫ ಇಂಜನಿಯರವರಿಂದ ಚುನಾಯಿಸಲ್ಪಡುವ ಪ್ರದೇಶದಲ್ಲಿ ರಸ್ತೆಯ ಸರಹದ್ದಿನ ಒಳಗೆ ಪ್ರಮೋಟರ ಜಮಾಯಿಸಬಹುದು. ಆದರೆ ಅದು ಸದರಿ ರಸ್ತೆಯ ಮೇಲೆ ಆಮದರಪ್ತಿಗೆ ಅಡ್ಡಿ ಅಥವಾ ಅಪಾಯವಿಲ್ಲದೆ ಇರುವ ರೀತಿಯಲ್ಲಿ ಜಮಾಯಿಸಲ್ಪಡತಕ್ಕದ್ದು ಮತ್ತು ಅಂಥ ಪ್ರದೇಶಗಳು ಸರಕಾರದ ಸಾಮಾನುಗಳನ್ನ ಜಮಾಯಿಸುವದಕ್ಕಾಗಿ ಸದರಿ ಇಂಜನಿಯರವರಿಂದ ಉಪಯೋಗಿಸಲ್ಪಡಕೂಡದು.

F

12. ಪ್ರಮೋಟರ್ ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಬರಹ ಮೂಲಕವಾದ ಅನುಮತಿ ಇಲ್ಲದೆ ರಸ್ತೆ ಉದ್ದಕ್ಕೂ ಅಥವಾ ಅದರ ಪಕ್ಕದಲ್ಲಿ ಬೆಳೆಯುವ ಯಾವ ಮರವನ್ನಾಗಲಿ ಕಡಿಯಕೂಡದು ಆದರೆ ಟ್ರಾಮುವೆ ಪ್ರಯಾಣಕ್ಕೆ ಅಡ್ಡಿ ಅಥವಾ ಅಪಾಯವುಂಟಾಗುವಂತೆ ಮುಂದಕ್ಕೆ ಬಂದು ಇರುವ ಅಥವಾ ಜೋಲಾಡುವ ಯಾವ ಮರವನ್ನಾಗಲಿ ಅಥವಾ ಅದರ ಭಾಗವನ್ನಾಗಲಿ ಪ್ರಮೋಟರ್ ಜರೂರಿಯಾತಿ ಸಂದರ್ಭಗಳಲ್ಲಿ ತೆಗಿಸಬಹುದು ಅಥವಾ ಕಡಿಯಬಹುದು.

ಮಂಜೂರಿ ಅಥವಾ ಜರೂರಿಯಾತಿ ಅವಶ್ಯಕತೆ ವಿನಹ ಮರಗಳ ಕೊನೆಗಳನ್ನು ಕಡಿಯುವದು ನಿರೋಧಿಸಲ್ಪಡೋಣ.

13. ಟ್ರಾಮುವೆ ಹಾಕಲ್ಪಟ್ಟ ಭೂಮಿಮೇಲೆ ಅಥವಾ ಒಳಗೆ ಕಚಡ ನೀರಿನ ದೊಡ್ಡ ಚರಂಡಿ, ಮೋರಿ, ಟೆಲಿಗ್ರಾಫ್ ಲೈನ್, ಗ್ಯಾಸ್‌ಪೈಪ್, ನೀರಿನ ಕೊಳಾಯಿ ಅಥವಾ ಆ ಸಂಬಂಧವಾದ್ದನ್ನ ಇನ್ಯಾವದನ್ನಾಗಲಿ ನಡಿಸುವದಕ್ಕೋಸ್ಕರ ಮೈಸೂರು ಮಹಾರಾಜಾ ಗೌರ್ನಮೆಂಟಿನವರು ಸ್ಥಳೀಯ ಅಧಿಕಾರಿ, ರಸ್ತೆಯ ಅಧಿಕಾರಿ ಅಥವಾ ಬಬ್ಬ ಅಥವಾ ಯಾರೇ ಆಗಲಿ ಅಂಥಾ ಕೆಲಸ ಅಥವಾ ಕೆಲಸಗಳನ್ನ ನಡಿಸುವದರಲ್ಲಿಯೂ ಮತ್ತು ಟೆಲಿಗ್ರಾಫ್ ಲೈನ್ ವಿಷಯದಲ್ಲಿ ಟೆಲಿಗ್ರಾಫ್ ಸೂಪರಿಂಟೆಂಡೆಂಟ್ ಆಫೀಸರ್‌ಗಳು ಅಂಥಾ ಟ್ರಾಮುವೆ ಯಾವ ಭಾಗವನ್ನಾಗಲಿ ಭದ್ರಕ್ಕೋಸ್ಕರ ಅಂಥಾ ಕೆಲಸ ಅಥವಾ ಕೆಲಸಗಳನ್ನ ಮಾಡುವದಕ್ಕೋಸ್ಕರ ಟ್ರಾಮುವೆ ಅಮದುರಫ್ತನ್ನ ಬಂದುಮಾಡಕೂಡದೆಂಬುವದಕ್ಕೆ ಕಾರಣಗಳನ್ನ ತೋರಿಸಬೇಕೆಂದು ಪ್ರಮೋಟರಿಗೆ ಬರಹಮೂಲಕ ನೋಟೀಸಿನಿಂದ ಕೇಳಬಹುದು. ಟ್ರಾಮುವೆಯ ಅಂಥಾ ಭಾಗವನ್ನು ಮುಚ್ಚುವದಕ್ಕೋಸ್ಕರ ಇರುವ ಅವಶ್ಯಕತೆಯನ್ನು ಮತ್ತು ಪ್ರಮೋಟರ್‌ಗಳು ಯಾವದೊಂದು ಅಭ್ಯಂತರವೇ ಆಗಲಿ ಯಾ ಹೇಳುವ ಆಲೋಚನೆಗಳನ್ನು ಸಲಹೆಗಳನ್ನ ಯೋಚಿಸಿದ ನಂತರ ಮೈಸೂರು ಮಹಾರಾಜಾ ಸರಕಾರದವರು ಅಥವಾ ಇದಕ್ಕೆ ಜನರಲ್ ಅಥವಾ ಸ್ಪೆಷಲ್ಲಾಗಿ ಮೈಸೂರು ಮಹಾರಾಜಾ ಸರಕಾರದವರು ನೇಮಿಸುವ ಮನುಷ್ಯ ಅಥವಾ ಮನುಷ್ಯರಗಳು ಪ್ರಮೋಟರಗಳಿಗೆ ಟ್ರಾಮುವೆ ಅಂಥಾ ಭಾಗವನ್ನು ಅವಶ್ಯಕವಿರುವ ಕಾಲದ ವರಿಗೆ ಆ ಸಂದರ್ಭದಲ್ಲಿ ಅವಶ್ಯಕವಿರುವಷ್ಟು ಷರತ್ತಿನಮೇಲೆ ಹುಕುಂ ಮಾಡಬಹುದು ಮತ್ತು ಹಾಗೆ ತೆಗದು ಹಾಕಿರುವ ಟ್ರಾಮುವೆ ಭಾಗಕ್ಕೆ ಬದಲಾಗಿ ಹಂಗಾಮಿಯಾಗಿ ಟ್ರಾಮುವೆಯನ್ನ ಕಟ್ಟಿಕೊಂಡು ಉಪಯೋಗಿಸಬಹುದು ಮತ್ತು ಅಂಥಾ ಹಂಗಾಮಿ ಟ್ರಾಮುವೆಯನ್ನು ಕಟ್ಟಿ ಉಪಯೋಗಿಸುವದಕ್ಕೋಸ್ಕರ ಷರತ್ತುಗಳನ್ನ ಆಜ್ಞಾಪಿಸಬಹುದು. ಪ್ರಮೋಟರಗಳು ಅಂಥಾ ಹುಕುಂಗಳಂತೆ ನಡದುಕೊಳ್ಳಲು ಮತ್ತು ಅದರಲ್ಲಿ ನಮೂದಿಸುವ ಕೆಲಸವನ್ನ ನಡಿಸಲು ಇತರ ಅಥವಾ ಇನ್ಯಾವ ವಿರೋಧವಾದ ಹುಕುಂ ಇಲ್ಲದ ಪಕ್ಷದಲ್ಲಿ ಅಂಥಾ ಕೆಲಸಗಳನ್ನ ನಡಿಸುವದಕ್ಕೋಸ್ಕರ ತೆಗಿಯಬೇಕಾದ ಟ್ರಾಮುವೆ ಯಾವ ಭಾಗವನ್ನಾಗಲಿ ಕೆಲಸ ಮಾಡುವಂಥ ಸರಕಾರದ ಅಥವಾ ಸ್ಥಳೀಯ ಅಧಿಕಾರಿ ರಸ್ತೆ ಅಧಿಕಾರಿ ಅಥವಾ ಮನುಷ್ಯ ಅಥವಾ ಮನುಷ್ಯರು ಟೆಲಿಗ್ರಾಫ್ ಸೂಪರಿಂಟೆಂಡೆಂಟರು ಇವರುಗಳ ಲಾಗವಡಿನಿಂದ ತೆಗದುಹಾಕಲು ಮತ್ತು ಪುನಹಾ ಹಾಕಲೂಕೂಡದೆಂಬುವದಕ್ಕೆ ಬದ್ಧರಾಗಿರಬೇಕು.

ಟ್ರಾಮುವೆ ವಿಷಯದಲ್ಲಿ ಅವಶ್ಯಕವಾದ ಕೆಲಸಗಳನ್ನ ನಡಿಸುವದಕ್ಕೆ ಪ್ರವೇಶಿಸಲು ಅಪ್ಪಣೆ ಕೊಡುವದಕ್ಕೆ ಸರಕಾರದವರ ಅಧಿಕಾರ.

14. ಯಾವ ಚರಂಡಿ ಟೆಲಿಗ್ರಾಫ್ ಲೈನ್ ಗ್ಯಾಸ್‌ಪೈಪ್, ನೀರಿನ ಕೊಳಾಯಿ ಪ್ರವೇಶಿಸಲ್ಪಡಬೇಕಾದ ಟ್ರಾಮುವೆಯಿಂದ ಆಕ್ರಮಿಸಕೊಳ್ಳಲ್ಪಡುವ ಅಥವಾ ಆಕ್ರಮಿಸಲ್ಪಟ್ಟ ಭೂಮಿ ಒಳಗೆ ಅಥವಾ ಮೇಲೆ ಇನ್ಯಾವದನ್ನಾಗಲಿ ಅವುಗಳ ಪೈಕಿ ಯಾವದೊಂದರ ಸ್ಥಿತಿಯನ್ನು ಬದಲಾಯಿಸಲು ಪ್ರವೇಶಟರುಗಳು ಅಪೇಕ್ಷಿಸುವ ಸಂದರ್ಭದಲ್ಲಿ ಪ್ರಮೋಟರಗಳು ಸ್ಥಳೀಯ ಅಧಿಕಾರಿ ರಸ್ತೆ ಅಧಿಕಾರಿ ಪ್ರವೇಶಿಸತಕ್ಕ ಅಥವಾ ಬದಲಾಯಿಸತಕ್ಕ ಪದಾರ್ಥದಲ್ಲಿ ಅಧಿಕಾರಿ ಯಾವ ಒಬ್ಬ ನೌಕರ ಅಥವಾ ಯಾರಿಗಾಗಲಿ ಟೆಲಿಗ್ರಾಫ್ ಲೈನ್ ವಿಷಯಕ್ಕೆ ಟೆಲಿಗ್ರಾಫ್ ಆಫೀಸ್ ಸೂಪರಿಂಟೆಂಡೆಂಟರಿಗೆ ಬರಹಮೂಲಕವಾದ ನೋಟಿಸ ಕೊಡತಕ್ಕದ್ದು. ಅಲ್ಲದೆ ಮೈಸೂರು ಮಹಾರಾಜಾ ಸರಕಾರದವರಿಗೆ ಅರ್ಜಿ ಮೂಲಕವಾಗಿ ಜಾಹಿರ್ಮಾಡಿಕೊಳ್ಳತಕ್ಕದ್ದು. ಮತ್ತು ಪ್ರಮೋಟರ ಅರ್ಜಿಯನ್ನು ಸದರಿ ಅರ್ಜಿಯಲ್ಲಿ ನಮೂದಿಸುವ ಯಾವದೊಂದು ಅಭ್ಯಂತರಗಳು ಈ ಸಲಹೆಗಳನ್ನು ಯೋಚಿಸಿದ ನಂತರ ಮೈಸೂರು ಸರಕಾರದವರು ಸದರಿ ಕೆಲಸಕ್ಕಾಗಿ ಜನರಲ್ ಅಥವಾ ಸ್ಪೆಷಲ್ ಹುಕುಂನಿಂದ ಮೋಕರರೂರು ಮಾಡುವ ಮನುಷ್ಯ ಅಥವಾ ಮನುಷ್ಯರುಗಳು ಆ ಸಂದರ್ಭದಲ್ಲಿ ಲಾಯಖ್ಖಾಗಿರುವ ಅರ್ಜಿಯಮೇಲೆ ಪ್ರಮೋಟರಗಳಿಗೆ ಯಾವ ವಿಷಯದಲ್ಲಿ ಆಗಲಿ ಚರಂಡಿ ಅಥವಾ ಅದರ ಸ್ಥಿತಿ ಬದಲಾವಣಿಕೆ ವಿಷಯಕ್ಕೆ ಯಾವದೊಂದು ಪ್ರವೇಶಕ್ಕೆ ಹಕ್ಕು ಇಲ್ಲದೆ ಇರುವ ಪಕ್ಷಕ್ಕೆ ಸದರಿ ಅರ್ಜಿಮೇಲೆ ಅಂಥಾ ಹುಕುಮನ್ನು ಮಾಡಬಹುದು.

ರಸ್ತೆಯಲ್ಲಿ ಅಥವಾ ರಸ್ತೆಮೇಲೆ ಇರುವ ಕಟ್ಟಡಗಳ ವಿಷಯಕ್ಕೆ ಪ್ರವೇಶಿಸಲು ಪ್ರಮೋಟರಗಳಿಗೆ ಅವಶ್ಯಕವಾದ ಷರತ್ತು.

15. ಈ ಆರ್ಡರಿ ಪ್ರಕಾರ ಸಂಸ್ಥಾನದ ರಸ್ತೆಯನ್ನ ಉಪಯೋಗಿಸುವದಕ್ಕೆ ಅಧಿಕಾರ ಹೊಂದಿರುವದರ ವಿನಹ ಪ್ರಮೋಟರಗಳಿಗೆ ಈ ಕೆಲಸಕ್ಕೋಸ್ಕರ ಆಗಾಗ್ಯೆ ಬೇಕಾಗುವ ಜಮೀನುಗಳನ್ನ ಶಿವಮೊಗ್ಗ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರವರಿಗೆ ಜಮೀನಿನ ಪ್ಲಾನ್ ಮತ್ತು ಸ್ಟೇಟ್‌ಮೆಂಟುಗಳೊಡನೆ ಅರ್ಜಿ ಕೊಟ್ಟು ಅವರ ಅನುಮತಿ ಪಡದುಕೊಂಡು ಹೊಂದಬಹುದು. ಇದಕ್ಕಾಗಿ ಡೆಪ್ಯುಟಿ ಕಮಿಷನರಿಗೆ ತಗಲುವ ಎಲ್ಲಾ ಲಾಗವಡನ್ನು ಪ್ರಮೋಟರ ವಹಿಸಿಕೊಳ್ಳತಕ್ಕದ್ದು. ಪ್ರಮೋಟರುಗಳು ಆಗಾಗ್ಯೆ ತಮಗೆ ಅವಶ್ಯಕವಿಲ್ಲದ ಜಮೀನುಗಳನ್ನ ಶಿವಮೊಗ್ಗ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರ ಮಂಜೂರಿ ಪಡದುಕೊಂಡು ಮಾರುವದಾಗಲಿ ಅನ್ಯಾಕ್ರಾಂತೆ ಮಾಡುವದಾಗಲಿ ಮಾಡಬಹುದು. ಪ್ರಮೋಟರುಗಳು ಜಮೀನು ಪಡದುಕೊಳ್ಳುವದಕ್ಕೆ ಈ ಕೆಳಗೆ ನಮೂದು ಮಾಡುವ ನಿಬಂಧನೆಗಳನ್ನ ಅನುಸರಿಸತಕ್ಕದ್ದು.

ಪ್ರಮೋಟರಿಗೆ ಬೇಕಾಗುವ ಜಮೀನನ್ನು ಹೊಂದತಕ್ಕ ವಿಧಾನ.

I. ಸ್ವಾಧೀನದಲ್ಲಿರತಕ್ಕ ಜಮೀನು — ಪ್ರಸ್ತುತ ಜಾರಿಯಲ್ಲಿರುವ 1894ನೆ ಇಸವಿ 7ನೆ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ ರೂಲ್ಸು ಅನುಸರಿಸಿ ಮೇಲೆ ಹೇಳಿದ ಪ್ರಕಾರ ತಮಗೆ ಬೇಕಾಗುವ ಯಾವ ಜಮೀನನ್ನಾದರೂ ಪ್ರಮೋಟರ ಹೊಂದಬಹುದು.

II. ಆಕಾರಕಂಡು ಯಾರ ಸ್ವಾಧೀನದಲ್ಲು ಇಲ್ಲದೆ ಇರತಕ್ಕ ಪಾಳು ಜಮೀನುಗಳು. — ಲೈನಿಗೆ ಬೀಳುವ ಎಲ್ಲ ಸರ್ವೆ ನಂಬರು ಪೂರ್ತಿಯಾಗಿ ಅದರ ಮಾಲ್ಕಿ ಅಥವಾ ಅದರಲ್ಲಿರತಕ್ಕ ಮರಗಳ ಕಿಂಮತಿನೊಡನೆ ಆ ಜಮೀನಿನ ಕಂದಾಯ ಪೂರ್ತಿಯಾಗಿ ಕೊಟ್ಟು ಪ್ರಮೋಟರುಗಳು ಪಡದುಕೊಳ್ಳಬಹುದು.

(2) ಆಕಾರ ಕಂಡ ಜಮೀನುಗಳ ಪೈಕಿ ಯಾವದಾದರೂ ಒಂದು ದೊಡ್ಡದಾಗಿದ್ದಲ್ಲಿ ತಮ್ಮ ಖರ್ಚಿನಿಂದ ಪೋಡ್ ಮಾಡಿಸಿಕೊಡಬೇಕೆಂದು ಡೆಪ್ಯುಟಿ ಕಮಿಷನರಿಗೆ ಪ್ರಮೋಟರ ಕೇಳಿಕೊಳ್ಳಬಹುದು. ಪೋಡ್ ಮಾಡಿಕೊಡುವವರಿಗೆ ಪ್ರಮೋಟರುಗಳು ಅಂಥಾ ನಂಬರುಗಳ ಕಂದಾಯವನ್ನು ಪೂರ್ತಿಯಾಗಿ ಕೊಡುತ್ತಾ ಬರತಕ್ಕದ್ದು.

(3) ಪ್ರಮೋಟರ ಕೆಲಸಗಳಿಂದ ಯಾವ ಜಮೀನನ್ನಾಗಲಿ ಸಾಗುವಳಿಗೆ ನಾಲಾಯಖಾಗಿ ಮಾಡಿದಲ್ಲಿ ಅಂಥಾ ನಷ್ಟವನ್ನು ಅವರು ಸರಕಾರಕ್ಕೆ ಕೊಡಿಸಿಕೊಡಬೇಕು.

III. ಆಕಾರ ಕಾಣದ ಯಾರ ಸ್ವಾಧೀನದಲ್ಲು ಇಲ್ಲದೆ ಇರುವ ಬಂಜರು ಜಮೀನು. — ಪ್ರಮೋಟರುಗಳು ತಮಗೆ ಬೇಕಾಗುವ ಯಾವ ಜಮೀನನ್ನಾದರೂ ಅದರಲ್ಲಿ ರತಕ್ಕ ಮರಗಳ ಕಿಮ್ಮತ್ತು ಸಹ ಎಕರೆ 1ಕ್ಕೆ 1 ರೂ. 4 ಆಣೆ ಮೇರೆ ಒಂದು ಮತ್ತಾದ ಕಂದಾಯವನ್ನು ಕೊಟ್ಟು ಪಡದುಕೊಳ್ಳಬಹುದು.

IV. ಪ್ರಮೋಟರುಗಳು ಯಾವ ಚಿಕ್ಕ ಕಟ್ಟೆಗಳನ್ನು ಒಡಿಯಕೂಡದು ಅಥವಾ ಹಾಲಿ ಇರತಕ್ಕ ನೀರಿನ ದಾರಿಗಳನ್ನು ಬದಲಾಯಿಸಕೂಡದು ಅಥವಾ ಟ್ರಾಮುವೆ ಲೈನಿನ ಜೊತೆಯಲ್ಲಿರುವ ದಾರಿಮೇಲೆ ಇರತಕ್ಕ ಕೆರೆಗಳು ಮತ್ತು ಕುಂಟೆಗಳಿಗೆ ಬರತಕ್ಕ ನೀರು ಕಾಲ್ವೆಯನ್ನು ಮುಚ್ಚಲು ಮತ್ತು ಬದಲಾಯಿಸಕೂಡದು.

V. ಸರಕಾರದ ಜಂಗಲಿನ ಜಮೀನು. — ಈ ಜಮೀನುಗಳು ಬೇಕಾಗಿದ್ದಲ್ಲಿ ಈ ಕೆಳಗೆ ನಮೂದು ಮಾಡುವ ಷರತ್ತುಗಳ ಅನುಸರಿಸಿ ಪ್ರಮೋಟರ ಪಡಿಬಹುದು.

(a) ಜಮೀನಿನ ಖರೀದಿಯು ತರಿ 1ಕ್ಕೆ 150 ರೂಪಾಯಿಗಳು ಮತ್ತು

(b) ಡಿಸ್ಟ್ರಿಕ್ಟು ಫಾರೆಸ್ಟ್ ಆಫಸರು ಕಟ್ಟಿವ ಜಮೀನಿನಲ್ಲಿರತಕ್ಕ ಫಾರೆಸ್ಟ್ ಬೆಳೆಯ ಕಿಮ್ಮತು ಪ್ರಮೋಟರಿಗೆ ಈ ಜಮೀನು ಬೇಕಾಗಿದ್ದಲ್ಲಿ ಫಾರೆಸ್ಟು ಬೆಳೆಯ ಕಿಮ್ಮತಿನ ದರವನ್ನು ಕೊಡಬೇಕೆಂದು ಡಿಸ್ಟ್ರಿಕ್ಟ್ ಫಾರಸ್ಟು ಆಫಿಸರನ್ನು ಕೇಳಲ್ಪಡುತ್ತ.

ಟ್ರಾಮುವೆ ಪ್ರಾರಂಭ ಪೂರ್ತಿ ಮತ್ತು ಪಿಡತಕ್ಕದ್ದು.

16. ಟ್ರಾಮುವೆ ಹಾಕುವದಕ್ಕೆ ಮೈಸೂರು ಮಹಾರಾಜಾ ಸರ್ಕಾರದವರು ಆನ್ಯೆರು ಹುಕುಂ ಕೊಟ್ಟ ತಾರೀಖು ಲಾಗಾಯಿತು 2 ತಿಂಗಳು ವಳಗೆ ಟ್ರಾಮ್ವೇ ಕೆಲಸಕ್ಕೆ ಪ್ರಾರಂಭಿಸಬೇಕು. ಮತ್ತು ಎರಡು ವರುಷದ ವಳಗೆ ಪೂರ್ತಿಮಾಡಿ ಬಿಡತಕ್ಕದ್ದು.

ಗೇಜಿನ ನಿಬಂಧನೆ ಮತ್ತು ಕ್ಯಾರೇಜಗಳ ಅಡಳತೆ.

17. ಟ್ರಾಮುವೆಯನ್ನು 2 ಅಡಿ ಗೇಜಿನಮೇಲೆ ಕಟ್ಟತಕ್ಕದ್ದು. ಮತ್ತು ಕಂಬಿ ವಳಗಿನ ದಡದಿಂದ ಆಚೆ ಪ್ರತಿ ಭಾಗದಲ್ಲಿ 2 ಅಡಿ ಗಿಂತ ಹೆಚ್ಚಾಗಿ ಹೊರಗಡೆಗೆ ಟ್ರಾಮುವೆ ಮೇಲೆ ಉಪಯೋಗಿಸತಕ್ಕಂಥ ಕ್ಯಾರೇಜ್ ಟ್ರಕ್ ಅಥವಾ ವ್ಯಾಗನ್ ಹಾದುಕೊಂಡು ಇರಕೂಡದು.

ಉಪಯೋಗಿಸಬೇಕಾದ ಕಂಬಿ ವಿವರ.

18. ಟ್ರಾಮುವೆಗೆ ಉಪಯೋಗಿಸಬೇಕಾದ ರೈಲ್ ಕಂಬಿಗಳು ಇದರಲ್ಲಿ ಮುಂದೆ ತಿಳಿಸುವ ಮಾದ್ರಿ ಶಿವಾಯಿ ಸ್ಲೀಪರಗಳ ಮೇಲೆ ಹಾಕಲ್ಪಟ್ಟ ಚಪ್ಪಡಿಯಾದ ತಳವುಳ್ಳ ಉಕ್ಕಿನ ಕಂಬಿಗಳಾಗಿರಬೇಕು ಮತ್ತು ಅವು ರಸ್ತೆಗೆ ಉತ್ತರವಾಗಿರಬೇಕು. ಆದರೆ ಶಿವಮೊಗ್ಗ ಟವನ್ ಮುಖಾಂತ್ರ ಹಾಯುವ ಲೈನ್ ಭಾಗದಲ್ಲಿ ಯಾ ಹಳ್ಳಿಗಳ ಮುಖಾಂತ್ರ ಯಾ ರಸ್ತೆ ಅಧಿಕಾರಿಗಳು ಅಪೇಕ್ಷಿಸುವ ಪ್ರಕಾರ ಸೇತುವೆಗಳ ಮೇಲೂ ಗೇಟು ಕಟ್ಟಿ ತೀರಿಸಿದ ಕಂಬಿಗಳನ್ನು ಉಪಯೋಗಮಾಡಿ ಹಾಕಿಸಿ ರಸ್ತೆ ಮಟ್ಟಕ್ಕೆ ಸಮವಾಗಿ ಮಾಡತಕ್ಕದ್ದು.

ಕ್ರಾಸಿಂಗ್ಸಗಳು ವಗೈರೆ ಮಾಡತಕ್ಕ ವಿಷಯದಲ್ಲಿ ಪ್ರಮೋಟರಗಳು ಸರಕಾರದ ಹುಕುಂಗಳನ್ನು ಅಂಗೀಕರಿಸತಕ್ಕದ್ದು.

19. ಮಹಾರಾಜಾ ಸರಕಾರದ ಮಂಜೂರು ಸಹ ಪ್ರಮೋಟರಗಳು ಆಗಾಗ್ಯೆ ಈ ಹುಕುಂನಲ್ಲಿ ನಮೂದಿಸಿದ ಮತ್ತು ಈ ಹುಕುಂನಿಂದ ಅಧಿಕಾರ ಕೊಡಲ್ಪಟ್ಟ ಟ್ರಾಮುವೆ ಕೆಲಸವನ್ನ ಸರಿಯಾಗಿ ನಡಿಸುವದಕ್ಕು ಅಥವಾ ಯಾವ ಸ್ಟೇಷನ್ ಕಟ್ಟಡ ಪ್ರಮೋಟರ ಕೆಲಸವನ್ನು ಮಾಡುವದಕ್ಕೆ ಅನುಕೂಲತೆ ಬಗ್ಯೆ ಬೇಕಾಗುವ ಎಲ್ಲಾ ಕ್ರಾಸಿಂಗಗಳು ತಿರಗಾಡುವ ದಾರಿಗಳು ಜಂಕಷನ್‌ಗಳು ಮಾಡಬಹುದು.

ಆಟಂಕಪಡಿಸಿದ ಸ್ಥಳದಲ್ಲಿ ಹಂಗಾಮಿಯಾಗಿ ಟ್ರಾಮುವೆ ಹಾಕುವ ವಿಷಯ.

20. ಟ್ರಾಮುವೆ ಬಾಜೂದಲ್ಲಿರುವ ರಸ್ತೆ ಮೇಲಭಾಗಕ್ಕೆ ಅಥವಾ ಮಂಣಿಗೆ ಯಾವದಾದರೂ ಒಂದು ಕೆಲಸ ಮಾಡೋಣದರಲ್ಲಿ ಅಪಾಯದಿಂದ ಯಾ ಪ್ರವಾಹದಿಂದ ತೊಂದರೆ ಉಂಟಾದ ಪಕ್ಷಕ್ಕೆ ಮೈಸೂರು ಮಹಾರಾಜಾ ಸರಕಾರದವರು ಹಂಗಾಮಿಯಾಗಿ ಟ್ರಾಮುವೆಯನ್ನು ಅದರ ಯಾವ ಭಾಗವನ್ನಾದರೂ ತೆಗದು ಯಾ ಟ್ರಾಮುವೆ ನಿರುಪಯೋಗಿಸಬೇಕೆಂದು ಅಭಿಪ್ರಾಯ ಪಡುವ ಪಕ್ಷಕ್ಕೆ ಪ್ರಮೋಟರಗಳು ಮೈಸೂರು ಮಹಾರಾಜಾ ಸರಕಾರದವರು ಆಗಾಗ್ಯೆ ಮಾಡುವ ಷರತ್ತುಗಳು ನಿಬಂಧನೆಗಳಿಗೆ ಅನುಗುಣವಾಗಿ ಕೆಲಸಕ್ಕೆ ಬೇಕಾಗುವಷ್ಟು ಕಾಲ ತೆಗದುಹಾಕಲ್ಪಟ್ಟ ಯಾ ನಿರುಪಯೋಗಿಸಲ್ಪಟ್ಟ ಟ್ರಾಮುವೆಗೆ ಬದಲಾಗಿ ಹಂಗಾಮಿಯಾಗಿ ಟ್ರಾಮುವೆಯನ್ನು ಕಟ್ಟಿ ಉಪಯೋಗಿಸತಕ್ಕದ್ದು.

ಚಲನಾಶಕ್ತಿ.

ಚಲನಾಶಕ್ತಿ ಉಪಯೋಗ.

21. ಟ್ರಾಮುವೆ ಮೇಲೆ ಉಪಯೋಗಿಸತಕ್ಕ ವ್ಯಾಗನ್‌ಗಳು ಬ್ರೇಕ್‌ವ್ಯಾನ್‌ಗಳು ಸ್ಟೀಮು ಪವರಿನಿಂದ ನಡಿಸತಕ್ಕದ್ದು.

ನಿಯಮಿಸಲ್ಪಟ್ಟ ವೇಗ.

22. ವೇಗವು ಘಂಟೆ 1ಕ್ಕೆ ಹತ್ತು ಮೈಲಿಗಳಿಗಿಂತ ಹೆಚ್ಚಾಗಿ ಅಥವಾ ಮೈಸೂರು ಮಹಾರಾಜರ ಸರಕಾರದವರು ಆಗಾಗ್ಯೆ ನೇಮಿಸಲ್ಪಡುವ ವೇಗಕ್ಕಿಂತ ಹೆಚ್ಚಾಗಕೂಡದು. ಮತ್ತು ಯಾವದೊಂದು ಗಾಡಿಗಳು ಕಂಬಿಗಳನ್ನ ಬದಲಾಯಿಸುವಕಡೆ ವೇಗವು ಘಂಟೆಗೆ 5 ಮೈಲಿಗಳಿಗಿಂತ ಜಾಸ್ತಿಯಾಗಿರಕೂಡದು.

ಟ್ರಾಮುವೆ ಕಾಪಾಡುವಿಕೆ.

ಟ್ರಾಮುವೆಯನ್ನು ಕಾಪಾಡುವದಕ್ಕೂ ರಿಪೇರಿ ಮಾಡುವದಕ್ಕೂ ಪ್ರಮೋಟರ ಜವಾಬುದಾರಿ.

23. ಮೇಲೆ ಹೇಳಿದ ಮೈಸೂರು ಮಹಾರಾಜರ ಸರಕಾರಕ್ಕೆ ತೃಪ್ತಿಕರವಾಗಿಯು ಮತ್ತು ಸಾಧಾರಣದ ಆಮದುರಫ್ತಿಗು ಕಂಬಿಗಳಿಗೂ ಟ್ರಾಮುವೆಯ ಕೆಳಗೆ ಇರತಕ್ಕ ಕಟ್ಟಡಗಳಿಗೂ ಅಪಾಯ ಯಾ ತೊಂದರೆ ಇಲ್ಲದಂತೆ ಪ್ರಮೋಟರಗಳು ಯಾವಾಗಲು ರಿಪೇರಿಯಿಂದ ಒಳ್ಳೆ ಸ್ಥಿತಿಯಲ್ಲಿ ಇಟ್ಟುಕೊಂಡು ಕಾಪಾಡತಕ್ಕದ್ದು.

ರಸ್ತೆಯ ಒಂದು ಭಾಗ.

24. ಪ್ರಮೋಟರಗಳು ಮೈಸೂರು ಮಹಾರಾಜರ ಸರಕಾರಕ್ಕೆ ತೃಪ್ತಿಯಾಗಿ ರಸ್ತೆಯ ಉಭಯಪಾರ್ಶ್ವದ ಚರಂಡಿಗಳ ನೀರು ಹಾಯುವಿಕೆ ಮತ್ತು ಆಚೆ ಇರುವ ಕಂಬಿಗೆ 18 ಅಂಗುಲಗಳ ಧೂರದಲ್ಲಿ ಹಾಕಿ ಇರುವ ಕಂಬಿಗಳ ರಸ್ತೆಯ ಭಾಗದ ಮೇಲೆ ಅಥವಾ ಕಟ್ಟೆಯ ಕೊನೆಯ ಯಾ ಸಂಸ್ಥಾನದ ರಸ್ತೆ ಚರಂಡಿಯಿಂದಾಗಲಿ ಹರಡಿಕೊಂಡು ಇರುವ ಸಂಸ್ಥಾನದ ರಸ್ತೆ ಭಾಗವನ್ನು ಆಟಂಕಪಡಿಸದ ಹಾಗೆ ರಿಪೇರಿ ಮಾಡಿಕೊಂಡು ಒಳ್ಳೇ ಸ್ಥಿತಿಯಲ್ಲಿ ಕಾಪಾಡತಕ್ಕದ್ದು. ಈ ಭಾಗದ ರಸ್ತೆಯನ್ನು ಪ್ರಮೋಟರಗಳು ತಮ್ಮ ಸ್ವಂತಲಾಗವಡಿನಿಂದ ಸರಿಮಾಡಿಕೊಳ್ಳತಕ್ಕದ್ದು. ಅವರು ತಮ್ಮ ಸ್ವಂತಲಾಗವಡಿನಿಂದಲೇ ಮುಂದೆ ಆಗಬೇಕಾಗುವ ಬದಲಾವಣೆಗಳಿಗೆ ಅನುಕೂಲವಾಗಿ ರಸ್ತೆ ಈ ಭಾಗದ ಮತ್ತು ಟ್ರಾಮುವೆ ಸ್ಥಿತಿ ಮತ್ತು ಮಟ್ಟವನ್ನು ಬದಲಾಯಿಸತಕ್ಕದ್ದು ಮತ್ತು ಕೂಡ ರಿಪೇರಿಯಿಂದ ಚನ್ನಾಗಿ ಮಾಡುವದಲ್ಲದೆ ಮೇಲೆ ಹೇಳಿದ ಚೀಫ್ ಇಂಜನಿಯರ್ ಸಾಹೇಬರವರಿಗೆ ತೃಪ್ತಿಕರವಾಗಿ ಟ್ರಾಮುವೆಗೆ ಪ್ರಮೋಟರಗಳ ತಪ್ಪಿತದಿಂದ ರಸ್ತೆಯುವ ಭಾಗಕ್ಕೆ ಆಗಲಿ ನಷ್ಟ ಉಂಟಾಗುವ ಪಕ್ಷಕ್ಕೆ ಅದನ್ನ ಸರಿಮಾಡಿಸತಕ್ಕದ್ದು. ಹಾಲಿ ಹಾಕಲ್ಪಟ್ಟ ಕಂಬಿಗಳ ರಸ್ತೆಯ ಬಾಜೂದಲ್ಲಿರುವ ಚರಂಡಿಯು ಅಥವಾ ಇತಃಪರ ಸರಕಾರದ ಖರ್ಚಿನಿಂದ ಕಟ್ಟುವಂಥಾದ್ದನ್ನು ಕೂಡ ಪ್ರಮೋಟರಗಳ ಸ್ವಂತಲಾಗವಡಿನಿಂದ ಒಳ್ಳೇಸ್ಥಿತಿಯಲ್ಲಿ ಇಟ್ಟುಕೊಂಡು ಕಾಪಾಡತಕ್ಕದ್ದು.

ಅಗೆಯಲ್ಪಟ್ಟ ಪದಾರ್ಥಗಳನ್ನ ಪ್ರಮೋಟರ ಉಪಯೋಗಿಸಬೇಕಾದ್ದು.

25. ಟ್ರಾಮುವೆ ಸಂರಕ್ಷಣೆಯಲ್ಲಿ ಯಾ ಕಟ್ಟುವದರಲ್ಲಿ ಸಂಸ್ಥಾನದ ರಸ್ತೆಯಿಂದ ಅಗೆಯಲ್ಪಟ್ಟ ರಸ್ತೆ ಜಲ್ಲಿ ವಗೈರೆಯನ್ನ ಪ್ರಮೋಟರಗಳು ಸದರಿ ರಸ್ತೆಯನ್ನು ಸರಿಮಾಡುವದರಲ್ಲಿ ಯಾಗಲಿ ಈ ಹುಕುಂನಿಂದ ಪೂರೈಸಬೇಕಾದ ಕೆಲಸದಲ್ಲಿ ಯಾಗಲಿ ಉಪಯೋಗಿಸಬಹುದು.

ಪ್ರಮೋಟರಗಳು ಟ್ರಾಮುವೆಯಲ್ಲಿಯು ಅದರಲ್ಲಿ ಉಪಯೋಗಿಸುವ ಬಂಡಿಗಳಲ್ಲಿಯೂ ಅಂಥಾ ಬಂಡಿಗಳ ಅಭಿವೃದ್ಧಿ ಬಗ್ಯೆ ಮೈಸೂರು ಮಹಾರಾಜ ಸರಕಾರದವರು ಆಗಾಗ್ಯೆ ಅವಶ್ಯಕವೆಂದು ಯೋಚಿಸುವ ಯಾ ಜನಗಳ ಕ್ಷೇಮಕ್ಕಾಗಿ ಮತ್ತು ಅನುಕೂಲಕ್ಕಾಗಿ ಅಪೇಕ್ಷಿಸುವ ಹಾಗೆ ಮಾಡತಕ್ಕದ್ದು.

ಟ್ರಾಮುವೆಯ ಆಮದರಪ್ತು.

ಪ್ರಮೋಟರಗಳು ಸಾಗಿಸತಕ್ಕ ಸಾಮಾನುಗಳು.

26. ಟ್ರಾಮುವೆಯ ಮೇಲೆ ಉಪಯೋಗಕ್ಕೆ ಬೇಕಾದ ಸಾಮಾನು ಸರಕು, ಸವುದೆ, ಲೋಹಗಳು ಮತ್ತು ಕಂಪೆನಿಯ ಪಾರಸಲ್ಲಗಳು ಸಾಗಿಸಬಹುದು ಇವುಗಳನ್ನು ಪ್ರಮೋಟರಗಳು ಸಂದರ್ಭಾನುಸಾರ ಹಾಗೆ ಸಾಗಿಸುವದಕ್ಕೆ ತಿರಸ್ಕರಿಸಬಹುದು.

ಅಪಾಯಕರವಾದ ಸಾಮಾನುಗಳು.

27. ಮೈಸೂರು ಟ್ರಾಮುವೆ ರೆಗ್ಯುಲೇಷನ 16ನೆ ಸೆಕ್ಷನನಲ್ಲಿ ಅಪಾಯಕರವೆಂದು ಹೇಳಿರುವ ಸಾಮಾನುಗಳನ್ನ ಈ ಕೆಳಗೆ ನಮೂದಿಸಿರುತ್ತೆ.

- ಕಾರಬೋಲಿಕ ಆಸಿಡ್.
- ಕೆರೋಸಿನ್ ಎಣ್ಣೆ.
- ಪಾರಫಿನ್.
- ರಂಗೂನೆಯಣ್ಣೆ.
- ಮರದಯಣ್ಣೆ.
- ನೈಟ್ರೇಟ್ ಆಫ್ ಅಮೇರ್ನ.
- ಸಲ್ಫ್ಯೂರ್ಷ ಅಮಾನಿಯ ಮದ್ದು.
- ಪಟಾಸು.
- ವಿಧವಿಧವಾದ ಬಾಣಗಳು.
- ಉರಿಯತಕ್ಕ ಸಾಮಾನುಗಳು.
- ಕ್ಲೋರೇಟಮಿಕ್ಸ್ಚರ್.
- ಡಿಟೋ ನೇಟರ್ಸ್.
- ಬಾಣದ ಸಾಮಾನುಗಳು.
- ಬಾಣಗಳು.
- ಕರಗುವ ಸಾಮಾನು.
- ಬಂದೂಕದ ಹತ್ತಿ.
- ನೀಲಿಮದ್ದು.
- ಆಸಿಡ್.
- ಲೋಹದ ಆಸಿಡ್.
- ಬಂದೂಕದ ಹತ್ತಿಪುಡಿ.
- ಲೂಸಿಫರ ಬೆಂಕಿಪೆಟ್ಟಿಗೆಗಳು.
- ನೆಟ್ರೆಡ್ ಬಂದೂಕದ ಹತ್ತಿ.
- ಫಾಸಫರಸ್.
- ಬಂದೂಕದ ಮದ್ದು.
- ಯುದ್ಧದ ಚತ್ರಿಗಳು.
- ಇತರ ವಿಧವಾದ ಎಲ್ಲಾ ಮದ್ದುಗಳು
- ತುಪಾಕಿ ಮದ್ದು.
- ಅಕ್ವಾಫಾರಟಿಸ್.
- ಗಂಧಕದ ಸಾಮಾನು.
- ಪ್ಯೂರೀಕ ಆಸಿಡ್.
- ಪೂಸಲಯಣ್ಣೆ.
- ನಾಪ್ತಲೈನ್.
- ಬಗೆಬಗೆ ತೈಲಗಳು.
- ನವಸಾಗ್ರ.
- ಪರಕ್ಲೋರೈಡ್ ಆಫ್ ಐರನ್.
- ಅಮೂರ್ಫಸ ಫಾಸಫರಸ್.
- ತೋಟಾಗಳು.
- ಬೆಂಕಿಪೆಟ್ಟಿಗಳು.
- ಹತ್ತಿಪುಡಿ.
- ಸುರಂಗದ ಮದ್ದು.
- ಮಂಜುಸಿಗನಲ್ಲಗಳು.
- ಬ್ರೋಮೈನ್.
- ಕ್ಲೋರೋಫಾರಂ.
- ಮದ್ದುಹಾರಿಸುವ ಕೊಳವೆ.
- ವಸುವಿಯಸ.
- ಸುರಂಗದ ಮದ್ದುಗಳ ಲೋಹಗಳು.
- ಲಿತೊಫ್ರಾಕ್ಟರ್.
- ಮೆಲಿನೈಟ್.
- ನೈಟ್ರೋಗ್ಲಿಸಿರೈನ್.

ಎಚ್ಚರಿಸುವಿಕೆಯ ಗುರ್ತುಗಳನ್ನು ಏರ್ಪಡಿಸುವದು.

28. ಟ್ರಾಮುವೆ ಮೇಲೆ ಟ್ರೈನ್ ಅಥವಾ ಎಂಜಿನಿನ ಪ್ರತಿ ಒಬ್ಬ ನಡಿಸುವವನು ಕೆಲಸದ ಮೇಲೆ ಇರುವಾಗ ಮುಖ್ಯವಾದ ಘಂಟೆಯನ್ನು, ಸಿಳ್ಳನ್ನು ಅಥವಾ ಅವಶ್ಯಕವಾದ ಎಚ್ಚರಿಕೆ ಬಗ್ಯೆ ಶಬ್ದ ಮಾಡುವದಕ್ಕೋಸ್ಕರ ಇತರ ಯಾವ ಉಪಕರಣಗಳನ್ನಾದರೂ ಇಟ್ಟುಕೊಂಡು ಇರಬೇಕು.

ಭಂಡಿಗಳ ನಮೂನೆಗಳನ್ನ ಸರಕಾರದವರು ಮಂಜೂರು ಮಾಡತಕ್ಕದ್ದು.

29. ಟ್ರಾಮುವೆ ಮೇಲೆ ಉಪಯೋಗಿಸತಕ್ಕ ಪ್ರತಿ ಒಂದು ಟ್ರಕ್ಕು ಅಥವಾ ವ್ಯಾಗನ್ನು ಮೈಸೂರು ಮಹಾರಾಜಾ ಸರಕಾರ ಮಂಜೂರು ಮಾಡಿದ ನಮೂನೆಯಂತೆ ಕಟ್ಟತಕ್ಕದ್ದು.

ಬ್ರೇಕ ಉಪಯೋಗಿಸತಕ್ಕದ್ದು.

30. ಟ್ರಾಮುವೆ ಮೇಲೆ ಹೋಡತಕ್ಕ ಪ್ರತಿ ಒಂದು ಟ್ರೈನಿಗೆ ಅದರ ಗಾರ್ಡು ಉಪಯೋಗಕ್ಕಾಗಿ ಆತನ ಸ್ವಾಧೀನದಲ್ಲಿ ಒಂದು ಒಳ್ಳೇ ಬ್ರೇಕ ಇರತಕ್ಕದ್ದು.

ಚೀಫ್ ಇಂಜನೀಯರ ಸಾಹೇಬರವರು ಭಂಡಿಗಳ ಉಪಯೋಗವನ್ನು ಆಟಂಕ ಪಡಿಸಬಹುದು.

31. ಚೀಫ್ ಇಂಜನೀಯರ ಸಾಹೇಬರವರು ಟ್ರಾಮುವೆ ಮೇಲೆ ನಡಿಸುವ ಯಾವ ಭಂಡಿಯನ್ನಾದರೂ ಅಪಾಯವೆಂದು ತಮಗೆ ಅಭಿಪ್ರಾಯವಿದ್ದಲ್ಲಿ ಅಂಥಾ ಭಂಡಿಯನ್ನು ಉಪಯೋಗಿಸಲು ಆಟಂಕಪಡಿಸಬಹುದು. ಪ್ರತಿ ಒಂದು ಅಂಥ ಆಟಂಕವೂ ಸದರಿ ಅಭಿಪ್ರಾಯವು ತಪ್ಪು ಎಂದು ಕಾರಣ ತೋರಿಸುವ ನಿಯಂತ್ರ ಅಥವಾ ಮೈಸೂರು ಮಹಾರಾಜಾ ಸರ್ಕಾರದವರು ಬಿಡ್ಪುಪಾಟು ಮಾಡುವವರೆಗೂ ಜಾರಿಯಲ್ಲಿ ಇಡತಕ್ಕದ್ದು ಮತ್ತು ಪ್ರಮೋಟರಗಳು ಅಂಥ ಯಾವದೊಂದು ಭಂಡಿ ವಿಷಯಕ್ಕಾಗಲಿ ಮೈಸೂರು ಮಹಾರಾಜಾ ಸರಕಾರದಿಂದ ಆಗುವ ಯಾವ ಹುಕ್ಕುಮಿಗೂ ಬದ್ಧರಾಗಿರತಕ್ಕದ್ದು.

ಚಿಲ್ಲರೆ.

ಪರಾಧೀನವಾದ ಮೇಲೆ ಹದ್ದು.

32. ಪ್ರಮೋಟರುಗಳು ಮಾರುವಿಕೆಯಿಂದಾಗಲಿ ಪತ್ತೆಯಿಂದಾಗಲಿ ವಟ್ಟೆಯಿಂದಾಗಲಿ ಬದಲಿಗಾಗಲಿ ಅಥವಾ ಇನ್ನಾವ ವಿಧವಾಗಿ ಆದರೂ ಮೈಸೂರು ಮಹಾರಾಜರ ಸರಕಾರ ಮಂಜೂರು ಮಾಡುವ ಷರತ್ತುಗಳ ಮೇಲೆ ಮತ್ತು ಮುಂಚಿತವಾಗಿ ಮಂಜೂರು ಪಡಿಯದೇನೆ ಈ ಟ್ರಾಮುವೆ ಕೆಲಸವನ್ನು ಅಥವಾ ಯಾವ ಭಾಗವನ್ನಾಗಲಿ ಅನ್ಯಾಕ್ರಾಂತ ಮಾಡಕೂಡದು.

ಮುನಿಸಿಪಾಲಿಟಿಯವರು ಕಂದಾಯ ಹಾಕತಕ್ಕ ವಿಷಯದಲ್ಲಿ ಅನುಕೂಲ ಪಡಿಸತಕ್ಕದ್ದು.

33. ಟ್ರಾಮುವೆ ಮೇಲೆ ಸಾಗಿಸುವ ಸಾಮಾನುಗಳ ಮೇಲೆ ಹಾಕತಕ್ಕ ಕಂದಾಯಗಳ ಬಗ್ಯೂ ಮತ್ತು ಆಕ್ಟ್ರಾಯಿ ವಸೂಲಿ ಬಗ್ಯೂ ನ್ಯಾಯವಾದ ಅನುಕೂಲತೆಯನ್ನು ಶಿವಮೊಗ್ಗ ಮುನಿಸಿಪಾಲಿಟಿಯವರಿಗೆ ಕೊಡತಕ್ಕದ್ದು.

ರಸ್ತೆ ಉಪಯೋಗಕ್ಕಾಗಿ ಸರಕಾರಕ್ಕೆ ಕೊಡಬೇಕಾದ ಕಂದಾಯ.

34. ಟ್ರಾಮುವೆ ಮೇಲೆ ಸಾಗಿಸಲ್ಪಟ್ಟ ಭರ್ತಿಯಾದ ಒಂದು ಮ್ಯಾಂಗನೀಸ ಅದಿರಿನ ಟನ್ನಿಗೆ ಆರು ಆಣೆ ಮೇರೆ ಸರಕಾರಕ್ಕೆ ಪ್ರಮೋಟರಗಳು ತೆರಿಗೆ ಕೊಡತಕ್ಕದ್ದು.

ಶಿವಮೊಗ್ಗ ಮುನಿಸಿಪಾಲಿಟಿಯವರಿಗೆ ಕೊಡಬೇಕಾದ ತೆರಿಗೆ.

35. ಟ್ರಾಮುವೆ ಮಾರ್ಗವಾಗಿ ಸಾಗಿಸಲ್ಪಟ್ಟ ಮ್ಯಾಂಗನೀಸ ಅಥವಾ ಇತರ ಅದರ ಟನ್ 1ಕ್ಕೆ ಒಂದಾಣೆಯಂತೆ ವಸೂಲ ಮಾಡತಕ್ಕದ್ದು ಮತ್ತು ಮುನಿಸಿಪಲ್ ಬೋರಡಿಗೆ ಟ್ರಾಮುವೆ ಮಾರ್ಗವಾಗಿ ಪ್ರತಿ ತಿಂಗಳಲ್ಲಿಯೂ ತೆಗೆದುಕೊಂಡು ಹೋಗಲ್ಪಡುವದರ ಸಾಮಾನಿನ ಒಂದು ಸ್ಟೇಟ್‌ಮೆಂಟ್ ತಯಾರ್ಮಾಡಿ ಕಳುಹಿಸತಕ್ಕದ್ದು.

ಇನ್ಸ್ಪೆಕ್ಷನ್‌ಗೆ ಅರ್ಹವಾದ ಎಲ್ಲಾ ಕೆಲಸಗಳು.

36. ಟ್ರಾಮುವೆಯು ಇದಕ್ಕೆ ಸೇರಿದ ಕೆಲಸಗಳು ಮತ್ತು ಸಾಮಾನು ಸರ್ವಕಾಲದಲ್ಲೂ ಮೈಸೂರು ಮಹಾರಾಜರ ಸರಕಾರದಿಂದ ನೇಮಿಸಲ್ಪಡುವ ಮನುಷ್ಯ ಅಥವಾ ಮನುಷ್ಯರುಗಳಿಂದ ಇನ್ಸ್ಪೆಕ್ಷನ್ ಮತ್ತು ಅಜಮಾಯಿಷಿ ಬಗ್ಯೆ ಇಡತಕ್ಕದ್ದು. ಮತ್ತು ಪ್ರಮೋಟರಗಳು ಅಂಥ ಇನ್ಸ್ಪೆಕ್ಷನ್ ಅಥವಾ ಅಜಮಾಯಿಷಿಗೆ ಬರತಕ್ಕ ಮನುಷ್ಯನಿಗೆ ಬೇಕಾದ ಅನುಕೂಲತೆಯನ್ನು ಕೊಡತಕ್ಕದ್ದು.

ಟ್ರಾಮುವೆಯನ್ನು ಮುಚ್ಚುವದು ಮತ್ತು ಸರಕಾರದ ಹುಕ್ಕುಮಿನಿಂದ ರೋಲಿಂಗ್ ಸ್ಟಾಕನ್ನು ಉಪಯೋಗಪಡಿಸುವದು.

37. ಟ್ರಾಮುವೆ ಅಥವಾ ಯಾವ ಭಾಗವನ್ನಾದರು ಇನ್ಸ್ಪೆಕ್ಷನ್ ಆದಮೇಲೆ ಉಪಯೋಗಿಸುವ ಅದಕ್ಕೆ ಸೇರಿದ ಸಾಮಾನನ್ನು ಇನ್ಸ್ಪೆಕ್ಷನ್ ಆದ ತರುವಾಯ 36ನೆ ಪ್ರಕರಣ ಪ್ರಕಾರ ಇನ್ಸ್ಪೆಕ್ಷನ್ ಮಾಡುವ ಆಫಿಸರು ಮೈಸೂರು ಮಹಾರಾಜರ ಸರಕಾರಕ್ಕೆ ಮೇಲೆ ಹೇಳಿದ ಟ್ರಾಮುವೆ ಅಥವಾ ಭಾಗವು ಮತ್ತು ರೋಲಿಂಗ್ ಸ್ಟಾಕಿನ ಉಪಯೋಗವು ಅಪಾಯಕರವಾದ್ದೆಂದು ತಮಗೆ ಅಭಿಪ್ರಾಯ ಎಂದು ಸರಕಾರಕ್ಕೆ ತಿಳಿಸಿದನಂತರ ಮೈಸೂರು ಮಹಾರಾಜಾ ಸರಕಾರದವರು ಅಂಥ ಟ್ರಾಮುವೆಯನ್ನು ಅಥವಾ ಅದರ ಭಾಗವನ್ನು ಅಪ್ಪುದರಪ್ಪಿಗೆ ಮುಚ್ಚಬೇಕೆಂದೂನು ಅಥವಾ ಸಂದರ್ಭಾನುಸಾರ ಟ್ರಾಮುವೆಗೆ ಸೇರಿದ ಸಾಮಾನನ್ನು ಉಪಯೋಗಿಸಕೂಡದೆಂದು ಹುಕ್ಕುಂ ಮಾಡಬಹುದು.

ಪುನಹ ಮಂಜೂರಾತಿ ಪಡಿಯುವ ವರಿಗೂ ಟ್ರಾಮುವೆಯನ್ನು ತೆಗಿಯಕೂಡದು.

38. 37ನೆ ಪ್ರಕರಣ ಪ್ರಕಾರ ಟ್ರಾಮುವೆ ಅಥವಾ ಅದರ ಭಾಗವನ್ನು ಮುಚ್ಚಿದ ನಂತರ ಪುನಹ 1906ನೆ ಇಸವಿ ಮೈಸೂರು ಟ್ರಾಮುವೆ ರಗ್ಯುಲೇಷನ್ 1ನೆ ನಂಬರು ಸೆಕ್ಷನ್ ಪ್ರಕಾರ ಸರಕಾರದ ಮಂಜೂರಿನಿಂದ ಇನ್ಸ್ಪೆಕ್ಷನ್ ಆಗುವ ಪರಿಯಂತರವು ಟ್ರಾಮುವೆಯನ್ನು ನಡಿಸಕೂಡದು.

ಅಂಥ ಹುಕುಂ ಆದನಂತರ ಪುನಹ ಮಂಜೂರು ಪಡಿಯುವ ವರಿಗೂ ರೋಲಿಂಗ್ ಸ್ಟಾಕನ್ನು ಉಪಯೋಗಿಸಕೂಡದು.

37. 37ನೆ ಪ್ರಕರಣದ ಪ್ರಕಾರ ಮೈಸೂರು ಮಹಾರಾಜಾ ಸರಕಾರದವರು ರೋಲಿಂಗ್ ಸ್ಟಾಕನ್ನು ಉಪಯೋಗಿಸಕೂಡದೆಂದು ಹುಕುಂ ಮಾಡಿದ ಮೇಲೆ ಸದರೀ 'ರೋಲಿಂಗ್ ಸ್ಟಾಕನ್ನು 36ನೆ ಪ್ರಕರಣದಲ್ಲಿ ನಮೂದಿರುವ ಆಫಿಸರು ಅದರ ಉಪಯೋಗ ಲಾಯಖು ಎಂದು ರಿಪೋರ್ಟ ಮಾಡುವ ವರಿಗೂ ಮತ್ತು ಮೈಸೂರು ಮಹಾರಾಜಾ ಸರಕಾರ ಅದರ ಉಪಯೋಗವನ್ನು ಮಂಜೂರು ಮಾಡುವ ವರಿಗೂ ಉಪಯೋಗಿಸಕೂಡದು.

ಪ್ರಮೋಟರಗಳು ರೆಗ್ಯುಲೇಷನ ಮೇರಿಗೆ ಕೆಲಸಗಳನ್ನ ಮಾಡದೆ ತಪ್ಪಿದಲ್ಲಿ ಸರಕಾರದವರು ಪ್ರಮೋಟರಗಳ ಸ್ವಂತಲಾಗವಡಿನಿಂದ ಮಾಡಿಸಬಹುದು.

40. 1906ನೆ ಇಸವಿ ಮೈಸೂರು ಟ್ರಾಮುವೆ ರೆಗ್ಯುಲೇಷನ ಪ್ರಕಾರ ಯಾವ ಕೆಲಸವಾದರೂ ಆಗಬೇಕಾದ ಸಂದರ್ಭದಲ್ಲಿ ಅಥವಾ ಈ ಹುಕುಂ ಪ್ರಕಾರ ಪ್ರಮೋಟರುಗಳಿಂದ ಆಗಬೇಕಾದ ಕೆಲಸವು ಅವರುಗಳು ಮಾಡದೆ ಇದ್ದ ಪಕ್ಷಕ್ಕೆ ಮೈಸೂರು ಮಹಾರಾಜಾ ಸರಕಾರ ಪ್ರಮೋಟರುಗಳಿಗೆ ನೋಟಿಸ ಮೂಲಕ ನ್ಯಾಯವಾದ ವಾಯಿದೆ ಕಾಲದವಳಗೆ ಅಂಥಾ ಕೆಲಸವನ್ನು ಮಾಡಬೇಕೆಂದು ತಿಳಿಸಬಹುದು. ಅಂಥಾ ವಾಯಿದೆ ಒಳಗಾಗಿ ನೋಟಿಸ ಪ್ರಕಾರ ಕೆಲಸ ನಡಸದ ಪಕ್ಷದಲ್ಲಿ ಮೈಸೂರು ಮಹಾರಾಜಾ ಸರಕಾರ ಅಂಥ ಕೆಲಸವನ್ನು ಮಾಡಿಸಿ ಅದಕ್ಕೆ ತಗಲುವ ಲಾಗತನ್ನು ಟ್ರಾಮುವೆ ರೆಗ್ಯುಲೇಷನ 36ನೆ ಪ್ರಕರಣ ಪ್ರಕಾರ ಪ್ರಮೋಟರುಗಳಿಂದ ವಸೂಲು ಮಾಡತಕ್ಕದ್ದು.

ಯಾವ ಷರತ್ತು ಅಥವಾ ಹುಕುಂಗಳ ಪ್ರಕಾರ ನಡಿಯದೆ ತಪ್ಪಿದರೆ ಜುರುಮಾನೆ.

41. ಪ್ರಮೋಟರಗಳು ಯಾವದೊಂದು ಷರತ್ತನ್ನು ಅಥವಾ ಈ ಹುಕುಂನಲ್ಲಿ ಆಜ್ಞೆಯನ್ನು ನಡಿಯದೆ ತಪ್ಪಿದಲ್ಲಿ ಅವರು ಪ್ರತಿ ಒಂದು ತಪ್ಪಿತಕ್ಕೂ 200 ರೂಪಾಯಿಗಳ ವರಿಗೂ ಜುರುಮಾನೆ ಹಾಕಬಹುದಾದ ಶಿಕ್ಷೆಗೆ ಗುರಿಮಾಡಲ್ಪಡುತ್ತಾರೆ. ಮತ್ತು ಅಂಥಾ ತಪ್ಪನ್ನು ಪುನಹ ನಡಿಸಿಕೊಂಡು ಬರುವವದಾದರೆ ತಪ್ಪಿತ ಮಾಡಿದ ಮೊದಲುದಿವಸದ ತರುವಾಯ ಪ್ರತಿ ಒಂದು ದಿವಸಕ್ಕೂ 50 ರೂಪಾಯಿಗಳ ವರಿಗೂ ಇನ್ನು ಹೆಚ್ಚು ಜುರುಮಾನೆಗೂ ಗುರಿಮಾಡಲ್ಪಡುತ್ತಾರೆ. ಈ ಪ್ರಕರಣ ಪ್ರಕಾರ ವಸೂಲಾಗುವ ಪ್ರತಿ ಒಂದು ಜುರುಮಾನೆ ಮೊಬಲಗು ಮೈಸೂರು ಮಹಾರಾಜಾ ಸರಕಾರದವರು ಆಗ್ನ್ಯೆ ಮಾಡುವ ಹುಕುಂ ಪ್ರಕಾರ ಉಪಯೋಗಿಸಲ್ಪಡುತ್ತೆ.

ಟ್ರಾಮುವೆಯು ನಡಿಸುವದು ಮನ್ನಾ ಮಾಡುವ ಬಾಬು.

ಪ್ರಮೋಟರ್ರ ಮತ್ತು ಇಜಾರೆದಾರನ ಅಧಿಕಾರವು ನಿಂತುಹೋಗುವಿಕೆ ಅಥವಾ ಟ್ರಾಮುವೆ ನಿಂತುಹೋಗುವಿಕೆ.

42. ಯಾವಾಗಲಾದರು ಈ ಟ್ರಾಮುವೆ ನಡಿಸುವದಕ್ಕೆ ಪ್ರಾರಂಭಿಸಿದ ನಂತರ ಮೈಸೂರು ಮಹಾರಾಜಾ ಸರಕಾರದವರಿಗೆ ಟ್ರಾಮುವೆ ಅಥವಾ ಅದರ ಯಾವ ಭಾಗವಾದರೂ ಅದರ ಕೆಲಸ ನಡಿಸುವಿಕೆಯು ಮಹಾರಾಜಾ ಸರಕಾರಕ್ಕೆ ತೃಪ್ತಿಕರವಾದ ಕಾರಣವಿಲ್ಲದೆ 3 ತಿಂಗಳು ಕಾಲ ಟ್ರಾಮುವೆ ನಡಿಸದೆ ನಿಂತುಹೋಗಿರುವ ಪಕ್ಷಕ್ಕೆ ಮಹಾರಾಜಾ ಸರಕಾರ ಲಾಯಖಾಗಿದೆ ಎಂದು ತೋರಿದ ಪಕ್ಷಕ್ಕೆ ಸರಕಾರದ ಗೆಜೆಟ್ಟನಲ್ಲಿ ಪ್ರಸಿದ್ಧಿಯಿಂದ ಪ್ರಮೋಟರುಗಳ ಮತ್ತು ಇಜಾರೆದಾರನ ನಡಿಸದೆ ನಿಂತುಹೋಗಿರುವ ಟ್ರಾಮುವೆ ಅಥವಾ ಅದರ ಭಾಗದ ವಿಷಯಕ್ಕೆ ಉಂಟಾದ ಯಾವ ಅಧಿಕಾರವು ಪ್ರಸಿದ್ಧಿಯಾದ ತಾರೀಖು ಲಾಗಾಯಿತು ನಿಂತುಹೋಯಿತೆಂದು ತಿಳಿಯುವದು ಅನಂತರ ಮೇಲೆ ಹೇಳಿದ ಅಧಿಕಾರ 1906ನೆ ಇಸವಿ ಮೈಸೂರು ಟ್ರಾಮುವೆ ರೆಗ್ಯುಲೇಷನನಲ್ಲಿ ಹೇಳಿದ ಮೇರಿಗೆ ಸ್ಥಳೀಯ ಅಧಿಕಾರಿಯು ಟ್ರಾಮುವೆಯನ್ನು ಕೊಂಡುಕೊಳ್ಳುವ ಬಗ್ಗೆ ಬೇಕಾಗುವ ಅಧಿಕಾರ ಇರುವದ ಹೊರತಾಯಿ ಮಿಕ್ಕ ಎಲ್ಲಾ ಅಧಿಕಾರವು ನಿಂತುಹೋಗಿರುತ್ತದೆ.

ಹುಕುಂ ಬಮೋಜಿಬ್,

ಬರ್ನಾರ್ಡ ಫಾಸ, ಕ್ಯಾಪ್ಟನ್, ಆರ್. ಇ.,

ಅಂಡರ್ ಸೆಕ್ರಿಟರಿ, ರೈಲ್ವೆ ಬ್ರಾಂಚ್, ಮೈಸೂರು ಗವರ್ನಮೆಂಟ.

ಮೈಸೂರ ಗೆಜೆಟ್.

ನಂ. 42.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 30.

ಬೆಂಗಳೂರು, ಗುರುವಾರ, ಜುಲೈ ತಾ|| 25, ಸನ 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರಕ್ಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲಾ.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 16ನೆ ಜುಲೈ 1907.

ನಂ. 542—ಸ್ಯಾನಿಟರಿ 18-07—2, ಹಾಸನದ ಡಿಸ್ಟ್ರಿಕ್ಟು ಅರಸಿಕೆರೆ ತಾಲ್ಲೂಕಿನ ಮಳೆಕಲ್ಲು ತಿರುಪತಿ ಗ್ರಾಮಕ್ಕೆ ಶ್ರೀ ವೆಂಕಟರಮಣ ಸ್ವಾಮಿ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಜುಲೈ 16ನೆ ತಾರೀಖಿನಿಂದ 1907ನೆ ಇಸವಿ ಜುಲೈ 28ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 10ನೆ ಜುಲೈ 1907.

ನಂ. 280—ಸ್ಯಾನಿಟರಿ (15–06)—17, ಸಮಸ್ತ ಜನರ ತಿಳವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವದೇನಂದರೆ: ಮೈಸೂರು ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ತಗುಲಿದ ಪ್ರದೇಶಗಳೆಂದು ಈಗಿಂದಾಗ್ಗೆ ಪ್ರಕಟಿಸಲ್ಪಟ್ಟದ್ದ ಈ ಕೆಳಗೆ ನಮೂದಿಸಿರುವ ಸ್ಥಳಗಳ ಎರಡು ತಿಂಗಳಿಗೆ ವಿಶಾರಿ ಜಾಡ್ಯರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ.	ತಾಲ್ಲೂಕು.
ಅನಗಲ್ಲಿ	ಮೈಸೂರು
ಗೋಪಾಲಪುರ	ಡಿಟೋ
ಉಂದವಾಡಿ	ಡಿಟೋ
ದೇವಗಲ್ಲಿ	ಡಿಟೋ
ಮಾದೇವರ ಕೊಪ್ಪಲು	ಡಿಟೋ
ದಂಡಿಕೆರೆ	ಡಿಟೋ
ಹಂಚೆ	ಡಿಟೋ
ಕ್ಯಾತಬಾಯಿನಹಳ್ಳಿ	ಡಿಟೋ
ರಮ್ಮನಹಳ್ಳಿ	ಡಿಟೋ
ನಾಗನಹಳ್ಳಿ	ಡಿಟೋ
ಸಕ್ಕಳ್ಳಿ	ಡಿಟೋ
ವರುಣ	ಡಿಟೋ
ವೀರಪ್ಪನಹಳ್ಳಿ	ಡಿಟೋ
ವಾಜಮಂಗಲ	ಡಿಟೋ
ಸಾಲಹುಂಡಿ	ಡಿಟೋ
ಹೊಸಹುಂಡಿ	ಡಿಟೋ
ಕಾರಡಿ ಮಾರಯನ ಹುಂಡಿ	ಡಿಟೋ
ಮೈಸೂರು ತಾಲ್ಲೂಕು	ಡಿಟೋ
ಹೆಬ್ಬಾಳು	ಎಡತೊರ
ಸಿದ್ದನಕೊಪ್ಪಲು	ಡಿಟೋ
ಬ್ಯಾಡರಹಳ್ಳಿ	ಡಿಟೋ
ಬಾಚಹಳ್ಳಿ	ಡಿಟೋ
ಮುದ್ದನಹಳ್ಳಿ	ಡಿಟೋ
ಅರಸಿನಕೆರೆ	ಡಿಟೋ
ಚಂದಗಾಲ	ಡಿಟೋ
ತಾಂಡ್ಯ	ನಂಜನಗೂಡು
ಈಚಗಲ್ಲಿ	ಡಿಟೋ
ವಳಗೆರೆ	ಡಿಟೋ
ಇಬಜಾಲ	ಡಿಟೋ
ಉಪ್ಪಳಿಗರಹುಂಡಿ	ಡಿಟೋ
ಬಿಲ್ಲಗೆರೆ	ಡಿಟೋ

ತಾರೀಖು 24ನೆ ಜುಲೈ 1907.

ನಂ. 677—ಸ್ಯಾನಿಟರಿ 24-07-2, ಸಮಸ್ತ ಜನರ ತಿಳುವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವದೇನಂದರೆ :— ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಹಾರನಹಳ್ಳಿ	ಕುಂಸಿ ಸಬ್ ತಾಲ್ಲೂಕು
ಕೋಬಳ್ಳಿ	ಡಿಟೋ
ಸಂತೆಕಡೂರು	ಶಿವಮೊಗ್ಗ

ತಾರೀಖು 24ನೆ ಜುಲೈ 1907.

ನಂ. 675—ಸ್ಯಾನಿಟರಿ 23-07—2, ಸಮಸ್ತ ಜನರ ತಿಳವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವದೇನಂದರೆ :— ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸ

ಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21-96 ಈ ನಂಬರುಗಳ ಇಸ್ತಿಹಾರನಾಮೆಗೆ ತನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಮೈನಾಯಕನಹಳ್ಳಿ	ಆನೇಕಲ್ಲು.
ಗುಡ್ಡಹಟ್ಟಿ	ಡಿಟೋ
ಆಲ್ದೇನಹಳ್ಳಿ	ಡಿಟೋ
ಬೂರ್ನಾತ	ಡಿಟೋ
ಬೆಸ್ತಮಾನಹಳ್ಳಿ	ಡಿಟೋ
ಮಂಟಪ	ಡಿಟೋ
ಸೊಳ್ಳೇಪುರ	ಡಿಟೋ
ಸೋಲೂರು	ಡಿಟೋ
ಬೊಮ್ಮಸಂದ್ರ	ಡಿಟೋ
ಮೇಡಹಳ್ಳಿ	ಡಿಟೋ
ಹೆಬಗೋಡಿ	ಡಿಟೋ
ಮುತ್ತಸಂದ್ರ	ಡಿಟೋ
ದಾಸನಪುರ	ಡಿಟೋ
ಹಾಳೇನಹಳ್ಳಿ	ದೊಡ್ಡಬಳ್ಳಾಪುರ.
ಹುರಳಿಚಿಕ್ಕನಹಳ್ಳಿ	ಬೆಂಗಳೂರು.
ಅಲ್ಲಾಲಸಂದ್ರ	ಡಿಟೋ
ಕೃಷ್ಣರಾಜಪುರ	ಡಿಟೋ
ಬೊಮ್ಮನಹಳ್ಳಿ	ಡಿಟೋ
ಜೋಡಿಸೆಟ್ಟಿಹಳ್ಳಿ	ಡಿಟೋ
ಜೋಡಿ ಅರಿಕೇರಿ	ಡಿಟೋ
ಮುರುಗೇಶ ಮೊದಲಿ ಪಾಳ್ಯ	ಡಿಟೋ
ಗುರಪ್ಪನ ಪಾಳ್ಯ	ಡಿಟೋ
ಅನುಗೊಂಡನ ಹಳ್ಳಿ	ಹೊಸಕೋಟೆ.
ಹೀರಂಡಹಳ್ಳಿ	ಡಿಟೋ
ಕಿತ್ತಗನೂರು	ಡಿಟೋ
ದೊಡ್ಡಬೆಲೆ	ನೆಲಮಂಗಲ.
ತ್ಯಾಮಗೊಂಡ್ಲು	ಡಿಟೋ
ಬೀರಗೊಂಡಹಳ್ಳಿ	ಡಿಟೋ

ತಾರೀಖು 8ನೆ ಜುಲೈ 1907.

ನಂ. 193—L. B. (480-06)-2, ಚಿತ್ರದುರ್ಗ ಡಿಸ್ಟ್ರಿಕ್ಟಿನ ನಾನಾ ತಾಲ್ಲೂಕು ಬೋರ್ಡುಗಳಲ್ಲಿ ಸರ್ಕಾರಿ ಉದ್ಯೋಗಸ್ಥರಲ್ಲದೆ ಈಗ ಸಭಿಕರಾಗಿರುವವರ ಉದ್ಯೋಗ ಕಾಲವು ಮುಗಿದು ಹೋಗಿರುವುದರಿಂದ ಸದರಿ ತಾಲ್ಲೂಕು ಬೋರ್ಡುಗಳನ್ನು ಈ ಕೆಳಗೆ ನಮೂದಿಸುವಂತೆ ಪುನಃ ಏರ್ಪಡಿಸಿ ಇರುತ್ತದೆ :—

ಚಿತ್ರದುರ್ಗದ ತಾಲ್ಲೂಕು.

ಉದ್ಯೋಗಪ್ರಯುಕ್ತವಾದ ಸಭಿಕರು.

(a) ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟ್.
(b) ಅಮಲ್ದಾರ್, ವೈಸ್‌ಪ್ರೆಸಿಡೆಂಟ್.
(c) ಡಿಸ್ಟ್ರಿಕ್ಟಿನ ವೈದ್ಯ ಮತ್ತು ಆರೋಗ್ಯಾಧಿಕಾರಿ.
(d) ಮರಹಮ್ಮತು ಸಬ್ ಡಿವಿಜನ್ ಆಫಿಸರು.
(e) ಸಬ್ ರಿಜಿಸ್ಟ್ರಾರ್.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ|| ಸಾಹುಕಾರ ನಂಜುಂಡಪ್ಪ.
2. ,, ತೋಟದ ಸಿದ್ದಪ್ಪ.
3. ,, ದುವ್ವಿ ಗುರುಸಿದ್ದಪ್ಪ.
4. ,, ಪಟೇಲ ಕರಿಯಣ್ಣ.

(ಜಿ) ವಾಕ್ಯದ ಮೇರೆಗೆ.

ಮಿ|| ಪಾವಗಡ ಭೀಮಸೇನರಾವ್, ರಿಟೈರ್ಡ್ ಅಮಲ್ದಾರ್.

ಎಚ್) ವಾಕ್ಯದ ಮೇರೆಗೆ.

1. ಮಿ|| ಅನಂತಶೆಟ್ಟಿ ಅಡ್ವೋಕೇಟ್.
2. ,, ಜೋಡಿದಾರ ಹನುಮಂತಾಚಾರ್.
3. ,, ದಸ್ತಗೀರ್‌ಸಾಬ್, ಪ್ರಿವಿಲೇಜ್ಡ್ ಸ್ಟ್ಯಾಂಪ್ ವೆಂಡರ್.
4. ,, ಖಾಜಿ ಸೈಯದ್ ಮೊಹಿದೀನ್.
5. ,, ಪಟೇಲ ಬಸಪ್ಪ, ಮಾರಗಟ್ಟ.

2. ಚಳ್ಳಕೆರೆ ತಾಲ್ಲೂಕು.

ಉದ್ಯೋಗಪ್ರಯುಕ್ತವಾದ ಸಭಿಕರು.

(a) ಅಸಿಸ್ಟೆಂಟ್ ಕಮಿಷನರ್, ಪ್ರೆಸಿಡೆಂಟ್.
(b) ಅಮಲ್ದಾರ್, ವೈಸ್ ಪ್ರೆಸಿಡೆಂಟ್.
(c) ಆಸ್ಪತ್ರೆಯ ಅಸಿಸ್ಟೆಂಟ್.
(d) ಮರಹಮ್ಮತು ಸಬ್ ಡಿವಿಜನ್ ಆಫೀಸರು.
(e) ತಾಲ್ಲೂಕು ಶಿರಸ್ತೇದಾರ್.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ॥ ಶಾನುಭೋಗ ಸುಬ್ಬಣ್ಣ.
2. ,, ತುಪ್ಪದ ವೀರಣ್ಣ.
3. ,, ಮನ್ನೆಕೋಟೆ ಶಾನುಭೋಗ ರಾಮಣ್ಣ.
4. ,, ನಾಯಕನಹಟ್ಟಿ ಶಾನುಭೋಗ ರಾಮಪ್ಪ.

(ಜಿ) ವಾಕ್ಯದ ಮೇರೆಗೆ.

ಮಿ॥ ಕಂಟ್ರಾಕ್ಟರ್ ಸುಬ್ಬರಾವ್.

(ಎಚ್) ವಾಕ್ಯದ ಮೇರೆಗೆ.

1. ಮಿ॥ ಕೋಮಟ ನಾರಣಪ್ಪ.
2. ,, ಮಹಮದ್ ಆಲಿ ಸಾಹೇಬ್.
3. ,, ಬಲ್ಲೆಗಟ್ಟೆ ಅಜ್ಜಪ್ಪ.
4. ,, ಪಟೇಲ ಸಣ್ಣ ತಿಪ್ಪಯ್ಯ.
5. ,, ವೀರಭದ್ರಪ್ಪ ಬಿನ್ ಸೂಗೂರಪ್ಪ.

3. ಹೊಳಲಕೆರೆ ತಾಲ್ಲೂಕು.

ಉದ್ಯೋಗಪ್ರಯುಕ್ತವಾದ ಸಭಿಕರು.

(a) ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟ್.
(b) ಅಮಲ್ದಾರ್, ವೈಸ್ ಪ್ರೆಸಿಡೆಂಟ್.
(c) ಆಸ್ಪತ್ರೆ ಅಸಿಸ್ಟೆಂಟ್.
(d) ಮರಹಮ್ಮತ ಸಬ್ ಡಿವಿಜನ್ ಆಫೀಸರು.
(e) ತಾಲ್ಲೂಕು ಶಿರಸ್ತೇದಾರ್.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ

1. ಮಿ॥ ನಾಡಿಗ ವೆಂಕಟಸುಬ್ಬಯ್ಯ.
2. ,, ರೇವನ ಸಿದ್ದಪ್ಪ.
3. ,, ನಾಡಿಗ ಸಿದ್ದರಾಮಯ್ಯ.
4. ,, ಶಾನುಭೋಗ ಸುಬ್ಬಣ್ಣ.

(ಜಿ) ವಾಕ್ಯದ ಮೇರೆಗೆ.

ಮಿ॥ ಸತಿಮಲ್ಲಪ್ಪ.

(ಎಚ್) ವಾಕ್ಯದ ಮೇರೆಗೆ.

1. ಮಿ॥ ಕಸ್ತೂರು ರಂಗಪ್ಪ.
2. ,, ಸರ್ವೆಗಾರ ವೀರಪ್ಪ.
3. ,, ರವಿಕೀರ್ತಪ್ಪ.
4. ,, ಪಟೇಲ ಚಂದಪ್ಪ.
5. ,, ಪಟೇಲ ಮಡಿವಾಳಪ್ಪ.

4. ಹಿರಿಯೂರು ತಾಲ್ಲೂಕು.

ಉದ್ಯೋಗಪ್ರಯುಕ್ತವಾದ ಸಭಿಕರು.

(a) ಅಮಲ್ದಾರ್ ಪ್ರೆಸಿಡೆಂಟ್.
(c) ಆಸ್ಪತ್ರೆ ಅಸಿಸ್ಟೆಂಟ್.
(d) ಚಿತ್ರದುರ್ಗದ ಮರಹಮ್ಮತ ಸಬ್ ಡಿವಿಜನ್ ಆಫೀಸರು.
(e) ತಾಲ್ಲೂಕು ಶಿರಸ್ತೇದಾರ್.

ಸರಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ|| ಮಠದ ವೀರೈಯ್ಯ.
2. ,, ಪಟೇಲ ತಿಪ್ಪೆಯ್ಯ.
3. ,, ಶಾನುಭೋಗ ಚನ್ನಗಿರಯ್ಯ.
4. ,, ಪಟೇಲ ತಿಮ್ಮೆಗೌಡ.

(ಜಿ) ವಾಕ್ಯದ ಮೇರೆಗೆ.

ಮಿ|| ಸಿ. ಎಸ್. ಕೃಷ್ಣಪ್ಪ, ಕಂಟ್ರಾಕ್ಟರ.

(ಎಚ್) ವಾಕ್ಯದ ಮೇರೆಗೆ.

1. ಮಿ|| ಪಟೇಲ ಮಹಲಿಂಗಪ್ಪ.
2. ,, ಅಬ್ದುಲ್ ರಜಾಕ.
3. ,, ಪಟೇಲ ಚಿಕ್ಕಣ್ಣ.
4. ,, ಪಟೇಲ ಪರಸೇಗೌಡ.
5. ,, ಶಾನುಭೋಗ ರಾಮಣ್ಣ.
6. ,, ಶಾನುಭೋಗ ರಂಗದಾಸಪ್ಪ

5. ಜಗಲೂರು ತಾಲ್ಲೂಕು.

ಉದ್ಯೋಗದ ಮುಖಾಂತ್ರವಾದ ಸಭಿಕರು.

(a) ಅಸಿಸ್ಟೆಂಟ ಕಮಿಷನರು, ಪ್ರೆಸಿಡೆಂಟ.
(b) ಅಮಲ್ದಾರ್, ವೈಸಪ್ರೆಸಿಡೆಂಟ.
(c) ಆಸ್ಪತ್ರೆ ಅಸಿಸ್ಟೆಂಟ.
(d) ಮರಹಮ್ಮತ್ ಸಬ್ ಡಿವಿಜನ್ ಆಫೀಸರ.
(e) ತಾಲ್ಲೂಕು ಶಿರಸ್ತೇದಾರ.

ಸರಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ|| ಪಟೇಲ ಶಾಂತಪ್ಪ.
2. ,, ಶಾನುಭೋಗ ಮೂಡಲಗಿರಿರಾವ.
3. ,, ಶಿದ್ದಯ್ಯನಕೋಟೆ ಪಾಲಯ್ಯ
4. ,, ಶಾನುಭೋಗ ಅಶ್ವತ್ಥಪ್ಪ

(ಜಿ) ವಾಕ್ಯದ ಮೇರೆಗೆ.

ಮಿ|| ಸಾಹುಕಾರ ತಿಪ್ಪಣ್ಣ.

(ಹೆಚ್) ವಾಕ್ಯದ ಮೇರೆಗೆ.

1. ಮಿ|| ಗೊಂಚಿಕರ ಹನುಮಂತಪ್ಪ.
2. ,, ಪಟೇಲ ಮುರಗಪ್ಪ.
3. ,, ಶಾನುಭೋಗ ಗುರುರಾವ.
4. ,, ಶಾನುಭೋಗ ನರಸಿಂಗಪ್ಪ.
5. ,, ನಾಗೋಜಿರಾವ.

6. ದಾವಣಗೆರೆ ತಾಲ್ಲೂಕು

ಉದ್ಯೋಗದ ಮುಖಾಂತ್ರವಾದ ಸಭಿಕರು.

(a) ದಾವಣಗೆರೆಯ ಸಬ್ ಡಿವಿಜನ್ ಅಸಿಸ್ಟೆಂಟ ಕಮಿಷನರ್ ಪ್ರೆಸಿಡೆಂಟ.
(b) ಅಮಲ್ದಾರ್ ವೈಸ ಪ್ರೆಸಿಡೆಂಟ.
(c) ಆಸ್ಪತ್ರೆ ಅಸಿಸ್ಟೆಂಟ.
(d) ಮರಹಮ್ಮತ್ತು ಸಬ್ ಡಿವಿಜನ್ ಆಫೀಸರ.
(e) ಸಬ್ ರಿಜಿಸ್ಟ್ರಾರ.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ॥ ಪೋತಿ ಬಕೆಟ್ಟಪ್ಪ.
2. ,, ಹಾಲಪ್ಪ.
3. ,, ಶಾನುಭೋಗ ಹುನುಮಂತಪ್ಪ.
4. ,, ಭಿಷ್ಟಪ್ಪ.

(ಜಿ) ವಾಕ್ಯದ ಮೇರೆಗೆ.

ಮಿ॥ ಸಿ. ವಿರೂಪಾಕ್ಷಪ್ಪ, ದಾವಣಗೆರೆ.

(ಎಚ್) ವಾಕ್ಯದ ಮೇರೆಗೆ.

1. ಮಿ॥ ರಾಣಿಬಿನ್ನೂರು ನಬಿಸಾಬ್.
2. ,, ಗುಬ್ಬಿ ನಬಿಸಾಬ್.
3. ,, ಧರ್ಮರಾಯಾಚಾರ್.
4. ,, ಎಚ್. ಸುಬ್ಬರಾವ್.
5. ,, ಗೊಳಸಂಗಿ ವೀರಭದ್ರಪ್ಪ.

7. ಹೊಸದುರ್ಗ ತಾಲ್ಲೂಕು.

ಉದ್ಯೋಗಪ್ರಯುಕ್ತವಾದ ಸಭಿಕರು.

(a) ದಾವಣಗೆರೆ ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟ್.
(b) ಅಮಲ್ದಾರ್ ವೈಸ್‌ಪ್ರೆಸಿಡೆಂಟ್.
(c) ಆಸ್ಪತ್ರೆ ಅಸಿಸ್ಟೆಂಟ್.
(d) ಹೊಳಲ್ಕೆರೆ ಮರಹಮ್ಮತ್ ಸಬ್ ಡಿವಿಜನ್ ಆಫೀಸರ್.
(e) ತಾಲ್ಲೂಕು ಶಿರಸ್ತೆದಾರ್.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ॥ ಪಿ. ನಾಗಪ್ಪ.
2. ,, ಜಿ. ಮಲ್ಲಯ್ಯ.
3. ,, ಸಿ. ಹನುಮೇಗೌಡ.
4. ,, ರಾಮಕೃಷ್ಣಪ್ಪ.

(ಜಿ) ವಾಕ್ಯದ ಮೇರೆಗೆ.

ಮಿ॥ ಯಜಮಾನ ಕೊಟ್ರಯ್ಯ.

(ಎಚ್) ವಾಕ್ಯದ ಮೇರೆಗೆ.

1. ಮಿ॥ ಜಿ. ರಾಮಣ್ಣ.
2. ,, ಚೆನ್ನೆಗೌಡ.
3. ,, ಖಾಜಾ ಮಹಮ್ಮದ್ ಹುಸೇನ್ ಬೇಗ್ ಸಾಬ್.
4. ,, ಬಿ. ವಿ. ನಾರಾಯಣರಾವ್.
5. ,, ಕಾಸಿಂಸಾಬ್.

8. ಮೊಳಕಾಲ್ಮೂರು ತಾಲ್ಲೂಕು.

ಉದ್ಯೋಗಪ್ರಯುಕ್ತವಾದ ಸಭಿಕರು.

(a) ಚಳ್ಳಕೆರೆ ಸಬ್ ಡಿವಿಜನಿನ ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟ್.
(b) ಅಮಲ್ದಾರ್ ವೈಸ್‌ಪ್ರೆಸಿಡೆಂಟ್.
(c) ಆಸ್ಪತ್ರೆ ಅಸಿಸ್ಟೆಂಟ್.
(d) ಮರಹಮ್ಮತ್ ಸಬ್ ಡಿವಿಜನ್ ಆಫೀಸರ್, ಚಳ್ಳಕೆರೆ.
(e) ತಾಲ್ಲೂಕು ಶಿರಸ್ತೆದಾರ್.

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದ ಮೇರೆಗೆ.

1. ಮಿ॥ ಶಾನುಭೋಗ ಹನುಮಂತಪ್ಪ.
2. ,, ಅಪ್ಪುಂಡಿ ಗುಂಡಪ್ಪ.
3. ,, ಪಟೇಲ ವೀರಗೌಡ.
4. ,, ಪಟೇಲ ಹಂಪಣ್ಣ.

(ಎಚ್) ವಾಕ್ಯದ ಮೇರೆಗೆ.

1. ಮಿ॥ ಶ್ರೀನಿವಾಸದಾಸ್.
2. ,, ಋಬಾಜಿ ದುರ್ಗಪ್ಪ.
3. ,, ಕೊಮಾರಪ್ಪ.
4. ,, ನೇರಲಹಳ್ಳಿ ಸಣ್ಣಪ್ಪ.
5. ,, ಭಾರಿ ಸಣ್ಣರುದ್ರಪ್ಪ.

9. ಹರಿಹರ ಸಬ್ ತಾಲ್ಲೂಕು.

ಉದ್ಯೋಗ ಪ್ರಯುಕ್ತವಾದ ಸಭಿಕರು.

(a) ದಾವಣಗೆರೆ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು.
(b) ಡೆಪ್ಯುಟಿ ಅಮಲ್ದಾರ್ ವೈಸ್‌ಪ್ರಸಿಡೆಂಟ್.
(c) ಆಸ್ಪತ್ರೆ ಅಸಿಸ್ಟೆಂಟ್.
(d) ದಾವಣಗೆರೆ ಮರಹಮ್ಮತ್ ಸಬ್ ಡಿವಿಜನಿನ ಆಫೀಸರು.

ಉದ್ಯೋಗಸ್ಥರಲ್ಲದ ಸಭಿಕರು.

(ಎಫ್) ವಾಕ್ಯದಮೇರೆಗೆ.

1. ಮಿ॥ ಪಟೇಲ ಲಿಂಗಪ್ಪ.
2. ,, ಅನಂತನಾಯಕ್.
3. ,, ವೆಂಕಣ್ಣ.
4. ,, ಡಿ. ಶ್ರೀನಿವಾಸರಾವ್.

(ಜಿ) ವಾಕ್ಯದ ಮೇರೆಗೆ.

ಮಿ॥ ಕೇಶವನಾಯಕ್.

(ಎಚ್) ವಾಕ್ಯದ ಮೇರೆಗೆ.

1. ಮಿ॥ ಉಸ್ಮಾನ್‌ಸಾಬ್.
2. ,, ಷರಾಫ್ ಪೀರ್ ಸಾಬ್.
3. ,, ರಟ್ಟಿಹಳ್ಳಿ ಗೋವಿಂದಪ್ಪ.
4. ,, ತಿಪ್ಪಣ್ಣನವರ ಮುರಗಪ್ಪ.
5. ,, ಶಾನುಭೋಗ ಶ್ರೀನಿವಾಸರಾವ್.
6. ,, ಬಾಲಕೃಷ್ಣರಾವ್.

ತಾರೀಖು 15ನೆ ಜುಲೈ 1907.

ನಂ. ಜಿ. 335—ಜಿ. ಎಂ. 95-06-8, 1897ನೆ ಇಸವಿಯ ಮೇ 21ನೆ ತಾರೀಖಿನ 178ನೆ ನಂಬರ್ ಇಂಡಿಯಾ ಸರ್ಕಾರದ ಹೋಂ ಇಲಾಖೆಯ ಇಸ್ತಿಹಾರ್ನಾಮೆಯಲ್ಲಿ ಪ್ರಕಟಿಸಲ್ಪಟ್ಟು, 1900ನೆ ಇಸವಿಯ ಜುಲೈ 23ನೆ ತಾರೀಖಿನ 1400-ಮಿಸ್. ಫೈಲ್. 160—92ನೆ ನಂಬರಿನ ಮೈಸೂರು ಸರ್ಕಾರದ ಇಸ್ತಿಹಾರ್ನಾಮೆಯಲ್ಲಿ ಈ ಸಂಸ್ಥಾನದ ಸರ್ಕಾರಿ ಸರ್ವಿಂಟ್ಸ್ ಯಾ ಕ್ರೈಸ್ತ ಸ್ಮಶಾನಗಳಿಗೆ ಲಗಾವಾಗುವಂತೆ ಮಾಡಲ್ಪಟ್ಟ, ಎಕ್ಲೀಸಿಯಾಸ್ಟಿಕಲ್ ಯಾ ಚರ್ಚ್‌ಗಳಿಗೆ ಸಂಬಂಧಪಟ್ಟ ನಿಬಂಧನೆಗಳ 4ನೆ ಭಾಗದ I ಮತ್ತು XXI (b), (2), (3) ಮತ್ತು (4)ನೆ ನಿಬಂಧನೆಗಳನ್ನು ಬದಲಾಯಿಸಿ, ಚರ್ಚ್ ಕಟ್ಟಡಗಳನ್ನು ಕಟ್ಟುವ ವಿಚಾರದಲ್ಲಿ ಪುನರ್ವಿಮರ್ಶೆಯಿಂದ ಏರ್ಪಡಿಸಲ್ಪಟ್ಟ ನಿಬಂಧನೆಗಳನ್ನು ವಿಧಿಸುವ 1907ನೆ ಇಸವಿಯ ಜೂನ್ 7ನೆ ತಾರೀ

ಖಿನ 250ನೆ ನಂಬರಿನ ಇಂಡಿಯಾ ಸರ್ಕಾರದ ಹೋಂ ಡಿಪಾರ್ಟ್‌ಮೆಂಟಿನ (ಎಕ್ಲೀಸಿಯಾಸ್ಟಿಕಲ್) ಇದರಡಿ ಕಂಡ ಇಸ್ತಿಹಾರ್ನಾಮೆಯನ್ನು ಸಮಸ್ತರ ತಿಳಿವಳಿಕೆಯ ಬಗ್ಗೂ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಅನುಸರಣೆಯ ಬಗ್ಗೂ ಪ್ರಕಟಿಸಿ ಇದೆ :—

ನಂಬರು 250—ಇಂಡಿಯಾ ಸರ್ಕಾರದ ಹೋಂ ಇಲಾಖಾ, ಎಕ್ಲೀಸಿಯಾಸ್ಟಿಕಲ್.

ತಾರೀಖು 7ನೆ ಜೂನ್ 1907, ಮೊಕ್ಕಾಂ ಸಿಮ್ಲಾ.

ಇಸ್ತಿಹಾರ್ನಾಮೆ.

ಹೋಂ ಇಲಾಖೆಯಿಂದ ಕೊಡಲ್ಪಟ್ಟ 1897ನೆ ಇಸವಿಯ ಮೇ 21ನೆ ತಾರೀಖಿನ 178ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಪ್ರಕಟಿಸಲ್ಪಟ್ಟ ಎಕ್ಲೀಸಿಯಾಸ್ಟಿಕಲ್ ಯಾ ಚರ್ಚುಗಳಿಗೆ ಸಂಬಂಧಪಟ್ಟ ನಿಬಂಧನೆಗಳ 4ನೆ ಭಾಗದ I ಮತ್ತು XXI (b), (2), (3) ಮತ್ತು (4) ನೆ ನಿಬಂಧನೆಗಳಿಗೆ ಬದಲಾಗಿ ಈ ಕೆಳಗೆ ನಮೂದಿಸಿರುವುದನ್ನು ಸೇರಿಸಿ ಇದೆ :—

ನಿಬಂಧನೆ I.—XXI (b) (2) ನೆ ನಿಬಂಧನೆಯಲ್ಲಿ ನಮೂದಿಸಲ್ಪಟ್ಟ ಮತ್ತು "23-ಎಕ್ಲೀಸಿಯಾಸ್ಟಿಕಲ್" ಎಂಬ ಹೆಡ್ಡಿಗೆ ಖರ್ಚು ಬೀಳುವ ಚಾರ್ಜುಗಳು ವಿನಾ, ಸಿವಿಲ್, ಮಿಲಿಟರಿ ಅಥವಾ ಸ್ಟೇಟ್ ರೈಲ್ವೆ ಸ್ಟೇಷನುಗಳಲ್ಲಿನ ಚರ್ಚುಗಳಿಗಾಗಿ ಸಂಸ್ಥಾನದಿಂದ ಕೊಡುವ ಇತರ ಎಲ್ಲಾ ಚಾರ್ಜುಗಳೂ, ಮರಹಮ್ಮತ್ ಫಂಡುಗಳಿಂದ "45-ಸಿವಿಲ್ ವರ್ಕ್ಸ್" ಎಂಬ ಹೆಡ್ಡಿನ ಕೆಳಗೆ ಇಂಪೀರಿಯಲ್ ವರ್ಕ್ಸ್ ಯಾ ಚಕ್ರಾಧಿಪತ್ಯದ ಕೆಲಸಗಳಿಗೋಸ್ಕರ ಕೊಡುವ ಸಾಧಾರಣ ಗ್ರಾಂಟುಗಳಿಂದ ಒದಗಿಸಲ್ಪಡುತ್ತವೆ.

ನಿಬಂಧನೆ XXI (b) (2)—ಅಂಥಾ ಸಂದರ್ಭಗಳಲ್ಲಿ ಪ್ಲಾನುಗಳನ್ನೂ ಸ್ಪೆಸಿಫಿಕೇಷನ್ಸ್ ಯಾ ವಿವರಣೆಗಳನ್ನೂ, ಮರಹಮ್ಮತ್ ಇಲಾಖೆಯಲ್ಲಿ ಸರಿಯಾದ ಅಧಿಕಾರಿಯ ಒಪ್ಪಿಗೆಗೋಸ್ಕರ, ಎಕ್ಸಿಕ್ಯೂಟಿವ್ ಇಂಜನೀರಿಗೆ ಕಳುಹಿಸಬೇಕು, ಮತ್ತು ಅವರು ಸದರಿ ಪ್ಲಾನುಗಳೂ ವಿವರಣೆಗಳೂ ಚನ್ನಾಗಿಯೂ ಯುಕ್ತವಾಗಿಯೂ ಮತ್ತು ಅಂದಾಜು ಮೊಬಲಗಿನಲ್ಲಿ ನಡೆಸಬಹುದಾದವುಗಳಾಗಿಯೂ ಇವೆಯೆಂದು ತಮಗೆ ತೃಪ್ತಿಕರವಾಗಿ ತೋರಿದ ಬಳಿಕ, ಅವುಗಳನ್ನು ಮಂಜೂರ್ಮಾಡತಕ್ಕದ್ದು. ಅನಂತರ ಕಟ್ಟಡವನ್ನು ಕಟ್ಟುವ ಕೆಲಸವನ್ನು ಖುಷಬಾಷ ಜನರಿಂದ ಎತ್ತಿದ ಚಂದಾ ಮೊಬಲಗಿನ ಮ್ಯಾನೇಜರುಗಳಿಗೆ ಅಥವಾ ಟ್ರಸ್ಟಿಗಳಿಗೆ ಯಾ ಭರವಸೆದಾರರಿಗೆ ಬಿಡಬೇಕು ; ಮಂಜೂರಾದ ಅಂದಾಜು ಮೊಬಲಗಿಗಿಂತ ಹೆಚ್ಚು ಏನಾದರೂ ಆದರೆ ಅದಕ್ಕೆ ಇವರು ಜವಾಬ್ದಾರರಾಗಿರಬೇಕು. ಸಹಾಯಾರ್ಥವಾಗಿ ಕೊಡುವ ಗ್ರಾಂಟನ್ನು, ಎಗ್ಜಿಕ್ಯೂಟಿವ ಇಂಜನೀರು ಸರ್ಟಿಫೈ ಮಾಡಿದ ತರುವಾಯ, ಸಿವಿಲ್ ಇಲಾಖೆಯಿಂದ ಕೊಟ್ಟು (XXI (b) (3)ನೆ ನಿಬಂಧನೆಯನ್ನು ನೋಡುವುದು), ಮೇಲೆ ನಮೂದಿಸಿದ 1ನೆ ನಿಬಂಧನೆಯಲ್ಲಿ ಹೇಳಿವಂತೆ "23-ಎಕ್ಲೀಸಿಯಾಸ್ಟಿಕಲ್" ಎಂಬ ಹೆಡ್ಡಿನ ಕೆಳಗೆ ಸಿವಿಲ್ ಚಾರ್ಜ್ ಎಂಬದಾಗಿ ಲೆಕ್ಕ ಕ್ರಮ ಪಡಿಸಲಾಗುವುದು.

ನಿಬಂಧನೆ XXI (b) (3).—ಮಂಜೂರಾದ ಪ್ಲಾನುಗಳು ಮತ್ತು ವಿವರಣೆಗಳ ಮೇರೆಗೆ ಕಟ್ಟಡವು ಪೂರೈಸಿದೆ ಎಂದು ಎಗ್ಜಿಕ್ಯೂಟಿವ್ ಇಂಜನೀರು ಸರ್ಟಿಫೈ ಮಾಡುವ ಪರ್ಯಂತವೂ ಮತ್ತು ಕೆಳಗೆ 4ನೆ ಕ್ಲಾಜಿನಲ್ಲಿ ನಮೂದಿಸಲ್ಪಟ್ಟ ಟ್ರಸ್ಟ್ ಡೀಡ ಎಂಬ ಪತ್ರವು, ಆವಶ್ಯಕವಾದ ಸ್ಥಳಗಳಲ್ಲಿ, ಕ್ರಮವಾಗಿ ನೆರವೇರಿಸಲ್ಪಡುವ ಪರ್ಯಂತವೂ ಸಿವಿಲ್ ಅಕೌಂಟ್ ಆಫೀಸರು ಗ್ರಾಂಟ್ ಮೊಬಲಗನ್ನು ಪೂರ್ತಿಯಾಗಿ ಅಂಥಾ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಕೊಡುವುದಿಲ್ಲ ; ಆದರೆ ಕಟ್ಟಡದ ಕೆಲಸವು ತೃಪ್ತಿಕರವಾಗಿ ನಡೆಯುತ್ತಲಿದೆ ಎಂದು ಸಾಕಾದ ರುಜುವಾತು ಬಂದ ನಂತರ, ಮತ್ತು ಗ್ರಾಂಟಿಗಾಗಿ ಕೊಟ್ಟ ಅರ್ಜಿಗೆ ಬಲೀಯವಾಗಿ ನಂಬಲ್ಪಟ್ಟ ಚಂದಾ ಮೊಬಲಗುಗಳೆಲ್ಲಾ ಪೂರ್ತಿಯಾಗಿ ವಸೂಲಾಗಿವೆ ಅಥವಾ ಸಾಕಾದ ಆಧಾರದಿಂದ ಭರವಸೆ ಮಾಡಲ್ಪಟ್ಟಿವೆ ಎಂದು ಮಾನೇಜರುಗಳಾಗಲಿ ಟ್ರಸ್ಟಿಗಳಾಗಲಿ ಸರ್ಟಿಫೈ ಮಾಡಿದ ನಂತರ, ಮಂಜೂರಾದ ಗ್ರಾಂಟ್ ಮೊಬಲಗಿನಿಂದ ಮುಂಗಡ ಕೊಡುವಂತೆ ಎಗ್ಜಿಕ್ಯೂಟಿವ್ ಇಂಜನೀರು ಅಧಿಕಾರ ಕೊಡಬಹುದು.

ನಿಬಂಧನೆ XXI (b) (4).—ಸರ್ಕಾರದ ಉದ್ಯೋಗಸ್ಥರಲ್ಲದ ಜನರ ಮತ್ತು ಈ ನಿಬಂಧನೆಗಳ ಮೇರೆಗೆ ಗ್ರಾಂಟುಗಳನ್ನು ಕೊಡಕೂಡದ ಜನರ ಉಪಯೋಗಾರ್ಥವಾಗಿ ಉದ್ದೇಶಿಸಲ್ಪಟ್ಟ ಚರ್ಚಿಗೋಸ್ಕರ ಈ ನಿಬಂಧನೆಯ (b) ಕ್ಲಾಜಿನ ಮೇರೆಗೆ ಒಂದು ಗ್ರಾಂಟು ಮೊಬಲಗನ್ನು ಕೊಟ್ಟಾಗ್ಯೆ, ಚರ್ಚ್ ಇರುವ ಡಿಸ್ಟ್ರಿಕ್ಟಿನ ಮುಖ್ಯ ಮಾಜಿಸ್ಟ್ರೇಟಿಂದಲೂ ಚಾಪ್ಲೀನ್ ಯಾ ಸರ್ಕಾರಿ ಪಾದ್ರಿಯಿಂದಲೂ ಕ್ರಮವಾಗಿ ಬರೆಯಲ್ಪಟ್ಟು ರಿಜಿಸ್ಟರ್ ಮಾಡಲ್ಪಟ್ಟ,

(1) ಕಟ್ಟಡವು ಚರ್ಚಿನ ಉದ್ದೇಶಗಳಿಗೆ ಮಾತ್ರವೇ ಕೊಡಲ್ಪಟ್ಟಿದೆ ಎಂದು ಪ್ರಕಟಿಸುವ ; (2) ಅದು ಇತರ ಉದ್ದೇಶಗಳಿಗೆ ಉಪಯೋಗಿಸಲ್ಪಟ್ಟಿದ್ದಾದರೆ ಗ್ರಾಂಟು ಮೊಬಲಗನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಕಟ್ಟಡದ ಮೇಲಿನ ಪ್ರಥಮ ಬಾಧ್ಯತೆಯನ್ನು ಸರ್ಕಾರಕ್ಕೆ ಕೊಡುವ ; (3) ಕಟ್ಟಡದ ನ್ಯಾಯವಾದ ಒಡೆತನವನ್ನು ಏರ್ಪಡಿಸುವ ; ಮತ್ತು (4) ಅದನ್ನು ಸರಿಯಾಗಿ ಇಟ್ಟುಕೊಂಡಿರುವುದಕ್ಕೆ ತಕ್ಕ ಆಯವಾಯವನ್ನು ತೋರಿಸುವ,

ಒಂದು ಟ್ರಸ್ಟ್ ಡೀಡ ಎಂಬ ಪತ್ರವಿರಬೇಕು.

ನಂ. 533—Ml. 8-06-68, ಸರ್ 1894ನೆ ಇಸವಿಯ 7ನೇ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ :—ಇದರಡಿ ವಿವರಿಸಿರುವ ಮನೆಗಳೂ, ಜಮೀನುಗಳೂ ಸರ್ಕಾರಿ ಕೆಲಸಕ್ಕೆ, ಎಂದರೆ, ಕೋಟೆ ಗೋಡೆಯನ್ನು ಪೂರ್ವದಿಕ್ಕಿನಲ್ಲಿ ಕಿತ್ತುಹಾಕುವ ವಿಚಾರದಲ್ಲಿ ಅವಶ್ಯಕವಾಗಿವೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿನ ವೈಸ್ ಪ್ರೆಸಿಡೆಂಟರಿಗೆ ಸದರಿ ಮನೆಗಳನ್ನು ಮತ್ತು ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಜಂಜರ್ ನಂಬರ್.	ಬೀದಿಯ ಹೆಸರು.	ಮನೆಯ ನಂಬರು.	ಮಾಲೀಕನ ಹೆಸರು.	ಸರಕಾರಕ್ಕೆ ಬೇಕಾಗಿರುವ ಸ್ವತ್ತಿನ ವಿವರ.	ವಿಸ್ತೀರ್ಣ. ಉದ್ದ ಅಡಿ.	ವಿಸ್ತೀರ್ಣ. ಅಗಲ ಅಡಿ.	ವಿಸ್ತೀರ್ಣ. ವಿಸ್ತೀರ್ಣ.	ಚತುರ್ಸೀಮೆ. ಪೂರ್ವ.	ಚತುರ್ಸೀಮೆ. ಪಶ್ಚಿಮ.	ಚತುರ್ಸೀಮೆ. ಉತ್ತರ.	ಚತುರ್ಸೀಮೆ. ದಕ್ಷಿಣ.
1	ಕೋಟೆ B ಬೀದಿ.	1	ರಾಜ ಮುದಲಿಯಾರ್ ...	ತಾರಸಿ ಛಾವಣಿ ... ಡಿಟೋ ... ಡಿಟೋ ... ಡಿಟ್ಟೋ ...	37 30 $6\frac{1}{2}$ 19	17 $10\frac{1}{2}$ 20 10	$31\frac{17}{18}$ ಅಂಕಣಗಳು.	ಶೇಷಗಿರಿರಾವ್ ಮತ್ತು ಹರಿರಾವ್ ಇವರುಗಳ ಮನೆ.	ಕೋಟೆ ಗೋಡೆ.	ಕೋಟೆ ಗೋಡೆ.	ರಸ್ತೆ.
				ಬಂಗ್ಲಾಳಿ ತಾರಸಿ ...	$31\frac{1}{2}$ $38\frac{1}{4}$	$\frac{7 + 5\frac{1}{2}}{2}$ $7\frac{1}{2}$	$11\frac{77}{81}$ ಅಂಕಣಗಳು.				
				ಪಾಳು ನಿವೇಶನ ..	48 $15\frac{1}{4}$ $31\frac{1}{2}$	$\frac{10\frac{1}{4} + 4}{2}$ 10 $\frac{4\frac{1}{2} + 7\frac{3}{4}}{2}$	$76\frac{1}{3}$ ಚದರ ಗಜಗಳು.				
				ಕೆಟ್ಟುಹೋಗಿರುವ ಭಾಗ. ಡಿಟೋ ... ಛಾವಿ.	20 10	$20\frac{1}{2}$, 8	$12\frac{8}{81}$				

ಬಂಡಿ ನಂಬರ್	ಪೇಟೆಯ ಹೆಸರು	ಮನೆಯ ನಂಬರು	ಮಾಲೀಕನ ಹೆಸರು.	ಸರಕಾರಕ್ಕೆ ಬೇಕಾಗಿರುವ ಸ್ವತ್ತಿನ ವಿವರ.	ವಿಸ್ತೀರ್ಣ.			ಚತುರ್ಸೀಮೆ.			
					ಉದ್ದ ಅಡಿ.	ಅಗಲ ಅಡಿ.	ವಿಸ್ತೀರ್ಣ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
1	ಕೋಟೆ B ಬೀದಿ.	2	ಶೇಷಗಿರಿರಾವ್ ಮತ್ತು ಹರಿರಾವ್.	ಮಂಡು ಮಾಳಿಗೆ	27 24	33 14	30 $\frac{8}{9}$	ಬಾಲಕೃಷ್ಣರಾಯರ ಮನೆ.	ರಾಜ ಬೀದಿ (ಶೇಷಗಿರಿರಾವ್) ಮನೆ.	ಕೋಟೆ ಗೋಡೆ.	ರಸ್ತೆ.
				ಹಾಳು ನಿವೇಶನ	$\frac{55\frac{1}{2}+62\frac{1}{2}}{2}$ 14 $\frac{33+31}{2}$ 59	40 19 $\frac{21\frac{1}{2}+28}{2}$ $3\frac{1}{2}$	$402\frac{7}{9}$ ಚದರ ಗಜಗಳು.				
				ಭಾವಿ. ಮರಗಳು ...							
		3	ಬಾಲಕೃಷ್ಣರಾವ್	ಮಂಡು ಮಾಳಿಗೆ...	$20\frac{1}{2}$ $11\frac{1}{2}$ $14\frac{1}{2}$ 19	$19\frac{1}{2}$ $37\frac{1}{4}$ 18 $10\frac{1}{2}$	$31\frac{5}{7}$ ಅಂಕಣಗಳು.	ಮುನ್ಸಿಪಾಲ್ ಚರಂಡಿ ಮತ್ತು ಕೋಟೆ ಗೋಡೆ.	ಶೇಷಗಿರಿರಾವ್ ಮತ್ತು ಹರಿರಾಯರ ಮನೆ.		
				ಹಾಳು ನಿವೇಶನಗಳು	17 $\frac{28\frac{1}{4}}{2}$ $14\frac{1}{2}$ $11\frac{1}{2}$ $20\frac{1}{2}$	$17\frac{1}{2}$ 32 $\frac{10\frac{1}{4}+23\frac{1}{4}}{2}$ $\frac{12\frac{1}{2}+4}{2}$ $\frac{3+8}{2}$	$160\frac{1}{3}$ ಚದರಗಜಗಳು.				
				ಪಾಯಿಖಾನೆ. ಕಲ್ಲುಕಟ್ಟಿದ ಭಾವಿ.							

ತಾರೀಖು 18ನೆ ಜುಲೈ 1907.

ನಂ. ಜಿ. 464—ಜಿ. ಎಂ. 12-07—9, ಇದರಡಿ ಕಂಡ ಆಫೀಸರುಗಳನ್ನು, ಕೆಳಗೆ ಕಂಡ ತಾರೀಖುಗಳಿಂದ ಸೀನಿಯರ್ ಅಸಿಸ್ಟೆಂಟ್ ಕಮಿಷನರುಗಳಾಗಿ ಖಾಯಂ ಮಾಡಿದೆ:—

1. ಮೆ|| ವಿ. ಆರ್. ತ್ಯಾಗರಾಜ ಐಯ್ಯರ್, ಎಂ. ಎ.
2. ,, ಕೆ. ಚಾಂಡಿ, ಬಿ. ಎ.
3. ,, ಎಂ. ಶಾಮರಾವ್, ಎಂ. ಎ.

} 1907ನೆ ಇಸವಿಯ ಜುಲೈ 1ನೆ ತಾರೀಖಿನಿಂದ.

4. 1907ನೆ ಇಸವಿಯ ಜುಲೈ 1ನೆ ತಾರೀಖಿನಿಂದ, ಮಿ|| ಎ. ಸುಬ್ರಹ್ಮಣ್ಯ ಐಯ್ಯರ್, ಬಿ. ಎ. ಯವರು, ಮಿ|| ಎಂ. ಶಾಮರಾಯರನ್ನು ಕೋ ಆಪರೇಟಿವ್ ಸೊಸೈಟೀಸ್ ಯಾ ಅನ್ಯೋನ್ಯ ಸಹಾಯ ಸಂಘಗಳ ರಿಜಿಸ್ಟ್ರಾರಾಗಿ ನೇಮಿಸಿರುವವರೆಗೆ, ಸಬ್ ಪ್ರೋಟೆಂ ಸೀನಿಯರ್ ಅಸಿಸ್ಟೆಂಟ್ ಕಮಿಷನರಾಗಿರತಕ್ಕದ್ದು.

5. ಮಿ|| ಬಿ. ಜೆ. ಕೊಮಾರಸ್ವಾಮಿನಾಯಕರನ್ನು ಡೆಪ್ಯುಟಿ ಕಮಿಷನರಾಗಿ ನೇಮಿಸಿರುವವರೆಗೆ, ಅವರಿಗೆ ಬದಲಾಗಿ ಮಿ|| ಎಂ. ಎ. ನಾರಾಯಣೈಯ್ಯಂಗಾರ್ಯರು, ಸೀನಿಯರ್ ಅಸಿಸ್ಟೆಂಟ್ ಕಮಿಷನರಾಗಿ ಬದಲಿ ನೋಡತಕ್ಕದ್ದು.

ತಾರೀಖು 18ನೆ ಜೂನ್ 1907.

ನಂ. 583—ಎಲ್. ಬಿ. 491-06—3, 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—ಇದರಡಿ ವಿವರಿಸಿರುವ ಮತ್ತು 2 ಎಕರೆ ವಿಸ್ತೀರ್ಣವುಳ್ಳ ಜಮೀನು ಸರ್ಕಾರಿ ಕೆಲಸಕ್ಕೆ, ಎಂದರೆ, ಮದ್ದಗಿರಿ ತಾಲ್ಲೂಕು ಚನ್ನಮಲ್ಲನಹಳ್ಳಿಯ ಗ್ರಾಮ ನಿವೇಶನವನ್ನು ವಿಸ್ತರಿಸುವುದಕ್ಕೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಮದ್ದಗಿರಿ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬಳಿ	ಗ್ರಾಮ	ಖಾತೆದಾರನ ಹೆಸರು	ಸರ್ವೆ ನಂಬರು	ಖುಷ್ಕಿ ತರಿ ಬಾಗಾಯತು	ಒಟ್ಟು ವಿಸ್ತೀರ್ಣ	ಕಂದಾಯ	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ	ಚತುರ್ಗಡಿ			
										ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
ತುಮಕೂರು	ಮದ್ದಗಿರಿ	ಇಟಕದಿಬ್ಬನಹಳ್ಳಿ	ಚನ್ನಮಲ್ಲನಹಳ್ಳಿ	ಜೋಡಿದಾರ ಈರನಾಯಕ	27	ಖುಷ್ಕಿ	ಎ. 3 ಗು. 7 ಖರಾಬು ಸೇರಿ	ರೂ. 5 ಆ. 8	ಎ. 2 ಗು. 0	ಕಾಮ ಬಿನ್ ಚಿಕ್ಕಓಬನಿಗೆ ಸೇರಿದ ಸರ್ವೆ ನಂ. 26 ಮತ್ತು ದಾಸ ಬಿನ್ ಚಿಕ್ಕಣ್ಣಗೆ ಸೇರಿದ ಸರ್ವೆ ನಂ. 30.	ಅನಂತರಂಗಾಚಾರ್ ಬಿನ್ ಅಳ್ವಾರಂಗಾಚಾರ್ಯಗೆ ಸೇರಿದ ಸರ್ವೆ ನಂ. 33 ಮತ್ತು ಸದರಿಯವರಿಗೆ ಸೇರಿದ ಸರ್ವೆ ನಂ. 40.	ಹನುಮಂತ ಬಿನ್ ಸೋಮಣ್ಣನಿಗೆ ಸೇರಿದ ಸರ್ವೆ ನಂ. 1.	ಹರ ಬಿನ್ ಚಿಕ್ಕರಂಗನಿಗೆ ಸೇರಿದ ಸರ್ವೆ ನಂ. 31—2.

ತಾರೀಖು 19ನೆ ಜುಲೈ 1907.

ನಂ. 602—ಎಲ್. ಬಿ. 479-06—3, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ:—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ, ಎಂದರೆ, ಮದ್ದಗಿರಿ ತಾಲ್ಲೂಕಿನ ಹಂದ್ರಾಳು ಗ್ರಾಮ ನಿವೇಶನವನ್ನು ವಿಸ್ತರಿಸುವುದಕ್ಕೆ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಮದ್ದಗಿರಿ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು.	ಸರ್ವೆ ನಂಬರು.	ಖುಷ್ಕಿ ತರಿ ಬಾಗಾಯತು.	ಒಟ್ಟು ವಿಸ್ತೀರ್ಣ.	ಖರಾಬು.	ಉಳಿದ ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ.			
												ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ತುಮಕೂರು	ಮದ್ದಗಿರಿ	ಪುರವರ	ಹಂದ್ರಾಳು	ಹಂದ್ರಾಳಿಗ ಬಿನ್ ರಂಗ.	59	ಖುಷ್ಕಿ	ಎ. 8 ಗು. 10	ಎ. 4 ಗು. 20	ಎ. 3 ಗು. 30	ರೂ. 1 ಆ. 12	ಎ. 1 ಗು. 25	ಸರ್ವೆ ನಂ. 1 ಮತ್ತು 4	ಸರ್ವೆ ನಂ. 55 ಮತ್ತು 58	ಸರ್ವೆ ನಂ. 60 ಮತ್ತು 54	ಗ್ರಾಮ ನತ್ತ ಮತ್ತು ಸರ್ವೆ ನಂ 15 ಮತ್ತು 16.

ತಾರೀಖು 19ನೆ ಜುಲೈ 1907.

ನಂ. 598—L. B. 478-06—3, 1902ನೆಯ ಇಸವಿಯ 2ನೆ ನಂಬರ್ ಲೋಕಲ್ ಬೋರ್ಡ್ಸ್ ರೆಗ್ಯುಲೇಷನು ಮತ್ತು ಅದರ ಮೇರೆಗೆ ಮಾಡಲ್ಪಟ್ಟ ನಿಬಂಧನೆಗಳ ಉದ್ದೇಶಗಳ ಬಗ್ಗೆ ಬೆಂಗಳೂರು ಡಿಸ್ಟ್ರಿಕ್ಟಿನ ಈ ಕೆಳಗೆ ನಮೂದಿಸುವ ಗ್ರಾಮಗಳನ್ನು 1907ನೆ ಇಸವಿಯ ಜುಲೈ ಮೊದಲನೆ ತಾರೀಖಿನ ಲಾಗಾಯಿತು ಯೂನಿಯನ್‌ಗಳಾಗಿ ಏರ್ಪಡಿಸಲಾಗುತ್ತದೆ ಎಂದು ಸಮಸ್ತರ ತಿಳಿವಳಿಕೆಯ ಬಗ್ಗೆ ಈ ಮೂಲಕ ಪ್ರಕಟಿಸಿ ಇದೆ.

ಬೆಂಗಳೂರು ತಾಲ್ಲೂಕು.

1. ಬೇಗೂರು.

ಹೊಸಕೋಟೆ ತಾಲ್ಲೂಕು.

2. ಹಿಂಡಿಗನಾಳ್.

ಆನೇಕಲ್ ತಾಲ್ಲೂಕು.

3. ತಿಟ್ಟಿ.

4. ಜಿಗಣಿ.

ದೊಡ್ಡಬಳ್ಳಾಪುರ ತಾಲ್ಲೂಕು.

5. ಕಾಡನೂರು.

ದೇವನಹಳ್ಳಿ ತಾಲ್ಲೂಕು.

6. ಆವತ್ತಿ.

7. ಬೂದಿಗೆರೆ.

8. ಬಾಗಲೂರು.

ನೆಲಮಂಗಲ ತಾಲ್ಲೂಕು.

9. ಸೋಂಪುರ.

10. ದೊಡ್ಡಬೆಲೆ.

ಚೆನ್ನಪಟ್ಟಣ ತಾಲ್ಲೂಕು.

11. ಹೊಂಗನೂರು.

12. ಮಳೂರು.

ಕ್ಲೋಸೆಪೇಟೆ ಸಬ್ ತಾಲ್ಲೂಕು.

13. ಬಿಡದಿ.

ಕಾನಕಾನಹಳ್ಳಿ ತಾಲ್ಲೂಕು.

14. ಕೋಡಿಹಳ್ಳಿ.

15. ಹಾರೋಹಳ್ಳಿ.

ಮಾಗಡಿ ತಾಲ್ಲೂಕು.

16. ತಾವರೆಕೆರೆ.

17. ಮೋಟಗಾನಹಳ್ಳಿ.

18. ಗುಡೆಮಾರನಹಳ್ಳಿ.

ತಾರೀಖು 20ನೆ ಜುಲೈ 1907.

ನಂ. J. 216—Pris. 1-07—2, ಮೈಸೂರು ಜೈಲಿನ ಸೂಪರಿಂಟೆಂಡೆಂಟ್ ಮಿ॥ ಆ. ಎಸ್. ಕೃಷ್ಣಸಾಮಿ ಐಯ್ಯರವರನ್ನು, 1904ನೆ ಇಸವಿಯ 2ನೆ ರೆಗ್ಯುಲೇಷನಾದ ಕ್ರಿಮಿನಲ್ ಪ್ರೊಸೀಡ್ಯುರ್ ಕೋಡಿನ 12ನೆ ಪ್ರಕರಣದ ಮೇರೆಗೆ, ಸದರಿ ಜೈಲಿನ ಸರಹದ್ದುಗಳೊಳಗೆ ಮಾಡಲ್ಪಟ್ಟ ಅಪರಾಧಗಳ ಬಗ್ಗೆ 1ನೆ ತರಗತಿಯ ಮಾಜಿಸ್ಟ್ರೇಟಾಗಿ ನೌಕರರ್ಮಾಡಿದೆ ಮತ್ತು ಸದರಿ ಕೋಡಿನ 37ನೆ ಪ್ರಕರಣದ ಮೇರೆ ಅವರಿಗೆ ಛಡಿ ಸಜಾ ವಿಧಿಸುವ ಅಧಿಕಾರವನ್ನು ಕೊಟ್ಟಿದೆ. (ಕ್ರಿಮಿನಲ್ ಪ್ರೊಸೀಡ್ಯುರ್ ಕೋಡಿನ 32ನೆ ಪ್ರಕರಣ).

ತಾರೀಖು 20ನೆ ಜುಲೈ 1907.

ನಂ. ಜೆ. 219—ಲೆಜಿಸ್. 14-04-14, ಒಂದು ಎಕಸ್ಟ್ರಾಡಿಷನ್ ತಪ್ಪಿತಕ್ಕಾಗಿ ಮೈಸೂರು ಸಂಸ್ಥಾನದ ಕ್ರಿಮಿನಲ್ ಕೋರ್ಟಿನ ಫೈಸಲ್ ಮೇರೆಗೆ ಮೈಸೂರು ಸೀಮೆಯ ಜೈಲಿನಲ್ಲಿ ಇಡಲ್ಪಟ್ಟ, ಮತ್ತು ಬ್ರಿಟಿಷ್ ಇಂಡಿಯಾವಿನಲ್ಲಿ ಮಾಡಿದ ಎಕಸ್ಟ್ರಾಡಿಷನ್ ತಪ್ಪಿತಕ್ಕಾಗಿ ಆಪಾದನೆ ಮಾಡಲ್ಪಟ್ಟ ಒಬ್ಬ ಮನುಷ್ಯನನ್ನು ಒಂದು ಸ್ಥಳದಲ್ಲಿ ಮತ್ತು ಯಾದಿಯಲ್ಲಿ ತೋರಿಸಲ್ಪಟ್ಟ ಒಬ್ಬ ಮನುಷ್ಯನಿಗೆ ಅಥವಾ ಅಧಿಕಾರಿಗೆ ತಂದು ಒಪ್ಪಿಸುವಂತೆ, ಮೈಸೂರು ಸಂಸ್ಥಾನದಲ್ಲಿ ಅಂಥಾ ಮನುಷ್ಯನು ಕೈದಿನಲ್ಲಿಡಲ್ಪಟ್ಟಿರುವ ಬಂದೀಖಾನೆಯ ಚಾರ್ಜಿನಲ್ಲಿರುವ ಅಧಿಕಾರಿಗೆ ಬ್ರಿಟಿಷ್ ಇಂಡಿಯಾವಿನ ಒಬ್ಬ ಮಾಜಿಸ್ಟ್ರೇಟಿಂದ ಅಥವಾ ಲಾಯಖಾ ಅಧಿಕಾರ

ಸರಹದ್ದುಳ್ಳ ಕೋರ್ಟಿನಿಂದ ಯಾದಿಯು ಬಂದರೆ, ಅಂಥಾ ಅಧಿಕಾರಿಯು ಅಂಥಾ ಮನುಷ್ಯನನ್ನು ಸದರೀ ಸ್ಥಳಕ್ಕೆ ಕಳುಹಿಸಿ ಸದರೀ ಯಾದಿಯಲ್ಲಿ ಕಂಡ ಮನುಷ್ಯನಿಗೆ ಅಥವಾ ಅಧಿಕಾರಿಗೆ ಒಪ್ಪಿಸಲ್ಪಡುವಂತೆ ಮಾಡುವುದರ ಮೂಲಕ ಆ ಯಾದಿಯ ಕೋರಿಕೆಯಂತೆ ನಡೆಸಿಕೊಡಬೇಕೆಂದು ಮೈಸೂರು ಶ್ರೀಮನ್ಮಹಾರಾಜರವರು ಹುಕುಂ ದಯಪಾಲಿಸುತ್ತಾರೆ:

ಪರಂತು, ಈ ಕೆಳಗೆ ಹೇಳುವಂತೆ —

(1) ಅಂಥಾ ಪ್ರತಿಯೊಂದು ಯಾದಿಯೂ ಘನವನ್ನೈದಿದ ಮೈಸೂರು ಸೀಮೆಯ ರೆಸಿಡೆಂಟರವರ ಮೂಲಕ ಕಳುಹಿಸಲ್ಪಟ್ಟಿರಬೇಕು.

(2) ಯಾದಿಯು ಯಾವ ಮನುಷ್ಯನಿಗೆ ಸಂಬಂಧಪಟ್ಟಿರುತ್ತದೆಯೋ ಆ ಮನುಷ್ಯನು ಫಾಶಿ ಸಜಾ ವಿಧಿಸಲ್ಪಟ್ಟವನಾಗಿದ್ದರೆ, ಅಂಥಾ ಯಾವ ಯಾದಿಯ ಕೋರಿಕೆಯಂತೆಯೂ ನಡೆಸಿಕೊಡಕೂಡದು.

ವಿವರಣೆ — ಈ ಹುಕುಂನಲ್ಲಿ, "ಎಕ್ಸ್‌ಟ್ರಾಡಿಷನ್ ತಪ್ಪಿತ" ಎಂದರೆ 1903ನೆ ಇಸವಿಯ ಇಂಡಿಯನ್ ಎಕ್ಸ್‌ಟ್ರಾಡಿಷನ್ ಆಕ್ಟಿನ (ಸಭಾಸಮೇತರಾದ ಗವರ್ನರ್ ಜನರಲ್‌ರವರ 1903ನೆ ಇಸವಿಯ 15ನೆ ನಂಬರ್ ಆಕ್ಟಿನ) ಒಂದನೆಯ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟಂಥಾ ಯಾವುದಾದರೂ ತಪ್ಪಿತವೆಂದು ಅರ್ಥವಾಗುತ್ತದೆ.

2. ಮೈಸೂರು ಸೀಮೆಯಲ್ಲಿ ತಪ್ಪು ಸಾಬೀತಾಗಿ ಬಂದೀಖಾನೆಯಲ್ಲಿ ಇಡಲ್ಪಟ್ಟು, ಸಜಾ ಅನುಭವಿಸುತ್ತಿರುವ ಮನುಷ್ಯನನ್ನು ಮೇಲೆ ಹೇಳಿದ ಮೇರೆಗೆ ಒಪ್ಪಿಸಿದ ತರುವಾಯ ಬ್ರಿಟಿಷ್ ಇಂಡಿಯಾದಿನಿಂದ ಮೈಸೂರು ಸೀಮೆಗೆ ಅವನನ್ನು ಪುನಃ ವಾಪಸು ಕಳುಹಿಸುವ ತಾರೀಖಿನ ವರೆಗೆ, ಅವನ ಸಜಾವು ಅಮಾನತ್ತಿನಲ್ಲಿಡಲ್ಪಟ್ಟಂತೆ ಭಾವಿಸಲ್ಪಟ್ಟು, ತರುವಾಯ ಸದರಿ ತಾರೀಖಿನಲ್ಲಿ ಪುನಃ ಪ್ರಾರಂಭವಾಗಿ ಅವನನ್ನು ಒಪ್ಪಿಸಿಕೊಟ್ಟ ತಾರೀಖಿನಲ್ಲಿ ಮುಗಿಯದೆ ಉಳಿದಿದ್ದ ಭಾಗದ ಕಾಲದ ಪರ್ಯಂತ ನಡೆಯತಕ್ಕದ್ದೆಂದೂ ಶ್ರೀಮನ್ಮಹಾರಾಜರವರು ಹುಕುಂ ದಯಪಾಲಿಸಿರುತ್ತಾರೆ.

3. ಯಾವುದಾದರೂ ತಪ್ಪಿತಕ್ಕಾಗಿ ಮೈಸೂರು ಸಂಸ್ಥಾನದ ಕ್ರಿಮಿನಲ್ ಕೋರ್ಟಿನವರ ಫೈಸಲ್ ಮೇರೆಗೆ ಮೈಸೂರು ಸಂಸ್ಥಾನದ ಬಂದೀಖಾನೆಯಲ್ಲಿ ಇಡಲ್ಪಟ್ಟಿದ್ದು ಬ್ರಿಟಿಷ್ ಇಂಡಿಯಾದಿನಲ್ಲಿ ಮಾಡಿದ ಎಕ್ಸ್‌ಟ್ರಾಡಿಷನ್ ತಪ್ಪಿತಕ್ಕಾಗಿ ಅನಂತರ ಆಪಾದಿಸಲ್ಪಡಬಹುದಾದ ಯಾವ ಮನುಷ್ಯನ ವಿಷಯದಲ್ಲಾಗಲಿ ಈ ಇಸ್ತಿಹಾರಿನ ನಿಯಮಗಳು ಸರ್ಕಾರದ ವಿಶೇಷ ಹುಕುಂ ಮೇರೆಗೆ ಲಗಾವಾಗುಹುದು.

ವಿವರಣೆ — "ತಪ್ಪಿತ" ಎಂಬ ಮಾತು, ಈ ಪ್ಯಾರಾದಿನಲ್ಲಿ ಪ್ರಥಮತಃ ಬರುವಾಗ, ಬ್ರಿಟಿಷ್ ಇಂಡಿಯಾದಿನಲ್ಲಿ ಮಾಡಲ್ಪಟ್ಟಿದ್ದರೆ ತಪ್ಪಿತವಾಗದೆ ಇರುತ್ತಿದ್ದಂಥಾ ಕಾರ್ಯವನ್ನು ಒಳಗೊಂಡಿರುವುದಿಲ್ಲ.

ತಾರೀಖು 24ನೆ ಜುಲೈ 1907.

ನಂ. ಜೆ. 234—ಕೋರ್ಟ್ಸ್. 27-07—2, ಚನ್ನರಾಯಪಟ್ಣ ಡಿವಿಜನಿನ ಚಾರ್ಜಿನಲ್ಲಿರುವ ಆಕ್ಟಿಂಗ್ ಎಕ್ಸ್‌ಟ್ರಾ ಅಸಿಸ್ಟೆಂಟ್ ಕಮಿಷನರ್ ಮಿ|| ಎಂ. ಲಕ್ಷ್ಮಣಶಾಸ್ತ್ರಿಗಳಿಗೆ, 1904ನೆ ಇಸವಿಯ 2ನೆ ರೆಗ್ಯುಲೇಷನಾದ ಕ್ರಿಮಿನಲ್ ಪ್ರೊಸೀಜ್ಯುರ್ ಕೋಡಿನ 12ನೆ ಪ್ರಕರಣದ ಮೇರೆ, ಮೊದಲನೆ ತರಗತಿಯ ಮ್ಯಾಜಿಸ್ಟ್ರೇಟಿನ ಅಧಿಕಾರಗಳನ್ನು, ಅವರು ಅಸಿಸ್ಟೆಂಟ್ ಕಮಿಷನರಾಗಿ ನೇಮಿಸಲ್ಪಟ್ಟಿರುವ ಕಾಲದಲ್ಲಿ ಚಲಾಯಿಸತಕ್ಕ ಬಗ್ಗೆ, ಕೊಟ್ಟಿದೆ.

ತಾರೀಖು 15ನೆ ಜುಲೈ 1907.

ನಂ. ರೆ. 390—ಲ್ಯಾ. ಸ. 1-07—2, ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 236ನೆ ಪ್ರಕರಣದ ಮೇರೆ ಸದರಿ ಕೋಡಿನ 8 ರಿಂದ 10ರ ವರೆಗಿನ ಅಧ್ಯಾಯಗಳ ನಿಯಮಗಳನ್ನು ಕುಣಿಗಲ್ ತಾಲ್ಲೂಕಿನಲ್ಲಿ ಒಂದು ಜೋಡಿ ಗ್ರಾಮವಾದ ಹಾಲಗೊಂಡನಹಳ್ಳಿಯಲ್ಲಿ ಜಾರಿಗೆ ತರುವುದಕ್ಕೆ ಅಧಿಕಾರ ಕೊಡಲು ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 16ನೆ ಜುಲೈ 1907.

ನಂ. ರೆ. 407—ಲ್ಯಾ. ರೆ. 20-07—4, ಚೀಫ್ ಕೋರ್ಟಿನ ಡೆಪ್ಯುಟಿ ಟ್ರಾನ್ಸ್‌ಲೇಟರಾದ ಎಂ. ಎಲ್. ರಾಮೇಗೌಡರನ್ನು ಕುಂಸಿ ಸಬ್ ತಾಲ್ಲೂಕಿನ ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಮತ್ತು ಮೂರನೆ ತರಗತಿಯ ಮ್ಯಾಜಿಸ್ಟ್ರೇಟಾಗಿರುವಂತೆ 1907ನೆ ಇಸವಿಯ ಜುಲೈ 8ನೆ ತಾರೀಖಿನ ರೆ. 240—ಲ್ಯಾ. ರೆ. 20-07—1ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಮಾಡಿದ ನೌಕರರಾತಿಯನ್ನು ಇದರಿಂದ ರದ್ದು ಮಾಡಿ ಇದೆ; ಮತ್ತು ಶಿವಮೊಗ್ಗಾ ಡೆಪ್ಯುಟಿ ಕಮಿಷನರ ಕಚೇರಿಯ ಜುಡಿಷಲ್ ಹೆಡ್ಮುನಷಿ ಎ. ರಾಜಾರಾಯರನ್ನು ಕುಂಸಿ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮತ್ತು ಮೂರನೇ ತರಗತಿಯ ಮಾಜಿಸ್ಟ್ರೇಟಾಗಿ ಬದಲಿ ನೋಡುವುದಕ್ಕೆ ನೇಮಿಸಿ ಇದೆ.

ತಾರೀಖು 17ನೆ ಜುಲೈ 1907.

ನಂ. ರೆ. 422—ಲ್ಯಾ. ರೆ. 33-07—2, ಮೈಸೂರು ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಮಿ|| ಎ. ಸುಬ್ರಹ್ಮಣ್ಯ ಐಯ್ಯರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 177ನೆ ನಿಬಂಧನೆಯ ಮೇರೆಗೆ, 1907ನೆ ಜುಲೈ 18ರಿಂದ ಹತ್ತು ದಿವಸಗಳ ವರೆಗೆ ಪ್ರಿವಿಲೇಜ್ ರಜಾ ಕೊಟ್ಟಿದೆ. ಮಿ|| ಎ. ಸುಬ್ರಹ್ಮಣ್ಯ ಐಯ್ಯರ ಗೈರ್‌ಹಾಜರಿಯಲ್ಲಿ ಅಥವಾ ಇನ್ನೊಂದು ಹುಕುಂ ಕೊಡುವ ವರೆಗೆ, ಖಜಾನೆಯ ಅಸಿಸ್ಟೆಂಟ್ ಕಮಿಷನರ್ ಮಿ|| ಟಿ. ಕೆ. ಸುಂದರರಾಜೈಯ್ಯಂಗಾರ್ರು, ತಮ್ಮ ಕೆಲಸಗಳ ಜತೆಗೆ ಮೈಸೂರು ಸಬ್ ಡಿವಿಜನಿನ ಚಾರ್ಜಿನಲ್ಲಿ ಇರತಕ್ಕದ್ದು.

ತಾರೀಖು 19ನೆ ಜುಲೈ 1907.

ನಂ. ರೆ. 451—ಫಾರೆಸ್ಟ್. 206-06—3, ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿನ ಕೆಲವು ಜಂಗಲಿಗಳನ್ನು ಸಂಸ್ಥಾನದ ಜಂಗಲಿಗಳಾಗಿ ಪ್ರಸಿದ್ಧಪಡಿಸುವ 1895ನೆ ಇಸವಿಯ ಜೂನ್ 19ನೆ ತಾರೀಖಿನ ಜಿ. ಎಲ್. 23, 538—ರೆ. 343ನೆ ನಂಬರಿನ ಸರ್ಕಾರಿ

ಇಸ್ತಿಹಾರ್ನಾಮೆಯ ವಿಷಯದಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಕೆಳಗೆ ಹೆಸರು ಕಾಣಿಸಿರುವ ಸಂಸ್ಥಾನದ ಜಂಗಲಿಗಳ ನೆರೆಹೊರೆಯ ಗ್ರಾಮಸ್ಥರಿಗೆ ಇದರಡಿ ಕಂಡ ರಿಯಾಯಿತಿಗಳನ್ನು ಮಂಜೂರ್ಮಾಡಲು ಅಪ್ಪಣೆ ದಯಪಾಲಿಸಿರುತ್ತಾರೆ :—

ಸಂಸ್ಥಾನದ ಜಂಗಲಿಗಳು.	ರಿಯಾಯಿತಿಗೆ ಹಕ್ಕುಳ್ಳ ಗ್ರಾಮಗಳ ಹೆಸರು.	ರಿಯಾಯಿತಿಗಳ ವಿವರಗಳು.
1. ಬೆಟ್ಟದ ಕುರಲಿ ಸಂಸ್ಥಾನದ ಜಂಗಲು.	1. ಹಸವಿ ... 2. ಬೆಟ್ಟದ ಕುರಲಿ ... 3. ಹಯ ...	ಸೌದೆ.—ಬಂಡಿ ಬಂಡಕ್ಕೆ ಎರಡು ಆಣೆಗಳ ಮೇರೆಗೆ. ಶೀಟು ಮತ್ತು ವ್ಯವಸಾಯದ ಮುಟ್ಟುಗಳಗಾಗಿ ಮರ.— ವಿಧಿಸಿರುವ ಸೀನಿಯರೇಜ್ ದರಗಳಲ್ಲಿ ನಾಲ್ಕರಲ್ಲಿ ಒಂದುಭಾಗಕ್ಕೆ. ಹುಲ್ಲು ಮೇಯಿಸುವುದು.—ದನಗಳಿಗೆ ಅಥವಾ ಎತ್ತುಗಳಿಗೆ ತಲಾ 1 ಆಣೆ ಮೇರೆಗೆ. ಎಮ್ಮೆಗಳಿಗೆ ತಲಾ 2 ಆಣೆಗಳ ಮೇರೆಗೆ. ಷರಾ.—ಜಂಗಲುಗಳನ್ನು ಸವರುವುದರಲ್ಲಿ ಬಿದ್ದ ಸೌದೆ, ಕಂಭ, ಮತ್ತು ಮರಗಳು, ಇವುಗಳನ್ನು ವಿಲೆ ಮಾಡುವಾಗ ಹೊರಗಿನವರಿಗಿಂತ ಮೊದಲು ಅವುಗಳನ್ನು ಕೊಂಡುಕೊಳ್ಳುವುದಕ್ಕೆ ಗ್ರಾಮಸ್ಥರಿಗೆ ಹಕ್ಕು ಇರತಕ್ಕದ್ದು. ಕಾಡು ಕಿಚ್ಚನ್ನು ಆರಿಸುವುದರಲ್ಲಿ ಜಂಗಲಿ ಅಧಿಕಾರಿಗಳಿಗೆ ಸಹಾಯ ಮಾಡುವುದಕ್ಕೆ ಗ್ರಾಮಸ್ಥರು ಸಿದ್ಧರಾಗಿರಬೇಕು.
2. ಮಲಂದೂರು ತಾಕು ...	1. ಸಂಪವಳ್ಳಿ ... 2. ಹಿರೆ ಬೆಳಗುಂಜಿ ... 3. ಚಿಕ್ಕ ಬೆಳಗುಂಜಿ ... 4. ಮುಂಬಳ ...	ಮೇಲೆ ಕಂಡಂತೆ.
3. ಕರಡಿಬೆಟ್ಟ ತಾಕು ...	1. ಕಲ್ಮನೆ ... 2. ಮದರವಳ್ಳಿ ... 3. ಯರೆಕೊಪ್ಪ ... 4. ಹರಿಹರಪುರ ... 5. ಜೋರಡಿ ...	ಡಿಟೋ
4. ಕಾವಡಿ ತಾಕು ...	1. ಇರಡವಳ್ಳಿ ...	ಡಿಟೋ
5. ಗಂಗವನಸರ ...	1. ಹೊಸೂರು ... 2. ನಲ್ಲರಕೊಪ್ಪ ... 3. ಬಳ್ಳೂರು ... 4. ಬೆಳಗುತ್ತಿ ... 5. ಹ್ಯಾತ್ತನಕೊಪ್ಪ ...	ಡಿಟೋ
6. ಬೇಲಂದೂರು ಜಂಗಲು ...	1. ಮುಡಬರ ಸಿದ್ದಾಪುರ ... 2. ಮಲ್ಲೇಪುರ ... 3. ಬೊಟ್ಟೇನಕಟ್ಟೆ ... 4. ಕನ್ನ ...	ಡಿಟೋ
7. ತೆಲಗಡ್ಡೆ ಜಂಗಲು ...	1. ಸೂರನಿಗಿ ... 2. ಹೊಸೂರು ನಿಜ್ಜಿ ... 3. ಕುಮರೂರು ... 4. ಮಾದಾಪುರ ... 5. ಅರೆ ತೆಲಗಡ್ಡೆ ... 6. ತೆಲಗಡ್ಡೆ ... 7. ಮಂಜಾಪುರ ... 8. ಅಲ್ಲಹಳ್ಳಿ ...	ಡಿಟೋ
8. ಚೋರನಡಹಳ್ಳಿ ಜಂಗಲು ...	1. ಚೋರನಡಹಳ್ಳಿ ...	ಮನೆಯ ಉಪಯೋಗಕ್ಕಾಗಿ ಸೌದೆ, ಮುಫತ್ತಾಗಿ. ಮನೆಗೆ ಹೊದ್ದಿಸುವ ಹುಲ್ಲು ಮತ್ತು ನಾರು, ಮುಫತ್ತಾಗಿ. 10 ಆಣೆ ... ಪೈನ ಲೋಕಲ್ ಸೆಸ್ ನಿಶ ರೂಪಾಯಿ 10—4—0 ಯ ಹುಲ್ಲುಬನ್ನಿ ಪಾವತಿ ಮಾಡುವುದಕ್ಕೆ ಒಳಪಟ್ಟು ಹುಲ್ಲು ಮೇಯಿಸುವುದು, ಮುಫತ್ತಾಗಿ. ವ್ಯವಸಾಯದ ಮುಟ್ಟುಗಳಿಗೆ ಮರ, ನೇಗಿಲು ಬಂದಕ್ಕೆ 4 ತಲೆಹೊರೆಗಳ ಹಾಗೆ.

ತಾರೀಖು 22ನೆ ಜುಲೈ 1907.

ನಂ. ರೆ. 497—ಲ್ಯಾ. ರೆ. 39-07—2, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ ಹಾಸನ ಡಿಸ್ಟ್ರಿಕ್ಟು ಖಜಾನೆಯ ಚಾರ್ಜಿನಲ್ಲಿರುವ ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರ್, ಮಿ|| ಟಿ. ಧರ್ಮರಾಜ ಶೆಟ್ಟಿಗೆ 1907ನೆ ಇಸವಿಯ ಜೂನ್ 20ನೆ ತಾರೀಖಿನಿಂದ 13 ದಿವಸಗಳ ಪ್ರಿವಿಲೇಜ್ ರಜಾ ಕೊಟ್ಟಿತ್ತು.

ಹುಕುಂ ಬಮೋಜೀಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 17ನೆ ಜುಲೈ 1907.

ನಂ. 645—5073, ಮಾರಿಕಣಿವೆ ಡಿವೀಜನಿಗೆ ಸೇರಿದ ಅಸಿಸ್ಟೆಂಟ್ ಇಂಜನಿಯರ್ ಮಿ|| ಕೆ. ಅನಂತಾಚಾರಿಯ, ಎಲ್. ಸಿ. ಇ., ಯವರಿಗೆ ಈ ಆಫೀಸಿನ ಸನ್ 1907ನೆ ಜುಲೈ 6ನೆ ತಾರೀಖು 614—485ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಜೂನ್ 27ನೆ ತಾರೀಖು ಲಾಗಾಯಿತು ಕೊಟ್ಟಿದ್ದ 15 ದಿನಗಳ ಪ್ರಿವಿಲೇಜ್ ರಜಾವನ್ನ ಇನ್ನೂ 1 ತಿಂಗಳು ಜಾಸ್ತಿ ಮಾಡಲ್ಪಟ್ಟಿದೆ.

ತಾರೀಖು 20ನೆ ಜುಲೈ 1907.

ನಂ. 652—5758, ಸ್ಪೆಷಲ್ ಡ್ಯೂಟಿ ಎಗ್ಸಿಕ್ಯೂಟಿವ್ ಇಂಜನಿಯರ್ ಆಫೀಸಿಗೆ ಸೇರಿದ ಸಬ್ ಅಸಿಸ್ಟೆಂಟ್ ಇಂಜನಿಯರ್ ಮಿ|| ಕೆ. ಎಂ. ವಾಸುದೇವರಾವ್ ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ 177ನೆ ಆರ್ಟಿಕಲ್ ಪ್ರಕಾರ ಸನ್ 1907ನೆ ಜುಲೈ 29ನೆ ತಾರೀಖಿನಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ಹುಕುಂ ಬಮೋಜೀಬ್,
ಬರ್ನಾರ್ಡ್ ಥಾಸ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನಮೆಂಟ್ ಅಂಡರ್ ಸೆಕ್ರೆಟರಿ.

ರೈಲ್ವೆ ಇಲಾಖೆ.

ತಾರೀಖು 12ನೆ ಏಪ್ರಿಲ್ 1907.

ನಂ. 542—ರೈಲ. 124, ಮೈಸೂರು ಮ್ಯಾಂಗನೀಸ್ ಕಂಪನಿ ಲಿಮಿಟೆಡ್ನವರು ಬೀರೂರು ಶಿವಮೊಗ್ಗ ರೈಲ್ವೆಗೆ ಸೇರಿದ ಶಿವಮೊಗ್ಗ ರೈಲ್ವೆ ಸ್ಟೇಷನಿಂದ ಕುಮಸಿ ಹತ್ತಿರ ಇರುವ ಮ್ಯಾಂಗನೀಸ್ ಫೀಲ್ಡ್‌ಗಳಿಗೆ ಟ್ರಾಮು ಲೈನನ್ನು ಹಾಕಿಕೊಳ್ಳಲು ಶಿವಮೊಗ್ಗ ಮ್ಯುನಿಸಿಪಲ್ ಬೋರ್ಡಿನವರ ಇರಾದೆಯನ್ನು ಪಡೆದು ಮಂಜೂರಿ ಹುಕುಂ ಬಗ್ಗೆ ಅರ್ಜಿ ಕೊಟ್ಟಿರುವದ್ದರಿಂದ ಮೈಸೂರು ಶ್ರೀಮನ್ ಮಹಾರಾಜರ ಸರಕಾರದವರು 1906ನೆ ಇಸವಿ 2ನೆ ಮೈಸೂರು ಟ್ರಾಮುವೆಗಳ ರೆಗ್ಯುಲೇಷನ್ 6ನೆ ಪ್ರಕರಣದ 3ನೆ ಕಲಂಗಳ ಅನುಸಾರ ಈ ಕೆಳಗೆ ನಮೂದಾಗುವ ಹುಕುಂ ದಯಪಾಲಿಸಿರುತ್ತಾರೆ.

ಅವತರಣಿಕೆ.

ಚಿಕ್ಕ ಹೆಸರು.

1. ಈ ಹುಕ್ಕುಂನ 1907ನೆ ಇಸವಿ ಮೈಸೂರು ಮ್ಯಾಂಗನೀಸ್ ಕಂಪನಿ ಲಿಮಿಟೆಡ್ ಸ್ಟೀಮ ಟ್ರಾಮುವೆ—ಹುಕುಂ ಎಂಬದಾಗಿ ಕರಿಯಲ್ಪಡತಕ್ಕದ್ದು.

ಅರ್ಥ ವಿವರಣೆ ಕಲಂ.

2. 1906ನೆ ಇಸವಿ ಮೈಸೂರು ಟ್ರಾಮುವೆ—ರೆಗ್ಯುಲೇಷನ್‌ನಲ್ಲಿ ವಿವರಿಸಲ್ಪಟ್ಟಿರುವ ಅರ್ಥಗಳೇ ಈ ಹುಕುಂನಲ್ಲಿ ಉದಹರಿಸಲ್ಪಟ್ಟಿರುವ ಶಬ್ದಗಳಿಗು ಮತ್ತು ಉಚ್ಚಾರಣೆಗಳಿಗು ಅನ್ವಯವಾಗತಕ್ಕದ್ದು. ಆದರೆ ಈ ಹುಕುಂನಲ್ಲಿ "ಟ್ರಾಮುವೆ" ಅಥವಾ "ಕೆಲಸ" ಎಂಬ ಉಚ್ಚಾರಣೆಗಳು ಈ ಹುಕುಂನಿಂದ ಮಂಜೂರಾಗಿರುವ ಟ್ರಾಮುವೆ ಮತ್ತು ಕೆಲಸಗಳು ಮತ್ತು ಕಾರ್ಯಗಳೆಂದು ಅರ್ಥವಾಗತಕ್ಕದ್ದು.

ಅನ್ವಯುವಾಗತಕ್ಕ ಷರತ್ತುಗಳು.

3. ಈ ಹುಕುಂನಿಂದ ಮಂಜೂರಾಗಿರುವ ಟ್ರಾಮುವೆ ಎಂಬುವದು 1906ನೆ ಇಸವಿ 2ನೆ ಮೈಸೂರು ಟ್ರಾಮುವೆ ರೆಗ್ಯುಲೇಷನ್ ಅನುಸರಿಸಿ ಮತ್ತು ಈ ಹುಕುಂ ನಿಬಂಧನೆಗಳಿಗೆ ಒಳಪಟ್ಟು ಹಾಕಲ್ಪಡತಕ್ಕದ್ದು ಮತ್ತು ಕೆಲಸ ನಡಿಸಲ್ಪಡತಕ್ಕದ್ದು.

ಪ್ರಮೋಟರ್ಸ್ ಯಾ ಪ್ರವರ್ತಕರು.

4. ಮೈಸೂರು ಮ್ಯಾಂಗನೀಸ್ ಕಂಪನಿ ಲಿಮಿಟೆಡ್ನವರು ಈ ಹುಕುಮಿನ ಉದ್ದೇಶಕ್ಕಾಗಿ ಪ್ರಮೋಟರ್ಸ್ ಯಾ ಪ್ರವರ್ತಕರಾಗಿಯೂ ಮತ್ತು ಈ ಹುಕುಮಿನಲ್ಲಿ ಪ್ರಮೋಟರ್ಸ್ ಯಾ ಪ್ರವರ್ತಕರೆಂದು ಉದಹರಿಸಲ್ಪಟ್ಟಿರುವದಾಗಿಯೂ ಇರತಕ್ಕದ್ದು.

ಕಟ್ಟತಕ್ಕ ಟ್ರಾಮವೆ.

ಮಂಜೂರಾಗಿರುವ ಟ್ರಾಮವೆಯ ವಿವರಣೆ.

5. ಈ ಹುಕುಂಗೆ ಒಳಪಟ್ಟು ಮತ್ತು ಈ ಹುಕುಮಿನ ಉದ್ದೇಶಗಳಿಗೋಸ್ಕರ ಹಾಜರು ಮಾಡಲ್ಪಟ್ಟ ಪ್ಲಾನ್ ಮತ್ತು ಸೆಕಷನ್ ಗಳಿಗನುಸಾರವಾಗಿ ಈ ಮುಂದೆ ವಿವರಿಸಲ್ಪಟ್ಟಿರುವ ಟ್ರಾಮವೆಯನ್ನು ಮತ್ತು ಇದಕ್ಕೆ ಸಂಬಂಧಪಟ್ಟ ಅಥವಾ ಇದರ ಉದ್ದೇಶಕ್ಕೋಸ್ಕರ ಯುಕ್ತವಾದ ಕಂಬಿಗಳು ಬೆರಿಂಗ್ಸ್ ಆಫಿಸ್‌ಗಳು ಸ್ಟೇಷನ್ ಕಟ್ಟಡಗಳು ಕೆಲಸಗಳು ಮತ್ತು ಅನುಕೂಲತೆಗಳ ಸಹಿತ ಪ್ರಮೋಟರು ಕಟ್ಟತಕ್ಕದ್ದು ಮತ್ತು ಕಾಪಾಡತಕ್ಕದ್ದು ಮತ್ತು ಅದನ್ನ ಉಪಯೋಗಿಸಿಕೊಂಡು ಕೆಲಸ ನಡಸತಕ್ಕದ್ದು. ಈ ಹುಕುಮಿನಿಂದ ಮಂಜೂರು ಮಾಡಲ್ಪಟ್ಟಿರುವ ಟ್ರಾಮವೆಯು ಅವಶ್ಯಕವಾದ ಅಡ್ಡದಾರಿಗಳೊಡನೆ ಸುಮಾರು 30 ಮೈಲಿಗಳ ಫಾಸಲೆಯುಳ್ಳ ಒಂಟಿ ಲೈನಾಗಿರುತ್ತೆ. ಇದು ಕೊಂಚ ಭಾಗ ಅದಕ್ಕಾಗಿ ರೂಪಿಸಲ್ಪಟ್ಟಿರುವ ಜಾಡೆಯು ಮತ್ತು ಕೆಲವು ಭಾಗ ಸಂಸ್ಥಾನದ ರಸ್ತೆ ಮೇಲಿಯೂ ಬೀರೂರು–ಶಿವಮೊಗ್ಗಾ ರೈಲ್ ಮಾರ್ಗದ ಶಿವಮೊಗ್ಗ ರೈಲ್ವೆ ಸ್ಟೇಷನ್‌ಗೆ ಶಿವಮೊಗ್ಗ ಟವುನ್ ಮುಖಾಂತರವಾಗಿ ಹಾಕಲ್ಪಡತಕ್ಕದ್ದು.

ಪ್ರಮೋಟರ್ ತಮ್ಮ ಟ್ರಾಮವೆಯನ್ನು ಕಟ್ಟತಕ್ಕ ಯಾವ ಇತರ ಮನುಷ್ಯನಾಗಲಿ ಅಥವಾ ಸ್ಥಳೀಯ ಅಧಿಕಾರಿಯಾಗಲಿ ಅವಶ್ಯಕವಾದ ಕಡೆಗಳಲ್ಲಿ ಉಪಯೋಗಿಸಿಕೊಳ್ಳಲು ಅವಕಾಶ ಕೊಡೋಣ.

6. 1906ನೆ ಇಸವಿ 2ನೆ ಮೈಸೂರು ಟ್ರಾಮವೆ–ರೆಗ್ಯುಲೇಷನ್ 4ನೆ ಪ್ರಕರಣಕ್ಕನುಗುಣವಾಗಿ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಟ್ರಾಮವೆಯನ್ನು ಕಟ್ಟುವದಕ್ಕೆ ಈ ತರುವಾಯ ಅಧಿಕಾರ ಕೊಡಲ್ಪಡತಕ್ಕ ಯಾವ ಇತರ ಮನುಷ್ಯನಾಗಲಿ ಅಥವಾ ಸ್ಥಳೀಯ ಅಧಿಕಾರಿಯಾಗಲಿ ಈ ಮೂಲಕ ಅಧಿಕಾರ ಹೊಂದಿ ಬಹಿರಂಗವಾದ ರಸ್ತೆಯ ಮೇಲೆ ಹಾಕಲ್ಪಟ್ಟಿರುವ ಟ್ರಾಮವೆಯ ಭಾಗವನ್ನು ಉಪಯೋಗಿಸಲು ಸರಕಾರದವರಿಂದ ಹಾಗೆ ಅಪೇಕ್ಷಿಸಲ್ಪಟ್ಟರೆ ಪ್ರಮೋಟರು ಅವಕಾಶ ಕೊಡತಕ್ಕದ್ದು. ಹಾಗೆ ಉಪಯೋಗಿಸೋಣದರ ಷರತ್ತುಗಳು ಅಂಥಾ ಯಾವ ಬಬ್ಬ ಮನುಷ್ಯ ಅಥವಾ ಸ್ಥಳೀಯ ಅಧಿಕಾರಿ ಮತ್ತು ಪ್ರಮೋಟರ್ ಸರಕಾರದವರ ಇರಾದೆಯಿಂದ ಒಪ್ಪತಕ್ಕಂಥಾದ್ದಾಗಿರತಕ್ಕದ್ದು. ಆದರೆ ವಿವಾದ ಹುಟ್ಟಿದ ಕಾಲದಲ್ಲಿ ಸರಕಾರದವರ ತೀರ್ಪು ಆಖೈರಾಗಿರತಕ್ಕದ್ದು ಮತ್ತು ಉಭಯತ್ರರು ಒಪ್ಪತಕ್ಕದ್ದಾಗಿರುತ್ತೆ.

ತಂತಿಯ ಬೇಲಿ.

7. 9ನೆ ನಿಬಂಧನೆ ಪ್ರಕಾರ ಹೆಚ್ಚಿಗೆ ಷರತ್ತುಗಳು ವಿಧಾಯಕವಾಗಿರುವ ತುಂಗಾನದಿ ಸೇತುವೆ ಮೇಲೆ ವಿನಹ ಮುನಿಸಿಪಲ್ ರಸ್ತೆ ಮೇಲೆ ಅಥವಾ ಅದರ ಪಕ್ಕದಲ್ಲಿ ಹೋಗುವ ಕಡೆ ಲೈನಿಗೆ ತಂತಿ ಬೇಲಿ ಪ್ರಮೋಟರ್ ಹಾಕತಕ್ಕದ್ದು.

ಲಿಮಿಟೇಷನ್‌ಯನ್ನು ಕಾಲನಿಬಂಧನೆಗೆ ಒಳಪಟ್ಟು ರಸ್ತೆಯಲ್ಲಿ ಉಪಯೋಗಿಸಲು ಪ್ರಮೋಟರ ಅಧಿಕಾರ ಹೊಂದಿರೋಣ.

8. ಪ್ರಮೋಟರ್ ಯಾವದೊಂದು ಕಟ್ಟಡಕ್ಕೆ ಅಥವಾ ಅದರ ಪ್ರಯುಕ್ತವಾದ ಕಾಮಗಾರಿಗೆ ವಿನಹ ಪಕ್ತು ಟ್ರಾಮವೆಯನ್ನ ಹಾಕುವದಕ್ಕಾಗಿ ಸ್ಥಳೀಯ ಅಧಿಕಾರಿಯು ಸಂಸ್ಥಾನದ ರಸ್ತೆಯ ಭಾಗವನ್ನು ಮಂಜೂರು ಮಾಡುವ ಪಕ್ಷದಲ್ಲಿ ಚರಂಡಿಯಿಂದ ಅಥವಾ ರಸ್ತೆಯು ದಡವುಳ್ಳದ್ದಾಗಿದ್ದರೆ ಆ ದಡದಿಂದ 5½ ಅಡಿ ಅಗಲ ಮಾತ್ರ ಉಪಯೋಗಿಸಿಕೊಳ್ಳಬಹುದು ಮತ್ತು ದಾಟುವ ಸ್ಥಳಗಳು ಅಥವಾ ಅಡ್ಡ ಸೇತುವೆಗಳು ಅಥವಾ ಮೋಹರಿಗಳು ಇವುಗಳನ್ನ ಕಟ್ಟಬೇಕಾದಾಗ ಪ್ರತಿ ಒಂದಕ್ಕು ಮೈಸೂರು ದೇಶದ ಚೀಫ್ ಇಂಜನಿಯರವರು ಅವಶ್ಯಕವೆಂದು ಆಲೋಚಿಸುವ ಮಟ್ಟಿಗೆ ರಸ್ತೆಯ ಮಧ್ಯದ ವರಿಗು ವ್ಯಾಪಿಸಬಹುದು, ಆದರೆ ಟ್ರಾಮವೆಗೋಸ್ಕರ ಸೇತುವೆ ಅಥವಾ ಮೋಹರಿಯ ಬಡಾವಣೆಯು ಅಥವಾ ಬದಲಾವಣೆಯು ಅವಶ್ಯಕವೆಂದು ಸದರಿ ಇಂಜನಿಯರವರಿಗೆ ತೋರುವ ಪಕ್ಷದಲ್ಲಿ ಅವರ ಸಮಾಧಾನಕ್ಕೆ ಒಳಪಟ್ಟು ಪ್ರಮೋಟರ್ ತಮ್ಮ ಲಾಗವಡಿನಿಂದ ಆ ಕೆಲಸಗಳನ್ನು ನಡಿಸತಕ್ಕದ್ದು ಮತ್ತು ಅವುಗಳ ಕಾಮಗಾರಿ ನಡಿಯುತ್ತಾ ಇರುವಾಗ ಏನಾದರೂ ತಿದ್ದುಪಾಟುಗಳು ಅವಶ್ಯಕವೆಂದು ಕಂಡುಬಂದರೆ ಅವು ಸ್ಥಳೀಯ ಅಧಿಕಾರಿ ಮತ್ತು ಮೇಲ್ಕಂಡ ಇಂಜನಿಯರ್ ಇವರಿಂದ ಬರಹ ಮೂಲಕ ಮೊದಲು ಅನುಮತಿಯನ್ನು ಪಡದು ನಡಸಲ್ಪಡಬಹುದು.

ಮುನಿಸಿಪಲ್ ರೋಡುಗಳಿಗೆ ಟ್ರಾಮು ಲೈನ್ ಅಡ್ಡವಾಗಿ ಬರುವ ಕಡೆಗಳಲ್ಲೆಲ್ಲಾ ಪ್ರಮೋಟರ್ ಗೇಟು ಯಾನೆ ಬಾಗಲಗಳನ್ನ ಇಡತಕ್ಕದ್ದು.

ಶಿವಮೊಗ್ಗ ಬಳಿ ಇರುವ ತುಂಗಾನದಿ ಸೇತುವೆಯನ್ನು ಕೆಲವು ಷರತ್ತುಗಳಿಗೆ ಒಳಪಟ್ಟು ಉಪಯೋಗಿಸಿಕೊಳ್ಳಲು ಪ್ರಮೋಟರ ಅಧಿಕಾರ ಹೊಂದಿರೋಣ.

9. ಈ ಕೆಳಗೆ ನಮೂದಿಸುವ ನಿಬಂಧನೆಗಳಿಗೆ ಒಳಪಟ್ಟು ಶಿವಮೊಗ್ಗ ಬಳಿ ತುಂಗಾನದಿ ಸೇತುವೆಯ ಮೇಲಣ ಹಾಲಿ ಇರುವ ರಸ್ತೆ ಮೇಲೆ ಟ್ರಾಮವೆಯನ್ನ ಹಾಕಲು ಪ್ರಮೋಟರ್ ಅಧಿಕಾರ ಹೊಂದಿರುತ್ತಾರೆ.

(1) ಇಂಡಿಯ ಸರಕಾರದವರು ವಿಧಾಯಿಸಿ ಇರುವ ಸ್ಟ್ಯಾಂಡರಡ ಅಳತೆಯು ಅವಕಾಶಕೊಡುವ ಮಟ್ಟಿಗೆ ರಸ್ತೆಯ ಒಂದು ಪಕ್ಕದ ಸಮೀಪದಲ್ಲಿ ಕಂಬಿಗಳನ್ನ ಹಾಕತಕ್ಕದ್ದು.

(2) ಕಂಬಿಯ ಮೇಲ್ ಭಾಗವು ರಸ್ತೆಯ ನೆಲಕ್ಕೆ ಸಮನಾಗಿರತಕ್ಕದ್ದು.

(3) ಗಾರಡ ರೈಲ್ಸ್ ಯಾನೆ ತಡೆ ಕಂಬಿಗಳು ಅಥವಾ ಅನುಕೂಲವಾದ ವಿಶೇಷ ತರಹದ ಕಂಬಿಗಳು ಸೇತುವೆ ಮೇಲೆ ಉದ್ದಕ್ಕು ಹಾಕಲ್ಪಡತಕ್ಕದ್ದು.

176

(4) ಸೇತುವೆ ಮೇಲೆ ಯಾವದಾದರು ಗಾಡಿ ಇದ್ದರೆ ಅದಕ್ಕೆ ಒದಗಬಹುದಾದ ಅಪಾಯವನ್ನು ನಿಲ್ಲಿಸುವದಕ್ಕಾಗಿ ಸದರಿ ಗಾಡಿಯು ಸೇತುವೆಯನ್ನು ದಾಟಿ ಹೋಗುವವರಿಗೂ ಟ್ರಾಮ್ ಗಾಡಿಗಳು ಸೇತುವೆಯ ಕೊನೆಯಿಂದ (100) ಗಜಗಳ ದೂರದಲ್ಲಿ ಸುಮ್ಮನೆ ನಿಲ್ಲಿಸಲ್ಪಡತಕ್ಕದ್ದು.

(5) ಸೇತುವೆಮೇಲೆ ವೇಗವು ಒಂದು ಘಂಟೆಗೆ 5 ಮೈಲಿಗಿಂತ ಹೆಚ್ಚು ಕೂಡದು.

(6) ಸೇತುವೆಯ ಎರಡು ಕೊನೆಗಳಲ್ಲಿಯೂ ಪ್ರಮೋಟರ್ ಬಾಗಿಲುಗಳ ಇಡತಕ್ಕದ್ದು.

(7) ಶಿವಮೊಗ್ಗಾ ರೈಲ್ವೆ ಸ್ಟೇಷನ್ ಒಳಿಗೆ ಟ್ರೈನ್ಯಾನೆ ಗಾಡಿಗಳು ಬಹಿರಂಗವಾಗಿ ತಿಳಿಸಲ್ಪಟ್ಟಿರುವ ಕಾಲಕ್ಕೆ ಅರ್ಧ ಘಂಟೆ ಮುಂಚಿತವಾಗಿ ಮತ್ತು ಅರ್ಧ ಘಂಟೆ ತರುವಾಯ ಪ್ರಮೋಟರ್ ಯಾವ ಟ್ರಾಮ್ ಗಾಡಿಗಳನ್ನು ಸೇತುವೆ ಮೇಲೆ ಬಿಡಕೂಡದು.

(8) ತುಂಗಾನದಿ ಸೇತುವೆಯ ಪಶ್ಚಿಮ ದಿಕ್ಕಿನ ಕೈಪಿಡಿ ಗೋಡೆ ಮೇಲೆ ಎರಡು ಅಡಿ ಎತ್ತರಕ್ಕೆ ಪ್ರಮೋಟರ್ ತಂತಿ ಬೇಲಿಯನ್ನು ಹಾಕತಕ್ಕದ್ದು.

(9) ಟ್ರಾಮ್ ಲೈನಿನ ಮಟ್ಟವು ತುಂಗಾನದಿ ಸೇತುವೆ ಮೇಲಣ ರಸ್ತೆಯಿಂದ ಕೆಳಕ್ಕೆ ಹೊಳೆ ಹೊನ್ನೂರು ರಸ್ತೆ ವರಿವಿಗೆ 25ರಲ್ಲಿ ಒಂದಕ್ಕಿಂತಲು ಹೆಚ್ಚಾದ ಮಟ್ಟವುಳ್ಳದ್ದಾಗಿರಕೂಡದು.

ಉಳಿಕೆ ರಸ್ತೆಯನ್ನು ಖಾಲಿ ಬಿಟ್ಟಿರೋಣ.

10. ಪ್ರಮೋಟರ್ ಟ್ರಾಮುವೆ ಉದ್ದೇಶ್ಯಕ್ಕಾಗಿ ಉಪಯೋಗಿಸಲು ಈ ಹುಕುಂನಿಂದ ಅಥವಾ ಅದರ ಮೂಲಕ ಅಧಿಕಾರ ಹೊಂದದ ರಸ್ತೆ ಭಾಗವನ್ನು ಸಹಜವಾದ ಆಮದ ರಪ್ತಿಗಾಗಿ ಅಭ್ಯಂತರವಿಲ್ಲದೆ ಖಾಲಿಯಾಗಿ ಬಿಟ್ಟಿರತಕ್ಕದ್ದು. ಮತ್ತು ಸದರಿ ಇಂಜನಿಯರವರು ಬರಹ ಮೂಲಕ ಅನುಮತಿಯನ್ನು ಮೊದಲೆ ಹೊಂದದೆ ಯಾವ ವಿಧವಾದ ತಡೆಯನ್ನು ಅದರ ಮೇಲೆ ಇಡಕೂಡದು ಅಥವಾ ಅದಕ್ಕೆ ಉಂಟಾಗುವ ಹಾಗೆ ಮಾಡಕೂಡದು.

ಸಾಮಾನುಗಳನ್ನು ಜಮಾಯಿಸುವದಕ್ಕಾಗಿ ರಸ್ತೆಯನ್ನು ಉಪಯೋಗಿಸೋಣ.

11. ಟ್ರಾಮುವೆಯನ್ನು ಕಟ್ಟುವದಕ್ಕೆ ಅದರ ಕಾಪಾಡುವಿಕೆಗಾಗಿ ಜಲ್ಲಿಯನ್ನು ಮತ್ತು ಇತರ ಸಾಮಾನುಗಳನ್ನು ಮೈಸೂರು ಚೀಫ್ ಇಂಜನಿಯರವರಿಂದ ಚುನಾಯಿಸಲ್ಪಡುವ ಪ್ರದೇಶದಲ್ಲಿ ರಸ್ತೆಯ ಸರಹದ್ದಿನ ಒಳಗೆ ಪ್ರಮೋಟರ್ ಜಮಾಯಿಸಬಹುದು. ಆದರೆ ಅದು ಸದರಿ ರಸ್ತೆಯ ಮೇಲೆ ಆಮದರಪ್ತಿಗೆ ಅಡ್ಡಿ ಅಥವಾ ಅಪಾಯವಿಲ್ಲದ ಇರುವ ರೀತಿಯಲ್ಲಿ ಜಮಾಯಿಸಲ್ಪಡತಕ್ಕದ್ದು. ಮತ್ತು ಅಂಥ ಪ್ರದೇಶಗಳು ಸರಕಾರದ ಸಾಮಾನುಗಳನ್ನು ಜಮಾಯಿಸುವದಕ್ಕಾಗಿ ಸದರಿ ಇಂಜನಿಯರವರಿಂದ ಉಪಯೋಗಿಸಲ್ಪಡಕೂಡದು.

ಮಂಜೂರಿ ಅಥವಾ ಜರೂರಿಯಾತಿ ಅವಶ್ಯಕತೆ ವಿನಹ ಮರಗಳ, ಕೊನೆಗಳನ್ನು ಕಡಿಯುವದು ನಿರೋಧಿಸಲ್ಪಡೋಣ.

12. ಪ್ರಮೋಟರ್ ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಬರಹ ಮೂಲಕವಾದ ಅನುಮತಿ ಇಲ್ಲದೆ ರಸ್ತೆ ಉದ್ದಕ್ಕೂ ಅಥವಾ ಅದರ ಪಕ್ಕದಲ್ಲಿ ಬೆಳಿಯುವ ಯಾವ ಮರವನ್ನಾಗಲಿ ಕಡಿಯಕೂಡದು ಆದರೆ ಟ್ರಾಮುವೆ ಪ್ರಯಾಣಕ್ಕೆ ಅಡ್ಡಿ ಅಥವಾ ಅಪಾಯುಂಟಾಗುವಂತೆ ಮುಂದಕ್ಕೆ ಬಂದು ಇರುವ ಅಥವಾ ಜೋಲಾಡುವ ಯಾವ ಮರವನ್ನಾಗಲಿ ಅಥವಾ ಅದರ ಭಾಗವನ್ನಾಗಲಿ ಪ್ರಮೋಟರ್ ಜರೂರಿಯಾತ್ ಸಂದರ್ಭಗಳಲ್ಲಿ ತೆಗಿಸಬಹುದು ಅಥವಾ ಕಡಿಯಬಹುದು.

ಟ್ರಾಮುವೆ ವಿಷಯದಲ್ಲಿ ಅವಶ್ಯಕವಾದ ಕೆಲಸಗಳನ್ನು ನಡಿಸುವದಕ್ಕೆ ಪ್ರವೇಶಿಸಲು ಅಪ್ಪಣೆ ಕೊಡುವದಕ್ಕೆ ಸರಕಾರದವರ ಅಧಿಕಾರ.

13. ಟ್ರಾಮುವೆ ಹಾಕಲ್ಪಟ್ಟ ಭೂಮಿಮೇಲೆ ಅಥವಾ ಒಳಗೆ ಕಚಡ ನೀರಿನ ದೊಡ್ಡ ಚರಂಡಿ, ಮೋಹರಿ, ಟೆಲಿಗ್ರಾಫ್ ಲೈನ್, ಗ್ಯಾಸ್‌ಪೈಪ್, ನೀರಿನ ಕೊಳಾಯಿ ಅಥವಾ ಆ ಸಂಬಂಧವಾದ ಇನ್ಯಾವ ಕೆಲಸವನ್ನಾಗಲಿ ನಡಿಸುವದಕ್ಕೋಸ್ಕರ ಮೈಸೂರು ಮಹಾರಾಜಾ ಗವರ್ನಮೆಂಟಿನವರು ಸ್ಥಳೀಯ ಅಧಿಕಾರಿ, ರಸ್ತೆಯ ಅಧಿಕಾರಿ ಅಥವಾ ಒಬ್ಬ ಅಥವಾ ಯಾರೇ ಆಗಲಿ ಅಂಥಾ ಕೆಲಸ ಅಥವಾ ಕೆಲಸಗಳನ್ನು ನಡಿಸುವದರಲ್ಲಿಯೂ ಮತ್ತು ಟೆಲಿಗ್ರಾಫ್ ಲೈನ್ ವಿಷಯದಲ್ಲಿ ಟೆಲಿಗ್ರಾಫ್ ಸೂಪರಿಂಟೆಂಡೆಂಟ್ ಆಫೀಸಗಳು ಅಂಥಾ ಟ್ರಾಮುವೆ ಯಾವ ಭಾಗವನ್ನಾಗಲಿ ಭದ್ರಕ್ಕೋಸ್ಕರ ಅಂಥಾ ಕೆಲಸ ಅಥವಾ ಕೆಲಸಗಳನ್ನು ಮಾಡುವದಕ್ಕೋಸ್ಕರ ಟ್ರಾಮುವೆ ಆಮದುರಪ್ತನ್ನು ಬಂದುಮಾಡಕೂಡದೆಂಬುವದಕ್ಕೆ ಕಾರಣಗಳನ್ನು ತೋರಿಸಬೇಕೆಂದು ಪ್ರಮೋಟರಿಗೆ ಬರಹಮೂಲಕ ನೋಟೀಸಿನಿಂದ ಕೇಳಬಹುದು. ಟ್ರಾಮುವೆಯ ಅಂಥಾ ಭಾಗವನ್ನು ಮುಚ್ಚುವದಕ್ಕೋಸ್ಕರ ಇರುವ ಅವಶ್ಯಕತೆಯನ್ನು ಮತ್ತು ಪ್ರಮೋಟರಗಳು ಯಾವದೊಂದು ಅಭ್ಯಂತರವೇ ಆಗಲಿ ಯಾ ಹೇಳುವ ಆಲೋಚನೆಗಳನ್ನು ಸಲಹೆಗಳನ್ನು ಯೋಚಿಸಿದ ನಂತರ ಮೈಸೂರು ಮಹಾರಾಜಾ ಸರಕಾರದವರು ಅಥವಾ ಇದಕ್ಕೆ ಜನರಲ್ ಅಥವಾ ಸ್ಪೆಷಲ್ಲಾಗಿ ಮೈಸೂರು ಮಹಾರಾಜಾ ಸರಕಾರದವರು ನೇಮಿಸುವ ಮನುಷ್ಯ ಅಥವಾ ಮನುಷ್ಯರಗಳು ಪ್ರಮೋಟರಗಳಿಗೆ ಟ್ರಾಮುವೆ ಅಂಥಾ ಭಾಗವನ್ನು ಅವಶ್ಯಕವಿರುವ ಕಾಲದ ವರಿಗೆ ಆ ಸಂದರ್ಭದಲ್ಲಿ ಅವಶ್ಯಕವಿರುವಷ್ಟು ಷರತ್ತಿನಮೇಲೆ ಹುಕುಂ ಮಾಡಬಹುದು ಮತ್ತು ಹಾಗೆ ತೆಗದು ಹಾಕಿರುವ ಟ್ರಾಮುವೆ ಭಾಗಕ್ಕೆ ಬದಲಾಗಿ ಹಂಗಾಮಿಯಾಗಿ ಟ್ರಾಮುವೆಯನ್ನು ಕಟ್ಟಿಕೊಂಡು ಉಪಯೋಗಿಸಬಹುದು ಮತ್ತು ಅಂಥಾ ಹಂಗಾಮಿ ಟ್ರಾಮುವೆಯನ್ನು ಕಟ್ಟಿ ಉಪಯೋಗಿಸುವದಕ್ಕೋಸ್ಕರ ಷರತ್ತುಗಳನ್ನು ಆಜ್ಞಾಪಿಸಬಹುದು. ಪ್ರಮೋಟರಗಳು ಅಂಥಾ ಹುಕುಂಗಳಂತೆ ನಡದುಕೊಳ್ಳಲು ಮತ್ತು ಅದರಲ್ಲಿ ನಮೂದಿಸುವ ಕೆಲಸವನ್ನು ನಡಿಸಲು ಇತರ ಅಥವಾ ಇನ್ಯಾವ ವಿರೋಧವಾದ ಹುಕುಂ ಇಲ್ಲದ ಪಕ್ಷದಲ್ಲಿ ಅಂಥಾ ಕೆಲಸಗಳನ್ನು ನಡಿಸುವದಕ್ಕೋಸ್ಕರ ತೆಗಿಯಬೇಕಾದ ಟ್ರಾಮುವೆ ಯಾವ ಭಾಗವನ್ನಾಗಲಿ ಕೆಲಸ ಮಾಡುವಂಥ ಸರಕಾರದ ಅಥವಾ ಸ್ಥಳೀಯ ಅಧಿಕಾರಿ ರಸ್ತೆ ಅಧಿಕಾರಿ ಅಥವಾ ಮನುಷ್ಯ ಅಥವಾ ಮನುಷ್ಯರು ಟೆಲಿಗ್ರಾಫ್ ಸೂಪರಿಂಟೆಂಡೆಂಟರು ಇವರುಗಳ ಲಾಗವಡಿನಿಂದ ತೆಗದುಹಾಕಲು ಮತ್ತು ಪುನಹ ಹಾಕಲೂಕೂಡದೆಂಬುವದಕ್ಕೆ ಬದ್ಧರಾಗಿರಬೇಕು.

E

ರಸ್ತೆಯಲ್ಲಿ ಅಥವಾ ರಸ್ತೆಮೇಲೆ ಇರುವ ಕಟ್ಟಡಗಳ ವಿಷಯಕ್ಕೆ ಪ್ರವೇಶಿಸಲು ಪ್ರಮೋಟರಗಳಿಗೆ ಅವಶ್ಯಕವಾದ ಷರತ್ತು.

14. ಯಾವ ಚರಂಡಿ ಟೆಲಿಗ್ರಾಫ್ ಲೈನ್ ಗ್ಯಾಸ್‌ಪೈಪ್, ನೀರಿನ ಕೊಳಾಯಿ ಪ್ರವೇಶಿಸಲ್ಪಡಬೇಕಾದ ಟ್ರಾಮ್ವೆಯಿಂದ ಆಕ್ರಮಿಸಿಕೊಳ್ಳಲ್ಪಡುವ ಅಥವಾ ಆಕ್ರಮಿಸಲ್ಪಟ್ಟ ಭೂಮಿ ಒಳಗೆ ಅಥವಾ ಮೇಲೆ ಇನ್ಯಾವದನ್ನಾಗಲಿ ಅವುಗಳ ಪೈಕಿ ಯಾವದೊಂದರ ಸ್ಥಿತಿಯನ್ನು ಬದಲಾಯಿಸಲು ಪ್ರಮೋಟರುಗಳು ಅಪೇಕ್ಷಿಸುವ ಸಂದರ್ಭದಲ್ಲಿ ಪ್ರಮೋಟರಗಳು ಸ್ಥಳೀಯ ಅಧಿಕಾರಿ ರಸ್ತೆ ಅಧಿಕಾರಿ ಪ್ರವೇಶಿಸತಕ್ಕ ಅಥವಾ ಬದಲಾಯಿಸತಕ್ಕ ಪದಾರ್ಥದಲ್ಲಿ ಅಧಿಕಾರಿ ಯಾವ ಒಬ್ಬ ನೌಕರ ಅಥವಾ ಯಾರಿಗಾಗಲಿ ಟೆಲಿಗ್ರಾಫ್ ಲೈನ್ ವಿಷಯಕ್ಕೆ ಟೆಲಿಗ್ರಾಫ್ ಆಫೀಸ್ ಸೂಪರಿಂಟೆಂಡೆಂಟರಿಗೆ ಬರಹಮೂಲಕವಾದ ನೋಟೀಸ್ ಕೊಡತಕ್ಕದ್ದು. ಅಲ್ಲದೆ ಮೈಸೂರು ಮಹಾರಾಜಾ ಸರಕಾರದವರಿಗೆ ಅರ್ಜಿ ಮೂಲಕವಾಗಿ ಜಾಹಿರ್ಮಾಡಿಕೊಳ್ಳತಕ್ಕದ್ದು. ಮತ್ತು ಪ್ರಮೋಟರ ಅರ್ಜಿಯನ್ನು ಸದರಿ ಅರ್ಜಿಯಲ್ಲಿ ನಮೂದಿಸುವ ಯಾವದೊಂದು ಅಭ್ಯಂತರಗಳ ಈ ಸಲಹೆಗಳನ್ನು ಯೋಚಿಸಿದ ನಂತರ ಮೈಸೂರು ಸರಕಾರದವರು ಸದರಿ ಕೆಲಸಕ್ಕಾಗಿ ಜನರಲ್ ಅಥವಾ ಸ್ಪೆಷಲ್ ಹುಕುಂನಿಂದ ಮೊಕರರೂರು ಮಾಡುವ ಮನುಷ್ಯ ಅಥವಾ ಮನುಷ್ಯರುಗಳು ಆ ಸಂದರ್ಭದಲ್ಲಿ ಲಾಯಖಾಗಿರುವ ಅರ್ಜಿಯಮೇಲೆ ಪ್ರಮೋಟರಗಳಿಗೆ ಯಾವ ವಿಷಯದಲ್ಲಿ ಅಗಲಿ ಚರಂಡಿ ಅಥವಾ ಅದರ ಸ್ಥಿತಿ ಬದಲಾವಣೆ ವಿಷಯಕ್ಕೆ ಯಾವದೊಂದು ಪ್ರವೇಶಕ್ಕೆ ಹಕ್ಕು ಇಲ್ಲದೆ ಇರುವ ಪಕ್ಷಕ್ಕೆ ಸದರಿ ಅರ್ಜಿಮೇಲೆ ಅಂಥಾ ಹುಕುಮನ್ನು ಮಾಡಬಹುದು.

ಪ್ರಮೋಟರಿಗೆ ಬೇಕಾಗುವ ಜಮೀನನ್ನು ಹೊಂದತಕ್ಕ ವಿಧಾನ.

15. ಈ ಆರ್ಡರಿ ಪ್ರಕಾರ ಸಂಸ್ಥಾನದ ರಸ್ತೆಯನ್ನು ಉಪಯೋಗಿಸುವದಕ್ಕೆ ಅಧಿಕಾರ ಹೊಂದಿರುವದರ ವಿನಹ ಪ್ರಮೋಟರಗಳಿಗೆ ಈ ಕೆಲಸಕ್ಕೋಸ್ಕರ ಆಗ್ಯಾ ಬೇಕಾಗುವ ಜಮೀನುಗಳನ್ನು ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮೀಷನರವರಿಗೆ ಜಮೀನಿನ ಪ್ಲಾನ್ ಮತ್ತು ಸ್ಟೇಟ್‌ಮೆಂಟುಗಳೊಡನೆ ಅರ್ಜಿ ಕೊಟ್ಟು ಅವರ ಅನುಮತಿ ಪಡೆದುಕೊಂಡು ಹೊಂದಬಹುದು. ಇದಕ್ಕಾಗಿ ಡೆಪ್ಯುಟಿ ಕಮೀಷನರಿಗೆ ತಗಲುವ ಎಲ್ಲಾ ಲಾಗವಡನ್ನು ಪ್ರಮೋಟರ ವಹಿಸಿಕೊಳ್ಳತಕ್ಕದ್ದು. ಪ್ರಮೋಟರುಗಳು ಆಗಾಗ್ಯೆ ತಮಗೆ ಅವಶ್ಯಕವಿಲ್ಲದ ಜಮೀನುಗಳನ್ನು ಶಿವಮೊಗ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮೀಷನರ ಮಂಜೂರಿ ಪಡೆದುಕೊಂಡು ಮಾರುವದಾಗಲಿ ಅನ್ಯಾಕ್ರಾಂತ ಮಾಡುವದಾಗಲಿ ಮಾಡಬಹುದು. ಪ್ರಮೋಟರುಗಳು ಜಮೀನು ಪಡೆದುಕೊಳ್ಳುವದಕ್ಕೆ ಈ ಕೆಳಗೆ ನಮೂದು ಮಾಡುವ ನಿಬಂಧನೆಗಳನ್ನು ಅನುಸರಿಸತಕ್ಕದ್ದು.

I. ಸ್ವಾಧೀನದಲ್ಲಿರತಕ್ಕ ಜಮೀನು. — ಹಾಲಿ ಜಾರಿಯಲ್ಲಿರುವ 1894ನೆ ಇಸವಿ 7ನೆ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ ರೂಲ್ಸು ಅನುಸರಿಸಿ ಮೇಲೆ ಹೇಳಿದ ಪ್ರಕಾರ ತಮಗೆ ಬೇಕಾಗುವ ಯಾವ ಜಮೀನನ್ನಾದರೂ ಪ್ರಮೋಟರ್ ಹೊಂದಬಹುದು.

II. ಆಕಾರಕಂಡು ಯಾರ ಸ್ವಾಧೀನದಲ್ಲು ಇಲ್ಲದೆ ಇರತಕ್ಕ ಪಾಳು ಜಮೀನುಗಳು. — ಲೈಸೆನ್ಸಿಗೆ ಬೀಳುವ ಎಲ್ಲ ಸರ್ವೆ ನಂಬರು ಪೂರ್ತಿಯಾಗಿ ಅದರ ಮಾಲ್ಕಿ ಅಥವಾ ಅದರಲ್ಲಿರತಕ್ಕ ಮರಗಳ ಕಿಂಮತಿನೊಡನೆ ಆ ಜಮೀನಿನ ಕಂದಾಯ ಪೂರ್ತಿಯಾಗಿ ಕೊಟ್ಟು ಪ್ರಮೋಟರುಗಳು ಪಡೆದುಕೊಳ್ಳಬಹುದು.

(2) ಆಕಾರ ಕಂಡ ಜಮೀನುಗಳ ಪೈಕಿ ಯಾವದಾದರೂ ಒಂದು ದೊಡ್ಡದಾಗಿದ್ದಲ್ಲಿ ತಮ್ಮ ಖರ್ಚಿನಿಂದ ಪೋಡ್ ಮಾಡಿಸಿಕೊಡಬೇಕೆಂದು ಡೆಪ್ಯುಟಿ ಕಮೀಷನರಿಗೆ ಪ್ರಮೋಟರ ಕೇಳಿಕೊಳ್ಳಬಹುದು. ಪೋಡ್ ಮಾಡಿಕೊಡುವವರಿಗೆ ಪ್ರಮೋಟರುಗಳು ಅಂಥಾ ನಂಬರುಗಳ ಕಂದಾಯವನ್ನು ಪೂರ್ತಿಯಾಗಿ ಕೊಡುತ್ತಾ ಬರತಕ್ಕದ್ದು.

(3) ಪ್ರಮೋಟರ ಕೆಲಸಗಳಿಂದ ಯಾವ ಜಮೀನನ್ನಾಗಲಿ ಸಾಗುವಳಿಗೆ ನಾಲಾಯಖಾಗಿ ಮಾಡಿದಲ್ಲಿ ಅಂಥಾ ನಷ್ಟವನ್ನು ಅವರು ಸರಕಾರಕ್ಕೆ ಕೂಡಿಸಿಕೊಡಬೇಕು.

III. ಆಕಾರ ಕಾಣದ ಯಾರ ಸ್ವಾಧೀನದಲ್ಲು ಇಲ್ಲದೆ ಇರುವ ಬಂಜರು ಜಮೀನು. — ಪ್ರಮೋಟರುಗಳು ತಮಗೆ ಬೇಕಾಗುವ ಯಾವ ಜಮೀನನ್ನಾದರೂ ಅದರಲ್ಲಿರತಕ್ಕ ಮರಗಳ ಕಿಮ್ಮತ್ತು ನಿಶಿ ಎಕರೆ 1ಕ್ಕೆ 1 ರೂ. 4 ಆಣೆ ಮೇರೆ ಒಂದು ಮೊತ್ತವಾದ ಕಂದಾಯವನ್ನು ಕೊಟ್ಟು ಪಡೆದುಕೊಳ್ಳಬಹುದು.

IV. ಪ್ರಮೋಟರುಗಳು ಯಾವ ಚಿಕ್ಕ ಕಟ್ಟೆಗಳನ್ನು ಒಡೆಯಕೊಡದು ಅಥವಾ ಹಾಲಿ ಇರತಕ್ಕ ನೀರಿನ ದಾರಿಗಳನ್ನು ಬದಲಾಯಿಸಕೂಡದು ಅಥವಾ ಟ್ರಾಮ್ವೆ ಲೈನಿನ ಜೊತೆಯಲ್ಲಿರುವ ದಾರಿಮೇಲೆ ಇರತಕ್ಕ ಕೆರೆಗಳು ಮತ್ತು ಕುಂಟೆಗಳಿಗೆ ಬರತಕ್ಕ ನೀರು ಕಾಲ್ವೆಯನ್ನು ಮುಚ್ಚಲು ಮತ್ತು ಬದಲಾಯಿಸಕೂಡದು.

V. ಸರಕಾರದ ಜಂಗಲಿನ ಜಮೀನು. — ಈ ಜಮೀನುಗಳು ಬೇಕಾಗಿದ್ದಲ್ಲಿ ಈ ಕೆಳಗೆ ನಮೂದು ಮಾಡುವ ಷರತ್ತುಗಳ ಅನುಸರಿಸಿ ಪ್ರಮೋಟರ ಪಡೆಯಬಹುದು.

(a) ಜಮೀನಿನ ಖರೀದಿ ಎಕರೆ 1ಕ್ಕೆ 150 ರೂಪಾಯಿಗಳು ಮತ್ತು

(b) ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರು ಕಟ್ಟುವ ಜಮೀನಿನಲ್ಲಿರತಕ್ಕ ಫಾರೆಸ್ಟ್ ಬೆಳೆಯ ಕಿಮ್ಮತು ಪ್ರಮೋಟರಿಗೆ ಈ ಜಮೀನು ಬೇಕಾಗಿದ್ದಲ್ಲಿ ಫಾರೆಸ್ಟು ಬೆಳೆಯ ಕಿಮ್ಮತಿನ ಪರವನ್ನು ಕೊಡಬೇಕೆಂದು ಡಿಸ್ಟ್ರಿಕ್ಟ್ ಫಾರೆಸ್ಟು ಆಫೀಸರನ್ನ ಕೇಳಲ್ಪಡುತ್ತೆ.

ಟ್ರಾಮ್ವೆ ಪ್ರಾರಂಭ ಪೂರ್ತಿ ಮತ್ತು ಬಿಡತಕ್ಕದ್ದು.

16. ಟ್ರಾಮ್ವೆ ಹಾಕುವದಕ್ಕೆ ಮೈಸೂರು ಮಹಾರಾಜಾ ಸರ್ಕಾರದವರು ಆಖೈರು ಹುಕುಂ ಕೊಟ್ಟ ತಾರೀಖು ಲಾಗಾಯಿತು 2 ತಿಂಗಳು ಒಳಗೆ ಟ್ರಾಮ್ವೇ ಕೆಲಸಕ್ಕೆ ಪ್ರಾರಂಭಿಸಬೇಕು. ಮತ್ತು ಎರಡು ವರುಷದ ಒಳಗೆ ಪೂರ್ತಿಮಾಡಿ ಬಿಡತಕ್ಕದ್ದು.

ಗೇಜಿನ ನಿಬಂಧನೆ ಮತ್ತು ಕ್ಯಾರೇಜುಗಳ ಅಗಲತೆ.

17. ಟ್ರಾಮ್ವೆಯನ್ನು 2 ಅಡಿ ಗೇಜಿನಮೇಲೆ ಕಟ್ಟತಕ್ಕದ್ದು. ಮತ್ತು ಕಂಬಿ ಒಳಗಿನ ದಡದಿಂದ ಆಚೆ ಪ್ರತಿ ಭಾಗದಲ್ಲಿ 2 ಅಡಿ ಗಿಂತ ಹೆಚ್ಚಾಗಿ ಹೊರಗಡೆಗೆ ಟ್ರಾಮ್ವೆ ಮೇಲೆ ಉಪಯೋಗಿಸತಕ್ಕಂಥ ಕ್ಯಾರೇಜ್ ಟ್ರಕ್ ಅಥವಾ ವ್ಯಾಗನ್ ಹಾದುಕೊಂಡು ಇರಕೂಡದು.

ಉಪಯೋಗಿಸಬೇಕಾದ ಕಂಬಿ ವಿವರ.

18. ಟ್ರಾಮುವೆಗೆ ಉಪಯೋಗಿಸಬೇಕಾದ ರೈಲ್ ಕಂಬಿಗಳು ಇದರಲ್ಲಿ ಮುಂದೆ ತಿಳಿಸುವ ಮಾದ್ರಿ, ಶಿವಾಯಿ ಸ್ಲೀಪರಗಳ ಮೇಲೆ ಹಾಕಲ್ಪಟ್ಟ ಚಪ್ಪಡಿಯಾದ ತಳವುಳ್ಳ ಉಕ್ಕಿನ ಕಂಬಿಗಳಾಗಿರಬೇಕು ಮತ್ತು ಅವು ರಸ್ತೆಗೆ ಯತ್ತರವಾಗಿರಬೇಕು. ಆದರೆ ಶಿವಮೊಗ್ಗ ಟವರ್ ಮುಖಾಂತ್ರ ಹಾಯುವ ಲೈನ್ ಭಾಗದಲ್ಲಿ ಯಾ ಹಳ್ಳಿಗಳ ಮುಖಾಂತ್ರ ಯಾ ರಸ್ತೆ ಅಧಿಕಾರಿಗಳು ಅಪೇಕ್ಷಿಸುವ ಪ್ರಕಾರ ಸೇತುವೆಗಳ ಮೇಲೂ ಗೀಟು ಕಟ್ಟಿ ತೀರಿಸಿದ ಕಂಬಿಗಳನ್ನು ಉಪಯೋಗಮಾಡಿ ಹಾಕಿಸಿ ರಸ್ತೆ ಮಟ್ಟಕ್ಕೆ ಸಮವಾಗಿ ಮಾಡತಕ್ಕದ್ದು.

ಕ್ರಾಸಿಂಗ್ಸ್‌ಗಳು ವಗೈರೆ ಮಾಡತಕ್ಕ ವಿಷಯದಲ್ಲಿ ಪ್ರಮೋಟರಗಳು ಸರಕಾರದ ಹುಕುಂಗಳನ್ನ ಅಂಗೀಕರಿಸತಕ್ಕದ್ದು.

19. ಮಹಾರಾಜಾ ಸರಕಾರದ ಮಂಜೂರು ಸಿಕ್ಕಿ ಪ್ರಮೋಟರಗಳು ಆಗಾಗ್ಯೆ ಈ ಹುಕುಂನಲ್ಲಿ ನಮೂದಿಸಿದ ಮತ್ತು ಈ ಹುಕುಂನಿಂದ ಅಧಿಕಾರ ಕೊಡಲ್ಪಟ್ಟ ಟ್ರಾಮುವೆ ಕೆಲಸವನ್ನ ಸರಿಯಾಗಿ ನಡಿಸುವದಕ್ಕು ಅಥವಾ ಯಾವ ಸ್ಟೇಷನ್ ಕಟ್ಟಡ ಪ್ರಮೋಟರ ಕೆಲಸವನ್ನು ಮಾಡುವದಕ್ಕೆ ಅನುಕೂಲತೆ ಬಗ್ಯೆ ಬೇಕಾಗುವ ಎಲ್ಲಾ ಕ್ರಾಸಿಂಗಗಳು ತಿರಗಾಡುವ ದಾರಿಗಳು ಜಂಕ್ಷನ್‌ಗಳು ಮಾಡಬಹುದು.

ಅಟಂಕಪಡಿಸಿದ ಸ್ಥಳದಲ್ಲಿ ಹಂಗಾಮಿಯಾಗಿ ಟ್ರಾಮುವೆ ಹಾಕುವ ವಿಷಯ.

20. ಟ್ರಾಮುವೆ ಬಾಜೂವಲ್ಲಿರುವ ರಸ್ತೆ ಮೇಲಭಾಗಕ್ಕೆ ಅಥವಾ ಮಣ್ಣಿಗೆ ಯಾವದಾದರೂ ಒಂದು ಕೆಲಸ ಮಾಡೋಣದರಲ್ಲಿ ಅಪಾಯದಿಂದ ಯಾ ಪ್ರವಾಹದಿಂದ ತೊಂದರೆ ಉಂಟಾದ ಪಕ್ಷಕ್ಕೆ ಮೈಸೂರು ಮಹಾರಾಜಾ ಸರಕಾರದವರು ಹಂಗಾಮಿಯಾಗಿ ಟ್ರಾಮುವೆಯನ್ನು ಅದರ ಯಾವ ಭಾಗವನ್ನಾದರೂ ತೆಗದು ಯಾ ಟ್ರಾಮುವೆ ನಿರುಪಯೋಗಿಸಬೇಕೆಂದು ಅಭಿಪ್ರಾಯ ಪಡುವ ಪಕ್ಷಕ್ಕೆ ಪ್ರಮೋಟರಗಳು ಮೈಸೂರು ಮಹಾರಾಜಾ ಸರಕಾರದವರು ಆಗಾಗ್ಯೆ ಮಾಡುವ ಷರತ್ತುಗಳು ನಿಬಂಧನೆಗಳಿಗೆ ಅನುಗುಣವಾಗಿ ಕೆಲಸಕ್ಕೆ ಬೇಕಾಗುವಷ್ಟು ಕಾಲ ತೆಗದುಹಾಕಲ್ಪಟ್ಟ ಯಾ ನಿರುಪಯೋಗಿಸಲ್ಪಟ್ಟ ಟ್ರಾಮುವೆಗೆ ಬದಲಾಗಿ ಹಂಗಾಮಿಯಾಗಿ ಟ್ರಾಮುವೆಯನ್ನು ಕಟ್ಟಿ ಉಪಯೋಗಿಸತಕ್ಕದ್ದು.

ಚಲನಾಶಕ್ತಿ.

ಚಲನಾಶಕ್ತಿ ಉಪಯೋಗ.

21. ಟ್ರಾಮುವೆ ಮೇಲೆ ಉಪಯೋಗಿಸತಕ್ಕ ವ್ಯಾಗನ್‌ಗಳು ಬ್ರೇಕ್‌ವ್ಯಾನ್‌ಗಳು ಸ್ಟೀಮು ಪವರಿನಿಂದ ನಡಿಸತಕ್ಕದ್ದು.

ನಿಯಮಿಸಲ್ಪಟ್ಟ ವೇಗ.

22. ವೇಗವು ಘಂಟೆ 1ಕ್ಕೆ ಹತ್ತು ಮೈಲಿಗಳಿಗಿಂತ ಹೆಚ್ಚಾಗಿ ಅಥವಾ ಮೈಸೂರು ಮಹಾರಾಜರ ಸರಕಾರದವರು ಆಗಾಗ್ಯ ನೇಮಿಸಲ್ಪಡುವ ವೇಗಕ್ಕಿಂತ ಹೆಚ್ಚಾಗಕೂಡದು. ಮತ್ತು ಯಾವದೊಂದು ಗಾಡಿಗಳು ಕಂಬಿಗಳನ್ನ ಬದಲಾಯಿಸುವಕಡೆ ವೇಗವು ಘಂಟೆಗೆ 5 ಮೈಲಿಗಳಿಗಿಂತ ಜಾಸ್ತಿಯಾಗಿರಕೂಡದು.

ಟ್ರಾಮುವೆ ಕಾಪಾಡುವಿಕೆ.

ಟ್ರಾಮುವೆಯನ್ನು ಕಾಪಾಡುವದಕ್ಕೂ ರಿಪೇರಿ ಮಾಡುವದಕ್ಕು ಪ್ರಮೋಟರ ಜವಾಬದಾರಿ.

23. ಮೇಲೆ ಹೇಳಿದ ಮೈಸೂರು ಮಹಾರಾಜರ ಸರಕಾರಕ್ಕೆ ತೃಪ್ತಿಕರವಾಗಿಯು ಮತ್ತು ಸಾಧಾರಣದ ಆಮದುರಫ್ತುಗು ಕಂಬಿಗಳಿಗೂ ಟ್ರಾಮುವೆಯು ಕೆಳಗೆ ಇರತಕ್ಕ ಕಟ್ಟಡಗಳಿಗೂ ಅಪಾಯ ಯಾ ತೊಂದರೆ ಇಲ್ಲದಂತೆ ಪ್ರಮೋಟರಗಳು ಯಾವಾಗಲು ರಿಪೇರಿಯಿಂದ ಒಳ್ಳೆ ಸ್ಥಿತಿಯಲ್ಲಿ ಇಟ್ಟುಕೊಂಡು ಕಾಪಾಡತಕ್ಕದ್ದು.

ರಸ್ತೆಯ ಒಂದು ಭಾಗ.

24. ಪ್ರಮೋಟರಗಳು ಮೈಸೂರು ಮಹಾರಾಜರ ಸರಕಾರಕ್ಕೆ ತೃಪ್ತಿಯಾಗಿ ರಸ್ತೆಯ ಉಭಯಪಾರ್ಶ್ವದ ಚರಂಡಿಗಳ ನೀರು ಹಾಯುವಿಕೆ ಮತ್ತು ಅಚೆ ಇರುವ ಕಂಬಿಗೆ 18 ಅಂಗುಲಗಳ ಧೂರದಲ್ಲಿ ಹಾಕಿ ಇರುವ ಕಂಬಿಗಳ ರಸ್ತೆಯ ಭಾಗದ ಮೇಲೆ ಅಥವಾ ಕಟ್ಟೆಯ ಕೊನೆಯು ಯಾ ಸಂಸ್ಥಾನದ ರಸ್ತೆ ಚರಂಡಿಯಿಂದಾಗಲಿ ಹರಡಿಕೊಂಡು ಇರುವ ಸಂಸ್ಥಾನದ ರಸ್ತೆ ಭಾಗವನ್ನು ಅಟಂಕಪಡಿಸದ ಹಾಗೆ ರಿಪೇರಿ ಮಾಡಿಕೊಂಡು ಒಳ್ಳೇ ಸ್ಥಿತಿಯಲ್ಲಿ ಕಾಪಾಡತಕ್ಕದ್ದು. ಈ ಭಾಗದ ರಸ್ತೆಯನ್ನು ಪ್ರಮೋಟರಗಳು ತಮ್ಮ ಸ್ವಂತಲಾಗವಡಿನಿಂದ ಸರಿಮಾಡಿಕೊಳ್ಳತಕ್ಕದ್ದು. ಅವರು ತಮ್ಮ ಸ್ವಂತಲಾಗವಡಿನಿಂದಲೇ ಮುಂದೆ ಆಗಬೇಕಾಗುವ ಬದಲಾವಣಿಗಳಿಗೆ ಅನುಕೂಲವಾಗಿ ರಸ್ತೆ ಈ ಭಾಗದ ಮತ್ತು ಟ್ರಾಮುವೆ ಸ್ಥಿತಿ ಮತ್ತು ಮಟ್ಟವನ್ನು ಬದಲಾಯಿಸತಕ್ಕದ್ದು ಮತ್ತು ಕೂಡ್ಲೆ ರಿಪೇರಿಯಿಂದ ಚನ್ನಾಗಿ ಮಾಡುವದಲ್ಲದೆ ಮೇಲೆ ಹೇಳಿದ ಚೀಫ್ ಇಂಜನಿಯರ್ ರವರಿಗೆ ತೃಪ್ತಿಕರವಾಗಿ ಟ್ರಾಮುವೆಗೆ ಪ್ರಮೋಟರಗಳ ತಪ್ಪಿತದಿಂದ ರಸ್ತೆ ಯಾವ ಭಾಗಕ್ಕೆ ಆಗಲಿ ನಷ್ಟ ಉಂಟಾಗುವ ಪಕ್ಷಕ್ಕೆ ಅದನ್ನ ಸರಿಮಾಡಿಸತಕ್ಕದ್ದು. ಹಾಲಿ ಹಾಕಲ್ಪಟ್ಟ ಕಂಬಿಗಳ ರಸ್ತೆಯ ಬಾಜೂದಲ್ಲಿರುವ ಚರಂಡಯು ಅಥವಾ ಇತಃಪರ ಸರಕಾರದ ಖರ್ಚಿನಿಂದ ಕಟ್ಟುವಂಥಾದ್ದನ್ನು ಕೂಡ ಪ್ರಮೋಟರಗಳ ಸ್ವಂತಲಾಗವಡಿನಿಂದ ಒಳ್ಳೆಸ್ಥಿತಿಯಲ್ಲಿ ಇಟ್ಟುಕೊಂಡು ಕಾಪಾಡತಕ್ಕದ್ದು.

ಅಗಿಯಲ್ಪಟ್ಟ ಪದಾರ್ಥಗಳನ್ನ ಪ್ರಮೋಟರ ಉಪಯೋಗಿಸಬೇಕಾದ್ದು.

25. ಟ್ರಾಮುವೆ ಸಂರಕ್ಷಣೆಯಲ್ಲಿ ಯಾ ಕಟ್ಟುವದರಲ್ಲಿ ಸಂಸ್ಥಾನದ ರಸ್ತೆಯಿಂದ ಅಗಿಯಲ್ಪಟ್ಟ ರಸ್ತೆ ಜಲ್ಲಿ ವಗೈರೆಯನ್ನ ಪ್ರಮೋಟರಗಳು ಸದರಿ ರಸ್ತೆಯನ್ನು ಸರಿಮಾಡುವದರಲ್ಲಿ ಯಾಗಲಿ ಈ ಹುಕುಂನಿಂದ ಪ್ರೈಸಬೇಕಾದ ಕೆಲಸದಲ್ಲಿ ಯಾಗಲಿ ಉಪಯೋಗಿಸಬಹುದು.

ಪ್ರಮೋಟರಗಳು ಟ್ರಾಮುವೆಯಲ್ಲಿಯು ಅದರಲ್ಲಿ ಉಪಯೋಗಿಸುವ ಬಂಡಿಗಳಲ್ಲಿಯೂ ಅಂಥಾ ಬಂಡಿಗಳ ಅಭಿವೃದ್ಧಿ ಬಗ್ಯೆ ಮೈಸೂರು ಮಹಾರಾಜ ಸರಕಾರದವರು ಆಗಾಗ್ಯೆ ಅವಶ್ಯಕವೆಂದು ಯೋಚಿಸುವ ಯಾ ಜನಗಳ ಕ್ಷೇಮಕ್ಕಾಗಿ ಮತ್ತು ಅನುಕೂಲಕ್ಕಾಗಿ ಅಪೇಕ್ಷಿಸುವ ವೃದ್ಧಿಯನ್ನು ಮಾಡತಕ್ಕದ್ದು.

ಟ್ರಾಮವೆಯ ಆಮದರಪ್ತು.

ಪ್ರಮೋಟರಗಳು ಸಾಗಿಸತಕ್ಕ ಸಾಮಾನುಗಳು.

26. ಟ್ರಾಮವೆಯ ಮೇಲೆ ಉಪಯೋಗಕ್ಕೆ ಬೇಕಾದ ಸಾಮಾನು ಸರಕು, ಸವುದೆ, ಲೋಹಗಳು ಮತ್ತು ಕಂಪೆನಿಯ ಪಾರಸಲ್ಲಗಳು ಸಾಗಿಸಬಹುದು ಇವುಗಳನ್ನು ಪ್ರಮೋಟರಗಳು ಸಂದರ್ಭಾನುಸಾರ ಜನಗಳಿಗೋಸ್ಕರ ಸಾಗಿಸುವದಕ್ಕೆ ತಿರಸ್ಕರಿಸಬಹುದು.

ಅಪಾಯಕರವಾದ ಸಾಮಾನುಗಳು.

27. ಮೈಸೂರು ಟ್ರಾಮವೆ ರೆಗ್ಯುಲೇಷನ 16ನೆ ಸೆಕ್ಷನನಲ್ಲಿ ಅಪಾಯಕಳವೆಂದು ಹೇಳಿರುವ ಸಾಮಾನುಗಳನ್ನು ಈ ಕೆಳಗೆ ನಮೂದಿಸಿರುತ್ತೆ.

ಕಾರಬೋಲಿಕ ಆಸಿಡ.	ತುಪಾಕಿ ಮದ್ದು.
ಕೆರೋಸಿನ ಎಣ್ಣೆ.	ಅಕ್ವಾಫಾರಟಿಸ.
ಪಾರಫಿನ	ಗಂಧಕದ ಸಾಮಾನು.
ರಂಗೋಣಿಯಣ್ಣೆ.	ಪ್ಲೋರೀಕ ಆಸಿಡ.
ಮರದಯಣ್ಣೆ.	ಪೂಸಲಯಣ್ಣೆ.
ನೈಟ್ರೇಟ ಆಫ ಅಮೆರ್ಲ.	ನಾಪ್ತೆಲೈನ.
ಸಲ್ಫೇಷ ಅಮಾನಿಯ ಮದ್ದು.	ಬಗೆಬಗೆ ತೈಲಗಳು.
ಪಟಾಸು.	ನವಸಾಗ್ರ.
ವಿಧವಿಧವಾದ ಬಾಣಗಳು.	ಪೆರಕ್ಲೋರೈಡ ಆಫ ಐರನ.
ಉರಿಯತಕ್ಕ ಸಾಮಾನುಗಳು.	ಅಮದ್ರಫಸ ಫಾಸಫರಸ.
ಕ್ಲೋರೇಟಮಿಕ್ಸಚರ.	ತೋಟಾಗಳು.
ಡಿಟೋ ನೇಟರ್ಸ.	ಬೆಂಕಿಪಟ್ಟಗಳು.
ಬಾಣದ ಸಾಮಾನುಗಳು.	ಹತ್ತಿ ಪುಡಿ.
ಬಾಣಗಳು.	ಸುರಂಗದ ಮದ್ದು.
ಕರಗುವ ಸಾಮಾನು.	ಮಂಜುಸಿಗನೆಲ್ಲಗಳು.
ಬಂದೂಕದ ಹತ್ತಿ	ಬ್ರೋಮೈನ.
ನೀಲಿಮದ್ದು.	ಕ್ಲೋರೋಫಾರಂ.
ಆಸಿಡ.	ಮದ್ದುಹಾರಿಸುವ ಕೊಳವೆ
ಲೋಹದ ಆಸಿಡ.	ವಸುವಿಯಸ.
ಬಂದೂಕದ ಹತ್ತಿ ಪುಡಿ.	ಸುರಂಗದ ಮದ್ದುಗಳ ಲೋಹಗಳು.
ಲೂಸಿಫರ ಬೆಂಕಿಪಟ್ಟಗಳು.	ಲಿತೊಫ್ರಾಕ್ಟರ.
ನೆಟ್ರೇಡ ಬಂದೂಕದ ಹತ್ತಿ.	ಮೆಲಿನೈಟ.
ಫಾಸಫರಸ	ನೈಟ್ರೊಗ್ಲಿಸಿರೈನ.
ಬಂದೂಕದ ಮದ್ದು.	
ಯುದ್ಧದ ಚತ್ರಿಗಳು.	
ಇತರ ವಿಧವಾದ ಎಲ್ಲಾ ಮದ್ದುಗಳು	

ಎಚ್ಚರಿಸುವಿಕೆಯ ಗುರ್ತುಗಳನ್ನು ಏರ್ಪಡಿಸುವದು.

28. ಟ್ರಾಮವೆ ಮೇಲೆ ಟ್ರೈನ ಅಥವಾ ಎಂಜಿನಿನ ಪ್ರತಿ ಬಬ್ಬ ನಡಿಸುವನು ಕೆಲಸದ ಮೇಲೆ ಇರುವಾಗ ಒಂದು ನಮೂನೆ ಘಂಟೆಯನ್ನು, ಸಿಳ್ಳನ್ನು ಅಥವಾ ಅವಶ್ಯಕವಾದ ಎಚ್ಚರಿಕೆ ಬಗ್ಯೆ ಶಬ್ದ ಮಾಡುವದಕ್ಕೋಸ್ಕರ ಇತರ ಯಾವ ಉಪಕರಣಗಳನ್ನಾದರೂ ಇಟ್ಟುಕೊಂಡು ಇರಬೇಕು.

ಭಂಡಿಗಳ ನಮೂನೆಗಳನ್ನ ಸರಕಾರದವರು ಮಂಜೂರು ಮಾಡತಕ್ಕದ್ದು.

29. ಟ್ರಾಮವೆ ಮೇಲೆ ಉಪಯೋಗಿಸತಕ್ಕ ಪ್ರತಿ ಒಂದು ಟ್ರಕ್ಕು ಅಥವಾ ವ್ಯಾಗನ್ನು ಮೈಸೂರು ಮಹಾರಾಜಾ ಸರಕಾರ ಮಂಜೂರು ಮಾಡಿದ ನಮೂನೆಯಂತೆ ಕಟ್ಟತಕ್ಕದ್ದು.

ಬ್ರೇಕ ಉಪಯೋಗಿಸತಕ್ಕದ್ದು.

30. ಟ್ರಾಮವೆ ಮೇಲೆ ಹೋಡತಕ್ಕ ಪ್ರತಿ ಒಂದು ಟ್ರೈನಿಗೆ ಅದರ ಗಾರಡು ಉಪಯೋಗಕ್ಕಾಗಿ ಆತನ ಸ್ವಾಧೀನದಲ್ಲಿ ಒಂದು ಒಳ್ಳೇ ಬ್ರೇಕ ಇರತಕ್ಕದ್ದು.

ಚೀಫ ಇಂಜನೀಯರ ಸಾಹೇಬರವರು ಭಂಡಿಗಳ ಉಪಯೋಗವನ್ನು ಆಟಂಕ ಪಡಿಸಬಹುದು.

31. ಚೀಫ ಇಂಜನೀಯರು ಟ್ರಾಮವೆ ಮೇಲೆ ನಡೆಸುವ ಯಾವ ಭಂಡಿಯನ್ನಾದರೂ ಅಪಾಯವೆಂದು ತಮಗೆ ಅಭಿಪ್ರಾಯಬಂದಲ್ಲಿ ಅಂಥಾ ಭಂಡಿಯನ್ನು ಉಪಯೋಗಿಸಲು ಆಟಂಕಪಡಿಸಬಹುದು. ಪ್ರತಿ ಒಂದು ಅಂಥ ಆಟಂಕವೂ ಅಥವಾ ಮೈಸೂರು ಮಹಾರಾಜಾ ಸರ್ಕಾರದವರು ತಿದ್ದುಪಾಟು ಮಾಡುವವರೆಗೂ ಜಾರಿಯಲ್ಲಿ ಇಡತಕ್ಕದ್ದು ಮತ್ತು ಪ್ರಮೋಟರಗಳು ಅಂಥ ಯಾವದೊಂದು ಭಂಡಿ ವಿಷಯಕ್ಕಾಗಲಿ ಮೈಸೂರು ಮಹಾರಾಜಾ ಸರಕಾರದಿಂದ ಆಗುವ ಯಾವ ಹುಕ್ಕುಮಿಗೂ ಬದ್ಧರಾಗಿರತಕ್ಕದ್ದು.

ಚಿಲ್ಲರೆ ವಿಷಯಗಳು.

ಪರಾಧೀನವಾದ ಮೇಲೆ ಹದ್ದು.

32. ಪ್ರಮೋಟರುಗಳು ಮಾರುವಿಕೆಯಿಂದಾಗಲಿ ಪತ್ತೆಯಿಂದಾಗಲಿ ವಟ್ಟೆಯಿಂದಾಗಲಿ ಬದಲಿಗಾಗಲಿ ಅಥವಾ ಇನ್ಯಾವ ವಿಧವಾಗಿ ಆದರೂ ಮೈಸೂರು ಮಹಾರಾಜರ ಸರಕಾರ ಮಂಜೂರು ಮಾಡುವ ಷರತ್ತುಗಳ ಮೇಲೆ ಮತ್ತು ಮುಂಚಿತವಾಗಿ ಮಂಜೂರು ಪಡಿಯದೇನೆ ಈ ಟ್ರಾಮವೆ ಕೆಲಸವನ್ನು ಅಥವಾ ಯಾವ ಭಾಗವನ್ನಾಗಲಿ ಅನ್ಯಾಕ್ರಾಂತ ಮಾಡಕೂಡದು.

ಮುನಿಸಿಪಾಲಿಟಿಯವರು ಕಂದಾಯ ಹಾಕತಕ್ಕ ವಿಷಯದಲ್ಲಿ ಅನುಕೂಲ ಪಡಿಸತಕ್ಕದ್ದು.

33. ಟ್ರಾಮುವೆ ಮೇಲೆ ಸಾಗಿಸುವ ಸಾಮಾನುಗಳ ಮೇಲೆ ಹಾಕತಕ್ಕ ಕಂದಾಯಗಳ ಬಗ್ಗೆಯು ಮತ್ತು ಆಕ್ಟ್ರಾಯಿ ವಸೂಲಿ ಬಗ್ಗೆಯು ನ್ಯಾಯವಾದ ಅನುಕೂಲತೆಯನ್ನು ಶಿವಮೊಗ್ಗ ಮುನಿಸಿಪಾಲಿಟಿಯವರಿಗೆ ಕೊಡತಕ್ಕದ್ದು.

ರಸ್ತೆ ಉಪಯೋಗಕ್ಕಾಗಿ ಸರಕಾರಕ್ಕೆ ಕೊಡಬೇಕಾದ ಕಂದಾಯ.

34. ಟ್ರಾಮುವೆ ಮೇಲೆ ಸಾಗಿಸಲ್ಪಟ್ಟ ಛರ್ತಿಯಾದ ಒಂದು ಮ್ಯಾಂಗನೀಸ್ ಅದಿರಿನ ಟ್ರಕ್ಕಿಗೆ ಆರು ಆಣೆ ಮೇರೆ ಸರಕಾರಕ್ಕೆ ಪ್ರಮೋಟರಗಳು ತೆರಿಗೆ ಕೊಡತಕ್ಕದ್ದು.

ಶಿವಮೊಗ್ಗ ಮುನಿಸಿಪಾಲಿಟಿ ಯವರಿಗೆ ಕೊಡಬೇಕಾದ ತೆರಿಗೆ.

35. ಟ್ರಾಮುವೆ ಮಾರ್ಗವಾಗಿ ಸಾಗಿಸಲ್ಪಟ್ಟ ಮ್ಯಾಂಗನೀಸ್ ಅಥವಾ ಇತರ ಅದರ ಟನ್ 1ಕ್ಕೆ ಒಂದಾಣೆಯಂತೆ ತೆರಿಗೆ ವಸೂಲ್ ಮಾಡತಕ್ಕದ್ದು ಮತ್ತು ಮುನಿಸಿಪಲ್ ಬೋರಡಿಗೆ ಟ್ರಾಮುವೆ ಮಾರ್ಗವಾಗಿ ಪ್ರತಿ ತಿಂಗಳಲ್ಲಿಯೂ ತೆಗೆದುಕೊಂಡು ಹೋಗಲ್ಪಡುವದರ ಸಾಮಾನಿನ ಒಂದು ಸ್ಟೇಟ್‌ಮೆಂಟ್ ತಯಾರ್ಮಾಡಿ ಕಳುಹಿಸತಕ್ಕದ್ದು.

ಇನ್ಸ್ಪೆಕ್ಷನ್‌ಗೆ ಅರ್ಹವಾದ ಎಲ್ಲಾ ಕೆಲಸಗಳು.

36. ಟ್ರಾಮುವೆಯು ಇದಕ್ಕೆ ಸೇರಿದ ಕೆಲಸಗಳು ಮತ್ತು ಸಾಮಾನು ಸರ್ವಕಾಲದಲ್ಲೂ ಮೈಸೂರು ಮಹಾರಾಜರ ಸರಕಾರದಿಂದ ನೇಮಿಸಲ್ಪಡುವ ಮನುಷ್ಯ ಅಥವಾ ಮನುಷ್ಯರುಗಳಿಂದ ಇನ್ಸ್ಪೆಕ್ಷನ್ ಮತ್ತು ಅಜಮಾಯಿಷಿ ಬಗ್ಗೆ ಇಡತಕ್ಕದ್ದು. ಮತ್ತು ಪ್ರಮೋಟರಗಳು ಅಂಥ ಇನ್ಸ್ಪೆಕ್ಷನ್ ಅಥವಾ ಅಜಮಾಯಿಷಿಗೆ ಬರತಕ್ಕ ಮನುಷ್ಯನಿಗೆ ಬೇಕಾದ ಅನುಕೂಲತೆಯನ್ನು ಕೊಡತಕ್ಕದ್ದು.

ಟ್ರಾಮುವೆಯನ್ನು ಮುಚ್ಚುವದು ಮತ್ತು ಸರಕಾರದ ಹುಕ್ಕುಂನಿಂದ ರೋಲಿಂಗ್ ಸ್ಟಾಕನ್ನು ಉಪಯೋಗಪಡಿಸುವದು.

37. ಟ್ರಾಮುವೆ ಅಥವಾ ಅದರ ಯಾವ ಭಾಗವನ್ನಾದರು ಇನ್ಸ್ಪೆಕ್ಷನ್ ಆದಮೇಲೆ ಉಪಯೋಗಿಸುವ ಅದಕ್ಕೆ ಸೇರಿದ ಸಾಮಾನನ್ನು ಇನ್ಸ್ಪೆಕ್ಷನ್ ಆದ ತರುವಾಯ 36ನೆ ಪ್ರಕರಣ ಪ್ರಕಾರ ಇನ್ಸ್ಪೆಕ್ಷನ್ ಮಾಡುವ ಆಫಿಸರು ಮೈಸೂರು ಮಹಾರಾಜರ ಸರಕಾರಕ್ಕೆ ಮೇಲೆ ಹೇಳಿದ ಟ್ರಾಮುವೆ ಅಥವಾ ಅದರ ಭಾಗವು ಮತ್ತು ರೋಲಿಂಗ್ ಸ್ಟಾಕಿನ ಉಪಯೋಗವು ಅಪಾಯಕರವಾದ್ದೆಂದು ತಮಗೆ ಅಭಿಪ್ರಾಯ ಬಂದು ಸರಕಾರಕ್ಕೆ ತಿಳಿಸಿದನಂತರ ಮೈಸೂರು ಮಹಾರಾಜಾ ಸರಕಾರದವರು ಅಂಥ ಟ್ರಾಮುವೆಯನ್ನು ಅಥವಾ ಅದರ ಭಾಗವನ್ನು ಅನ್ಯುರಪ್ತಿಗೆ ಮುಚ್ಚಬೇಕೆಂದುಂನು ಅಥವಾ ಸಂದರ್ಭಾನುಸಾರ ಟ್ರಾಮುವೆಗೆ ಸೇರಿದ ಸಾಮಾನನ್ನು ಉಪಯೋಗಿಸಕೂಡದೆಂದು ಹುಕ್ಕುಂ ಮಾಡಬಹುದು.

ಪುನಹ ಮಂಜೂರಾತಿ ಪಡಿಯುವ ವರಿಗೂ ಟ್ರಾಮುವೆಯನ್ನು ತೆಗಿಯಕೂಡದು.

38. 37ನೆ ಪ್ರಕರಣ ಪ್ರಕಾರ ಟ್ರಾಮುವೆ ಅಥವಾ ಯಾ ಭಾಗವನ್ನು ಮುಚ್ಚಿದ ನಂತರ ಪುನಹ 1906ನೆ ಇಸವಿ ಮೈಸೂರು ಟ್ರಾಮುವೆ ರೆಗ್ಯುಲೇಷನ 1ನೆ ನಂಬರು ಸೆಕ್ಷನ್ ಪ್ರಕಾರ ಸರಕಾರದ ಮಂಜೂರಿನಿಂದ ಇನ್ಸ್ಪೆಕ್ಷನ್ ಆಗುವ ಪರಿಯಂತರವು ಟ್ರಾಮುವೆಯನ್ನು ನಡಿಸಕೂಡದು.

ಅಂಥ ಹುಕುಂ ಆದನಂತರ ಪುನಹ ಮಂಜೂರು ಪಡಿಯುವ ವರಿಗೂ ರೋಲಿಂಗ್ ಸ್ಟಾಕನ್ನು ಉಪಯೋಗಿಸಕೂಡದು.

39. 37ನೆ ಪ್ರಕರಣದ ಪ್ರಕಾರ ಮೈಸೂರು ಮಹಾರಾಜಾ ಸರಕಾರದವರು ರೋಲಿಂಗ್ ಸ್ಟಾಕನ್ನು ಉಪಯೋಗಿಸಕೂಡದೆಂದು ಹುಕುಂ ಮಾಡಿದ ಮೇಲೆ ಸದರೀ ರೋಲಿಂಗ್ ಸ್ಟಾಕನ್ನು 36ನೆ ಪ್ರಕರಣದಲ್ಲಿ ನಮೂದಿರುವ ಆಫಿಸರು ಅದರ ಉಪಯೋಗ ಲಾಯಖು ಎಂದು ರಿಪೋರ್ಟ್ ಮಾಡುವ ವರಿಗೂ ಮತ್ತು ಮೈಸೂರು ಮಹಾರಾಜಾ ಸರಕಾರ ಅದರ ಉಪಯೋಗವನ್ನು ಮಂಜೂರು ಮಾಡುವ ವರಿಗೂ ಉಪಯೋಗಿಸಕೂಡದು.

ಪ್ರಮೋಟರಗಳು ರೆಗ್ಯುಲೇಷನ್ ಮೇರಿಗೆ ಕೆಲಸಗಳನ್ನು ಮಾಡದೆ ತಪ್ಪಿದಲ್ಲಿ ಸರಕಾರದವರು ಪ್ರಮೋಟರಗಳ ಸ್ವಂತಲಾಗವಡಿನಿಂದ ಮಾಡಿಸಬಹುದು.

40. 1906ನೆ ಇಸವಿ ಮೈಸೂರು ಟ್ರಾಮುವೆ ರೆಗ್ಯುಲೇಷನ್ ಪ್ರಕಾರ ಯಾವ ಕೆಲಸವಾದರೂ ಆಗಬೇಕಾದ ಸಂದರ್ಭದಲ್ಲಿ ಅಥವಾ ಈ ಹುಕುಂ ಪ್ರಕಾರ ಪ್ರಮೋಟರುಗಳಿಂದ ಆಗಬೇಕಾದ ಕೆಲಸವು ಅವರುಗಳು ಮಾಡದೆ ಇದ್ದ ಪಕ್ಷಕ್ಕೆ ಮೈಸೂರು ಮಹಾರಾಜಾ ಸರಕಾರ ಪ್ರಮೋಟರುಗಳಿಗೆ ನೋಟಿಸ್ ಮೂಲಕ ನ್ಯಾಯವಾದ ವಾಯಿದೆ ಕಾಲದವಳಗೆ ಅಂಥಾ ಕೆಲಸವನ್ನು ಮಾಡಬೇಕೆಂದು ತಿಳಿಸಬಹುದು. ಅಂಥಾ ವಾಯಿದೆ ಒಳಗಾಗಿ ನೋಟಿಸ್ ಪ್ರಕಾರ ಕೆಲಸ ನಡಸದ ಪಕ್ಷದಲ್ಲಿ ಮೈಸೂರು ಮಹಾರಾಜಾ ಸರಕಾರ ಅಂಥ ಕೆಲಸವನ್ನು ಮಾಡಿಸಿ ಅದಕ್ಕೆ ತಗಲುವ ಲಾಗವಡನ್ನು ಟ್ರಾಮುವೆ ರೆಗ್ಯುಲೇಷನ್ 36ನೆ ಪ್ರಕರಣ ಪ್ರಕಾರ ಪ್ರಮೋಟರುಗಳಿಂದ ವಸೂಲು ಮಾಡತಕ್ಕದ್ದು.

ಯಾವ ಷರತ್ತು ಅಥವಾ ಹುಕುಂಗಳ ಪ್ರಕಾರ ನಡಿಯದೆ ತಪ್ಪಿದರೆ ಜುರುಮಾನೆ.

41. ಪ್ರಮೋಟರಗಳು ಯಾವದೊಂದು ಷರತ್ತನ್ನು ಅಥವಾ ಈ ಹುಕುಂ ನಲ್ಲಿನ ಆಜ್ಞೆಯನ್ನು ನಡಿಯದೆ ತಪ್ಪಿದಲ್ಲಿ ಅವರು ಪ್ರತಿ ಒಂದು ತಪ್ಪಿತಕ್ಕೂ 200 ರೂಪಾಯಿಗಳ ವರಿಗೂ ಜುರುಮಾನೆ ಹಾಕಬಹುದಾದ ಶಿಕ್ಷೆಗೆ ಗುರಿಮಾಡಲ್ಪಡುತ್ತಾರೆ. ಮತ್ತು ಅಂಥಾ ತಪ್ಪನ್ನು ಪುನಹ ನಡಿಸಿಕೊಂಡು ಬರುವದಾದರೆ ತಪ್ಪಿತ ಮಾಡಿದ ಮೊದಲುದಿವಸದ ತರುವಾಯ ಪ್ರತಿ ಒಂದು ದಿವಸಕ್ಕೂ 50 ರೂಪಾಯಿಗಳ ವರಿಗೂ ಇನ್ನು ಹೆಚ್ಚು ಜುರುಮಾನೆಗೂ ಗುರಿಮಾಡಲ್ಪಡುತ್ತಾರೆ. ಈ ಪ್ರಕರಣ ಪ್ರಕಾರ ವಸೂಲಾಗುವ ಪ್ರತಿ ಒಂದು ಜುರುಮಾನೆ ಮೊಬಲಗು ಮೈಸೂರು ಮಹಾರಾಜಾ ಸರಕಾರದವರು ಆಗಾಗ್ಯೆ ಮಾಡುವ ಹುಕ್ಕುಂ ಪ್ರಕಾರ ಉಪಯೋಗಿಸಲ್ಪಡುತ್ತೆ.

ಟ್ರಾಮವೆಯು ನಡಿಸುವದು ಮನ್ನಾ ಮಾಡುವ ಬಾಬು.

ಪ್ರವೋಟರು ಮತ್ತು ಇಜಾರದಾರನ ಅಧಿಕಾರವು ನಿಂತುಹೋಗುವಿಕೆ ಅಥವಾ ಟ್ರಾಮವೆ ನಿಂತುಹೋಗುವಿಕೆ.

42. ಯಾವಾಗಲಾದರು ಈ ಟ್ರಾಮವೆ ನಡಿಸುವದಕ್ಕೆ ಪ್ರಾರಂಭಿಸಿದ ನಂತರ ಮೈಸೂರು ಮಹಾರಾಜಾ ಸರಕಾರದವರಿಗೆ ಟ್ರಾಮವೆ ಅಥವಾ ಅದರ ಯಾವ ಭಾಗವಾದರೂ ಅದರ ಕೆಲಸ ನಡಿಸುವಿಕೆಯು ಮಹಾರಾಜಾ ಸರಕಾರಕ್ಕೆ ತೃಪ್ತಿಕರವಾದ ಕಾರಣವಿಲ್ಲದೆ 3 ತಿಂಗಳುಕಾಲ ಟ್ರಾಮವೆ ನಡಿಸದೆ ನಿಂತುಹೋಗಿರುವ ಪಕ್ಷಕ್ಕೆ ಮಹಾರಾಜಾ ಸರಕಾರ ಲಾಯಖಾಗಿದೆ ಎಂದು ತೋರಿದ ಪಕ್ಷಕ್ಕೆ, ಸರಕಾರದ ಗೆಜೆಟ್ಟನಲ್ಲಿ ಘಾಯಿಷಿಯಿಂದ ಪ್ರವೋಟರಗಳ ಮತ್ತು ಇಜಾರದಾರನ ನಡಿಸದೆ ನಿಂತುಹೋಗಿರುವ ಟ್ರಾಮವೆ ಅಥವಾ ಅದರ ಭಾಗದ ವಿಷಯಕ್ಕೆ ಉಂಟಾದ ಯಾವ ಅಧಿಕಾರವು ಘಾಯಿಷಿಯಾದ ತಾರೀಖು ಲಾಗಾಯಿತ್ತು ನಿಂತುಹೋಯಿತೆಂದು ತಿಳಿಯುವದು. 1906ನೆ ಇಸವಿ ಮೈಸೂರು ಟ್ರಾಮವೆ ರೆಗ್ಯುಲೇಶನ್ನಲ್ಲಿ ಹೇಳಿದ ಪ್ರಕಾರ ಸ್ಥಳೀಯ ಅಧಿಕಾರಿಯು ಟ್ರಾಮವೆಯನ್ನು ತೆಗೆದುಕೊಳ್ಳುವ ಬಗ್ಗೆ ಬೇಕಾಗುವ ಅಧಿಕಾರ ಇರುವದೆ ಶಿವಾಯಿ ಮಿಕ್ಕ ಎಲ್ಲಾ ಅಧಿಕಾರವು ನಿಂತುಹೋಗಿರುತ್ತೆ.

ಹುಕ್ಮಂ ಬಿವೋಜೀಬ್,
ಬರ್ನಾರ್ಡ್ ಧಾಸ್, ಕ್ಯಾಪ್ಟನ್, ಆರ್. ಇ.,
ಅಂಡರ ಸೆಕ್ರಿಟರಿ, ರೈಲ್ವೆ ಬ್ರಾಂಚ್, ಮೈಸೂರು ಗವರ್ನಮೆಂಟ.

ಮೈಸೂರ ಗೆಜೆಟ್.

ನಂ. 42.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 31.

ಬೆಂಗಳೂರು, ಗುರುವಾರ, ಆಗಸ್ಟು ತಾ॥ 1, ಸ್ 1907.

ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ಮ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರ್ರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರ್ಕ್ಸ್ ಆಫಿಸರಗಳು, ಫಾರೆಸ್ಟು ರೆಜಿಸ್ಟ್ರೇಷನ ವ ಎಡ್ಯುಕೇಷನ ಇನಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೋಲೀಸ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

Iನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ಮ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 24ನೆ ಜುಲೈ 1907.

ನಂ. 677—ಸ್ಯಾನಿಟರಿ 24-07-2, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ:—ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ ಡಿಸೀಸೆಸ ರೆಗ್ಯುಲೇಷನ ಎಂಬ ಸಾಂಕ್ರಾಮಿಕ ವ್ಯಾಧ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ ಫೈಲ 21—96 ಮತ್ತು ನಂಬರ 9384—ಮಿಸಲೇನಿಯಸ ಫೈಲ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಹಾರನಹಳ್ಳಿ ...	ಕುಂಸಿ ಸಬ್ ತಾಲ್ಲೂಕು.
ಕೋಬಲ್ಲಿ ...	ಡಿಟ್ಟೋ
ಸಂತೆಕಡೂರು ...	ಶಿವಮೊಗ್ಗ

ತಾರೀಖು 24ನೆ ಜುಲೈ 1907.

ನಂ. 675—ಸ್ಯಾನಿಟರಿ 23–07—2, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :— ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21–96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಮೈನಾಯಕನಹಳ್ಳಿ	ಆನೆಕಲ್ಲು.
ಗುಡ್ಡಹಟ್ಟಿ	ಡಿಟೋ
ಅಲ್ಲೇನಹಳ್ಳಿ	ಡಿಟೋ
ಬೂರ್ನಾತ	ಡಿಟೋ
ಬೆಸ್ತಮಾನಹಳ್ಳಿ	ಡಿಟೋ
ಮಂಟಪ	ಡಿಟೋ
ಸೋಳ್ಳೇಪುರ	ಡಿಟೋ
ಸೋಲೂರು	ಡಿಟೋ
ಬೊಮ್ಮಸಂದ್ರ	ಡಿಟೋ
ಮೇಡಹಳ್ಳಿ	ಡಿಟೋ
ಹೆಬಗೋಡಿ	ಡಿಟೋ
ಮುತ್ತಸಂದ್ರ	ಡಿಟೋ
ದಾಸನಪುರ	ಡಿಟೋ
ಹಾಳೇನಹಳ್ಳಿ	ದೊಡ್ಡ ಬಳ್ಳಾಪುರ.
ಹುರಳಿಚಿಕ್ಕನಹಳ್ಳಿ	ಬೆಂಗಳೂರು.
ಅಲ್ಲಾಲಸಂದ್ರ	ಡಿಟೋ
ಕೃಷ್ಣರಾಜಪುರ	ಡಿಟೋ
ದೊಮ್ಮನಹಳ್ಳಿ	ಡಿಟೋ
ಜೋಡಿಸೆಟ್ಟಿಹಳ್ಳಿ	ಡಿಟೋ
ಜೋಡಿ ಅರಿಕೇರಿ	ಡಿಟೋ
ಮುರುಗೇಶ ಮೊದಲಿ ಪಾಳ್ಯ	ಡಿಟೋ
ಗುರಪ್ಪನ ಪಾಳ್ಯ	ಡಿಟೋ
ಅನುಗೊಂಡನ ಹಳ್ಳಿ	ಹೊಸಕೋಟೆ.
ಹೀರಂಡಹಳ್ಳಿ	ಡಿಟೋ
ಕಿತ್ತಗನೂರು	ಡಿಟೋ
ದೊಡ್ಡಬೆಲೆ	ನೆಲಮಂಗಲ.
ತ್ಯಾಮಗೊಂಡ್ಲು	ಡಿಟೋ
ಬೀರಗೊಂಡಹಳ್ಳಿ	ಡಿಟೋ

ತಾರೀಖು 24ನೆ ಜುಲೈ 1907.

ನಂ. 672—ಸ್ಯಾ. 22-07—4, ಘನವನ್ನೈದಿದ ಮೈಸೂರು ಶೀಮೆಯ ರೆಸಿಡೆಂಟರವರ ಮೊದಲನೆ ಅಸಿಸ್ಟೆಂಟರಿಂದ ಬಂದ 1907ನೆ ಇಸವಿಯ ಜುಲೈ 17ನೆ ತಾರೀಖಿನ 735-ಪಿ.ನೆ ನಂಬರಿನ ಎಂಡಾರ್ಸುಮೆಂಟಿನ ಸಂಗಡ ತಲುಪಿದ ಮದರಾಸು ಸರ್ಕಾರದ ಇದರಡಿ ಕಂಡ ಇಸ್ತಿಹಾರ್‌ನಾಮೆಯನ್ನು ಸಮಸ್ತರ ತಿಳುವಳಿಕೆಯ ಬಗ್ಗೆ ಪ್ರಕಟಿಸಿದೆ :—

ಬಳ್ಳಾರಿ, ಸೇಲಂ, ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದಲೂ, ಮೈಸೂರು ಶೀಮೆಯಿಂದಲೂ, ಬೊಂಬಾಯಿ ಅಧಿಪತ್ಯದಿಂದಲೂ ಮತ್ತು ಪ್ಲೇಗು ತಗುಲಿರುವುದಾಗಿ ಪ್ರಕಟಿಸಲ್ಪಟ್ಟಿರುವ ಇತರ ಪ್ರದೇಶಗಳಿಂದಲೂ ತಂಜಾವೂರು ಡಿಸ್ಟ್ರಿಕ್ಟಿನ ನಾಗಪಟ್ಟಣ ತಾಲ್ಲೂಕಿನ ವೇಲಂಗಣ್ಣಿ ಎಂಬ ಸ್ಥಳಕ್ಕೆ ಬರುವ ಆರೋಗ್ಯಮಾತಾ ಜಾತ್ರೆಗೆ ಜನರು ಹೋಗುವದಕ್ಕೆ ಅವಕಾಶಕೊಟ್ಟರೆ, ಆ ಸ್ಥಳದಲ್ಲಿ ಪ್ಲೇಗು ತಗುಲುವ ಅಪಾಯವಿರುವಂತೆ ಸಭಾ ಸಮೇತರಾದ ಗವರ್ನರವರಿಗೆ ತೃಪ್ತಿಕರವಾಗಿ ಕಂಡು ಬಂದಿರುವುದರಿಂದ :

1897ನೆ ಇಸವಿಯ ಸಾಂಕ್ರಾಮಿಕ ಜಾಡ್ಯಗಳ ಆಕ್ಟಿನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಸಭಾ ಸಮೇತರಾದ ಗವರ್ನರವರು, 1907ನೆ ಇಸವಿಯ ಆಗಸ್ಟು 22ನೆ ತಾರೀಖಿನಿಂದ ಸೆಪ್ಟಂಬರ್ 8ನೆ ತಾರೀಖಿನ ವರೆಗೆ ಸದರಿ ತಾರೀಖು ಸೇರಿ, ಸದರಿ ಸ್ಥಳಗಳಿಂದ ಸದರಿ ಜಾತ್ರೆಗೆ ಜನರು ಹೋಗಕೂಡದೆಂದು ನಿಷೇಧಿಸುತ್ತಾರಲ್ಲದೆ—ಸದರಿ ತಾರೀಖುಗಳ ನಡುವೆ ಮದರಾಸು ರೈಲ್ವೆಯ ಗುಡುಪಲ್ಲಿ, ಕುಪ್ಪಂ, ಮಲನೂರು ಮತ್ತು ಪಚ್ಚೂರು ಸ್ಟೇಷನ್‌ಗಳಲ್ಲಿಯೂ, ಬಳ್ಳಾರಿ ಡಿಸ್ಟ್ರಿಕ್ಟಿನ ಕೂಡ್ಲಿಗಿ ತಾಲ್ಲೂಕಿನ ಸ್ಟೇಷನುಗಳಲ್ಲಿಯೂ, ದಕ್ಷಿಣ ಇಂಡಿಯಾ ರೈಲ್ವೆಯಲ್ಲಿ ನಾಗೂರು, ಕಾಡಂಬಾಡಿ, ವೆಲಿಪಾಲಿಯಂ, ನಾಗಪಟ್ಟಣ ಬೀಚ್, ನಾಗಪಟ್ಟಣ, ಸಿಕ್ಕಿಲ್, ಕಿವಲೂರು, ಕೂತೂರು, ಮತ್ತು ಆಡಿಯಕ್ಕಮಂಗಲಂ ಸ್ಟೇಷನ್‌ಗಳಿಗೆ ರೈಲ್ವೆಯಲ್ಲಿ ಪ್ರಯಾಣ ಮಾಡುವುದಕ್ಕೆ ಸದರಿ ಜಾತ್ರೆಗೆ ಹೋಗಬೇಕೆಂದು ಉದ್ದೇಶವುಳ್ಳ ಅಥವಾ ಉದ್ದೇಶವುಳ್ಳವನೆಂದು ನಂಬಲ್ಪಟ್ಟ ಯಾವ ಮನುಷ್ಯನಿಗೂ ಟಿಕೆಟ್ ಮಾರಕೂಡದು ಎಂಬದಾಗಿ ಆಜ್ಞಾಪಿಸುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಸದರಿ ಜಾತ್ರೆಗೆ ಹೋಗುವವರನ್ನೆಲ್ಲಾ ವಾಪಸು ಕಳುಹಿಸಲಾಗುವುದು.

ತಾರೀಖು 24ನೆ ಜುಲೈ 1907.

ನಂ. 673—ಸ್ಯಾ. 22-07—5, ಘನವನ್ನೈದಿದ ಮೈಸೂರು ಸೀಮೆಯ ರೆಸಿಡೆಂಟರ ಮೊದಲನೆ ಅಸಿಸ್ಟೆಂಟರ 1907ನೆ ಇಸವಿಯ ಜುಲೈ 17ನೆ ತಾರೀಖಿನ 733ನೆ ನಂಬರಿನ ಇಂಡಾರ್ಸುಮೆಂಟಿನೊಡನೆ ತಲುಪಿದ ಮದ್ರಾಸು ಸರ್ಕಾರದ ಇದರಡಿ ಕಂಡ ಇಸ್ತಿಹಾರ್ನಾಮೆಯನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಪುನಃ ಪ್ರಕಟಿಸಿ ಇದೆ:—

ಬಳ್ಳಾರಿ, ಸೇಲಂ, ಮತ್ತು ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದಲೂ, ಮೈಸೂರು ಸೀಮೆಯಿಂದಲೂ, ಬೊಂಬಾಯಿ ಆಧಿಪತ್ಯದಿಂದಲೂ ಮತ್ತು ಪ್ಲೇಗು ತಗುಲಿರುವುದಾಗಿ ಪ್ರಕಟಿಸಲ್ಪಟ್ಟಿರುವ ಇತರ ಪ್ರದೇಶಗಳಿಂದಲೂ ತಂಜಾವೂರು ಡಿಸ್ಟ್ರಿಕ್ಟಿನಲ್ಲಿ ನಾಗಪಟ್ಟಣದ ಹತ್ತಿರ ನಾಗೂರೆಂಬ ಸ್ಥಳಕ್ಕೆ ಬರುವ ಕಂಡಿರಿ ಜಾತ್ರೆಯ ಕಾಲದಲ್ಲಿ ಜನರನ್ನು ಹೋಗುವುದಕ್ಕೆ ಬಿಟ್ಟರೆ ಆ ಸ್ಥಳದಲ್ಲಿ ಪ್ಲೇಗು ತಗುಲುವ ಅಪಾಯವಿರುವುದಾಗಿ ಸಭಾಸಮೇತರಾದ ಗವರ್ನರವರಿಗೆ ತೃಪ್ತಿಕರವಾಗಿ ಕಂಡುಬಂದಿರುವುದರಿಂದ :

1897ನೆ ಇಸವಿಯ ಸಾಂಕ್ರಾಮಿಕ ವ್ಯಾಧ್ಯಗಳ ಆಕ್ಟಿನ ಮೇರೆಗೆ ತಮಗೆ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಸಭಾ ಸಮೇತರಾದ ಗವರ್ನರವರು 1907ನೆ ಇಸವಿಯ ಜುಲೈ 6ನೆ ತಾರೀಖಿನಿಂದ 26ನೆ ತಾರೀಖಿನ ವರೆಗೆ ಸದರಿ ಸ್ಥಳಗಳಿಂದ ಜನರು ಸದರಿ ಜಾತ್ರೆಗೆ ಹೋಗಕೂಡದೆಂದು ನಿಷೇಧಿಸುತ್ತಾರಲ್ಲದೆ ಸದರಿ ತಾರೀಖುಗಳ ನಡುವೆ ಮದ್ರಾಸು ರೈಲ್ವೆಯಲ್ಲಿ ಗುಡುಪಲ್ಲಿ, ಕುಪ್ಪಂ, ಮಲನೂರು ಮತ್ತು ಪಚ್ಚೂರು ಸ್ಟೇಷನ್ನುಗಳಲ್ಲಿಯೂ ಬಳ್ಳಾರಿ ಡಿಸ್ಟ್ರಿಕ್ಟಿನ ಕೂಡ್ಲಿಗಿ ತಾಲ್ಲೂಕಿನ ಸ್ಟೇಷನ್ನುಗಳಲ್ಲಿಯೂ ದಕ್ಷಿಣ ಇಂಡಿಯಾ ರೈಲ್ವೆಯ ನಾಗೂರು, ಕಾಡೆಂಬಾಡಿ, ವೆಲ್ಲಿಪಾಳ್ಯಂ, ನಾಗಪಟ್ಣ ಬೀಚ್, ನಾಗಪಟ್ಟಣ, ಸಿಕ್ಕಿಲ್, ಕೀವಲೂರು, ಕೂತರ್, ಮತ್ತು ಅಡಿಯಕ್ಕ ಮಂಗಲಂ ಸ್ಟೇಷನ್ನುಗಳಿಗೆ ರೈಲ್ವೆಯಲ್ಲಿ ಪ್ರಯಾಣ ಮಾಡುವದಕ್ಕಾಗಿ ಟಿಕೆಟುಗಳನ್ನು ಸದರಿ ಜಾತ್ರೆಗೆ ಹೋಗಲು ಉದ್ದೇಶವುಳ್ಳ ಅಥವಾ ಉದ್ದೇಶವುಳ್ಳವನೆಂದು ನಂಬಲ್ಪಟ್ಟ ಯಾವ ಮನುಷ್ಯನಿಗೂ ಮಾರಕೂಡದೆಂದು ಆಜ್ಞಾಪಿಸುತ್ತಾರೆ.

ಈ ಇಸ್ತಿಹಾರಿಗೆ ವಿರೋಧವಾಗಿ ಸದರಿ ಜಾತ್ರೆಗೆ ಹೋಗುವವರೆಲ್ಲರನ್ನೂ ವಾಪಸು ಕಳುಹಿಸಲಾಗುವುದು.

ತಾರೀಖು 24ನೆ ಜುಲೈ 1907.

ನಂ. 674—ಸ್ಯಾ. 22-07-6, ಘನವನ್ನೈದಿದ ಮೈಸೂರು ಸೀಮೆಯ ರೆಸಿಡೆಂಟರವರ ಮೊದಲನೆ ಅಸಿಸ್ಟೆಂಟರಿಂದ ಬಂದ 1907ನೆ ಇಸವಿಯ ಜುಲೈ 22ನೆ ತಾರೀಖಿನ 779ನೆ ನಂಬರ್ ಇಂಡಾರ್ಸುಮೆಂಟಿನೊಡನೆ ತಲುಪಿದ ಇದರಡಿ ಕಂಡ ಮದರಾಸು ಸರ್ಕಾರದ ಇಸ್ತಿಹಾರ್ನಾಮೆಯನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಪುನಃ ಪ್ರಕಟಿಸಿ ಇದೆ:—

ಬಳ್ಳಾರಿ, ಸೇಲಂ ಮತ್ತು ದಕ್ಷಿಣ ಕನ್ನಡ ಡಿಸ್ಟ್ರಿಕ್ಟುಗಳಿಂದಲೂ ಮದ್ರಾಸು ಆಧಿಪತ್ಯದ ಹೊರಗೆ ಪ್ಲೇಗು ತಗುಲಿರುವುದಾಗಿ ಪ್ರಕಟಿಸಲ್ಪಟ್ಟಿರುವ ಇತರ ಪ್ರದೇಶಗಳಿಂದಲೂ ಮಧುರಾ ಡಿಸ್ಟ್ರಿಕ್ಟಿನ ರಾಮನಾಡು ಡಿವಿಜನಿನ ರಾಮೇಶ್ವರಕ್ಕೆ ಬರುವ ಆಡಿ ಅಮಾವಾಸ್ಯೆ ಮತ್ತು ರಥೋತ್ಸವ ಕಾಲದಲ್ಲಿ ಜನರನ್ನು ಬಿಟ್ಟರೆ ಸದರಿ ಸ್ಥಳದಲ್ಲಿ ಪ್ಲೇಗು ತಗುಲುವ ಅಪಾಯವಿರುತ್ತದೆ ಎಂದು ಸಭಾಸಮೇತರಾದ ಗವರ್ನರವರಿಗೆ ತೃಪ್ತಿಕರವಾಗಿ ಕಂಡು ಬಂದಿರುವುದರಿಂದ :

1897ನೆ ಇಸವಿಯ ಸಾಂಕ್ರಾಮಿಕ ವ್ಯಾಧ್ಯಗಳ ಆಕ್ಟಿನಿಂದ ತಮಗೆ ಕೊಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಸಭಾಸಮೇತರಾದ ಗವರ್ನರವರು 1907ನೆ ಇಸವಿಯ ಜುಲೈ 30ನೆ ತಾರೀಖಿನಿಂದ 1907ನೆ ಆಗಸ್ಟು 14ನೆ ತಾರೀಖಿನವರೆಗೆ ಸದರಿ ದಿನವೂ ಸೇರಿ, ಸದರಿ ಪ್ರದೇಶಗಳಿಂದ ಜನರು ಆ ಜಾತ್ರೆಗೆ ಹೋಗಕೂಡದೆಂದು ನಿಷೇಧಿಸುತ್ತಾರಲ್ಲದೆ ಸದರಿ ತಾರೀಖುಗಳ ನಡುವೆ ಬಳ್ಳಾರಿ ಡಿಸ್ಟ್ರಿಕ್ಟಿನ ಕೂಡ್ಲಿಗಿ ತಾಲ್ಲೂಕಿನಲ್ಲಿಯೂ ಮದ್ರಾಸು ರೈಲ್ವೆ ಲೈನಿನಲ್ಲಿ ಗುಡಪಲ್ಲಿ, ಕುಪ್ಪಂ, ಮಲನೂರು ಮತ್ತು ಪಚ್ಚೂರು ಸ್ಟೇಷನ್ನುಗಳಲ್ಲಿಯೂ ದಕ್ಷಿಣ ಇಂಡಿಯಾ ರೈಲ್ವೆಯಲ್ಲಿ ಮಧುರಾ, ಪೂರ್ವಮಧುರಾ, ಸಿಲೇಮಾನ್, ತಿರುಪ್ಪುವನಂ, ತಿರುಪ್ಪಚೆಟ್ಟಿ, ಮಾನಮಧುರಾ, ಪಾರ್ಟಿಬನ್ನೂರು, ಪರಮಕುಡಿ, ಸಂಡಿಕನ್ಮಾಯಿ, ಸತ್ತಿರಕ್ಕುಡಿ, ರಾಮ್ನಾಡ್, ವಾಲಂತರವೈ, ಉಚಿಪುಲಿ, ಮಂಟಪಂ, ಪಾಂಬನ್‌ಬೀಚ್ ಪಾಂಬನ್, ತಂಗಚಿಮಡಂ ಮತ್ತು ರಾಮೇಶ್ವರ ಸ್ಟೇಷನುಗಳಿಗೆ ರೈಲುಮೂಲಕ ಸದರಿ ಜಾತ್ರೆಗೆ ಹೋಗಬೇಕೆಂದಿರುವ ಅಥವಾ ಹೋಗಬೇಕೆಂಬ ಇರಾದೆಯುಳ್ಳವನೆಂತ ನಂಬಲ್ಪಟ್ಟ ಯಾವ ಮನುಷ್ಯನಿಗೂ ಟಿಕೆಟ್ ಕೊಡಕೂಡದೆಂದು ಆಜ್ಞಾಪಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಸದರಿ ಜಾತ್ರೆಗೆ ಹೋಗುವವರೆಲ್ಲರನ್ನೂ ವಾಪಸು ಕಳುಹಿಸಲಾಗುವುದು.

ತಾರೀಖು 26ನೆ ಜುಲೈ 1907.

ನಂ. ಜೆ. 258—ಕೋರ್ಟ್: 28-07—2, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ ಮೈಸೂರು ಚೀಫ್ ಕೋರ್ಟಿನ ರಿಜಿಸ್ಟ್ರಾರ್ ಮಿ|| ವಿ. ಎ. ರಾಜರತ್ನ ಮೊದಲಿಯಾರ್‌ಗೆ 1907ನೆ ಇಸವಿಯ ಜುಲೈ 23ನೆ ತಾರೀಖಿನಿಂದ 15 ದಿವಸಗಳ ಪ್ರಿವಿಲೇಜ್ ರಜಾವನ್ನು ಕೊಟ್ಟಿರುತ್ತದೆ.

2. ಮಿ|| ರಾಜರತ್ನ ಮೊದಲಿಯಾರ್ ರಜಾವಿನ ಮೇಲೆ ಇರುವಾಗ, ಡೆಪ್ಯುಟಿ ರಿಜಿಸ್ಟ್ರಾರ್ ಮಿ|| ಬಿ. ಬಸವಾರಾಧ್ಯ, ಬಿ. ಎ., ಬಿ. ಎಲ್. ರವರನ್ನು ತಮ್ಮ ಕೆಲಸದ ಜತೆಗೆ ರಿಜಿಸ್ಟ್ರಾರವರ ಚಾರ್ಜಿ ಕೆಲಸಗಳ ಚಾರ್ಜಿನಲ್ಲಿರುವಂತೆ ಮೊಕರರ್‌ಮಾಡಿ ಇದೆ.

ತಾರೀಖು 26ನೆ ಜುಲೈ 1907.

ನಂ. ಜಿ. 681—ಜಿ. ಎಂ. 258-06-21, ಮೈಸೂರು ರೆವಿನ್ಯೂ ಸರ್ವೆ ಇಲಾಖೆಯ ಸಬ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿ|| ಎಲ್ಲೂ ಶ್ರೀನಿವಾಸ್‌ರವರನ್ನು 1907ನೆ ಇಸವಿಯ ಆಗಸ್ಟು 1ನೆ ತಾರೀಖಿನಿಂದ 5ನೆ ತರಗತಿಯ ಅಸಿಸ್ಟೆಂಟ್ ಕಮಿಷನರಾಗಿ ಬದಲಿ ನೋಡುವುದಕ್ಕೆ ಮೊಕರರ್‌ಮಾಡಿ ಮಿ|| ಜೆ. ಎಲ್. ಮೆಕ್ಕೆಯವರಿಗೆ ಬದಲಾಗಿ ಸರ್ವೆ ಇಲಾಖೆಗೆ ಹಾಕಿದೆ.

ತಾರೀಖು 30ನೆ ಜುಲೈ 1907.

ನಂ. ಜಿ. 292—ಕೋರ್ಟುಗಳು 216-06-10, ಮೈಸೂರು ಸಿಟಿ ಮಾಜಿಸ್ಟ್ರೇಟು ಕೋರ್ಟಿನ ಚಾರ್ಜಿನಲ್ಲಿರುವ ಸೀನಿಯರ ಅಸಿಸ್ಟೆಂಟ್ ಕಮಿಷನರ ಮಿ॥ ಎ. ವೆಂಕಟರಾಯರಿಗೆ 1907ನೆ ಇಸವಿಯ ಜೂನ್ 12ನೆ ತಾರೀಖಿನ ಜಿ. 3716—ಕೋರ್ಟ್ಸ್ 216-06-4ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ಮಂಜೂರಾದ ಪ್ರಿವಿಲೇಜ್ ರಜಾವನ್ನು ಅವರು 1907ನೆ ಇಸವಿಯ ಆಗಸ್ಟು ಮೊದಲನೆ ತಾರೀಖಿನಿಂದ ಉಪಯೋಗಿಸಿಕೊಳ್ಳಲು ಅಪ್ಪಣೆ ಕೊಟ್ಟಿದೆ.

2. ಅಸಿಸ್ಟೆಂಟ್ ಕಮಿಷನರ ಮಿ॥ ಪಿ. ಶ್ರೀನಿವಾಸರಾಯರನ್ನು ಅವರಿಗೆ 1907ನೆ ಇಸವಿಯ ಜುಲೈ 19ನೆ ತಾರೀಖಿನ ರೆ. 475—ಲ್ಯಾ. ರೆ. 500-06-5ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ಕೊಟ್ಟ ರಜಾದಿಂದ ವಾಪಸು ಕರಸಿ, ಇನ್ನೊಂದು ಹುಕುಂ ಕೊಡುವವರೆಗೆ ಮೈಸೂರು ಸಿಟಿ ಮಾಜಿಸ್ಟ್ರೇಟ್ ಕೋರ್ಟಿನ ಚಾರ್ಜಿನಲ್ಲಿರುವ ಬಗ್ಗೆ, ಮೈಸೂರಿಗೆ ಹಾಕಿದೆ.

ತಾರೀಖು 30ನೆ ಜುಲೈ 1907.

ನಂ. 857—ಎಲ್. ಬಿ. 425-06—5, 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನೆಂದರೆ:—ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ಯಡತೊರೆ ತಾಲ್ಲೂಕು ಮಿರ್ಲೆ ಗ್ರಾಮದ ಹೊರಗೆ ಗೊಬ್ಬರ ಜಮಾಯಿಸುವ ಬಗ್ಗೆ ಸ್ಥಳ ಏರ್ಪಡಿಸುವುದಕ್ಕೋಸ್ಕರ ಅವಶ್ಯಕವಾಗಿವೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಹುಣಸೂರು ಸಬ್ ಡಿವಿಜನ್ನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬಳಿ	ಗ್ರಾಮ	ಖಾತೆದಾರರ ಹೆಸರು	ಸರ್ವೆ ನಂಬರು	ಜಮೀನಿನ ಬಾಬತ್ತು	ಪೂರ್ತಿ ವಿಸ್ತೀರ್ಣ	ಕಂದಾಯ	ಈಗ ತೆಗೆದುಕೊಳ್ಳಬೇಕಾದ ವಿಸ್ತೀರ್ಣ	ಕಂದಾಯ	ಚತುರ್ಗಡಿ: ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
							ಎ. ಗು.	ರೂ. ಆ.	ಎ. ಗು.	ರೂ. ಆ.				
ಮೈಸೂರು	ಯಡತೊರೆ	ಮಿರ್ಲೆ	ಮಿರ್ಲೆ	ಸೂರ್ಯನಾರಣೈಯ್ಯ, ಸುಬ್ಬಯ್ಯ ಮತ್ತು ಕೃಷ್ಣಪ್ಪ.	4	ಖುಷ್ಕಿ	4 35	3 8	4 20	3 4	ಸರ್ವೆ 4ನೆ ನಂಬರಿನಲ್ಲಿ ಉಳಿದ ಭಾಗ.	ದಾರಿ	ದಾರಿ	ಚಾಮರಾಜ ನಾಲಾ
				ರಾಮೇಗೌಡ ಬಿನ್ ಪರುಶ ರಾಮೆಗೌಡ.	194		9 1	8 8	1 0	1 0	ಸರ್ವೆ 194ನೆ ನಂಬರಿನಲ್ಲಿ ಉಳಿದ ಭಾಗ	ಡಿಟ್ಟೋ	1096—195ನೆ ನಂಬರುಳ್ಳ ಜಮೀನುಗಳು	193ನೆ ಸರ್ವೆ ನಂಬರು

ತಾರೀಖು 6ನೆ ಜುಲೈ 1907.

ನಂ. ರೆ. 214—ಲ್ಯಾ. ರೆ. 393-06-4, ಕಾಫಿ ವ್ಯವಸಾಯಕ್ಕೋಸ್ಕರ ಜಮೀನುಗಳನ್ನು ಕೊಡುವ ಬಗ್ಗೆ ವಿಧಿಸಿರುವ ಕನಿಷ್ಠ ವಿಸ್ತೀರ್ಣವನ್ನು ಕೆಲವು ಸಂದರ್ಭಗಳಲ್ಲಿ 15ರಿಂದ 5 ಎಕರೆಗಳಿಗೆ ಕಮ್ಮಿ ಮಾಡುವಂತೆ ಸರ್ಕಾರದವರು ಅಪ್ಪಣೆ ಮಾಡಿರುವ ಪ್ರಯುಕ್ತ, ಸರ್ವೆ ನಂಬರುಗಳನ್ನು ಪೋಡು ಮಾಡುವ ಬಗ್ಗೆ ಕನಿಷ್ಠ ವಿಸ್ತೀರ್ಣವನ್ನು ವಿಧಿಸುವ 1901ನೆ ಇಸವಿಯ ರೆವಿನ್ಯೂ ನಿಬಂಧನೆಗಳ (44ನೆ ಪುಟದ) ಬೀ. ಗುರ್ತಿನ ಅಪೆಂಡಿಕ್ಸ್ ಯಾ ಪರಿಶಿಷ್ಟದ ಕೊನೆಗೆ ಈ ಕೆಳಗೆ ನಮೂದಿಸುವ ಟಿಪ್ಪಣಿಯನ್ನು ಸೇರಿಸಬೇಕೆಂದು ಈ ಮೂಲಕ ಹುಕುಂ ಮಾಡಿ ಇದೆ:—

ಟಿಪ್ಪಣಿ.—ಕಾಫಿ ಜಮೀನುಗಳ ಪೋಡಿಗೋಸ್ಕರ ಕನಿಷ್ಠ ವಿಸ್ತೀರ್ಣವನ್ನು ಈ ಕೆಳಗೆ ನಮೂದಿಸಲ್ಪಟ್ಟ ಸಂದರ್ಭಗಳಲ್ಲಿ ಮತ್ತು ಈ ಕೆಳಗೆ ನಮೂದಿಸಲ್ಪಟ್ಟ ಷರತ್ತುಗಳಿಗೆ ಒಳಪಟ್ಟು 5 ಎಕರೆಗಳಿಗೆ ಇಳಿಸಬೇಕು:—

1. ಸಂಬಂಧಪಟ್ಟ ಜಮೀನು ಪ್ರತ್ಯೇಕವಾಗಿರುವಲ್ಲಿ; ಎಂದರೆ ಕಾಫಿಗೆ ಲಾಯಖಾದ ಇತರ ಜಮೀನುಗಳಿಗೆ ಅದು ಸೇರಿದ ಹಾಗೆ ಇಲ್ಲದೇ ಇರುವಲ್ಲಿ.

2. ಕಾಫಿಗೆ ಲಾಯಖಾದ ಜಮೀನುಗಳಿಗೆ ಅದು ಸೇರಿರುವಾಗ, ಅಥವಾ ಒಂದು ಭಾರಿ ವಿಸ್ತೀರ್ಣದ ವೈಕಿ ಒಂದು ಭಾಗಕ್ಕೆ ದರಖಾಸ್ತು ಬಂದಾಗ; ಪರಂತು, ಅಂಥಾ ಸಂದರ್ಭಗಳಲ್ಲಿ, ಮುಂದೆ ದರಖಾಸ್ತು ಮಾಡುವವರಿಗೆ ಸರ್ವೆ ನಂಬರಿನಲ್ಲಿ ಉಳಿದ ಭಾಗವು ಸಿಕ್ಕುವುದಕ್ಕೆ ಬಾಧಕ ಬಾರದಂತೆ ಸದರಿ ಸರ್ವೆ ನಂಬರಿನ ಒಂದು ಕಡೆಯಿಂದ ಮತ್ತು ಹಾಲಿ ಸಾಗುವಳಿಯಲ್ಲಿರುವ ಜಮೀನಿಗೆ ಲಗತ್ತಾಗಿ ಜಮೀನುಗಳನ್ನು ಕೊಡಬೇಕು.

3. ದರಖಾಸ್ತುದಾರನ ಸ್ವಂತ ಸಾಮಾನ್ಯವಾದ ಸಾಗುವಳಿ ಜಮೀನುಗಳಿಗೆ ಅದು ಲಗತ್ತಾಗಿರುವಾಗ.

4. ಒಂದು ಹಳ್ಳದ ಪಾರ್ಶ್ವದಲ್ಲಿರುವ ಜಮೀನು ದರಖಾಸ್ತು ಮಾಡಲ್ಪಟ್ಟರೆ, ಅದನ್ನು ಸದರಿ ಹಳ್ಳದ ಒಂದು ಪಕ್ಕದಲ್ಲಿ ತೆಗೆದುಕೊಳ್ಳಬೇಕು, ಮತ್ತು ವಾಡಿಕೆಯಾದ 50 ಗಜಗಳ ಅರೆಬನ್ನು ಖುಲ್ಲಾ ಬಿಟ್ಟಿರಬೇಕು.

ತಾರೀಖು 12ನೆ ಜುಲೈ 1907.

ನಂ. ರೆ. 358—ಫಾರೆಸ್ಟು. 8-07-2, ಕೋಲಾರ ಡಿಸ್ಟ್ರಿಕ್ಟ್ ಫಾರೆಸ್ಟ್ ಡೆಪ್ಯುಟಿ ಕನ್ಸರ್ವೇಟರ್ ಮಿ॥ ಎಸ್. ಎ. ಬಾಪುರಾಯರಿಗೆ, 1907ನೆ ಇಸವಿಯ ಏಪ್ರಿಲ್ 24ನೆ ತಾರೀಖಿನ 9515—ಫಾರೆಸ್ಟು 180-06-2ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಕೊಟ್ಟ ಒಂದು ತಿಂಗಳ ಪ್ರಿವಿಲೇಜ್ ರಜಾವನ್ನು ಇದರಿಂದ ಇನ್ನೂ ಇಪ್ಪತ್ತುಮೂರು ದಿವಸಗಳವರೆಗೆ ಹೆಚ್ಚಿಸಿ ಇದೆ. ಮಿ॥ ಬಾಪುರಾಯರ ಗೈರ್ ಹಾಜರಿಯಲ್ಲಿ, ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ಮಿ॥ ವೈ. ಸೀತಾರಾಮೈಯ್ಯನವರು ಬದಲಿ ನೋಡುತ್ತಿರುವರು.

ತಾರೀಖು 12ನೆ ಜುಲೈ 1907.

ನಂ. ರೆ. 359—ಲ್ಯಾ. ರೆ. 16-07-2, ಗುಂಡ್ಲುಪೇಟೆ ತಾಲ್ಲೂಕಿನ ಅಮಲ್ದಾರ್ ಮಿ॥ ಎ. ಕೃಷ್ಣ ಅರಸಿನವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನ್ಗಳ 177ನೆ ನಿಬಂಧನೆಯ ಮೇರೆಗೆ, ಒಂದು ತಿಂಗಳೂ ಹತ್ತೊಂಭತ್ತು ದಿನಗಳ ವರೆಗೆ ಪ್ರಿವಿಲೇಜ್ ರಜಾವನ್ನು, ಅವರು ಅದನ್ನು ಉಪಯೋಗಿಸಿಕೊಂಡ ತಾರೀಖಿನಿಂದ ಕೊಟ್ಟಿದೆ.

2. ಇವರ ಗೈರ್‌ಹಾಜರಿಯಲ್ಲಿ ಅಥವಾ ಇನ್ನೊಂದು ಹುಕುಂ ಕೊಡುವವರೆಗೆ, ತಾಲ್ಲೂಕು ಶಿರಸ್ತೆದಾರ್ ಲಕ್ಷ್ಮೀನರಸಿಂಹೈಯ್ಯಂಗಾರ್‌ರನ್ನು ಗುಂಡ್ಲುಪೇಟೆ ತಾಲ್ಲೂಕಿನ ಅಮಲ್ದಾರ್ ಮತ್ತು 3ನೆ ತರಗತಿಯ ಮಾಜಿಸ್ಟ್ರೇಟಾಗಿ ಬದಲಿ ನೋಡುವುದಕ್ಕೆ ಮೊಕರರ್ಮಾಡಿದೆ.

ತಾರೀಖು 12ನೆ ಜುಲೈ 1907.

ನಂ. ರೆ. 363—ಲ್ಯಾ. ರೆ. 20-07-3, ನೆಲಮಂಗಲದ ತಾಲ್ಲೂಕು ಶಿರಸ್ತೆದಾರ್ ಮತ್ತು ಆಕ್ಟಿಂಗ್ ಅಮಲ್ದಾರ್ ಮಿ॥ ಕಾಶಿನಾಥರಾಯರನ್ನು ಹಂಗಾಮಿಯಾಗಿ ಹೊಸಕೋಟೆ ತಾಲ್ಲೂಕಿಗೆ, ಅಮಲ್ದಾರ್ ಮತ್ತು 3ನೆ ತರಗತಿಯ ಮಾಜಿಸ್ಟ್ರೇಟಾಗಿ ಬದಲಿ ನೋಡುವುದಕ್ಕೆ ಮೊಕರರ್ಮಾಡಿದೆ. (ಇವರಿಂದ ಇನ್ನೊಬ್ಬರು ಚಾರ್ಜು ವಹಿಸಿದ ತರುವಾಯ ಈ ಕೆಲಸದ ಮೇಲೆ ಹೋಗತಕ್ಕದ್ದು.)

ತಾರೀಖು 17ನೆ ಜುಲೈ 1907.

ನಂ. ರೆ. 425—ಲ್ಯಾ. ರೆ. 6-07-26, 1907ನೆ ಇಸವಿಯ ಜುಲೈ 5ನೆ ತಾರೀಖಿನ ಪೂರ್ವಾಹ್ನದಲ್ಲಿ ಕಡೂರು ಡಿಸ್ಟ್ರಿಕ್ಟ್ ಮತ್ತು ಖಜಾನೆಯ ಚಾರ್ಜನ್ನು, ಡೆಪ್ಯುಟಿ ಕಮಿಷನರ್ ಮಿ॥ ಡಿ. ದೇವರಾಜ ಅರಸಿನವರು ಒಪ್ಪಿಸಿದರು ಮತ್ತು ಅಸಿಸ್ಟೆಂಟ್ ಕಮಿಷನರ್ ಮಿ॥ ಡಿ. ಎಂ. ನರಸಿಂಗರಾಯರು ವಹಿಸಿದರು; ಮತ್ತು 1907ನೆ ಇಸವಿಯ ಜುಲೈ 6ನೆ ತಾರೀಖಿನ ಪೂರ್ವಾಹ್ನದಲ್ಲಿ ಸದರಿ ಚಾರ್ಜನ್ನು ಮಿ॥ ಡಿ. ಎಂ. ನರಸಿಂಗರಾಯರು ಮಿ॥ ಬಿ. ಜೈಕುಮಾರಸ್ವಾಮಿ ನಾಯಕರಿಗೆ ಒಪ್ಪಿಸಿದರು.

ತಾರೀಖು 23ನೆ ಜುಲೈ 1907.

ನಂ. ರೆ. 540—ಲ್ಯಾ. ರೆ. 20-07-5, 1907ನೆ ಇಸವಿಯ ಜುಲೈ 8ನೆ ತಾರೀಖಿನ ಆರ್. 240—ಎಲ್. ಆರ್. 20-07-1ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ಅಮಲ್ದಾರರಾಗಿಯೂ 3ನೆ ತರಗತಿಯ ಮಾಜಿಸ್ಟ್ರೇಟಾಗಿಯೂ ಬದಲಿ ಕೆಲಸ ನೋಡುವಂತೆ ಮೊಕರರ್ಮಾಡಲ್ಪಟ್ಟ ಮೊಳಕಾಲ್ಮುರು ತಾಲ್ಲೂಕಿಗೆ ನೇಮಿಸಲ್ಪಟ್ಟಿದ್ದ ಮುಜರಾಯಿ ಸೆಕ್ರೆಟರಿಯವರ ಕಚೇರಿಯ ಮ್ಯಾನೇಜರ್ ಮಿ॥ ಎನ್. ಶ್ರೀನಿವಾಸರಾಯರನ್ನು ಹೊಸಕೋಟೆ ತಾಲ್ಲೂಕಿಗೆ ಹಾಕಿ ಇದೆ.

1907ನೆ ಇಸವಿಯ ಜುಲೈ 12ನೆ ತಾರೀಖಿನ ಆರ್. 363-ಎಲ್. ಆರ್. 20-07-3ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಹುಕುಂ ಮಾಡಲ್ಪಟ್ಟ ಹಂಗಾಮಿ ಏರ್ಪಾಡು ಇದರಿಂದ ರದ್ದಾಗಿರುತ್ತದೆ.

ತಾರೀಖು 24ನೆ ಜುಲೈ 1907.

ನಂ. ಫೈ. 342—ಎಸ್. ಆರ್. 149-06-3, ಬೆಂಗಳೂರಿನಲ್ಲಿರುವ ಗವರ್ನಮೆಂಟ್ ಸೆಂಟ್ರಲ್ ಡಿಸ್ಟಿಲರಿಯ ಚಾರ್ಜಿನಲ್ಲಿರುವ ಸೀನಿಯರ್ ಎಕ್ಸೈಸ್ ಇನ್ಸ್‌ಪೆಕ್ಟರ್ ಮಿ॥ ಜೆ. ಇ. ರೋಜೇರಿಯೋ ಯವರನ್ನು 1907ನೆ ಇಸವಿಯ 4ನೆ ತಾರೀಖಿನಿಂದ ಮಿ॥ ಜೆ. ಹನ್ನಿಂಗರವರು ರಜಾವಿನ ಮೇಲೆ ಇರುವವರೆಗೆ ಅಥವಾ ಇನ್ನೊಂದು ಹುಕುಂ ಕೊಡುವ ತನಕ ಬೆಂಗಳೂರು ಡಿಸ್ಟ್ರಿಕ್ಟಿನ ಎಕ್ಸೈಜ್ ಆಫೀಸರನ್ನಾಗಿ ಮೊಕರರ್ ಮಾಡಿ ಇದೆ.

ತಾರೀಖು 27ನೆ ಜುಲೈ 1907.

ನಂ. ರೆ. 632—ಲ್ಯಾ. ರೆ. 45-07-2, ಶ್ರೀನಿವಾಸಪುರದ ತಾಲ್ಲೂಕಿನ ಅಮಲ್ದಾರ್ ಮಿ॥ ಎಸ್. ವೆಂಕಟರಮಣಶಾಸ್ತ್ರಿಯವರಿಗೆ 1907ನೆ ಇಸವಿಯ ಮಾರ್ಚಿ 30ನೆ ತಾರೀಖಿನ ಆರ್. 8922 - ಎಲ್. ಆರ್. 494-06-2ನೆ ಮತ್ತು 1907ನೆ ಇಸವಿಯ ಜೂನ್ 20ನೆ ತಾರೀಖಿನ ಆರ್. 10813—ಎಲ್. ಆರ್. 494-06-4ನೆ ನಂಬರುಗಳ ಇಸ್ತಿಹಾರುಗಳಲ್ಲಿ ಕೊಟ್ಟ 2 ತಿಂಗಳು 15 ದಿನಗಳ ಪ್ರಿವಿಲೇಜ್ ರಜಾವನ್ನು ಅವರು 1907ನೆ ಇಸವಿಯ ಏಪ್ರಿಲ್ 17ನೆ ತಾರೀಖಿನ ಪೂರ್ವಾಹ್ನದಿಂದ ಉಪಯೋಗಿಸಿಕೊಂಡು 1907ನೆ ಇಸವಿಯ ಜೂನ್ 29ನೆ ತಾರೀಖಿನ ಅಪರಾಹ್ನದಲ್ಲಿ ಕೆಲಸದ ಮೇಲೆ ವಾಪಸು ಹಾಜರಾಗಿರುವುದರಿಂದ ಉಪಯೋಗಿಸಿಕೊಳ್ಳದೆ ಉಳಿದಿರುವ 2 ದಿವಸಗಳ ರಜಾವನ್ನು ಇದರಿಂದ ರದ್ದು ಮಾಡಿ ಇದೆ.

ತಾರೀಖು 27ನೆ ಜುಲೈ 1907.

ನಂ. ರೆ. 633—ಲ್ಯಾ. ರೆ. 52-07-2, 1903ನೆ ಇಸವಿಯ ಆಗಸ್ಟು 17ನೆ ತಾರೀಖಿನ ಆರ್. 542ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಪ್ರಕಟಿಸಲ್ಪಟ್ಟ [1903ನೆ ಇಸವಿಯ ಆಗಸ್ಟು 20ನೆ ತಾರೀಖಿನ ಮೈಸೂರು ಗೆಜೆಟಿ 1ನೆ ಭಾಗದ 507ನೆ ಪುಟದಲ್ಲಿ ಪ್ರಾಯಿಷ್ ಮಾಡಲ್ಪಟ್ಟ] ಮೇರೆಗೆ ಮಾಗಡಿ ತಾಲ್ಲೂಕಿನ ತಗ್ಗಿಕುಪ್ಪೆಯ ಗ್ರಾಮ ನಿವೇಶನವನ್ನು ವಿಸ್ತರಿಸುವುದಕ್ಕೆ ಅವಶ್ಯವಾದ ಜಮೀನನ್ನು ಪಡೆಯಲು ಹುಕುಂ ಹೊಂದುವುದಕ್ಕೆ ಬೆಂಗಳೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಿಗೆ ಬದಲಾಗಿ ಕ್ಲೋಸ್‌ಪೇಟೆ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ 1894ನೆ ಇಸವಿಯ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 3(c)ನೆ ಪ್ರಕರಣದ ಮೇರೆಗೆ ಅಧಿಕಾರ ಕೊಟ್ಟಿದೆ.

B

ತಾರೀಖು 24ನೇ ಜುಲೈ 1907.

ನಂ. ರೆ. 546—ಲ್ಯಾ. ರೆ. 40-07—3, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ಹಾಸನ ತಾಲ್ಲೂಕಿನಲ್ಲಿ ಅಂಬುಗಕೆರೆಯ ಎಡಗಡೆ ಕೋಡಿಯ ಅಂಗಳವನ್ನು ವಿಸ್ತರಿಸುವುದಕ್ಕೆ ಅವಶ್ಯಕವಾಗಿವೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಹಾಸನ ಡಿಸ್ಟ್ರಿಕ್ಟಿನ ಟ್ರೆಜರಿ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ ಯಾ ಬಾಗಾಯಿತು.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಗು.				
ಹಾಸನ	ಹಾಸನ	[illegible]	ಗೊರಗನಹಳ್ಳಿ	ವೇಲಾಪುರಿ ಬಿನ್ ಅರೆಕಲ್ಲು ದಾಸ ...	35—1	ಖುಷ್ಕಿ	33	ಸರ್ವೆ ನಂಬರು 35	ಕೆರೆ	ಮರಿಚೆನ್ನೆಗೌಡನ ಮಗ ಹನುಮನ ಜಮೀನು	ಬನ
				ಹನುಮ ಬಿನ್ ಮರಿಚೆನ್ನ ...	35—2	ಡಿಟೋ	15	ಡಿಟೋ	ಡಿಟೋ	ದಬ್ಬೆಗೌಡನ ಮಗ ದಾಸನ ಜಮೀನು	ವೇಲಾಪುರಿ ಗೌಡನ ಜಮೀನು
				ದಾಸ ಬಿನ್ ಚೆನ್ನೆಗೌಡ, ದಾಸ ಬಿನ್ ದುಬ್ಬ	36	ಡಿಟೋ	15	ಸರ್ವೆ ನಂಬರ್ 36	ಡಿಟೋ	ಸರ್ವೆ ನಂಬರ್ 36	ಮರಿಚೆನ್ನನ ಮಗ ಹನುಮನ ಜಮೀನು
				ವೇಲಾಪುರಿ ಬಿನ್ ಅರೆಕಲ್ಲು ದಾಸ ...	37—1	ಡಿಟೋ	11	ವೇಲಾಪುರಿಯ ಜಮೀನು	ಡಿಟೋ	ಜವರಿದಾಸನ ಜಮೀನು	ಡಿಟೋ
				ಹನುಮ ಬಿನ್ ಮರಿಚೆನ್ನ ...	37—2	ಡಿಟೋ	10	ಸರ್ವೆ ನಂಬರ್ 37	ಡಿಟೋ	ವೇಲಾಪುರಿಯ ಜಮೀನು	ದುಬ್ಬನ ದಾಸನ ಜಮೀನು
				ಜವರಿದಾಸ ಬಿನ್ ವೇಲಾಪುರಿ ...	38	ಡಿಟೋ	6	ಸರ್ವೆ ನಂಬರ್ 38	ಡಿಟೋ	ಕೆರೆ	ವೇಲಾಪುರಿಯ ಜಮೀನು
				ಕಾಳ ಬಿನ್ ಕಾಳ ...	31	ಡಿಟೋ	2	ಸರ್ವೆ ನಂಬರ್ 31	ಕೋಡಿ	ಡಿಟೋ	ಸರ್ವೆ ನಂಬರ್ 38

ತಾರೀಖು 27ನ ಜುಲೈ 1907.

ನಂ. ರೆ. 649—ಸಾ. 52-06-12, ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ಮಿ|| ವೈ. ಸೀತಾರಾಮೈಯ್ಯನವರನ್ನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರಾಗಿ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ಹಾಕಿ ಇದೆ.

ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ ಮಿ|| ಬಿ. ರಾಮಸ್ವಾಮೈಯ್ಯರನ್ನು ಮಿ|| ಸೀತಾರಾಮೈಯ್ಯನವರಿಗೆ ಛಾರ್ಜ್ ಒಪ್ಪಿಸಿದ ತರುವಾಯ ಮೈಸೂರು ಡಿಸ್ಟ್ರಿಕ್ಟಿನ ಗುಂಡ್ಲುಪೇಟೆ ಮತ್ತು ಚಾಮರಾಜನಗರ ರೇಂಜುಗಳ ಸಂರಕ್ಷಿತ ಜಂಗ್ಲಿಗಳಲ್ಲಿ ಕೆಲಸ ನಡೆಸುವ ಕ್ರಮವನ್ನು ಏರ್ಪಡಿಸುವ ಸ್ಪೆಷಲ್ ಡ್ಯೂಟಿ ಯಾ ವಿಶೇಷ ಕೆಲಸದಲ್ಲಿ ಇಡಲಾಗುವುದು.

ಹುಕುಂ ಬಮೋಜೆಬ್,

ಸಿ. ಎಸ್. ಬಾಲಸುಂದರಂ ಐಯ್ಯರ್,

ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರಿಟೆರಿ.

ಪಬ್ಲಿಕ್ ವರ್ಕ್ಸ.

ಇಸ್ತಿಹಾರ್ನಾಮೆ.

ಬೆಂಗಳೂರು, ತಾರೀಖು 24ನೆ ಜುಲೈ 1907.

ನಂ. 670—5250, ಮೈಸೂರು ಪ್ಯಾಲೆಸ್ ಡಿವಿಜನಿಗೆ ಸೇರಿದ ಸಬ್ ಅಸಿಸ್ಟೆಂಟು ಇಂಜಿನಿಯರ್ ಮಿ|| ಎಸ್. ಶ್ರೀನಿವಾಸೈಯ್ಯರ್, ಬಿ. ಎ., ಬಿ. ಇ., ಯವರಿಗೆ ಕಳೆದ ಮೇ 21ನೆ ತಾರೀಖಿನ 468—3663ನೆ ನಂಬರು ಇಸ್ತಿಹಾರ್ನಾಮೆಯಲ್ಲಿ ಕೊಡಲ್ಪಟ್ಟ 20 ದಿನಗಳ ಪ್ರಿವಿಲೇಜ್ ರಜಾವನ್ನು ಪುನಹಾ 2 ದಿನಗಳು ಜಾಸ್ತಿ ಮಾಡಲ್ಪಟ್ಟಿರುತ್ತೆ.

ತಾರೀಖು 27ನೆ ಜುಲೈ 1907.

ನಂ. 684—5349, ಶಿವಮೊಗ್ಗ ಡಿವಿಜನಿಗೆ ಸೇರಿದ ಸಬ್ ಅಸಿಸ್ಟೆಂಟು ಇಂಜನಿಯರ್ ಮಿ|| ಎಂ. ಜಿ. ರಂಗೈಯ್ಯ, ಬಿ. ಎ., ಬಿ. ಇ., ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನ್ಸ 177ನೆ ಆರ್ಟಿಕಲ್ ಅನುಸರಿಸಿ ಸನ್ 1907ನೆ ಆಗಸ್ಟು 1ನೆ ತಾರೀಖಿನಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ಹುಕುಂ ಬಮೋಜೆಬ್,

ಬರ್ನಾರ್ಡ್ ಥಾಸ್, ಕ್ಯಾಪ್ಟನ್, ಆರ್. ಇ.,

ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನಮೆಂಟ್ ಅಂಡರ್ ಸೆಕ್ರಿಟೆರಿ.

ರೈಲ್ವೆ ಇಲಾಖೆ.

ತಾರೀಖು 12ನೆ ಏಪ್ರೆಲ್ 1907.

ನಂ. 542—ರೈಲ. 124, ಮೈಸೂರು ಮ್ಯಾಂಗನೀಸ್ ಕಂಪನಿ ಲಿಮಿಟೆಡ್ಡವರು ಬೀರೂರು-ಶಿವಮೊಗ್ಗ ರೈಲ್ವೆಗೆ ಸೇರಿದ ಶಿವಮೊಗ್ಗ ರೈಲ್ವೆ ಸ್ಟೇಷನಿಂದ ಕುಮಸಿ ಹತ್ತಿರ ಇರುವ ಮ್ಯಾಂಗನೀಸ್ ಘಣಿಗಳಿಗೆ ಟ್ರಾಮು ಲೈನನ್ನು ಹಾಕಿಕೊಳ್ಳಲು ಶಿವಮೊಗ್ಗ ಮ್ಯುನಿಸಿಪಲ್ ಬೋರ್ಡಿನವರ ಇರಾದೆಯನ್ನು ಪಡೆದು ಮಂಜೂರಿ ಹುಕ್ಕುಂ ಬಗ್ಯೆ ಅರ್ಜಿ ಕೊಟ್ಟಿರುವದ್ದರಿಂದ ಮೈಸೂರು ಶ್ರೀಮನ್ ಮಹಾರಾಜರ ಸರಕಾರದವರು 1906ನೆ ಇಸವಿ 2ನೆ ಮೈಸೂರು ಟ್ರಾಮುವೆಗಳ ರೆಗ್ಯುಲೇಷನ 6ನೆ ಪ್ರಕರಣದ 3ನೆ ಕಲಂಗಳ ಅನುಸರಿಸಿ ಈ ಕೆಳಗೆ ನಮೂದಾಗುವ ಹುಕುಂ ದಯಪಾಲಿಸಿರುತ್ತಾರೆ.

ಅವತರಣಿಕೆ.

ಚಿಕ್ಕ ಹೆಸರು. 1. ಈ ಹುಕ್ಕುಂನ 1907ನೆ ಇಸವಿ ಮೈಸೂರು ಮ್ಯಾಂಗನೀಸ್ ಕಂಪನಿ ಲಿಮಿಟೆಡ್ ಸ್ಟೀಮು ಟ್ರಾಮುವೆ—ಹುಕುಂ ಎಂಬದಾಗಿ ಕರಿಯಲ್ಪಡತಕ್ಕದ್ದು.

ಅರ್ಥ ವಿವರಣೆ ಕಲಂ. 2. 1906ನೆ ಇಸವಿ ಮೈಸೂರು ಟ್ರಾಮುವೆ—ರೆಗ್ಯುಲೇಷನಲ್ಲಿ ವಿವರಿಸಲ್ಪಟ್ಟಿರುವ ಅರ್ಥಗಳೇ ಈ ಹುಕುಂನಲ್ಲಿ ಉದಹರಿಸಲ್ಪಟ್ಟಿರುವ ಶಬ್ದಗಳಿಗು ಮತ್ತು ಉಚ್ಚಾರಣೆಗಳಿಗು ಅನ್ವಯವಾಗತಕ್ಕದ್ದು. ಆದರೆ ಈ ಹುಕುಂನಲ್ಲಿ "ಟ್ರಾಮುವೆ" ಅಥವಾ "ಕೆಲಸ" ಎಂಬ ಉಚ್ಚಾರಣೆಗಳು ಈ ಹುಕುಂನಿಂದ ಮಂಜೂರಾಗಿರುವ ಟ್ರಾಮುವೆ ಮತ್ತು ಕೆಲಸಗಳು ಮತ್ತು ಕಾರ್ಯಗಳೆಂದು ಅರ್ಥವಾಗತಕ್ಕದ್ದು.

ಅನ್ವಯವಾಗತಕ್ಕ ಷರತ್ತುಗಳು. 3. ಈ ಹುಕುಂನಿಂದ ಮಂಜೂರಾಗಿರುವ ಟ್ರಾಮುವೆ ಎಂಬುವದು 1906ನೆ ಇಸವಿ 2ನೆ ಮೈಸೂರು ಟ್ರಾಮುವೆ ರೆಗ್ಯುಲೇಷನ ಅನುಸರಿಸಿ ಮತ್ತು ಈ ಹುಕುಂ ನಿಬಂಧನೆಗಳಿಗೆ ಬಳಪಟ್ಟು ಹಾಕಲ್ಪಡತಕ್ಕದ್ದು ಮತ್ತು ಕೆಲಸ ನಡಿಸಲ್ಪಡತಕ್ಕದ್ದು.

ಪ್ರಮೋಟರ್ಸ್ ಯಾ ಪ್ರವರ್ತಕರು. 4. ಮೈಸೂರು ಮ್ಯಾಂಗನಿಸ ಕಂಪನಿ ಲಿಮಿಟೆಡ್ಡವರು ಈ ಹುಕುಮಿನ ಉದ್ದೇಶಕ್ಕಾಗಿ ಪ್ರಮೋಟರ್ಸ್ ಯಾ ಪ್ರವರ್ತಕರಾಗಿಯೂ ಮತ್ತು ಈ ಹುಕುಮಿನಲ್ಲಿ ಪ್ರಮೋಟರ್ಸ್ ಯಾ ಪ್ರವರ್ತಕರೆಂದು ಉದಹರಿಸಲ್ಪಟ್ಟಿರುವದಾಗಿಯೂ ಇರತಕ್ಕದ್ದು.

ಕಟ್ಟತಕ್ಕ ಟ್ರಾಮವೆ.

ಮಂಜೂರಾಗಿರುವ ಟ್ರಾಮವೆಯ ವಿವರಣೆ.

5. ಈ ಹುಕುಂಗೆ ಒಳಪಟ್ಟು ಮತ್ತು ಈ ಹುಕುಮಿನ ಉದ್ದೇಶಗಳಿಗೋಸ್ಕರ ಹಾಜರು ಮಾಡಲ್ಪಟ್ಟ ಪ್ಲಾನ್ ಮತ್ತು ಸೆಕರ್ಷನ್‌ಗಳಿಗನುಸಾರವಾಗಿ ಈ ಮುಂದೆ ವಿವರಿಸಲ್ಪಟ್ಟಿರುವ ಟ್ರಾಮವೆಯನ್ನು ಮತ್ತು ಇದಕ್ಕೆ ಸಂಬಂಧಪಟ್ಟ ಅಥವಾ ಇದರ ಉದ್ದೇಶಕ್ಕೋಸ್ಕರ ಯುಕ್ತವಾದ ಕಂಬಿಗಳು ಬೆರಿಂಗ್ಸ್ ಅಫಿಸಗಳು ಸ್ಟೇಷನ್ ಕಟ್ಟಡಗಳು ಕೆಲಸಗಳು ಮತ್ತು ಅನುಕೂಲತೆಗಳ ವಡನೆ ಪ್ರಮೋಟರು ಕಟ್ಟತಕ್ಕದ್ದು ಮತ್ತು ಕಾಪಾಡತಕ್ಕದ್ದು ಮತ್ತು ಅದನ್ನು ಉಪಯೋಗಿಸಿಕೊಂಡು ಕೆಲಸ ನಡಸತಕ್ಕದ್ದು. ಈ ಹುಕುಮಿನಿಂದ ಮಂಜೂರು ಮಾಡಲ್ಪಟ್ಟಿರುವ ಟ್ರಾಮವೆಯು ಅವಶ್ಯಕವಾದ ಅಡ್ಡದಾರಿಗಳೊಡನೆ ಸುಮಾರು 30 ಮೈಲಿಗಳ ಫಾಸಲೆಯುಳ್ಳ ಒಂಟಿ ಲೈನಾಗಿರುತ್ತೆ. ಇದು ಕೊಂಚೆ ಭಾಗ ಅದಕ್ಕಾಗಿ ರೂಪಿಸಲ್ಪಟ್ಟಿರುವ ಕಡೆಯು ಮತ್ತು ಕೆಲವು ಭಾಗ ಸಂಸ್ಥಾನದ ರಸ್ತೆ ಮೇಲೆಯೂ ಬೀರೂರು—ಶಿವಮೊಗ್ಗ ರೈಲ್ ಮಾರ್ಗದ ಶಿವಮೊಗ್ಗ ರೈಲ್ವೆ ಸ್ಟೇಷನ್‌ಗೆ ಶಿವಮೊಗ್ಗ ಟವರ್ನ ಮುಖಾಂತರವಾಗಿ ಹಾಕಲ್ಪಡತಕ್ಕದ್ದು.

ಪ್ರಮೋಟರ್ ತಮ್ಮ ಟ್ರಾಮವೆಯನ್ನು ಕಟ್ಟತಕ್ಕ ಯಾವ ಇತರ ಮನುಷ್ಯನಾಗಲಿ ಅಥವಾ ಸ್ಥಳೀಯ ಅಧಿಕಾರಿಯಾಗಲಿ ಅವಶ್ಯಕವಾದ ಕಡೆಗಳಲ್ಲಿ ಉಪಯೋಗಿಸಿಕೊಳ್ಳಲು ಅವಕಾಶ ಕೊಡೋಣ.

6. 1906ನೆ ಇಸವಿ 2ನೆ ಮೈಸೂರು ಟ್ರಾಮವೆ—ರೆಗ್ಯುಲೇಷನ್ 4ನೆ ಪ್ರಕರಣಕ್ಕನುಗುಣವಾಗಿ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಟ್ರಾಮವೆಯನ್ನು ಕಟ್ಟುವದಕ್ಕೆ ಈ ತರುವಾಯ ಅಧಿಕಾರ ಕೊಡಲ್ಪಡತಕ್ಕ ಯಾವ ಇತರ ಮನುಷ್ಯನಾಗಲಿ ಅಥವಾ ಸ್ಥಳೀಯ ಅಧಿಕಾರಿಯಾಗಲಿ ಈ ಮೂಲಕ ಅಧಿಕಾರ ಹೊಂದಿ ಬಹಿರಂಗವಾದ ರಸ್ತೆಯ ಮೇಲೆ ಹಾಕಲ್ಪಟ್ಟಿರುವ ಟ್ರಾಮವೆಯ ಭಾಗವನ್ನು ಉಪಯೋಗಿಸಲು ಸರಕಾರದವರಿಂದ ಹಾಗೆ ಅಪೇಕ್ಷಿಸಲ್ಪಟ್ಟರೆ ಪ್ರಮೋಟರು ಅವಕಾಶ ಕೊಡತಕ್ಕದ್ದು. ಹಾಗೆ ಉಪಯೋಗಿಸೋಣದರ ಷರತ್ತುಗಳು ಅಂಥಾ ಯಾವ ಬೇರೆ ಮನುಷ್ಯ ಅಥವಾ ಸ್ಥಳೀಯ ಅಧಿಕಾರಿ ಮತ್ತು ಪ್ರಮೋಟರ್ ಸರಕಾರದವರ ಇರಾದೆಯಿಂದ ಒಪ್ಪತಕ್ಕಂಥಾದ್ದಾಗಿರತಕ್ಕದ್ದು. ಆದರೆ ವಿವಾದ ಹುಟ್ಟಿದ ಕಾಲದಲ್ಲಿ ಸರಕಾರದವರ ತೀರ್ಪು ಆಖೈರಾಗಿರತಕ್ಕದ್ದು ಮತ್ತು ಉಭಯತ್ರರು ಒಪ್ಪತಕ್ಕದ್ದಾಗಿರುತ್ತೆ.

ತಂತಿಯ ಬೇಲಿ.

7. 9ನೆ ನಿಬಂಧನೆ ಪ್ರಕಾರ ಹೆಚ್ಚಿಗೆ ಷರತ್ತುಗಳು ವಿಧಾಯಕವಾಗಿರುವ ತುಂಗಾನದಿ ಸೇತುವೆ ಮೇಲೆ ವಿನಹ ಮುನಸಿಪಲ್ ರಸ್ತೆ ಮೇಲೆ ಅಥವಾ ಅದರ ಪಕ್ಕದಲ್ಲಿ ಹೋಗುವ ಕಡೆ ಲೈನಿಗೆ ತಂತಿ ಬೇಲಿ ಪ್ರಮೋಟರ್ ಹಾಕತಕ್ಕದ್ದು.

ಲಿಮಿಟೇಷನ್‌ಯನ್ನು ಕಾಲನಿಬಂಧನೆಗೆ ಒಳಪಟ್ಟು ರಸ್ತೆಯಲ್ಲಿ ಉಪಯೋಗಿಸಲು ಪ್ರಮೋಟರ ಅಧಿಕಾರ ಹೊಂದಿರೋಣ.

8. ಪ್ರಮೋಟರ್ ಯಾವದೊಂದು ಕಟ್ಟಡಕ್ಕೆ ಅಥವಾ ಅದರ ಪ್ರಯುಕ್ತವಾದ ಕಾಮಗಾರಿಗೆ ವಿನಹ ಪಕ್ಕ ಟ್ರಾಮವೆಯನ್ನು ಹಾಕುವದಕ್ಕಾಗಿ ಸ್ಥಳೀಯ ಅಧಿಕಾರಿಯು ಸಂಸ್ಥಾನದ ರಸ್ತೆಯ ಭಾಗವನ್ನು ಮಂಜೂರು ಮಾಡುವ ಪಕ್ಷದಲ್ಲಿ ಚರಂಡಿಯಿಂದ ಅಥವಾ ರಸ್ತೆಯು ದಡವುಳ್ಳದ್ದಾಗಿದ್ದರೆ ಆ ದಡದಿಂದ 5½ ಅಡಿ ಅಗಲ ಮಾತ್ರ ಉಪಯೋಗಿಸಿಕೊಳ್ಳಬಹುದು ಮತ್ತು ದಾಟುವ ಸ್ಥಳಗಳು ಅಥವಾ ಅಡ್ಡ ಸೇತುವೆಗಳು ಅಥವಾ ಮೋಹರಿಗಳು ಇವುಗಳನ್ನು ಕಟ್ಟಬೇಕಾದಾಗ ಪ್ರತಿ ಬಂದ್ಧಕ್ಕು ಮೈಸೂರು ದೇಶದ ಚೀಫ್ ಇಂಜನಿಯರವರು ಅವಶ್ಯಕವೆಂದು ಆಲೋಚಿಸುವ ಮಟ್ಟಿಗೆ ರಸ್ತೆಯು ಮಧ್ಯದ ವರಿಗು ವ್ಯಾಪಿಸಬಹುದು, ಆದರೆ ಟ್ರಾಮವೆಗೋಸ್ಕರ ಸೇತುವೆ ಅಥವಾ ಮೋಹರಿಯ ಬಡಾವಣೆಯು ಅಥವಾ ಬದಲಾವಣೆಯು ಅವಶ್ಯಕವೆಂದು ಸದರಿ ಇಂಜಿನಿಯರವರಿಗೆ ತೋರ್ಬುವ ಪಕ್ಷದಲ್ಲಿ ಅವರ ಸಮಾಧಾನಕ್ಕೆ ಒಳಪಟ್ಟು ಪ್ರಮೋಟರ್ ತಮ್ಮ ಲಾಗವಡಿನಿಂದ ಆ ಕೆಲಸಗಳನ್ನು ನಡಿಸತಕ್ಕದ್ದು ಮತ್ತು ಅವುಗಳ ಕಾಮಗಾರಿ ನಡೆಯುತ್ತಾ ಇರುವಾಗ ಏನಾದರೂ ತಿದ್ದುಪಾಟುಗಳು ಅವಶ್ಯಕವೆಂದು ಕಂಡುಬಂದರೆ ಅವು ಸ್ಥಳೀಯ ಅಧಿಕಾರಿ ಮತ್ತು ಮೇಲ್ಕಂಡ ಇಂಜೆನಿಯರ್ ಇವರಿಂದ ಬರಹ ಮೂಲಕ ಮೊದಲು ಅನುಮತಿಯನ್ನು ಪಡೆದು ನಡಸಲ್ಪಡಬಹುದು.

ಮುನಸಿಪಲ್ ರೋಡುಗಳಿಗೆ ಟ್ರಾಮ್ ಲೈನ್ ಅಡ್ಡವಾಗಿ ಬರುವ ಕಡೆಗಳಲ್ಲೆಲ್ಲಾ ಪ್ರಮೋಟರ್ ಗೇಟು ಯಾನೆ ಬಾಗಲಗಳನ್ನು ಇಡತಕ್ಕದ್ದು.

ಶಿವಮೊಗ್ಗ ಬಳಿ ಇರುವ ತುಂಗಾನದಿ ಸೇತುವೆಯನ್ನು ಕೆಲವು ಷರತ್ತುಗಳಿಗೆ ಒಳಪಟ್ಟು ಉಪಯೋಗಿಸಿಕೊಳ್ಳಲು ಪ್ರಮೋಟರ ಅಧಿಕಾರ ಹೊಂದಿರೋಣ.

9. ಈ ಕೆಳಗೆ ನಮೂದಿಸ್ಸುವ ನಿಬಂಧನೆಗಳಿಗೆ ಒಳಪಟ್ಟು ಶಿವಮೊಗ್ಗ ಬಳಿ ತುಂಗಾನದಿ ಸೇತುವೆಯ ಮೇಲಣ ಹಾಲಿ ಇರುವ ರಸ್ತೆ ಮೇಲೆ ಟ್ರಾಮವೆಯನ್ನು ಹಾಕಲು ಪ್ರಮೋಟರ್ ಅಧಿಕಾರ ಹೊಂದಿರುತ್ತಾರೆ.

(1) ಇಂಡಿಯಾ ಸರಕಾರದವರು ವಿಧಾಯಿಸಿ ಇರುವ ಸ್ಟ್ಯಾಂಡರಡ ಅಳತೆಯು ಅವಕಾಶಕೊಡುವ ಮಟ್ಟಿಗೆ ರಸ್ತೆಯ ಒಂದು ಪಕ್ಕದ ಸಮೀಪದಲ್ಲಿ ಕಂಬಿಗಳನ್ನ ಹಾಕತಕ್ಕದ್ದು.

(2) ಕಂಬಿಯ ಮೇಲ್ಭಾಗವು ರಸ್ತೆಯ ನೆಲಕ್ಕೆ ಸಮನಾಗಿರತಕ್ಕದ್ದು.

(3) ಗಾರ್ಡ ರೈಲ್ಸ ಯಾನೆ ತಡೆ ಕಂಬಿಗಳು ಅಥವಾ ಅನುಕೂಲವಾದ ವಿಶೇಷ ತರಹದ ಕಂಬಿಗಳು ಸೇತುವೆ ಮೇಲೆ ಉದ್ದಕ್ಕು ಹಾಕಲ್ಪಡತಕ್ಕದ್ದು.

(4) ಸೇತುವೆ ಮೇಲೆ ಯಾವದಾದರು ಗಾಡಿ ಇದ್ದರೆ ಅವಕ್ಕೆ ವದಗಬಹುದಾದ ಅಪಾಯವನ್ನು ನಿಲ್ಲಿಸುವದಕ್ಕಾಗಿ ಸದರಿ ಗಾಡಿಯು ಸೇತುವೆಯನ್ನು ದಾಟಿ ಹೋಗುವವರಿಗೂ ಟ್ರಾಮು ಗಾಡಿಗಳು ಸೇತುವೆಯ ಕೊನೆಯಿಂದ (100) ಗಜಗಳ ಧೂರದಲ್ಲಿ ಸುಮ್ಮನೆ ನಿಲ್ಲಿಸಲ್ಪಡತಕ್ಕದ್ದು.

(5) ಸೇತುವೆಮೇಲೆ ವೇಗವು ಒಂದು ಘಂಟೆಗೆ 5 ಮೈಲಿಗಿಂತ ಹೆಚ್ಚು ಕೂಡದು.

(6) ಸೇತುವೆಯ ಎರಡು ಕೊನೆಗಳಲ್ಲಿಯೂ ಪ್ರಮೋಟರ್ ಬಾಗಿಲಗಳ ಇಡತಕ್ಕದ್ದು.

(7) ಶಿವಮೊಗ್ಗಾ ರೈಲ್ವೆ ಸ್ಟೇಷನ್ ಬಳಿಗೆ ಟ್ರೈನ್ ಯಾನೆ ಗಾಡಿಗಳು ಬಹಿರಂಗವಾಗಿ ತಿಳಿಸಲ್ಪಟ್ಟಿರುವ ಕಾಲಕ್ಕೆ ಅರ್ಧ ಘಂಟೆ ಮುಂಚಿತವಾಗಿ ಮತ್ತು ಅರ್ಧ ಘಂಟೆ ತರುವಾಯ ಪ್ರಮೋಟರ್ ಯಾವ ಟ್ರಾಮು ಗಾಡಿಗಳನ್ನು ಸೇತುವೆ ಮೇಲೆ ಬಿಡಕೂಡದು.

(8) ತುಂಗಾನದಿ ಸೇತುವೆಯು ಪಶ್ಚಿಮ ದಕ್ಷಿಣ ಕೈಪಿಡಿ ಗೋಡೆ ಮೇಲೆ ಎರಡು ಅಡಿ ಎತ್ತರಕ್ಕೆ ಪ್ರಮೋಟರ್ ತಂತಿ ಬೇಲಿಯನ್ನು ಹಾಕತಕ್ಕದ್ದು.

(9) ಟ್ರಾಮು ಲೈನಿನ ಮಟ್ಟವು ತುಂಗಾನದಿ ಸೇತುವೆ ಮೇಲಣ ರಸ್ತೆಯಿಂದ ಕೆಳಕ್ಕೆ ಹೊಳೆ ಹೊನ್ನೂರು ರಸ್ತೆ ವರಿವಿಗೆ 25ರಲ್ಲಿ ಒಂದಕ್ಕಿಂತಲು ಹೆಚ್ಚಾದ ಮಟ್ಟವುಳ್ಳದ್ದಾಗಿರಕೂಡದು.

ಉಳಿಕೆ ರಸ್ತೆಯನ್ನು ಖಾಲಿ ಬಿಟ್ಟಿರಲೋಣ.

10. ಪ್ರಮೋಟರ್ ಟ್ರಾಮುವೆ ಉದ್ದಿಶ್ಯಕ್ಕಾಗಿ ಉಪಯೋಗಿಸಲು ಈ ಹುಕುಂನಿಂದ ಅಥವಾ ಇದರ ಮೂಲಕ ಅಧಿಕಾರ ಹೊಂದದ ರಸ್ತೆ ಭಾಗವನ್ನು ಸಹಜವಾದ ಅಮದ ರಫ್ತಿಗಾಗಿ ಅತ್ಯಂತರವಿಲ್ಲದೆ ಖಾಲಿಯಾಗಿ ಬಿಟ್ಟಿರತಕ್ಕದ್ದು. ಮತ್ತು ಸದರಿ ಇಂಜನಿಯರವರು ಬರಹ ಮೂಲಕ ಅನುಮತಿಯನ್ನು ಮೊದಲೆ ಹೊಂದದೆ ಯಾವ ವಿಧವಾದ ತಡೆಯನ್ನು ಅದರ ಮೇಲೆ ಇಡಕೂಡದು ಅಥವಾ ಅದಕ್ಕೆ ಉಂಟಾಗುವ ಹಾಗೆ ಮಾಡಕೂಡದು.

ಸಾಮಾನುಗಳನ್ನ ಜಮಾಯಿಸುವದಕ್ಕಾಗಿ ರಸ್ತೆಯನ್ನ ಉಪಯೋಗಿಸೋಣ.

11. ಟ್ರಾಮುವೆಯನ್ನು ಕಟ್ಟುವದಕ್ಕೆ ಅದರ ಕಾಪಾಡುವಿಕೆಗಾಗಿ ಜಲ್ಲಿಯನ್ನು ಮತ್ತು ಇತರ ಸಾಮಾನುಗಳನ್ನು ಮೈಸೂರು ಚೀಫ್ ಇಂಜನಿಯರವರಿಂದ ಚುನಾಯಿಸಲ್ಪಡುವ ಪ್ರದೇಶದಲ್ಲಿ ರಸ್ತೆಯು ಸರಹದ್ದಿನ ಒಳಗೆ ಪ್ರಮೋಟರ್ ಜಮಾಯಿಸಬಹುದು. ಆದರೆ ಅದು ಸದರಿ ರಸ್ತೆಯ ಮೇಲೆ ಆಮದರಫ್ತಿಗೆ ಅಡ್ಡಿ ಅಥವಾ ಅಪಾಯವಿಲ್ಲದೆ ಇರುವ ರೀತಿಯಲ್ಲಿ ಜಮಾಯಿಸಲ್ಪಡತಕ್ಕದ್ದು. ಮತ್ತು ಅಂಥ ಪ್ರದೇಶಗಳು ಸರಕಾರದ ಸಾಮಾನುಗಳನ್ನ ಜಮಾಯಿಸುವದಕ್ಕಾಗಿ ಸದರಿ ಇಂಜನಿಯರವರಿಂದ ಉಪಯೋಗಿಸಲ್ಪಡಕೂಡದು.

ಮಂಜೂರಿ ಅಥವಾ ಜರೂರಿಯಾತಿ ಅವಶ್ಯಕತೆ ವಿನಹ ಮರಗಳ ಕೊನೆಗಳನ್ನ ಕಡಿಯುವದು ನಿರೋಧಿಸಲ್ಪಡೋಣ.

12. ಪ್ರಮೋಟರ್ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಬರಹ ಮೂಲಕವಾದ ಅನುಮತಿ ಇಲ್ಲದೆ ರಸ್ತೆ ಉದ್ದಕ್ಕೂ ಅಥವಾ ಅದರ ಪಕ್ಕದಲ್ಲಿ ಬೆಳೆಯುವ ಯಾವ ಮರವನ್ನಾಗಲಿ ಕಡಿಯಕೂಡದು ಆದರೆ ಟ್ರಾಮುವೆ ಪ್ರಯಾಣಕ್ಕೆ ಅಡ್ಡಿ ಅಥವಾ ಅಪಾಯವುಂಟಾಗುವಂತೆ ಮುಂದಕ್ಕೆ ಬಂದು ಇರುವ ಅಥವಾ ಜೋಲಾಡುವ ಯಾವ ಮರವನ್ನಾಗಲಿ ಅಥವಾ ಅದರ ಭಾಗವನ್ನಾಗಲಿ ಪ್ರಮೋಟರ್ ಜರೂರಿಯಾತಿ ಸಂದರ್ಭಗಳಲ್ಲಿ ತೆಗಿಸಬಹುದು ಅಥವಾ ಕಡಿಯಬಹುದು.

ಟ್ರಾಮುವೆ ವಿಷಯದಲ್ಲಿ ಅವಶ್ಯಕವಾದ ಕೆಲಸಗಳನ್ನ ನಡಿಸುವದಕ್ಕೆ ಪ್ರವೇಶಿಸಲು ಅಪ್ಪಣೆ ಕೊಡುವದಕ್ಕೆ ಸರಕಾರದವರ ಅಧಿಕಾರ.

13. ಟ್ರಾಮುವೆ ಹಾಕಲ್ಪಟ್ಟ ಭೂಮಿಮೇಲೆ ಅಥವಾ ವಳಗೆ ಕಚಡ ನೀರಿನ ದೊಡ್ಡ ಚರಂಡಿ, ಮೋಹರಿ, ಟೆಲಿಗ್ರಾಫ್ ಲೈನ್, ಗ್ಯಾಸ್‌ಪೈಪ್, ನೀರಿನ ಕೊಳಾಯಿ ಅಥವಾ ಆ ಸಂಬಂಧವಾದ ಇನ್ನಾವ ಕೆಲಸವನ್ನಾಗಲಿ ನಡಿಸುವದಕ್ಕೋಸ್ಕರ ಮೈಸೂರು ಮಹಾರಾಜಾ ಗೌರ್ನಮೆಂಟವರು ಸ್ಥಳೀಯ ಅಧಿಕಾರಿ, ರಸ್ತೆಯ ಅಧಿಕಾರಿ ಅಥವಾ ಒಬ್ಬ ಅಥವಾ ಯಾರೇ ಆಗಲಿ ಅಂಥಾ ಕೆಲಸ ಅಥವಾ ಕೆಲಸಗಳನ್ನ ನಡಿಸುವದರಲ್ಲಿಯೂ ಮತ್ತು ಟೆಲಿಗ್ರಾಫ್ ಲೈನ್ ವಿಷಯದಲ್ಲಿ ಟೆಲಿಗ್ರಾಫ್ ಸೂಪರಿಂಟೆಂಡೆಂಟ್ ಆಫೀಸಗಳು ಅಂಥಾ ಟ್ರಾಮುವೆ ಯಾವ ಭಾಗವನ್ನಾಗಲಿ ಭದ್ರಕ್ಕೋಸ್ಕರ ಅಂಥಾ ಕೆಲಸ ಅಥವಾ ಕೆಲಸಗಳನ್ನ ಮಾಡುವದಕ್ಕೋಸ್ಕರ ಟ್ರಾಮುವೆ ಆಮದ ರಫ್ತನ್ನ ಬಂದುಮಾಡಕೂಡದೆಂಬುವದಕ್ಕೆ ಕಾರಣಗಳನ್ನ ತೋರಿಸಬೇಕೆಂದು ಪ್ರಮೋಟರಿಗೆ ಬರಹಮೂಲಕ ನೋಟೀಸಿನಿಂದ ಕೇಳಬಹುದು. ಟ್ರಾಮುವೆಯ ಅಂಥಾ ಭಾಗವನ್ನು ಮುಚ್ಚುವದಕ್ಕೋಸ್ಕರ ಇರುವ ಅವಶ್ಯಕತೆಯನ್ನು ಮತ್ತು ಪ್ರಮೋಟರಗಳು ಯಾವದೊಂದು ಅತ್ಯಂತರವೇ ಆಗಲಿ ಯಾ ಹೇಳುವ ಆಲೋಚನೆಗಳನ್ನು ಸಲಹೆಗಳನ್ನು ಯೋಚಿಸಿದ ನಂತರ ಮೈಸೂರು ಮಹಾರಾಜಾ ಸರಕಾರದವರು ಅಥವಾ ಇದಕ್ಕೆ ಜನರಲ್ ಅಥವಾ ಸ್ಪೆಷಲ್ಲಾಗಿ ಮೈಸೂರು ಮಹಾರಾಜಾ ಸರಕಾರದವರು ನೇಮಿಸುವ ಮನುಷ್ಯ ಅಥವಾ ಮನುಷ್ಯರುಗಳು ಪ್ರಮೋಟರಗಳಿಗೆ ಟ್ರಾಮುವೆ ಅಂಥಾ ಭಾಗವನ್ನು ಅವಶ್ಯಕವಿರುವ ಕಾಲದ ವರಿಗೆ ಆ ಸಂದರ್ಭದಲ್ಲಿ ಅವಶ್ಯಕವಿರುವಷ್ಟು ಷರತ್ತಿನಮೇಲೆ ಹುಕುಂ ಮಾಡಬಹುದು ಮತ್ತು ಹಾಗೆ ತೆಗದು ಹಾಕಿರುವ ಟ್ರಾಮುವೆ ಭಾಗಕ್ಕೆ ಬದಲಾಗಿ ಹಂಗಾಮಿಯಾಗಿ ಟ್ರಾಮುವೆಯನ್ನ ಕಟ್ಟಿಕೊಂಡು ಉಪಯೋಗಿಸಬಹುದು ಮತ್ತು ಅಂಥಾ ಹಂಗಾಮಿ ಟ್ರಾಮುವೆಯನ್ನು ಕಟ್ಟಿ ಉಪಯೋಗಿಸುವದಕ್ಕೋಸ್ಕರ ಷರತ್ತುಗಳನ್ನ ಆಜ್ಞಾಪಿಸಬಹುದು. ಪ್ರಮೋಟರಗಳು ಅಂಥಾ ಹುಕುಂಗಳಂತೆ ನಡದುಕೊಳ್ಳಲು ಮತ್ತು ಅದರಲ್ಲಿ ನಮೂದಿಸುವ ಕೆಲಸವನ್ನ ನಡಿಸಲು ಇತರ ಅಥವಾ ಇನ್ನಾವ ವಿರೋಧವಾದ ಹುಕುಂ ಇಲ್ಲದ ಪಕ್ಷದಲ್ಲಿ ಅಂಥಾ ಕೆಲಸಗಳನ್ನ ನಡಿಸುವದಕ್ಕೋಸ್ಕರ ತೆಗಿಯಬೇಕಾದ ಟ್ರಾಮುವೆ ಯಾವ ಭಾಗವನ್ನಾಗಲಿ ಕೆಲಸ ಮಾಡುವಂಥ ಸರಕಾರದ ಅಥವಾ ಸ್ಥಳೀಯ ಅಧಿಕಾರಿ ರಸ್ತೆ ಅಧಿಕಾರಿ ಅಥವಾ ಮನುಷ್ಯ ಅಥವಾ ಮನುಷ್ಯರು ಟೆಲಿಗ್ರಾಫ್ ಸೂಪರಿಂಟೆಂಡೆಂಟರು ಇವರುಗಳ ಲಾಗವಡಿನಿಂದ ತೆಗೆದುಹಾಕಲು ಮತ್ತು ಪುನಃ ಹಾಕಲ್ಪಕೂಡದೆಂಬುವದಕ್ಕೆ ಬದ್ಧರಾಗಿರಬೇಕು.

14. ಯಾವ ಚರಂಡಿ ಟೆಲಿಗ್ರಾಫ್ ಲೈನ್ ಗ್ಯಾಸ್‌ಪೈಪ್ಸ್ ನೀರಿನ ಕೊಳಾಯಿ ಪ್ರವೇಶಿಸಲ್ಪಡತಕ್ಕಾತ - ಟ್ರಾಮವೆಯಿಂದ ಆಕ್ರಮಿಸಿಕೊಳ್ಳಲ್ಪಡುವ ಅಥವಾ ಆಕ್ರಮಿಸಲ್ಪಟ್ಟ ಭೂಮಿ ಒಳಗೆ ಅಥವಾ ಮೇಲೆ ಇನ್ಯಾವದನ್ನಾಗಲಿ ಅವುಗಳ ಪೈಕಿ ಯಾವದೊಂದರ ಸ್ಥಿತಿಯನ್ನು ಬದಲಾಯಿಸಲು ಪ್ರವೋಟರುಗಳು ಅಪೇಕ್ಷಿಸುವ ಸಂದರ್ಭದಲ್ಲಿ ಪ್ರವೋಟರಗಳು ಸ್ಥಳೀಯ ಅಧಿಕಾರಿ ರಸ್ತೆ ಅಧಿಕಾರಿ ಪ್ರವೇಶಿಸತಕ್ಕ ಅಥವಾ ಬದಲಾಯಿಸತಕ್ಕ ಪದಾರ್ಥದಲ್ಲಿ ಅಧಿಕಾರಿ ಯಾವ ಒಬ್ಬ ನೌಕರ ಅಥವಾ ಯಾರಿಗಾಗಲಿ, ಟೆಲಿಗ್ರಾಫ್ ಲೈನ್ ವಿಷಯಕ್ಕೆ ಟೆಲಿಗ್ರಾಫ್ ಆಫೀಸ್ ಸೂಪರಿಂಟೆಂಡೆಂಟರಿಗೆ ಬರಹಮೂಲಕವಾದ ನೋಟಿಸ್ ಕೊಡತಕ್ಕದ್ದು. ಅಲ್ಲದೆ ಮೈಸೂರು ಮಹಾರಾಜಾ ಸರಕಾರದವರಿಗೆ ಅರ್ಜಿ ಮೂಲಕವಾಗಿ ಜಾಹಿರ್ಮಾಡಿಕೊಳ್ಳತಕ್ಕದ್ದು. ಮತ್ತು ಪ್ರವೋಟರ ಅರ್ಜಿಯನ್ನು ಸದರಿ ಅರ್ಜಿಯಲ್ಲಿ ನಮೂದಿಸುವ ಯಾವದೊಂದು ಅಭ್ಯಂತರಗಳು ಈ ಸಲಹಗಳನ್ನು ಯೋಚಿಸಿದ ನಂತರ ಮೈಸೂರು ಸರಕಾರದವರು ಸದರಿ ಕೆಲಸಕ್ಕಾಗಿ ಜನರಲ್ ಅಥವಾ ಸ್ಪೆಷಲ್ ಹುಕುಂನಿಂದ ಮೊಕರರೂರು ಮಾಡುವ ಮನುಷ್ಯ ಅಥವಾ ಮನುಷ್ಯರುಗಳು ಆ ಸಂದರ್ಭದಲ್ಲಿ ಲಾಯಖಾಗಿರುವ ಅರ್ಜಿಯಮೇಲೆ ಪ್ರವೋಟರಗಳಿಗೆ ಯಾವ ವಿಷಯದಲ್ಲಿ ಆಗಲಿ ಚರಂಡಿ ಅಥವಾ ಅದರ ಸ್ಥಿತಿ ಬದಲಾವಣೆಕೆ ವಿಷಯಕ್ಕೆ ಯಾವದೊಂದು ಪ್ರವೇಶಕ್ಕೆ ಹಕ್ಕು ಇಲ್ಲದೆ ಇರುವ ಪಕ್ಷಕ್ಕೆ ಸದರಿ ಅರ್ಜಿಮೇಲೆ ಅಂಥಾ ಹುಕುಮನ್ನು ಮಾಡಬಹುದು.

ರಸ್ತೆಯಲ್ಲಿ ಅಥವಾ ರಸ್ತೆಮೇಲೆ ಇರುವ ಕಟ್ಟಡಗಳ ವಿಷಯಕ್ಕೆ ಪ್ರವೇಶಿಸಲು ಪ್ರವೋಟರಗಳಿಗೆ ಅವಶ್ಯಕವಾದ ಷರತ್ತು.

15. ಈ ಆರ್ಡರಿ ಪ್ರಕಾರ ಸಂಸ್ಥಾನದ ರಸ್ತೆಯನ್ನು ಉಪಯೋಗಿಸುವದಕ್ಕೆ ಅಧಿಕಾರ ಹೊಂದಿರುವದರ ವಿನಹ ಪ್ರವೋಟರಗಳಿಗೆ ಈ ಕೆಲಸಕ್ಕೋಸ್ಕರ ಆಗಾಗ್ಯೆ ಬೇಕಾಗುವ ಜಮೀನುಗಳನ್ನು ಶಿವಮೊಗ್ಗ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರವರಿಗೆ ಜಮೀನಿನ ಪ್ಲಾನ್ ಮತ್ತು ಸ್ಟೇಟಮೆಂಟುಗಳೊಡನೆ ಅರ್ಜಿ ಕೊಟ್ಟು ಅವರ ಅನುಮತಿ ಪಡದುಕೊಂಡು ಹೊಂದಬಹುದು. ಇವಕ್ಕಾಗಿ ಡೆಪ್ಯುಟಿ ಕಮಿಷನರಿಗೆ ತಗಲುವ ಎಲ್ಲಾ ಲಾಗವಡನು, ಪ್ರವೋಟರ ವಹಿಸಿಕೊಳ್ಳತಕ್ಕದ್ದು. ಪ್ರವೋಟರುಗಳು ಆಗಾಗ್ಯೆ ತಮಗೆ ಅವಶ್ಯಕವಿಲ್ಲದ ಜಮೀನುಗಳನ್ನ ಶಿವಮೊಗ್ಗ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರ ಮಂಜೂರಿ ಪಡದುಕೊಂಡು ಮಾರುವದಾಗಲಿ ಅನ್ಯಾಕ್ರಾಂತ ಮಾಡುವದಾಗಲಿ ಮಾಡಬಹುದು. ಪ್ರವೋಟರುಗಳು ಜಮೀನು ಪಡದುಕೊಳ್ಳುವದಕ್ಕೆ ಈ ಕೆಳಗೆ ನಮೂದು ಮಾಡುವ ನಿಬಂಧನೆಗಳನ್ನ ಅನುಸರಿಸತಕ್ಕದ್ದು.

ಪ್ರವೋಟರಿಗೆ ಬೇಕಾಗುವ ಜಮೀನನ್ನು ಹೊಂದತಕ್ಕ ವಿಧಾನ.

I. ಸ್ವಾಧೀನದಲ್ಲಿರತಕ್ಕ ಜಮೀನು — ಹಾಲಿ ಜಾರಿಯಲ್ಲಿರುವ 1894 ನೆ ಇಸವಿ 7ನೆ ನಂಬರಿ ಲ್ಯಾಂಡ್ ಆಕ್ವಿಜಿಷನ್ ರೆಗ್ಯುಲೇಷನಿನ ರೂಲ್ಸು ಅನುಸರಿಸಿ ಮೇಲೆ ಹೇಳಿದ ಪ್ರಕಾರ ತಮಗೆ ಬೇಕಾಗುವ ಯಾವ ಜಮೀನನ್ನಾದರೂ ಪ್ರವೋಟರ ಹೊಂದಬಹುದು.

II. ಆಕಾರಕಂಡು ಯಾರ ಸ್ವಾಧೀನದಲ್ಲು ಇಲ್ಲದೆ ಇರತಕ್ಕ ಪಾಳು ಜಮೀನುಗಳು. — ಲೈನಿಗೆ ಬೀಳುವ ಎಲ್ಲ ಸರ್ವೆ ನಂಬರು ಪೂರ್ತಿಯಾಗಿ ಅದರ ಮಾಲ್ಕಿ ಅಥವಾ ಅದರಲ್ಲಿರತಕ್ಕ ಮರಗಳ ಕಿಂಮತಿನೊಡನೆ ಆ ಜಮೀನಿನ ಕಂದಾಯ ಪೂರ್ತಿಯಾಗಿ ಕೊಟ್ಟು ಪ್ರವೋಟರುಗಳು ಪಡದುಕೊಳ್ಳಬಹುದು.

(2) ಆಕಾರ ಕಂಡ ಜಮೀನುಗಳ ಪೈಕಿ ಯಾವದಾದರೂ ಒಂದು ದೊಡ್ಡದಾಗಿದ್ದಲ್ಲಿ ತಮ್ಮ ಖರ್ಚಿನಿಂದ ಫೋಡ್ ಮಾಡಿಸಿಕೊಡಬೇಕೆಂದು ಡೆಪ್ಯುಟಿ ಕಮಿಷನರಿಗೆ ಪ್ರವೋಟರ ಕೇಳಿಕೊಳ್ಳಬಹುದು. ಫೋಡ್ ಮಾಡಿಕೊಡುವವರಿಗೆ ಪ್ರವೋಟರುಗಳು ಅಂಥಾ ನಂಬರುಗಳ ಕಂದಾಯವನ್ನ ಪೂರ್ತಿಯಾಗಿ ಕೊಡುತ್ತಾ ಬರತಕ್ಕದ್ದು.

(3) ಪ್ರವೋಟರ ಕೆಲಸಗಳಿಂದ ಯಾವ ಜಮೀನನ್ನಾಗಲಿ ಸಾಗುವಳಿಗೆ ನಾಲಾಯಖಾಗಿ ಮಾಡಿದಲ್ಲಿ, ಅಂಥಾ ನಷ್ಟವನ್ನು ಅವರು ಸರಕಾರಕ್ಕೆ ಕೊಡಿಸಿಕೊಡಬೇಕು.

III. ಆಕಾರ ಕಾಣದ ಯಾರ ಸ್ವಾಧೀನದಲ್ಲು ಇಲ್ಲದೆ ಇರುವ ಬಂಜರು ಜಮೀನು — ಪ್ರವೋಟರುಗಳು ತಮಗೆ ಬೇಕಾಗುವ ಯಾವ ಜಮೀನನ್ನಾದರೂ ಅದರಲ್ಲಿರತಕ್ಕ ಮರಗಳ ಕಿಮ್ಮತು ಸಹ ಎಕರೆ 1ಕ್ಕೆ 1 ರೂ. 4 ಆಣೆ ಮೇರೆ ಒಂದು ಮೊತ್ತವಾದ ಕಂದಾಯವನ್ನ ಕೊಟ್ಟು ಪಡದುಕೊಳ್ಳಬಹುದು.

IV. ಪ್ರವೋಟರುಗಳು ಯಾವ ಚಿಕ್ಕ ಕಟ್ಟೆಗಳನ್ನು ಒಡಿಯಕೂಡದು ಅಥವಾ ಹಾಲಿ ಇರತಕ್ಕ ನೀರಿನ ದಾರಿಗಳನ್ನ ಬದಲಾಯಿಸಕೂಡದು ಅಥವಾ ಟ್ರಾಮವೆ ಲೈನಿನ ಜೊತೆಯಲ್ಲಿರುವ ದಾರಿಮೇಲೆ ಇರತಕ್ಕ ಕೆರೆಗಳು ಮತ್ತು ಕುಂಟೆಗಳಿಗೆ ಬರತಕ್ಕ ನೀರು ಕಾಲ್ವೆಯನ್ನ ಮುಚ್ಚಲು ಮತ್ತು ಬದಲಾಯಿಸಕೂಡದು.

V. ಸರಕಾರದ ಜಂಗಲಿನ ಜಮೀನು. — ಈ ಜಮೀನುಗಳು ಬೇಕಾಗಿದ್ದಲ್ಲಿ ಈ ಕೆಳಗೆ ನಮೂದು ಮಾಡುವ ಷರತ್ತುಗಳ ಅನುಸರಿಸಿ ಪ್ರವೋಟರ ಪಡಿಯಬಹುದು.

(a) ಜಮೀನಿನ ಖರೀದಿ ಎಕರೆ 1ಕ್ಕೆ 150 ರೂಪಾಯಿಗಳು ಮತ್ತು

(b) ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರು ಕಟ್ಟುವ ಜಮೀನಿನಲ್ಲಿರತಕ್ಕ ಫಾರೆಸ್ಟ ಬೆಳೆಯ ಕಿಮ್ಮತು ಪ್ರವೋಟರಿಗೆ ಈ ಜಮೀನು ಬೇಕಾಗಿದ್ದಲ್ಲಿ ಫಾರೆಸ್ಟ ಬೆಳೆಯ ಕಿಮ್ಮತಿನ ವರವನ್ನು ಕೊಡಬೇಕೆಂದು ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರನ್ನ ಕೇಳಲ್ಪಡುತ್ತೆ.

ಟ್ರಾಮವೆ ಪ್ರಾರಂಭ ಪೂರ್ತಿ ಮತ್ತು ಬಿಡತಕ್ಕದ್ದು.

16. ಟ್ರಾಮವೆ ಹಾಕುವದಕ್ಕೆ ಮೈಸೂರು ಮಹಾರಾಜಾ ಸರ್ಕಾರದವರು ಆಜ್ಞೆರು ಹುಕುಂ ಕೊಟ್ಟ ತಾರೀಖು ಲಾಗಾಯಿತು 2 ತಿಂಗಳು ಒಳಗೆ ಟ್ರಾಮವೇ ಕೆಲಸಕ್ಕೆ ಪ್ರಾರಂಭಿಸಬೇಕು. ಮತ್ತು ಎರಡು ವರುಷದ ಒಳಗೆ ಪೂರ್ತಿಮಾಡಿ ಬಿಡತಕ್ಕದ್ದು.

ಗೇಜಿನ ನಿಬಂಧನೆ ಮತ್ತು ಕ್ಯಾರೇಜುಗಳ ಅಡಳತೆ.

17. ಟ್ರಾಮವೆಯನ್ನು 2 ಅಡಿ ಗೇಜಿನಮೇಲೆ ಕಟ್ಟತಕ್ಕದ್ದು. ಮತ್ತು ಕಂಬಿ ಒಳಗಿನ ದಡದಿಂದ ಆಚೆ ಪ್ರತಿ ಭಾಗದಲ್ಲಿ 2 ಅಡಿ ಗಿಂತ ಹೆಚ್ಚಾಗಿ ಹೊರಗೆ ಟ್ರಾಮವೆ ಮೇಲೆ ಉಪಯೋಗಿಸತಕ್ಕಂಥ ಕ್ಯಾರೇಜ್ ಟ್ರಕ್ ಅಥವಾ ವ್ಯಾಗನ್ ಹಾದುಕೊಂಡು ಇರಕೂಡದು.

ಉಪಯೋಗಿಸಬೇಕಾದ ಕಂಬಿ ವಿವರ.

18. ಟ್ರಾಮುವೆಗೆ ಉಪಯೋಗಿಸಬೇಕಾದ ರೈಲ್ ಕಂಬಿಗಳು ಇದರಲ್ಲಿ ಮುಂದೆ ತಿಳಿಸುವ ಮಾದ್ರಿ ಶಿವಾಯಿ ಸ್ಲೀಪರಗಳ ಮೇಲೆ ಹಾಕಲ್ಪಟ್ಟ ಚಪ್ಪಡಿಯಾದ ತಳವುಳ್ಳ ಉಕ್ಕಿನ ಕಂಬಿಗಳಾಗಿರಬೇಕು ಮತ್ತು ಅವು ರಸ್ತೆಗೆ ಯುಕ್ತವಾಗಿರಬೇಕು. ಆದರೆ ಶಿವಮೊಗ್ಗ ಟರ್ವ ಮುಖಾಂತ್ರ ಹಾಯುವ ಲೈನ್ ಭಾಗದಲ್ಲಿ ಯಾ ಹಳ್ಳಿಗಳ ಮುಖಾಂತ್ರ ಯಾ ರಸ್ತೆ ಅಧಿಕಾರಿಗಳು ಅಪೇಕ್ಷಿಸುವ ಪ್ರಕಾರ ಸೇತುವೆಗಳ ಮೇಲೂ ಗೀಟು ಕಟ್ಟಿ ತೀರಿಸಿದ ಕಂಬಿಗಳನ್ನು ಉಪಯೋಗಮಾಡಿ ಹಾಕಿಸಿ ರಸ್ತೆ ಮಟ್ಟಕ್ಕೆ ಸಮವಾಗಿ ಮಾಡತಕ್ಕದ್ದು.

ಕ್ರಾಸಿಂಗ್ಸ್‌ಗಳು ವಗೈರೆ ಮಾಡತಕ್ಕ ವಿಷಯದಲ್ಲಿ ಪ್ರಮೋಟರಗಳು ಸರಕಾರದ ಹುಕುಂಗಳನ್ನ ಅಂಗೀಕರಿಸತಕ್ಕದ್ದು.

19. ಮಹಾರಾಜಾ ಸರಕಾರದ ಮಂಜೂರು ಸಿಕ್ಕಿ ಪ್ರಮೋಟರಗಳು ಆಗಾಗ್ಯೆ ಈ ಹುಕುಂನಲ್ಲಿ ನಮೂದಿಸಿದ ಮತ್ತು ಈ ಹುಕುಂನಿಂದ ಅಧಿಕಾರ ಕೊಡಲ್ಪಟ್ಟ ಟ್ರಾಮುವೆ ಕೆಲಸವನ್ನ ಸರಿಯಾಗಿ ನಡಿಸುವದಕ್ಕು ಅಥವಾ ಯಾವ ಸ್ಟೇರ್ಷ ಕಟ್ಟಡ ಪ್ರಮೋಟರ ಕೆಲಸವನ್ನು ಮಾಡುವದಕ್ಕೆ ಅನುಕೂಲತೆ ಬಗ್ಯೆ ಬೇಕಾಗುವ ಎಲ್ಲಾ ಕ್ರಾಸಿಂಗ್‌ಗಳು ತಿರಗಾಡುವ ದಾರಿಗಳು ಜಂಕರ್ಷಗಳು ಮಾಡಬಹುದು.

ಅಟಂಕಪಡಿಸಿದ ಸ್ಥಳದಲ್ಲಿ ಹಂಗಾಮಿಯಾಗಿ ಟ್ರಾಮುವೆ ಹಾಕುವ ವಿಷಯ.

20. ಟ್ರಾಮುವೆ ಬಾಜೂವಲ್ಲಿರುವ ರಸ್ತೆ ಮೇಲಭಾಗಕ್ಕೆ ಅಥವಾ ಮುಂಣಿಗೆ ಯಾವದಾದರೂ ಒಂದು ಕೆಲಸ ಮಾಡೋಣದರಲ್ಲಿ ಅಪಾಯದಿಂದ ಯಾ ಪ್ರವಾಹದಿಂದ ತೊಂದರೆ ಉಂಟಾದ ಪಕ್ಷಕ್ಕೆ ಮೈಸೂರು ಮಹಾರಾಜಾ ಸರಕಾರದವರು ಹಂಗಾಮಿಯಾಗಿ ಟ್ರಾಮುವೆಯನ್ನು ಅದರ ಯಾವ ಭಾಗವನ್ನಾದರೂ ತೆಗದು ಯಾ ಟ್ರಾಮುವೆ ನಿರುಪಯೋಗಿಸಬೇಕೆಂದು ಅಭಿಪ್ರಾಯ ಪಡುವ ಪಕ್ಷಕ್ಕೆ ಪ್ರಮೋಟರಗಳು ಮೈಸೂರು ಮಹಾರಾಜಾ ಸರಕಾರದವರು ಆಗಾಗ್ಯೆ ಮಾಡುವ ಷರತ್ತುಗಳು ನಿಬಂಧನೆಗಳಿಗೆ ಅನುಗುಣವಾಗಿ ಕೆಲಸಕ್ಕೆ ಬೇಕಾಗುವಷ್ಟು ಕಾಲ ತೆಗದುಹಾಕಲ್ಪಟ್ಟ ಯಾ ನಿರುಪಯೋಗಿಸಲ್ಪಟ್ಟ ಟ್ರಾಮುವೆಗೆ ಬದಲಾಗಿ ಹಂಗಾಮಿಯಾಗಿ ಟ್ರಾಮುವೆಯನ್ನು ಕಟ್ಟಿ ಉಪಯೋಗಿಸತಕ್ಕದ್ದು.

ಚಲನಾಶಕ್ತಿ.

ಚಲನಾಶಕ್ತಿ ಉಪಯೋಗ.

21 ಟ್ರಾಮುವೆ ಮೇಲೆ ಉಪಯೋಗಿಸತಕ್ಕ ವ್ಯಾಗನ್‌ಗಳು ಬ್ರೇಕ್‌ವ್ಯಾನ್‌ಗಳು ಸ್ಟೀಮು ಪವರಿಂದ ನಡಿಸತಕ್ಕದ್ದು.

ನಿಯಮಿಸಲ್ಪಟ್ಟ ವೇಗ.

22. ವೇಗವು ಘಂಟೆ 1ಕ್ಕೆ ಹತ್ತು ಮೈಲಿಗಳಿಗಿಂತ ಹೆಚ್ಚಾಗಿ ಅಥವಾ ಮೈಸೂರು ಮಹಾರಾಜರ ಸರಕಾರದವರು ಆಗಾಗ್ಯೆ ನೇಮಿಸಲ್ಪಡುವ ವೇಗಕ್ಕಿಂತ ಹೆಚ್ಚಾಗಕೂಡದು. ಮತ್ತು ಯಾವದೊಂದು ಗಾಡಿಗಳು ಕಂಬಿಗಳನ್ನ ಬದಲಾಯಿಸುವಕಡೆ ವೇಗವು ಘಂಟೆಗೆ 5 ಮೈಲಿಗಳಿಗಿಂತ ಜಾಸ್ತಿಯಾಗಿರಕೂಡದು.

ಟ್ರಾಮುವೆ ಕಾಪಾಡುವಿಕೆ.

ಟ್ರಾಮುವೆಯನ್ನು ಕಾಪಾಡುವದಕ್ಕು ರಿಪೇರಿ ಮಾಡುವದಕ್ಕು ಪ್ರಮೋಟರ ಜವಾಬುದಾರಿ.

23. ಮೇಲೆ ಹೇಳಿದ ಮೈಸೂರು ಮಹಾರಾಜರ ಸರಕಾರಕ್ಕೆ ತೃಪ್ತಿಕರವಾಗಿಯು ಮತ್ತು ಸಾಧಾರಣದ ಆಮದುರಫ್ತಿಗು ಕಂಬಿಗಳಿಗೂ ಟ್ರಾಮುವೆಯು ಕೆಳಗೆ ಇರತಕ್ಕ ಕಟ್ಟಡಗಳಿಗೂ ಅಪಾಯ ಯಾ ತೊಂದರೆ ಇಲ್ಲದಂತೆ ಪ್ರಮೋಟರಗಳು ಯಾವಾಗಲು ರಿಪೇರಿಯಿಂದ ಒಳ್ಳೆ ಸ್ಥಿತಿಯಲ್ಲಿ ಇಟ್ಟುಕೊಂಡು ಕಾಪಾಡತಕ್ಕದ್ದು.

ರಸ್ತೆಯ ಒಂದು ಭಾಗ.

24. ಪ್ರಮೋಟರಗಳು ಮೈಸೂರು ಮಹಾರಾಜರ ಸರಕಾರಕ್ಕೆ ತೃಪ್ತಿಯಾಗಿ ರಸ್ತೆಯು ಉಭಯಪಾರ್ಶ್ವದ ಚರಂಡಿಗಳ ನೀರು ಹಾಯುವಿಕೆ ಮತ್ತು ಆಚೆ ಇರುವ ಕಂಬಿಗೆ 18 ಅಂಗುಲಗಳ ದೂರದಲ್ಲಿ ಹಾಕಿ ಇರುವ ಕಂಬಿಗಳ ರಸ್ತೆಯ ಭಾಗದ ಮೇಲೆ ಅಥವಾ ಕಟ್ಟೆಯ ಕೊನೆಯ ಯಾ ಸಂಸ್ಥಾನದ ರಸ್ತೆ ಚರಂಡಿಯಿಂದಾಗಲಿ ಹರಡಿಕೊಂಡು ಇರುವ ಸಂಸ್ಥಾನದ ರಸ್ತೆ ಭಾಗವನ್ನು ಅಟಂಕಪಡಿಸದ ಹಾಗೆ ರಿಪೇರಿ ಮಾಡಿಕೊಂಡು ಒಳ್ಳೇ ಸ್ಥಿತಿಯಲ್ಲಿ ಕಾಪಾಡತಕ್ಕದ್ದು. ಈ ಭಾಗದ ರಸ್ತೆಯನ್ನು ಪ್ರಮೋಟರಗಳು ತಮ್ಮ ಸ್ವಂತಲಾಗವಡಿನಿಂದ ಸರಿಮಾಡಿಕೊಳ್ಳತಕ್ಕದ್ದು. ಅವರು ತಮ್ಮ ಸ್ವಂತಲಾಗವಡಿನಿಂದಲೇ ಮುಂದೆ ಆಗ ಬೇಕಾಗುವ ಬದಲಾವಣೆಗಳಿಗೆ ಅನುಕೂಲವಾಗಿ ರಸ್ತೆ ಈ ಭಾಗದ ಮತ್ತು ಟ್ರಾಮುವೆ ಸ್ಥಿತಿ ಮತ್ತು ಮಟ್ಟವನ್ನು ಬದಲಾಯಿಸತಕ್ಕದ್ದು ಮತ್ತು ಕೂಡ್ಲೆ ರಿಪೇರಿಯಿಂದ ಚನ್ನಾಗಿ ಮಾಡುವದಲ್ಲದೆ ಮೇಲೆ ಹೇಳಿದ ಚೀಫ್ ಇಂಜನಿಯರ್ ರವರಿಗೆ ತೃಪ್ತಿಕರವಾಗಿ ಟ್ರಾಮುವೆಗೆ ಪ್ರಮೋಟರಗಳ ತಪ್ಪಿತದಿಂದ ರಸ್ತೆ ಯಾವ ಭಾಗಕ್ಕೆ ಆಗಲಿ ನಷ್ಟ ಉಂಟಾಗುವ ಪಕ್ಷಕ್ಕೆ ಅದನ್ನ ಸರಿಮಾಡಿಸತಕ್ಕದ್ದು. ಹಾಲಿ ಹಾಕಲ್ಪಟ್ಟ ಕಂಬಿಗಳ ರಸ್ತೆಯ ಬಾಜೂದಲ್ಲಿರುವ ಚರಂಡಿಯು ಅಥವಾ ಇತಃಪರ ಸರಕಾರದ ಖರ್ಚಿನಿಂದ ಕಟ್ಟುವಂಥಾದ್ದನ್ನು ಕೂಡ ಪ್ರಮೋಟರಗಳ ಸ್ವಂತಲಾಗವಡಿನಿಂದ ಒಳ್ಳೇಸ್ಥಿತಿಯಲ್ಲಿ ಇಟ್ಟುಕೊಂಡು ಕಾಪಾಡತಕ್ಕದ್ದು.

25. ಟ್ರಾಮುವೆ ಸಂರಕ್ಷಣೆಯಲ್ಲಿ ಯಾ ಕಟ್ಟುವದರಲ್ಲಿ ಸಂಸ್ಥಾನದ ರಸ್ತೆಯಿಂದ ಅಗೆಯಲ್ಪಟ್ಟ ರಸ್ತೆ ಜಲ್ಲಿ ವಗೈರೆಯನ್ನು ಪ್ರಮೋಟರಗಳು ಸದರಿ ರಸ್ತೆಯನ್ನು ಸರಿಮಾಡುವದರಲ್ಲಿ ಯಾಗಲಿ ಈ ಹುಕುಂ

ಪ್ರಪ್ರೋಟರಗಳು ಟ್ರಾಮವೆಯಲ್ಲಿಯು ಅದರಲ್ಲಿ ಉಪಯೋಗಿಸುವ ಭಂಡಿಗಳಲ್ಲಿಯೂ ಅಂಥಾ ಭಂಡಿಗಳ ಅಭಿವೃದ್ಧಿ ಬಗ್ಯೆ ಮೈಸೂರು ಮಹಾರಾಜ ಸರಕಾರದವರು ಆಗಾಗ್ಯೆ ಅವಶ್ಯಕವೆಂದು ಯೋಚಿಸುವ ಯಾ ಜನಗಳ ಕ್ಷೇಮಕ್ಕಾಗಿ ಮತ್ತು ಅನುಕೂಲಕ್ಕಾಗಿ ಅಪೇಕ್ಷಿಸುವ ವೃದ್ಧಿಯನ್ನು ಮಾಡತಕ್ಕದ್ದು.

ಟ್ರಾಮವೆಯ ಆಮದರಪ್ತು.

ಪ್ರವೋಟರಗಳು ಸಾಗಿಸತಕ್ಕ ಸಾಮಾನುಗಳು.

26. ಟ್ರಾಮವೆಯ ಮೇಲೆ ಉಪಯೋಗಕ್ಕೆ ಬೇಕಾದ ಸಾಮಾನು ಸರಕು, ಸವುದೆ, ಲೋಹಗಳು ಮತ್ತು ಕಂಪೆನಿಯ ಪಾರಸಲ್ಲಗಳು ಸಾಗಿಸಬಹುದು ಇವುಗಳೆನ್ನು ಪ್ರವೋಟರಗಳು ಸಂದರ್ಭಾನುಸಾರ ಜನಗಳಿಗೋಸ್ಕರ ಸಾಗಿಸುವದಕ್ಕೆ ತಿರಸ್ಕರಿಸಬಹುದು.

ಅಪಾಯಕರವಾದ ಸಾಮಾನುಗಳು.

27. ಮೈಸೂರು ಟ್ರಾಮವೆ ರೆಗ್ಯುಲೇಷನ 16ನೆ ಸೆಕ್ಷನನಲ್ಲಿ ಅಪಾಯಕರವೆಂದು ಹೇಳಿರುವ ಸಾಮಾನುಗಳನ್ನು ಈ ಕೆಳಗೆ ನಮೂದಿಸಿರುತ್ತೆ.

ಕಾರಬೋಲಿಕ್ ಆಸಿಡ್.
ಕೆರೋಸಿನ ಎಂಣೆ.
ಪಾರಫಿನ.
ರಂಗೂನಯಂಣೆ.
ಮರದಯಂಣೆ.
ನೈಟ್ರೇಟ ಆಫ ಅಮೆರನ.
ಸಲ್ಫ್ಯೂರ್ಷ ಅಮಾನಿಯ ಮದ್ದು.
ಪಟಾಸು.
ವಿಧವಿಧವಾದ ಬಾಣಗಳು.
ಉರಿಯತಕ್ಕ ಸಾಮಾನುಗಳು.
ಕ್ಲೋರೇಟಮಿಕ್ಸಚರ್.
ಡಿಟೋ ನೇಟರ್ಸ್.
ಬಾಣದ ಸಾಮಾನುಗಳು.
ಬಾಣಗಳು.
ಕರಗುವ ಸಾಮಾನು.
ಬಂದೂಕದ ಹತ್ತಿ.
ನೀಲಿಮದ್ದು.
ಆಸಿಡ್.
ಲೋಹದ ಆಸಿಡ್.
ಬಂದೂಕದ ಹತ್ತಿಪುಡಿ.
ಲೂಸಿಫರ ಬೆಂಕಿಪಟ್ಟಣಗಳು.
ನೆಟ್ರೆಡ ಬಂದೂಕದ ಹತ್ತಿ.
ಫಾಸಫರಸ್.
ಬಂದೂಕದ ಮದ್ದು.
ಯುದ್ಧದ ಚತ್ರಿಗಳು.
ಇತರ ವಿಧವಾದ ಎಲ್ಲಾ ಮದ್ದುಗಳು

ತುಪಾಕಿ ಮದ್ದು.
ಅಕ್ವಾಫಾರಟಸ್.
ಗಂಧಕದ ಸಾಮಾನು.
ಫ್ಯೂರೀಕ ಆಸಿಡ್.
ಫೂಸಲಯಂಣೆ.
ನಾಪ್ತಲೈನ.
ಬಗೆಬಗೆ ತೈಲಗಳು.
ನವಸಾಗ್ರ.
ಪರಕ್ಲೋರೈಡ ಆಫ ಐರನ.
ಅಮದ್ರಫಸ ಫಾಸಪರಸ್.
ತೋಟಾಗಳು.
ಬೆಂಕಿಪಟ್ಟಣಗಳು.
ಹತ್ತಿಪುಡಿ.
ಸುರಂಗದ ಮದ್ದು.
ಮಂಜುಸಿಗನಲ್ಲಗಳು.
ಬ್ರೋಮೈನ.
ಕ್ಲೋರೋಫಾರಂ.
ಮದ್ದುಹಾರಿಸುವ ಕೊಳವೆ.
ವಸುವಿಯಸ.
ಸುರಂಗದ ಮದ್ದುಗಳ ಲೋಹಗಳು.
ಲಿತೊಫ್ರಾಕ್ಟರ್.
ಮೆಲಿನೈಟ.
ನೈಟ್ರೋಗ್ಲಿಸಿರೈನ.

ಎಚ್ಚರಿಸುವಿಕೆಯ ಗುರ್ತುಗಳನ್ನು ಪ್ರದರ್ಶಿಸುವದು.

28. ಟ್ರಾಮವೆ ಮೇಲೆ ಟ್ರೈನ ಅಥವಾ ಎಂಜಿನಿನ ಪ್ರತಿ ಒಬ್ಬ ನಡಿಸುವನು ಕೆಲಸದ ಮೇಲೆ ಇರುವಾಗ ಒಂದು ನಮೂನೆ ಘಂಟೆಯನ್ನು, ಸಿಳ್ಳನ್ನು ಅಥವಾ ಅವಶ್ಯಕವಾದ ಎಚ್ಚರಿಕೆ ಬಗ್ಯೆ ಶಬ್ದ ಮಾಡುವದಕ್ಕೋಸ್ಕರ ಇತರ ಯಾವ ಉಪಕರಣಗಳನ್ನಾದರೂ ಇಟ್ಟುಕೊಂಡು ಇರಬೇಕು.

ಭಂಡಿಗಳ ನಮೂನೆಗಳನ್ನು ಸರಕಾರದವರು ಮಂಜೂರು ಮಾಡತಕ್ಕದ್ದು.

29. ಟ್ರಾಮವೆ ಮೇಲೆ ಉಪಯೋಗಿಸತಕ್ಕ ಪ್ರತಿ ಒಂದು ಟ್ರಕ್ಕು ಅಥವಾ ವ್ಯಾಗನ್ನು ಮೈಸೂರು ಮಹಾರಾಜಾ ಸರಕಾರ ಮಂಜೂರು ಮಾಡಿದ ನಮೂನೆಯಂತೆ ಕಟ್ಟತಕ್ಕದ್ದು.

ಬ್ರೇಕ ಉಪಯೋಗಿಸತಕ್ಕದ್ದು.

30. ಟ್ರಾಮವೆ ಮೇಲೆ ಹೋಡತಕ್ಕ ಪ್ರತಿ ಒಂದು ಟ್ರೈನಿಗೆ ಅದರ ಗಾರ್ಡು ಉಪಯೋಗಕ್ಕಾಗಿ ಆತನ ಸ್ವಾಧೀನದಲ್ಲಿ ಒಂದು ಒಳ್ಳೇ ಬ್ರೇಕ ಇರತಕ್ಕದ್ದು.

ಚೀಫ ಇಂಜನೀಯರ ಸಾಹೇಬರವರು ಭಂಡಿಗಳ ಉಪಯೋಗವನ್ನು ಆಟಂಕ ಪಡಿಸಬಹುದು.

31. ಚೀಫ ಇಂಜನೀಯರು ಟ್ರಾಮವೆ ಮೇಲೆ ನಡಿಸುವ ಯಾವ ಭಂಡಿಯನ್ನಾದರೂ ಅಪಾಯವೆಂದು ತಮಗೆ ಅಭಿಪ್ರಾಯಬಂದಲ್ಲಿ ಅಂಥಾ ಭಂಡಿಯನ್ನು ಉಪಯೋಗಿಸಲು ಆಟಂಕಪಡಿಸಬಹುದು. ಪ್ರತಿ ಒಂದು ಅಂಥ ಆಟಂಕವೂ ಅಥವಾ ಮೈಸೂರು ಮಹಾರಾಜಾ ಸರ್ಕಾರದವರು ತಿದ್ದುಪಾಟು ಮಾಡುವವರಿಗೂ ಜಾರಿಯಲ್ಲಿ ಇಡತಕ್ಕದ್ದು ಮತ್ತು ಪ್ರವೋಟರಗಳು ಅಂಥ ಯಾವದೊಂದು ಭಂಡಿ ವಿಷಯಕ್ಕಾಗಲಿ ಮೈಸೂರು ಮಹಾರಾಜಾ ಸರಕಾರದಿಂದ ಆಗುವ ಯಾವ ಹುಕ್ಕುಮಿಗೂ ಬದ್ಧರಾಗಿರತಕ್ಕದ್ದು.

ಚಿಲ್ಲರೆ ವಿಷಯಗಳು.

ಪರಾಧೀನವಾದ ಮೇಲೆ ಹದ್ದು.

32. ಪ್ರಮೋಟರುಗಳು ಮಾರುವಿಕೆಯಿಂದಾಗಲಿ ವೆತ್ತ್ಯೆಯಿಂದಾಗಲಿ ವಟ್ಟೆಯಿಂದಾಗಲಿ ಬದಲಿಗಾಗಲಿ ಅಥವಾ ಇನ್ಯಾವ ವಿಧವಾಗಿ ಆದರೂ ಮೈಸೂರು ಮಹಾರಾಜರ ಸರಕಾರ ಮಂಜೂರು ಮಾಡುವ ಷರತ್ತುಗಳ ಮೇಲೆ ಮತ್ತು ಮುಂಚಿತವಾಗಿ ಮಂಜೂರು ಪಡೆಯದೇನೆ ಈ ಟ್ರಾಮುವೆ ಕೆಲಸವನ್ನು ಅಥವಾ ಯಾವ ಭಾಗವನ್ನಾಗಲಿ ಅನ್ಯಾಕ್ರಾಂತ ಮಾಡಕೂಡದು.

ಮುನಿಸಿಪಾಲಿಟಿಯವರು ಕಂದಾಯ ಹಾಕತಕ್ಕ ವಿಷಯದಲ್ಲಿ ಅನುಕೂಲ ಪಡಿಸತಕ್ಕದ್ದು.

33. ಟ್ರಾಮುವೆ ಮೇಲೆ ಸಾಗಿಸುವ ಸಾಮಾನುಗಳ ಮೇಲೆ ಹಾಕತಕ್ಕ ಕಂದಾಯಗಳ ಬಗ್ಗೆ ಮತ್ತು ಆಕ್ಟ್ರಾಯಿ ವಸೂಲಿ ಬಗ್ಗೆ ನ್ಯಾಯವಾದ ಅನುಕೂಲತೆಯನ್ನು ಶಿವಮೊಗ್ಗ ಮುನಿಸಿಪಾಲಿಟಿಯವರಿಗೆ ಕೊಡತಕ್ಕದ್ದು.

ರಸ್ತೆ ಉಪಯೋಗಕ್ಕಾಗಿ ಸರಕಾರಕ್ಕೆ ಕೊಡಬೇಕಾದ ಕಂದಾಯ.

34. ಟ್ರಾಮುವೆ ಮೇಲೆ ಸಾಗಿಸಲ್ಪಟ್ಟ ಭರ್ತಿಯಾದ ಒಂದು ಮ್ಯಾಂಗನೀಸ್ ಅದಿರಿನ ಟನ್ನಿಗೆ ಆರು ಆಣೆ ಮೇರೆ ಸರಕಾರಕ್ಕೆ ಪ್ರಮೋಟರುಗಳು ತೆರಿಗೆ ಕೊಡತಕ್ಕದ್ದು.

ಶಿವಮೊಗ್ಗ ಮುನಿಸಿಪಾಲಿಟಿಯವರಿಗೆ ಕೊಡಬೇಕಾದ ತೆರಿಗೆ.

35. ಟ್ರಾಮುವೆ ಮಾರ್ಗವಾಗಿ ಸಾಗಿಸಲ್ಪಟ್ಟ ಮ್ಯಾಂಗನೀಸ್ ಅಥವಾ ಇತರ ಅದರ ಟನ್ 1ಕ್ಕೆ ಒಂದಾಣೆಯಂತೆ ತೆರಿಗೆ ವಸೂಲ್ ಮಾಡತಕ್ಕದ್ದು ಮತ್ತು ಮುನಿಸಿಪಲ್ ಬೋರಡಿಗೆ ಟ್ರಾಮುವೆ ಮಾರ್ಗವಾಗಿ ಪ್ರತಿ ತಿಂಗಳಲ್ಲಿಯೂ ತೆಗೆದುಕೊಂಡು ಹೋಗಲ್ಪಡುವದರ ಸಾಮಾನಿನ ಒಂದು ಸ್ಟೇಟ್‌ಮೆಂಟ್ ತಯಾರ್ಮಾಡಿ ಕಳುಹಿಸತಕ್ಕದ್ದು.

ಇನ್ಸ್ಪೆಕ್ಷನ್‌ಗೆ ಅರ್ಹವಾದ ಎಲ್ಲಾ ಕೆಲಸಗಳು.

36. ಟ್ರಾಮುವೆಯು ಇದಕ್ಕೆ ಸೇರಿದ ಕೆಲಸಗಳು ಮತ್ತು ಸಾಮಾನು ಸರ್ವಕಾಲದಲ್ಲೂ ಮೈಸೂರು ಮಹಾರಾಜರ ಸರಕಾರದಿಂದ ನೇಮಿಸಲ್ಪಡುವ ಮನುಷ್ಯ ಅಥವಾ ಮನುಷ್ಯರುಗಳಿಂದ ಇನ್ಸ್ಪೆಕ್ಷನ್ ಮತ್ತು ಅಜಮಾಯಿಷಿ ಬಗ್ಗೆ ಇಡತಕ್ಕದ್ದು. ಮತ್ತು ಪ್ರಮೋಟರುಗಳು ಅಂಥ ಇನ್ಸ್ಪೆಕ್ಷನ್ ಅಥವಾ ಅಜಮಾಯಿಷಿಗೆ ಬರತಕ್ಕ ಮನುಷ್ಯನಿಗೆ ಬೇಕಾದ ಅನುಕೂಲತೆಯನ್ನು ಕೊಡತಕ್ಕದ್ದು.

ಟ್ರಾಮುವೆಯನ್ನು ಮುಚ್ಚುವದು ಮತ್ತು ಸರಕಾರದ ಹುಕ್ಕುಂನಿಂದ ರೋಲಿಂಗ್ ಸ್ಟಾಕನ್ನು ಉಪಯೋಗಪಡಿಸುವದು.

37. ಟ್ರಾಮುವೆ ಅಥವಾ ಅದರ ಯಾವ ಭಾಗವನ್ನಾದರೂ ಇನ್ಸ್ಪೆಕ್ಷನ್ ಆದಮೇಲೆ ಉಪಯೋಗಿಸುವ ಅದಕ್ಕೆ ಸೇರಿದ ಸಾಮಾನನ್ನು ಇನ್ಸ್ಪೆಕ್ಷನ್ ಆದ ತರುವಾಯ 36ನೆ ಪ್ರಕರಣ ಪ್ರಕಾರ ಇನ್ಸ್ಪೆಕ್ಷನ್ ಮಾಡುವ ಆಫೀಸರು ಮೈಸೂರು ಮಹಾರಾಜರ ಸರಕಾರಕ್ಕೆ ಮೇಲೆ ಹೇಳಿದ ಟ್ರಾಮುವೆ ಅಥವಾ ಅದರ ಭಾಗವು ಮತ್ತು ರೋಲಿಂಗ್ ಸ್ಟಾಕಿನ ಉಪಯೋಗವು ಅಪಾಯಕರವಾದ್ದೆಂದು ತಮಗೆ ಅಭಿಪ್ರಾಯ ಬಂದು ಸರಕಾರಕ್ಕೆ ತಿಳಿಸಿದನಂತರ ಮೈಸೂರು ಮಹಾರಾಜಾ ಸರಕಾರದವರು ಅಂಥ ಟ್ರಾಮುವೆಯನ್ನು ಅಥವಾ ಅದರ ಭಾಗವನ್ನು ಅಷ್ಟರಪ್ಪಿಗೆ ಮುಚ್ಚಬೇಕೆಂದುನು ಅಥವಾ ಸಂದರ್ಭಾನುಸಾರ ಟ್ರಾಮುವೆಗೆ ಸೇರಿದ ಸಾಮಾನನ್ನು ಉಪಯೋಗಿಸಕೂಡದೆಂದು ಹುಕ್ಕುಂ ಮಾಡಬಹುದು.

ಪುನಹ ಮಂಜೂರಾತಿ ಪಡಿಯುವ ವರಿಗೂ ಟ್ರಾಮುವೆಯನ್ನು ತೆಗೆಯಕೂಡದು.

38. 37ನೆ ಪ್ರಕರಣ ಪ್ರಕಾರ ಟ್ರಾಮುವೆ ಅಥವಾ ಯಾ ಭಾಗವನ್ನು ಮುಚ್ಚಿದ ನಂತರ ಪುನಹ 1906ನೆ ಇಸವಿ ಮೈಸೂರು ಟ್ರಾಮುವೆ ರೆಗ್ಯುಲೇಷನ್ 1ನೆ ನಂಬರು ಸೆಕ್ಷನ್ ಪ್ರಕಾರ ಸರಕಾರದ ಮಂಜೂರಿನಿಂದ ಇನ್ಸ್ಪೆಕ್ಷನ್ ಆಗುವ ಪರಿಯಂತರವು ಟ್ರಾಮುವೆಯನ್ನು ನಡಿಸಕೂಡದು.

ಅಂಥ ಹುಕುಂ ಆದನಂತರ ಪುನಹ ಮಂಜೂರು ಪಡಿಯುವ ವರಿಗೂ ರೋಲಿಂಗ್ ಸ್ಟಾಕನ್ನು ಉಪಯೋಗಿಸಕೂಡದು.

39. 37ನೆ ಪ್ರಕರಣದ ಪ್ರಕಾರ ಮೈಸೂರು ಮಹಾರಾಜಾ ಸರಕಾರದವರು ರೋಲಿಂಗ್ ಸ್ಟಾಕನ್ನು ಉಪಯೋಗಿಸಕೂಡದೆಂದು ಹುಕುಂ ಮಾಡಿದ ಮೇಲೆ ಸದರೀ ರೋಲಿಂಗ್ ಸ್ಟಾಕನ್ನು 36ನೆ ಪ್ರಕರಣದಲ್ಲಿ ನಮೂದಿರುವ ಆಫೀಸರು ಅದರ ಉಪಯೋಗ ಲಾಯಖ್ ಎಂದು ರಿಪೋರ್ಟು ಮಾಡುವ ವರಿಗೂ ಮತ್ತು ಮೈಸೂರು ಮಹಾರಾಜಾ ಸರಕಾರ ಅದರ ಉಪಯೋಗವನ್ನು ಮಂಜೂರು ಮಾಡುವ ವರಿಗೂ ಉಪಯೋಗಿಸಕೂಡದು.

ಪ್ರಮೋಟರಗಳು ರೆಗ್ಯುಲೇಷನ್ ಮೇರಿಗೆ ಕೆಲಸಗಳನ್ನ ಮಾಡದೆ ತಪ್ಪಿದಲ್ಲಿ ಸರಕಾರದವರು ಪ್ರಮೋಟರಗಳ ಸ್ವಂತಲಾಗವಡಿನಿಂದ ಮಾಡಿಸಬಹುದು.

40. 1906ನೆ ಇಸವಿ ಮೈಸೂರು ಟ್ರಾಮುವೆ ರೆಗ್ಯುಲೇಷನ್ ಪ್ರಕಾರ ಯಾವ ಕೆಲಸವಾದರೂ ಆಗಬೇಕಾದ ಸಂದರ್ಭದಲ್ಲಿ ಅಥವಾ ಈ ಹುಕುಂ ಪ್ರಕಾರ ಪ್ರಮೋಟರುಗಳಿಂದ ಆಗಬೇಕಾದ ಕೆಲಸವು ಅವರುಗಳು ಮಾಡದೆ ಇದ್ದ ಪಕ್ಷಕ್ಕೆ ಮೈಸೂರು ಮಹಾರಾಜಾ ಸರಕಾರ ಪ್ರಮೋಟರುಗಳಿಗೆ ನೋಟೀಸ್ ಮೂಲಕ ನ್ಯಾಯವಾದ ವಾಯಿದೆ ಕಾಲದವಳಗೆ ಅಂಥಾ ಕೆಲಸವನ್ನು ಮಾಡಬೇಕೆಂದು ತಿಳಿಸಬಹುದು. ಅಂಥಾ ವಾಯಿದೆ ಒಳಗಾಗಿ ನೋಟೀಸ್ ಪ್ರಕಾರ ಕೆಲಸ ನಡಸದ ಪಕ್ಷದಲ್ಲಿ ಮೈಸೂರು ಮಹಾರಾಜಾ ಸರಕಾರ ಅಂಥ ಕೆಲಸವನ್ನು ಮಾಡಿಸಿ ಅದಕ್ಕೆ ತಗಲುವ ಲಾಗವಡನ್ನು ಟ್ರಾಮುವೆ ರೆಗ್ಯುಲೇಷನ್ 36ನೆ ಪ್ರಕರಣ ಪ್ರಕಾರ ಪ್ರಮೋಟರುಗಳಿಂದ ವಸೂಲು ಮಾಡತಕ್ಕದ್ದು.

41. ಪ್ರಮೋಟರಗಳು ಯಾವದೊಂದು ಷರತ್ತನ್ನು ಅಥವಾ ಈ ಹುಕುಂ ನಲ್ಲಿನ ಆಜ್ಞೆಯನ್ನು ನಡಿಯದೆ ತಪ್ಪಿದಲ್ಲಿ ಅವರು ಪ್ರತಿ ಒಂದು ತಪ್ಪಿತಕ್ಕೂ 200 ರೂಪಾಯಿಗಳ ವರಿಗೂ ಜುರುಮಾನೆ ಹಾಕಬಹುದಾದ ಶಿಕ್ಷೆಗೆ ಗುರಿಮಾಡಲ್ಪಡುತ್ತಾರೆ. ಮತ್ತು ಅಂಥಾ ತಪ್ಪನ್ನು ಪುನಹ ನಡಿಸಿಕೊಂಡು ಬರುವದಾದರೆ ತಪ್ಪಿತ ಮಾಡಿದ ಮೊದಲುದಿವಸದ ತರುವಾಯ ಪ್ರತಿ ಒಂದು ದಿವಸಕ್ಕೂ 50 ರೂಪಾಯಿಗಳ ವರಿಗೂ ಇನ್ನು ಹೆಚ್ಚು ಜುರುಮಾನೆಗೂ ಗುರಿಮಾಡಲ್ಪಡುತ್ತಾರೆ. ಈ ಪ್ರಕರಣ ಪ್ರಕಾರ ವಸೂಲಾಗುವ ಪ್ರತಿ ಒಂದು ಜುರುಮಾನೆ ಮೊಬಲಗು ಮೈಸೂರು ಮಹಾರಾಜಾ ಸರಕಾರದವರು ಆಗಾಗ್ಯೆ ಮಾಡುವ ಹುಕ್ಕುಂ ಪ್ರಕಾರ ಉಪಯೋಗಿಸಲ್ಪಡುತ್ತೆ.

ಯಾವ ಷರತ್ತು ಅಥವಾ ಹುಕುಂಗಳ ಪ್ರಕಾರ ನಡಿಯದೆ ತಪ್ಪಿದರೆ ಜುರುಮಾನೆ.

ಟ್ರಾಮುವೆಯು ನಡಿಸುವದು ಮನ್ನಾ ಮಾಡುವ ಬಾಬು.

42. ಯಾವಾಗಲಾದರು ಈ ಟ್ರಾಮುವೆ ನಡಿಸುವದಕ್ಕೆ ಪ್ರಾರಂಭಿಸಿದ ನಂತರ ಮೈಸೂರು ಮಹಾರಾಜಾ ಸರಕಾರದವರಿಗೆ ಟ್ರಾಮುವೆ ಅಥವಾ ಅದರ ಯಾವ ಭಾಗವಾದರೂ ಅದರ ಕೆಲಸ ನಡಿಸುವಿಕೆಯು ಮಹಾರಾಜಾ ಸರಕಾರಕ್ಕೆ ತೃಪ್ತಿಕರವಾದ ಕಾರಣವಿಲ್ಲದೆ 3 ತಿಂಗಳುಕಾಲ ಟ್ರಾಮುವೆ ನಡಿಸದೆ ನಿಂತುಹೋಗಿರುವ ಪಕ್ಷಕ್ಕೆ ಮಹಾರಾಜಾ ಸರಕಾರ ಲಾಯಖಾಗಿದೆ ಎಂದು ತೋರಿದ ಪಕ್ಷಕ್ಕೆ ಸರಕಾರದ ಗೆಜೆಟ್ಟಿನಲ್ಲಿ ಘಾಯಿಷಿಯಿಂದ ಪ್ರಮೋಟರಗಳ ಮತ್ತು ಇಜಾರೆದಾರನ ನಡಿಸದೆ ನಿಂತುಹೋಗಿರುವ ಟ್ರಾಮುವೆ ಅಥವಾ ಅದರ ಭಾಗದ ವಿಷಯಕ್ಕೆ ಉಂಟಾದ ಯಾವ ಅಧಿಕಾರವು ಘಾಯಿಷಿಯಾದ ತಾರೀಖು ಲಾಗಾಯಿತು ನಿಂತುಹೋಯಿತೆಂದು ತಿಳಿಯುವದು. 1906ನೆ ಇಸವಿ ಮೈಸೂರು ಟ್ರಾಮುವೆ ರೆಗ್ಯುಲೇಷನ್ನಲ್ಲಿ ಹೇಳಿದ ಮೇರಿಗೆ ಸ್ಥಳೀಯ ಅಧಿಕಾರಿಯು ಟ್ರಾಮುವೆಯನ್ನು ಕೊಂಡುಕೊಳ್ಳುವ ಬಗ್ಯೆ ಬೇಕಾಗುವ ಅಧಿಕಾರ ಇರುವದೆ ಶಿವಾಯಿ ಮಿಕ್ಕ ಎಲ್ಲಾ ಅಧಿಕಾರವು ನಿಂತುಹೋಗಿರುತ್ತೆ.

ಪ್ರಮೋಟರು ಮತ್ತು ಇಜಾರೆದಾರನ ಅಧಿಕಾರವು ನಿಂತುಹೋಗುವಿಕೆ ಅಥವಾ ಟ್ರಾಮುವೆ ನಿಂತುಹೋಗುವಿಕೆ.

ಹುಕುಂ ಬಮೋಜೀಬ್,

ಖರ್ನಾರ್ಡ್‌ಥಾಸ್, ಕ್ಯಾಪ್ಟನ್, ಆರ್. ಇ.,

ಅಂಡರ ಸೆಕ್ರೆಟೆರಿ, ರೈಲ್ವೆ ಬ್ರಾಂಚ್, ಮೈಸೂರು ಗವರ್ನಮೆಂಟ.

ಮುಜರ್ಯೆ.

ಇಸ್ತಿಹಾರ್‌ನಾಮೆ.

ತಾರೀಖು 8ನೆ ಜುಲೈ 1907.

ನಂ. 30—25-7—07, ಇದರಡಿ ಕಂಡ ದೊಡ್ಡ ಮನುಷ್ಯರು, ದೊಡ್ಡಬಳ್ಳಾಪುರ ಟವುನನಲ್ಲಿರುವ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದ ಕೆಲಸಗಳನ್ನು ಮೇಲ್ವಿಚಾರಣೆ ಮಾಡತಕ್ಕ ಬಗ್ಯೆ ನಿಶಿಪಟ್ಟ ಮಿ॥ ಶ್ರೀನಿವಾಸಮೂರ್ತಿಗೆ ಬದಲಾಗಿ ಧರ್ಮದರ್ಶಿಗಳಾಗಿ ನೊಕರರ್ಮಾಡಲ್ಪಟ್ಟಿರುತ್ತಾರೆ:—

1. ಮ॥ ರಾ॥ ರಾ॥ ಕೊಳೂರು ರಾಮಪ್ಪನವರು.
2. ,, ,, ,, ಕೃಷ್ಣಪಂಡಿತರು.
3. ,, ,, ,, ಅರುಣಾಚಲರಾಯರ ಲಕ್ಷ್ಮಣರಾಯರು.

ತಾರೀಖು 8—25ನೆ ಜುಲೈ 1907.

ನಂ. 36, ಇದರಡಿ ಕಂಡ ದೊಡ್ಡ ಮನುಷ್ಯರು ಮೈಸೂರು ಸಿಟಿ ದೊಡ್ಡಪೇಟೆಯಲ್ಲಿರುವ ಮುನಿಸಾಮಿಶೆಟ್ಟರವರ ಛತ್ರದ ಕೆಲಸಗಳನ್ನು ಮೇಲ್ವಿಚಾರಣೆ ಮಾಡುವ ಬಗ್ಯೆ ಧರ್ಮದರ್ಶಿಗಳಾಗಿ ನೊಕರರ್ಮಾಡಲ್ಪಟ್ಟಿರುತ್ತಾರೆ.

1. ಮ॥ ರಾ॥ ರಾ॥ ಅಂಬಳೆ ಅಣ್ಣಯ್ಯಪಂಡಿತರು.
2. ,, ,, ,, ಚಿಕ್ಕ ಮುನಿಸಾಮಿಶೆಟ್ಟರವರ ಕುಮಾರರು ಮುತ್ಯಾಲಶೆಟ್ಟರು.
3. ,, ,, ,, ತಂಗನಂಜುಂಡಶೆಟ್ಟರವರು.

ತಾರೀಖು 27ನೆ ಜುಲೈ 1907.

ಮೈಸೂರು ಶ್ರೀಮನ್ ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ಈ ಸಂವತ್ಸರ ಭಾದ್ರಪದ ಶುದ್ಧ ಪಾಡ್ಯಮಿ ಅಂದರೆ 1907ನೆ ಸೆಪ್ಟಂಬರ 8ನೆ ತಾರೀಖು ಲಾಗಾಯಿತು ನಡಿಯುವ ಸಂಸ್ಕೃತ ವಿದ್ವತ್ಪರೀಕ್ಷೆಗಳ ಕಾಲ ಮುಂತಾದ ತಪ್ಸೀಲುಗಳನ್ನು ಇದರಡಿ ನಮೂದಿಸಿರುತ್ತೆ :—

I. ವೇದ.

ದಿವಸಗಳು.	ಋಗ್ವೇದ.	ಫಲ ಸಂಖ್ಯೆ	ಯಜುರ್ವೇದ.	ಫಲ ಸಂಖ್ಯೆ	ಸಾಮವೇದ.	ಫಲ ಸಂಖ್ಯೆ.
ಮೊದಲನೆ ದಿವಸ.	ಸಂಹಿತಾ	100	ಸಂಹಿತಾ	70	ಛಂದಅರ್ಚಿಕಾ	30
					ಸಾಮಸಂಹಿತಾ	50
					ಪದಸಂಹಿತಾ	30
ಎರಡನೆ ದಿವಸ	ಪದ	100	ಪದ	70	ಊಹಾ	120
			ಕ್ರಮ	70		
ಮೂರನೆ ದಿವಸ	ಕ್ರಮ	100	ಬ್ರಾಹ್ಮಣ	60	ಪದಪಾಠ	40
			ಅರಣ್ಯಕ	30	ರಹಸ್ಯ	30
ನಾಲ್ಕನೆ ದಿವಸ	ಜಟಾ ಅಥವಾ ಪೂರ್ವಾಪರ ಪ್ರಯೋಗ	150	ಘನ ಅಥವಾ ಪೂರ್ವಾಪರ ಪ್ರಯೋಗ	150	ಛಾಂದ್ಯಬ್ರಾಹ್ಮಣ ಛಾಂದೋಗ್ಯೋಪನಿಷತ್ ಅಥವಾ ಪೂರ್ವಾ ಪರ ಪ್ರಯೋಗ	150
ಐದನೆ ದಿವಸ	ಪ್ರಾತಿಶಾಖ್ಯ ಅಥವಾ ಪೂರ್ವಾಪರ ಸೂತ್ರಗಳು ಮತ್ತು ಮಂತ್ರಗಳು	150	ಪ್ರಾತಿಶಾಖ್ಯ ಮತ್ತು ವರ್ಣಕ್ರಮ ಅಥವಾ ಪೂರ್ವಾಪರ ಸೂತ್ರಗಳು ಮತ್ತು ಮಂತ್ರಗಳು	150	ಋಕ್ ತಂತ್ರ ವ್ಯಾಕರಣ ಮತ್ತು ಫಲ್ಲಸೂತ್ರ ಅಥವಾ ಪೂರ್ವಾಪರ ಸೂತ್ರಗಳು ಮತ್ತು ಮಂತ್ರಗಳು	150
		600		600		600

II. ವೇದ ಭಾಷ್ಯ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.
		ಮೊದಲನೆ ಭಾಗ.	
ಮೊದಲನೆ ದಿವಸ	1—3	ಸಿದ್ಧಾಂತ ಕೌಮುದೀ (ಭಾಷಾ)	60
	3-30—5-30	ಡಿಟೋ (ವೈದಿಕ ಮತ್ತು ಸ್ವರ)	60
ಎರಡನೆ ದಿವಸ	1—3-30	ಶ್ರೌತ ಸೂತ್ರ	80
	4—6	ವಾಚಾ ಪರೀಕ್ಷೆ	...
ಮೂರನೆ ದಿವಸ	1—5-30	ವೇದಭಾಷ್ಯ (2 ಪ್ರಶ್ನೆ ಪತ್ರಿಕೆಗಳು)	
ನಾಲ್ಕನೆ ದಿವಸ	1—5-30	ಡಿಟೋ ಡಿಟೋ	
ಐದನೆ ದಿವಸ	1—3	ಡಿಟೋ	300
	3—6	ವಾಚಾ ಪರೀಕ್ಷೆ	125
			625
		ಎರಡನೆ ಭಾಗ.	
ಆರನೆ ದಿವಸ	1—3	ಮುಕ್ತಾವಳಿ (ತರ್ಕ)	60
	3-30—5-30	ಜೈಮಿನಿಯ ನ್ಯಾಯಮಾಲಾ	60
ಏಳನೆ ದಿವಸ	1—3	ಡಿಟೋ	60
	3-30—5-30	ಡಿಟೋ	60
ಎಂಟನೆ ದಿವಸ	1—3	ನಿರುಕ್ತ	60
	3—6	ವಾಚಾ ಪರೀಕ್ಷೆ	75
			375
			1,000

III. ಯಾಜ್ಞಿಕ ಪ್ರಯೋಗ.

ದಿವಸಗಳು.	ಕಾಲ.	ವಿಷಯಗಳು.	ಫಲಸಂಖ್ಯೆ.
		ಮೊದಲನೆ ಭಾಗ.	
ಮೊದಲನೆ ದಿವಸ ...	1—4	ಗೃಹ್ಯ ಸೂತ್ರ	100
	4—6	ವಾಚಾ ಪರೀಕ್ಷೆ	
ಎರಡನೆ ದಿವಸ ...	1—3	ಗೃಹ್ಯ ಮಂತ್ರಗಳು	50
	3-30—5-30	ಗೃಹ್ಯಪ್ರಯೋಗ (ವಾಚಾ)	50
ಮೂರನೆ ದಿವಸ ...	1—3-30	ಅಪರಸೂತ್ರ ಮಂತ್ರ ಸಹಿತ	80
	4—5-30	ಅಪರಪ್ರಯೋಗ (ವಾಚಾ)	40
ನಾಲ್ಕನೆ ದಿವಸ ..	1—3	ಧರ್ಮಸೂತ್ರ	60
	3-30—5-30	ಡಿಟೋ	60
ಐದನೆ ದಿವಸ ...	1—3	ಬ್ರಹ್ಮಮೇಧ ವಾ ಶ್ರಾದ್ಧಸೂತ್ರ ವಾ ಗೃಹ್ಯಪರಿಶಿಷ್ಟ ...	60
	3—6	ವಾಚಾ ಪರೀಕ್ಷೆ	125
			625
		ಎರಡನೆ ಭಾಗ.	
ಆರನೆ ದಿವಸ	1—3-30	ಶ್ರೌತಸೂತ್ರ I	80
	4—6	ಶ್ರೌತಪ್ರಯೋಗ (ವಾಚಾ)	
ಏಳನೆ ದಿವಸ	1—3-30	ಶ್ರೌತಸೂತ್ರ II	80
		ಶ್ರೌತಪ್ರಯೋಗ (ವಾಚಾ) ...	100
ಎಂಟನೆ ದಿವಸ ...	1—2-30	ಪರಿಭಾಷಾಸೂತ್ರ	40
	4—6	ವಾಚಾ ಪರೀಕ್ಷೆ	75
			375
			1,000

IV. ಧರ್ಮಶಾಸ್ತ್ರ.

		ಮೊದಲನೆ ಭಾಗ.	
ಮೊದಲನೆ ದಿವಸ ...	1—3	ತರ್ಕ ಪ್ರಕರಣ	50
	3-30—5-30	ಮೀಮಾಂಸಾ ಪ್ರಕರಣ	50
ಎರಡನೆ ದಿವಸ ...	1—3	ಯಾಜ್ಞವಲ್ಕ್ಯ ಮಿತಾಕ್ಷರ (ಆಚಾರ ಕಾಂಡ) ..	60
	3-30—5-30	ಡಿಟೋ ವ್ಯವಹಾರ ಪೂರ್ವಾರ್ಧ	60
ಮೂರನೆ ದಿವಸ ...	1—3	ಡಿಟೋ ಉತ್ತರಾರ್ಧ	60
	3-30—5-30	ಡಿಟೋ ಪ್ರಾಯಶ್ಚಿತ್ತ ಪೂರ್ವಾರ್ಧ	60
ನಾಲ್ಕನೆ ದಿವಸ ...	1—3	ಡಿಟೋ ಡಿಟೋ ಉತ್ತರಾರ್ಧ	60
	3—6	ವಾಚಾ ಪರೀಕ್ಷೆ	
ಐದನೆ ದಿವಸ ...	1—4	ಮನುಸ್ಮೃತಿ	100
	4—6	ವಾಚಾ ಪರೀಕ್ಷೆ ...	125
			625
		ಎರಡನೆ ಭಾಗ.	
ಆರನೆ ದಿವಸ ...	1—3	ನಿರ್ಣಯಸಿಂಧು ವಾ ವೈದ್ಯನಾಥೀಯ ವಾ ವೈದಿಕ ಸಾರ್ವಭೌಮೀಯ.	
	3-30—5-30	...	
ಏಳನೆ ದಿವಸ ...	1—3	ಡಿಟೋ ಡಿಟೋ	300
	3-30—5-30	ಡಿಟೋ ಡಿಟೋ	
ಎಂಟನೆ ದಿವಸ ...	1—3	ಡಿಟೋ ಡಿಟೋ	
	3—6	ವಾಚಾ ಪರೀಕ್ಷೆ	75
			375
			1,000

V. ಜ್ಯೋತಿಷ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.
		ಮೊದಲನೆ ಭಾಗ.	
ಮೊದಲನೆ ದಿವಸ ...	1—4	ಲೀಲಾವತಿ ...	80
	4—6	ವಾಚಾ ಪರೀಕ್ಷೆ	...
ಎರಡನೆ ದಿವಸ ...	1—4	ಬೀಜಗಣಿತ	80
	4—6	ವಾಚಾ ಪರೀಕ್ಷೆ	..
ಮೂರನೆ ದಿವಸ ..	1—3	ಗೋಳಾಧ್ಯಾಯ	60
	3-30—5-30	ಡಿಟೋ ...	60
ನಾಲ್ಕನೆ ದಿವಸ ..	1—3	ಬೃಹಜ್ಜಾತಕ ...	75
	3-30—5-30	ಡಿಟೋ ...	75
ಐದನೆ ದಿವಸ ...	1—3-30	ಜ್ಞಾನಪ್ರದೀಪಿಕಾ	70
	4—6	ವಾಚಾ ಪರೀಕ್ಷೆ	125
			625
		ಎರಡನೆ ಭಾಗ.	
ಆರನೆ ದಿವಸ ...	1—3	ಶ್ರೀಪತಿ ಪದ್ಧತಿ ...	70
	3-30—5-30	ವಿದ್ಯಾಮಾಧವೀಯ ...	70
ಏಳನೆ ದಿವಸ ...	1—3	ಗ್ರಹಗಣಿತ	60
	3-30—5-30	ಗ್ರಹಲಾಘವ ವಾ ಪ್ರತಿಭಾಗಿ	40
ಎಂಟನೆ ದಿವಸ ...	1—3	ಬೃಹತ್ಸಂಹಿತಾ	60
	3-30—6	ವಾಚಾ ಪರೀಕ್ಷೆ ...	75
			375
			1,000

VI. ವೈದ್ಯ.

		ಮೊದಲನೆ ಭಾಗ.	
ಮೊದಲನೆ ದಿವಸ ..	1—3-30	ಧನ್ವಂತರಿ ನಿಘಂಟು	75
	4—6	ಅಷ್ಟಾಂಗಹೃದಯ	60
ಎರಡನೆ ದಿವಸ ..	1—3	ಡಿಟೋ	60
	3-30—5	ಸುಶ್ರುತ	50
ಮೂರನೆ ದಿವಸ ...	1—4	ಶಾರ್ಙ್ಗಧರ ಸಂಹಿತಾ	90
	4—6	ವಾಚಾ ಪರೀಕ್ಷೆ	...
ನಾಲ್ಕನೆ ದಿವಸ ...	1—4	ಮಾಧವ ನಿದಾನ	90
	4—6	ವಾಚಾ ಪರೀಕ್ಷೆ	100
ಐದನೆ ದಿವಸ ...	1—6	ಕರ್ಮಾಭ್ಯಾಸ	100
			625
		ಎರಡನೆ ಭಾಗ.	
ಆರನೆ ದಿವಸ ...	1—3-30	ಚರಕ ...	75
	4—6	ಕರ್ಮಾಭ್ಯಾಸ	
ಏಳನೆ ದಿವಸ ..	1—3-30	ಚರಕ	75
	4—6	ಕರ್ಮಾಭ್ಯಾಸ	50
ಎಂಟನೆ ದಿವಸ ...	1—4	ರಸರತ್ನಾಕರ	100
	4—6	ವಾಚಾ ಪರೀಕ್ಷೆ	75
			375
			1,000

VII. ವ್ಯಾಕರಣ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.	
		ಮೊದಲನೆ ಭಾಗ.		
ಮೊದಲನೆ ದಿವಸ ...	1—4	ಸಿದ್ಧಾಂತ ಕೌಮುದಿ ...	100	
	4—6	ವಾಚಾ ಪರೀಕ್ಷೆ ..		
ಎರಡನೆ ದಿವಸ ..	1—4	ಮನೋರಮಾ ಶಬ್ದರತ್ನ ಸಹಿತಾ ..	100	
	4—6	ವಾಚಾ ಪರೀಕ್ಷೆ ..	...	
ಮೂರನೆ ದಿವಸ ...	1—3	ಶಬ್ದಕೌಸ್ತುಭ ...	60	
	3-30—5-30	ಪರಿಭಾಷೇಂದುಶೇಖರ ...	60	
ನಾಲ್ಕನೆ ದಿವಸ ...	1—3	ಶಬ್ದೇಂದುಶೇಖರ ...	60	
	3-30—5-30	ಡಿಟೋ ...	60	
ಐದನೆ ದಿವಸ ..	1—3	ಡಿಟೋ ...	60	
	3—6	ವಾಚಾ ಪರೀಕ್ಷೆ ...	125	
				625
		ಎರಡನೆ ಭಾಗ.		
ಆರನೆ ದಿವಸ ...	1—4	ಶಬ್ದೇಂದುಶೇಖರ	100	
	4—6	ವಾಚಾ ಪರೀಕ್ಷೆ	...	
ಏಳನೆ ದಿವಸ ...	1—3	ಮಹಾಭಾಷ್ಯ ...	70	
	3-30—5-30	ಡಿಟೋ ...	70	
ಎಂಟನೆ ದಿವಸ ..	1—3	ಭೂಷಣಸಾರ	60	
	3—6	ವಾಚಾ ಪರೀಕ್ಷೆ ...	75	
				375
				1,000

VIII. ನ್ಯಾಯಶಾಸ್ತ್ರ (ನವೀನ).

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.	
		ಮೊದಲನೆ ಭಾಗ.		
ಮೊದಲನೆ ದಿವಸ ...	1—3-30	ದಿನಕರೀಯ ...	70	
	4—5-30	ಸಿದ್ಧಾಂತ ಲಕ್ಷಣ ...	40	
ಎರಡನೆ ದಿವಸ ..	1—3-30	ಪಂಚಲಕ್ಷಣಿ ಮತ್ತು ಚತುರ್ದಶ ಲಕ್ಷಣಿ ...	80	
	4—5-30	ಪಕ್ಷತಾ ...	50	
ಮೂರನೆ ದಿವಸ ...	1—3	ಅವಯವ ...	70	
	3-30—5-30	ಸಾಮಾನ್ಯನಿರುಕ್ತಿ ...	60	
ನಾಲ್ಕನೆ ದಿವಸ ..	1—3-30	ಸವ್ಯಭಿಚಾರ, ಸತ್ಪ್ರತಿಪಕ್ಷ ಮತ್ತು ಬಾಧವಿಭಾಜಕ ...	80	
	4—6	ವಾಚಾ ಪರೀಕ್ಷೆ ...	...	
ಐದನೆ ದಿವಸ ..	1—3	ವ್ಯುತ್ಪತ್ತಿವಾದ ...	50	
	4—6	ವಾಚಾ ಪರೀಕ್ಷೆ ...	125	
				625
		ಎರಡನೆ ಭಾಗ.		
ಆರನೆ ದಿವಸ ..	1—3	ವ್ಯುತ್ಪತ್ತಿವಾದ ..	60	
	3-30—5-30	ಡಿಟೋ ..	60	
ಏಳನೆ ದಿವಸ ...	1—4	ಶಕ್ತಿವಾದ ...	100	
	4—6	ವಾಚಾ ಪರೀಕ್ಷೆ ...	...	
ಎಂಟನೆ ದಿವಸ ...	1—3-30	ಪ್ರಾಮಾಣ್ಯವಾದ ...	80	
	3-30—6	ವಾಚಾ ಪರೀಕ್ಷೆ ...	75	
				375
				1,000

IX. ನ್ಯಾಯಶಾಸ್ತ್ರ (ಪ್ರಾಚೀನ).

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.
ಮೊದಲನೆ ದಿವಸ ..	1—4	ಪ್ರಶಸ್ತಪಾದ ಭಾಷ್ಯ	100
	4—6	ವಾಚಾ ಪರೀಕ್ಷೆ	...
ಎರಡನೆ ದಿವಸ ..	1—4	ನ್ಯಾಯಸೂತ್ರ ಭಾಷ್ಯ	100
	4—6	ವಾಚಾ ಪರೀಕ್ಷೆ	...
ಮೂರನೆ ದಿವಸ ..	1—4	ಉದ್ಯೋತಕಾರ ವಾರ್ತಿಕ	100
	4—6	ವಾಚಾ ಪರೀಕ್ಷೆ	...
ನಾಲ್ಕನೆ ದಿವಸ ..	1—4	ಉದ್ಯೋತಕಾರ ವಾರ್ತಿಕ ..	100
	4—6	ವಾಚಾ ಪರೀಕ್ಷೆ	100
			—— 500

X. ಸಾಂಖ್ಯ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.
ಮೊದಲನೆ ದಿವಸ ..	1—3	ಸಾಂಖ್ಯಪ್ರವಚನ ಭಾಷ್ಯ	60
	3-30—5-30	ಡಿಟ್ಟೋ	60
ಎರಡನೆ ದಿವಸ ..	1—3	ಸಾಂಖ್ಯತತ್ವ ಕೌಮುದಿ	60
	3—6	ವಾಚಾ ಪರೀಕ್ಷೆ	...
ಮೂರನೆ ದಿವಸ ..	1—4	ಯೋಗಭಾಷ್ಯ ವಾಚಸ್ಪತ್ಯ ಸಹಿತ	100
	4—6	ವಾಚಾ ಪರೀಕ್ಷೆ	100
ನಾಲ್ಕನೆ ದಿವಸ ..	1—3	ಯೋಗವಾರ್ತಿಕ ..	60
	3-30—5-30	ಡಿಟ್ಟೋ	60
			—— 500

XI. ಪೂರ್ವ ಮೀಮಾಂಸ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.
		ಭಾಗ I.	
ಮೊದಲನೆ ದಿವಸ	1—3	ಭಾಟ್ಟ ದೀಪಿಕ	75
	3-30—5-30	ಡಿಟ್ಟೋ	75
ಎರಡನೆ ದಿವಸ ..	1—3	ಡಿಟ್ಟೋ	75
	3-30—5-30	ಡಿಟ್ಟೋ	75
ಮೂರನೆ ದಿವಸ ..	1—4	ಭಾಟ್ಟಕೌಸ್ತುಭ	100
	4—6	ವಾಚಾ ಪರೀಕ್ಷೆ	...
ನಾಲ್ಕನೆ ದಿವಸ ..	1—4	ಭಾಟ್ಟಕೌಸ್ತುಭ	100
	4—6	ವಾಚಾ ಪರೀಕ್ಷೆ	...
ಐದನೆ ದಿವಸ ..	1—6	ವಾಚಾ ಪರೀಕ್ಷೆ	125
			—— 625
		ಭಾಗ II.	
ಆರನೆ ದಿವಸ ..	1—3	ಭಾಟ್ಟರಹಸ್ಯ	70
	3-30—5-30	ಡಿಟ್ಟೋ	70
ಏಳನೆ ದಿವಸ ..	1—3	ಶಾಬರಭಾಷ್ಯ	70
	3—6	ವಾಚಾ ಪರೀಕ್ಷೆ	...
ಎಂಟನೆ ದಿವಸ ..	1—4	ಶಾಬರಭಾಷ್ಯ	90
	4—6	ವಾಚಾ ಪರೀಕ್ಷೆ	75–375
			1,000

XII. ಉತ್ತರ ಮೀಮಾಂಸ (ವೇದಾಂತ).

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.
		ಭಾಗ I.	
ಮೊದಲನೆ ದಿವಸ ..	1—3-30	ಉಪನಿಷದ್-ಭಾಷ್ಯ-(ಈಶ ಮತ್ತು ಬೃ.ಉ.)	70
	4—6	ಡಿಟೋ (ತೈತ್ತಿರೀಯ. ಉ.)	50
ಎರಡನೆ ದಿವಸ ..	1—3-30	ಡಿಟೋ. (ಕೇನ ಮತ್ತು ಛಾಂದೋಗ್ಯ) ...	60
	4—6	ಡಿಟೋ (ಕಾಠಕ ಮತ್ತು ಐತರೇಯ)... ..	50
ಮೂರನೆ ದಿವಸ ..	1—3	ಡಿಟೋ (ಪ್ರಶ್ನ, ಮುಂಡಕ ಮತ್ತು ಮಾಂಡೂಕ್ಯ) ...	50
	3-30—5-30	ಗೀತಾಭಾಷ್ಯ (1—6 ಅಧ್ಯಾಯಗಳು)	50
ನಾಲ್ಕನೆ ದಿವಸ ..	1—4	ಡಿಟೋ (7—18 ಅಧ್ಯಾಯಗಳು) ..	70
	4—6	ವಾಚಾ ಪರೀಕ್ಷೆ ..	100-500
		ಭಾಗ II.	
ಐದನೆ ದಿವಸ ..	1—3-30	ಬ್ರಹ್ಮಸೂತ್ರ ಭಾಷ್ಯ (ಅಧ್ಯಾಯ I—1)	80
	4—6	ವಾಚಾ ಪರೀಕ್ಷೆ	
ಆರನೆ ದಿವಸ ..	1—3-30	ಬ್ರಹ್ಮಸೂತ್ರ ಭಾಷ್ಯ (1-2—4)	80
	4—6	ವಾಚಾ ಪರೀಕ್ಷೆ	
ಏಳನೆ ದಿವಸ ..	1—3-30	ಬ್ರಹ್ಮಸೂತ್ರ ಭಾಷ್ಯ (IIನೆ ಅಧ್ಯಾಯ)	100
	4—6	ವಾಚಾ ಪರೀಕ್ಷೆ	100
ಎಂಟನೆ ದಿವಸ ..	1—3-30	ಬ್ರಹ್ಮಸೂತ್ರ ಭಾಷ್ಯ (IIIನೆ ಅಧ್ಯಾಯ)	80
	4—6	ಡಿಟೋ (IVನೆ ಅಧ್ಯಾಯ)	60-500
			1,000

XIII. ಸಾಹಿತ್ಯ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.
		ಭಾಗ I.	
ಮೊದಲನೆ ದಿವಸ ..	1—3-30	ಚಂಪು	60
	4—6	ಕಾವ್ಯಪ್ರಕಾಶ	60
ಎರಡನೆ ದಿವಸ ..	1—3-30	ನಾಟಕ	60
	4—6	ಕುವಲಯಾನಂದ ಮತ್ತು ವೃತ್ತರತ್ನಾಕರ	50
ಮೂರನೆ ದಿವಸ ..	1—4	ಸಿದ್ಧಾಂತ ಕೌಮುದಿ	80
	4-30—5-30	ಜ್ಯೋತಿಷ	20
ನಾಲ್ಕನೆ ದಿವಸ ..	1—2-30	ಪ್ರಾಕೃತ	40
	3—5	ಮುಕ್ತಾವಳಿ	50
ಐದನೆ ದಿವಸ ..	1—3	ಉಪನ್ಯಾಸ ...	40
	3—5	ತರ್ಜುಮೆ	40
	...	ವಾಚಾ ಪರೀಕ್ಷೆ	125-625
		ಭಾಗ II.	
ಆರನೆ ದಿವಸ	1—3	ಉಪನಿಷತಗಳು ಮತ್ತು ಗೀತ	50
	3-30—5-30	ಆಪಸ್ತಂಬ ಮತ್ತು ಮನುಸ್ಮೃತಿ ..	50
ಏಳನೆ ದಿವಸ ..	1—3	ಭಾರತ, ಭಾಗವತ ಮತ್ತು ಯೋಗವಾಸಿಷ್ಠ ...	50
	3-30—5-30	ಸಾಂಖ್ಯ ಮತ್ತು ಯೋಗ ..	50
ಎಂಟನೆ ದಿವಸ ..	1—3	ಮೀಮಾಂಸ ಮತ್ತು ಅದ್ವೈತ ಪರಿಭಾಷ ..	50
	3-30—5-30	ಯತೀಂದ್ರಮತದೀಪಿಕ ಮತ್ತು ದ್ವೈತಪದಾರ್ಥ ಸಂಗ್ರಹ ..	50
		ವಾಚಾ ಪರೀಕ್ಷೆ	75-375
			1,000

ಹುಕುಂ ಬಮೋಜೀಬ್,

ಎಲ್. ಅನಂತಸ್ವಾಮಿರಾವ್,

ಮುಜರೈ ಸೆಕ್ರೆಟರಿ.

ಮೈಸೂರ ಗೆಜೆಟ್.

ನಂ. 42.] ಸರ್ಕಾರದಿಂದ ಪ್ರಾಯಿಸ್ ಆದ್ದು. [ನಂ. 32.

ಬೆಂಗಳೂರು, ಗುರುವಾರ, ಆಗಸ್ಟು ತಾ॥ 8, ಸ್ 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ–ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರ್ಇಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರ್ಕಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೊಲೀಸ್ ಸೂಪರ್ಇಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸಗಳು.

3ನೆ ಭಾಗ–ಲೆಜಿಸಲೇಟಿವ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ–ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 24ನೆ ಜುಲೈ 1907.

ನಂ. 677—ಸ್ಯಾನಿಟೆರಿ 24-07-2, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುತ್ತದೇನೆಂದರೆ :- ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್-ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಹಾರನಹಳ್ಳಿ	ಕುಂಸಿ ಸಬ್ ತಾಲ್ಲೂಕು.
ಕೋಬಲ್ಲಿ	ಡಿಟೋ.
ಸಂತೆಕಡೂರು	ಶಿವಮೊಗ್ಗ.

ತಾರೀಖು 24ನೆ ಜುಲೈ 1907.

ನಂ. 675—ಸ್ಯಾನಿಟರಿ 23-07—2, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:— ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21-96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಮೈನಾಯಕನಹಳ್ಳಿ	ಆನೆಕಲ್ಲು.
ಗುಡ್ಡಹಟ್ಟಿ	ಡಿಟೋ
ಅಲ್ಲೇನಹಳ್ಳಿ	ಡಿಟೋ
ಬೂರ್ನಾತ	ಡಿಟೋ
ಬಿಸ್ತಮಾನಹಳ್ಳಿ	ಡಿಟೋ
ಮಂಟಪ	ಡಿಟೋ
ಸೊಳ್ಳೇಪುರ	ಡಿಟೋ
ಸೋಲೂರು	ಡಿಟೋ
ಬೊಮ್ಮಸಂದ್ರ	ಡಿಟೋ
ಮೇಡಹಳ್ಳಿ	ಡಿಟೋ
ಹೆಬ್ಗೋಡಿ	ಡಿಟೋ
ಮುತ್ತಸಂದ್ರ	ಡಿಟೋ
ದಾಸನಪುರ	ಡಿಟೋ
ಹಾಳೇನಹಳ್ಳಿ	ದೊಡ್ಡಬಳ್ಳಾಪುರ.
ಹುರಳಿಚಿಕ್ಕನಹಳ್ಳಿ	ಬೆಂಗಳೂರು.
ಅಲ್ಲಾಲಸಂದ್ರ	ಡಿಟೋ
ಕೃಷ್ಣರಾಜಪುರ	ಡಿಟೋ
ಬೊಮ್ಮನಹಳ್ಳಿ	ಡಿಟೋ
ಜೋಡಿಸೆಟ್ಟಿಹಳ್ಳಿ	ಡಿಟೋ
ಜೋಡಿ ಅರಿಕೆರೆ	ಡಿಟೋ
ಮುರುಗೇಶ ಮೊದಲಿ ಪಾಳ್ಯ	ಡಿಟೋ
ಗುರಪ್ಪನ ಪಾಳ್ಯ	ಡಿಟೋ
ಅನುಗೊಂಡನ ಹಳ್ಳಿ	ಹೊಸಕೋಟೆ.
ಬೀರಂಡಹಳ್ಳಿ	ಡಿಟೋ
ಕಿತ್ತಗನೂರು	ಡಿಟೋ
ದೊಡ್ಡಬೆಲೆ	ನೆಲಮಂಗಲ.
ತ್ಯಾಮಗೊಂಡ್ಲು	ಡಿಟೋ
ಬೀರಗೊಂಡಹಳ್ಳಿ	ಡಿಟೋ

ತಾರೀಖು 8ನೆ ಆಗಸ್ಟು 1907.

ನಂ. 1202—ಸ್ಯಾನಿಟರಿ 34-07—2, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:—ಹಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
ಆಲೂರು	ಆಲೂರು ಸಬ್ ತಾಲ್ಲೂಕು.	ಕರಗಾಡ	ಬೇಲೂರು.
ಆಲೂರು ಪೇಟೆ	ಡಿಟೋ	ಗೊರೂರು	ಡಿಟೋ
ಕೊಡಿಗಿಹಳ್ಳಿ	ಡಿಟೋ	ಮಲ್ಲಾಪುರ	ಅರಸೀಕೆರೆ.

ತಾರೀಖು 1ನೆ ಆಗಸ್ಟು 1907.

ನಂ. ಜೆ. 345—ರಿಜಿಸ್. 2-07-2, ಸರ್ಕಾರಿ ಕೆಲಸದ ಅನುಕೂಲಕ್ಕಾಗಿ ಈ ಕೆಳಗೆ ನಮೂದಿಸುವ ಸ್ಪೆಷಲ್ ಸಬ್ ರಿಜಿಸ್ಟ್ರಾರುಗಳ ವರ್ಗಾವರ್ಗಿಯನ್ನು ಮಾಡಿ ಇದೆ.

ಸಬ್ ರಿಜಿಸ್ಟ್ರಾರ ಹೆಸರು.	ಇಂದ	ಗೆ
1. ಕೆ. ದೊರಸ್ವಾಮಿ ಐಯ್ಯಂಗಾರ್	ಮೈಸೂರು	ಗೌರಿಬಿದನೂರು.
2. ಎಂ. ಚಕ್ರಪಾಣಿರಾವ್	ಗೌರಿಬಿದನೂರು	ಮಂಡ್ಯ
3. ಜಿ. ಜೆ. ಬಸವಲಿಂಗಪ್ಪ	ಮಂಡ್ಯ	ಮೈಸೂರು.

ತಾರೀಖು 2ನೆ ಆಗಸ್ಟು 1907.

ನಂ. ಜೆ. 352—ಕೋ. 37-07—2, ಮೈಸೂರು ಸರ್ವಿಸ ರೆಗ್ಯುಲೇಷನುಗಳ 177 ಮತ್ತು 190 (b) (1) ಮತ್ತು (11) ನೆ ಪ್ರಕರಣಗಳ ಮೇರೆಗೆ ಮೈಸೂರು ಅಡಿಷನಲ್ ಮುನ್ಸಿಫ್ ಮಿ॥ ಕೆ. ಲಕ್ಷ್ಮಿನಾರಣಯ್ಯನವರಿಗೆ 1907ನೆ ಇಸವಿಯ ಜುಲೈ 23ನೆ ತಾರೀಖಿನಿಂದ 15 ದಿನಗಳ ಪ್ರಿವಿಲೇಜ್ ರಜಾವನ್ನು ಕೊಟ್ಟಿದೆ.

ಆ ಕಾಲದಲ್ಲಿ ಅಥವಾ ಇನ್ನೊಂದು ಹುಕುಂ ಕೊಡುವ ವರೆಗ ಜುಡಿಷಿಯಲ್ ಪ್ರೊಬೇಷನರ್ ಮಿ॥ ಎ. ಕೆ. ಶ್ರೀನಿವಾಸರಾಘವಾಚಾರ್, ಬಿ. ಎ., ಬಿ. ಎಲ್., ರವರು ಮೈಸೂರು ಅಡಿಷನಲ್ ಮುನ್ಸಿಫ್ ಕೋರ್ಟಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 2ನೆ ಆಗಸ್ಟು 1907.

ನಂ. ಜೆ. 349—ಕೋ. 31-07—2, 1904ನೆ ಇಸವಿಯ 2ನೇನಂಬ್ರಿನ ರೆಗ್ಯುಲೇಷನಾದ ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡಿನ 12ನೆ ಪ್ರಕರಣದ ಮೇರೆಗೆ, ಗೋರಿಬಿದನೂರು ತಾಲ್ಲೂಕು ಅಮಲ್ದಾರ್ ಮತ್ತು ಮೂರನೆ ತರಗತಿಯ ಮಾಜಿಸ್ಟ್ರೇಟಾದ ಮಿ॥ ಕೆ. ಹನುಮಂತರಾಯರಿಗೆ ಎರಡನೆ ತರಗತಿಯ ಮಾಜಿಸ್ಟ್ರೇಟಿನ ಅಧಿಕಾರಗಳನ್ನು ಕೊಟ್ಟಿದೆ.

ತಾರೀಖು 2ನೆ ಆಗಸ್ಟು 1907.

ನಂ. 969—Ml. 52-07-2; ಸಭಿಕತನಕ್ಕೆ ರಾಜೀನಾಮೆಯನ್ನು ಕೊಟ್ಟ ಮಿ॥ ಕಾಲಗೋಡು ಶ್ರೀನಿವಾಸರಾಯರಿಗೆ ಬದಲಾಗಿ ವರ್ತಕ ಮಿ॥ ಎಡೆಹಳ್ಳಿ ಪುಟ್ಟನಂಜಪ್ಪನವರನ್ನು ತೀರ್ಥಹಳ್ಳಿ ಕಸಬಾ ಮ್ಯುನಿಸಿಪಲ್ ಬೋರ್ಡಿಗೆ ಸಭಿಕರನ್ನಾಗಿ ನೇಮಕರ್ರ್ಮಾಡಿ ಇದೆ.

ತಾರೀಖು 6ನೆ ಆಗಸ್ಟು 1907.

ನಂ. 1112—Ml. 54-07—6, ಮೊಳಕಾಲ್ಮುರು ತಾಲ್ಲೂಕಿನ ಮ್ಯುನಿಸಿಪಲ್ ಬೋರ್ಡ ಯ ಸಭೆಯಲ್ಲಿ ತಮ್ಮ ಸ್ಥಾನವನ್ನು ನಿಯತವಾದ ಕಾಲವು ಮುಗಿದುಹೋದ ಪ್ರಯುಕ್ತ ಖಾಲೀಮಾಡಿದ ಮಿ॥ ಭೂರಿ ಸಣ್ಣ ರುದ್ರಪ್ಪನವರಿಗೆ ಬದಲಾಗಿ ಮಿ॥ ಕಬೂಲಾ ಸಾಬರನ್ನು ಸದರಿ ಬೋರ್ಡಿಗೆ ಸಭಿಕರನ್ನಾಗಿ ನೇಮಕರ್ರ್ಮಾಡಿ ಇದೆ.

ತಾರೀಖು 7ನೆ ಆಗಸ್ಟು 1907.

ನಂ. 1080—Med. 31-07—2, ಈ ಕೆಳಗೆ ನಮೂದಿಸುವ 2ನೆ ಮತ್ತು 3ನೆ ತರಗತಿಯ ಆಸ್ಪತ್ರೆ ಅಸಿಸ್ಟೆಂಟುಗಳು ಅವಶ್ಯವಾದಷ್ಟು ಕಾಲ ಕೆಲಸಮಾಡಿ ಯೋಗ್ಯತೆಯನ್ನುಂಟುಮಾಡುವ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವುದರಿಂದ ಅವರ ಹೆಸರುಗಳ ಎದುರಿಗೆ ನಮೂದಿಸುವ ತಾರೀಖು ಲಾಗಾಯಿತು ಅವರನ್ನು ಮೇಲಿನ ತರಗತಿಗಳಿಗೆ ಬಡತಿಮಾಡಿ ಇದೆ:—

ನಂಬರ.	ದರ್ಜೆ.	ಹೆಸರು.	ಯಾವ ತರಗತ್ತಿಗೆ ಬಡತಿ.	ಯಾವ ತಾರೀಖಿನಿಂದ.
1	2ನೆ ತರಗತಿಯ ಆಸ್ಪತ್ರೆ ಅಸಿಸ್ಟೆಂಟ್.	ಎ. ಎಸ್. ರಾಮಲಿಂಗಮೊದಲಿಯಾರ್.	ಮೊದಲನೆ ತರಗತಿಗೆ ...	8—7—07
2	ಡಿಟೋ ...	ಎನ್. ಗಣಪತಿ ಐಯ್ಯರ್ ...	ಡಿಟೋ ...	8—7—07
3	ಡಿಟೋ ...	ಎ. ವಿ. ನರಸಿಂಹಾಚಾರ್ ...	ಡಿಟೋ ...	8—7—07
4	3ನೆ ತರಗತಿಯ ಆಸ್ಪತ್ರೆ ಅಸಿಸ್ಟೆಂಟ್.	ಬಿ. ಸುಬ್ಬರಾವ್ ...	ಎರಡನೆ ತರಗತಿಗೆ ...	5—5—07
5	ಡಿಟೋ ...	ಬಿ. ನಾರಾಯಣರಾವ್ ...	ಡಿಟೋ ...	6—5—07

ತಾರೀಖು 26ನೆ ಜುಲೈ 1907.

ನಂ. ರೆ. 619—ಲ್ಯಾ. ರೆ. 20-07-6, ಸರ್ಕಾರಿ ಕೆಲಸದ ಅನುಕೂಲಕ್ಕಾಗಿ ಈ ಕೆಳಗೆ ನಮೂದಿಸುವ ಅಮಲ್ದಾರರ ನೇಮಕರಾತಿಗಳನ್ನೂ ವರ್ಗಾವರ್ಗಿಗಳನ್ನೂ ಮಾಡಿ ಇದೆ:—

ಮಿ॥ ಅಬ್ದುಲ್ ಹಕೀಂ, ಬಿ. ಎ., ಮೊಳಕಾಲ್ಮುರು ತಾಲ್ಲೂಕಿಗೆ.

ಮಾಲೂರು ತಾಲ್ಲೂಕಿನ ಬದಲಿ ಅಮಲ್ದಾರ್ ಮಿ॥ ಪಿ. ಸುಬ್ಬರಾವ್, ಬಿ. ಎ., ಬಿ. ಎಲ್., ತೀರ್ಥಹಳ್ಳಿ ತಾಲ್ಲೂಕಿಗೆ.

ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್‌ರವರ ಆಫೀಸಿನ ಮ್ಯಾನೇಜರು ಕೆ. ಕೆ. ವೆಂಕಟಸ್ವಾಮಿ ಐಯ್ಯರ್, ಮಾಲೂರ್ ತಾಲ್ಲೂಕಿನಲ್ಲಿ ಅಮಲ್ದಾರರಾಗಿಯೂ ಮೂರನೇ ತರಗತಿಯ ಮಾಜಿಸ್ಟ್ರೇಟಾಗಿಯೂ ಬದಲಿ ಕೆಲಸ ನೋಡತಕ್ಕದ್ದು.

ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರ್ ಎಂ. ಕೇಶವಯ್ಯನವರು ಟಿ. ನರಸೀಪುರ ತಾಲ್ಲೂಕಿನ ಅಮಲ್ದಾರರಾಗಿಯೂ ಮೂರನೇ ತರಗತಿಯ ಮಾಜಿಸ್ಟ್ರೇಟಾಗಿಯೂ ಬದಲಿ ಕೆಲಸ ನೋಡತಕ್ಕದ್ದು.

ತಾರೀಖು 30ನೆ ಜುಲೈ 1907.

ನಂ. ರೆ. 689—ಲ್ಯಾ. ರೆ. 32-07-2, 1907ನೆ ಇಸವಿಯ ಏಪ್ರೆಲ್ 8ನೆ ತಾರೀಖಿನ ರೆ. 9104—ಲ್ಯಾ. ರೆ. 238-06-13ನೆ ನಂಬರಿನ ಇಸ್ತಿಹಾರಿನಲ್ಲಿ ಹಾಸನ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್ ಮಿ॥ ಪಿ. ಆರ್. ಡಬ್ಲ್ಯು. ವೆದರಾಲ್‌ರವರಿಗೆ ಮೂರು ತಿಂಗಳ ಪ್ರಿವಿಲೇಜ್ ರಜಾವಿನ ಜತೆಗೆ ಖಾಸಗಿ ಕೆಲಸದ ಬಗ್ಗೆ ಕೊಟ್ಟ ಮೂರು ತಿಂಗಳ ರಜಾವನ್ನು ವೈದ್ಯರ ಸರ್ಟಿಫಿಕೇಟಿನ ಮೇಲೆ ಕೊಡುವ ರಜಾವಾಗಿ ಬದಲಾಯಿಸಿ, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 155ನೆ ಪ್ರಕರಣದ (III)ನೆ ಕ್ಲಾಜಿನ ಮೇರೆಗೆ ಇನ್ನೂ ಎರಡು ತಿಂಗಳವರೆಗೆ ಹೆಚ್ಚಿಸಿದೆ.

ತಾರೀಖು 31ನೆ ಜುಲೈ 1907.

ನಂ. ರೆ. 722—ಲ್ಯಾ. ರೆ. 36-07—3, ತುಮಕೂರು ಡಿಸ್ಟ್ರಿಕ್ಟ್ ಟ್ರೆಜರಿಯ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಮಿ॥ ಎಂ. ಶ್ರೀನಿವಾಸಮೂರ್ತಿಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣವನ್ನನುಸರಿಸಿ ಅವರು ಉಪಯೋಗಿಸಿಕೊಂಡ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ತಾರೀಖು 1ನೆ ಆಗಸ್ಟು 1907.

ನಂ. ರೆ. 742—ಲ್ಯಾ. ರೆ. 361-06—9, 1907ನೆ ಇಸವಿಯ ಮೇ 27ನೆ ತಾರೀಖಿನ ರೆ. 10109—ಲ್ಯಾ. ರೆ. 361-06—5ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ 9 ತಿಂಗಳ ಒಟ್ಟು ಸೇರಿದ ರಜಾವನ್ನು ಕೊಡಲ್ಪಟ್ಟ ಅಮಲ್ದಾರ್ ಮಿ॥ ಎ. ಸದಾಶಿವರಾಯರು 1907ನೆ ಇಸವಿಯ ಮೇ 7ನೆ ತಾರೀಖಿನ ರೆ. 9809—ಲ್ಯಾ. ರೆ. 525-06—9ನೆ ನಂಬರಿನ ಇಸ್ತಿಹಾರ್ನಾಮೆಯ ಪ್ರಕಾರ 1907ನೆ ಇಸವಿಯ ಜುಲೈ 2ನೆ ತಾರೀಖಿನ ಪೂರ್ವಾಹ್ನ ನೆಲಮಂಗಲ ತಾಲ್ಲೂಕಿನ ಚಾರ್ಜನ್ನು ತೆಗೆದುಕೊಂಡು ತಮಗೆ ಕೊಟ್ಟ ರಜಾವಿನ ಪೈಕಿ ಒಂದು ತಿಂಗಳು ಮೂರು ದಿವಸಗಳ ಪ್ರಿವಿಲೇಜ್ ರಜಾವನ್ನು ಮಾತ್ರ ಉಪಯೋಗಿಸಿಕೊಂಡಿರುವ ಪ್ರಯುಕ್ತ ಸದರಿ ರಜಾವಿನ ಜತೆಗೆ ಮಂಜೂರ್ಮಾಡಿದ ತಲುಬಿಲ್ಲದ ಅಸಾಧಾರಣ ರಜಾವನ್ನು ಈ ಮೂಲಕ ರದ್ದು ಮಾಡಿ ಇದೆ.

ತಾರೀಖು 1ನೆ ಆಗಸ್ಟು 1907.

ನಂ. ರೆ. 762—ಲ್ಯಾ. ರೆ. 56-07—3, ಸರ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ:—ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ ಮನೆಗಳನ್ನು ಕಟ್ಟುವ ಬಗ್ಗೆ ಅವಶ್ಯಕವಾಗಿವೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ನಂಜನಗೂಡು ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ ತರಿ ಭಾಗಾಯತು.	ವಿಸ್ತೀರ್ಣ.	ಕಂದಾಯ.	ಈಗ ಸರಕಾರಕ್ಕೆ ಬೇಕಾಗಿರುವ ಖರಾಬು	ಚತುರ್ಗಡಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.	ರೂ. ಅ.	ಗುಂ.				
ಮೈಸೂರು	ಚಾಮರಾಜನಗರ	ಸಂತೇಮರಹಳ್ಳಿ	ಬಸವಾಪುರ	ನಂಜುಂಡಯ್ಯ	69-3	ಖುಷ್ಕಿ	2 25	4 0	20	ಸರ್ವೆ ನಂ. 69	ಗ್ರಾಮ ಠಾಣ	ಸರ್ವೆ ನಂ. 69.	ಹುತ್ತೆ ಸರ್ವೆ ನಂ. 70
					69-5	ಡಿಟೋ	1 35	2 12	15				

ತಾರೀಖು 3ನೆ ಆಗಸ್ಟು 1907.

ನಂ. ರೆ. 809—ಲ್ಯಾ. ರೆ. 20-07—7, ಸರ್ಕಾರಿ ಕೆಲಸದ ಅನುಕೂಲಕ್ಕಾಗಿ ಈ ಕೆಳಗೆ ನಮೂದಿರುವ ಅಮಲ್ದಾರರ ವರ್ಗಾವರ್ಗಿಗಳನ್ನು ಮಾಡಿ ಇದೆ:—

ಮಿ॥ ಮಾಚಯ್ಯನವರು ದಾವಣಗೆರೆಯಿಂದ ಚಿತ್ರದುರ್ಗಕ್ಕೆ (ವರ್ಗ ಮಾಡಲ್ಪಟ್ಟ ಕೆಲಸದ ಮೇಲೆ ಕೂಡಲೆ ಹಾಜರಾಗತಕ್ಕದ್ದು).

„ ರಾಮಚಂದ್ರರಾಯರು ಚಿತ್ರದುರ್ಗದಿಂದ ಚಳ್ಳಕೆರೆಗೆ.

„ ಮಹಮ್ಮದ್‌ಪೀರ್, ಚಳ್ಳಕೆರೆಯಿಂದ ದಾವಣಗೆರೆಗೆ (ವರ್ಗಮಾಡಲ್ಪಟ್ಟ ಕೆಲಸದ ಮೇಲೆ ಕೂಡಲೆ ಹಾಜರಾಗತಕ್ಕದ್ದು).

ತಾರೀಖು 3ನೆ ಆಗಸ್ಟು 1907.

ನಂ. ರೆ. 813—ಲ್ಯಾ. ರೆ. 37-07—2, 1907ನೆ ಇಸವಿಯ ಏಪ್ರಿಲ್ 9ನೆ ತಾರೀಖಿನ ರೆ. 9137—ಲ್ಯಾ. ರೆ. 413-06—8ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟ್ ಖಜಾನೆಯ ಅಸಿಸ್ಟೆಂಟ್ ಕಮಿಷನರ್ ಮಿ|| ವೇದಾಂತ ದೇಶಿಗಂ ಐಯ್ಯಂಗಾರ್ರಿಗೆ ಕೊಟ್ಟ 2 ತಿಂಗಳು 19 ದಿವಸಗಳ ಪ್ರಿವಿಲೇಜ್ ರಜಾವನ್ನು ಅವರು 1907ನೆ ಇಸವಿಯ ಏಪ್ರಿಲ್ 23ನೆ ತಾರೀಖಿನಿಂದ ಉಪಯೋಗಿಸಿಕೊಂಡು 1907ನೆ ಇಸವಿ ಜುಲೈ 8ನೆ ತಾರೀಖಿನ ಪೂರ್ವಾಹ್ನ ಕೆಲಸದ ವೇಳೆ ವಾಪಸು ಹಾಜರಾಗಿರುವುದರಿಂದ, ಉಪಯೋಗಿಸಿಕೊಳ್ಳದೆ ನಿಂತಿರುವ 4 ದಿವಸಗಳ ರಜಾವನ್ನು ಈ ಮೂಲಕ ರದ್ದು ಮಾಡಿ ಇದೆ.

ಹುಕುಂ ಬಮೋಜೀಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ಮಿಲಿಟರಿ.

ಇಸ್ತಿಹಾರ್ನಾಮೆ.

ತಾರೀಖು 1ನೆ ಆಗಸ್ಟು 1907.

ನಂ. 343—5, ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜರವರು ಮೈಸೂರು 3ನೆ ಪೈದಲ್ ಪಟಾಲಮಿನಲ್ಲಿ ಈ ಕೆಳಗೆ ಕಂಡ ನೌಕರರ ರೀತಿಯನ್ನು 1907ನೆ ಇಸವಿ ಜುಲೈ 15ನೆ ತಾರೀಖು ಲಾಗಾಯಿತು ಮಂಜೂರ್ಮಾಡಿರುತ್ತಾರೆ:—

ಹೆಸರು.	ನೌಕರರೂರಾದ ಹುದ್ದೆ.
ಜಮಾದಾರ್ ಅಡ್ಜುಟೆಂಟ್ ಮೊಹಮ್ಮದ್ ಸುಲೇಮಾನ್.	2ನೆ ಗ್ರೇಡ್ ಜಮಾದಾರ್, 3ನೆ ಪೈದಲ್ ಪಟಾಲಂ.

ಹುಕುಂ ಬಮೋಜೀಬ್,
ಆರ್. ಜಿ. ಜೋನ್ಸ್, ಲೆಫ್ಟಿನೆಂಟ್ ಕರ್ನಲ್,
ಮಿಲಿಟರಿ ಅಸಿಸ್ಟೆಂಟ್.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ಬೆಂಗಳೂರು, ತಾರೀಖು 2ನೆ ಆಗಸ್ಟು 1907.

ನಂ. 708—5507, ಮೈಸೂರು ಡಿವಿಜನ್‌ಗೆ ಸೇರಿದ ಅಸಿಸ್ಟೆಂಟು ಇಂಜನಿಯರ್ ಮಿ|| ಕೆ. ಪೊನ್ನಪ್ಪ, ಎಲ್. ಸಿ. ಇ., ಯವರಿಗೆ ಇದೇ 1907ನೆ ಇಸವಿ ಮೇ ತಾರೀಖು 29ನೆ 495—3917ನೆ ನಂಬರು ಇಸ್ತಿಹಾರ್ನಾಮೆಯಲ್ಲಿ ಕೊಡಲ್ಪಟ್ಟ 3 ತಿಂಗಳು ಪ್ರಿವಿಲೇಜ್ ರಜಾವನ್ನು ರದ್ದು ಮಾಡಲ್ಪಟ್ಟಿರುತ್ತೆ.

ಬೆಂಗಳೂರು, ತಾರೀಖು 3ನೆ ಆಗಸ್ಟು 1907.

ನಂ. 714—5535, ಮೈಸೂರು ಸಿಟಿ ಮ್ಯುನಿಸಿಪಾಲಿಟಿ ಆಫೀಸಿಗೆ ಸೇರಿದ ಓವರ್ಸಿಯರ್ ವಿ. ಲಕ್ಷ್ಮಣರಾವ್ ರವರು ಪಬ್ಲಿಕ್ ವರ್ಕ್ಸ್ ಇಲಾಖೆಗೆ ವಾಪಸುಬಂದ ಕಾರಣ ಈ ಕೆಳಗೆ ನಮೂದು ಕಂಡ ಬದಲಾವಣೆಯು 1907ನೆ ಇಸವಿ ಮೇ 19ನೆ ತಾರೀಖಿನಾರಭ್ಯ ಹುಕುಂ ಮಾಡಲ್ಪಟ್ಟಿರುತ್ತೆ.

ಡಿವಿಜನ್.	ಹೆಸರು.	ತರಗತಿಯಿಂದ.	ತರಗತಿಗೆ.	ತಾರೀಖು.
ವಾಟರ್ ಸಪ್ಲೈ ಮತ್ತು ಸ್ಟೋರ್ಸ್ ಡಿವಿಜನ್.	ಟಿ. ನರಸಿಂಹಯ್ಯಂಗಾರ್.	ಓವರ್ಸಿಯರ್, 3ನೆ ಕ್ಲಾಸ್ ಖಾಯಂ—2ನೆ ಕ್ಲಾಸ್ ಸಬ್ ಪ್ರೊಟಂ.	ಓವರ್ಸಿಯರ್, 3ನೆ ಕ್ಲಾಸ್ ಖಾಯಂ.	19—5—07

ಹುಕುಂ ಬಮೋಜೀಬ್,
ಬರ್ನಾರ್ಡ್ ಫಾಸ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನ್ಮೆಂಟ್ ಅಂಡರ್ ಸೆಕ್ರೆಟರಿ.

ಹುಜೂರ್ಯ.

ಇಸ್ತಿಹಾರನಾಮೆ.

ತಾರೀಖು 27ನೆ ಜುಲೈ 1907.

ಮೈಸೂರು ಶ್ರೀಮನ್ ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ಈ ಸಂವತ್ಸರ ಭಾದ್ರಪದ ಶುದ್ಧ ಪಾಡ್ಯಮಿ ಅಂದರೆ 1907ನೆ ಸೆಪ್ಟಂಬರ 8ನೆ ತಾರೀಖು ಲಾಗಾಯಿತು ನಡಿಯುವ ಸಂಸ್ಕೃತ ವಿದ್ವತ್ಪರೀಕ್ಷೆಗಳ ಕಾಲ ಮುಂತಾದ ತಪ್ಸೀಲುಗಳನ್ನು ಇದರಡಿ ನಮೂದಿಸಿರುತ್ತೆ :—

I. ವೇದ.

ದಿವಸಗಳು.	ಋಗ್ವೇದ.	ಫಲ ಸಂಖ್ಯೆ	ಯಜುರ್ವೇದ.	ಫಲ ಸಂಖ್ಯೆ	ಸಾಮವೇದ.	ಫಲ ಸಂಖ್ಯೆ
ಮೊದಲನೆ ದಿವಸ	ಸಂಹಿತಾ	100	ಸಂಹಿತಾ	70	ಛಂದಆರ್ಚಿಕಾ ಸಾಮಸಂಹಿತಾ ಪದಸಂಹಿತಾ	30 50 30
ಎರಡನೆ ದಿವಸ	ಪದ	100	ಪದ ಕ್ರಮ	70 70	ಊಹಾ	120
ಮೂರನೆ ದಿವಸ	ಕ್ರಮ	100	ಬ್ರಾಹ್ಮಣ ಅರಣ್ಯಕ	60 30	ಪದಪಾಠ ರಹಸ್ಯ	40 30
ನಾಲ್ಕನೆ ದಿವಸ	ಜಟಾ ಅಥವಾ ... ಪೂರ್ವಾಪರ ಪ್ರಯೋಗ	150	ಘನ ಅಥವಾ ಪೂರ್ವಾಪರ ಪ್ರಯೋಗ	150	ತಾಂಡ್ಯಬ್ರಾಹ್ಮಣ ಛಾಂದೋಗ್ಯೋಪನಿಷತ್ ಅಥವಾ ಪೂರ್ವಾಪರ ಪ್ರಯೋಗ	150
ಐದನೆ ದಿವಸ	ಪ್ರಾತಿಶಾಖ್ಯ ಅಥವಾ ಪೂರ್ವಾಪರ ಸೂತ್ರಗಳು ಮತ್ತು ಮಂತ್ರಗಳು	150	ಪ್ರಾತಿಶಾಖ್ಯ ಮತ್ತು ವರ್ಣಕ್ರಮ ಅಥವಾ ಪೂರ್ವಾಪರ ಸೂತ್ರಗಳು ಮತ್ತು ಮಂತ್ರಗಳು	150	ಋಕ್ ತಂತ್ರ ವ್ಯಾಕರಣ ಮತ್ತು ಫಲ್ಲಸೂತ್ರ ಅಥವಾ ಪೂರ್ವಾಪರ ಸೂತ್ರಗಳು ಮತ್ತು ಮಂತ್ರಗಳು	150
		600		600		600

II. ವೇದ ಭಾಷ್ಯ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.
		ಮೊದಲನೆ ಭಾಗ.	
ಮೊದಲನೆ ದಿವಸ ...	1—3	ಸಿದ್ಧಾಂತ ಕೌಮುದೀ (ಭಾಷಾ)	60
	3-30—5-30	ಡಿಟೋ (ವೈದಿಕ ಮತ್ತು ಸ್ವರ) ...	60
ಎರಡನೆ ದಿವಸ ...	1—3-30	ಶ್ರೌತ ಸೂತ್ರ	80
	4—6	ವಾಚಾ ಪರೀಕ್ಷೆ	
ಮೂರನೆ ದಿವಸ ...	1—5-30	ವೇದಭಾಷ್ಯ (2 ಪ್ರಶ್ನೆ ಪತ್ರಿಕೆಗಳು) ...	...
ನಾಲ್ಕನೆ ದಿವಸ ...	1—5-30	ಡಿಟೋ ಡಿಟೋ	
ಐದನೆ ದಿವಸ ...	1—3	ಡಿಟೋ	300
	3—6	ವಾಚಾ ಪರೀಕ್ಷೆ	125
			625
		ಎರಡನೆ ಭಾಗ.	
ಆರನೆ ದಿವಸ ...	1—3	ಮುಕ್ತಾವಳಿ (ತರ್ಕ)	60
	3-30—5-30	ಜೈಮಿನಿಯ ನ್ಯಾಯಮಾಲಾ	60
ಏಳನೆ ದಿವಸ ...	1—3	ಡಿಟೋ	60
	3-30—5-30	ಡಿಟೋ	60
ಎಂಟನೆ ದಿವಸ ...	1—3	ನಿರುಕ್ತ	60
	3—6	ವಾಚಾ ಪರೀಕ್ಷೆ	75
			375
			1,000

III. ಯಾಜ್ಞಿಕ ಪ್ರಯೋಗ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.
		ಮೊದಲನೆ ಭಾಗ.	
ಮೊದಲನೆ ದಿವಸ ...	1—4	ಗೃಹ್ಯ ಸೂತ್ರ	100
	4—6	ವಾಚಾ ಪರೀಕ್ಷೆ	
ಎರಡನೆ ದಿವಸ ...	1—3	ಗೃಹ್ಯ ಮಂತ್ರಗಳು	50
	3-30—5-30	ಗೃಹ್ಯಪ್ರಯೋಗ (ವಾಚಾ)	50
ಮೂರನೆ ದಿವಸ ...	1—3-30	ಅಪರಸೂತ್ರ ಮಂತ್ರ ಸಹಿತ	80
	4—5-30	ಅಪರಪ್ರಯೋಗ (ವಾಚಾ)	40
ನಾಲ್ಕನೆ ದಿವಸ ...	1—3	ಧರ್ಮಸೂತ್ರ	60
	3-30—5-30	ಡಿಟೋ	60
ಐದನೆ ದಿವಸ ...	1—3	ಬ್ರಹ್ಮಮೇಧ ವಾ ಶ್ರಾದ್ಧಸೂತ್ರ ವಾ ಗೃಹ್ಯಪರಿಶಿಷ್ಟ	60
	3—6	ವಾಚಾ ಪರೀಕ್ಷೆ	125
			625
		ಎರಡನೆ ಭಾಗ.	
ಆರನೆ ದಿವಸ ...	1—3-30	ಶ್ರೌತಸೂತ್ರ I	80
	4—6	ಶ್ರೌತಪ್ರಯೋಗ (ವಾಚಾ)	
ಏಳನೆ ದಿವಸ ...	1—3-30	ಶ್ರೌತಸೂತ್ರ II	80
		ಶ್ರೌತಪ್ರಯೋಗ (ವಾಚಾ)	100
ಎಂಟನೆ ದಿವಸ ...	1—2-30	ಪರಿಭಾಷಾಸೂತ್ರ	40
	4—6	ವಾಚಾ ಪರೀಕ್ಷೆ	75
			375
			1,000

IV. ಧರ್ಮಶಾಸ್ತ್ರ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.
		ಮೊದಲನೆ ಭಾಗ.	
ಮೊದಲನೆ ದಿವಸ ...	1—3	ತರ್ಕಪ್ರಕರಣ	50
	3-30—5-30	ಮೀಮಾಂಸಾಪ್ರಕರಣ	50
ಎರಡನೆ ದಿವಸ ...	1—3	ಯಾಜ್ಞವಲ್ಕ್ಯ ಮಿತಾಕ್ಷರ (ಆಚಾರ ಕಾಂಡ) ...	60
	3-30—5-30	ಡಿಟೋ ವ್ಯವಹಾರ ಪೂರ್ವಾರ್ಧ ...	60
ಮೂರನೆ ದಿವಸ ...	1—3	ಡಿಟೋ ಉತ್ತರಾರ್ಧ ...	60
	3-30—5-30	ಡಿಟೋ ಪ್ರಾಯಶ್ಚಿತ್ತ ಪೂರ್ವಾರ್ಧ ...	60
ನಾಲ್ಕನೆ ದಿವಸ ...	1—3	ಡಿಟೋ ಡಿಟೋ ಉತ್ತರಾರ್ಧ ...	60
	3—6	ವಾಚಾ ಪರೀಕ್ಷೆ	...
ಐದನೆ ದಿವಸ ...	1—4	ಮನುಸ್ಮೃತಿ	100
	4—6	ವಾಚಾ ಪರೀಕ್ಷೆ	125
			625
		ಎರಡನೆ ಭಾಗ.	
ಆರನೆ ದಿವಸ ...	1—3	ನಿರ್ಣಯಸಿಂಧು ವಾ ವೈದ್ಯನಾಥೀಯ ವಾ ವೈದಿಕ ಸಾರ್ವ	
	3-30—5-30	ಭೌಮೀಯ.	
ಏಳನೆ ದಿವಸ ...	1—3	ಡಿಟೋ ಡಿಟೋ ...	300
	3-30—5-30	ಡಿಟೋ ಡಿಟೋ ...	
ಎಂಟನೆ ದಿವಸ ...	1—3	ಡಿಟೋ ಡಿಟೋ ...	
	3—6	ವಾಚಾ ಪರೀಕ್ಷೆ	75
			375
			1,000

V. ಜ್ಯೋತಿಷ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.	
		ಮೊದಲನೆ ಭಾಗ.		
ಮೊದಲನೆ ದಿವಸ ..	1—4	ಲೀಲಾವತಿ	80	
	4—6	ವಾಚಾ ಪರೀಕ್ಷೆ	...	
ಎರಡನೆ ದಿವಸ ...	1—4	ಬೀಜಗಣಿತ	80	
	4—6	ವಾಚಾ ಪರೀಕ್ಷೆ	..	
ಮೂರನೆ ದಿವಸ ..	1—3	ಗೋಳಾಧ್ಯಾಯ	60	
	3-30—5-30	ಡಿಟೋ	60	
ನಾಲ್ಕನೆ ದಿವಸ ..	1—3	ಬೃಹಜ್ಜಾತಕ	75	
	3-30—5-30	ಡಿಟೋ	75	
ಐದನೆ ದಿವಸ ...	1—3-30	ಜ್ಞಾನಪ್ರದೀಪಿಕಾ	70	
	4—6	ವಾಚಾ ಪರೀಕ್ಷೆ	125	
				625
		ಎರಡನೆ ಭಾಗ.		
ಆರನೆ ದಿವಸ ...	1—3	ಶ್ರೀಪತಿ ಪದ್ಧತಿ	70	
	3-30—5-30	ವಿದ್ಯಾಮಾಧವೀಯ	70	
ಏಳನೆ ದಿವಸ ...	1—3	ಗ್ರಹಗಣಿತ	60	
	3-30—5-30	ಗ್ರಹಲಾಘವ ವಾ ಪ್ರತಿಭಾಗಿ	40	
ಎಂಟನೆ ದಿವಸ ...	1—3	ಬೃಹತ್ಸಂಹಿತಾ	60	
	3-30—6	ವಾಚಾ ಪರೀಕ್ಷೆ	75	
				375
				1,000

VI. ವೈದ್ಯ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.	
		ಮೊದಲನೆ ಭಾಗ.		
ಮೊದಲನೆ ದಿವಸ ...	1—3-30	ಧನ್ವಂತರಿ ನಿಘಂಟು	75	
	4—6	ಅಷ್ಟಾಂಗಹೃದಯ	60	
ಎರಡನೆ ದಿವಸ ...	1—3	ಡಿಟೋ	60	
	3-30—5	ಸುಶ್ರುತ	50	
ಮೂರನೆ ದಿವಸ ...	1—4	ಶಾರ್ಙ್ಗಧರ ಸಂಹಿತಾ	90	
	4—6	ವಾಚಾ ಪರೀಕ್ಷೆ	...	
ನಾಲ್ಕನೆ ದಿವಸ ...	1—4	ಮಾಧವ ನಿದಾನ	90	
	4—6	ವಾಚಾ ಪರೀಕ್ಷೆ	100	
ಐದನೆ ದಿವಸ ...	1—6	ಕರ್ಮಾಭ್ಯಾಸ	100	
				625
		ಎರಡನೆ ಭಾಗ.		
ಆರನೆ ದಿವಸ ...	1—3-30	ಚರಕ	75	
	4—6	ಕರ್ಮಾಭ್ಯಾಸ	..	
ಏಳನೆ ದಿವಸ ..	1—3-30	ಚರಕ	75	
	4—6	ಕರ್ಮಾಭ್ಯಾಸ	50	
ಎಂಟನೆ ದಿವಸ ...	1—4	ರಸರತ್ನಾಕರ	100	
	4—6	ವಾಚಾ ಪರೀಕ್ಷೆ	75	
				375
				1,000

VII. ವ್ಯಾಕರಣ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.	
		ಮೊದಲನೆ ಭಾಗ.		
ಮೊದಲನೆ ದಿವಸ ...	1—4	ಸಿದ್ಧಾಂತ ಕೌಮುದಿ ...	100	
	4—6	ವಾಚಾ ಪರೀಕ್ಷೆ		
ಎರಡನೆ ದಿವಸ ..	1—4	ಮನೋರಮಾ ಶಬ್ದರತ್ನ ಸಹಿತಾ ...	100	
	4—6	ವಾಚಾ ಪರೀಕ್ಷೆ	...	
ಮೂರನೆ ದಿವಸ ...	1—3	ಶಬ್ದಕೌಸ್ತುಭ ...	60	
	3-30—5-30	ಪರಿಭಾಷೇಂದುಶೇಖರ ...	60	
ನಾಲ್ಕನೆ ದಿವಸ ...	1—3	ಶಬ್ದೇಂದುಶೇಖರ ...	60	
	3-30—5-30	ಡಿಟೋ ...	60	
ಐದನೆ ದಿವಸ ..	1—3	ಡಿಟೋ ...	60	
	3—6	ವಾಚಾ ಪರೀಕ್ಷೆ ...	125	
				625
		ಎರಡನೆ ಭಾಗ.		
ಆರನೆ ದಿವಸ ..	1—4	ಶಬ್ದೇಂದುಶೇಖರ ...	100	
	4—6	ವಾಚಾ ಪರೀಕ್ಷೆ		
ಏಳನೆ ದಿವಸ ...	1—3	ಮಹಾಭಾಷ್ಯ ...	70	
	3-30—5-30	ಡಿಟೋ ...	70	
ಎಂಟನೆ ದಿವಸ ...	1—3	ಭೂಷಣಸಾರ	60	
	3—6	ವಾಚಾ ಪರೀಕ್ಷೆ ...	75	
				375
				1,000

VIII. ನ್ಯಾಯಶಾಸ್ತ್ರ (ನವೀನ).

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.	
		ಮೊದಲನೆ ಭಾಗ.		
ಮೊದಲನೆ ದಿವಸ ...	1—3-30	ದಿನಕರೀಯ ...	70	
	4—5-30	ಸಿದ್ಧಾಂತ ಲಕ್ಷಣ ...	40	
ಎರಡನೆ ದಿವಸ ...	1—3-30	ಪಂಚಲಕ್ಷಣಿ ಮತ್ತು ಚತುರ್ದಶ ಲಕ್ಷಣಿ ...	80	
	4—5-30	ಪಕ್ಷತಾ ...	50	
ಮೂರನೆ ದಿವಸ ...	1—3	ಅವಯವ ...	70	
	3-30—5-30	ಸಾಮಾನ್ಯನಿರುಕ್ತಿ ...	60	
ನಾಲ್ಕನೆ ದಿವಸ ..	1—3-30	ಸವ್ಯಭಿಚಾರ, ಸತ್ಪ್ರತಿಪಕ್ಷ ಮತ್ತು ಬಾಧವಿಭಾಜಕ ...	80	
	4—6	ವಾಚಾ ಪರೀಕ್ಷೆ	...	
ಐದನೆ ದಿವಸ ..	1—3	ವ್ಯುತ್ಪತ್ತಿವಾದ ...	50	
	4—6	ವಾಚಾ ಪರೀಕ್ಷೆ ...	125	
				625
		ಎರಡನೆ ಭಾಗ.		
ಆರನೆ ದಿವಸ ...	1—3	ವ್ಯುತ್ಪತ್ತಿವಾದ ...	60	
	3-30—5-30	ಡಿಟೋ ...	60	
ಏಳನೆ ದಿವಸ ...	1—4	ಶಕ್ತಿವಾದ ...	100	
	4—6	ವಾಚಾ ಪರೀಕ್ಷೆ ...	...	
ಎಂಟನೆ ದಿವಸ ...	1—3-30	ಪ್ರಾಮಾಣ್ಯವಾದ ...	80	
	3-30—6	ವಾಚಾ ಪರೀಕ್ಷೆ ...	75	
				375
				1,000

IX. ನ್ಯಾಯಶಾಸ್ತ್ರ (ಪ್ರಾಚೀನ).

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.
ಮೊದಲನೆ ದಿವಸ ...	1—4	ಪ್ರಶಸ್ತಪಾದ ಭಾಷ್ಯ	100
	4—6	ವಾಚಾ ಪರೀಕ್ಷೆ	
ಎರಡನೆ ದಿವಸ ...	1—4	ನ್ಯಾಯಸೂತ್ರ ಭಾಷ್ಯ	100
	4—6	ವಾಚಾ ಪರೀಕ್ಷೆ	
ಮೂರನೆ ದಿವಸ	1—4	ಉದ್ಯೋತಕಾರ ವಾರ್ತಿಕ	100
	4—6	ವಾಚಾ ಪರೀಕ್ಷೆ	
ನಾಲ್ಕನೆ ದಿವಸ ...	1—4	ಉದ್ಯೋತಕಾರ ವಾರ್ತಿಕ	100
	4—6	ವಾಚಾ ಪರೀಕ್ಷೆ	100
			500

X. ಸಾಂಖ್ಯ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.
ಮೊದಲನೆ ದಿವಸ ...	1—3	ಸಾಂಖ್ಯಪ್ರವಚನ ಭಾಷ್ಯ	60
	3-30—5-30	ಡಿಟೋ	60
ಎರಡನೆ ದಿವಸ ...	1—3	ಸಾಂಖ್ಯತತ್ವ ಕೌಮುದಿ ...	60
	3—6	ವಾಚಾ ಪರೀಕ್ಷೆ	
ಮೂರನೆ ದಿವಸ ...	1—4	ಯೋಗಭಾಷ್ಯ ವಾಚಸ್ಪತ್ಯ ಸಹಿತ	100
	4—6	ವಾಚಾ ಪರೀಕ್ಷೆ ...	100
ನಾಲ್ಕನೆ ದಿವಸ ...	1—3	ಯೋಗವಾರ್ತಿಕ ...	60
	3-30—5-30	ಡಿಟೋ	60
			500

XI. ಪೂರ್ವಮೀಮಾಂಸ.

ಭಾಗ I.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.
ಮೊದಲನೆ ದಿವಸ	1—3	ಭಾಟ್ಟ ದೀಪಿಕೆ	75
	3-30—5-30	ಡಿಟೋ	75
ಎರಡನೆ ದಿವಸ ...	1—3	ಡಿಟೋ ...	75
	3-30—5-30	ಡಿಟೋ ...	75
ಮೂರನೆ ದಿವಸ ...	1—4	ಭಾಟ್ಟಕೌಸ್ತುಭ	100
	4—6	ವಾಚಾ ಪರೀಕ್ಷೆ ...	
ನಾಲ್ಕನೆ ದಿವಸ ...	1—4	ಭಾಟ್ಟಕೌಸ್ತುಭ	100
	4—6	ವಾಚಾ ಪರೀಕ್ಷೆ ...	
ಐದನೆ ದಿವಸ ...	1—6	ವಾಚಾ ಪರೀಕ್ಷೆ	125
			625

ಭಾಗ II.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.
ಆರನೆ ದಿವಸ ...	1—3	ಭಾಟ್ಟರಹಸ್ಯ	70
	3-30—5-30	ಡಿಟೋ ..	70
ಏಳನೆ ದಿವಸ ...	1—3	ಶಾಬರಭಾಷ್ಯ	
	3—6	ವಾಚಾ ಪರೀಕ್ಷೆ ...	70
ಎಂಟನೆ ದಿವಸ ...	1—4	ಶಾಬರಭಾಷ್ಯ	90
	4—6	ವಾಚಾ ಪರೀಕ್ಷೆ	75–375
			1,000

XII. ಉತ್ತರ ಮೀಮಾಂಸ (ವೇದಾಂತ).

ದಿವಸಗಳು.	ಕಾಲ.	ವಿಷಯುಗಳು.	ಫಲ ಸಂಖ್ಯೆ.
		ಭಾಗ I.	
ಮೊದಲನೆ ದಿವಸ ..	1—3-30	ಉಪನಿಷದ್-ಭಾಷ್ಯ-(ಈಶ ಮತ್ತು ಬೃ.ಉ.)	70
	4—6	ಡಿಟೋ (ತೈತ್ತಿರೀಯ. ಉ.)	50
ಎರಡನೆ ದಿವಸ ..	1—3-30	ಡಿಟೋ (ಕೇನ ಮತ್ತು ಛಾಂದೋಗ್ಯ) ...	60
	4—6	ಡಿಟೋ (ಕಾಠಕ ಮತ್ತು ಐತರೇಯ)... ..	50
ಮೂರನೆ ದಿವಸ ..	1—3	ಡಿಟೋ (ಪ್ರಶ್ನ, ಮುಂಡಕ ಮತ್ತು ಮಾಂಡೂಕ್ಯ) ...	50
	3-30—5-30	ಗೀತಾಭಾಷ್ಯ (1—6 ಅಧ್ಯಾಯಗಳು)	50
ನಾಲ್ಕನೆ ದಿವಸ ..	1—4	ಡಿಟೋ (7—18 ಅಧ್ಯಾಯಗಳು)	70
	4—6	ವಾಚಾ ಪರೀಕ್ಷೆ	100-500
		ಭಾಗ II.	
ಐದನೆ ದಿವಸ ...	1—3-30	ಬ್ರಹ್ಮಸೂತ್ರ ಭಾಷ್ಯ (ಅಧ್ಯಾಯ 1—1)	80
	4—6	ವಾಚಾ ಪರೀಕ್ಷೆ	
ಆರನೆ ದಿವಸ ..	1—3-30	ಬ್ರಹ್ಮಸೂತ್ರ ಭಾಷ್ಯ (1-2—4)	80
	4—6	ವಾಚಾ ಪರೀಕ್ಷೆ ..	...
ಏಳನೆ ದಿವಸ ..	1—3-30	ಬ್ರಹ್ಮಸೂತ್ರ ಭಾಷ್ಯ (IIನೆ ಅಧ್ಯಾಯ) ...	100
	4—6	ವಾಚಾ ಪರೀಕ್ಷೆ	100
ಎಂಟನೆ ದಿವಸ ..	1—3-30	ಬ್ರಹ್ಮಸೂತ್ರ ಭಾಷ್ಯ (IIIನೆ ಅಧ್ಯಾಯ)	80
	4—6	ಡಿಟೋ (IVನೆ ಅಧ್ಯಾಯ)	60-500
			1,000

XIII. ಸಾಹಿತ್ಯ.

ದಿವಸಗಳು.	ಕಾಲ.	ವಿಷಯುಗಳು.	ಫಲ ಸಂಖ್ಯೆ.
		ಭಾಗ I.	
ಮೊದಲನೆ ದಿವಸ ..	1—3-30	ಚಂಪು	60
	4—6	ಕಾವ್ಯಪ್ರಕಾಶ	60
ಎರಡನೆ ದಿವಸ ..	1—3-30	ನಾಟಕ	60
	4—6	ಕುವಲಯಾನಂದ ಮತ್ತು ವೃತ್ತರತ್ನಾಕರ	50
ಮೂರನೆ ದಿವಸ ..	1—4	ಸಿದ್ಧಾಂತ ಕೌಮುದಿ	80
	4-30—5-30	ಜ್ಯೋತಿಷ	20
ನಾಲ್ಕನೆ ದಿವಸ ..	1—2-30	ಪ್ರಾಕೃತ	40
	3—5	ಮುಕ್ತಾವಳಿ	50
ಐದನೆ ದಿವಸ ..	1—3	ಉಪನ್ಯಾಸ	40
	3—5	ತರ್ಜುಮೆ	40
		ವಾಚಾ ಪರೀಕ್ಷೆ	125-625
		ಭಾಗ II.	
ಆರನೆ ದಿವಸ ..	1—3	ಉಪನಿಷತ್ತುಗಳು ಮತ್ತು ಗೀತ	50
	3-30—5-30	ಆಪಸ್ತಂಬ ಮತ್ತು ಮನುಸ್ಮೃತಿ	50
ಏಳನೆ ದಿವಸ ..	1—3	ಭಾರತ, ಭಾಗವತ ಮತ್ತು ಯೋಗವಾಸಿಷ್ಠ	50
	3-30—5-30	ಸಾಂಖ್ಯ ಮತ್ತು ಯೋಗ ..	50
ಎಂಟನೆ ದಿವಸ	1—3	ಮೀಮಾಂಸ ಮತ್ತು ಅದ್ವೈತ ಪರಿಭಾಷ	50
	3-30—5-30	ಯತೀಂದ್ರಮತದೀಪಿಕೆ ಮತ್ತು ದ್ವೈತಪದಾರ್ಥ ಸಂಗ್ರಹ ..	50
		ವಾಚಾ ಪರೀಕ್ಷೆ	75-375
			1,000

ಹುಕುಂ ಬಮೋಜೀಬ್,
ಎಲ್. ಅನಂತಸ್ವಾಮಿರಾವ್,
ಮುಜರೈ ಸೆಕ್ರೆಟೆರಿ.

ಸಪ್ಲಿಮೆಂಟ.

ಮೈಸೂರ ಗೆಜೆಟ.

ಸಂ. 42] ಸರ್ಕಾರದಿಂದ ಪ್ರಕಟಿಸಿದ ಆದ್ದು. [ನಂ. 33.

ಬೆಂಗಳೂರು, ಗುರುವಾರ, ಆಗಸ್ಟ ತಾ॥ 15, ಸ॥ 1907.

ಮೈಸೂರು ನ್ಯಾಯ ವಿಧಾಯಕ ಸಭೆಯ ನಡವಳಿಕೆಗಳ ಸಂಗ್ರಹ.

1907ನೆ ಜುಲೈ ತಾರೀಖು 24ನೆ ಬುಧವಾರದ ದಿನ ಅಪರಾಹ್ನ 3 ಘಂಟೆಗೆ ಪಬ್ಲಿಕ ಆಫೀಸ ಕಟ್ಟಡಗಳಲ್ಲಿರುವ ಸಭಾಮಂಟಪದಲ್ಲಿ (ಕೌನ್ಸಿಲ ಚೇಂಬರ) ಸಭೆಯು ಸೇರಿತ್ತು:

ಬಂದಿದ್ದವರು.

ಶ್ರೀ ವಿ. ಪಿ. ಮಾಧವರಾವ್, ಸಿ. ಐ. ಇ., ದಿವಾನ (ಅಧ್ಯಕ್ಷರು).

ಉದ್ಯೋಗಪ್ರಯುಕ್ತವಾದ ಸಭಿಕರು.

,, ಟಿ. ಆನಂದರಾವ, ಬಿ. ಎ., (ಮೊದಲನೆಯ ಕೌನ್ಸಿಲರ).
,, ಕೆ. ಪಿ. ಪುಟ್ಟಣ್ಣಶೆಟ್ಟಿ, (ಎರಡನೆಯ ಕೌನ್ಸಿಲರ).

ಹೆಚ್ಚಿನ ಸಭಿಕರು ಸರ್ಕಾರಿ.

,, ಎ. ರಂಗಸ್ವಾಮ್ಯೆಯ್ಯಂಗಾರ, ಬಿ. ಎ., ಬಿ. ಎಲ್.
,, ಎಚ್. ಜೆ. ಭಾಭಾ, ಎಂ. ಎ.
,, ರಾವ ಬಹದ್ದೂರ, ಎಂ. ಮುತ್ತಣ್ಣ.
,, ಎಂ. ಕಾಂತರಾಜ ಅರಸು, ಬಿ. ಎ.
,, ಎಸ್. ನಾರಾಯಣರಾವ.

ಸರ್ಕಾರಿ ಉದ್ಯೋಗಸ್ಥರಲ್ಲದವರು.

,, ರಾಜಮಂತ್ರ ಪ್ರವೀಣ ಸಿ. ಶ್ರೀನಿವಾಸ್ಯೆಯ್ಯಂಗಾರ.
,, ವಿ. ಪಿ. ನರಸಿಂಹ್ಯೆಯ್ಯಂಗಾರ.
,, ಎಂ. ಸಿ. ರಂಗ್ಯೆಯ್ಯಂಗಾರ, ಬಿ. ಎ.
,, ಬಿ. ನಾಗಪ್ಪ, ಬಾರಿಸ್ಟರ ಅಟ್ ಲಾ.
,, ಸೈಯದ ಅಮೀರ ಹುಸೇನ.

,, ಕೆ. ಮೈಲಾರ ರಾವ್, ಬಿ. ಎ., ಬಿ. ಎಲ್. (ಸೆಕ್ರೆಟರಿ).

ಅಧ್ಯಕ್ಷರು.

ಸಭಿಕರಿರಾ,

ಈ ಅಪರಾಹ್ನದ ಕ್ರಮವಾದ ಕೆಲಸವನ್ನು ಉಪಕ್ರಮಿಸುವುದಕ್ಕೆ ಮುಂಚೆ ಹೊಸದಾಗಿ ಏರ್ಪಟ್ಟ ಮೈಸೂರು ನ್ಯಾಯವಿಧಾಯಕ ಸಭೆಯು ಈ ಮೊದಲನೆಯ ಸಂಗಕ್ಕೆ ತಮ್ಮಗಳ ಆಗಮನವನ್ನು ಶ್ರೀಮನ್ಮಹಾರಾಜರವರ ಪರವಾಗಿ ಅಭಿನಂದಿಸಲು ಅಪೇಕ್ಷಿಸುವೆವು. ನಾವು ಈದಿನ ರಾಜ್ಯಭಾರವಹನದ ಈಚೆಗೆ ಈ ಸಂಸ್ಥಾನದಲ್ಲಿ ಕೈಕೊಂಡ ಪರೀಕ್ಷೆಗಳಲ್ಲಿ ಎರಡನೆಯದಾದ ಒಂದು ವಿಶೇಷವಾದ ರಾಜ್ಯವ್ಯವಸ್ಥೆಯ ಪರೀಕ್ಷೆಯ ಪ್ರಾರಂಭದಲ್ಲಿ ಇದೇವೆ. ಕಾಲು ಶತಮಾನಕ್ಕೆ ಪೂರ್ವದಲ್ಲಿ ಉಪಕ್ರಮಿಸಿದ ಪ್ರಜಾ ಪ್ರತಿನಿಧಿ ಸಭೆಯು ಉಪಯುಕ್ತವಾದ ಕೆಲಸವನ್ನು ಮಾಡಿ ಅದರ ಸ್ಥಾಪನೆಯನ್ನು ನ್ಯಾಯವಾದುದೆಂದು ದೃಢೀಕರಿಸುವುದರಿಂದ ಅದು ರಾಜಕೀಯವ್ಯವಸ್ಥೆಯಲ್ಲಿ ಒಂದು ನಿಯತವಾದ ಸ್ಥಾನವನ್ನು ಹೊಂದಿ ಇದೆ. ಸರ್ಕಾರದವರ ಅತ್ಯಂತ ಮುಖ್ಯವಾದ ಕೆಲಸಗಳಲ್ಲಿ ಒಂದಾದ ವ್ಯವಹಾರವಿಧಿಯನ್ನು ಏರ್ಪಡಿಸುವ ಕೆಲಸದಲ್ಲಿ ಕೆಲ ಸರ್ಕಾರಿ ಉದ್ಯೋಗಸ್ಥರಾದ ಮತ್ತು ಸರ್ಕಾರಿ ಉದ್ಯೋಗಸ್ಥರಲ್ಲದ ದೊಡ್ಡ ಮನುಷ್ಯರ ಸಹಾಯವನ್ನು ಬರಮಾಡಿಕೊಳ್ಳುವುದರ ಮೂಲಕ ನಾವು ಈಗ ಎರಡನೆಯ ಸಲ ಆಡಳಿತದ ಅಸ್ತಿಭಾರವನ್ನು ವಿಸ್ತರಿಸಿ ಭದ್ರಪಡಿಸುತ್ತಿದೇವೆ.

2 ತಮ್ಮಗಳಿಗೆ ತಿಳಿದಂತೆ ನ್ಯಾಯ ವಿಧಾಯಕ ಸಭೆಯಿಂದ ನೆರವೇರಬಹುದಾದ ಮುಖ್ಯವಾದ ಉದ್ದೇಶಗಳು ಯಾವುವೆಂದರೆ :—

(i) ಜನಗಳು ತಮ್ಮ ಕೊರತೆಗಳನ್ನೂ ಅಪೇಕ್ಷೆಗಳನ್ನೂ ಅವರಿಗೆ ಪ್ರತಿನಿಧಿಗಳಾಗಿರಲು ಯೋಗ್ಯರಾಗಿರುವ ಸಭಿಕರ ಮೂಲಕ ಸರ್ಕಾರಕ್ಕೆ ತಿಳಿಸಲು ಅನುಕೂಲವಾಗುವಂತೆ ಮಾಡುವುದು.

(ii) ನ್ಯಾಯ ವಿಧಾನಕ್ಕೆ ಸಂಬಂಧಪಟ್ಟ ಏರ್ಪಾಡುಗಳಿಗೆ ಮೂರು ಮಂದಿ ಸಭಿಕರುಳ್ಳ ಸಾಧಾರಣವಾದ ಎಗ್ಸಿಕ್ಯೂಟಿವ್ ಅಥವಾ ಕಾರ್ಯನಿರ್ವಾಹಕದ ಸಭೆಯಲ್ಲಿ ಸಾಧ್ಯವಾಗುವುದಕ್ಕಿಂತ ಅಧಿಕ ಪ್ರಯೋಜನವು (ಸರ್ಕಾರಿ ಉದ್ಯೋಗಸ್ಥರಾದ ಮತ್ತು ಸರ್ಕಾರಿ ಉದ್ಯೋಗಸ್ಥರಲ್ಲದ) ಅಧಿಕಸಂಖ್ಯಾತರಾದ ಸಮರ್ಥರು ನಾನಾಮುಖವಾಗಿ ಸ್ವತಃ ಚರ್ಚಿಸುವುದರ ಮೂಲಕ ಉಂಟಾಗುವಂತೆ ಮಾಡುವುದು.

(iii) ನ್ಯಾಯಗಳನ್ನೂ (ಕಾನೂನುಗಳನ್ನೂ) ರೆಗ್ಯುಲೇಷನುಗಳನ್ನೂ ಏರ್ಪಡಿಸುವುದರಲ್ಲಿ ಆಲೋಚನೆ ಹೇಳಲು ಕಾರ್ಯತಃ ಅನುಭವದಿಂದಲೂ ಜನಗಳ ಪರಿಚಯದಿಂದಲೂ ಯೋಗ್ಯತೆಯನ್ನು ಹೊಂದಿದ (ಸರ್ಕಾರಿ ಉದ್ಯೋಗಸ್ಥರು, ಲಾಯರುಗಳು ಅಥವಾ ಇತರರು) ದೊಡ್ಡ ಮನುಷ್ಯರ ಸಹಾಯವನ್ನು ಹೊಂದುವುದು.

(iv) ಪ್ರತಿ ಏರ್ಪಾಟನ್ನೂ ನಿಯುಕ್ತ ಸಮಾಜಕ್ಕೆ ಕಳುಹಿಸಿ ತನ್ಮೂಲಕ ಪರಿಶೋಧಿಸಬೇಕಾಗಿರುವುದರಿಂದ ಪ್ರತಿ ಏರ್ಪಾಟಿನ ವಿವರಗಳನ್ನೂ ಚೆನ್ನಾಗಿ ಆಲೋಚಿಸಲು ಅನುಕೂಲಪಡಿಸುವುದು.

(v) ಇದಲ್ಲದೆ, ನ್ಯಾಯವಿಧಾನದ ಏರ್ಪಾಟುಗಳನ್ನು ನಾನಾಮುಖವಾಗಿ ಧಾರಾಳವಾಗಿಯೂ ಸ್ವತಂತ್ರವಾಗಿಯೂ ಚರ್ಚಿಸಲು ಅವಶ್ಯವಾಗಿರುವಷ್ಟರ ಮಟ್ಟಿಗೆ ಅವುಗಳನ್ನು ಪ್ರಕಟಿಸುವುದು.

3. ನ್ಯಾಯವಿಧಾಯಕ ಸಭೆಯನ್ನು ಏರ್ಪಡಿಸುವುದರಲ್ಲಿ ಸರ್ಕಾರದವರು ಅನವಶ್ಯಕವಾದ ಜಾಗರೂಕತೆಯಿಂದ ಪ್ರವರ್ತಿಸಿ ಇದಾರೆಂಬುವ ; ಬ್ರಿಟಿಷ್ ಇಂಡಿಯಾದಲ್ಲಿ ಇಂಥಾ ಸಭೆಗಳಿಗೆ ಕೊಟ್ಟಿರುವ-ಚರ್ಚೆ ನಡೆಯುತ್ತಿರುವಾಗ ಪ್ರಶ್ನೆ ಮಾಡುವ ಮತ್ತು ಬಡ್ಜೆಟ್ ಎಂಬರೆ ಆಯವ್ಯಯದ ಅಂದಾಜು ಪಟ್ಟಿಯನ್ನು ಕುರಿತು ಚರ್ಚಿಸುವ ಅಧಿಕಾರವೇ ಮೊದಲಾದ ಕೆಲವು ವಿಶೇಷಾಧಿಕಾರಗಳನ್ನು ಮೈಸೂರು ನ್ಯಾಯವಿಧಾಯಕ ಸಭೆಗೆ ಕೊಡಲಿಲ್ಲವೆಂಬುವ ; ಮತ್ತು ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರ ಚುನಾವಣೆಯನ್ನು ಸಂಪೂರ್ಣವಾಗಿ ಸರ್ಕಾರದವರು ತಮ್ಮ ಕೈಯಲ್ಲಿ ಇಟ್ಟುಕೊಂಡಿದಾರೆಂಬುವ ಕಾರಣದ ಮೇಲೆ ಈ ಸಭೆಯ ಏರ್ಪಾಡಿನಿಂದ ಕಾರ್ಯತಃ ಆಗುವ ಪ್ರಯೋಜನದಲ್ಲಿ ಸಂಶಯವುಳ್ಳ ಅಭಿಪ್ರಾಯವು ಕೆಲವು ಕಡೆಗಳಲ್ಲಿ ಇರುವುದನ್ನು ನಾವು ಬಲ್ಲೆವು.

4. ಈ ದೋಷಾರೋಪಣೆಗಳಲ್ಲಿ—ಮೈಸೂರಿನ ವಿದ್ಯಮಾನಗಳಲ್ಲಿ ಚರ್ಚೆ ನಡೆಯುತ್ತಿರುವಾಗ ಪ್ರಶ್ನೆಮಾಡುವ ಅಧಿಕಾರವು ಬಹಳ ಮಟ್ಟಿಗೆ ಅನವಶ್ಯವಾಗಿದೆ ಎಂಬುವ ಮತ್ತು ಈಗಿನ ಸ್ಥಿತಿಯಲ್ಲಿ ಸಭಿಕರನ್ನು ಶ್ರೀಮನ್ಮಹಾರಾಜರವರು ಚುನಾಯಿಸುವುದೇ ಉತ್ತಮವಾದುದು ಎಂಬುವ ಸಂಗತಿಯನ್ನು ತಿಳಿಯಿರುವಂತೆ ತೋರಲಿಲ್ಲ.

5. ಈ ಅಂಶಗಳನ್ನು ಕುರಿತು ಪ್ರಸ್ತಾಪಿಸುವುದಕ್ಕೆ ಮುಂಚೆ, ಮೈಸೂರು ನ್ಯಾಯವಿಧಾಯಕ ಸಭೆಯಮೇಲಿನ ಮತ್ತೊಂದು ದೋಷಾರೋಪಣೆಯನ್ನು ಕುರಿತು ಇಲ್ಲಿ ಮಾತನಾಡಬಹುದು. ಸಭೆಯು ಮೊದಲು ಏರ್ಪಟ್ಟ ರೀತಿಯಲ್ಲಿ ಕೆಲವು ಪಂಗಡದವರ ಮತ್ತು ಕೆಲವು ಸ್ವಾರ್ಥ ಉಳ್ಳವರ ಪ್ರತಿನಿಧಿಗಳು ಈ ಸಭೆಯಲ್ಲಿ ಸೇರಿಲ್ಲವೆಂದು ಕೆಲವರು ಹೇಳಿದರು. ಸಂಸ್ಥಾನದಲ್ಲಿನ ನಾನಾ ಪಂಗಡದವರ ಮತ್ತು ಸ್ವಾರ್ಥಉಳ್ಳವರ ಪ್ರತಿನಿಧಿತನವೇ ಸಂಪೂರ್ಣವಾಗಿ ಅಥವಾ ಮುಖ್ಯವಾಗಿರುವ ಆಧಾರದ ಮೇಲೆ ಏರ್ಪಟ್ಟ ಸಭೆಯು (ಇದರಲ್ಲಿ ಕಾರ್ಯತಃ ಬಹಳ ಕಷ್ಟಗಳಿರುವಂತೆ ಕಂಡುಬಂದಿದೆ) ಒಂದು ಕಡೆಯಲ್ಲಿ ಕಾನೂನುಗಳನ್ನು ಏರ್ಪಡಿಸುವುದರಲ್ಲಿ ಸರ್ಕಾರದವರಿಗೆ ಸಹಾಯ ಮಾಡಲು ಮತ್ತೊಂದು ಕಡೆಯಲ್ಲಿ ಜನಗಳ ಅಭಿಪ್ರಾಯಗಳನ್ನೂ ಉದ್ದೇಶಗಳನ್ನೂ ತಿಳಿದುಕೊಂಡು ಸರಿಯಾಗಿ ತಿಳಿಸಲು ಸಾಮರ್ಥ್ಯದಿಂದಲೂ ವಿದ್ಯೆಯಿಂದಲೂ ಯೋಗ್ಯತೆಯನ್ನು ಹೊಂದಿದ ಜನಗಳನ್ನು ಆರಿಸಿ ಏರ್ಪಡಿಸಿದ ಸಭೆಯಷ್ಟು ವಿಶೇಷ ಕಾರ್ಯಸಾಧಕವಾದುದಲ್ಲವೆಂದು ಸರ್ಕಾರದವರು ಅಭಿಪ್ರಾಯಪಡುತ್ತಾರೆ. ಮಾಡಬೇಕೆಂದು ಉದ್ದೇಶಿಸಿರುವ ನ್ಯಾಯ ಅಥವಾ ಕಾನೂನಿಗೆ ಸಂಬಂಧಿಸುವ ಪ್ರತ್ಯೇಕವಾದ ಪಂಗಡದ ಅಥವಾ ಸಾರ್ಥಉಳ್ಳವರ ಪ್ರತಿನಿಧಿಗಳು ನಿಯುಕ್ತ ಸಮಾಜದಲ್ಲಿ ಸೇರಿರುವುದಕ್ಕಾಗಿ ಆಗಲೇ ನಿಯಮ ಮಾಡಿದೆ.

6 ಜನಗಳು ಈಗಿರುವ ಸ್ಥಿತಿಯಲ್ಲಿ ಸರ್ಕಾರದ ಉದ್ಯೋಗವೂ, ವಿದ್ಯೆಯು ಬೇಕಾಗಿರುವ ಕೆಲವು ಜೀವಿಕೆಗಳೂ—ತತ್ಕಾಪಿ ಲಾಯರು ಕೆಲಸವೂ—ಈ ದೇಶದಲ್ಲಿರುವ ಬುದ್ಧಿವಂತರಲ್ಲಿಯೂ ಸಮರ್ಥರಲ್ಲಿಯೂ ಬಹಳ ಮಂದಿಗಳನ್ನು ಆಕರ್ಷಿಸುತ್ತವೆ;

[ಅಧ್ಯಕ್ಷರು.]

ಮತ್ತು ಈ ವಿದ್ಯಮಾನಗಳು ಬಹಳಮಟ್ಟಿಗೆ ಬದಲಾಯಿಸುವವರೆಗೂ ಜನಗಳ ಪ್ರತಿನಿಧಿಗಳನ್ನು ಮೇಲ್ಕಂಡ ತರಗತಿಯ ಜನಗಳಿಂದ ಬಹಳಮಟ್ಟಿಗೆ ಚುನಾಯಿಸಿದ ಹೊರತು ಕಾರ್ಯಸಾಧನೆಯಾಗುವುದಿಲ್ಲ, ಎಂಬುವುದು ಸರ್ವರಿಗೂ ತಿಳಿದೇ ಇದೆ.

7. ಈಗ-ಚರ್ಚೆ ನಡೆಯುವಾಗ ಪ್ರಶ್ನೆ ಹಾಕುವ ಮತ್ತು ಬಡ್ಜೆಟ್ಟು ಅಥವಾ ಆಯವ್ಯಯದ ಅಂದಾಜು ಪಟ್ಟಿಗಳನ್ನು ಕುರಿತು ಚರ್ಚಿಸುವ ಅಧಿಕಾರಗಳೋ ಎಂದರೆ ಬ್ರಿಟಿಷ್ ಇಂಡಿಯಾವಿನಲ್ಲಿರುವ ನ್ಯಾಯವಿಧಾಯಕ ಸಭೆಗಳಿಗೆ ಮೇಲ್ಕಂಡ ಅಧಿಕಾರಗಳನ್ನು ಕೊಟ್ಟಿರುವುದು ನಿಜವೆ, ಆದರೆ ಈ ಸಭೆಗಳು ಬಹಳಕಾಲವಿದ್ದ ಮೇಲೆ ಅವುಗಳಿಗೆ ಆ ಅಧಿಕಾರಗಳನ್ನು ಕೊಡಲಾಯಿತು ಮತ್ತು ಇಂಥಾ ವಿಷಯಗಳಲ್ಲಿ ಮೈಸೂರಿನಂಥಾ ದೇಶೀಯ ಸಂಸ್ಥಾನವು ಬ್ರಿಟಿಷ್ ಇಂಡಿಯಾ ಗವರ್ನಮೆಂಟಿಗಿಂತ ಇನ್ನೂ ಎಷ್ಟು ಜಾಗರೂಕತೆಯಿಂದ ಪ್ರವರ್ತಿಸಬೇಕೋ ಅದನ್ನು ನೀವು ಚೆನ್ನಾಗಿ ಅರಿಯಬಹುದು. ಆದರೆ, ನಾವು ಆಗಲೇ ಹೇಳಿದಂತೆ ಈ ಅಧಿಕಾರಗಳನ್ನು ಕೊಡುವುದಕ್ಕೆ ಬ್ರಿಟಿಷ್ ಇಂಡಿಯಾದ ಸಭೆಯ ವಿಷಯದಲ್ಲಿ ಇರುವಷ್ಟು ಅಗತ್ಯವು ಮೈಸೂರು ನ್ಯಾಯವಿಧಾಯಕ ಸಭೆಯ ವಿಷಯದಲ್ಲಿ ಇಲ್ಲ. ಮೈಸೂರಿನಲ್ಲಿ ಆಗಲೇ ಒಂದು ಪ್ರಜಾಪ್ರತಿನಿಧಿ ಸಭೆಯು ಇದೆ. ಅದರಲ್ಲಿ ಪ್ರಜೆಗಳಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ಆಡಳಿತದ ಏರ್ಪಾಡುಗಳನ್ನೂ ಪ್ರಜಾ ಕ್ಷೇಮಕ್ಕೆ ಸಂಬಂಧಪಟ್ಟ ವಿಷಯಗಳನ್ನೂ ಕುರಿತು ಅವರಿಗೆ ಅವಶ್ಯವೆಂದು ತೋರಬಹುದಾದ ಯಾವ ಅರಿಕೆಯನ್ನಾದರೂ ಧಾರಾಳವಾಗಿ ಮಾಡಿ ಸರ್ಕಾರದವರ ಅಭಿಪ್ರಾಯವನ್ನು ತಿಳಿದುಕೊಳ್ಳಬಹುದು; ಮತ್ತು ಸಭೆಯು ಪ್ರಾರಂಭವಾದ ಕಾಲ ಮೊದಲ್ಗೊಂಡೇ ಅದು ಈ ಸ್ವಾತಂತ್ರ್ಯವನ್ನು ಎಷ್ಟು ಧಾರಾಳವಾಗಿ ಉಪಯೋಗಿಸಿಕೊಂಡಿದೆಯೋ ಆ ವಿಷಯವು ಮೈಸೂರು ದೇಶಕ್ಕೆ ಮಾತ್ರವಲ್ಲದೆ ಇಂಡಿಯಾ ದೇಶಕ್ಕೆಲ್ಲಾ ಸಾಮಾನ್ಯವಾಗಿ ತಿಳಿದೇ ಇದೆ. ವಸ್ತುತಃ ಸಭೆಯವರು ಈ ಸ್ವಾತಂತ್ರ್ಯವನ್ನು ಎಷ್ಟು ಹೆಚ್ಚಾಗಿ ಪರಿಗಣಿಸಿದಾರೆ ಎಂದರೆ, ಕಳೆದ ಸಲ ಸಭೆಯು ಸೇರಿ ನ್ಯಾಯವಿಧಾಯಕ ಸಭೆಯನ್ನು ಏರ್ಪಡಿಸುವ ವಿಷಯವು ಆಲೋಚನೆಯಲ್ಲಿದ್ದಾಗ ನ್ಯಾಯವಿಧಾಯಕ ಸಭೆಯ ಏರ್ಪಾಟಿನಿಂದ ಪ್ರಜಾಪ್ರತಿನಿಧಿ ಸಭೆಯು ಹೊಂದಿರುವ ಅಮೂಲ್ಯವಾದ ಸ್ವಾತಂತ್ರ್ಯವನ್ನು ವಾಪಸು ತೆಗೆದುಕೊಳ್ಳುವುದಿಲ್ಲ ಎಂಬ ಅಂಶವನ್ನು ದೃಢವಾಗಿ ತಿಳಿದುಕೊಳ್ಳಲು ಪ್ರಜಾಪ್ರತಿನಿಧಿಗಳು ಉತ್ಸುಕರಾಗಿದ್ದರು.

8. ಸಭಿಕರನ್ನು (ಮೆಂಬರುಗಳನ್ನು) ಆರಿಸುವ ವಿಷಯದಲ್ಲಿ—ಆರಿಸಲು ಅರ್ಹರಾಗಿರುವಂತೆ ಕ್ರಮವಾಗಿ ನಿಶ್ಚಯಿಸಲ್ಪಟ್ಟ ಜನಗಳಿಂದ ಆರಿಸಲ್ಪಟ್ಟ ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು ಇರುವುದು ಅವಶ್ಯವಿಲ್ಲವೆಂದು ನಾವು ಎಷ್ಟುಮಾತ್ರವೂ ಹೇಳುವುದಿಲ್ಲ. ಮತ್ತು ಅದೂರವಾದ ಕಾಲದಲ್ಲಿಯೇ ಶ್ರೀಮನ್ಮಹಾರಾಜರವರು ಈ ಹೆಚ್ಚು ಸ್ವಾತಂತ್ರ್ಯವನ್ನು ಪ್ರಜೆಗಳಿಗೆ ಕೊಡಲು ಅನುಕೂಲಿಸುವುದರಲ್ಲಿ ಏನೂ ಸಂದೇಹವಿಲ್ಲ. ನ್ಯಾಯವಿಧಾಯಕ ಸಭೆಯ ರೆಗ್ಯುಲೇಷನಿನ ಸಂಗಡ ಅದಕ್ಕೆ ವಿವರವಾಗಿ ಪ್ರಕಟಿಸಿದ ಸರ್ಕಾರಿ ಹುಕುಮನ್ನು ನೋಡಿದರೆ—ಪ್ರಜಾಪ್ರತಿನಿಧಿಗಳ ಸಭೆಯಂಥಾ ಅಂಗೀಕೃತವಾದ ಸಾರ್ವಜನಿಕ ಸಂಘಗಳಿಗೆ ನ್ಯಾಯವಿಧಾಯಕ ಸಭೆಯಲ್ಲಿ ಕೆಲವು ಸಭಿಕರನ್ನು ಆರಿಸಲು ಸ್ವಾತಂತ್ರ್ಯ ಕೊಡೋಣವು ಕಾಲಕ್ರಮೇಣ ಆಗತಕ್ಕ ವಿಷಯವೆಂದೂ, ಮತ್ತು ಆ ನಿಯಮವನ್ನು ಆಚರಣೆಯಲ್ಲಿ ತರಲು ಯುಕ್ತತಮವಾದ ರೀತಿಯ ವಿಷಯದಲ್ಲಿ ಸಾಕಾದಷ್ಟು ಅನುಭವವನ್ನು ಹೊಂದುವ ವರೆಗೆ ಮಾತ್ರ ಅದನ್ನು ನಿಲ್ಲಿಸಿ ಇದೆ ಎಂದು ಗೊತ್ತಾಗುವುದು. ಈ ವಿಷಯದಲ್ಲಿ ನಿಬಂಧನೆಗಳನ್ನು ಮಾಡುವ ಅಧಿಕಾರವನ್ನು ಸದರಿ ರೆಗ್ಯುಲೇಷನಿನ 5ನೆ ಪ್ರಕರಣದಿಂದ ಸ್ಪಷ್ಟವಾಗಿ ಉಳಿಸಿಕೊಂಡಿದೆಯೆಂದು ನೀವು ನೋಡಬಹುದು. ಆದರೆ ಈಗಿನ ವಿದ್ಯಮಾನಗಳಲ್ಲಿ ಪ್ರಜಾಪ್ರತಿನಿಧಿಗಳ ಸಭೆಯಾಗಲಿ ಸ್ಥಳೀಯ ಸಂಘಗಳಾಗಲಿ ಸಭಿಕರನ್ನು ಆರಿಸುವುದಕ್ಕಿಂತ ಶ್ರೀಮನ್ಮಹಾರಾಜರು ಅವರನ್ನು ನೇಮಕಮಾಡುವ ಕ್ರಮವು ಜನಗಳ ಕಾರ್ಯಸಾಧಕವಾದ ಪ್ರತಿನಿಧಿಗಳನ್ನು ಸಂಪಾದಿಸುವುದಕ್ಕೆ ವಿಶೇಷವಾಗಿ ತಕ್ಕದ್ದಾಗಿಲ್ಲವೋ ಎಂಬುವುದನ್ನು ನಾವು ಅರಿಯೆವು.

9. ಇದಲ್ಲದೆ ಈಗ ನೇಮಕ ಮಾಡಿರುವ ಸರ್ಕಾರಿ ನೌಕರರಲ್ಲದ ಸಭಿಕರಲ್ಲಿ ಬಹಳ ಮಂದಿ ಸರ್ಕಾರದ ಕೆಲಸದಿಂದ ನಿವೃತ್ತರಾದ ಉದ್ಯೋಗಸ್ಥರು ಎಂದು ಆಕ್ಷೇಪಣೆ ಮಾಡಲ್ಪಟ್ಟಿತು. ಇದನ್ನು ಒಂದು ಅಯೋಗ್ಯತೆಯಾಗಿ ಎಷ್ಟು ಮಾತ್ರವೂ ಭಾವಿಸದೆ ಸಂಸ್ಥಾನದ ಉದ್ಯೋಗದಿಂದ ನಿವೃತ್ತರಾಗಿ ಯೋಗ್ಯವಾದ ವಿಶ್ರಾಂತಿಯನ್ನು ಆರ್ಜಿಸಿ ತಮ್ಮ ಅನುಭವದ ಮತ್ತು ಉಪದಿಷ್ಟವಾದ ಜ್ಞಾನದ ಪ್ರಯೋಜನವನ್ನು ನ್ಯಾಯವಿಧಾಯಕ ಸಭೆಯ ಕೈವಶ ಮಾಡಲು ಅಷ್ಟು ಶೀಘ್ರವಾಗಿ ಸಮ್ಮತಿಸಿದ, ದೊಡ್ಡ ಮನುಷ್ಯರು ಸಭಿಕರಾಗಿ ನ್ಯಾಯವಿಧಾಯಕ ಸಭೆಗೆ ಭಾಗ್ಯವಶಾತ್ ಸಿಕ್ಕಿದರೆಂದು ನಾವು ಎಣಿಸುತ್ತೇವೆ. ಅವರ ಪ್ರತಿನಿಧಿತನದ ಸ್ವಭಾವವನ್ನು ಯಾರೂ ಸಂದೇಹಿಸುವುದಕ್ಕಾಗುವುದಿಲ್ಲ. ಯಾತಕ್ಕೆಂದರೆ, ಅವರು ಈ ದೇಶದ ಪ್ರಜೆಗಳಲ್ಲಿ ಸೇರಿದವರಾಗಿರುವುದರಿಂದಲೂ ಈ ದೇಶದಲ್ಲಿ ವಾಸಮಾಡುವುದರಿಂದಲೂ ಜಮೀನುಗಳನ್ನೂ ಇತರ ಸ್ವತ್ತುಗಳನ್ನೂ ಉಂಟಾಗಿರುವುದರಿಂದಲೂ ಈ ಸಂಸ್ಥಾನದ ಸಂಸ್ಥಿತಿಯ, ಒಳ್ಳೇ ಆಡಳಿತದ, ಮತ್ತು ಪ್ರಜೆಗಳ ಸೌಖ್ಯದ, ಲೋಪದಲ್ಲಿ ಇತರ ಜನಗಳಿಗೆ ಎಷ್ಟು ನಷ್ಟವೋ ಅಷ್ಟೇ ನಷ್ಟವು ಇವರಿಗೂ ಆಗುವುದು. ಅವರು ಒಳ್ಳೆಯ ನ್ಯಾಯಗಳನ್ನು (ಕಾನೂನುಗಳನ್ನು) ಮಾಡಲು ಸಹಾಯ ಮಾಡಿದರೆ ಇತರ ಪ್ರಜೆಗಳೊಂದಿಗೆ ಅಂಥಾ ನ್ಯಾಯಗಳಿಂದುಂಟಾದ ಸೌಖ್ಯಗಳಲ್ಲಿ ಅವರೂ ಭಾಗಿಗಳಾಗುವರು; ಹಾಗಿಲ್ಲದೆ ಅವರ ಸಹಾಯದಿಂದ ವಿಧಿಸಿದ ನ್ಯಾಯಗಳು ಕೆಟ್ಟವಾಗಿಯೂ ಪ್ರಜೆಗಳ ಸ್ವಾತಂತ್ರ್ಯಕ್ಕೆ ಕುಂದಕವಾಗಿಯೂ ಪ್ರಜೆಗಳಿಗೆ ಬಾಧಕವಾಗಿಯೂ ಇದ್ದರೆ ಸಂಸ್ಥಾನದ ಇತರ ಪ್ರಜೆಗಳೊಂದಿಗೆ ಈ ಅನಿಷ್ಟಗಳಲ್ಲಿ ಅವರೂ ಸಮಭಾಗಿಗಳಾಗಬೇಕು. ಅವರಿಗೆ ಪ್ರಜೆಗಳ ಪ್ರತಿನಿಧಿಗಳಾಗಿರಲು ಎಲ್ಲಾ ಬಾಧ್ಯತೆಯೂ ಉಂಟು ಮತ್ತು ಅಂಥವರಾಗಿರಲು, ಆರಿಸುವಿಕೆಯ ಕ್ರಮದಲ್ಲಿ ಆರಿಸಲು ಅರ್ಹರಾದ ಯಾವ ಬುದ್ಧಿವಂತರ ಸಮ್ಮತಿಗಳನ್ನಾದರೂ ಹೊಂದುವರು.

10. ಇಂಡಿಯಾ ದೇಶೀಯರಲ್ಲಿ ಮುಖಂಡರಾದವರು ಇಂಡಿಯಾ ದೇಶದ ಆಡಳಿತದ ತಿದ್ದುಪಾಟಿನ ವಿಷಯವಾಗಿ ಒತ್ತಿ ಹೇಳಿದ ಒಂದಾನೊಂದು ವಿಷಯ ಯಾವುದೆಂದರೆ: ಅಮೂಲ್ಯವಾದ ಅನುಭವವನ್ನೂ ಆಡಳಿತದಲ್ಲಿ ಕೌಶಲವನ್ನೂ ರೈತರ ಖರ್ಚಿನಲ್ಲಿ ಹೊಂದಿದ ದೊಡ್ಡ ಉದ್ಯೋಗಸ್ಥರು ಕೆಲಸದಿಂದ ನಿವೃತ್ತರಾದಾಗ ಈ ಅನುಭವ ಕೌಶಲಗಳೆಲ್ಲವನ್ನೂ ಈ ದೇಶದಿಂದ ತೆಗೆದುಕೊಂಡು ಹೊರಟು ಹೋಗುತ್ತಾರೆ. ಮೈಸೂರು ದೇಶೀಯರು ಬ್ರಿಟಿಷ್ ಇಂಡಿಯಾ ದೇಶೀಯರಿಗಿಂತ ಅಧಿಕವಾದ ಭಾಗ್ಯವುಳ್ಳವರಾಗಿದಾರೆ,

[ಮಿ॥ ಟಿ. ಆನಂದರಾವ್.]

ಮಾಜವವರಿಂದ ಪರಿಶೋಧನೆ ಮಾಡಿಸಿ ಅದರ ನಿಯಮಗಳನ್ನು ಸ್ಥಳೀಯ ವಿದ್ಯಮಾನಗಳಿಗೆ ಬೇಕಾದ ಬದಲಾವಣೆಗಳೊಡನೆ ಜಾರಿಗೆ ತರಬೇಕೆಂದೂ ಮತ್ತು ಲ್ಯಾಂಡ್ ರೆವಿನ್ಯೂ ಕೋಡನ್ನು ಜಾರಿಗೆ ತಂದ ಮೇಲ ಸದರಿ ಆಕ್ಟನ್ನು ಜಾರಿಗೆ ತರಬೇಕಾದುದು ಸಹಜವೆಂದೂ ಹೇಳಿದರು.

6. ಹಿಂದಿನ ದೀವಾನ್ ಸರ್. ಕೆ. ಶೇಷಾದ್ರಿ ಅಯ್ಯರವರು ಈ ವಿಷಯವನ್ನು ಆಲೋಚಿಸಿ 1894ನೆ ಜುಲೈ 4ರಲ್ಲಿ "ಇದು ತೊಡಕಾದ ಆಕ್ಟಾಗಿರುವುದರಿಂದ ಇದನ್ನು ಈ ಸೀಮೆಗೆ ಜಾರಿಗೆ ತರುವುದು ಅವಶ್ಯವಿಲ್ಲ. ಆದುದರಿಂದ ಈ ವಿಷಯದಲ್ಲಿ ಇನ್ನೇನೂ ಮಾಡಬೇಕಾಗಿಲ್ಲ. ಅದಕ್ಕೆ ಸಂಬಂಧಪಟ್ಟ ಕಾಗದಗಳನ್ನು ಕಟ್ಟಿಡಬಹುದು." ಎಂದು ಟಿಪ್ಪಣಿ ಬರೆದರು.

7. ಈತನ್ಮಧ್ಯೆ ಗ್ರಾಮ ಉದ್ಯೋಗಸ್ಥರಿಗೆ ಸಂಬಂಧಪಟ್ಟ ವಿರಳವಾದ ಮತ್ತು ಒಂದಕ್ಕೊಂದು ಸಂಬಂಧವಿಲ್ಲದ ಬಹಳ ನಿಬಂಧನೆಗಳೂ ಹುಕುಂಗಳೂ ಹುಟ್ಟಿದುವು. ಈ ಪೈಕಿ ಕೆಲವನ್ನು ಸಂಗ್ರಹಿಸಿ 1900ನೆ ಇಸವಿಯ ರೆವಿನ್ಯೂ ಮ್ಯಾನ್ಯುಯಲ್ ಎಂಬ ಪುಸ್ತಕದ 3ನೆ ಅಧ್ಯಾಯದಲ್ಲಿ ಅಚ್ಚು ಹಾಕಿದೆ. ಇವುಗಳ ಪೈಕಿ ಪಟೇಲ ಶಾನುಭೋಗರ ಮತ್ತು ಚಿಲ್ಲರೆ ಗ್ರಾಮ ನೌಕರರ ಪ್ರೋಟಗಿಯ ನಿಬಂಧನೆಗಳೇ ಮೊದಲಾದುವು ನ್ಯಾಯದ (ಕಾನೂನಿನ) ಬಲವುಳ್ಳವುಗಳಾಗಿವೆ. ಇತರವಾದುವುಗಳು ಕ್ರಮವಾದ ವ್ಯಾಜ್ಯಗಳಲ್ಲಿ, ರೆವಿನ್ಯೂ ಆಫೀಸರುಗಳು ಮಾಡಿದ ತೀರ್ಪುಗಳ ಮೇಲಿನ ಅಪೀಲುಗಳಲ್ಲಿ ಸರ್ಕಾರದವರು ಕೊಟ್ಟ ಹುಕುಂಗಳಾಗಿವೆ, ಮತ್ತು ಬಹಳವಾದುವು ಮಿಸಲೇನಿಯಸ್ ಯಾ ವಿವಿಧ ವಿಷಯಗಳಲ್ಲಿ ಕೊಟ್ಟ ಆಳಿತಕ್ಕೆ ಸಂಬಂಧಪಟ್ಟ ಹುಕುಂಗಳಾದುದರಿಂದ ಕ್ರಮವಾದ ವ್ಯಾಜ್ಯಗಳಲ್ಲಿ ಕೀಳ್ಪಟ್ಟ ಉದ್ಯೋಗಸ್ಥರಿಂದ ಅಸಡ್ಡೆ ಮಾಡಲ್ಪಡುವುದಕ್ಕೆ ಗುರಿಯಾಗಿವೆ. ಮುಖ್ಯವಾಗಿ ಗ್ರಾಮ ಉದ್ಯೋಗಗಳ ಉತ್ತರಾಧಿಕಾರದ ವಿಷಯದಲ್ಲಿ ತೀರ್ಪುಗಳ ಧೋರಣೆಯು ಎಷ್ಟುಮಾತ್ರವೂ ಏಕರೀತಿಯಾಗಿ ಅಥವಾ ನಿಶ್ಚಿತವಾಗಿಲ್ಲದೆ ಹೋದುದರಿಂದ ಪರಸ್ಪರ ವಿರುದ್ಧವಾದ ತೀರ್ಪುಗಳುಂಟಾಗಿ ವ್ಯಾಜ್ಯಗಳಿಗೆ ಅವಕಾಶವಾಗಿದೆ. ಈ ಕಾರಣಗಳಿಂದ ಈ ವಿಷಯದಲ್ಲಿ ಒಂದು ನ್ಯಾಯವನ್ನು (ಕಾನೂನನ್ನು) ಮಾಡುವುದು ಅತ್ಯವಶ್ಯವಾಗಿದೆ. ಕಡೆಯಲ್ಲಿ, ರೆವಿನ್ಯೂ ಆಡಳಿತವು ಸಫಲವಾಗಿ ನಡೆಯಬೇಕಾದರೆ ಗ್ರಾಮ ಉದ್ಯೋಗಸ್ಥರು ಬಹಳ ಮಟ್ಟಿಗೆ ಸಮರ್ಥರಾಗಿರಬೇಕಾದುದರಿಂದ ಗ್ರಾಮ ಉದ್ಯೋಗಗಳನ್ನು ಕ್ರಮಪಡಿಸಲು ಒಂದು ನ್ಯಾಯವನ್ನು (ಕಾನೂನನ್ನು) ಜಾರಿಗೆ ತಂದು ಅವನ್ನು ಸರಿಯಾದ ಆಧಾರದ ಮೇಲೆ ಇಡುವ ಕೆಲಸವನ್ನು ಕಳೆದ ಹತ್ತೊಂಭತ್ತು ವರ್ಷಗಳಿಂದ ರೆವಿನ್ಯೂ ಆಡಳಿತಕ್ಕೆ ಆಧಾರವಾಗಿರುವ ಲ್ಯಾಂಡ್ ರೆವಿನ್ಯೂ ಕೋಡನ್ನು ಜಾರಿಗೆ ತಂದಾದ ಮೇಲೆ ಸಹಜವಾಗಿ ಮಾಡಬೇಕಾಗಿದೆ.

8. 1899ನೆ ಇಸವಿಯ ಡಿಸೆಂಬರ್ ತಿಂಗಳಲ್ಲಿ ಆಗ ಈಸ್ಟರ್ನ್ ಡಿವಿಜನ್ (ಪೂರ್ವಭಾಗದ) ರೆವಿನ್ಯೂ ಕಮಿಷನರಾಗಿದ್ದ (ಈಗ ದೀವಾನರಾಗಿರುವ) ಮಿ॥ ವಿ. ಪಿ. ಮಾಧವರಾಯರು ಈ ವಿಷಯವನ್ನು ಕೈಕೊಂಡು ಅದನ್ನೆಲ್ಲಾ ಪುನರಾಲೋಚನೆ ಮಾಡಬೇಕೆಂದೂ, ಕರ್ನಲ್ ಗ್ರಾಂಟರವರ ಸಂಗಡ ಆಲೋಚನೆ ಮಾಡಿ ಅವಶ್ಯವಾದ ಬದಲಾವಣೆಗಳೊಡನೆ ಬೊಂಬಾಯಿನ ಆಕ್ಟಿನಂತೆ ಒಂದು ಬಿಲ್ಲನ್ನು ಏರ್ಪಡಿಸಬೇಕೆಂದು ಕೇಳಿದರು.

9. ವಂಶಪಾರಂಪರ್ಯವಾದ ಉದ್ಯೋಗಗಳಿಗೆ ಸಂಬಂಧಿಸುವ ಬೊಂಬಾಯಿ ಮತ್ತು ಮದರಾಸಿನ ಆಕ್ಟುಗಳನ್ನು ಪರಿಶೋಧಿಸಿದುದರಲ್ಲಿ ಅನೇಕ ಕಾರಣಗಳಿಂದ ಬೊಂಬಾಯಿನ ಆಕ್ಟು ತಕ್ಕುದಾಗಿಲ್ಲವೆಂದು ಕಂಡುಬಂತು. ಅವುಗಳಲ್ಲಿ ಮುಖ್ಯವಾದ ಕಾರಣಗಳು ಯಾವುವೆಂದರೆ:—

(i) ಹಳೆಯ ನ್ಯಾಯಗಳು ಸಾಧಾರಣವಾಗಿರುವಂತೆ, ಬೊಂಬಾಯಿ ಆಕ್ಟು—ಆಕ್ಟಿನ ಮೇರೆ ಮಾಡಿದ ನಿಬಂಧನೆಗಳ ಮೂಲಕ ಈಗ ಅನುಕೂಲವಾಗಿ ವ್ಯವಸ್ಥೆ ಮಾಡಬಹುದಾದ, ಬಹು ಚಿಕ್ಕ ವಿಷಯಗಳಿಗೆ ಪ್ರವೇಶಿಸಿತು.

(ii) ಬೊಂಬಾಯಿ ಆಕ್ಟು ವಂಶ ಪಾರಂಪರ್ಯವಾದ ಉದ್ಯೋಗದ ಸ್ವಾಧೀನತೆಗಾಗಿ ವ್ಯಾಜ್ಯ ತರುವ ಪದ್ಧತಿಯನ್ನು ಅಂಗೀಕರಿಸಲಿಲ್ಲ. ಅಂಥಾ ಪದ್ಧತಿಯು ಮೈಸೂರು ದೇಶದಲ್ಲಿ ಇರುತ್ತಾ ಇದೆ.

(iii) ಬೊಂಬಾಯಿ ಆಕ್ಟಿನಲ್ಲಿ ಪ್ರತಿ ಪಟೇಲ ಶಾನುಭೋಗನ ವಿಷಯದಲ್ಲಿಯೂ ಒಂದು ಕ್ರಮವಾದ ಸೆಟ್ಲ್‌ಮೆಂಟ್ ಯಾ ವ್ಯವಸ್ಥೆಯನ್ನು ಮಾಡುವುದನ್ನು ಯೋಚಿಸಿ ಇದೆ. ಕಮಿಷನ್ ಕಾಲದಲ್ಲಿ ಮೈಸೂರು ಸೀಮೆಯ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಅಂಥಾ ಸೆಟ್ಲ್‌ಮೆಂಟ್ ಮಾಡಲು ಪ್ರಯತ್ನ ನಡೆಯಿತು. ಆದರೆ ಅದರ ಫಲಿತಾಂಶವು ತೃಪ್ತಿಕರವಾಗಿಲ್ಲ.

(iv) ಬೊಂಬಾಯಿ ಆಕ್ಟಿನ ಕೆಲವು ನಿಯಮಗಳು ಮೈಸೂರಿನಲ್ಲಿ ಜಾರಿಯಲ್ಲಿರುವ ನಿಬಂಧನೆ ಅಥವಾ ಪದ್ಧತಿಗೆ ವಿರುದ್ಧವಾಗಿವೆ. ಇದಕ್ಕೆ ದೃಷ್ಟಾಂತವಾಗಿ—ಮೈಸೂರು ಸೀಮೆಯಲ್ಲಿ ಡೆಪ್ಯುಟಿ ಕಮಿಷನರುಗಳಿಗೆ ಕೆಲವು ಸಂದರ್ಭಗಳಲ್ಲಿ ಸರ್ಕಾರದವರ ಮಂಜೂರಾತಿಯನ್ನು ಮುಂದಾಗಿ ಪಡೆಯದೆ ಗ್ರಾಮ ಉದ್ಯೋಗಸ್ಥರನ್ನು ಕೆಲಸದಿಂದ ತಳ್ಳಿಬಿಡುವ ಅಧಿಕಾರವು ಬಹುಕಾಲದಿಂದ ಇದೆ. ಬೊಂಬಾಯಿ ಆಕ್ಟಿನ ಮೇರೆ ಹೀಗಿಲ್ಲ.

10. 1895ನೆ ಇಸವಿಯ 3ನೆಯದಾದ ಮದರಾಸಿನ ವಂಶಪಾರಂಪರ್ಯವಾದ ಗ್ರಾಮ ಉದ್ಯೋಗಗಳ ಆಕ್ಟಿನ ನಿಯಮಗಳು ಸ್ಥಳೀಯ ಪದ್ಧತಿಗೆ ಹೆಚ್ಚಾಗಿ ಅನುಸಾರವಾಗಿಯೂ ಸ್ಥಳೀಯ ಆವಶ್ಯಕತೆಗಳಿಗೆ ತಕ್ಕವಾಗಿಯೂ ಕಂಡುಬಂದುವು.

11. ನ್ಯಾಯವಿಧಾಯಕ ಇಲಾಖೆಯಲ್ಲಿ ಒಂದು ಬಿಲ್ಲು ತದನುಸಾರವಾಗಿ ತಯಾರು ಮಾಡಲ್ಪಟ್ಟಿತು. ಹೀಗೆ ತಯಾರು ಮಾಡುವುದರ ಉದ್ದೇಶವು ಈಗಿನ ಪದ್ಧತಿಯನ್ನು ಬೇರುಸಹಿತ ಕಿತ್ತು ಹಾಕುವ ಒಂದು ಬದಲಾವಣೆಯನ್ನು ಜಾರಿಗೆ ತರುವುದಲ್ಲ, ಆದರೆ, ಗ್ರಾಮ ಉದ್ಯೋಗಸ್ಥರ ಕಾರ್ಯಸಾಧಕತ್ವವನ್ನು ಅಭಿವೃದ್ಧಿಪಡಿಸಲು ಅವಶ್ಯವಾದ ಬದಲಾವಣೆಗಳೊಡನೆ ಮೈಸೂರು ಗ್ರಾಮ ಉದ್ಯೋಗಗಳ ಸಂಪ್ರದಾಯಗಳನ್ನು ಸಾಧ್ಯವಾದ ಮಟ್ಟಿಗೂ ಅವಲಂಬಿಸುವುದೇ ಈ ಬಿಲ್ಲಿನ ಉದ್ದೇಶವಾಗಿದೆ. ಈ ಬಿಲ್ಲಿನ ಮುಖ್ಯವಾದ ಮೂಲತತ್ವಗಳು ಯಾವುವೆಂದರೆ:—

(i) ಈ ಬಿಲ್ಲು ಸರ್ಕಾರಿ ಗ್ರಾಮಗಳಲ್ಲಿಯೂ ಪರಾಧೀನ ಮಾಡಲ್ಪಟ್ಟ ಪ್ರದೇಶಗಳಲ್ಲಿಯೂ ಗ್ರಾಮ ಉದ್ಯೋಗಸ್ಥರಿಗೆ ಇರಬೇಕಾದ ಯೋಗ್ಯತೆಗಳನ್ನು ವಿಧಿಸುತ್ತದೆ ಮತ್ತು ಅವರ ನೇಮಕದ, ಅವರನ್ನು ಕೆಲಸದಿಂದ ತೆಗೆದುಹಾಕುವುದರ ಮತ್ತು ಅವರಿಗೆ ಶಿಕ್ಷೆ ಕೊಡುವ ಅಧಿಕಾರಗಳನ್ನು ಗೊತ್ತು ಮಾಡುತ್ತದೆ.

[ಅಧ್ಯಕ್ಷರು.]

ಮತ್ತು ಈ ವಿದ್ಯಮಾನಗಳು ಬಹಳಮಟ್ಟಿಗೆ ಬದಲಾಯಿಸುವವರೆಗೂ ಜನಗಳ ಪ್ರತಿನಿಧಿಗಳನ್ನು ಮೇಲ್ಕಂಡ ತರಗತಿಯ ಜನಗಳಿಂದ ಬಹಳಮಟ್ಟಿಗೆ ಚುನಾಯಿಸದ ಹೊರತು ಕಾರ್ಯಸಾಧನೆಯಾಗುವುದಿಲ್ಲ, ಎಂಬುವುದು ಸರ್ವರಿಗೂ ತಿಳಿದೇ ಇದೆ.

7. ಈಗ ಚರ್ಚೆ ನಡೆಯುವಾಗ ಪ್ರಶ್ನೆ ಹಾಕುವ ಮತ್ತು ಬಡ್ಜೆಟ್ಟು ಅಥವಾ ಆಯವ್ಯಯದ ಅಂದಾಜು ಪಟ್ಟಿಗಳನ್ನು ಕುರಿತು ಚರ್ಚಿಸುವ ಅಧಿಕಾರಗಳೋ ಎಂದರೆ ಬ್ರಿಟಿಷ ಇಂಡಿಯಾವಿನಲ್ಲಿರುವ ನ್ಯಾಯವಿಧಾಯಕ ಸಭೆಗಳಿಗೆ ಮೇಲ್ಕಂಡ ಅಧಿಕಾರಗಳನ್ನು ಕೊಟ್ಟಿರುವುದು ನಿಜವೆ, ಆದರೆ ಈ ಸಭೆಗಳು ಬಹಳಕಾಲವಿದ್ದಮೇಲೆ ಅವುಗಳಿಗೆ ಆ ಅಧಿಕಾರಗಳನ್ನು ಕೊಡಲಾಯಿತು ಮತ್ತು ಇಂಥಾ ವಿಷಯಗಳಲ್ಲಿ ಮೈಸೂರಿನಂಥಾ ದೇಶೀಯ ಸಂಸ್ಥಾನವು ಬ್ರಿಟಿಷ ಇಂಡಿಯಾ ಗವರ್ನಮೆಂಟಿಗಿಂತ ಇನ್ನೂ ಎಷ್ಟು ಜಾಗರೂಕತೆಯಿಂದ ಪ್ರವರ್ತಿಸಬೇಕೋ ಅದನ್ನು ನೀವು ಚೆನ್ನಾಗಿ ಅರಿಯಬಹುದು. ಆದರೆ, ನಾವು ಆಗಲೇ ಹೇಳಿದಂತೆ ಈ ಅಧಿಕಾರಗಳನ್ನು ಕೊಡುವುದಕ್ಕೆ ಬ್ರಿಟಿಷ ಇಂಡಿಯಾದ ಸಭೆಯ ವಿಷಯದಲ್ಲಿ ಇರುವಷ್ಟು ಅಗತ್ಯವು ಮೈಸೂರು ನ್ಯಾಯವಿಧಾಯಕ ಸಭೆಯ ವಿಷಯದಲ್ಲಿ ಇಲ್ಲ. ಮೈಸೂರಿನಲ್ಲಿ ಆಗಲೇ ಒಂದು ಪ್ರಜಾಪ್ರತಿನಿಧಿ ಸಭೆಯು ಇದೆ. ಅದರಲ್ಲಿ ಪ್ರಜೆಗಳಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ಆಡಳಿತದ ಏರ್ಪಾಡುಗಳನ್ನೂ ಪ್ರಜಾ ಕ್ಷೇಮಕ್ಕೆ ಸಂಬಂಧಪಟ್ಟ ವಿಷಯಗಳನ್ನೂ ಕುರಿತು ಅವರಿಗೆ ಅವಶ್ಯವೆಂದು ತೋರಬಹುದಾದ ಯಾವ ಅರಿಕೆಯನ್ನಾದರೂ ಧಾರಾಳವಾಗಿ ಮಾಡಿ ಸರ್ಕಾರದವರ ಅಭಿಪ್ರಾಯವನ್ನು ತಿಳಿದುಕೊಳ್ಳಬಹುದು; ಮತ್ತು ಸಭೆಯು ಪ್ರಾರಂಭವಾದ ಕಾಲ ಮೊದಲ್ಗೊಂಡೇ ಅದು ಈ ಸ್ವಾತಂತ್ರ್ಯವನ್ನು ಎಷ್ಟು ಧಾರಾಳವಾಗಿ ಉಪಯೋಗಿಸಿಕೊಂಡಿದೆಯೋ ಆ ವಿಷಯವು ಮೈಸೂರು ದೇಶಕ್ಕೆ ಮಾತ್ರವಲ್ಲದೆ ಇಂಡಿಯಾ ದೇಶಕ್ಕೆಲ್ಲಾ ಸಾಮಾನ್ಯವಾಗಿ ತಿಳಿದೇ ಇದೆ. ವಸ್ತುತಃ ಸಭೆಯವರು ಈ ಸ್ವಾತಂತ್ರ್ಯವನ್ನು ಎಷ್ಟು ಹೆಚ್ಚಾಗಿ ಪರಿಗಣಿಸಿದಾರೆ ಎಂದರೆ, ಕಳೆದ ಸಲ ಸಭೆಯು ಸೇರಿ ನ್ಯಾಯವಿಧಾಯಕ ಸಭೆಯನ್ನು ಏರ್ಪಡಿಸುವ ವಿಷಯವು ಆಲೋಚನೆಯಲ್ಲಿದ್ದಾಗ ನ್ಯಾಯವಿಧಾಯಕ ಸಭೆಯ ಏರ್ಪಾಟಿನಿಂದ ಪ್ರಜಾಪ್ರತಿನಿಧಿ ಸಭೆಯು ಹೊಂದಿರುವ ಅಮೂಲ್ಯವಾದ ಸ್ವಾತಂತ್ರ್ಯವನ್ನು ವಾಪಸು ತೆಗೆದುಕೊಳ್ಳುವುದಿಲ್ಲ ಎಂಬ ಅಂಶವನ್ನು ದೃಢವಾಗಿ ತಿಳಿದುಕೊಳ್ಳಲು ಪ್ರಜಾಪ್ರತಿನಿಧಿಗಳು ಉತ್ಸುಕರಾಗಿದ್ದರು.

8. ಸಭಿಕರನ್ನು (ಮೆಂಬರುಗಳನ್ನು) ಆರಿಸುವ ವಿಷಯದಲ್ಲಿ—ಆರಿಸಲು ಅರ್ಹರಾಗಿರುವಂತೆ ಕ್ರಮವಾಗಿ ನಿಶ್ಚಯಿಸಲ್ಪಟ್ಟ ಜನಗಳಿಂದ ಆರಿಸಲ್ಪಟ್ಟ ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು ಇರುವುದು ಅವಶ್ಯವಿಲ್ಲವೆಂದು ನಾವು ಎಷ್ಟುಮಾತ್ರವೂ ಹೇಳುವುದಿಲ್ಲ ಮತ್ತು ಅದೂರವಾದ ಕಾಲದಲ್ಲಿಯೇ ಶ್ರೀಮನ್ಮಹಾರಾಜರವರು ಈ ಹೆಚ್ಚು ಸ್ವಾತಂತ್ರ್ಯವನ್ನು ಪ್ರಜೆಗಳಿಗೆ ಕೊಡಲು ಅನುಕೂಲಿಸುವುದರಲ್ಲಿ ಏನೂ ಸಂದೇಹವಿಲ್ಲ. ನ್ಯಾಯವಿಧಾಯಕ ಸಭೆಯ ರೆಗ್ಯುಲೇಷನಿನ ಸಂಗಡ ಅದಕ್ಕೆ ವಿವರವಾಗಿ ಪ್ರಕಟಿಸಿದ ಸರ್ಕಾರಿ ಹುಕುಮನ್ನು ನೋಡಿದರೆ—ಪ್ರಜಾಪ್ರತಿನಿಧಿಗಳ ಸಭೆಯಂಥಾ ಅಂಗೀಕೃತವಾದ ಸಾರ್ವಜನಿಕ ಸಂಘಗಳಿಗೆ ನ್ಯಾಯವಿಧಾಯಕ ಸಭೆಯಲ್ಲಿ ಕೆಲವು ಸಭಿಕರನ್ನು ಆರಿಸಲು ಸ್ವಾತಂತ್ರ್ಯ ಕೊಡೋಣವು ಕಾಲಕ್ರಮೇಣ ಆಗತಕ್ಕ ವಿಷಯವೆಂದೂ, ಮತ್ತು ಆ ನಿಯಮವನ್ನು ಆಚರಣೆಯಲ್ಲಿ ತರಲು ಯುಕ್ತತಮವಾದ ರೀತಿಯ ವಿಷಯದಲ್ಲಿ ಸಾಕಾದಷ್ಟು ಅನುಭವವನ್ನು ಹೊಂದುವ ವರೆಗೆ ಮಾತ್ರ ಅದನ್ನು ನಿಲ್ಲಿಸಿ ಇದೆ ಎಂದು ಗೊತ್ತಾಗುವುದು. ಈ ವಿಷಯದಲ್ಲಿ ನಿಬಂಧನೆಗಳನ್ನು ಮಾಡುವ ಅಧಿಕಾರವನ್ನು ಸದರಿ ರೆಗ್ಯುಲೇಷನಿನ 5ನೆ ಪ್ರಕರಣದಿಂದ ಸ್ಪಷ್ಟವಾಗಿ ಉಳಿಸಿಕೊಂಡಿದೆಯೆಂದು ನೀವು ನೋಡಬಹುದು. ಆದರೆ ಈಗಿನ ವಿದ್ಯಮಾನಗಳಲ್ಲಿ ಪ್ರಜಾಪ್ರತಿನಿಧಿಗಳ ಸಭೆಯಾಗಲಿ ಸ್ಥಳೀಯ ಸಂಘಗಳಾಗಲಿ ಸಭಿಕರನ್ನು ಆರಿಸುವುದಕ್ಕಿಂತ ಶ್ರೀಮನ್ಮಹಾರಾಜರು ಅವರನ್ನು ನೇಮಕಮಾಡುವ ಕ್ರಮವು ಜನಗಳ ಕಾರ್ಯಸಾಧಕವಾದ ಪ್ರತಿನಿಧಿಗಳನ್ನು ಸಂಪಾದಿಸುವುದಕ್ಕೆ ವಿಶೇಷವಾಗಿ ತಕ್ಕದ್ದಾಗಿಲ್ಲವೋ ಎಂಬುವುದನ್ನು ನಾವು ಅರಿಯೆವು.

9. ಇದಲ್ಲದೆ ಈಗ ನೇಮಕ ಮಾಡಿರುವ ಸರ್ಕಾರಿ ನೌಕರರಲ್ಲದ ಸಭಿಕರಲ್ಲಿ ಬಹಳ ಮಂದಿ ಸರ್ಕಾರದ ಕೆಲಸದಿಂದ ನಿವೃತ್ತರಾದ ಉದ್ಯೋಗಸ್ಥರು ಎಂದು ಆಕ್ಷೇಪಣೆ ಮಾಡಲ್ಪಟ್ಟಿತು. ಇದನ್ನು ಒಂದು ಅಯೋಗ್ಯತೆಯಾಗಿ ಎಷ್ಟು ಮಾತ್ರವೂ ಭಾವಿಸದೆ ಸಂಸ್ಥಾನದ ಉದ್ಯೋಗದಿಂದ ನಿವೃತ್ತರಾಗಿ ಯೋಗ್ಯವಾದ ವಿಶ್ರಾಂತಿಯನ್ನು ಆರ್ಜಿಸಿ ತಮ್ಮ ಅನುಭವದ ಮತ್ತು ಉಪದಿಷ್ಟವಾದ ಜ್ಞಾನದ ಪ್ರಯೋಜನವನ್ನು ನ್ಯಾಯವಿಧಾಯಕ ಸಭೆಯು ಕೈವಶ ಮಾಡಲು ಅಷ್ಟು ಶೀಘ್ರವಾಗಿ ಸಮ್ಮತಿಸಿದ ದೊಡ್ಡ ಮನುಷ್ಯರು ಸಭಿಕರಾಗಿ ನ್ಯಾಯವಿಧಾಯಕ ಸಭೆಗೆ ಭಾಗ್ಯವಶಾತ್ ಸಿಕ್ಕಿದರೆಂದು ನಾವು ಎಣಿಸುತ್ತೇವೆ. ಅವರ ಪ್ರತಿನಿಧಿತನದ ಸ್ವಭಾವವನ್ನು ಯಾರೂ ಸಂದೇಹಿಸುವುದಕ್ಕಾಗುವುದಿಲ್ಲ. ಯಾತಕ್ಕೆಂದರೆ, ಅವರು ಈ ದೇಶದ ಪ್ರಜೆಗಳಲ್ಲಿ ಸೇರಿದವರಾಗಿರುವುದರಿಂದಲೂ ಈ ದೇಶದಲ್ಲಿ ವಾಸಮಾಡುವುದರಿಂದಲೂ ಜಮೀನುಗಳನ್ನೂ ಇತರ ಸ್ವತ್ತುಗಳನ್ನೂ ಉಂಟಾಗಿರುವುದರಿಂದಲೂ ಈ ಸಂಸ್ಥಾನದ ಸಂಸ್ಥಿತಿಯ, ಒಳ್ಳೇ ಆಡಳಿತದ, ಮತ್ತು ಪ್ರಜೆಗಳ ಸೌಖ್ಯದ, ಲೋಪದಲ್ಲಿ ಇತರ ಜನಗಳಿಗೆ ಎಷ್ಟು ನಷ್ಟವೋ ಅಷ್ಟೇ ನಷ್ಟವು ಇವರಿಗೂ ಆಗುವುದು. ಅವರು ಒಳ್ಳೆಯ ನ್ಯಾಯಗಳನ್ನು (ಕಾನೂನುಗಳನ್ನು) ಮಾಡಲು ಸಹಾಯ ಮಾಡಿದರೆ ಇತರ ಪ್ರಜೆಗಳೊಂದಿಗೆ ಅಂಥಾ ನ್ಯಾಯಗಳಿಂದುಂಟಾದ ಸೌಖ್ಯಗಳಲ್ಲಿ ಅವರೂ ಭಾಗಿಗಳಾಗುವರು; ಹಾಗಿಲ್ಲದೆ ಅವರ ಸಹಾಯದಿಂದ ವಿಧಿಸಿದ ನ್ಯಾಯಗಳು ಕೆಟ್ಟವಾಗಿಯೂ ಪ್ರಜೆಗಳ ಸ್ವಾತಂತ್ರ್ಯಕ್ಕೆ ಕುಂದಕವಾಗಿಯೂ ಪ್ರಜೆಗಳಿಗೆ ಬಾಧಕವಾಗಿಯೂ ಇದ್ದರೆ ಸಂಸ್ಥಾನದ ಇತರ ಪ್ರಜೆಗಳೊಂದಿಗೆ ಈ ಅನಿಷ್ಟಗಳಲ್ಲಿ ಅವರೂ ಸಮಭಾಗಿಗಳಾಗಬೇಕು. ಅವರಿಗೆ ಪ್ರಜೆಗಳ ಪ್ರತಿನಿಧಿಗಳಾಗಿರಲು ಎಲ್ಲಾ ಬಾಧ್ಯತೆಯೂ ಉಂಟು ಮತ್ತು ಅಂಥವರಾಗಿರಲು, ಆರಿಸುವಿಕೆಯ ಕ್ರಮದಲ್ಲಿ ಆರಿಸಲು ಅರ್ಹರಾದ ಯಾವ ಬುದ್ಧಿವಂತರ ಸಮ್ಮತಿಗಳನ್ನಾದರೂ ಹೊಂದುವರು.

10. ಇಂಡಿಯಾ ದೇಶೀಯರಲ್ಲಿ ಮುಖಂಡರಾದವರು ಇಂಡಿಯಾ ದೇಶದ ಆಡಳಿತದ ತಿದ್ದುಪಾಟಿನ ವಿಷಯವಾಗಿ ಒತ್ತಿ ಹೇಳಿದ ಒಂದಾನೊಂದು ವಿಷಯ ಯಾವುದೆಂದರೆ: ಅಮೂಲ್ಯವಾದ ಅನುಭವವನ್ನೂ ಆಡಳಿತದಲ್ಲಿ ಕೌಶಲವನ್ನೂ ರೈತರ ಕರ್ಚಿನಲ್ಲಿ ಹೊಂದಿದ ದೊಡ್ಡ ಉದ್ಯೋಗಸ್ಥರು ಕೆಲಸದಿಂದ ನಿವೃತ್ತರಾದಾಗ ಈ ಅನುಭವ ಕೌಶಲಗಳೆಲ್ಲವನ್ನೂ ಈ ದೇಶದಿಂದ ತೆಗೆದುಕೊಂಡು ಹೊರಟು ಹೋಗುತ್ತಾರೆ. ಮೈಸೂರು ದೇಶೀಯರು ಬ್ರಿಟಿಷ ಇಂಡಿಯಾ ದೇಶೀಯರಿಗಿಂತ ಅಧಿಕವಾದ ಭಾಗ್ಯವುಳ್ಳವರಾಗಿದಾರೆ,

[ಅಧ್ಯಕ್ಷರು; ಮಿ|| ವಿ. ಎನ್. ನರಸಿಂಹೈಯಂಗಾರ.]

ಯಾತಕ್ಕೆಂದರೆ, ಮೈಸೂರು ಸಂಸ್ಥಾನದ ಉದ್ಯೋಗಗಳಿಂದ ನಿವೃತ್ತರಾದವರು. ಈ ದೇಶವನ್ನು ಬಿಟ್ಟುಹೋಗದೆ ಇರುವುದರಿಂದ ಅವರ ಜ್ಞಾನವೂ ಅನುಭವವೂ ಈ ದೇಶೀಯರಿಗೆ ಉಪಯೋಗಕ್ಕೆ ಬರದೆ ಇರುವುದಿಲ್ಲ.

ಜನಗಳಲ್ಲಿ ಪ್ರಾಬಲ್ಯವೂ ಅವರ ಕೊರತೆಗಳನ್ನೂ ಅಪೇಕ್ಷೆಗಳನ್ನೂ ತಿಳಿಸುವ ಸಾಮರ್ಥ್ಯವೂ ಸ್ವತಂತ್ರವಾಗಿ ಯೋಚಿಸಿ ಆಲೋಚನೆ ಹೇಳೋಣವೂ ಇವು ಪ್ರಜೆಗಳ ಪ್ರತಿನಿಧಿಗೆ ಅವಶ್ಯವಾದ ಗುಣಗಳಾಗಿವೆ. ಸರ್ಕಾರದ ಉದ್ಯೋಗಗಳಿಂದ ನಿವೃತ್ತರಾದವರು ಈ ಗುಣಗಳನ್ನು ಸರ್ಕಾರಿ ಉದ್ಯೋಗಸ್ಥರಲ್ಲದ ಪ್ರತಿನಿಧಿಗಳಿಗಿಂತ ಹೆಚ್ಚಾಗಿಲ್ಲವೆ ಇದ್ದರೆ ಅವರಿಗೆ ಸಮವಾಗಿಯಾದರೂ ಹೊಂದಿದವರೆಂದು ಎಲ್ಲರೂ ಒಪ್ಪಿಕೊಳ್ಳಲು ಸಿದ್ಧವಾಗಿರಬಹುದು.

11. ಮೈಸೂರಿನ ವಿದ್ಯಮಾನಗಳ ಮಟ್ಟಿಗೆ — ಒಂದು ವಿಷಯವನ್ನು ಕುರಿತು ಸರ್ಕಾರಿ ಉದ್ಯೋಗಸ್ಥರಿಗಿರುವ ಅಭಿಪ್ರಾಯಕ್ಕೂ ಸರ್ಕಾರಿ ಉದ್ಯೋಗಸ್ಥರಲ್ಲದವರಿಗಿರುವ ಅಭಿಪ್ರಾಯಕ್ಕೂ ಅಥವಾ ಸರ್ಕಾರದವರು ಇಟ್ಟುಕೊಂಡಿರುವ ಅಭಿಪ್ರಾಯಕ್ಕೂ ಜನಗಳು ಇಟ್ಟುಕೊಂಡಿರುವ ಅಭಿಪ್ರಾಯಕ್ಕೂ ಕಲ್ಪಿಸಿರುವ ವ್ಯತ್ಯಾಸಕ್ಕೆ ಯಾವ ಅರ್ಥವಿರುವುದಾಗಿಯೂ ನಮಗೆ ತಿಳಿಯುವುದಿಲ್ಲ. ಈ ದೇಶದಲ್ಲಿ ರಾಜ್ಯಭಾರವೆಲ್ಲವೂ ಮಹಾರಾಜರಿಗೆ ಸೇರಿರುವುದು. ರಾಜಕೀಯ ವಿಷಯಗಳಲ್ಲಿ ನಮ್ಮ ಶ್ರೀಮನ್ಮಹಾರಾಜರು ಪ್ರಜೆಗಳ ಪ್ರಯೋಜನಕ್ಕಿಂತ ಪ್ರತ್ಯೇಕವಾದ ಪ್ರಯೋಜನವನ್ನು ಉಳ್ಳವರಾಗಿಲ್ಲವೆಂದು ನಾವು ಹೇಳಿದರೆ ನಮ್ಮ ಮಾತು ಅತಿಶಯೋಕ್ತಿಯಾಗುವುದಿಲ್ಲವೆಂದು ನಿಮಗೆ ತಿಳಿದೇ ಇದೆ. ಇಂಡಿಯಾ ಸಾಮ್ರಾಜ್ಯದ ನ್ಯಾಯವಿಧಾಯಕ ಸಭೆಯಲ್ಲಿ ಕೆಲವು ದಿನಗಳ ಕೆಳಗೆ ಉದಹರಿಸಿದ ಕಾಳಿದಾಸ ಕವಿಯ ರಸಭರಿತವಾದ ಅಭಿಪ್ರಾಯವನ್ನು ಮುಖಸ್ತುತಿಯೆಂದು ಸಂಶಯಪಡದೆ ನಮ್ಮ ಶ್ರೀಮನ್ಮಹಾರಾಜರವರಿಗೆ ಅನ್ವಯಿಸಬಹುದು, ಅದೇನೆಂದರೆ:—

ಪ್ರಜಾನಾಮೇವ ಭೂತ್ಯರ್ಥಂ ಸ ತಾಭ್ಯೋ ಬಲಿಮಗ್ರಹೀತ್ ।
ಸಹಸ್ರಗುಣಮುತ್ಸ್ರಷ್ಟುಂ ಆದತ್ತೇ ಹಿ ರಸಂ ರವಿಃ ॥

"ಸೂರ್ಯನು ಮಳೆಯ ರೂಪವಾಗಿ ಒಂದಕ್ಕೆ ಸಾವಿರವಾಗಿ ಬಿಡುವುದಕ್ಕೋಸ್ಕರ ನೀರನ್ನು ಹೇಗೆ ಗ್ರಹಿಸುತ್ತಾನೋ ಹಾಗೆಯೇ ಅವನು (ದಿಲೀಪ ಮಹಾರಾಜನು) ಪ್ರಜೆಗಳ ಸಂಪತ್ತಿಗೋಸ್ಕರವೇ ಅವರಿಂದ ಕಾಣಿಕೆಯನ್ನು ತೆಗೆದುಕೊಂಡನು."

12. ನ್ಯಾಯವಿಧಾಯಕ ಸಭೆಯನ್ನು ಏರ್ಪಡಿಸಿ ಸರ್ಕಾರಿ ಉದ್ಯೋಗಸ್ಥರಲ್ಲದ ಪ್ರತಿನಿಧಿಗಳ ಅಭಿಪ್ರಾಯವನ್ನು ತರಿಸಿಕೊಳ್ಳುವುದರ ಮೂಲಕ ಶ್ರೀಮನ್ಮಹಾರಾಜರವರು ಪ್ರಜೆಗಳ ಕ್ಷೇಮದ ವಿಷಯವಾಗಿ ಅವರ ಔತ್ಸುಕ್ಯಕ್ಕೆ ಮತ್ತೊಂದು ನಿದರ್ಶನವನ್ನು ತೋರಿಸಿರುವರು. ಆದುದರಿಂದ ನಂಬಿಕೆಯಿಂದ ನಮಗೆ ಒಪ್ಪಿಸಿರುವ ಕೆಲಸವನ್ನು ಸರಿಯಾಗಿ ಮಾಡಿ ರಾಜ್ಯಭಾರವಹನಕ್ರಮದಲ್ಲಿ ಶ್ರೀಮನ್ಮಹಾರಾಜರವರು ಈಗ ಹೊಸದಾಗಿ ಮಾಡಿರುವ ಏರ್ಪಾಡು ನ್ಯಾಯವಾದುದೆಂದು ತೋರಿಸುವುದು ನಮ್ಮ ಕರ್ತವ್ಯವಾಗಿದೆ, ಮತ್ತು ಸಭಿಕರಿರಾ, ಶ್ರೀಮನ್ಮಹಾರಾಜರವರು ನ್ಯಾಯವಿಧಾಯಕ ಸಭೆಯನ್ನು ಏರ್ಪಡಿಸುವುದರಲ್ಲಿ ಅವರಿಗಿರುವ ನಿರೀಕ್ಷಣೆಗಳನ್ನು ಸಭೆಯು ನಿಮ್ಮಗಳ ಸಹಾಯದಿಂದ ನೆರವೇರಿಸಲಾಗುವುದೆಂದು ನಮಗೆ ಸಂಪೂರ್ಣವಾದ ಭರವಸೆಯಿದೆ.

ಮಿ|| ವಿ. ಎನ್. ನರಸಿಂಹೈಯಂಗಾರ್.

ಅಯ್ಯಾ,

ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರ ಪರವಾಗಿ — ಮೈಸೂರು ನ್ಯಾಯವಿಧಾಯಕ ಸಭೆಯ ಸ್ಥಾಪನೆಗಾಗಿ ಶ್ರೀಮನ್ಮಹಾರಾಜರವರ ಸರ್ಕಾರಕ್ಕೆ ನಮ್ಮ ಮನಃಪೂರ್ವಕವಾದ ಧನ್ಯವಾದಗಳನ್ನು ತಮ್ಮ ಅನುಜ್ಞೆಯಿಂದ ಸಮರ್ಪಿಸುತ್ತೇವೆ. ಈ ಸಭೆಯ ಪ್ರಾರಂಭವು ಮೈಸೂರು ರಾಜ್ಯಭಾರದ ಚರಿತೆಯಲ್ಲಿ ಒಂದು ಶುಭದಿನಕ್ಕೆ ಅಂಕಿತವಾಗಿರುವುದು.

ರಾಜನ ಮತ್ತು ಪ್ರಜೆಗಳ ಪ್ರಯೋಜನಗಳು ಐಕ್ಯವಾಗಿವೆ ಮತ್ತು ವರ್ಧಮಾನವಾದ ರಾಜ್ಯಭಾರವು ದಿನೇದಿನೇ ವೃದ್ಧಿಹೊಂದಬೇಕಾಗಿದ್ದರೆ ರಾಜನು ಪ್ರಜೆಗಳಲ್ಲಿ ಸದಾ ಅನುಕಂಪವುಳ್ಳವನಾಗಿರಬೇಕು ಮತ್ತು ಪ್ರಜೆಗಳ ಪ್ರಯೋಜನಕ್ಕಾಗಿ ಪ್ರಾರಂಭಿಸಿರುವ ಪ್ರತಿ ನ್ಯಾಯದ (ಕಾನೂನು) ಏರ್ಪಾಡಿನಲ್ಲಿಯೂ ಅವರು ಯಾವುವನ್ನು ಬಹಳ ಉತ್ಕೃಷ್ಟವಾದವೆಂದು ತಿಳಿದುಕೊಂಡಿದಾರೆಯೋ ಅವುಗಳನ್ನೂ, ಅವರ ಅಭಿಪ್ರಾಯಗಳನ್ನೂ, ಅಭಿಲಾಷೆಗಳನ್ನೂ ಸಂಪೂರ್ಣವಾಗಿ ಪರ್ಯಾಲೋಚಿಸಬೇಕು.

ಸಭಿಕರನ್ನಾರಿಸುವ ನಿಯಮವು ಇಂಡಿಯಾ ದೇಶದಲ್ಲಿ ಇನ್ನೂ ಬಾಲ್ಯಾವಸ್ಥೆಯಲ್ಲೇ ಇವೆ, ಮತ್ತು ಮೈಸೂರು ದೇಶದಲ್ಲಿನ ದೇಶೀಯ ಆಡಳಿತದಲ್ಲಿ ಅದು ವೃದ್ಧಿ ಹೊಂದುವುದಕ್ಕೆ ಅನುಕೂಲವಿದ್ದಾಗ್ಯೂ ಮತ್ತಷ್ಟು ಹೆಚ್ಚಾಗಿ ಅಂಥಾ ಸ್ಥಿತಿಯಲ್ಲೇ ಇದೆ. ಆದುದರಿಂದ ಮೊಟ್ಟಮೊದಲು ಸರ್ಕಾರಿ ನೌಕರರಲ್ಲದ ಸಭಿಕರನ್ನು ಆರಿಸಿ ಏರ್ಪಾಟು ಮಾಡುವುದಕ್ಕೆ ಬದಲಾಗಿ ನೇಮಕ ಮಾಡುವುದು ಅವಶ್ಯವಾಯಿತು. ಆದರೆ ಈ ಏರ್ಪಾಡು ಸಂಪೂರ್ಣವಾಗಿ ಕಾರ್ಯಸಾಧಕವಾದುದಾಗಿ ಆಗಬೇಕಾದರೆ ಸಭೆಗೆ ಪ್ರಜೆಗಳ ಪ್ರತಿನಿಧಿಗಳೇ ಇನ್ನೂ ವಿಶೇಷವಾಗಿ ಸೇರುವಂತೆ ಆಗಿ ಅದು ಪ್ರಜೆಗಳ ಅಭಿಪ್ರಾಯವನ್ನು ತಿಳಿಸಲು ಶಕ್ತಿಯುಳ್ಳುದಾಗಿರಬೇಕೆಂದು ಸರ್ವಜನರೂ ಅಭಿಪ್ರಾಯಪಡುತ್ತಾರೆ.

ಪರೀಕ್ಷಾರ್ಥವಾಗಿ ಪರಿಮಿತಿಯಾಗಿ ಮಾಡಿದ ಈ ಏರ್ಪಾಡಿನ ಫಲಿತಾಂಶಗಳನ್ನು ಮೈಸೂರು ದೇಶದ ಹೊರಗಿನವರು ಆಸಕ್ತರಾಗಿ ನಿರೀಕ್ಷಿಸುತ್ತಿರುವರೆಂದೂ ಅದು ಕಾರ್ಯಸಾಧಕವಾಗಿ ಆಗಲೂ, ನಿರರ್ಥಕವಾಗಿ ಆಗದೇ ಇರಲೂ ನಾವು ಬಹು ವಿವೇಕವೂ ಆತ್ಮಸಂಯಮವೂ ಉಳ್ಳವರಾಗಿ ಇರಬೇಕೆಂದೂ ನಾವು ಬಲ್ಲೆವು; ಮತ್ತು ನಮ್ಮ ಮುಂದೆ ಬರುವ ಕಲಹದ ಯಾವ ಪ್ರಯೋಜನವನ್ನೂ ಬಿಟ್ಟುಕೊಡದೆ ಹೋದರೂ ಈ ಏರ್ಪಾಡು ಸಫಲವಾಗುವಂತೆ ಅದಕ್ಕೆ ಸಂಬಂಧಪಟ್ಟ ನಮ್ಮ ಕೆಲಸಗಳನ್ನು ನೆರವೇರಿಸುವುದೇ ನಮ್ಮ ದೃಢವಾದ ಉದ್ದೇಶವಾಗಿದೆ.

ಉಪಸಂಹಾರದಲ್ಲಿ, ಈ ಸಭೆಯು ಕೆಲವು ಕಾಲ ಅದರ ಕೆಲಸವನ್ನು ನಡೆಸಿದ ತರುವಾಯ ಅದರಿಂದ ಹೊಂದಿದ ಫಲಗಳಿಂದ ನ್ಯಾಯವಾಗಿ ತೋರಿದರೆ ಅದು ಯಥಾರ್ಥವಾಗಿ ಪ್ರತಿನಿಧಿಭೂತವಾಗುವಂತೆಯೂ, ಈ ದೇಶದ ಆಡಳಿತದಲ್ಲಿ ಸರ್ಕಾರದವರೊಂದಿಗೆ ಭಾಗಿಯಾಗಲು ಅವಕಾಶವುಂಟಾಗುವಂತೆಯೂ ಶ್ರೀಮನ್ಮಹಾರಾಜರವರ ವರ್ಧಮಾನವಾಗುತ್ತಿರುವ ಸರ್ಕಾರದವರು ಕಾಲಕ್ರಮೇಣ ನ್ಯಾಯವಿಧಾಯಕ ಸಭೆಯ ಏರ್ಪಾಡನ್ನೂ ಅದರ ಅಧಿಕಾರಗಳನ್ನೂ ದಯಮಾಡಿ ವಿಸ್ತರಿಸುವರೆಂದು ನಾವು ಕೋರುತ್ತೇವೆ.

197

[ಮಿ|| ಟಿ. ಆನಂದರಾವ್.]

ಮೈಸೂರು ಗ್ರಾಮ ಉದ್ಯೋಗಗಳಿಗೆ ಸಂಬಂಧಿಸುವ ನ್ಯಾಯವನ್ನು (ಕಾನೂನನ್ನು) ಒಟ್ಟುಗೂಡಿಸಿ ತಿದ್ದುಪಾಟು ಮಾಡುವ ಬಿಲ್ಲು.

ಮಿ|| ಟಿ. ಆನಂದರಾವ್.

ಅಯ್ಯಾ,

ಗ್ರಾಮ ಉದ್ಯೋಗಗಳಿಗೆ ಸಂಬಂಧಿಸುವ ವಿಷಯಗಳ ನಿರ್ಣಯಗಳನ್ನು ಕ್ರಮಪಡಿಸಲು ಒಂದು ನ್ಯಾಯದ (ಕಾನೂನಿನ) ಆವಶ್ಯಕತೆಯು ಕಮಿಷನರುಗಳ ಕಾಲದಿಂದ ಅಧಿಕಾರಿಗಳ ಆಲೋಚನೆಯಲ್ಲಿತ್ತು.

2. ಒಂದಾನೊಂದು ಕಾರ್ಯದಲ್ಲಿ ನಂದಿದುರ್ಗ ಡಿವಿಜನಿನ ಕಮಿಷನರು ಸರ್ವೆ ಇಲಾಖೆಯಿಂದ ಏರ್ಪಡಿಸಲ್ಪಟ್ಟ ಶಾನುಭೋಗರ ಸರ್ಕಲ್ ಮೂ ಫಿರ್ಕಾಗಳನ್ನು ತಿದ್ದುಪಾಟು ಮಾಡುವ ವಿಷಯದಲ್ಲಿ ಚೀಫ್ ಕಮಿಷನರ ಮಂಜೂರಾತಿಯನ್ನು ಕೇಳಿದರು. ಸರ್ವೆ ಮತ್ತು ಸೆಟ್ಲ್ ಮೆಂಟ್ ಕಮಿಷನರು ಈ ಕಾರ್ಯವನ್ನು ಕುರಿತು ರಿಪೋರ್ಟು ಮಾಡುವಾಗ ತಮ್ಮ 1877ನೆ ಆಗಸ್ಟು 30ನೆ ತಾರೀಖಿನ 1162ನೆ ನಂಬರ ಕಾಗದದಲ್ಲಿ ಅದಕ್ಕೆ ಸಂಬಂಧಪಟ್ಟು ಹೇಳಿದುದೇನಂದರೆ :" ಬೊಂಬಾಯಿ ಆಧಿಪತ್ಯದಲ್ಲಿ ಸ್ಥಳೀಯ ಅಧಿಕಾರಿಗಳ ತೀರ್ಪುಗಳ ಮೇಲಿನ ಅಪೀಲುಗಳಿಂದಲೂ ಫಿರ್ಯಾದುಗಳಿಂದಲೂ ಬಹಳ ತೊಂದರೆ ಉಂಟಾಗಿ ಈ ಗ್ರಾಮ ಉದ್ಯೋಗಗಳಿಗೆ ಸಂಬಂಧಪಟ್ಟ ಪಿತೂರಿಯು ಬಹಳ ಅಪವಾದಕ್ಕೆ ಗುರಿಯಾಗಿದ್ದುದರಿಂದ ಈ ಕಾರ್ಯಗಳ (ಮೊಕದ್ದಮೆಗಳ) ನಡವಳಿಕೆಯ ಧೋರಣೆಯನ್ನು ಕ್ರಮಪಡಿಸಿ ಚಿಲ್ಲರೆ ಪಿತೂರಿಗೆ ಅವಕಾಶವಿಲ್ಲದಂತೆ ಮಾಡುವುದಕ್ಕೋಸ್ಕರ ಬೊಂಬಾಯಿನ ವಂಶಪಾರಂಪರ್ಯವಾದ ನೌಕರಿಗಳ 1874ನೆ ಇಸವಿಯ 3ನೆ ಆಕ್ಟನ್ನು ಮಂಜೂರ್ಮಾಡಲಾಯಿತು"

3. ಆಮೇಲೆ ಚೀಫ್ ಕಮಿಷನರಾದ ಮಿ|| ಸಾಂಡರ್ಸ್ಯವರು ಸಾಮಾನ್ಯವಾಗಿ ವತನದಾರರ ಆಕ್ಟೆಂದು ಕರೆಯಲ್ಪಡುವ ಬೊಂಬಾಯಿ ಆಕ್ಟನ್ನು ವಿಹಿತವಾದ ಬದಲಾವಣೆಗಳೊಡನೆ ಮೈಸೂರು ಸೀಮೆಗೆ ಜಾರಿಗೆ ತಂದರೆ ಪ್ರಯೋಜನ ಉಂಟೆಂದು ಯೋಚಿಸಿ ಆ ವಿಷಯದಲ್ಲಿ ಡಿವಿಜನ್ ಕಮಿಷನರುಗಳ ಮತ್ತು ಡೆಪ್ಯುಟಿ ಕಮಿಷನರುಗಳ ಅಭಿಪ್ರಾಯಗಳನ್ನು ಕೇಳಿದರು.

4. ಮೂವರು ಕಮಿಷನರುಗಳ ಪೈಕಿ ನಗರದ ಕಮಿಷನರಾದ ಮೇಜರ್ ಡಬ್ಲ್ಯು. ಹಿಲ್ ಯವರು ಆಗ ಜಾರಿಯಲ್ಲಿದ್ದ ಸರ್ ಮಾರ್ಕ್ ಕಬ್ಬನ್ ಯವರ ಹುಕುಂ ನಾಮೆಗಳು ಎಲ್ಲಾ ಕೆಲಸಗಳಿಗೂ ಸಾಕೆಂದೂ ವರ್ತ ಎಂಬುವ ಮಾತೇ ಮೈಸೂರಿನವರಿಗೆ ಹೊಸದಾಗಿರುವುದರಿಂದಲೂ, ಸದರೀ ಆಕ್ಟು ವಂಶಪಾರಂಪರ್ಯವಾದ ಉದ್ಯೋಗಗಳ ವಿಭಾಗವನ್ನು ಪ್ರೋತ್ಸಾಹ ಪಡಿಸಿದುದರಿಂದಲೂ, ಮತ್ತು ಈ ವಿಷಯದಲ್ಲಿ "ಹೆಂಗಸರ ಹಕ್ಕುಗಳ" ನ್ನು ಕುರಿತು ಚೀಫ್ ಕಮಿಷನರ ಅಸಮ್ಮತಿಗೆ ವಿರೋಧವಾಗಿ ಸದರಿ ಆಕ್ಟು ಗ್ರಾಮ ನೌಕರಿಗಳಿಗೆ ಉತ್ತರಾಧಿಕಾರಿಗಳಾಗಲು ಹೆಂಗಸರ ಹಕ್ಕುಗಳನ್ನು ಅಂಗೀಕರಿಸಿದುದರಿಂದಲೂ ಬೊಂಬಾಯಿ ಆಕ್ಟನ್ನು ಜಾರಿಯಲ್ಲಿ ತರುವುದಕ್ಕೆ ಆವಶ್ಯ ತೋರಲಿಲ್ಲವೆಂದು ಅವರು (ಮೇಜರ್ ಡಬ್ಲ್ಯು. ಹಿಲ್) ಅಭಿಪ್ರಾಯ ಪಟ್ಟರು. ಮತ್ತು ರಾಜ್ಯ ಭಾರವನ್ನು ಸಂಗಡಲೇ ಶ್ರೀಮನ್ ಮಹಾರಾಜರವರಿಗೆ ವಹಿಸಬೇಕಾಗಿದ್ದುದರಿಂದ ನ್ಯಾಯಗಳ ಪುಸ್ತಕಕ್ಕೆ ಹೆಚ್ಚಾಗಿ ಸೇರಿಸಲು ಎಂದರೆ ಹೊಸ ಕಾನೂನುಗಳನ್ನು ಮಾಡಲು ಅವರು (ಮೇಜರ್ ಡಬ್ಲ್ಯು. ಹಿಲ್) ಇಷ್ಟಪಡಲಿಲ್ಲ. ನಂದಿದುರ್ಗದ ಕಮಿಷನರಾದ ಕರ್ನಲ್ ಜೆ. ಎಲ್. ಪರ್ಸ್ ರವರು—ಸ್ಥಳೀಯ ವಿದ್ಯಮಾನಗಳಿಗೆ ಸರಿಬೀಳುವ ಹಾಗೆ ಸದರಿ ಆಕ್ಟನ್ನು ಸಂಪೂರ್ಣವಾಗಿ ತಿದ್ದುಪಾಟು ಮಾಡಬೇಕೆಂದು ಅಭಿಪ್ರಾಯಪಟ್ಟು ಆ ವಿಷಯವನ್ನು ವ್ಯವಸ್ಥೆ ಮಾಡಲು ಸರ್ವೆ ಮತ್ತು ಸೆಟ್ಲ್ ಮೆಂಟ್ ಇಲಾಖೆಯ ಒಬ್ಬ ಹಿರಿಯ ಆಫಿಸರು ಸೇರಿರುವ ಒಂದು ಸಮಾಜವನ್ನು ನೇಮಿಸಬೇಕೆಂದು ಹೇಳಿದರು. ಅಷ್ಟಗ್ರಾಮದ ಅಫಿಷಿಯೇಟಿಂಗ್ ಕಮಿಷನರಾದ ಮೇಜರ್ ಆರ್. ಸಿ. ಕೋಲ್ ಯವರು—ಸದರಿ ಆಕ್ಟಿನ ನಿಯಮಗಳು ಮೈಸೂರು ದೇಶದಲ್ಲಿ ಎಷ್ಟು ಮಟ್ಟಿಗೆ ಮೊದಲೇ ಜಾರಿಯಲ್ಲಿದ್ದುವು ಎಂದು ತೋರಿಸಿ ಕೆಲವು ಟಿಪ್ಪಣಿಗಳನ್ನು ಕಳುಹಿಸಿದರು. ಆಲೋಚನೆಗಳನ್ನು ಕೇಳಿದ ಡೆಪ್ಯುಟಿ ಕಮಿಷನರುಗಳ ಪೈಕಿ ಮೈಸೂರು ಡೆಪ್ಯುಟಿ ಕಮಿಷನರು ಜವಾಬು ಕೊಡಲಿಲ್ಲ, ಹಾಸನದ ಡೆಪ್ಯುಟಿ ಕಮಿಷನರು ಯಾವ ಅಭಿಪ್ರಾಯವನ್ನೂ ಕೊಡಲಿಲ್ಲ, ಬೆಂಗಳೂರು ಮತ್ತು ಕಡೂರಿನ ಡೆಪ್ಯುಟಿ ಕಮಿಷನರುಗಳು (ಕ್ಯಾಪ್ಟನ್ ಕಮಿಂಗ್ ಮತ್ತು ಮೇಜರ್ ಬ್ಲೇರ್) ಸದರಿ ಆಕ್ಟನ್ನು ಜಾರಿಗೆ ತರಲು ಇಷ್ಟಪಟ್ಟರು ; ಕೋಲಾರ, ತುಮಕೂರು, ಶಿವಮೊಗ್ಗೆ ಮತ್ತು ಚಿತ್ರದುರ್ಗದ ಡೆಪ್ಯುಟಿ ಕಮಿಷನರುಗಳು (ಮಿ" ಕೃಷ್ಣೈಯಂಗಾರ್, ಕ್ಯಾಪ್ಟನ್ ಲಡ್ಲೋ, ಕರ್ನಲ್ ಮಾಟಿಟ್ ಮತ್ತು ಮೇಜರ್ ಆರಂ ಸ್ಟ್ರಾಂಗ್) ಸ್ಥಳೀಯ ವಿದ್ಯಮಾನಗಳಿಗೆ ತಕ್ಕಂತೆ ಬೊಂಬಾಯಿ ಆಕ್ಟಿನ ನಿಯಮಗಳನ್ನು ಪರಿಶೋಧಿಸಿ ತಿದ್ದುಪಾಟು ಮಾಡಬೇಕೆಂದು ಹೇಳಿದರು. ಹಾಸನದ ಡೆಪ್ಯುಟಿ ಕಮಿಷನರು ತಮ್ಮ ಸ್ವಂತ ಅಭಿಪ್ರಾಯಗಳನ್ನು ಕೊಡದೆ ಹೋದಾಗ್ಯೂ ತಮ್ಮ ಕೈಕೆಳಗಿನ ಅಸಿಸ್ಟೆಂಟ್ ಕಮಿಷನರುಗಳ ಅಭಿಪ್ರಾಯಗಳನ್ನು ಕಳುಹಿಸಿದರು. ಅವರ ಪೈಕಿ ಈ ಸಭೆಯಲ್ಲಿ ನಮ್ಮ ಎದುರಿಗಿರುವ ಮಿ|| ವಿ. ಎನ್. ನರಸಿಂಹೈಯ್ಯಂಗಾರ್ರು—ಸದರಿ ಆಕ್ಟಿನ ಮುಖ್ಯವಾದ ಮೂಲ ತತ್ವಗಳು ನ್ಯಾಯವಾಗಿದ್ದರೂ ಮತ್ತು ನಿಬಂಧನೆಗಳ ರೂಪವಾಗಿ ಅವುಗಳನ್ನು ತೆಗೆದುಕೊಳ್ಳಬಹುದಾಗಿದ್ದರೂ ಆ ಆಕ್ಟು ಮೈಸೂರು ದೇಶದ ಆವಶ್ಯಕತೆಗಳಿಗೆ ಬಹು ಪ್ರಯಾಸಸಾಧ್ಯವಾಗಿಯೂ ತೊಡಕಾಗಿಯೂ ಕಾಣಿಸಿತೆಂದು ಬರೆದರು. 1878ನೆ ಇಸವಿಯ ಫೆಬ್ರವರಿ ತಿಂಗಳಲ್ಲಿ ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳೆಲ್ಲವನ್ನೂ ಅಭಿಪ್ರಾಯದ ಬಗ್ಗೆ ಸರ್ವೆ ಮತ್ತು ಸೆಟ್ಲ್ ಮೆಂಟ್ ಕಮಿಷನರಿಗೆ (ಆನರಬಲ್ ಕರ್ನಲ್ ಡಬ್ಲ್ಯು. ಸಿ. ಆಂಡರ್ಸನ್) ಕಳುಹಿಸಲಾಯಿತು.

5. 1888ನೆ ನವೆಂಬರ್ ತಿಂಗಳ ವರೆಗೆ ಈ ವಿಷಯದಲ್ಲಿ ಮತ್ತೇನೂ ನಡೆದಂತೆ ಕಾಣಿಸಲಿಲ್ಲ. ಆಗ ದಿವಾನ್ ಆಫಿಸಿನಿಂದ ಕೇಳಿದುದರ ಮೇಲೆ ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟ್ (ಕರ್ನಲ್ ಗ್ರಾಂಟ್) ರಿಪೋರ್ಟು ಮಾಡಿದುದೇನೆಂದರೆ—ದಿ ಆನರಬಲ್ ಕರ್ನಲ್ ಆಂಡರ್ಸನ್ ರವರು ಸದರಿ ವಿಷಯವನ್ನು ಕುರಿತು ತೀರ್ಮಾನವಾಗಿ ರಿಪೋರ್ಟು ಮಾಡತಕ್ಕ ಬಗ್ಗೆ ಅದನ್ನು ಆಲೋಚನೆಗೆ ತೆಗೆದುಕೊಂಡಂತೆ ತೋರಲಿಲ್ಲ, ಆದರೆ, ಅವರಿಗೆ ಕಳುಹಿಸಿದ ಕಾಗದದಮೇಲೆ ಅವರು ಬರೆದ ಅನೇಕ ಟಿಪ್ಪಣಿಗಳಿಂದ ಸದರಿ ವಿಷಯವನ್ನು ಅವರು ಚೆನ್ನಾಗಿ ಯೋಚಿಸುತ್ತಿದ್ದಂತೆ ತೋರಿತು. ಕರ್ನಲ್ ಗ್ರಾಂಟ್ ರವರು ಸದರಿ ಆಕ್ಟನ್ನು ಯೋಗ್ಯರಾದ ಸ

[ಮಿ|| ಟಿ. ಆನಂದರಾವ್.]

ಮಾಜವರಿಂದ ಪರಿಶೋಧನೆ ಮಾಡಿಸಿ ಅದರ ನಿಯಮಗಳನ್ನು ಸ್ಥಳೀಯ ವಿದ್ಯಮಾನಗಳಿಗೆ ಬೇಕಾದ ಬದಲಾವಣೆಗಳೊಡನೆ ಜಾರಿಗೆ ತರಬೇಕೆಂದೂ ಮತ್ತು ಲ್ಯಾಂಡ್ ರೆವಿನ್ಯೂ ಕೋಡನ್ನು ಜಾರಿಗೆ ತಂದ ಮೇಲೆ ಸದರಿ ಆಕ್ಟನ್ನು ಜಾರಿಗೆ ತರಬೇಕಾದುದು ಸಹಜವೆಂದೂ ಹೇಳಿದರು.

6. ಹಿಂದಿನ ದೀವಾನ್ ಸರ್. ಕೆ. ಶೇಷಾದ್ರಿ ಅಯ್ಯರವರು ಈ ವಿಷಯವನ್ನು ಆಲೋಚಿಸಿ 1894ನೆ ಜುಲೈ 4ರಲ್ಲಿ "ಇದು ತೊಡಕಾದ ಆಕ್ಟಾಗಿರುವುದರಿಂದ ಇದನ್ನು ಈ ಸೀಮೆಗೆ ಜಾರಿಗೆ ತರುವುದು ಆವಶ್ಯವಿಲ್ಲ. ಆದುದರಿಂದ ಈ ವಿಷಯದಲ್ಲಿ ಇನ್ನೇನೂ ಮಾಡಬೇಕಾಗಿಲ್ಲ. ಅದಕ್ಕೆ ಸಂಬಂಧಪಟ್ಟ ಕಾಗದಗಳನ್ನು ಕಟ್ಟಿಡಬಹುದು." ಎಂದು ಟಿಪ್ಪಣಿ ಬರೆದರು.

7. ಏತನ್ಮಧ್ಯೆ ಗ್ರಾಮ ಉದ್ಯೋಗಸ್ಥರಿಗೆ ಸಂಬಂಧಪಟ್ಟ ವಿರಳವಾದ ಮತ್ತು ಒಂದಕ್ಕೊಂದು ಸಂಬಂಧವಿಲ್ಲದ ಬಹಳ ನಿಬಂಧನೆಗಳೂ ಹುಕುಂಗಳೂ ಹುಟ್ಟಿದುವು. ಈ ಪೈಕಿ ಕೆಲವನ್ನು ಸಂಗ್ರಹಿಸಿ 1900 ನೆ ಇಸವಿಯ ರೆವಿನ್ಯೂ ಮ್ಯಾನ್ಯುಯಲ್ ಎಂಬ ಪುಸ್ತಕದ 3ನೆ ಅಧ್ಯಾಯದಲ್ಲಿ ಅಚ್ಚು ಹಾಕಿದೆ. ಇವುಗಳ ಪೈಕಿ ಪಟೇಲ ಶಾನುಭೋಗರ ಮತ್ತು ಚಿಲ್ಲರೆ ಗ್ರಾಮ ನೌಕರರ ಪೋಟಗಿಯ ನಿಬಂಧನೆಗಳೇ ಮೊದಲಾದುವು ನ್ಯಾಯದ (ಕಾನೂನಿನ) ಬಲವುಳ್ಳವುಗಳಾಗಿವೆ. ಇತರವಾದುವುಗಳು ಕ್ರಮವಾದ ವ್ಯಾಜ್ಯಗಳಲ್ಲಿ, ರೆವಿನ್ಯೂ ಆಫೀಸರುಗಳು ಮಾಡಿದ ತೀರ್ಪುಗಳ ಮೇಲಿನ ಅಪೀಲುಗಳಲ್ಲಿ ಸರ್ಕಾರದವರು ಕೊಟ್ಟ ಹುಕುಂಗಳಾಗಿವೆ, ಮತ್ತು ಬಹಳವಾದುವು ಮಿಸಲೇನಿಯಸ್ ಯಾ ವಿವಿಧ ವಿಷಯಗಳಲ್ಲಿ ಕೊಟ್ಟ ಆಡಳಿತಕ್ಕೆ ಸಂಬಂಧಪಟ್ಟ ಹುಕುಂಗಳಾದುದರಿಂದ ಕ್ರಮವಾದ ವ್ಯಾಜ್ಯಗಳಲ್ಲಿ ಕೀಳ್ಪಟ್ಟ ಉದ್ಯೋಗಸ್ಥರಿಂದ ಅಸಡ್ಡೆ ಮಾಡಲ್ಪಡುವುದಕ್ಕೆ ಗುರಿಯಾಗಿವೆ. ಮುಖ್ಯವಾಗಿ ಗ್ರಾಮ ಉದ್ಯೋಗಗಳ ಉತ್ತರಾಧಿಕಾರದ ವಿಷಯದಲ್ಲಿ ತೀರ್ಪುಗಳ ಧೋರಣೆಯು ಏಷ್ಟುಮಾತ್ರವೂ ಏಕರೀತಿಯಾಗಿ ಅಥವಾ ನಿಶ್ಚಿತವಾಗಿಲ್ಲದೆ ಹೋದುದರಿಂದ ಪರಸ್ಪರ ವಿರುದ್ಧವಾದ ತೀರ್ಪುಗಳುಂಟಾಗಿ ವ್ಯಾಜ್ಯಗಳಿಗೆ ಅವಕಾಶವಾಗಿದೆ. ಈ ಕಾರಣಗಳಿಂದ ಈ ವಿಷಯದಲ್ಲಿ ಒಂದು ನ್ಯಾಯವನ್ನು (ಕಾನೂನನ್ನು) ಮಾಡುವುದು ಅತ್ಯವಶ್ಯವಾಗಿದೆ. ಕಡೆಯಲ್ಲಿ, ರೆವಿನ್ಯೂ ಆಡಳಿತವು ಸಫಲವಾಗಿ ನಡೆಯಬೇಕಾದರೆ ಗ್ರಾಮ ಉದ್ಯೋಗಸ್ಥರು ಬಹಳ ಮಟ್ಟಿಗೆ ಸಮರ್ಥರಾಗಿರಬೇಕಾದುದರಿಂದ ಗ್ರಾಮ ಉದ್ಯೋಗಗಳನ್ನು ಕ್ರಮಪಡಿಸಲು ಒಂದು ನ್ಯಾಯವನ್ನು (ಕಾನೂನನ್ನು) ಜಾರಿಗೆ ತಂದು ಅವನ್ನು ಸರಿಯಾದ ಆಧಾರದ ಮೇಲೆ ಇಡುವ ಕೆಲಸವನ್ನು ಕಳೆದ ಹತ್ತೊಂಭತ್ತು ವರ್ಷಗಳಿಂದ ರೆವಿನ್ಯೂ ಆಡಳಿತಕ್ಕೆ ಆಧಾರವಾಗಿರುವ ಲ್ಯಾಂಡ್ ರೆವಿನ್ಯೂ ಕೋಡನ್ನು ಜಾರಿಗೆ ತಂದಾದ ಮೇಲೆ ಸಹಜವಾಗಿ ಮಾಡಬೇಕಾಗಿದೆ.

8. 1899ನೆ ಇಸವಿಯ ಡಿಸೆಂಬರ್ ತಿಂಗಳಲ್ಲಿ ಆಗ ಈಸ್ಟರ್ನ್ ಡಿವಿಜನ್ (ಪೂರ್ವಭಾಗದ) ರೆವಿನ್ಯೂ ಕೌನ್ಸಿಲರಾಗಿದ್ದ (ಈಗ ದೀವಾನರಾಗಿರುವ) ಮಿ|| ವಿ. ಪಿ. ಮಾಧವರಾಯರು ಈ ವಿಷಯವನ್ನು ಕೈಕೊಂಡು ಅದನ್ನೆಲ್ಲಾ ಪುನರಾಲೋಚನೆ ಮಾಡಬೇಕೆಂದೂ, ಕರ್ನಲ್ ಗ್ರಾಂಟರವರ ಸಂಗಡ ಆಲೋಚನೆ ಮಾಡಿ ಅವಶ್ಯವಾದ ಬದಲಾವಣೆಗಳೊಡನೆ ಬೊಂಬಾಯಿನ ಆಕ್ಟಿನಂತೆ ಒಂದು ಬಿಲ್ಲನ್ನು ಏರ್ಪಡಿಸಬೇಕೆಂದು ಕೇಳಿದರು.

9. ವಂಶಪಾರಂಪರ್ಯವಾದ ಉದ್ಯೋಗಗಳಿಗೆ ಸಂಬಂಧಿಸುವ ಬೊಂಬಾಯಿ ಮತ್ತು ಮದರಾಸಿನ ಆಕ್ಟುಗಳನ್ನು ಪರಿಶೋಧಿಸಿದುದರಲ್ಲಿ ಅನೇಕ ಕಾರಣಗಳಿಂದ ಬೊಂಬಾಯಿನ ಆಕ್ಟು ತಕ್ಕದ್ದಾಗಿಲ್ಲವೆಂದು ಕಂಡುಬಂತು. ಅವುಗಳಲ್ಲಿ ಮುಖ್ಯವಾದ ಕಾರಣಗಳು ಯಾವುವೆಂದರೆ:—

(i) ಹಳೆಯ ನ್ಯಾಯಗಳು ಸಾಧಾರಣವಾಗಿರುವಂತೆ, ಬೊಂಬಾಯಿ ಆಕ್ಟು—ಆಕ್ಟಿನ ಮೇರೆ ಮಾಡಿದ ನಿಬಂಧನೆಗಳ ಮೂಲಕ ಈಗ ಅನುಕೂಲವಾಗಿ ವ್ಯವಸ್ಥೆ ಮಾಡಬಹುದಾದ, ಬಹು ಚಿಕ್ಕ ವಿಷಯಗಳಿಗೆ ಪ್ರವೇಶಿಸಿತು.

(ii) ಬೊಂಬಾಯಿ ಆಕ್ಟು ವಂಶ ಪಾರಂಪರ್ಯವಾದ ಉದ್ಯೋಗದ ಸ್ವಾಧೀನತೆಗಾಗಿ ವ್ಯಾಜ್ಯ ತರುವ ಪದ್ಧತಿಯನ್ನು ಅಂಗೀಕರಿಸಲಿಲ್ಲ. ಅಂಥಾ ಪದ್ಧತಿಯು ಮೈಸೂರು ದೇಶದಲ್ಲಿ ಇರುತ್ತಾ ಇದೆ.

(iii) ಬೊಂಬಾಯಿ ಆಕ್ಟಿನಲ್ಲಿ ಪ್ರತಿ ಪಟೇಲ ಶಾನುಭೋಗನ ವಿಷಯದಲ್ಲಿಯೂ ಒಂದು ಕ್ರಮವಾದ ಸೆಟ್ಲ್‌ಮೆಂಟ್ ಯಾ ವ್ಯವಸ್ಥೆಯನ್ನು ಮಾಡುವುದನ್ನು ಯೋಚಿಸಿ ಇದೆ. ಕಮಿಷನ್ ಕಾಲದಲ್ಲಿ ಮೈಸೂರು ಸೀಮೆಯ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಅಂಥಾ ಸೆಟ್ಲ್‌ಮೆಂಟ್ ಮಾಡಲು ಪ್ರಯತ್ನ ನಡೆಯಿತು. ಆದರೆ ಅದರ ಫಲಿತಾಂಶವು ತೃಪ್ತಿಕರವಾಗಿಲ್ಲ.

(iv) ಬೊಂಬಾಯಿ ಆಕ್ಟಿನ ಕೆಲವು ನಿಯಮಗಳು ಮೈಸೂರಿನಲ್ಲಿ ಜಾರಿಯಲ್ಲಿರುವ ನಿಬಂಧನೆ ಅಥವಾ ಪದ್ಧತಿಗೆ ವಿರುದ್ಧವಾಗಿವೆ. ಇದಕ್ಕೆ ದೃಷ್ಟಾಂತವಾಗಿ—ಮೈಸೂರು ಸೀಮೆಯಲ್ಲಿ ಡೆಪ್ಯುಟಿ ಕಮಿಷನರುಗಳಿಗೆ ಕೆಲವು ಸಂದರ್ಭಗಳಲ್ಲಿ ಸರ್ಕಾರದವರ ಮಂಜೂರಾತಿಯನ್ನು ಮುಂದಾಗಿ ಪಡೆಯದೆ ಗ್ರಾಮ ಉದ್ಯೋಗಸ್ಥರನ್ನು ಕೆಲಸದಿಂದ ತಳ್ಳಿಬಿಡುವ ಅಧಿಕಾರವು ಬಹುಕಾಲದಿಂದ ಇದೆ. ಬೊಂಬಾಯಿ ಆಕ್ಟಿನ ಮೇರೆ ಹೀಗಿಲ್ಲ.

10. 1895ನೆ ಇಸವಿಯ 3ನೆಯದಾದ ಮದರಾಸಿನ ವಂಶಪಾರಂಪರ್ಯವಾದ ಗ್ರಾಮ ಉದ್ಯೋಗಗಳ ಆಕ್ಟಿನ ನಿಯಮಗಳು ಸ್ಥಳೀಯ ಪದ್ಧತಿಗೆ ಹೆಚ್ಚಾಗಿ ಅನುಸಾರವಾಗಿಯೂ ಸ್ಥಳೀಯ ಆವಶ್ಯಕತೆಗಳಿಗೆ ತಕ್ಕವಾಗಿಯೂ ಕಂಡುಬಂದುವು.

11. ನ್ಯಾಯವಿಧಾಯಕ ಇಲಾಖೆಯಲ್ಲಿ ಒಂದು ಬಿಲ್ಲು ತದನುಸಾರವಾಗಿ ತಯಾರುಮಾಡಲ್ಪಟ್ಟಿತು. ಹೀಗೆ ತಯಾರುಮಾಡುವುದರ ಉದ್ದೇಶವು ಈಗಿನ ಪದ್ಧತಿಯನ್ನು ಬೇರುಸಹಿತ ಕಿತ್ತು ಹಾಕುವ ಒಂದು ಬದಲಾವಣೆಯನ್ನು ಜಾರಿಗೆ ತರುವುದಲ್ಲ, ಆದರೆ, ಗ್ರಾಮ ಉದ್ಯೋಗಸ್ಥರ ಕಾರ್ಯಸಾಫಲ್ಯತ್ವವನ್ನು ಅಭಿವೃದ್ಧಿಪಡಿಸಲು ಆವಶ್ಯವಾದ ಬದಲಾವಣೆಗಳೊಡನೆ ಮೈಸೂರು ಗ್ರಾಮ ಉದ್ಯೋಗಗಳ ಸಂಪ್ರದಾಯಗಳನ್ನು ಸಾಧ್ಯವಾದ ಮಟ್ಟಿಗೂ ಅವಲಂಬಿಸುವುದೇ ಈ ಬಿಲ್ಲಿನ ಉದ್ದೇಶವಾಗಿದೆ. ಈ ಬಿಲ್ಲಿನ ಮುಖ್ಯವಾದ ಮೂಲತತ್ವಗಳು ಯಾವುವೆಂದರೆ:—

(i) ಈ ಬಿಲ್ಲು ಸರ್ಕಾರಿ ಗ್ರಾಮಗಳಲ್ಲಿಯೂ ಪರಾಧೀನ ಮಾಡಲ್ಪಟ್ಟ ಪ್ರದೇಶಗಳಲ್ಲಿಯೂ ಗ್ರಾಮ ಉದ್ಯೋಗಸ್ಥರಿಗೆ ಇರಬೇಕಾದ ಯೋಗ್ಯತೆಗಳನ್ನು ವಿಧಿಸುತ್ತದೆ ಮತ್ತು ಅವರ ನೇಮಕದ, ಅವರನ್ನು ಕೆಲಸದಿಂದ ತೆಗೆದುಹಾಕುವುದರ ಮತ್ತು ಅವರಿಗೆ ಶಿಕ್ಷೆ ಕೊಡುವ ಅಧಿಕಾರಗಳನ್ನು ಗೊತ್ತುಮಾಡುತ್ತದೆ.

[ಮಿ|| ಟಿ. ಆನಂದರಾವ್; ಮಿ|| ಎಂ. ಕಾಂತರಾಜ ಅರಸು; ಮಿ|| ಕೆ. ಪಿ. ಪುಟ್ಟಣ್ಣ ಶೆಟ್ಟಿ.]

(ii) ಇದು ವ್ಯಾಜ್ಯಗಳ ವಿಷಯದಲ್ಲಿ ನಡೆಯಬೇಕಾದ ಕ್ರಮವನ್ನು ಸುಲಭ ಮಾಡುತ್ತದೆ.

(iii) ಇದು—ಜಂಟಿಯಾಗಿ ಅಥವಾ ಸರದಿಯಮೇರೆ ಒಂದೇ ಉದ್ಯೋಗದ ಕೆಲಸವನ್ನು ಮಾಡುವ ಎರಡು ಅಥವಾ ಹೆಚ್ಚು ಮಂದಿ ಉದ್ಯೋಗಸ್ಥರಿರುವ ತೊಂದರೆಯಾದ ಮತ್ತು ಅನನುಕೂಲವಾದ ಪದ್ಧತಿಯನ್ನು ತೆಗೆದುಹಾಕುತ್ತದೆ.

(iv) ಇದು—ಕೆಲವು ಸಂದರ್ಭಗಳಲ್ಲಿ ಗ್ರಾಮ ಉದ್ಯೋಗಗಳ ಹಿಡುವಳಿದಾರರಾಗಿ ಹೆಂಗಸರನ್ನು ರಿಜಿಸ್ಟರ್ಮಾಡುವ ಪದ್ಧತಿಯನ್ನು ತೆಗೆದುಹಾಕುತ್ತದೆ. ಈ ಪದ್ಧತಿಯು ಗ್ರಾಮ ಉದ್ಯೋಗದಲ್ಲಿ ಅನನುಕೂಲಕ್ಕೂ ಅಸಮರ್ಥತೆಗೂ ಮತ್ತೊಂದು ಪ್ರಬಲವಾದ ಕಾರಣವಾಗಿದೆ.

12. ಈ ಬಿಲ್ಲಿನ ಮುಸುವಿದಾ ಯಾ ಚಿತ್ತು ಪ್ರತಿಯನ್ನು ಸರ್ವೆ, ರೆವಿನ್ಯೂ, ಮತ್ತು ಎಕ್ಸೈಜು ಕಮಿಷನರುಗಳಿಗೂ, ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮಿಷನರುಗಳಿಗೂ ಅಭಿಪ್ರಾಯದ ಬಗ್ಗೆ ಕಳುಹಿಸಿ ಇತ್ತು. ಆಲೋಚನೆ ಕೇಳಿದ ಎಲ್ಲಾ ಆಫೀಸರುಗಳೂ ನ್ಯಾಯವನ್ನು (ಕಾನೂನನ್ನು) ಏರ್ಪಡಿಸುವುದು ಒಳ್ಳೆಯದೆಂದು ಏಕಮನಸ್ಸಾಗಿ ಪ್ರಶಂಸಿಸುತ್ತಾರೆ. ಅವರು ಮಾಡಿದ ಗುಣದೋಷ ನಿರೂಪಣೆಗಳೂ ಸೂಚನೆಗಳೂ ಅಮೂಲ್ಯವಾಗಿರುವುದಲ್ಲದೆ ಜಾಗರೂಕವಾದ ಪರ್ಯಾಲೋಚನೆಗೆ ಅರ್ಹವಾಗಿರುವುದರಿಂದ ಈ ಸಭೆಯಿಂದ ಹಾಗೆ ಪರ್ಯಾಲೋಚಿಸತಕ್ಕ ಬಗ್ಗೆ ನಿಲ್ಲಿಸಿಡಲ್ಪಟ್ಟಿವೆ. ಈ ಬಿಲ್ಲನ್ನು ಪ್ರಥಮತಃ ಏರ್ಪಡಿಸಿದಂತೆ ಸಭೆಗೆ ಒಪ್ಪಿಸಲಾಗುವುದು. ಈಗ ಈ ಬಿಲ್ಲನ್ನು ಪ್ರಸ್ತಾಪಿಸಲು ಅಪ್ಪಣೆಗಾಗಿ ಬಿನ್ನವಿಸುವೆವು.

ಮಿ|| ಎಂ. ಕಾಂತರಾಜ ಅರಸಿನವರು ಈ ಬಿನ್ನಹವನ್ನು ಅನುಮೋದಿಸಿದರು. ಈ ಬಿನ್ನಹವನ್ನು ಸಭೆಯ ಸಮ್ಮತಿಗೆ ಹಾಕಿ ನಿರ್ವಹಿಸಲಾಯಿತು.

ಮೈಸೂರು ಪೊಲೀಸು ಬಿಲ್ಲು.

[ಮಿ|| ಕೆ. ಪಿ. ಪುಟ್ಟಣ್ಣ ಶೆಟ್ಟಿ.]

ಅಧ್ಯಕ್ಷರೇ,

ಈಗ ನಾವು ಸಭೆಯಲ್ಲಿ ಪ್ರಸ್ತಾಪಿಸುವ ಬಿಲ್ಲು ಈ ಸೀಮೆಯ ಪೊಲೀಸು ಆಡಳಿತಕ್ಕೆ ಸಂಬಂಧಿಸುತ್ತದೆ, ಮತ್ತು ಕ್ರಮ ಪೊಲೀಸು ಮತ್ತು ಗ್ರಾಮ ಪೊಲೀಸಿನ ಏರ್ಪಾಡು ಮತ್ತು ಸಂಸ್ಥಾಪನೆಯ ವಿಚಾರವಾದ ನ್ಯಾಯವನ್ನು (ಕಾನೂನನ್ನು) ಒಟ್ಟು ಕೂಡಿಸಿ ತಿದ್ದುಪಾಟು ಮಾಡುವುದು ಅದರ ಉದ್ದೇಶವಾಗಿದೆ. ಈಗ ಕೆಲವು ಕಾಲದಿಂದ ಪೊಲೀಸು ಆಡಳಿತದ ವಿಷಯವು ಮೈಸೂರು ಸೀಮೆಯಲ್ಲಿಯೂ ಬ್ರಿಟಿಷ್ ಇಂಡಿಯಾವಿನಲ್ಲಿಯೂ ಕೂಡ ವಿಶೇಷವಾಗಿ ಪರ್ಯಾಲೋಚನೆಯಲ್ಲಿದೆ. ಅದರ ಕಾರ್ಯಸಾಧಕತ್ವ ಅಥವಾ ಹಾಗಿಲ್ಲದೆ ಇರೋಣವು ಪ್ರಜೆಗಳ ಕ್ಷೇಮಕ್ಕೆ ಬಹಳವಾಗಿ ಸಂಬಂಧಿಸುತ್ತದೆ, ಮತ್ತು ಮೈಸೂರು ಸರ್ಕಾರದವರು ಪೊಲೀಸು ಏರ್ಪಾಡಿನಲ್ಲಿ ಪೊಲೀಸನ್ನು ಅಧಿಕ ಸಾಮರ್ಥ್ಯವುಳ್ಳದಾಗಿಯೂ ಜನಗಳ ಆವಶ್ಯಕತೆಗಳಿಗೆ ವಿಶೇಷವಾಗಿ ತಕ್ಕದ್ದಾಗಿಯೂ ಮಾಡುವುದಕ್ಕೋಸ್ಕರ ಆಗಾಗ ಬದಲಾವಣೆಗಳನ್ನು ಆಚರಣೆಗೆ ತಂದಿರುತ್ತಾರೆ. ಒಬ್ಬರ ಹಿಂದೆ ಒಬ್ಬರಾಗಿ ಇಲ್ಲಿನ ಆಡಳಿತಗಳನ್ನು ನಡೆಸಿದವರ ಪ್ರಯತ್ನಗಳಿಂದ ಬ್ರಿಟಿಷ್ ಇಂಡಿಯಾವಿನ ಕ್ರಮವಾದ ಪ್ರಾಂತ್ಯಗಳಲ್ಲಿ ಆಚರಣೆಯಲ್ಲಿರುವ ಏರ್ಪಾಡಿಗೆ ಸ್ವಲ್ಪ ವ್ಯತಿರಿಕ್ತವಾದ ಒಂದು ಪೊಲೀಸು ಆಡಳಿತದ ಏರ್ಪಾಡು ಈ ಸೀಮೆಯಲ್ಲಿ ಉಂಟಾಯಿತು, ಮತ್ತು ಇಲ್ಲಿನ ಹಿಂದಿನ ಸಂಪ್ರದಾಯದಿಂದಲೂ ವರ್ಧಮಾನವಾಗುತ್ತಿರುವ ಆಡಳಿತದ ದಿನೇ ದಿನೇ ಹೆಚ್ಚುತ್ತಿರುವ ಆವಶ್ಯಕತೆಗಳಿಂದಲೂ ಇಲ್ಲಿನ ಪೊಲೀಸಿಗೆ ಕೆಲವು ವಿಶೇಷ ಲಕ್ಷಣಗಳು ಉಂಟಾದುವು. ಈ ಬಿಲ್ಲಿನಿಂದ ಈಗಿರುವ ಪೊಲೀಸಿನ ಸಂಸ್ಥಾಪನೆಯಲ್ಲಿ ಪ್ರಬಲವಾದ ಯಾವ ಬದಲಾವಣೆಗಳೂ ಆಚರಣೆಗೆ ತರಲ್ಪಡುವುದಿಲ್ಲವೆಂದೂ, ಆದರೆ ಈಗಿನ ನ್ಯಾಯವು (ಕಾನೂನು) ಸ್ವಲ್ಪ ಅಸ್ಪಷ್ಟವಾಗಿ ಬಿಟ್ಟಿರುವುದನ್ನು ಅಧಿಕ ಸ್ಪಷ್ಟವಾಗಿಯೂ ಖಂಡಿತವಾಗಿಯೂ ವಿವರಿಸಲು ಈ ಬಿಲ್ಲಿನಲ್ಲಿ ಯತ್ನ ಮಾಡಿದೆಯೆಂದೂ ನಾವು ತತ್‌ಕ್ಷಣ ಹೇಳಬಹುದು.

ಮೈಸೂರು ಪೊಲೀಸಿನ ಚರಿತ್ರ.

ಮೈಸೂರು ಪೊಲೀಸಿನ ಚರಿತ್ರವು ಸರಸವಾಗಿದೆ ಮತ್ತು ಅದರ ಕೆಲವು ಮುಖ್ಯವಾದ ಲಕ್ಷಣಗಳಿಗೆ ಚಾರಿತ್ರಿಕವಾದ ಸಂಗತಿಗಳು ಕಾರಣವಾಗಿರುವುದರಿಂದ ಆ ಚರಿತ್ರವನ್ನು ಸಂಕ್ಷೇಪವಾಗಿ ಮೊದಲಿನಿಂದ ಹೇಳುವುದು ಅನವಶ್ಯವಾಗಿಲ್ಲ. ಗ್ರಾಮ ನೌಕರರಿಂದಲೂ ಅಕ್ರಮವಾದ ಕಾಲ್ಬಲ ಯಾ ಬಾರು ಪಾಜುಗಳಿಂದಲೂ ಏರ್ಪಡಿಸಲ್ಪಟ್ಟ ಹಿಂದಿನ ಪೊಲೀಸಿಗೆ ಬದಲಾಗಿ 1834ನೆ ಇಸವಿಯಲ್ಲಿ ಇಡಲ್ಪಟ್ಟ ಕಂದಾಚಾರದ ಪಾಜಿನಿಂದ ಈಗಿನ ಪೊಲೀಸು ಹುಟ್ಟಿತು. ಕಂದಾಚಾರದ ಪಾಜು ಒಂದು ದೊಡ್ಡದಾದ ಮತ್ತು ಅಕ್ರಮವಾದ, ಕಮ್ಮಿ ಸಂಬಳ ಸಲ್ಲುತ್ತಿದ್ದ ಮತ್ತು ಮಾಡತಕ್ಕ ಕೆಲಸಗಳು ನಿಷ್ಕರ್ಷೆಯಿಲ್ಲದ ಒಂದು ಸೈನ್ಯವಾಗಿತ್ತು. ಕಂದಾಯದ ವಸೂಲಾತಿಯನ್ನೂ ಪೊಲೀಸು ಮತ್ತು ಇತರ ಕೆಲಸಗಳನ್ನೂ ಕೂಡ ಈ ಪಾಜಿಗೆ ಕೊಟ್ಟಿತ್ತು. ಅಮಲ್ದಾರನು ತಾಲ್ಲೂಕು ಪೊಲೀಸಿಗೆ ಮುಖ್ಯಸ್ಥನಾಗಿದ್ದನು. ಕಂದಾಚಾರದ ಕ್ರಮದಿಂದ ಪೊಲೀಸಿನವರಿಗೂ ರೆವಿನ್ಯೂ ಅಧಿಕಾರಿಗಳಿಗೂ ವಿಶೇಷ ಸಂಬಂಧ ಉಂಟಾಗಿದ್ದುದರಿಂದ ಮುಲ್ಕೀ ಕೆಲಸಕ್ಕಾಗಿ ಒಂದು ಪ್ರತ್ಯೇಕವಾದ ಸೇನೆಯನ್ನು ಏರ್ಪಡಿಸಿ ಪೊಲೀಸು ಅಧಿಕಾರವನ್ನೂ ರೆವಿನ್ಯೂ ಅಧಿಕಾರಗಳನ್ನೂ ಪ್ರತ್ಯೇಕಿಸಲು ಪ್ರಯತ್ನಗಳು ನಡೆದುವು. ಈ ಪ್ರಯತ್ನಗಳು ನೆರವೇರದೆ 1866ರಲ್ಲಿ 1861ರ ಇಂಡಿಯಾ ಸರ್ಕಾರದ ಆಕ್ಟನ್ನು ಬೆಂಗಳೂರು ನಗರಕ್ಕೂ ಡಿಸ್ಟ್ರಿಕ್ಟಿಗೂ ಜಾರಿಗೆ ತರಲಾಯಿತು. ಆಗ ಚೀಫ್ ಕಮಿಷನರಾಗಿದ್ದ ಮಿ|| ಎಲ್. ಬೌರಿಂಗರವರು ಸೂಪರಿಂಟೆಂಡುಗಳ ಅಭಿಪ್ರಾಯಕ್ಕೆ ಒಪ್ಪಿ ಈ ಸಂಸ್ಥಾನಕ್ಕೆಲ್ಲಾ 1861ರ ಆಕ್ಟನ್ನು ವಿಸ್ತರಿಸುವುದನ್ನು ಬಲವಾಗಿ ಅಡ್ಡಿಮಾಡಿದರು, ಮತ್ತು ಮದರಾಸಿನ ಪೊಲೀಸು ಏರ್ಪಾಡಿನಲ್ಲಿ ಪೊಲೀಸಿನವರಿಗೂ ರೆವಿನ್ಯೂ ಅಧಿಕಾರಿಗಳಿಗೂ ಸಂಬಂಧವನ್ನೂ

[ಮಿ|| ಕೆ. ಪಿ. ಪುಟ್ಟಣ್ಣ ಶೆಟ್ಟಿ.]

ಪೊಲೀಸಿನವರ ಮೇಲೆ ರೆವಿನ್ಯೂ ಅಧಿಕಾರಿಗಳಿಗೆ ಅಧಿಕಾರವನ್ನೂ ಶುದ್ಧಾಂಗವಾಗಿ ತಪ್ಪಿಸಿದುದರಿಂದ ಅದು ಮೈಸೂರಿನ ಸ್ಥಿತಿಗೆ ಸಂಪೂರ್ಣವಾಗಿ ತಕ್ಕದ್ದಲ್ಲವೆಂದು ಅದನ್ನು ಮೈಸೂರಿನಲ್ಲಿ ಜಾರಿಗೆ ತರುವುದಕ್ಕೆ ವಿಶೇಷವಾಗಿ ಅಸಮ್ಮತರಾಗಿದ್ದರು. ಮದರಾಸು ಪೊಲೀಸು ಕ್ರಮದಲ್ಲಿ ಗ್ರಾಮ ಪೊಲೀಸಿನವರು ಇರುವುದನ್ನು ಬಹಳ ಮಟ್ಟಿಗೆ ಗಣನೆಗೆ ತಾರದೆ ಹೋದುದರಿಂದಲೂ, ಮಿತವ್ಯಯಕ್ಕೋಸ್ಕರವೂ ಸಾಮರ್ಥ್ಯಕ್ಕೋಸ್ಕರವೂ, ವಿಸ್ತಾರವಾದ ಪೊಲೀಸಿನ ಏರ್ಪಾಡನ್ನು ಗ್ರಾಮದ ಪೊಲೀಸಿನ ಆಧಾರದ ಮೇಲೆ ಮಾಡಬೇಕಾಗಿರುವುದರಿಂದಲೂ ಮದರಾಸಿನ ಪೊಲೀಸು ಏರ್ಪಾಡು ಬುಡದಿಂದ ಊನವಾದುದೆಂದು 1871ನೆ ಇಸವಿಯಲ್ಲಿ ಈ ಸಂಸ್ಥಾನದ ಪೊಲೀಸಿನ ಸಂಸ್ಥಾಪನೆಯನ್ನು ಮಂಜೂರು ಮಾಡುವುದರಲ್ಲಿ ಇಂಡಿಯಾ ಸರ್ಕಾರದವರು ಹೇಳಿದರು. ಈ ಹುಕುಂಗಳಿಗೆ ಅನುಸಾರವಾಗಿ ಗ್ರಾಮ ಮತ್ತು ಕ್ರಮ ಪೊಲೀಸಿನ ಸಂಸ್ಥಾಪನೆಗಾಗಿಯೂ ಮತ್ತು ಅದನ್ನು ಕ್ರಮಪಡಿಸುವುದಕ್ಕೋಸ್ಕರವೂ ಮತ್ತು ಪೊಲೀಸಿಗೆ ಸಂಬಂಧಪಟ್ಟ ಮಾಜಿಸ್ಟ್ರೇಟುಗಳ ಆಚರಣೆಗೋಸ್ಕರವೂ 1872ರಲ್ಲಿ ನಿಬಂಧನೆಗಳನ್ನು ಮಾಡಲಾಯಿತು. ಇಲ್ಲಿಗೆ ಹಳೆಯ ಕಂದಾಚಾರದ ಕ್ರಮವು ಮುಗಿದು ಅದಕ್ಕೆ ಬದಲಾಗಿ ಗ್ರಾಮ ಮತ್ತು ಕ್ರಮ ಪೊಲೀಸು ಏರ್ಪಟ್ಟು ಆಡಳಿತದ ವ್ಯತ್ಯಸ್ತವಾಗುತ್ತಿರುವ ವಿದ್ಯಮಾನಗಳಿಗೆ ಅವಶ್ಯಕವಾಗಿ ಬಂದ ಬದಲಾವಣೆಗಳೊಡನೆಯೂ ಅಭಿವೃದ್ಧಿಗಳೊಡನೆಯೂ ಈ ಕಾಲದ ವರೆಗೆ ನಡೆದು ಬಂದಿದೆ. ಹೊಸ ನಿಬಂಧನೆಗಳ ಮೇರೆ ಡೆಪ್ಯುಟಿ ಸೂಪರಿಂಟೆಂಡೆಂಟುಗಳು ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಪೊಲೀಸಿಗೆ ಮುಖ್ಯಸ್ಥರಾಗಿಯೂ, ತಾಲ್ಲೂಕು ಮಾಜಿಸ್ಟ್ರೇಟುಗಳು ತಮ್ಮ ತಾಲ್ಲೂಕುಗಳ ಗ್ರಾಮ ಪೊಲೀಸಿಗೆ ಮುಖ್ಯಸ್ಥರಾಗಿಯೂ ಇನ್ಸ್‌ಪೆಕ್ಟರುಗಳು ತಾಲ್ಲೂಕು ಕ್ರಮ ಪೊಲೀಸಿಗೆ ಮುಖ್ಯಸ್ಥರಾಗಿಯೂ ಇರುತ್ತಿದ್ದರು. ತಾಲ್ಲೂಕು ಇನ್ಸ್‌ಪೆಕ್ಟರ ಸ್ವಾತಂತ್ರ್ಯವನ್ನು ಸ್ವಲ್ಪ ಕಾಲದಲ್ಲೇ ತೆಗೆದುಹಾಕಿ 1878ರಲ್ಲಿ ಅವನನ್ನು ನೇರಾಗಿ ಅಮಲ್ದಾರನ ತಾಬೆಯಲ್ಲಿ ಇಡಲಾಯಿತು. ಈ ಪದ್ಧತಿಯು ಈ ದಿನದ ವರೆಗೆ ನಡೆದು ಬರುತ್ತಿದೆ. ಈ ಪ್ರಕಾರವಾಗಿ 1834ರಿಂದಲೂ, ಇನ್ನೂ ಪೂರ್ವದಿಂದಲೂ ಕೂಡ, ಡಿಸ್ಟ್ರಿಕ್ಟು ಸೂಪರಿಂಟೆಂಡೆಂಟುಗಳೂ ಅವರಿಗೆ ತರುವಾಯ ಬಂದ ಡೆಪ್ಯುಟಿ ಕಮಿಷನರುಗಳೂ ಡಿಸ್ಟ್ರಿಕ್ಟು ಪೊಲೀಸಿನ ಮುಖ್ಯಸ್ಥರಾಗಿಯೂ, ಅಮಲ್ದಾರರು (1872ರಿಂದ 1878ರ ವರೆಗಿನ ಸ್ವಲ್ಪ ಕಾಲದಲ್ಲಿ ವಿನಾ) ತಾಲ್ಲೂಕು ಪೊಲೀಸಿನ ಮುಖ್ಯಸ್ಥರಾಗಿಯೂ ಇರುತ್ತಿದ್ದಾರೆ. ಪೊಲೀಸು ಆಡಳಿತದ ಈಚಿನ ಚರಿತ್ರೆಯು, ಆಗಾಗ್ಯೆ ಪೊಲೀಸು ಸೈನ್ಯಕ್ಕೆ ಹೆಚ್ಚಾಗಿ ಸೇರಿಸಿರುದಕ್ಕೂ, ವ್ಯತ್ಯಸ್ತವಾದ ವಿದ್ಯಮಾನಗಳಿಗೆ ಸರಿಯಾಗಿ ಹೊಸ ಉದ್ಯೋಗಸ್ಥರ ಏರ್ಪಾಡಿಗೂ, ಈಚೆಗೆ ಸೂಪರಿಂಟೆಂಡೆಂಟುಗಳು ಮತ್ತು ಅಸಿಸ್ಟೆಂಟು ಸೂಪರಿಂಟೆಂಡೆಂಟುಗಳೆಂದು ಹೆಸರುಕೊಟ್ಟಿರುವ ಪೊಲೀಸು ಅಸಿಸ್ಟೆಂಟು ಕಮಿಷನರುಗಳನ್ನು ಪುನಃ ಇಟ್ಟುದಕ್ಕೂ 1885ರಲ್ಲಿ ಬೇರೆ ಪೊಲೀಸು ಇನ್ಸ್‌ಪೆಕ್ಟರ್ ಜನರಲಿನ ನೇಮಕಕ್ಕೂ, ಪೊಲೀಸು ಸೈನ್ಯದ ಒಳ ಆಡಳಿತವನ್ನು ಕುರಿತು ನಿಬಂಧನೆಗಳ ಮತ್ತು ಹುಕುಂಗಳ ಏರ್ಪಾಟಿಗೂ ಸಂಬಂಧಿಸುತ್ತದೆ.

ಪೊಲೀಸು ಬಿಲ್ಲಿನ ಚರಿತ್ರೆ.

ಪೊಲೀಸು ಆಡಳಿತದ ಕ್ರಮದಲ್ಲಿ ಹೀಗೆ ಕೆಲವು ಬದಲಾವಣೆಗಳಾಗಿದ್ದಾಗ್ಯೂ ಪೊಲೀಸಿಗೆ ಸಂಬಂಧಪಟ್ಟ ನ್ಯಾಯವು (ಕಾನೂನು) ಅವುಗಳ ಜತೆಯಲ್ಲಿ ಬದಲಾಯಿಸಲ್ಪಡಲಿಲ್ಲ. ಈಗ ಬೆಂಗಳೂರು ನಗರದಲ್ಲಿ 1861ರ 5ನೆ ಆಕ್ಟೂ, ಮೈಸೂರು ದೇಶದ ಉಳಿದ ಭಾಗದಲ್ಲಿ 1872ರ ಕ್ರಮ ಮತ್ತು ಗ್ರಾಮ ಪೊಲೀಸಿನ ನಿಬಂಧನೆಗಳೂ ಹೀಗೆ ಬೇರೆ ಬೇರೆಯಾದ ಎರಡು ಚಟ್ಟಗಳು ಜಾರಿಯಲ್ಲಿವೆ. ಏಕರೀತಿಯಾದ ಕ್ರಮದ ಆವಶ್ಯಕತೆಯು 1886ರಲ್ಲಿ ಗೊತ್ತಿಗೆ ಬಂತು. 1861ರ 5ನೆ ಆಕ್ಟನ್ನು ತೆಗೆದುಹಾಕಿ ಸಂಸ್ಥಾನಕ್ಕೆಲ್ಲಾ 1872ರ ನಿಬಂಧನೆಗಳನ್ನು ವ್ಯಾಪಿಸುವಂತೆ ಮಾಡುವ ಒಂದು ಮುಸುವಿದಾ ಚಿತ್ತು ರೆಗ್ಯುಲೇಷನನ್ನು ಆಗ ತಯಾರುಮಾಡಲಾಯಿತು. ಇದೂ, ಇದಕ್ಕೆ ಈಚೆಗೆ 1861ರ 5ನೆ ಆಕ್ಟನ್ನು ಸಂಸ್ಥಾನಕ್ಕೆಲ್ಲಾ ವ್ಯಾಪಿಸುವಂತೆ ಮಾಡಿ 1872ರ ನಿಬಂಧನೆಗಳಲ್ಲಿ ಅವಶ್ಯವಾದಷ್ಟನ್ನು ಇಟ್ಟುಕೊಳ್ಳುವಂತೆ ಮಾಡುವ ಒಂದು ರೆಗ್ಯುಲೇಷನನ್ನು ಏರ್ಪಡಿಸುವ ಪ್ರಯತ್ನವೂ ಸಮ್ಮತವಾಗಲಿಲ್ಲ. 1897ರಲ್ಲಿ ಮೈಸೂರು ಸೀಮೆಯ ವಿದ್ಯಮಾನಗಳಿಂದ ಅವಶ್ಯವಾಗಿ ಬಂದ ಬದಲಾವಣೆಗಳೊಡನೆ ಬೊಂಬಾಯಿ ಡಿಸ್ಟ್ರಿಕ್ಟು ಪೊಲೀಸು ಆಕ್ಟಿನ (1890ರ 4) ಆಧಾರದ ಮೇಲೆ ಒಂದು ಹೊಸ ಮುಸುವಿದಾ ಚಿತ್ತು ರೆಗ್ಯುಲೇಷನನ್ನು ತಯಾರುಮಾಡಲಾಯಿತು. ಈಗಿನ ಪೊಲೀಸು ಆಡಳಿತದ ಕ್ರಮಕ್ಕೆ ವಿಶೇಷವಾಗಿ ಸರಿಬೀಳುವ ಹಾಗೆ ಮೇಲ್ಕಂಡ ಚಿತ್ತು ರೆಗ್ಯುಲೇಷನನ್ನು ಇನ್ನೂ ತಿದ್ದುಪಾಟು ಮಾಡಿ ಅದನ್ನು ಷರಾ ಬಗ್ಗೆ ಕೆಲವು ಆರಿಸಿದ ಆಫೀಸರುಗಳಿಗೆ ಕಳುಹಿಸಲಾಯಿತು. ಅವರ ಅಭಿಪ್ರಾಯಗಳು ಬಂದ ಮೇಲೆ ಅವರು ಮಾಡಿದ ಪ್ರಶಂಸೆಗಳಲ್ಲಿ ಕೆಲವನ್ನು ಅಂಗೀಕರಿಸಲಾಯಿತು. ಆದರೂ ಸರ್ಕಾರದವರು ಈ ಏರ್ಪಾಡಿನ ಪ್ರಾಮುಖ್ಯತೆಯನ್ನು ದೃಷ್ಟಿಯಲ್ಲಿಟ್ಟು, ಮಿ|| ಎ. ರಂಗಸ್ವಾಮಯ್ಯಂಗಾರ್ರು ಪ್ರೆಸಿಡೆಂಟ್ (ಅಧ್ಯಕ್ಷರು) ಆಗಿಯೂ ಮಿ|| ಕಾರ್, ಮಿ|| ಎಂ. ನಾರಾಯಣರಾವ್ ಮತ್ತು ನಾವೂ ಸಭಿಕರಾಗಿಯೂ ಸೇರಿದ್ದ ಒಂದು ನಿಯುಕ್ತ ಸಮಾಜವನ್ನು ಸದರಿ ಚಿತ್ತು ರೆಗ್ಯುಲೇಷನಿನ ಪುನರ್ವಿಮರ್ಶೆಯ ಬಗ್ಗೆ 1904ರಲ್ಲಿ ನೇಮಿಸಿದರು. ಈ ಸಮಾಜದವರು ಚಿತ್ತು ರೆಗ್ಯುಲೇಷನಿನ ವಿವರಗಳನ್ನು ಮಾತ್ರವಲ್ಲದೆ, ಮಿ|| ಕಾರರವರು ಆಲೋಚನೆಗಾಗಿ ಸಭೆಯ ಮುಂದೆ ತಂದ ಮೂಲ ತತ್ವದ ಕೆಲವು ವಿಷಯಗಳನ್ನೂ ಕೂಡ ಚರ್ಚಿಸಿ ಕೆಲವು ಪ್ರಶಂಸೆಗಳನ್ನು ಮಾಡಿದರು. ಈ ಪ್ರಕಾರವಾಗಿ ಸರ್ಕಾರದವರ ಜಾಗರೂಕವಾದ ಪರ್ಯಾಲೋಚನೆಯು ಮತ್ತು ಸಂಸ್ಥಾನದ ಪೊಲೀಸು ಮತ್ತು ಸಾಮಾನ್ಯ ಆಡಳಿತದಲ್ಲಿ ವಿಶೇಷ ಪರಿಚಯವುಳ್ಳ ಸಭಿಕರಿಂದ ಕೂಡಿದ ನಿಯುಕ್ತ ಸಮಾಜದಿಂದ ಮಾಡಲ್ಪಟ್ಟ ಪುನರ್ವಿಮರ್ಶೆಯ ಪ್ರಯೋಜನವನ್ನು ಹೊಂದಿರುವ ಈ ಬಿಲ್ಲಿನಲ್ಲಿ ಈ ನಿಯುಕ್ತ ಸಮಾಜದವರು ಮಾಡಿದ ಪ್ರಶಂಸೆಗಳನ್ನು ಅಂಗೀಕರಿಸಲಾಯಿತು.

ಪೊಲೀಸಿನ ಏರ್ಪಾಡು ಮತ್ತು ಸಂಸ್ಥಾಪನೆ.

ಪೊಲೀಸು ಸೈನ್ಯದ ವಿಷಯದಲ್ಲಿ ಅತ್ಯಂತ ಮುಖ್ಯವಾದ ಅಂಶಗಳು ಅದರ ಏರ್ಪಾಡು ಮತ್ತು ಸಂಸ್ಥಾಪನೆಯಾಗಿ ಇವೆ. ಆದುದರಿಂದ ಬಿಲ್ಲಿನಲ್ಲಿ ಮೊಟ್ಟಮೊದಲು ಈ ಅಂಶಗಳನ್ನು ವ್ಯವಸ್ಥೆ ಮಾಡಿದೆ. ಪೊಲೀಸು ಸಿಬ್ಬಂದಿಯೆಲ್ಲವನ್ನೂ ಪೊಲೀಸು ಇನ್

[ಮಿ॥ ಕೆ. ಪಿ. ಪುಟ್ಟಣ್ಣಶೆಟ್ಟಿ.]

ಸ್ಪೆಕ್ಟರ್ ಜನರಲಿನ ಪ್ರತ್ಯಕ್ಷವಾದ ಅಪ್ಪಣೆಗೂ ಮೇಲ್ವಿಚಾರಣೆಗೂ ಒಳಪಡಿಸಿ ಬಂದು ಸೈನ್ಯವಾಗಿ ಏರ್ಪಡಿಸಿದೆ. ಆದುದರಿಂದ ಅವರು ಪೊಲೀಸು ಇಲಾಖೆಯ ಮುಖ್ಯಸ್ಥರಾಗಿಯೂ ಪೊಲೀಸಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಸರ್ಕಾರಕ್ಕೆ ಆಲೋಚನೆ ಹೇಳುವವರಾಗಿಯೂ ಇರುತ್ತಾರೆ. ಅವರು ಪೊಲೀಸಿನವರ ಮೇಲೂ ತಪ್ಪಿತದ ಮೇಲೂ—ತತ್ಸಾಪಿ ಕ್ರಮವಾಗಿ ಏರ್ಪಾಟು ಮಾಡಿಕೊಂಡು ನಡೆಸಲ್ಪಡುವ ತಪ್ಪಿತದ ಮೇಲೂ—ಸಾಮಾನ್ಯವಾದ ಮೇಲ್ವಿಚಾರಣೆಯನ್ನು ನಡೆಸುತ್ತಾರೆ ಮತ್ತು ಅವರಿಗೆ ಸಾಮಾನ್ಯವಾಗಿ ಪೊಲೀಸು ಸೈನ್ಯದ ಒಳ ಏರ್ಪಾಟನ್ನೂ ಸುಶಿಕ್ಷಣವನ್ನೂ ಕುರಿತು ನಿಬಂಧನೆಗಳನ್ನೂ ಹುಕುಂಗಳನ್ನೂ ಮಾಡಲು ಅಧಿಕಾರ ಕೊಟ್ಟಿದೆ. ಅವರಿಗೆ ಡಿಸ್ಟ್ರಿಕ್ಟುಗಳಲ್ಲಿ ಶುದ್ಧಾಂಗವಾಗಿ ಪೊಲೀಸು ಆಫಿಸರುಗಳಾಗಿರುವ ಡಿಸ್ಟ್ರಿಕ್ಟು ಸೂಪರಿಂಟೆಂಡೆಂಟುಗಳೂ ಅಸಿಸ್ಟೆಂಟು ಸೂಪರಿಂಟೆಂಡೆಂಟುಗಳೂ, ತಾಲ್ಲೂಕುಗಳಲ್ಲಿ ಪೊಲೀಸು ಇನ್ಸ್ಪೆಕ್ಟರುಗಳೂ ಸಹಾಯ ಮಾಡುತ್ತಾರೆ. ಆದರೆ ಮೈಸೂರಿನ ಪೊಲೀಸು ಆಡಳಿತದ ಸಂಪ್ರದಾಯಕ್ಕೆ ಅನುಸಾರವಾಗಿ ಬಿಲ್ಲಿನಲ್ಲಿ ಡೆಪ್ಯುಟಿ ಕಮಿಷನರನ್ನು ಡಿಸ್ಟ್ರಿಕ್ಟು ಪೊಲೀಸಿನ ಮುಖ್ಯಸ್ಥನನ್ನಾಗಿ ಮಾಡಿದೆಯಲ್ಲದೆ, ತಾಲ್ಲೂಕು ಪೊಲೀಸಿನ ಮುಖ್ಯಸ್ಥನಾದ ಪೊಲೀಸು ಇನ್ಸ್ಪೆಕ್ಟರ ಮೇಲೆ ಸಾಮಾನ್ಯವಾದ ಮೇಲ್ವಿಚಾರಣೆಯ ಅಧಿಕಾರವನ್ನೂ ಅಮಲ್ದಾರನಿಗೆ ಕೊಡುವುದರಿಂದ ಆತನಿಗೆ ಪೊಲೀಸು ಅಧಿಕಾರಗಳನ್ನು ನಡೆಸಿಕೊಟ್ಟಿದೆ.

ಡೆಪ್ಯುಟಿ ಕಮಿಷನರ ಮತ್ತು ಅಮಲ್ದಾರರ ಪೊಲೀಸು ಅಧಿಕಾರಗಳು

ಡೆಪ್ಯುಟಿ ಕಮಿಷನರು ಡಿಸ್ಟ್ರಿಕ್ಟು ಪೊಲೀಸಿನ ಮುಖ್ಯಸ್ಥರಾಗಿರೋಣವೂ, ಅಮಲ್ದಾರರು ತಾಲ್ಲೂಕು ಪೊಲೀಸಿನ ಮೇಲೆ ಮೇಲ್ವಿಚಾರಣೆಯ ಅಧಿಕಾರಗಳನ್ನು ನಡೆಸೋಣವೂ ಈಚೆಗೆ ವಿರುದ್ಧವಾದ ಖಂಡನೆಗೆ ಒಳಗಾಗಿದ್ದುವು. ಬ್ರಿಟಿಷ್ ಇಂಡಿಯಾವಿನ ಕೆಲವು ಪ್ರಾಂತ್ಯಗಳಲ್ಲಿ ಪೊಲೀಸಿನವರು ರೆವಿನ್ಯೂ ಉದ್ಯೋಗಸ್ಥರ ಮೇಲ್ವಿಚಾರಣೆಯ ಅಧಿಕಾರಕ್ಕೆ ಶುದ್ಧಾಂಗವಾಗಿ ಒಳಗಾಗದೆ ಸ್ವತಂತ್ರರಾಗಿರುತ್ತಾರೆ, ಮತ್ತು ಈ ಕ್ರಮವನ್ನು ಜಾರಿಗೆ ತರಬೇಕೆಂದು 1891ರಲ್ಲಿ ಮಿ॥ ರಿಕೆಟ್ಸ್‌ರವರೂ ಈಚೆಗೆ ಮಿ॥ ಕಾರ್‌ರವರೂ ಕೇಳಿದರು. ಮಿ॥ ಕಾರ್ ರವರ ಸಲಹೆಗಳು ಹೇಗೋ ಹಾಗೆಯೇ ಮಿ॥ ರಿಕೆಟ್ಸ್‌ರವರ ಸಲಹೆಯು ಡೆಪ್ಯುಟಿ ಕಮಿಷನರುಗಳಿಗೂ ಅಮಲ್ದಾರರಿಗೂ ಪೊಲೀಸಿನವರ ಮೇಲಿನ ವಿಚಾರಣೆಯ ಅಧಿಕಾರವನ್ನೆಲ್ಲಾ ತಪ್ಪಿಸುವುದಕ್ಕೆ ಅಥವಾ ಅಂಥಾ ಅಧಿಕಾರವನ್ನು ತಕ್ಕಮಟ್ಟಿಗೆ ಮಿತಪಡಿಸುವುದಕ್ಕೆ ಸಂಬಂಧಪಟ್ಟಿತ್ತು. ಆದರೂ ಸರ್ಕಾರದವರು ಚೆನ್ನಾಗಿ ಪರ್ಯಾಲೋಚಿಸಿದ ತರುವಾಯ ಮೇಲ್ಕಂಡ ಸಲಹೆಯಂತೆ ಮಾಡುವುದರಿಂದ ಉಂಟಾಗಬಹುದಾದ ಅನುಕೂಲಗಳು ಸಂದೇಹಾಸ್ಪದವಾಗಿಯೂ ಅನನುಕೂಲಗಳು ಬಹುಪ್ರಕಾರವಾಗಿಯೂ ಇರುವಂತೆ ಕಂಡುಬಂದುದರಿಂದ ಪೊಲೀಸು ಆಡಳಿತವು ಕಾರ್ಯಸಾಧಕವಾಗಿ ನಡೆಯುವುದಕ್ಕೋಸ್ಕರ ಡೆಪ್ಯುಟಿ ಕಮಿಷನರುಗಳು ಪೊಲೀಸಿನ ಮುಖ್ಯಸ್ಥರಾಗಿ ಇರುತ್ತಿರಬೇಕೆಂದೂ ಅಮಲ್ದಾರರಿಗೆ ಇರುವ ಪೊಲೀಸು ಕೆಲಸಗಳನ್ನು ತಪ್ಪಿಸುವುದು ಯುಕ್ತವಲ್ಲವೆಂದೂ ಅಭಿಪ್ರಾಯಪಟ್ಟರು. ಹೀಗಾದುದು 1892ರಲ್ಲಿ. 1904ರಲ್ಲಿ ನಿಯುಕ್ತ ಸಮಾಜದ ಸಂಗಗಳಲ್ಲಿ ಮಿ॥ ಕಾರ್ ರವರು ಮೇಲ್ಕಂಡ ಸಲಹೆಗಳನ್ನು ತಿರುಗಿ ಮಾಡಲಾಗಿ ನಿಯುಕ್ತ ಸಮಾಜದವರು ಸಂಪೂರ್ಣವಾಗಿ ಚರ್ಚೆ ಮಾಡಿದ ತರುವಾಯ ಡಿಸ್ಟ್ರಿಕ್ಟು ಪೊಲೀಸಿನ ಮೇಲೆ ಡೆಪ್ಯುಟಿ ಕಮಿಷನರುಗಳ, ತಾಲ್ಲೂಕು ಪೊಲೀಸಿನ ಮೇಲೆ ಅಮಲ್ದಾರರ ಮೇಲ್ವಿಚಾರಣೆಯ ಅಧಿಕಾರಗಳು ನಡೆಯುತ್ತಿರಬೇಕೆಂದು ಶಿಫಾರಸು ಮಾಡಿದರು. ಸರ್ಕಾರದವರು ಈ ಶಿಫಾರಸುಗಳನ್ನು ಅಂಗೀಕರಿಸಬೇಕೆಂದು ತೀರ್ಮಾನಿಸಿದಾರೆ. ಕಳೆದ ಎಪ್ಪತ್ತು ವರ್ಷಗಳಿಂದ ತೃಪ್ತಿಕರವಾಗಿ ನಡೆದು ಬಂದಿರುವ ಕ್ರಮದ ಬದಲಾವಣೆಗೆ ಆವಶ್ಯಕತೆ ಇನ್ನೂ ನಿದರ್ಶನಕ್ಕೆ ಬಂದಿಲ್ಲವಾಗಿ ಬ್ರಿಟಿಷ್ ಇಂಡಿಯಾವಿನ ಕೆಲವು ಪ್ರವರ್ಧಮಾನವಾಗಿರುವ ಪ್ರಾಂತ್ಯಗಳಲ್ಲಿ ನಡೆಯುತ್ತಿರುವ ಕ್ರಮಗಳಿಗೆ ಅನುಸಾರವಾಗಿರಬೇಕೆಂಬ ಕಾರಣದ ಮೇಲೆ ಮಾತ್ರ ಬದಲಾವಣೆಯನ್ನು ಮಾಡಲಾಗದು. ಅನುಭವವೇ ಎಷ್ಟುಮಟ್ಟಿಗಾದರೂ ಮಾರ್ಗದರ್ಶಕವಾಗಿರಬೇಕಾಗಿದ್ದ ಪಕ್ಷದಲ್ಲಿ ಮೈಸೂರಿನಲ್ಲಿ ಈಗ ನಡೆಯುತ್ತಿರುವ ಕ್ರಮವೇ ಬಹಳ ಒಳ್ಳೆಯದಾಗಿ ತೋರುತ್ತದೆ. ಕಳೆದ ಅರ್ಧ ಶತಮಾನದಲ್ಲಿ ಒಬ್ಬರ ಹಿಂದೆ ಮತ್ತೊಬ್ಬರಾಗಿ ಬಂದ ಪ್ರತಿ ಆಡಳಿತದವರೂ ಈ ವಿಷಯವನ್ನು ವ್ಯವಸ್ಥೆ ಮಾಡಬೇಕಾದಾಗ ಮೈಸೂರಿನಲ್ಲಿ ನಡೆಯುತ್ತಿರುವ ಕ್ರಮವೇ ನಿಸ್ಸಂದೇಹವಾಗಿ ಒಳ್ಳೆಯದೆಂದು ಹೇಳಿದಾರೆ. ಇಲಾಖೆಯ ಸಂಸ್ಥಾಪನೆಯ ಮೇಲಿನ ದೃಷ್ಟಿಯೊಂದರಿಂದ ಮಾತ್ರವೇ ಈ ವಿಷಯವನ್ನು ನೋಡದೆ ಅದಕ್ಕೂ ಮೇಲ್ಪಟ್ಟುದಾದ ಪ್ರಜೆಗಳ ಕ್ಷೇಮದ ದೃಷ್ಟಿಯಿಂದ ಅದನ್ನು ನೋಡಬೇಕು. ಡೆಪ್ಯುಟಿ ಕಮಿಷನರೋ ಎಂದರೆ ಅವರು ಅವರ ಡಿಸ್ಟ್ರಿಕ್ಟಿನ ಆಡಳಿತಕ್ಕೆ ಜವಾಬ್ದಾರರಾಗಿರುವ ಮುಖ್ಯ ಆಫಿಸರಾಗಿದಾರೆ. ಅಂಥವರಾದ ಅವರಿಗೆ ಪೊಲೀಸಿನವರ ಕೆಲಸದಲ್ಲಿ ವಿಶೇಷವಾದ ತಿಳಿವಳಿಕೆಯಿರಬೇಕು. ಅಂಥಾ ಪರಿಚಯವನ್ನು ಪೊಲೀಸಿಗೆ ಮುಖ್ಯಸ್ಥರಾಗಿರುವುದರಿಂದ ಮಾತ್ರವೇ ಹೊಂದಬಹುದು. ಇದಲ್ಲದೆ, ಡೆಪ್ಯುಟಿ ಕಮಿಷನರಿಗೆ ಡಿಸ್ಟ್ರಿಕ್ಟಿನ ವಿಷಯದಲ್ಲಿ ಇರುವ ತಿಳಿವಳಿಕೆಯಿಂದ ಅಮೂಲ್ಯವಾದ ಅವರ ಮಾರ್ಗದರ್ಶನವೂ (ದಾರಿತೋರಿಸೋಣವೂ) ಮೇಲ್ವಿಚಾರಣೆಯೂ ಪೊಲೀಸಿನವರಿಗೆ ಇದ್ದರೆ ಪೊಲೀಸಿನವರ ಗುಣವು ಅಭಿವೃದ್ಧಿಯಾಗುವುದು ಎಂಬುವುದನ್ನು ಇಲ್ಲವೆಂದು ಹೇಳಲಾಗುವುದಿಲ್ಲ; ಮತ್ತು ಹಾಗೆಯೇ ಡೆಪ್ಯುಟಿ ಕಮಿಷನರ ಅಧಿಕಾರವು ಪೊಲೀಸಿನವರನ್ನು ಅವರ ಇಲಾಖೆಯ ಜೋರು ತ್ವರೆಯಾಗಿ ಮಿತಿಮೀರಿ ಎಳೆದುಕೊಂಡು ಹೋಗದಂತೆ ಅವರನ್ನು ನಿರಂತರವಾಗಿ ದೃಢವಾದ ಅಂಕೆಯಲ್ಲಿಡುವುದು. ಡಿಸ್ಟ್ರಿಕ್ಟು ಸೂಪರಿಂಟೆಂಡೆಂಟಿಗೆ ಬದಲಾಗಿ ಡೆಪ್ಯುಟಿ ಕಮಿಷನರು ಪೊಲೀಸಿನ ಮುಖ್ಯಸ್ಥನಾಗಿರುವ ಈಗಿನ ವಿಧ್ಯಮಾನಗಳು 1861ರ 5ನೆ ಆಕ್ಟಿನ ನಿಯಮಗಳಿಗೂ ಮದರಾಸಿನ ಪೊಲೀಸು ಕ್ರಮಕ್ಕೂ ವಿರೋಧವಾಗಿವೆ. ಆದರೆ ಅಲ್ಲಿಯೂ ಕೂಡ ಡಿಸ್ಟ್ರಿಕ್ಟು ಆಫಿಸರು ಮಾರ್ಗದರ್ಶಕ (ದಾರಿ ತೋರಿಸುವ) ಮತ್ತು ಮೇಲ್ವಿಚಾರಣೆಯ ಅಧಿಕಾರಿಯಾಗಿಯೂ ಡಿಸ್ಟ್ರಿಕ್ಟು ಸೂಪರಿಂಟೆಂಡೆಂಟು ಡಿಸ್ಟ್ರಿಕ್ಟು ಆಫಿಸರ ಕಾರ್ಯನಿರ್ವಾಹಾಧಿಕಾರಿಯಾಗಿಯೂ, ಇವರಿಬ್ಬರಲ್ಲಿ ಜಂಟಿಯಾಗಿ ಡಿಸ್ಟ್ರಿಕ್ಟು ಪೊಲೀಸು ಆಡಳಿತವು ಇರಬೇಕೆಂದು ಸ್ಪಷ್ಟವಾಗಿ ಉದ್ದೇಶಿಸಲ್ಪಟ್ಟಿದೆ. ಇಂಡಿಯಾ ದೇಶದ ನಾನಾ ಪ್ರಾಂತ್ಯಗಳ ಪೊಲೀಸು ಕೋಡುಗಳಲ್ಲಿಯೂ ಕೂಡ ಕ್ರಿಮಿನಲ್ ಜಸ್ಟಿಸ್ ಯಾ ದಂಡನೀತಿಯ ಕ್ರಮವಾದ ಆಡಳಿತಕ್ಕೆ ಮುಖ್ಯವಾಗಿ ಜವಾಬ್ದಾರನಾಗಿರುವ ಕಾರ್ಯ ನಿರ್ವಾಹಾಧಿಕಾರಿಯು ಪೊಲೀಸನ್ನು ಮೇಲ್ವಿಚಾರಣೆ ಮಾಡುವ ಆವಶ್ಯಕತೆಯನ್ನು ಅಂಗೀಕರಿಸಿದೆ. ಆದರೆ ಬ್ರಿಟಿಷ್ ಇಂಡಿಯಾವಿನಲ್ಲಿ ಡಿಸ್ಟ್ರಿಕ್ಟು ಸೂಪರಿಂಟೆಂಡೆಂಟನ್ನು ಪೊಲೀಸಿನ ಮುಖ್ಯಸ್ಥನನ್ನಾಗಿ ಮಾಡಿರುವುದರಿಂದ ಅಲ್ಲಿ ಮೇಲೆ ಹೇಳಿದಂಥಾ ಉಪಯುಕ್ತವಾದ ಮೇಲ್ವಿಚಾರಣೆಯು ಕಷ್ಟವಾಗಿದೆ. ಡಿಸ್ಟ್ರಿಕ್ಟು ಸೂಪರಿಂಟೆಂಡೆಂಟು

[ಮಿ|| ಕೆ. ಪಿ. ಪುಟ್ಟಣ್ಣ ಶೆಟ್ಟಿ.]

ಕಾರ್ಯನಿರ್ವಾಹಾಧಿಕಾರಿಗೆ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟಿನ ಅಧಿಕಾರದಲ್ಲಿ ಮಾತ್ರ ಒಳಪಟ್ಟಿರುವುದರಿಂದ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟು, ಪೋಲೀಸು ಸೈನ್ಯದ ಒಳ ಆಡಳಿತದಲ್ಲಿ ಯಾವ ವಿಧವಾಗಿಯಾದರೂ ಪ್ರವೇಶಿಸಿದರೆ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟಿಗೆ ಕೋಪಬರುತ್ತದೆ. ಆದುದರಿಂದ ಇವರಿಬ್ಬರಿಗೂ ಸಹಜವಾಗಿ ವಿರೋಧ ಉಂಟಾಗುತ್ತದೆ. ಕಾರ್ಯತಃ ಹೇಗೋ, ಹಾಗೆಯೇ ನ್ಯಾಯದಲ್ಲಿಯೂ (ಕಾನೂನಿನಲ್ಲಿಯೂ) ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟು ಡೆಪ್ಯುಟಿ ಕಮಿಷನರಿಗೆ ಅಧೀನನಾಗಿ (ತಾಬೇದಾರನಾಗಿ) ಇದ್ದರೆ ಡೆಪ್ಯುಟಿ ಕಮಿಷನರ ಸಹಾಯದ ಮತ್ತು ಮಾರ್ಗದರ್ಶನದ ಅನುಕೂಲಮಾತ್ರ ನಮಗೆ ದೊರೆಯುವುದಲ್ಲದೆ ಕಾರ್ಯಸಾಧಕವಾದ ಆಡಳಿತಕ್ಕೆ ಹಾನಿಕರವಾದ ಇವರಿಬ್ಬರ ವಿರೋಧವೂ ಇಲ್ಲದೆ ಇರುವುದು. ಆದುದರಿಂದ, ನಿಜವಾಗಿ, ಮುಖ್ಯವಾದ ಕಾರ್ಯನಿರ್ವಾಹಾಧಿಕಾರಿಯನ್ನು (ಡೆಪ್ಯುಟಿ ಕಮಿಷನರನ್ನು) ಪೋಲೀಸಿಗೂ ಮುಖ್ಯನನ್ನಾಗಿಯೂ, ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟನ್ನು ಪೋಲೀಸಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಆತನ ಅಸಿಸ್ಟೆಂಟು ಯಾ ಸಹಾಯಕನನ್ನಾಗಿಯೂ ಹೇಳುವುದೇನೂ ಅಕ್ರಮವಲ್ಲ. ಪೋಲೀಸು ಕೆಲಸದ ವಿವರಗಳಲ್ಲಿ ಅಲ್ಪವಾಗಿ ಅಡಿಗಡಿಗೆ ಪ್ರವೇಶಿಸೋಣವು ಹಾನಿಕರವಾದುದೇ ಸರಿ ಆದರೆ, ಯಾವಾಗ ಪ್ರವೇಶಿಸಬೇಕು, ಯಾವಾಗ ಬಿಡಬೇಕು ಎಂಬುವುದನ್ನು ಡೆಪ್ಯುಟಿ ಕಮಿಷನರ ಸುಬುದ್ಧಿಗೂ, ವಿವೇಕಕ್ಕೂ, ನಿರ್ಭಯವಾಗಿ ಬಿಟ್ಟುಬಿಡಬಹುದೆಂದು ನಾವು ಯೋಚಿಸುತ್ತೇವೆ. ಆದಾಗ್ಯೂ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟಿಗೆ ಸ್ವಲ್ಪ ಸ್ವಾತಂತ್ರ್ಯವನ್ನು ಕೊಡಬೇಕೆಂದು ಸರ್ಕಾರದವರು ಯೋಚಿಸಿರುವುದರಿಂದ ನಿಯುಕ್ತ ಸಮಾಜದವರ ಶಿಫಾರಸುಗಳನ್ನು ಅಂಗೀಕರಿಸಿ, ಡೆಪ್ಯುಟಿ ಕಮಿಷನರು ತನ್ನ ಡಿಸ್ಟ್ರಿಕ್ಟಿನ ಪೋಲೀಸಿನವರು ಅವರ ಕೆಲಸಗಳನ್ನು ಕಾರ್ಯಸಾಧಕವಾಗಿ ನಡೆಸುವುದಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಮೀರಿ ಹೋಗಕೂಡದೆಂದು ಬಿಲ್ಲಿನಲ್ಲಿ ನಿಯಮ ಮಾಡಿದೆ. ಡೆಪ್ಯುಟಿ ಕಮಿಷನರ ಅಧಿಕಾರಗಳಿಗೂ ಉತ್ತರವಾದಿತ್ವಕ್ಕೂ (ಜವಾಬ್ದಾರಿಗೂ) ಅಪಾಯವಿಲ್ಲದೆ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟಿಗೆ ಆಯುಧಗಳು, ಸೈನ್ಯೋಪಕರಣಗಳು, ಕವಾತು, ಗುಂಪುಗಳನ್ನು ಮತ್ತು ಸಂಶಯಾಸ್ಪದರಾದ ಜನಗಳನ್ನು ನೋಡಿಕೊಳ್ಳೋಣ, ವರ್ತಮಾನ ಸಂಗ್ರಹಣ, ಕೆಲಸಗಳನ್ನೂ ಗಸ್ತು ತಿರುಗೋಣವನ್ನೂ ಹಂಚೋಣ, ಪೋಲೀಸು ಜವಾನರ ಮತ್ತು ಉದ್ಯೋಗಸ್ಥರ ವಿದ್ಯಾಭ್ಯಾಸ, ಮತ್ತು ಸಾಧಾರಣವಾದ ದಿನಚರಿಯ ಸ್ವಭಾವವುಳ್ಳ ಇತರ ಎಲ್ಲಾ ವಿಷಯಗಳು, ಇವುಗಳ ಮೇಲೆ ಸಾಕ್ಷಾತ್ತಾದ ಮೇಲ್ವಿಚಾರಣೆಯ ಅಧಿಕಾರವನ್ನು ಕೊಟ್ಟಿದೆ. ಇದಲ್ಲದೆ ಆತನು ಶುದ್ಧಾಂಗವಾಗಿ ದಿನಚರಿಯ ಸ್ವಭಾವವುಳ್ಳ ವಿಷಯಗಳಲ್ಲಿ ಪೋಲೀಸು ಇನ್ಸ್ಪೆಕ್ಟರ್ ಜನರಲಿನ ಸಂಗಡ ನೆಟ್ಟಗೆ ಕಾಗದಪತ್ರಗಳನ್ನು ಬೆಳೆಸಬಹುದು.

ಅಮಲ್ದಾರನು ಪೋಲೀಸು ಅಧಿಕಾರಗಳನ್ನು ನಡೆಸೋಣವು ಡೆಪ್ಯುಟಿ ಕಮಿಷನರುಗಳ ವಿಷಯದಲ್ಲಿರುವುದಕ್ಕಿಂತ ಹೆಚ್ಚಾಗಿ ಊಹಾಕಲ್ಪಿತವಾದ ಆಕ್ಷೇಪಣೆಗಳಿಗೆ ಒಳಗಾಗಿದೆಯೆಂದು ನಾವು ಒಪ್ಪುತ್ತೇವೆ. ಆದರೆ ಈ ವಿಷಯವನ್ನು ಕಾರ್ಯತಃ ಪ್ರಯೋಜನವನ್ನು ಹೊಂದುವ ದೃಷ್ಟಿಯಿಂದ ನೋಡಬೇಕೆಂದು ನಾವು ಮತ್ತೊಂದಾವರ್ತಿ ಹೇಳಬೇಕಾಗಿದೆ. ಇಂಡಿಯಾ ಸರ್ಕಾರಕ್ಕೆ ಬಹಳ ಕಾಲಕ್ಕೆ ಮುಂಚೆಯೇ ಗೊತ್ತಾಗಿರುವಂತೆ, ಇಂಡಿಯಾ ದೇಶದಲ್ಲಿ ಯಾವುದಾದರೂ ಪೋಲೀಸು ಕ್ರಮವು ಸಫಲವಾಗಬೇಕಾದರೆ ಅದಕ್ಕೆ ಗ್ರಾಮ ಪೋಲೀಸು ಬೆನ್ನೆಲುಬಾಗಿ ಎಂದರೆ ಆಧಾರವಾಗಿರಬೇಕು. ಅದರ ವೃದ್ಧಿಗೂ ಕಾರ್ಯಸಾಧಕತ್ವಕ್ಕೂ ಅಮಲ್ದಾರನ ಚುರುಕಾದ ಸಹಾಯವು ಅತ್ಯವಶ್ಯವಾಗಿದೆ. ಅಂಥಾ ಸಹಾಯವು ಆತನಿಗೆ ಪೋಲೀಸು ಮೇಲ್ವಿಚಾರಣೆಯ ಕಾರ್ಯನಿರ್ವಾಹಾಧಿಕಾರವನ್ನು ತಪ್ಪಿಸುವುದರಿಂದ ದೊರೆಯಲಾರದು, ಮತ್ತು ಅಮಲ್ದಾರನು ಸರ್ಕಾರದವರ ಸ್ಥಳೀಯ ಪ್ರತಿನಿಧಿಯಾಗಿರುವುದರಿಂದ ಮತ್ತಾವನಾದರೂ ಶುದ್ಧಾಂಗವಾಗಿ ಪೋಲೀಸು ಇಲಾಖೆಗೇ ಸೇರಿದ ಆಫಿಸರಿಗಿಂತ ಬಹಳ ಹೆಚ್ಚಾಗಿ ಪ್ರಜೆಗಳ ವಿಶ್ವಾಸಕ್ಕೆ ಪಾತ್ರನಾಗಿರುತ್ತಾನೆ. ತಾಲ್ಲೂಕಿನ ಮೂಲೆ ಮೂಲೆಗಳಲ್ಲಿ ನಡೆಯುವ ವಿಷಯಗಳನ್ನು ಅವನು ತಿಳಿದುಕೊಳ್ಳುವುದರಿಂದ ಅದು ಪೋಲೀಸಿನವರ ಕೆಟ್ಟ ನಡತೆಗೆ ಪ್ರಬಲವಾದ ಅಂಕೆಯಾಗಿರುವುದು. ತಾಲ್ಲೂಕಿನ ರೆವಿನ್ಯೂ ಆಫಿಸರಾಗಿ ನಾನಾಸಾಧನಗಳುಳ್ಳ ಅಮಲ್ದಾರನ ಬುದ್ಧಿವಾದವೂ ಸಹಾಯವೂ ಕೀಳ್ಪಟ್ಟ ಪೋಲೀಸಿನವರ ಅಸಾಮರ್ಥ್ಯದಿಂದಲೂ ಲಂಚಖೋರತನದಿಂದಲೂ ಅಡಿಗಡಿಗೆ ಆಗುತ್ತಿರುವಂತೆ ನ್ಯಾಯದೊರೆಯದೆ ಹೋಗುವುದಕ್ಕೆ ಬಹಳಮಟ್ಟಿಗೆ ಅಡ್ಡಿಯಾಗಿರುವುದು. ಅಮಲ್ದಾರನ ಸ್ಥಾನದಲ್ಲಿರುವ ಒಬ್ಬ ಆಫಿಸರಲ್ಲಿ ಮ್ಯಾಜಿಸ್ಟ್ರೇಟಿನ ಮತ್ತು ಪೋಲೀಸಿನ ಅಧಿಕಾರಗಳನ್ನು ಸೇರಿಸೋಣವು ಒಂದೇ ಬಲವಾದ ಆಕ್ಷೇಪಣೆಯಾಗಿರುವಂತೆ ತೋರುತ್ತದೆ, ಆದರೂ ಕಾರ್ಯತಃ ಯಾವ ಅನನುಕೂಲವೂ ಉಂಟಾದಂತೆ ಕಾಣಬರಲಿಲ್ಲ. ಆತನು ಪೋಲೀಸು ಆಫಿಸರಾಗಿ ತಾನು ಅನ್ವಯಿಸಿರುವ ಮೊಕದ್ದಮೆಗಳನ್ನು ದರ್ಯಾಫ್ತು ಮಾಡುವುದಕ್ಕಾಗುವುದಿಲ್ಲ. ಮತ್ತು ಎಲ್ಲಾ ಮುಖ್ಯವಾದ ಪೋಲೀಸು ಮೊಕದ್ದಮೆಗಳೂ ಮೊದಲನೆ ತರಗತಿಯ ಅಥವಾ ಸೆಷನ್ ಮೊಕದ್ದಮೆಗಳಾಗಿರುವುದರಿಂದ ಆತನು ಅವನ್ನು ಕೂಡ ದರ್ಯಾಫ್ತು ಮಾಡಲಾಗುವುದಿಲ್ಲ. ಕಾರ್ಯನಿರ್ವಾಹದ ಮತ್ತು ಜುಡಿಷಲ್ ಕೆಲಸಗಳನ್ನು ಪ್ರತ್ಯೇಕಿಸಬೇಕೆಂಬ ಮೂಲತತ್ವವನ್ನು ಕೊನೆಯವರೆಗೂ ನ್ಯಾಯರೀತ್ಯಾ ಸಾಧಿಸಿದರೆ ಅಮಲ್ದಾರನಿಗೆ ಮಾಜಿಸ್ಟ್ರೇಟಿನ ಕೆಲಸಗಳನ್ನು ತಪ್ಪಿಸಬೇಕಾಗುವುದೇ ಹೊರತು ಪೋಲೀಸಿನ ಕೆಲಸಗಳನ್ನು ತಪ್ಪಿಸಬೇಕಾಗುವುದಿಲ್ಲ.

ನಮ್ಮ ಪೋಲೀಸು ಆಡಳಿತದ ಕ್ರಮದ ವಿಶೇಷ ಲಕ್ಷಣಗಳಲ್ಲಿ ಒಂದಾಗಿ ಇದು ನಿಜವಾಗಿ ಗೌರವವಾದ ವಿಷಯವಾಗಿರುವುದರಿಂದಲೂ ಈಚೆಗೆ ನಡೆದ ಪೋಲೀಸು ಕಮಿಷನಿನ ಶಿಫಾರಸುಗಳಿಂದ ಮಿ|| ಕಾರ್‌ರವರ ಸಲಹೆಗಳಿಗೆ ಹೆಚ್ಚು ಗೌರವ ಉಂಟಾಯಿತೆಂದು ಯೋಚಿಸಬಹುದಾದುದರಿಂದಲೂ ಈ ವಿಷಯವನ್ನು ಕುರಿತು ಇಷ್ಟುದೂರ ಪ್ರಸ್ತಾಪಿಸಿದೆವು. ಬ್ರಿಟಿಷ್ ಇಂಡಿಯಾವಿನಲ್ಲಿ ಹೇಗಾದರೂ ಇರಲಿ, ದೇಶೀಯ ಸಂಸ್ಥಾನದಲ್ಲಿ ಕಾರ್ಯಸಾಧಕತ್ವಕ್ಕೆ ಕುಂದಿಲ್ಲದೆಯೂ ಜವಾಬ್ದಾರಿಯನ್ನು ಭಾಗಿಸದೆಯೂ ಒಂದೇ ಆಫಿಸರಲ್ಲಿ ಎರಡು ಕೆಲಸಗಳನ್ನು ಸಮಾನವಾಗಿ ಸೇರಿಸುವುದು ಸಾಧ್ಯವಾಗಿ ತೋರುತ್ತದೆ.

ಒಳನಿಯಮ ಮತ್ತು ಸುಶಿಕ್ಷಣ.

ನಾವು ಈಗ ಪೋಲೀಸು ಸೈನ್ಯದ ಒಳ ಸುಶಿಕ್ಷಣದ ವಿಷಯವನ್ನು ಹೇಳಲುಪಕ್ರಮಿಸುತ್ತೇವೆ. ಈ ಕೆಲಸವನ್ನು ಬಹಳ ಮಟ್ಟಿಗೆ ಪೋಲೀಸು ಇನ್ಸ್ಪೆಕ್ಟರ್ ಜನರಲಿಗೆ ಒಪ್ಪಿಸಬೇಕು. ಪೋಲೀಸು ಸೈನ್ಯದ ಶಿಕ್ಷಣಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳಲ್ಲಿಯೂ ಸರ್ಕಾರದವರ ಹುಕುಮುಗಳಿಗೆ ಒಳಪಟ್ಟು ನಿಬಂಧನೆಗಳನ್ನು ಮಾಡುವ ಅಧಿಕಾರವನ್ನು ಅವರಿಗೆ ಕೊಟ್ಟಿದೆ. ಇನ್ಸ್ಪೆ

[ಮಿ॥ ಕೆ. ಪಿ. ಪುಟ್ಟಣ್ಣಶೆಟ್ಟಿ ; ಮಿ॥ ಎ. ರಂಗಸ್ವಾಮಿಯಯ್ಯಂಗಾರ್.]

ಕ್ಟರು ಜನರಲು ಅಸಿಸ್ಟೆಂಟ್ ಸೂಪರಿಂಟೆಂಡೆಂಟಿನ ಸ್ಥಾನಕ್ಕೆ ಕೆಳಗಿನ ಯಾವ ಪೊಲೀಸು ಆಫೀಸರನ್ನಾದರೂ ಇಲಾಖೆಯ ಮೂಲಕ ಶಿಕ್ಷಿಸಬಹುದು ಮತ್ತು ಡೆಪ್ಯುಟಿ ಕಮಿಷನರುಗಳೂ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟುಗಳೂ ಇನ್ಸ್‌ಪೆಕ್ಟರುಗಳ ಸ್ಥಾನಕ್ಕೆ ಕೆಳಗಿನ ಆಫೀಸರುಗಳನ್ನು ಶಿಕ್ಷಿಸಬಹುದು. ಕಾನ್‌ಸ್ಟೇಬಿಲುಗಳಿಗೆ ಸಂಬಂಧಪಟ್ಟ ಅಪೀಲುಗಳಲ್ಲಿ ಪೊಲೀಸು ಇನ್ಸ್‌ಪೆಕ್ಟರ್ ಜನರಲೇ ಕೊನೆಯ ಅಧಿಕಾರಿಯಾಗಿರುತ್ತಾರೆ. ಇಲಾಖೆಯ ಮೂಲಕ ಶಿಕ್ಷೆಯಾದ ಮಿಕ್ಕ ಎಲ್ಲಾ ವಿಷಯಗಳಲ್ಲಿಯೂ ಸರ್ಕಾರಕ್ಕೆ ಅಪೀಲ್ಮಾಡಬಹುದು.

ಪೊಲೀಸು ಕಟ್ಟಳೆಗಳು.

ನಾವು ಮುಂದೆ ಪೊಲೀಸು ಕಟ್ಟಳೆಗಳ ವಿಷಯವಾದ ಅಧ್ಯಾಯವನ್ನು ಕುರಿತು ಪ್ರಸ್ತಾಪಿಸುವೆವು. ಈ ಅಧ್ಯಾಯದಲ್ಲಿ ಜನರ ಕ್ಷೇಮಕ್ಕೂ ಅನುಕೂಲಕ್ಕೂ ಸಂಬಂಧಿಸುವ ಅನೇಕ ನಿಯಮಗಳಿವೆ. ಇವುಗಳಲ್ಲಿ ಅನೇಕ ನಿಯಮಗಳು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟಿಗೆ ಅವಶ್ಯವಾದ ಅಧಿಕಾರಗಳನ್ನು ಕೊಡುತ್ತವೆ, ಕೆಲವು ನಿಯಮಗಳು ಜರೂರು ಸಂದರ್ಭಗಳಲ್ಲಿ ಕೆಲಸ ನಡೆಸಲು ಪೊಲೀಸಿನವರಿಗೆ ಅಧಿಕಾರ ಕೊಡುತ್ತವೆ. ಬೀದಿಗಳನ್ನು ಮುಚ್ಚಿಬಿಡುವುದು, ಕಟ್ಟಡದ ಸಾಮಾನುಗಳನ್ನು ರಸ್ತೆಯ ಮೇಲೆ ಬಿಡಲ್ಪಡದಂತೆ ಅಡ್ಡಿಮಾಡುವುದು, ಸಾಂಕ್ರಾಮಿಕ ರೋಗ ತಗುಲಿರುವ ಜನಗಳನ್ನು ಬೀದಿಗಳಲ್ಲಿ ಸಾಗಿಸದಂತೆ ತಡೆಯುವುದು ಮತ್ತು ಪ್ರಜಾಕ್ಷೇಮಕ್ಕಾಗಿ ಕಟ್ಟಳೆಗಳು ಅವಶ್ಯವಾಗಿರುವ ಇತರ ವಿಷಯಗಳು, ಇಂಥಾವುಗಳಲ್ಲಿ ನಿಬಂಧನೆಗಳನ್ನು ಅಥವಾ ಹುಕುಂಗಳನ್ನು ಮಾಡಲು ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟಿಗೆ ಅಧಿಕಾರ ಕೊಟ್ಟಿದೆ. ಹಾಗೆಯೇ ನೆಮ್ಮದಿಯನ್ನೂ, ಒಳ್ಳೆಯ ನಡತೆಯನ್ನೂ ಕಾಪಾಡಲು ಮಾಜಿಸ್ಟ್ರೇಟುಗಳಿಗೆ ಅಧಿಕಾರಗಳನ್ನು ಕೊಟ್ಟಿದೆ. ಹೀಗೆಯೇ 37ನೆ ಪ್ರಕರಣದಲ್ಲಿ ಸೂಳೆಯ ಮನೆಗಳ ವಿಷಯದಲ್ಲಿ ನಿಯಮವನ್ನು ಮಾಡಿದೆ ; 39ನೆ ಪ್ರಕರಣದಲ್ಲಿ ಜನಗಳ ಬೇರೆಬೇರೆ ತರಗತಿಯವರುಗಳಲ್ಲಿ ಗಲಿಬಿಲಿ, ಕಲಹ, ಇವು ನಡೆಯದಂತೆ ನಿಬಂಧನೆಗಳನ್ನು ಅಥವಾ ಹುಕುಂಗಳನ್ನು ಮಾಡಲು ಮಾಜಿಸ್ಟ್ರೇಟಿಗೆ ಅಧಿಕಾರ ಕೊಟ್ಟಿದೆ. ಭಂಡ ಕೂಗುಗಳನ್ನಾಗಲಿ, ಮತ ಸಂಬಂಧವಾದ ಹಗೆಯನ್ನು ಎಬ್ಬಿಸಬಹುದಾದ ಕೂಗುಗಳನ್ನಾಗಲಿ ಉಚ್ಚರಿಸದಂತೆ ಅಡ್ಡಿಮಾಡಲು ಮಾಜಿಸ್ಟ್ರೇಟುಗಳಿಗೆ ಅಧಿಕಾರ ಕೊಟ್ಟಿದೆ. 43ನೆ ಪ್ರಕರಣವು ನೆರೆಹೊರೆಯಲ್ಲಿ ಗಾಬರಿಯನ್ನುಂಟುಮಾಡುವ ಜನಗಳ ಗುಂಪುಗಳನ್ನು ತಡೆಯಲು ತಕ್ಕ ಎಲ್ಲಾ ಸನ್ನಾಹಗಳನ್ನೂ ಮಾಡಲು ಮಾಜಿಸ್ಟ್ರೇಟಿಗೆ ಅಧಿಕಾರ ಕೊಡುತ್ತದೆ. ಹಾಗೆಯೇ ಕೆಲವು ಸಾರ್ವಜನಿಕ ವಿನೋದ ಸ್ಥಳಗಳಲ್ಲಿಯೂ, ಸಾರ್ವಜನಿಕ ಸಭೆಗಳಲ್ಲಿಯೂ ಗಲಿಬಿಲಿ ನಡೆಯದಂತೆ ಮಾಡಲೂ, ಬೀದಿಗಳಲ್ಲಿ ಕೂಟಗಳನ್ನೂ ಮೆರವಣಿಗೆಗಳನ್ನೂ ಕ್ರಮಪಡಿಸಲೂ ಪೊಲೀಸಿನವರಿಗೆ ಕೆಲವು ಅಧಿಕಾರಗಳನ್ನು ಕೊಟ್ಟಿದೆ.

ಪೊಲೀಸಿನವರ ಕಾರ್ಯನಿರ್ವಾಹಾಧಿಕಾರಗಳು.

5ನೆ ಅಧ್ಯಾಯದಲ್ಲಿ ಪೊಲೀಸಿನವರ ಕಾರ್ಯನಿರ್ವಾಹಾಧಿಕಾರಗಳನ್ನು ಕುರಿತು ಸಂಪೂರ್ಣವಾದ ಮತ್ತು ಸ್ವಲ್ಪ ಮಟ್ಟಿಗೆ ಹೊಸದಾದ ನಿಯಮಗಳನ್ನು ಕೊಟ್ಟಿದೆ. 47 ಮತ್ತು 49ನೆ ಪ್ರಕರಣಗಳಲ್ಲಿ ಪೊಲೀಸಿನವರ ಕ್ರಮವಾದ ಕೆಲಸಗಳನ್ನು ವಿಶೇಷವಾಗಿ ವಿವರಿಸಿದೆ. 48ನೆ ಪ್ರಕರಣದಲ್ಲಿ ಪೊಲೀಸಿನವರು ಅವರ ಕೆಲಸಗಳನ್ನು ಮಾಡುವಾಗ ದಯವುಳ್ಳವರಾಗಿರಬೇಕೆಂಬುವುದನ್ನು ಒತ್ತಿ ಹೇಳಿದೆ ; ಎಂದರೆ, ಬೀದಿಗಳಲ್ಲಿ ಸಹಾಯವಿಲ್ಲದ ಅಥವಾ ಬಲಹೀನರಾದ ಜನರಿಗೆ ಸಹಾಯಮಾಡುವುದು ಮತ್ತು ಸಭ್ಯನಾಗಿಯೂ ದಯವುಳ್ಳವನಾಗಿಯೂ ನಡೆದುಕೊಳ್ಳುವುದು. ಇದು ಒಂದು ಭಕ್ತಿಭಾವದ ಕೋರಿಕೆ ಮಾತ್ರವಾಗಿಲ್ಲ ; ಯಾತಕ್ಕೆಂದರೆ ಪೊಲೀಸಿನವರು ಹಿಡಿಯುವ ಅಥವಾ ಶೋಧನೆ ಮಾಡುವ ಜನಗಳ ವಿಷಯದಲ್ಲಿ ಅನವಶ್ಯವಾದ ಒರಟುತನದಿಂದ ನಡೆಯೋಣವನ್ನು ಶಿಕ್ಷೆಗೆ ಗುರಿಮಾಡಿದೆ.

ಉಳಿದ ನಿಯಮಗಳ ವಿಷಯದಲ್ಲಿ ವಿಶೇಷವಾಗಿ ಹೇಳಬೇಕಾದ ಅವಶ್ಯವಿಲ್ಲ. ಸಂದರ್ಭಬಿದ್ದಾಗಲೆಲ್ಲಾ ಹೆಚ್ಚು ಪೊಲೀಸಿನವರನ್ನು ಕೆಲಸಕ್ಕೆ ಇಡುವುದಕ್ಕಾಗಿ ಬಿಲ್ಲಿನಲ್ಲಿ ನಿಯಮ ಮಾಡಿದೆ. ಅಪಾಯದ ಅಥವಾ ನೆಮ್ಮದಿಗೆ ವಿಶೇಷ ಭಂಗವಾಗುವ ಕಾಲಗಳಲ್ಲಿ ಕ್ರಮ ಪೊಲೀಸು ಸಾಲದೆಂದು ಕಂಡುಬಂದರೆ ಹೆಚ್ಚು ಪೊಲೀಸಿನವರನ್ನಿಟ್ಟು ಎಲ್ಲಿನ ತತ್ತರಿಸುವ ಸ್ಥಿತಿಯಿಂದ ಅಂಥಾ ಹೆಚ್ಚು ಪೊಲೀಸಿನವರನ್ನಿಡೋಣವು ಅವಶ್ಯವಾಯಿತೋ ಅಂಥಾ ಸ್ಥಳೀಯ ಪ್ರದೇಶದ ಜನಗಳಿಂದ ಅಥವಾ ಅವರ ಯಾವುದಾದರೂ ಪಂಗಡದಿಂದ ಅಥವಾ ತರಗತಿಯಿಂದ ಅಂಥಾ ಹೆಚ್ಚು ಪೊಲೀಸಿನ ಕರ್ಚನ್ನು ವಸೂಲ್ಮಾಡುವ ಅಧಿಕಾರವನ್ನು ಉಳಿಸಿಕೊಂಡಿದೆ. ತತ್ತರಿಸುವ ಸ್ಥಿತಿಯಲ್ಲಿರುವ ಯಾವುದಾದರೂ ಸ್ಥಳದ ದುರ್ಮಾರ್ಗತನವನ್ನು ಅಣಗಿಸುವುದಕ್ಕಾಗಿ ಅಲ್ಲಿನ ನ್ಯಾಯವಾಗಿ ನಡೆಯುವ ಪಂಗಡದವರ ಒತ್ತಾಸೆಯನ್ನು ಪಡೆಯುವುದಕ್ಕೋಸ್ಕರ ಅವರನ್ನು ಸ್ಪೆಷಲ್ ಯಾ ವಿಶೇಷ ಪೊಲೀಸು ಆಫೀಸರುಗಳಾಗಿ ಸೇರಿಸಿಕೊಳ್ಳುವುದಕ್ಕೆ ಏರ್ಪಾಡು ಮಾಡಿದೆ. 55ನೆ ಪ್ರಕರಣದಲ್ಲಿಯೂ ಅದರ ಒಳ ಪ್ರಕರಣಗಳಲ್ಲಿಯೂ ನಾನಾ ಪೊಲೀಸು ತಪ್ಪಿತಗಳಿಗೆ ಶಿಕ್ಷೆಗಳನ್ನು ವಿಧಿಸಿ ಇದೆ. 56ನೆ ಪ್ರಕರಣದಲ್ಲಿ ಪ್ರಾಣಿಗಳಿಗೆ ಹಿಂಸೆ ಮಾಡಿದುದಕ್ಕೆ ತಕ್ಕ ಶಿಕ್ಷೆ ವಿಧಿಸಲು ನಿಯಮ ಮಾಡಿದೆ. (1867ರ 3ನೆದಾದ) ಜೂಜಿನ ಕಾನೂನನ್ನು ಮೈಸೂರು ಸೀಮೆಗೆಲ್ಲಾ ವ್ಯಾಪಿಸುವಂತೆ ಮಾಡಬೇಕೆಂದು ನಾನಾ ಕಡೆಗಳಿಂದ ಪದೇಪದೇ ತಗಾದೆಯು ಬಂದಿರುವುದರಿಂದ ಅದರ ನಿಯಮಗಳನ್ನು 61ರಿಂದ 68ರ ವರೆಗಿನ ಪ್ರಕರಣಗಳಲ್ಲಿ ಸೇರಿಸಿ ಇದೆ.

ನಾವು ಬಿಲ್ಲಿನ ಮುಖ್ಯ ಲಕ್ಷಣಗಳನ್ನು ಈ ರೀತಿಯಾಗಿ ಸಂಕ್ಷೇಪವಾಗಿ ವಿವರಿಸಿ ಈ ಸಭೆಯಲ್ಲಿ ಅದು ಸಂಪೂರ್ಣವಾಗಿ ಪರ್ಯಾಲೋಚಿಸಲ್ಪಡುವುದೆಂದು ಕೋರುತ್ತೇವೆ. ನಾವು ಈಗ ಈ ಬಿಲ್ಲನ್ನು ಪ್ರಸ್ತಾಪಿಸಲು ಅಪ್ಪಣೆಗಾಗಿ ಬಿನ್ನವಿಸುವೆವು.

ಮಿ॥ ಎ. ರಂಗಸ್ವಾಮಿಯಯ್ಯಂಗಾರು ಈ ಬಿನ್ನಹವನ್ನು ಅನುಮೋದಿಸಿದರು. ಈ ಬಿನ್ನಹವನ್ನು ಸಭೆಯ ಸಮ್ಮತಿಗೆ ಹಾಕಿ ನಿರ್ವಹಿಸಲಾಯಿತು.

[ಮಿ|| ಟಿ. ಆನಂದರಾವ್ ; ಮಿ|| ಎಸ್. ನಾರಾಯಣರಾವ್ ; ಅಧ್ಯಕ್ಷರು.]

1900ನೆ ಇಸವಿಯ 3ನೆದಾದ ಕೋರ್ಟು ರುಸುಂಗಳ ರೆಗ್ಯುಲೇಷನನ್ನು ತಿದ್ದುಪಾಟು ಮಾಡುವ ಬಿಲ್ಲು.

ಮಿ|| ಟಿ. ಆನಂದರಾವ್.

ಅಯ್ಯಾ,

1900ನೆ ಇಸವಿಯ 3ನೆದಾದ ಕೋರ್ಟು ರುಸುಂಗಳ ರೆಗ್ಯುಲೇಷನನ್ನು ಒಂದು ವಿಷಯದಲ್ಲಿ ತಿದ್ದುಪಾಟು ಮಾಡುವುದ ಕ್ಕೋಸ್ಕರ ಒಂದು ಬಿಲ್ಲನ್ನು ಪ್ರಸ್ತಾಪಿಸಲು ಈ ಸಭೆಯ ಅಪ್ಪಣೆಯನ್ನು ಕೇಳುತ್ತೇವೆ. ಇದು ಚಿಕ್ಕ ವಿಷಯವಾಗಿರುವುದರಿಂದ ಈ ಸಭೆಗೆ ಅದಕ್ಕೋಸ್ಕರ ಬಹಳಕಾಲ ಹಿಡಿಯುವುದಿಲ್ಲ. ಅದು ದೌರ್ಭಾಗ್ಯವಶಾತ್ ವ್ಯಾಜ್ಯಗಳಲ್ಲಿ ಸಿಕ್ಕಿಕೊಂಡು ಸಿವಿಲ್ ಕೋರ್ಟುಗಳಿಗೆ ಹೋಗಬೇಕಾಗಿರುವ ಜಮೀನ್ ಹಿಡುವಳಿದಾರರಿಗೂ, ವ್ಯವಸಾಯಗಾರರಿಗೂ ಕೋರ್ಟು ರುಸುಮಿನ ವಿಷಯದಲ್ಲಿ ಸಹಾಯ ಮಾಡುವುದಾಗಿ ಎಣಿಸಲ್ಪಟ್ಟಿದೆ.

2. ಈಗ ಇರುವಂತೆ ಈ ರೆಗ್ಯುಲೇಷನಿನ 4ನೆ ಪ್ರಕರಣದ (5)ನೆ ವಾಕ್ಯದ ಮೇರೆ ಜಮೀನಿನ, ಮನೆಗಳ ಮತ್ತು ತೋಟಗಳ ಸ್ವಾಧೀನತೆಗಾಗಿ ಬರುವ ವ್ಯಾಜ್ಯಗಳಲ್ಲಿ ಕೊಡತಕ್ಕ ಕೋರ್ಟು ರುಸುಮುಗಳು ವ್ಯಾಜ್ಯದಲ್ಲಿ ವಿವಾದಾಸ್ಪದವಾದ ಸ್ವತ್ತಿನ ಬೆಲೆಗನುಗುಣವಾಗಿ ಕ್ರಮಪಡಿಸಲ್ಪಡುತ್ತದೆ. "ವಿವಾದಾಸ್ಪದವಾದ ಸ್ವತ್ತು" ಎಂಬ ಮಾತುಗಳಿಗೆ ಬೇರೆಬೇರೆಯಾದ ಅರ್ಥವು ಹುಟ್ಟಿದೆ ಮತ್ತು ಈ ಪೈಕಿ ಆಚರಣೆಯಲ್ಲಿರುವ ಅರ್ಥದ ಮೇರೆ ಆ ಮಾತುಗಳು ವ್ಯಾಜ್ಯಕ್ಕೆ ಸಂಬಂಧಪಟ್ಟ ಸ್ವತ್ತನ್ನು ಎಂದರೆ, ವ್ಯಾಜ್ಯಕ್ಕೆ ಸಂಬಂಧಪಟ್ಟ ಹಕ್ಕನ್ನು ಲಕ್ಷ್ಯ ಮಾಡದೆ ಜಮೀನು ಮನೆ ಅಥವಾ ತೋಟವನ್ನು ಸೂಚಿಸುತ್ತವೆ. ಹೀಗೆ ಸ್ವತ್ತಿನ ಮೇಲಣ ಹಕ್ಕು ವಿವಾದದಲ್ಲಿರುವ ಮೊಕದ್ದಮೆಗಳಿಗೂ, ಸ್ವತ್ತಿನ ಒಡೆಯತನದ ಹಕ್ಕು ವಿವಾದದಲ್ಲಿಲ್ಲದೆ, ಮತ್ತೊಬ್ಬನ ಕೈಕೆಳಗೆ ಸ್ವಾಧೀನದಲ್ಲಿರುವ ಒಬ್ಬ ಒಕ್ಕಲು ಅಥವಾ ಇತರ ಮನುಷ್ಯನನ್ನು ಹೊರಡಿಸುವ ಹಕ್ಕು ಮಾತ್ರ ವಿವಾದದಲ್ಲಿರುವ ಮೊಕದ್ದಮೆಗಳಿಗೂ, ಯಾವ ಭೇದವೂ ಇಲ್ಲದೆ ಇದೆ. ಐವತ್ತು ಸಾವಿರ ರೂಪಾಯಿ ಬೆಲೆ ಬಾಳುವ ಒಂದು ಮನೆಯಾಗಲಿ ತೋಟವಾಗಲಿ ವ್ಯಾಜ್ಯಕ್ಕೆ ಸಂಬಂಧಪಟ್ಟ ಸ್ವತ್ತಾಗಿದ್ದರೆ ದಾವಾ ಅರ್ಜಿಯ ಮೇಲೆ ಕೊಡಬೇಕಾದ ಕೋರ್ಟು ರುಸುಮಿನ ಮೊತ್ತವು 1,175 ರೂಪಾಯಾಗುತ್ತದೆ, ಆ ವ್ಯಾಜ್ಯವು ವಾದಿಯ ಹಕ್ಕೇ ವಿವಾದದಲ್ಲಿರುವ ವ್ಯಾಜ್ಯವಾಗಲಿ, ಅಥವಾ ಬಾಡಿಗೆ ಯಾ ಗುತ್ತಿಗೆಯನ್ನು ಕೊಡದೆ ಹೋದುದಕ್ಕಾಗಿ ಅಥವಾ ಹಿಡುವಳಿಯ ಷರತ್ತುಗಳ ವಿಷಯದಲ್ಲಿ ಇತರ ತಪ್ಪಿಗೋಸ್ಕರವಾಗಿ ಒಂದು ಹೊರಡಿಸುವಿಕೆಯ ವ್ಯಾಜ್ಯ ಮಾತ್ರವಾಗಿರಲಿ, ಹೇಗಿದ್ದರೂ ಸರಿಯೆ. ಇದರಿಂದ ಹೊರಡಿಸುವಿಕೆಯ ವ್ಯಾಜ್ಯಗಳಲ್ಲಿ ಜಮೀನಿನ ಒಡೆಯರು ಅಥವಾ ವರ್ಗದಾರರಿಗೂ ಒಕ್ಕಲುಗಳಿಗೂ ಕಷ್ಟ ಉಂಟಾಗುತ್ತದೆ. ಈ ಕಷ್ಟವನ್ನು ಕುರಿತು ಪ್ರಜಾಪ್ರತಿನಿಧಿ ಸಭೆಯ ಸಭಿಕರು ಶೋಚಿಸಿ ಅದನ್ನು ಸರ್ಕಾರದವರ ತಿಳುವಳಿಕೆಗೆ ತಂದಿರುತ್ತಾರೆ. ಇದಕ್ಕೆ ಪರಿಹಾರವಾಗಿ ಮೇಲ್ಕಂಡ ಎರಡು ತರಗತಿಯ ಮೊಕದ್ದಮೆಗಳಿಗೆ ಭೇದವನ್ನು ಕಲ್ಪಿಸಿ, ಎರಡನೆಯ ತರಗತಿಯ ವ್ಯಾಜ್ಯಗಳಲ್ಲಿ ಎಂದರೆ ಶುದ್ಧಾಂಗವಾಗಿ ಹೊರಡಿಸುವಿಕೆಯನ್ನು ಕುರಿತ ವ್ಯಾಜ್ಯಗಳಲ್ಲಿ ದಾವಾ ಅರ್ಜಿಗಳ ಮೇಲೆ ಕಡಮೆಯಾದ ಕೋರ್ಟು ರುಸುಮನ್ನು ಕೊಡಲಾಗುವಂತೆ ರೆಗ್ಯುಲೇಷನನ್ನು ತಿದ್ದುಪಾಟು ಮಾಡಲು ಯೋಚಿಸಿ ಇದೆ.

3. ಮೈಸೂರು ನ್ಯಾಯವಿಧಾಯಕ ಸಭೆಯ ರೆಗ್ಯುಲೇಷನಿನ 12ನೆ ಪ್ರಕರಣದ ಮೇರೆ ನಾವು ಈಗ ಮಾಡುವ ಬಿನ್ನಹಕ್ಕೆ ದೀವಾನರ ಬರಹಮೂಲಕವಾದ ಅಪ್ಪಣೆಯನ್ನು ಪಡೆದಿದೆ.

ಮಿ|| ಎಸ್. ನಾರಾಯಣರಾವ್:—ಜಮೀನಿನ ಒಡೆಯರು ಯಾ ವರ್ಗದಾರರಿಗೂ ಒಕ್ಕಲುಗಳಿಗೂ ಮಧ್ಯೆ ಬರುವ ವ್ಯಾಜ್ಯಗಳಲ್ಲಿ ಈಗಿನ ಬಿಲ್ಲಿನಲ್ಲಿ ಪರಿಹಾರ ಮಾಡುವುದಾಗಿ ಉದ್ದೇಶಿಸಿರುವಂಥಾ ಕಷ್ಟದ ಅನೇಕ ಪ್ರಮೇಯಗಳು ವಕೀಲರಾಗಿ (ಲಾಯರಾಗಿ) ನಾವು ಕೆಲಸ ಮಾಡುತಿದ್ದಾಗ ನಮ್ಮ ಕೆಲಸದ ಧೋರಣೆಯಲ್ಲಿ ನಮಗೆ ಗೊತ್ತಿಗೆ ಬಂದಿರುವ ಕಾರಣ ಈ ಬಿನ್ನಹವನ್ನು ನಾವು ಬಹಳ ಸಂತೋಷವಾಗಿ ಅನುಮೋದಿಸುತ್ತೇವೆ.

ಈ ಬಿನ್ನಹವನ್ನು ಸಭೆಯ ಸಮ್ಮತಿಗೆ ಹಾಕಿ ನಿರ್ವಹಿಸಲಾಯಿತು

ಅಧ್ಯಕ್ಷರು :—

ಈ ಬಿಲ್ಲುಗಳನ್ನು ಪ್ರಸ್ತಾಪಿಸಲು ಅಪ್ಪಣೆ ಪಡೆಯಲ್ಪಟ್ಟಿರುವುದರಿಂದ ಗೆಜೆಟ್ಟಿನಲ್ಲಿ ಈ ಬಿಲ್ಲುಗಳನ್ನು ಪ್ರಕಟಿಸುವುದೇ ಮುಂದೆ ಮಾಡತಕ್ಕ ಕೆಲಸವಾಗಿದೆ. ಇದನ್ನು ಮಾಡಿಯಾದ ಮೇಲೆಯೇ ಈ ಸಭೆಯ ಮತ್ತೊಂದು ಸಂಗವು ನಡೆಯಬಹುದು. ಮುಂದಿನ ಸಂಗದಲ್ಲಿ ಇವುಗಳ ಮೂಲತತ್ವಗಳನ್ನು ವಿವರಿಸಿ ಬಿಲ್ಲಿನ ವಿಷಯದಲ್ಲಿ ಮುಂದಕ್ಕೆ ಪ್ರವರ್ತಿಸಿ ಚರ್ಚೆ ನಡೆದ ತರುವಾಯ ಅವಶ್ಯವಿದ್ದರೆ ಅವುಗಳನ್ನು ಒಂದು ನಿಯುಕ್ತ ಸಮಾಜಕ್ಕೆ ಒಪ್ಪಿಸಲಾಗುವುದು. ನಿಮಗೆ ತಿಳಿದ ಹಾಗೆಯೇ ಈ ಬಿಲ್ಲುಗಳು ಕೆಲವು ಕಾಲದಿಂದ ಸರ್ಕಾರದವರ ಕೈಯಲ್ಲಿ ನಿಂತಿದ್ದು ಹಳೆಯವಾಗಿವೆ. ಅವುಗಳನ್ನು ಕ್ರಮವಾಗಿ ಏರ್ಪಟ್ಟ ಈ ಸಭೆಯ ಮುಂದೆ ತರುವ ನಿರೀಕ್ಷಣೆಯಲ್ಲಿ ಅಚ್ಚು ಹಾಕಿಸಲು ಏರ್ಪಾಡು ಮಾಡಿದೇವೆ. ಹಾಗಿಲ್ಲದೆ ಇದ್ದರೆ ಆಗುತಿದ್ದುದಕ್ಕಿಂತ ಮತ್ತಷ್ಟು ತ್ವರೆಯಾಗಿ ಅವು ಸಿದ್ಧವಾಗುವುವು. ಈಗಿನಿಂದ ಹದಿನೈದು ದಿನಗಳೊಳಗಾಗಿ ಅವುಗಳನ್ನು ಗೆಜೆಟ್ಟಿನಲ್ಲಿ ಪ್ರಕಟಿಸಲಾಗುವುದೆಂದು ನಾವು ನಿರೀಕ್ಷಿಸುತ್ತೇವೆ. ಆಗಸ್ಟು ತಿಂಗಳ ಮಧ್ಯದಲ್ಲಿ ಒಂದಾನೊಂದು ವೇಳೆ, ಅದು ಅನನುಕೂಲವಾದರೆ, ಆಗಸ್ಟು ತಿಂಗಳ ಕಡೇವಾರದಲ್ಲಿ ಒಂದಾನೊಂದುವೇಳೆ, ತಿರಿಗಿ ಸಭೆ ಸೇರಲು ಅನುಕೂಲವಾಗುವುದೆಂದು ನಾವು ಆಲೋಚಿಸುತ್ತೇವೆ.

ಸಭಿಕರನ್ನು ಕೇಳಿದ ತರುವಾಯ ಆಗಸ್ಟು 28ನೆ ಬುಧವಾರದ ದಿನ ಮುಂದಿನ ಸಂಗವು ನಡೆಯುವುದಾಗಿ ದೀವಾನರು ಹೇಳಿದರು.

ಅನಂತರ ಸಂಗವು ಮುಗಿಯಿತು.

ವಿ. ಪಿ. ಮಾಧವರಾವ್,
ಅಧ್ಯಕ್ಷರು.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪಬ್ಲಿಷ್ ಆದ್ದು. [ನಂ. 33.

ಬೆಂಗಳೂರು, ಗುರುವಾರ, ಆಗಸ್ಟು ತಾ॥ 15, ಸನ 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟಸಂಖೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರಕ್ಕ್ಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 8ನೆ ಆಗಸ್ಟು 1907.

ನಂ. 1202—ಸ್ಯಾನಿಟೆರಿ 34-07—2, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗುತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
ಆಲೂರು ...	ಆಲೂರು ಸಬ್ ತಾಲ್ಲೂಕು.	ಕರಗಾಡ ...	ಬೇಲೂರು.
ಆಲೂರು ಪೇಟೆ ...	ಡಿಟೋ	ಗೊರೂರು ...	ಡಿಟೋ
ಕೊಡಿಗಿಹಳ್ಳಿ ...	ಡಿಟೋ	ಮಲ್ಲಾಪುರ ...	ಅರಸೀಕೆರೆ.

ತಾರೀಖು 2ನೆ ಆಗಸ್ಟು 1907.

ನಂ. ಜೆ. 350—ಕೋ. 33-07—2, ಬದಲಿಯ ತರೀಕ್ರು ಅಮಲ್ದಾರ್ ಮತ್ತು ಮೂರನೆ ತರಗತಿಯ ಮಾಜಿಸ್ಟ್ರೇಟಾಗಿರುವ ಮಿ॥ ಪಿ. ಸುಬ್ಬಣ್ಣಾಯರನ್ನು ಅವರು ಹಾಗೆ ಅಮಲ್ದಾರರಾಗಿರುವ ಪರ್ಯಂತ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೆ ಪ್ರಕರಣದ ಮೇರೆಗೆ ಎರಡನೆಯ ತರಗತಿಯ ಮಾಜಿಸ್ಟ್ರೇಟಾಗಿ ನೇಮಕರ್ಮಾಡಿ ಇದೆ.

ತಾರೀಖು 8ನೆ ಆಗಸ್ಟ್ 1907.

ನಂ. 1195—MI. 368-06—11, ಸ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಸ್ವತ್ತುಗಳು ಸರ್ಕಾರಿ ಕೆಲಸಕ್ಕೆ, ಎಂದರೆ, ಹಾಸನ ಟವನಿನ ಬಡಾವಣೆಗೆ ಅವಶ್ಯಕವಾಗಿವೆ ; ಮತ್ತು ಹಾಸನ ಡಿಸ್ಟ್ರಿಕ್ಟ್ ಖಜಾನೆಯ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಸ್ವತ್ತುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟದೆ.

ನಂಬರು.	ತಾಲ್ಲೂಕು.	ಗ್ರಾಮದ ಹೆಸರು ಮತ್ತು ಹಿಡುವಳಿದಾರನ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ ಯಾ ಬಾಗಾಯಿತು.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಗಡಿ.			
					ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.
		ಹಾಸನ ಗ್ರಾಮ.			ಎ. ಗು.	ರೂ. ಆ.				
1	ಹಾಸನ	ಸೈಯದ್ ಅಮೀರ್ ಆಲಿ ...	ಸರ್ವೆ ನಂಬರು 257ರ ಭಾಗ	ಖುಷ್ಕಿ ಮತ್ತು ಬಾಗಾಯಿತು	2 13	...	ಅಮೀರ ಆಲಿಗೆ ಸೇರಿದ ಹಿತ್ತಲು ಮತ್ತು ಮನೆ	ರಸ್ತೆ	ರಸ್ತೆ	ಸರ್ವೆ ನಂ. 257ರ ಭಾಗ ; ಇದುವ್ಯಂಗಪತಿನಾಯಿಡು ವಿಗೆ ಸೇರಿದ ಹಿತ್ತಲಾಗಿದೆ
2		ಮನ್ನೋಜಿ, ಮಾದೋಜಿ, ಸುಬ್ಬೋಜಿ, ಬಾಬೋಜಿಯ ಹೆಂಡತಿ ಮಾಲುಬಾಯಿ, ನಾಗೋಜಿಯ ಹೆಂಡತಿ ನಾಗೂಬಾಯಿ.	222	ಖುಷ್ಕಿ	1 12	2 0	ಸರ್ವೆ ನಂ. 223	ಸರ್ವೆ ನಂ. 223	ಡಿಟೋ	ಸರ್ವೆ ನಂ. 223
3		ಡಿಟೋ ...	235	ಡಿಟೋ	1 33	3 0	ಸರ್ವೆ ನಂ. 23[illegible]	ಜವನಹಳ್ಳಿಯ ಎಲ್ಲೆ	ಸರ್ವೆ ನಂ. 236	ರಸ್ತೆ
4		ಡಿಟೋ	ಸರ್ವೆ ನಂಬರು 238ರ ಪೈಕಿ ಫೋಡ ನಂ. 2	ಡಿಟೋ	3 1	5 4	ರಸ್ತೆ	ಈ ನಂಬರ ಪೈಕಿ ಮಲ್ಲಶೆಟ್ಟಿಗೆ ಸೇರಿದ ಜಮೀನು.	ಅರಳೀಪೇಟೆಯ ಮೀಜಾಸಾಬಿ ವಗೈರೇರಿಗೆ ಸೇರಿದ ಹಿತ್ತಲು ಮತ್ತು ಮನೆ	ಸರ್ವೆ ನಂ. 237
		ಜವನಹಳ್ಳಿ ಗ್ರಾಮ.								
5		ದಫೇದಾರ್ ಇಮಾಂಸಾಬಿ ...	ಸರ್ವೆ ನಂ. 30	ಡಿಟೋ	6 29	9 8	ಹಾಸನ ಗ್ರಾಮದ ಸರ್ವೆ ನಂಬರುಗಳು 236-237	ರಸ್ತೆ ಮತ್ತು ಜವನಹಳ್ಳಿ ಗ್ರಾಮದ ಸರ್ವೆ ನಂ. 29	ಹಾಸನ ಗ್ರಾಮದ ಸರ್ವೆ ನಂ. 239 ಮತ್ತು 240	ಸಾಲಗಾಮೆ ರಸ್ತೆ

ತಾರೀಖು 8ನೆ ಆಗೆಸ್ಟು 1907.

ನಂ. 1196—ಲೋ. ಬೋ. 476-06—4, 1902ನೆ ಇಸವಿಯ 2ನೆ ನಂಬರ ಲೋಕಲ್ ಬೋರ್ಡುಗಳ ರೆಗ್ಯುಲೇಷನಿನ ಮೇರೆಗೆ ಹುಟ್ಟಿದ ನಿಬಂಧನೆಗಳ 6ನೆ ಪ್ಯಾರಾವಿನ ಪ್ರಕಾರ, ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಈ ಕೆಳಗೆ ನಮೂದಿಸುವ ಗ್ರಾಮ ಯೂನಿಯನ್‌ಗಳ ಪಂಚಾಯಿತರನ್ನು ಏರ್ಪಡಿಸುವ ಬಗ್ಗೆ ಇದರಡಿ ಕಂಡವರನ್ನು ಸಭಿಕರನ್ನಾಗಿ ನೇಮಿಸಿ ಇದೆ :—

ಕ್ರಮ ಸಂಖ್ಯೆ	ಸಭಿಕರ ಹೆಸರು.	ಕಸಬು.	ವಾಸಸ್ಥಳ.
	ಶಿಕಾರಿಪುರ ತಾಲ್ಲೂಕು.		
	ಇಸ್ಸೂರು ಯೂನಿಯನ್.		
1	ಅಮಲ್ದಾರ (ಚೇರ್‌ಮೆನ್ ಯಾ ಸಭಾಧ್ಯಕ್ಷ). ...		
2	ಶೇಕದಾರ ಶಿಕಾರಿಪುರ ಹೋಬಳಿ ...		ಅಧಿಕಾರ ಪ್ರಯುಕ್ತರಾದ ಸಭಿಕರು.
3	ಹೆಡ್ಮಾಸ್ಟರ್, ಇಸ್ಸೂರು ಹೋಬಳಿ ಸ್ಕೂಲ್ ...		
4	ಮಿ॥ ಶಿವಪ್ಪ. ...	ಪಟೇಲ ಮತ್ತು ಜಮೀನುದಾರ.	ಇಸ್ಸೂರು
5	,, ರಾಜವಳ್ಳಿ ಈರಪ್ಪ ...	ಸಾಹುಕಾರ ಮತ್ತು ಜಮೀನುದಾರ.	ಡಿಟೋ
6	,, ಪರಶುರಾಮ ಮೊದಲಿಯಾರ ...	ಜಮೀನುದಾರ	ಡಿಟೋ
7	,, ಹರಿಗೆಹಾಳು ಶಿದ್ದಲಿಂಗಪ್ಪ	ಡಿಟೋ ...	ಡಿಟೋ
8	,, ಗೆರೆಯಪ್ಪಲ ಹೊಳೆಯಪ್ಪ ...	ಡಿಟೋ ...	ಡಿಟೋ
9	,, ಭೀಮಣ್ಣ ...	ಡಿಟೋ ...	ಡಿಟೋ
	ಕುಂಸಿ ಸಬ್ ತಾಲ್ಲೂಕು.		
	ಹಾರನಹಳ್ಳಿ ಯೂನಿಯನ್.		
1	ಕುಂಸಿ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಚೇರ್‌ಮೆನ್ ...		
2	ಶೇಕದಾರಿ, ಹಾರನಹಳ್ಳಿ ಹೋಬಳಿ ...		ಅಧಿಕಾರ ಪ್ರಯುಕ್ತರಾದ ಸಭಿಕರು.
3	ಹೆಡ್ಮಾಸ್ಟರ್, ಹಾರನಹಳ್ಳಿ ಸ್ಕೂಲ್ ...		
4	ಮಿ॥ ಲಕ್ಷ್ಮೀಪತಿ ಜೋಯಿಸರು ...	ಜಮೀನುದಾರ ...	ಹಾರನಹಳ್ಳಿ
5	,, ಪಟೇಲ ರುದ್ರಯ್ಯ ...	ಪಟೇಲ್	ಡಿಟೋ
6	,, ಜಾವಳ್ಳಿ ಗುರುಬಸಪ್ಪ ...	ಸಾಹುಕಾರ ಮತ್ತು ಜಮೀನುದಾರ.	ಡಿಟೋ
7	,, ಸರಾಫ ಹನುಮಂತರಾವ್ ...	ಜಮೀನುದಾರ್ ...	ಡಿಟೋ
8	,, ದಾವೂದ್‌ಸಾಬ್, ಹುಸ್ಸೇನ್‌ಸಾಬ್	ಡಿಟೋ ...	ಡಿಟೋ
	ಆಯನೂರು ಯೂನಿಯನ್.		
1	ಡೆಪ್ಯುಟಿ ಅಮಲ್ದಾರ್, ಕುಂಸಿ (ಚೇರ್‌ಮೆನ್)		
2	ಹೆಡ್ಮಾಸ್ಟರ್, ಕೋಹಳ್ಳಿ ಹೋಬಳಿ ಸ್ಕೂಲ್ ...	...	ಅಧಿಕಾರ ಪ್ರಯುಕ್ತರಾದ ಸಭಿಕರು.
3	ಶೇಕದಾರ್, ಹಾರನಹಳ್ಳಿ ಹೋಬಳಿ		
4	ಮಿ॥ ನಾಡಿಗ ಪಾಂಡು ರಂಗಪ್ಪ ...	ಜಮೀನುದಾರ್ ...	ಆಯನೂರು
5	,, ನಾಡಿಗ ವೆಂಕಟಕೃಷ್ಣಪ್ಪ ...	ಶಾನುಭೋಗ ...	ಡಿಟೋ
6	,, ಕೋಹಳ್ಳಿ ಮಂಜಪ್ಪ ...	ಪಟೇಲ್ ...	ಕೋಹಳ್ಳಿ
7	,, ಘಟ್ಟಪ್ಪಲ ಸಂಗಪ್ಪ ...	ಪಟೇಲ್ ಮತ್ತು ಜಮೀನುದಾರ.	ಆಯನೂರು
8	,, ದೊಡ್ಡ ತಿಪ್ಪಯ್ಯ ...	ಸಾಹುಕಾರ ...	ಡಿಟೋ
	ಚನ್ನಗಿರಿ ತಾಲ್ಲೂಕು.		
	ಸಂತೆಬೆನ್ನೂರು ಯೂನಿಯನ್.		
1	ಅಮಲ್ದಾರ್, ಚನ್ನಗಿರಿ ತಾಲ್ಲೂಕು (ಚೇರ್‌ಮೆನ್) ...		
2	ಶೇಕದಾರ್, ಸಂತೆಬೆನ್ನೂರು ಹೋಬಳಿ ...	...	ಉದ್ಯೋಗ ಪ್ರಯುಕ್ತರಾದ ಸಭಿಕರು
3	ಹೆಡ್ಮಾಸ್ಟರ್, ಸಂತೆಬೆನ್ನೂರು ಸ್ಕೂಲ್ ...		
4	ಮಿ॥ ನಾಡಿಗಭೀಮರಾವ್ ...	ಶಾನುಭೋಗ ಮತ್ತು ಜಮೀನುದಾರ್.	ಸಂತೆಬೆನ್ನೂರು
5	,, ಪಟೇಲ್ ಹನುಮಂತಯ್ಯ ...	ಪಟೇಲ್ ಮತ್ತು ಜಮೀನುದಾರ್.	ಡಿಟೋ
6	,, ಗಾಣಿಗ ಚನ್ನಬಸಪ್ಪ ...	ವರ್ತಕ	ಡಿಟೋ
7	,, ಪಿರಾನಿ ಲಾಲ್‌ಖಾನ್	ಡಿಟೋ ...	ಡಿಟೋ
8	,, ಕೋಗಲೂರು ತೋಟಯ್ಯ ...	ಡಿಟೋ ...	ಡಿಟೋ
9	,, ನಾಡಿಗ ದೇಶಪಾಂಡಿ ರಾಜಾರಾವ್ ...	ಶಾನುಭೋಗ ಮತ್ತು ಜಮೀನುದಾರ್.	ಡಿಟೋ

ತಾರೀಖು 9ನೆ ಆಗಸ್ಟು 1907.

ನಂ. 1265—ಎಡಿಕೇಷನ್ 33-06—4, ಗರ್ಲ್ಸ್ ಸ್ಕೂಲ್ ಕಮಿಟಿ ಯಾ ಬಾಲಿಕಾ ಪಾಠಶಾಲೆಯ ಸಭೆಯುವರು ಅನುಸರಿಸತಕ್ಕ ಬಗ್ಗೆ ಪುನರ್ವಿಮರ್ಶೆಯಿಂದ ಮಾಡಿದ ನಿಬಂಧನೆಗಳನ್ನು ಮಂಜೂರ್ಮಾಡಿದ 1902ನೆಯ ಇಸವಿಯ ಫೆಬ್ರವರಿ 1ನೆ ತಾರೀಖಿನ 13156—ಎಡ್ಯು. 266ನೆ ನಂಬರಿನ ಸರ್ಕಾರಿ ಇಸ್ತಿಹಾರ್‌ನಾಮೆಯ ಷರತ್ತುಗಳ ಮೇರೆಗೆ, ಮೈಸೂರು ಕಸಬಾ ಲಷ್ಕರ್ ಮೊಹಲ್ಲಾ ದಲ್ಲಿನ ಹಿಂದುಸ್ತಾನಿ ಬಾಲಿಕಾ ಪಾಠಶಾಲೆಯ ಆಡಳಿತಕ್ಕಾಗಿ ಇದರಡಿ ತೋರಿಸುವ ಮೇರೆಗೆ ಸಭೆಯು ಹೊಸದಾಗಿ ಏರ್ಪಡಿಸಲಾಗುವುದು.

ಸಭಾಧ್ಯಕ್ಷರು (ಪ್ರೆಸಿಡೆಂಟ್)

ಮಹಮ್ಮದ್ ಜಾಫರ್, ಎಸ್ಕ್ವೈಯರ್, ರಿಟೈರ್ಡ್ ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟ್.

ಸಭಿಕರು.

1. ಮಿ|| ಸುಲ್ತಾನ್ ಮುಹಮುದ್‌ಖಾನ್, ಮೈಸೂರು ಮಹಾರಾಜರ ಕಾಲೇಜಿನ ಪರ್ಷ್ಯನ್ ಮುನಷಿ.
2. ,, ಮೌಲ್ವೀ ಮೊಜರ್ ಹುಸೇನ್‌ಖಾನ್, ಮೈಸೂರು ನಾರ್ಮಲ್ ಸ್ಕೂಲಿನ ಅಸಿಸ್ಟೆಂಟ್ ಮಾಸ್ಟರು.
3. ,, ಅಹಮದ್ ಅಲಿ, ಮೈಸೂರು ಮಂಡಿ ಮೊಹಲ್ಲಾ ದಲ್ಲಿನ ಏಡೆಡ್ ಯಾ ಸರ್ಕಾರಿ ಸಹಾಯ ಹೊಂದಿದ ಹಿಂದುಸ್ತಾನಿ ಬಾಲಕ ಪಾಠಶಾಲೆಯ ಮ್ಯಾನೇಜರು.
4. ,, ಗುಲಾಂ ದಸ್ತಗೀರ್, ಮೈಸೂರು ನಾರ್ಮಲ್ ಸ್ಕೂಲಿನ ಅಸಿಸ್ಟೆಂಟ್ ಮಾಸ್ಟರು.
5. ,, ಮಿರ್ಜಾ ಎಡ್ಗಾರ ಅಲಿ, ರಿಟೈರ್ಡ್ ಪೊಲೀಸ್ ಇನ್‌ಸ್ಪೆಕ್ಟರ್.
6. ,, ಸೈಯದ್ ಯೂನುಸ್, ಪೊಲೀಸ್ ಇಲಾಖಾ ಮುನಷಿ.
7. ,, ವಲಿ ಅಹಮುದ್, ರಿಟೈರ್ಡ್ ಪೊಲೀಸ್ ಇನ್‌ಸ್ಪೆಕ್ಟರ್.
8. ,, ನವಾಬ್ ಬಾಕರ್ ಅಲಿಖಾನ್ ಈಸಾ.
9. ,, ಸಫದಾರ್ ಹುಸೇನ್, ಮೈಸೂರು ಆಂಗ್ಲೊ ಹಿಂದುಸ್ತಾನಿ ಸ್ಕೂಲಿನ ಅಸಿಸ್ಟೆಂಟ್ ಮಾಸ್ಟರು.

2. ಸಭೆಯು ಏರ್ಪಟ್ಟ ತರುವಾಯ ಸಭೆಯುವರೇ ತಮ್ಮಲ್ಲಿ ಒಬ್ಬರನ್ನು ಈ ಸಭೆಯ ಆನರರಿ ಯಾ ಗೌರವಾರ್ಥವಾದ ಸೆಕ್ರೆಟರಿಯನ್ನಾಗಿ ಚುನಾಯಿಸತಕ್ಕದ್ದು.

ತಾರೀಖು 10ನೆ ಆಗಸ್ಟು 1907.

ನಂ. 1344—ಮ್ಯು. 54-07—8, ಮೃತಪಟ್ಟ ಮಿ|| ವೆಂಕಟಾಚಲಯ್ಯನವರಿಗೆ ಬದಲಾಗಿ ಮಿ|| ಅಕ್ಕಸಾಲೆ ಭದ್ರಪ್ಪನವರನ್ನು ಹಿರಿಯೂರು ಮ್ಯುನಿಸಿಪಲ್ ಬೋರ್ಡಿಗೆ ಸಭಿಕರನ್ನಾಗಿ ನೇಮಿಸಿ ಇದೆ.

ತಾರೀಖು 13ನೆ ಆಗಸ್ಟು 1907.

ನಂ. 1441—ಮೆಡಿಕಲ್ 6-07-4, 1907ನೆ ಇಸವಿಯ ಮಾರ್ಚಿ 1ನೆ ತಾರೀಖಿನ 7453—ಮೆಡಿಕಲ್ 240-06-2 ಮತ್ತು 1907ನೆ ಇಸವಿಯ ಮಾರ್ಚಿ 30ನೆ ತಾರೀಖಿನ 9032—ಮೆಡಿಕಲ್ 240-06-5ನೆ ನಂಬರುಗಳ ಇಸ್ತಿಹಾರ್‌ನಾಮೆಗಳಲ್ಲಿ ಕೊಡಲ್ಪಟ್ಟ ಒಂದು ತಿಂಗಳು ಮತ್ತು ಆರು ವಾರಗಳ ಪ್ರಿವಿಲೇಜ್ ರಜಾವಿನ ಪೈಕಿ ಉಪಯೋಗಿಸಿಕೊಳ್ಳದೆ ಉಳಿದಿದ್ದ ಭಾಗವನ್ನು ಉಪಯೋಗಿಸಿಕೊಳ್ಳುವಂತೆ 1907ನೆ ಇಸವಿಯ ಮೇ 18ನೆ ತಾರೀಖಿನ 10809—ಮೆಡಿಕಲ್ 240-06-9ನೆ ನಂಬರಿನ ಇಸ್ತಿಹಾರ್‌ನಾಮೆಯಲ್ಲಿ ಅಪ್ಪಣೆ ಕೊಡಲ್ಪಟ್ಟ ಸಿವಿಲ್ ಸರ್ಜನ್ ಮಿ|| ಇ. ಎಸ್. ಕೃಷ್ಣಸಾಮಿ ಐಯ್ಯರವರು 1907ನೆ ಇಸವಿಯ ಏಪ್ರಿಲ್ 27ನೆ ತಾರೀಖಿನ ಅಪರಾಹ್ನದಿಂದ ರಜಾವನ್ನು ಉಪಯೋಗಿಸಿಕೊಂಡು 1907ನೆ ಇಸವಿಯ ಜೂನ್ 4ನೆ ತಾರೀಖಿನ ಪೂರ್ವಾಹ್ನ ಕೆಲಸದ ಮೇಲೆ ವಾಪಸು ಹಾಜರಾಗಿರುವುದರಿಂದ ಉಪಯೋಗಿಸಿಕೊಳ್ಳದೆ ಉಳಿದಿರುವ ರಜಾವನ್ನು ಈ ಮೂಲಕ ರದ್ದುಮಾಡಿ ಇದೆ.

ತಾರೀಖು 5ನೆ ಆಗಸ್ಟು 1907.

ನಂ. ರೆ. 853—ಲ್ಯಾ. ರೆ. 263-06—12, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 155ನೆ ಪ್ರಕರಣಕ್ಕೆ ಅನುಗುಣವಾಗಿ, ತಿರುಮಕೂಡ್ಲು ನರಸೀಪುರದ ತಾಲ್ಲೂಕಿನ ಬದಲಿ ಅಮಲ್ದಾರ್ ಮಿ|| ಬಿ. ಎನ್. ಚನ್ನಿಗಪ್ಪನವರಿಗೆ ಸದರಿ ತಾಲ್ಲೂಕಿನ ಚಾರ್ಜನ್ನು ಅವರು ಕೊಟ್ಟ ತಾರೀಖಿನ ಲಾಗಾಯಿತು ಒಂದು ವರ್ಷದ ರಜಾವನ್ನು ಕೊಟ್ಟಿದೆ; ಆ ಪೈಕಿ ಮೊದಲ ಒಂದು ತಿಂಗಳು ಏಳು ದಿವಸಗಳನ್ನು ಪ್ರಿವಿಲೇಜ್ ರಜಾವೆಂತಲೂ ಉಳಿದದ್ದನ್ನು ತಲಬಿಲ್ಲದ ರಜಾವೆಂತಲೂ ಗಣನೆ ಮಾಡತಕ್ಕದ್ದು.

ತಾರೀಖು 6ನೆ ಆಗಸ್ಟು 1907.

ನಂ. ರೆ. 917—ಲ್ಯಾ. ರೆ. 73-07-2, ಅರಕಲಗೂಡು ತಾಲ್ಲೂಕಿನ ಬದಲಿ ಅಮಲ್ದಾರ್ ಮಿ|| ಜಿ. ನಾರಾಯಣರಾಯರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣವನ್ನನುಸರಿಸಿ, ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೇಜ್ ರಜಾವನ್ನು ಕೊಟ್ಟಿರುತ್ತದೆ.

2. ಮಿ|| ಜಿ. ನಾರಾಯಣರಾಯರು ರಜಾವಿನ ಮೇಲೆ ಗೈರ್‌ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ತನಕ, ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ ಆಫೀಸಿನ ಇಂಗ್ಲಿಷ್ ಹೆಡ್ ಕ್ಲಾರ್ಕ್ ಜಿ. ರಾಮಸ್ವಾಮೈಯಂಗಾರ್ರನ್ನು ಅರಕಲಗೂಡು ತಾಲ್ಲೂಕಿನ ಅಮಲ್ದಾರಾಗಿಯೂ ಮೂರನೆ ತರಗತಿಯ ಮಾಜಿಸ್ಟ್ರೇಟಾಗಿಯೂ ಬದಲಿ ಕೆಲಸ ನೋಡುವಂತೆ ನೇಮಕ ರರ್ಮಾಡಿ ಇದೆ.

203

ತಾರೀಖು 6ನೆ ಆಗಸ್ಟು 1907.

ನಂ. ರೆ. 920—ಲ್ಯಾ. ರೆ. 44—07—03, ಸನ್ 1905ನೇ ಇಸವಿಯ ಫೆಬ್ರುವರಿ 15ನೆ ತಾರೀಖಿನ ರೆ. 7179—ಲ್ಯಾ. ರೆ. 254—04—13ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಹುಕುಂ ಮಾಡಲ್ಪಟ್ಟ ಕೋಲಾರ ಡಿಸ್ಟ್ರಿಕ್ಟಿನ ಹೋಬಳಿಗಳ ಹೊಸ ನಿರ್ಮಾಡಿನಲ್ಲಿ ಈ ಕೆಳಗೆ ಕಂಡ ಬದಲಾವಣೆಗಳನ್ನು ಮಾಡಬೇಕೆಂದು ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಹುಕುಂ ದಯಪಾಲಿಸಿರುತ್ತಾರೆ :—

ತಾಲ್ಲೂಕು.	ಹೋಬಳಿ.	ಗ್ರಾಮ.		ಮಾಡಬೇಕಾದ ಬದಲಾವಣೆ.
		ಗೆಜೆಟ್ಟಿನಲ್ಲಿ ಜಂಜರ್ ನಂಬರು.	ಹೆಸರು.	
1. ಕೋಲಾರ ...	ವಕ್ಕಲೇರಿ ...	41	ಜೆಂಗಾಲಹಳ್ಳಿ ...	ಜಂಗಾಲಹಳ್ಳಿ ಎಂದು ತಿದ್ದತಕ್ಕದ್ದು.
	...	49	ಕೊಂಡೇನಹಳ್ಳಿ (ಜೋಡಿ)..	ವೇಮಗಲ್ಲು ಹೋಬಳಿಗೆ ವರ್ಗಮಾಡತಕ್ಕದ್ದು.
	ಸುಗಟೂರು ...	43	ಮಟ್ನಹಳ್ಳಿ (ಜೋಡಿ) ...	ಇದನ್ನು ಸರ್ಕಾರಿ ಗ್ರಾಮವಾಗಿ ಎಣಿಸಿರುವುದರಿಂದ, ಇದನ್ನು ಇನಾಂ ಗ್ರಾಮಗಳ ಪಟ್ಟಿಯಿಂದ ತೆಗೆದು ಅದೇ ಹೋಬಳಿಯಲ್ಲಿ ಸರ್ಕಾರಿ ಗ್ರಾಮಗಳಲ್ಲಿ ಸೇರಿಸಬೇಕು.
	ಹೋಳೂರು ..	11	ಚಿನ್ನಗಟ್ಟ ...	ಸುಗಟೂರು ಹೋಬಳಿಗೆ ವರ್ಗ ಮಾಡತಕ್ಕದ್ದು.
		12	ವೋಟೇನಹಳ್ಳಿ ..	
	ಹುತ್ತೂರು ..	8	ಕೂತಾಂಡಹಳ್ಳಿ ...	ಕೋಲಾರ ಹೋಬಳಿಗೆ ವರ್ಗಮಾಡತಕ್ಕದ್ದು.
2. ಶ್ರೀನಿವಾಸಪುರ.	ಶ್ರೀನಿವಾಸಪುರ	88	ಜಂಗಂಶೆಟ್ಟಿಪಲ್ಲಿ (ಜೋಡಿ).	ರೋಣೂರು ಹೋಬಳಿಗೆ ವರ್ಗಾಯಿಸತಕ್ಕದ್ದು.
	ಯಲದೂರು .	3	ಕೊತ್ತಪಲ್ಲಿ ...	"ಹೊಸಹಳ್ಳಿ" ಎಂದು ತಿದ್ದತಕ್ಕದ್ದು.
3. ಬಾರಿಂಗ್‌ಪೇಟೆ.	ದಾಸರ ಹೊಸಹಳ್ಳಿ.	24	ಹೊಸಕೋಟೆ	ಬಾರಿಂಗ್‌ಪೇಟೆ ಹೋಬಳಿಗೆ ವರ್ಗ ಮಾಡತಕ್ಕದ್ದು.
		58	ಬೆಂಡಿಗಾನಹಳ್ಳಿ (ಜೋಡಿ) ..	
		54	ಬಟ್ಲಾವರಹಳ್ಳಿ (ಜೋಡಿ)..	ಬೇತಮಂಗಲ ಹೋಬಳಿಗೆ ವರ್ಗಮಾಡತಕ್ಕದ್ದು.
			ದೊಡ್ಡೂರು ಕರಪನಹಳ್ಳಿ ಪ್ಲಾಂಟೇಷನ್ (ಗೆಜೆಟ್ಟಿನ ಪಟ್ಟಿಯಲ್ಲಿ ಬಿಟ್ಟು ಹೋಗಿದೆ.)	ದಾಸರಹೊಸಹಳ್ಳಿ ಹೋಬಳಿಗೆ ಸೇರಿಸತಕ್ಕದ್ದು.
4. ಚಿಕ್ಕಬಳ್ಳಾಪುರ.	ನಂದಿ	33	ಬೈರನಾಯಿಕನಹಳ್ಳಿ ...	"ನೋರೆಮ್ಮನಹಳ್ಳಿ" ಎಂದು ತಿದ್ದತಕ್ಕದ್ದು.
5. ಗೋರಿಬಿದನೂರು	ಹೊಸೂರು ...	7	ಕಾದಲವೇಣಿ	ಗೋರಿಬಿದನೂರು ಹೋಬಳಿಗೆ ವರ್ಗ ಮಾಡತಕ್ಕದ್ದು.
		8	ಗುಂಡಾಪುರ ...	
		39	ವೇದಲವೇಣಿ ...	
6. ಬಾಗೇಪಲ್ಲಿ ...	ಪಾತಪಾಳ್ಯ	32	ಆಚೆಪಲ್ಲಿ ...	ಮಿಟ್ಟೆಮರಿ ಹೋಬಳಿಗೆ ವರ್ಗಮಾಡತಕ್ಕದ್ದು.
		29	ಗುರ್ರಾಲದಿನ್ನೆ ...	ಬಾಗೆಪಲ್ಲಿ ಹೋಬಳಿಗೆ ವರ್ಗ ಮಾಡತಕ್ಕದ್ದು.
		30	ನೀರುಗಂಟಪಲ್ಲಿ ...	
		31	ಗೊಲ್ಲಪಲ್ಲಿ ...	
		33	ಟೆಂಕಾಯಿಮಾಕಲಪಲ್ಲಿ ...	
		34	ಶಂಬವರಂಪಲ್ಲಿ (ಜೋಡಿ) ...	

ತಾಲ್ಲೂಕು.	ಹೋಬಳಿ.	ಗ್ರಾಮ: ಗೆಜೆಟ್ಟಿನಲ್ಲಿ ಜಂಬರ್ ನಂಬರ್	ಗ್ರಾಮ: ಹೆಸರು.	ಮಾಡಬೇಕಾದ ಬದಲಾವಣೆ.
7. ಶಿಡ್ಲಘಟ್ಟ ...	ಜಂಗಂಕೋಟೆ ...	36	ದೊಡ್ಡಹಾರಡಿ ...	"ಜಂಗಂಕೋಟೆ ಪ್ಲಾಟೇರ್ಷ" ಎಂದು ತಿದ್ದತಕ್ಕದ್ದು.
8. ಮಾಲೂರು.		ಗೆಜೆಟು ಪಟ್ಟಿಯಲ್ಲಿ ಇಲ್ಲ	ರಾಮಚಂದ್ರಾಪುರ ಪ್ಲಾಟೇರ್ಷ.	ಮಾಲೂರು ಹೋಬಳಿಗೆ ಸೇರಿಸತಕ್ಕದ್ದು.
			ಹೊಸಕುರಂಡಹಳ್ಳಿ ಪ್ಲಾಟೇರ್ಷ	
			ಕುರಂಡಹಳ್ಳಿ ಪ್ಲಾಟೇರ್ಷ.	
			ಜೋಡಿ ಪಟಗೇನಹಳ್ಳಿ ...	
			ದೆಣ್ಣೇರಿ ಪ್ಲಾಟೇರ್ಷ	ಮಾಸ್ತಿ ಹೋಬಳಿಗೆ ಸೇರಿಸತಕ್ಕದ್ದು.
9. ಮುಳಬಾಗಲು.	ಬೈರಕೂರು	61	ಚಿಂತಲಹಳ್ಳಿ (ಜೋಡಿ)	ಮುಳಬಾಗಲ್ ಹೋಬಳಿಗೆ ವರ್ಗಮಾಡತಕ್ಕದ್ದು.
	ಮಲ್ಲನಾಯಿಕನಹಳ್ಳಿ.	33	ತಿಪ್ಪದೊಡ್ಡಿ ...	ಬೈರಕೂರು ಹೋಬಳಿಗೆ ವರ್ಗಮಾಡತಕ್ಕದ್ದು.
		34	ಕಗ್ಗನಹಳ್ಳಿ ...	
		35	ಕುಕ್ಕಲದೊಡ್ಡಿ	
		36	ಕುರುಬರಹಳ್ಳಿ ...	
		37	ಚಿನ್ನಬಾಲೆಪಲ್ಲಿ	
		38	ಜಲ್ಲಪಲ್ಲಿ	
		39	ಗೋಣೀಕೊಪ್ಪ	
		40	ಉಗಣಿ	

ತಾರೀಖು 8ನೆ ಆಗಸ್ಟು 1907.

ನಂ. ರೆ. 1141—ಲ್ಯಾ. ರೆ. 77-07-1, ಈ ಕೆಳಗೆ ನಮೂದಿಸುವ ಡೆಪ್ಯುಟಿ ಕಮಿಷನರುಗಳ ಬಡತಿಗಳನ್ನು 1907ನೆ ಇಸವಿಯ ಜುಲೈ 3ನೆ ತಾರೀಖಿನಿಂದ ಮಂಜೂರ್ಮಾಡಿದೆ :—

ಮಿ|| ಡಿ. ದೇವರಾಜ ಅರಸಿನವರು— ಡೆಪ್ಯುಟಿ ಕಮಿಷನರ 2ನೆ ತರಗತಿಯಿಂದ 1ನೆ ತರಗತಿಗೆ.

ಮಿ|| ಎಂ. ಕಾಂತರಾಜ ಅರಸಿನವರು—ಡೆಪ್ಯುಟಿ ಕಮಿಷನರ 3ನೆ ತರಗತಿಯಿಂದ 2ನೆ ತರಗತಿಗೆ.

ತಾರೀಖು 10ನೆ ಆಗಸ್ಟು 1907.

ನಂ. ಫೈ. 673—ಸೆ. ರೆ. 50-07-2, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣಾನುಸಾರವಾಗಿ, ಎಕ್ಸೈಸ್ ಕಮಿಷನರವರ ಕಚೇರಿಗೆ ಲಗತ್ತು ಮಾಡಿರುವ ಅಸಿಸ್ಟೆಂಟ್ ಕಮಿಷನರ್ ಮಿ|| ಎ. ಮೃತ್ಯುಂಜಯ ಐಯ್ಯರಿಗೆ 1907ನೆ ಇಸವಿಯ ಆಗಸ್ಟು 15ನೆ ತಾರೀಖಿನಿಂದ ಹತ್ತು ದಿವಸಗಳ ಪ್ರಿವಿಲೇಜ್ ರಜಾವನ್ನು ಕೊಟ್ಟಿದೆ.

ಹುಕುಂ ಬಮೋಜಿಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ನ್ಯಾಯವಿಧಾಯಕ ಸಭೆಯ ಕೌನ್ಸಿಲ್.

ತಾರೀಖು 14ನೆ ಆಗಸ್ಟು 1907.

ನಂ. ಲೆ. ಕೌ. 69, 1907ನೆ ಇಸವಿಯ ಆಗಸ್ಟು 28ನೆ ತಾರೀಖಿನ ಬುಧವಾರ ಮಧ್ಯಾಹ್ನಾತ್ಪರ 3 ಘಂಟೆಗೆ ಬೆಂಗಳೂರು ಪಬ್ಲಿಕ್ ಕಚೇರಿಗಳ ಕಟ್ಟಡದಲ್ಲಿ ಮೈಸೂರು ಸೀಮೆಯ ಲೆಜಿಸ್ಲೇಟಿವ ಕೌನ್ಸಿಲ್ ಯಾ ನ್ಯಾಯವಿಧಾಯಕ ಸಭೆಯು ಸೇರುವುದು.

ಅಪ್ಪಣೆಯ ಮೇರೆಗೆ,—
ಕೆ. ಮೈಲಾರಿರಾವ್,
ಮೈಸೂರು ಸೀಮೆಯ ನ್ಯಾಯವಿಧಾಯಕ ಸಭೆಯ ಸೆಕ್ರೆಟರಿ.

ಫೈನಾನ್ಷಿಯಲ್ ಡಿಪಾರ್ಟ್‌ಮೆಂಟ್.

ತಾರೀಖು 10ನೆ ಆಗಸ್ಟು 1907.

ನಂ. ಫೈ. 675-47-07, ನಿಕಲ್ ಎಂಬ ಲೋಹದ ಒಂದು ಆಣೆಯ ನಾಣ್ಯದ ಚಲಾವಣೆಗೆ ಅಧಿಕಾರ ಕೊಟ್ಟು ಮತ್ತು ಸದರಿ ನಾಣ್ಯದ ವಿವರಣೆಯನ್ನು ನಮೂದು ಮಾಡಿ ಇಂಡಿಯಾ ಸರ್ಕಾರದ ಫೈನಾನ್ಸ್ ಇಲಾಖೆಯಿಂದ ಹುಟ್ಟಿದ 1907ನೆ ಇಸವಿಯ ಜುಲೈ 22ನೆ ತಾರೀಖಿನ 4597 A. ನೆ ನಂಬರಿನ ಇದರಡಿ ಕಂಡ ಇಸ್ತಿಹಾರ್ನಾಮೆಯನ್ನು ಸಮಸ್ತರ ತಿಳುವಳಿಕೆಯ ಬಗ್ಗೆ ಪ್ರಕಟಿಸಿ ಇದೆ :—

"ಅಕೌಂಟ್ಸ್ ಮತ್ತು ಫೈನಾನ್ಸ್ ಟೆಂಕಸಾಲೆ

22ನೆ ಜುಲೈ 1907.

ನಂ. 4597 A.—1906ನೆ ಇಸವಿ 3ನೆ ನಂಬರ್ ಇಂಡಿಯನ್ ಕಾಯಿನೇಜ್ ಯಾ ನಾಣ್ಯಗಳ ತಯಾರಿಯ ಆಕ್ಟಿನ 10ನೆ ಪ್ರಕರಣದ (1)ನೆ ಒಳಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಸಭಾಸಮೇತರಾದ ಗವರ್ನರ್ ಜನರಲ್‌ರವರು ಇದರಡಿ ಕಂಡ ಹುಕುಂ ದಯಪಾಲಿಸಿರುತ್ತಾರೆ :—

(1) ಸದರಿ ಆಕ್ಟಿನ ೧ನೆ ಪ್ರಕರಣದಲ್ಲಿ ಹೇಳಿದ ನಿಕಲ್ ಲೋಹದ ಒಂದಾಣೆಯ ನಾಣ್ಯವು ಇನ್ನು ಮುಂದೆ ಟಂಕಸಾಲೆಯಲ್ಲಿ ತಯಾರ್ಮಾಡಲ್ಪಟ್ಟು ಚಲಾವಣೆಯಲ್ಲಿ ತರಲ್ಪಡತಕ್ಕದ್ದು.

(2) ಅದರ ಏಣು 12 ಸ್ಕಾಲೆಪ್ಸ್ ಯಾ ವರ್ತುಲ ಖಂಡಗಳೊಡನೆ ಉಬ್ಬು ತಗ್ಗಾಗಿರತಕ್ಕದ್ದು, ಅದರ ವ್ಯಾಸ ಯಾ ಮಧ್ಯರೇಖೆಯ ಅತ್ಯಂತಾಧಿಕ ಪ್ರಮಾಣವು 21 ಮಿಲಿಮೀಟರುಗಳೂ ಅದರ ಕನಿಷ್ಠ ಪ್ರಮಾಣವು 19·8 ಮಿಲಿಮೀಟರುಗಳೂ ಇರತಕ್ಕದ್ದು. ಅದರ ಏಣಿಗೆ ರೇಖೆಗಳನ್ನು ಕಡಿಯಕೂಡದು.

(3) ಅದರ ಮೇಲುಭಾಗದಲ್ಲಿ ಶ್ರೀಮನ್ 7ನೆ ಎಡ್ವರ್ಡ್ ಚಕ್ರವರ್ತಿಯವರ ಪ್ರತಿಮೆಯೂ "ಎಡ್ವರ್ಡ್ 7ನೆ ಧೊರೆ ಮತ್ತು ಚಕ್ರವರ್ತಿ", ಎಂಬ ಶಾಸನವೂ ಇರಬೇಕು, ಮತ್ತು ಅದರ ಹಿಂಭಾಗದಲ್ಲಿ "1" ಎಂಬ ಅಂಕೆಯ ಮೇಲೆ "ಇಂಡಿಯ" ಎಂಬ ಮಾತೂ ಆ ಅಂಕೆಯ ಕೆಳಗೆ ನಾಣ್ಯವು ತಯಾರಾದ ವರ್ಷವೂ ನಮೂದಿಸಲ್ಪಟ್ಟು ಸದರಿ ನಾಣ್ಯದ ಹೆಸರು ಇಂಗ್ಲೀಷ್, ಉರುದು, ನಾಗರಿ, ಬೆಂಗಾಲಿ, ಮತ್ತು ತೆಲಗು ಭಾಷೆಗಳಲ್ಲಿ ಇರತಕ್ಕದ್ದು."

ಹುಕುಂ ಬಮೋಜೇಬ್,
ಯು. ಎಲ್. ಮಾಜುಂದಾರ್,
ಫೈನಾನ್ಶಿಯಲ್ ಸೆಕ್ರಿಟೆರಿ, ಮೈಸೂರು ಗವರ್ನಮೆಂಟ್.

ಮಿಲಿಟೆರಿ.

ಇಸಿ ಹಾರ್‌ನಾಮೆ.

ತಾರೀಖು 13ನೆ ಆಗಸ್ಟು 1907.

ನಂ. 510-12, ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜರವರು ಮೈಸೂರು ಇಂಪೀರಿಯಲ್ ಸರ್ವಿಸ್ ರಿಜಿಮೆಂಟನಲ್ಲಿ ಈ ಕೆಳಗೆ ಕಂಡ ಬಡ್ತಿಗಳನ್ನು ಕೆಳಗೆ ನಮೂದಿಸುವ ತಾರೀಖುಗಳ ಲಾಗಾಯಿತು ಮಂಜೂರ್ಮಾಡಿರುತ್ತಾರೆ:—

ಹೆಸರು.	ಯಾವ ದರ್ಜೆಯಿಂದ.	ಯಾವ ದರ್ಜೆಗೆ.	ಯಾವ ತಾರೀಖು ಲಾಗಾಯಿತು.
1. ಸರಮಸ್ತ್ ಖಾನ್	ಜಮಾದಾರ್, ಟ್ರೂಪ್ ಕಮ್ಯಾಂಡರ 2ನೆ ಗ್ರೇಡ್.	ರಿಸಾಲ್‌ದಾರ್, ಟ್ರೂಪ್ ಕಮ್ಯಾಂಡರ 1ನೆ ಗ್ರೇಡ್.	ಜನವರಿ 1—1907
2. ಅಬ್ದುಲ್ ಗಾಫರ್ ...	ಡಿಟೋ 3ನೆ ಗ್ರೇಡ್ ...	ಜಮಾದಾರ್, ಟ್ರೂಪ್ ಕಮ್ಯಾಂಡರ 2ನೆ ಗ್ರೇಡ್.	ಡಿಟೋ
3. ಸೈಯದ್ ಹುಸೇನ್.	ಡಿಟೋ 4ನೆ ಗ್ರೇಡ್ ...	ಡಿಟೋ 3ನೆ ಗ್ರೇಡ್ ..	ಡಿಟೋ
4. ಮೀರ್ ಅಲ್ಲಿಖಾನ್ ...	ಡಿಟೋ 5ನೆ ಗ್ರೇಡ್ ...	ಡಿಟೋ 4ನೆ ಗ್ರೇಡ್ ..	ಡಿಟೋ
5. ಮೀರ್ ಸಾದುದ್ದೀನ್.	ರೆಜಿಮೆಂಟಲ್ ದಫೇದಾರ್ ಮೇಜರ್.	ಜಮಾದಾರ್, ಟ್ರೂಪ್ ಕಮ್ಯಾಂಡರ 5ನೆ ಗ್ರೇಡ್.	ಆಗಸ್ಟು 8—1907

ಹುಕುಂ ಬಮೋಜೇಬ್,
ಆರ್. ಜಿ. ಜೋನ್ಸ್, ಲೆಫ್ಟಿನೆಂಟ್ ಕರ್ನಲ್,
ಮಿಲಿಟೆರಿ ಅಸಿಸ್ಟೆಂಟ್.

ಪಬ್ಲಿಕ್ ವರ್ಕ್ಸ್.

ಇಸಿ ಹಾರ್‌ನಾಮೆ.

ತಾರೀಖು 9ನೆ ಆಗಸ್ಟು 1907.

ನಂ. 747—5665, (1) ಹಾಸನ ಡಿವಿಜನ್ ಅಫಿಷಿಯೇಟಿಂಗ್ ಎಗ್ಜಿಕ್ಯೂಟಿವ್ ಇಂಜನಿಯರ್ ಮೆ|| ಎಫ್. ಎ. ಸ್ಟೀಲ್ ಯವರಿಗೆ ಮೈಸೂರು ಸರ್ವಿಸ್ ರೆಗುಲೇಷನ್ಸ್ 177ನೆ ಆರ್ಟಿಕಲ್ ಅನುಸರಿಸಿ ಸನ 1907ನೆ ಇಸವಿ ಆಗಸ್ಟು 15ನೆ ತಾರೀಖಿನಾರಭ್ಯ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 3 ತಿಂಗಳು ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

(2) ಸರ್ಕಾರಿ ಕೆಲಸಗಳ ಉಪಯೋಗಾರ್ಥವಾಗಿ ಈ ಕೆಳಗೆ ನಮೂದಿಸುವ ಬದಲಾವಣೆಯನ್ನು ಹುಕುಂ ಮಾಡಲ್ಪಟ್ಟಿದೆ. ಎಗ್ಜಿಕ್ಯೂಟಿವ್ ಇಂಜನಿಯರ್ ಮೆ|| ಕೆ. ಪ್ರಹ್ಲಾದರಾಯರವರನ್ನು ಚಿತ್ರದುರ್ಗ ಡಿವಿಜನ್ನಿಂದ ಹಾಸನ ಡಿವಿಜನ್ನಿಗೆ ವರ್ಗ ಮಾಡಲ್ಪಟ್ಟಿದೆ. ಚಾರ್ಜು ಕೊಟ್ಟನಂತರ ಹೊಸ ಕೆಲಸಕ್ಕೆ ಸೇರತಕ್ಕದ್ದು.

ತಾರೀಖು 10ನೆ ಆಗಸ್ಟು 1907.

ನಂ. 753—5690, (1) ಮಾರೀಕಣಿವೆ ಡಿವಿಜನನ್ನು ಚಿತ್ರದುರ್ಗ ಡಿವಿಜನ್ನೊಂದಿಗೆ ಸೇರಿಸಬೇಕೆಂದು ಗವರ್ನಮೆಂಟಿನವರು ಹುಕುಂ ಮಾಡಿದ್ದರಿಂದ, ಸದರಿ ಮಾರೀಕಣಿವೆಯನ್ನು ಒಂದು ರೇಂಜನ್ನಾಗಿ ಮಾಡಿ ಚಿತ್ರದುರ್ಗ ಡಿವಿಜನ್ನಿಗೆ ಸೇರಿಸಲ್ಪಟ್ಟಿದೆ.

(2) ಮಾರೀಕಣಿವೆ ಡಿವಿಜನ್ ಅಫಿಷಿಯೇಟಿಂಗ್ ಎಗ್ಜಿಕ್ಯೂಟಿವ್ ಇಂಜನಿಯರ್ ಮೆ|| ಹೆಚ್. ಡಿ. ರೈಸ್ ಯವರು ಮಾರೀಕಣಿವೆಯನ್ನು ಹೆಡ್‌ಕ್ವಾರ್ಟರ್ಸ್ ಮಾಡಿಕೊಂಡು ಚಿತ್ರದುರ್ಗ ಡಿವಿಜನ್ ಚಾರ್ಜಿನಲ್ಲಿರತಕ್ಕದ್ದು.

(3) ಇನ್ನೀಸರಹ ಎಲ್ಲಾ ಸರ್ಕಾರಿ ಕಾಗದ ಪತ್ರಗಳನ್ನು ಚಿತ್ರದುರ್ಗ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರವರಿಗೆ (ಹೆಡ್‌ಕ್ವಾರ್ಟರ್ಸ್ ಮಾರೀಕಣಿವೆ) ಎಂಬದಾಗಿ ಬರಿಯಬೇಕು.

ಹುಕುಂ ಬಮೋಜೇಬ್,
ಡಬ್ಲ್ಯೂ. ಮೆಕ್‌ಹಚ್ಚೀನ್,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನಮೆಂಟ್ ಸೆಕ್ರಿಟೆರಿ.

ಮುಜರೈ.

ಇಸ್ತಿ ಹಾರನಾಮೆ.

ತಾರೀಖು 27ನೆ ಜುಲೈ 1907.

ಮೈಸೂರು ಶ್ರೀಮನ್ ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ಈ ಸಂವತ್ಸರ ಭಾದ್ರಪದ ಶುದ್ಧ ಪಾಡ್ಯಮಿ ಅಂದರೆ 1907ನೆ ಸೆಪ್ಟಂಬರ 8ನೆ ತಾರೀಖು ಲಾಗಾಯತು ನಡೆಯುವ ಸಂಸ್ಕೃತ ವಿದ್ವತ್ಪರೀಕ್ಷೆಗಳ ಕಾಲ ಮುಂತಾದ ತಪ್ಸೀಲುಗಳನ್ನು ಇದರಡಿ ನಮೂದಿಸಿರುತ್ತೆ:—

I. ವೇದ.

ದಿವಸಗಳು.	ಋಗ್ವೇದ.	ಫಲ ಸಂಖ್ಯೆ.	ಯಜುರ್ವೇದ.	ಫಲ ಸಂಖ್ಯೆ.	ಸಾಮವೇದ.	ಫಲ ಸಂಖ್ಯೆ.
ಮೊದಲನೆ ದಿವಸ.	ಸಂಹಿತಾ	100	ಸಂಹಿತಾ	70	ಛಂದಆರ್ಚಿಕಾ	30
					ಸಾಮಸಂಹಿತಾ	50
					ಪದಸಂಹಿತಾ	30
ಎರಡನೆ ದಿವಸ	ಪದ	100	ಪದ	70	ಊಹಾ	120
			ಕ್ರಮ	70		
ಮೂರನೆ ದಿವಸ	ಕ್ರಮ	100	ಬ್ರಾಹ್ಮಣ	60	ಪದಪಾಠ	40
			ಅರಣ್ಯಕ	30	ರಹಸ್ಯ	30
ನಾಲ್ಕನೆ ದಿವಸ	ಜಟಾ ಅಥವಾ ಪೂರ್ವಾಪರ ಪ್ರಯೋಗ	150	ಘನ ಅಥವಾ ಪೂರ್ವಾಪರ ಪ್ರಯೋಗ	150	ಛಾಂದ್ಯಬ್ರಾಹ್ಮಣ ಛಾಂದೋಗ್ಯೋಪನಿಷತ್ ಅಥವಾ ಪೂರ್ವಾಪರ ಪ್ರಯೋಗ	150
ಐದನೆ ದಿವಸ	ಪ್ರಾತಿಶಾಖ್ಯ ಅಥವಾ ಪೂರ್ವಾಪರ ಸೂತ್ರಗಳು ಮತ್ತು ಮಂತ್ರಗಳು	150	ಪ್ರಾತಿಶಾಖ್ಯ ಮತ್ತು ವರ್ಣಕ್ರಮ ಅಥವಾ ಪೂರ್ವಾಪರ ಸೂತ್ರಗಳು ಮತ್ತು ಮಂತ್ರಗಳು	150	ಋಕ್ತಂತ್ರ ವ್ಯಾಕರಣ ಮತ್ತು ಫುಲ್ಲಸೂತ್ರ ಅಥವಾ ಪೂರ್ವಾಪರ ಸೂತ್ರಗಳು ಮತ್ತು ಮಂತ್ರಗಳು	150
		600		600		600

II. ವೇದ ಭಾಷ್ಯ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.	
		ಮೊದಲನೆ ಭಾಗ.		
ಮೊದಲನೆ ದಿವಸ ...	1—3	ಸಿದ್ಧಾಂತ ಕೌಮುದೀ (ಭಾಷಾ)	60	
	3-30—5-30	ಡಿಟ್ಟೋ (ವೈದಿಕ ಮತ್ತು ಸ್ವರ) ...	60	
ಎರಡನೆ ದಿವಸ ...	1—3-30	ಶ್ರೌತ ಸೂತ್ರ	80	
	4—6	ವಾಚಾ ಪರೀಕ್ಷೆ		
ಮೂರನೆ ದಿವಸ ...	1—5-30	ವೇದಭಾಷ್ಯ (2 ಪ್ರಶ್ನೆ ಪತ್ರಿಕೆಗಳು)	...	
ನಾಲ್ಕನೆ ದಿವಸ ...	1—5-30	ಡಿಟ್ಟೋ ಡಿಟ್ಟೋ	...	
ಐದನೆ ದಿವಸ ...	1—3	ಡಿಟ್ಟೋ	300	
	3—6	ವಾಚಾ ಪರೀಕ್ಷೆ	125	
				625
		ಎರಡನೆ ಭಾಗ.		
ಆರನೆ ದಿವಸ ...	1—3	ಮುಕ್ತಾವಳಿ (ತರ್ಕ)	60	
	3-30—5-30	ಜೈಮಿನಿಯ ನ್ಯಾಯಮಾಲಾ	60	
ಏಳನೆ ದಿವಸ ...	1—3	ಡಿಟ್ಟೋ	60	
	3-30—5-30	ಡಿಟ್ಟೋ	60	
ಎಂಟನೆ ದಿವಸ ...	1—3	ನಿರುಕ್ತ	60	
	3—6	ವಾಚಾ ಪರೀಕ್ಷೆ	75	
				375
				1,000

205

III. ಯಾಜ್ಞಿಕ ಪ್ರಯೋಗ.

ದಿವಸಗಳು.	ಕಾಲ.	ವಿಷಯಗಳು.	ಫಲಸಂಖ್ಯೆ.
		ಮೊದಲನೆ ಭಾಗ.	
ಮೊದಲನೆ ದಿವಸ ...	1—4	ಗೃಹ್ಯ ಸೂತ್ರ ...	100
	4—6	ವಾಚಾ ಪರೀಕ್ಷೆ ...	...
ಎರಡನೆ ದಿವಸ ...	1—3	ಗೃಹ್ಯ ಮಂತ್ರಗಳು ...	50
	3-30—5-30	ಗೃಹ್ಯಪ್ರಯೋಗ (ವಾಚಾ) ...	50
ಮೂರನೆ ದಿವಸ ...	1—3-30	ಅಪರಸೂತ್ರ ಮಂತ್ರ ಸಹಿತ ...	80
	4—5-30	ಅಪರಪ್ರಯೋಗ (ವಾಚಾ) ...	40
ನಾಲ್ಕನೆ ದಿವಸ ...	1—3	ಧರ್ಮಸೂತ್ರ ...	60
	3-30—5-30	ಡಿಟೋ ...	60
ಐದನೆ ದಿವಸ ...	1—3	ಬ್ರಹ್ಮಮೇಧ ವಾ ಶ್ರಾದ್ಧಸೂತ್ರ ವಾ ಗೃಹ್ಯಪರಿಶಿಷ್ಠ ...	60
	3—6	ವಾಚಾ ಪರೀಕ್ಷೆ ...	125
			625
		ಎರಡನೆ ಭಾಗ.	
ಆರನೆ ದಿವಸ ...	1—3-30	ಶ್ರೌತಸೂತ್ರ I ...	80
	4—6	ಶ್ರೌತಪ್ರಯೋಗ (ವಾಚಾ) ...	...
ಏಳನೆ ದಿವಸ ...	1—3-30	ಶ್ರೌತಸೂತ್ರ II ...	80
		ಶ್ರೌತಪ್ರಯೋಗ (ವಾಚಾ) ...	100
ಎಂಟನೆ ದಿವಸ ...	1—2-30	ಪರಿಭಾಷಾಸೂತ್ರ ...	40
	4—6	ವಾಚಾ ಪರೀಕ್ಷೆ ...	75
			375
			1,000

IV. ಧರ್ಮಶಾಸ್ತ್ರ.

ದಿವಸಗಳು.	ಕಾಲ.	ವಿಷಯಗಳು.	ಫಲಸಂಖ್ಯೆ.
		ಮೊದಲನೆ ಭಾಗ.	
ಮೊದಲನೆ ದಿವಸ ...	1—3	ತರ್ಕಪ್ರಕರಣ ...	50
	3-30—5-30	ಮೀಮಾಂಸಾಪ್ರಕರಣ ...	50
ಎರಡನೆ ದಿವಸ ...	1—3	ಯಾಜ್ಞವಲ್ಕ್ಯ ಮಿತಾಕ್ಷರ (ಆಚಾರ ಕಾಂಡ) ...	60
	3-30—5-30	ಡಿಟೋ ವ್ಯವಹಾರ ಪೂರ್ವಾರ್ಧ ...	60
ಮೂರನೆ ದಿವಸ ...	1—3	ಡಿಟೋ ಉತ್ತರಾರ್ಧ ...	60
	3-30—5-30	ಡಿಟೋ ಪ್ರಾಯಶ್ಚಿತ್ತ ಪೂರ್ವಾರ್ಧ ...	60
ನಾಲ್ಕನೆ ದಿವಸ ...	1—3	ಡಿಟೋ ಡಿಟೋ ಉತ್ತರಾರ್ಧ ...	60
	3—6	ವಾಚಾ ಪರೀಕ್ಷೆ ...	...
ಐದನೆ ದಿವಸ ...	1—4	ಮನುಸ್ಮೃತಿ ...	100
	4—6	ವಾಚಾ ಪರೀಕ್ಷೆ ...	125
			625
		ಎರಡನೆ ಭಾಗ.	
ಆರನೆ ದಿವಸ ...	1—3	ನಿರ್ಣಯಸಿಂಧು ವಾ ವೈದ್ಯನಾಥೀಯ ವಾ ವೈದಿಕ ಸಾರ್ವಭೌಮೀಯ. ...	300
	3-30—5-30		
ಏಳನೆ ದಿವಸ ...	1—3	ಡಿಟೋ ಡಿಟೋ ...	
	3-30—5-30	ಡಿಟೋ ಡಿಟೋ ...	
ಎಂಟನೆ ದಿವಸ ...	1—3	ಡಿಟೋ ಡಿಟೋ ...	
	3—6	ವಾಚಾ ಪರೀಕ್ಷೆ ...	75
			375
			1,000

c

V. ಜ್ಯೋತಿಷ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.	
		ಮೊದಲನೆ ಭಾಗ.		
ಮೊದಲನೆ ದಿವಸ ...	1—4	ಲೀಲಾವತಿ ...	80	
	4—6	ವಾಚಾ ಪರೀಕ್ಷೆ ...	...	
ಎರಡನೆ ದಿವಸ ...	1—4	ಬೀಜಗಣಿತ ...	80	
	4—6	ವಾಚಾ ಪರೀಕ್ಷೆ ...	...	
ಮೂರನೆ ದಿವಸ ...	1—3	ಗೋಳಾಧ್ಯಾಯ ...	60	
	3-30—5-30	ಡಿಟೋ ...	60	
ನಾಲ್ಕನೆ ದಿವಸ ...	1—3	ಬೃಹಜ್ಜಾತಕ ...	75	
	3-30—5-30	ಡಿಟೋ ...	75	
ಐದನೆ ದಿವಸ ...	1—3-30	ಜ್ಞಾನಪ್ರದೀಪಿಕಾ ...	70	
	4—6	ವಾಚಾ ಪರೀಕ್ಷೆ ...	125	625
		ಎರಡನೆ ಭಾಗ.		
ಆರನೆ ದಿವಸ ...	1—3	ಶ್ರೀಪತಿ ಪದ್ಧತಿ ...	70	
	3-30—5-30	ವಿದ್ಯಾಮಾಧವೀಯ ...	70	
ಏಳನೆ ದಿವಸ ...	1—3	ಗ್ರಹಗಣಿತ ...	60	
	3-30—5-30	ಗ್ರಹಲಾಘವ ವಾ ಪ್ರತಿಭಾಗಿ ...	40	
ಎಂಟನೆ ದಿವಸ ...	1—3	ಬೃಹತ್ಸಂಹಿತಾ ...	60	
	3-30—6	ವಾಚಾ ಪರೀಕ್ಷೆ ...	75	375
				1,000

VI. ವೈದ್ಯ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.	
		ಮೊದಲನೆ ಭಾಗ.		
ಮೊದಲನೆ ದಿವಸ ...	1—3-30	ಧನ್ವಂತರಿ ನಿಘಂಟು ...	75	
	4—6	ಅಷ್ಟಾಂಗಹೃದಯ ...	60	
ಎರಡನೆ ದಿವಸ ...	1—3	ಡಿಟೋ ...	60	
	3-30—5	ಸುಶ್ರುತ ...	50	
ಮೂರನೆ ದಿವಸ ...	1—4	ಶಾರ್ಙಧರ ಸಂಹಿತಾ ...	90	
	4—6	ವಾಚಾ ಪರೀಕ್ಷೆ ...	...	
ನಾಲ್ಕನೆ ದಿವಸ ...	1—4	ಮಾಧವ ನಿದಾನ ...	90	
	4—6	ವಾಚಾ ಪರೀಕ್ಷೆ ...	100	
ಐದನೆ ದಿವಸ ...	1—6	ಕರ್ಮಾಭ್ಯಾಸ ...	100	625
		ಎರಡನೆ ಭಾಗ.		
ಆರನೆ ದಿವಸ ...	1—3-30	ಚರಕ ...	75	
	4—6	ಕರ್ಮಾಭ್ಯಾಸ ...	...	
ಏಳನೆ ದಿವಸ ...	1—3-30	ಚರಕ ...	75	
	4—6	ಕರ್ಮಾಭ್ಯಾಸ ...	50	
ಎಂಟನೆ ದಿವಸ ...	1—4	ರಸರತ್ನಾಕರ ...	100	
	4—6	ವಾಚಾ ಪರೀಕ್ಷೆ ...	75	375
				1,000

VII. ವ್ಯಾಕರಣ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.	
		ಮೊದಲನೆ ಭಾಗ.		
ಮೊದಲನೆ ದಿವಸ ...	1—4	ಸಿದ್ಧಾಂತ ಕೌಮುದಿ	100	
	4—6	ವಾಚಾ ಪರೀಕ್ಷೆ		
ಎರಡನೆ ದಿವಸ ..	1—4	ಮನೋರಮಾ ಶಬ್ದರತ್ನ ಸಹಿತಾ ...	100	
	4—6	ವಾಚಾ ಪರೀಕ್ಷೆ	...	
ಮೂರನೆ ದಿವಸ ..	1—3	ಶಬ್ದಕೌಸ್ತುಭ	60	
	3-30—5-30	ಪರಿಭಾಷೇಂದುಶೇಖರ	60	
ನಾಲ್ಕನೆ ದಿವಸ ...	1—3	ಶಬ್ದೇಂದುಶೇಖರ	60	
	3-30—5-30	ಡಿಟೋ	60	
ಐದನೆ ದಿವಸ ..	1—3	ಡಿಟೋ	60	
	3—6	ವಾಚಾ ಪರೀಕ್ಷೆ	125	
				625
		ಎರಡನೆ ಭಾಗ.		
ಆರನೆ ದಿವಸ ...	1—4	ಶಬ್ದೇಂದುಶೇಖರ	100	
	4—6	ವಾಚಾ ಪರೀಕ್ಷೆ	...	
ಏಳನೆ ದಿವಸ ...	1—3	ಮಹಾಭಾಷ್ಯ	70	
	3-30—5-30	ಡಿಟೋ	70	
ಎಂಟನೆ ದಿವಸ ..	1—3	ಭೂಷಣಸಾರ	60	
	3—6	ವಾಚಾ ಪರೀಕ್ಷೆ	75	
				375
				1,000

VIII. ನ್ಯಾಯಶಾಸ್ತ್ರ (ನವೀನ).

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.	
		ಮೊದಲನೆ ಭಾಗ.		
ಮೊದಲನೆ ದಿವಸ ...	1—3-30	ದಿನಕರೀಯ	70	
	4—5-30	ಸಿದ್ಧಾಂತ ಲಕ್ಷಣ ...	40	
ಎರಡನೆ ದಿವಸ	1—3-30	ಪಂಚಲಕ್ಷಣಿ ಮತ್ತು ಚತುರ್ದಶ ಲಕ್ಷಣಿ ..	80	
	4—5-30	ಪಕ್ಷತಾ	50	
ಮೂರನೆ ದಿವಸ ...	1—3	ಅವಯವ	70	
	3-30—5-30	ಸಾಮಾನ್ಯನಿರುಕ್ತಿ	60	
ನಾಲ್ಕನೆ ದಿವಸ ..	1—3-30	ಸವ್ಯಭಿಚಾರ, ಸತ್ಪ್ರತಿಪಕ್ಷ ಮತ್ತು ಬಾಧವಿಭಾಜಕ ...	80	
	4—6	ವಾಚಾ ಪರೀಕ್ಷೆ	...	
ಐದನೆ ದಿವಸ ..	1—3	ವ್ಯುತ್ಪತ್ತಿವಾದ	50	
	4—6	ವಾಚಾ ಪರೀಕ್ಷೆ	125	
				625
		ಎರಡನೆ ಭಾಗ.		
ಆರನೆ ದಿವಸ ..	1—3	ವ್ಯುತ್ಪತ್ತಿವಾದ	60	
	3-30—5-30	ಡಿಟೋ	60	
ಏಳನೆ ದಿವಸ ...	1—4	ಶಕ್ತಿವಾದ	100	
	4—6	ವಾಚಾ ಪರೀಕ್ಷೆ ...	...	
ಎಂಟನೆ ದಿವಸ	1—3-30	ಪ್ರಾಮಾಣ್ಯವಾದ	80	
	3-30—6	ವಾಚಾ ಪರೀಕ್ಷೆ	75	
				375
				1,000

IX. ನ್ಯಾಯಶಾಸ್ತ್ರ (ಪ್ರಾಚೀನ).

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.
ಮೊದಲನೆ ದಿವಸ	1—4	ಪ್ರತ್ಯಕ್ಷವಾದ ಭಾಷ್ಯ	100
	4—6	ವಾಚಾ ಪರೀಕ್ಷೆ	...
ಎರಡನೆ ದಿವಸ	1—4	ನ್ಯಾಯಸೂತ್ರ, ಭಾಷ್ಯ	100
	4—6	ವಾಚಾ ಪರೀಕ್ಷೆ	...
ಮೂರನೆ ದಿವಸ	1—4	ಉದ್ಯೋತಕಾರ ವಾರ್ತಿಕ	100
	4—6	ವಾಚಾ ಪರೀಕ್ಷೆ	...
ನಾಲ್ಕನೆ ದಿವಸ	1—4	ಉದ್ಯೋತಕಾರ ವಾರ್ತಿಕ	100
	4—6	ವಾಚಾ ಪರೀಕ್ಷೆ	100
			500

X. ಸಾಂಖ್ಯಶಾಸ್ತ್ರ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.
ಮೊದಲನೆ ದಿವಸ	1—3	ಸಾಂಖ್ಯಪ್ರವಚನ ಭಾಷ್ಯ	60
	3-30—5-30	ಡಿಟೋ	60
ಎರಡನೆ ದಿವಸ	1—3	ಸಾಂಖ್ಯತತ್ವ ಕೌಮುದಿ	60
	3—6	ವಾಚಾ ಪರೀಕ್ಷೆ	
ಮೂರನೆ ದಿವಸ	1—4	ಯೋಗಭಾಷ್ಯ ವಾಚಸ್ಪತ್ಯ ಸಹಿತ	100
	4—6	ವಾಚಾ ಪರೀಕ್ಷೆ	100
ನಾಲ್ಕನೆ ದಿವಸ	1—3	ಯೋಗವಾರ್ತಿಕ	60
	3-30—5-30	ಡಿಟೋ	60
			500

XI. ಪೂರ್ವಮೀಮಾಂಸ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.
		ಭಾಗ I.	
ಮೊದಲನೆ ದಿವಸ	1—3	ಭಾಟ್ಟದೀಪಿಕಾ	75
	3-30—5-30	ಡಿಟೋ	75
ಎರಡನೆ ದಿವಸ	1—3	ಡಿಟೋ	75
	3-30—5-30	ಡಿಟೋ	75
ಮೂರನೆ ದಿವಸ	1—4	ಭಾಟ್ಟಕೌಸ್ತುಭ	100
	4—6	ವಾಚಾ ಪರೀಕ್ಷೆ	...
ನಾಲ್ಕನೆ ದಿವಸ	1—4	ಭಾಟ್ಟಕೌಸ್ತುಭ	100
	4—6	ವಾಚಾ ಪರೀಕ್ಷೆ	
ಐದನೆ ದಿವಸ	1—6	ವಾಚಾ ಪರೀಕ್ಷೆ	125
			625
		ಭಾಗ II.	
ಆರನೆ ದಿವಸ	1—3	ಭಾಟ್ಟರಹಸ್ಯ	70
	3-30—5-30	ಡಿಟೋ	70
ಏಳನೆ ದಿವಸ	1—3	ಶಾಬರಭಾಷ್ಯ	70
	3—6	ವಾಚಾ ಪರೀಕ್ಷೆ	
ಎಂಟನೆ ದಿವಸ	1—4	ಶಾಬರಭಾಷ್ಯ	90
	4—6	ವಾಚಾ ಪರೀಕ್ಷೆ	75—375
			1,000

XII. ಉತ್ತರ ಮೀಮಾಂಸ (ವೇದಾಂತ).

ದಿವಸಗಳು.	ಕಾಲ.	ವಿಷಯಗಳು.		ಫಲ ಸಂಖ್ಯೆ.
		ಭಾಗ I.		
ಮೊದಲನೆ ದಿವಸ ..	1—3-30	ಉಪನಿಷದ್-ಭಾಷ್ಯ-(ಈಶ ಮತ್ತು ಬೃ.ಉ.) ...	...	70
	4—6	ಡಿಟೋ (ತೈತ್ತಿರೀಯ. ಉ.)	..	50
ಎರಡನೆ ದಿವಸ ..	1—3-30	ಡಿಟೋ (ಕೇನ ಮತ್ತು ಛಾಂದೋಗ್ಯ)	...	60
	4—6	ಡಿಟೋ (ಕಾಠಕ ಮತ್ತು ಐತರೇಯ)...	..	50
ಮೂರನೆ ದಿವಸ ..	1—3	ಡಿಟೋ (ಪ್ರಶ್ನ, ಮುಂಡಕ ಮತ್ತು ಮಾಂಡೂಕ್ಯ)	...	50
	3-30—5-30	ಗೀತಾಭಾಷ್ಯ (1—6 ಅಧ್ಯಾಯಗಳು) ...	...	50
ನಾಲ್ಕನೆ ದಿವಸ ..	1—4	ಡಿಟೋ (7—18 ಅಧ್ಯಾಯಗಳು)	..	70
	4—6	ವಾಚಾ ಪರೀಕ್ಷೆ ...	..	100-500
		ಭಾಗ II.		
ಐದನೆ ದಿವಸ ..	1—3-30	ಬ್ರಹ್ಮಸೂತ್ರ ಭಾಷ್ಯ (ಅಧ್ಯಾಯ I—1) ...	...	80
	4—6	ವಾಚಾ ಪರೀಕ್ಷೆ ...	...	
ಆರನೆ ದಿವಸ ..	1—3-30	ಬ್ರಹ್ಮಸೂತ್ರ ಭಾಷ್ಯ (1-2—4) ...	...	80
	4—6	ವಾಚಾ ಪರೀಕ್ಷೆ	..	...
ಏಳನೆ ದಿವಸ ..	1—3-30	ಬ್ರಹ್ಮಸೂತ್ರ ಭಾಷ್ಯ (IIನೆ ಅಧ್ಯಾಯ) ..	...	100
	4—6	ವಾಚಾ ಪರೀಕ್ಷೆ	..	100
ಎಂಟನೆ ದಿವಸ. ..	1—3-30	ಬ್ರಹ್ಮಸೂತ್ರ ಭಾಷ್ಯ (IIIನೆ ಅಧ್ಯಾಯ) ...	...	80
	4—6	ಡಿಟೋ (IVನೆ ಅಧ್ಯಾಯ) ...	...	60-500
				1,000

XIII. ಸಾಹಿತ್ಯ.

ದಿವಸಗಳು.	ಕಾಲ.	ವಿಷಯಗಳು.		ಫಲ ಸಂಖ್ಯೆ.
		ಭಾಗ I.		
ಮೊದಲನೆ ದಿವಸ	1—3-30	ಚಂಪು	...	60
	4—6	ಕಾವ್ಯಪ್ರಕಾಶ ...	...	60
ಎರಡನೆ ದಿವಸ ..	1—3-30	ನಾಟಕ ...	..	60
	4—6	ಕುವಲಯಾನಂದ ಮತ್ತು ವೃತ್ತರತ್ನಾಕರ	....	50
ಮೂರನೆ ದಿವಸ ..	1—4	ಸಿದ್ಧಾಂತ ಕೌಮುದಿ	..	80
	4-30—5-30	ಜ್ಯೋತಿಷ	...	20
ನಾಲ್ಕನೆ ದಿವಸ ..	1—2-30	ಪ್ರಾಕೃತ	..	40
	3—5	ಮುಕ್ತಾವಳಿ	...	50
ಐದನೆ ದಿವಸ ..	1—3	ಉಪನ್ಯಾಸ ...	..	40
	3—5	ತರ್ಜುಮೆ	...	40
		ವಾಚಾ ಪರೀಕ್ಷೆ	....	125-625
		ಭಾಗ II.		
ಆರನೆ ದಿವಸ ..	1—3	ಉಪನಿಷತ್ತುಗಳು ಮತ್ತು ಗೀತ ...	..	50
	3-30—5-30	ಆಪಸ್ತಂಬ ಮತ್ತು ಮನುಸ್ಮೃತಿ	..	50
ಏಳನೆ ದಿವಸ ..	1—3	ಭಾರತ, ಭಾಗವತ ಮತ್ತು ಯೋಗವಾಸಿಷ್ಠ ...	...	50
	3-30—5-30	ಸಾಂಖ್ಯ ಮತ್ತು ಯೋಗ	..	50
ಎಂಟನೆ ದಿವಸ	1—3	ಮೀಮಾಂಸ ಮತ್ತು ಅದ್ವೈತ ಪರಿಭಾಷ ..	..	50
	3-30—5-30	ಯತೀಂದ್ರಮತದೀಪಿಕ ಮತ್ತು ದ್ವೈತಪದಾರ್ಥ ಸಂಗ್ರಹ	..	50
		ವಾಚಾ ಪರೀಕ್ಷೆ ...	...	75 375
				1,000

ಹುಕುಂ ಬಮೋಜಿಬ್,
ಎಲ್. ಅನಂತಸ್ವಾಮಿರಾವ್,
ಮುಜರೈ ಸೆಕ್ರಟರಿ.

ಮೈಸೂರ ಗೆಜೆಟ್.

ಪಂ. 42.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 34.

ಬೆಂಗಳೂರು, ಗುರುವಾರ, ಆಗಸ್ಟು ತಾ॥ 22, ಸನ್ 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖೆ ಕೊಡಲ್ಪಡುತ್ತೆ.

ವಿ ಷ ಯ ಸೂ ಚಿ ಕೆ .

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರ್ರಿಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಣ್ಟ್ರೋಲರವರು, ಪಬ್ಲಿಕವರಕ್ಸ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ ಜಡ್ಜೀರು, ಪೋಲೀಸ ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಸ್‌ಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜ ನ ರ ಲ್ ಮ ತ್ತು ರೆ ವಿ ನ್ಯೂ .

ತಾರೀಖು 8ನೆ ಆಗಸ್ಟು 1907.

ನಂ. 1202—ಸ್ಯಾನಿಟೆರಿ 34-07—2, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:—ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1897ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ ಫೈಲ್ 21—96 ಮತ್ತು ನಂಬರ 9384—ಮಿಸಲೇನಿಯಸ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗುತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.		ತಾಲ್ಲೂಕು.	ಸ್ಥಳ.		ತಾಲ್ಲೂಕು.
ಆಲೂರು	...	ಆಲೂರು ಸಬ್ ತಾಲ್ಲೂಕು.	ಕರಗಾಡ	...	ಬೇಲೂರು.
ಆಲೂರು ಪೇಟೆ	...	ಡಿಟೋ	ಗೊರೂರು	...	ಡಿಟೋ
...ಡಿಗಿಹಳ್ಳಿ	...	ಡಿಟೋ	ಮಲ್ಲಾಪುರ	..	ಅರಸೀಕೆರೆ.

ತಾರೀಖು 21ನೆ ಆಗಸ್ಟು 1907.

ನಂ. 1697—ಸ್ಯಾನಿಟೆರಿ 50-07—2, ಚಿತ್ರದುರ್ಗ ಡಿಸ್ಟ್ರಿಕ್ಟು ಚಳ್ಳಕೆರೆ ತಾಲ್ಲೂಕಿನ ಗೌರಸಮುದ್ರ ಗ್ರಾಮಕ್ಕೆ ಮಾರಮ್ಮನ ಜಾತ್ರೆ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು, 1907ನೆ ಸೆಪ್ಟಂಬರ್ 10ನೆ ತಾರೀಖಿನಿಂದ 13ನೆ ತಾರೀಖಿನವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 8ನೆ ಆಗಸ್ಟ್ 1907.

ನಂ. 1195—Ml. 368-06—11, ಸನ್ 1894ನೆಯ ವರ್ಷದ 7ನೆಯ ನಂಬರ ಲ್ಯಾಂಡ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಸ್ವತ್ತುಗಳು ಸರ್ಕಾರಿ ಕೆಲಸಕ್ಕೆ, ಎಂದರೆ, ಹಾಸನ ಟವನಿನ ಬಡಾವಣೆಗೆ ಅವಶ್ಯಕವಾಗಿವೆ; ಮತ್ತು ಹಾಸನ ಡಿಸ್ಟ್ರಿಕ್ಟು ಖಜಾನೆಯ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಸ್ವತ್ತುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ನಂಬರು.	ತಾಲ್ಲೂಕು.	ಗ್ರಾಮದ ಹೆಸರು ಮತ್ತು ಹಿಡುವಳಿದಾರನ ಹೆಸರು.	ಸರ್ವೆ ನಂಬರು.	ಖುಷ್ಕಿ ತರಿ ಬಾಗಾಯಿತು.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ. ವಿಸ್ತೀರ್ಣ.	ಕಂದಾಯ.	ಚತುರ್ಗಡಿ. ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.
		ಹಾಸನ ಗ್ರಾಮ.			ಎ. ಗು.	ರೂ. ಆ.				
1		ಸೈಯದ್ ಅಮೀರ್ ಆಲಿ ...	ಸರ್ವೆ ನಂಬರು 257ರ ಭಾಗ	ಖುಷ್ಕಿ ಮತ್ತು ಬಾಗಾಯಿತು	2 13	...	ಅಮೀರ್ ಆಲಿಗೆ ಸೇರಿದ ಹಿತಲು ಮತ್ತು ಮನೆ	ರಸ್ತೆ	ರಸ್ತೆ	ಸರ್ವೆ ನಂ. 257ರ ಭಾಗ; ಇದುವುಂಗಪತಿನಾಯಿಡುವಿಗೆ ಸೇರಿದ ಹಿತ್ತಲಾಗಿದೆ
2		ಮನ್ನೋಜಿ, ಮಾದೋಜಿ, ಸುಬ್ಬೋಜಿ, ಬಾಬೋಜಿಯ ಹೆಂಡತಿ ಮಾಲುಬಾಯಿ, ವಾಗೋಜಿಯ ಹೆಂಡತಿ ನಾಗೂಬಾಯಿ.	222	ಖುಷ್ಕಿ	1 12	2 0	ಸರ್ವೆ ಸಂ. 223	ಸರ್ವೆ ನಂ. 223	ಡಿಟೋ	ಸರ್ವೆ ನಂ. 223
3	ಹಾಸನ	ಡಿಟೋ ...	235	ಡಿಟೋ	1 33	3 0	ಸರ್ವೆ ನಂ. 2:;4	ಜವನಹಳ್ಳಿಯ ಎಲ್ಲೆ	ಸರ್ವೆ ನಂ. 236	ರಸ್ತೆ
4		ಡಿಟೋ ...	ಸರ್ವೆ ನಂಬರು 238ರ ಪೈಕಿ ಪ್ಲೋಡ ನಂ. 2	ಡಿಟೋ	3 1	5 4	ರಸ್ತೆ	ಈ ನಂಬರ ಪೈಕಿ ಮಲ್ಲಿಕಟ್ಟಿಗೆ ಸೇರಿದ ಜಮೀನು	ಅರಳಿಪೇಟೆಯ ಮೀಜಾಸಾಬಿ ವಗೈರೇರಿಗೆ ಸೇರಿದ ಹಿತ್ತಲು ಮತ್ತು ಮನೆ	ಸರ್ವೆ ನಂ. 237
		ಜವನಹಳ್ಳಿ ಗ್ರಾಮ.								
5		ದಫೇದಾರ್ ಇಮಾಂಸಾಬಿ ...	ಸರ್ವೆ ನಂ. 30	ಡಿಟೋ	6 29	9 8	ಹಾಸನ ಗ್ರಾಮದ ಸರ್ವೆ ನಂಬರುಗಳು 236-237	ರಸ್ತೆ ಮತ್ತು ಜವನಹಳ್ಳಿ ಗ್ರಾಮದ ಸರ್ವೆ ನಂ. 29	ಹಾಸನ ಗ್ರಾಮದ ಸರ್ವೆ ನಂ. 239 ಮತ್ತು 240	ಸಾಲಗಾಮೆ ರಸ್ತೆ

ತಾರೀಖು 8ನೆ ಆಗಸ್ಟ್ 1907.

ನಂ. ಜಿ. 1004—ಜಿ. ಎಂ. 12–07–13, ಮಿ॥ ಸೈಯದ್ ತಾಜ್ ಪಿರ್ಜಾ, ಬಿ. ಎ., ಯವರನ್ನು 1906ನೆ ಇಸವಿಯ ನವಂಬರ 16ನೆ ತಾರೀಖಿನಿಂದ ಬಿ. ಷೆಡ್ಯೂಲಿನ 5ನೆ ತರಗತಿಯ ಅಸಿಸ್ಟೆಂಟ್ ಕಮಿಷನರನ್ನಾಗಿ ಖಾಯಂ ಮಾಡಿ ಇದೆ.

ತಾರೀಖು 12ನೆ ಆಗಸ್ಟು 1907.

ನಂ. ಜೆ. 500—ರೆಜಿಸ್ಟ್ರೇಷನ್. 27–06—4, ಬದಲಿ ಸ್ಪೆಷಲ್ ಸಬ್ ರಿಜಿಸ್ಟ್ರಾರ್ ಎಸ್. ನರಸಿಂಹೈಯ್ಯಂಗಾರ್, ಬಿ. ಎ., ಯವರನ್ನು, ಸಬ್ ರಿಜಿಸ್ಟ್ರಾರುಗಳ 4ನೆ ತರಗತಿಯಲ್ಲಿ ಈಗ ಇರುವ ಖಾಲಿಯನ್ನು ಭರ್ತಿ ಮಾಡುವ ಬಗ್ಗೆ, ಆ ತರಗತಿಯ ಸಬ್ ರಿಜಿಸ್ಟ್ರಾರನ್ನಾಗಿ ಮೊಕರರ್ರು ಮಾಡಿ ಇದೆ.

ತಾರೀಖು 14ನೆ ಆಗಸ್ಟು 1907.

ನಂ. ಜೆ. 507—ಪೋಲೀಸ್. 31–07—2, ಪೊಲೀಸು ಇಲಾಖೆಯಲ್ಲಿ ಕೆಲಸ ನೋಡುತ್ತಿರುವ ಬದಲಿ ಎಕಸ್ಟ್ರಾ ಅಸಿಸ್ಟೆಂಟ್ ಕಮಿಷನರ್ ಮಿ॥ ಬಿ. ರಾಮಸ್ವಾಮಯ್ಯ, ಬಿ. ಎ., ಯವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣವನ್ನನುಸರಿಸಿ, 10 ದಿವಸಗಳ ಪ್ರಿವಿಲೇಜ್ ರಜಾವನ್ನು, ಅವರು ಅದನ್ನು ಉಪಯೋಗಿಸಿಕೊಳ್ಳುವ ತಾರೀಖಿನಿಂದ, ಕೊಟ್ಟದೆ.

ತಾರೀಖು 15ನೆ ಆಗಸ್ಟು 1907.

ನಂ. ಜಿ. 1229 ಜಿ. ಎಂ. 12—07—18, ಅಸಿಸ್ಟೆಂಟ್ ಕಮಿಷನರ್, ಮಿ॥ ಕೆ. ಶ್ರೀಕಂಠೈಯನವರಿಗೆ 1906ನೆ ಇಸವಿಯ ನವೆಂಬರು 11ನೆ ತಾರೀಖು ಮೊದಲ್ಗೊಂಡು ಅಸಿಸ್ಟೆಂಟ್ ಕಮಿಷನರುಗಳ 5ನೆ ತರಗತಿಯಿಂದ 4ನೆ ತರಗತಿಗೆ ಬಡತಿ ಕೊಟ್ಟಿದೆ.

ತಾರೀಖು 15ನೆ ಆಗಸ್ಟು 1907.

ನಂ. 1538—Med. 39-07—2, 1906ನೆ ಇಸವಿಯ ಫೆಬ್ರುವರಿ 10ನೆ ತಾರೀಖಿನ 8285—6 ಮೆಡಿಕಲ್ 107-05—4ನೆ ಮತ್ತು 1906ನೆ ಇಸವಿಯ ಆಗಸ್ಟ್ 25ನೆ ತಾರೀಖಿನ 1720—1 ಮೆಡಿಕಲ್ 31-06— ನೆ ನಂಬರುಗಳ ಸರ್ಕಾರಿ ಪ್ರೊಸೀಡಿಂಗ್ಸ್ ಯಾ ನಡವಳಿಕೆಗಳಲ್ಲಿ ಆರು ತಿಂಗಳ ವರೆಗೆ ಅಜಮಾಯಿಷಿ ತರೀಕಾಗಿ ಮೊಕರರ್ರು ಮಾಡಲ್ಪಟ್ಟ ಮೂರನೆ ತರಗತಿಯ ಇದರಡಿ ನಮೂದಿರುವ 4 ಜನ ಆಸ್ಪತ್ರೆ ಅಸಿಸ್ಟೆಂಟುಗಳು ಸರ್ಕಾರದವರು ಒಪ್ಪುವಂತೆ ಕೆಲಸ ಮಾಡಿರುವುದರಿಂದ ಅವರವರ ಹೆಸರುಗಳ ಎದುರಿಗೆ ನಮೂದಿಸಿರುವ ತಾರೀಖುಗಳ ಲಾಗಾಯಿತು ಅವರನ್ನು ಅವರ ಕೆಲಸಗಳಲ್ಲಿ ಕಾಯಂ ಮಾಡಿ ಇದೆ:—

1.	ಎಂ. ನಾರಾಯಣರಾವ್	1ನೆ ಮಾರ್ಚಿ 1905.
2.	ಎಸ್. ಆರ್. ವೇದನಾರಾಯಣ ಪಿಳ್ಳೆ	17ನೆ ಆಗಸ್ಟು 1905.
3.	ಡಿ. ನರ್ಸಿಂಗ್	9ನೆ ಮೇ 1906.
4.	ವಿ. ಆರ್. ಕನಕಸಭಾಪತಿ ಮೊದಲಿಯಾರ್	22ನೆ ಸೆಪ್ಟಂಬರ್ 1906.

ತಾರೀಖು 15ನೆ ಆಗಸ್ಟು 1907.

ನಂ. 1530—L. B. 46-07—3, ಸಭಿಕತನಕ್ಕೆ ರಾಜಿನಾಮೆಯನ್ನು ಕೊಟ್ಟ ಮಿ॥ ತಾಳವಟ್ಟಿ ಗುರಪ್ಪನವರಿಗೆ ಬದಲಾಗಿ ಮಿ॥ ಬಂಡಹ್ಲರಹಟ್ಟಿ ತಿಪ್ಪಯ್ಯನವರನ್ನು ಹಿರಿಯೂರು ತಾಲ್ಲೂಕು ಐಮಂಗಲ ಯೂನಿಯನಿನ ಸಭಿಕರನ್ನಾಗಿ ಮೊಕರರ್ರುಮಾಡಿ ಇದೆ.

ತಾರೀಖು 16ನೆ ಆಗಸ್ಟ್ 1907.

ನಂ. ಜೆ. 542—ಕೋ. 37—07—4, ಸರ್ 1907ನೆ ಇಸವಿಯ ಆಗಸ್ಟ್ 2ನೆ ತಾರೀಖಿನ ಜೆ. 352—ಕೋ. 37—07—2ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ, ಮೈಸೂರಿನ ಅಡಿಷನಲ್ ಮುನ್ಸೀಫ್ ಮಿ॥ ಕೆ. ಲಕ್ಷ್ಮೀನಾರಣೈಯನವರಿಗೆ ಕೊಟ್ಟ 15 ದಿವಸಗಳ ಪ್ರಿವಿಲೇಜ್ ರಜಾವಿನ ಪೈಕಿ ಅವರು 10 ದಿವಸಗಳ ರಜಾವನ್ನು ಉಪಯೋಗಿಸಿಕೊಂಡಿರುವ ಪ್ರಯುಕ್ತ ಉಪಯೋಗಿಸಿಕೊಳ್ಳದೆ ನಿಂತಿರುವ 5 ದಿವಸಗಳ ರಜಾವನ್ನು ಈ ಮೂಲಕ ವಜಾಮಾಡಿ ಇದೆ.

ತಾರೀಖು 16ನೆ ಆಗಸ್ಟು 1907.

ನಂ. ಜೆ. 543—ಕೋರ್ಟ್ಸ್ 32-07-4, ಚಿತ್ರದುರ್ಗ ಸಬ್ ಡಿವಿಜನಿನ ಬದಲಿ ಅಸಿಸ್ಟೆಂಟ್ ಕಮಿಷನರ್ ಮತ್ತು 2ನೆ ತರಗತಿಯ ಮಾಜಿಸ್ಟ್ರೇಟಾಗಿರುವ ಮಿ॥ ಟಿ. ಧರ್ಮರಾಜ ಶೆಟ್ಟರನ್ನು, 1904ನೆ ಇಸವಿಯ 2ನೆ ರೆಗ್ಯುಲೇಷನಾದ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೆ ಪ್ರಕರಣದ ಮೇರೆ, ಮೊದಲನೆ ತರಗತಿಯ ಮಾಜಿಸ್ಟ್ರೇಟಾಗಿ ಮೊಕರರ್ರುಮಾಡಿದೆ, ಮತ್ತು ಸದರಿ ತರಗತಿಯ ಮಾಜಿಸ್ಟ್ರೇಟಿಗೆ ಸರ್ಕಾರದವರು ಕೊಡಬಹುದಾದ ಇದರಡಿ ಕಂಡ ಹೆಚ್ಚು ಅಧಿಕಾರಗಳನ್ನು ಅವರಿಗೆ, ಮೇಲ್ಕಂಡ ಕೋಡಿನ 37ನೆ ಪ್ರಕರಣದ ಮೇರೆ ಕೊಟ್ಟಿದೆ:—

(1) ಸ್ಥಳೀಯ ಹೇಸಿಗೆಗಳನ್ನು ಕುರಿತು ಹುಕುಂ ಮಾಡುವ ಅಧಿಕಾರ ಪ್ರ. 133. ಕ್ರಿ. ಪ್ರೊ. ಕೋ.

(2) ಮಾಜಿಸ್ಟ್ರೇಟಿನ ಸ್ಥಳೀಯ ಅಧಿಕಾರದ ಹೊರಗೆ ತಕ್ಸೀರು ನಡೆಸಿದವನು ಸ್ಥಳೀಯ ಅಧಿಕಾರದ ಸರಹದ್ದಿನೊಳಗೆ ಇದ್ದರೆ ಅವನಿಗೆ ಪ್ರೊಸೆಸ್ ಕೊಡುವ ಅಧಿಕಾರ. ಪ್ರ. 186. ಕ್ರಿ. ಪ್ರೊ. ಕೋ.

ಅವರನ್ನು ಅಸಿಸ್ಟೆಂಟ್ ಕಮಿಷನರ್ ಕೆಲಸದಲ್ಲಿ ಇಟ್ಟಿರುವ ವರೆಗೆ ಅವರು ಈ ಅಧಿಕಾರಗಳನ್ನು ನಡೆಸತಕ್ಕದ್ದು.

ತಾರೀಖು 16ನೆ ಆಗಸ್ಟು 1907.

ನಂ. ಜೆ. 544—ಕೋರ್ಟ್ಸ್ 28–07–4, ಸರ್ 1907ನೆ ಇಸವಿಯ ಜುಲೈ 26ನೆ ತಾರೀಖಿನ ಜೆ. 258—ಕೋರ್ಟ್ಸ್ 28-07-2ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ಮೈಸೂರು ಚೀಫ್ ಕೋರ್ಟಿನ ರಿಜಿಸ್ಟ್ರಾರ್ ಮಿ॥ ವಿ. ಎ. ರಾಜರತ್ನ ಮುದಲಿಯಾರ್ರಿಗೆ ಕೊಟ್ಟಿದ್ದ 15 ದಿವಸಗಳ ಪ್ರಿವಿಲೇಜ್ ರಜಾವನ್ನು ಇದರಿಂದ ಇನ್ನೂ 15 ದಿವಸಗಳ ವರೆಗೆ ಹೆಚ್ಚಿಸಿದೆ.

2. ಮಿ॥ ರಾಜರತ್ನ ಮುದಲಿಯಾರ್ರು ರಜಾಮೇಲೆ ಇರುವ ವರೆಗೆ ಅಥವಾ ಇನ್ನೊಂದು ಹುಕುಂ ಕೊಡುವ ವರೆಗೆ, ಡೆಪ್ಯುಟಿ ರಿಜಿಸ್ಟ್ರಾರ್ ಮಿ॥ ಬಿ. ಬಸವಾರಾಧ್ಯ, ಬಿ. ಎ., ಬಿ. ಎಲ್., ರವರು, ತಮ್ಮ ಕೆಲಸಗಳ ಜತೆಗೆ, ರಿಜಿಸ್ಟ್ರಾರ ಚಾಲತಿ ಕೆಲಸಗಳ ಚಾರ್ಜಿನಲ್ಲಿ ಇರುತ್ತಿರುವರು.

ತಾರೀಖು 16ನೆ ಆಗಸ್ಟು 1907.

ನಂ. ಜೆ. 545—ಕೋ. 53-07-2, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177 ಮತ್ತು 190 (b) (i) & (ii) ಪ್ರಕರಣಗಳ ಮೇರೆಗೆ, ಶ್ರೀರಂಗಪಟ್ಟಣದ ಮುನ್ಸೀಫ್ ಮಿ॥ ಜಿ. ಸತ್ಯಾಜೀರಾವ್, ಬಿ. ಎ., ಬಿ. ಎಲ್., ರವರಿಗೆ 1907ನೆ ಇಸವಿಯ ಆಗಸ್ಟ್ 6ನೆ ತಾರೀಖಿನಿಂದ 15 ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

2. ಜುಡಿಷಲ್ ಪ್ರೊಬೇಷನರ್ ಮಿ॥ ಎ. ಕೆ. ಶ್ರೀನಿವಾಸ ರಾಘವಾಚಾರರವರು ಮೇಲೆ ಹೇಳಿದ ಕಾಲ ಅಥವಾ ಇನ್ನೊಂದು ಹುಕುಂ ಕೊಡುವ ಪರ್ಯಂತ ಶ್ರೀರಂಗಪಟ್ಟಣದ ಮುನ್ಸೀಫ್ ಕೋರ್ಟಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 17ನೆ ಆಗಸ್ಟು 1907.

ನಂ. ಜೆ. 560—ಲೆಜಿಸ್. 5-06-14, ಕೋಲಾರದ ಚಿನ್ನದ ಗಣಿಗಳ ಪ್ರದೇಶದಲ್ಲಿ ವ್ಯಾಪಾರ ಮಾಡುವ ಚಿನ್ನದ ವ್ಯಾಪಾರಿಗಳು, ಅಕ್ಕಸಾಲೆಯವರು, ಹಾಕರ್ಸ್ ಯಾ ಕೋರೀ ಶೆಟ್ಟಿಗಳು ಮತ್ತು ಪೆಡ್ಲರ್ಸ್ ಯಾ ಬೀದಿ ಬೀದಿಗಳನ್ನು ತಿರುಗುವ ಚಿಲ್ರೆ ವ್ಯಾಪಾರಿಗಳು—ಇವರಿಗೆ ಕೊಡುವ, ಮತ್ತು 1907ನೆ ಇಸವಿಯ ಜುಲೈ 9ನೆ ತಾರೀಖಿನ ಜೆ. 106—ಲೆಜಿಸ್. 5-06-11ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಪ್ರಕಟಿಸಲ್ಪಟ್ಟ ಲೈಸೆನ್ಸುಗಳ ನಮೂನೆಗಳಲ್ಲಿ ಬರುವ "ಅಸಿಸ್ಟೆಂಟ್ ಕಮಿಷನರ್ ಮತ್ತು ಮೊದಲನೆ ತರಗತಿಯ ಮಾಜಿಸ್ಟ್ರೇಟ್" ಎಂಬ ಮಾತುಗಳಿಗೆ ಬದಲಾಗಿ "ಮೊದಲನೆ ತರಗತಿಯ ಮಾಜಿಸ್ಟ್ರೇಟ್" ಎಂಬ ಮಾತುಗಳನ್ನು ಮಾತ್ರ ಓದತಕ್ಕದ್ದು.

ತಾರೀಖು 17ನೆ ಆಗಸ್ಟು 1907.

ನಂ. 1624—L. B. 52-07-2, ನಂಜನಗೂಡು ತಾಲ್ಲೂಕು ಕಳಲೆ ಯೂನಿಯನಿಗೆ ಮಿ॥ ನಂಜಶೆಟ್ಟಿಯವರನ್ನು ಮೃತಪಟ್ಟ ಮಿ॥ ರಂಗಶೆಟ್ಟಿ ಯವರಿಗೆ ಬದಲಾಗಿ ಸಭಿಕರನ್ನಾಗಿ ನೇಮಕರ್ಮಾಡಿ ಇದೆ.

ತಾರೀಖು 20ನೆ ಆಗಸ್ಟು 1907.

ನಂ. 1667—Med. 33-07-2, ಸಬ್ ಅಸಿಸ್ಟೆಂಟ್ ಸರ್ಜನ್ ಮಿ॥ ಜಿ. ವಿ. ಮ್ಯಾಸ್ಕರೆನೆಸ್ ಯವರು ಸರ್ಕಾರದವರು ಒಪ್ಪುವಂತೆ 2ನೆ ತರಗತಿಯಲ್ಲಿ 2 ವರ್ಷ ಪೂರ್ತಿಯಾಗಿ ಕೆಲಸ ಮಾಡಿರುವುದರಿಂದ, 1907ನೆ ಇಸವಿಯ ಜುಲೈ 10ನೆ ತಾರೀಖಿನಿಂದ ಅವರಿಗೆ ಮೊದಲನೆ ತರಗತಿಗೆ ಬಡತಿ ಕೊಟ್ಟಿದೆ.

ತಾರೀಖು 6ನೆ ಆಗಸ್ಟ 1907.

ನಂ. ರೆ. 951—ಫಾ. 140-05-7, ಸ್ 1900ನೆ ಇಸವಿಯ 11ನೆ ನಂಬರ್ ಮೈಸೂರು ಫಾರೆಸ್ಟ್ ರೆಗ್ಯುಲೇಷನಿನ 17ನೆ ಪ್ರಕರಣದ ನಿಯಮಗಳನ್ನನುಸರಿಸಿ, 1907ನೆ ಇಸವಿಯ ಅಕ್ಟೋಬರ್ 1ನೆ ತಾರೀಖಿನಿಂದ, ಈ ಇಸ್ತಿಹಾರ್ನಾಮೆಗೆ ಲಗತ್ತಿರುವ ಷೆಡ್ಯೂಲಿನಲ್ಲಿ ಕಾಣಿಸಿರುವ ಚಕ್ಕುಬಂದಿಗಳುಳ್ಳ ಪ್ರದೇಶವು "ಸಂಸ್ಥಾನ ಜಂಗ್ಲಿ" ಯಾಗಿ ಭಾವಿಸಲ್ಪಡತಕ್ಕದ್ದೆಂದು ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಹುಕುಂ ದಯಪಾಲಿಸಿರುತ್ತಾರೆ :

ಜಿಲ್ಲೆ	ತಾಲ್ಲೂಕು	ವಿಸ್ತೀರ್ಣ	ಕಾಡಿನ ಹೆಸರು	ಚಕ್ಕುಬಂದಿಗಳು.
ಮೈಸೂರು.	ಹೆಗ್ಗಡದೇವನಕೋಟೆ	3·93 ಚದರ ಮೈಲಿಗಳು.	ಕಾಕನಕೋಟೆಯ ಸ್ಟೇಟ್ ಜಂಗ್ಲಿ	ಉತ್ತರಕ್ಕೆ :—ಮಂಚೆಗೌಡನಹಳ್ಳಿ ಗ್ರಾಮದ ಸರ್ವೆ 17ನೆ ನಂಬರಿನ ಉತ್ತರದ ಮೇರೆಯಲ್ಲಿ ಅದರ ವಾಯುವ್ಯ ಮೂಲೆಯಿಂದ ಸುಮಾರು 46 ಸರಪಣಿಗಳ ದೂರದಲ್ಲಿ ಒಂದು ಸ್ಥಳದಿಂದ ಹೊರಟು ಎಲ್ಲೆಯು ರೇಖೆಯು ಅಂತರಸಂತೆ ಮತ್ತು ಮಂಚೇಗೌಡನಹಳ್ಳಿ ಗ್ರಾಮಗಳ ನಡುವೆ ಇರುವ ಎಲ್ಲೆಯಲ್ಲಿ ಈಶಾನ್ಯವಾಗಿಯೂ ಆಗ್ನೇಯವಾಗಿಯೂ ಹೋಗಿ ಮಂಚೇಗೌಡನಹಳ್ಳಿ ಗ್ರಾಮದ ಸರ್ವೆ 15ನೆ ನಂಬರಿನ ವಾಯುವ್ಯ ಮೂಲೆಗೆ ಹೋಗುತ್ತದೆ. ಪೂರ್ವಕ್ಕೆ.—ಅಲ್ಲಿಂದ ದಕ್ಷಿಣಕ್ಕೆ ಮಂಚೆಗೌಡನಹಳ್ಳಿ ಗ್ರಾಮದ ಸರ್ವೆ 15ನೆ ನಂಬರಿನ ಪಶ್ಚಿಮ ಮೇರೆಯಲ್ಲಿ ಅದರ ನೈರುತ್ಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ನೈರುತ್ಯಕ್ಕೆ ರಾಗಲಕುಪ್ಪೆ ಗ್ರಾಮದ ಸರ್ವೆ 4ನೆ ನಂಬರಿನ ಪಶ್ಚಿಮ ಮೇರೆಯಲ್ಲಿ ಅದರ ನೈರುತ್ಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ಆಗ್ನೇಯಕ್ಕೆ

ಹಳೆಮಗ್ಗೆ ಗ್ರಾಮದ ಸರ್ವೆ 15ನೆ ನಂಬರಿನ ಮತ್ತು ಬೆಳತೂರು ಗ್ರಾಮದ ಸರ್ವೆ 66ನೆ ನಂಬರಿನ ಪಶ್ಚಿಮ ಮೇರೆಗಳಲ್ಲಿ ಸದರಿ 66ನೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ.

ದಕ್ಷಿಣಕ್ಕೆ.—ಅಲ್ಲಿಂದ ಪಶ್ಚಿಮಕ್ಕೆ ನಿಸನಾ ಮತ್ತು ಬೆಳತೂರು ಗ್ರಾಮಗಳ ನಡುವೆ ಇರುವ ಎಲ್ಲೆಯ ರೇಖೆಯಲ್ಲಿ ಬೆಳತೂರು ಗ್ರಾಮದ ಸರ್ವೆ 67ನೆ ನಂಬರಿನ ನೈರುತ್ಯ ಮೂಲೆಗೆ ಹೋಗಿ ಅಲ್ಲಿಂದ ವಾಯುವ್ಯವಾಗಿ ಸರ್ವೆ 68ನೆ ನಂಬರಿನಲ್ಲಿ ಹೊಕ್ಕು ಸುಮಾರು 10 ಸರಪಣಿಗಳ ದೂರ ಹೋಗಿ ಅಲ್ಲಿ ಕಾಕನಕೋಟೆ ಸಂಸ್ಥಾನ ಜಂಗ್ಲಿಯ ಪೂರ್ವ ಸರಹದ್ದನ್ನು ಸೇರುತ್ತದೆ.

ಪಶ್ಚಿಮಕ್ಕೆ.—ಅಲ್ಲಿಂದ ಕಾಕನಕೋಟೆ ಸಂಸ್ಥಾನ ಜಂಗ್ಲಿಯ ಪೂರ್ವ ಮೇರೆಯಲ್ಲಿಯೇ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

ತಾರೀಖು 7ನೆ ಆಗಸ್ಟು 1907.

ನಂ. ರೆ. 999—ಫಾ. 35-06-5. 1900ನೆ ಇಸವಿಯ 11ನೆ ನಂಬರ ಮೈಸೂರು ಸೀಮೆಯ ಫಾರೆಸ್ಟು ರೆಗ್ಯುಲೇಷನಿನ 4ನೆ ಪ್ರಕರಣದ ವಿಧಿಗಳನ್ನನುಸರಿಸಿ, ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ಮಹಾರಾಜಾ ಸರ್ಕಾರದವರು ಪ್ರಸಿದ್ಧಪಡಿಸುವುದೇನಂದರೆ :—

ಇದರಡಿ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ಮೇಲ್ಕಂಡ ರೆಗ್ಯುಲೇಷನಿನ ನಿಯಮಗಳಂತೆ ಸ್ಟೇಟ್ ಫಾರೆಸ್ಟಾಗಿ ಏರ್ಪಾಡಾಗತಕ್ಕದ್ದೆಂದು ಯೋಚಿಸಿರುತ್ತದೆ.—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಅಂದಾಜು ವಿಸ್ತೀರ್ಣ.	ಕಾಡಿನ ಜಾತಿ.	ಸ್ಥಳ ಚಕ್ಕುಬಂದಿ.
ಶಿವಮೊಗ್ಗ.	ಶಿವಮೊಗ್ಗ-ಹೊನ್ನಾಳಿ.	4,520 ಎಕರೆ 26 ಗುಂಟೆ ಅಥವಾ 7 ಚದರ ಮೈಲಿ 40 ಎಕರೆ 26 ಗುಂಟೆ.	ಕಿರು ಗಿಡ.	ಸ್ಥಳ: ಶಿವಮೊಗ್ಗ-ಹೊನ್ನಾಳಿ ರಸ್ತೆಯ 12ನೆ ಮೈಲಿನ ಪಶ್ಚಿಮ ಭಾಗದ ಡಿಸ್ಟ್ರಿಕ್ಟು ಬಂಗ್ಲಿ. ಚಕ್ಕುಬಂದಿ. ಉತ್ತರಕ್ಕೆ.—ಚಟ್ನಹಳ್ಳಿ-ಮಸೀನಾಳ ಗಾಡಿ ದಾರಿಗೆ ವಾಯುವ್ಯಕ್ಕೆ ಸುಮಾರು 1 ಫರಲಾಂಗು ದೂರದಲ್ಲಿರುವ ಪಲವನಹಳ್ಳಿ-ಚಟ್ನಹಳ್ಳಿ ಗ್ರಾಮಗಳ ಗಡಿಯ ಕೋಣದಿಂದ ಲೈನ್ ಹೊರಟು ಆಗ್ನೇಯವಾಗಿ 46 ಸರಪಣಿಗಳು ಪಲವನಹಳ್ಳಿ ಸರ್ವೆ ನಂಬರು 6ರ ದಕ್ಷಿಣ ಗಡಿಯನ್ನನುಸರಿಸಿ ಸದರಿ ಗ್ರಾಮದ ಸರ್ವೆ ನಂಬರು 7ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 10ರ ನೈರುತ್ಯ ಮೂಲೆಗೆ ಸೇರು

ತ್ತದೆ. ಅನಂತರ ಆಗ್ನೇಯವಾಗಿ 88 ಸರಪಣಿಗಳು ಪಲವನಹಳ್ಳಿ ಸರ್ವೆ ನಂಬರು 8. ದಾಸರಹಳ್ಳಿ ಸರ್ವೆ ನಂಬರು 41ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 40ರ ನೈರುತ್ಯ ಮೂಲೆಗೆ ಸೇರುತ್ತದೆ. ಅನಂತರ ಅದೇ ದಿಕ್ಕಾಗಿ 82 ಸರಪಣಿಗಳು ದಾಸರಹಟ್ಟಿ ಸರ್ವೆ ನಂಬರು 41. ಕಲ್ಲುಹಟ್ಟಿ ಸರ್ವೆ ನಂಬರು 3ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 7ರ ಆಗ್ನೇಯ ಮೂಲೆಗೆ ಸೇರುತ್ತದೆ. ಅನಂತರ ಅದೇ ದಿಕ್ಕಾಗಿ 30 ಸರಪಣಿಗಳು ತುಂತುವದ ಸರ್ವೆ ನಂಬರು 89ರ ದಕ್ಷಿಣ ಗಡಿಯನ್ನನುಸರಿಸಿ ಸದರಿ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ. ಅನಂತರ ಈಶಾನ್ಯವಾಗಿ 63 ಸರಪಣಿಗಳು ತುಂತುವದ ಸರ್ವೆ ನಂಬರುಗಳು 89—88ರ ಪೂರ್ವ ಗಡಿಯನ್ನನುಸರಿಸಿ ಸದರಿ ಗ್ರಾಮದ ಸರ್ವೆ ನಂಬರು 80ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 79ರ ನೈರುತ್ಯ ಮೂಲೆಗೆ ಸೇರುತ್ತದೆ. ಅನಂತರ ಆಗ್ನೇಯವಾಗಿ 75 ಸರಪಣಿಗಳು ತುಂತುವದ ಸರ್ವೆ ನಂಬರು 80 ಕೂಗನಹಳ್ಳಿ ಸರ್ವೆ ನಂಬರು 7ರಲ್ಲಿ ಹಾದು ಗಡೀಕಟ್ಟೆ ಸರ್ವೆ ನಂಬರು 51ರ ದಕ್ಷಿಣ ಮೂಲೆಗೆ ಸೇರುತ್ತದೆ. ಅನಂತರ ಅದೇ ದಿಕ್ಕಾಗಿ 115 ಸರಪಣಿಗಳು ಗಡಿಕಟ್ಟೆ ಸರ್ವೆ ನಂಬರು 50 ದೊಡ್ಡೇರಿ ಸರ್ವೆ ನಂಬರು 62ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 58ರ ನೈರುತ್ಯ ಮೂಲೆಗೆ ಸೇರುತ್ತದೆ. ಅನಂತರ ಆಗ್ನೇಯ ದಿಕ್ಕಾಗಿ 81 ಸರಪಣಿಗಳು ದೊಡ್ಡೇರಿ ಸರ್ವೆ ನಂಬರು 62ರಲ್ಲಿ ಹಾದು ಅಕ್ಕತಂಗೀರ ಕಟ್ಟೆ ಸರ್ವೆ ನಂಬರು 2ರ ನೈರುತ್ಯ ಮೂಲೆಗೆ ಸೇರುತ್ತದೆ. ಅನಂತರ ನೈರುತ್ಯ ದಿಕ್ಕಾಗಿ 30 ಸರಪಣಿಗಳು ಅಕ್ಕತಂಗೀರಕಟ್ಟೆ ಸರ್ವೆ ನಂಬರು 1ರಲ್ಲಿ ಹಾದು ಸದರಿ ಗ್ರಾಮ ಇನಾಂ ಗೋಪಗೊಂಡನಹಳ್ಳಿ ಮತ್ತು ಹೊಳಲೂರು ಗ್ರಾಮಗಳ ಮುಕ್ಕಪ್ಪೆ ಬಾಂದಿಗೆ ಸೇರುತ್ತದೆ. ಅನಂತರ ಈಶಾನ್ಯ ದಿಕ್ಕಾಗಿ 17 ಸರಪಣಿಗಳು ಹೊಳಲೂರು-ಗೋಪಗೊಂಡನಹಳ್ಳಿ ಗಡಿಯನ್ನನುಸರಿಸಿ ಗೋಪಗೊಂಡನಹಳ್ಳಿ-ಹೊಳಲೂರ್-ಮಡಿಕೆಚೀಲೂರ್ ಗ್ರಾಮಗಳ ಮುಕ್ಕಪ್ಪೆ ಬಾಂದಿಗೆ ಸೇರುತ್ತದೆ. ಅನಂತರ ಆಗ್ನೇಯವಾಗಿ 80 ಸರಪಣಿಗಳು ಮಡಿಕೆಚೀಲೂರ್ ಸರ್ವೆ ನಂಬರು 75ರಲ್ಲಿ ಹಾದು ಸದರಿ ಗ್ರಾಮದ ಸರ್ವೆ ನಂಬರು 79ರ ನೈರುತ್ಯ ಮೂಲೆಗೆ ಸೇರುತ್ತದೆ. ಅನಂತರ ಪೂರ್ವ ದಿಕ್ಕಾಗಿ 8 ಸರಪಣಿಗಳು ಮಡಿಕೆಚೀಲೂರ್ ಸರ್ವೆ ನಂಬರು 79ರ ದಕ್ಷಿಣ ಗಡಿಯನ್ನನುಸರಿಸಿ ಶಿವಮೊಗ್ಗ-ಹೊನ್ನಾಳಿ ರಸ್ತೆಯಲ್ಲಿ ಸದರಿ ಗ್ರಾಮದ ಸದರಿ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ.

